JJ50.

(B) 025255

ಸುವರ್ಣ ಕರ್ನಾಟಕ-೨೦೦೬

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – ೫ (ಕ್ರಮಾಂಕ – ೧ ರಿಂದ ೩) Volume - 5 (No.1 to 3)

(೨೨ನೇ ಮಾರ್ಚ್ ೨೦೦೬, ೨೩ನೇ ಮಾರ್ಚ್ ೨೦೦೬ ಮತ್ತು ೨೪ನೇ ಮಾರ್ಚ್ ೨೦೦೬)

(22nd March 2006, 23rd March 2006 and 24th March 2006)



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ (B)025255

ಎರಡನೆಯ ಅಧಿವೇಶನ

ಶ್ರೀ ಕೃಷ್ಣ

ಅಧ್ಯಕ್ಷರು

ಶ್ರೀ ಎನ್. ವೈ. ಗೋಪಾಲಕೃಷ್ಣ

ಉಪಾಧ್ಯಕ್ಷರು

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

ಸಂಪುಟ - ೫ (ಕ್ರಮಾಂಕ -೧ ರಿಂದ ೩)

(೨೨ನೇ ಮಾರ್ಚ್ ೨೦೦೬, ೨೩ನೇ ಮಾರ್ಚ್ ೨೦೦೬ ಮತ್ತು ೨೪ನೇ ಮಾರ್ಚ್ ೨೦೦೬)

ಬುಧವಾರ, ದಿನಾಂಕ 22ನೇ ಮಾರ್ಚ್ 2006

ಪುಟ ಸಂಖ್ಯೆ

1. ಪ್ರಕಟಣೆ : 1

ವಿಷಯ: ಅಧಿವೇಶನ ಸಂದರ್ಭದಲ್ಲಿ ಸಚಿವರು ಹಾಗೂ ಶಾಸಕರು ವಿಧಾನ ಸಭೆಯ ಸಭಾಂಗಣದ ಪ್ರವೇಶದ್ವಾರದ ಮೂಲಕ ಪ್ರವೇಶ ಪತ್ರ ಹೊಂದಿರದ ವ್ಯಕ್ತಿಗಳನ್ನು ಕರೆತರುತ್ತಿರುವುದರ ಬಗ್ಗೆ.

2. ಪ್ರಶ್ನೋತ್ತರಗಳು : 1-77

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

- ಶ್ರೀ ಎಸ್.ಎಸ್. ಪಾಟೀಲ್
- ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ
- ಶ್ರೀ ಎಸ್. ರಾಜೇಂದ್ರನ್
- ಶ್ರೀ ಕೆ. ಪ್ರಭಾಕರ ಬಂಗೇರ
- ಶ್ರೀ ಜಿ.ಟಿ. ದೇವೇಗೌಡ
- ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ
- ಶ್ರೀ ವಾಟಾಳ್ ನಾಗರಾಜ್
- ಶ್ರೀ ಸಿ.ಟಿ. ರವಿ
  (ಶ್ರೀ ಅನಿಲ್ ಹೆಚ್. ಲಾಡ್ ಅವರ ಪರವಾಗಿ)
- ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
- ಶ್ರೀ ಸಿ.ಬಿ. ಕೃಷ್ಣ ಭೈರೇಗೌಡ

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮುಲಕ ನೀಡಲಾದ ಉತ್ತರಗಳು.

- (ಮಂಡಿಸಲಾಯಿತು) (ಅನುಬಂಧ-I)

3. ಅಧ್ಯಕ್ಷರ ಅಪ್ಪಣೆ ಮೇರೆಗೆ : 77-78

ವಿಷಯ: ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಗೈರುಹಾಜರಿ ಬಗ್ಗೆ.

- ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
- ಶ್ರೀ ಮಲ್ಲಿಕಾರ್ಜುನ ಖರ್ಗೆ
- ಶ್ರೀ ವಾಟಾಳ್ ನಾಗರಾಜ್

ಪುಟ ಸಂಖ್ಯೆ

4. ವಿತ್ತೀಯ ಕಾರ್ಯಕಲಾಪ : 79-110

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

- ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
- ಶ್ರೀ ಜೆ.ಸಿ. ಮಾಧುಸ್ವಾಮಿ

5. ಉಪಾಧ್ಯಕ್ಷರ ಅಪ್ಪಣೆ ಮೇರೆಗೆ : 110-111

ಮುಂದಿನ ಸಾಲಿನಲ್ಲಿ ಮಂತ್ರಿಗಳು ಇಲ್ಲದಿರುವ ಬಗ್ಗೆ.

- ಶ್ರೀ ಕೆ. ಶ್ರೀನಿವಾಸಗೌಡ

6. ಪ್ರಕಟಣೆ : 112

ವಿಷಯ : ಮಾನ್ಯ ಸದಸ್ಯರುಗಳಾದ ಯು.ಟಿ. ಫರೀದ್ ಹಾಗೂ ಎಂ.ಟಿ.ಬಿ. ನಾಗರಾಜು ಅವರುಗಳಿಗೆ ಪ್ರಸಕ್ತ ಅಧಿವೇಶನದಲ್ಲಿ ಗೈರುಹಾಜರಾಗಲು ಅನುಮತಿ ನೀಡುವ ಬಗ್ಗೆ.

7. ವಿತ್ತೀಯ ಕಾರ್ಯಕಲಾಪ : 112-159

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

- ಶ್ರೀ ಜೆ.ಸಿ. ಮಾಧುಸ್ವಾಮಿ (ಮುಂದು. ಭಾಷಣ)
- ಶ್ರೀ ಆರ್.ವಿ. ದೇಶಪಾಂಡೆ

8. ಗಮನ ಸೆಳೆಯುವ ಸೂಚನೆಗಳು : 160-172

ಅ) ಉತ್ತರ ಕರ್ನಾಟಕದ ನಗರಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಎ.ಡಿ.ಬಿ. ಸಂಸ್ಥೆಯಿಂದ ಹಣ ಬಿಡುಗಡೆಯಾಗದಿರುವುದು.

- ಶ್ರೀ ಡಿ. ಆರ್. ಪಾಟೀಲ್
- ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)
- ಶ್ರೀ ಎಸ್.ಆರ್. ಮೋರೆ
- ಶ್ರೀ ಎ. ಪಾಪರೆಡ್ಡಿ
- ಶ್ರೀ ಮಲ್ಲಿಕಾರ್ಜುನ ಖರ್ಗೆ
- ಶ್ರೀ ಶಿವಾನಂದ ಎಸ್. ಪಾಟೀಲ್

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಎರಡನೆಯ ಅಧಿವೇಶನ

SECOND SESSION OF THE TWELFTH LEGISLATIVE ASSEMBLY

ಸಂಪುಟ – ೫ (ಕ್ರಮಾಂಕ – ೧ ರಿಂದ ೩) **Volume - 5 (No.1 to 3)**

(೨೨ನೇ ಮಾರ್ಚ್ ೨೦೦೬, ೨೩ನೇ ಮಾರ್ಚ್ ೨೦೦೬ ಮತ್ತು ೨೪ನೇ ಮಾರ್ಚ್ ೨೦೦೬)

(22nd March 2006, 23rd March 2006 and 24th March 2006)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

05p0-1

ಪುಟ ಸಂಖ್ಯೆ

ಆ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಡಿ.ಸಿ.ಸಿ. ಬ್ಯಾಂಕುಗಳು ಲಕ್ಕಿಡಿಪ್ ಯೋಜನೆ ಮುಖಾಂತರ ಸಾರ್ವಜನಿಕರಿಗೆ ವಂಚಿಸಿರುವ ಬಗ್ಗೆ.

- ಶ್ರೀ ಕೆ. ರಘುಪತಿ ಭಟ್
- ಶ್ರೀ ಬಿ.ಎಸ್. ಯಡಿಯುರಪ್ಪ
- (ಉಪ ಮುಖ್ಯಮಂತ್ರಿಗಳು – ಮಂತ್ರಿಗಳ ಪರವಾಗಿ)
- ಶ್ರೀ ಕೆ. ಜಯಪ್ರಕಾಶ್
- ಶ್ರಿ ಸುನಿಲ್ ಕುಮಾರ್

9. ನಿಯಮ 69ರ ಮೇರೆಗೆ 172-315

ವಿಷಯ: ತಹಶೀಲ್ದಾರ್‌ಗಳ ನೇಮಕಾತಿಯಲ್ಲಿ ಆಗಿರುವ ವಿಳಂಬದ ಬಗ್ಗೆ.

- ಶ್ರೀ ಎ.ಟಿ. ರಾಮಸ್ವಾಮಿ
- ಶ್ರೀ ಸಿ.ಎಸ್. ಪುಟ್ಟೇಗೌಡ
- ಶ್ರಿ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಗುರುವಾರ, ದಿನಾಂಕ 23ನೇ ಮಾರ್ಚ್ 2006

1. ಹುತಾತ್ಮರ ಸ್ಮರಣೆ : 316

ಭಗತ್‌ಸಿಂಗ್ ರಾಜಗುರು ಸುಖದೇವ್‌ರು ಹುತಾತ್ಮರಾದ ಬಗ್ಗೆ ಸ್ಮರಣೆ

2. ಪ್ರಶ್ನೋತ್ತರ : 316-362

- ಶ್ರೀ ಡಿ.ಆರ್. ಪಾಟೀಲ್
- ಶ್ರೀ ಜೆ. ಕೃಷ್ಣ ಪಾಲೇಮಾರ್
- ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ
- ಶ್ರೀ ಆರ್. ಧ್ರುವನಾರಾಯಣ
- ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ
- ಕೆ. ಗೋಪಾಲ ಪೂಜಾರಿ
- ಶ್ರೀ ಕೃಷ್ಣ ಬೈರೇಗೌಡ ಸಿ.ಬಿ.
- ಶ್ರೀ ಶಿವಾನಂದ ಎಸ್. ಪಾಟೀಲ್
- ಶ್ರೀ ಎಸ್. ಬಾಲರಾಜ್
- ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖುಬಾ
- ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ
- ಶ್ರೀ ಎಂ.ವೈ. ಪಾಟೀಲ್

ಪುಟ ಸಂಖ್ಯೆ

3. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮೂರನೆಯ ಪಟ್ಟಿ : 362
(ಅನುಬಂಧ–1)

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ : 363-370
ವಿಷಯ: (ಅ) ಹುಬ್ಬಳ್ಳಿಯ ಈದ್ಗಾ ಮೈದಾನದ ಸಮಸ್ಯೆ ಬಗ್ಗೆ.
– ಶ್ರೀ ಪಿ.ಜಿ.ಆರ್. ಸಿಂಧ್ಯಾ
– ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
– ಶ್ರೀ ಆರ್. ರೋಷನ್ ಬೇಗ್
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

(ಆ) ವಿಷಯ: ವಿದೇಶಿ ಬಯೋಕಾಮ್ ಕಂಪನಿಯಿಂದ ನೂರಾರು ಕೋಟಿ ಅವ್ಯವಹಾರ ನಡೆದಿರುವ ಬಗ್ಗೆ.
– ಶ್ರೀ ಜಿ.ವಿ. ಶ್ರೀರಾಮರೆಡ್ಡಿ
– ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ)

5. ಗಮನ ಸೆಳೆಯುವ ಸೂಚನೆ : 370-376
ವಿಷಯ: ಚಿತ್ತಾಪುರ ತಾಲ್ಲೂಕಿನ ಬೆಣ್ಣೆತೊರಾ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ.
– ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್
– ಶ್ರೀ ಸಿ.ಎಸ್. ಪುಟ್ಟೇಗೌಡ
– ಶ್ರೀ ಕೆ.ಎಸ್. ಈಶ್ವರಪ್ಪ (ನೀರಾವರಿ ಸಚಿವರು)

6. ಅಧ್ಯಕ್ಷರ ಅಪ್ಪಣೆ ಮೇರೆಗೆ : 376-390
(ಅ) ಮಾನ್ಯ ವಾಟಾಳ್ ನಾಗರಾಜ್ ಹಾಗೂ ಇತರೆ ಮಾನ್ಯ ಸದಸ್ಯರು ಸಭಾಧ್ಯಕ್ಷರಿಗೆ ಕೊಟ್ಟ ಮನವಿಗೆ ತೀರ್ಪು ನೀಡುವ ಬಗ್ಗೆ.
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
– ಶ್ರೀ ಪಿ.ಜಿ.ಆರ್. ಸಿಂಧ್ಯಾ
– ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಪುಟ ಸಂಖ್ಯೆ

(ಆ) ಸದನದಲ್ಲಿ ಶಾಸಕರು ಅಧಿಕಾರಿಗಳ ಬಳಿ ಹೋಗಿ ಅಸಭ್ಯವಾಗಿ ವರ್ತಿಸಿದರೆನ್ನಲಾದ ಬಗ್ಗೆ.

– ಶ್ರೀ ಜೆ.ಸಿ. ಮಾಧುಸ್ವಾಮಿ

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಆರ್.ವಿ. ದೇಶಪಾಂಡೆ

– ಶ್ರೀ ಬಸವರಾಜ್ ರಾಯರೆಡ್ಡಿ

– ಶ್ರೀ ಕೆ.ಆರ್. ರಮೇಶ್‌ಕುಮಾರ್

– ಶ್ರೀ ಎಂ.ಪಿ. ಪ್ರಕಾಶ್

– ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

7. ಅಧ್ಯಕ್ಷರ ತೀರ್ಪು : 390

ವಿಷಯ: ವಿಧಾನ ಸಭೆಯ ಸಭಾಂಗಣದೊಳಗಡೆ ಅಧಿಕಾರಿಗಳೊಂದಿಗೆ ಶಾಸಕರುಗಳು, ಅಧ್ಯಕ್ಷರ ಅನುಮತಿ ಮೇರೆಗೆ ಮಾತನಾಡುವ ಬಗ್ಗೆ.

8. ವಿತ್ತೀಯ ಕಾರ್ಯಕಲಾಪ : 391-424

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಸಿದ್ದರಾಮಯ್ಯ

– ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

– ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

9. ಶಾಸನ ರಚನೆ : 424-477

ವಿಧೇಯಕಗಳ ಮಂಡನೆ:

ಅ) ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ವಿಧೇಯಕ 2005 (ಅನುಬಂಧ–2)

ಆ) ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 2005 (ಅನುಬಂಧ–3)

ಪುಟ ಸಂಖ್ಯೆ

ಇ) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕ 2006. (ಅನುಬಂಧ-4)

ಈ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 2006 (ಅನುಬಂಧ-5)

(ಮೇಲ್ಕಂಡ ಎಲ್ಲಾ ವಿಧೇಯಕಗಳನ್ನೂ ಮಂಡಿಸಲಾಯಿತು)

ಶುಕ್ರವಾರ, ದಿನಾಂಕ 24ನೇ ಮಾರ್ಚ್ 2006

1. ಪ್ರಕಟಣೆ : 478

ವಿಷಯ: ವಿಧಾನ ಸಭೆಯಲ್ಲಿ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಉಪನಾಯಕ ಮತ್ತು ಸಚೇತಕರ ನೇಮಕ ಬಗ್ಗೆ ಸಭಾನಾಯಕರಿಂದ ಬಂದ ಪತ್ರದ ಬಗ್ಗೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ: 478-480

ಜನತಾದಳ (ಜಾತ್ಯಾತೀತ ಶಾಸಕಾಂಗ ಮಾನ್ಯ ಕುಮಾರಸ್ವಾಮಿ ಅವರನ್ನು ನಾಯಕರೆಂದು ಪರಿಗಣಿಸಿ ಮಾನ್ಯ ಸಭಾಧ್ಯಕ್ಷರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸಲು ಕೋರಿಕೆ.

- ಶ್ರೀ ಮಲ್ಲಿಕಾರ್ಜುನ ಖರ್ಗೆ
- ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)

3. ಪ್ರಶ್ನೋತ್ತರಗಳು : 481-524

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

- ಶ್ರೀ ದಿನೇಶ್ ಗುಂಡೂರಾವ್
- ಶ್ರೀ ಜೆ. ಕೃಷ್ಣ ಪಾಲೇಮರ್
  (ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಲಾಯಿತು)
- ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ
- ಶ್ರೀ ಬಿ. ಶಿವರಾಮು
- ಶ್ರೀ ಎಂ.ಟಿ. ಕೃಷ್ಣಪ್ಪ
- ಶ್ರೀ ಎಸ್. ಬಾಲರಾಜ್
- ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
  (ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಲಾಯಿತು)

ಪುಟ ಸಂಖ್ಯೆ

– ಶ್ರೀ ಎಂ. ವೈ. ಪಾಟೀಲ್

– ಶ್ರೀ ಎಸ್.ಎಸ್. ಪಾಟೀಲ್

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಶಿವಾನಂದ ಎಸ್. ಪಾಟೀಲ್

– ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.
(ಮಂಡಿಸಲಾಯಿತು) (ಅನುಬಂಧ–1)

4. ಅಧ್ಯಕ್ಷರ ಅಪ್ಪಣೆ ಮೇರೆಗೆ : 524-528

ಅ) ಕೊಪ್ಪಳ ಜಿಲ್ಲೆಯಲ್ಲಿ ಬಸಪ್ಪ ಎಂಬಾತ ರೈತ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರ ಬಗ್ಗೆ.

– ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಆ) ನಿಯಮ 191 ರ ಮೇಲೆ ರೂಲಿಂಗ್ ನೀಡುವ ಬಗ್ಗೆ.

– ಶ್ರೀ ಡಿ.ಕೆ. ಶಿವಕುಮಾರ್

5. ಗಮನ ಸೆಳೆಯುವ ಸೂಚನೆಗಳು: 528-538

ಅ) ಏಪ್ರಿಲ್ 15ರವರೆಗೆ ತುಂಗಭದ್ರಾ ಎಡದಂಡೆ ನಾಲೆಗೆ ನೀರು ಸರಬರಾಜು ಮಾಡದಿರುವುದರಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ.

– ಶ್ರೀ ಹಂಪನಗೌಡ ಬಾದರ್ಲಿ

– ಶ್ರೀ ಕೆ. ಎಸ್. ಈಶ್ವರಪ್ಪ
(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಆ) ಶಿರಹಟ್ಟಿ ಮತಕ್ಷೇತ್ರದ ರೈತ ಕುಟುಂಬಗಳು ಹೊಲದ ಪಂಪ್ ಸೆಟ್ಟಳನ್ನು ಸಕ್ರಮಗೊಳಿಸಲು ಹಣ ಪಾವತಿಸಿದ್ದರೂ ಕ್ರಮ ಕೈಗೊಳ್ಳದಿರುವ ಬಗ್ಗೆ.

– ಶ್ರೀ ಜಿ.ಎಸ್. ಗಡ್ಡದೇವರ ಮಠ್

– ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

ಪುಟ ಸಂಖ್ಯೆ

ಇ) ಪಾವಗಡ ತಾಲ್ಲೂಕಿನಲ್ಲಿ ಇಲಿ, ಡೆಂಗ್ಯೂ ಇತ್ಯಾದಿ ಜ್ವರಗಳಿಗೆ ವಿಶೇಷ ವೈದ್ಯಕೀಯ ಸೇವೆ ನೀಡುವುದರ ಬಗ್ಗೆ.
- ಶ್ರೀ ಕೆ. ಎಂ. ತಿಮ್ಮರಾಯಪ್ಪ
- ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

6. ವಿತ್ತೀಯ ಕಾರ್ಯಕಲಾಪ : 538-582

2006–07ನೇ ಸಾಲಿನಲ್ಲಿ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.
- ಶ್ರೀ ವಾಟಾಳ್ ನಾಗರಾಜ್
- ಶ್ರೀ ಎನ್. ಯೋಗೀಶ್ ಭಟ್
- ಶ್ರೀ ಡಿ.ಆರ್. ಪಾಟೀಲ್

7. ಅಧ್ಯಕ್ಷರ ಅಪ್ಪಣೆ ಮೇರೆಗೆ: 582-586

ಉಪ ಮುಖ್ಯಮಂತ್ರಿ, ಮಂತ್ರಿಗಳು ಮತ್ತು ಅಧಿಕಾರಿಗಳ ಗ್ಯಾಲರಿಯಲ್ಲಿ ಇಲ್ಲದಿರುವ ಬಗ್ಗೆ.
- ಶ್ರೀ ಎಸ್.ಎಸ್. ಪಾಟೀಲ್
- ಶ್ರೀ ಮಲ್ಲಿಕಾರ್ಜುನ ಖರ್ಗೆ
- ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)

8. ವಿತ್ತೀಯ ಕಾರ್ಯಕಲಾಪ : 586-633

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.
- ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
- ಶ್ರೀ ಎಸ್. ರಾಜೇಂದ್ರನ್

9. ಸಭಾಧ್ಯಕ್ಷರ ತೀರ್ಪು : 633-634

ವಿಷಯ: ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಅಧಿವೇಶನ ಪ್ರಾರಂಭದ ಒಂದು ದಿನ ಮೊದಲು ಕರ್ನಾಟಕ ಅಭಿವೃದ್ಧಿ ರಂಗ ಹೆಸರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಪ್ರಕಟಣೆ ಮಾಡಿದ್ದರಿಂದ ಹಕ್ಕುಚ್ಯುತಿ ಉಂಟಾಗಿದೆ ಎಂಬುದರ ಬಗ್ಗೆ.

(ಹಕ್ಕುಚ್ಯುತಿ ಸೂಚನೆಯನ್ನು ತಿರಸ್ಕರಿಸಲಾಯಿತು)

10. ಅನುಬಂಧ 634-671

*****

ಕರ್ನಾಟಕ ವಿಧಾನಸಭೆ
ಬುಧವಾರ 22ನೇ ಮಾರ್ಚ್ 2006ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ತೀರ್ಪು:

ವಿಷಯ: ಅಧಿವೇಶನ ಸಂದರ್ಭದಲ್ಲಿ ಸಚಿವರು ಹಾಗೂ ಶಾಸಕರು ವಿಧಾನಸಭೆಯ ಸಭಾಂಗಣದ ಪ್ರವೇಶ ದ್ವಾರದ ಮೂಲಕ ಪ್ರವೇಶ ಪತ್ರ ಹೊಂದಿರದ ವ್ಯಕ್ತಿಗಳನ್ನು ಕರೆತರುತ್ತಿರುವುದರ ಬಗ್ಗೆ.

ಅಧ್ಯಕ್ಷರು : ಅಧಿವೇಶನ ನಡೆಯುತ್ತಿರುವ ಸಂದರ್ಭಗಳಲ್ಲಿ ಮಾನ್ಯ ಸಚಿವರು ಹಾಗೂ ಶಾಸಕರು ವಿಧಾನ ಸಭೆಯ ಸಭಾಂಗಣದ ಪ್ರವೇಶ ದ್ವಾರದ ಮೂಲಕ ಪ್ರವೇಶ ಪತ್ರ ಹೊಂದಿರದ ವ್ಯಕ್ತಿಗಳನ್ನು ಕರೆ ತರುವುದು ಗಮನಕ್ಕೆ ಬಂದಿದೆ. ಆದುದರಿಂದ ಸದನ ನಡೆಯುವ ಸಂದರ್ಭಗಳಲ್ಲಿ ವಿಧಾನ ಸಭೆಯ ಮೊಗಸಾಲೆಗಳಲ್ಲಿ ಮಾನ್ಯ ಸದಸ್ಯರುಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಸಭಾಂಗಣದ ಪ್ರವೇಶ ದ್ವಾರಗಳ ಮುಖಾಂತರ ಮೊಗಸಾಲೆಗಳಿಗೆ ಅಧಿಕೃತ ಪ್ರವೇಶ ಪತ್ರ ಹೊಂದಿರುವವರು ಮಾತ್ರ ಪ್ರವೇಶಿಸಬಹುದಾಗಿದೆ. ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ದಂಡ ನಾಯಕರಿಗೆ ಸೂಚನೆಯನ್ನು ನೀಡಿರುತ್ತೇನೆ. ಆದುದರಿಂದ ಭದ್ರತಾ ಸಿಬ್ಬಂದಿಯವರು ಕಟ್ಟುನಿಟ್ಟಾಗಿ ಅವರ ಕಾರ್ಯವನ್ನು ನಿರ್ವಹಿಸಲು ಅನುಕೂಲವಾಗುವಂತೆ ಮಾನ್ಯ ಸಚಿವರುಗಳು ಹಾಗೂ ಸದಸ್ಯರುಗಳು ತಮ್ಮೊಂದಿಗೆ ಅಧಿಕೃತ ಪಾಸ್ ಅನ್ನು ಹೊಂದಿರದ ವ್ಯಕ್ತಿಗಳನ್ನು ಕರೆತರಬಾರದೆಂದು ಈ ಮೂಲಕ ತಿಳಿಸಲಾಗಿದೆ ಹಾಗೂ ಈ ದಿಸೆಯಲ್ಲಿ ಎಲ್ಲರ ಸಹಕಾರವನ್ನೂ ಸಹ ಕೋರುತ್ತೇನೆ.

2. ಪ್ರಶ್ನೋತ್ತರಗಳು:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಜಿಲ್ಲಾ ಪರಿಷತ್‌ನಿಂದ ಅನುಮತಿ ಪಡೆದ ಶಾಲೆಗಳನ್ನು ಅನುದಾನಕ್ಕೊಳಪಡಿಸುವಲ್ಲಿ ತಾರತಮ್ಯತೆ.

16 (9) ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್‌ಗಳಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ತೆರೆಯಲು ಅನುಮತಿ ನೀಡಲು ಸರ್ಕಾರ ಆದೇಶ ನೀಡಿದ್ದು ನಿಜವೇ?

ಆ) ಸರ್ಕಾರದಿಂದ ಅನುಮತಿ ನೀಡಿರುವ ಪರಿಶಿಷ್ಟ ಜಾತಿ, ಆಡಳಿತ ಮಂಡಳಿಯ ಶಾಲೆಗಳನ್ನು ಅನುದಾನಕ್ಕೊಳಪಡಿಸಲು ಆದೇಶ ನೀಡಿ ಜಿಲ್ಲಾ ಪಂಚಾಯತ್‌ನಿಂದ ಪಡೆದಿರುವ ಶಾಲೆಗಳನ್ನು ಅನುದಾನಕ್ಕೊಳಪಡಿಸಲು ಆರ್ಥಿಕ ಇಲಾಖೆಯ ಅನುಮತಿ ಪಡೆಯಲು ಕಾರಣಗಳೇನು?

ಇ) ಈ ರೀತಿ ತಾರತಮ್ಯ ಹೋಗಲಾಡಿಸಿ ಅನುದಾನಕ್ಕೊಳಪಡಿಸಲು ಸರ್ಕಾರಕ್ಕೆ ಬಂದಿರುವ ಶಾಲೆಗಳನ್ನು ಅನುದಾನಕ್ಕೊಳಪಡಿಸಿ ಆದೇಶ ನೀಡಲಾಗುವುದೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 96 ಎಂಹೆಚ್‌ಎಸ್ 87, ದಿನಾಂಕ: 15–10–87ರಲ್ಲಿ 1987–88ನೇ ಸಾಲಿನಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಕನ್ನಡ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಜಿಲ್ಲಾ ಪರಿಷತ್ತಿನ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕತೆ ಕಂಡುಬಂದ ಸ್ಥಳಗಳಲ್ಲಿ ಮಾತ್ರ ಅವುಗಳನ್ನು ತೆರೆಯಲು ಜಿಲ್ಲಾ ಪರಿಷತ್‌ಗಳಿಗೆ ಅಧಿಕಾರ ನೀಡಲಾಗಿತ್ತು.

ಆ) ಸರ್ಕಾರದ ತಂತಿ ಸಂದೇಶ ಸಂಖ್ಯೆ: ಎಸಿಎಸ್ 44 ಪಿಎಸ್ 89, ದಿನಾಂಕ: 25–05–88ರ ಪತ್ರದಲ್ಲಿ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳನ್ನು ತೆರೆಯಬಾರದೆಂದು ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ತಿಳಿಸಲಾಗಿತ್ತು. ನಂತರ ದಿನಾಂಕ: 25–05–90ರ ಸುತ್ತೋಲೆ ಸಂಖ್ಯೆ: ಇಡಿ 484 ಪ್ರೌಶಿಸೆ 89ರಲ್ಲಿ ಒಂದು ವೇಳೆ ಈ ಆದೇಶವನ್ನು ಮೀರಿ ಪ್ರೌಢಶಾಲೆಗಳನ್ನು ತೆರೆದರೆ ಅದಕ್ಕೆ ಜಿಲ್ಲಾ ಪರಿಷತ್ತುಗಳೇ ಜವಾಬ್ದಾರರಾಗಬೇಕಾಗುತ್ತದೆಂದು ಸರ್ಕಾರ ಈ ಬಗ್ಗೆ ಯಾವ ಕಾರಣಕ್ಕೂ ಘಟನೋತ್ತರ ಅನುಮತಿ ಕೊಡುವುದಿಲ್ಲವೆಂದು ಸೂಚನೆಗಳನ್ನು ನೀಡಲಾಗಿತ್ತು. ಹಾಗೂ ಇನ್ನು ಮುಂದೆ ಸರ್ಕಾರಿ ಮತ್ತು ಪ್ರೌಢಶಾಲೆಗಳನ್ನು ತೆರೆಯಲು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರನ್ವಯ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಸಕ್ಷಮ ಪ್ರಾಧಿಕಾರ ಸರ್ಕಾರವಾಗಿರುತ್ತದೆ.

ದಿನಾಂಕ: 13–9–2002ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 65 ವಿವಿಧ 97ರ ಷರತ್ತುರಲ್ಲಿನ ಷರತ್ತು 3 [1] ಈ ಕೆಳಕಂಡಂತೆ ಇದೆ:–

"ಪ.ಜಾತಿ ಮತ್ತು ಪ.ಪಂಗಡದ ಶಿಕ್ಷಣ ಸಂಸ್ಥೆಗಳ ವತಿಯಿಂದ ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ: 01–06–87ರಿಂದ 31–03–92ರ ಅವಧಿಯಲ್ಲಿ ಪ್ರಾರಂಭವಾಗಿರಬೇಕು."

ಅದರನ್ವಯ ಸಕ್ಷಮ ಪ್ರಾಧಿಕಾರವಾದ ಸರ್ಕಾರದಿಂದ ಅನುಮತಿ ಪಡೆಯದೇ ಇರುವ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಆರ್ಥಿಕ ಇಲಾಖೆಯ ಸಹಮತಿ ಅಗತ್ಯವಾಗಿದೆ.

ಇ) ಜಿಲ್ಲಾ ಪಂಚಾಯತ್‌ನಿಂದ ಅನುಮತಿ ಪಡೆದು ಪ್ರಾರಂಭಿಸಿರುವ ಪ್ರೌಢಶಾಲೆಗಳನ್ನು ಅನುದಾನಕ್ಕೊಳಪಡಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ. ಆರ್ಥಿಕ ಇಲಾಖೆ ಸಹಮತಿ ನೀಡಿದಲ್ಲಿ ಸದರಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಅರ್ಹತೆಯ ಮೇಲೆ ಪರಿಶೀಲಿಸಿ ಅನುದಾನಕ್ಕೆ ಒಳಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಬಹುಶಃ ಇದರಲ್ಲಿ ಎಸ್.ಸಿ. : ಎಸ್. ಟಿ. ಮ್ಯಾನೇಜ್‌ಮೆಂಟಿನವರು ಆ ಜಿಲ್ಲಾ ಪಂಚಾಯಿತಿಯಿಂದ ಪರವಾನಗಿ ತೆಗೆದುಕೊಂಡು ಚಾಲೂ ಆದವರಿಗೆ ಆರ್ಥಿಕ ಸಹಮತಿಗೆ ಕಳುಹಿಸುತ್ತೇವೆ ಎಂದು ಹೇಳಿದ್ದಾರೆ. ಕಳುಹಿಸಿ, ಅದನ್ನು ನಾವು ಬೇಡ ಎನ್ನುವುದಿಲ್ಲ. ಆದರೆ ಅದೇ ಸರ್ಕಾರದಿಂದ ತೆಗೆದುಕೊಂಡರೆ, ಅದಕ್ಕೆ ಆರ್ಥಿಕ ಸಹಮತಿ ಬೇಕಾಗಿಲ್ಲ. ದಯವಿಟ್ಟು ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯಿತಿಗೆ ಇದೇ ಸರ್ಕಾರ ಅಧಿಕಾರ ಕೊಟ್ಟಿತ್ತು. ಕೊಟ್ಟ ಮೇಲೆ ಅವರು ಕೊಟ್ಟಿದ್ದಾರೆ. ಎಸ್. ಸಿ. : ಎಸ್. ಟಿ. ಮ್ಯಾನೇಜ್‌ಮೆಂಟ್‌ಗೆ ಕೊಡುತ್ತೇವೆ ಎಂದು ಹಿಂದಿನ ಎಲ್ಲಾ ಸರ್ಕಾರಗಳೂ ಹೇಳಿಕೊಂಡು ಬಂದಿದ್ದವು. ಕೆಲವರಿಗೆ ನೀವು already ಕೊಟ್ಟಿದ್ದೀರಿ. ಅದಕ್ಕೆ ದಯವಿಟ್ಟು ಆರ್ಥಿಕ ಸಚಿವರು ಇಲ್ಲೇ ಇದ್ದಾರೆ, ತಾವೂ ಇಲ್ಲೇ ಇದ್ದೀರಿ. ಇದರ ಬಗ್ಗೆ ಹಿಂದೆ ತಾವು ಹೋರಾಟ ಮಾಡಿದವರಾಗಿದ್ದೀರಿ. ಇವರನ್ನೆಲ್ಲಾ ಕಟ್ಟಿಕೊಂಡು ಹಿಂದೆ ನೀವೇ ಹೋರಾಟ ಮಾಡಿದ್ದೀರಿ, ಇವತ್ತು ನೀವೇ ಮಂತ್ರಿಗಳಾಗಿದ್ದೀರಿ. ಅದೊಂದು ನಮಗೆ ಸಂತೋಷದ ಸಂಗತಿಯಾಗಿದೆ. ದಯವಿಟ್ಟು ಇವೆಲ್ಲವಕ್ಕೂ ಯಾವಾಗ ನೀವು ಅನುದಾನ ಕೊಡುತ್ತೀರಿ ಎಂಬುದನ್ನು ಖಂಡಿತವಾಗಿಯೂ ತಾವು ಹೇಳಬೇಕು.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಸಭಾಧ್ಯಕ್ಷರೆ, ದಿನಾಂಕ 15.10.87ರಲ್ಲಿ 1987–88ನೇ ಸಾಲಿಗೆ ಜಿಲ್ಲಾ ಪರಿಷತ್ತಿಗೆ ಸರ್ಕಾರ ಅಧಿಕಾರವನ್ನು ಕೊಟ್ಟಿತ್ತು. ಎಲ್ಲಿ ಅವಶ್ಯಕತೆ ಬೀಳುತ್ತದೋ ಅಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಲಿ ಎಂಬ ಉದ್ದೇಶದಿಂದ ಅದನ್ನು ಕೊಡಲಾಗಿತ್ತು. ಅದರ ಪ್ರಕಾರ ಅವರೇನು ಮಾಡಿದ್ದಾರೆ ಎಂದರೆ, ಎಲ್ಲಾ ಕಡೆ ಅನವಶ್ಯಕವಾಗಿ ಶಾಲೆಗಳನ್ನು ತೆರೆದಿದ್ದಾರೆ. ತದನಂತರ ದಿನಾಂಕ 25.5.88ಕ್ಕೆ ಜಿಲ್ಲಾ ಪರಿಷತ್ತಿನವರು ಶಾಲೆಗಳನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆದುಕೊಂಡು ಪ್ರಾರಂಭ ಮಾಡಬೇಕು ಎಂದು ಹೇಳಿದರು. ಆರ್ಥಿಕ ಪರಿಸ್ಥಿತಿಗಳನ್ನು ನೋಡಿಕೊಂಡು ಸರ್ಕಾರ ಪರ್ಮಿಷನ್ ಕೊಡುತ್ತದೆ ಎಂದು ಹೇಳಿದರು. In between ಇಷ್ಟಾದರೂ ಕೂಡ ಸರ್ಕಾರದ ಅಧಿಕೃತ ಪತ್ರ ಹೋದರೂ ಸಹಿತ, ಅವರೇನು ಮಾಡಿದರು ಎಂದರೆ, ಮತ್ತೆ ಶಾಲೆಗಳನ್ನು ಪ್ರಾರಂಭ ಮಾಡಿದರು. ಅಂತಹ ಶಾಲೆಗಳ ಸಮಸ್ಯೆ ಹಾಗೆಯೇ ಉಳಿದಿದೆ. ಈಗ ಅದೇ ವೇಳೆಗೆ, ಸರ್ಕಾರ ಏನು ಅನುಮತಿ ಕೊಟಿತ್ತೋ ಮತ್ತು ಅವುಗಳಿಗೆಲ್ಲಾ FD ಯವರು permission ಕೊಟ್ಟಿದ್ದಾರೆ, ಅದನ್ನು ಮಾಡುತ್ತೇವೆ. ಇಂತಹ ಶಾಲೆಗಳು ಇವುಗಳು ಅನಧಿಕೃತವಾದಂತಹ ಶಾಲೆಗಳೋ ಅಥವಾ ಅಧಿಕೃತವಾದಂತಹ ಶಾಲೆಗಳೋ ಎಂಬ ಬಗ್ಗೆ ಚರ್ಚೆ ನಡೆಯಿತು. ಈಗ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈಗಲೂ ಸಹಿತ ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಟ್ಟರೆ, ಕಳುಹಿಸಿಕೊಡುತ್ತೇವೆ, ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಟ್ಟರೆ ನಾವು ಅದನ್ನು ಮಾನ್ಯ ಮಾಡುತ್ತೇವೆ. ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿಯ ಸಣ್ಣದೊಂದು ವಿಚಾರವನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇವತ್ತು ಅನುದಾನರಹಿತ ಶಾಲೆಗಳು ಎಷ್ಟು ಪ್ರಾರಂಭವಾಗಿವೆ ಎಂದರೆ, ಪ್ರಾಥಮಿಕ ಶಾಲೆಗಳು LPS, 23927 ಅನುದಾನಿತ ಶಾಲೆಗಳಿವೆ,

un-aided ಶಾಲೆಗಳು 2357 ಪೂರ್ವ ಪ್ರಾಥಮಿಕ ಶಾಲೆಗಳಿವೆ. 7330 Higher Primary ಶಾಲೆಗಳಿವೆ. ಆಮೇಲೆ 3782 High School ಗಳಿವೆ. ಹೀಗಾಗಿ ಹತ್ತು ಸಾವಿರದ ಮೇಲೆ ಈ ಅನುದಾನರಹಿತ ಶಾಲೆಗಳು ನಮ್ಮ ರಾಜ್ಯದಲ್ಲಿವೆ. ಅದಕ್ಕಾಗಿ ಇವುಗಳ ಬಗ್ಗೆ ಏನು ಮಾಡಬೇಕು ಎನ್ನುವಂತಾದ್ದರ ಬಗ್ಗೆ ಚರ್ಚೆ ನಡೆದಿದೆ. 31.03.92ರವರೆಗೆ SC/ST ಶಾಲೆಗಳಿಗೆ ಈಗಾಗಲೇ ಅನುಮತಿ ಕೊಟ್ಟಿದೆ, ಮತ್ತು ಉಳಿದ ಶಾಲೆಗಳಿಗೆ ಯಾವ ರೀತಿಯಾಗಿ ಕೊಡಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆರ್ಥಿಕ ಇಲಾಖೆಯ ಸಹಯೋಗದೊಂದಿಗೆ, ಆರ್ಥಿಕ ಇಲಾಖೆಯ ಮಂತ್ರಿಗಳೊಂದಿಗೆ ಚರ್ಚೆ ಮಾಡಿ, ಎಲ್ಲಿ ಅವಶ್ಯಕತೆ ಕಂಡು ಬರುತ್ತದೋ, ಅಂತಹುಗಳಿಗೆ ಹಣಕಾಸಿನ ಲಭ್ಯತೆ ದೊರೆತರೆ ಕೊಡುವಂತಹ ಕೆಲಸವನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈಗ ದಿನಾಂಕ 31.03.92ರವರೆಗೆ ಚಾಲೂ ಮಾಡಿದಂತಹ SC/ST Management ಗಳೆಲ್ಲವುಗಳಿಗೆ ತಾವು ಕೊಡುತ್ತೀರಿ ಎಂದಾಯಿತು. ದಯವಿಟ್ಟು ಬೇರೆಯವರಿಗೂ ಕೊಟ್ಟುಬಿಡಿ. ತಾವೇ ಅವರನ್ನು ಕಟ್ಟಿಕೊಂಡು ಹೋರಾಟ ಮಾಡಿದ್ದೀರಿ. ಸರ್ಕಾರದ ವಿರುದ್ಧ ತಾವೇ ಹೋರಾಟ ಮಾಡಿದ್ದೀರಿ, ಅವರೆಲ್ಲರಿಗೂ ನೀವೇ ಅನುದಾನ ಕೊಡಿಸಬೇಕು, ಸರ್ಕಾರದವರು ತಪ್ಪು ಮಾಡುತ್ತಿದ್ದೀರಿ, ಇನ್ನು ಮುಂದೆ ಅನುದಾನರಹಿತ ಶಾಲೆಗಳನ್ನು ಬಂದ್ ಮಾಡಿ, ಈಗ ಇದ್ದವರಿಗೆ ಕೊಡಿ ಎಂದು ತಾವೇ ಹೋರಾಟ ಮಾಡಿದ್ದೀರಿ. ಈಗ ತಾವೇ ಅಧಿಕಾರಕ್ಕೆ ಬಂದಿದ್ದೀರಿ. ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತ್ತಿದ್ದಾಗ ಅವರೂ ಕೂಡ ಅದಕ್ಕೆ support ಮಾಡಿದ್ದಾರೆ. ತಾವಿಬ್ಬರೂ, ಮಾನ್ಯ ಈಶ್ವರಪ್ಪನವರು, ಎಲ್ಲರೂ ಕೂಡ ಈ ಕಡೆಗೆ ಕುಳಿತುಕೊಂಡಾಗ ಅದಕ್ಕೆ support ಮಾಡಿದ್ದೀರಿ. ದಯವಿಟ್ಟು ಅವರೆಲ್ಲರಿಗೂ ಅನುದಾನ ಒದಗಿಸಿ. SC/ST Management ನವರಿಗಂತೂ ಕೂಡಲೇ ತಾವು ಯಾವಾಗ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಕೊಡುತ್ತೇವೆ ಎಂದು ಹೇಳಿದರೂ, ಅದಕ್ಕೆ ಇನ್ನೂ 2–3 ವರ್ಷಗಳಾದರೆ ಏನು ಉಪಯೋಗ? ಈಗಾಗಲೇ ಶಿಫಾರಸ್ಸು ಆಗಿ ಅವು ಬಂದಿವೆ. ಶಿಫಾರಸ್ಸು ಆಗಿ ಬಂದಿರುವುದಕ್ಕಾದರೂ ತಾವು ಕೊಡಬೇಕಲ್ಲವೇ?

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಸಭಾಧ್ಯಕ್ಷರೆ, ಶಿಫಾರಸ್ಸು ಆಗಿ ಬಂದಿರುವುದನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಡುತ್ತೇವೆ. ಆರ್ಥಿಕ ಇಲಾಖೆಗೆ ಒಪ್ಪಿಗೆ ಕೊಟ್ಟ ನಂತರ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಕೊಟ್ಟ ನಂತರ ಕೊಡುತ್ತೇವೆ ಎನ್ನುವುದಲ್ಲ, ಮಾಡುತ್ತೇವೆ ಎಂದು ಖಚಿತವಾಗಿ ತಾವು ಹೇಳಿ.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಸಭಾಧ್ಯಕ್ಷರೆ, ಪ್ರತಿಯೊಂದರ ಬಗ್ಗೆ ಆರ್ಥಿಕ ಇಲಾಖೆಯವರನ್ನು ಕೇಳದೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ಕಳುಹಿಸಿ, ಆರ್ಥಿಕ ಇಲಾಖೆಯವರೊಂದಿಗೆ ಮಾತನಾಡುತ್ತೇನೆ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳವರೊಂದಿಗೂ ಸಹ ನಾನು ಈ ಬಗ್ಗೆ ಮಾತನಾಡುತ್ತೇನೆ. Session ಮುಗಿದ ನಂತರ ತಕ್ಷಣ ಕ್ರಮ ತೆಗೆದುಕೊಳ್ಳುವಂತಹ ಕೆಲಸ ಮಾಡುತ್ತೇವೆ. ನಾವು ಈಗಾಗಲೇ ಹೇಳಿದ ಹಾಗೆ, 1.6.92 ಗಿಂತ

ಮೊದಲು ಪ್ರಾರಂಭವಾದಂತಹ ಯಾವ ಶಾಲೆಗಳು ಎಲ್ಲಾ ರೀತಿಯಿಂದ ಅನುಕೂಲತೆ ಪಡೆದಿವೆಯೋ, ಅವುಗಳಿಗೂ ಸಹಿತ, ಹಾಗೂ ಹೊಸ ಶಾಲೆ ತೆಗೆಯಬೇಕು ಎನ್ನುವವರಿಗೆ grant ಕೊಡಬೇಕೋ, ಬೇಡವೋ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಎಲ್ಲಾ ಪರಿಶೀಲನೆ ಮಾಡಿ, ಮಾನ್ಯ ಉಪ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ, ಹಣಕಾಸಿನ ಲಭ್ಯತೆಯ ಅನುಕೂಲವನ್ನು ಅವರು ಮಾಡಿ ಕೊಟ್ಟರೆ, ಅದರ ಮೇಲೆ ಸರ್ಕಾರ consider ಮಾಡುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ಎಸ್.ಸಿ : ಎಸ್.ಟಿ. ಬಿಟ್ಟು ಇತರ ಶಾಲೆಗಳಿಗೂ ಸಹಿತ ಕೊಡಿ.

ಶ್ರೀ ಬಸವರಾಜ ಎಸ್. ಹೊರಟ್ಟಿ : ಇತರೆ ಶಾಲೆಗಳ ಬಗ್ಗೆ ಸಹಿತ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಹಣಕಾಸಿನ ಮಂತ್ರಿಗಳೊಂದಿಗೆ ಚರ್ಚೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಹಣಕಾಸಿನ ಪರಿಸ್ಥಿತಿ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೀರಿ. ಇದ್ದವರಿಗೆ ಪಗಾರ ಹೆಚ್ಚಿಸುವುದಕ್ಕೆ ಹೋಗಬೇಡಿ. ಯಾರಿಗೆ ಪಗಾರ ಇಲ್ಲ ಅವರಿಗೆ ಕೊಡುವಂತೆ ಮೊದಲು ಮಾಡಿ. ಈಗ ಐದನೇ ವೇತನ ಆಯೋಗ ಮಾಡುತ್ತೀರಿ, ಮತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ದಯವಿಟ್ಟು ಇವರಿಗೆ ಮೊದಲು ಕೊಡಿ. ಅವರಿಗೆ ಕೊಡಿ, ನಾವೇನೂ ಬೇಡವೆಂದು ಹೇಳುವುದಿಲ್ಲ. ಅದರ ಬಗ್ಗೆ ಚರ್ಚೆ ಬಂದಾಗ ಮಾತನಾಡುತ್ತೇವೆ. ಆದರೆ 10–15 ವರ್ಷಗಳಿಂದ ಅವರಿಗೆ ಶಾಶ್ವತ ಅನುದಾನ ಎಂದು ಕೊಟ್ಟಿರುವುದು. ಅಧ್ಯಕ್ಷರೆ, ತಮಗೂ ಗೊತ್ತಿದೆ, ಎಷ್ಟೋ ಜನ ಪಾಪ, ನೌಕರಿ ಇದೆ ಎಂದು ಹೇಳಿ ಹೆಣ್ಣುಮಕ್ಕಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ. ಅವರ ಪರಿಸ್ಥಿತಿ ಮಾನ್ಯ ಹೊರಟ್ಟಿಯವರಿಗೆ ಗೊತ್ತಿದೆ. ಅವರು ಅವರನ್ನು ಕರೆದುಕೊಂಡು ಓಡಾಡುತ್ತಿದ್ದರು. ಅವನ ಹೆಂಡತಿ ಮತ್ತು ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಣ್ಣು ಹೆತ್ತ ತಂದೆಗೆ ಬಂದಿದೆ. ಈ ಪರಿಸ್ಥಿತಿ ತಮಗೂ ಗೊತ್ತಿದೆ. ತಾವೇ ಅವರನ್ನು ಕಟ್ಟಿಕೊಂಡು ಹೋರಾಟ ಮಾಡಿದರು. ದಯವಿಟ್ಟು ಒಮ್ಮೆ ನಿರ್ಣಯ ಮಾಡಿ ಎಲ್ಲರಿಗೂ ಕೊಡುವಂತಹ ವ್ಯವಸ್ಥೆಯನ್ನು ಮಾಡಿ. ಈ ಎಸ್‌ಸಿ ಎಸ್‌ಟಿ ಮ್ಯಾನೇಜ್‌ಮೆಂಟ್‌ಗಳಿಗಂತೂ ದಯವಿಟ್ಟು ಈ ತಿಂಗಳೊಳಗೆ ಮುಗಿಸಿ.

ಶ್ರೀ ಬಿ.ಎಸ್. ಹೊರಟ್ಟಿ : ಪರಿಶೀಲಿಸುತ್ತೇನೆ.

ಪ್ರಶ್ನೆಸಂಖ್ಯೆ 19(137) – ಶ್ರೀ ಅನಿಲ್ ಹೆಚ್. ಲಾಡ್
ಪ್ರಶ್ನೆಸಂಖ್ಯೆ 20(132) – ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
ಪ್ರಶ್ನೆಸಂಖ್ಯೆ 22(49) – ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ

(ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದರು)

ಂ೫ಂಂ - 3

ಗೌರಿಬಿದನೂರು ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಮನೆಗಳ ನಿರ್ಮಾಣ

23 (207): ಶ್ರೀ ಶಿವಶಂಕರ್ ರೆಡ್ಡಿ ಎನ್. ಹೆಚ್. (ಗೌರಿಬಿದನೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ಪಟ್ಟಣದಲ್ಲಿ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಕಡಿಮೆ ಆದಾಯ ಇರುವಂತಹ ಬಡವರಿಗೆ ಮನೆಗಳ ನಿರ್ಮಾಣ ಮಾಡಿಕೊಡಲು ಅವಕಾಶ ಇಲ್ಲವೇ;

ಆ) ಈ ನಿರ್ಮಾಣಕ್ಕೆ ಸಂಬಂಧಪಟ್ಟಂತಹ ಜಮೀನು ಪುರಸಭೆಯು ಮಂಜೂರು ಮಾಡಲು ಸಿದ್ಧವಿದ್ದರೆ 1000 ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಸಿದ್ಧವಿದೆಯೇ;

ಇ) ಈ ಸಂಬಂಧವಾಗಿ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಅವಕಾಶವಿದೆ.

ಆ) ವಸತಿ ಯೋಜನೆಗೆ ಪುರಸಭೆಯಿಂದ ಸೂಕ್ತ ಜಮೀನು ಒದಗಿಸಿದಲ್ಲಿ ಬೇಡಿಕೆಯನ್ನಾಧರಿಸಿ ವಸತಿ ಯೋಜನೆಯನ್ನು ಕೈಗೊಳ್ಳಬಹುದಾಗಿದೆ.

ಇ) ಗೌರಿಬಿದನೂರು ಪಟ್ಟಣದಲ್ಲಿ ವಸತಿಗಿರುವ ಬೇಡಿಕೆಯನ್ನು ಪರಿಶೀಲಿಸಲು ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳಲಾಗುವುದು.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ಗೌರಿಬಿದನೂರು ಪಟ್ಟಣದಲ್ಲಿ ಸುಮಾರು 2500 ನಿವೇಶನಗಳು ಮತ್ತು ಮನೆಗಳಿಗೆ ಬಹಳ ಬೇಡಿಕೆ ಇದೆ. ಸ್ಲಂ ಬೋರ್ಡಿನಿಂದ ಈಗಾಗಲೇ ಸುಮಾರು 200 ಮನೆಗಳನ್ನು ಕಟ್ಟಿದ್ದಾರೆ. ಇನ್ನು ಸುಮಾರು 2000 ಮನೆಗಳ ಅಗತ್ಯ ಅಲ್ಲಿ ಇದೆ. ಬಹಳಷ್ಟು ಬೇಡಿಕೆ ಇದೆ. ದಯಮಾಡಿ ಈಗ ಏಳು ಎಕರೆ ಜಮೀನು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದಷ್ಟು ಹೆಚ್ಚಿನ ಮನೆಗಳನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

† **ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು)** : ಮಾನ್ಯ ಸಭಾಧ್ಯಕ್ಷರೆ, ಗೌರಿಬಿದನೂರಿನಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದಲ್ಲಿ ಎಷ್ಟು ಮನೆಗಳು ಬೇಕೆನ್ನುವ ಬಗ್ಗೆ ಬೇಡಿಕೆ ಸಮೀಕ್ಷೆಯನ್ನು ನಾವು ಮಾಡಿಸುತ್ತಿದ್ದೇವೆ. ಅದೇ ರೀತಿ ಗೌರಿಬಿದನೂರಿಗೂ ಕೂಡ ಬರುತ್ತದೆ. ಆ ಸಂದರ್ಭದಲ್ಲಿ ನೀವು ಜಾಗ ಕೊಡಿಸುವುದಾದರೆ ಎಷ್ಟೇ ಮನೆಗಳನ್ನು ಕಟ್ಟಿ ಕೊಡುವುದಕ್ಕೂ ಕೂಡ ಸರ್ಕಾರ ಬದ್ಧವಾಗಿದೆ. ಆದರೆ ಜಾಗವನ್ನು ಕೊಡಿಸತಕ್ಕಂಥ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕು.

† ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.

ವಿವಿಧ ಯೋಜನೆಗಳ ಅಡಿಯಲ್ಲಿ ನಿವೇಶನಗಳ/ಮನೆಗಳ ಹಂಚಿಕೆ

24 (147): ಶ್ರೀ ರಾಜೇಂದ್ರನ್ ಎಸ್. : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಿಂದ ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯಡಿ ಕೋಲಾರ ಜಿಲ್ಲೆಗೆ ನೀಡಲಾದ ನಿವೇಶನ / ಮನೆಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ಗುರಿ ಒದಗಿಸುವುದು)

ಆ) ಈ ಗುರಿಯಲ್ಲಿ ಎಷ್ಟು ಜನರಿಗೆ ಕೋಲಾರದಲ್ಲಿ ಮನೆ ಹಾಗೂ ನಿವೇಶನ ನೀಡಲಾಗಿದೆ?

ಇ) ಇದಕ್ಕಾಗಿ ಭೂ ಸ್ವಾಧೀನಪಡಿಸಿಕೊಂಡ ಜಮೀನುಗಳೆಷ್ಟು? ಹಾಗೂ ನೀಡಿರುವ ಗುರಿ ಸಾಧಿಸಲಾಗಿದೆಯೇ? ಇಲ್ಲವೇ?

ಈ) ನಿರ್ಮಾಣದ ವಿವಿಧ ಹಂತದಲ್ಲಿ ಅಂದರೆ, ತಳಪಾಯ, ಲಿಂಟಲ್ ಹಾಗೂ ಛಾವಣಿ ಹಂತದಲ್ಲಿ ಕೋಲಾರ ಜಿಲ್ಲೆಯಲ್ಲಿ ಸದರಿ ವಸತಿ ಯೋಜನೆಯಡಿಯಲ್ಲಿ ನಿರ್ಮಿತವಾಗುತ್ತಿರುವ ಮನೆಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಕೋಲಾರ ಜಿಲ್ಲೆಗೆ ನಗರ ಆಶ್ರಯ ಯೋಜನೆಗಳಡಿ 1117 ಮನೆಗಳ ಗುರಿಯನ್ನು ನೀಡಿದ್ದು ಕ್ಷೇತ್ರವಾರು ವಿವರವನ್ನು ಅನುಬಂಧ 'ಅ' ದಲ್ಲಿ ಲಗತ್ತಿಸಿದೆ.

ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ 183 ನಿವೇಶನಗಳನ್ನು ಹಂಚಲಾಗಿದೆ.

ಆ) ಮೇಲ್ಕಂಡ 1117 ಮನೆಗಳ ಗುರಿಯಲ್ಲಿ 485 ಮನೆಗಳನ್ನು ಕೆ.ಜಿ.ಎಫ್. ಪಟ್ಟಣಕ್ಕೆ ನೀಡಲಾಗಿರುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ 2002-03ರಲ್ಲಿ ಮಾತ್ರ 183 ನಿವೇಶನಗಳನ್ನು ಕೆ.ಜಿ.ಎಫ್. ಮತ ಕ್ಷೇತ್ರದಲ್ಲಿ ಮಾತ್ರ ಹಂಚಲಾಗಿದೆ.

ಇ) ಕೆ.ಜಿ.ಎಫ್. ನಲ್ಲಿ 5.21 ಎಕರೆ ಜಮೀನನ್ನು ಖರೀದಿಸಿ ಎಲ್ಲ 183 ನಿವೇಶನಗಳನ್ನು ಹಂಚಲಾಗಿದೆ.

ಈ) ಕಳೆದ ಮೂರು ವರ್ಷಗಳಿಂದ ನಗರ ಆಶ್ರಯ ಯೋಜನೆಯಡಿಯಲ್ಲಿ ನೀಡಲಾದ 1117 ಮನೆಗಳಲ್ಲಿ ಒಟ್ಟು 723 ಮನೆಗಳು ಪೂರ್ಣಗೊಂಡಿದ್ದು 365 ಮನೆಗಳು ಪ್ರಗತಿ ಹಂತದಲ್ಲಿದ್ದು ಈ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. 29 ಮನೆಗಳು ಪ್ರಾರಂಭವಾಗಬೇಕಿದ್ದು, ಇವುಗಳನ್ನು ಕೂಡಲೇ ಪ್ರಾರಂಭಿಸಿ ಪೂರ್ತಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. (ವಿವರವನ್ನು ಅನುಬಂಧ 'ಆ'ದಲ್ಲಿ ನೀಡಲಾಗಿದೆ.)

ಅನುಬಂಧ–'ಅ'

ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಗೆ ನಗರ ಆಶ್ರಯ ಯೋಜನೆಯಡಿ ನಿಗದಿಪಡಿಸಿರುವ ವಿಧಾನ ಸಭಾ ಕ್ಷೇತ್ರವಾರು ಮನೆಗಳ ವಿವರ

ಕ್ರ.ಸಂ	ತಾಲ್ಲೂಕು / ಪಟ್ಟಣಗಳು	ವಿಧಾನ ಸಭಾ ಕ್ಷೇತ್ರ	ನಗರ ಆಶ್ರಯ ಯೋಜನೆಯಡಿ ಹಂಚಿಕೆ ಮಾಡಲಾದ ಮನೆಗಳ ವಿವರ				ನಗರ ಆಶ್ರಯ ಯೋಜನೆಯಡಿ ಹಂಚಿಕೆ ಮಾಡಲಾದ ಮನೆಗಳ ವಿವರ			
			2002-03	2003-04	2004-05	Total	2002-03	2003-04	2004-05	Total
1	ಬಾಗೇಪಲ್ಲಿ	ಬಾಗೇಪಲ್ಲಿ	78	37	ಸರ್ಕಾರ ಗುರಿ ನಿಗದಿಪಡಿಸಿಲ್ಲ	115	0	0	0	0
2	ಬಂಗಾರಪೇಟೆ	ಬೇತಮಂಗಲ	24	0		24	0	0	0	0
3	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	64	28		92	0	0	0	0
4	ಚಿಂತಾಮಣಿ	ಚಿಂತಾಮಣಿ	52	0		52	0	0	0	0
5	ಗೌರಿಬಿದನೂರು	ಗೌರಿಬಿದನೂರು	35	24		59	0	0	0	0
6	ಗುಡಿಬಂಡೆ	ಬಾಗೇಪಲ್ಲಿ	54	24		78	0	0	0	0
7	ಕೆ.ಜಿ.ಎಫ್	ಕೆ.ಜಿ.ಎಫ್	485	0		485	183	0	0	183
8	ಕೋಲಾರ	ಕೋಲಾರ	11	0		11	0	0	0	0
9	ಮಾಲೂರು	ಮಾಲೂರು	42	1		43	0	0	0	0
10	ಮುಳಬಾಗಿಲು	ಮುಳಬಾಗಿಲು	44	41		85	0	0	0	0
11	ಶಿಡ್ಲಘಟ್ಟ	ಶಿಡ್ಲಘಟ್ಟ	32	1		33	0	0	0	0
12	ಶ್ರೀನಿವಾಸಪುರ	ಶ್ರೀನಿವಾಸಪುರ	40	0		40	0	0	0	0
	ಒಟ್ಟು		961	156	0	1117	183	0	0	183

ಅನುಬಂಧ-'ಆ'

ನಗರ ಆಶ್ರಯ ಯೋಜನೆಯಡಿ ಕೋಲಾರ ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ನೀಡಲಾದ ಮನೆಗಳಲ್ಲಿ ಪ್ರಗತಿ ಹಂತದಲ್ಲಿರುವ ಮನೆಗಳ ವಿವರ

2002-2003

ಕ್ರ.ಸಂ	ಪಟ್ಟಣಗಳು	ವಿಧಾನ ಸಭಾ ಕ್ಷೇತ್ರ	ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು: ತಳ ಪಾಯ	ಕಿಟಕಿ	ಛಾವಣಿ	ಒಟ್ಟು	ಪ್ರಾರಂಭವಾಗದ ಮನೆಗಳು
1	2	3	4	5	6	7	8	9	10
1	ಬಾಗೇಪಲ್ಲಿ	ಬಾಗೇಪಲ್ಲಿ	78	68	1	3	6	10	0
2	ಬಂಗಾರಪೇಟ	ಬೇತಮಂಗಲ	24	18	2	0	4	6	0
3	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	64	47	13	4	0	17	0
4	ಚಿಂತಾಮಣಿ	ಚಿಂತಾಮಣಿ	52	32	8	8	4	20	0
5	ಗೌರಿಬಿದನೂರು	ಗೌರಿಬಿದನೂರು	35	26	4	2	3	9	0
6	ಗುಡಿಬಂಡೆ	ಬಾಗೇಪಲ್ಲಿ	54	46	0	0	7	7	1
7	ಕೆ.ಜಿ.ಎಫ್	ಕೆ.ಜಿ.ಎಫ್	485	257	0	120	108	228	0
8	ಕೋಲಾರ	ಕೋಲಾರ	11	6	2	2	1	5	0
9	ಮಾಲೂರು	ಮಾಲೂರು	42	36	2	4	0	6	0
10	ಮುಳಬಾಗಿಲು	ಮುಳಬಾಗಿಲು	44	40	4	0	0	4	0
11	ಶಿಡ್ಲಘಟ್ಟ	ಶಿಡ್ಲಘಟ್ಟ	32	19	5	6	2	13	0
12	ಶ್ರೀನಿವಾಸಪುರ	ಶ್ರೀನಿವಾಸಪುರ	40	20	1	5	4	10	10
	ಒಟ್ಟು		**961**	**615**	**42**	**154**	**139**	**335**	**11**

2003-2004							
		ಪ್ರಗತಿಯಲ್ಲಿರುವ ಮನೆಗಳು					
ಗುರಿ	ಪೂರ್ಣಗೊಂಡ ಮನೆಗಳು	ತಳ ಪಾಯ	ಕಿಟಕಿ	ಛಾವಣಿ	ಒಟ್ಟು	ಪ್ರಾರಂಭವಾಗದ ಮನೆಗಳು	2004-2005
11	12	13	14	15	16	17	18
37	34	1	1	1	3	0	ಸರ್ಕಾರ ಗುರಿ ನಿಗದಿಪಡಿಸಿರುವುದಿಲ್ಲ
0	0	0	0	0	0	0	
28	18	2	2	1	5	5	
0	0	0	0	0	0	0	
24	18	2	2	2	6	0	
24	20	0	0	1	1	3	
0	0	0	0	0	0	0	
0	0	0	0	0	0	0	
1	0	1	0	0	1	0	
41	18	6	5	2	13	10	
1	0	0	1	0	1	0	
0	0	0	0	0	0	0	
156	**108**	**12**	**11**	**7**	**30**	**18**	

ಪ್ರಗತಿಯಲ್ಲಿರುವ ಮನೆಗಳು

ಶ್ರೇಣಿಗಳು	ಗುರಿ	ಪೂರ್ಣಗೊಂಡ ಮನೆಗಳು	ತಳ ಪಾಯ	ಕಿಟಕಿ	ಛಾವಣಿ	ಒಟ್ಟು	ಪ್ರಾರಂಭವಾಗದ ಮನೆಗಳು
2002–2003	961	615	42	154	139	335	11
2003–2004	156	108	12	11	7	30	18
2004–2005	0	0	0	0	0	0	0
ಒಟ್ಟು	**1117**	**723**	**54**	**165**	**146**	**365**	**29**

ಶ್ರೀ ಎಸ್. ರಾಜೇಂದ್ರನ್ : ಸನ್ಮಾನ್ಯ ಸಭಾಧ್ಯಕ್ಷರೆ, ನಿವೇಶನ ಕೊಟ್ಟಿದ್ದೀರಿ. Mr. Speaker, you have to safeguard me. ನಾನು ಇಂಗ್ಲೀಷ್‌ನಲ್ಲಿ ಬರೆದಿದ್ದ, the target fixed ಬಗ್ಗೆ ಕನ್ನಡದಲ್ಲಿ ಉತ್ತರ ಕೊಟ್ಟಿದ್ದಾರೆ. ನನಗೆ ಕೊಟ್ಟಿರುವ ರಿಪ್ಲೇ ಇದು.

ಅಧ್ಯಕ್ಷರು : ಅವರಿಗೆ ಇಂಗ್ಲೀಷ್ ಕಾಪಿ ಕೊಡಿ.

ಶ್ರೀ ಎಸ್. ರಾಜೇಂದ್ರನ್ : ಅವರು ಇಂಗ್ಲೀಷ್ ಕಾಪಿಯನ್ನು ಕೊಡಲಿ, ಇದನ್ನು ಕೊನೆಯಲ್ಲಿ ತೆಗೆದುಕೊಳ್ಳಿ. ಬಹಳ ಕೇರ್‌ಲೆಸ್‌ನೆಸ್ ಇದೆ, ಭಯ ಇಲ್ಲ. ಅವರಿಗೆ ಸದಸ್ಯರು ಪ್ರಶ್ನೆ ಮಾಡುತ್ತಾರೆ ಎನ್ನುವ ಚಿಂತನೆಯೇ ಇಲ್ಲ. Past three years target of 1117 houses have been given under urban Ashraya Scheme.

ನಾನು ಏನು ಕೇಳಿದ್ದೇನೆಂದರೆ, ನಿಜವಾಗಿ ಬೆನಿಫಿಷರೀಸ್‌ಗೆ ಮನೆಗಳು ಹೋಗಿಲ್ಲ. ಕಳೆದ 'ಆಶ್ರಯ' ಮತ್ತು 'ಅಂಬೇಡ್ಕರ್ ಸ್ಕೀಮ್'ನಲ್ಲಿ ಎಷ್ಟು ಮನೆಗಳನ್ನು ಯಾರ್‍ಯಾರಿಗೆ ಕೊಟ್ಟಿದ್ದಾರೆ, ಎಂದರೆ ನನ್ನ ಊರಿನಲ್ಲಿ ಒಂದೂ ಇಲ್ಲ. ನಮಗೆ ಅಂಬೇಡ್ಕರ್ ಸ್ಕೀಮ್ ಮನೆಗಳೂ ಬೇಡ, ಆಶ್ರಯ ಸ್ಕೀಮ್ ಮನೆಗಳೂ ಬೇಡ. ಕಟ್ಟಿರುವ ಮನೆಗಳಿಗೆ ಬೆನಿಫಿಷರೀಸ್ ಇಲ್ಲ. ತಾವು ಇದರ ಬಗ್ಗೆ ಏನು ಹೇಳುತ್ತೀರಿ ಹೇಳಿ, ನಂತರ ನಾನು ಏನು ಕ್ರಮ ತೆಗೆದುಕೊಳ್ಳುವುದು ಎಂದು ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಸಭಾಧ್ಯಕ್ಷರೆ, ಅವರು ಕೆಜಿಎಫ್ ಮಾತ್ರ ಅಲ್ಲ, ಕೋಲಾರ ಜಿಲ್ಲೆಗೆ ಎಷ್ಟು ಕೊಟ್ಟಿದೆ ಎನ್ನತಕ್ಕಂತಹ ವಿಚಾರವನ್ನು ಕೇಳಿದ್ದಾರೆ, ಕೋಲಾರ ಜಿಲ್ಲೆಗೆ 1117 ಮನೆಗಳನ್ನು ಮೂರು ವರ್ಷಗಳಲ್ಲಿ ಕೊಟ್ಟಿದ್ದೇವೆ. ಅದರಲ್ಲಿ 183 ನಿವೇಶನಗಳನ್ನು ಇಡೀ ಕೋಲಾರ ಜಿಲ್ಲೆಗೆ ಹಂಚಿದ್ದೇವೆ. ಆದರೆ ಕೆಜಿಎಫ್‌ನಲ್ಲಿ 2000 ದಲ್ಲಿ ಮಾತ್ರ 183 ನಿವೇಶನಗಳನ್ನು ಹಂಚಲಾಗಿದೆ ಎಂದು ಅವರು ಕೆಜಿಎಫ್ ಬಗ್ಗೆ ಕೇಳಿದ್ದಾರೆ, ಕೆಜಿಎಫ್ ಬಗ್ಗೆ ನಾವು ಮಾಹಿತಿಯನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ರಾಜೇಂದ್ರನ್: ಒಬ್ಬರಿಗೆ ಒಂದು ಸೈಟ್ ಸಿಗಲಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ : ಅದನ್ನು ಬೇಕಾದರೆ ಎನ್‌ಕ್ವೈರಿ ಮಾಡಿಸುತ್ತೇನೆ. ನಿಮಗೆ ನಿವೇಶನ ಸಿಗಲೇ ಇಲ್ಲ ಎಂದರೆ, I will go in for an enquiry.

ಶ್ರೀ ಎಸ್. ರಾಜೇಂದ್ರನ್ : ತಾವು ಎನ್‌ಕ್ವೈರಿ ಮಾಡಿ, ನೀವು ಮುನಿಸಿಪಲ್ ಕಮಿಷನರ್‌ಗೆ ಹಾಕುತ್ತೀರಿ, ಅವನೇ ಮಾಡಿರುವುದು ಬೋಗಸ್, ಅವನೇ ಸೇಲ್ ಮಾಡಿರುವುದು, ಅವನು ಪುನಃ ಬೇರೆ ಡೀಟೇಲ್ ಕಳುಹಿಸಿ 'ಸ್ವಾಮಿ ಹೀಗೆ ಇದೆ, ನಾವು ಸರಿಯಾಗಿ ಕೊಟ್ಟಿದ್ದೇವೆ', ಎಂದು ಹೇಳುತ್ತಾನೆ. ನೀವು ಯಾವ ತರಹ ಎನ್‌ಕ್ವೈರಿ ಮಾಡುತ್ತೀರಿ?

† **ಶ್ರೀ ಡಿ.ಟಿ. ಜಯಕುಮಾರ್** : ಮಾನ್ಯ ಅಧ್ಯಕ್ಷರೆ, ಕೆಜಿಎಫ್‌ನಲ್ಲಿ, ಐದು ಎಕರೆ 21 ಗುಂಟೆ ಜಮೀನನ್ನು ಖರೀದಿಸಿ ಅಲ್ಲಿ 183 ನಿವೇಶನಗಳನ್ನು ನಾವು ಹಂಚಿದ್ದೇವೆ. ಇವರು ಒಂದೂ ಇಲ್ಲವೆಂದು ಹೇಳುತ್ತಿದ್ದಾರೆ. ಬಹುಶಃ ನಮ್ಮ ಅಧಿಕಾರಿಗಳು ಸುಳ್ಳು ಹೇಳಬಹುದು, ಅಥವಾ ಅವರು ಸುಳ್ಳು ಹೇಳುತ್ತಿರಬಹುದು. ಆದರೆ ಇದಕ್ಕೆ ಏನಾದರೂ ಒಂದು ತನಿಖೆ ಮಾಡಿಸಿ, ಅದೇನಾದರೂ ಸುಳ್ಳಾಗಿದ್ದರೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

---

† ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.

ಶ್ರೀ ಎಸ್. ರಾಜೇಂದ್ರನ್ : ಆಶ್ರಯ ಸ್ಕೀಮ್‌ನ ಕೆಲವು ಮನೆಗಳು ರೆಂಟ್‌ಗೆ ಬಿಟ್ಟಿದ್ದಾರೆ, ಕೆಲವು ಮನೆಗಳು ಯಾರೂ ತೆಗೆದುಕೊಂಡಿಲ್ಲ. ಬೆನಿಫಿಷರೀಸ್ ಇರಲಿಲ್ಲವಾ? ಹೇಗೆ ಅಲಾಟ್ ಮಾಡುತ್ತಾರೆ ಎಂದರೆ, the concerned officer, ... ಸೆಕ್ರೆಟರಿಯವರು ಏನು ಹೇಳುತ್ತಾರೆಂದರೆ what can I do ಎಂದು. ಇಂತಹವರನ್ನು ಡಿಸ್‌ಮಿಸ್ ಮಾಡಬೇಕು. He can't use that word. ಸಾರ್, ಅದು ಹೇಗೆ ಸರಿಪಡಿಸುವುದು ಎಂದು ಹೇಳಿದರೆ, ನೀವೇ ಬೆನಿಫಿಷರೀಸ್ ಹುಡುಕಿಕೊಂಡು ಬನ್ನಿ ನಾನು ಸೈನ್ ಮಾಡಿ ಕೊಡುತ್ತೇನೆಂದು ಹೇಳುತ್ತಾರೆ. ಏನು ಮಹಾರಾಜನಾ ಇವನು? ಮೈಸೂರು ಮಹಾರಾಜನ ಮನೆಯಲ್ಲಿ ಹುಟ್ಟಿ ಬಂದಿದ್ದಾರಾ ಇವರು? ಕೂಲಿ ಕೆಲಸ ಮಾಡಿ, ಏನು ಸಂಬಳ ಬರುತ್ತದೆ ಅದನ್ನು ತಿಂದುಕೊಂಡು ಸರಿಯಾಗಿ ಕೆಲಸ ಮಾಡು ಎಂದರೆ, ನನಗೆ ಇನ್‌ಸ್ಟ್ರಕ್ಷನ್ಸ್ ಕೊಡುತ್ತಾರೆ. ನನಗೆ ಅವನು ಸಂಬಳ ಕೊಡುತ್ತಿದ್ದಾರಾ? ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಮೊದಲು ಹೇಳಿ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಒಬ್ಬ ಅಧಿಕಾರಿ ಮೇಲೆ ಗುರುತರವಾದ ಆಪಾದನೆ ಮಾಡುತ್ತಿದ್ದಾರೆ, ಅವರು ಸ್ಪೆಸಿಫಿಕ್ಕಾಗಿ ಇಂತಹ ಅಧಿಕಾರಿ ಈ ರೀತಿ ನಡೆದುಕೊಂಡಿದ್ದಾರೆ ಎಂದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ, ವೇಗ್‌ಆಗಿ ತಾವು ಹೇಳುವುದಾದರೆ, ಆಶ್ರಯ ಕಮಿಟಿಯ ಅಧ್ಯಕ್ಷರು ಶಾಸಕರುಗಳೇ ಆಗಿದ್ದಿರಿ, ಟೌನ್ ಅಧ್ಯಕ್ಷರೂ ನೀವೇ. KGF comes under Urban. So you are the Chairman of the Comittee. ಅದು ಮೂರು ವರ್ಷಗಳ ಹಿಂದೆ.

ಶ್ರೀ ಎಸ್. ರಾಜೇಂದ್ರನ್ : ಮೂರು ವರ್ಷಗಳ ಹಿಂದೆ ನಾನು ಅಧ್ಯಕ್ಷನಾಗಿರಲಿಲ್ಲ.

ಶ್ರೀ ಡಿ. ಟಿ. ಜಯಕುಮಾರ್ : ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅಧ್ಯಕ್ಷರಾಗಿದ್ದಾರೆ. ಅದಕ್ಕೆ ಮುಂಚೆ, KGF comes under Urban. ಅರ್ಬನ್‌ನಲ್ಲಿ ನೀವೇ ಅಧ್ಯಕ್ಷರಾಗಿದ್ದೀರಿ. ನೀವೇ ಅಧ್ಯಕ್ಷರಾಗಿರುವುದರಿಂದ, you have every right to question the concerned officers.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, Concerned officer, ಸಿಟಿಯಲ್ಲಿ ಆಶ್ರಯ ಸ್ಕೀಮ್ ಬಗ್ಗೆ ಎಮ್.ಎಸ್. ಬಿಲ್ಡಿಂಗ್‌ನಲ್ಲಿರುವ ಸೆಕ್ರೆಟರಿಯವರು ಏನು ಹೇಳುತ್ತಾರೆ ಅಂದರೆ....... I don't know his name. He is the concerned Officer for this, Ashraya scheme. ಅವರ ಹತ್ತಿರ ಹೋಗಿ ನಾನೇ ಅವರ ಛೇಂಬರ್‌ನಲ್ಲಿ ಕುಳಿತು ಕೇಳಿದ್ದಕ್ಕೆ ನನಗೆ ಸಿಕ್ಕಿದ ಉತ್ತರ ಇದು. What can I do? You dò one thing, you find out the deneficiaries ಯಾರ್‍ಯಾರು ಬೆನಿಫಿಷರೀಸ್ ಇದ್ದಾರೆ ಅವರ ಲೀಸ್ಟ್ ಮಾಡಿಕೊಂಡು ಬನ್ನಿ, ನಾನು ಅವರಿಗೆ ಆಥರೈಸ್ ಮಾಡಿ ಕೊಡುತ್ತೇನೆ, ಅಂದರೆ, is it my duty?

೮೫೦೧-4

ಶ್ರೀ ಡಿ.ಟಿ. ಜಯಕುಮಾರ್ : ನಾನು ಒಪ್ಪುತ್ತೇನೆ. ಆ ರೀತಿ ಉದ್ಧಟತನದ ಉತ್ತರವನ್ನು ಒಬ್ಬ ಜನ ಪ್ರತಿನಿಧಿಗೆ ಯಾವುದೇ ಅಧಿಕಾರಿ ಕೊಡಬಾರದು. ಅಕಸ್ಮಾತ್ ಕೊಟ್ಟಿದ್ದರೆ, ಅವರು ಯಾರು ಎಂದು ನೀವು ಹೆಸರೂ ಕೂಡ ಹೇಳುತ್ತಿಲ್ಲ, ಸ್ಪೆಸಿಫಿಕ್ಕಾಗಿ ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ರಾಜೇಂದ್ರನ್‌ರವರೇ, ಏನಾದರೂ ಇದ್ದರೆ ಬರೆದು ಕೊಡಿ.

Sri S. Rajendran : Who is the concerned Secretary?

Sri D.T. Jayakumar : Mr. Shivasailam.

Sri S. Rajendran : Yes, he is the Secretary, who said this word to me. I went twice to his office. He said so goldly, "what can I do? I cannot help".

Sri D.T. Jayakumar : Because you are the Chairman of the Committee there, that is why he might have told like that. Anyhow, it is not his duty to tell you like that.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಒಬ್ಬ ಶಾಸಕನಾಗಿ ಸಂಬಂಧಪಟ್ಟ ಕಾರ್ಯದರ್ಶಿಯವರ ಹತ್ತಿರ ಹೋದಾಗ, ನೀವು ಬೆನಿಫಿಷರೀಸ್ ಲೀಸ್ಟ್ ಮಾಡಿಕೊಂಡು ಬನ್ನಿ ಆಮೇಲೆ ನಾನು ಸ್ಯಾಂಕ್ಷನ್ ಮಾಡುತ್ತೇನೆ ಅಂತ ಅಂದರೆ, ಶಾಸಕರು ಆ ಸಮಿತಿಗೆ ಅಧ್ಯಕ್ಷರಾಗಿರಬಹುದು. ಆದರೆ is it the duty of the President to do like that?

ಶ್ರೀ ಡಿ.ಟಿ. ಜಯಕುಮಾರ್ : ಟಾರ್ಗೆಟ್ ನಾವೇ ಫಿಕ್ಸ್ ಮಾಡಿರುತ್ತೇವೆ. ಆ ಪ್ರಕಾರ ಅವರು ಆಯ್ಕೆ ಮಾಡಬೇಕು. ಬೆನಿಫಿಷರೀಸ್ ಆಯ್ಕೆ ಮಾಡಿದ ಮೇಲೆ ಟಾರ್ಗೆಟ್ ಫಿಕ್ಸ್ ಮಾಡುವುದು ಅಲ್ಲ.

ಶ್ರೀ ಎಸ್. ರಾಜೇಂದ್ರನ್ : ಟಾರ್ಗೆಟ್ ಫಿಕ್ಸ್ ಮಾಡಿದಿರಿ, ಮನವಿಗಳನ್ನು ನಾವೇ ಕೊಟ್ಟಿದ್ದೇವೆ.

ಶ್ರೀ ಡಿ.ಟಿ. ಜಯಕುಮಾರ್ : ಅದಕ್ಕೆ ತಕ್ಕ ಹಾಗೆ ನೀವು ಮಾಡಬೇಕು.

ಅಧ್ಯಕ್ಷರು : ರಾಜೇಂದ್ರನ್‌ರವರೇ, ನೇರವಾಗಿ ಏನು ಕೇಳಬೇಕೋ ಕೇಳಿ. ಇದು ಪರಸ್ಪರ ನೀವುಗಳೇ ಮಾತನಾಡಿಕೊಂಡ ಹಾಗಾಗುತ್ತಿದೆ. ಏನಾದರೂ ಸಮಸ್ಯೆ ಇದ್ದರೆ ಪರಿಹಾರ ಆಗಬೇಕು.

ಶ್ರೀ ಎಸ್. ರಾಜೇಂದ್ರನ್ : ನಾನು ಏನು ಹೇಳುತ್ತಿದ್ದೇನೆಂದರೆ, the beneficiaries are supposed to utilise the House. ಆದರೆ ಅದನ್ನೆಲ್ಲಾ ರೆಂಟ್‌ಗೆ ಕೊಟ್ಟಿರುವವರ ಮೇಲೆ ಯಾರು ಕ್ರಮ ತೆಗೆದುಕೊಳ್ಳಬೇಕು, ನಾನಾ? I am the Chairman, but I have no authority to take action against than.

0500-4 *

ಶ್ರೀ ಡಿ.ಟಿ. ಜಯಕುಮಾರ್ : ಸದಸ್ಯರುಗಳೇ ಕಮಿಟಿಯ ಅಧ್ಯಕ್ಷರಾಗಿರುತ್ತಾರೆ, ಅಲ್ಲಿಯ ಆಗುಹೋಗುಗಳೆಲ್ಲವನ್ನೂ ಅವರು ಗಮನಿಸಿರುತ್ತಾರೆ, whether the beneficiary is competent or not, that also you have to decide. You are the chairman of the committee. There you have to take a decision.

ಅಧ್ಯಕ್ಷರು : ಕಾರ್ಯದರ್ಶಿಯವರು ಏನೋ ಕೋಆಪರೇಟ್ ಮಾಡುತ್ತಿಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತಿದ್ದಾರೆ. ಅದು ಏನೆಂದು ಎನ್‌ಕ್ವೈರಿ ಮಾಡಿ ಸೆಟಲ್ಮೆಂಟ್ ಮಾಡಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಚಿವರಲ್ಲಿ ನನ್ನದೊಂದು ವಿನಂತಿ. ಅವರು ಇರುವವರಲ್ಲೇ ಒಬ್ಬ ಒಳ್ಳೆಯ ಅಧಿಕಾರಿಯಾಗಿದ್ದಾರೆ. ಮನೆ ಸ್ಕೀಮ್‌ಗಳನ್ನು streamline ಮಾಡಿದಂತಹ ಅಧಿಕಾರಿ ಅವರಾಗಿದ್ದಾರೆ. ಪಾಪ, ಅವರಿಗೆ ಏನೋ ತಪ್ಪು ತಿಳುವಳಿಕೆಯಿಂದ ಈ ರೀತಿ ಆಗಿರಬಹುದು. ಅದನ್ನು ಕುಳಿತುಕೊಂಡು ಸಮಜಾಯಿಷಿಯನ್ನು ಮಾಡಿ. ಕೆಟ್ಟ ಅಧಿಕಾರಿಗಳ ಬಗ್ಗೆ ನಾವು ಇಲ್ಲಿ ಬಾಯಿಗೆ ಬಂದಂತೆ ಮಾತನಾಡುತ್ತೇವೆ. ಏಕೆಂದರೆ, ಅವರು ಸರಿಯಾಗಬೇಕಾಗುತ್ತದೆ. ಇರುವಂತಹ ಒಳ್ಳೆಯ ಅಧಿಕಾರಿಗಳ ಬಗ್ಗೆ ಹೌಸ್‌ನಲ್ಲಿ ನಾವು ಮಾತನಾಡಿದರೆ ಅದು ಸರಿಯಲ್ಲ. ಇರುವುದರಲ್ಲಿ ಅವರು ಪರವಾಗಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಧಿಕಾರಿಗಳು ಒಳ್ಳೆಯವರಿದ್ದಾರೆ ಎಂದಾಕ್ಷಣಕ್ಕೆ ಜನ ಪ್ರತಿನಿಧಿಗಳನ್ನು ಬಹಳ ಅಗೌರವದಿಂದ ಕಾಣುವಂತಹ ಪ್ರವೃತ್ತಿ ಸರಿಯಲ್ಲ. ಮಾನ್ಯ ರಾಜೇಂದ್ರನ್‌ರವರಿಗೆ ಆದಂತಹ ಅನುಭವ ಆ ಕಛೇರಿಯಲ್ಲಿ ನನಗೂ ಕೂಡ ಆಗಿದೆ. ಅಧಿಕಾರಿಗಳು ಒಳ್ಳೆಯವರಾಗಿದ್ದಾರೆ ಎಂದರೆ ನಾವೇನು ಸುಮಾರಾಗಿದ್ದೇವೆಯೇ?

ಶ್ರೀ ಆರ್. ಶ್ರೀನಿವಾಸ್ : ಅಧಿಕಾರಿಗಳೇ ಪಟ್ಟಿಯನ್ನು ಮಾಡಿದಾಗ, ಬಹುಶಃ ನಾವ್ಯಾರೂ ಅದನ್ನು ಒಪ್ಪಿಕೊಳ್ಳುವುದಿಲ್ಲ. ನಾವ್ಯಾರಾದರೂ ಕೂಡ ಪ್ರತಿನಿಧಿಗಳ ಪಟ್ಟಿಯನ್ನೇ ಅಂಗೀಕಾರ ಮಾಡುತ್ತೇವೆ. ಆದ್ದರಿಂದ, ಯಾರೇ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ, ಸ್ವಾಮಿ, ನೀವು ಪಟ್ಟಿ ಕೊಡಿ, ನಿಮ್ಮ ಪಟ್ಟಿಯನ್ನು ಅಂಗೀಕಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಅವರು ಅಂತಹ ಒಂದು ಉದ್ದೇಶದಿಂದ ಹೇಳಿರಬಹುದು ಎನ್ನುವುದನ್ನು ಇಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ನಾನೇನು ಹೇಳುತ್ತೇನೆ ಎಂದರೆ, ಅಧಿಕಾರಿಯವರು ಒಳ್ಳೆಯವರಿದ್ದರೆ, ಅವರಿಗೆ gold medal ಕೊಡಿ, ನಾನು ಬೇಡ ಎನ್ನುವುದಿಲ್ಲ. Gold medal ಅಥವಾ ಇನ್ನಿತರ ಅವಾರ್ಡ್ ಅನ್ನು ತಾವು ಅವರಿಗೆ ಕೊಡಿ. ಮೂರು ಸಲ ಗೋಲ್ಡ್ ಮೆಡಲ್ ಪಡೆದಂತಹ ಪೋಲೀಸ್ ಅಧಿಕಾರಿಯೊಬ್ಬರು ಈಗ ಲೋಕಾಯುಕ್ತರಿಗೆ ಸಿಕ್ಕಿ ಬಿದ್ದಿದ್ದಾರೆ. ಆ ತರಹದ್ದೂ ಇದೆ. You please understand, what I say. ಸೈಟ್‌ಗಳನ್ನು ನಾವು ಹಂಚಿದೆವು, ಅಲ್ಲಿ ಬೆನಿಫಿಶಿರೀಸ್ ಇರಬೇಕೆಂದು ನಾವು ಅದಕ್ಕೆ ಸೈನ್ ಮಾಡಿದೆವು. ಆದರೆ beneficiaries ಅಲ್ಲಿ

ಇಲ್ಲ. ಅಲ್ಲಿ ಅವನು ರೌಡಿಗಳನ್ನು ಇಟ್ಟುಕೊಂಡು ರೆಂಟ್ ಕಲೆಕ್ಟ್ ಮಾಡುತ್ತಿದ್ದಾನೆ. I brought it to the officer's notice. ಆಗ ಅವರು ಏನು ಮಾಡಬೇಕು? ತಕ್ಷಣವೇ he has to give a police complaint to take necessary action. Isn't so? ಅವರು ನನಗೆ instruction ಮಾಡುತ್ತಾರೆ. What can I do? ಎನ್ನುತ್ತಾರೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಅಲ್ಲಿ 183 ನಿವೇಶನಗಳನ್ನೇನು ಇಟ್ಟಿದ್ದೇವೋ, ಅಲ್ಲೇನಾದರೂ ಲೋಪ ದೋಷಗಳಿದ್ದರೆ, ಅಥವಾ ಇವರು ಅಲ್ಲಿ ಯಾರೂ beneficiaries ಇಲ್ಲವೆಂದು ಅವರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಸೂಕ್ತವಾದಂತಹ ತನಿಖೆ ನಡೆಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಆಯಿತು, ಮುಂದಕ್ಕೆ ಹೋಗೋಣ. ಮಾನ್ಯ ಶಿವರಾಂರವರೆ, ತಾವೂ ಅದರ ಬಗ್ಗೆಯೇ ಕೇಳುತ್ತೀರಾ?

ಶ್ರೀ ಬಿ. ಶಿವರಾಂ : ಹೌದು ಅಧ್ಯಕ್ಷರೆ, ನಾನು ಅದಕ್ಕೆ ಸೀಮಿತವಾಗಿಯೇ ಕೇಳಬಯಸುತ್ತೇನೆ.

ಅಧ್ಯಕ್ಷರು : ಆಯಿತು, ಕೇಳಿ.

ಶ್ರೀ ಬಿ. ಶಿವರಾಂ : ತಾವು ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ 183 ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದೀರಿ. ಈಗ ಆಶ್ರಯ ಸಮಿತಿ ಇಲ್ಲದಿರುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ನಿವೇಶನವನ್ನು ಹಂಚುವುದಕ್ಕೆ ಏನು ವ್ಯವಸ್ಥೆಯನ್ನು ತಾವು ಮಾಡಿದ್ದೀರಿ?

ಅಧ್ಯಕ್ಷರು : ಅದು ಇವರಿಗೆ ಬರುವುದಿಲ್ಲ. ಅವರು ವಸತಿ ಸಚಿವರು ಮಾತ್ರ.

ಶ್ರೀ ಬಿ. ಶಿವರಾಂ : ಅದು ಅವರಿಗೇ ಬರುತ್ತದೆ.

ಅಧ್ಯಕ್ಷರು : ಗ್ರಾಮ ಪಂಚಾಯಿತಿಗಳದ್ದು ಬೇರೆಯವರಿಗೆ ಬರುತ್ತದೆ ಅನ್ನಿಸುತ್ತದೆ.

ಶ್ರೀ ಡಿ.ಟಿ. ಜಯಕುಮಾರ್ : ಈಗ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಶಿವರಾಂ : ಒಂದು ನಿಮಿಷ. ಹಿಂದೆ ನಿವೇಶನಗಳನ್ನು ಹಂಚತಕ್ಕಂಥ ವ್ಯವಸ್ಥೆ 'ಆಶ್ರಯ ಯೋಜನೆ'ಯಲ್ಲಿತ್ತು. ಸರ್ಕಾರಿ ಭೂಮಿ ಇರಬಹುದು ಅಥವಾ ಖಾಸಗಿ ಭೂಮಿಯನ್ನು ದುಡ್ಡು ಕೊಟ್ಟು ಕೊಂಡು ವಿತರಣೆ ಮಾಡತಕ್ಕಂಥ ವ್ಯವಸ್ಥೆ ಆಶ್ರಯ ಸಮಿತಿಗಿತ್ತು. ತಾಲ್ಲೂಕು ಪಂಚಾಯಿತಿ EO ಮೂಲಕ ಅದನ್ನು ಮಾಡುತ್ತಿದ್ದೆವು. ಆದರೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಗ್ರಾಮ ಪಂಚಾಯಿತಿಯವರೇ ಶಿಫಾರಸ್ಸು ಮಾಡುತ್ತಿದ್ದರು, ಅದು ಬೇರೆ ವಿಚಾರ. ಆದರೆ ಈಗ ಆಶ್ರಯ ಸಮಿತಿ ಇಲ್ಲದಿರುವುದರಿಂದ, ತಾವು ಗೋಮಾಳ ಭೂಮಿ ತೆಗೆದುಕೊಳ್ಳತಕ್ಕಂಥಾದ್ದು ಆಗಲಿ ಅಥವಾ acquire ಮಾಡಿಕೊಳ್ಳತಕ್ಕಂಥ ಯಾವ process ಅನ್ನು ಈಗ ಯಾರ ಮೂಲಕ ಅನುಷ್ಠಾನಗೊಳಿಸುತ್ತಿದ್ದೀರಿ? ಈಗ ಎಲ್ಲೂ ನಿವೇಶನ ವಿತರಣೆಯಾಗುತ್ತಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ : ಅದನ್ನು ಮಾಡೋಣ.

ಶ್ರೀ ಬಿ. ಶಿವರಾಂ : ಅದನ್ನು ಮಾಡೋಣ ಎನ್ನುವುದಲ್ಲ. ಅದರ ಬಗ್ಗೆ ಏನು ವ್ಯವಸ್ಥೆ ಇದೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ :– ಅದನ್ನು ಹೇಳುತ್ತೇನೆ ಇರಿ. ಮಾನ್ಯ ಸಭಾಧ್ಯಕ್ಷರೆ, ಪಟ್ಟಣ ಪ್ರದೇಶಗಳಲ್ಲಿ ಮತ್ತು ಸಿ.ಎಂ.ಸಿ. ಯೊಳಗಡೆ Chief Officer ಎಂದು ಯಾರಿರುತ್ತಾರೋ, ಆ ಮುಖ್ಯಾಧಿಕಾರಿಗಳಿಗೆ ಸೈಟನ್ನು ಹಂಚಿಕೆ ಮಾಡುವಂತಹ ಅಧಿಕಾರ ಉಂಟು. ಗ್ರಾಮಾಂತರ ಪ್ರದೇಶಗಳಲ್ಲಿ EO ಅಂದರೆ Executive Officer ಯಾರಿರುತ್ತಾರೋ, ಅವರಿಗೆ ಸೈಟ್ ಅನ್ನು ಹಂಚಲಿಕ್ಕೆ ಮತ್ತು beneficiaries ಅನ್ನು ಆಯ್ಕೆ ಮಾಡಲಿಕ್ಕೆ ಆಶ್ರಯ ಸಮಿತಿ ....

ಒಬ್ಬ ಮಾನ್ಯ ಸದಸ್ಯರು : ಇಲ್ಲ, ಆ ತರಹ ಇಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು, next ಪ್ರಶ್ನೆಗೆ ಹೋಗೋಣ. ಆಶ್ರಯ Rural Development Minister ಗೆ ಬರುತ್ತದೆ, ಅವರಿಗಲ್ಲ. ಅವರು ವಸತಿ ಸಚಿವರು. ಏಕೆ ಸುಮ್ಮನೆ ಅವರಿಗೆ ಪ್ರಶ್ನೆ ಕೇಳುತ್ತೀರಿ? ಈಗ ಮುಂದಕ್ಕೆ ಹೋಗೋಣ.

(ಗೊಂದಲ)

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಕೃಷ್ಣ ಬೈರೇಗೌಡರದ್ದು. ಅವರಿಲ್ಲವೇ? ಅದನ್ನು ಇಲ್ಲಿಗೇ ಮುಗಿಸೋಣ. ಅದು ಅವರಿಗೆ ಸಂಬಂಧಪಟ್ಟಿದ್ದಲ್ಲ.

(ಗೊಂದಲ)

ಶ್ರೀ ಕೆ. ಗೋಪಾಲ ಪೂಜಾರಿ : ಸಾರ್, ಉತ್ತರ correct ಆಗಿಲ್ಲ. ಮಾನ್ಯ ಸಚಿವರು ಕರೆಕ್ಟಾಗಿ ಉತ್ತರ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ಆ ಪ್ರಶ್ನೆಯನ್ನು ಅವರಿಗೇತಕ್ಕೆ ಕೇಳುತ್ತೀರಿ? ಗ್ರಾಮೀಣ ಪ್ರದೇಶದ್ದು ಅವರಿಗೆಲ್ಲಿ ಬರುತ್ತದೆ?

(ಗೊಂದಲ)

ಅಧ್ಯಕ್ಷರು : ಆಯಿತು, ನಾನು ಈ ಪ್ರಶ್ನೆಯನ್ನು ಮುಕ್ತಾಯ ಮಾಡಿದ್ದೇನೆ. ಈಗ ಮಾನ್ಯ ಕೃಷ್ಣ ಬೈರೇಗೌಡರ ಪ್ರಶ್ನೆ. ಆಮೇಲೆ ಮಲ್ಲಿಕಾರ್ಜುನ ಸಿದ್ರಾಮಪ್ಪ ಖುಬಾ ಅವರ ಪ್ರಶ್ನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ಮಾನ್ಯ ಸಚಿವರು ತಪ್ಪು ಉತ್ತರ ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅವರಿಗೆ ಪ್ರಶ್ನೆ ಕೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ಆ ಪ್ರಶ್ನೆಯನ್ನು ಸಂಬಂಧಪಟ್ಟ ಇನ್ನೊಬ್ಬರಿಗೆ ಕೇಳಿ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ನೀವೆಲ್ಲಾ ಕೇಳುತ್ತಿರುವುದು ಬೇರೆಯದೇ ಆದ ಪ್ರಶ್ನೆಯಾಗಿದೆ. ಬೇರೆ ಪ್ರಶ್ನೆಯನ್ನು ಅವರು ಹಾಕಲಿ. ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಸತಿ ಸಚಿವರೆ, ಗ್ರಾಮೀಣ ಪ್ರದೇಶದ್ದು ತಮಗೇ ಬರುತ್ತೇನ್ರಿ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಚಿವರು ಉತ್ತರ ತಪ್ಪು ಕೊಟ್ಟಿದ್ದಾರೆ. ಅವರಿಗೆ ಉತ್ತರ ಸರಿಯಾಗಿ ಕೊಡಲಿಕ್ಕೆ ಹೇಳಿ. ನಾವೇನೂ ಅವರಿಗೆ ಪ್ರಶ್ನೆ ಕೇಳುವುದಿಲ್ಲ. ಅವರು ಉತ್ತರ ಕೊಟ್ಟಿದ್ದು ತಪ್ಪಾಗಿದೆ. ಅದು ರೆಕಾರ್ಡ್‌ಗೆ ಹೋಗುತ್ತಿದೆ.......

(ಗೊಂದಲ)

ಅಧ್ಯಕ್ಷರು : ಅವರಿಗೆಲ್ರಿ ಅದು ಬರುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಅವರಿಗೇ ಬರುತ್ತದೆ ಸಾರ್.

(ಗೊಂದಲ)

ಅಧ್ಯಕ್ಷರು : ಗ್ರಾಮೀಣ ಪ್ರದೇಶ ಅವರಿಗೆಲ್ರಿ ಬರುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌಸಿಂಗ್‌ದೆಲ್ಲಾ ಅವರಿಗೇ ಬರುತ್ತದೆ ಸಾರ್.

(ಗೊಂದಲ)

ಅಧ್ಯಕ್ಷರು : ಆಯಿತು, ಅದೇನು ಕೇಳಿ. ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ EO ಗೆ ಅಧಿಕಾರ ಕೊಟ್ಟಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ, ಆಶ್ರಯ ಸಮಿತಿಗಳು ಆಗಿಲ್ಲ, ಮಾನ್ಯ ಶಿವರಾಂರವರು ಹೇಳಿದ್ದು ಸರಿ. ಗ್ರಾಮ ಪಂಚಾಯಿತಿಯವರು ನಿವೇಶನವನ್ನು ಹಂಚಿಕೆ ಮಾಡಬೇಕಾಗಿತ್ತು. ಅವರದಾದರೆ ಹಂಚಿಕೆ ಮಾಡಬಹುದು, EOಗೆ ಕಳುಹಿಸಿಕೊಡಬಹುದು. ಅಲ್ಲಿ land acquire ಮಾಡುವುದಕ್ಕೆ ಎರಡು problem ಆಗಿದೆ ಸಾರ್. ಈಗ ನೀವು ಗೋಮಾಳ ಅಥವಾ ಹುಲ್ಲುಗಾವಲು ಏನಾದರೂ ಇದ್ದರೆ ಅದನ್ನು ತೆಗೆದುಕೊಳ್ಳುವಂತಿಲ್ಲ ಎಂದು High Court ಹೇಳಿ ಬಿಟ್ಟಿದೆ. ಜಮೀನು ಎಲ್ಲೂ ಸಿಗುತ್ತಿಲ್ಲ. ಪಂಚಾಯಿತಿಯವರಿಗೆ purchase ಮಾಡತಕ್ಕಂಥ ಅಧಿಕಾರ ಇಲ್ಲ. ಆ ಕೆಲಸ ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿಲ್ಲ. ಎರಡನೆಯದಾಗಿ, ಪಟ್ಟಣಗಳಿಗೆ ಆಶ್ರಯ ಸಮಿತಿಯನ್ನು ತಾವು withdraw ಮಾಡಲಿಲ್ಲ, ಅಲ್ಲಿಗೆ ಆಶ್ರಯ ಸಮಿತಿಯನ್ನು ಮುಂದುವರೆಸುತ್ತೇವೆ ಎಂದು ಹೇಳಿದ್ದೀರಿ, ಆದರೆ ಸಮಿತಿಗಳನ್ನು ಮಾಡಲಿಲ್ಲ. ಹಾಗಾಗಿ Chief Officer ಮಾಡಲಿಕ್ಕಾಗುವುದಿಲ್ಲ. ಅದನ್ನು ಅವರು ಬಗೆಹರಿಸಬೇಕು. ಹೌಸಿಂಗ್ ಕೂಡ ಅವರಿಗೇ ಬರುತ್ತದೆ.

ಶ್ರೀ ಬಿ. ಶಿವರಾಂ : ನಿಮಗೆ ಒಂದು ನಿವೇಶನವನ್ನೂ ಕೊಡಲಿಕ್ಕೆ ಸಾಧ್ಯತೆ ಇಲ್ಲ. ಹಿಂದೆ ಶಾಸಕರುಗಳು ಆಶ್ರಯ ಸಮಿತಿಯ ಅಧ್ಯಕ್ಷರಿದ್ದರು. ಅವರು process initiate ಮಾಡುತ್ತಿದ್ದರು. Government ಭೂಮಿ ಇದ್ದಿರಬಹುದು ಅಥವಾ ಖಾಸಗಿ ಭೂಮಿಯನ್ನು ತೆಗೆದುಕೊಂಡು ಮಾಡತಕ್ಕಂಥ ಒಂದು ವ್ಯವಸ್ಥೆ ಆಶ್ರಯ ಸಮಿತಿಗಳ ಮೂಲಕ ಪ್ರತಿಯೊಬ್ಬರಿಗೂ ಇತ್ತು. ಆದರೆ

ನಿಮ್ಮ ಕ್ಷೇತ್ರದಲ್ಲಿ ಒಂದು ನಿವೇಶನವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹಂಚಲಿಕ್ಕೆ ಸಾಧ್ಯತೆ ಆಗಿಲ್ಲ. ಅದಕ್ಕೆ ಏನು ವ್ಯವಸ್ಥೆ ಇದೆ ಎಂದು ನಾನು ಕೇಳುತ್ತಿದ್ದೇನೆಯೇ ಹೊರತು, ಬೇರೇನಿಲ್ಲ. ಅದು ಅವರ ವ್ಯಾಪ್ತಿಗೇ ಬರುತ್ತದೆ. ಬೇರೆಯವರ ವ್ಯಾಪ್ತಿಯದಕ್ಕೆ ನಾನು ಹೋಗುತ್ತಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ : ಕಳೆದ ಸರ್ಕಾರದಲ್ಲಿ ತಾವೂ ಕೂಡ ಮಂತ್ರಿಗಳಾಗಿದ್ದಿರಿ. ಅಲ್ಲೇ ಆದೇಶ ಇದೆ. ಆದ್ದರಿಂದ, ಇದು ಹೊಸದಾಗಿ ಮಾಡತಕ್ಕಂಥದ್ದಕ್ಕೆ ಮಾಡೋಣ. ಮಾಡಬಾರದು ಅನ್ನತಕ್ಕಂಥದ್ದು ಏನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಳ್ಳಿಗಾಡಿನಲ್ಲಿ ಇರತಕ್ಕಂಥ ಜನರಿಗೆ ಹಂಚತಕ್ಕಂಥ ಸೈಟು ಮತ್ತು ಮನೆ, ಪಟ್ಟಣ ಪ್ರದೇಶದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಇರತಕ್ಕಂಥವರಿಗೆ ಮನೆ ಮತ್ತು ಸೈಟು ಹಂಚತಕ್ಕಂಥ ಎರಡು ಪ್ರಶ್ನೆ ಇಲ್ಲಿದೆ. ಎರಡೂ ಸಮಸ್ಯೆಗಳೂ ನಿಮ್ಮ ಅಧಿಕಾರ ವ್ಯಾಪ್ತಿಗೇ ಬರುತ್ತವೆ. ಆದರೆ ಆಶ್ರಯ ಸಮಿತಿ, ಅದು ಬೇರೆ, ಇದು ಬೇರೆ, ಯಾವುದು ಎಂದರೆ, Urban ಬೇರೆ, Rural ಬೇರೆ. ರೂರಲ್‌ನಲ್ಲಿ ಆಶ್ರಯ ಕಮಿಟಿ ಈಗ ಇಲ್ಲ. ಅದನ್ನು ಪಂಚಾಯಿತಿಯವರಿಗೆ ಕೊಟ್ಟಿದ್ದೀರಿ. ಪಂಚಾಯಿತಿಯವರು ಮನೆ ಹಂಚುತ್ತಾರೆ, ಸೈಟು ಬೇಕಾದರೆ ಗ್ರಾಮಠಾಣದಲ್ಲಿದ್ದರೆ ಮಾತ್ರ ಅವರು ಸೈಟ್ ಕೊಡಬಹುದು. ಇಲ್ಲವೆಂದರೆ ಬೇರೆ ರೀತಿಯಲ್ಲಿ ಸೈಟು ಕೊಡಲಿಕ್ಕೆ ಅವರಿಗೆ ಅಧಿಕಾರ ಇಲ್ಲ. ಅಲ್ಲಿ ನಿವೇಶನ ರಹಿತರು ಇದ್ದರೆ, ಗ್ರಾಮಠಾಣ ಇಲ್ಲದಿದ್ದರೆ, ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಹಂಚಬೇಕು. ಈಗ ಆ ಅಧಿಕಾರ ಏನಿದೆ ಅದರ ಬಗ್ಗೆ ಹೈಕೋರ್ಟ್‌ನವರು ಈ ಹುಲ್ಲುಗಾವಲು, ಗೋಮಾಳ ಇದ್ಯಾವದನ್ನೂ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ಆದ್ದರಿಂದ ಇನ್ನು ಬೇರೆ ಜಮೀನು ಇಲ್ಲ. ನಿವೇಶನ ಹಂಚುವುದಕ್ಕೆ ಜಮೀನು ಬೇಕು ಎನ್ನುವುದಾದರೆ, ಖಾಸಗಿ ಜಮೀನನ್ನು ಸರ್ಕಾರ ಕೊಂಡುಕೊಳ್ಳಬೇಕು, ಸೈಟ್ ಅನ್ನು ಹಂಚಬೇಕು. ಜಮೀನನ್ನು ಕೊಂಡುಕೊಂಡು ಸೈಟ್ ಹಂಚಿಕೆ ಮಾಡತಕ್ಕಂಥ ಅಧಿಕಾರವನ್ನು ಯಾರಿಗೆ ಕೊಟ್ಟಿದ್ದೀರಿ? ಏನು ವ್ಯವಸ್ಥೆ ಮಾಡಿದ್ದೀರಿ? ಇದು ನಮ್ಮ ಪ್ರಶ್ನೆ. ನಮ್ಮ ಎರಡನೆ ಪ್ರಶ್ನೆ ಏನೆಂದರೆ, ಖಾಸಗಿ ಜಮೀನನ್ನು ಕೊಂಡುಕೊಳ್ಳಬೇಕಾದರೆ, ನೀವು ಆ ಪವರ್ ಅನ್ನು EO ಗೆ ಕೊಡುತ್ತೀರೋ, ಸೆಕ್ರೆಟರಿಗೆ ಕೊಡುತ್ತೀರೋ, ಅದು ಬೇರೆ ವಿಚಾರ. that is left to the Government, ನೀವು ಯಾರಿಗೇ ಕೊಟ್ಟರೂ ಕೂಡ, ಅದಕ್ಕೆ ಬೇಕಾದಂತಹ ಹಣವನ್ನು ಒದಗಿಸಬೇಕು, ಆದರೆ ಹಣವನ್ನು ಒದಗಿಸಿಲ್ಲ. ಇದೊಂದು ಪ್ರಶ್ನೆ. ಎರಡನೇ ಪ್ರಶ್ನೆ ಏನೆಂದರೆ, ನೀವು ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಇರತಕ್ಕಂಥ ಆಶ್ರಯ ಸಮಿತಿಗಳನ್ನು ರದ್ದು ಮಾಡಿಲ್ಲ, ನೀವೇನು ಮಾಡಿದ್ದೀರಿ ಎಂದರೆ, ಜನರಲ್ಲಾಗಿ ಏನೋ ಒಂದು circular ಹೊರಡಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ನಿಮ್ಮ ಸರ್ಕಾರ ರಚನೆಯಾದ ಮೇಲೆ, ಜನವರಿಯಲ್ಲಿ ಆರ್ಡರ್ ಬಂದಿದೆ, ನಗರ ಪ್ರದೇಶದಲ್ಲಿ ಆಶ್ರಯ ಸಮಿತಿಗಳು ರಚನೆಯಾಗಿ, ಸದಸ್ಯರ್ಯಾರು? ಅಧ್ಯಕ್ಷರ್ಯಾರು ಎನ್ನುವುದು ಬಂದಿದೆ. ಆದರೆ ಅದು ರದ್ದು ಆಗಿಲ್ಲ. ನೀವು ಅದನ್ನು mix ಮಾಡಬೇಡಿ. ಆದ್ದರಿಂದ ಇಲ್ಲಿ ನಿವೇಶನ ಹಂಚಿಕೆ ವಿಷಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಂದು ಪ್ರಶ್ನೆ ಬರುತ್ತದೆ, ನಗರ ಪ್ರದೇಶದಲ್ಲಿ ಇನ್ನೊಂದು ಪ್ರಶ್ನೆ ಬರುತ್ತದೆ. ನಿವೇಶನ ಹಂಚಬೇಕಾದರೆ ಭೂಮಿ ಇಲ್ಲ,

ಭೂಮಿಯನ್ನು ಕೊಂಡುಕೊಳ್ಳಬೇಕು. ಕೊಂಡುಕೊಳ್ಳತಕ್ಕಂಥ ಅಧಿಕಾರವನ್ನು ಗ್ರಾಮೀಣ ಪ್ರದೇಶದಲ್ಲಿ ಯಾರಿಗೆ ಕೊಟ್ಟಿದ್ದೀರಿ? ಪಟ್ಟಣ ಪ್ರದೇಶದಲ್ಲಿ ಯಾರಿಗೆ ಕೊಟ್ಟಿದ್ದೀರಿ? ಕೊಂಡುಕೊಳ್ಳಬೇಕಾದರೆ ಅದಕ್ಕೆ ಹಣದ ವ್ಯವಸ್ಥೆ ಏನು ಮಾಡಿದ್ದೀರಿ? ಇಷ್ಟೇ ನಮ್ಮ ಪ್ರಶ್ನೆ

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಪಂಚಾಯಿತಿಯವರು recommend ಮಾಡಿ through EO, DC ಯವರಿಗೆ ಕಳುಹಿಸಿಕೊಡುತ್ತಾರೆ. ಹಣದ ಕೊರತೆ ಇಲ್ಲ. ಎಲ್ಲೆಲ್ಲಿ ನಿವೇಶನಗಳು ಬೇಕೋ, ಆ ಎಲ್ಲಾ ಕಡೆಗಳಲ್ಲಿಯೂ DCಯವರು ಅದಕ್ಕೆ authority. ಅದನ್ನು acquisition ಮಾಡಿ, proceedings ಮಾಡಿ ಕೊಡತಕ್ಕಂಥ ಅಧಿಕಾರವನ್ನು DCಗೆ ಕೊಟ್ಟಿದ್ದೇವೆ. DC is the empowered authority to acquire the land. ಅದನ್ನು ಮಾಡಿದ್ದೇವೆ. ಇನ್ನೊಂದು, ಮಾನ್ಯ ಹಿರಿಯ ಸದಸ್ಯರಾದ ಶ್ರೀರಾಮರೆಡ್ಡಿಯವರು urban ಮತ್ತು rural ಬಗ್ಗೆ ಹೇಳುತ್ತಿದ್ದಾರೆ, ಅವರದ್ದೇ ಕ್ಷೇತ್ರದ ಒಂದು ಸಮಸ್ಯೆ ಬಂದಿತ್ತು. ಅಂತಹ ಸಂದರ್ಭದಲ್ಲಿ ನಾವು ಹೇಳಿದೆವು. ನೀವು Circular issue ಮಾಡುವುದು ಬೇಡ, ಅನ್ನುತ್ತೀರಿ. ಆದರೆ Circular issue ಆಗಿದ್ದು ರದ್ದು ಆಗಿದೆ ಎಂದು ಹೇಳಿದೆವು. ಮೊದಲನೇ ಕ್ಯಾಬಿನೆಟ್‌ನಲ್ಲೇ ಅದನ್ನು ತಂದು ನಾವು, urban ಎಂದು ಹಿಂದೆ ಇದ್ದಂತಹದ್ದನ್ನು ರದ್ದು ಮಾಡಿದ್ದೇವೆ. ಆದರೆ ಈಗ ಅವರು Circular ಬೇಡ ಎಂದು ಹೇಳಿದ್ದಕ್ಕೆ ಈಗ Act ಮಾಡಿ, ನಿನ್ನೆ ಕೂಡ ಸೈನ್ ಮಾಡಿದ್ದೇವೆ. ಅದನ್ನು ಎಲ್ಲಾ ಕಡೆ ಮಾಡಿದ್ದೇವೆ. ಈಗ ಹೊಸ ಸಮಿತಿಗಳನ್ನು ಮಾಡುತ್ತೇವೆ, ಹೊಸ ಸಮಿತಿಗಳು ಬಂದಾಗ ಬೇಕಾದರೆ ತಾವು ಮಾಡಿಕೊಳ್ಳಬಹುದು. ಈಗ ಮಾಡಿರುವುದು ರದ್ದಾಗಿದೆ.

(ಗೊಂದಲ)

ಅಧ್ಯಕ್ಷರು : ಆಯಿತು ಒಂದು ಪ್ರಶ್ನೆಗೆ ಎಷ್ಟು ನಿಮಿಷ ಸಮಯ ಕೊಡುವುದು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಿಮ್ಮ ಕ್ಷೇತ್ರದಲ್ಲಿ ಆಗಿರುತ್ತದೆ. ಇದಕ್ಕೆ ಹಣದ ಕೊರತೆ ಇಲ್ಲವೆಂದು ಹೇಳುತ್ತಾರೆ. ಹಣವೇ ಇಲ್ಲ ಅಲ್ಲಿ.

ಅಧ್ಯಕ್ಷರು :– ಆಯಿತು ಪಾಟೀಲರೆ, ಶ್ರೀರಾಮರೆಡ್ಡಿಯವರೇ ಹತ್ತು ನಿಮಿಷ ಆಯಿತು, ಈ ಒಂದು ಪ್ರಶ್ನೆ

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಹಂಚಿಕೆ ಮಾಡುವಂಥಾದ್ದು, ಆಶ್ರಯ ಸಮಿತಿಯಿಂದ ಹಂಚಿಕೆ ಮಾಡಬೇಕೆಂದು ನಮಗೆ ಸರ್ಕ್ಯುಲರ್ ಬಂದಿದೆ. ಒಟ್ಟು 225 ಮನೆ, ನಿಮ್ಮ ಆರ್ಡರ್ ಬರುವುದಕ್ಕೆ ಮೊದಲೇ ನಮ್ಮ ಕಮಿಟಿ ಸೇರಿ ಅದನ್ನು ತೀರ್ಮಾನ ಮಾಡಿದ್ದೇವೆ. ನಾನು ಆ ವಿಚಾರವನ್ನು ಹೇಳುತ್ತಿರುವುದು.

† **ಶ್ರೀ ಡಿ.ಟಿ. ಜಯಕುಮಾರ್** : ನನಗೆ ಇರುವ ಮಾಹಿತಿ ಪ್ರಕಾರ ಟಾರ್ಗೆಟ್ ಕೊಟ್ಟಿಲ್ಲ. ಆ ರೀತಿ ಏನಾದರೂ ಕೊಟ್ಟಿದ್ದರೆ, ಅದನ್ನು ತಿಳಿಸಲಿ ಅದನ್ನು ಎನ್‌ಕ್ವೈರಿ ಮಾಡಿ, ಅವರೇನಾದರೂ 225 ಮನೆ ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ ಎಂದರೆ, ಅವರು ಆಯ್ಕೆ ಮಾಡಿರುವಂತಾದ್ದಕ್ಕೆ ನಾವು ಅನುಮತಿಯನ್ನು ಕೊಡುತ್ತೇವೆ.

---

† ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.

ವಿಷಯ: 2004-05 ಹಾಗೂ 2005-06ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ವಿತರಿಸಲಾದ ಮನೆಗಳು : ನಿವೇಶನಗಳು

28 (141) ಶ್ರೀ ಪ್ರಭಾಕರ ಬಂಗೇರ. ಕೆ. (ಬೆಳ್ತಂಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 2004-05 ಮತ್ತು 2005-06ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ವಿತರಿಸಲಾದ ಮನೆಗಳ ಮತ್ತು ನಿವೇಶನಗಳ ಸಂಖ್ಯೆ ಎಷ್ಟು (ಸಂಖ್ಯೆಯನ್ನು ಜಿಲ್ಲಾವಾರು ವಿವರ ನೀಡುವುದು)?

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಈ ಸಾಲುಗಳಲ್ಲಿ ವಿತರಿಸಿದ ಮನೆಗಳ ಮತ್ತು ನಿವೇಶನಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) 2004-05 ಮನೆಗಳು

2004-05ನೇ ಸಾಲಿನಲ್ಲಿ ಹೊಸದಾಗಿ ಗುರಿಯನ್ನು ನೀಡಿಲ್ಲ. ಆದರೆ, ಈ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ 99287 ಬ್ಯಾಕ್‌ಲಾಗ್ ಮನೆಗಳನ್ನು ಪೂರ್ತಿಗೊಳಿಸಲಾಗಿದೆ.

ನಿವೇಶನಗಳು

2004-05ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ 4762 ನಿವೇಶನಗಳು ಮತ್ತು ನಗರ ಪ್ರದೇಶದಲ್ಲಿ 2379 ನಿವೇಶನಗಳನ್ನು ಹಂಚಲಾಗಿದೆ.

2005-06 ಮನೆಗಳು

2005-06ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ 76952 ಬ್ಯಾಕ್‌ಲಾಗ್ ಮನೆಗಳನ್ನು 28.02.2006 ರಲ್ಲಿದ್ದಂತೆ, ಪೂರ್ತಿಗೊಳಿಸಲಾಗಿದೆ.

ಇದಲ್ಲದೆ ಸರಕಾರವು 2005-06ರಲ್ಲಿ ಈ ಕೆಳಗಿನಂತೆ ಹೊಸ ಗುರಿಯನ್ನು ನೀಡಿದೆ.

ಗ್ರಾಮೀಣ ಆಶ್ರಯ	226080	ಆದೇಶ ಸಂಖ್ಯೆ ವಇ/15/ಹೆಚ್ ಎಹೆಚ್/2005, ದಿನಾಂಕ 29-11-2005
ನಗರ ಆಶ್ರಯ	50000	ಆದೇಶ ಸಂಖ್ಯೆ ವಇ/42/ಹೆಚ್ ಎಹೆಚ್/2005, ದಿನಾಂಕ 23-01-2006
ಒಟ್ಟು	276080	

ನಿವೇಶನಗಳು

2005-06ನೇ ಸಾಲಿನಲ್ಲಿ 28.02.2006 ರಲ್ಲಿ ಇದ್ದಂತೆ ಗ್ರಾಮೀಣ ಪ್ರದೇಶದಲ್ಲಿ 1082 ನಿವೇಶನಗಳನ್ನು ಮತ್ತು ನಗರ ಪ್ರದೇಶದಲ್ಲಿ 668 ನಿವೇಶನಗಳನ್ನು ವಿತರಿಸಲಾಗಿದೆ.

ಜಿಲ್ಲಾವಾರು ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.

ಆ) 2004-05 ಮನೆಗಳು

2004-05ನೇ ಸಾಲಿನಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸೇರಿದಂತೆ ರಾಜ್ಯಾದ್ಯಂತ ಹೊಸ ಗುರಿಯನ್ನು ನೀಡಿಲ್ಲ.

೦೫೦೬-5

2004–05ನೇ ಸಾಲಿನಲ್ಲಿ ಒಟ್ಟು 1773 ಬ್ಯಾಕ್‌ಲಾಗ್ ಮನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮತ್ತು ಒಟ್ಟು 1811 ಮನೆಗಳನ್ನು ಉಡುಪಿ ಜಿಲ್ಲೆಯಲ್ಲಿ ಪೂರ್ತಿಗೊಳಿಸಲಾಗಿದೆ.

ನಿವೇಶನಗಳು

2004–05ನೇ ಸಾಲಿನಲ್ಲಿ ಈ ಕೆಳಗಿನಂತೆ ನಿವೇಶನಗಳನ್ನು ವಿತರಿಸಲಾಗಿದೆ.

ಜಿಲ್ಲೆ	ಪ್ರದೇಶ	ವಿತರಿಸಲಾದ ನಿವೇಶನಗಳ ಸಂಖ್ಯೆ
ಉಡುಪಿ	ಗ್ರಾ. ಪ್ರ	125
	ನಗರ.ಪ್ರ	0
ದಕ್ಷಿಣ ಕನ್ನಡ	ಗ್ರಾ.ಪ್ರ	490
	ನಗರ.ಪ್ರ	59

ಈ ಬಗ್ಗೆ ತಾಲ್ಲೂಕುವಾರು ವಿವರ ಸದ್ಯ ಲಭ್ಯವಿಲ್ಲ.

2005–2006 ಮನೆಗಳು

2005–06ರಲ್ಲಿ ಉಡುಪಿ ಜಿಲ್ಲೆಯಲ್ಲಿ 717 ಬ್ಯಾಕ್‌ಲಾಗ್ ಮನೆಗಳನ್ನು 28.02.2006ರಲ್ಲಿ ಇದ್ದಂತೆ ಪೂರ್ತಿಗೊಳಿಸಲಾಗಿದೆ.

2005–06ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1485 ಬ್ಯಾಕ್‌ಲಾಗ್ ಮನೆಗಳನ್ನು 28.02.2006ರಲ್ಲಿ ಇದ್ದಂತೆ ಪೂರ್ತಿಗೊಳಿಸಲಾಗಿದೆ.

ಇದ್ದಲ್ಲದೆ 2005–06ನೇ ಸಾಲಿನಲ್ಲಿ ಸರಕಾರವು ಈ ಕೆಳಗಿನಂತೆ ಆಶ್ರಯ ಯೋಜನೆಯಡಿಯಲ್ಲಿ ಹೊಸ ಗುರಿಯನ್ನು ನೀಡಿದೆ.

ಜಿಲ್ಲೆ	ಯೋಜನೆ ಗುರಿ	ಗುರಿ
ಉಡುಪಿ	ಗ್ರಾ.ಪ್ರ	5840
	ನಗರ. ಪ್ರ	255
ದಕ್ಷಿಣ ಕನ್ನಡ	ಗ್ರಾ.ಪ್ರ	8120
	ನಗರ.ಪ್ರ	970

ತಾಲ್ಲೂಕುವಾರು ವಿವರ ಅನುಬಂಧ "ಆ" ಲಗತ್ತಿಸಿದೆ.

ನಿವೇಶನಗಳು

2005–06ನೇ ಸಾಲಿನಲ್ಲಿ ಈ ಕೆಳಗಿನಂತೆ ನಿವೇಶನಗಳನ್ನು ವಿತರಿಸಲಾಗಿದೆ.

ಜಿಲ್ಲೆ	ಪ್ರದೇಶ	ವಿತರಿಸಲಾದ ನಿವೇಶನಗಳ ಸಂಖ್ಯೆ
ಉಡುಪಿ	ಗ್ರಾ. ಪ್ರ	194
	ನಗರ.ಪ್ರ	0
ದಕ್ಷಿಣ ಕನ್ನಡ	ಗ್ರಾ.ಪ್ರ	5
	ನಗರ.ಪ್ರ	0

ಅನುಬಂಧ-'ಅ'

2004-2005ನೇ ಸಾಲಿನಲ್ಲಿ ಆಶ್ರಯ ವಸತಿ ಮತ್ತು ನಿವೇಶನ ಯೋಜನೆಯಡಿ ನಿಗದಿಪಡಿಸಿರುವ ಗುರಿ ಮತ್ತು ಸಾಧಿಸಿದ ಪ್ರಗತಿಯ ಜಿಲ್ಲಾವಾರು ವಿವರ

ಕ್ರ.ಸಂ.	ಜಿಲ್ಲೆಗಳು	ಗ್ರಾಮೀಣ ಆಶ್ರಯ ಯೋಜನೆಯಡಿ ನೀಡಿದ ಗುರಿ	ಗ್ರಾಮೀಣ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು	ನಗರ ಆಶ್ರಯ ಯೋಜನೆಯಡಿ ನೀಡಿದ ಗುರಿ	ನಗರ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು
1	2	3	4	5	6
1	ಬಾಗಲಕೋಟೆ		2064		638
2	ಬೆಂಗಳೂರು ಗ್ರಾಮಾಂತರ		4330		446
3	ಬೆಂಗಳೂರು ನಗರ		1395		767
4	ಬೆಳಗಾವಿ		8258		615
5	ಬಳ್ಳಾರಿ		5071		861
6	ಬೀದರ್		2657		339
7	ವಿಜಾಪುರ		2615		21
8	ಚಾಮರಾಜನಗರ		878		165
9	ಚಿಕ್ಕಮಗಳೂರು		1898		156
10	ಚಿತ್ರದುರ್ಗ		3759		745
11	ದಕ್ಷಿಣ ಕನ್ನಡ		2072		46

1	2	3	4	5	6
12	ದಾವಣಗೆರೆ		4803		320
13	ಧಾರವಾಡ		1968		510
14	ಗದಗ	ಗುರಿ ನೀಡಿರುವುದಿಲ್ಲ.	2296	ಗುರಿ ನೀಡಿರುವುದಿಲ್ಲ.	726
15	ಗುಲ್ಬರ್ಗಾ ,		6256		1628
16	ಹಾಸನ		2046		288
17	ಹಾವೇರಿ		2714		392
18	ಕೊಡಗು		342		2
19	ಕೋಲಾರ		3548		251
20	ಕೊಪ್ಪಳ		4862		15
21	ಮಂಡ್ಯ		2402		83
22	ಮೈಸೂರು		3002		1881
23	ರಾಯಚೂರು		2535		227
24	ಶಿವಮೊಗ್ಗ		3136		206
25	ತುಮಕೂರು		7317		416
26	ಉಡುಪಿ		1723		16
27	ಉತ್ತರ ಕನ್ನಡ		3435		145
	Total		**87382**		**11905**

ಗ್ರಾಮೀಣ ನಿವೇಶನ ಯೋಜನೆಯಡಿ ನೀಡಿದ ಗುರಿ	ಗ್ರಾಮೀಣ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು	ನಗರ ನಿವೇಶನ ಯೋಜನೆಯಡಿ ನೀಡಿದ ಗುರಿ	ನಗರ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು
7	8	9	10
74	0	74	0
75	0	75	0
75	0	75	0
74	928	74	100
74	0	74	0
74	0	74	0
74	54	74	0
74	0	74	0
74	305	74	0
74	819	74	0
74	490	74	59
74	412	74	0
74	0	74	0
74	125	74	0

7	8	9	10
74	0	74	1566
74	0	74	60
74	0	74	0
74	118	74	0
74	0	74	0
74	0	74	0
74	0	74	0
74	0	74	0
74	825	74	161
74	65	74	0
74	496	74	433
74	1265	74	0
74	0	74	0
2000	**4762**	**2000**	**2379**

ಅನುಬಂಧ–'ಅ'

2005–2006ನೇ ಸಾಲಿನಲ್ಲಿ ಆಶ್ರಯ ವಸತಿ ಮತ್ತು ನಿವೇಶನ ಯೋಜನೆಯಡಿ ನಿಗದಿಪಡಿಸಿರುವ ಗುರಿ ಮತ್ತು ಸಾಧಿಸಿದ ಪ್ರಗತಿಯ ಜಿಲ್ಲಾವಾರು ವಿವರ

ಕ್ರ.ಸಂ.	ಜಿಲ್ಲೆಗಳು	ಗ್ರಾಮೀಣ ಆಶ್ರಯ ಯೋಜನೆಯಡಿ ನೀಡಿದ ಮನೆಗಳ ಗುರಿ	ಗ್ರಾಮೀಣ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು	ನಗರ ಆಶ್ರಯ ಯೋಜನೆಯಡಿ ನೀಡಿದ ಮನೆಗಳ ಗುರಿ	ನಗರ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು
1	2	3	4	5	6
1	ಬಾಗಲಕೋಟೆ	6520	1797	3290	590
2	ಬೆಂಗಳೂರು ಗ್ರಾಮಾಂತರ	7960	3792	1745	16
3	ಬೆಂಗಳೂರು ನಗರ	19400	1214	210	822
4	ಬೆಳಗಾವಿ	5080	3441	3270	346
5	ಬಳ್ಳಾರಿ	8280	3975	4585	602
6	ಬೀದರ್	6240	3176	2640	337
7	ವಿಜಾಪುರ	4240	2838	1620	12
8	ಚಾಮರಾಜನಗರ	9120	1801	855	26
9	ಚಿಕ್ಕಮಗಳೂರು	4480	858	880	56
10	ಚಿತ್ರದುರ್ಗ	10400	3748	1785	437
11	ದಕ್ಷಿಣ ಕನ್ನಡ	7400	1482	945	52

1	2	3	4	5	6
12	ದಾವಣಗೆರೆ	12240	1787	880	75
13	ಧಾರವಾಡ	12840	1851	4185	104
14	ಗದಗ	9200	2115	2795	1149
15	ಗುಲ್ಬರ್ಗಾ	3920	4601	2920	1337
16	ಹಾಸನ	8120	1143	2140	43
17	ಹಾವೇರಿ	9280	2398	2795	365
18	ಕೊಡಗು	9400	246	290	0
19	ಕೋಲಾರ	5840	3105	2280	445
20	ಕೊಪ್ಪಳ	10320	4757	1485	0
21	ಮಂಡ್ಯ	9040	1507	580	27
22	ಮೈಸೂರು	4800	1483	2360	719
23	ರಾಯಚೂರು	7560	3542	1120	17
24	ಶಿವಮೊಗ್ಗ	7000	2234	1870	180
25	ತುಮಕೂರು	6560	5718	2095	449
26	ಉಡುಪಿ	5360	717	240	0
27	ಉತ್ತರ ಕನ್ನಡ	13480	3129	140	291
	Total	**226080**	**68455**	**50000**	**8497**

ಗ್ರಾಮೀಣ ನಿವೇಶನ ಯೋಜನೆಯಡಿ ನೀಡಿದ ವಸತಿ ನಿವೇಶನಗಳ ಗುರಿ	ಗ್ರಾಮೀಣ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು	ನಗರ ನಿವೇಶನ ಯೋಜನೆಯಡಿ ನೀಡಿದ ನಿವೇಶನಗಳ ಗುರಿ	ನಗರ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು
7	8	9	10
74	0	74	146
75	0	75	0
75	838	75	187
74	0	74	0
74	0	74	0
74	0	74	0
74	45	74	0
74	0	74	0
74	0	74	0
74	0	74	0
74	5	74	0
74	0	74	0
74	0	74	0
74	0	74	0

7	8	9	10
74	0	74	0
74	0	74	0
74	0	74	0
74	0	74	0
74	0	74	0
74	0	74	0
74	0	74	335
74	0	74	0
74	0	74	0
74	0	74	0
74	0	74	0
74	194	74	0
74	0	74	0
2000	**1082**	**2000**	**668**

ಅನುಬಂಧ–'ಆ'

2004–2005ನೇ ಸಾಲಿನಲ್ಲಿ ಆಶ್ರಯ ವಸತಿ ಮತ್ತು ನಿವೇಶನ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ನಿಗದಿಪಡಿಸಿರುವ ಗುರಿ ಮತ್ತು ಪ್ರಗತಿಯ ತಾಲ್ಲೂಕುವಾರು / ನಗರವಾರು ವಿವರ

ಕ್ರ.ಸಂ.	ಜಿಲ್ಲೆಗಳು	ತಾಲ್ಲೂಕು	ಗ್ರಾಮೀಣ ಆಶ್ರಯ ಯೋಜನೆಯಡಿ ನೀಡಿದ ಗುರಿ	ಗ್ರಾಮೀಣ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ನೀಡಿದ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು	ನಗರ ಆಶ್ರಯ ಯೋಜನೆಯಡಿ ನೀಡಿದ ಗುರಿ
1	2	3	4	5	6
1		ಬೆಳ್ತಂಗಡಿ		45	
2		ಬಂಟ್ವಾಳ		445	
3		ಮಂಗಳೂರು		690	
4	ದಕ್ಷಿಣ ಕನ್ನಡ	ಸುಳ್ಯ	ಗುರಿ ನೀಡಿರುವುದಿಲ್ಲ	436	ಗುರಿ ನೀಡಿರುವುದಿಲ್ಲ
5		ಪುತ್ತೂರು		111	
6		ಮೂಡಬಿದರಿ		0	
7		ಮುಲ್ಕಿ		0	
8		ಉಲ್ಲಾಳ		0	
		ಒಟ್ಟು (1)	**0**	**1727**	**0**
1		ಉಡುಪಿ		404	
2	ಉಡುಪಿ	ಕುಂದಾಪುರ	ಗುರಿ ನೀಡಿರುವುದಿಲ್ಲ	885	
3		ಕಾರ್ಕಳ		506	
4		ಸಾಲಿಗ್ರಾಮ			
		ಒಟ್ಟು (2)	**0**	**1795**	**0**
		ಒಟ್ಟು (1+2)	**0**	**3522**	**0**

ನಗರ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ನೀಡಿದ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು	ಗ್ರಾಮೀಣ ನಿವೇಶನ ಯೋಜನೆಯಡಿ ನೀಡಿದ ಗುರಿ	ಗ್ರಾಮೀಣ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು	ನಗರ ನಿವೇಶನ ಯೋಜನೆಯಡಿ ನೀಡಿದ ಗುರಿ	ನಗರ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು
7	8	9	10	11
4		71		1
3		0		0
24		0		0
3	74	72	74	35
7		35		8
1		312		15
4		0		0
0		0		0
46	**74**	**490**	**74**	**59**
13		0		0
0	74	0	74	0
0		125		0
3		0		0
16	**74**	**125**	**74**	**0**
62	**148**	**615**	**148**	**59**

2004–2005ನೇ ಸಾಲಿನಲ್ಲಿ ಆಶ್ರಯ ವಸತಿ ಮತ್ತು ನಿವೇಶನ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ನಿಗದಿಪಡಿಸಿರುವ ಗುರಿ ಮತ್ತು ಪ್ರಗತಿಯ ತಾಲ್ಲೂಕುವಾರು / ನಗರವಾರು ವಿವರ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಗ್ರಾಮೀಣ ಆಶ್ರಯ ಯೋಜನೆಯಡಿ ನೀಡಿದ ಗುರಿ	ಗ್ರಾಮೀಣ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ನೀಡಿದ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು	ನಗರ ಆಶ್ರಯ ಯೋಜನೆಯಡಿ ನೀಡಿದ ಗುರಿ
1	2	3	4	5	6
1		ಬೆಳ್ತಂಗಡಿ	1720	180	10
2		ಬಂಟ್ವಾಳ	1880	395	195
3		ಮಂಗಳೂರು	1960	476	340
4	ದಕ್ಷಿಣ ಕನ್ನಡ	ಸುಳ್ಯ	1080	195	40
5		ಪುತ್ತೂರು	1480	236	30
6		ಮೂಡಬಿದರಿ	0	0	60
7		ಮುಲ್ಕಿ	0	0	55
8		ಉಲ್ಲಾಳ	0	0	240
		ಒಟ್ಟು (1)	**8120**	**1482**	**970**
1		ಉಡುಪಿ	2440	269	145
2	ಉಡುಪಿ	ಕುಂದಾಪುರ	2240	187	40
3		ಕಾರ್ಕಳ	1160	261	35
4		ಸಾಲಿಗ್ರಾಮ	0	0	35
		ಒಟ್ಟು (2)	**5840**	**717**	**255**
		ಒಟ್ಟು (1+2)	**13960**	**2199**	**1225**

ನಗರ ಆಶ್ರಯ ಯೋಜನೆಯಡಿ ಈ ಸಾಲಿನಲ್ಲಿ ನೀಡಿದ ಪೂರ್ಣಗೊಂಡ ಬ್ಯಾಕ್‌ಲಾಗ್ ಮನೆಗಳು	ಗ್ರಾಮೀಣ ನಿವೇಶನ ಯೋಜನೆಯಡಿ ನೀಡಿದ ಗುರಿ	ಗ್ರಾಮೀಣ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು	ನಗರ ನಿವೇಶನ ಯೋಜನೆಯಡಿ ನೀಡಿದ ಗುರಿ	ನಗರ ನಿವೇಶನ ಯೋಜನೆಯಡಿ ಈ ಸಾಲಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳು
7	8	9	10	11
0		5		0
0		0		0
0		0		0
0	74	0	74	0
0		0		0
3		0		0
0		0		0
0		0		0
3	**74**	**5**	**74**	**0**
0		0		0
0	74	180	74	0
0		14		0
0		0		0
0	**74**	**194**	**74**	**0**
3	**148**	**199**	**148**	**0**

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಈಗಾಗಲೇ ಚರ್ಚೆಗಳೂ ಕೂಡ ಆಗಿವೆ. ನಾನು ಹೇಳುವಂತಾದ್ದು, ಇಡೀ ರಾಜ್ಯದಲ್ಲಿ ಅವರು ಕೊಟ್ಟಿರುವಂತಹ ನಿವೇಶನಗಳು ಕಳೆದ ಅವಧಿಯಲ್ಲಿ 1082, ನಗರ ಪ್ರದೇಶಗಳಲ್ಲಿ 668. ಆದರೆ ತಮಗೆ ಗೊತ್ತಿದ್ದ ಹಾಗೆ ಗ್ರಾಮಾಂತರ ಪ್ರದೇಶದಲ್ಲಿ ಮನೆ ನಿವೇಶನಗಳನ್ನು ಕೊಡುವುದಕ್ಕೆ ಇನ್ನೂ ಕೂಡ ಬಾಕಿ ಇದೆ. ಯಾವಾಗ ಆ ಮನೆ ನಿವೇಶನಗಳನ್ನು ಕೊಡುತ್ತೀರಿ? ನಗರ ಪ್ರದೇಶಗಳಲ್ಲಿ ಕೂಡ ಯಾವಾಗ ನಿವೇಶನಗಳನ್ನು ಕೊಡುತ್ತಾರೆ ಎನ್ನುವುದನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

† **ಶ್ರೀ ಡಿ.ಟಿ. ಜಯಕುಮಾರ್** : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ವಸತಿಗೆ ಎಲ್ಲೆಲ್ಲಿ ಬೇಡಿಕೆ ಇದೆ ಎಂದು ಸಮೀಕ್ಷೆಯನ್ನು ನಡೆಸುತ್ತಿದ್ದೇವೆ. ಎರಡನೆಯದಾಗಿ ನಿವೇಶನಗಳೂ ಕೂಡ ಎಲ್ಲೆಲ್ಲಿ ಬೇಕೋ ಅಲ್ಲೆಲ್ಲಾ ಕೂಡ ಸಮೀಕ್ಷೆಯನ್ನು ನಡೆಸಿ, ಗ್ರಾಮ ಪಂಚಾಯತಿಯವರು ಬೇಕು ಎಂದ ಕಡೆಯಲ್ಲಿ, ಮತ್ತು ಸಿಟಿಯೊಳಗೆ ಅರ್ಬನ್ ಚೀಫ್ ಆಫೀಸರ್ ಬೇಕೆಂದ ಕಡೆಗೆ ಇ.ಓ ಮುಖಾಂತರ, ಚೀಫ್ ಆಫೀಸರ್ ಮುಖಾಂತರ ಡಿ.ಸಿ. ಗೆ ಕಳುಹಿಸುತ್ತೇವೆ. ಡಿಸಿ ಯವರಿಗೆ ಎಂಪವರ್ ಇದೆ. ಡಿಸಿ ಯವರ ಮುಖಾಂತರ ಅದನ್ನು ಅಕ್ವೈರ್ ಮಾಡಿ ಪ್ರೊಸೀಡಿಂಗ್ಸ್ ಎಲ್ಲಾ ಮಾಡಿಸಿ, ನಿವೇಶನಗಳನ್ನು ಹಂಚಿ ಕೊಡುವುದಕ್ಕೆ ಸರ್ಕಾರಕ್ಕೆ ಯಾವುದೇ ರೀತಿಯ ಹಣದ ಕೊರತೆ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಮ್ಮ ಜಿಲ್ಲೆಯಲ್ಲಿ ಪರ್ಟಿಕ್ಯುಲರ್ ಆಗಿ ಕರಾವಳಿ ಪ್ರದೇಶದಲ್ಲಿ ನಿವೇಶನ ಇಲ್ಲದೇ ಇದ್ದವರಿಗೆ ನಿವೇಶನ ಕೊಡುವುದಕ್ಕೆ ಪಂಚಾಯತಿಯವರಿಗೆ ಆಗುವುದಿಲ್ಲ. ಏಕೆಂದರೆ ಅಲ್ಲಿ ಬೇರೆ ಸರ್ಕಾರಿ ಜಾಗ ಖರೀದಿ ಮಾಡಿ ಕೊಡುವುದಕ್ಕೆ ಇಲ್ಲ. ಪಂಚಾಯತಿಯವರಿಗೆ ಬೇರೆ ಕಡೆ ಅಲಾಟ್ ಮಾಡುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ಆ ಗ್ರಾಮ ಬಿಟ್ಟು ಬೇರೆ ಗ್ರಾಮದಲ್ಲಿ ಅಲಾಟ್ ಮಾಡುವುದಕ್ಕೆ ಅವಕಾಶ ಇಲ್ಲ. ಅದಕ್ಕೆ ಒಂದು ವ್ಯವಸ್ಥೆ ಆಗಬೇಕಾಗುತ್ತದೆ. ಈಗ ಗ್ರಾಮ ಪಂಚಾಯತಿಯವರಿಗೆ ಕೊಟ್ಟಿರುವುದರಿಂದ ಹಿಂದೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಇದ್ದಾಗ ನಾವು ಒಂದು ಗ್ರಾಮದಿಂದ ಇನ್ನೊಂದು ಗ್ರಾಮದಲ್ಲಿ ಕೊಡುತ್ತಿದ್ದೆವು. ಇವತ್ತು ಈ ಪರಿಸ್ಥಿತಿ ಇಲ್ಲ. ಅದನ್ನು ಯಾವ ರೀತಿಯಲ್ಲಿ ಪರಿಹಾರ ಮಾಡುತ್ತೀರಿ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸದಸ್ಯರು ಅದರ ಬಗ್ಗೆ ಒಂದು ಪತ್ರವನ್ನು ಬರೆಯಲಿ ಅದನ್ನು ಎಗ್ಸಾಮಿನ್ ಮಾಡಿ ಮಾನ್ಯ ಸದಸ್ಯರು ಹೇಳತಕ್ಕಂಥ ವಿಚಾರ ಜೆನ್ಯುಯನ್ ಡಿಮ್ಯಾಂಡ್ ಇದ್ದರೆ ಪರಿಶೀಲಿಸುತ್ತೇನೆ. ನಾನು ಕೂಡ ಉಸ್ತುವಾರಿ ಸಚಿವನಾಗಿದ್ದಂತಹ ಸಂದರ್ಭದಲ್ಲಿ ಅಂತಹ ಸಮಸ್ಯೆಗಳನ್ನು ಫೇಸ್ ಮಾಡಿದ್ದೇನೆ. ಅದೇ ಗ್ರಾಮದಲ್ಲಿ ಸರ್ಕಾರಿ ಭೂಮಿನೂ ಇಲ್ಲ ಹಾಗೂ ಪ್ರೈವೇಟ್ ಲ್ಯಾಂಡ್ ಕೂಡ ಇಲ್ಲ, ಅಂತಹ ಸಂದರ್ಭದಲ್ಲಿ ಅಕ್ಕಪಕ್ಕದ ಗ್ರಾಮಗಳಿಗೆ ಹೋಗುವುದಕ್ಕೆ ಫಲಾನುಭವಿಗಳು ತಯಾರಾಗಿದ್ದರೆ ಆ ರೀತಿ ಮಾಡುವುದಕ್ಕೆ ಏನೂ ತೊಂದರೆಯಿಲ್ಲವೆಂದು ಹೇಳುತ್ತೇನೆ.

---

† ಈ ನಡವಳಿಯು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.

ಶ್ರೀ ಕೆ. ಪ್ರಭಾಕರ ಬಂಗೇರ : 2005–06ರಲ್ಲಿ ನನ್ನ ಕ್ಷೇತ್ರದಲ್ಲಿ ನೋಡಿದಂತೆ ಗ್ರಾಮ ಪಂಚಾಯಿತಿ ಮೂಲಕ 1720 ಮನೆಗಳ ಗುರಿಯನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಆ ಗುರಿಯನ್ನು ಈಗಾಗಲೇ ತಲುಪಿದೆಯಾ ಅಥವಾ ಅವರು ಏನು ಮಾಡಿದ್ದಾರೆ ಎನ್ನುವುದು ಒಂದು ವಿಚಾರ. ಆದರೆ 2004–05ನೇ ಸಾಲಿನಲ್ಲಿ ಗುರಿಯನ್ನು ನಿಗದಿ ಮಾಡಿರುವುದಿಲ್ಲ. ನನ್ನ ಬೆಳ್ತಂಗಡಿ ತಾಲ್ಲೂಕಿಗೆ ಕೇವಲ 45 ಮನೆಗಳನ್ನು ಮಾತ್ರ ಕೊಡಲಾಗಿದೆ. ಬ್ಯಾಕ್‌ಲಾಗ್ ಎಂದು ಹೇಳುತ್ತಿದ್ದೀರಿ, ಆದರೆ ಅದರ ಗುರಿಯನ್ನು ನೀಡಿರುವುದಿಲ್ಲ. ಬೇರೆ ತಾಲ್ಲೂಕಿಗೆ ಹೋಲಿಸಿದಾಗ ಕೇವಲ 45 ಮನೆಗಳು ಮಾತ್ರ ನಮಗೆ ಕಾಣುತ್ತವೆ. ಬಂಟ್ವಾಳದಲ್ಲಿ 445 ಮನೆಗಳು, ಮಂಗಳೂರಿನಲ್ಲಿ 690 ಮನೆಗಳು, ಸುಳ್ಯದಲ್ಲಿ 436 ಮನೆಗಳು ಹಾಗೂ ಪುತ್ತೂರಿನಲ್ಲಿ 111 ಮನೆಗಳು ಇವೆ. ಇನ್ನು ಮೂಡುಬಿದ್ರಿ, ಮುಲ್ಕಿ ಹಾಗೂ ಉಳ್ಳಾಲ ಅಲ್ಲಿ ಯಾವುದೇ ಮನೆಯೂ ಪೂರ್ಣಗೊಂಡಿಲ್ಲ. ಈ ರೀತಿಯ ತಾರತಮ್ಯವನ್ನು ನೀಗಿಸುವುದಕ್ಕೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ? ಇನ್ನು ಎರಡನೆಯದಾಗಿ, ಈಗಾಗಲೇ ತಾವು ಹೇಳಿದ ಹಾಗೆ ಆಶ್ರಯ ಮನೆಗಳಿಗೆ ಈಗ 20 ಸಾವಿರದಿಂದ 25 ಸಾವಿರ ರೂಪಾಯಿಗೆ ಹೆಚ್ಚಿಗೆ ಮಾಡಿ ನಮ್ಮ ಸರ್ಕಾರ ಕೊಟ್ಟಿದೆ. ಸಂತೋಷ. ಆದರೆ ಆ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮನೆಗಳನ್ನು ಬಿಪಿಎಲ್ ಕೆಳಗಡೆ ಇರುವಂತಹ ಫಲಾನುಭವಿಗಳಿಗೆ ಕೊಡುತ್ತಿದ್ದು, ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ ಕನಿಷ್ಠ 30 ಸಾವಿರ ರೂಪಾಯಿವರೆಗಾದರೂ ಕೂಡ ಆ ಮನೆಗಳಿಗೆ ಹಣವನ್ನು ಕೊಡಬೇಕಾಗುತ್ತದೆ. ಅದನ್ನು ಬೇಕಾದರೆ ಸಾಲವಾಗಿ ಕೊಡಲಿ. ಅದನ್ನು ಸಾಲವಾಗಿ ಕೊಟ್ಟಾಗ, ಈಗಿರುವ ಬಡ್ಡಿ ದರ 14ರ ಬದಲಾಗಿ ಶೇಕಡ 4 ರ ದರದಲ್ಲಿ ಕೊಡುವಂತಹ ಯೋಜನೆ ಸರ್ಕಾರದಲ್ಲಿ ಇದೆಯೇ ಎಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಮನೆಗಳನ್ನು ಪೂರ್ಣಗೊಳಿಸುವ ಮೂರು ಹಂತದಲ್ಲಿ ನಾವು ಹಣವನ್ನು ಕೊಡುತ್ತೇವೆ. ಬಿಪಿಎಲ್ ಕೆಳಗಡೆ ಇರುವಂತಹ ಫಲಾನುಭವಿಗಳಿಗೆ ಮನೆಗಳನ್ನು ಕೊಡುವಂತಹ ಸಂದರ್ಭದಲ್ಲಿ, ಮೊದಲನೆ ಹಂತದಲ್ಲಿ ಅಡಿಪಾಯ ಹಾಕಿದಾಗ ಒಂದು ಕಂತು ಅಂತಸ್ತು ಮಟ್ಟಕ್ಕೆ ಕಟ್ಟಡ ಬಂದಾಗ ಎರಡನೆ ಕಂತು ಹಾಗೂ ಪೂರ್ತಿಯಾದ ಮೇಲೆ ಮೂರನೇ ಕಂತು ಹಣವನ್ನು ಕೊಡುತ್ತೇವೆ. ಆದರೆ ಬಂಟ್ವಾಳದಲ್ಲಿ ಇದು ಯಾವ ಪೊಸಿಶನ್‌ನಲ್ಲಿ ಇದೆಯೋ ಗೊತ್ತಿಲ್ಲ. ಅಕಸ್ಮಾತ್ ಪೂರ್ಣವೇನಾದರೂ ಆಗಿದ್ದರೆ ಅದಕ್ಕೆ ಪೂರ್ಣ ಹಣವನ್ನು ಸರ್ಕಾರ ಕೊಡುವುದಕ್ಕೆ ಬದ್ಧವಾಗಿದೆ. ಈಗಾಗಲೇ 20 ಸಾವಿರ ರೂಪಾಯಿ ಇದ್ದುದ್ದನ್ನು ನಮ್ಮ ಈ ಸರ್ಕಾರ ಈ ಬಜೆಟ್‌ನಲ್ಲಿ ಇನ್ನೂ ಐದು ಸಾವಿರ ರೂಪಾಯಿ ಜಾಸ್ತಿ ಮಾಡಿದ್ದೇವೆ. ಆದರೆ ಮಾನ್ಯ ಸದಸ್ಯರು ಇನ್ನೂ ಐದು ಸಾವಿರ ರೂಪಾಯಿ ಜಾಸ್ತಿ ಮಾಡಿ ಎಂದು ಹೇಳುತ್ತಿದ್ದಾರೆ. ಆದುದರಿಂದ ಅದನ್ನು ಪರಿಶೀಲನೆ ಮಾಡಿ ಕ್ಯಾಬಿನೆಟ್‌ಗೆ ತಂದು, ಅಲ್ಲಿ ಏನಾದರೂ ಸಾಧ್ಯವಾದರೆ ಮಾಡಿಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ಆಯಿತು, ಆ ಪ್ರಶ್ನೆ ಮುಕ್ತಾಯವಾಗಿದೆ. ಈಗ ಮಾನ್ಯ ಜಿ.ಟಿ. ದೇವೇಗೌಡರು

ಕೇಳಿ.

ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳು ಸ್ಥಗಿತಗೊಂಡಿರುವ ಬಗ್ಗೆ.

29 (139) ಶ್ರೀ ದೇವೇಗೌಡ ಜಿ.ಟಿ. (ಹುಣಸೂರು): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2005–06ನೇ ಸಾಲಿಗೆ ನೀರಾವರಿ ಇಲಾಖೆಯ ಒಟ್ಟು ಆಯವ್ಯಯ ಎಷ್ಟು;

ಆ) ಇದರಲ್ಲಿ ಕಾವೇರಿ ಹಾಗೂ ಕೃಷ್ಣಾ ಕೊಳ್ಳಗಳ ಭಾಗಗಳ ಯೋಜನೆಗಳಿಗೆ ಒದಗಿಸಲಾಗಿರುವ ಹಣವೆಷ್ಟು (ವಿವರಗಳನ್ನು ಯೋಜನಾವಾರು ನೀಡುವುದು);

ಇ) ಕಾವೇರಿ ಕೊಳ್ಳದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನೀರಾವರಿ ಯೋಜನೆಗಳ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣಗಳೇನು;

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) 2005–06ನೇ ಸಾಲಿನಲ್ಲಿ ರೂ.3710.95 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. (ಪೂರಕ ಅನುದಾನ ಸೇರಿದಂತೆ)

ಆ) ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕಾವೇರಿ ಕೊಳ್ಳದ ವ್ಯಾಪ್ತಿಯಲ್ಲಿನ ಎಲ್ಲಾ ನೀರಾವರಿ ಯೋಜನೆಯ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ.

ಈ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅನುಬಂಧ

2005–06ನೇ ಸಾಲಿನ ನೀರಾವರಿ ಇಲಾಖೆಯ ಆಯವ್ಯಯದ ವಿವರ

(ರೂ. ಲಕ್ಷಗಳಲಿ)

ಕ್ರ. ಸಂ.	ಯೋಜನೆ	2005–06ನೇ ಸಾಲಿನ ಅನುದಾನ	ಷರಾ
1	2	3	4
ಅ)	ಕೃಷ್ಣಾ ಕಣಿವೆ		
	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ		
1	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 & 2	193451.00	
	ಕರ್ನಾಟಕ ನೀರಾವರಿ ನಿಗಮ ನಿಯಮಿತ		
1	ಘಟಪ್ರಭಾ ಹಂತ-3	13000.00	
2	ಮಲಪ್ರಭಾ	5700.00	
3	ಭೀಮಾ ಏತ ನೀರಾವರಿ	3400.00	
4	ಹಿಪ್ಪರಗಿ	3400.00	
5	ಮಾರ್ಕಂಡೇಯ	2200.00	
6	ಸಿಂಗಟಲೂರು	3400.00	
7	ತುಂಗಾ ಮೇಲ್ದಂಡೆ ಯೋಜನೆ	11300.00	
8	ಹರಿನಾಲಾ	70.00	ಕರ್ನಾಟಕ ನೀರಾವರಿ
9	ಗಂಡೋರಿನಾಲಾ	3000.00	ನಿಗಮದ ವಾರ್ಷಿಕ
10	ಬಸಾಪುರ ಏತ	700.00	ಕಾರ್ಯ ಯೋಜನೆ
11	ಇಟಗಿ–ಸಾಸಲವಾಡ ಏತ	700.00	
12	ದೂದ್‌ಗಂಗಾ	1265.00	
13	ಬೆಣ್ಣೆತೊರಾ	2750.00	
14	ಮುಲ್ಲಾಮಾರಿ ಕೆಳದಂಡೆ	700.00	
15	ಅಮರ್ಜಾ	1000.00	
16	ನೂತನ ಯೋಜನೆಗಳು (14)	3915.00	

1	2	3	4
	ವಲಯಗಳು		
	ತುಂಗಾ ಮೇಲ್ದಂಡೆ ಯೋಜನಾ ವಲಯ		
1	ಭದ್ರಾ ಯೋಜನೆ	1568.57	
2	ಹೋಡಿರಾಯನಹಳ್ಳ ಜಂಬದಹಳ್ಳ ತಿರುವು	400.00	
3	ಅಂಜನಾಪುರ	300.00	
4	ಅಂಬ್ಲಿಗೋಳ	100.00	
5	ತಿಮ್ಮಾಪುರ	400.00	
6	ನೂತನ ಯೋಜನೆಗಳು	1610.00	
	ನೀರಾವರಿ ಕೇಂದ್ರ ವಲಯ, ಮುನಿರಾಬಾದ್		
1	ತುಂಗಭದ್ರಾ ಎಡದಂತೆ ಕಾಲುವೆ	1098.38	
2	ತುಂಗಭದ್ರಾ ಬಲಮೇಲ್ದಂಡೆ ಕಾಲುವೆ	58.67	
3	ಹಿರೇಹಳ್ಳ	427.41	
4	ಮಸ್ಕಿನಾಲಾ	200.22	
5	ವೈ ಕಗ್ಗಲ್	1200.00	
6	ಕೊಲ್ಲೂರು	65.00	
7	ಕೆಂಚನಗುಡ್ಡ ಏತ ನೀರಾವರಿ	125.00	
8	ನೂತನ ಯೋಜನೆಗಳು	4759.00	
	ನೀರಾವರಿ ಯೋಜನಾ ವಲಯ, ಗುಲ್ಬರ್ಗಾ		
1	ಮುಲ್ಲಾಮಾರಿ ಮೇಲ್ದಂಡೆ ಯೋಜನೆ	110.00	
2	ನೂತನ ಯೋಜನೆಗಳು	415.05	
	ಒಟ್ಟು (ಅ)	**262788.30**	
ಆ)	**ಕಾವೇರಿ ಕೊಳ್ಳ**		
1	ಕಾಚೇನಹಳ್ಳಿ	400.00	
2	ಹುಚ್ಚನಕೊಪ್ಪಲು	400.00	
3	ಕಾಮಸಮುದ್ರ	400.00	
4	ಯಗಚಿ	2800.00	
5	ಹೇಮಾವತಿ	14200.00	
6	ವಾಟೆಹೊಳೆ	100.00	
7	ಕೆ.ಆರ್.ಎಸ್. ಆಧುನೀಕರಣ	1000.00	

1	2	3	4
8	ನಂಜಾಪುರ ಏತ	1300.00	ಕಾವೇರಿ ನೀರಾವರಿ
9	ಉಡುತೊರೆಹಳ್ಳ	1500.00	ನಿಗಮದ ವಾರ್ಷಿಕ
10	ಇಗ್ಗಲೂರು	1500.00	ಕಾರ್ಯ ಯೋಜನೆ
11	ಚಿಕ್ಲಿಹೊಳೆ	10.00	
12	ಅರ್ಕಾವತಿ	2500.00	
13	ಡಿ. ದೇವರಾಜ ಅರಸು ನಾಲೆ	3500.00	
14	ಕಬಿನಿ	1190.00	
15	ಹಾರಂಗಿ	2400.00	
16	ತಾರಕ	1000.00	
17	ಮಂಚನಬೆಲೆ	500.00	
	ಒಟ್ಟು (ಅ)	**34700.00**	

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಾವೇರಿ ಹಾಗೂ ಕೃಷ್ಣ ಕೊಳ್ಳದ ಬಗ್ಗೆ ಉತ್ತರ ಕರ್ನಾಟಕದ ಭಾಗದಲ್ಲಿ ಮಾತ್ರ ಕೂಗಾಗಿದೆ. ಕೃಷ್ಣಾ ಕಣಿವೆಗೆ 2627 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಅದನ್ನು ಇನ್ನೂ ಕೊಟ್ಟಿಲ್ಲವೆನ್ನುವಂತಹ ಕೂಗು ಇದೆ. ಆದರೆ ಕಾವೇರಿ ಕೊಳ್ಳದ ಯೋಜನೆಗಳಿಗೆ 347 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ಕಡೆ ಇರುವ ರೈತರ ಬಗ್ಗೆ ಕೇಳುವವರಿಲ್ಲ. ಅಥವಾ ಕೊಡುವಂತಾದ್ದೂ ಇಲ್ಲ. ಹಲವಾರು ನಮ್ಮ ಎಲ್ಲಾ ಸದಸ್ಯರುಗಳು ಕೂಡ ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಅಲ್ಲಿ ಕಾಲುವೆಗಳು ಮತ್ತು ಕೆರೆಗಳು ಹೂಳು ತುಂಬಿವೆ. ರೈತರ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸುತ್ತಿಲ್ಲ. ಏಕೆ ಈ ರೀತಿಯ ತಾರತಮ್ಯ ಮಾಡುತ್ತಿದ್ದಾರೆ? ಇದಕ್ಕೆ ಸಮಂಜಸವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತಹ ವಿಚಾರ ನಿಜಕ್ಕೂ ಸತ್ಯವಾದುದು. ಹಿಂದೆ ಏನೇನು ಕೆಲಸಗಳು ಆಗಬೇಕಾಗಿತ್ತು, ಆ ಲೆಕ್ಕದ ಪ್ರಕಾರ ಹಿಂದಿನ ಯೋಜನೆಯಲ್ಲಿ ಇದ್ದಂತಹ ಕೆಲಸಗಳನ್ನು 2006–07ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮದ ಮುಖಾಂತರ 11 ಯೋಜನೆಗಳನ್ನು ಈ ವರ್ಷದಲ್ಲಿ ಮುಗಿಸಬೇಕು ಎನ್ನುವಂತಹ ತೀರ್ಮಾನ ಕೂಡ ಮಾಡಿದ್ದೇವೆ. ಹಾಗೂ ಅದಕ್ಕೆ ಬೇಕಾದಂತಹ ಹಣವನ್ನೂ ಕೂಡ ಇಟ್ಟುಕೊಂಡಿದ್ದೇವೆ. ಜೊತೆಗೆ ಮಾನ್ಯ ಸದಸ್ಯರು ಏನು ಉಳಿದ ಅಂಶಗಳನ್ನು ಹೇಳುತ್ತಿದ್ದಾರೆ, ಆ ಪ್ರಕಾರ ಕೃಷ್ಣಾ ಮತ್ತು ಕಾವೇರಿ ಇವೆರಡೂ ಬೇರೆ ಬೇರೆ ಎನ್ನುವ ಪ್ರಶ್ನೆಯೂ ಖಂಡಿತ ಇಲ್ಲ. ಎರಡೂ ಕೂಡ ಎರಡು ಕಣ್ಣು.

ಎಂದು ಈ ಸರ್ಕಾರ ಭಾವಿಸುತ್ತದೆ. ಇದರ ಬಗ್ಗೆ ಸನ್ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡಿ, ಅಲ್ಲಿ ಏನಾಗಬೇಕು ಎನ್ನುವಂತಹ ಅಂಶವನ್ನೂ ಕೂಡ ಗಮನಿಸಿ, ಖಂಡಿತ ಸರ್ಕಾರ ಆ ದಿಕ್ಕಿನಲ್ಲಿ ಒತ್ತನ್ನು ಕೊಟ್ಟು ಅವರಿಗೆ ಸಮಾಧಾನವಾಗುವಂತಹ ರೀತಿಯಲ್ಲಿ ಕೆಲಸ ಮಾಡುತ್ತದೆನ್ನುವ ಮಾತನ್ನು ತಮ್ಮ ಮುಖಾಂತರ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಕಾವೇರಿ ನಿಗಮ ಆದಮೇಲೆ 2500 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಸರ್ಕಾರ ಹೇಳಿತ್ತು. ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ, ಸಣ್ಣ ನೀರಾವರಿಯಲ್ಲಿ 10 ಲಕ್ಷ ಎಕರೆ ಕಾವೇರಿ ಅಚ್ಚುಕಟ್ಟು ವ್ಯಾಪ್ತಿಗೆ ಬರುತ್ತದೆ. ಇವರು ಅಲ್ಲಿ ಉತ್ತರ ಕರ್ನಾಟಕದ ಭಾಗಕ್ಕೆ ಒಂದು ಸಾವಿರ ಕೋಟಿ ರೂಪಾಯಿ ಹೆಚ್ಚು ಅನುದಾನವನ್ನು ಖರ್ಚು ಮಾಡಿದ್ದೀರಿ. ಆದರೆ ನಮ್ಮಲ್ಲಿರತಕ್ಕಂಥ ಕಾವೇರಿ ಅಚ್ಚುಕಟ್ಟಿನಲ್ಲಿ ಇರತಕ್ಕಂಥ ಕೆರೆ ಹಾಗೂ ಸಣ್ಣ ನೀರಾವರಿಗೆ ನೀವು 25 ಕೋಟಿ ರೂಪಾಯಿಯಷ್ಟು ಕೂಡ ಹಣ ಕೊಟ್ಟಿಲ್ಲ. ಹಾಗಾದರೆ ಈ ಭಾಗದ ರೈತ ಏನು ಮಾಡಬೇಕು? ಆದುದರಿಂದ ಸಣ್ಣ ನೀರಾವರಿ 10 ಲಕ್ಷ ಎಕರೆ ಇರತಕ್ಕಂಥ ರೈತರಿಗೆ ಒಂದು ಎಕರೆಗೆ ಕೂಡ ನೀರು ತಲುಪುವುದಿಲ್ಲ, ಕೆರೆಗಳೆಲ್ಲಾ ಮುಚ್ಚಿಹೋಗಿವೆ. ಈ ಅನ್ಯಾಯ ಏಕೆ? ಇದನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತೀರಿ? ಕಳೆದ ವಿಧಾನಸಭೆಯಲ್ಲಿ ಕೂಡ ಎಲ್ಲಾ ಮಾನ್ಯ ಸದಸ್ಯರುಗಳು ಪ್ರಶ್ನೆ ಕೇಳಿದ್ದಾರೆ ಹಾಗೂ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಏಕೆ ಈ ತಾರತಮ್ಯ? ಸಣ್ಣ ನೀರಾವರಿಗೂ ಅಷ್ಟೆ, ಹಣವನ್ನೇ ಬಿಡುಗಡೆ ಮಾಡಿಲ್ಲ. 5 ಕೋಟಿ ರೂಪಾಯಿ ಹಣವನ್ನು ಕೂಡ ಸಣ್ಣ ನೀರಾವರಿಗೆ ಕೊಟ್ಟಿಲ್ಲ. ಅಲ್ಲಿ ಕೆರೆಗಳಿಂದ ವ್ಯವಸಾಯವಾಗುತ್ತಿಲ್ಲ. ಅಲ್ಲಿ 10 ಲಕ್ಷ ಎಕರೆ ಇದೆ. ಅದು ಈ ಸರ್ಕಾರದ ಗಮನಕ್ಕೆ ಬರುತ್ತಿಲ್ಲವೇ ಅದಕ್ಕೆ ಪ್ರತ್ಯೇಕವಾಗಿ ಸಣ್ಣ ನೀರಾವರಿ ಇಲಾಖೆಯೇ ಇದೆ. ಈ ಭಾಗ ಘೋರ ಅನ್ಯಾಯವಾಗುತ್ತಿದೆ. ಅದಕ್ಕೆ ತಾವು ಈ ಸಂದರ್ಭದಲ್ಲಿ ಉತ್ತರ ಕೊಡಬೇಕು. ಮಾನ್ಯ ಯಡಿಯೂರಪ್ಪನವರು ಬಜೆಟ್ ಮಂಡಿಸಿದ್ದಾರೆ. ಇಲ್ಲಿ ತಾವು 672 ಕೋಟಿ ರೂಪಾಯಿಯನ್ನು ನಾವು ಸಣ್ಣ ನೀರಾವರಿಗೆ ಇಟ್ಟಿದ್ದೇವೆ ಎಂದು ಹೇಳುತ್ತೀರಿ. 672 ಕೋಟಿ ರೂಪಾಯಿ ಅಲ್ಲ, 1200 ರಿಂದ 1500 ಕೋಟಿ ರೂಪಾಯಿ ಆ ಭಾಗಕ್ಕೆ ಮಾತ್ರ ಖರ್ಚು ಮಾಡುತ್ತೀರಿ ಆದರೆ ಈ ಭಾಗದಲ್ಲಿ ಇರತಕ್ಕಂಥ ಕಾವೇರಿ ಕಣಿವೆಯಲ್ಲಿರುವ ಸಣ್ಣ ನೀರಾವರಿಗೆ ಹಣ ಕೊಟ್ಟಿಲ್ಲ. ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ಕೂಡ ಕಾಯ್ದಿರಿಸಿಲ್ಲ. ಅದಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ನದಿ ಅಣೆಕಟ್ಟುಗಳು ಇವೆಯಲ್ಲಾ, ಅವುಗಳು ನೂರಾರು ವರ್ಷಗಳ ಹಿಂದೆ ನಿರ್ಮಾಣವಾಗಿರುವಂತಾದ್ದು. ಆ ಕಾಲುವೆಗಳು ಮುಚ್ಚಿಹೋಗಿವೆ. ನೀರು ಮುಂದಕ್ಕೆ ಹೋಗುತ್ತಿಲ್ಲ. ಬಹಳ ಹಳೆಯ ರಿವರ್ ಅಣೆಕಟ್ಟುಗಳು. ಎಲ್ಲಾ ಹೂಳು ತುಂಬಿಕೊಂಡಿವೆ. ಆ ಕಾರ್ಟ್ ಬ್ರಿಡ್ಜ್‌ಗಳೆಲ್ಲ ಹಾಳಾಗಿ ಹೋಗಿದೆ. ಅದರ ದುರಸ್ತಿಗೆ ಹಣ ಕೊಡುತ್ತಿಲ್ಲ. ಇದರಿಂದ ತೊಂದರೆಯಾಗುತ್ತಿದೆ. ಆ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರೆಂದು ದಯವಿಟ್ಟು ತಿಳಿಸಿ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನ ಕೋಟೆ) : ಕಳೆದ 20 ತಿಂಗಳಿನಿಂದ ಒಂದು ರೂಪಾಯಿ ಕೆಲಸವಾಗಿಲ್ಲ. ಹೂಳು ತುಂಬಿದೆ, ತೂಬುಗಳು ಕೆಟ್ಟುಹೋಗಿದೆ, ಸರ್ಕಾರದಿಂದ ಅನುದಾನವಿಲ್ಲ, ಇನ್ನೂ ಸರಿಯಾ ಬಿಲ್ಲುಗಳೇ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಜಲಸಂಪನ್ಮೂಲ ಸಚಿವರು ಕಾವೇರಿ ಜಲಾನಯನ ಪ್ರದೇಶದ ಶಾಸಕರ ಸಭೆಯನ್ನು ಕರೆದು ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ.

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಯೋಜನೆಯಲ್ಲಿ ಈ ಬಜೆಟ್‌ನಲ್ಲಿ 657 ಕೋಟಿ ರೂ. ಏನಿದೆ ಇದು ನಮ್ಮ ಕರ್ನಾಟಕ ಸರ್ಕಾರದ್ದಲ್ಲ. ಇದು ವಿಶ್ವಬ್ಯಾಂಕ್ ಅಡಿಯಿಂದ ಜಲಸಂವರ್ಧನೆ ಯೋಜನೆಯ ಅಡಿಯಲ್ಲಿ ಬಂದಿರತಕ್ಕದ್ದು, ಆದರೆ ಇದುವರೆಗೆ ಕೂಡ ನಮ್ಮ ಸರ್ಕಾರ ಸಣ್ಣ ನೀರಾವರಿ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರಿಸಿಲ್ಲ. ಅದು ಹೆಚ್ಚಿನ ಕೆರೆಗಳು ಇರುವುದು ಕೋಲಾರ ಜಿಲ್ಲೆಯಲ್ಲಿ ಆಗಿರುವುದರಿಂದ. ಇದು ಕೇವಲ ಮಧ್ಯಮ ವರ್ಗದ ಕೆರೆಗಳಿಗೆ ಅನ್ವಯಿಸುತ್ತದೆ ಸಣ್ಣ ಕೆರೆಗಳಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಈ ಆಯವ್ಯಯದಲ್ಲಿ ಇದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಕಾಮಗಾರಿಗಳನ್ನು ಬಹಳ ಉಪೇಕ್ಷೆ ಮಾಡಿರತಕ್ಕದ್ದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಇರುವುದು ಮೇಜರ್ ಇರಿಗೇಷನ್ ಬಗ್ಗೆ. ಮೈನರ್ ಇರಿಗೇಷನ್ ಅವರ ಪೋರ್ಟ್‌ಫೋಲಿಯೊ ಅಲ್ಲ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳು ಎಂದು ಇದೆ. ಮಾನ್ಯ ರಮೇಶ್‌ಕುಮಾರ್‌ರವರು ತಾವೇ ತಜ್ಞರು ಎಂದು ತಿಳಿದುಕೊಂಡುಬಿಟ್ಟಿದ್ದಾರೆ. ಕಾವೇರಿ ಕೊಳ್ಳದ ನೀರಾವರಿ ಬಗ್ಗೆ ಎಂದರೆ ದೊಡ್ಡ ನೀರಾವರಿ ಇರಬಹುದು ಸಣ್ಣ ನೀರಾವರಿ ಇರಬಹುದು. ನೀವು ಬಹಳ ತಜ್ಞರ ರೀತಿ ಎಲ್ಲರಿಗೂ ಹೇಳಲಿಕ್ಕೆ ಹೋಗುತ್ತೀರಿ. ನೀವು ಸ್ಪೀಕರ್ ಆಗಿದ್ದವರು, ಕೇಳತಕ್ಕವರಿಗೆ ಎಲ್ಲರಿಗೂ ಅಡ್ಡ ಬರಲು ಹೋಗಬೇಡಿ. ನೀವು ತಿಳುವಳಿಕೆ ಇರುವವರು.

(ಗೊಂದಲ)

ಅಧ್ಯಕ್ಷರು : ನೀವು ಕೇಳುವುದಿದ್ದರೆ ಕೇಳಿ. ಏಕೆ....

ಶ್ರೀ ಜಿ.ಟಿ. ದೇವೇಗೌಡ : XX

ಅಧ್ಯಕ್ಷರು :– ಅದೆಲ್ಲಾ ಏಕೆ? ತಾವು ಕೇಳಿ, ಅಲೋ ಮಾಡಿದ್ದೇನೆ.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ : XX

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ : xx

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಪರಾಧಿ ಎಂದು ಕೋರ್ಟಿನಲ್ಲಿ ತೀರ್ಮಾನವಾಗಬೇಕು, ನಾವು ತೀರ್ಮಾನ ಮಾಡುವುದಿಲ್ಲ.

(ಗೊಂದಲ)

ಶ್ರೀ ಜಿ.ಟಿ. ದೇವೆಗೌಡ : ಪ್ರತಿಯೊಬ್ಬರಿಗೂ ಕೇಳಲು ರೈಟ್ ಇದೆ.

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡತೊಡಗಿದರು)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಒಬ್ಬೊಬ್ಬರಾಗಿ ಮಾತನಾಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಸುಪ್ರೀಂ [illegible]ನಲ್ಲಿ ಯಾವುದೋ ಅರ್ಜಿ ವಜಾ ಆಗಿದೆ ಎಂದ ತಕ್ಷಣ ಈ ಮನೆಯಲ್ಲಿರುವ ಸದಸ್ಯರಿಗೆ ವಾ[illegible] ಹಕ್ಕು ಇಲ್ಲವೆಂದು ಹೇಳುವಂಥ ವಾದ ಪುಷ್ಟೀಕರಿಸುವಂಥದಲ್ಲ. ಅದು ಒಳ್ಳೆಯ ಆರೋಗ್ಯಕ[illegible]ವಲ್ಲ. ಶಾಸಕರಾದ ಮೇಲೆ ಬೇಕಾದಷ್ಟು ಕೇಸುಗಳು ಎಲ್ಲರ ಮೇಲೂ ಇರುತ್ತದೆ. ಅ[illegible]ಟ್ ಆದರೆ, ನೀವು ಕ್ರಿಮಿನಲ್ ನೀವು ಒಳಕ್ಕೆ ಹೋಗುವಂತಿಲ್ಲವೆಂದು ಡಿಸ್‌ಕ್ವಾಲಿಫೈ [illegible]ಮೇಲೆ ಆ ಮಾತನ್ನು ಹೇಳೋಣ. xx ನೀವು ಬೇರೆ ವಿಷಯ ಮಾತನಾಡಿದ್ದಕ್ಕೆ ನಮ್ಮ ತಕರಾರಿಲ್ಲ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿರುವುದು ಕಾವೇರಿ ಕೊಳ್ಳದ ಬಗ್ಗೆ ಪ್ರಶ್ನೆ

(ಗೊಂದಲ)

ಅಧ್ಯಕ್ಷರು : ನನ್ನ ವಿನಂತಿ ಏನೆಂದರೆ, ಯಾರೂ ಭಾವೋದ್ರೇಕಕ್ಕೆ ಒಳಗಾಗಬಾರದು. ಸದನವು ಸರಿಯಾದ ರೀತಿಯಲ್ಲಿ ನಡೆಯಲು ಸಹಕಾರ ನೀಡಬೇಕು.

(ಗೊಂದಲ)

ಶ್ರೀ ಬಿ. ಶಿವರಾಮ್ : ಮಾನ್ಯ ರಮೇಶ್‌ಕುಮಾರ್‌ರವರು ಸೌಜನ್ಯದಿಂದ ಹೇಳಿದರಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಉದ್ದೇಶಿಸಿ ಏನು ಹೇಳಿದೆ ಎಂದರೆ, ಪ್ರಶ್ನೋತ್ತರ ನಡೆಯುತ್ತಿದೆ, ಬೃಹತ್ ನೀರಾವರಿ ಇಲಾಖೆಯ ಜವಾಬ್ದಾರಿ ಹೊತ್ತಿರುವ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ. ಸಣ್ಣ ನೀರಾವ[illegible] ಚರ್ಚೆಯಾಗುತ್ತಿದೆ.

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು[illegible]

ಅದನ್ನು ನಾನು ಯಾವಾಗ ಹೇಳಿದ್ದು? ಮಾನ್ಯ ಆಲಂಗೂರು ಶ್ರೀನಿವಾಸ್‌ರವರು ಎದ್ದು ಸಣ್ಣ ನೀರಾವರಿಯ ಬಗ್ಗೆ ಹೇಳಿದಾಗ ನಾನು ಹೇಳಿದೆ. ಅದಕ್ಕೆ ನನ್ನ ಗೆಳೆಯ ಎಷ್ಟು ಮಾತನಾಡಿಬಿಟ್ಟರು. ನಾನು ಒಂದನ್ನು ಹೇಳುತ್ತೇನೆ. ನೀವು ತೆಗೆಸಿಹಾಕುವುದು, ಅದು ಇದು ಆದರೆ I am tendering my resignation to my membership. Right now I will quit and go. I can't bear this humiliation and say in this House even for a second. ಅವರು ಏನೇನೆಲ್ಲಾ ಮಾತನಾಡಿದರು?

ಶ್ರೀ ಜಿ.ಟಿ. ದೇವೇಗೌಡ : xx ಇರತಕ್ಕ ವಿಚಾರವನ್ನು ಮಾತನಾಡಿದ್ದೇನೆ ಅಷ್ಟೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಜಾಸ್ತಿ ಭಾವೋದ್ರೇಕಕ್ಕೆ ಒಳಗಾಗಬೇಡಿ. ಇದು ಯಾರಿಗೂ ಗೌರವ ತರುವಂಥದಲ್ಲ.

Sri K. R. Ramesh Kumar : I will not stay for a seond. I want a decision from you. Do you want me to continue my membership or you want me to go out?

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಇದು ಬೃಹತ್ ನೀರಾವರಿ, ಸಣ್ಣ ನೀರಾವರಿಯ ಪ್ರಶ್ನೆ ಬರಲಿಲ್ಲ. ಕಾವೇರಿ ನಿಗಮಕ್ಕೆ ಸಂಬಂಧಪಟ್ಟ ಮಾತನ್ನು ಹೇಳುತ್ತಿದ್ದರು. ಆಗ ಮಾನ್ಯ ರಮೇಶ್‌ಕುಮಾರ್‌ರವರು ಎದ್ದುನಿಂತು ಇದು ಬೃಹತ್ ನೀರಾವರಿ ಸಚಿವರಿಗೆ ಪ್ರಶ್ನೆ ಕೇಳುತ್ತಿದ್ದೀರಿ, ಸಣ್ಣ ನೀರಾವರಿ ಅವರಿಗೆ ಬರುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಇದು ಕಾವೇರಿ ನೀರಾವರಿ ನಿಗಮದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು. ಒಬ್ಬೊಬ್ಬರು ಮಾತನಾಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ದೇವೇಗೌಡರನ್ನು ಉದ್ದೇಶಿಸಿ ರಮೇಶ್‌ಕುಮಾರ್‌ರವರು ಮಾತನಾಡಲಿಲ್ಲ. ಸಣ್ಣ ನೀರಾವರಿಗೆ ಇಟ್ಟಿರುವ ಬಜೆಟ್‌ನ ಬಗ್ಗೆ ಮಾನ್ಯ ಆಲಂಗೂರು ಶ್ರೀನಿವಾಸ್‌ರವರು ಪ್ರಸ್ತಾಪ ಮಾಡಿದರು.

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೆ, ... ಮಾತನಾಡಿ ಬ್ಲಾಕ್‌ಮೇಲ್ ಮಾಡತಕ್ಕ ತಂತ್ರವನ್ನು ಯಾರಾದರೂ ಮಾಡಿದರೆ ಅ... ಮುಖಾಂತರ ಹೆದರಿಸತಕ್ಕದ್ದನ್ನು ಮಾಡಿದರೆ ಈ ಕಾಂಗ್ರೆಸ್ ಪಕ್ಷದ ಸದಸ್ಯರು ಎಂದೂ ... ದಕ್ಕೆ ಬಗ್ಗುವುದಿಲ್ಲ, ಜಗ್ಗುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ. ನೀವು ದೊಡ್ಡ ಬಾಯಿ ಇದೆಯೆಂದು ತಿಳಿದುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ ಕೇಸಿದೆ, ನೀವು ಮಾತನಾಡಬಾರದು, ಮಾತನಾಡುವ ಹಕ್ಕಿಲ್ಲವೆಂದು ಹೇಳುವ ಹಕ್ಕು ನಿಮಗೇನಿದೆ? ಬೇಕಾದರೆ, ಕಾನೂನು ಪ್ರಕಾರ ಮಾತನಾಡಲು ಬರುವುದಿಲ್ಲವೆಂದು ಬೇಕಾದರೆ ನೀವು ಹೇಳಿ. ನಾವು ಹೊರಕ್ಕೆ ಹೋಗುತ್ತೇವೆ. xx

ಶ್ರೀ ಜಿ.ಟಿ. ದೇವೇಗೌಡ : xx

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಸುಪ್ರೀಂ ಕೋರ್ಟ್ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲು ಬರುತ್ತದೆಯೆ? ಇವರೆಲ್ಲಾ ಮಂತ್ರಿಯಾಗತಕ್ಕ ಮಂದಿ, ಇವರೆಲ್ಲಾ ಸೈಕೊಫೆನ್ಸಿ, ನಿಂತಿರುವವರಿಗೆಲ್ಲ ಕೆಣಕಿಬಿಡುತ್ತಾರೆ. ಅವರು ಮಾತನಾಡಲು ಹಕ್ಕಿಲ್ಲ ಮತ್ತೊಂದು ಇಲ್ಲವೆಂದು ಹೇಳಿದ್ದಾರೆ. ಅದನ್ನು ಯಾರು ಹೇಳಿದ್ದಾರಪ್ಪ ನಿಮಗೆ? ಇಂಥಾದ್ದು ಸುಮ್ಮನೆ ಮಾತನಾಡಬೇಡಿ.

ಶ್ರೀ ಜಿ.ಟಿ. ದೇವೇಗೌಡ : ನೀವು ನಾಯಕರು, ಮಾ... ಜನರು ನಮ್ಮನ್ನು ಇಲ್ಲಿಗೆ ಆರಿಸಿ ಕಳಿಸಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವ... ಯಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಹೊರಟ್ಟಿಯವರೆ, ತಾವು ಮಾತನಾಡಿ.

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆಗೂ ... ವರಕ್ಕೂ ಯಾವುದೇ ಸಂಬಂಧವಿಲ್ಲ. ಆ ರೀತಿ ಸಂಬಂಧವಿಲ್ಲದಿರುವ ವಿಚಾರದ ಬಗ್ಗೆ ದಯಮಾಡಿ ಕ್ಷಮಿಸಬೇಕು. ತಾವು ಏನು ನಿರ್ಧಾರ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಿಮ್ಮ ಕ್ಷಮಾಪಣೆ ನನಗೆ ಬೇಕಾಗಿಲ್ಲ. ನಾನು ಭಾರತ ದೇಶದ ಒಬ್ಬ ನಾಗರೀಕ. ಕೋರ್ಟಿಗೆ ಹೋಗತಕ್ಕಂಥ ಹಕ್ಕು ನನಗಿದೆ. ನನ್ನ ಅರ್ಜಿಯನ್ನು ವಿಲೇ ಮಾಡತಕ್ಕಂಥಾದ್ದು, ಪರ ಮಾಡತಕ್ಕಂಥಾದ್ದು, ವಿರೋದ ಮಾಡತಕ್ಕಂಥಾದ್ದು ಕೋರ್ಟಿನ ಇಚ್ಛೆ. ಮತ್ತು ಅದರ ನಂತರ ನಾನು ಹೇಗೆ ನಡೆದುಕೊಳ್ಳಬೇಕೋ ಹಾಗ ನಾನು ನಡೆದುಕೊಳ್ಳುತ್ತೇನೆ. ಆದರೆ ಈ ಸದನದಲ್ಲಿ ವಿನಾಕಾರಣ, ಆ ವಿಷಯಕ್ಕೆ ಸಂಬಂಧವೇ ಇಲ್ಲದೇ ಇದ್ದಾಗ, ಬಹಳ ಕೆಟ್ಟ ಅರ್ಥ ಬರತಕ್ಕಂಥ ರೀತಿಯಲ್ಲಿ ಅವರು ಅನಗತ್ಯವಾಗಿ, ಪ್ರೊವೊಕೇಷನ್‌ನಿಂದ ಮಾತನಾಡಿದ್ದಾರೆ.

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ನಾನು ಮಾತನಾಡಿರತಕ್ಕಂಥ ಪ್ರತಿ ಅಕ್ಷರವೂ ಕಡತದಲ್ಲಿದೆ. ತಾವು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ. ನೀವು ನನಗೆ ರಕ್ಷಣೆ ಕೊಡುವುದಾದರೆ, ನಾನು ರಕ್ಷಣೆ ಕೊಡುತ್ತೇನೆ, ನಿಯಮಾವಳಿಗಳ ಪ್ರಕಾರ ಈ ಸದನ ನಡೆಸುತ್ತೇನೆ, ತಪ್ಪು ಮಾಡಿದಂಥವರಿಗೆ ಶಿಕ್ಷೆ ಕೊಡುತ್ತೇನೆ ಎಂದು ಹೇಳಿ. ಇಲ್ಲದೇ ಹೋದರೆ, ನಾನು ಒಂದು ಕ್ಷಣವೂ ಈ ಸದನದಲ್ಲಿ ಇರುವುದಿಲ್ಲ. ಆ ಅಪಕೀರ್ತಿಯನ್ನು ನೀವು ಹೊರಬೇಕಾಗುತ್ತದೆ. ಇವರು ಈ ವಿಧಾನಸೌಧವನ್ನು ನೋಡುವುದಕ್ಕೆ ಮೊದಲು ಈ ಅಸೆಂಬ್ಲಿಗೆ ಬಂದಂಥವನು ನಾನು. ಬಹಳ ಜನ ದೊಡ್ಡವರ ಕಾಲ ಕೆಳಗೆ ಕುಳಿತು ಪಾಠ ಕಲಿತು ಈ ಸದನದಲ್ಲಿ ನಮ್ರತೆಯಿಂದ ನಾನು ಕೆಲಸ ಮಾಡುತ್ತಿದ್ದೇನೆ. ನನ್ನನ್ನು ಆರಿಸಿ ಕಳುಹಿಸಿರತಕ್ಕಂತ ಜನ ತಲೆತಗ್ಗಿಸಬೇಕಾಗಿಲ್ಲ. ಯಾರೂ ತಲೆ ತಗ್ಗಿಸುವಂಥ ಕೆಲಸವನ್ನು ನಾನು ಮಾಡಿಲ್ಲ. ಕೋರ್ಟಿದೆ, ಕಾನೂನಿದೆ, ನಾನು ಫೇಸ್ ಮಾಡುತ್ತೇನೆ. ಇಂಥಾದ್ದನ್ನು ಫೇಸ್ ಮಾಡಿಕೊಂಡೇ ನಾನು ಬಂದಿದ್ದೇನೆ. ನನಗೆ ಕುಲ ಇಲ್ಲ, ಬಲ ಇಲ್ಲ, ಹಣ ಇಲ್ಲ, ಹಿಂದಿಲ್ಲ, ಮುಂದಿಲ್ಲ, ಹೀಗೆಯೇ ಇಲ್ಲಿಯವರೆಗೂ ಬೆಳೆದು ಬಂದಿದ್ದೇನೆ; ನಾಲ್ಕನೇ ಟರ್ಮ್‌ಗೆ ಇಲ್ಲಿಗೆ ಬಂದಿದ್ದೇನೆ ಎಂದರೆ ನನ್ನಲ್ಲಿ ವ್ಯಕ್ತಿತ್ವ ಇದೆ, ಶಕ್ತಿ ಇದೆ, ನನ್ನ ಜನರ ಪುಣ್ಯದಿಂದ ನಾನು ಬಂದಿದ್ದೇನೆ, ಇಂಥವರ ಮುಲಾಜಿನಲ್ಲಿ ಬಂದವನಲ್ಲ ನಾನು. ಯಾರ ಕೃಪೆಯಲ್ಲಿ ಬದುಕುವುದೂ ನನಗೆ ಅಗತ್ಯವಿಲ್ಲ. ನಾನು ಇಲ್ಲಿರತಕ್ಕಂಥ ಅಗತ್ಯ ನಿಮಗಿದೆ ಎಂದರೆ You have to protect my interest. I am appealing to you. Please give your judgment. Not by deletion Not by deletion from the records. If this is the practice, ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ಕಡತದಿಂದ ತೆಗೆದ ಮಾತ್ರಕ್ಕೆ ಸಮಸ್ಯೆ ಬಗೆಹರಿಯುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾವೆಲ್ಲಾ ಬಾಯಿಗೆ ಬಂದಹಾಗೆ ಮಾತನಾಡುತ್ತೇವೆ, ನಂತರ ರೆಕಾರ್ಡ್ ಮಾಡುತ್ತಾ ಹೋಗುವುದು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಈಗ ಹಕ್ಕುಚ್ಯುತಿ ಮಂಡಿಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಜೀರ್ ಸಾಹೇಬರು ಇಲ್ಲಿ ಇದ್ದದ್ದು, ಸಿದ್ಧರಾಮಯ್ಯನವರಿಗೆ ಮಾಡಿದ್ದು ಇವರ ಹಣೆಬರಹವೆಲ್ಲಾ ಗೊತ್ತಿದೆ ನನಗೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋರ್ಟ್ ಕೇಸ್ ಯಾರ್‍ಯಾರ ಮೇಲಿದೆ, ಆ ಎಲ್ಲಾ ಎಂ.ಎಲ್.ಎ ಗಳನ್ನೂ ಆಚೆಗೆ ಹಾಕಿ ಈಗ.

ಶ್ರೀ ವಾಟಾಳ್ ನಾಗರಾಜ್ : ಎಲ್ಲವನ್ನೂ ಆಚೆ ಹಾಕಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರ್‍ಯಾರ ಮೇಲೆ ಕೇಸ್ ಇದೆ. Who ever facing the case. ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ಇರುವವರು, ಕೋರ್ಟಿನಲ್ಲಿ ಕೇಸ್ ಇರುವವರೆಲ್ಲಾ ನಡೆಯಿರಿ ಆಚೆಗೆ ಹೋಗೋಣ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಈಗ ಶ್ರೀನಿವಾಸ್ ಮೇಲೆ ಕೇಸ್ ಇಲ್ಲವೇ? ತಹಶೀಲ್ದಾರ್ ಆಫೀಸ್‌ನಲ್ಲಿ ಅಟ್ಯಾಕ್ ಮಾಡಿದ ಕೇಸ್ ಇಲ್ಲವೇ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : 15 ಕ್ರಿಮಿನಲ್ ಕೇಸುಗಳಿರುವ ಮಂತ್ರಿಗಳ ಹೆಸರನ್ನೂ ನಾವು ಕೊಡುತ್ತೇವೆ ಅವರನ್ನು ನೀವು ಆಚೆ ಹಾಕಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : 15 ಕೇಸ್ ಇರುವ ಮಂತ್ರಿ ಹೆಸರನ್ನು ಹೇಳುತ್ತೇವೆ.

ಅಧ್ಯಕ್ಷರು : ಆಯಿತು. ಆಯಿತು, ದಯಮಾಡಿ ಕುಳಿತುಕೊಳ್ಳಿ. ಈಗ................

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಕೂಡದು ಅಂದರೆ ಎಲ್ಲರನ್ನೂ ಆಚೆ ಹಾಕಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ದಯವಿಟ್ಟು ತಾವು ಮಾಹಿತಿ ತರಿಸಬೇಕು. ಯಾರ್‍ಯಾರ ಮೇಲೆ ಕೇಸ್ ಇದೆ. ಅವರ್‍ಯಾರೂ ಮಾತನಾಡಕೂಡದು ಎಂದು ತಾವು ಅಪ್ಪಣೆ ಕೊಡಬೇಕು.

ಅಧ್ಯಕ್ಷರು : ಮಾಧುಸ್ವಾಮಿಯವರೇ, ದಯಮಾಡಿ ಕೇಳಿ. ಏನೆಂದರೆ, ...

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಇದೇನು ಹುಡುಗಾಟವೇ ಸರ್? ಇದನ್ನು ಯಾರಾದರೂ ಅಸೆಂಬ್ಲಿ ಎನ್ನುತ್ತಾರೆಯೇ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಧರಂಸಿಂಗ್ : ನಾನು ಎದ್ದು ನಿಂತಿದ್ದೇನೆ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಆಯಿತು ಹೇಳಿ. ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : xx ಇದು.

---

xx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಾಗಲೂ ಪದೇ ಪದೇ ಎದ್ದುನಿಲ್ಲುತ್ತೀರಿ. ಸರಿಯಿಲ್ಲ ಅದು. ಅವರು ಮಾತನಾಡುತ್ತಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಧರಂಸಿಂಗ್ : ಮಾನ್ಯ ರಮೇಶ್‌ಕುಮಾರ್‌ರವರು ತಮ್ಮ ರಕ್ಷಣೆ ಕೇಳಿದ್ದಾರೆ. ರಮೇಶ್‌ಕುಮಾರ್‌ರವರು ಹಿಂದೆ ತಮ್ಮ ಸ್ಥಾನದಲ್ಲಿ ಕುಳಿತು ಐದು ವರ್ಷಗಳ ಕಾಲ ಯಶಸ್ವಿಯಾಗಿ ತಮ್ಮ ಕಾರ್ಯನಿರ್ವಹಣೆ ಮಾಡಿದ್ದಾರೆ. ಹೈಕೋರ್ಟ್‌ನವರು ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ ಅದೂ ಕೂಡ ತ[illegible]ವೆ. ಸುಪ್ರೀಂ ಕೋರ್ಟಿನಿಂದ ಮತ್ತೆ ಇಲ್ಲಿಗೆ ಬಂದು ಮಾಡತಕ್ಕಂಥಾದ್ದು ಇದೆ. ಈ ಒಂದ[illegible]ದಲ್ಲಿ ಒಬ್ಬ ಸದಸ್ಯರು ಎದ್ದು ನಿಂತು ಇಲ್ಲಿ ಈ ತರಹ, ಆಪಾದನೆ ಮಾಡತಕ್ಕಂಥ ರೀತಿಯಲ್ಲಿ ಹೇಳುತ್ತಿದ್ದಾರೆ. ನೀವು ಅಧ್ಯಕ್ಷರಾಗಿ ಇವತ್ತು ಅವರಿಗೆ ರಕ್ಷಣೆ ಕೊಡಬೇಕು. ರಕ್ಷಣೆ ಕೊಡಲಾರದೇ ಹೋದರೆ ನಾವು ಈ ಸದನದಲ್ಲಿ ಹೇಗೆ ಕಾರ್ಯ ನಿರ್ವಹಣೆ ಮಾಡಲಿಕ್ಕಾಗುತ್ತದೆ? ಇದು ಹೀಗಿಲ್ಲ. ನಾನು ಕಡತದಿಂದ ತೆಗೆಯುತ್ತೇನೆ ಎನ್ನುವ ಪದಗಳನ್ನು ಉಪಯೋಗಿಸಬೇಡಿ. ಇವತ್ತು ತಾವು ಆ ಸ್ಥಾನದಲ್ಲಿದ್ದು, ಖಡಾಖಂಡಿತವಾಗಿ ಏನು ರೂಲಿಂಗ್ ಕೊಡಬೇಕೋ ಅದನ್ನು ತಾವು ಕೊಡಬೇಕು. ಇಲ್ಲವಾದರೆ ನಮ್ಮ ಎಲ್ಲಾ ಸದಸ್ಯರಿಗೆ ತೊಂದರೆಯಾಗುತ್ತದೆ.

ಅಧ್ಯಕ್ಷರ ತೀರ್ಪು

ಅಧ್ಯಕ್ಷರು : ಸದನದಲ್ಲಿ ಮಾತನಾಡುವಾಗ ಯಾರು ಭಾವೋದ್ವೇಗಕ್ಕೆ ಒಳಗಾಗಬಾರದು. ಅದಲ್ಲದೇ, ನನ್ನ ಮಾತಿನಿಂದ ಈ ಸದನದ ಗೌರವ ಕಡಿಮೆಯಾಗುತ್ತದೆ ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಪ್ರತಿಯೊಂದು ಮಾತನಾಡುವಾಗಲೂ ತಾವು ಯೋಚನೆ ಮಾಡಿ ಮಾತನಾಡಬೇಕು. ಅದಲ್ಲದೇ, ಇನ್ನೊಂದು ವಿಷಯವೇನೆಂದರೆ, ನಮ್ಮ ಮಾತಿನಿಂದ ಬೇರೆಯವರಿಗೆ ಯಾವುದೇ ರೀತಿಯಲ್ಲಿ ನೋವಾಗಬಾರದು. ಅದು ಬಹಳ ಮುಖ್ಯ. ಎಲ್ಲರೂ ಒಂದು ಸಾಮರಸ್ಯದಿಂದ, ಪರಸ್ಪರ ಗೌರವದಿಂದ ನಡೆದುಕೊಳ್ಳಬೇಕು ಮತ್ತು ಆ ರೀತಿ ಮಾತನಾಡಬೇಕು. ಆ ರೀತಿಯಲ್ಲಿ ನಾವು ಮಾಡದೇ ಇದ್ದರೆ, ಈ ಸದನದ ಕಲಾಪ ನಡೆಸುವುದೂ ಕಷ್ಟವಾಗುತ್ತದೆ, ಈ ಸದನಕ್ಕೆ ಗೌರವವೂ ಬರುವುದಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಸಹ, ಯಾರೇ ಆಗಲಿ, ಭಾವೋದ್ವೇಗಕ್ಕೆ ಒಳಗಾಗದೇ ಮಾತನಾಡಬೇಕು ಎಂದು ನಾನು ಮೊದಲನೆಯದಾಗಿ ವಿನಂತಿ ಮಾಡುತ್ತೇನೆ. ಈಗ ಮಾನ್ಯ ರಮೇಶ್‌ಕುಮಾರ್‌ರವರ ಬಗ್ಗೆ, ಮಾನ್ಯ ದೇವೇಗೌಡರು ಏನು ಪದವನ್ನು ಉಪಯೋಗಿಸಿದ್ದಾರೆ, ಆ ಪದವನ್ನು ನಾನು ಕಡತದಿಂದ ತೆಗೆದು ಹಾಕಿದ್ದೇನೆ. ಮತ್ತು ಅವರ ಭಾವನೆಗಳು ....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ತಮಗೆ ಹೇಳುತ್ತೇನೆ, ನಾನು ಯಾವ ರೀತಿಯ ಬದುಕನ್ನು ಬದುಕಿದ್ದೇನೆ ಎಂದರೆ ನಾನು ಸಭಾಧ್ಯಕ್ಷನಾಗಿದ್ದಾಗ ನನ್ನ ಕಛೇರಿಗೆ ಕಳುಹಿಸುತ್ತಿದ್ದಂಥ ನ್ಯೂಸ್ ಪೇಪರ್ ಅನ್ನೂ ಸಹ ನಾನು ಬಳಕೆ ಮಾಡಿದ ಪದಾರ್ಥಗಳೆಂದು

ಚೀಲಕ್ಕೆ ಹಾಕಿ ವಾಪಸ್ಸು ಕಳುಹಿಸಿದ್ದೇನೆ. ನಾನು ಚುನಾವಣೆಯಲ್ಲಿ ಸೋತ ಮಾರನೆಯ ದಿವಸ ಅಂದರೆ 6ನೇ ತಾರೀಖು ರಿಸಲ್ಟ್ ಬಂದರೆ, 7ನೇ ತಾರೀಖು ಬೆಳಗ್ಗೆ 10.00 ಗಂಟೆಗೆ ಪಿ.ಡಬ್ಲ್ಯು.ಡಿ.ಯವರನ್ನು ಕರೆದು ನಾನು ಅಧಿಕೃತ ನಿವಾಸದ ಚಾವಿ ಕೊಟ್ಟು ಹೊರಗೆ ಬಂದಿದ್ದೇನೆ. ನನ್ನ ಪ್ರವಾಸ ಭತ್ಯೆಗಳನ್ನು ನೋಡಿ. ಪ್ರತಿವರ್ಷವೂ ಬಾಕಿ ಇಟ್ಟು ಹೋಗಿದ್ದೇನೆ. ಒಂದು ದಿವಸವೂ ನಾನು ಡ್ರಾ ಮಾಡುವುದಕ್ಕೆ ಹೋಗಿಲ್ಲ. ನಾನು ನನ್ನ ಸ್ವಂತ ಕೆಲಸಕ್ಕಾಗಿ ಊರಿಗೆ ಹೋಗಬೇಕಾದರೂ ನನ್ನ ಸ್ವಂತ ಕಾರಿನಲ್ಲಿ ಹೋಗುತ್ತಿದ್ದೆ. ಯಾವ ರೀತಿ ಬದುಕಬೇಕು ಎಂದು ನನಗೆ ಗೊತ್ತಿದೆ. ಆದರ್ಶಗಳೇನು ಎಂದು ಗೊತ್ತಿದೆ. ನನ್ನ ಆದರ್ಶಗಳಿಗೆ ನನ್ನ ಕುಟುಂಬ ಎಷ್ಟು ಬೆಲೆ ಕೊಟ್ಟಿದೆ ಎಂದೂ ನನಗೆ ಗೊತ್ತಿದೆ. ನಾನು ಇಂಥವರ ಕೈಯ್ಯಲ್ಲಿ ಪಾಠ ಕಲಿಯಬೇಕೇ? ಇಷ್ಟು ವರ್ಷ ಇಲ್ಲಿದ್ದು, ಇಷ್ಟು ಸಫರ್ ಆಗಿ ಇವತ್ತು should I take lesson from such people? Is this the reward you give me for being in public life? Is it enough if you delete these things from the proceedings? ನಾನೇನು ಹೇಳತಕ್ಕಂಥಾದೆಂದರೆ, ನನಗಿಂತ ಸುಪೀರಿಯರ್ ಆಗಿರತಕ್ಕಂಥವನು, ಯೋಗ್ಯತೆ ಇರತಕ್ಕಂಥವನು, ಚೈತನ್ಯ ಇರತಕ್ಕಂಥವನು ಒಂದು ಮಾತು ಹೇಳಿದರೆ, ನಮ್ರತೆಯಿಂದ ತಲೆತಗ್ಗಿಸಿ ತಿದ್ದಿಕೊಳ್ಳಬೇಕೇನೋ ಎಂದು ಭಯ ಪಡುತ್ತೇನೆ. ಇಂಥವರ ಕೈಯಿಂದ ನಾನು ಕಲಿಯಬೇಕೇ ಪಾಠವನ್ನು? ಇಂಥ ಕೇಸುಗಳು ನೂರು ಬಂದರೂ ಫೇಸ್ ಮಾಡತಕ್ಕಂಥ ಶಕ್ತಿ ನಮ್ಮ ಜನ ನನಗೆ ಕೊಟ್ಟಿದ್ದಾರೆ. ನಾನು ಎಂಥ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದೇನೆ ಎಂದರೆ, ನನ್ನ ತಾಯಿ ಅವಿದ್ಯಾವಂತೆ, ಅಕ್ಷರ ಜ್ಞಾನವಿಲ್ಲ ಆಕೆಗೆ. ನನಗೆ ಆಕೆ ಹೇಳಿದ ಪಾಠ ಇಷ್ಟೇ, ಅನುಕೂಲಸ್ಥರ ಮನೆಗೆ ಹೋದರೆ, ಅವರ ಬಾಗಿಲಿನಿಂದ ಬರುವಾಗ ಹೊಸ್ತಿಲಲ್ಲಿ ನಿಂತುಕೊಂಡು ನಿನ್ನ ಅಂಗಾಲಿನಲ್ಲಿ ಸ್ಕ್ರಬ್ ಮಾಡಿ, ಅವರ ಕಾಲಿನ ಧೂಳು ಇದ್ದರೂ ಕೂಡ ಅವರ ಮನೆಗೇ ಬಿಟ್ಟು ಬಾ ಎಂದು ಹೇಳಿದಂಥವಳ ಹೊಟ್ಟೆಯಲ್ಲಿ ಹುಟ್ಟಿದವನು ನಾನು. ಇಂಥವರಿಂದ ಪಾಠ ಕಲಿಯಬೇಕೇ ನಾನು?

ಅಧ್ಯಕ್ಷರು : ಭಾವೋದ್ವೇಗಕ್ಕೆ ಒಳಗಾಗಬೇಡಿ.

Sri K.R. Rameshkumar : Should I learn lesson from such moral wrecks? Please tell me, can you protect my interest or not. You want me to be in this House or not? Please decide.

Mr. Speaker : Definitely. See, it is my duty. I will protect you ನಾನು ಅದನ್ನೇ ಹೇಳುತ್ತಿರತಕ್ಕಂಥಾದ್ದು.

Sri K.R. Rameshkumar : Moral wrecks are trying to teach lessons.

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೇ, ನೀವೂ ಭಾವೋದ್ವೇಗಕ್ಕೆ ಒಳಗಾಗಬೇಡಿ. ಇಲ್ಲಿ ಏನಾಗಿದೆ ಎಂದರೆ, ಪರಸ್ಪರ ....

ಶ್ರೀ ಎಸ್.ಎಸ್. ಪಾಟೀಲ್ : ಮಾತುಗಳು ಬಾಯಿ ತಪ್ಪಿ ಕೆಲವು ಸಲ ಹೋಗುತ್ತವೆ. ಅವರು ಎದ್ದು ನಿಂತು, ದಯವಿಟ್ಟು ನನ್ನನ್ನು ಕ್ಷಮಿಸಿ ಎನ್ನುವ ಶಬ್ದವನ್ನು ಹೇಳಿದ್ದರೆ, ಏನೂ ಆಗುತ್ತಿರಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇಂದಿರಾ ಗಾಂಧಿಯವರ ಮೇಲೆ ಕೇಸುಗಳನ್ನು ಹಾಕಿರಲಿಲ್ಲವೇ? [illegible]ಯರ ಮೇಲೆ ಹಾಕಿರಲಿಲ್ಲವೇ ಕೇಸುಗಳನ್ನು? ಯಾರ ಮೇಲೆ ಕೇಸುಗಳಿಲ್ಲ? ಕೇಸು[illegible] ಏನಾಗುತ್ತದೆ?

(ಗೊಂದಲ)

ಅಧ್ಯಕ್ಷ[illegible]ಶ್‌ಕುಮಾರ್‌ರವರೇ, ನೀವು ಹಿರಿಯ ಸದಸ್ಯರು. ನೀವೂ ಸಹ ಭಾವೋದ್ವೇಗಕ್ಕೆ ಒ[illegible] ಸರಿಯಲ್ಲ. ದೇವೇಗೌಡರೇ, ನೀವು ಹಿರಿಯ ಸದಸ್ಯರು, ನೀವು ಭಾವೋದ್ವೇಗಕ್ಕೆ ಒಳಗಾ[illegible]ೀ ಹೇಳಿದ್ದೀರಿ, ಅದರಿಂದ ಅವರಿಗೆ ಅಫೆಂಡ್ ಆಗಿದೆ. ಅದರ ಬಗ್ಗೆ ತಾವು ಏನಾದರೂ ಹೇ[illegible]ಳ್ಳಿಯುದು.

ಶ್ರೀ ಜಿ.ಟಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನನಗೆ ಯಾರ ಮನಸ್ಸನ್ನೂ ಕೂಡ ನೋಯಿಸಬೇಕು ಅನ್ನತಕ್ಕಂಥಾದ್ದು ಇಲ್ಲ. ಅವರು ತಮ್ಮ ತಾಯಿಯ ಬಗ್ಗೆ ಯಾವ ರೀತಿ ಹೇಳಿದ್ದಾರೋ, ನಮ್ಮ ತಾಯಿಯೂ ಹಾಗೇ ಹೆಚ್ಚೆಟ್ಟು. ನಾವೂ ಸಹ ಅದೇ ಮೂಲದಿಂದ ಬಂದಿರುವವರು. ಪ್ರತಿಯೊಬ್ಬರಿಗೂ ಕೂಡ ಅವರವರದ್ದೇ ಆದ ಸ್ವಾಭಿಮಾನ ಎಲ್ಲರಿಗೂ ಇದೆ. ಅವರು ಹಿರಿಯ ಸದಸ್ಯರಾಗಿದ್ದಾರೆ. ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರ ಮನಸ್ಸಿಗೆ ನೋವಾಗಿದ್ದರೆ, ಅದಕ್ಕೆ ವಿಷಾದ ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಅವರಿಗೆ ಕೇಳಿ, ಅವರು ಎಷ್ಟು ವರ್ಷದಿಂದ ನನಗೆ ಪರಿಚಯ ಇದ್ದಾರೆಂದು. ಯಾವ ಕಾಲದಿಂದ ಪರಿಚಯ ಇದ್ದಾರೆಂದು ಕೇಳಿ. ಇವತ್ತು ಇವರು ಕುಮಾರಸ್ವಾಮಿಯವರ ಹಿಂದೆ ಇದ್ದಾರೆ, ಯಾವತ್ತಿನಿಂದ ಇವರು ನನಗೆ ಪರಿಚಯ ಇದ್ದಾರೆ ಎಂದು ಕೇಳಿ.

Mr. Speaker :- He has expressed...... ಇದನ್ನು ದಯವಿಟ್ಟು ಮುಂದುವರೆಸುವುದು ಬೇಡ.

ಶ್ರೀ ಬಿ.ಎಸ್. ಹೊರಟ್ಟಿ : ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

ಅಧ್ಯಕ್ಷರು : ದಯಮಾಡಿ ಕೇಳಿ. ಎಲ್ಲರಿಗೂ ರಕ್ಷಣೆ ಕೊಡತಕ್ಕಂಥಾದ್ದು ನನ್ನ ಕರ್ತವ್ಯ. ಕೊಡುತ್ತೇನೆ. ಆದರೆ ನಾನೂ ಸಹ ಕೆಲವು ಸಾರಿ, ಈ ರೀತಿಯಾದಾಗ ಹಾರ್ಷ್‌ಆಗಿ ನಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ದಯಮಾಡಿ ಇನ್ನು ಮುಂದೆ ಯಾರೂ ಭಾವೋದ್ವೇಗಕ್ಕೆ ಒಳಗಾಗಿ ಮಾತನಾಡಬಾರದು. ಮತ್ತು ಇನ್ನೊಬ್ಬರಿಗೆ ಅಫೆಂಡಿಂಗ್ ಆಗುವ ರೀತಿಯಲ್ಲಿ ಯಾರೂ ಮಾತನಾಡಬಾರದು. ಈಗ ರಾಜಕೀಯದಲ್ಲಿ ಬೇರೆ ಬೇರೆ ಅಭಿಪ್ರಾಯ ಭೇದಗಳಿರಬಹುದು. ಆದರೆ, ಇಲ್ಲಿ ಯಾರೂ ಶತ್ರುಗಳು ಇರುವುದಿಲ್ಲ. ಇದು ಪ್ರಜಾಪ್ರಭುತ್ವ. ಹಾಗಂತ ಎಲ್ಲರೂ ಶತ್ರುಗಳೇನು? ಕೆಲವು ಸಾರಿಯಂತೂ ನಿಯಂತ್ರಣ ಮೀರಿ ಕೆಲವರು ಮಾತನಾಡುತ್ತಾರೆ. ಇದರಿಂದ ಈ ಮನೆಗೂ

ಗೌರವ ಬರುವುದಿಲ್ಲ ಮತ್ತು ಯಾರಿಗೂ ಗೌರವ ಬರುವುದಿಲ್ಲ. ಆದ್ ... ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಎಲ್ಲರೂ ಸಹ ಇನ್ನು ಮುಂದೆ ಈ ಸದ ... ನ್ನು ಹೆಚ್ಚಿಸುವ ರೀತಿಯಲ್ಲಿ ನಡೆದುಕೊಳ್ಳಬೇಕು ಮತ್ತು ಮಾತನಾಡಬೇಕೆಂದು ನಾನು ... ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ, ಈಗ ಏನು ಸುಮ್ಮನೆ argument, counter argument ಎಲ್ಲಾ ಆಯಿತು. ಮತ್ತು ಇವೆಲ್ಲವೂ proceedings ನಲ್ಲಿ ಬಂದಿದೆ, ಅದನ್ನು ತೆಗೆದು ಹಾಕಿಸಿ. ಇದು ಒಂದು. ಎರಡನೆಯದು, ಹಾಗೆಯೇ, ಇದು pressಗೆ ಹೋಗುವುದು ಕೂಡ ಬೇಡ. ದಯವಿಟ್ಟು ಈ ಬಗ್ಗೆ ತಾವು direction ಕೊಟ್ಟು ಅದು press ನಲ್ಲಿ ಬರದಂತೆ ಮಾಡಬೇಕು.

ಅಧ್ಯಕ್ಷರು : ನಾನು ಎಲ್ಲ ಮಾಧ್ಯಮದ ಮಿತ್ರರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಡೆದ ಯಾವುದೇ proceedings press ಗೆ ಹೋಗುವ ಅವಶ್ಯವಿಲ್ಲ. ನೀವೆಲ್ಲರೂ ಇದಕ್ಕೆ ಸಹಕರಿಸಬೇಕು. ಸಂಬಂಧಪಟ್ಟವರು ಯಾರೇ ಭಾವೋದ್ವೇಗಕ್ಕೊಳಗಾಗಿ ಮಾತನಾಡಿ un-parliamentary ಮತ್ತು un-constitutional ಆಗಿರತಕ್ಕಂಥದ್ದನ್ನು ಮಾತನಾಡಿದ್ದರೆ ತೆಗೆದುಹಾಕಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಕಾವೇರಿ ಭಾಗದಲ್ಲಿ ಕಾಮಗಾರಿ ಆಗಬೇಕೆಂದು ಅನೇಕ ಸದಸ್ಯರು ಏನು ಅಪೇಕ್ಷೆ ಪಟ್ಟಿದ್ದಾರೆ, ಈ ಸಾಲಿನಲ್ಲಿ ... ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಆ ಉದ್ದೇಶ ಕೂಡ ಇದೆ. ಸಂಬ ... ಸದಸ್ಯರುಗಳನ್ನೂ ಸಹ ಕರೆದು ವಿಶೇಷವಾಗಿ ಅವರ ಭಾಗಕ್ಕೆ ಏನೇನು ಆಗಬೇಕೆನ್ನುವುದ ... ಅವರ ಜೊತೆ ಚರ್ಚೆ ಮಾಡಿ, ಖಂಡಿತವಾಗಿ ಈ ಸಮಸ್ಯೆಗಳನ್ನು ಪರಿಹಾರ ಮಾಡ ... ನಮ್ಮ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವ ಮಾತನ್ನು ತಮ್ಮ ಮುಖಾಂತರ ಹೇಳ ... ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ಈಗ ಮಾನ್ಯ ದೇವ ... ವು ಪ್ರಶ್ನೆಗಳನ್ನು ಎತ್ತಿ ಅದರಿಂದ ಎಲ್ಲಿ ಏನೇನೋ ಆಯಿತು. ಒಂದಂತೂ ನಿಜ. ಈಗ ... ಮೈಸೂರು ಭಾಗದಲ್ಲಿ ತಾವು ನೋಡುತ್ತೀರೋ ಅಥವಾ ಸಣ್ಣ ನೀರಾವರಿ ಸಚಿವರು ಇದ್ದಾರೋ ಏನು ನನಗೆ ಗೊತ್ತಿಲ್ಲ. ಈಗ ಏನಾಗಿದೆ ಎಂದರೆ, ಕೆರೆಗಳು ಇದೆಯಲ್ಲಾ ಅಲ್ಲಿಂದ ಹೂಳು ಎತ್ತುವುದಿಲ್ಲ, ಅಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಈ ಭಾಗದಲ್ಲಿ ಏನೇನೂ ಉಪಯೋಗಕ್ಕೆ ಬರುತ್ತಿಲ್ಲ. ಅದರ ಬಗ್ಗೆ ಈ ಭಾಗದ ಎಲ್ಲಾ ಶಾಸಕರನ್ನು ಕರೆಸಿ ಸ್ವಲ್ಪ ಸಮಗ್ರವಾಗಿ ಚಿಂತನೆ ಮಾಡಿ ಏನಾದರೂ ಒಂದು ಕಾರ್ಯಕ್ರಮವನ್ನು ನೀವು ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಸಣ್ಣ ನೀರಾವರಿ ಸಚಿವರು ಇಬ್ಬರೂ ಕುಳಿತು ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಕರೆದು ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಅಧ್ಯಕ್ಷರು :- ಆಯಿತು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು (ಮುಂದು)

ಬಿಜಾಪುರದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು, ಮಂಜೂರು ಮಾಡುವುದು.

30 (158) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು;

ಆ) ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ಮತ್ತು ಎಷ್ಟು ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು.

ಉ) ಅದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಿಜಾಪುರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 07 ಪ್ರೌಢಶಾಲೆ, 03 ಪದವಿ ಪೂರ್ವ ಕಾಲೇಜುಗಳ ವಿವರಗಳು ಇಂತಿವೆ.

(ಅ) ನಗರದಲ್ಲಿರುವ ಪ್ರೌಢಶಾಲೆಗಳು	**ಗ್ರಾಮೀಣ ಪ್ರದೇಶದಲ್ಲಿರುವ ಪ್ರೌಢಶಾಲೆಗಳು**
1) ಜಿ.ಹೆಚ್.ಎಸ್. ಬಿಜಾಪುರ	1) ಜಮನಾಳ
2) ಜಿ.ಹೆಚ್.ಎಸ್. (ಬಾಲಕಿಯರು) ಬಿಜಾಪುರ	2) ಬುರಾಣಪುರ 3) ಹೊನ್ನಾಟಗಿ
3) ಜಿ.ಹೆಚ್.ಎಸ್. ಉರ್ದು ಪ್ರೌಢಶಾಲೆ, ಬಿಜಾಪುರ.	4) ಕಗ್ಗೋಡ

(ಆ) ನಗರದಲ್ಲಿರುವ ಪದವಿ ಪೂರ್ವ ಕಾಲೇಜುಗಳು	**ಗ್ರಾಮೀಣ ಪ್ರದೇಶದಲ್ಲಿರುವ ಪದವಿಪೂರ್ವ ಕಾಲೇಜುಗಳು**
1) ಸರ್ಕಾರಿ ಬಾಲಕರ ಪ.ಪೂ.ಕಾ.	1) ನಾಗಾಠಾಣ
2) ಸರ್ಕಾರಿ ಬಾಲಕಿಯರ ಪ.ಪೂ.ಕಾ.	

ಆ) ಹೌದು.

ಇ) ಪ್ರಸ್ತಾವನೆಗಳು ಬಂದಿದ್ದು, ಪ್ರೌಢಶಿಕ್ಷಣ, ಪದವಿಪೂರ್ವ ನಿರ್ದೇಶನಾಲಯಗಳ ಪರಿಶೀಲನೆಯಲ್ಲಿದೆ.

ಈ) ಮತ್ತು ಉ) ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾರಂಭದ ವಿಷಯವು ಸರ್ಕಾರದಲ್ಲಿ ನಿರಂತರ ಪ್ರಕ್ರಿಯೆಯಾಗಿದ್ದು, ಸ್ಥಳೀಯ ಅಗತ್ಯತೆ, ವಿದ್ಯಾರ್ಥಿಗಳ ಸಂಖ್ಯೆ, ಹಣಕಾಸಿನ ಲಭ್ಯತೆಯನ್ನು ಆಧಾರವಾಗಿಟ್ಟುಕೊಂಡು ಅಗತ್ಯ ಸಂಖ್ಯೆಯಷ್ಟು ಪ್ರೌಢಶಾಲೆ / ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತಿದೆ.

ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ವಿಷಯವು ಸರ್ಕಾರದ ನಿರಂತರ ಪ್ರಕ್ರಿಯೆಯಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆ, ಹಣಕಾಸಿನ ಲಭ್ಯತೆಯನ್ನು ಆಧಾರವಾಗಿಟ್ಟುಕೊಂಡು ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತದೆಂದು ಹೇಳಿದ್ದಾರೆ. ಬಹಳ [illegible]ದಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ ಬಿಜಾಪುರದ ನನ್ನ ಮತಕ್ಷೇತ್ರದ ನಗರ ಹಾ[illegible]ಣ ಪ್ರದೇಶಗಳಲ್ಲಿ ಹೊಸ ಸರ್ಕಾರಿ ಪದವಿಪೂರ್ವ ಹಾಗೂ ಪ್ರೌಢಶಾಲೆಗಳನ್ನು ತೆ[illegible]ಷ್ಟು ಬೇಗನೆ ಈ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಮಂಜ[illegible]ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ಈಗಾ[illegible]ಪುರ ಜಿಲ್ಲೆಯಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಬೇಕು, ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಈಗಾಗಲೇ ಒತ್ತಡ ಇದೆಯೆನ್ನುವ ಪ್ರಸ್ತಾವ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಅಧಿವೇಶನ ಆದ ನಂತರ ಪರಿಶೀಲನೆ ಮಾಡಿ, ಚರ್ಚೆ ಮಾಡಿ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಆರ್. ಧ್ರುವನಾರಾಯಣ (ಸಂತೇಮರಹಳ್ಳಿ) : ಮಾನ್ಯ ಅಧ್ಯಕ್ಷರೆ, ಪದವಿಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ನಮ್ಮ ಎಲ್ಲಾ ಭಾಗದಲ್ಲಿ ಕೂಡ ಶಾಲೆಗಳ ಕೊಠಡಿ ಮತ್ತು ಪೀಠೋಪಕರಣಗಳ ಕೊರತೆ ಬಹಳಷ್ಟು ಇದೆ. ಬಹುತೇಕ ಕೊಠಡಿಗಳ ಸಮಸ್ಯೆಯಿಂದ ಈ ಪ್ರೌಢಶಾಲೆಗಳಲ್ಲಿ ಪಡಸಾಲೆಯಲ್ಲಿ ಕುಳಿತುಕೊಂಡು, ಮರದ ನೆರಳಿನಲ್ಲಿ ಕುಳಿತುಕೊಂಡು ವಿದ್ಯಾಭ್ಯಾಸ ಮಾಡತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಅದರ ಜೊತೆಗೆ 10ನೇ ಕ್ಲಾಸಿನ 9ನೇ ಕ್ಲಾಸಿನಲ್ಲಿ ಓದತಕ್ಕಂಥ ಹೆಣ್ಣುಮಕ್ಕಳು ನೆಲದ ಮೇಲೆ ಕುಳಿತು ಪಾಠ ಕೇಳತಕ್ಕಂಥದ್ದು ಇದೆ. ಪೀಠೋಪಕರಣಗಳು ಮತ್ತು ಶಾಲಾ ಕೊಠಡಿಗಳ ಸಮಸ್ಯೆಯಂತೂ ಬಹಳಷ್ಟಿದೆ. ದಯಮಾಡಿ ಅ[illegible] ಅನುದಾನವನ್ನು ತಾವು ಬಿಡುಗಡೆ ಮಾಡಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿ[illegible]ನೆ.

0500-9

ಶ್ರೀ ಹೆಚ್. ನಿಂಗಪ್ಪ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳಷ್ಟು ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೊಠಡಿಗಳು ಇಲ್ಲ ಮತ್ತು ಶೌಚಾಲಯಗಳು ಸಹ ಇಲ್ಲ. ಕೆಲವು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕೂಡ ಸರಿಯಾಗಿಲ್ಲ ಆದ್ದರಿಂದ, ಅದರ ಬಗ್ಗೆ ಮಾನ್ಯ ಸಚಿವರು ತೀವ್ರವಾದ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ನಿಜ. ಅನೇಕ ಶಾಲೆಗಳಲ್ಲಿ ಮೂಲಭೂತವಾದ ಸೌಲಭ್ಯಗಳಿಲ್ಲ. ಆದ್ದರಿಂದ ಈ ಸಲ ಏನು ಮಾಡಿದ್ದೇವೆಂದರೆ, ಹಣಕಾಸಿನ ಲಭ್ಯತೆ ಎಷ್ಟಿದೆ, ಯಾವ್ಯಾವುದಕ್ಕೆ priority ಮೇಲೆ ಮಾಡಬೇಕೆನ್ನುವ ಸಮಗ್ರವಾದ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ತರಿಸಿದ್ದೇವೆ. ಮಾಹಿತಿ ತರಿಸಿ ಎಲ್ಲೆಲ್ಲಿ ಕನಿಷ್ಠ ಸೌಲಭ್ಯ ಹೊಂದಿಲ್ಲದಂಥ ಶಾಲೆಗಳ ಬಗ್ಗೆ ಏನು ಮಾನ್ಯ ಸದಸ್ಯರು ಹೇಳಿದರು, ಹೆಣ್ಣುಮಕ್ಕಳು ಅಲ್ಲಿ ಗಿಡದ ಕೆಳಗಡೆ ಕುಳಿತುಕೊಳ್ಳುವುದನ್ನು ನೀಡಿದ್ದೇವೆ ಎಂದು ಅದೆಲ್ಲವನ್ನೂ ಈ ಸಲ ಸಮಗ್ರವಾದ ಚಿತ್ರಣವನ್ನು ತೆಗೆದು ಎಲ್ಲಿ ಕನಿಷ್ಠ ಸೌಲಭ್ಯಗಳಿಲ್ಲ ಅಲ್ಲಿಗೆ top priority ಕೊಟ್ಟು ಮಾಡುತ್ತೇವೆ. ಆನಂತರ ಪ್ರೌಢಶಾಲೆಗಳಿಗೆ particular ಆಗಿ ಹೆಣ್ಣುಮಕ್ಕಳ ಶಾಲೆಗಳೇನಿವೆ, ಅಲ್ಲಿಗೆ ಶೌಚಾಲಯವನ್ನು ಮಾಡಲಿಕ್ಕೆ RDPR Department ನ ಸಹಯೋಗದೊಂದಿಗೆ 23 ಸಾವಿರ ಶಾಲೆಗಳಿಗೆ ಶೌಚಾಲಯದ ವ್ಯವಸ್ಥೆಯನ್ನು ಮಾಡಿದ್ದೇವೆ. ನೀರಿನ ವ್ಯವಸ್ಥೆಗೆ, ಮಳೆ ಕೊಯ್ಲನ್ನು ಮಾಡಿ ನೀರನ್ನು ಅಲ್ಲಿ ಇಂಗುವಂತೆ ವ್ಯವಸ್ಥೆ ಮಾಡಿದೆ. ಅಲ್ಲಿ ಆಗದಿದ್ದರೆ, ಏನು ಊರಿಗೆ ಯಾವ ನೀರಿನ ಸೌಲಭ್ಯವಿದೆ, ಅಲ್ಲಿಂದ ನೇರವಾದಂಥ ಪೈಪನ್ನು ಹಾಕಿ ಅದಕ್ಕೆ ನೀರಿನ ಸೌಲಭ್ಯವನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಲಿಕ್ಕೆ ಕೂಡ ಸಾಕಷ್ಟು ಪ್ರಗತಿಯಲ್ಲಿ ಅವೆಲ್ಲಾ ಕೆಲಸಗಳು ನಡೆಯುತ್ತಿವೆ. ಏಪ್ರಿಲ್, ಮೇ ತಿಂಗಳಿನಲ್ಲಿ ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಮಾಡಿ ಕನಿಷ್ಠ ಸೌಲಭ್ಯಗಳನ್ನು ಹೊಂದಿಲ್ಲದ ಯಾವ ಶಾಲೆಗಳು ಇವೆ, ಅವುಗಳಿಗೆ ಮೊದಲನೇ priority ಕೊಟ್ಟು ಮಾಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಹೆಚ್. ನಿಂಗಪ್ಪ : ಯಾವ ಅವಧಿಯೊಳಗಾಗಿ ಅದನ್ನು ಮಾಡಿಕೊಡಲಾಗುವುದು ಎಂಬುದನ್ನು ಹೇಳಬೇಕು.

ಅಧ್ಯಕ್ಷರು : [illegible]ಕು ಈ ಪ್ರಶ್ನೆ ಮುಗಿದಿದೆ.

ಕಾವೇರಿ [illegible]ದ ನ್ಯಾಯಾಧಿಕರಣದ ಕಲಾಪಕ್ಕೆ ಸಂಬಂಧಪಟ್ಟಂತೆ [illegible]ವಿಗಳನ್ನು ಬದಲಾವಣೆ ಮಾಡುವ ಬಗ್ಗೆ.

17 (150) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾವೇರಿ ನ್ಯಾಯಮಂಡಳಿಯ ತೀರ್ಪು ಯಾವಾಗ ಹೊರಬೀಳಬಹುದೆಂದು ಸರ್ಕಾರವು ನಿರೀಕ್ಷಿಸಿದೆ;

0500-9 *

ಆ) ಕಾವೇರಿ–ಕೃಷ್ಣಾ ಸಂಬಂಧ ರಾಜ್ಯದ ಪರವಾಗಿ ವಾದಿಸುತ್ತಿರುವ ವಕೀಲರುಗಳನ್ನು ಬದಲಾಯಿಸಲು ಸರ್ಕಾರ ಯೋಚಿಸುತ್ತಿದೆಯೇ:

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಕಾವೇರಿ ಜಲವಿವಾದ ನ್ಯಾಯಾಧಿಕರಣದಲ್ಲಿ ಕಲಾಪವು ಅಂತಿಮ ಘಟ್ಟದಲ್ಲಿದೆ. ತಮಿಳುನಾಡು ರಾಜ್ಯವು ತನ್ನ ಅಂತಿಮ ವಾದ ಮಂಡನೆಯನ್ನು ಪೂರ್ಣಗೊಳಿಸಿದೆ. ಈಗ ರಾಜ್ಯದ ಪರವಾಗಿ ಅಂತಿಮ ವಾದ ಮಂಡನೆಯು ಪ್ರಗತಿಯಲ್ಲಿದ್ದು, ಮುಕ್ತಾಯದ ಹಂತದಲ್ಲಿದೆ. ಕೇಂದ್ರ ಸರ್ಕಾರವು ಕಾವೇರಿ ನ್ಯಾಯಾಧಿಕರಣದ ಅವಧಿಯನ್ನು ದಿ:05.08.2006ರವರೆಗೆ ವಿಸ್ತರಿಸಿದೆ. ಈ ದಿನಾಂಕದೊಳಗೆ ನ್ಯಾಯಾಧಿಕರಣದ ಅಂತಿಮ ತೀರ್ಪು ಹೊರಬರುವ ನಿರೀಕ್ಷೆಯಿದೆ.

ಆ) ಇದೂವರೆವಿಗೂ ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಈ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ನ್ಯಾಯವಾದಿಗಳನ್ನು ಬದಲಾವಣೆ ಮಾಡುತ್ತೇವೆಂದು ಮಾನ್ಯ ಜಲಸಂಪನ್ಮೂಲ ಸಚಿವರು ಹೇಳಿರುವುದು ಇತ್ತೀಚೆಗೆ ಕೆಲವು ಕಡೆ ಪತ್ರಿಕೆಗಳಲ್ಲಿ ಬಂದಿತ್ತು. ನಾನು ಅದಕ್ಕೆ ತಕ್ಷಣ ಪ್ರಶ್ನೆಯನ್ನು ಕಳುಹಿಸಿ ಅವರಿಂದ ಉತ್ತರ ಪಡೆಯುವ ಹಾಗೆ ಮಾಡಿದೆ, ಹೊಸ ಸರ್ಕಾರ ಬಂದ ಮೇಲೆ ಕೃಷ್ಣಾ, ಕಾವೇರಿ ಬಗ್ಗೆ ಏನು ನಮ್ಮ ನ್ಯಾಯವಾದಿಗಳ ತಂಡದ ಸಾರಥ್ಯ ವಹಿಸಿರತಕ್ಕಂಥ ಶ್ರೀ ನಾರಿಮನ್‌ರವರನ್ನು ತಾವು ಮುಂದುವರಿಸುತ್ತೀರಾ ಅಥವಾ ಬಿಡುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗಾಗಲೇ ಅವರು 1990ನೇ ಇಸವಿಯಿಂದ ಇಲ್ಲಿಯವರೆಗೂ ಕಾವೇರಿ, ಕೃಷ್ಣಾ ಸಂಬಂಧ ಸಮಗ್ರವಾಗಿ ನಮಗೆ ಕಷ್ಟ ಬಂದಾಗಲೆಲ್ಲಾ, ನಾವು ಸಮುದ್ರದಲ್ಲಿ ಮುಳುಗುವಾಗಲೆಲ್ಲಾ, ಅವರು ನಮಗೆ ಸಹಾಯ ಮಾಡಿದ್ದಾರೆ, ನಮ್ಮನ್ನು ಮೇಲೆತ್ತಿದ್ದಾರೆ. ಎಲ್ಲಾ ರೀತಿಯ ಸಮರ್ಥವಾದಂಥ ವಾದವನ್ನು ಮಾಡಿದ್ದಾರೆ. ಈಗ 'ನಾವು ಮುಂದುವರಿಯಬೇಕೇ ಅಥವಾ ಬೇಡವೆ ಎನ್ನುವ ಬಗ್ಗೆ ಸರ್ಕಾರಕ್ಕೆ ಪತ್ರವನ್ನು ಅವರು ಬರೆದಿದ್ದಾರೆ. ಇದು ರಾಜಕೀಯವಾದ ಪ್ರಶ್ನೆ ಅಲ್ಲ, ಸರ್ಕಾರದಿಂದ ಪ್ರಾಮಾಣಿಕವಾಗಿ ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಏನು ಮಾಡಬೇಕೆಂದುಕೊಂಡಿದ್ದೀರಿ ಎನ್ನುವುದನ್ನು ಜವಾಬ್ದಾರಿಯಿಂದ ಹೇಳಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ವಕೀಲರನ್ನು ಬದಲಾವಣೆ ಮಾಡುವ ಯೋಚನೆ ಇವತ್ತಿನವರೆಗೂ ಸಹ ಸರ್ಕಾರದ ಮುಂದಿಲ್ಲ; ಪತ್ರಿಕೆಯಲ್ಲಿ ಬಂದಿದೆ ಎಂದು ತಾವು ಹೇಳುತ್ತಿರುವುದು ಸತ್ಯ. ಒಂದು ಪತ್ರಿಕೆಯಲ್ಲಿ ಅದು ಬಂದಿದೆ. ಆದರೆ, ನಾನು ಹೇಳಿದ ಅಂಶವೇ ಬೇರೆ, ಆ ಪತ್ರಿಕೆಯಲ್ಲಿ ಬಂದಂಥ ವರದಿಯೇ ಬೇರೆ. ಈ ನಿಮಿಷದ ತನಕವೂ ಕೂಡ ರಾಜ್ಯ ಸರ್ಕಾರದಲ್ಲಿ ನಾವು ಈ ದಿಕ್ಕಿನಲ್ಲಿ ವಕೀಲರನ್ನು ಬದಲಾವಣೆ ಮಾಡುವಂಥ ಯೋಚನೆಯನ್ನು ಮಾಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್) : ಮಾನ್ಯ ಅಧ್ಯಕ್ಷರೆ, ವಕೀಲರನ್ನು ಬದಲಾವಣೆ ಮಾಡತಕ್ಕಂಥ ಪ್ರಶ್ನೆ ಇಲ್ಲವೆಂದಾಗ, Advocates usually ಏನು ಮಾಡುತ್ತಾರೆಂದರೆ, ಸರ್ಕಾರ ಬದಲಾವಣೆಯಾಗಿ ಹೊಸ ಸರ್ಕಾರ ಬಂದಾಗ ಅವರು 'ನಾವು ಮುಂದುವರಿಯಬೇಕೇ ಅಥವಾ ಬೇಡವೇ?' ಎಂದು ಪುನಃ ಪತ್ರ ಬರೆದು ಕೇಳುತ್ತಾರೆ. ಈಗ ಅವರು ಕೇಳಿಕೊಂಡಿದ್ದಾರೆ. ಈಗ ಅವರು ರಾಜೀನಾಮೆ ಕೊಟ್ಟುಬಿಟ್ಟಿದ್ದಾರೆ ಅಥವಾ ಬರೆದುಬಿಟ್ಟಿದ್ದಾರೆ ಎಂದರೆ ಸರ್ಕಾರದ ಕರ್ತವ್ಯವೇನು? ಅವರು ಮುಂದುವರಿಯಬೇಕೆಂದರೆ ತಕ್ಷಣ 'ನೀವು continue ಮಾಡಿ' ಎನ್ನುವ ಪತ್ರ ಅವರಿಗೆ ಹೋಗಬೇಕು. ಶ್ರೀ ನಾರಿಮನ್ ಇರಬಹುದು, ಶ್ರೀ ಜವಳಿ ಇರಬಹುದು, ಶ್ರೀ ಕಾತರಕಿ ಇರಬಹುದು, ಶ್ರೀ ಅನಿಲ್ ದಿವಾನ್ ಇರಬಹುದು ಇವರಿಗೆ ಸರ್ಕಾರದಿಂದ ಪತ್ರ ಹೋಗಬೇಕು. ಏಕೆಂದರೆ, ಕಾವೇರಿ ವಿಚಾರವನ್ನು ಸಹ ನೋಡಿಕೊಳ್ಳುತ್ತಿದ್ದಾರೆ, ಕೃಷ್ಣಾ ನದಿ ನೀರಿನ ವಿಚಾರವನ್ನು ಸಹ ಅವರೇ ನೋಡಿಕೊಳ್ಳುತ್ತಿದ್ದಾರೆ. ಕೃಷ್ಣಾದ 2ನೇ tribunal ಕೂಡ ಈಗ constitute ಆಗಿ ಇರುವುದಕ್ಕೆ ತಕ್ಷಣ ನಾವು consent ಕೊಡದೇ ಹೋದರೆ ಅಲ್ಲಿ vacuum ಆಗುತ್ತದೆ. ನಾಳೆ ಯಾವುದೋ ಒಂದು interim application ಬರಲಿ, ಏನೇ ಬರಲಿ, ಅದನ್ನು ಎಲ್ಲಿ serve ಮಾಡಬೇಕು. ಯಾರು ಆ notice ತೆಗೆದುಕೊಳ್ಳಬೇಕು? ಅದಕ್ಕೆ ದಯವಿಟ್ಟು ತಕ್ಷಣ ಇದಕ್ಕೆ ತಾವು act ಮಾಡಬೇಕು ಮತ್ತು appoint ಮಾಡಬೇಕು. ಅವರನ್ನು ಮುಂದುವರಿಸುವುದಾದರೆ ಮುಂದುವರಿಸಿ. ನಮ್ಮ ಅನಿಸಿಕೆ ಏನೆಂದರೆ, ಇಲ್ಲಿಯವರೆಗೆ ಬಹಳ ಒಳ್ಳೆಯ ರೀತಿಯಿಂದ ಅವರು ಕೆಲಸ ಮಾಡಿದ್ದಾರೆ ಎನ್ನುವ ಅಭಿಪ್ರಾಯವಿದೆ. ನಾವು ಅನೇಕ ಸಾರಿ, ತಮಗೂ ಗೊತ್ತಿದೆ. ವಿರೋಧ ಪಕ್ಷದವರು, ಹಿಂದೆ ಇದ್ದಂಥ ಸರ್ಕಾರದವರು ಸೇರಿದಾಗಲೂ ಕೂಡ ಅವರ ಬಗ್ಗೆ ಸಾಕಷ್ಟು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅಂಥ ಸಂದರ್ಭದಲ್ಲಿ ನಾವು ಅವರನ್ನು ಮುಂದುವರಿಸತಕ್ಕಂಥದ್ದು ಉತ್ತಮ ಆಗುತ್ತದೆ ಮತ್ತು ತಾವು ಈ ತಕ್ಷಣ ಅದಕ್ಕೆ consent ಕೊಟ್ಟು 'ನೀವು ಮುಂದುವರಿಯಿರಿ' ಎಂದು ಹೇಳತಕ್ಕಂಥದ್ದು ಬಹಳ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಕೂಡ ಬಂದಿದೆ. ನಮ್ಮ ಅಡ್ವೋಕೇಟ್ ಜನರಲ್ ಆದಂಥ ಮಾನ್ಯ ನರಸಿಂಹಮೂರ್ತಿಯವರು, ಅವರ ಬಗ್ಗೆ ನಮ್ಮ ತಕರಾರು ಇಲ್ಲ, ವಾದ ಮಾಡುತ್ತಾರೆ. He is one of the effective ಪರ್ಸನ್ ಆಗಿ ಮೊದಲೆ ಅಡ್ವೋಕೇಟ್ ಜನರಲ್ ಆಗಿ ಕೆಲಸ ಮಾಡಿದ್ದಾರೆ. ಅವರೂ ಕೂಡ ಪತ್ರಿಕೆಯಲ್ಲಿ ಹೇಳಿದ್ದಾರೆ. ಈಗಾಗಲೇ ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ, 1983 ರಿಂದ ಮಾನ್ಯ ನಾರಿಮನ್‌ರವರು ಈ ರಾಜ್ಯದ ನೀರಾವರಿ ಸಮಸ್ಯೆಗಳಿಗೆ ಬಹಳ ಯಶಸ್ವಿಯಾಗಿ ಪ್ರತಿಪಾದನೆ ಮಾಡಿದ್ದಾರೆ. ನಮ್ಮ ಸಮ್ಮಿಶ್ರ ಸರಕಾರ ಇದ್ದಂಥ ಸಂದರ್ಭದಲ್ಲಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಕೂಡ ನೀರಾವರಿ ಮಂತ್ರಿಗಳಾಗಿದ್ದರು. ಒಂದು ಅಫಿಡವಿಟ್ ಹಾಕತಕ್ಕಂಥ ರೀತಿಯಲ್ಲಿ ಕಾವೇರಿ ವಿಚಾರದಲ್ಲಿ

ಸ್ವಲ್ಪ ಗೊಂದಲವಾಯಿತು. ಅದರಲ್ಲಿ ನಾನು ಖುದ್ದಾಗಿ ಹೋಗಿ ಮಾನ್ಯ ನಾರಿಮನ್‌ರವರನ್ನು ಬೆಟ್ಟಿಯಾದೆ. It is very difficult to meet Nariman. With all that,............ ನಾನು ಮತ್ತು ನಮ್ಮ ಆಗಿನ ಪ್ರಿನ್ಸಿಪಲ್ ಸೆಕ್ರೆಟರಿಯಾದಂಥ ರಂಗನಾಥ್‌ರವರು ಬೆಟ್ಟಿಯಾದೆವು. ಮಾಜಿ ಪ್ರಧಾನಿಗಳ ಹಾಗೂ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವೇಗೌಡರವರು ಹೇಳಿದರು. ನಮ್ಮಿಂದ ಏನೇ ತಪ್ಪಾಗಿರಬಹುದು ನಾರಿಮನ್‌ನವರು ನಮ್ಮ ಪರವಾಗಿ ವಾದ ಮಾಡಲಿಕ್ಕೆ ತಯಾರಿಲ್ಲ. We have to persuade. ಅಂತ ಹೇಳಿದರು. ಗೌರಿ ಹಬ್ಬ ಇತ್ತು, ಆ ದಿವಸ ನಾನು ಮುಂಜಾನೆ ಹೋಗಿ, What happened to your State Government? I know Devegowda very well. What is the matter? Upto date tell me ಎಂದೆ ಹೀಗಾಗಿದೆ, Sir this is a State's interest. Right from begining, you are arguing on behalf of Karnataka Government. ಆದ್ದರಿಂದ ತಾವು ಹಾಗೆ ಮಾಡಬಾರದೆಂದು ಹೇಳಿ ಅವರ ಮನವೊಲಿಸಿದೆವು. ಇವತ್ತು ಪತ್ರಿಕೆಯಲ್ಲಿ ಏನು ಬರುತ್ತಿದೆ, ನಾನು ಮಾನ್ಯ ಈಶ್ವರಪ್ಪನವರಿಗೆ ಹೇಳುತ್ತಿದ್ದೇವೆ, ನಿಗಮ–ಮಂಡಳಿಗಳ ಬದಲಾವಣೆ ತರಹ ಇದು ಬದಲಾವಣೆಯಾಗಲಿಕ್ಕೆ ಸಾಧ್ಯವಿಲ್ಲ. ನೀವು ಬೇರೆ ಬೇರೆ ತಾಲ್ಲೂಕು ಘಟಕಗಳ, ರಾಜ್ಯ ಘಟಕಗಳ ಸಮಿತಿಗಳನ್ನು ಬದಲಾವಣೆ ಮಾಡತಕ್ಕಂಥ ರೀತಿ ಇದು ಮಾಡುವುದಕ್ಕೆ ಬರುವುದಿಲ್ಲ. Because, you need an expert. ಒಂದು ವೇಳೆ ನಾರಿಮನ್‌ರವರು, ಆವಾಗಲೇ ಅಫಿಡೆವಿಟ್ ಸಲುವಾಗಿ ಅವರು ವಾದ ಮಾಡಲಿಕ್ಕೆ ತಯಾರಾಗಲಿಲ್ಲ. ಈ ಪತ್ರಿಕೆಯಲ್ಲಿ ಬಂದಿದ್ದು ಅಲ್ಲಿ ಕೂಡ ಬರುತ್ತಿದೆ, ನೋಡುತ್ತಾರೆ, ಮುಖ್ಯಮಂತ್ರಿಯವರು ಸದನದಲ್ಲಿ ಇದ್ದಾರೆ, ಇಂಥ ಒಬ್ಬ ಮೇಧಾವಿ ವಕೀಲರು ಕರ್ನಾಟಕದ ಪರವಾಗಿ ಸಾಕಷ್ಟು ನಮ್ಮ ರಕ್ಷಣೆಗೆ ಬಂದಿದ್ದಾರೆ, ವಾದ ಮಾಡಿದ್ದಾರೆ. If Nariman enters in the Supreme Court, ಒಂದು ಸೈಕಾಲಜೀಕಲ್ ಆಗಿ ಅವರು ಒಳ್ಳೆಯ ವಾತಾವರಣ ನಿರ್ಮಾಣ ಮಾಡತಕ್ಕಂಥ ವ್ಯಕ್ತಿ. ಇವತ್ತು ನಮ್ಮ ಮಾನ್ಯ ಈಶ್ವರಪ್ಪನವರಿಗೆ ಬಹಳ ಮಹತ್ವವಾದಂಥ ಖಾತೆ ಸಿಕ್ಕಿದೆ. ಪತ್ರಿಕೆಯಲ್ಲಿ ಬಂದಂತೆ ಬೇರೆ ಕಡೆಗೆ ತೆಗೆದು ಹಾಕುತ್ತೇವೆ ಎಂದರೆ you need experts. ಯಾವುದೇ ಸಮನ್ ಬರಲಿ ಯಾವುದೇ ಇರಲಿ, ಅದಕ್ಕೆ ಇಲ್ಲಿ ಇವತ್ತು ತಾವು ಇದ್ದೀರಿ, ಕಾನೂನು ಮಂತ್ರಿಗಳು ಇದ್ದೀರಿ, ಖಡಾಖಂಡಿತವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಪೀಲ್ ಮಾಡುತ್ತಿದ್ದೇನೆ, ಈ ತರಹದ ವಿಚಾರ ಪತ್ರಿಕೆಗಳಲ್ಲಿ ಬರಬಾರದು. ಈ ರೀತಿ ಪತ್ರಿಕೆಯಲ್ಲಿ ಬಂದರೆ, ಗೊಂದಲವಾಗುತ್ತದೆ. ಮತ್ತು ನಾರಿಮನ್‌ರವರಿಗೂ ಕೂಡ ಹರ್ಟ್ ಆಗುತ್ತದೆ. ಅದಕ್ಕೆ ಇವತ್ತು ತಮ್ಮ ನಿಲುವು ಸ್ಪಷ್ಟವಾಗಿ ಏನಿದೆ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಅಡ್ವೋಕೇಟ್ ಜನರಲ್ ಆದಂಥ ಶ್ರೀ ನರಸಿಂಹಮೂರ್ತಿಯವರು ಫೆಬ್ರವರಿ 27ನೇ ತಾರೀಖು ಒಂದು ಪತ್ರ ಬರೆದಿದ್ದಾರೆ. ಆ ಪತ್ರ ಬರೆದಿರತಕ್ಕಂಥದ್ದು ಏನೆಂದರೆ, ನಾರಿಮನ್‌ರವರು, ರಾಜ್ಯ ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದಾರೆ.

ಏನೆಂದರೆ, ಸರ್ಕಾರ ಬದಲಾವಣೆಯಾದ ಮೇಲೆ ನಾನು ಮುಂದುವರಿಯಬೇಕೇ ಬೇಡವೇ ಎನ್ನುವುದಕ್ಕೆ ಪುನಃ [illegible] ಆದೇಶ ಹೊರಡಿಸಬೇಕಾಗಿರತಕ್ಕಂಥ ಒಂದು ಪರಿಸ್ಥಿತಿ ಬರಬಹುದು, ಅದರ ಬಗ್ಗೆ ತಮ್ಮ [illegible]ನು ಎಂಬುದನ್ನು ಸ್ಪಷ್ಟಪಡಿಸಿ ಎಂದು ಮಾನ್ಯ ನಾರಿಮನ್‌ರವರು ರಾಜ್ಯ ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರವನ್ನು ನಮ್ಮ ರಾಜ್ಯದ ಅಡ್ವೋಕೇಟ್ ಜನರಲ್ ನರಸಿಂಹಮೂರ್ತಿಯವರಿಗೆ ಸರ್ಕಾರ ತಲುಪಿಸಿದೆ. ಆದರೆ ಅವರು ಅದರಲ್ಲಿ ಬಹಳ ಮುಖ್ಯವಾದ ಎರಡು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ನಿಮ್ಮ ಸರ್ಕಾರದ ಮುಂದೆ ಎರಡೇ ದಾರಿಗಳು ಇರುವುದು. ಇದು ನಮ್ಮ ಪ್ರಕಾರ ಅಲ್ಲ, ಮಾನ್ಯ ನರಸಿಂಹಮೂರ್ತಿಯವರು ಹೇಳುವ ಪ್ರಕಾರ, ಮೊದಲನೇಯದಾಗಿ, ನಾರಿಮನ್ ನೇತೃತ್ವದ ತಂಡವನ್ನು ಮುಂದುವರಿಸತಕ್ಕಂಥಾದ್ದು, ಇಲ್ಲವೆಂದರೆ, ಬದಲಾವಣೆ ಮಾಡುವುದಾದರೆ, ಕೃಷ್ಣಾ ನ್ಯಾಯಾಧೀಕರಣದ ಮುಂದೆ ವಾದ ಮಾಡತಕ್ಕಂಥ ವಕೀಲರ ತಂಡದ ನಾಯಕತ್ವವನ್ನು ನಾನು ವಹಿಸಬೇಕು. ನಾನು ಸುಮ್ಮನೆ ಹೋಗಿ ನಾರಿಮನ್ ಪಕ್ಕದಲ್ಲಿ ಕುಳಿತು ಫೀ ತೆಗೆದುಕೊಳ್ಳಲಿಕ್ಕೆ ತಯಾರಿಲ್ಲವೆಂದು ನರಸಿಂಹಮೂರ್ತಿಯವರು ಸರ್ಕಾರಕ್ಕೆ ತಿಳಿಸಿದ್ದಾರೆ. ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯದ ಪ್ರಕಾರ, ಅವರ ವಾದ ಸರಿ. ಏಕೆಂದರೆ, ಒಬ್ಬರು ಸೀನಿಯರ್ ಆದಂಥ ಲಾಯರ್ ಆ ರೀತಿ ಹೇಳತಕ್ಕಂಥದ್ದು ಸಹ್ಯ. ಆದರೆ ಇವತ್ತು ನಮ್ಮ ರಾಜ್ಯದ ವಸ್ತುಸ್ಥಿತಿಯಲ್ಲಿ ನಾವೇನು ಆಲೋಚನೆ ಮಾಡಬೇಕೆಂದರೆ, ಸುಮಾರು 16 ವರ್ಷಗಳಿಂದ ನಾರಿಮನ್‌ರವರು ಕರ್ನಾಟಕದ ಪರವಾಗಿ ಸಮರ್ಥವಾದಂಥ ವಾದವನ್ನು ಮಂಡಿಸಿದ್ದಾರೆ. ಈಗ ತಾನೇ ಕಾವೇರಿ ನ್ಯಾಯಮಂಡಳಿಯ ವಾದ ಮತ್ತು ಕೃಷ್ಣಾ ನದಿಯ ವಿಚಾರದಲ್ಲೂ ಕೂಡ ರಾಜ್ಯಕ್ಕೆ ಅನುಕೂಲವಾಗುವಂಥ, ಅನುಕೂಲವಾಗತಕ್ಕಂಥ, ಆಗಬಹುದಾದಂಥ, ರೀತಿಯಲ್ಲಿ ವಾದವನ್ನು ಮಂಡಿಸಿದ್ದಾರೆ. ನ್ಯಾಯಾಧೀಕರಣಕ್ಕಾಗಲಿ ಅಥವಾ ತಮಿಳುನಾಡು ಸರ್ಕಾರಕ್ಕಾಗಲಿ, ಆಂಧ್ರಪ್ರದೇಶ ಸರ್ಕಾರಕ್ಕಾಗಲಿ, ನಾರಿಮನ್‌ರವರ ವಾದವನ್ನು ತಿರಸ್ಕಾರ ಮಾಡಲಿಕ್ಕೆ ಆಗಲಿ ಅಥವಾ ನಿರಾಕರಣೆ ಮಾಡಲಿಕ್ಕೆ ಸಾಧ್ಯ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಾರಿಮನ್‌ರವರು ಈಗ ಸೃಷ್ಟಿ ಮಾಡಿದ್ದಾರೆ. ಅಂದರೆ, ಹೆಚ್ಚು ಕಡಿಮೆ ನಮಗೆ ಅನುಕೂಲ ಆಗತಕ್ಕಂಥ ರೀತಿಯಲ್ಲಿ ಇರುವ ಈ ಸಂದರ್ಭದಲ್ಲಿ ನಾರಿಮನ್ ನಾಯಕತ್ವದ ತಂಡವನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಬಾರದು, ಅದು ಆಗುವುದಿಲ್ಲವೆಂದು ಸ್ಪಷ್ಟವಾದ ನಿರ್ದೇಶನವನ್ನು ಸರ್ಕಾರ ನೀಡಬೇಕಾಗುತ್ತದೆ. ಅದನ್ನೇನಾದರೂ ನೀಡಲಿಲ್ಲವೆಂದರೆ, ಈ ಗೊಂದಲಗಳಿಗೆ ಏನಾದರೂ ಎಡೆ ಮಾಡಿ ಕೊಟ್ಟರೆ, ನಮ್ಮ ರಾಜ್ಯದ ಹಿತವನ್ನು ನಾವು ಸಂಪೂರ್ಣವಾಗಿ ಕಳೆದುಕೊಳ್ಳುತ್ತೇವೆ. ಏಕೆಂದರೆ ಮಾನ್ಯ ನಾರಿಮನ್‌ರವರಂಥ ಒಬ್ಬ ಪ್ರತಿಭಾವಂತ ವಕೀಲರು ಅದರಲ್ಲೂ ಪ್ರತ್ಯೇಕವಾಗಿ ನೀರಾವರಿ ವಿಚಾರದಲ್ಲಿ ಅವರು ಮಂಡಿಸತಕ್ಕಂಥ ವಾದಗಳನ್ನು ನಾವು ಗಮನಿಸುತ್ತಿದ್ದೇವೆ. ಬಹುಶಃ ಅವರಿಗಿಂತ ಉತ್ತಮವಾದ ವಾದವನ್ನು ಮಂಡಿಸಲಿಕ್ಕೆ ನಮ್ಮ ರಾಜ್ಯದ ಹಿತವನ್ನು ಕಾಯಲಿಕ್ಕೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ, ಈ ಸರ್ಕಾರ ಸ್ಪಷ್ಟವಾದಂಥ ತೀರ್ಮಾನವನ್ನು ತೆಗೆದುಕೊಂಡು ನಾರಿಮನ್ ನೇತೃತ್ವದ ತಂಡವನ್ನೇ ಮುಂದುವರಿಸಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಮಧ್ಯೆ ನಾನು ಮತ್ತೊಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಮತ್ತೆ ಆಲಮಟ್ಟಿಗೆ ಸಂಬಂಧಪಟ್ಟಂತೆ ಮಹಾರಾಷ್ಟ್ರದ ತಕರಾರು ಅರ್ಜಿ ಬರುತ್ತಿದೆ. ಅದು ಈ ನ್ಯಾಯಾಧೀಕರಣದ ಮುಂದೆ ಬರುವ ಸೂಚನೆ ಇದೆ. ಈ ಸಂದರ್ಭದಲ್ಲಿ ಇದರ ಬಗ್ಗೆ ಅಮೋಘವಾದಂಥ ವಾದವನ್ನು ಮಂಡಿಸಿ ಕರ್ನಾಟಕ ರಾಜ್ಯಕ್ಕೆ ಅನೇಕ ಸಂದರ್ಭದಲ್ಲಿ, ನಮ್ಮನ್ನು ಕಷ್ಟದಲ್ಲಿ ಪಾರು ಮಾಡಿರತಕ್ಕಂಥ ನಾರಿಮನ್‌ರವರನ್ನು ಮುಂದುವರಿಸುವ ಬಗ್ಗೆ ಒಂದು ತಿಂಗಳಾದರೂ ನೀವು ಇದರ ಬಗ್ಗೆ ಅವರಿಗೆ ಯಾವ ವಿಧವಾದಂಥ ಸೂಚನೆಯನ್ನೂ ಕೊಟ್ಟಿಲ್ಲ. ಈಗ ಅವರು ಮುಂದುವರಿಯಬೇಕೇ ಬಿಡಬೇಕೆ? ಈ ವಾರ ಅಥವಾ [illegible] ವಾರದಲ್ಲಿ ಇದು ಬರುತ್ತಿದೆ. ಮಹಾರಾಷ್ಟ್ರದ ತಕರಾರು ಅರ್ಜಿ ನ್ಯಾಯ ಮಂಡಳಿಯಲ್ಲಿ [illegible] ವಾರ ಬರುತ್ತಿದೆ, ಬಂದಾಗ ವಾದವನ್ನು ಯಾರು ಮಾಡಬೇಕು? ಇದನ್ನು ಸಮರ್ಥವಾಗಿ [illegible]ವರು ಯಾರು? ಇದರ ಬಗ್ಗೆ ಇಲ್ಲಿ ತಾವು ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ [illegible] ಎಲ್ಲಾ ಸರ್ವ ವಿರೋಧ ಪಕ್ಷಗಳನ್ನು ಕರೆಯಬೇಕಾಗಿತ್ತು. ತಜ್ಞರ ಸಮಿತಿಯವರನ್ನು [illegible]ಕಾಗಿತ್ತು. ಹಿಂದೆ ಮುಖ್ಯಮಂತ್ರಿಗಳಾಗಿದ್ದಂಥವರು ಅನೇಕ ಸಾರಿ ಇಂಥ ಸಂದರ್ಭ ಬಂದಾಗ ತಜ್ಞರ ಸಮಿತಿಯನ್ನು ಕರೆಯುತ್ತಿದ್ದರು. ವಿರೋಧ ಪಕ್ಷಗಳ ಮುಖಂಡರುಗಳನ್ನು ಕರೆಯುತ್ತಿದ್ದರು. ಮತ್ತು ಅಲ್ಲಿ ಏನು ತೀರ್ಮಾನ ಮಾಡೋಣ ಎಂದು ಯೋಚಿಸಿ ಆ ಪ್ರಕಾರ ಮಾಡುತ್ತಿದ್ದರು. ಈಗ ಏನಾಗಿದೆ ಎಂದರೆ ನಾವು ಬಹಳ ಕತ್ತಲೆಯಲ್ಲಿ ಇದ್ದೇವೆ. ತಾವು ಮುಂದುವರಿಯಬೇಕೆ ಬಿಡಬೇಕೇ ಎನ್ನುವುದರ ಬಗ್ಗೆ ಮುಂದುವರಿಯಿರಿ ಎಂದು ಪತ್ರವೂ ಬರೆದಿಲ್ಲ. ಅವರು ನಿಮಗೆ ಪತ್ರ ಬರೆದಿದ್ದಾರೆ. ಅದು ಎಲ್ಲೋ ಒಂದು ಕಡೆಗೆ ಆ ಪತ್ರ ಗಂಭೀರವಾಗಿ ಕುಳಿತಿದೆ. ಇಲ್ಲಿ ಅಡ್ವೋಕೇಟ್ ಜನರಲ್ ಬದಲಾವಣೆ ಮಾಡಿದಿರಿ, ಸರ್ಕಾರ ಬದಲಾವಣೆಯಾಗಿದೆ. ಯಾವುದೇ ಸರ್ಕಾರಗಳು ಹಿಂದೆ ಬದಲಾವಣೆಯಾಗಿದ್ದರೂ ನಾರಿಮನ್‌ರವರು ಮಾತ್ರ ಬದಲಾವಣೆಯಾಗಿಲ್ಲ. ಅವರು ಸಮರ್ಥವಾದ ವಾದ ಮಾಡುತ್ತಾರೆಂದು ನಾವು ಅವರನ್ನು ಇಟ್ಟಿದ್ದೇವೆ. ಇವತ್ತು ಆಗಲೇ ಪತ್ರಿಕೆಯಲ್ಲಿ ಭಯ ಹುಟ್ಟುವ ರೀತಿಯಲ್ಲಿ ಅದರಲ್ಲೂ 'ಕನ್ನಡಪ್ರಭ' ದಲ್ಲಂತೂ ಬಹಳ ದೊಡ್ಡದಾಗಿ ಈ ವಿಚಾರ ಬಂದಿದೆ. ಆದುದರಿಂದ, ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೋಸ್ಕರ ಇದರಲ್ಲಿ ತಾವು ಪಕ್ಷಾತೀತವಾಗಿ ಪ್ರಾಮಾಣೀಕವಾಗಿ ಮುಖ್ಯಮಂತ್ರಿಗಳು ಇದ್ದೀರಿ, ತಾವು ಇದ್ದೀರಿ, ಕಾನೂನು ಸಚಿವರು ಇದ್ದೀರಿ, ಈ ಬಗ್ಗೆ ಸ್ಪಷ್ಟವಾದಂಥ, ನೇರವಾದಂಥ ಉತ್ತರವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಕಾನೂನು ಮತ್ತು [illegible] ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರೇನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ [illegible]ಮನ್‌ರವರನ್ನು ಯಾವುದೇ ಪರಿಸ್ಥಿತಿಯಲ್ಲಿ ಹಿಂತೆಗೆದುಕೊಳ್ಳುವ ಪ್ರಶ್ನೆಯಿಲ್ಲ, ಅವರನ್ನು [illegible]ವರಿಸುತ್ತಿದ್ದೇವೆ. ಮಾತುಕತೆ ಮಾಡಿದ್ದಾರೆ, ಚರ್ಚೆ ಎಲ್ಲಾ ಮಾಡಿದ್ದಾರೆ, ಅಡ್ವೋಕೇಟ್ [illegible]ರು ಸಹಮತಿ ವ್ಯಕ್ತಪಡಿಸಿದ್ದಾರೆ, ಇಂಥ ಪರಿಸ್ಥಿತಿಯಲ್ಲಿ ನಾರಿಮನ್‌ರವರನ್ನು ಯ[illegible]ತಿಯಲ್ಲಿ ನಾವು ಹಿಂತೆಗೆದುಕೊಳ್ಳದೇ ಅವರನ್ನು ಪುನಃ ಮುಂದುವರೆಸುತ್ತೇವೆ.

ಅಧ್ಯಕ್ಷರು : ಆಯಿತು ಈಗ ಮಾನ್ಯ ಅನಿಲ್ ಲಾಡ್‌ರವರ ಪ್ರಶ್ನೆಯನ್ನು ಕೇಳುವುದಕ್ಕೆ ಮಾನ್ಯ ರವಿ, ಅವರು ಇದ್ದಾರೆಯೇ?

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಪ್ರಶ್ನೆಗಳಿಗೆ ಉತ್ತರ ಕೊಡುವ ಬಗ್ಗೆ.

ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ : ಮಾನ್ಯ ಅಧ್ಯಕ್ಷರೆ, ತಮಗೆ ಒಂದು ಮನವಿ ಮಾಡುತ್ತೇನೆ, ಏಕೆಂದರೆ, ನಾನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ಹಸ್ತಾಂತರ ಸಂಬಂಧದಲ್ಲಿ ಪ್ರಶ್ನೆ ಕೇಳಿದ್ದೆ, ಆ ಪ್ರಶ್ನೆಯ ನಂಬರ್ 242; ನನಗೆ ಇನ್ನುವರೆಗೆ ಉತ್ತರ ಬರಲಿಲ್ಲ. ಅದಕ್ಕೆ ಅಧಿಕಾರಿಗಳು ಈ ಪ್ರಶ್ನೆಗೆ ಏಕೆ ಉತ್ತರ ಕೊಡಲಿಲ್ಲವೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಹತ್ತು ದಿವಸಗಳ ಕಾಲಾವಕಾಶ ಬೇಕೆಂದು ಕೇಳಿದ್ದಾರೆ, ಅದನ್ನು ಕೊಡಿಸುತ್ತೇನೆ.

ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ : ಇದು ಒಂದು ಪ್ರಶ್ನೆ ನಮ್ಮ ಬೆಳಗಾವಿ ಜಿಲ್ಲೆ ಮತ್ತು ರಾಯಭಾಗ್ ತಾಲ್ಲೂಕು ಜನರು ಅಪೇಕ್ಷೆ ಮಾಡುತ್ತಾರೆ. ಹೊಸದಾಗಿ ಆರಿಸಿ ಬಂದ ಶಾಸಕರು ಪ್ರಶ್ನೆ ಕೇಳುತ್ತಾರೋ ಇಲ್ಲವೋ ಎನ್ನುವ ರೀತಿಯಲ್ಲಿ ಅವರು ಕೇಳುತ್ತಾರೆ.

ಅಧ್ಯಕ್ಷರು : ಅವರು ಉತ್ತರ ಕೊಡುತ್ತಾರೆ. ಅವರು ಕೆಲವು ಮಾಹಿತಿಗಳನ್ನು ತರಿಸಬೇಕಾಗಿದೆ. ಆದ್ದರಿಂದ ಅವರು ಹತ್ತು ದಿವಸಗಳ ಕಾಲಾವಕಾಶ ಕೇಳಿದ್ದಾರೆ, ಕೆಲವು ವಿಚಾರಗಳನ್ನು ತರಿಸಬೇಕಾಗಿದೆ, ಆದುದರಿಂದ ಉತ್ತರ ನಾನು ಮುಂದಿನ ಸಾರಿ ಕೊಡಿಸುತ್ತೇನೆ.

ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ : ಎಷ್ಟು ದಿವಸದೊಳಗೆ ಉತ್ತರ ಕೊಡಿಸುತ್ತೀರಿ?

ಅಧ್ಯಕ್ಷರು : ಹತ್ತು ದಿವಸದಲ್ಲಿ, ಅಂದರೆ, ಈ ಸದನ ಮುಗಿಯುವುದರೊಳಗೆ ಕೊಡಿಸುತ್ತೇನೆ ಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಅನೇಕ ಸಲ ತಮಗೆ ಹೇಳಿದ್ದೇವೆ. ಇದನ್ನು ಕಂಡೋನ್ ಮಾಡಬೇಡಿ, ನೋಟೀಸ್ ಕೊಡುವ ಅವಧಿಯನ್ನು ಹಾಗೂ ಉತ್ತರ ಕೊಡುವ ಅವಧಿಯನ್ನು ಕಂಡೋನ್ ಮಾಡಬೇಡಿ ಎಂದು ಹೇಳಿದ್ದೇವೆ. ತಾವು ಪ್ರತಿ ಶಾಸನ ಸಭೆ ಅಧಿವೇಶನ ಕರೆಯಬೇಕಾದರೆ, ಎಂಟು ದಿವಸದಿಂದ ಹತ್ತು ದಿವಸಕ್ಕೆ ಅವಧಿಯನ್ನು ಇಳಿಸುವುದು, ಅವರು ಉತ್ತರ ಕೊಡಲಿಲ್ಲ ಎನ್ನುವುದು, 2ನೇ ತಾರೀಖು ಅಥವಾ 3ನೇ ತಾರೀಖು ಅಸೆಂಬ್ಲಿ ಕ್ಲೋಸ್ ಮಾಡುವುದು, ಇವೆಲ್ಲಾ ಆಗಿದೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ 10 ದಿವಸದಲ್ಲಿ ಕೊಡುತ್ತೇವೆ, 15 ದಿವಸ ಬಿಟ್ಟು ಕೊಡುತ್ತೇವೆಂದರೆ, ಇವತ್ತು ಈ ಸರ್ಕಾರಕ್ಕೆ ಏನಾಗಿದೆ? ಎಲ್ಲಾ ಕಂಪ್ಯೂಟರೈಸ್ಡ್ ಮಾಡಿದ್ದೇವೆ, ಮಾಹಿತಿಗಳು ಎಲ್ಲಾ ಫಿಂಗರ್‌ಟಿಪ್ಸ್‌ನಲ್ಲಿ ಇದೆ, ಎಲ್ಲಿಂದ ಬೇಕಾದರೂ ನಾವು ತರಿಸಿಕೊಳ್ಳುತ್ತೇವೆಂದು ಹೇಳಿ. ಸದಸ್ಯರು ಪ್ರಶ್ನೆ ಕೇಳಿದರೆ 10 ದಿವಸ, 15 ದಿವಸ ಬೇಕು ಎಂದರೆ ನೀವು ಅಸೆಂಬ್ಲಿಯನ್ನು ನಡೆಸುತ್ತೀರಾ? ಸಾರ್ ತಾವು ಉತ್ತರ ಕೊಡಬೇಕು. ಅವರಿಗೆ ಉತ್ತರ ಕೊಡುವವರೆಗೂ ಈ ಶಾಸನಸಭೆ ನಡೆಯುತ್ತಿದೆಂದು ತಾವು ಈ ಸಂದರ್ಭದಲ್ಲಿ ಹೇಳಬೇಕು. ಯಾವತ್ತು ಬೇಕಾದರೂ ಉತ್ತರ ಕೊಡಿಸಿ. ಪ್ರತಿ ಶಾಸನಸಭೆಯಲ್ಲಿಯೂ ಕೂಡ 15 ದಿವಸ ಬಿಟ್ಟು ಉತ್ತರ ಕೊಡಿಸುತ್ತೇವೆಂದು ಹೇಳಿ ನಾವು ಮನೆಗೆ ಹೋದ ಮೇಲೆ ಮುಗಿದುಹೋಯಿತು ಎಂಬ ಸ್ಥಿತಿ ನಿರ್ಮಾಣ ಮಾಡಿದರೆ ಹೇಗೆ ಯಾವ ರೀತಿಯಾದ ನಂಬಿಕೆ ಬರುತ್ತದೆ. ತಾವೇ ಹೇಳಿ. ಆದ್ದರಿಂದ ಉತ್ತರ ಕೊಡಿಸುವವರೆಗೂ ಅಸೆಂಬ್ಲಿಯನ್ನು ನಡೆಸುತ್ತೇವೆಂದು ತಾವು ಹೇಳಬೇಕು.

ಅಧ್ಯಕ್ಷರು : ಉತ್ತರ ಕೊಡಿಸುತ್ತೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹಿರಿಯರಾಗಿದ್ದು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಇಷ್ಟು ದಿವಸಗಳವರೆಗೂ [illegible]ಡುವುದಕ್ಕೆ ಆಗದೇ ಇರತಕ್ಕಂಥದು ಅದರಲ್ಲಿ ಏನಿದೆ ಎಂಬುದನ್ನು ತಾವು ಹೇಳಬೇಕು. [illegible]ಾಗಿ ತಾವೇ ಹೇಳಿ. ಇದರಲ್ಲಿ ಅಂಥ ಮುಖ್ಯ ಅಂಶಗಳು ಏನಿಲ್ಲ. ಆದರೂ ಕೂಡ ಇವ[illegible]ತ್ತಿದ್ದಾರೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಈಗ ಗ್ರಾಮೀಣಾ[illegible] ಪಂಚಾಯತ್ ರಾಜ್ ಇಲಾಖೆಯ ಕಾರ್ಯ ಹಂಚಿಕೆಯ ನಕ್ಷೆಯ ಪ್ರಕಾರ ಸಂಬಂ[illegible] ಎಲ್ಲಾ ಇಲಾಖೆಗಳ ಮಾರ್ಗಸೂಚಿಗಳನ್ನು ಹೊರಡಿಸಿ ಎಂದು ಅವರು ಕೇಳಿದ್ದಾರೆ. ಆದ್ದರಿಂದ ಈ ಎಲ್ಲಾ ಮಾರ್ಗಸೂಚಿಗಳನ್ನು ಪಡೆದು ಅವರಿಗೆ ವಿವರಗಳನ್ನು ಕೊಡಬೇಕಾಗಿದೆ. ಅಂದರೆ, ಇಲಾಖಾವಾರು ಮಾರ್ಗಸೂಚಿಗಳನ್ನು ಪೂರ್ತಿಯಾಗಿ ಒದಗಿಸಿಕೊಡಬೇಕಾಗಿದೆ. ಆದ್ದರಿಂದ, ಎಲ್ಲಾ ಇಲಾಖೆಯಿಂದ ಇವುಗಳನ್ನು ಪಡೆದು ಮಾಹಿತಿಯನ್ನು ಒದಗಿಸಬೇಕಾಗಿದೆ. ಅದಕ್ಕಾಗಿ ದಯವಿಟ್ಟು ಒಂದು ಅವಕಾಶ ಕೊಡಿ. ಈ ಸದನ ಮುಗಿಯುವುದರೊಳಗಾಗಿ ಖಂಡಿತ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು : ಈ ಸದನ ಮುಗಿಯುವುದರೊಳಗಾಗಿ ಒದಗಿಸಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಎಲ್ಲಾ ಮಾರ್ಗಸೂಚಿಗಳು ಅವರ ಆರ್‌ಡಿಪಿಆರ್ ಮೂಲಕವೇ ಹೊರಡಿಸಬೇಕಾಗುತ್ತದೆ. ಆದ್ದರಿಂದ ಇಲ್ಲಿಂದಲೇ ಎಲ್ಲಾ ಮಾರ್ಗಸೂಚಿಗಳನ್ನು ಪಡೆಯಬಹುದು.

ಶ್ರೀ ಸಿ.ಎಂ. ಉದಾಸಿ : ಕೇವಲ ಆರ್‌ಡಿಪಿಆರ್ ಇಲಾಖೆಯದೊಂದೇ ಅಲ್ಲ. ಬೇರೆ ಬೇರೆ ಇಲಾಖೆಯನ್ನು ಕೂಡ ಸೇರಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅಂಥಾದ್ದು ಏನಿದೆ ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾವುದೇ ಇಲಾಖೆಯ[illegible]ಡ ಆರ್‌ಡಿಪಿಆರ್ ಮೂಲಕವೇ ಎಲ್ಲಾ ಮಾರ್ಗಸೂಚಿ ಹೋಗಬೇಕಾಗುತ್ತದೆ. ಆದ್ದರಿಂ[illegible] ಒಂದು ಕಾಪಿ ಕೊಡಿ ಎಂದು ಕೇಳಿದರೆ ಏನಾಗುತ್ತಿತ್ತು?

ಶ್ರೀ ಸಿ.ಎಂ. ಉದಾಸಿ : ಆರ್‌ಡಿಪಿಆರ್ ಇಲಾಖೆಗೆ ಸಂ[illegible] ಮಾತ್ರ ಕೊಟ್ಟರೆ ಆಗುತ್ತದೆಯೇ ಎಲ್ಲಾ ಇಲಾಖೆಯದ್ದು ಕೊಟ್ಟಂತೆ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆರ್‌ಡಿಪಿಆರ್ ಇಲಾಖೆಯ ಮೂಲಕ ಎಲ್ಲಾ ಇಲಾಖೆಗಳಿಗೆ ಹೋಗಿರತಕ್ಕಂಥ ಮಾರ್ಗಸೂಚಿಗಳನ್ನು ಅವರು ಕೇಳಿದ್ದಾರೆ. ಆದ್ದರಿಂದ ಇಲ್ಲಿ ಇದಕ್ಕೆ ಸಂಬಂಧಪಟ್ಟಂಥ ನೋಟಿಫಿಕೇಶನ್ ಕಾಪಿ ಸಿಗುವುದಿಲ್ಲವೆ?

ಶ್ರೀ ಸಿ.ಎಂ. ಉದಾಸಿ : ನಾವು ಮಾಹಿತಿ ತರಿಸುತ್ತಿದ್ದೇವೆ. ಈಗ ನಾಲ್ಕಾರು ಇಲಾಖೆಗಳದ್ದು ಮಾತ್ರ ಮಾಹಿತಿ ಬಂದಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಕೇಳಿ ಎಷ್ಟು ದಿವಸವಾಯಿತು?

ಶ್ರೀ ಸಿ.ಎಂ. ಉದಾಸಿ : ಈ ಸದನ ಮುಗಿಯುವುದರೊಳಗಾಗಿ ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಆರ್ಡರ್ಸ್ ಕಾಪಿಗಳನ್ನು ಅವರು ಕೇಳಿದ್ದಾರಷ್ಟೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಹಂಚಿಕೆ ನಕ್ಷೆ ಪ್ರಕಾರ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಮಾರ್ಗಸೂಚಿಗಳನ್ನು ಅವರು ಕೇಳಿದ್ದಾರಷ್ಟೆ.

ಅಧ್ಯಕ್ಷರು : ಈ ಸದನ ಮುಕ್ತಾಯವಾಗುವುದರೊಳಗೆ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಾನು ಉತ್ತರ ಕೊಡಿಸುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅವರು ಸೀನಿಯರ್ ಆಗಿ .....

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ. ಎಲ್ಲರೂ ಈ ರೀತಿಯಾದರೆ ಹೇಗೆ? ಈಗಾಗಲೇ ಪ್ರಶ್ನೋತ್ತರ ಪ್ರಾರಂಭವಾಗಿ ಒಂದೂವರೆ ಗಂಟೆ ಆಯಿತು.

ಶ್ರೀ ಎಸ್.ಎಸ್. ಪಾಟೀಲ್ : ಕ್ಯಾಬಿನೆಟ್‌ನಲ್ಲಿ ಇವರೊಬ್ಬರೇ ಸೀನಿಯರ್ ಇರೋದು, ಇವರೂ ಕೂಡ ಈ ರೀತಿ ಹೇಳಿದರೆ ನಾವೇನು ಮಾಡುವುದು?

6. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು (ಮುಂದು)

ಬಳ್ಳಾರಿ ಜಿಲ್ಲೆಯಲ್ಲಿ ದುರಸ್ತಿಯಲ್ಲಿರುವ ಏತ ನೀರಾವರಿ ಯೋಜನೆಗಳಿಗೆ ಅನುದಾನ ನೀಡುವ ಬಗ್ಗೆ.

19 (137) ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಇರುವ ಏತ ನೀರಾವರಿ ಯೋಜನೆಗಳು ಯಾವುವು;

ಆ) ಆ ಪೈಕಿ ಕಾರ್ಯನಿರ್ವಹಿಸುತ್ತಿರುವ ಯೋಜನೆಗಳಾವುವು ಹಾಗೂ ದುರಸ್ತಿಯಲ್ಲಿರುವ ಯೋಜನೆಗಳಾವುವು;

ಇ) ದುರಸ್ತಿಯಲ್ಲಿರುವ ಯೋಜನೆಗಳನ್ನು ದುರಸ್ತಿ ಮಾಡಲು ಪ್ರಸಕ್ತ ಸಾಲಿನಲ್ಲಿ ಅನುದಾನ ಕಲ್ಪಿಸಲಾಗಿದೆಯೆ;

ಈ) ಹಾಗಿದ್ದಲ್ಲಿ, ಖರ್ಚು ಮಾಡಿದ ಮೊತ್ತವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಮತ್ತು ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಇಲ್ಲ.

ಅನುಬಂಧ

ಬಳ್ಳಾರಿ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳು

ಕಾರ್ಯನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳು

ಕ್ರ.ಸಂ	ಏತ ನೀರಾವರಿ ಯೋಜನೆಯ ಹೆಸರು
1	ಎಮ್ಮಿಗನೂರು, ಬಳ್ಳಾರಿ ತಾ:
2	ಬಸರಕೋಡು, ಬಳ್ಳಾರಿ ತಾ:
3	ಎರ್‍ರಗುಡಿ, ಬಳ್ಳಾರಿ ತಾ:
4	ಡಿ. ನಾಗೇನಹಳ್ಳಿ, ಬಳ್ಳಾರಿ ತಾ:
5	ಬದನಹಟ್ಟಿ, ಬಳ್ಳಾರಿ ತಾ:
6	ನಂದಿಬಂಡ್, ಹೊಸಪೇಟೆ ತಾ:
7	ವ್ಯಾಸನಕೆರೆ–1, ಹೊಸಪೇಟೆ ತಾ:
8	ಜವುಕು, ಹೊಸಪೇಟೆ ತಾ:
9	ವ್ಯಾಸನಕೆರೆ–2, ಹೊಸಪೇಟೆ ತಾ:
10	ತಾಲೂರು–1 ಸಿರಗುಪ್ಪ ತಾ:
11	ತಾಲೂರು–2, ಸಿರಗುಪ್ಪ, ತಾ:
12	ಆನಂದದೇವನಹಳ್ಳಿ ಹೆಚ್.ಬಿ.ಹಳ್ಳಿ ತಾ:
13	ಬಸರಕೋಡು, ಹೆಚ್.ಬಿ.ಹಳ್ಳಿ ತಾ:
14	ಬನ್ನಿಗೋಲ, ಹೆಚ್.ಬಿ.ಹಳ್ಳಿ, ತಾ:
15	ಬಸರಕೋಡು ತಾಂಡ, ಹೆಚ್.ಬಿ.ಹಳ್ಳಿ, ತಾ:
16	ಏಣಿಗಿ, ಹೆಚ್.ಬಿ.ಹಳ್ಳಿ ತಾ:
17	ಹಂಪಸಾಗರ, ಹೆಚ್.ಬಿ. ಹಳ್ಳಿ ತಾ:
18	ಕಿತ್ತನೂರು, ಹೆಚ್.ಬಿ.ಹಳ್ಳಿ ತಾ:
19	ಲಡಕನಬಾವಿ, ಹೆಚ್.ಬಿ.ಹಳ್ಳಿ ತಾ:
20	ಮುತ್ತುಕೂರು, ಹೆಚ್.ಬಿ.ಹಳ್ಳಿ ತಾ:
21	ನಾಕರಾಳ ತಾಂಡ, ಹೆಚ್.ಬಿ.ಹಳ್ಳಿ ತಾ:
22	ರಾಮೇಶ್ವರಿ ಬಂಡಿ, ಹೆಚ್.ಬಿ.ಹಳ್ಳಿ ತಾ:
23	ತಾಮ್ರಹಳ್ಳಿ, ಹೆಚ್.ಬಿ.ಹಳ್ಳಿ ತಾ:
24	ಅಂಕ್ಲಿ, ಹಡಗಲಿ ತಾ:
25	ಬೈಲಹುಣಸಿ, ಹಡಗಲಿ ತಾ:
26	ಚಿಕ್ಕಬನ್ನಿಮಟ್ಟಿ, ಹಡಗಲಿ ತಾ:
27	ಹರವಿಬಸಪುರ, ಹಡಗಲಿ ತಾ:
28	ಹಕ್ಕಂಡಿ, ಹಡಗಲಿ ತಾ:
29	ಹರವಿ, ಹಡಗಲಿ ತಾ:
30	ಹಂಡಿಗನೂರು, ಹಡಗಲಿ ತಾ:
31	ಕೊಂಬ್ಲಿ, ಹಡಗಲಿ ತಾ:
32	ಕೋಟಿಹಾಳ, ಹಡಗಲಿ ತಾ:
33	ಕುರುವತ್ತಿ, ಹಡಗಲಿ ತಾ:
34	ಲಿಂಗನಾಯಕನಹಳ್ಳಿ, ಹಡಗಲಿ ತಾ:
35	ಮಕರಬ್ಬಿ, ಹಡಗಲಿ ತಾ:
36	ಮೈಲಾರ–1, ಹಡಗಲಿ ತಾ:
37	ಮೈಲಾರ–2, ಹಡಗಲಿ ತಾ:
38	ನಂದಿಗಾವಿ, ಹಡಗಲಿ ತಾ:
39	ರಾಜವಾಲ, ಹಡಗಲಿ ತಾ:
40	ಕೊಂಬ್ಲಿ–4, ಹಡಗಲಿ ತಾ:
41	ಕೊಂಬ್ಲಿ–5, ಹಡಗಲಿ ತಾ:
	ಒಟ್ಟು

ಕಾರ್ಯನಿರ್ವಹಿಸದೇ ಇರುವ ಏತ ನೀರಾವರಿ ಯೋಜನೆಗಳು :

ಕ್ರ.ಸಂ	ಏತ ನೀರಾವರಿ ಯೋಜನೆಯ ಹೆಸರು
1	ತಮ್ರಹಳ್ಳಿ, ಬಳ್ಳಾರಿ ತಾ:
2	ವ್ಯಾಸನಕೆರೆ-2, ಹೊಸಪೇಟೆ ತಾ:
3	ಕುದುರಹಾಳ, ಸಿರಗುಪ್ಪ ತಾ:
4	ಸಿದ್ದರಗಡ್ಡ, ಸಿರಗುಪ್ಪ ತಾ:
5	ಕೋಗಿಲೆ, ಹೆಚ್.ಬಿ.ಹಳ್ಳಿ ತಾ:
6	ಮಗಲ, ಹಡಗಲಿ ತಾ:
7	ಹಿರೇಜಂತಗಲು, ಹೊಸಪೇಟೆ ತಾ:
8	ನವಲಿ, ಹಡಗಲಿ ತಾ:

ಅಧ್ಯಕ್ಷರು : ಮಾನ್ಯ ಅನಿಲ್ ಹೆಚ್.ಲಾಡ್ ಪರವಾಗಿ ಮಾನ್ಯ ಸಿ.ಟಿ. ರವಿಯವರು ಪ್ರಶ್ನೆಯನ್ನು ಕೇಳುತ್ತಾರೆ.

ಶ್ರೀ ಸಿ.ಟಿ. ರವಿ (ಶ್ರೀ ಅನಿಲ್ ಹೆಚ್. ಲಾಡ್ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಇರುವ ಏತ ನೀರಾವರಿ ಯೋಜನೆಗಳು ಯಾವುವು ಮತ್ತೆ ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವವು ಯಾವುದು ಹಾಗೂ ಇವುಗಳಲ್ಲಿ ದುರಸ್ತಿಯಲ್ಲಿರುವುದು ಯಾವುವು ಎನ್ನತಕ್ಕಂಥದ್ದು ನಮ್ಮ ಪ್ರಶ್ನೆಯಾಗಿದೆ. ದುರಸ್ತಿಯಲ್ಲಿರುವ ಯೋಜನೆಗಳಿಗೆ ದುರಸ್ತಿ ಮಾಡಲು ಪ್ರಸಕ್ತ ಸಾಲಿನಲ್ಲಿ ಅನುದಾನ ಕಲ್ಪಿಸಿಕೊಡಲಾಗಿದೆಯೇ ಎಂದು ಕೇಳಿರತಕ್ಕಂಥಾದಕ್ಕೆ 'ಇಲ್ಲ'ವೆಂದು ಹೇಳಿದ್ದಾರೆ. ಆದುದರಿಂದ, ಅನುದಾನ ಕಲ್ಪಿಸದಿದ್ದರೆ ಇವುಗಳನ್ನು ದುರಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಅನುದಾನ ಇಲ್ಲದೆ ದುರಸ್ತಿ ಮಾಡುವುದಕ್ಕೆ ಬೇರೆ ಏನಾದರೂ ಮಾರ್ಗ ಇದೆಯೇ ಎನ್ನತಕ್ಕಂಥಾದ್ದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿರುವ 8 ಯೋಜನೆಗಳ ದುರಸ್ತಿಗಾಗಿ ಅನುದಾನ ಬಿಡುಗಡೆ ಮಾಡಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಇದರಲ್ಲಿ ನಾಲ್ಕು ಯೋಜನೆಗಳನ್ನು ದುರಸ್ತಿ ಮಾಡಬಹುದಾಗಿದೆ ಮತ್ತೆ ಉಳಿದ ನಾಲ್ಕು ಯೋಜನೆಗಳನ್ನು ದುರಸ್ತಿ ಮಾಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಕೋಗಿಲೆ ಮತ್ತು ಮಗಲ ಏತನೀರಾವರಿ ಯೋಜನೆಯಲ್ಲಿ ಮೂಲ ಬತ್ತಿಹೋಗಿರುವುದರಿಂದ ಅವುಗಳನ್ನು ದುರಸ್ತಿ ಮಾಡತಕ್ಕಂಥ ಅವಶ್ಯಕತೆ ಇರುವುದಿಲ್ಲ. ಕುದುರಹಾಳ ಮತ್ತು ಸಿದ್ದರಗಡ್ಡ ಯೋಜನೆಗಳಲ್ಲಿ ರೈತರು ಪಂಪ್‌ಸೆಟ್‌ಗಳ ಮೂಲಕ ನೀರನ್ನು ಬಳಸುತ್ತಿದ್ದು, ಏತನೀರಾವರಿ ಯೋಜನೆಗೆ ಬೇಡಿಕೆ ಇಲ್ಲದೇ ಇರುವುದರಿಂದ ಈ ನಾಲ್ಕು ಯೋಜನೆಗಳನ್ನು ಪುನರ್ ನವೀಕರಣ ಮಾಡತಕ್ಕಂಥ ಅಥವಾ ಪುನರ್ ಪ್ರಾರಂಭಿಸುವಂಥ ಅವಶ್ಯಕತೆ

ಇರುವುದಿಲ್ಲ. ಈಗ ಇರುವಂಥ ಇನ್ನು ನಾಲ್ಕು ಯೋಜನೆಗಳನ್ನು ಮಾತ್ರ ದುರಸ್ತಿ ಮಾಡಬಹುದು. ಈ ಸಾಲಿನಲ್ಲಿ ಇದಕ್ಕೆ ಸೂಕ್ತ ಪರಿಹಾರ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಇದಕ್ಕೆ ಹಣಕಾಸಿನ ನೆರವನ್ನು ಪಡೆಯುವುದಕ್ಕೆ ಪ್ರಯತ್ನವನ್ನು ಕೂಡ ಮಾಡುತ್ತೇವೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಪ್ರಯತ್ನಿಸುತ್ತೇವೆಂದು ಮಾನ್ಯ ಸಚಿವರು ಹೇಳಿರತಕ್ಕಂಥದ್ದು ಸ್ಪಷ್ಟ ಉತ್ತರವಾಗುವುದಿಲ್ಲ. ದುರಸ್ತಿಗೆ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದರೆ ನಾವು ನೆಮ್ಮದಿಯಿಂದ ಕುಳಿತುಕೊಳ್ಳುತ್ತೇವೆ.

ಶ್ರೀ ಸಿ.ಎಂ. ಉದಾಸಿ : ಈ ವರ್ಷ ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದು ಹಣಕಾಸಿನ ಲಭ್ಯತೆಯ ಮೇಲೆ ಇದನ್ನು ಮಾಡುತ್ತೇವೆಂದು ಹೇಳುತ್ತಿದ್ದೇನೆ. ಇದರಿಂದ ತಮಗೆ ಸಂತೃಪ್ತಿಯಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಚಿಕ್ಕ ನೀರಾವರಿ ಯೋಜನೆಗಳು ಮಾನ್ಯ ಸಚಿವರ ಕ್ಷೇತ್ರದಲ್ಲಿಯೇ ಇನ್ನೂ ರಿಪೇರಿ ಆಗಿಲ್ಲ. ನೀವು ಈಗ ಮಂತ್ರಿ ಆಗಿದ್ದೀರಿ. ಆದರೆ, ಹಿಂದೆ ಕೂಡ ನೀವು ಇದನ್ನೇ ಮಾಡಿದ್ದೀರಿ. ಇವತ್ತಿನದಿವಸ ಬಜೆಟ್‌ನಲ್ಲಿ ಸಣ್ಣ ನೀರಾವರಿಗೆ ಏನು 600 ಕೋಟಿ ರೂಪಾಯಿ ಇಟ್ಟಿದ್ದಾರೆ. ಇದು ನಿಜವಾಗಿಯೂ ಸಾಕಾಗುವುದಿಲ್ಲ. ಇಡೀ ರಾಜ್ಯದಲ್ಲಿ ಮೇಜರ್ ಇರಿಗೇಷನ್‌ಗಿಂಥ ಮೈನರ್ ಇರಿಗೇಷನ್‌ನಿಂದ ಹೆಚ್ಚು ನೀರಾವರಿ ಆಗುತ್ತದೆ. ಅದಕ್ಕೆ ಮಹತ್ವ ಕಡಿಮೆಯಾಗಬಾರದು. ಆ ಇಲಾಖೆಗೆ ಇವರನ್ನು ದೊಡ್ಡ ಮಂತ್ರಿಯನ್ನಾಗಿ ಮಾಡಿ ಅವರ ಕೈಗೆ ಏನೂ ದುಡ್ಡು ಕೊಡದ ಹಾಗೆ ಇಟ್ಟಿದ್ದಾರೆ. ಆದ್ದರಿಂದ, ಈಗ ಇಟ್ಟಿರುವ ಹಣ ಸಾಲುವುದಿಲ್ಲ. ಆದ್ದರಿಂದ ತಾವು ಕ್ಯಾಬಿನೆಟ್‌ನಲ್ಲಿ ಹೊಡೆದಾಡಿ ಎರಡು ಸಾವಿರ ಕೋಟಿ ರೂಪಾಯಿಗಳನ್ನು ನಿಮ್ಮ ಇಲಾಖೆಗೆ ಪಡೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಇಲ್ಲದಿದ್ದರೆ, ಸುಮ್ಮನೆ ನಿಮ್ಮ ಇಲಾಖೆ ನಿರುಪಯುಕ್ತವಾಗುತ್ತದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಏತ ನೀರಾವರಿ ಯೋಜನೆಗಳು ಯಶಸ್ವಿಯಾಗಿರತಕ್ಕಂಥಾದ್ದು ನಮಗೆ ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಏತ ನೀರಾವರಿ ಯೋಜನೆಗಳಲ್ಲಿ ಬೇಸಿಕ್ ಆಗಿ ಎಲ್ಲಿ ತೊಂದರೆ ಬರುತ್ತದೆಂದರೆ, ಇದಕ್ಕೆ ಕರೆಂಟ್‌ಬಿಲ್ ಮತ್ತು ಎಲೆಕ್ಟ್ರಿಫಿಕೇಶನ್ ಮಾಡತಕ್ಕಂಥ ಸಂದರ್ಭದಲ್ಲಿ ತೊಂದರೆ ಆಗುತ್ತದೆ. ಹಾಗೆಯೇ ಸ್ಥಳೀಯವಾಗಿ ನಮ್ಮ ಆಯಕಟ್ಟಿನಲ್ಲಿ ಬರತಕ್ಕಂಥ ರೈತರು ಏನಿದ್ದಾರೆ, ಅವರು ಸಂಘಟಿತರಾಗಿ ಏತ ನೀರಾವರಿ ಯೋಜನೆಗಳ ಜವಾಬ್ದಾರಿಯನ್ನು ಹೊರದೇ ಇರುವುದರಿಂದ ಈ ಸಮಸ್ಯೆ ನಮಗೆ ಬರುವಂಥಾದ್ದು. ಆದ್ದರಿಂದ, ನೀರು ಬಳಕೆದಾರರ ಏತ ನೀರಾವರಿ ಸಂಘಗಳನ್ನು ಮಾಡಿ ಈ ಏತ ನೀರಾವರಿಗಳ ಜವಾಬ್ದಾರಿಗಳನ್ನು ಅವರಿಗೆ ಕೊಟ್ಟಂಥ ಸಂದರ್ಭದಲ್ಲಿ ಮತ್ತು ಅವರು ಇದರ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿಕೊಂಡರೆ ಮಾತ್ರ ಏತ ನೀರಾವರಿಗಳು ಉದ್ಧಾರವಾಗುತ್ತವೆ. ಹೊರತು ಈಗಾಗಲೇ ಲಿಫ್ಟ್ ಇರಿಗೇಶನ್‌ನ ಕಾರ್ಪೊರೇಷನ್ ಮಾಡಿ ಅದು ಎರಡೆರಡು ಸಾರಿ ಮುಚ್ಚಿ ಹೋಗಿವೆ. ಆದರೆ, ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಮತ್ತು ಎಲ್ಲೆಲ್ಲಿ ಕಬ್ಬು ಬೆಳೆಯುತ್ತಾರೆಯೋ

ಅಂಥ ಕಡೆ ಏತನೀರಾವರಿಗಳು ಬಹಳ ಸಕ್ಸೆಸ್ ಆಗಿದೆ. ಆದರೆ ಸಣ್ಣ ಹಿಡುವಳಿದಾರರು ಎಲ್ಲಿ ಇದ್ದಾರೆಯೋ ಅಂಥ ಕಡೆ ಏತ ನೀರಾವರಿ ನಿರ್ವಹಣೆಯ ಸಮಸ್ಯೆಗಳು ಬರುತ್ತವೆ. ಮುಖ್ಯವಾಗಿ ಕರೆಂಟ್ ಬಿಲ್ ಕಟ್ಟುವುದಕ್ಕೆ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ಹೆಚ್ಚಿನ ತೊಂದರೆ ಬರುವಂಥಾದ್ದು. ಮತ್ತೊಂದು ವಿಚಾರ ಏನೆಂದರೆ ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಅನುದಾನ ಕೇಳಬೇಕೆಂಬ ವಾದ ಇದೆ. ನೀರಾವರಿ ಇಲಾಖೆಗೆ ಎಷ್ಟು ಪರ್ಸೆಂಟೇಜ್ ಎಂದು ಫಿಕ್ಸ್ ಮಾಡಬೇಕೆಂದು ನಾವು ಹಿಂದೆಯೂ ಕೂಡ ಕೇಳಿದ್ದೆವು. i.e., 25% of the total amount of the Irrigation Department.

ಈ ರೀತಿಯಾಗಿ ಪರ್ಸೆಂಟೇಜ್ ಫಿಕ್ಸ್ ಮಾಡಿದರೆ ಒಳ್ಳೆಯದು. ನಾವು ಪ್ರತಿಸಾರಿಯೂ 30 ಕೋಟಿ, 100 ಕೋಟಿ ಹೀಗೆ ತೆಗೆದುಕೊಂಡು ಮಾಡುವುದು ಮತ್ತು ವಿಶ್ವ ಬ್ಯಾಂಕ್ ಸ್ಕೀಂ ತೆಗೆದುಕೊಂಡು ಮಾಡುವುದರಿಂದ ನಾವು ಈ ಕಾರ್ಯಕ್ರಮಗಳನ್ನು ಸರಿಯಾಗಿ ಮಾಡುವುದಕ್ಕೆ ಆಗುವುದಿಲ್ಲ. ಇವನ್ನು ಕೂಡ 637 ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕ್ ಯೋಜನೆಗಳ ಅಡಿಯಲ್ಲಿ 5 ವರ್ಷಗಳ ಒಂದು ಸ್ಟೇಜ್‌ನಲ್ಲಿ ನಾವು ತೆಗೆದುಕೊಳ್ಳುತ್ತಿದ್ದೇವೆ. ಈಗಾಗಲೇ ಎರಡು ವರ್ಷ ಮುಗಿದಿದೆ. ಆದ್ದರಿಂದ ಒಟ್ಟು ಇರಿಗೇಷನ್ ಇಲಾಖೆಗೆ ಬರತಕ್ಕಂಥ ಟೋಟಲ್ ಹಣದಲ್ಲಿ 25 ಪರ್ಸೆಂಟ್‌ನಷ್ಟು ಹಣವನ್ನು ಸಣ್ಣ ನೀರಾವರಿ ಇಲಾಖೆಗೆ ಇಟ್ಟುಕೊಂಡರೆ ಮಾತ್ರ ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಆಗುತ್ತದೆ ಹೊರತು ಈ ರೀತಿಯಾಗಿ ಪೀಸ್ ಪೀಸ್ ಆಗಿ ನಾವು ತೆಗೆದುಕೊಂಡರೆ ಇದು ಏನೂ ಅನುಕೂಲ ಆಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲ್‌ರವರು ಮಾತನಾಡುತ್ತಾ ಸಣ್ಣ ನೀರಾವರಿ ಇಲಾಖೆಗೆ 2000 ಕೋಟಿ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಈ ಸಾರಿ ಮೊದಲಬಾರಿಗೆ 672 ಕೋಟಿ ರೂಪಾಯಿಗಳಷ್ಟು ಹಣ ಲಭ್ಯವಾಗಿದೆ. ಇದರಿಂದ ಹೆಚ್ಚು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನೂ ಹೆಚ್ಚು ಹಣ ಬೇಕೆಂದು ಒತ್ತಾಯ ಮಾಡುತ್ತೇವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಈಗ ಬಂದಿರತಕ್ಕಂಥ 675 ಕೋಟಿ ರೂಪಾಯಿ ವಿಶ್ವ ಬ್ಯಾಂಕ್ ಸ್ಕೀಂನಲ್ಲಿ ರೆಗ್ಯುಲರ್ ಆಗಿರುತ್ತದೆ. ಆದರೆ ನಮ್ಮ ಸ್ಟೇಟ್‌ಫಂಡ್‌ನಿಂದ ತೆಗೆದುಕೊಳ್ಳತಕ್ಕಂಥ ಹಣ ಕಡಿಮೆ ಇದೆ. ಅದನ್ನು ಜಾಸ್ತಿ ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ. ಇದನ್ನು ನೀವು ತೆಗೆದುಕೊಳ್ಳಬೇಕೆಂದರೆ, ಪರ್ಸೆಂಟೇಜ್ ಆಫ್ ದಿ ಟೋಟಲ್ ಇರಿಗೇಶನ್ ಸ್ಕೀಂನಲ್ಲಿ ತೆಗೆದುಕೊಳ್ಳಬೇಕು.

ಶ್ರೀ ಸಿ.ಎಂ. ಉದಾಸಿ: ಈ ವರ್ಷ 672 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಡಲಾಗಿದೆ. ತಾವು ಇದನ್ನು ನೋಡಿರಬಹುದು. ಜಲಸಂವರ್ಧನ ಯೋಜನೆಗೆ ಇದರಲ್ಲಿ ಸುಮಾರು 185 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಈ ರೀತಿಯಾಗಿದ್ದರೂ ಕೂಡ ನೀರಾವರಿಗೆ ಹೆಚ್ಚು ಹಣ ಬೇಕೆಂದು ತಮ್ಮ ಬೇಡಿಕೆ ಇದೆ. ಇದರ ಬಗ್ಗೆ ಮುಂದೆ ಆಲೋಚನೆ ಮಾಡಿ ಹೆಚ್ಚು ಹಣ

ಪಡೆಯುವಂಥ ಆಲೋಚನೆ ಮಾಡೋಣ. ಇದರ ಬಗ್ಗೆ ತಾವು ಮುಂದೆ ಮಾತನಾಡಿ. ತಾವು ಇಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ಬಗ್ಗೆ ಹೇಳಿದ್ದೀರಿ. ಇಡೀ ರಾಜ್ಯದಲ್ಲಿ ಇವತ್ತಿನದಿವಸ 463 ಈ ರೀತಿಯಾದ ಯೋಜನೆಗಳಿವೆ. ಇದರಲ್ಲಿ ವಿದ್ಯುತ್‌ನ ಸಮಸ್ಯೆಯಿಂದ ಸುಮಾರು 60 ರಿಂದ 65 ನೀರಾವರಿ ಯೋಜನೆಗಳು ನಿಂತಿವೆ ಎನ್ನತಕ್ಕಂಥಾದ್ದು ತಮ್ಮ ಭಾವನೆ ಇದೆಯೆಂದು ನಾನು ಭಾವಿಸುತ್ತೇನೆ. ಇವುಗಳನ್ನು ಸುಧಾರಣೆ ಮಾಡುವಂಥ ಒಂದು ಪ್ರಯತ್ನ ನಡೆಯುತ್ತಿದೆ. ನೀರಾವರಿ ಯೋಜನೆಯಲ್ಲಿರುವ ವಿದ್ಯುತ್‌ನ ಒಂದು ಹೆಚ್.ಪಿ. ಗೆ ಒಂದು ಸಾವಿರ ರೂಪಾಯಿ ಒಂದು ವರ್ಷಕ್ಕೆ ಇದೆ. ರೈತರಿಗೆ ಮಾತ್ರ ಇದು 120 ರೂಪಾಯಿ ಇದೆ. ಇದನ್ನು ಏನಾದರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಇದನ್ನು ಮಾಡಿದ್ದೇ ಆದರೆ ವಿದ್ಯುತ್‌ನ ದರ ಸ್ವಲ್ಪ ಕಡಿಮೆಯಾಗಿ ಇದರ ನಿರ್ವಹಣೆಯನ್ನು ರೈತರಿಗೆ ಕೊಟ್ಟರೆ ಹೆಚ್ಚು ಪ್ರಯೋಜನಕಾರಿಯಾಗುತ್ತದೆಂಬ ತಮ್ಮಗಳ ಭಾವನೆ ಏನಿದೆ, ಇದಕ್ಕೆ ಸಹಮತ ಕೂಡ ಇದೆ. ಮತ್ತೆ ಇದನ್ನು ಜನರಿಗೆ ಒಪ್ಪಿಸುವಂಥ ಕೆಲಸವಾಗುವುದರ ಜೊತೆಗೆ ಜನ ಇದನ್ನು ಅಪೇಕ್ಷೆ ಪಡುವಂಥ ವ್ಯವಸ್ಥೆ ಕೂಡ ಬಂದಾಗ ಮತ್ತು ಅವರುಗಳು ವಿದ್ಯುತ್‌ನ ದರ[illegible]ಬಿಕೊಳ್ಳುವುದಕ್ಕೆ ಸಹಾಯವಾಗಬೇಕಾಗಿರತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡಬೇಕಾಗಿ[illegible]ರಿಶೀಲನೆಯಲ್ಲಿದೆ ಎಂದು ಹೇಳುವಂಥ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವು[illegible]ತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಏತ ನೀರಾವರಿ ಯೋ[illegible]ಸಂಬಂಧಪಟ್ಟಂತೆ ಇರತಕ್ಕಂಥ ವಿದ್ಯುತ್‌ನ ಬಿಲ್‌ನ ಹಣವನ್ನು ಕೆ.ಪಿ.ಟಿ.ಸಿ.ಎಲ್. ಡಿಪಾ[illegible]ನಿಂದ ನಾವು ಮನ್ನಾ ಮಾಡಿಸಬೇಕಾಗುತ್ತದೆ. ಇಲ್ಲದಿದ್ದರೆ ಈ ಹಣವನ್ನು ರೈತರು ಕಟ್ಟುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಇದು ಅಸಾಧ್ಯ ಕೂಡ ಆಗಿದೆ. ಏಕೆಂದರೆ ಇದು 1965–1970ನೇ ವರ್ಷದಿಂದ ಬರುತ್ತಿದೆ. ಮೊದಲು 20 ಸಾವಿರ ರೂಪಾಯಿ ಇದ್ದಂಥಾದ್ದು ಈಗಾಗಲೇ ಮೂರರಿಂದ ನಾಲ್ಕು ಲಕ್ಷ ರೂಪಾಯಿಗೆ ಬಂದು ನಿಂತಿದೆ. ಈಗ ಈ ಯೋಜನೆಗಳು ನಿಂತು ಹೋಗಿವೆ. ವಿದ್ಯುತ್ ಬಿಲ್ ಕಟ್ಟಿದ ನಂತರ ಕೆಲಸ ಪ್ರಾರಂಭ ಮಾಡುತ್ತೇವೆಂದು ಇಲಾಖೆಯವರು ಹೇಳುತ್ತಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಕೊನೇ ಪಕ್ಷ ಇದಕ್ಕೆ ಏನಾದರೊಂದು ರೂಪು ಕೊಟ್ಟು ಬಾಕಿ ಇರತಕ್ಕಂಥ ವಿದ್ಯುತ್ ಬಿಲ್‌ನ್ನು ಮನ್ನಾ ಮಾಡಿಸಿ. ಇವತ್ತಿನದಿವಸ ಇದೆಲ್ಲಾ ಸೇರಿಸಿದರೂ ಕೂಡ ಗರಿಷ್ಟ 6 ರಿಂದ 7 ಕೋಟಿ ರೂಪಾಯಿ ನಿಮಗೆ ಬರಬಹುದು. ಆದ್ದರಿಂದ ಇದನ್ನು ವೇ ಅಫ್ ಮಾಡಿಕೊಂಡು ಮತ್ತೆ ರೀಜನರೇಟ್ ಮಾಡಿಸುವಂಥ ಕಾರ್ಯಕ್ರಮ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ, ಪಂಪ್‌ಸೆಟ್‌ಗಳ ಬಾಕಿ ಹಣ ಸುಮಾರು 22 ಕೋಟಿ ರೂಪಾಯಿಗಳು ಇದೆ ಎಂಬ ಅಂಶವನ್ನು ಸನ್ಮಾನ್ಯ ಕುಮಾರ್ ಬಂಗಾರಪ್ಪನವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ವಿದ್ಯುತ್‌ನ ದರ ಕಡಿಮೆ ಮಾಡಬೇಕೆಂಬುದರ ಬಗ್ಗೆ ನಾವು ಚಿಂತನೆ ಮಾಡಿದ್ದೇವೆ. ವಿದ್ಯುತ್ ಬಿಲ್‌ನ ಬಾಕಿ ಹಣವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂಬ ವಿಚಾರಧಾರೆಗೆ ನಾವು ಹೋಗಿದ್ದೇ ಆದರೆ ಅದರ ನಿರ್ವಹಣೆ ಮಾಡತಕ್ಕ[illegible] ಸರಿಹೋಗಲಿಲ್ಲ.

ಇದರಿಂದ ನೀರು ಬಳಸತಕ್ಕಂಥ ರೈತರೂ ಸಹ ಹಣ ಪಾವತಿ ಮಾಡಬೇಕಾದಂಥ ವಿಚಾರಕ್ಕೆ ಅವರು ಮುಂದೆ ಬರಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಪರಿಶೀಲನೆ ಮಾಡಿ ಇದನ್ನು ರೈತರಿಗೆ ವಹಿಸಿಕೊಡಬೇಕೆಂಬ ವಿಚಾರಗಲ್ಲಿ ಇದನ್ನು ಹೆಚ್ಚು ಜನಪ್ರಿಯ ಮಾಡುವಂಥ ಕಾರ್ಯಕ್ರಮಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಗೋದಾವರಿ ಜಲಾನಯನ ಯೋಜನೆಯಿಂದ ರಾಜ್ಯದ ಪಾಲಿಗೆ ಬರುವ ನೀರನ್ನು ಪೂರ್ಣ ಬಳಕೆ ಮಾಡುವ ಬಗ್ಗೆ.

20 (132) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋದಾವರಿ ಜಲಾನಯನ ಯೋಜನೆಯಿಂದ ರಾಜ್ಯದ ಪಾಲಿಗೆ 2.50 ಟಿಎಂಸಿ ನೀರು ಲಭ್ಯವಾಗಿರುವುದು ನಿಜವಲ್ಲವೇ;

ಆ) ಈ ನೀರಿನ ಪೂರ್ಣ ಬಳಕೆಯಿಂದ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಯಾವ ಯಾವ ಗ್ರಾಮಗಳ ಎಷ್ಟು ಎಕರೆ ಪ್ರದೇಶಗಳಿಗೆ ನಿರಾವರಿ ಸೌಲಭ್ಯ ದೊರೆಯುತ್ತದೆ;

ಇ) ಮೇಲ್ಕಂಡ ನೀರಿನ ಪ್ರಮಾಣದಲ್ಲಿ ಈ ರಾಜ್ಯವು ಬಳಕೆ ಮಾಡುತ್ತಿರುವ ನೀರಿನ ಪ್ರಮಾಣವು ಅತ್ಯಲ್ಪವಾಗಿರುವುದು (ಕೇವಲ 0.70 ಟಿಎಂಸಿ) ನಿಜವಲ್ಲವೇ;

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಉ) ಮೇಲ್ಕಂಡ ಯೋಜನೆಯಿಂದ ಬರುತ್ತಿರುವ ನೀರಿನಿಂದ ಈಗ ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಊ) ರಾಜ್ಯದ ಪಾಲಿನ ನೀರಿನ ಪೂರ್ಣ ಬಳಕೆಗಾಗಿ ಇಲ್ಲಿಯವರೆಗೆ ಎಷ್ಟು ಸಣ್ಣ ನೀರಾವರಿ ಯೋಜನೆಗಳನ್ನು ತಯಾರಿಸಲಾಗಿದೆ ಹಾಗೂ ಇವುಗಳ ಅಂದಾಜು ವೆಚ್ಚವೆಷ್ಟು ಮತ್ತು ಇಲ್ಲಿಯವರೆಗೆ ಈ ಯೋಜನೆಗಳಿಗೆ ಬಿಡುಗಡೆ ಮಾಡಲಾಗಿರುವ ಹಣದ ಮೊತ್ತವೆಷ್ಟು;

ಋ) ಹಾಗಿದ್ದಲ್ಲಿ, ರಾಜ್ಯ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳೇನು;

ಎ) ಈ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಸಣ್ಣ ನೀರಾವರಿ ಯೋಜನೆಗಳಿಗಾಗಿ ಔರಾದ್ ತಾಲ್ಲೂಕಿನಲ್ಲಿ 2.50 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು ನಿಜ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಮತ್ತು ಈ) 0.93 ಟಿ.ಎಂ.ಸಿ. ನೀರನ್ನು ಬಳಕೆ ಮಾಡಲಾಗುತ್ತಿದೆ. ಉಳಿದ 1.57 ಟಿ.ಎಂ.ಸಿ. ನೀರನ್ನು ಅನುದಾನದ ಕೊರತೆಯಿಂದ ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಉ) 15973 ಎಕರೆಗಳಿಗೆ ಒದಗಿಸಲಾಗಿದೆ.

ಊ) 6 ಕಾಮಗಾರಿಗಳು ಮಂಜೂರಾಗಿದ್ದು, ಇದರ ಅಂದಾಜು ಮೊತ್ತ 1455.00 ಲಕ್ಷ ರೂ.ಗಳ ಪೈಕಿ ಈಗಾಗಲೇ 707.00 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಋ) ಸಣ್ಣ ನೀರಾವರಿಗೆ ಹಂಚಿಕೆಯಲ್ಲಿ ಉಳಿದ 1.33 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು 37 ಯೋಜನೆಗಳನ್ನು ಗುರುತಿಸಲಾಗಿದ್ದು, ಇದಕ್ಕೆ 6835.00 ಲಕ್ಷ ರೂ.ಗಳು ಬೇಕಾಗುತ್ತದೆ. ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಎ) ಅನುದಾನ ಇನ್ನೂ ನಿಗದಿಪಡಿಸಿಲ್ಲ.

ಪ್ರಶ್ನೆ ಸಂಖ್ಯೆ : 132 ಕ್ಕೆ ಅನುಬಂಧ-1

ಔರಾದ್ ತಾಲ್ಲೂಕಿನ ನೀರಾವರಿಯ ಕಾಮಗಾರಿಗಳು

ಕ್ರ. ಸಂ.	ಕೆರೆಗಳ ಮೂಲದಿಂದ	ಅಚ್ಚು ಕಟ್ಟು ಎಕರೆಗಳಲ್ಲಿ
1	2	3
1	ಬಾವಲಗಾಂವ	907
2	ಮೆಡಪಳ್ಳಿ	1020
3	ಹುಲಿಯಾಳ್	310
4	ಗಂಗನಬೀಡ್	100
5	ಜಮಾಲ್‌ಪುರ	450
6	ಬರದಾಪುರ್	462
7	ಬೊಂತಿ	470
8	ಕಂಡಿಕೆರೆ	650
9	ಭಂಡಾರ್‌ಕೊಂಟ	1050
10	ಚಿಂತಕಿ	317
11	ತೆಗಂಪುರ್	2685
12	ದಾಪಕ	600
13	ಚಿಕಲಿ (ಜೆ)	1005
14	ಕೊಳ್ಳೂರು	440
15	ಚಿಕಲಿ (ಯು)	343
16	ಎಕಂಬಾ	1048
17	ಗಣೇಶ್‌ಪುರ (ಯು)	750
18	ನಾಗನಪಲ್ಲಿ	153
	ಏತ ನೀರಾವರಿ ಯೋಜನೆಗಳು	
1	ನಿಟ್ಟೂರು (ಕೆ)	1013
2	ಸೊನಾಲ ಹೊರಂಡಿ	2020
	ಒಟ್ಟು	**15793**

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪಟ್ಟಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಬರಲಿಲ್ಲ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಬರಲಿಲ್ಲ ಅಂದರೆ ತಾವು ಆಗ ಸದನದಲ್ಲಿ ಇರಲಿಲ್ಲ. ನೀವು ಬಂದಾಗ ನಿಮ್ಮನ್ನು ಕರೆಯುವುದಕ್ಕೆ ಅಗುತ್ತದೆಯೇ? ಕರೆದಾಗ ತಾವು ಇರಲಿಲ್ಲ, ಈಗ ದಯಮಾಡಿಸಿದ್ದೀರಿ. ನಾನು ದಯಮಾಡಿಸಿದ್ದೇನೆ ಎಂದಾದರೂ ಕೂಡ ತಿಳಿಸಬೇಕಲ್ಲವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಇಲ್ಲಿಯೇ ಕುಳಿತಿದ್ದೇನೆ.

ಅಧ್ಯಕ್ಷರು : ಆಯಿತು, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಈಗ ನಾವು ಬೀದರ್ ಜಿಲ್ಲೆ ಕೃಷ್ಣ ಬೇಸಿನ್‌ಗೂ ಬರುವುದಿಲ್ಲ, ಕಾವೇರಿ ಬೇಸಿನ್‌ಗೂ ಬರುವುದಿಲ್ಲ. ಕೇವಲ ಗೋದಾವರಿ ಬೇಸಿನ್‌ನಲ್ಲಿ ಸ್ವಲ್ಪ ನೀರನ್ನು ಮಾತ್ರ ಬಚಾವತ್ ಪ್ರಕಾರ ನಮ್ಮ ಪಾಲಿಗೆ ಬರುತ್ತದೆ. ನಿಜಾಮಸಾಗರ ಒಳಗಡೆ ಹರಿಯತಕ್ಕಂತಹ ನೀರು 17 ಟಿಎಂಸಿ ಬರುತ್ತದೆ. ನಿಜಾಮ ಸಾಗರ ಹೊರಗಡೆ ಹರಿಯತಕ್ಕಂತಹ ನೀರು 2.5 ಟಿಎಂಸಿ ನೀರು ಬರುತ್ತದೆ. ನಾನು ಅದನ್ನೇ ಕೇಳಿರುವುದು. 2.5 ಟಿಎಂಸಿ ಒಳಗಡೆ ಹರಿಯತಕ್ಕಂಥ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡುತ್ತೀರಾ? ಕೆಲವು ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಇನ್ನು '1.57 ಟಿಎಂಸಿ ನೀರನ್ನು ಅನುದಾನದ ಕೊರತೆಯಿಂದ ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ' ಎನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ಇದು ಒಂದು, ಇನ್ನೊಂದು ಏನೆಂದರೆ 17 ಟಿಎಂಸಿ ನೀರನ್ನು ಗೋದಾವರಿ ಬೇಸಿನ್‌ನಲ್ಲಿ ನಿಜಾಮ್‌ಸಾಗರದ ಒಳಗಡೆ ಬರತಕ್ಕಂಥದ್ದು ಏನಿದೆ ನಾಲ್ಕು ಏತ ನೀರಾವರಿ ಯೋಜನೆಗಳನ್ನು ಮಾನ್ಯ ಖರ್ಗೆಯವರು ಸಚಿವರಾಗಿದ್ದಾಗ ಸ್ಯಾಂಕ್ಷನ್ಡ್ ಮಾಡಿದ್ದಾರೆ. ಅವುಗಳಿಗೆ ಈಗ ಟೆಂಡರನ್ನು ಕರೆದಿದ್ದಾರೆ. ತಾವು ಅದನ್ನು ಮುಂದುವರಿಸುತ್ತೀರಾ? ಅದ್ಯಾವುದೂ ಗೋದಾವರಿ ಬೇಸಿನ್ ಬಗ್ಗೆ ಈ ಬಜೆಟ್‌ನಲ್ಲಿ ಬಂದಿರುವುದಿಲ್ಲ. ಅದನ್ನು ಈ ಬಜೆಟ್‌ನಲ್ಲಿ ತೋರಿಸಿಯೇ ಇಲ್ಲ. ಬೀದರ್ ಜಿಲ್ಲೆ ಬರುವುದು ಬರೀ ಗೋದಾವರಿ ಬೇಸಿನ್‌ನಲ್ಲಿ ಮಾತ್ರ. ಬೀದರ್ ಜಿಲ್ಲೆ ಸಂಪೂರ್ಣವಾಗಿ ಈ ಬಜೆಟ್‌ನಲ್ಲಿ ಕಡೆಗಣಿಸಲ್ಪಟ್ಟಿದೆ. ತಾವು ಪುನಃ ಅದನ್ನು ಸೇರಿಸುತ್ತೀರಾ? 4 ಟಿಎಂಸಿ ನೀರನ್ನು ಉಪಯೋಗ ಮಾಡುವಂತಹದ್ದು ಏನಿದೆ ಈ ಮಾಂಜ್ರಾ ನದಿಯಿಂದ ಬೀದರ್ ಮತ್ತು ಔರಾದ್ ತಾಲ್ಲೂಕು, ಭಾಲ್ಕಿ ತಾಲ್ಲೂಕು ಈ 3 ತಾಲ್ಲೂಕುಗಳಿಗೆ ಈ ನೀರಿನಿಂದ ಅನುಕೂಲವಾಗುತ್ತದೆ. ಅದಕ್ಕಾಗಿ ಏನು ನಾಲ್ಕು ಏತನೀರಾವರಿಗಳು ಮಂಜೂರಾಗಿದೆ, ಅದಕ್ಕಾಗಿ ಟೆಂಡರನ್ನು ಕರೆದಿದ್ದಾರೆ, ಅದನ್ನು ತಾವು ಮುಂದುವರಿಸಬೇಕು. ಇನ್ನು ಎರಡು ಏತ ನೀರಾವರಿಗಳನ್ನು ಹೊಸದಾಗಿ ತೆಗೆದುಕೊಳ್ಳಬೇಕೆಂದು ಮಾನ್ಯ ಖರ್ಗೆಯವರು ಸಿದ್ಧಮಾಡಿಕೊಂಡಿದ್ದರು. ಅದು ಮಂಜೂರಾತಿಯ ಹಂತದಲ್ಲಿತ್ತು. ಅದು ಈಗ ಯಾವ ಹಂತದಲ್ಲಿದೆ? ತಾವು ಅದನ್ನು ಮುಂದುವರಿಸುತ್ತೀರಾ? ದಯವಿಟ್ಟು ಇದರ ಬಗ್ಗೆ ತಾವು ಸಂಪೂರ್ಣವಾಗಿ ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಹೇಳಿದಾಗ, 2.5 ಟಿಎಂಸಿ ನೀರು ತಮ್ಮ ಔರಾದ್ ತಾಲ್ಲೂಕಿಗೆ ಸೀಮಿತವಾಗಿ ಸರ್ಕಾರದಿಂದ ಉಪಯೋಗವಾಗಬೇಕೆಂದು

ಆಗಿದೆ. ಇದು ಟೋಟಲ್ 7.5 ಇದು ನಮಗೆ ಬರಬೇಕಾಗಿರುವುದು ಗೋದಾವರಿ ಬೇಸಿನ್‌ನಲ್ಲಿ ನೀರಾವರಿ ವ್ಯವಸ್ಥೆಯಲ್ಲಿ 2.5 ಮಾತ್ರ ಔರಾದಕ್ಕೆ ಇವತ್ತು ಬಿಡುಗಡೆಯಾಗುತ್ತಿರುವುದು ತಮ್ಮ ಗಮನದಲ್ಲಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದರಲ್ಲಿ ಇನ್ನೂ 6 ಕಾಮಗಾರಿಗಳಿಗಾಗಿ ಇವತ್ತು ಮಂಜೂರಾತಿಯಾಗಿದೆ. ಇದಕ್ಕಾಗಿ 14 ಕೋಟಿ 55 ಲಕ್ಷ ರೂಪಾಯಿಗಳು ಬೇಕಾಗಿದೆ. ಈಗಾಗಲೇ ಇದಕ್ಕೆ 14.55 ಲಕ್ಷದಲ್ಲಿ 707 ಲಕ್ಷ ರೂಪಾಯಿಗಳು ಖರ್ಚಾಗಿದೆ. ಇನ್ನು 37 ಯೋಜನೆಗಳಿಗೆ 68 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಈ ಸಣ್ಣ ನೀರಾವರಿ ಯೋಜನೆಗಳಲ್ಲಿ ಹಂಚಿಕೆಯಲ್ಲಿ ಉಳಿದ 1.33 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು 37 ಯೋಜನೆಗಳನ್ನು ಗುರುತಿಸಲಾಗಿದ್ದು ಇದಕ್ಕೆ 68 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅನುದಾನದ ಲಭ್ಯತೆಯ ಮೇರೆಗೆ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂಬುದನ್ನು ಸಹಿತ ತಮ್ಮ ಗಮನಕ್ಕೆ ತಂದಿದ್ದೇವೆ. ಈಗಾಗಲೇ ಇರುವಂತಹ ಯೋಜನೆಗಳಲ್ಲಿ ತಮಗೆ 15793 ಎಕರೆಗಳಲ್ಲಿ ನೀರಾವರಿಯಾಗುತ್ತಿರುವ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇವೆ. ಅದರಲ್ಲಿ 12 ಸಾವಿರ ಎಕರೆ ಕೆರೆಗಳಿಂದ ಮತ್ತು 3 ಸಾವಿರ ಎಕರೆ ಎರಡು ಏತನೀರಾವರಿಗಳಿಂದ ಎಂಬುದರ ಬಗ್ಗೆಯೂ ಸಹ ತಮ್ಮ ಗಮನಕ್ಕೆ ತಂದಿದ್ದೇವೆ. ಅದಕ್ಕಾಗಿ ಹಣಕಾಸಿನ ಲಭ್ಯತೆಯ ಮೇರೆ ಉಳಿದ 37 ಯೋಜನೆಗಳನ್ನು ತಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಈಗ ಅನುದಾನದ ಕೊರತೆ ಇರುವುದರಿಂದ ಮುಂದೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ಇವೆಲ್ಲಾ ಸಣ್ಣ ಸಣ್ಣ ಕೆರೆಗಳು, ಬಹಳ ದೊಡ್ಡ ದೊಡ್ಡ ಕೆರೆಗಳು ಅಲ್ಲ, ಅವನ್ನು ನಬಾರ್ಡ್‌ನಲ್ಲಿ, ಅಥವಾ ಬೇರೆ ಬೇರೆ ವರ್ಲ್ಡ್ ಬ್ಯಾಂಕ್‌ನಲ್ಲಿ ತಾವು ತೆಗೆದುಕೊಳ್ಳಬಹುದು. ಇದಕ್ಕೆ ವರ್ಲ್ಡ್‌ಬ್ಯಾಂಕ್‌ನಲ್ಲಿ ಬೇಕಾದಷ್ಟು ಅನುದಾನ ಇದೆ, ನಬಾರ್ಡ್‌ನಲ್ಲಿದೆ, ಅದನ್ನು ತಾವು ತೆಗೆದುಕೊಳ್ಳಬಹುದು. ನಾನು ಇನ್ನೊಂದನ್ನು ಕೇಳಿದ್ದೆ, ಮಾಂಜ್ರಾ ನದಿಯಲ್ಲಿ ಲಿಫ್ಟ್ ಇರಿಗೇಷನ್ ನಾಲ್ಕು ಮಂಜೂರಾಗಿದ್ದು, ಅದು ಟೆಂಡರ್ ಹಂತದಲ್ಲಿದೆ. ಅದಕ್ಕೆ ಟೆಂಡರ್‌ನ್ನು ಕರೆದು ಮುಂದುವರಿಸಿದ್ದಾರೆ, ಅದನ್ನು ಈ ಬಜೆಟ್‌ನಲ್ಲಿ ತೋರಿಸಿರುವುದಿಲ್ಲ. ಇದನ್ನು ಮಾಡುವುದಿದ್ದರೆ ಅದನ್ನು ಮುಂದುವರಿಸುವುದಿದ್ದರೆ ಅಥವಾ ನಿಲ್ಲಿಸುವುದಿದ್ದರೆ ಇದಕ್ಕೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬೇಕಾಗಿದೆ. ಅಥವಾ ಒಂದು ವೇಳೆ ಬಜೆಟ್‌ನಲ್ಲಿ ಸೇರಿಸದಿದ್ದರೆ ಈಗ ಸೇರಿಸುತ್ತೀರಾ? ಅಷ್ಟನ್ನು ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : ಈಗ ಮಾಂಜ್ರಾ ನದಿಯದ್ದು ಈಗ ನಮ್ಮ ಹತ್ತಿರ ಇರುವುದು, 20 ಸಣ್ಣ ನೀರಾವರಿಗಳಿಗೆ 93 ಟಿಎಂಸಿ ನೀರನ್ನು ಬಳಸಲಾಗುತ್ತಿದೆ. ಉಳಿದ 1.25 ಟಿಎಂಸಿ ಮಾಂಜ್ರಾ ನದಿಯ ಉಳಿದ ಯೋಜನೆಗಳ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಏನು 37 ಯೋಜನೆಗಳು ಇದೆಯಲ್ಲಾ ಅದರಲ್ಲಿ ಮಾಂಜ್ರಾ ನದಿಯೂ ಸೇರಿರಬಹುದು. ನಾನು ವಿವರಗಳನ್ನು ಪಡೆದುಕೊಂಡು ತಮಗೆ ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರ ಹತ್ತಿರ ಡಿಟೇಲ್ ಆಗಿ ಬಂದಿರುವಂತಹ ಮಾಹಿತಿ ಇಲ್ಲ. ಅಧಿಕಾರಿಗಳು ತಮಗೆ ಉತ್ತರವನ್ನು ಸರಿಯಾಗಿ ಹೇಳಲಿಲ್ಲ ಎಂದು ಕಾಣಿಸುತ್ತದೆ. 4 ನೀರಾವರಿ ಯೋಜನೆಗಳು ಮಂಜೂರಾಗಿದೆ, ಅದರ ಬಗ್ಗೆ ಟೆಂಡರ್ ಆಗಿದೆ.

ಶ್ರೀ ಸಿ.ಎಂ. ಉದಾಸಿ : ತಮಗೆ ಗೊತ್ತಿರುವ ಹಾಗೆ, ತಾವು ಕೇಳುತ್ತಿರುವಂತಹ ಮಾಂಜ್ರಾ ಇರಿಗೇಷನ್ ವರ್ಕ್ ಇದು ಮೇಜರ್ ಇರಿಗೇಷನ್ ಬರುತ್ತದೆ. ದಯವಿಟ್ಟು ಆ ಪ್ರಶ್ನೆಯನ್ನು ಅವರು ನೇರವಾಗಿ ಕಳುಹಿಸಿದರೆ ಮತ್ತೆ ನಾನು ಮಾಹಿತಿಯನ್ನು ಪಡೆದುಕೊಂಡು ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಕೃಷ್ಣಬೈರೇಗೌಡರೆ, ತಾವು ಲೇಟಾಗಿ ಬಂದು ಪ್ರಶ್ನೆ ಕೇಳಿದರೆ ಹೇಗೆ? ಈಗಾಗಲೇ ಪ್ರಶ್ನೋತ್ತರ ಪ್ರಾರಂಭವಾಗಿ ಒಂದೂಕಾಲು ಗಂಟೆಯಾಗಿದೆ.

(ಗೊಂದಲ)

ಅಧ್ಯಕ್ಷರು : ಏನಾಗಿದೆ ಎಂದರೆ, ಪ್ರಶ್ನೋತ್ತರವನ್ನು ಚರ್ಚೆ ಮಾಡುವ ರೀತಿಯಲ್ಲಿ ಮಾಡಿದರೆ ಹೇಗೆ ಅವಕಾಶವನ್ನು ಕೊಡುವುದಕ್ಕಾಗುತ್ತದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಚರ್ಚೆ ಮಾಡುವ ತರಹ ಅವಕಾಶವನ್ನು ಕೊಡಿ. ಇಲ್ಲಿ ಬಹಳ ಮಹತ್ವ[illegible] ವಿಷಯವಿದೆ. ನಾವು ಬೀದರ್ ಜಿಲ್ಲೆಯ ಭಾಗದಿಂದ ಬಂದಿದ್ದೇವೆ. ಮಾನ್ಯ ನಂಜುಂ[illegible] ವರದಿಯ ಪ್ರಕಾರ ಇದು ಅತಿ ಹಿಂದುಳಿದಿದೆ ಎಂದು ಹೇಳಿದ್ದಾರೆ.

ಅಧ್ಯ[illegible] [illegible]ಯಿತು ತಾವು 69 ನಿಯಮದ ಅಡಿಯಲ್ಲಿ ಕಳುಹಿಸಿ. ಆಗ ನಾನು ಇದನ್ನು ಪರಿಶೀಲ[illegible]ತ್ತೇನೆ.

ಶ್ರೀ ಗುರು[illegible] ನಾಗಮಾರಪಲ್ಲಿ : ತಾವು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಅವಕಾಶವನ್ನು ಕೊಡುತ್ತೇನೆ. ಕೃಷ್ಣಬೈರೇಗೌಡರೆ, ಎರಡು ನಿಮಿಷದಲ್ಲಿ ತಾವು ಮುಗಿಸಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಹತ್ತನೇ ತರಗತಿಯ ಫಲಿತಾಂಶ ಸುಧಾರಣೆ

26 (156) ಶ್ರೀ ಕೃಷ್ಣ ಬೈರೇಗೌಡ. ಸಿ.ಬಿ. (ವೇಮಗಲ್): ಮಾನ್ಯ ಪ್ರಾಥಮಿಕ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 10ನೇ ತರಗತಿಗಳ ಫಲಿತಾಂಶದಲ್ಲಿ ಅತೀ ಕಡಿಮೆ ಫಲಿತಾಂಶವನ್ನು ಪಡೆದಿರುವಂತಹ ಕೋಲಾರ ಹಾಗೂ ಇತರೆ ಜಿಲ್ಲೆಗಳಲ್ಲಿ ಶಿಕ್ಷಣ ಮಟ್ಟವನ್ನು ಸುಧಾರಿಸಲು ಯಾವ ವಿಶೇಷ ಕ್ರಮ ತೆಗೆದುಕೊಳ್ಳಲಾಗಿದೆ; [ಮಾಹಿತಿಯನ್ನು ನೀಡುವುದು]?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಉತ್ತಮಪಡಿಸುವ ಬಗ್ಗೆ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

* 10ನೇ ತರಗತಿಯ ವಿಭಾಗಗಳಿಗೆ ವಾರದ ವಿಶೇಷವಾದ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು.
* ವಿಶೇಷ ಗುಂಪು ಚಟುವಟಿಕೆಗಳು.
* ಗೃಹ ಪಾಠ ನೀಡುವುದು.
* ಘಟಕ ಪರೀಕ್ಷೆಗಳನ್ನು ನಡೆಸುವುದು.
* ಪಠ್ಯ ವಿಷಯಗಳ ಬಗ್ಗೆ ವಿಶೇಷ ತರಬೇತಿಗಳನ್ನು ನೀಡುವುದು.
* ಪ್ರಶ್ನೆ ಪತ್ರಿಕೆ ಕೋಟಿ [Question Bank] ತಯಾರಿಸುವುದು.
* ಪೋಷಕರ ಸಂಪರ್ಕ ನಡೆಸುವುದು.
* ವಿದ್ಯಾರ್ಥಿಗಳ ಗುಂಪು ರಚನೆ ಮಾಡಿ ಬೋಧಿಸುವುದು.
* ಹಾಜರಾತಿ ಕಡ್ಡಾಯಪಡಿಸುವುದು.
* ಪರೀಕ್ಷಾ ವಿಧಾನ ತಂತ್ರಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವುದು.
* ಹಿಂದುಳಿದ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಳ್ಳುವುದು.
* ಅಂತಿಮ ಪರೀಕ್ಷೆಗೆ ಮೊದಲು, ಮಾದರಿ ಅಣಕು ಪರೀಕ್ಷೆಗಳನ್ನು ನಡೆಸುವುದು
* ಕ್ವಿಜ್, ಸೆಮಿನಾರ್, ವಿಷಯವಾರು ಗುಂಪು ಚರ್ಚೆ, ಶೈಕ್ಷಣಿಕ ಪ್ರವಾಸ ನಡೆಸುವುದು.
* ಅತ್ಯುತ್ತಮ ದರ್ಜೆಯ ವಿದ್ಯಾರ್ಥಿಗಳ ಪಟ್ಟಿ ತಯಾರಿಸಿ ಅವರುಗಳ ಜೊತೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ವಿಶೇಷ ಬೋಧನೆ ಮಾಡುವುದು.
* ಚಾರ್ಟ್‌ಗಳು ಮತ್ತು ವಿಷಯವಾರು ಮಾಹಿತಿ ಸಂಗ್ರಹಿಸುವುದು.
* ಪ್ರಶ್ನೆ ಪತ್ರಿಕೆ ಪೆಟ್ಟಿಗೆ ಹಾಗೂ ಸಲಹಾ ಪೆಟ್ಟಿಗೆ ಉಪಯೋಗ ಪಡೆಯುವುದು.
* ತಾಲ್ಲೂಕುವಾರು ವಿಭಾಗ ಮಾಡಿ ನೋಡಲ್ ಅಧಿಕಾರಿಗಳನ್ನು ನೇಮಿಸಿ ಉಸ್ತುವಾರಿ ನೋಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ.
* ರಾತ್ರಿ ಮತ್ತು ಹಗಲಿನ ವಿಶೇಷ ವೇಳೆಯಲ್ಲಿ ಬೋಧನೆಗಳನ್ನು ನಡೆಸುವುದು.

ಅಲ್ಲದೇ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಂದ ಸುತ್ತೋಲೆ ಸಂಖ್ಯೆ: ಸಿ4[6] ಎಸ್‌ಎಸ್‌ಎಲ್ ಸಿ.ಫ. 2005–06, ದಿನಾಂಕ: 16–01–2006 ರಂದು ಹೊರಡಿಸಲಾಗಿದೆ. ಸದರಿ ಸುತ್ತೋಲೆಯ ಅನುಬಂಧ–1ರಲ್ಲಿ ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ವಿಷಯ ಪರಿವೀಕ್ಷಕರು ಪಾಲಿಸಬೇಕಾದ ಅಂಶಗಳನ್ನು ವಿವರಿಸಲಾಗಿದೆ [ಅನುಬಂಧ–1ನ್ನು ಲಗತ್ತಿಸಿದೆ] ಶಾಲಾ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ವೃಂದದವರಿಗೆ ಮಾರ್ಗದರ್ಶನ / ಸಲಹೆ ನೀಡಲು ಶಾಲೆಗಳ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕೋರಿದೆ.

ಅನುಬಂಧ-1

ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶವನ್ನು ಉತ್ತಮ ಪಡಿಸುವ ಬಗ್ಗೆ ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ವಿಷಯ ಪರಿವೀಕ್ಷಕರು ಪಾಲಿಸಬೇಕಾದಂತಹ ಅಂಶಗಳು

ಶಿಕ್ಷಕರಿಗೆ:-

1. ಮಕ್ಕಳ ಕಲಿಕೆಯ ಬಗ್ಗೆ ವಿಷಯ ಶಿಕ್ಷಕರು ಖಾತ್ರಿಪಡಿಸಿಕೊಳ್ಳಬೇಕು.
2. ಬೋಧನೆ – ಕಲಿಕೆ ಜೊತೆ ಜೊತೆಯಲ್ಲಿಯೇ ಸಾಗಬೇಕು.
3. ವಿಷಯಕ್ಕೆ ಸಂಬಂಧಪಟ್ಟಂತೆ ಸನ್ನಿವೇಶಗಳನ್ನು ಸೃಷ್ಟಿಸಿ, ಮಕ್ಕಳಲ್ಲಿ ನೆನಪಿನ ಶಕ್ತಿ ಅಭಿವೃದ್ಧಿಪಡಿಸಬೇಕು.
4. ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನೆಗಳನ್ನು ವಿಶ್ಲೇಷಿಸುವ ಸಾಮರ್ಥ್ಯಗಳನ್ನು ಮಕ್ಕಳಲ್ಲಿ ಬೆಳೆಸಬೇಕು.
5. ಕೊಟ್ಟಿರುವ ಪ್ರಶ್ನೆಗೆ ಸತ್ಯ ಉತ್ತರದ ನಿಖರತೆ, ಪ್ರಮಾಣದ ಅರಿವನ್ನು ಮಕ್ಕಳಲ್ಲಿ ಬೆಳೆಸಬೇಕು.
6. ಮಾಡಿ ಮುಗಿಸಿದ ಅಧ್ಯಾಯ, ಪಾಠಗಳನ್ನು ವಿದ್ಯಾರ್ಥಿಗಳು ತಮ್ಮ ಸ್ವಂತ ಅಧ್ಯಯನ ಸಮಯದಲ್ಲಿ ಆಗ್ಗಾಗ್ಗೆ ಪುನಾರಾವರ್ತನೆ ಮಾಡುವಂತೆ, ಮಕ್ಕಳಿಗೆ ಸ್ವಂತ ಅಧ್ಯಯನ ವೇಳಾಪಟ್ಟಿಯನ್ನು ನೀಡಿ, ಮಾರ್ಗದರ್ಶನ ಮಾಡಬೇಕು.
7. ಶಾಲಾ ಅವಧಿಯಲ್ಲಿ ಮಕ್ಕಳನ್ನು ಕಿರುಗುಂಪುಗಳಾಗಿ ಮಾಡಿ, ವಿಷಯ ಅಧ್ಯಾಪಕರ ಮಾರ್ಗದರ್ಶನದಲ್ಲಿ ತಾವೇ ಪ್ರಶ್ನೋತ್ತರ ನಡೆಸುವಂತೆ ವ್ಯವಸ್ಥೆ ಮಾಡಬೇಕು.
8. ಮಕ್ಕಳಲ್ಲಿ ಶೈಕ್ಷಣಿಕ ಗಳಿಕೆ ಕಡಿಮೆ ಇರುವುದನ್ನು ಗುರುತಿಸಿ, ಪುನಃ ಬೋಧಿಸುವುದರ ಮೂಲಕ ಅವರ ಕಲಿಕಾ ಕ್ಲಿಷ್ಟತೆಯನ್ನು ಪರಿಹರಿಸುವುದು.
9. ಇಲಾಖೆ ಹಾಗೂ ಅಧ್ಯಾಪಕರು ಸಿದ್ಧಪಡಿಸಿರುವ ಪ್ರಶ್ನೆ ಸಮುಚ್ಚಯವನ್ನು ತರಗತಿಯಲ್ಲಿ ಚರ್ಚಿಸಿ, ಮಕ್ಕಳಿಗೆ ಮನದಟ್ಟು ಮಾಡಿ ಕೊಡುವುದು.
10. ವಿದ್ಯಾರ್ಥಿಗಳಲ್ಲಿ ಬರವಣಿಗೆ ಸಾಮರ್ಥ್ಯವನ್ನು ಹೆಚ್ಚಿಸುವುದು. (ಪ್ರಶ್ನೆಗಳಿಗೆ ಉತ್ತರ ಬರೆಯುವುದು, ಕೇಳಿ ಬರೆಯುವುದು ಮುಂತಾದ ವಿಧಾನಗಳಿಂದ).
11. ಕೊಟ್ಟಿರುವ ಅವಧಿಯೊಳಗೆ ಉತ್ತರ ಬರೆಯುವ ಸಾಮರ್ಥ್ಯವನ್ನು ಗಳಿಸುವಂತೆ ತಯಾರಿ ನೀಡುವುದು. ಇದು ನಿರಂತರವಾಗಿ ನಡೆಯಬೇಕು.
12. ಗಣಿತದಲ್ಲಿ ಒಂದು ಮಾದರಿಯ ಹಲವು ಲೆಕ್ಕಗಳನ್ನು ವಿದ್ಯಾರ್ಥಿಗಳು ಸ್ವತಃ ಮಾಡುವಂತೆ ಶಿಕ್ಷಕರು ಪ್ರೇರೇಪಿಸಬೇಕು.
13. ತರಗತಿಯ ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಸಾಮರ್ಥ್ಯ, ಪರೀಕ್ಷೆಗಳ ಫಲಿತಾಂಶದ ಬಗ್ಗೆ ನಿಖರವಾದ ಮಾಹಿತಿಯಲ್ಲಿ ದಾಖಲಿಸಿ, ಪರಿಶೀಲಿಸಬೇಕು ಹಾಗೂ ಕಲಿಕೆಯಲ್ಲಿ ಹಿಂದುಳಿದವರ ಬಗ್ಗೆ ಸೂಕ್ತ ಗಮನವನ್ನು, ಪ್ರಗತಿ ಹೊಂದಿದವರ ಬಗ್ಗೆ ಇನ್ನೂ ಹೆಚ್ಚಿನ ಸಾಧನೆಗೆ ಸೂಕ್ತ ಮಾರ್ಗದರ್ಶನವನ್ನು ನೀಡಿದ ಬಗ್ಗೆ ಮಾಹಿತಿ ಪುಸ್ತಕದಲ್ಲಿ ವಿಷಯವಾರು ಶಿಕ್ಷಕರು ದಾಖಲಿಸಬೇಕು.

ಮುಖ್ಯೋಪಾಧ್ಯಾಯರಿಗೆ :-

ಮೇಲಿನ ಅಂಶಗಳನ್ನು ಶಿಕ್ಷಕರು ಪಾಲಿಸುತ್ತಿರುವ ಬಗ್ಗೆ ಮುಖ್ಯ ಶಿಕ್ಷಕರು ಗಮನಿಸಿ, ದಾಖಲಿಸಬೇಕು. ಶಿಕ್ಷಕರು ಪಾಠಪ್ರವಚನದ ಬಗ್ಗೆ ಬೋಧನಾ ಟಿಪ್ಪಣಿಯ ಬಗ್ಗೆ ಕ್ರಮಬದ್ಧವಾಗಿರುವಂತೆ ಪ್ರೇರೇಪಿಸಬೇಕು. ಈ ಬಗ್ಗೆ ಶಿಕ್ಷಕರ ಅಶಿಸ್ತಿನ ವರ್ತನೆ ಕಂಡುಬಂದಲ್ಲಿ, ಕೂಡಲೇ ಮೇಲಾಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ ವರದಿ ಮಾಡುವ ಅಧಿಕಾರ ನೀಡಲಾಗಿದೆ.

ವಿಷಯ ಪರಿವೀಕ್ಷಕರಿಗೆ :-

ವಿಷಯ ಪರಿವೀಕ್ಷಕರು ಸರ್ಕಾರಿ ಶಾಲೆಗಳ ವಿಷಯ ಶಿಕ್ಷಕರನ್ನು ಆಗಾಗ್ಗೆ ಭೇಟಿ ಮಾಡಿ, ಅವರ ಬೋಧನಾ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವುದು. ಶಿಕ್ಷಕರಿಗೆ, ಮುಖ್ಯ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಪ್ರಗತಿ ಮಾಹಿತಿ ಪಡೆದು, ಮೇಲಾಧಿಕಾರಿಗಳಿಗೆ ಕಾಲಕಾಲಕ್ಕೆ ತಪ್ಪದಂತೆ ಒಪ್ಪಿಸುವುದು. ಫಲಿತಾಂಶ ಕಡಿಮೆ ಬಂದಲ್ಲಿ ವಿಷಯ ಪರಿವೀಕ್ಷಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಸುದೀರ್ಘವಾದಂತಹ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ ಮುಖ್ಯವಾದಂತಹ ಅಂಶವನ್ನು ಇಲ್ಲಿ ಅಲ್ಲಿ ಗಮನಿಸಲಿಕ್ಕೆ ಮರೆತಿದ್ದಾರೆಂದು ನಾನು ಭಾವಿಸುತ್ತಿದ್ದೇನೆ. ಏಕೆಂದರೆ, ನಾನು ಕೇಳಿರುವ ಶೈಕ್ಷಣಿಕವಾದ ಗುಣಮಟ್ಟದಲ್ಲಿ ಕೆಲವು ಜಿಲ್ಲೆಗಳು ಬಹಳ ಹಿಂದುಳಿದಿವೆ. ಕೊನೆಯ ಮಟ್ಟದಲ್ಲಿರತಕ್ಕಂತಹದ್ದು ನಮ್ಮ ಜಿಲ್ಲೆಯಾದ ಕೋಲಾರ ಜಿಲ್ಲೆ. ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. 2003–04ನೇ ಸಾಲಿನಲ್ಲಿ 27877 ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕುಳಿತಿದ್ದರು, 12135 ಮಕ್ಕಳು ಅದರಲ್ಲಿ ತೇರ್ಗಡೆಯಾಗಲಿಲ್ಲ; ಫೇಲಾಗಿದ್ದಾರೆ. 2004–05ನೇ ಸಾಲಿನಲ್ಲಿ 31762 ಮಕ್ಕಳು ಪರೀಕ್ಷೆಗೆ ಕುಳಿತುಕೊಂಡಿದ್ದರು. ಆದರೆ 15996 ಮಕ್ಕಳು ಮಾತ್ರ ಉತ್ತೀರ್ಣರಾಗಿದ್ದಾರೆ, 15766 ಮಕ್ಕಳು ಅನುತ್ತೀರ್ಣರಾಗಿದ್ದಾರೆ. ಶೇಕಡ ಅರ್ಧಭಾಗದಷ್ಟು ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ. ಇಲ್ಲಿ ನಮ್ಮ ಜಿಲ್ಲೆ ಮಾತ್ರವಲ್ಲ, ಕೋಲಾರ ಜಿಲ್ಲೆಗಳು ಇದೇ ಪರಿಸ್ಥಿತಿಯಲ್ಲಿದೆ. ಈ ಒಂದು ವರ್ಷ ಮತ್ತು ಎರಡು ವರ್ಷಗಳು ಮಾತ್ರ ಇದು ಆಗುತ್ತಿರುವುದಲ್ಲಾ, ಈ ರೀತಿಯಾಗಿ ಸತತವಾಗಿ ನಡೆಯುತ್ತಾ ಬಂದಿದೆ. ನಾನು ಕೇಳುತ್ತಿರುವಂತಹ ಪ್ರಶ್ನೆ ಏನೆಂದರೆ, ಕೆಲವು ಜಿಲ್ಲೆಗಳು ಭಾರಿ ಹಿಂದುಳಿದಿವೆ, ಇನ್ನೂ ಹಿಂದುಳಿದುಕೊಂಡೇ ಬಂದಿವೆ. ಮುಂದೆಯೂ ಸಹ ಬದಲಾವಣೆಯಾಗುವಂತಹ ಯಾವುದೇ ಮುನ್ಸೂಚನೆಗಳು ಇಲ್ಲ. ಇಲ್ಲಿ ತಾವು ಏನು ಉತ್ತರವನ್ನು ಕೊಟ್ಟಿದ್ದೀರಿ, ಅದರಲ್ಲಿ ತಾವು ಇಡೀ ರಾಜ್ಯಕ್ಕೆ ಅನುಸರಿಸುವಂತಹ ಕೆಲವು ಕ್ರಮಗಳನ್ನು ಉತ್ತರದ ಮುಖಾಂತರ ನೀಡಿದ್ದೀರಿ, ಅದರಲ್ಲಿ ಕೆಲವನ್ನು ಅನುಸರಿಸುತ್ತಿದ್ದೀರಿ. ಕೆಲವನ್ನು ಅನುಸರಿಸುತ್ತಿಲ್ಲ. ಆದರೆ ಇಲ್ಲಿ ಮುಖ್ಯವಾಗಿ ನನ್ನ ಪ್ರಶ್ನೆ ಏನೆಂದರೆ, ಏನು ಕೆಲವು ಜಿಲ್ಲೆಗಳು ಶೈಕ್ಷಣಿಕವಾಗಿ ಭಾರಿ ಹಿಂದುಳಿದಿವೆ, ಅದರಿಂದ ಶೇಕಡಾ ಅರ್ಧದಷ್ಟು ಮಕ್ಕಳು ಇವತ್ತು ನಾವು ಪ್ರಾಥಮಿಕ ಶಿಕ್ಷಣದಲ್ಲಿ ಈ ಬಿಸಿ ಊಟದ ಕಾರ್ಯಕ್ರಮಗಳನ್ನು ಮಾಡಿ ಸ್ಕೂಲಿನಿಂದ ಹೊರಗುಳಿಯತಕ್ಕಂತಹ ಮಕ್ಕಳ ಸಂಖ್ಯೆಯನ್ನು ಶೇಕಡ 95 ರಷ್ಟು, ನಾವು ಕಂಟ್ರೋಲ್ ಮಾಡಿದ್ದೇವೆ. ಅದು ಯಾರಷ್ಟೇ ಆಗಿರಲಿ ಅದು ಒಳ್ಳೆಯ ಸಾಧನೆಯಾಗಿದೆ. ಆದರೆ ಏನಾಗುತ್ತದೆ ಎಂದರೆ ಎಸ್‌ಎಸ್‌ಎಲ್‌ಸಿ ಒಂದರಲ್ಲಿಯೇ

ಶೇಕಡಾ ಅರ್ಧಭಾಗದಷ್ಟು ಮಕ್ಕಳನ್ನು ಈ ವಿದ್ಯಾವ್ಯವಸ್ಥೆ ಏನಿದೆ, ಎಜುಕೇಷನ್ ಸಿಸ್ಟಮ್‌ನಿಂದ ನಾವು ಆಚೆಗೆ ತಳ್ಳುತ್ತಿದ್ದೇವೆ. ಅದರಲ್ಲಿ 100ಕ್ಕೆ 5 ರಷ್ಟು ಮಕ್ಕಳು ವಾಪಸ್ಸು ಶಾಲೆಗೆ ಬಂದರೆ ಬಹುತೇಕ ಹೆಚ್ಚು. ನಾನು ಇದರ ಬಗ್ಗೆ ವಿಚಾರಣೆಯನ್ನು ಮಾಡಿದಾಗ 3 ಮಕ್ಕಳು ಫೇಲಾದರೆ............

ಅಧ್ಯಕ್ಷರು : ಮಾನ್ಯ ಕೃಷ್ಣಬೈರೇಗೌಡರೆ, ತಾವು ಪ್ರಶ್ನೆಯನ್ನು ಕೇಳುತ್ತಿದ್ದೀರಾ? ಏನು ಈ ತರಹ ಪೀಠಿಕೆಯನ್ನು ನೀವು 10 ನಿಮಿಷ ಹಾಕಿದರೆ ಹೇಗೆ? ನೀವು ಮೊದಲೆ ತಡವಾಗಿ ಬಂದಿದ್ದೀರಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ನಾನು ಪ್ರಶ್ನೆಯನ್ನು ಕೇಳಿಬಿಟ್ಟಿದ್ದೇನೆ.

ಅಧ್ಯಕ್ಷರು : ಏನು ಪ್ರಶ್ನೆಯನ್ನು ಕೇಳುತ್ತಿದ್ದೀರಾ? ಪೀಠಿಕೆಯನ್ನು ಹಾಕುವುದಕ್ಕೆ 10 ನಿಮಿಷಗಳು ಬೇಕೇ?

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ನನ್ನ ಮುಖ್ಯ ಅಂಶ ಏನೆಂದರೆ, ನಾವು ಒಂದು ಸ್ಟ್ರೋಕ್‌ನಲ್ಲಿ ಒಂದೇ ಒಂದು ಘಟ್ಟದಲ್ಲಿ ಶೇಕಡಾ ಅರ್ಧದಷ್ಟು ಮಕ್ಕಳನ್ನು ಶಾಲಾ ವ್ಯವಸ್ಥೆಯಿಂದ ಹೊರಗೆ ತಳ್ಳುತ್ತಿದ್ದೇವೆ. ನಾವು ಏನು 1ನೇ ತರಗತಿಯಲ್ಲಿ ಹೊರಗೆ ತಳ್ಳುತ್ತಿದ್ದೇವೆ. ಈ ಫಲಿತಾಂಶವನ್ನು ಅಭಿವೃದ್ಧಿಪಡಿಸಿ ಉಡುಪಿ ಜಿಲ್ಲೆ, ದಕ್ಷಿಣಕನ್ನಡ ಜಿಲ್ಲೆ ಇಂತಹ ಕಡೆಯಲ್ಲಿ ಏನು ಈ ತರಹದ ಫಲಿತಾಂಶ ಬರುತ್ತಿದೆ, ಆ ಮಟ್ಟಕ್ಕೆ ನಾವು ಈ ಕೆಳಗೆ ಹಿಂದುಳಿದಿರತಕ್ಕಂತಹ ಜಿಲ್ಲೆಗಳನ್ನು ತರದೇ ಹೋದರೆ ಈ ಹಿಂದುಳಿದ ಜಿಲ್ಲೆಗಳು ಶಾಶ್ವತವಾದಂತಹ ಶಾಪಕ್ಕೆ ಸಿಕ್ಕಿಕೊಂಡಂತೆ ಆಗುತ್ತದೆ. ಈ ಹಿಂದುಳಿದ ಜಿಲ್ಲೆಗಳಲ್ಲಿ ಶೈಕ್ಷಣಿಕವಾಗಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ತುಂಬಾ ಕಡಿಮೆ ಬರುತ್ತಿದೆ. ಅವುಗಳಿಗೆ ವಿಶೇಷವಾಗಿ ಏನಾದರೂ ತಾವು ಮಾಡುವುದಕ್ಕೆ ತಯಾರಿದ್ದೀರಾ? ಆ ಮಕ್ಕಳ ಭವಿಷ್ಯವನ್ನು ಕಾಪಾಡುವುದಕ್ಕೆ ಏನು ಮಾಡುತ್ತೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕೃಷ್ಣೇ ಬೈರೇಗೌಡರವರು ಹೇಳಿರುವುದು ನಿಜ. ಇದರಲ್ಲಿ ಎರಡು ಮಾತಿಲ್ಲ. ಈಗ ಇಡೀ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಯಾವ್ಯಾವ ಜಿಲ್ಲೆಗಳಿಗೆ ಕಡಿಮೆ ನಂಬರ್ ಬಂದಿದೆ ಅಲ್ಲಿ ಶಿಕ್ಷಕರ ಕೊರತೆ ಇದೆ. ಅಲ್ಲಿ ಸರಿಯಾದ ರೀತಿಯಲ್ಲಿ ಬಿಲ್ಡಿಂಗ್‌ಗಳ ವ್ಯವಸ್ಥೆ ಇಲ್ಲ. ಇನ್ನೊಂದು ಏನಾಗಿದೆಯೆಂದರೆ ಪ್ರಾಥಮಿಕ ಶಾಲೆಯಿಂದ 9ನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ಎಲ್ಲೆಲ್ಲಿಯೂ ಫೇಲ್ ಮಾಡುವ ಹಾಗಿಲ್ಲ. ಸರ್ಕಾರ 9ನೇ ವರ್ಷದಿಂದ 14ನೇ ವರ್ಷದವರೆಗಿನ ಮಕ್ಕಳನ್ನು ಯಾವುದೇ ರೀತಿಯಲ್ಲಿಯೂ ಫೇಲ್ ಮಾಡುವ ಹಾಗಿಲ್ಲ, ಅವರನ್ನು ಮುಂದುವರೆಸಿಕೊಂಡು ಹೋಗಬೇಕು. ಪ್ರಾಥಮಿಕ ಶಾಲೆಯಲ್ಲಿ Teacher's pupil ratio ಏನಿದೆ ಅದು ಸಾಕಷ್ಟು ಗೊಂದಲದಲ್ಲಿದೆ, ಒಬ್ಬ ಟೀಚರ್ ಇರುತ್ತಾನೆ, 150 ಮಕ್ಕಳು ಇರುತ್ತಾರೆ. ಆಮೇಲೆ ಹೈಸ್ಕೂಲಿಗೆ ಬಂದಾಗ ಸಹಿತ ಅದೇರೀತಿ ಇದೆ. ಹೀಗೆ ಹತ್ತು ಹಲವಾರು ಸಮಸ್ಯೆಗಳಿವೆ. ಕಾನೂನು ಸಮಸ್ಯೆಗಳು ಒಂದು ಕಡೆ ಬರುತ್ತದೆ. ಇನ್ನೂ ಕೂರ್ಗ್ ಹಾಗೂ ಬೇರೆ ಕರಾವಳಿ ಪ್ರದೇಶಗಳು, ಕೋಲಾರದಂಥ ಹಿಂದುಳಿದ ಪ್ರದೇಶಗಳಲ್ಲಿ ಯಾವ ರೀತಿಯಿಂದ ಕೆಲವು ಕಾನೂನುಗಳಲ್ಲಿ ಮಾರ್ಪಾಡು ಮಾಡಬೇಕು ಮತ್ತು ಹೆಚ್ಚು ಮಕ್ಕಳಿಗೆ ಯಾವ ರೀತಿಯಾದ ಶಿಕ್ಷಣವನ್ನು ಕೊಡಬೇಕು ಮತ್ತು ಸಮಗ್ರವಾದಂಥ ಅಭಿವೃದ್ಧಿಯನ್ನು ಮಾಡಲಿಕ್ಕೆ ಸರ್ಕಾರ ಎಲ್ಲಾ ರಿತಿಯ ಅಭಿವೃದ್ಧಿಯನ್ನು ಮಾಡಲಿಕ್ಕೆ ಹಿಂದುಳಿದ ಜಿಲ್ಲೆಗಳು ಅಂದರೆ 27 ಜಿಲ್ಲೆಗಳಿಗಿಂತ ಕೆಳಗಿರುತ್ತವೆ, ಅವುಗಳನ್ನು ಪರಿಗಣಿಸಿ ಶೈಕ್ಷಣಿಕವಾಗಿ ಒಟ್ಟು 32 ಜಿಲ್ಲೆಗಳನ್ನು ಮಾಡಬೇಕಾಗುತ್ತದೆ.

ಯಾವುದು ಲಾಸ್ಟ್ ನಂಬರ್ ಬಂದಿದೆ, ಆ ಜಿಲ್ಲೆಗೆ ಹೆಚ್ಚು ಒತ್ತನ್ನು ಕೊಟ್ಟು ಎಲ್ಲಾ ರೀತಿಯಿಂದ ಅನುಕೂಲಗಳನ್ನು ಮಾಡಿ ಬರುವಂಥ ದಿನಗಳಲ್ಲಿ ಉತ್ತಮವಾದ ರಿಸಲ್ಟ್ ಬರುವಂತೆ ಮಾಡಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಮುಕ್ತಾಯಗೊಳಿಸಲಾಗಿದೆ. ಇನ್ನು ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿ. ದಯಮಾಡಿ ಸಹಕರಿಸಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡ[illegible]ಗಳು.

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ, ಪ್ರೌಢ ಶಿ[illegible] ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, 22.[illegible]ರಡನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 34 ಪ್ರಶ್ನೆಗಳಲ್ಲಿ 28 ಉತ್ತರಗಳನ್ನು ಸ[illegible] ಮಂಡಿಸಿರುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ–I)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಗೈರುಹಾಜರಿ ಬಗ್ಗೆ.

ಅಧ್ಯಕ್ಷರು : ಈಗ ಆಯವ್ಯಯದ ಮೇಲೆ ಚರ್ಚೆ ಆರಂಭವಾಗುತ್ತದೆ. ಮೊದಲಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧ ಪಕ್ಷದ ನಾ[illegible]ರು ಆಯವ್ಯಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲೀ, ಉಪ ಮುಖ್ಯಮಂತ್ರಿಗಳಾಗಲಿ ಇಲ್ಲ, ಯಾರೂ ಇಲ್ಲ ಎಂದರೆ ಹೇಗೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದರು, ಈಗ ಹೋಗಿದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಪ್ರಶ್ನೋತ್ತರ ಇರುವುದರಿಂದ ಅಲ್ಲಿದ್ದಾರೆ. ಮುಖ್ಯಮಂತ್ರಿಗಳವರನ್ನು ಕರೆಸುತ್ತೇನೆ. ಆಯಿತು, ಬರುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧ ಪ[illegible]ಯಕರು ಅಂದರೆ ಮರ್ಯಾದೆಯಿಲ್ಲವೇ? ಏತಕ್ಕೆ ಹೀಗೆ ಮಾಡುತ್ತಿದ್ದಾರೆ. ಹೀಗೆ ಮಾಡಿದ[illegible]?

ಅಧ್ಯಕ್ಷರು : ಆಯಿತು, ನೀವು ಕುಳಿತುಕೊಳ್ಳಿ, ಅವರು ಬ[illegible]ಕಳುಹಿಸಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿನ್ನೆ ತಾನೆ ತಾವು [illegible]ದರೂ ಅವರಿಗೆ ತಿಳಿಯುವುದಿಲ್ಲ ಎಂದರೆ ಏನರ್ಥ?

ಅಧ್ಯಕ್ಷರು : ನೋಡಿ ನಿಮ್ಮ ಡಿ.ಸಿ.ಎಮ್. ಮೇಲ್ಮನೆಯಲ್ಲಿದ್ದಾರೆ, ಸಂಸದೀಯ ಸಚಿವರೇ ಮುಖ್ಯಮಂತ್ರಿಯವರನ್ನು ಕರೆಸಿ.

ಶ್ರೀ ಆರ್. ರೋಷನ್‌ಬೇಗ್ : ಅಧಿಕಾರಿಗಳು ಎಲ್ಲಿದ್ದಾರೆ? where is the Chief Secretary and Finance Secretary?

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಅಧ್ಯಕ್ಷರೇ ಇವರಿಗೆ ಯಾವ ಭಾಷೆಯಲ್ಲಿ ಹೇಳಬೇಕು ನೀವೇ ಹೇಳಿ. ನಿನ್ನೆ ಹಾಗೂ ಇವತ್ತು ಕೂಡ ಹೇಳಿದ್ದೇವೆ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆಂದು ಗೊತ್ತು. ಈಗ 11 ಗಂಟೆಗೆ ತಾವೇ ಹೇಳಿದಿರಿ, ನಿನ್ನೆ ಮೂರು ಗಂಟೆಯಲ್ಲೂ ಇದೇ ರೀತಿಯಾಗಿತ್ತು, ಹೀಗಾದರೆ ಹೇಗೆ? ಇವರಿಗೆ ಯಾವ ಭಾಷೆಯಲ್ಲಿ ಹೇಳಿದರೆ ಅರ್ಥವಾಗುತ್ತದೆಯೋ ಅದೇ ಭಾಷೆಯಲ್ಲಿ ಹೇಳುತ್ತೇವೆ. This is too much.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೌದು ನಿಜ, ಇದು ಅತಿ ಹೆಚ್ಚಾಯಿತು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮ್ಮ ಕಾರ್ಯಾಲಯದಲ್ಲಿ ನಡೆದಂತಹ ಮಾತಕತೆ ಏನು? ಪರಿಸ್ಥಿತಿ ಏನು?

ಅಧ್ಯಕ್ಷರು : ಆಯಿತು, ಬರುತ್ತಾರೆ, ಕುಳಿತುಕೊಳ್ಳಿ. ಹೇಳಿಕಳುಹಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಕುಳಿತುಕೊಳ್ಳಿ ಎಂದರೆ ಏನು?

ಶ್ರೀ ವಾಟಾಳ್ ನಾಗರಾಜ್ : ತಾವೇನು ಮಾತನಾಡುತ್ತೀದ್ದೀರೆಂಬುದು ನನಗೆ ಅರ್ಥವಾಗಲಿಲ್ಲ, ಬರುತ್ತಾರೆ ನೀವು ಕುಳಿತುಕೊಳ್ಳಿ ಎಂದರೆ ಏನು ಸಾರ್? ನಾವು ಕುಳಿತುಕೊಂಡೇ ಬಿಡೋಣ? ಏನು ಚರ್ಚೆ ಮಾಡುವುದೇ ಬೇಡವೇ?

ಅಧ್ಯಕ್ಷರು : ಈಗ ಎಲ್ಲಾ ಮಾನ್ಯ ಸದಸ್ಯರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಈಗ ನಾನು ಹೇಳಿಕಳುಹಿಸಿದ್ದೇನೆ, ಬರುತ್ತಾರೆ. ಮುಖ್ಯಮಂತ್ರಿಗಳು ಇಲ್ಲಿಯವರೆಗೆ ಇಲ್ಲಿ ಕುಳಿತಿದ್ದರು, ಹೇಳಿ ಕಳುಹಿಸಿದ್ದೇನೆ, ಉಪಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಪದೇ ಪದೇ ನೀವುಗಳು ನನಗೆ ಚುಚ್ಚತಕ್ಕಂಥ ಮಾತುಗಳನ್ನು ಆಡುತ್ತೀರಿ. ನನಗೆ ಅರ್ಥವಾಗುವುದಿಲ್ಲ, I can't understand. ನಿಮಗೆ ಅಗ್ಗವಾಗಿ ಸಿಕ್ಕಿಬಿಟ್ಟಿದ್ದೇವೆ. ನಾವು I can't understand.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ನಿಮಗೆ ಚುಚ್ಚತಕ್ಕಂಥ ಮಾತನಾಡುತ್ತಿಲ್ಲ. ತಾವೇ ಅವರಿಗೆ ಹೇಳಿದರೂ ಅವರಿಗೆ ಅರ್ಥವಾಗುತ್ತಿಲ್ಲವಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಕರೆಸಿ ಎಂದು ನಾವು ತಮಗೆ ಹೇಳಬೇಕು, ತಮಗಲ್ಲದೆ ಇನ್ಯಾರಿಗೆ ಹೇಳಬೇಕು?

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ, ಎಲ್ಲದಕ್ಕೂ ಒಂದು ಮಿತಿ ಬೇಕು.

ಶ್ರೀ ಧರಂಸಿಂಗ್ : ಅಧ್ಯಕ್ಷರೇ, ಯಾರಿಗೆ ಬೇಕು ಮಿತಿ, ನಮಗೆ ಬೇಕೇ ಅಥವಾ ಅದು ಅವರಿಗೆ ಬೇಕಾ?

ಅಧ್ಯಕ್ಷರು : ಎಲ್ಲಾ ಸದಸ್ಯರಿಗೂ ಬೇಕು ಸ್ವಾಮಿ. ದಯಮಾಡಿ ವಿರೋಧ ಪಕ್ಷದ ನಾಯಕರು ಮಾತನಾಡಿ.

ವಿತ್ತೀಯ ಕಾರ್ಯಕಲಾಪ

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ.

† **ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು)** : ಸನ್ಮಾನ್ಯ ಸಭಾಧ್ಯಕ್ಷರೇ, ಮೊನ್ನೆ 20ನೇ ತಾರೀಖು ರಾಜ್ಯದ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಬಹಳ ಸುದೀರ್ಘವಾದ ಬಜೆಟ್ ಅನ್ನು ಮಂಡಿಸಿದ್ದಾರೆ. ನಿನ್ನೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಈ ರಾಜ್ಯದ ಬಜೆಟ್ ಬಗ್ಗೆ ನಾವು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಿರಬೇಕು. ನಾವೆಲ್ಲರೂ ಕೂಡ ಸಾಕಷ್ಟು ಚರ್ಚೆ ಮಾಡಿದ್ದೇವೆ. ತಮಗೆ ಗೊತ್ತಿರುವಂತೆ ತಮ್ಮ ಕೊಠಡಿಯಲ್ಲಿಯೂ ಕೂಡ ಈ ಬಗ್ಗೆ ಮಾತುಕತೆಯಾಯಿತು. ಪ್ರಶ್ನೋತ್ತರ ಆದ ಮೇಲೆ ಮಾತನಾಡಬಹುದೆಂದು ಸಹ ಆದೇಶವನ್ನು ಕೊಟ್ಟಿದ್ದೀರಿ. ಈಗೇನು ಉಪ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿದ್ದಾರೆ. ಆಯಿತು, ಆದರೂ ಕೂಡ ನಿಗದಿತ ಕಾಲದಲ್ಲಿ ಆಯವ್ಯಯದ ಬಗ್ಗೆ ಮಾತನಾಡುವಂತಹ ಕಾಲದಲ್ಲಿ, ತಾವು ಹೇಳಿದ್ದರೂ ಕೂಡ ಈ ತರಹದ ಪ್ರವೃತ್ತಿ ಹಾಗೂ ಧೋರಣೆ ಏನಿದೆ ಅದು ಸರಿಯಿಲ್ಲ. ಅದರಿಂದ ನಮಗೆ ಬೇಸರವಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ, ನಾನು ಬೆಳಿಗ್ಗೇನೆ ಈ ಸಭೆಯಲ್ಲಿ ಭಾಗವಹಿಸಿದ್ದೆ. ರಾಜ್ಯಸಭೆಯ ಚುನಾವಣೆಯ ವಿಷಯದಲ್ಲಿ ಕರ್ನಾಟಕ ರಾಜ್ಯದ ಹಲವಾರು ಜನ ಸಾಹಿತಿಗಳು ನನ್ನನ್ನು ಭೇಟಿ ಮಾಡಬೇಕು ಎಂದು ಚೀಟಿಯನ್ನು ಕಳುಹಿಸಿದ್ದರು. ಕನ್ನಡ ಸಾಹಿತಿಗಳಿಗೆ ಅಗೌರವವನ್ನು ತೋರಿಸಬಾರದು ಎನ್ನುವ ದೃಷ್ಟಿಯಿಂದ ಆ ಸಂದರ್ಭದಲ್ಲಿ ಅವರೊಂದಿಗೆ ಮಾತನಾಡಲಿಕ್ಕೆ ಹೋಗಿದ್ದೆ, ಆಗ ಸದನದಲ್ಲಿ ಪ್ರಶ್ನೋತ್ತರ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ನಾನು ಹೋಗಿದ್ದೆ. ಅಷ್ಟರೊಳಗೆ ಆಯವ್ಯಯದ ಮೇಲಿನ ಚರ್ಚೆ ಪ್ರಾರಂಭವಾಗಿದೆಯೆಂದು ತಿಳಿದ ತಕ್ಷಣ ಅದಕ್ಕೋಸ್ಕರವೇ ಈಗ ಸದನಕ್ಕೆ ಬಂದೆ. ಸದನಕ್ಕೆ ಯಾವುದೇ ರೀತಿಯ ಅಗೌರವವನ್ನು ತೋರಿಸತಕ್ಕಂಥ ಪ್ರಶ್ನೆಯೇ ಇಲ್ಲ. ನಮ್ಮ ವಿರೋಧ ಪಕ್ಷದ ನಾಯಕರಿಗೆ, ಹಿರಿಯರಿಗೆ ಆ ವಿಷಯದಲ್ಲಿ ಏನಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಆ ವಿಷಯದಲ್ಲಿ ನಾವು ಅಸಡ್ಡೆಯಿಂದ ವರ್ತನೆ ಮಾಡಿರುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಧರ್ಮಸಿಂಗ್ : ಅಗೌರವವನ್ನು ತೋರಿಸುವ ಪ್ರಶ್ನೆ ಅಲ್ಲ. ಸದನದ ಕಾರ್ಯಕಲಾಪ ನಡೆಯತಕ್ಕಂಥ ಸಂದರ್ಭದಲ್ಲಿ ತಾವಿರಲೇಬೇಕು. ತಾವು ಸಾಹಿತಿಗಳ ಜೊತೆ ಮಾತನಾಡಲಿಕ್ಕೆ ಹೋಗಿದ್ದಿರಿ. ಸಾಹಿತಿಗಳ ಬಗ್ಗೆ ತಮ್ಮ ಪ್ರತಿಕ್ರಿಯೆ ಈಗಾಗಲೇ ಕೊಟ್ಟಿದ್ದೀರಲ್ಲಾ, ಮತ್ತೇನಿದೆ? ಆದರೂ ಕೂಡ ತಾವು ಹೋಗಿದ್ದಿರಿ, ಪರವಾಗಿಲ್ಲ.

ಈ ದಿನ ಸರ್‌ಪ್ಲಸ್ ಬಡ್ಜೆಟ್ಟಿನಲ್ಲಿ ಬಹಳಷ್ಟು ಪದಗಳನ್ನು ಉಪಯೋಗಿಸಿದ್ದೀರಿ. ಮಾನ್ಯ ಉಪ ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲ, ಅವರು ಕೌನ್ಸಿಲ್‌ನಲ್ಲಿದ್ದಾರೆ, ತಾವು ಬರೆದುಕೊಂಡು ಅವರಿಗೆ ಹೇಳಬೇಕಾಗಿದೆ. ಅವರು ಬಹಳ ಕವಿಯ ಹೃದಯದವರಾಗಿದ್ದಾರೆ. ಬಹಳ ಕವಿತೆಗಳು

---

† ಈ ಭಾಷಣವು ಮಾನ್ಯ ವಿರೋಧ ಪಕ್ಷದ ನಾಯಕರಿಂದ ಪರಿಷ್ಕರಿಸಲ್ಪಟ್ಟಿದೆ.

ಅವರಿಗೆ ನೆನಪಿಗೆ [illegible] ಒಂದು ಮಾತನ್ನು ಸಭಾಧ್ಯಕ್ಷರಿಗೆ ಹೇಳಬಯಸುತ್ತೇನೆ. ರಾಜ್ಯದ ಬಡ್ಜೆಟ್ಟನ್ನು ಮಂಡ[illegible]ಥ ಕಾಲದಲ್ಲಿ ರಾಜ್ಯದ ಸಮಗ್ರವಾದ ಚಿತ್ರವನ್ನು ಮುಂದಿಟ್ಟುಕೊಂಡು, ತಮ್ಮ ಪರ್‌ಫೆಕ್ಟ್ [illegible]ದೆ ಎಂದು ವಿವರಿಸಬೇಕು. ಏಕಾಏಕಿಯಾಗಿ, ಇದು ರಾಜ್ಯದಲ್ಲಿ ಅಕ್ರಮ ಮಾಡಿದಂ[illegible]ಂದು ಸಕ್ರಮವಾಗಿದೆ, "ಕುಮಾರಸ್ವಾಮಿಯವರು ನಮ್ಮ ಬಣದ ನಾಯಕರಾಗಿದ್ದಾರೆ[illegible]ಕ್ಷರು ಹೇಳಿದ್ದಾರೆ. ಕೇವಲ ಪದಗಳನ್ನು ಉಪಯೋಗಿಸಿ ಜನಗಳಿಗೆ ಮೋಸ ಮಾಡತಕ್ಕಂಥಾದ್ದಲ್ಲ. That requires a commitment towards the purpose. commitment ಎಲ್ಲಿಯೂ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಈ 40 ದಿವಸಗಳ ಕಾಲದಲ್ಲಿ ಏನೊಂದು ಸಾಧನೆ ಮಾಡಿದ್ದಾರೆ? ಒಂದು ಗುಂಪು, ಬೇರೆ ರೆಸಾರ್ಟ್‌ಗಳಲ್ಲಿ; ಒಂದು ಗುಂಪು ಬೇರೆ ರೆಸಾರ್ಟ್‌ಗೆ ಹೋಗಿ, 18ನೇ ತಾರೀಖು ಬೆಂಗಳೂರಿಗೆ ಬಂದು ತಲುಪಿದರು. ಇವತ್ತು ರಾಜ್ಯಕ್ಕೆ ಸರ್‌ಪ್ಲಸ್ ಬಡ್ಜೆಟ್ಟನ್ನು ನೀಡಿದ್ದೇನೆಂಬ ಇಷ್ಟು ಭರಾಟೆಯಲ್ಲಿ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮೊಟ್ಟಮೊದಲನೆಯದಾಗಿ ವಿಚಿತ್ರವಾದದ್ದು ಏನೆಂದರೆ ಅವರು ಇಲ್ಲಿ ಕುಳಿತು ಮಾತನಾಡುವಂಥ ಕಾಲದಲ್ಲಿ, ಎಂದೂ ಕೂಡ ಹಿಂದುಳಿದವರ, ಕೋಮುವಾದಿ ಶಕ್ತಿಗಳ, ಮೈನಾರಿಟೀಸ್ ಬಗ್ಗೆ ಮಾಡನಾಡಲಿಲ್ಲ ಮತ್ತು ಸಾಮಾಜಿಕವಾಗಿ ಆರ್ಥಿಕವಾಗಿ ರಾಜ್ಯದಲ್ಲಿ ಏನೇನು ಕೆಲಸ ಮಾಡಬೇಕಾಗಿದೆ, ಆ ಬಗ್ಗೆ ಒಂದನ್ನೂ ಕೂಡ ವಿರೋಧ ಪಕ್ಷದ ನಾಯಕರಾಗಿದ್ದಾಗ ಈಗಿನ ರಾಜ್ಯದ ಉಪ ಮುಖ್ಯಮಂತ್ರಿಗಳು ಎಂದೂ ಕೂಡ ಮಾತನಾಡಿಲ್ಲ. ಅಧಿಕಾರಕ್ಕೆ ಬಂದ ಮೇಲೆ ಆ ಅಧಿಕಾರಕ್ಕೋಸ್ಕರ, ಇವತ್ತು ಪ್ರಪ್ರಥಮವಾಗಿ ಅವರ ಬಾಯಿಂದ ಅಲ್ಪಸಂಖ್ಯಾತರ, ದೀನದಲಿತರ ಬಡವರ ಬಗ್ಗೆ ಮಾತುಗಳನ್ನು ಅವರು ಈಗ ಉದ್ಧರಿಸಿದ್ದಾರೆ ಮತ್ತು ಮಾತನಾಡಿದ್ದಾರೆ. ಅವರು ಇಲ್ಲಿ ವಿರೋಧಪಕ್ಷದ ನಾಯಕರಾಗಿ ಈ ಸ್ಥಳದಿಂದ ಏನು ಮಾತನಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಕೂಡ ನಾನು ಅವರ ನೆನಪಿಗೆ ತರುತ್ತಿದ್ದೇನೆ. ಅವರ ಭಾಷಣಗಳ ಎಕ್ಸ್‌ಟ್ರಾಕ್ಟ್ ಅನ್ನು ಜಾಸ್ತಿ ತೆಗೆದುಕೊಂಡಿಲ್ಲ. ಒಂದನ್ನು ಮಾತ್ರ ಓದುತ್ತೇನೆ. "ಅಧಿಕಾರಿಗಳ ಮೇಲೆ ಹಿಡಿತ ಇಲ್ಲ – ಬಜೆಟ್ ಗಾತ್ರದಲ್ಲಿ ಮಾತ್ರ ದೊಡ್ಡದು, – ಜನರಿಗೆ ಸುಣ್ಣ. ಸಿದ್ದರಾಮಯ್ಯನವರು ಮುಂದುವರಿಯುತ್ತಾ ಹೇಳಿದರು, ಮಾನ್ಯ ಮಾಧುಸ್ವಾಮಿಯವರು ಮಧ್ಯೆ ಮಾತನಾಡಿ ಇದರ ಅರ್ಥ ಏನು ಎಂದು ಕೇಳಿದರೆ ಅವರು ನಿಜಕ್ಕೂ ನಮ್ಮ ಸಪೋರ್ಟ್ ತೆಗೆದುಕೊಂಡು ಮುಖ್ಯಮಂತ್ರಿಯಾಗಿ ಅಂತ ಕೇಳಿದಾಗ ಯಡಿಯೂರಪ್ಪನವರು ಉತ್ತರ ಕೊಟ್ಟರು ಅದೃಷ್ಟವಿದ್ದರೆ ಏಕೆ ಆಗಬಾರದು? ನಾವು ಬದುಕಿರುವವರೆಗೆ ನಮ್ಮ ಉದ್ದೇಶ ಯಾವ ಕಾರಣಕ್ಕೂ ಈ ದೇಶದ ಹಿಂದುಗಳಿಗೆ ಕೊಟ್ಟಿರುವ ಭರವಸೆಗಳಿಂದ ನಾವು ಹಿಂದೆ ಸರಿಯುವುದಿಲ್ಲ. ಇದೇ ಧಾಟಿಯಲ್ಲಿ ರಾಜ್ಯದ ವಿರೋಧ ಪಕ್ಷದ ನಾಯಕರಾಗಿ ಅವರು ಮಾತನಾಡಿರತಕ್ಕಂಥಾದ್ದು. ಆ ಕಡೆ ಕುಳಿತಿರುವ ನಮ್ಮ ಸ್ನೇಹಿತರಿಗೆ 'ನೀವು ಯಾರ ಹೆಗಲ ಮೇಲೆ ಕುಳಿತಿದ್ದೀರಿ ಎನ್ನುವುದು ಗೊತ್ತಿದೆಯೇ? ನಿಮಗೆ ಬಹುಮತ ಎಲ್ಲಿದೆ' ಎನ್ನುವಂತಹ ಪ್ರಶ್ನೆ ಹಾಕಿದ್ದಾರೆ. 'ಅಪರಾಧ ಮಾಡಿದವರಿಗೆ ಜೆ.ಡಿ.ಎಸ್. ಸ್ಪೆಷಲ್ ಕೋರ್ಟ್ ಮಾಡಿ, ತಪ್ಪು ಮಾಡಿದವರಿಗೆ ಜೈಲಿನಲ್ಲಿಡುತ್ತೇವೆ. ದೇವರು ಅವಕಾಶ ಕೊಟ್ಟಾಗ ನೋಡೋಣ' ಎನ್ನತಕ್ಕಂಥ ಮಾತನ್ನು ಮಾನ್ಯ ಯಡಿಯೂರಪ್ಪನವರು ಈ ಸ್ಥಾನದಲ್ಲಿ ಕುಳಿತಿದ್ದಾಗ ಹೇಳಿದ್ದಾರೆ. ಮಾನ್ಯ ಕುಮಾರಸ್ವಾಮಿಯವರಿಗೆ

ನಾನು ಹೇಳಬೇಕಾಗಿದೆ. ಎರಡು ಪಕ್ಷಗಳ ದಿಕ್ಕು ದಿಸೆ ಇರಲಾರದ ರೀತಿಯಲ್ಲಿ ರಾಜ್ಯದ ಜನತೆಗೆ ಅಪವಿತ್ರ ಮೈತ್ರಿಯ ಸರ್ಕಾರ ರಾಜ್ಯದಲ್ಲಿ ಈಗ ಏನಿದೆ ಅದರ ಆಡಳಿತ ಪಕ್ಷಕ್ಕೆ ಒಂದು ಸ್ಪಷ್ಟವಾದ ನೀತಿ ಬೇಕು. ಯಾವ ತರಹದ ಕಾರ್ಯಕ್ರಮಗಳು ಕೂಡ ಕರ್ನಾಟಕದ ಜನತೆಗೆ ಕೊಡತಕ್ಕಂಥ ಬಗ್ಗೆ ಒಂದು ಆಧಾರವಿಲ್ಲ, ನಾವು ಏನು ಮಾಡಿದ್ದೇವೆ ಅದನ್ನೇ ಬಳಸಿಕೊಂಡು ಬಂದಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಈಗ ಇಲ್ಲಿ ಇಲ್ಲ. 2004ರ ಬಜೆಟ್ ಮಂಡನೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಜನತಾದಳ ಎಸ್ ಸರ್ಕಾರ ಇತ್ತು, ನಾವು ನಂಬಿದ್ದೆವು. ಮಾನ್ಯ ಅಧ್ಯಕ್ಷರೇ, ಕೋಮುವಾದಿ ಪಕ್ಷಗಳನ್ನು ದೂರ ಇಡತಕ್ಕಂಥ ಒಂದೇ ಉದ್ದೇಶದಿಂದ ಪ್ರಗತಿಪರವಾದಂತಹ ವಿಚಾರಧಾರೆಯಲ್ಲಿ ನಾವೆಲ್ಲರೂ ಒಂದಾಗಬೇಕು. ಮಾನ್ಯ ಸಿದ್ದರಾಮಯ್ಯನವರು ತಮ್ಮ ಮತಕ್ಷೇತ್ರಕ್ಕೆ ಬಂದು ಭಾಷಣ ಮಾಡಿದ್ದಾರೆ. ಮಾನ್ಯ ದೇವೇಗೌಡರೂ ಮಾತನಾಡಿದ್ದಾರೆ, ಮಾನ್ಯ ಕುಮಾರಸ್ವಾಮಿಯವರು ಮಾತನಾಡಿದ್ದಾರೆ. ಬಿ.ಜೆ.ಪಿ. ಕೂಡ ತಮ್ಮದೇ ಆದಂತಹ ಧಾಟಿಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ರೀತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಏನು ಒಂದು ನೀತಿ ಇದೆ ಅದರ ಪರವಾಗಿ ಇವತ್ತು ಇವರೆಲ್ಲ ಮಾತನಾಡಿದ್ದಾರೆ. ಹಾಗೆ ಮಾತನಾಡಿ ಕೊನೆಗೆ ಅವರು ಏನು ಹೇಳಿದ್ದಾರೆ ಇವತ್ತು ನಾವು ಹೇಳುವುದು ಏನೆಂದರೆ ಯಾವ ಧಾಟಿಯಲ್ಲಿ ಮಾತನಾಡಿದ್ದಾರೆ ಇಲ್ಲಿ ಕುಳಿತು ಜೆಡಿಎಸ್ ಜೊತೆಗೆ ಯಾವ ಕುಮಾರಸ್ವಾಮಿ? ಯಾರು ದೇವೇಗೌಡರು? ಏನು ಆದೇಶ ಎನ್ನತಕ್ಕಂಥ ರೀತಿಯಲ್ಲಿ ಭರಾಟೆಯಿಂದ ಮಾತನಾಡಿದರು. ಯಾವ ಪ್ರಜ್ಞೆ ಯಾವಾಗ ಮೂಡಿತೋ ಗೊತ್ತಿಲ್ಲ, ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಅಧಿಕಾರಕೋಸ್ಕರ ಇದೊಂದು ಅಪವಿತ್ರ ಮೈತ್ರಿ. ನಾನು ಬೇರೆ ಕಡೆ ಸಹಾ ಹೇಳಿದ್ದೇನೆ. ಪತ್ರಿಕಾಗೋಷ್ಠಿಯಲ್ಲೂ ಸಹ ಬಿಜೆಪಿ, ಬೇಸಿಕಲಿ ಇಟ್ ಈಸ್ ಅನ್ ಎಮೋಶನಲ್ ಪಾರ್ಟಿ. ದೇಶದಲ್ಲಿ ತನ್ನದೇ ಆದ ರೀತಿಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಂತಹ ರೀತಿಯಲ್ಲಿ ಭಾವನೆಗಳನ್ನು ಶೋಷಣೆ ಮಾಡಿ ರಾಜ್ಯ ಮಾಡತಕ್ಕಂಥ ರೀತಿಯಲ್ಲಿ ಬಿಜೆಪಿಯವರು ಅಧಿಕಾರಕೋಸ್ಕರ ಇವತ್ತು ತಮ್ಮ ನೀತಿನಿಯಮ ಮರೆತು ಕುಮಾರಸ್ವಾಮಿಯವರ ಬಣದ ಜೊತೆಗೆ ಕೈ ಜೋಡಿಸಿದರು. ಮಾನ್ಯ ಕುಮಾರಸ್ವಾಮಿಯವರು ಕೂಡ ಹೇಳಿದ್ದರು. ಅದಕ್ಕೆ ನಾನು ಉತ್ತರ ಕೊಡಲಿಕ್ಕೆ ಇಲ್ಲಿ ನಿಂತಿಲ್ಲ ಆ ಬಗ್ಗೆ ಬಹಳಷ್ಟು ಬರುತ್ತದೆ, ಮುಂದೆ ಹೇಳುತ್ತೇನೆ. ಅವರು ಹೇಳಿದರು ನಮಗೆ ಕಾಂಗ್ರೆಸ್‌ನಿಂದ ತೊಂದರೆಯಾಯಿತು, ಬಹಳ ಕಿರುಕುಳ ಆಯಿತು ಅಂತ. ಮಾನ್ಯ ಕುಮಾರಸ್ವಾಮಿಯವರೇ, ತಾವು ರಾಜ್ಯದ ಮುಖ್ಯಮಂತ್ರಿಯಾಗಿದ್ದೀರಿ. ನಾನು 20 ತಿಂಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ನನಗೆ ಎಷ್ಟು ಕಿರುಕುಳವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಯಾರಿಗೆ ಹೇಳಲಿ? ಇದು ಬಹಳ ಕಷ್ಟವಾದಂತಹ ಕೆಲಸ. 2004ರಲ್ಲಿ ಡಾ: ಮನಮೋಹನ್‌ಸಿಂಗ್‌ರವರ ನೇತೃತ್ವದಲ್ಲಿ ಈ ರಾಷ್ಟ್ರದಲ್ಲಿ ಎಲ್ಲ ಕಡೆಗೆ ಕೋಮುವಾದಿ ಪಕ್ಷಗಳನ್ನು ದೂರವಿಡಬೇಕು ಎನ್ನುವಂತಹ ರೀತಿಯಲ್ಲಿ ಎಲ್ಲಾ ಎಡಪಕ್ಷಗಳ ಬೆಂಬಲದಿಂದ UPA ಸರ್ಕಾರ ರಚಿಸಿದರು. ಮಾನ್ಯ ಶ್ರೀರಾಮರೆಡ್ಡಿಯವರು ಇದ್ದಾರೆ ಅವರ ಪಕ್ಷ ಸರ್ಕಾರದಲ್ಲಿ ಭಾಗಿಯಾಗಿಲ್ಲ. ರಾಷ್ಟ್ರಮಟ್ಟದ ಪ್ರತಿಕ್ರಿಯವಾದಿ ಶಕ್ತಿಗಳನ್ನು ದೂರವಿಡತಕ್ಕಂಥ ಉದ್ದೇಶದಿಂದ ಅವರೂ ಸಪೋರ್ಟ್ ಮಾಡಿದರು. ಮಾನ್ಯ ದೇವೇಗೌಡರು ಲೋಕಸಭಾ ಸದಸ್ಯರಾಗಿದ್ದರು. ಮಾಜಿ ಪ್ರಧಾನಿಗಳು ಆಗಿದ್ದರು, ಬಹಳಷ್ಟು ಜನ

ಪದೇ ಪದೇ ಹೇಳಿದ್ದನ್ನು ಹೇಳಲು ನಾನು ಇಚ್ಛೆಪಡುತ್ತಿಲ್ಲ. ಸೆಕ್ಯುಲರ್ ಫೋರ್ಸಸ್ ತತ್ವದ ಮೇಲೆ ನಾವು ಯಾವಾಗಲೂ ಕೂಡ ಒಂದಾಗಿರಬೇಕು ಎನ್ನತಕ್ಕಂಥಾದ್ದನ್ನು ಕೇವಲ ಹೇಳಿಕೆ ಮಾಡಲಿಲ್ಲ. 1990ರಲ್ಲಿ ಏನಾಯಿತು ಮಾನ್ಯ ಸಭಾಧ್ಯಕ್ಷರೇ, 16 ಜನ ಮಾತ್ರ ಇಲ್ಲಿಂದ ಲೋಕಸಭಾ ಚುನಾಯಿತರಾಗಿ ಸದಸ್ಯರಾದರು. ಮಾನ್ಯ ಕುಮಾರಸ್ವಾಮಿಯವರು ಸಹ ಲೋಕಸಭಾ ಸದಸ್ಯರಾಗಿದ್ದರು. ರಾಷ್ಟ್ರಮಟ್ಟದಲ್ಲಿ ನಮಗೆ 143 ಸೀಟುಗಳು ಬಂದವು. ಆದರೂ ಕೂಡ ರಾಷ್ಟ್ರದ ಹಿತದೃಷ್ಟಿಯಿಂದ ಮಾನ್ಯ ವಿ.ಪಿ. ಸಿಂಗ್‌ರವರ ಸಹಾಯದಿಂದ ನಾವು ಮಾನ್ಯ ದೇವೇಗೌಡರಿಗೆ ಈ ರಾಷ್ಟ್ರದ ಪ್ರಧಾನಮಂತ್ರಿಗಳನ್ನಾಗಿ ಮಾಡಿದ್ದೇವೆ. ಎಷ್ಟೋ ಜನ ಮೇಧಾವಿಗಳು ಇದ್ದರು. ಶ್ರೀ ಕೆಂಗಲ್ ಹನುಮಂತಯ್ಯನವರಾಗಲಿ, ದಾಸಪ್ಪನವರಾಗಲಿ, ಕೆ.ಸಿ. ರೆಡ್ಡಿಯವರು ಕೂಡ ಆಗಲಿ ಅವರಾರಿಗೂ ಕೂಡ ಇಂಥ ಒಂದು ಸೌಭಾಗ್ಯ ಸಿಗಲಿಲ್ಲ. ಇವತ್ತು ಕರ್ನಾಟಕದ ರಾಗಿಮುದ್ದೆಯನ್ನು ಸೌತ್ ಬ್ಲಾಕ್‌ಗೆ ನಾವು ತಲುಪಿಸಿದ್ದೇವೆ. ಆದರೆ ಇವತ್ತು ನಮಗೆ ಸಿಕ್ಕಿದ್ದಾದರೂ ಏನು? ಕಾಂಗ್ರೆಸ್ ಪಕ್ಷ ದೇವೇಗೌಡರನ್ನು ರಾಷ್ಟ್ರದ ಪ್ರಧಾನಮಂತ್ರಿಯಾಗಿ 11 ತಿಂಗಳು ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಂತಹ ಪಕ್ಷ, ಇವತ್ತು ರಾಷ್ಟ್ರದಲ್ಲಿ [illegible]ಥ ಪರಿಸ್ಥಿತಿಯನ್ನು ನೋಡಿ ಮಾನ್ಯ ಜ್ಯೋತಿಬಸುರವರಾಗಲಿ, ಮಾನ್ಯ ವಿ.ಪಿ. ಸಿಂಗ್ [illegible] ಸುರ್ಜಿತ್ ಸಿಂಗ್‌ರವರ ಸಹಾಯದಿಂದ ದೇವೇಗೌಡರನ್ನು ಕರ್ನಾಟಕ ರಾಜ್ಯದಲ್ಲಿ ಪ್ರತಿಕ್ರಿ[illegible]ಳಿಗೆ ಅವಕಾಶ ಕೊಡಬಾರದು ಎನ್ನತಕ್ಕಂಥ ಮನೋಭಾವನೆಯಿಂದ ನಾವು ಒಂದಾಗಿದ್ದೇವೆ. ಮನುಷ್ಯನ ಜೀವನದಲ್ಲಿ ಅಧಿಕಾರ ಬರುತ್ತದೆ, ಅಧಿಕಾರ ಹೋಗುತ್ತದೆ. ಆದರೆ ಮನುಷ್ಯ ಅಧಿಕಾರ ಸಿಕ್ಕಂತಹ ಸಂದರ್ಭದಲ್ಲಿ ಈ ದೇಶಕ್ಕೆ ರಾಜಕೀಯವಾಗಿ ಯಾವ ರೀತಿಯಾಗಿ ನಡೆಯುತ್ತಾನೆ ಎನ್ನತಕಂಥಾದ್ದೇ ಬಹಳ ಮುಖ್ಯ. ಕೊನೆಯದಾಗಿ ನಾನು ಈ ಬಣಕ್ಕೆ ಹೇಳುತ್ತಿದ್ದೇನೆ, ರಾಷ್ಟ್ರಮಟ್ಟದ ನಾಯಕರು, ಮಾನ್ಯ ವೀರೇಂದ್ರಕುಮಾರ್‌ರವರು ಮತ್ತು ಬೇರೆ ಬೇರೆಯವರು ಕೂಡ ಯಾವ ರೀತಿ ಹೇಳಿಕೆ ಕೊಟ್ಟಿದ್ದಾರೆ ಅದರ ಬಗ್ಗೆಯು ಕೂಡ ವಿಚಾರ ಮಾಡುತ್ತಿಲ್ಲ. It becomes a political speech ಅಂತ ಹೇಳಿ ನಾನು ಇಲ್ಲಿಗೇ ಬಿಡುತ್ತಿದ್ದೇನೆ. ನಾನು ಏಕೆ ಈ ಮಾತನ್ನು ಕುಮಾರಸ್ವಾಮಿಯವರಿಗೆ ಹೇಳಬೇಕೆಂದರೆ ತಾವು ಮೊಟ್ಟ ಮೊದಲನೆಯದಾಗಿ ವಿಧಾನಸಭೆಗೆ ಬಂದಿದ್ದೀರಿ. ತಾವು ಮಂತ್ರಿ ಆಗಲಿಲ್ಲ. ಇದು ಕೇವಲ ಒಬ್ಬರಿಗೆ ಮಾತ್ರ ಸಿಗತಕ್ಕಂಥ ಭಾಗ್ಯ. ಮೊಟ್ಟಮೊದಲನೆಯದಾಗಿ ತಾವು ಎಂಟರ್ ಆಗಿ ಇವತ್ತು ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡತಕ್ಕಂಥಾದ್ದು. ಆದರೆ ತಾವು ಯಾರ ಕೈಯಲ್ಲಿ ಕೈ ಜೋಡಿಸಿದ್ದೀರಿ? ಎಷ್ಟೋ ಸಲ ಹೇಳಿಕೆಗಳನ್ನು ಹೇಳಿದರು. "ನಾವು ಯಾರ ಜೊತೆಯಲ್ಲೂ ಹೋದರೂ ಕೂಡ ಬಿ.ಜೆ.ಪಿ. ಯವರ ಜೊತೆಯಲ್ಲಿ ಹೋಗುವುದಿಲ್ಲ ಎಂದು". ಮಾನ್ಯ ಯಡಿಯೂರಪ್ಪನವರ ಗುಂಪು ಕೂಡ ಯಾವ ಯಾವ ರೀತಿಯಲ್ಲಿ ರೇಸಾರ್ಟ್‌ನಲ್ಲಿ ಮೀಟಿಂಗ್ ಆಯಿತು. 6 ತಿಂಗಳ ಹಿಂದೆ, "ನಾವು ಜಾತ್ಯಾತೀತ ದೇವೇಗೌಡರ ಜೊತೆಯಲ್ಲಿ ಹೋಗುವುದಿಲ್ಲ" ಎಂದು ಹೇಳಿದರು. ಕೊನೆಯದಾಗಿ ಅಧಿಕಾರದ ಆಸೆ ಏನಿದೆ? ಈ ಕರ್ನಾಟಕದಲ್ಲಿ ಇಂಥ ಅಪವಿತ್ರವಾದಂತಹ ಮೈತ್ರಿ ಎಲ್ಲಿಯವರೆಗೆ ನಿಮ್ಮಲ್ಲಿ ತಾಕತ್ತು ಇದ್ದರೆ ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಜೊತೆಗೂಡಿ ನಮ್ಮ ರಾಜ್ಯದ ಜನತೆ ಮುಂದೆ ಚುನಾವಣೆಗೆ ನಡೆಯಿರಿ. ಚುನಾವಣೆಗೆ ಹೋಗಿ ಸಂಪೂರ್ಣವಾದಂತಹ

ಬಹುಮತವನ್ನು ಪಡೆದು ಈ ವಿಧಾನಸಭೆಗೆ ಬಂದು, ನಾವೆಕ್ಕರ್ರೈ ಕೂಡಿ ಸರ್ಕಾರ ಮಾಡುತ್ತೇವೆಂದರೆ ಅದರಲ್ಲಿ ಒಂದು ಅರ್ಥವಿದೆ. ಇವತ್ತು ತಾವು ಹಿಂದಿನ ಬಾಗಿಲಿನಿಂದ, ಸಂಖ್ಯಾಬಲದಿಂದ ರೆಸಾರ್ಟ್‌ನಲ್ಲಿ ಹೋಗಿ ಮಾತುಕತೆ ಆಗಿ ವಿಚಾರವಿಮರ್ಶೆಯಾಗಿ, ಕರ್ನಾಟಕದಲ್ಲಿ ಅಪವಿತ್ರ ಸರ್ಕಾರ ಅಸ್ಥಿತ್ವಕ್ಕೆ ಏನು ಬಂದಿದೆ ಇದರ ಬಗ್ಗೆ ನವಗೆ ಬಹಳ ಶಂಕೆ ಇದೆ. ಇವತ್ತು ತಮಗೆ ಸ್ಪಷ್ಟವಾದ ನಿಲುವು ಇಲ್ಲ. ನಾನು ಬಹಳಷ್ಟು ಸಲ ಪ್ರಸ್ತಾಪ ಮಾಡಿದ್ದೇನೆ. ರಾಜ್ಯದ ಜನತೆಗೆ ತಮ್ಮ ವಿಜನ್ ಏನಿದೆ? ಸ್ಪಷ್ಟತೆ ಏನಿದೆ? ಬದ್ಧತೆ ಏನಿದೆ? ಯಾವ ರೀತಿ ನೀವೂ ಬಿ.ಜೆ.ಪಿ. ಒಂದಾಗಿದ್ದೀರಿ. ನಿಮಗೂ ಹೇಳುತ್ತಿದ್ದೇವೆ, ಮಾನ್ಯ ಪ್ರಕಾಶ್‌ರವರೇ, ನೀವು ಸಾಹಿತಿಗಳು ಇದ್ದೀರಿ, ಪ್ರಗತಿಪರ ವಿಚಾರವಾದಿಗಳು ಇದ್ದೀರಿ, ಸಮಾಜವಾದದ ಹಿನ್ನೆಲೆಯಿಂದ ಬಂದಿದ್ದೀರಿ. ಏಕೆ ಏಕಾಏಕೀ ಈ ರೀತಿ ಆಯಿತು ಅಂತ ನಿಮಗೂ ಹೇಳುತ್ತಿದ್ದೇವೆ. ನೀವು ಏನಾದರೂ ಹೇಳಲಾರದೇ ನಿಮಗೂ ಗೊತ್ತಾಗಲಿಲ್ಲ ಕಡೆಗೆ, ನೀವು ನಮ್ಮ ಜೊತೆಯಲ್ಲಿ ಇದ್ದಿರಿ ಅಂತ ನಿಮಗೂ ಗೊತ್ತಾಗಲಿಲ್ಲ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಅಂದರೆ ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಭರಾಟೆಯಲ್ಲಿ ಹೇಳಿದ್ದಾರೆ. [illegible] ಮುಖ್ಯಮಂತ್ರಿಯವರೇ, ಹೊಸದಾಗಿ ತಾವು ಏನೂ ಹೇಳಿಲ್ಲ. ಮಾನ್ಯ ಕುಮಾರಸ್ವಾಮಿಯವರು [illegible] ಯಡಿಯೂರಪ್ಪನವರು ಹೊರಗಡೆಯೇ ತಾವು ಹೇಳಿದ್ದೀರಿ. ಮೆಟ್ರೋ ಆಯಿತು, ಎಲ್ಲಾ [illegible] ಕೊಡುತ್ತೇವೆ, ಎಲ್ಲಾ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ, [illegible] ಹೊರಗಡೆ ಏನು ಹೇಳಿದ್ದೀರಿ ಅದೇ ಒಳಗಡೆ ನಡೆಯಬೇಕು. ಹೊಸದಾಗಿ ಯಾವುದೂ [illegible] ತಾವು ನಿರೂಪಣೆ ಮಾಡಿಲ್ಲ. ಮಾನ್ಯ ಪ್ರಕಾಶ್ ಅವರೆ, 2004–05ರ ಬಜೆಟ್ ಮಂಡನೆ [illegible] ತಾವು ಕೂಡ ರೆವಿನ್ಯೂ ಮಂತ್ರಿಗಳಾಗಿದ್ದಿರಿ. ಏನು ಮಾನ್ಯ ಸಿದ್ದರಾಮಯ್ಯನವರು 13 ಸಾವಿರ 556 ಕೋಟಿ ರೂಪಾಯಿ Plan outlay ಪಡೆದುಕೊಂಡರು. ಕೃಷಿಸಾಲ ಪ್ರತಿಶತ ಆರರಂತೆ ಕೊಡತಕ್ಕಂಥಾದ್ದು ಇಡೀ ರಾಷ್ಟ್ರದಲ್ಲಿ ಎಲ್ಲೂ ಆಗಿಲ್ಲ, ಶರದ್‌ಪವಾರ್‌ರವರು ಬಂದಿದ್ದಾಗ ಸಮಾಲೋಚನೆ ಮಾಡತಕ್ಕಂಥ ಕಾಲದಲ್ಲಿ, Karnataka is the only State in the country where agriculture credit ಶೇಕಡಾ 6 ಪ್ರತಿಶತ ಬಡ್ಡಿದರದಲ್ಲಿ ಸಾಲ ಕೊಡತಕ್ಕಂಥ ಕಾರ್ಯಕ್ರಮ ಮಾಡಿದೆ. ಆದಾಯದ ಸಂಪನ್ಮೂಲ, ರಿಸೋರ್ಸಸ್ ಮೊಬಿಲೈಸೇಷನ್, ಮತ್ತು 13556 ರೂಪಾಯಿನ plan outlay ಇದು ಏನಿದೆ ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾದಂಥ plan outlay ಒಳ್ಳೆಯ Resouse Mobilisation ಕೊಟ್ಟಿದ್ದಾರೆಂಬುದನ್ನು ಕೇವಲ ನಾವೇ ಅಲ್ಲ, ಯೋಜನಾ ಆಯೋಗದ ಉಪಾಧ್ಯಕ್ಷರಾದ ಮಾಂಟೆಕ್‌ಸಿಂಗ್‌ವಾಲಿಯಾರವರು ಕೂಡ ಈ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದಾರೆ. 18ನೇ ತಾರೀಖು ರಾಜ್ಯದಲ್ಲಿ ಒಂದು ಘಟನೆ ನಡೆಯಿತು, ತಾವು ಯಾರೂ ಕೂಡ ಕರ್ನಾಟಕ ರಾಜ್ಯದಲ್ಲಿ ಇರಲಿಲ್ಲ. ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ, ಮತ್ತು ಯಡಿಯೂರಪ್ಪನವರ ನೇತೃತ್ವದಲ್ಲಿ ಒಂದು ತಂಡ ಒಂದು ಕಡೆ, ಮತ್ತೊಂದು ತಂಡ ಇನ್ನೊಂದು ಕಡೆ [illegible]ಗಿತ್ತು. ನಾವು 12ನೇ ತಾರೀಖು ಪ್ಲಾನ್ ಔಟ್ ಲೇ ಡಿಸ್ಕಷನ್‌ಗಾಗಿ ದೆಹಲಿಗೆ ಹೋಗಿದ್ದೆ[illegible] ಮತ್ತು ಅಂದಿನ ಹಣಕಾಸಿನ ಸಚಿವರಾದ ಶ್ರೀಮಾನ್ ಸಿಂಧ್ಯಾರವರು 13ನೇ ತಾರೀಖು ದೆ[illegible] ಪ್ಲಾನ್ ಡಿಸ್ಕಷನ್‌ನಲ್ಲಿ

ಭಾಗವಹಿಸಿದ್ದೇವು. 9 ಗಂಟೆಗೆ ಯೋಜನಾ ಆಯೋಗದ ಉಪಾಧ್ಯಕ್ಷರು ಕರ್ನಾಟಕ ಭವನಕ್ಕೆ ಬಂದುದು, ನಿಮ್ಮದು ಎಷ್ಟು ರಿಕ್ವೈರ್‌ಮೆಂಟ್ ಎಂದು ಕೇಳಿದರು. Last year 13556 ಕೋಟಿ ರೂ. ಗೆ plan outlay ಇತ್ತು. ಈ ಸಾರಿ ನಾವು 15540 ಸಾವಿರ ಕೋಟಿ ರೂಪಾಯಿಗಳಿಗೆ proposals ತಂದಿದ್ದೇವೆ ಎಂದೆವು. ನಮ್ಮ ಮುಖ್ಯ ಕಾರ್ಯದರ್ಶಿಗಳು, ಹಣಕಾಸಿನ ಕಾರ್ಯದರ್ಶಿಗಳು ಕೂಡ ಈಗ ಸದನದಲ್ಲಿ ಇಲ್ಲ, ಅವರೆಲ್ಲರೂ ಸೇರಿ 11.00 ಗಂಟೆಗೆ ಒಂದು ಸಭೆಯಾಯಿತು. ಶ್ರೀ ರಾಜಶೇಖರನ್‌ರವರು ಕೇಂದ್ರೀಯ ಯೋಜನಾ ಮಂತ್ರಿಗಳೂ ಕೂಡ ಸಭೆಯಲ್ಲಿದ್ದರು. ಆ ಸಭೆಯಲ್ಲಿ, ಶ್ರೀ ಮಾಂಟೇಕ್‌ಸಿಂಗ್ ಅವರು ಹೇಳಿದರು. Karnataka Government's performance is very good.

ಅವರು 15540 ಕೋಟಿ ರೂ. plan outlay ಗೆ ಒಪ್ಪಿಗೆ ಕೇಳಿದ್ದಾರೆ, ನಮ್ಮ ಫಿಸಿಕಲ್ ಮ್ಯಾನೇಜ್‌ಮೆಂಟ್ ಏನಿದೆ, ನಿರ್ವಹಣೆ ಏನಿದೆ, ಅದಕ್ಕೆ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿ ನಾವು ಕೇಳಿದ್ದಕ್ಕಿಂತ ಹೆಚ್ಚು ಅಂದರೆ 16166 ಕೋಟಿ ರೂಪಾಯಿಗಳ ಯೋಜನೆಗೆ ಅನುಮತಿಯನ್ನು ಕೊಟ್ಟಿದ್ದಾರೆ, ಇದು ಕರ್ನಾಟಕ ಸರ್ಕಾರಕ್ಕೆ ಮಾತ್ರ ಕೊಟ್ಟಿದ್ದಾರೆ. ಇವತ್ತು ಅದನ್ನು ಮುಂದಿಟ್ಟುಕೊಂಡು ಸರ್‌ಪ್ಲಸ್ ಬಜೆಟ್ ಎಂದು ಹೇಳುತ್ತಿರಿ, ಕೇವಲ ನಲವತ್ತು ದಿವಸಗಳ ಕಾಲ ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗಿದೆ, ನಾವೇನು ಮಾಡಿ ಇಟ್ಟಿದ್ದೇವೆ, ಬುತ್ತಿ ಕಟ್ಟಿದ್ದೇವೆ, ಎಲ್ಲಿ ಕೆಲಸ ಮಾಡಿದ್ದೇವೆ, 27ನೇ ತಾರೀಖು ನಾವು ರಾಜೀನಾಮೆ ಕೊಟ್ಟಿದ್ದೇವೆ, ತಾವು ಈಗ ಅಧಿಕಾರದಲ್ಲಿ ಬಂದಿದ್ದೀರಿ, ಹಿಂದಿನ ಸರ್ಕಾರ ಚೆನ್ನಾಗಿ ನಿರ್ವಹಣೆ ಮಾಡಿದೆ ಎನ್ನುವ ಸೌಜನ್ಯದ ಒಂದು ಮಾತನ್ನೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿಲ್ಲ; ನಮಗೆ ಅವರ ಸರ್ಟಿಫಿಕೇಟ್ ಬೇಕಾಗಿಯೂ ಇಲ್ಲ, ಇವತ್ತು ಎಲ್ಲಾ ಕಡೆಗೆ ಏನು ಹೇಳುತ್ತಿದ್ದಾರೆಂದರೆ, ಇದು ಪಾಪುಲಸ್ ಬಜೆಟ್. ಇದ್ಯಾಕೊ ಈ ಸರ್ಕಾರ ಬಹಳ ದಿವಸ ನಡೆಯುವಂತೆ ಕಾಣುವುದಿಲ್ಲ, ಅವರಿಗೆ ಸ್ವಲ್ಪ ಅನುಮಾನ ಇದೆ. ಮಾನ್ಯ ಯಡಿಯೂರಪ್ಪನವರು ಏನು ಹೇಳಬೇಕೆಂದಿದ್ದರು ಅದನ್ನು ಒಂದೇ ಸ್ವರದಲ್ಲಿ ಹೇಳಿದ್ದಾರೆ. ಇವರಿಗೂ ಕೂಡ ಗೊತ್ತಿದೆ, ಎಲ್ಲಾ ಕಡೆಗೆ ಜನಪ್ರಿಯ ಪದವನ್ನು ಉಪಯೋಗಿಸಿ, ಎಲ್ಲಾ ಕಾರ್ಯಕ್ರಮಕ್ಕೂ ಹಣವನ್ನು ಕೊಡುವುದಾಗಿ ಹೇಳುತ್ತಾರೆ, ನಾವೇನು ಇವತ್ತು 5000 ಕೋಟಿ ರೂಪಾಯಿಗಳನ್ನು ಇಟ್ಟಿದ್ದು ಅದು ಈಗ ಪ್ರೊಸೆಸ್ಸಿನಲ್ಲಿದೆ. ರಾಜ್ಯದ ಜನತೆಗೆ ಕಲ್ಯಾಣ ಕಾರ್ಯಕ್ರಮ ಕೆಲಸ ಮಾಡುವ ಬಗ್ಗೆ ಕೂಡ ನಾವು ಬಜೆಟ್‌ನಲ್ಲಿ ಇಟ್ಟಿದ್ದೇವೆ. ಅದರ ಬಗ್ಗೆ ಅವರು ಹೇಳಲಿಲ್ಲ. ಜನರ ಮೆಚ್ಚುಗೆ ಪಡೆಯುವ ರೀತಿಯಲ್ಲಿ ಪದಗಳನ್ನು ಉಪಯೋಗಿಸಿದ್ದಾರೆ. ಕುವೆಂಪುರವರಾಗಲಿ, ಕನಕದಾಸರಾಗಲಿ, ಇವರೆಲ್ಲರೂ ಕೂಡ ಹಿಂದಿನ ಶತಮಾನದಲ್ಲಿ ಸಮಾಜವನ್ನು ಎದುರುಗಡೆ ಇಟ್ಟುಕೊಂಡು, ತಮ್ಮ ಕಲ್ಪನೆಯ ಆಧಾರದ ಮೇಲೆ ಸೇವೆ ಮಾಡಿದ್ದಾರೆ. ಈ ಅಪವಿತ್ರ ಸರ್ಕಾರಕ್ಕೆ ಅಂಥಾ ಪೂಜನೀಯ ಕವಿಗಳೇನು ಬರೆದಿದ್ದಾರೆ ಅದು ಅನ್ವಯವಾಗುವುದಿಲ್ಲ, ಪ್ರಕಾಶ್‌ರವರನ್ನು ಯಾವ ಕವಿತೆಗಳನ್ನು ಇಡಬೇಕಾಗುತ್ತದೆಂದು ಕೇಳಬೇಕಾಗುತ್ತದೆ. ಪ್ರತಿಯೊಂದು ಶೀರ್ಷಿಕೆಯಲ್ಲೂ, ಅಂತಹ ಕವಿಗಳು ಹೇಳಿದ್ದಾರೆಂದು ಹೇಳುತ್ತಾ ಈ ರೀತಿಯಾದ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ರಾಜ್ಯದ

ಜನತೆಗೆ ಏನು ಸರ್ಪ್ಲಸ್ ಬಜೆಟ್ ಎಂದು ಹೇಳಿದ್ದಾರೆ, ಅದು ಚೀಪ್ ಪಾಪ್ಯುಲಾರಿಟಿಗೋಸ್ಕರ ಏನು ಇಟ್ಟಿದ್ದಾರೆ, ಇದು ಕರ್ನಾಟಕ ಪ್ರಗತಿ ರಂಗ. ಕರ್ನಾಟಕ ಕ್ರಾಂತಿ ರಂಗನೂ ಕೂಡ 1983ರಲ್ಲಿ ಬಂದಿತ್ತು. ಇವತ್ತು ಕರ್ನಾಟಕ ರಾಜ್ಯದಲ್ಲಿ ಏನಾಗಿದೆ? ಕರ್ನಾಟಕ ಪ್ರಗತಿ ರಂಗ ಇದೆ. ಮಾನ್ಯ ಕುಮಾರಸ್ವಾಮಿಯವರು ಇನ್ನೂ ಕೂಡ ಎಳೆಯ ವಯಸ್ಸಿನವರಾಗಿದ್ದಾರೆ, ನಾವು ಖರ್ಗೆಯವರು ಇಲ್ಲಿದ್ದೇವೆ. 35 ವರ್ಷಗಳ ಕಾಲದಿಂದ ನಾವು ಸಂಘರ್ಷ ಮಾಡಿ ಅಧಿಕಾರಕ್ಕೆ ಬಂದಿದ್ದೇವೆ. ನಮಗೆ ಊಟ ಸಹಾ ಕೊಡತಕ್ಕಂಥಾವರ್‍ಯಾರು ಆಗ ಇರಲಿಲ್ಲ. ವಿದ್ಯಾರ್ಥಿ ಜೀವನದಿಂದ ಸಂಘರ್ಷ ಮಾಡಿ ಈಗ ನಾವು ಇಲ್ಲಿ ಬಂದಿದ್ದೇವೆ, ಅವರು ರಾಜ್ಯದ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ, ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡಿ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿದ್ದೇನೆ. ಇವತ್ತು ತಮ್ಮ ಪೊಲಿಟಿಕಲ್ ಕ್ರೆಡಿಬಿಲಿಟಿ ಏನಿದೆ ಇದೆಲ್ಲಾ ಒಂದೇ ದಿವಸದಲ್ಲಾಗತಕ್ಕಂಥಾದ್ದಲ್ಲ, ನಾವು ಅಲ್ಲಿ ಲಿಂಗಾಯಿತ ಕೋಮಿನ, ಬೇರೆ ಜನರ ನಡುವೆ ಇದ್ದು ಎಂ.ಪಿ. ಪ್ರಕಾಶ್‌ರವರಿಗೆ ಗೊತ್ತಿರುವಂತೆ, ಎಂಟು ಸಲ ಸತತವಾಗಿ ಆರಿಸಿ ಬಂದಿದ್ದೇನೆ, 8 ಸಾರಿ ಆರಿಸಿ ಬರಬೇಕಾದರೆ ಮ್ಯಾಜಿಕ್ ಮಾಡಿ ಗೆದ್ದು ಬರಲಾಗುವುದಿಲ್ಲ, ಹಣ ಖರ್ಚು ಮಾಡಿ ಆರಿಸಿ ಬರಲಾಗುವುದಿಲ್ಲ That requires political credibility.

ಇವತ್ತು ತಾವು ಬಹಳ ಮುಂದಕ್ಕೆ ಹೋಗಬೇಕಾಗಿದೆ, ತಮ್ಮ ಪೊಲಿಟಿಕಲ್ ಕ್ರೆಡಿಬಿಲಿಟಿ ಏನಿದೆ, ಅದನ್ನು ಏಕೆ ಪ್ರಾರಂಭ ಅವಸ್ಥೆಯಲ್ಲೇ ಹಾಳು ಮಾಡಿಕೊಳ್ಳುತ್ತಿದ್ದೀರಿ, ಅದು ಅವರ ಜೊತೆಯಲ್ಲಾಗುವುದಿಲ್ಲ. ಇವತ್ತು ಯಾರ ಜೊತೆಯಲ್ಲಿ ಕೈಜೋಡಿಸಿದ್ದೀರಿ, ಈಗಾಗಲೇ ಬನಾರಸ್‌ನಲ್ಲಾದ ಘಟನೆಯನ್ನು ಕಾರಣ ಮಾಡಿಕೊಂಡು ಎಲ್ಲಾ ಕಡೆ ಸಂಘರ್ಷ ಪ್ರಾರಂಭ ಮಾಡಿದ್ದಾರೆ. ಅಡ್ವಾನಿಯವರ ಯಾತ್ರೆ ಕೂಡ ಕರ್ನಾಟಕ ರಾಜ್ಯಕ್ಕೆ ಬರುತ್ತಿದೆ, ಅಡ್ವಾನಿಯವರ ರಥಯಾತ್ರೆಗೆ ಯಾವ ರೀತಿಯಾಗಿ ಅದು ಬಿಹಾರ್‌ನಲ್ಲಿ ಹೋದಾಗ ಲಲ್ಲೂಪ್ರಸಾದ್ ಯಾದವ್‌ರವರು, ಮುಲಯಂ ಸಿಂಗ್‌ರವರು ರಥವನ್ನು ತಡೆಹಿಡಿದರು. ಇವತ್ತೂ ಕೂಡ ಮುಲಯಂ ಸಿಂಗ್‌ರವರಿಗೆ ಮುಲ್ಲಾಸಿಂಗ್ ಎಂದು ಹೆಸರು ಬಂದಿದೆ. ಪೊಲಿಟಿಕಲ್ ಸೆಕ್ಯೂಲರ್ ಕ್ಯಾರೆಕ್ಟರ್ ಏನಿದೆ ಅದನ್ನು ನಾವು ಬಹಳಷ್ಟು ಕಾಯ್ದುಕೊಂಡು ಹೋಗಬೇಕಾಗಿದೆ. ಮಾನ್ಯ ಯಡಿಯೂರಪ್ಪನವರ ಜೊತೆಯಲ್ಲಿ ನೀವು ಹೋಗಿ, ಅವರು ನಿಮ್ಮ ಜೊತೆಯಲ್ಲಿ ಬಂದರು. ನಾನು ಬರೀ ಮಾತಿಗಾಗಿ ಹೇಳುತ್ತಿಲ್ಲ, ತಾವು ರಾಜ್ಯದ ಜನತೆಯ ಆಶೀರ್ವಾದವನ್ನು ಪಡೆದಿಲ್ಲ. ಕೇವಲ ಸಂಖ್ಯಾಬಲದ ಮೇಲೆ ಇವತ್ತು ಕರ್ನಾಟಕ ರಾಜ್ಯದಲ್ಲಿ ರಾಜಕಾರಣ ನಡೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ವಿಚಿತ್ರವಾದ ಘಟನೆ ನಡೆದಿದೆ. ಹಿಂದಿನ ಇತಿಹಾಸವನ್ನು ನೋಡಿದಾಗ ನಮಗೇನು ಅನ್ನಿಸುತ್ತಿತ್ತು, ಕೊನೆಯವರೆಗೂ ಇವರು ನಮಗೆ ಬೆಂಬಲ ಕೊಡುತ್ತಾರೆನ್ನುವ ರೀತಿಯಲ್ಲಿತ್ತು, ಏಕೆಂದರೆ ಕೋಮುವಾದಿ ಪಕ್ಷಗಳನ್ನು ದೂರವಿಡುವ ರೀತಿಯಲ್ಲಿ ರಾಷ್ಟ್ರಮಟ್ಟದಲ್ಲೇನು ಒಂದು ಚಿಂತನೆ ಇದೆ, ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ 2004ರ ಚುನಾವಣೆಯಲ್ಲಿ ಏನು ನಮಗೊಂದು ಬಹುಮತ ಸಿಕ್ಕಿತು ಆ ಆಧಾರದ ಮೇಲೆ ನಾವು ಸರ್ಕಾರ ಮಾಡಿದೆವು. ಇವತ್ತಿನದಿವಸ ನಾನು ಯಾವ ರೀತಿಯ ಬಜೆಟ್ ಕೊಟ್ಟಿದ್ದೇನೆ,

ಅದರ ಬಗ್ಗೆ ಪತ್ರಿಕೆಗಳೂ ಕೂಡ ಬರೆದಿದ್ದಾರೆ. ನಾಲ್ಕು ಪ್ರತಿಶತ ಬಡ್ಡಿದರದಲ್ಲಿ ರೈತರಿಗೆ ಸಾಲ ಕೊಡುವುದನ್ನು ಕೂಡ ಹೇಳಿದ್ದಾರೆ. ಇವತ್ತು purely it is a diretion-less budget. ಅದು ಹಣಕಾಸು ಮಂತ್ರಿಗಳ ಸೆಲ್ಫ್ ಕಾನ್ಫಿಡೆನ್ಸ್ ಪ್ರತಿಬಿಂಬಿಸುತ್ತಿಲ್ಲ, this budget has failed to create any impression or confidence. ಇವತ್ತು ಫಲಿತಾಂಶ ನಿಲ್ ಆಗಿ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಜೆಟ್ ಮಂಡನೆಗೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳೇನು ಹೊರಗಡೆ ಏನು ಹೇಳಿದರು. ಕೊನೆಯದಾಗಿ ಇವತ್ತಿನದಿವಸ ಹೇಳಿದ್ದೇವೆ, ಬಿಜೆಪಿಯವರ ಹಿಡನ್ ಅಜೆಂಡಾ ಹೊರಗಡೆ ಬಂದಿದೆ. ಬಿಜೆಪಿಯವರ ಹಿಡನ್ ಅಜೆಂಡಾ ಏನಿದೆ, ಕೇಸರಿ ಬಣ್ಣ ತನ್ನ ಛಾಯೆಯನ್ನು ಇಲ್ಲಿ ಮೂಡಿಸಿದೆ. ದೇವಾಲಯಗಳ ಜೀರ್ಣೋದ್ಧಾರ, ಗೋತಳಿ ಸಮೃದ್ಧಿ, ಇದು ಅಯೋಧ್ಯದಿಂದ ಪ್ರಾರಂಭವಾದ ರಾಮಜನ್ಮ ಭೂಮಿ ಏನಿದೆ, ಅದನ್ನು ಇನ್ನೂ ಕೂಡ ಅವರು ಬಿಟ್ಟಿಲ್ಲ. ಬಿಜೆಪಿಯವರ ಹಿಡನ್ ಏನಿದೆ ಅದು ಕುಮಾರಸ್ವಾಮಿಯವರಿಗೆ ಅರ್ಥವಾಗುತ್ತಿಲ್ಲ, ಅವರು ಅಧಿಕಾರದ ಭರಾಟೆಯಲ್ಲಿ ಮುಖ್ಯಮಂತ್ರಿಗಳಾಗಿ ಕುಳಿತಿದ್ದಾರೆ. ಇವತ್ತು ಯಡಿಯೂರಪ್ಪನವರು ಬಹಳ ವರ್ಷಗಳ ಕಾಲ ಬಿಜೆಪಿಯಲ್ಲಿ ಕೆಲಸ ಮಾಡಿ, ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿ, ಸಿಕ್ಕಂತಹ ಈ ಸಂದರ್ಭವನ್ನು ಉಪಯೋಗಿಸಿ ಇನ್ನೂ ಕೂಡ ಹಿಂದೂಗಳ ಮತವನ್ನು ಯಾಚಿಸತಕ್ಕಂಥ ರೀತಿಯಲ್ಲಿ ಕರ್ನಾಟಕ ಜನತೆಗೆ ಬಜೆಟ್‌ನಲ್ಲಿ ಈ ತರಹದ ದೇವಾಲಯಗಳ ಜೀರ್ಣೋದ್ಧಾರವನ್ನು ಕೈಗೆತ್ತಿಕೊಂಡಿದ್ದಾರೆ, ಬೇರೆ ಜಾತಿಗಳವರು ಕೋಮುವಾದಿಗಳಿಲ್ಲ, ಅಲ್ಪಸಂಖ್ಯಾತರಿಲ್ಲ, ಕ್ರಿಶ್ಚಿಯನ್ನರು ಇಲ್ಲ, ಹಿಂದುಳಿದವರು ಇಲ್ಲ, ಬೇರೆಯವರೂ ಕೂಡ ಇದ್ದಾರೆ. ಅಮರೇಗೌಡರಿಗೆ ಚುನಾವಣೆಗೆ ಹೋದಾಗ ಗೊತ್ತಾಗುತ್ತದೆ. ಈಗ ಅವರಿಗೆ ಗೊತ್ತಾಗುವುದಿಲ್ಲ. ಕುಮಾರಸ್ವಾಮಿಯವರೇ ಇನ್ನು 20 ತಿಂಗಳ ಕಾಲದವರೆಗೆ ಈ ಕೋಮುವಾದಿ ಪಕ್ಷಗಳಿಗೆ ಅಧಿಕಾರದ ಅವಕಾಶ ಇಲ್ಲ. ಬಿಜೆಪಿಗೆ ಅದು ಸಿಗಬೇಕು. ನಾವು ಬಿಜೆಪಿಗೆ ಹೋಗುವುದಿಲ್ಲ. ಇದೇ ಸ್ಥಾನದಲ್ಲಿ ಕುಳಿತಿದ್ದ ಶ್ರೀ ಯಡಿಯೂರಪ್ಪನವರು ಏನು ಪ್ರಹಾರ ಮಾಡಿದರು ಎಂದು ಎಲ್ಲಾ ಕಡೆ ನಾನು ಹೇಳುವುದು ಉಚಿತ ಅಂತ ನನಗೆ ಅನ್ನಿಸುತ್ತಿಲ್ಲ. ಅವರ ಚಿಂತನೆಯೇನಿದೆ ಅದು ಬಜೆಟ್‌ನಲ್ಲಿ ಬಂದಿದೆ. ಇವತ್ತು ರಾಜ್ಯ ಆರ್ಥಿಕ ಬಿಕ್ಕಟ್ಟಿನಿಂದ ಹೊರಬಂದಿದೆ. 2004–05ರಲ್ಲಿ ಆರ್ಥಿಕ ನಿರ್ವಹಣೆ ಏನು ಸಾಧಿಸಿದ್ದೇವೆ, ಸರ್ಕಾರ ತನ್ನ ನಿಲುವುಗಳಿಗೆ ಪೂರಕವಾಗಿ ಅದೇ ಪ್ರಮಾಣದಲ್ಲಿ ಹಣಕಾಸನ್ನು ಒದಗಿಸಬೇಕಾದುದು ಮುಖ್ಯ. 8 ವರ್ಷಗಳ ನಂತರ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಹಣಕಾಸಿನ ಮಂತ್ರಿಗಳಾಗಿ ಬಜೆಟ್ ಇದ್ದಾಗ ಮಾನ್ಯ ಪ್ರಕಾಶ್‌ರವರೂ ನಮ್ಮ ಜತೆಯಲ್ಲಿದ್ದರು. ತೆರಿಗೆ ಮತ್ತು ತೆರಿಗೆಯೇತರದಲ್ಲಿ ಗರಿಷ್ಟ ವಸೂಲಿ, ವಾಣಿಜ್ಯ ತೆರಿಗೆಯಲ್ಲಿ, ಸಂಪನ್ಮೂಲ ಕ್ರೋಢೀಕರಣದಲ್ಲಿ ದೇಶದಲ್ಲಿ ನಮ್ಮ ರಾಜ್ಯ ಮೊದನೆಯದು. ಅಬ್ಕಾರಿ ಇಲಾಖೆಯಲ್ಲಿ ಸುಧಾರಣೆ ಆಯಿತು. ಇವತ್ತು ನೀವು ಅಬ್ಕಾರಿಗೆ ಏನೋ ಸ್ವಲ್ಪ ರಿಯಾಯ್ತಿ ತೋರಿದ್ದೀರಿ. ಮೊದಲು ಹೇಳಿದಿರಿ ಈ ಬಾಬಿನಲ್ಲಿ ಸೋರಿಹೋಗುತ್ತಿದೆ ಅಂತ, ಅದನ್ನು ಸರಿಮಾಡುತ್ತೇನೆಂದು ಹೇಳಿ ತಾವು ಬಂದ ತಕ್ಷಣವೇ ಅಬ್ಕಾರಿ ಇಲಾಖೆ ಮೇಲೆ ಮೃದು ಧೋರಣೆ ತಾಳಿದ್ದೀರಿ. ನಮ್ಮದು pro-poor, pro-farmers, rural-

oriented budget ಆಗಿತ್ತು. ಇದಕ್ಕೆ ನಾನು ಬೇರೆ ಉದಾಹರಣೆಯನ್ನೂ ಕೊಡಬೇಕಾಗಿಲ್ಲ. ಇಕ್ರಾ ಅಂತ ಒಂದು ರೇಟಿಂಗ್ ಸಂಸ್ಥೆ ಇದೆ. ರಾಜ್ಯದ ರಿಪೇಮೆಂಟ್ ಕೆಪಾಸಿಟಿಗೆ ರೇಟಿಂಗ್ ಕೊಡುವ ಸಂಸ್ಥೆ, ಸಾಮಾನ್ಯವಾಗಿ ಬಂಡವಾಳ ಹೂಡಲು ಉದ್ದಿಮೆಗಳಿಗೆ ವಿಶ್ವಾಸ ಮೂಡಿಸಲು ಆಗ್ರಾ ಸಂಸ್ಥೆ ರೇಟಿಂಗ್ ಮಾಡುತ್ತದೆ. ಈ ಸಂಸ್ಥೆ ಕರ್ನಾಟಕ ರಾಜ್ಯಕ್ಕೆ 'ಟ್ರಿಬಲ್ ಎ' ಗ್ರೇಡ್ ಕೊಟ್ಟಿದೆ. ಇದು first in the country. ಅಧ್ಯಕ್ಷರೇ ಈ ಸರ್ಕಾರಕ್ಕಲ್ಲ, ತಾವು ಅಧ್ಯಕ್ಷರಾದಾಗ ಏನು ಸರ್ಕಾರವಿತ್ತು, ಆಗ ನಾನೇನು ಮುಖ್ಯಮಂತ್ರಿಯಾಗಿದ್ದೆ, 2004-05, 2005-06ರಲ್ಲಿ ಪ್ಲಾನಿಂಗ್ ಕಮಿಷನ್ ಈ ಹೇಳಿಕೆಯನ್ನೂ ನೀಡಿದೆ. ರಾಷ್ಟ್ರದ ಇನ್ಯಾವ ರಾಜ್ಯಕ್ಕೂ ಈ ಗೌರವ ಸಿಕ್ಕಿಲ್ಲ. 2004-05ರಲ್ಲಿ 13,550 ರೂ. ಕೋಟಿ ಪ್ಲಾನ್ ಔಟ್‌ಲೇನಲ್ಲಿ ದೇಶದಲ್ಲೇ ನಮ್ಮ ರಾಜ್ಯ ಪ್ರಥಮ ಸ್ಥಾನದಲ್ಲಿ ಇತ್ತು. ಮೊನ್ನೆ ಪ್ಲಾನ್ ಔಟ್‌ಲೇನಲ್ಲಿ 16,166 ಕೋಟಿ ಏನಿದೆ ಅದನ್ನು ಯಾಕೆ ಹೆಚ್ಚಿಸಿದರು? It is very difficult to get plan outlay, approved. ಅಧ್ಯಕ್ಷರೇ ನಾವು planning commission ನೊಂದಿಗೆ ಚರ್ಚೆಗೆ ಹೋದಾಗ ಅಷ್ಟೂ ಮೊತ್ತ ಕೊಡುವುದಿರಲಿ they have increased by 19.2%. ಯಾಕೆ ಕೊಡುತ್ತಾರೆ ಅಂದರೆ ಹೋದ ವರ್ಷ ರಾಜ್ಯಕ್ಕೆ ಕೊಟ್ಟ ಪ್ಲಾನ್ ಔಟ್‌ಲೇನಲ್ಲಿ ಏನು ಸಾಧನೆಯಾಗಿದೆ ಅದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಕೊಟ್ಟಿದ್ದಾರೆ. It is very difficult to get extra. ಹಿಂದಿನ ಸರ್ಕಾರಗಳು ಹೋದಾಗ 300-400 ಕೋಟಿ ರೂ. ಜಾಸ್ತಿ ಮಾಡಿದಂತೆ ಮಾಡಲಿಲ್ಲ. ಆದರೆ ನಮ್ಮ ಕಾಲದಲ್ಲಿ ಕರ್ನಾಟಕ ರಾಜ್ಯಕ್ಕೆ ಮೊಟ್ಟಮೊದಲ ಬಾರಿಗೆ 19.2 ಹೆಚ್ಚಾಗಿದೆ. ಅದಕ್ಕೆ ಇಕ್ರಾದವರೂ ಪ್ರಶಂಸೆ ಮಾಡಿದ್ದಾರೆ. ಇದೆಲ್ಲದರ ಕ್ರೆಡಿಟ್ ಅನ್ನು ತಾವೇ ತಗೊಂಡು ಹೇಳುತ್ತಾ ಇದ್ದಾರೆ. ಅವರೇನು ಹೇಳಿದ್ದಾರೆ ಎಂದರೆ core sector allocation ಏನಿದೆ ಕೃಷಿಗೆ 2004-05ರಲ್ಲಿ 6.33 ಪರ್ಸೆಂಟ್ ಇದ್ದರೆ ಈಗೆಷ್ಟು ಮಾಡಿದ್ದೀರಿ ಎಂದರೆ 5.79 ಪರ್ಸೆಂಟ್. ಗ್ರಾಮೀಣಾಭಿವೃದ್ಧಿಗೆ 4.51 ಪರ್ಸೆಂಟ್, ಈಗ 4.41 ಪರ್ಸೆಂಟ್, ವಿಶೇಷ ಪ್ರದೇಶ ಯೋಜನೆಗೆ 1.23, ಈಗ 0.89 ಪರ್ಸೆಂಟ್. ನೀರಾವರಿಗೆ 29.8 ಪರ್ಸೆಂಟ್, ಈಗ 26.48 ಪರ್ಸೆಂಟ್, ಎನರ್ಜಿಗೆ ನಾವು ಇಟ್ಟಿದ್ದು 13.6 ಪರ್ಸೆಂಟ್, ತಾವು 10.59 ಪರ್ಸೆಂಟ್ ಮಾಡಿದ್ದೀರಿ. ಸಾರಿಗೆ 12.02 ಪರ್ಸೆಂಟ್ ಆದರೆ ನೀವು 12.10 ಪರ್ಸೆಂಟ್ ಅಂದರೆ 8 ಪರ್ಸೆಂಟ್ ವೃದ್ಧಿ ಮಾಡಿದ್ದೀರಿ. ಶಿಕ್ಷಣಕ್ಕೆ 7.47 ಪರ್ಸೆಂಟ್ ನಾವು ಇಟ್ಟಿದ್ದೇವು ಈಗ ನೀವು 7.94 ಪರ್ಸೆಂಟ್ ಮಾಡಿದ್ದೀರಿ, ಶಿಕ್ಷಣ ಸಾರಿಗೆಗಳಲ್ಲಿ 4 ಪರ್ಸೆಂಟ್, ಆರೋಗ್ಯದಲ್ಲಿ 2.5, ತಾವೂ ಅಷ್ಟೇ ಇಟ್ಟಿದ್ದೀರಿ. ಸಾಮಾಜಿಕ ವಲಯಗಳತ್ತ ನಾವು ಹೆಚ್ಚಿನ ಅನುದಾನ ಒದಗಿಸಿದೆವು. ಶಿಕ್ಷಣ ಮೊತ್ತ ರಾಷ್ಟ್ರದ ಸರಾಸರಿಗಿಂತ ಕರ್ನಾಟಕ ಮುಂದಿದೆ. ಇವತ್ತು ನಾವು ಹೇಳುವುದಿಷ್ಟೆ ರೈತರ ಸಾಲದ ಬಡ್ಡಿದರವನ್ನು 6 ಪರ್ಸೆಂಟ್‌ನಿಂದ 4 ಪರ್ಸೆಂಟ್‌ಗೆ ಇಳಿಸಿದ್ದೇವೆ. ಮೊನ್ನೆ ಹಣಕಾಸು ಸಚಿವ ಮಾನ್ಯ ಚಿದಂಬರಂರವರೂ ಲೋಕಸಭೆಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದಾರೆ. 9 ಪರ್ಸೆಂಟ್ ಬಡ್ಡಿ ದರ ಇದ್ದಾಗ ನಾವು 6 ಪರ್ಸೆಂಟ್‌ಗೆ ಇಳಿಸಿದೆವು. ಈಗ ಮಾನ್ಯ ಚಿದಂಬರಂ ಅವರು 7 ಪರ್ಸೆಂಟ್ ಬಡ್ಡಿ ದರ ಇಳಿಸಿದರು. ತಾವು 4 ಪರ್ಸೆಂಟ್‌ನಂತೆ ಕೊಡುತ್ತೇವೆಂದು ಹೇಳಿದ್ದೀರಿ. ತಾವು ಘೋಷಣೆಗಳನ್ನು ಕೂಗುವ ಭರಾಟೆಯಲ್ಲಿ ನನಗನ್ನಿಸುತ್ತದೆ, ನಿಮ್ಮೆಲ್ಲ ಪ್ರಧಾನ ಕಾರ್ಯದರ್ಶಿಗಳೂ ಸರಿಯಾದ ರೀತಿಯಲ್ಲಿ ಹೇಳಿದ್ದಾರೆ. ನಾನೂ ಕೂಡ ಬಜೆಟ್‌ನಲ್ಲಿ ಇರುವ ಅಂಕಿಅಂಶಗಳೇನಿವೆ

ಅವನ್ನೇ ತಮ್ಮೆದುರು ಬಿಚ್ಚಿ ಇಡುತ್ತಾ ಬರುತ್ತೇನೆ. ಹೊರಗಡೆ ಏನು ಪ್ರಚಾರ ಬಂದಿದೆ ಅಂದರೆ 4 ಪರ್ಸೆಂಟ್ ಮೇಲೆ ಸಾಲ ಕೊಡುತ್ತಾ ಇದ್ದೇವೆ ಎಂದು ಪ್ರತಿಶತ 6ರಂತೆ ಬಡ್ಡಿ ಕೊಡುವ ಕಾಲದಲ್ಲಿ we provided Rs.80 Crore in the budget. ನೀವು 40 ಕೋಟಿ ಮಾಡಿದ್ದೀರಿ. ಈ ರಾಜ್ಯದಲ್ಲಿರುವ ಸಹಕಾರ ಬ್ಯಾಂಕ್‌ಗಳಿಂದ ಸಾಲ ಏನು ಪಡೆದಿದ್ದೆವು ಅದನ್ನು ರಾಜ್ಯದ 6.75 ಲಕ್ಷ ರೈತರಿಗೆ ಕೊಟ್ಟಿದ್ದೇವೆ. ತಾವೇ ಹೇಳುತ್ತಿದ್ದಿರಿ ಎಷ್ಟೋ ಸಲ 'ಏನ್ರೀ ಕಾಫಿ ಬೆಳೆಗಾರರಿಗೆ ತೊಂದರೆಯಾಗುತ್ತಾ ಇದೆ, ಅಡಿಕೆ ಬೆಳೆಗಾರರಿಗೆ ತೊಂದರೆಯಾಗುತ್ತಿದೆ. ತಾವು ವಿರೋಧ ಪಕ್ಷದ ನಾಯಕರಾಗಿ ಬಂದ ಮೇಲೆ ನಾವು ಎಲ್ಲಾ ಕ್ಷೇತ್ರಗಳಿಗೂ ಸಹಾಯ ಮಾಡುತ್ತಿದ್ದೇವೆ ಅಂದಿರಿ, ಅದಕ್ಕೇ ನಾನು ಹೇಳಿದ್ದು ನಾವು ಬಹಳ ಸಾಧಿಸಿದ್ದೆವು ಅಂತ ಏನಿದೆ ಅದು ಸತ್ಯಕ್ಕೆ ದೂರವಾದುದು ಅಂತ ಮಾತ್ರ ಹೇಳುತ್ತಿದ್ದೇನೆ. ಕೃಷಿ ಕ್ಷೇತ್ರದಲ್ಲಿ 2001–02ರಲ್ಲಿ 14.5 ಪರ್ಸೆಂಟ್ ಇದು ಅತ್ಯುತ್ತಮ ಬೆಳವಣಿಗೆ 2003–04ರಲ್ಲಿ 1.8 ಪರ್ಸೆಂಟ್, 2004–05ರಲ್ಲಿ 12 ಪರ್ಸೆಂಟ್, ಇಲ್ಲಿ ಈಗ ಸಿದ್ದರಾಮಯ್ಯನವರು ಬಂದಿಲ್ಲ, ನಾವು ಹೇಳುತ್ತೇವೆ, ಅವರು ಹೊರಗಡೆ ಹೋಗಿಬಿಡುತ್ತಾರೆ. ಮಾನ್ಯ ಯಡಿಯೂರಪ್ಪನವರೇ, 2001ರಿಂದ 2004–05ರಲ್ಲಿ 1.8ರಿಂದ ನಮ್ಮದು ಸಾಧನೆಯೇನಾಗಿದೆ ಎಂದರೆ 12 ಪರ್ಸೆಂಟ್ ಸಾಧನೆ ಕೃಷಿಯಲ್ಲಿ ಆಗಿದೆ. 4 ವರ್ಷಗಳಲ್ಲೂ ಸರಾಸರಿ 6.4 ಪರ್ಸೆಂಟ್ ಯೋಜನಾ ಆಯೋಗ ಕೂಡ ನಿಗದಿಪಡಿಸಿದ್ದು 10.1 ಪರ್ಸೆಂಟ್ ರೈತರ ಕಲ್ಯಾಣಕ್ಕಾಗಿ 'ಕಡಿಮೆ ಬಡ್ಡಿ ದರದಲ್ಲಿ ಸಾಲ ಬಡ್ಡಿ ಮನ್ನಾ' ಬೆಳೆ ವಿಮೆ', 'ರಾಜ್ಯ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ', 'ಇಸ್ರೇಲ್ ಮಾದರಿಯಲ್ಲಿ ಕೃಷಿ, ಇವು ಹಲವಾರು ಕಾರ್ಯಕ್ರಮಗಳು. ಇದು ನಮ್ಮ ಅಚೀವ್‌ಮೆಂಟ್ ಆಗಿತ್ತು ನಾವು ಮಾಡಿದ್ದೇವೆ. 2004–05, 2005–06ರಲ್ಲಿ ನಾವೇನು ಕೆಲಸಕಾರ್ಯ ಮಾಡಿದ್ದೇವೆ ಅದನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ತಿದ್ದಬೇಕಾಗುತ್ತದೆ. ತಾವು ದೇವಾಲಯಗಳ ಜೀರ್ಣೋದ್ಧಾರದಿಂದ ಈ ವಲಯದ ಬಗ್ಗೆ ಕಮಿಟ್‌ಮೆಂಟ್‌ಗೆ ಬರಬೇಕಾಗುತ್ತದೆ. ಸಾಲ ಮರುಪಾವತಿಗೆ ಅಂತಿಮ ದಿನಾಂಕ ಏಪ್ರಿಲ್ ದಿನಾಂಕ 10 ಇಟ್ಟಿದ್ದೀರಿ ಸ್ವಾಗತಾರ್ಹ. ಅಭಿವೃದ್ಧಿ ಬ್ಯಾಂಕುಗಳಿಗೆ ಸಾಲ ಎತ್ತುವಳಿ ಬಗ್ಗೆ ಸ್ಪಷ್ಟ ನಿಲುವಿಲ್ಲ. ಯಶಸ್ವಿನಿ ಯೋಜನೆ ವಿಸ್ತರಣೆ ಉದ್ದೇಶ ಏನು? ಮಾನ್ಯ ಚಲುವರಾಯಸ್ವಾಮಿಯವರು ನಮ್ಮ ಮುಖ್ಯಮಂತ್ರಿಗಳ ಬಹಳ ಆಪ್ತ ಸ್ನೇಹಿತರು. ಅವರು ಇವತ್ತು ಸಾರಿಗೆ ಮಂತ್ರಿಗಳಾಗಿದ್ದಾರೆ. ಮಾನ್ಯ ಅಶೋಕ್‌ರವರೂ ಇದ್ದಾರೆ. ಅಶೋಕ್ ಅವರು ಒಂದು ಸಾರಿ ಇಲಿ ಜ್ವರ ಬಂತು ಎಂದು ಇಲ್ಲೇ ಬೆಂಗಳೂರಿನಲ್ಲೇ ಪ್ರದಕ್ಷಿಣೆ ಹಾಕುತ್ತಾರೆ. ಆದರೆ ಒಂದು ಸಾರಿಯೂ ಗುಲ್ಬರ್ಗಾ ಕಡೆ ಹೋಗಿಲ್ಲ, ತಾವು ರಾಯಚೂರಿಗೂ ಹೋಗಿಲ್ಲ, ಬೀದರ್‌ಗೂ ಕೂಡ ಹೋಗಿಲ್ಲ. ನೋಡಿಬರಲಿಕ್ಕೆ ಅವರನ್ನು ಕಳುಹಿಸಿ. ಷುಗರ್ ಫ್ಯಾಕ್ಟರೀಸ್ ರಿವೈವಲ್ ಬಗ್ಗೆ ಕೂಡ ಮೊನ್ನೆ ಏನೋ ಮೀಟಿಂಗನ್ನು ಮಾಡಿದ್ದಾರಂತೆ, ಗೊತ್ತಿಲ್ಲ. ಇವತ್ತು ನೀರಾವರಿಗೆ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕ ಇನ್‌ಕಂಪ್ಲೀಟ್ ಪ್ರಾಜೆಕ್ಟ್ ಏನು ಇವೆ. ಅವುಗಳನ್ನು ಬೇಗ ಮುಗಿಸಿ. ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಿಂದಿನ ಸರ್ಕಾರದಲ್ಲಿ ನೀರಾವರಿ ಮಂತ್ರಿಗಳಾಗಿದ್ದರು. 2004ರಲ್ಲಿ 3024 ಕೋಟಿ ರೂ. ಹಣ ಒದಗಿಸಿದ್ದರೆ 2004–05ರಲ್ಲಿ 3942 ಕೋಟಿ ರೂ.ಗಳನ್ನು ಇಟ್ಟಿದ್ದೆವು. ಕಾರಂಜಾ ಪ್ರಾಜೆಕ್ಟ್ ಯಾವಾಗ ಪ್ರಾರಂಭವಾಯಿತೆಂದರೆ 72 ರಲ್ಲಿ ಆಗ ನಾವು ಪ್ರಥಮಬಾರಿಗೆ

ಶಾಸಕರಾಗಿ ಬಂದಿದ್ದೆವು. ಈಗ ಕಾರಂಜಾ ಪ್ರಾಜೆಕ್ಟ್ ಕಂಪ್ಲೀಟ್ ಆಗಿದೆ. ಆಮರ್ಜಾ ನಡೆಯುತ್ತಿದೆ. ಅದಕ್ಕೆ ಸರಿಯಾಗಿ ಅಲೈನ್‌ಮೆಂಟ್ ಇರಲಿಲ್ಲ. ಬೆಣ್ಣೆತೊರಾ ನಡೀತಿದೆ. ಒಂದು ದಿವಸ ಹೆಲಿಕಾಪ್ಟರನ್ನು ತೆಗೆದುಕೊಂಡು ಹೋಗಿ ಎಲ್ಲಾ ಉದ್ಘಾಟನೆಯನ್ನು ಮಾಡಿ ಬರಬೇಕಾಯಿತು. ನಾಳೆ ಹೋಗುತ್ತೀರಿ. ಕಾರಂಜಾ ನೋಡಿ, ಎಷ್ಟು ದಿವಸದಿಂದ ಪೆಂಡಿಂಗ್ ಇತ್ತು ಎಂದು ಬಂಡೆಪ್ಪ ಕಾಶಂಪೂರ್‌ರವರು ಹೇಳುತ್ತಾರೆ. ಕಾರಂಜಾ ಪ್ರಾಜೆಕ್ಟ್ ನಮ್ಮ ಕಾಲದಲ್ಲಿ ಉದ್ಘಾಟನೆ ಆಯಿತು. ಕಾವೇರಿ ಫಸ್ಟ್ ಸ್ಟೇಜ್ ಬಗ್ಗೆ ಸಹಾ ತಮ್ಮ ನೆನಪಿಗೆ ತರುತ್ತಿದ್ದೇನೆ. ಆಗ ಮಾನ್ಯ ಗುಂಡೂರಾಯರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರು ಹೇಳಿದ ಮಾತನ್ನು ಅನುಷ್ಠಾನಕ್ಕೆ ತರುವಂಥವರು. ಆಗ ಮೊಯಿಲಿಯವರು ಹಣಕಾಸು ಸಚಿವರಾಗಿದ್ದರು. 56 ಕೋಟಿ ರೂ. ಕಾವೇರಿ ಫಸ್ಟ್ ಸ್ಟೇಜ್‌ಗೆ ಖರ್ಚಾಯಿತು. 83 ರಲ್ಲಿ ನಮ್ಮ ಸರ್ಕಾರ ಹೋಯಿತು. ರಾಮಕೃಷ್ಣ ಹೆಗಡೆಯವರ ಹೋಗಿ ಈ ಪ್ರಾಜೆಕ್ಟ್‌ನ ಉದ್ಘಾಟನೆಯನ್ನು ಮಾಡಿದರು. ರಾಮಕೃಷ್ಣ ಹೆಗಡೆಯವರು ಕಾಲದಲ್ಲಿ ಕಾವೇರಿ ಫಸ್ಟ್ ಸ್ಟೇಜ್ ಬಂತು ಎಂದು ಸುದ್ದಿ ಬರುತ್ತದೆ. ಇವೆಲ್ಲಾ ರಾಜಕೀಯ ಜೀವನದಲ್ಲಿ ಆಗುವುದೇ. ಅದಕ್ಕೆ ನಾವೇನೂ ವ್ಯಥೆ ಪಡುತ್ತಿಲ್ಲ. ಆದರೆ 29 ಯೋಜನೆಗಳೇನಿವೆ, ನಾವು ಹೇಳಿದ್ದನ್ನೇ ನೀವೂ ಹೇಳುತ್ತಿದ್ದೀರಿ. ಕಾವೇರಿ–ಕೃಷ್ಣಾದ ಬಗ್ಗೆ, ಕೃಷ್ಣಾದ ಬಗ್ಗೆ ಏನು ಮಾಡಬೇಕು, ಕಾವೇರಿ–ಕೃಷ್ಣಾ ನಮ್ಮ ರಾಜ್ಯದ ರೈತರಿಗೆ ವಿಶೇಷವಾದ ರೀತಿಯಲ್ಲಿ ಆರ್ಥಿಕ ಬಲವನ್ನು ಕೊಡತಕ್ಕ ಪ್ರಾಜೆಕ್ಟ್‌ಗಳು. ಅದಕ್ಕೆ ಈಗಾಗಲೇ ನಾವು ಹೇಳಿದ್ದೇವೆ. ನಾರಿಮನ್ ರೀತಿ ವಾದ ಮಾಡತಕ್ಕ ಒಬ್ಬ ಎತ್ತರದ ವಕೀಲರು ಏನು ಇದ್ದಾರೆ, ಅವರನ್ನು ತೆಗೆಯುವ ಯತ್ನವನ್ನು ಮಾಡಬೇಡಿ. ರಾಜ್ಯದಲ್ಲಿ ಸರ್ಕಾರ ಬರುತ್ತದೆ, ಹೋಗುತ್ತದೆ. ಆದರೆ ನ್ಯಾಯವಾದಿಗಳು ಇರುತ್ತಾರೆ, ರಾಜ್ಯದ ಹಿತದೃಷ್ಟಿಯಿಂದ ಸ್ಪಷ್ಟವಾದ ರೀತಿಯಲ್ಲಿ ಇರುವ ಹಾಗೆ ಪ್ರಯತ್ನವನ್ನು ಮಾಡಬೇಕು. ನೀರಾವರಿಗೆ ಇನ್ನೂ ಕೂಡ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳುತ್ತೇನೆ. ವಿಶ್ವ ಬ್ಯಾಂಕ್ ನೆರವಿನಿಂದ ಸಣ್ಣನೀರಾವರಿಗೆ ಅನುಕೂಲವಾಗಿದೆ. ಮಾನ್ಯ ಖರ್ಗೆಯವರು ಬಹಳ ಪರಿಶ್ರಮವನ್ನು ವಹಿಸಿ ಕೆಲಸವನ್ನು ಮಾಡಿದ್ದಾರೆ. ಇವತ್ತು ಕೋಲಾರದಲ್ಲೂ ಕೂಡ ಹೆಚ್ಚಿನ ಲಾಭವಾಗುತ್ತಿದೆ. ನಮ್ಮ ಮಾನ್ಯ ಕುಮಾರ ಬಂಗಾರಪ್ಪನವರು ಮಂತ್ರಿಗಳಾಗಿದ್ದಾಗ ಅವರೂ ಕೂಡ ವಿಶ್ವ ಬ್ಯಾಂಕ್, ನಬಾರ್ಡ್‌ನ ಸಹಾಯದಿಂದ 441 ಕೋಟಿ ರೂ. ಸಹಾಯ ಪಡೆದು ಪ್ರಾರಂಭಿಸಿದ 600 ಕಾಮಗಾರಿಗಳನ್ನು ತ್ವರಿತವಾಗಿ ಪೂರೈಸಬೇಕು. ಇಸ್ರೇಲ್ ತಂತ್ರಜ್ಞಾನದ ಐದು ಸಾವಿರ ಎಕರೆಯಲ್ಲಿ ಹನಿ ನೀರಾವರಿಗೆ 5 ಕೋಟಿ ನಂಜುಂಡಪ್ಪನವರ ವರದಿ ಬಗ್ಗೆ ಸುಮ್ಮನೆ ಮಾತನಾಡಿ ಹೇಳಿದರೆ ಸಾಲದು. ಅವರು ಇಲ್ಲಿ ಇದ್ದಾಗ ಹೇಳುತ್ತಿದ್ದರು. ಯಾವಾಗಲೂ ಕೂಡ ಕೆಲವು ವಿಷಯಗಳನ್ನು ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದರು. ನಂಜುಂಡಪ್ಪನವರ ವರದಿ ಏನಾಯಿತು ಎಂದು ನಮ್ಮ ದೇಶದ ಪ್ರಧಾನಮಂತ್ರಿಗಳು 2004 ರಲ್ಲಿ ಕರ್ನಾಟಕ ರಾಜ್ಯಕ್ಕೆ ಬಂದರು. ನಮ್ಮ ಪ್ರಧಾನಮಂತ್ರಿಗಳ ಎದುರಿಗೆ ನಾವು ಹೇಳಿದೆವು, Nanjundappa has submitted a report. ಇವತ್ತು ಇದರ ಅನುಷ್ಠಾನಕ್ಕೆ 9600 ಕೋಟಿ ರೂ. ಹಣ ಖರ್ಚಾಗಬೇಕಾಗುತ್ತದೆ. ಸಮಗ್ರ ಉತ್ತರ ಕರ್ನಾಟಕ ಅಭಿವೃದ್ಧಿ ಆಗಬೇಕಾದರೆ ನಂಜುಂಡಪ್ಪನವರ ವರದಿ ಏನು ಇದೆ, ಈ ಅಂದಾಜಿನ ಅರ್ಧದಷ್ಟು ಹಣವನ್ನು ಕೇಂದ್ರದಿಂದ ಕೊಡಬೇಕೆಂದು ನಾನು ವಿನಂತಿಸಿದ್ದೇನೆ. ಅದರ ಬಗ್ಗೆ ಇವರು ಏನೂ ಪ್ರಸ್ತಾಪ

ಮಾಡಿಲ್ಲ. ಯಾವಾಗಲೂ ಮೆಟ್ರೋ ಬಗ್ಗೆ ಹೇಳುತ್ತಾರೆ. ನಾವು ಮೆಟ್ರೋ ಬಗ್ಗೆ ಸತತ ಪ್ರಯತ್ನ, ಡೆಲ್ಲಿ ಯಾತ್ರೆ ಮಾಡಿ ಸತ್ತುಹೋದೆವು. ಮೆಟ್ರೋ ಬಗ್ಗೆ ಸಾಕಷ್ಟು ತಾಪತ್ರಯಗಳು ಬಂದರೂ ಕೂಡ ನಾನು ಪ್ರಾಜೆಕ್ಟ್ ಬಿಡಲಿಲ್ಲ. 1983ರಲ್ಲಿ ಇದಕ್ಕೆ ಸರ್ವೆ ಆಯಿತು. ಪ್ಲಾನಿಂಗ್ ಕಮೀಷನ್ ಕೂಡ ಅಪ್ರೂವ್ ಮಾಡಿದರು. ಇವತ್ತು ಕೇಂದ್ರ ಸರ್ಕಾರ ಅಖೈರಾಗಿ ಮಂಜೂರಾತಿ ಕೊಡಬೇಕೆನ್ನುವ ಉದ್ದೇಶವನ್ನು ತಾಳಿದೆ. ಇವರುಗಳು ಅಲ್ಲಿಗೆ ಹೋಗುತ್ತಾರೆ. ಇವರೊಬ್ಬರೇ ಹೋಗುವುದಿಲ್ಲ. ಉಪ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳು ಇಬ್ಬರೂ ಕೂಡ ಹೋಗಿದ್ದಾರೆ. ಮೆಟ್ರೋ ಆಯಿತು. ಓ.ಎನ್.ಜಿ.ಸಿ. ಪ್ರಾಜೆಕ್ಟ್ ಆಯಿತಲ್ಲಾ. 25 ಸಾವಿರ ಕೋಟಿ ರೂಪಾಯಿಯ ಓಎನ್‌ಜಿಸಿ ಪ್ರಾಜೆಕ್ಟ್. that is a gift to Karnataka. ಅದು ನಮಗೆ ಬರಲಿಲ್ಲ. ನಾಗರಾಜ ಶೆಟ್ಟರು ಇದ್ದಾರಲ್ಲಾ ಅವರ ಜಾಗದಲ್ಲಿ ಪ್ರಾರಂಭವಾಗುತ್ತದೆ. ಇನ್‌ವೆಸ್ಟ್‌ಮೆಂಟನ್ನು ಇನ್ನೂ ಹೆಚ್ಚು ಮಾಡುತ್ತಾರೆ. This is the only petro-chemical project. ಓ.ಎನ್.ಜಿ.ಸಿ. ಪ್ರಾಜೆಕ್ಟ್‌ಗೆ ನಾವು ಪ್ರಧಾನಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಇವತ್ತು ಮಾನ್ಯ ಕುಮಾರಸ್ವಾಮಿಯವರು ಮತ್ತು ನಮ್ಮ ಯಡಿಯೂರಪ್ಪನವರ ಸರ್ಕಾರ ಏನು ಇದೆ, ಅವರುಗಳು ಪ್ರಧಾನಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳಬೇಕು. ಈ This petro-chemical project starts from Mangalore, via Hassan, ಬೆಂಗಳೂರಿಗೆ ಬರತಕ್ಕದ್ದು. That is one of the biggest projects. ಇದರ ಬಗ್ಗೆ ಸಾಕಷ್ಟು ಎಡರುತೊಡರುಗಳು ಬಂದರೂ ಕೂಡ ಪ್ರಧಾನಮಂತ್ರಿಗಳ ಛಲದಿಂದ ನಮಗೇ ಕೊಟ್ಟರು. ನಿಮಗೆ ಓ.ಎನ್.ಜಿ.ಸಿ. ಪ್ರಾಜೆಕ್ಟ್‌ನ್ನು ಕೊಡುತ್ತೇವೆಂದು ಹೇಳಿ ಕೊಟ್ಟಿದ್ದಾರೆ. ಅದರ ಬಗ್ಗೆ ಕೂಡ ಪ್ರಸ್ತಾಪ ಮಾಡಿಲ್ಲ. ಇವತ್ತು ಕೇಂದ್ರ ಸರ್ಕಾರದಿಂದ ಬರಬೇಕಾದ ಹಣ ಸಾಕಷ್ಟು ಇದೆ. ಇವತ್ತು ಲೋಕಸಭೆಯಲ್ಲಿ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಅನೌನ್ಸ್ ಮಾಡಿದ್ದಾರೆ. 1970 ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಪ್ರಧಾನಮಂತ್ರಿಗಳಾಗಿದ್ದರು. 'ಗರೀಬಿ ಹಟಾವೋ' ಎನ್ನುವ ಘೋಷಣೆಯನ್ನು ಮಾಡಿದರು. ಈ ರಾಷ್ಟ್ರದಲ್ಲಿರತಕ್ಕ ಬಡವರ ಬಗ್ಗೆ, ಬಡತನ ರೇಖೆಗೆ ಒಳಗಾಗಿರುವ ಜನರು ಏನು ಇದ್ದಾರೆ, ಅದರ ಬಗ್ಗೆ ಸಾಮಾನ್ಯ ವರ್ಗದವರಿಗೆ 'ಗರೀಬಿ ಹಟಾವೋ' ಎನ್ನುವ ಸ್ಲೋಗನನ್ನು ಕೊಟ್ಟಮೇಲೆ ನಮ್ಮ ದೇಶದಲ್ಲಿ ಈ ಕಾರ್ಯಕ್ರಮದಿಂದ ಬಡವರ ಮನಸ್ಸಿನಲ್ಲಿ ನಮ್ಮ ಬಗ್ಗೆ ಚಿಂತನೆ ಮಾಡುವ ಈ ದೇಶದಲ್ಲಿ ಒಬ್ಬರು ಪ್ರಧಾನಮಂತ್ರಿಯಾಗಿ ಇದ್ದಾರೆ ಎನ್ನುವ ಭಾವನೆ ಮೂಡಿತು. ಗರೀಬಿ ಎಷ್ಟರಮಟ್ಟಿಗೆ ಈ ಕಾರ್ಯಕ್ರಮದಿಂದ ಹೋಗಿದೆ, ಅದು ಡಿಬೇಟಬಲ್ ಇಸ್ಸ್ಯೂ. ಆದರೆ ಈ ದೇಶದ ಬಡವರನ್ನು ಒಂದುಗೂಡಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಯುಪಿಎ ಅಧ್ಯಕ್ಷಿಣಿಯಾದ ಸೋನಿಯಾಗಾಂಧಿಯವರು ಇವತ್ತು ನಮ್ಮ ದೇಶದ ಪ್ರಧಾನಮಂತ್ರಿಯಾದಂಥ ಮನಮೋಹನಸಿಂಗ್ ಅವರು ಇವತ್ತು ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಜಾರಿಮಾಡಿ ನಮ್ಮ ಐದು ಜಿಲ್ಲೆಗಳನ್ನು ಈ ಯೋಜನೆಯಡಿ ತೆಗೆದುಕೊಂಡಿದ್ದಾರೆ. ಚಾಮರಾಜನಗರ, ಚಿತ್ರದುರ್ಗ, ಗುಲ್ಬರ್ಗಾ, ಬೀದರ್ ಇದೆ. ಇದೆಲ್ಲಾ ಕಡೆಗೆ ಕೂಡ ಎಂಪ್ಲಾಯ್‌ಮೆಂಟ್ guarantee, ಯೋಜನೆ ಜಾರಿಗೆ ಬರುವುದಿದೆ. already, they have identified. ಯಾರಿಗೆ ಯಲ್ಲೋ ಕಾರ್ಡ್ ಇದ್ದವರಿಗೆ, ಬಿಪಿಎಲ್ ಕಾರ್ಡ್ ಹೋಲ್ಡರ್‌ಗೆ ಕನಿಷ್ಠ ನೂರು ದಿನಗಳವರೆಗೆ

ಕೆಲಸವನ್ನು ಕೊಡಬೇಕು. ಕೆಲಸವನ್ನು ಕೊಡಲಾರದೆ ಹೋದರೆ ಅವರಿಗೆ ಹಣವನ್ನಾದರೂ ಕೊಡಬೇಕು. ಅದಕ್ಕಾಗಿ ಈಗಾಗಲೇ ಕೇಂದ್ರ ಸರ್ಕಾರ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಬಗ್ಗೆ ಉಪ ಮುಖ್ಯಮಂತ್ರಿಗಳಾದ ತಾವು ಹಣಕಾಸಿನ ಮಂತ್ರಿಗಳಾಗಿದ್ದೀರಿ. ಇವತ್ತು ಅದರ ಬಗ್ಗೆ ಏನೂ ಹೇಳಿಲ್ಲ ಏನೂ ಪ್ರಸ್ತಾಪ ಇಲ್ಲ. ಏನು ಕೇಂದ್ರ ಸರ್ಕಾರಕ್ಕೆ ನಾವು ಸಹಾಯವನ್ನು ಮಾಡುತ್ತಿದ್ದೇವೆ, ಅದಕ್ಕೆ 25 ಕೋಟಿ ರೂಪಾಯಿಗಳನ್ನು ಇಟ್ಟು ಗುರುತಿಸುತ್ತೇವೆ, ಆದೇಶ ಕೊಟ್ಟಿದ್ದೇವೆ, ಅದರ ಬಗ್ಗೆ ಸರ್ಕಾರ ಪೂರ್ಣತರವಾದ ಸಹಾಯವನ್ನು ಮಾಡುತ್ತದೆ ಎಂದು ಎಲ್ಲಿಯೂ ಕೂಡ ಹಣಕಾಸು ಸಚಿವರು ಹೇಳಿಲ್ಲ. ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮನ್ನು ಯುಪಿಎ ಅಧ್ಯಕ್ಷಿಣಿ ಸೋನಿಯಾಗಾಂಧಿಯವರು ಮಾಡಿದ್ದಾರೆ. ಶ್ರೀಮತಿ ಸೋನಿಯಾಗಾಂಧಿಯವರು ಅಧಿಕಾರಕ್ಕೋಸ್ಕರ ಯಾರ ಜೊತೆಗೂ ಕೈ ಜೋಡಿಸಲಿಲ್ಲ. ಪ್ರಧಾನಮಂತ್ರಿ ಪದವಿ ಬಾಗಿಲಿಗೇ ಬಂತು. ಆದರೂ ನಿರಾಕರಿಸಿದರು. ಅಪವಿತ್ರವಾದ ಮೈತ್ರಿ ಅಲ್ಲ. ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಏನು ತ್ಯಾಗವನ್ನು ಶ್ರೀಮತಿ ಸೋನಿಯಾಗಾಂಧಿಯವರು ಮಾಡಿದ್ದಾರೆ, ದೇಶಕ್ಕೆ ಏನೇನು ಯೋಜನೆಗಳ ಕೊಡುಗೆಯನ್ನು ಕೊಟ್ಟಿದಾರೆ, ಅದರ ಬಗ್ಗೆ ಕೂಡ ನಾವು ನೆನೆಸುತ್ತಿದ್ದೇವೆ. ತಾವು ಅದರ ಬಗ್ಗೆ ಹೇಳಬಾರದು. ಅಪವಿತ್ರ, ಇವತ್ತು ಕೈ ಮಿಲಾಯಿಸುವ ಬಗ್ಗೆ ಯಾರಾದರೂ ಕೂಡ ಕಲಿಯಬೇಕಾದರೆ ಒಂದು ಟ್ರೈನಿಂಗ್ ಇನ್ಸ್‌ಟಿಟ್ಯೂಟನ್ನು ಕರ್ನಾಟಕದಲ್ಲಿ ಮಾಡಿ. ಅದು ಕರ್ನಾಟಕದಲ್ಲಿ ರಾಜ್ಯದ ಇತಿಹಾಸದಲ್ಲೂ ಕೂಡ ಎಲ್ಲಿಯೂ ಆಗಿಲ್ಲ. ಆದರೆ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಏನು ಇದೆ, ಅದರ ಬಗ್ಗೆ ಕೂಡ ಉಲ್ಲೇಖ ಮಾಡಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕೈಗಾರಿಕೆಯಲ್ಲಿ 2005–06ರಲ್ಲಿ 78 ಸಾವಿರ ಕೋಟಿ ರೂ.ಗೂ ಹೆಚ್ಚಿನ ಬಂಡವಾಳ ಹೂಡಿಕೆ. ಸಣ್ಣ ಕೈಗಾರಿಕಾ ವಲಯದಲ್ಲಿ 32, 229 ಜನರಿಗೆ ಉದ್ಯೋಗ, ಈ ಬಂಡವಾಳ ಹೂಡಿಕೆಯಿಂದ ಇವತ್ತು ಹೊಸ ಕೈಗಾರಿಕೆಗಳೇನು ಬರಲಿವೆ. 1 ಲಕ್ಷದ 96 ಸಾವಿರ ಜನರಿಗೆ ಉದ್ಯೋಗ ಸಿಗುತ್ತಿದೆ. ಇದೇ ರೀತಿಯಾಗಿ ಜವಳಿ ಉದ್ಯಮ, ಆಹಾರ ಭದ್ರತೆ ಇದರ ಬಗ್ಗೆ ಕೂಡ ತಾವು ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುತ್ತೀಕರಣ ಯೋಜನೆ ಭಾರತ ಸರ್ಕಾರ 375 ಕೋಟಿ ರೂ. ಕೊಟ್ಟಿದೆ. ಇವತ್ತು ನನಗೆ ಬಹಳ ಸಂತೋಷವಾಗಿದೆ. ಮಾನ್ಯ ರೇವಣ್ಣನವರು ಆ ನಿಗಮದ ಅಧ್ಯಕ್ಷರಾಗಿದ್ದರೆಂದು ಹೇಳಿ ಪತ್ರಿಕೆಯಲ್ಲಿ ಬಂದಿದೆ. ಅವರು ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲಿ ಎಂದು ಹೇಳುತ್ತೇನೆ. ಇವತ್ತು ನಾನು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾಗಿದೆ. ನಮ್ಮ ಬೆಂಗಳೂರು ನಗರ ನಮ್ಮ ಇಡೀ ರಾಷ್ಟ್ರದಲ್ಲಿಯೇ ವೇಗವಾಗಿ ಬೆಳೆಯುತ್ತಿರತಕ್ಕ ನಗರಕ್ಕೆ ಹೊರ ರಾಜ್ಯಗಳಿಂದ ಸಾಕಷ್ಟು ಜನ ಬರುತ್ತಿದ್ದಾರೆ. ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಮಾನ್ಯ ಪ್ರಧಾನಮಂತ್ರಿಗಳೂ ಸಹ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟಿಗೆ ಯಾವ ರೀತಿಯಾಗಿ ಮುಂಬೈ ಪ್ರದೇಶಕ್ಕೆ ತಾವು ಹಣವನ್ನು ಕೊಟ್ಟಿದ್ದೀರಿ, ಅದೇ ರೀತಿಯಾಗಿ ಬೆಂಗಳೂರಿಗೂ ಕೊಡಬೇಕು ಎಂಬ ಬೇಡಿಕೆಯನ್ನು ನಾವು ಈಗಾಗಲೇ ಇಟ್ಟಿದ್ದೇವೆ. ಇಂಟರ್‌ನ್ಯಾಶನಲ್ ಏರ್‌ಪೋರ್ಟ್ 1996ರಲ್ಲಿ ನಮ್ಮ

ಮಾನ್ಯ ಅನಂತ್‌ಕುಮಾರ್ ಅವರು ಮಂತ್ರಿಗಳು ಆಗಿದ್ದಾಗ ಈ ವಿಚಾರ ಪ್ರಾರಂಭ ಆಯಿತು. ಅಲ್ಲಿಂದೀಚೆಗೆ ಎಷ್ಟೋ ಜನ ಮಂತ್ರಿಗಳು ಬಂದು ಹೋಗಿದ್ದಾರೆ. They have not taken any decision. ಅರ್ಥ ಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರಿಗೆ ನಾನು ಆಗ ಹೇಳಿದ್ದೆ. ನಮ್ಮ ಮಾನ್ಯ ಸಿಂಧ್ಯಾ ಅವರಿಗೂ ಹೇಳಿದ್ದೆ. ನಮ್ಮ ಇಂಪಾರ್ಟೆಂಟ್ ಮಂತ್ರಿಗಳಾಗಿದ್ದ ಮಾನ್ಯ ಪ್ರಕಾಶ್ ಅವರೂ ಇದ್ದರು. ಮಾನ್ಯ ಖರ್ಗೆಯವರೂ ಇದ್ದರು. ನಾವು ಹೇಗಾದರೂ ಮಾಡಿ ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಮಾಡಲೇಬೇಕೆಂದು ಇಚ್ಛೆ ಇತ್ತು. ಶ್ರೀ ಪುಟಿನ್ ಅವರು ಸೋವಿಯತ್ ದೇಶದ ಅಧ್ಯಕ್ಷರು ಬೆಂಗಳೂರಿಗೆ ಬಂದಿದ್ದರು. ಅವರು ಕೇಳಿದರು. "Mr. Chief Minister, International Airport......" ಎಂದು ಇವತ್ತು ಇಂಟರ್‌ನ್ಯಾಶನಲ್ ಏರ್ ಪೋರ್ಟಿನ ರನ್‌ವೇ ಕೂಡ ಮುಗಿಯುತ್ತಿದೆ. ಅದು ನಮ್ಮ ಕಾಲದಲ್ಲಿ ಪ್ರಾರಂಭ ಆಗಿದೆ. ಇವತ್ತು ಇನ್‌ಫ್ರಾಸ್ಟಕ್ಚರ್‌ಗಾಗಿ ಫ್ಲೈ ಓವರ್ಸ್ ಏನು ನಿರ್ಮಾಣವಾಗಿದೆ, ಅವೆಲ್ಲಾ ನಮ್ಮ ಕಾಲದಲ್ಲೇ ಪ್ರಾರಂಭವಾಗಿದ್ದು. ಮೊನ್ನೆ ಆನಂದರಾವ್ ಸರ್ಕಲ್ ಫ್ಲೈ ಓವರ್ ಉದ್ಘಾಟನೆ ಆಯಿತು. ನನ್ನನ್ನೂ ಕೂಡ ಕರೆದಿದ್ದರು. ನಾನು ಹೋಗಲಿಲ್ಲ. ನಮ್ಮ ಬೇರೆ ಶಾಸಕರು ಹೋಗಿದ್ದರು. ಏರ್‌ಪೋರ್ಟ್ ಕಡೆ, ಮತ್ತು ಇತರ ಕಡೆ ನಾವು ಯಾವ್ಯಾವ ಫ್ಲೈ ಓವರ್ಸ್ ನಿರ್ಮಿಸಿದ್ದೇವೆ ಅದನ್ನು ಇವರು ಉದ್ಘಾಟನೆ ಮಾಡುತ್ತಿದ್ದಾರೆ, ಮಾಡಲಿ. ನಮ್ಮ ಬೆಳೆಯುತ್ತಿರುವ ಜನಸಂಖ್ಯೆಯನ್ನೂ ಆಧರಿಸಿ ಬೆಂಗಳೂರು ನಗರಕ್ಕೆ ನಾವು ಹೆಚ್ಚಿನ ಇನ್‌ಫ್ರಾಸ್ಟಕ್ಚರ್ಸ್ ನಿರ್ಮಿಸಬೇಕಾಗಿದೆ. ನಾವು ಶುರುವಾತ್ ಮಾಡಿದ್ದೇವೆ. ಅದನ್ನು ಇವರು ಮುಂದುವರಿಸಿಕೊಂಡು ಹೋಗಬೇಕು. ಮೊನ್ನೆ ಏನಾಯಿತು? ಫ್ಯಾಬ್ ಸಿಟಿ. ನಾವು ಕರ್ನಾಟಕಕ್ಕೆ ಬರುವ ಬಗ್ಗೆ ಮಾತನಾಡಿದ್ದೇವೆ. ಶ್ರೀ ಅಗರ್‌ವಾಲ್ ಅವರು ಬಂದಿದ್ದಾಗ ನಮ್ಮ ಮಾನ್ಯ ಖರ್ಗೆಯವರು, ಮಾನ್ಯ ದೇಶಪಾಂಡೆಯವರು, ಎಲ್ಲರೂ ಕೂಡ ಅವರ ಜೊತೆಯಲ್ಲಿ ಮಾತನಾಡಿದೆವು. ಅವರು ನಮಗೆ ಜಮೀನು ಕೊಡಬೇಕೆಂದು ಕೇಳಿದರು. ನಂಜನಗೂಡಿನಲ್ಲಿ ಜಮೀನು ಕೇಳಿದರು. ನಾನು ಇಮ್ಮೀಡಿಯಟ್ ಆಗಿ ಒಂದು ಕ್ಯಾಬಿನೆಟ್ ಮೀಟಿಂಗ್ ತರಾತುರಿಯಲ್ಲಿ ಕರೆಸಿ ಇದೊಂದು ಫ್ಯಾಬ್ ಸಿಟಿ ಮಾಡಲು ಬಂದಿದ್ದಾರೆ, ಅದಕ್ಕೆ ಎಲ್ಲಾ ಅನುಕೂಲತೆಗಳನ್ನು ನಾವು ಮಾಡಿಕೊಟ್ಟೆವು. ಯಾವಾಗ ರಿಸಾರ್ಟ್‌ನಲ್ಲಿ ಪೊಲಿಟಿಕಲ್ ಪಾರ್ಟಿ ಕೊಡುವುದು ಪ್ರಾರಂಭ ಮಾಡಿದರು, they thought that political instability is there in the state ಸ್ಟೆಬಿಲಿಟಿ ಇಲ್ಲ ಎಂದು ಬರೆದರು. ಆಂಧ್ರ ಮುಖ್ಯಮಂತ್ರಿ ರಾಜಶೇಖರ್ ರೆಡ್ಡಿಯವರೂ ಕೂಡ ಈ project ಗಾಗಿ ಕಾಯುತ್ತಿದ್ದರು. ಯೋಜನೆ ಕೈಬಿಟ್ಟು ಹೋದದ್ದು ನಮ್ಮ ತಪ್ಪಲ್ಲ. ತಾವು ನೋಡಬಹುದು. ಸಂಪುಟದಲ್ಲಿ ನಾವು ಇದರ ಬಗ್ಗೆ ತೀರ್ಮಾನ ಕೈಗೊಂಡು ರಾಜ್ಯದಲ್ಲೇ ಸ್ಥಾಪಿಸಲು ನಿರ್ಧಾರ ನಾವು ತೆಗೆದುಕೊಂಡಿದ್ದೇವೆ. ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಆದರೆ ಇವತ್ತು ರಾಜ್ಯದಲ್ಲಿ ಏನು ಅವರ ಕಡೆಯಿಂದ ಪೊಲಿಟಿಕಲ್ ಬೆಳವಣಿಗೆ ಆಯಿತು. ಈ ಕಾರಣದಿಂದ ಯೋಜನೆ ಅಲ್ಲಿಗೆ ಹೋಗಿದೆ. ಇವತ್ತು ಮೆಟ್ರೋ ಬಗ್ಗೆ ಅಕ್ವೈರ್ ಮಾಡಿಕೊಳ್ಳಲು 150 ಎಕರೆ ಜಮೀನು ಕೊಟ್ಟಿದ್ದು ಆದೇಶವನ್ನು ಏಕೆ ಹಿಂದಕ್ಕೆ ತೆಗೆದುಕೊಂಡರು? ಮೋನೋ ಕನ್ಸಿಡರ್ ಬೇಡ. ಬಿಜೆಪಿ ಅಪಸ್ವರ

ಬೇಡ. ಮಾನ್ಯ ರಾಮಚಂದ್ರಗೌಡರೇ ಈಗ ಕ್ಯಾಬಿನೆಟ್ ಸಚಿವರಾಗಿದ್ದಾರೆ. ಅದಕ್ಕೆ ನಾನು ಇದ್ದ ವಿಷಯವನ್ನೇ ಹೇಳಬೇಕಾಗುತ್ತದೆ? ಈಗ ಏಕೆ ಹೇಗೆ ಆಗುತ್ತದೆ ಎಂದು ಕೇಳಬೇಕಾಗುತ್ತದೆ. ಹಿರಿಯ ವಕೀಲರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು, ಮತ್ತು ಈ ಯೋಜನೆಯಿಂದ ಅನಾನುಕೂಲಕ್ಕೆ ಒಳಗಾಗಬಹುದಾದ ಜನ ಇದ್ದಾರೆ. ನಮ್ಮ ಕಡೆ ಕೂಡ ಶಾಸಕರು ಇದ್ದಾರೆ. ಮೆಟ್ರೋ ರೈಲು ಪ್ರಾಜೆಕ್ಟ್ ಮುಂದುವರೆಯುವುದಾದರೂ ಹೇಗೆ? ಮೆಟ್ರೋ ರೈಲು ಪ್ರಾಜೆಕ್ಟ್ ಕಲ್ಕತ್ತಾ, ದೆಹಲಿ ಆದ ಮೇಲೆ ನಮ್ಮಲ್ಲಿ ಬರಲಿದೆ. ಮೆಟ್ರೋ ರೈಲಿನಲ್ಲಿ ದೆಹಲಿಯಲ್ಲಿ ಖರ್ಗೆಯವರು, ದೇಶಪಾಂಡೆಯವರು ನಾನೂ ಕುಳಿತ ಮೇಲೆ ಮೊನ್ನೆ ಮಾನ್ಯ ಯಡಿಯೂರಪ್ಪನವರು ಮಾನ್ಯ ಕುಮಾರಸ್ವಾಮಿಯವರೂ ಕುಳಿತಿದ್ದಾರೆ. ನಾವು ಸಹ ಹೋಗಿ ನೋಡಿ ಬಂದಿದ್ದೇವೆ. ಚೆನ್ನಾಗಿದೆ, ಇವತ್ತು ನಮ್ಮ ಬೆಳೆಯುತ್ತಿರುವ ಜನಸಂಖ್ಯೆಗೆ, if that Metro Rail project comes, 16 ಲಕ್ಷ ಜನರಿಗೆ ಸಹಾಯ ಆಗುತ್ತದೆ. ಅದಕ್ಕೆ ಸರ್ಕಾರದ ಬದ್ಧತೆ ಬೇಕಾಗಿದೆ. ಅದರ ಬಗ್ಗೆ ಕೂಡ ತಾವು ಸದನದಲ್ಲಿ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಇನ್ನೂ ನಮ್ಮ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರ ವಿಚಾರ. ಬೇಕಾದ ಅನುದಾನದ ಸ್ಪಷ್ಟ ಕಲ್ಪನೆ ಇಲ್ಲ. ನಿಗಮಗಳಿಗೆ ಹೆಚ್ಚಿನ ಆರ್ಥಿಕ ಶಕ್ತಿ ಬರುವಂತೆ ಬಂಡವಾಳ ಹೆಚ್ಚಿಸುವ ಬಗ್ಗೆ ಏನೂ ಹೇಳಿಲ್ಲ. ಗ್ರಾಮೀಣ ಜನತೆಗೆ ಆರ್ಥಿಕವಾಗಿ ಬಲ ನೀಡುವ ವಿಚಾರದಲ್ಲಿ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಬಗ್ಗೆ ಹೇಳಿದ್ದೇನೆ. ಮತ್ತೊಂದು ತಾವು ಇವತ್ತು ಮಿಡ್ ಡೇ ಮೀಲ್ಸ್ ವಿಚಾರ ಪ್ರಸ್ತಾಪಿಸಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ರಾಜ್ಯದಲ್ಲಿ ಹಿಂದುಳಿದ ಪ್ರದೇಶ ಎಂದು ಐಡೆಂಟಿಫೈ ಮಾಡಿದ್ದಾರೆ, ಅಲ್ಲಿ 11 ಲಕ್ಷ 40 ಸಾವಿರ ಡ್ರಾಪಬಾಟ್ಸ್ ಇದ್ದಾರೆಂದು ಐಡೆಂಟಿಫೈ ಮಾಡಿದ್ದಾರೆ. ಮಕ್ಕಳು ಶಾಲೆಗೆ ಹೋಗಲಾರದಂತಹ ಪರಿಸ್ಥಿತಿಯಲ್ಲಿದ್ದಾರೆ. ಈಗ ನಾವು ಮಾಜಿ ಶಿಕ್ಷಣ ಸಚಿವ ಮಾನ್ಯ ವಿಶ್ವನಾಥ, ಅವರನ್ನು ನೆನೆಸಬೇಕಾಗುತ್ತದೆ. ನಾವು ಹಿಂದುಳಿದ ರಾಯಚೂರು ಪ್ರದೇಶದ ವಿಚಾರ ಹೇಳಿದೆವು. ಹಿಂದುಳಿದ ಪ್ರದೇಶದಲ್ಲಿ ದೇವದುರ್ಗ ಸಹ ಬರುತ್ತದೆ. ಮಾನ್ಯ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ, ನಾವು ಮಾನ್ಯ ಖರ್ಗೆಯವರು ಹೋಗಿ ಮಧ್ಯಾಹ್ನದ ಬಿಸಿ ಊಟ ಪ್ರಾರಂಭ ಮಾಡಿದೆವು. ಐದನೇ ತರಗತಿಯವರೆಗೆ ಕೊಡತಕ್ಕಂಥಾದ್ದು. ಬಿಸಿ ಊಟದ ಕಾರ್ಯಕ್ರಮಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. 2004–05ರಲ್ಲಿ, 2006ರವರೆಗೆ ನಾವು 288 ಕೋಟಿ ರೂಪಾಯಿ ಈ ಯೋಜನೆಗೆ ಖರ್ಚು ಮಾಡಿದ್ದೇವೆ. 75 ಲಕ್ಷ ಹುಡುಗರಿಗೆ ಬಿಸಿ ಊಟ ಕೊಡತಕ್ಕಂಥ ಕಲ್ಯಾಣ ಕೆಲಸವನ್ನು ನಾವು ಮಾಡಿದ್ದೇವೆ. ಇವತ್ತು ಡ್ರಾಪಬಾಟ್ಸ್ ಸಂಖ್ಯೆ 11 ಲಕ್ಷ 40 ಸಾವಿರ ಇದ್ದುದ್ದನ್ನು 1 ಲಕ್ಷಕ್ಕೆ ರೆಡ್ಯೂಸ್ ಮಾಡಿದ್ದೇವೆ. ಇವತ್ತು ಬಿಸಿ ಊಟದ ಕಾರ್ಯಕ್ರಮ ಏನು ಇದೆ. ನಮ್ಮ ಇಡೀ ರಾಷ್ಟ್ರದಲ್ಲಿ ಐದನೇ ತರಗತಿಯಿಂದ 7ನೇ ತರಗತಿಯವರೆಗೆ ನಾವು ವಿಸ್ತರಿಸಿದ್ದೇವೆ. ಈ ಕಾರ್ಯಕ್ರಮ ಏನೂ ಹೇಳಿಲ್ಲ. ಇವತ್ತು ತಮ್ಮ ಬದ್ಧತೆ ಏನು ಇದೆ? ಬಿಸಿ ಊಟದ ಕಾರ್ಯಕ್ರಮಕ್ಕೆ ಎಷ್ಟು ಹಣ ಕೊಡುತ್ತೀರಿ? ಯಾವ ರೀತಿಯಾಗಿ ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಹೇಳಿಲ್ಲ. ಅದನ್ನು ತಾವು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಮಾನ್ಯ ರಾಷ್ಟ್ರಪತಿಗಳ ಭಾಷಣದ ಬಗ್ಗೆ ಮಾತನಾಡಿದರು.

ನಾನು ಆವಾಗಲೂ ಕೂಡ ಹೇಳಿದ್ದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಸಭಾಪತಿಗಳಿಂದ ಮಾನ್ಯ ಸುದರ್ಶನ್ ಅವರು, ಶ್ರೀ ಹೆಚ್. ಕೆ. ಪಾಟೀಲ್ ಅವರು, ಮಾನ್ಯ ದೇಶಪಾಂಡೆ ಅವರು, ಮಾನ್ಯ ಖರ್ಗೆಯವರು ಮಾನ್ಯ ರಾಷ್ಟ್ರಪತಿಯವರನ್ನು ರಿಕ್ವೆಸ್ಟ್ ಮಾಡಿಕೊಂಡೆವು. ಕರ್ನಾಟಕದ ಸುವರ್ಣ ಸಮಾರಂಭದ ಆಚರಣೆ ಸಮಯದಲ್ಲಿ ರಾಷ್ಟ್ರಪತಿಗಳು ಬಂದು ಎಲ್ಲಾ ಮಾಜಿ ಮತ್ತು ಹಾಲಿ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿ ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕಾಗಿದೆ ಎನ್ನತಕ್ಕ ರೀತಿಯಲ್ಲಿ ಬೆಳಕನ್ನು ಚೆಲ್ಲಿ ಎಂದು ಕೇಳಿಕೊಂಡೆವು ಅವರು ಬಂದು ಹೇಳಿದರು. ಇವತ್ತು ನಾನು ಕೂಡ ಆ ಭಾಷಣದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಹೇಳಿದೆ. ಮಾನ್ಯ ರಾಷ್ಟ್ರಪತಿಗಳು ನಮ್ಮ ದೇಶದ ಒಬ್ಬ ದೊಡ್ಡ ಮಹಾನ್ ವ್ಯಕ್ತಿ, ಚಿಂತನೆ ಮಾಡತಕ್ಕ ವ್ಯಕ್ತಿ ಮತ್ತು ಬಡತನದ ಹಿನ್ನೆಲೆಯಿಂದ ರಾಷ್ಟ್ರಪತಿ ಭವನಕ್ಕೆ ತಲುಪಿ, ವಿಜ್ಞಾನ ಕ್ಷೇತ್ರದಲ್ಲಿ ಮತ್ತು ಇತರ ಎಲ್ಲಾ ಕ್ಷೇತ್ರದಲ್ಲಿ ಅನುಭವ ಪಡೆದವರು. ನಮ್ಮ ರಾಜ್ಯ ಮತ್ತು ರಾಷ್ಟ್ರ ಯಾವ ರೀತಿಯಾಗಿ ಕೆಲಸ ಮಾಡಿದರೆ ಪ್ರಗತಿ ಹೊಂದಬಹುದು ಎಂದು ಸಾಮಾಜಿಕ ಆರ್ಥಿಕ ಅಭಿವೃದ್ಧಿ ಆಗಬೇಕೆಂದು ಅವರು ಕನಸು ಕಂಡಿದ್ದಾರೆ. ಅದನ್ನೇ ಇವತ್ತು ಇಲ್ಲಿ ಬಂದು ಮಾತನಾಡಿದ್ದಾರೆ. ನಾನು ಏನು ಹೇಳಿದೆ ಅಂದರೆ ತರಾತುರಿಯಲ್ಲಿ ಇಂತಹ ಮುಖ್ಯ ವಿಷಯದ ಬಗ್ಗೆ ಚರ್ಚೆ ಆಗತಕ್ಕದ್ದು ಸರಿಯಲ್ಲ. ತಮ್ಮ ಈ ಸಮ್ಮಿಶ್ರ ಸರ್ಕಾರ ಈ ಬಗ್ಗೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಬಜೆಟ್‌ನಲ್ಲಿ ಎಷ್ಟು ಪ್ರೊವೈಡ್ ಮಾಡಿದ್ದೀರಿ? ಕೇವಲ ಒಂದು ಚರ್ಚೆ ಮೂಲಕ ಇವತ್ತು ವಂದನೆಗಳನ್ನು ಸಲ್ಲಿಸತಕ್ಕದ್ದು ಸರಿಯಲ್ಲ. ಮಾನ್ಯ ರಾಷ್ಟ್ರಪತಿಗಳಿಗೆ ಇದರಿಂದ ಏನು ತೃಪ್ತಿ ಆಗುತ್ತದೆ? ಕರ್ನಾಟಕ ರಾಜ್ಯಕ್ಕೆ ಹೋಗಿ ನಾನು ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡಿದ್ದೇನೆ. ಈ ಸರ್ಕಾರ, ಈ ರೀತಿಯಾದ ಸ್ಪಷ್ಟವಾದ ನಿಲುವನ್ನು ತಾಳಿದೆ. ಇಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಎನ್ನುವ ಹಾಗೆ ಇರಬೇಕಾಗುತ್ತದೆ. ಕೊನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಮತ್ತು ಜನತಾದಳ (ಎಸ್) ಹೊಂದಾಣಿಕೆ ನಿನ್ನೆಯಿಂದ ಆಗಿದೆ, ಅವರ ಸರ್ಕಾರ ಇದೆ. ಮೊನ್ನೆಯವರೆಗೆ Break way group ಕುಮಾರಸ್ವಾಮಿ ಅವರದ್ದು ಇತ್ತು. ನಿನ್ನೆಯಿಂದ ಜನತಾದಳ 'ಎಸ್' ಆಗಿದೆ. ಮಾನ್ಯ ದೇವೇಗೌಡರೂ ಮನ್ನಣೆ ಕೊಟ್ಟಿದ್ದಾರೆ. ಇವತ್ತು ತಾವು ಸರ್ಕಾರ ನಡೆಸಬೇಕಾಗಿದೆ. ಆದರೆ ತರಾತುರಿಯಲ್ಲಿ ಏನು ಬಜೆಟ್ ಮಂಡನೆ ಮಾಡಿದ್ದೀರಿ, ಇದರಿಂದ ಏಕೋ ತಮಗೆ ಚುನಾವಣೆ ಬರಬಹುದು ಎಂಬ ಅನುಮಾನ ಇದೆ. ಚುನಾವಣೆ ಪೂರ್ವದಲ್ಲಿಯೇ ಇಂತಹ ಭಾಷೆ ಬಳಸುತ್ತಾರೆ. Uncertaints is these ಜನರೇ ಮಾತನಾಡುತ್ತಾರೆ. ಸರಿಯಾದ ರೀತಿಯಲ್ಲಿ ಇವತ್ತಿನ ದಿವಸ ಸರ್ಕಾರವನ್ನು ನಡೆಸಬೇಕಾದರೆ ಜನರ ಮುಂದೆ ಹೋಗಿ ಗೆದ್ದು ಬರಬೇಕಾಗುತ್ತದೆ. ಕೇವಲ ಸಂಖ್ಯಾಬಲದ ಮೇಲೆ ಬಂದ ಬಹಳ ದಿವಸ ನಡೆಯಲಿಕ್ಕೆ ಆಗುವುದಿಲ್ಲ. ಸಂಪುಟದ ವಿಸ್ತರಣೆ ನಂತರ ತಮ್ಮ ಆಗುಹೋಗುಗಳ ಬಗ್ಗೆ ನಾವು ನಿಗಾ ವಹಿಸುತ್ತೇವೆ. ಯಾವ ರೀತಿಯಾಗಿ ನೀವು ಹೋಗುತ್ತೀರಾ ಎಂದು ಅದನ್ನೂ ಕೂಡ ನಾವು ನೋಡುತ್ತೇವೆ. ನಾವು ಮತ್ತೊಂದು ಹೇಳುತ್ತಿದ್ದೇವೆ. ಮೊಟ್ಟ ಮೊದಲನೆಯದಾಗಿ ಬಜೆಟ್ ಮೇಲೆ ಮಾನ್ಯ ವಿರೋಧ ಪಕ್ಷದವರು ನಾವು ಮಾತನಾಡುತ್ತಿದ್ದೇವೆ. ಈಗ ನಾವು ನೋಡಿದ್ದೇವೆ. ಮಾನ್ಯ ಬಂಗಾರಪ್ಪನವರ ಕಾಲದಿಂದಲೂ ವಿರೋಧ ಪಕ್ಷದ ನಾಯಕರಾಗಿ ಯಡಿಯೂರಪ್ಪನವರು ಇದ್ದಾರೆ. ಮೂರು ದಿವಸಗಳು ಆದ ನಂತರವೇ ಚರ್ಚೆ ಆಗಿದೆ. ಚೀರೋ

ಅವರ್‌ನಲ್ಲಿ ಇದೆಲ್ಲಾ ಬರುತ್ತಿತ್ತು. ಮಾತನಾಡುತ್ತಿದ್ದೆವು. ಆದರೆ ಅದಕ್ಕೇ ನಾವು ಹೇಳಿದೆವು. ರಚನಾತ್ಮಕ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ಜಾಗದಲ್ಲಿದ್ದು ಎಲ್ಲೆಲ್ಲಿ ತಾವು ಎಡವುತ್ತಿದ್ದೀರಿ? ಅದರ ಬಗ್ಗೆ ನಾವು ಪ್ರಸ್ತಾಪ ಮಾಡುತ್ತೇವೆ. ಹಾಗೂ ತಮಗೆ ಎಚ್ಚರಿಕೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತೊಂದು ವಿಚಾರ ನಂಜುಂಡಪ್ಪನವರ ವರದಿ ಅನುಷ್ಠಾನ ವಿಚಾರ. ಆರ್ಟಿಕಲ್ 371, ಆರ್ಟಿಕಲ್ ವಿಚಾರವನ್ನೂ ಮಾನ್ಯ ನಮ್ಮ ವೈಜನಾಥ ಪಾಟೀಲ್ ಅವರು ಎತ್ತಿದಂತಹ ವಿಚಾರ. ಆರ್ಟಿಕಲ್ 371ರ ಬಗ್ಗೆ, there is a philosophy behind this proposition ನಾವಾಗಲೀ ಖರ್ಗೆಯವರಾಗಲೀ, ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಬಹಳಷ್ಟು ಹೇಳಿದ್ದೇವೆ. 1980ರಲ್ಲಿ ನಾನು ಲೋಕಸಭೆಗೆ ಹೋದ ಮೇಲೆ, ಸಿ.ಎಂ. ಸ್ಟೀಫ್ ಅವರನ್ನು ಆರಿಸಿ ತಂದೆವು. ಮುಖ್ಯಮಂತ್ರಿಗಳು ಆಗಿದ್ದಂತಹ ದಿವಂಗತ ಗುಂಡೂರಾವ್ ಅವರ ಬಗ್ಗೆ ಹೇಳಿದರು. ಈ ಭಾಗದ ಅಭಿವೃದ್ಧಿ ಆಗಬೇಕಾದರೆ ಸಾಮಾಜಿಕ ಆರ್ಥಿಕವಾಗಿ ಒಂದು ತರಹದ ವಿಶೇಷ ಪ್ರಯತ್ನ ಆಗಬೇಕಾಗಿದೆ. ಮಾನ್ಯ ಸಭಾಧ್ಯಕ್ಷರೆ, ತಾವು ಮೈಸೂರು ರಾಜ್ಯದಲ್ಲಿ ಇರುತ್ತೀರಿ, 1950ರಲ್ಲಿ ಮೈಸೂರಿನಲ್ಲಿ ಯೂನಿವರ್ಸಿಟಿ ಇದ್ದರೆ, ಗುಲ್ಬರ್ಗಾ ಭಾಗದಲ್ಲಿ 4 ಜಿಲ್ಲೆಗಳಿಗೆ ಒಂದು multi-purpose high school ಮಾತ್ರ ಇತ್ತು. ಶೈಕ್ಷಣಿಕವಾಗಿಯೂ ಸಹ ಅದು ಹಿಂದುಳಿದ ಪ್ರದೇಶವಾಗಿದೆ. ಇವೊತ್ತು ಅದು ಹೈದರಾಬಾದ್-ಕರ್ನಾಟಕ. ಇವೊತ್ತು ನಾವು ಏನು ಹೇಳುತ್ತೇವೆ, 1968ರಲ್ಲಿ ಡಾ॥ ಎಂ. ಚೆನ್ನಾರೆಡ್ಡಿಯವರ ಕಾಲದಲ್ಲಿ ಫ್ರಾನ್ಸ್ ತರಹ..... ಶ್ರೀರಾಮರೆಡ್ಡಿಯವರಿಗೆ ಹೇಳುತ್ತಿದ್ದೆ. ತೆಲಂಗಾಣ ಮೂವ್‌ಮೆಂಟ್ ಆರು ತಿಂಗಳ ಕಾಲ ನಡೆಯಿತು. ಅಲ್ಲಿ ಲ್ಯಾಂಡ್‌ಲೆಸ್ ಮತ್ತು ಲ್ಯಾಂಡ್‌ಲಾರ್ಡ್ಸ್ ಮಧ್ಯೆ ದೊಡ್ಡ ಹೋರಾಟ ನಡೆಯಿತು. ಆಗ 1970ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಪ್ರಧಾನಮಂತ್ರಿಗಳಾದಾಗ ಅಭಿವೃದ್ಧಿಗಾಗಿ outright Rs.100 crores grants ಕೊಟ್ಟರು, ಮತ್ತು ತಿದ್ದುಪಡಿ ಮಾಡಿದರು. ನಿಮಗೆ ಇವೊತ್ತು ಆರ್ಟಿಕಲ್ 371ರಲ್ಲಿ ತಿದ್ದುಪಡಿ ಮಾಡುವುದಕ್ಕಾಗುವುದಿಲ್ಲವೆಂದು ಕೇಂದ್ರದಿಂದ ನಮಗೆ ಒಂದು ಪತ್ರ ಬಂತು. ವಿದರ್ಭಾದಲ್ಲಿ ಇರುವ ರೀತಿ ನಾವು ಬೋರ್ಡ್ ಮಾಡೋಣ ಎಂದು ಕೇಂದ್ರ ಗೃಹ ಸಚಿವರಾದ ಶಿವರಾಜ್ ಪಾಟೀಲ್‌ರವರು ಹೇಳಿದರು. ಅದಕ್ಕೆ ನಾವು ಒಪ್ಪಿಗೆ ಕೊಡಲಿಲ್ಲ. ಸಂವಿಧಾನ ತಿದ್ದುಪಡಿ ಮಾಡಿ ಎಂದು ಮತ್ತೆ ಹೇಳಿದೆವು. ಬಹಳಷ್ಟು ಸಲ ನಾವು ಪ್ರಧಾನಮಂತ್ರಿಯವರ ಬಳಿಗೂ ಹೋಗಿ ಹೇಳಿದ್ದಲ್ಲದೆ ಶಿವರಾಜ್ ಪಾಟೀಲ್‌ರವರಿಗೂ ಹೇಳಿದ್ದೇವೆ. ಅಷ್ಟು ಹೇಳಿದ ನಂತರವೂ ಇಲ್ಲಿಯವರೆಗೂ ಅದರ ಪ್ರಸ್ತಾಪ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಹೋಗಿ 371 ಆರ್ಟಿಕಲ್ ಬಗ್ಗೆ ಏನಾಗಿದೆಯೆಂದು ಇದುವರೆಗೂ.... ಏನು ಮಾಡಿದ್ದಾರೆ? ಅದಿನ್ನೂ ಜೀವಂತವಾಗಿದೆ. ಪಾರ್ಲಿಮೆಂಟ್‌ನಲ್ಲಿ ಅಮೆಂಡ್‌ಮೆಂಟ್ ತರಬೇಕೆಂದು ನಾವು ಹೇಳಿದ್ದೇವೆ, ಅದರ ಬಗ್ಗೆ ಹೋರಾಟ ಇನ್ನೂ ಇದೆ. ಇವೊತ್ತು ಮಾನ್ಯ ವೈಜನಾಥ ಪಾಟೀಲ್‌ರವರು ಮಾತನಾಡುತ್ತಾ, ಆ ಭಾಗದ ಜನರು ಕೂಡ ಇವೊತ್ತಿನ ದಿವಸ ಅಮೆಂಡ್‌ಮೆಂಟ್ ಆಗಲೇ ಬೇಕೇ ಬೇಕು ಎನ್ನತಕ್ಕಂಥ ರೀತಿಯಲ್ಲಿ ನಾವು ಪ್ರತಿಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ತಾವೇನೂ ಮಾಡಿಲ್ಲ. ಈಗ ಸದನದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲ. ಹೈಕೋರ್ಟ್ ಸಂಚಾರ ಪೀಠ ಏನಾಯಿತು? ಜಗದೀಶ್

ಶೆಟ್ಟರ್‌ರವರು ಎಸ್.ಎಂ. ಕೃಷ್ಣರವರ ಜೊತೆಯಲ್ಲಿ ಹೋಗಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಭೇಟಿಯಾದರು. ಅದೇ ರೀತಿ ಉಪ ಮುಖ್ಯಮಂತ್ರಿಯವರೂ ಸಹ ಹೋಗಿ ಅವರನ್ನು ಭೇಟಿಯಾದರು. ಎಷ್ಟು ಡೆಲಿಗೇಶನ್ ಹೋಯಿತು? ಇವೊತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಆಗಬೇಕಾಗಿದೆ, ಇದು ಐವತ್ತು ವರ್ಷಗಳ ಸಮಸ್ಯೆ. ನಮ್ಮ ಕಾಲದಲ್ಲಿ ನಾವು ಮಾಡಿದ್ದೇವೆ. ಮುಖ್ಯ ನ್ಯಾಯಮೂರ್ತಿಗಳಾದ ಜೈನ್ ಅವರನ್ನು ನಾವು ಇದಕ್ಕಾಗಿ ಅಭಿನಂದಿಸಬೇಕಾಗುತ್ತದೆ. He is the gentleman who has agreed. ಇವೊತ್ತು ಗುಲ್ಬರ್ಗಾ ಜನರಿಗೆ ಮತ್ತು ಧಾರವಾಡದ ಭಾಗದಲ್ಲಿರುವ ಜನರಿಗೆ ಹೈಕೋರ್ಟ್ ಪೀಠದ ಬಗ್ಗೆ ಏನೂ ಹೇಳಲಿಲ್ಲ. ಬಜೆಟ್‌ನಲ್ಲಿ ಕೂಡ ಅದಕ್ಕೆ ಹಣ ಇಟ್ಟಿಲ್ಲ. ಉಪ ಮುಖ್ಯಮಂತ್ರಿಯವರಿಗೆ ನಾನು ಹೇಳುತ್ತಿದ್ದೇನೆ: ಹೈಕೋರ್ಟ್ ಪೀಠದ ಪ್ರಸ್ತಾಪವನ್ನು ತಾವು ಬಜೆಟ್‌ನಲ್ಲಿ ಮಾಡಿಲ್ಲ. ಹಣ ಕೊಡುವುದಕ್ಕೆ ಮತ್ತು ಸಾಕಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದಿದೆ. ನಮ್ಮ ಎಲ್ಲಾ ಹಿರಿಯ ನಾಯಕರು ಇವೊತ್ತು ಈ ಕುರಿತಾದ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನಾನು ಹೆಚ್ಚು ಮತುಗಳನ್ನು ಹವಳಲಾರದೆ, ತಾವು ಮಂಡಿಸಿರುವ ಬಜೆಟ್ ಒಂದು populist budget ಎಂದು ಕವಿಗಳ ಮಾತುಗಳನ್ನು ಉದ್ಧರಿಸುವ ಮುಖಾಂತರ ಜನರು ಈಗ ಬಹಳ ಎಚ್ಚರಿಕೆ ವಹಿಸಿದ್ದಾರೆ, ಪ್ರಜ್ಞಾವಂತರಾಗಿದ್ದಾರೆ. ರಾಜಕೀಯ ನಾಟಕಗಳ ಬಗ್ಗೆ ಅವರೇ ನಮಗಿಂತಲೂ ಹೆಚ್ಚು ಹೇಳುತ್ತಾರೆ. ಇವೊತ್ತು ಗುಲ್ಬರ್ಗಾದಿಂದ ಫೋನ್ ನನ್ನ ಸ್ನೇಹಿತರು ಇವತ್ತಿನ 'Prajavani editorial' ನೋಡಿದಿರಲ್ರಿ, ಸಾರ್, ಈ ನಾಟಕಗಳ ಬಗ್ಗೆ ಹೇಗೆ ಬರೆದಿದ್ದಾರೆಂದು' ಎಂದರು. ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳಲ್ಲೂ ಹೀಗೇ ಬಂತು. ನಮ್ಮ ಎಲ್ಲಾ ಕಾರ್ಯಕರ್ತರುಗಳು ಫೋನ್ ಮಾಡಿ ಹೇಳುತ್ತಾರೆ. ಜನರು ಈಗ ಎಚ್ಚರದಿಂದಿದ್ದಾರೆ. ಸಭಾಧ್ಯಕ್ಷರೆ, ತಮಗೂ ಕೂಡ ಅದರ ಅರಿವು ಇರಲೆಂದು ಪ್ರಸ್ತಾಪಿಸುತ್ತಿದ್ದೇನೆ. ಇನ್ನು ಇವೊತ್ತು ಕನ್ನಡ ಶಾಸ್ತ್ರೀಯ ಭಾಷೆಯ ಬಗ್ಗೆ ಹೇಳುವುದಾದರೆ, ಕರ್ನಾಟಕದ ಮಾನ್ಯ ಜಿ. ನಾರಾಯಣ್, ಕೃಷ್ಣಯ್ಯರ್, ಡಾಃ ಎಂ. ಚಿದಾನಂದಮೂರ್ತಿ, ಪಾಟೀಲ್ ಪುಟ್ಟಪ್ಪ ಪ್ರೊಃ ಎಸ್. ಎಲ್. ಶೇಷಗಿರಿರಾವ್‌ರವರಂಥ ಹಿರಿಯರು ಇದ್ದಾರೆ. ಪ್ರಧಾನಮಂತ್ರಿಗಳು ರಾಜ್ಯಕ್ಕೆ ಬಂದಾಗ ಅವರ ಜೊತೆ ಈ ಬಗ್ಗೆ ಸಮಾಲೋಚನೆ ನಡೆಸಿದೆವು. ನಾನು ಮೊನ್ನೆ ದೆಹಲಿಯಲ್ಲಿ ನಮ್ಮ ಜೈಪಾಲರೆಡ್ಡಿಯವರನ್ನು ಭೇಟಿ ಮಾಡಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಬೇಕೆಂದು ಹೇಳಿದಾಗ, ಅವರು, ಇದಕ್ಕೆ ಅಗತ್ಯವಾದ ದಾಖಲಾತಿಗಳು, ಪುರಾವೆ ಕೊಡದೇ, ಕೇವಲ ಭಾಷಣದ ಮೂಲಕ ಹೇಳಿದರೆ ಸಾಲದು ಎಂದರು. ಶಾಸ್ತ್ರೀಯ ಭಾಷೆ ಎಂದು ತಮಿಳಿಗೆ ಏನು ಸ್ಥಾನ–ಮಾನ ಕೊಟ್ಟಿದ್ದೀರಿ, ಅದೇ ರೀತಿ ಕನ್ನಡ ಭಾಷೆಗೂ ನೀಡತಕ್ಕಂಥ ಬಗ್ಗೆ ತಾವು ಮಾತನಾಡಿಲ್ಲ. ಅದರ ಬಗ್ಗೆ ತಾವು ಇಲ್ಲಿ ಮಾತನಾಡಿದರೆ ಆಗುವುದಿಲ್ಲ. ತಾವು ಪ್ರಧಾನಮಂತ್ರಿಗಳ ಬಳಿಗೆ ರಾಜ್ಯದಲ್ಲಿರುವ ಹಿರಿಯ ಸಾಹಿತಿಗಳನ್ನು ಕರೆದುಕೊಂಡು ಹೋಗುವ ಮೂಲಕ ಶಾಸ್ತ್ರೀಯ ಭಾಷೆ ನಮಗೆ ಏಕೆ ಬೇಕು, ಎಷ್ಟು ವರ್ಷಗಳಿಂದ ಈ ಭಾಷೆ ಇದೆ ಎನ್ನತಕ್ಕಂಥಾದ್ದರ ಬಗ್ಗೆ ಅವರ ಗಮನಕ್ಕೆ ತರುವ ಪ್ರಯತ್ನ ಮಾಡಬೇಕು. This is a very delicate matter. Methodically ಯಾವ ರೀತಿ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ನಾವು ಆಲೋಚಿಸಬೇಕಾಗುತ್ತದೆ. ನಿನ್ನೆ ಕೌನ್ಸಿಲ್‌ನಲ್ಲಿ ಸಚಿವರಾದ ಮಾನ್ಯ

ಹೊರಟ್ಟಿಯವರು ಹೇಳಿದರು. ಹೊರಟ್ಟಿಯವರು ನಮಗೆ ಬಹಳ ದಿವಸದ ಗೆಳೆಯರು, ಆದರೆ, ಹೊರಟ್ಟಿಯವರು ಹೇಳಿರುವುದನ್ನು ನೀವು ಕೇಳಬೇಕು. ಅವರು ಸಂಸ್ಕೃತ ಭಾಷೆ.......... ಕಡ್ಡಾಯದ ಬಗ್ಗೆ He is a responsible Leader....ಕೋರ್ಟ್‌ನಲ್ಲಿ matter ಇನ್ನೂ ಇದೆ, ತೆರವುಗೊಳಿಸುವುದರ ಬಗ್ಗೆ ಹೇಳಿಲ್ಲ. ತಮ್ಮ ಸಂಪುಟದ ಹಿರಿಯ ಸದಸ್ಯರು ಈ ರೀತಿಯಾಗಿ ಹೇಳಿಕೆ ಕೊಟ್ಟರೆ ರಾಜ್ಯದ ಭಾವೈಕ್ಯತೆ, ಏಕತೆ ಹೇಗೆ ಉಂಟಾಗುತ್ತದೆ? ಮತ್ತು ಹೀಗೆ ಹಗುರವಾಗಿ ಹೇಳಿಕೆ ಕೊಡುವುದು ಸರಿಯಲ್ಲ. ಸಂಪುಟದಲ್ಲಿ ಈ ಬಗ್ಗೆ ಚರ್ಚೆಯಾಗಿದೆಯೇ? ಇನ್ನು ಮುಂದಾದರೂ ಈ ರೀತಿಯಾಗಿ ಹೇಳಿಕೆ ಕೊಡುವ ಪ್ರಯತ್ನ ಮಾಡಬಾರದು. ಅದು ವಿವಾದಾತ್ಮಕ ವಿಷಯವಾಗಿದೆ. ಈ ಎಲ್ಲಾ ವಿಷಯಗಳ ಬಗ್ಗೆಯೂ ತಾವು ಗಮನಕೊಡಬೇಕೆಂದು ಕೆಲವು ಮಾತುಗಳನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಿಗೆ ಈ ಭಾಗ್ಯ ಬಂದುದಕ್ಕೆ ನಾನು ಅಭಿನಂದಿಸುತ್ತೇನೆ. ಏಕೆಂದರೆ, ಇಲ್ಲಿ ಕುಳಿತು ಅವರು ಭಾಷಣ ಮಾಡುವಾಗ, ಅಕಸ್ಮಾತ್ ನೀವೇನಾದರೂ ಆ ಕಡೆ ಹೋಗಿ ಅವರ ಜೊತೆ ಸೇರಿಕೊಂಡು ಸರ್ಕಾರ ಮಾಡುವ ಆಲೋಚನೆ ಇದೆಯೇ ಎಂದು ನಾನು ಅವರನ್ನು ಟೀಕಿಸಿದ್ದೆ. ನಾನು ರೆಕಾರ್ಡ್ ತರಿಸಿ ಓದಿದೆ. 'ಅದೃಷ್ಟ ಇದ್ದರೆ ಯಾಕಾಗಬಾರದು' ಎಂದು ಅವೊತ್ತು ಅವರು ಹೇಳಿದ್ದರು. ಇವೊತ್ತು ಆ ಅದೃಷ್ಟ ಬಂದಿದೆ. ಆ ಅದೃಷ್ಟದ ಪಾಲು ಅವರು ಹೋರಾಟ ಮಾಡಿಕೊಂಡು ಬಂದಂಥ ಸ್ಥಿತಿಗೆ, ಒಕ್ಕಲುತನಕ್ಕೆ, ಹಳ್ಳಿಯ ಜನರಿಗೆ ವರ್ಗಾವಣೆ ಆಗಬೇಕೆಂದು ನಾನು ಬಯಸುತ್ತೇನೆ. ಅವರು ಬಹಳ ಆಸೆ ಇಟ್ಟುಕೊಂಡು ಈ ಬಜೆಟ್ ಅನ್ನು ತಯಾರಿಸಿದ್ದಾರೆ. ಬಹುಶಃ, ಕಾಲದ ಕೊರತೆಯೋ ಅಥವಾ ಅವರಿಗೆ ಅಡ್ವೈಸ್ ಮಾಡುವವರು ಸರಿಯಾಗಿ ಇರಲಿಲ್ಲವೋ, ನಿರೀಕ್ಷಿಸಿದಷ್ಟು ಹಣವನ್ನು ಗ್ರಾಮೀಣ ಪ್ರದೇಶಾಭಿವೃದ್ಧಿಗೆ ಒದಗಿಸುವುದಕ್ಕೆ ಅವರ ಕಡೆಯಿಂದ ಆಗಿಲ್ಲ. ನಾವು ಒಂದು surplus budget ಇಡುತ್ತಿದ್ದೇವೆ, revenue surplus ಎನ್ನುವುದಕ್ಕೆ ಅನೇಕ ಕಾರಣಗಳಿವೆ. ನಾವು ರಾಜಕೀಯವಾಗಿ ಏನಾದರೂ ಮಾತನಾಡಬಹುದು. ಆದರೆ, ಈ ರಾಜ್ಯದ ಗೌರವದ ಬಗ್ಗೆ ಮಾತನಾಡಿದಾಗ ಈ fiscal discipline ಕುರಿತಂತೆ ಕ್ರೆಡಿಟ್ ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಮತ್ತು ಸನ್ಮಾನ್ಯ ಕೃಷ್ಣರವರಿಗೆ ಕೂಡ ಸಲ್ಲಬೇಕು. ಒಂದು obligation ಕೂಡ ನಮ್ಮ ಮೇಲಿತ್ತು. ಯಾವುದೆಂದರೆ, ಕೇಂದ್ರ ಸರ್ಕಾರದವರು ಬಹುಶಃ ಒಂದು Act ಅನ್ನು enact ಮಾಡಿದ್ದರು. ಅದರ ಪ್ರಕಾರ ನಾವು revenue deficit ಮತ್ತು fiscal dificit ಅನ್ನು ಕಡಿಮೆ ಮಾಡಲೇಬೇಕಾಗಿತ್ತು. Fiscal Responsibility And Budget Management Act ಏನು ಪಾಸ್ ಆಗಿತ್ತು, ಅದರ ಪ್ರಕಾರ ರಾಜ್ಯಗಳೂ ಕೂಡ 2008–09ನೇ ಇಸವಿಗೆ ಅನಿವಾರ್ಯವಾಗಿ deficit budget ಇಡುವುದನ್ನು ತಪ್ಪಿಸಲೇಬೇಕಾಗಿರುವಂಥ ಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಲೇಬೇಕಾಗಿತ್ತು. ಆ ದಿಕ್ಕಿನಲ್ಲಿ ಏನು ನಡಿಗೆ ಆರಂಭವಾಯಿತು, ಬಹುಶಃ ಇವೊತ್ತು ಒಳ್ಳೆಯ ಫಲವನ್ನು ಯಡಿಯೂರಪ್ಪನವರಿಗೆ ಕೊಟ್ಟಿದೆ ಎಂದು ನಾನು ಭಾವಿಸುತ್ತೇನೆ. ಒಂದು ಮಾತು ಇದೆ, ನಮ್ಮ ಎಲ್ಲಾ outlays outcome ಗಳಾಗಿ ಟ್ರಾನ್ಸ್‌ಲೇಟ್ ಆಗುತ್ತದೆಯೇ

ಎಂಬುದು. All our outlays will be translated as outcomes ಅಂತ. ನಾವು ಇಲ್ಲಿ ಏನು ಹೇಳುತ್ತೇವೆ, ಇವೆಲ್ಲಾ ಫಲಪ್ರದವಾಗುತ್ತದೆಯೇ ಅಂತ. ಆ ಕಡೆ ನಾವು ಹೆಚ್ಚು ಗಮನ ಕೊಡಬೇಕೆಂದರೆ, ಅದು ಆಗಲಾರದೆಂಬುದು ನನ್ನ ಭಾವನೆ. ನಾನು ಸಿದ್ದರಾಮಯ್ಯನವರಿಗೆ ಹೋದ ಸಲ ಬಜೆಟ್ ಭಾಷಣದ ಮೇಲೆ ಮಾತನಾಡುವಾಗ, ಅವರು ಸ್ನೇಹಿತರಾಗಿದ್ದರು, ಟೀಕೆ ಮಾಡಿದೆ. ಏನು collections ತಾವು ನಿರೀಕ್ಷಿಸುತ್ತಿದ್ದೀರಿ, non-tax revenues ನಿಮಗೆ ಅಷ್ಟು ಬರಲಾರದೆಂದು ಅಂದಿದ್ದು ಇವೊತ್ತು ಪ್ರೂವ್ ಆಗಿದೆ. ನಾನು ಸ್ಪಷ್ಟವಾಗಿ ಹೇಳಿದ್ದೆ. non-tax revenues ಇಲ್ಲಿ ಏನು ತಾವು ಹೇಳುತ್ತಿದ್ದೀರಿ, ಅಷ್ಟು ನಿರೀಕ್ಷೆ ಮಾಡಿ ಹೇಳುತ್ತಿದ್ದೀರಲ್ಲಾ, ದಿಢೀರೆಂದು 1600, 1700 ಕೋಟಿ ರೂ.ನಿಂದ 4.000 ಕೋಟಿ ರೂ.ಗೆ ಹೋಗಿ ಹೇಳುತ್ತಿದ್ದೀರಿ ಎಂದು. ಈ ರಾಜ್ಯದ ಸ್ಥಿತಿಯೋ, ಅವರ ದುರಾದೃಷ್ಟವೋ, ಮೊದಲನೆಯದಾಗಿ, ರಿಜಿಸ್ಟ್ರೇಷನ್ ಮೇಲೆ ಆದ ಹೊಡೆತ. ಅದರಲ್ಲೂ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ರಿಜಿಸ್ಟ್ರೇಷನ್ ಮೇಲೆ ಸ್ಟೇ ತಂದು ಸ್ವಲ್ಪ ದಿವಸ ರಿಜಿಸ್ಟ್ರೇಷನ್ ಅನ್ನು ನಿರ್ಬಂಧ ಮಾಡಿದ್ದರಿಂದ ನಮಗೆ ಯಥೇಚ್ಛವಾಗಿ ಬರಬೇಕಾದ ಸ್ಟ್ಯಾಂಪ್ ಡ್ಯೂಟಿ ಹೊರಟು ಹೋಯಿತು. ಎರಡನೆಯದಾಗಿ, ಪೂಲಿಂಗ್‌ನಲ್ಲಿ ಕರ್ನಾಟಕ ರಾಜ್ಯಕ್ಕೆ ಬಹಳ ಅನುಕೂಲವಾಗಿದೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮಗೆ ಪ್ಲಾನ್ ಔಟ್‌ಲೇ ಹೆಚ್ಚಾಗಿದೆ. ನೀವು ಕೊಡಬೇಕಾಗಿದ್ದ ಇಂಟ್ರೆಸ್ಟ್ ಭಾಗ ಕಡಿಮೆಯಾಗಿದೆ. ನಿಮ್ಮ ಮೇಲೆ ಬರ್ಡನ್ ಕಡಿಮೆಯಾಗಿದೆ. ಅದೆಲ್ಲದರ ಒಟ್ಟಾರೆ ಮೊತ್ತ ಇವತ್ತು ಈ ರಾಜ್ಯ ಸರ್ಕಾರ ನಡೆಸುವವರ ಕೈಗೆ ಸಿಕ್ಕುವಂಥ ಸ್ಥಿತಿ ಬಂದಿದೆ. ಮಾನ್ಯ ಸಿದ್ದರಾಮಯ್ಯನವರು 2004ರಲ್ಲಿ ಭಾಷಣ ಮಾಡುವಾಗ ಹೇಳಿಬಿಟ್ಟಿದ್ದಾರೆ. ಬಹಳ ದುಸ್ಥಿತಿಯಲ್ಲಿ ನಿಂತುಕೊಂಡು ಇವತ್ತು ನಾನು ಈ ರಾಜ್ಯದ ಹಣಕಾಸಿನ ನಿರ್ವಹಣೆ ಮಾಡಬೇಕಾಗಿದೆ ಎಂದು. ಆವತ್ತು ಮಾತನಾಡಬೇಕಾದರೆ ಅವರು ಹೇಳಿದ್ದಾರೆ. ನಾನು ಮಾನ್ಯ ಎಸ್.ಎಂ. ಕೃಷ್ಣರವರು ಬಜೆಟ್ ಇಟ್ಟಾಗ ಒಂದೆರಡು ಒಳ್ಳೆಯ ಮಾತನಾಡಿರುವುದನ್ನು ತಮ್ಮ ಮುಂದೆ ಹೇಳಬೇಕಾಗುತ್ತದೆ. ಪೇಜ್ 3 ರಲ್ಲಿ ಅವರು ಹೇಳುತ್ತಾರೆ. 'ಕುಗ್ಗಿದ ಗ್ರಾಮೀಣ ಆದಾಯ ಮತ್ತು ವಿನಿಯೋಗ ವೆಚ್ಚಗಳು ಕೈಗಾರಿಕಾ ವಲಯದ ಮೇಲೆ ಸರಣಿ ಪರಿಣಾಮ ಬೀರಿದ್ದರಿಂದ ಆ ವರ್ಷಗಳಲ್ಲಿ ವಾಸ್ತವಿಕ ಬೆಳವಣಿಗೆಯ ದರ ಇಳಿಯಿತು.' ಮತ್ತೆ ಪುಟ 16ರಲ್ಲಿ ಹೇಳುತ್ತಾರೆ, 'ನಮ್ಮ ಬೆನ್ನಿಗೆ ಅಂಟಿಕೊಂಡೇ ಬಂದಿದ್ದ ದುರ್ಬಲ ವಿತ್ತೀಯ ಪರಿಸ್ಥಿತಿಯು ನನ್ನ ಆರ್ಥಿಕ ಸುಧಾರಣೆ ಪ್ರಯತ್ನಗಳನ್ನು ನಿರ್ಬಂಧಿಸಿದೆ–' ಏಕೆಂದರೆ ಅವರು ಬಹಳ ಅನುಭವ ಇಟ್ಟುಕೊಂಡು ಆಡಿರುವ ಮಾತುಗಳು ಇದು. ಹಾಗೆಯೇ ಮಾನ್ಯ ಸಿದ್ದರಾಮಯ್ಯನವರು ಅದೇ ಮಾತುಗಳನ್ನು ಮುಂದುವರೆಸಿಕೊಂಡು ಹೋಗುತ್ತಾರೆ. Indiscipline in fiscal management, subsidies, ನಮಗೆ ವಾಪಸ್ ಬರಲಾರದಂಥ ಖರ್ಚುಗಳು ಈ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಬಹಳ ದುಷ್ಪರಿಣಾಮವನ್ನುಂಟು ಮಾಡಿದೆ ಎಂದು. ಒಂದು ರಾಜ್ಯಕ್ಕೆ ನಾವು ಬಜೆಟ್ ಇಡಬೇಕಾದರೆ ನಮ್ಮ ಹತ್ತಿರ ಖರ್ಚು ಮಾಡಲು ಹಣ ಇದೆ ಎಂದರೆ ಒಂದೇ ಪ್ರಶ್ನೆ 'Are we to concentrate on programmes or projects?' ಬಹಳ

ticklish issue ಇದು. ಪ್ರೋಗ್ರಾಮ್ಸ್ ಮೇಲೆ ಯಾವಾಗ ಕಾನ್‌ಸೆಂಟ್ರೇಟ್ ಮಾಡುತ್ತೇವೆಂದರೆ ಸಾಮಾನ್ಯವಾಗಿ ಚುನಾವಣೆಗಳು ಬಂದು ಜನಗಳ ಹತ್ತಿರ ಹೋಗುವಂತ್ತಿದ್ದಾಗ ನಾನು ಅದು ಮಾಡಿದೆ, ಇದು ಮಾಡಿದೆ, ಹಾಗೆ ಮಾಡಿದೆ ಎಂದು ಹೇಳಿ ಪಾಪ್ಯುಲಾರಿಟಿ ತೆಗೆದುಕೊಳ್ಳುವಾಗ. ಪ್ರಾಜೆಕ್ಟ್ ಮೇಲೆ ಯಾವಾಗ ಕಾನ್‌ಸೆಂಟ್ರೇಟ್ ಮಾಡುತ್ತೇವೆಂದರೆ ನಮ್ಮ ಹತ್ತಿರ ಹಣವಿದ್ದು ಈ ರಾಜ್ಯಕ್ಕೆ ಏನಾದರೂ ಒಳ್ಳೆಯದನ್ನು ಮಾಡಬೇಕು, ದೀರ್ಘಕಾಲದಲ್ಲಿ ಈ ರಾಜ್ಯ ಅದರ ಕಾಲಮೇಲೆ ಅದು ನಿಲ್ಲಬೇಕು ಎನ್ನುವಾಗ ಸಾಮಾನ್ಯವಾಗಿ ಪ್ರಾಜೆಕ್ಟ್ ಮೇಲೆ ನಾವು ಕಾನ್‌ಸೆಂಟ್ರೇಟ್ ಮಾಡಬೇಕು. ಪ್ರಾಜೆಕ್ಟ್ಸ್ ಮೇಲೆ ಕಾನ್‌ಸೆಂಟ್ರೇಟ್ ಮಾಡುವುದರಿಂದ ನಮ್ಮ ಮುಂದಿನ ಜನಾಂಗಕ್ಕೆ ಒಳ್ಳೆಯದಾಗುತ್ತದೆ, ಪ್ರೋಗ್ರಾಮ್ಸ್ ಮೇಲೆ ಕಾನ್‌ಸೆಂಟ್ರೇಟ್ ಮಾಡುವುದರಿಂದ ಭಾರಿ ಅಂದರೆ ಅದು ನಮಗೆ ಚುನಾವಣೆಗೆ ಸಹಾಯವಾಗಬಹುದು. ನನಗೆ ಗೊತ್ತಿಲ್ಲ, ತಕ್ಷಣಕ್ಕೆ ಯಾವ ಚುನಾವಣೆಯೂ ಕರ್ನಾಟಕ ರಾಜ್ಯದಲ್ಲಿ ಇರಲಿಲ್ಲ. ಈಗ ನಾವು ಪ್ರೋಗ್ರಾಮ್ಸ್ ಮೇಲೆ ಕಾನ್‌ಸೆಂಟ್ರೇಟ್ ಮಾಡಬೇಕಾಗಿತ್ತು. ಪ್ರೋಗ್ರಾಮ್ಸ್ ಮೇಲೆ ಕಾನ್‌ಸೆಂಟ್ರೇಟ್ ಮಾಡಬೇಕಾದರೆ ನಾವು ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು ಮಾಡುತ್ತೇವೆ, ಅಸೆಟ್ ಇಲ್ಲಿ ಕ್ರಿಯೇಟ್ ಮಾಡುತ್ತೇವೆ, ರಾಜ್ಯವನ್ನು ಆರ್ಥಿಕವಾಗಿ ಮೇಲೆತ್ತಲಿಕ್ಕೆ ನಾವೇನು ಸಹಾಯ ಮಾಡುತ್ತೇವೆ ಎಂದು ಯೋಚನೆ ಮಾಡುವ ಕಡೆ ಹೆಚ್ಚು ಕಾನ್‌ಸೆಂಟ್ರೇಷನ್ ಬೇಕಾಗುತ್ತದೆ. ನಾನು ಭಾರತೀಯ ಲೆಕ್ಕ ನಿಯಂತ್ರಕರು ಪರಿಶೋಧಕರು ಕೊಟ್ಟಿರುವ ವರದಿಯಲ್ಲಿನ ಒಂದೇ ಒಂದು ಮಾತನ್ನು ಹೇಳುತ್ತೇನೆ. ಕರ್ನಾಟಕ ನೀರಾವರಿ ನಿಗಮ ನಿಯಮಿತದಲ್ಲಿ ನಿಧಿ ನಿರ್ವಹಣೆಯ ಸಮೀಕ್ಷೆ. ಅದು ಹಂಚಿಕೆಯಾದ 717.61 ಸಾವಿರ ದಶಲಕ್ಷ ಘನಅಡಿ ಟಿ.ಎಂ.ಸಿ. ನೀರಿಗೆ ಬದಲಾಗಿ ಮಾರ್ಚ್ 2005ರ ಕೊನೆಯ ವೇಳೆಗೆ ವಾಸ್ತವಿಕವಾಗಿ ಕೇವಲ 90.17 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿತ್ತು. ಸ್ಥಾಪನೆಗೊಂಡ ಸಮಯದಲ್ಲಿ ವಹಿಸಿಕೊಂಡ ಎಂಟು ಯೋಜನೆಗಳು ನಿರ್ಧಾರಿತ ಸಮಯವಾದ ಮಾರ್ಚ್ 2003ಕ್ಕೆ ಪ್ರತಿಯಾಗಿ ಈವರೆಗೂ ಪೂರ್ಣಗೊಂಡಿಲ್ಲ. ರೂ.6532 ಕೋಟಿ ರೂ. ಬೆಲೆಯ 25 ಹೊಸ ಯೋಜನೆಗಳನ್ನು ಅವುಗಳ ನಿರ್ವಹಣೆ ಬೇಕಾದ ಸಂಪನ್ಮೂಲಗಳನ್ನು ಗುರುತಿಸದೆ ಹಾಗೂ ನೀಡದೆ ವಹಿಸಿಕೊಡಲಾಯಿತು. ಕಂಪನಿಯ ನಿಧಿ ಕ್ರೋಢೀಕರಣ ಮುಖ್ಯವಾಗಿ ಸರ್ಕಾರಿ ಭರವಸೆಯ ಮೇಲೆಯೇ ಅವಲಂಬಿಸಿರುವುದರಿಂದ ಯೋಜನೆಯ ವೆಚ್ಚ ಹಾಗೂ ಸರ್ಕಾರದ ಬೆಂಬಲಿತ ಪ್ರಸ್ತುತ ಸ್ಥರದಲ್ಲಿ ಈಗ ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಗಿಸಲು 36 ವರ್ಷಗಳು ಬೇಕಾಗುತ್ತದೆ. ಕಂಟ್ರೋಲರ್ ಅಂಡ್ ಆಡಿಟರ್ ಜನರಲ್‌ರವರು ಇದನ್ನು ಹೇಳುವುದು 36 years are required to complete your projects. ದುರಸ್ತಿ ಮತ್ತು ನಿರ್ವಹಣಾ ವೆಚ್ಚವಾದ 149.09 ಕೋಟಿ ರೂ.ಗೆ ಬದಲಾಗಿ ಕಂಪನಿಯು ಮಾರ್ಚ್ 2005ಕ್ಕೆ ಕೊನೆಗೊಂಡಂತೆ ಕಳೆದ ಐದು ವರ್ಷಗಳಲ್ಲಿ 83.56 ಕೋಟಿ ರೂ.ಗಳನ್ನು ನೀರಿನ ದರದ ಬೇಡಿಕೆಯನ್ನು ವಿಧಿಸಿ ಕೇವಲ ರೂ. 7.87 ಕೋಟಿಗಳನ್ನು ಮಾತ್ರ ವಸೂಲಿ ಮಾಡಿತ್ತು. ಇದು ದುರಸ್ತಿ ಹಾಗೂ ನಿರ್ವಹಣೆ ವೆಚ್ಚದ 5.8 ರಿಂದ ಪ್ರತಿಶತವಾಗಿದ್ದು ಸಂಪನ್ಮೂಲಗಳ ಮಂದ ಆಂತರಿಕ ಉತ್ಪತ್ತಿಯನ್ನು ಸೂಚಿಸುತ್ತದೆ. ಪ್ರಾಜೆಕ್ಟ್‌ಗಳು ಕರ್ನಾಟಕಕ್ಕೆ ಯಾವ್ಯಾವುದು important ಎಂದು ಹೇಳಿ prioritize ಮಾಡಬೇಕಾದಂಥ ಸ್ಥಿತಿಯಲ್ಲಿದ್ದೇವೆ. ಮಾನ್ಯ ಯಡಿಯೂರಪ್ಪನವರು ಒಪ್ಪುತ್ತಾರೆ. ಇಡೀ ರಾಜ್ಯದಲ್ಲಿ

ಏನಾದರೂ ಒಂದು ಪ್ರಾಜೆಕ್ಟ್ ಆಗಬೇಕೆಂದರೆ ಅದು ಮೊದಲೇ ಇರಿಗೇಷನ್ ಪ್ರಾಜೆಕ್ಟ್ ಆಗಬೇಕು. ಎರಡು ಕಾರಣಕ್ಕೆ ಆಗಬೇಕು. ಒಂದು ನಮ್ಮ ಪಾಲಿನ ನೀರನ್ನು ನಾವು ಬಳಸಬೇಕು. ಇನ್ನೊಂದು ಅತಿಯಾದ ಸಂಕಷ್ಟಗಳಿಗೆ ಸಿಗುತ್ತಿರುವ ಕರ್ನಾಟಕವನ್ನು ಅಲ್ಲಿಂದ ಸ್ವಲ್ಪ ಪಾರು ಮಾಡಬೇಕು. ಸುಮಾರು 70–72 ಕ್ಷೇತ್ರಗಳೇನು ಬಯಲು ಸೀಮೆಯಲ್ಲಿ ಬರುತ್ತಿತ್ತು, ಆ ಕಡೆ ಏನಾದರೂ ಒಂದೇ ಒಂದು ಅಶ್ಯುರ್ಡ್ ಕ್ರಾಪನ್ನು ವರ್ಷಕ್ಕೆ ನಾವು ಕೊಡಬೇಕಾಗಿತ್ತು. ಮತ್ತು ಅದರ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ನಾವು ಸರಿಪಡಿಸಬೇಕಾಗಿತ್ತು. ಇವತ್ತು ಬಹಳ ಸ್ಟ್ರೆಸ್ ಇದೆ. ಮಾನ್ಯ ಈಶ್ವರಪ್ಪನವರು ಮಂತ್ರಿಗಳಾದ ಮೇಲೆ ಬಹಳ ಓಡಾಡುತ್ತಿದ್ದರು, ಪತ್ರಿಕೆಯಲ್ಲಿ ನಾವು ಓದುತ್ತಿದ್ದೆವು. ಈ ಸಲ ಇರಿಗೇಷನ್‌ಗೆ ಸುಮಾರು ಐದು ಸಾವಿರ ಚಿಲ್ಲರೆ ಕೋಟಿ ರೂ.ಯನ್ನು ನಾನು ಅಲೋಕೇಟ್ ಮಾಡಿಸಿಕೊಳ್ಳುತ್ತೇನೆ, ಎಲ್ಲಾ ಪ್ರಾಜೆಕ್ಟ್‌ನ್ನು 39 ಪ್ರಾಜೆಕ್ಟ್‌ಗಳೇನಿದೆ ಅಷ್ಟನ್ನೂ ಈ ವರ್ಷ ಮುಗಿಸಲು ನಾವು ಮಾಡುತ್ತೇವೆ ಎಂದು ಹೇಳಿದರು. ಆದರೆ ವಾಸ್ತವವಾಗಿ ಪರ್‌ಕ್ಯಾಪಿಟ, ಅಥವಾ ನಿಮ್ಮ ಹತ್ತಿರ ಇರುವ ಹಣದಲ್ಲಿ ನೀರಾವರಿಗೆ ತಾವು ಅಲೋಕೇಷನ್‌ನನ್ನು ಕಡಿಮೆ ಮಾಡಿದ್ದೀರಿ. ಇದು ಏಕೆಂದು ನಮಗೆ ಗೊತ್ತಾಗುತ್ತಿಲ್ಲ. ನಾವು ನಿಜವಾಗಿ project oriented, development oriented ಬಜೆಟ್ ಇಟ್ಟಿದ್ದಿದ್ದರೆ ಆ ಮಾತು ಬೇರೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಯಡಿಯೂರಪ್ಪನವರು ಇಲ್ಲಿ ನಿಂತುಕೊಂಡು ಭಾಷಣ ಮಾಡುವ ದಿವಸ ಒಂದು ಮಾತನ್ನು ಹೇಳಿದ್ದಾರೆ. Stop all these activities. Only do irrigation works ಎಂದು ಕಳೆದ ಭಾಷಣದಲ್ಲಿ ಹೇಳಿದ್ದಾರೆ. ನಾನು ಅದನ್ನು ತರಿಸಿ ಈಗ ಓದಿದೆ. ಈ ರೀತಿ ಪ್ರಾಜೆಕ್ಟ್‌ಗಳನ್ನು ಮಾಡಿಕೊಂಡು ಹೋದರೆ ಯಾವತ್ತು ಮುಗಿಸುತ್ತೀರಿ? ಬೇರೆ ಎಲ್ಲವನ್ನೂ ನಿಲ್ಲಿಸಿಯಾದರೂ ಇರಿಗೇಷನ್ ಪ್ರಾಜೆಕ್ಟ್‌ನ್ನು ಮುಗಿಸಿಬಿಡಿ ಎಂದು ಹೇಳಿದ್ದಾರೆ. ಅವರು ಬಹುಶಃ ಈ ಬಜೆಟ್‌ನ್ನು ಇಡುವ ಮೊದಲೇ ಅವರ ಅಂದಿನ ಭಾಷಣವನ್ನು ತರಿಸಿ ಓದಿದ್ದಾರೆಂದು ನಾನು ಅಂದುಕೊಂಡಿರುತ್ತೇನೆ. ಅವಕಾಶ ಸಿಕ್ಕಿದಾಗ ನಮ್ಮ ಕನಸನ್ನು ನನಸು ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಅವರಿಗೆ ಸುಂದರವಾದ ಒಂದು ಕನಸಿತ್ತು. ಈ ರಾಜ್ಯದ ರೈತರಿಗೆ ಏನಾದರೂ ಮಾಡಿ ನೀರಾವರಿ ವ್ಯಾಪ್ತಿಯೊಳಗೆ ತರಬೇಕು ಎಂದು. ನಾನು ಒಂದು ಪ್ರಶ್ನೆ ಮಾಡುತ್ತಿದ್ದೇನೆ, ಈ ನೀರಿನ ವ್ಯವಸ್ಥೆ ಬಂದಾಗ ಅವರು ನಮ್ಮ ಜೊತೆ ಹೋರಾಟ ಮಾಡಿದರು. ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ನಾವು ಒತ್ತು ಕೊಡಲೇಬೇಕು, ಏನು ಬಯಲು ಸೀಮೆ ಪ್ರದೇಶವಿದೆ ಅದು ಸತತವಾಗಿ ಬರದ ದವಡೆಗೆ ಸಿಲುಕುತ್ತಿದೆ, ಆ ಶಾಪದಿಂದ ರೈತರನ್ನು ಮುಕ್ತ ಮಾಡಲೇಬೇಕು, ನೀವು ಏನಾದರೂ ಮಾಡಲೇಬೇಕು ಎಂದು ಒಂದೇ ಒಂದು ಪದವನ್ನು ಇವತ್ತು ಅವರು ನಮ್ಮ ಬಗ್ಗೆ ಆಡಲಿಲ್ಲ. ನಾನು ಕೇವಲ ವಿರೋಧಕ್ಕಾಗಿ ಮಾಡುವುದಿಲ್ಲ ಅಥವಾ ನನ್ನ ಅಪ್ರೋಚ್ negative ಎಂದು ಭಾವಿಸಬೇಕಾದ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. ಕರ್ನಾಟಕದ ಇಡೀ ಬಯಲು ಸೀಮೆಯನ್ನು ಹೇಗಾದರೂ ಮಾಡಿ ಮೇಲಕ್ಕೆ ಎತ್ತಲು ಒಂದು ಪ್ರಯತ್ನ ಮಾನ್ಯ ಯಡಿಯೂರಪ್ಪನವರ ಕಾಲದಲ್ಲಾಗುತ್ತದೆಂದು ನಾನು ಭಾವಿಸಿದ್ದೆ. ಅದು ಆಗಲಿಲ್ಲ. ನಾನು ಅದಕ್ಕೆ ಕಾರಣ ಕೇಳಲಿಲ್ಲ. ಅದಕ್ಕೆ ನನ್ನ ಭಾವನೆ ಏನು? ಮಾನ್ಯ ಯಡಿಯೂರಪ್ಪನವರಿಗೆ ಬಹುಶಃ ಈ ಬಜೆಟ್‌ನ್ನು ಸಮಗ್ರವಾಗಿ ಇನ್ನೂ ಯೋಚನೆ ಮಾಡಿ ಅಥವಾ ಮಂಥನ ಮಾಡಿ ಮಾಡಲು

ಆಗಲಿಲ್ಲವೇನೋ, ಕಾಲ ಸಾಕಾಗಲಿಲ್ಲವೇನೋ ಎಂದು ನಾನು ನಿಜವಾಗಿ ಅಂದುಕೊಳ್ಳುತ್ತೇನೆ. ಹೊಸದಾಗಿ ಉಪ ಮುಖ್ಯಮಂತ್ರಿಯಾಗಿದ್ದರು, ಒತ್ತಡಗಳು ಬಹಳ ಇತ್ತು, ಜನರ ಮಧ್ಯೆ ಇರಬೇಕಾಗಿತ್ತು, ಅದನ್ನು ತಪ್ಪಿಸಿಕೊಂಡು ಹೋಗಿ ಕುಳಿತು ಬಜೆಟ್ ಮಾಡಬೇಕಾಗಿತ್ತು, ಅವಲಂಬನೆ ಸ್ವಾಭಾವಿಕವಾಗಿ ಆ ಸಮಯದಲ್ಲಿ ಇರುತ್ತದೆ ಎಂದು ನಾನು ಭಾವಿಸುತ್ತೇನೆ. ಇನ್ನು ನಾನು ಅವರ ಪಾಲಿಸಿಗಳ ಬಗ್ಗೆ ಬರುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇವೆಲ್ಲಾ ಬದ್ಧತೆಯ ವಿಚಾರಗಳು. ಒಂದು ಸ್ಥಾನದಿಂದ ಒಬ್ಬ ಮನುಷ್ಯ ತನ್ನ ಬದ್ಧತೆಯ ಆಧಾರದ ಮೇಲೆ ಕೆಲವು ವಿಚಾರಗಳನ್ನು ಪ್ರತಿಪಾದನೆ ಮಾಡಿದಾಗ ತನಗೇ ಜೀವನದಲ್ಲಿ ಒಂದು ಅವಕಾಶ ಒದಗಿಬಂದಾಗ ತಾನು ನಂಬಿರತಕ್ಕ ಬದ್ಧತೆಯನ್ನು, ಆದರ್ಶಗಳನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಹಾಗೇ ಅಲ್ಲದೇ ಹೋದರೆ ಏನಾಗುತ್ತದೆಂದರೆ ಏನೋ ಒಂದು ಹೇಳಿದಂತಾಗುತ್ತದೆ. They become matters of conviction. ಅವರು ಕನ್‌ವಿಕ್ಷನ್ ಆಧಾರದ ಮೇಲೆ ಇಲ್ಲಿ ಕುಳಿತು ಹೇಳಿರತಕ್ಕ ಮಾತುಗಳನ್ನು ಅಲ್ಲಿದ್ದಾಗ, ಅಧಿಕಾರ ಸಿಕ್ಕಿದಾಗ ಅನುಷ್ಟಾನಗೊಳಿಸದೆಯೇ if he switches over to other things, ಅದು ಅವರ ವ್ಯಕ್ತಿತ್ವದ ಮೇಲೆ reflect ಆಗುತ್ತದೆ. ನಾವು ಏಕೋ ಅದನ್ನು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾಧುಸ್ವಾಮಿಯವರು ಅದನ್ನು ಹೇಳಲು ಬರುವುದಿಲ್ಲ. ಅವರು ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ. ಸರ್ಕಾರಕ್ಕೆ ಬೆಂಬಲ ಕೊಡುವ ವ್ಯವಹಾರವೇ ಬೇರೆ. ಬಜೆಟ್ ಮೇಲೆ ಭಾಷಣ ಮಾಡುವ ವ್ಯವಹಾರವೇ ಬೇರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ನೇರವಾಗಿ ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಆ ಕಡೆ ಐವತ್ತು ಭಾಗ, ಈ ಕಡೆ ಐವತ್ತು ಭಾಗ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ನೇರವಾಗಿ ಹೇಳಿದ್ದೇನೆ. ಯಡಿಯೂರಪ್ಪನವರು ನೀರಾವರಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿತ್ತು. ಅದು ಏತಕ್ಕೆ ಆಗಲಿಲ್ಲ ....

Mr. K.R. Rameshkumar : Bundle of contradictions. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದಲ್ಲಿ ಕುಳಿತು ಮಾತನಾಡಿದಾಗ ಹಿಂದೂಗಳ ವಿಚಾರದಲ್ಲಿ ಅವರು ಹೇಳಿರತಕ್ಕ ಮಾತು, ಇವತ್ತು ಅಲ್ಪಸಂಖ್ಯಾತರಿಗೆ ಅವರು ತೋರಿಸಬಹುದಾದಂಥ ಕನ್‌ಸೆಷನ್ಸ್‌ಗಳ ಬಗ್ಗೆ ಹೇಳಿರತಕ್ಕ ಮಾತು ಒಂದಕ್ಕೊಂದು ಸಾಮ್ಯವೇ ಇಲ್ಲ. Total contradictions.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಅವರೊಬ್ಬರದ್ದೇ ಸರ್ಕಾರವಲ್ಲವಲ್ಲಾ? ಜಂಟಿ ಸರ್ಕಾರ.

Mr. K.R. Rameshkumar : Is it a reflection of the present governance or the reflection of his personality?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಾಧುಸ್ವಾಮಿಯವರ ಭಾಷಣದ ಬಗ್ಗೆ ನೀವು ಮಾತನಾಡಬಾರದು. ಅವರದ್ದೇ ಧಾಟಿ ಬೇರೆ ಇರುತ್ತದೆ.

ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಹೇಳಿಲ್ಲ. ಅದನ್ನು ತಾವು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಮಾನ್ಯ ರಾಷ್ಟ್ರಪತಿಗಳ ಭಾಷಣದ ಬಗ್ಗೆ ಮಾಡನಾಡಿದರು.

0500-15

ಶ್ರೀ ಜೆ.ಸಿ. ಮಾಧುಸ್ವಾಮಿ : ಧಾಟಿ ಏನೂ ವ್ಯತ್ಯಾಸ ಆಗುವುದಿಲ್ಲ. ಅದು ನಮ್ಮದೇ ಧಾಟಿಯಲ್ಲಿರುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ನೀರಾವರಿಗೆ ಜಾಸ್ತಿ ಹಣವನ್ನು ಇಡಬೇಕಾಗಿತ್ತು. ಮಾನ್ಯ ಯಡಿಯೂರಪ್ಪನವರು ಬಯಲು ಸೀಮೆ ಅಭಿವೃದ್ಧಿ ಕಡೆಗೆ ಒತ್ತು ಕೊಡಬೇಕಾಗಿತ್ತು. ಮಾನ್ಯ ಯಡಿಯೂರಪ್ಪನವರು ಹೇಗಾದರೂ ಮಾಡಿ ಈ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ನಮ್ಮ ಕೆರೆಗಳನ್ನು ತುಂಬಿ ಅನ್ಯಾಯವಾಗಿ ವ್ಯಥಾ ಖರ್ಚಾಗಿರುವ ಹಣವನ್ನು ಉಳಿಸಬಹುದಾಗಿತ್ತು. ಅವರು ಆ ಕಥೆ ಕಾನ್ಸ್‌ನ್‌ಟ್ರೇಟ್ ಮಾಡಬೇಕಾಗಿತ್ತು. ಏನು ಮಾನ್ಯ ಸಿದ್ದರಾಮಯ್ಯನವರು ಮತ್ತು ಅವರ ಹಿಂದಿನವರು ಸ್ವಲ್ಪ ಹಣವನ್ನು ಉಳಿಸಿ ಹೋಗಿದ್ದರೋ ಅದು ಈ ರಾಜ್ಯದ ರೈತರಿಗೆ ಸಹಾಯ ಆಗಬೇಕಾಗಿತ್ತು. ಇದು ನನ್ನ ಸ್ಪಷ್ಟವಾದ ವಾದ. ಇದರಲ್ಲೇನೂ ಎರಡು ಮಾತಿಲ್ಲ. ಇನ್ನು 4 ಪರ್ಸೆಂಟ್ ಬಡ್ಡಿಯಲ್ಲಿ ನಾವು ರೈತರಿಗೆ ಸಾಲ ಕೊಡುತ್ತೇವೆಂದು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ನಾವು ಅದನ್ನು ಮೆಚ್ಚಲೇಬೇಕು. ರೈತರಾಗಿ, ರೈತರಿಗೆ ಏನಾದರೂ 4 ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಸಿಗುತ್ತದೆ ಎಂದರೆ ಅದು ಸ್ವಾಗತಾರ್ಹ. ಸನ್ಮಾನ್ಯ ಜನಾರ್ಧನ ಪೂಜಾರಿಯವರು ಅವೊತ್ತು ಇದ್ದ ಎ.ಆರ್. ಲೋನ್ಸ್‌ನ್ನು ಕೊಡಿಸುವುದಕ್ಕೆ ಮಾಡಿದ ಪ್ರಯತ್ನ ಬಿಟ್ಟರೆ ಇವೊತ್ತು ಮಾನ್ಯ ಆರ್ಟಿಸನ್ಸ್‌ಗೆ ಯಡಿಯೂರಪ್ಪನವರು ನಮ್ಮ ನಡುವಿಗೆ ಸಾಲದ ಹೊರೆಯನ್ನು ಇಳಿಸಿದ್ದಾರೆ. ಇದನ್ನು ನಾನು ಶ್ಲಾಘಿಸುತ್ತೇನೆ. ಆದರೆ ಒಂದನ್ನು ಅವರು ಮುಂದುವರೆಸಿದ್ದಾರೆ. ಏಪ್ರಿಲ್ 30ರವರೆಗೆ ಅವರು ಬಡ್ಡಿ, ಸುಸ್ತಿ ಬಡ್ಡಿಯನ್ನು ಕಟ್ಟಿದರೆ ವಜಾ ಮಾಡಬಹುದು ಅಥವಾ ಆ ಸಾಲವನ್ನೂ ಕೂಡ ಮರುಹೊಂದಾಣಿಕೆ ಮಾಡಿಕೊಳ್ಳಬಹುದು ಎಂದಿದ್ದಾರೆ. ನಾನು ಎರಡೇ ಪ್ರಶ್ನೆಯನ್ನು ಕೇಳುವುದು. ಮಾನ್ಯ ಯಡಿಯೂರಪ್ಪನವರು ಅವರು ವಾದ ಮಾಡುತ್ತಾ 'ಒಂದು ಕಾಲಕ್ಕೆ ಅಸಲನ್ನು ವಜಾ ಮಾಡಿಬಿಡಿ, ಮನ್ನಾ ಮಾಡಿಬಿಡಿ waive the principal also. - ಒಂದು ಕಾಲಕ್ಕೆ ಮುಕ್ತನನ್ನಾಗಿ ರೈತನನ್ನು ಮಾಡಿ' ಎಂದು ಯಡಿಯೂರಪ್ಪನವರೆ, ಇಲ್ಲಿ ತಾವು ಹೇಳಿದ್ದೀರಿ. ಒಂದು ಕಾಲಕ್ಕೆ ಅಸಲನ್ನೂ ಕೂಡ ಮನ್ನಾ ಮಾಡಿಬಿಡಿ, ಮೂರು ವರ್ಷ ಬರಗಾಲ ಆದಮೇಲೆ, ಆ ರೈತ ಪಾಪ ಎಲ್ಲಿಂದ ತಂದು ಕಟ್ಟುತ್ತಾನೆ ಎಂದು ಅವೊತ್ತು ಮಾನ್ಯ ಯಡಿಯೂರಪ್ಪನವರೇ ತಾವು ಹೇಳಿದ್ದೀರಿ. ನಾನು ಸ್ಪಷ್ಟವಾಗಿ ಅವರು ಅವೊತ್ತು ಹೇಳಿದ್ದರು ಎಂದೇ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಹೇಳಿದ್ದರು. ಆದರೆ ಮರೆತುಬಿಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಮಾತನಾಡುತ್ತೇನೆ ಬಿಡಿ ಸಾರ್. ಎರಡನೆಯದಾಗಿ ನಾವು ಮತ್ತು ಅವರೆಲ್ಲಾ ಸೇರಿ ಇಲ್ಲಿ ಒಂದು ಮೂವ್‌ಮೆಂಟ್‌ನ್ನು ಮಾಡಿದ್ದೆವು. ಮಾನ್ಯ ದೇಶಪಾಂಡೆಯವರಿಗೆ ಮತ್ತು ಫೈನಾನ್ಸ್ ಮಿನಿಸ್ಟರ್‌ರವರಿಗೆ ಏನು ಕೇಳಿದ್ದೆವೆಂದರೆ ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ಸಾಲ ಕೊಡಬೇಕಾದರೆ ಅಲ್ಲಿ ಗೋಡಾನ್ ಸಾಲ ಕೊಟ್ಟಿದ್ದಾರೆ; ಶೇಂಗಾ ಅಭಿವೃದ್ಧಿಗೆ ಸಾಲವನ್ನು ಕೊಟ್ಟಿದ್ದಾರೆ, ಫಾರಂ ಹೌಸ್ ಅಥವಾ ಕ್ಯಾಟಲ್‌ಶೆಡ್‌ಗೆ ಸಾಲ ಕೊಟ್ಟಿದ್ದಾರೆ, ಅಡಮಾನ ಬ್ಯಾಂಕಲ್ಲಿ ಅಡಮಾನ ಇಟ್ಟುಕೊಂಡು ಏನು ಸಾಲವನ್ನು ಕೊಟ್ಟಿದ್ದಾರೆ ಅದು ಕ್ಷುಲ್ಲಕ ಅಥವಾ ಒಂದು poultry ಇರಬಹುದು ಅಥವಾ ಒಂದು ಬ್ರಿಕ್ ಇಂಡಸ್ಟ್ರಿ ಇರಬಹುದು, ಯಾವುದು ನಮ್ಮ ಪೆಕಾರ್ಡ್

8500-16*

ಬ್ಯಾಂಕ್‌ನಲ್ಲಿ ಸಾಲವನ್ನು ಕೊಟ್ಟಿದ್ದಾರೆ. ದಯಮಾಡಿ ಅದಕ್ಕೂ ಕೂಡ ಈ ಯೋಜನೆಯನ್ನು ಅಳವಡಿಸಿಕೊಡಿ ಎಂದು ಕೇಳಿದ್ದೆವು. ನಾನು ಈಗ ಸನ್ಮಾನ್ಯ ಯಡಿಯೂರಪ್ಪನವರಲ್ಲಿ ಅದರ ಬಗ್ಗೆ ಡಿಮ್ಯಾಂಡ್ ಮಾಡುತ್ತೇನೆ. ಸಾರ್ ನಾವು ದಯವಿಟ್ಟು ಈ ಸಲ ತಾವು ಏನು ವೇವರ್ಸ್ ಸ್ಕೀಂನ್ನು ತಂದಿದ್ದೀರಿ, ಅದಕ್ಕೆ ಹನ್ನೆರಡು ಕೋಟಿ ರೂಪಾಯಿ ಖರ್ಚು ಬೀಳಬಹುದು. ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ನಾನ್-ಅಗ್ರಿಕಲ್ಚರಲ್‌ಗೆ ಫೈನಾನ್ಸ್ ಏನಾಗಿತ್ತು ಅಲ್ಲಿ ತೆಗೆದುಕೊಂಡಿರುವ ಸಾಲ ಕೂಡ ಈ ಯೋಜನೆಗೆ ತರಬೇಕಾಗುತ್ತದೆ. ಒಬ್ಬ ಅಲ್ಲಿ ಟ್ರ್ಯಾಕ್ಟರ್‌ಗೆ ಎಂದು ಹೇಳಿ ತೆಗೆದುಕೊಂಡರೆ ರಿಯಾಯಿತಿ ಸಿಗುತ್ತದೆ, ಆದರೆ ಕ್ಯಾಟಲ್‌ಶೆಡ್‌ಗೆ ಸಿಗುತ್ತಿಲ್ಲ. ನಾನು ಅದಕ್ಕೇ ಹೇಳುತ್ತಿದ್ದೇನೆ, ತೆಂಗು, ಅಡಿಕೆ ಇಟ್ಟಿದ್ದೇನೆ, ಆದರೆ ಅಡಮಾನ ಅಂದರೆ ಸಿಗುತ್ತಿಲ್ಲ. ತೆಂಗು ಅಭಿವೃದ್ಧಿಗೆ ನಾನು ಸಾಲ ತೆಗೆದುಕೊಂಡಿದ್ದೇನೆ ಎಂದರೆ ಸಿಗುತ್ತಿಲ್ಲ. ಮೀಗರ್ ಅಮೌಂಟ್ ಅದು. ಒಂದು ಸಲಕ್ಕೆ ಅದಕ್ಕೂ ಕೂಡ ತಾವು ಈ ಸ್ಕೀಂನ್ನು ಅನ್ವಯ ಮಾಡಬೇಕು. ಏಕೋ ಹಿಂದೆ ಮಾನ್ಯ ಸಿದ್ದರಾಮಯ್ಯನವರಿಗೆ ಈ ಬಗ್ಗೆ ಅವರ ತಲೆಗೇ ಹೋಗಲಿಲ್ಲ. ಬಹಳ ಬೇಡಿಕೊಂಡೆವು, ಅದು ಹತ್ತು ಕೋಟಿ ರೂ. ಏನಾಗುತ್ತದೆ ಕೊಡಿ ಎಂದರೂ ಕೂಡ ಅವರು ಕೊಡುವುದಿಲ್ಲ ಎಂದರು. ಈಗ ಬೇರೆ ರೀತಿಯಲ್ಲಿ ಹೋಗಿರುವುದನ್ನಾದರೂ ಈಗ ತಾವು ಈ ಕಡೆ ಡೈವರ್ಟ್ ಮಾಡಿ ತಾವೇನು ಈಗ ವೇವರ್ಸ್ ಸ್ಕೀಂನ್ನು ಎಕ್ಸ್‌ಟೆಂಡ್ ಮಾಡಿದ್ದೀರಿ, ಅದನ್ನು ಪಿ.ಎಲ್.ಡಿ. ಬ್ಯಾಂಕ್‌ನ ಬೇರೆ ಯೋಜನೆಗಳಿಗೂ ಸೇರಿಸಿ ದಯವಿಟ್ಟು ಎಕ್ಸ್‌ಟೆಂಡ್ ಮಾಡುವಂಥ ದೊಡ್ಡ ಕೆಲಸವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ಈಗ ಒಂದು ಸುದ್ದಿ ಆಗಿಬಿಟ್ಟಿದೆ. ಮಾನ್ಯ ಚಿದಂಬರಂರವರು ಏನು 7 ಪರ್ಸೆಂಟ್‌ಗೆ ಸಾಲವನ್ನು ಇಳಿಸಿದ್ದಾರೆ, ಅದಕ್ಕೆ ತಾವು ಕೂಡ 1 ಪರ್ಸೆಂಟ್ ಸಬ್ಸಿಡೈಸ್ ಮಾಡಿ ಅದೂ ಕೂಡ 6 ಪರ್ಸೆಂಟ್‌ಗೆ ಕೊಡುತ್ತೀರಿ ಎಂದು ಬ್ಯಾಂಕ್‌ನವರೆಲ್ಲಾ ಮಾತನಾಡುತ್ತಿದ್ದಾರೆ. ಸ್ಟೇಟ್ ಗೌವರ್ನಮೆಂಟ್ ಕೂಡ 1 ಪರ್ಸೆಂಟ್ ಕಾಂಟ್ರಿಬ್ಯೂಟ್ ಮಾಡುತ್ತದೆ. ಆದ್ದರಿಂದ ಅಗ್ರಿಕಲ್ಚರ್ ಫೈನಾನ್ಸ್ 1 ಪರ್ಸೆಂಟ್‌ಗೆ ಇಳಿಯುತ್ತದೆ ಎಂದು ಅದನ್ನು ತಾವು ಮಾಡಬೇಕು. ಮಾನ್ಯ ಚಿದಂಬರ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ಶಾರ್ಟ್ ಟರ್ಮ್ ಕಾರಿಫ್ ಲೋನ್‌ಗೆ ಮಾತ್ರ ಎಂದು ಅವರು ಹೇಳಿದ್ದಾರೆ. ಒಂದು ವರ್ಷಕ್ಕೆ ಅಥವಾ ಹದಿನೈದು ತಿಂಗಳಿಗೆ ಬಾಳೆ ಬೆಳೆ ಇಟ್ಟರೆ ಮಾತ್ರ ಎಂದಿದ್ದಾರೆ. ಅದಕ್ಕಿಂತ ಮುಂದುವರೆಯುವಂಥ ಸಾಲಗಳಿಗೆ ಈ ರಿಯಾಯಿತಿ ಇಲ್ಲ. ಮತ್ತೆ 3 ಲಕ್ಷ ರೂಪಾಯಿಯೊಳಗೆ ಸಾಲ ಇದ್ದರೆ ಮಾತ್ರ ಈ ರಿಯಾಯಿತಿ. 7 ಪರ್ಸೆಂಟ್‌ಗೆ ಕೊಡುತ್ತೇವೆಂದು ಹೇಳಿದ್ದಾರೆ. ಸ್ಟೇಟ್ ಗೌವರ್ನಮೆಂಟ್ ಕೂಡ ಅಲ್ಲಿ ದಯಮಾಡಿ ತಾವು ಒಂದು ಪರ್ಸೆಂಟೋ ಅಥವಾ ಮೂರು ಪರ್ಸೆಂಟೋ ಸಬ್ಸಿಡೈಸ್ ಮಾಡಬಹುದು. ಕೃಷಿ ಸಾಲವನ್ನು ನಾವು ಏನು ಸಹಕಾರಿ ಕ್ಷೇತ್ರದಲ್ಲಿ ತೆಗೆದುಕೊಳ್ಳುತ್ತಿದ್ದೇವೆ ಅದೇ ರೀತಿ ಆರ್.ಆರ್.ಬಿ. ನಲ್ಲಿ ಇರಬಹುದು. ನ್ಯಾಶನಲೈಸ್ಡ್ ಬ್ಯಾಂಕ್‌ನಲ್ಲಿ ಇರಬಹುದು, ಆ ಸಾಲಕ್ಕೂ ಕೂಡ ಸಬ್ಸಿಡೈಸ್ ಮಾಡಬೇಕು. ನಾನು ಏಕೆ ಹೇಳುತ್ತಿದ್ದೇನೆ. ಎಂದರೆ, ನಾವು ನಿರೀಕ್ಷೆ ಮಾಡಿದ ಹಾಗೆ ಇವೊತ್ತು ಪೆಕಾರ್ಡ್ ಬ್ಯಾಂಕ್‌ಗಳಲ್ಲಿ ಸಾಲಗಳು ವಿತರಣೆಯಾಗಲಿಲ್ಲ. ನಾನು ಚಿಕ್ಕನಾಯಕನಹಳ್ಳಿಯದ್ದು ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ಏಳೂವರೆ ಕೋಟಿ ರೂ. ವಸೂಲು ಮಾಡಿ ಬರೇ ನಲವತ್ತೈದು, ನಲವತ್ತಾರು ಲಕ್ಷ ರೂ. ರೀ-ಫೈನಾನ್ಸ್ ಮಾಡುವುದಕ್ಕೆ

ಆಗಿದೆ. ಕಾರಣಗಳು ಬೇಕಾದಷ್ಟು ಇದೆ. ಅವರು ಒಂದೇ ಮಾತು ಹೇಳುವುದು. ಗೌವರ್ನಮೆಂಟ್‌ನಿಂದ ಫಂಡ್ ಅಡ್ಜೆಸ್ಟ್ ಆಗದೇ ನಾವು ರೆಕಾರ್ಡ್‌ಗಳನ್ನು ವಾಪಸ್ಸು ಕೊಡುವುದಕ್ಕೆ ಆಗುವುದಿಲ್ಲ. ನಾವು ಅದೆಲ್ಲಾ ಸಾಲ ಕ್ಲಿಯರ್ ಆಗಿದೆ ಎಂದು ಟ್ರೀಟ್ ಮಾಡುವುದಕ್ಕೆ ಆಗುವುದಿಲ್ಲ. ಬೇರೆ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳುವುದಕ್ಕೂ ಕೂಡ ಅವರು ನಮಗೆ ರೆಕಾರ್ಡ್ಸ್ ವಾಪಸ್ಸು ಕೊಡಲಿಲ್ಲ. ಮತ್ತೆ ಮಾರ್ಟ್‌ಗೇಜನ್ನು ವಾಪಸ್ಸು ಮಾಡಿಕೊಡಬೇಕಾಗಿತ್ತಲ್ಲಾ, ಅದನ್ನೂ ಕೂಡ ಅವರು ಮಾಡಲಿಲ್ಲ. ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟರು. ಆದರೆ ರೆಕಾರ್ಡ್ಸ್‌ಗಳನ್ನು ಅವರು ಕೊಡುತ್ತಿಲ್ಲ. ಮತ್ತೆ ರಿಜಿಸ್ಟರ್ ಆಗಿದ್ದ ಮಾರ್ಟ್‌ಗೇಜ್‌ನ್ನೂ ಕೂಡ ಅವರು ರೀ-ಕನ್ವ್ ಮಾಡಲಿಲ್ಲ. ನಾನು ಅನೇಕ ಸಲ ಹೇಳಿದೆ, ನೀವು ಸಾಲ ಕೊಡುವುದಿಲ್ಲ ಎಂದರೆ ರೀ-ಕನ್ವೆ ಮಾಡಿರಿ ಎಂದು ಡಿಮ್ಯಾಂಡು ಇಷ್ಟು ಎಂದು ಕೊಟ್ಟಿದ್ದೀರಿ, ಅದರಲ್ಲಿ ಗೌವರ್ನ್‌ಮೆಂಟ್ ಕೊಡಬೇಕಾದ ಬಡ್ಡಿ ವಜಾ ಮಾಡಿ ಕೊಟ್ಟಿದ್ದೀರಿ, ಡಿಮ್ಯಾಂಡ್ ಪ್ರಕಾರ ರೈತ ಸಾಲ ಕಟ್ಟಿದ ಮೇಲೆ ರೆಕಾರ್ಡ್ಸ್ ಕೊಡುವುದಕ್ಕೆ ನಿಮ್ಮದೇನು? ಎಂದು ಕೇಳಿದ್ದೇನೆ. ಅವರು ತಾಂತ್ರಿಕವಾಗಿ ಹೇಳುತ್ತಾರೆ. ಸಾರ್, ಅಕಸ್ಮಾತ್ ಸರ್ಕಾರ ಹೊಂದಾಣಿಕೆ ಮಾಡದೇ ನಾವು ಏನು ಮಾಡುವುದು ಎನ್ನುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಜಯಲಲಿತಾರವರು ನಮಗೆ ಮಾಡೆಲ್ ಆಗಬೇಕು. ಯಾವುದೇ ರಿಯಾಯಿತಿ ತಮಿಳುನಾಡಿನಲ್ಲಿ ಘೋಷಣೆಯಾದರೆ ವೆಲ್ ಇನ್ ಅಡ್ವಾನ್ಸ್ ಅಡ್ಜೆಸ್ಟ್ ಆಗುತ್ತದೆ. ಅದು ಎಲೆಕ್ಟ್ರಿಸಿಟಿ ಬೋರ್ಡ್‌ನಿಂದ ಹಿಡಿದು ಅಗ್ರಿಕಲ್ಚರ್ ಸಬ್ಸಿಡಿವರೆಗೆ ನಿರ್ದಾಕ್ಷಿಣ್ಯವಾಗಿ ಮೊದಲೇ ತೆಗೆದಿಟ್ಟು ಕೊಟ್ಟುಬಿಡುತ್ತಾರೆ. ತಾವು ಈಗ ಬ್ಯಾಂಕ್‌ಗಳು ಉಳಿಯಬೇಕು, ಸಹಕಾರಿ ಸಂಘಗಳು ಉಳಿಯಬೇಕು ಎಂದರೆ ದಯಮಾಡಿ ತಾವೇನು ಕೊಡಬೇಕು ಎಂದಿದ್ದೀರಿ ಆ ಬಗ್ಗೆ ಅಡ್ಜೆಸ್ಟ್‌ಮೆಂಟನ್ನು ಮೊದಲೇ ಮಾಡಿಕೊಡಬೇಕು. ಇಲ್ಲದೇ ಇದ್ದರೆ ಕೋ-ಆಪರೇಟಿವ್ ಇನ್ಸ್‌ಟಿಟ್ಯೂಷನ್ಸ್ ನಿಜವಾಗಿ ಮುಳುಗಿ ಹೋಗುತ್ತವೆ. ನಾನು ತಮಗೆ ಹೇಳುವುದು ನಾವೇನು ಕಮರ್ಶಿಯಲ್ ಬ್ಯಾಂಕ್ ಅಥವಾ ಆರ್.ಆರ್.ಬಿ.ನಲ್ಲಿ ಸಾಲ ತೆಗೆದುಕೊಳ್ಳುತ್ತಿದ್ದೇವೆ ಅಲ್ಲೂ ಕೂಡ ಎರಡು ಪರ್ಸೆಂಟೋ, ಮೂರು ಪರ್ಸೆಂಟೋ ಸಬ್ಸಿಡೈಸ್ ಮಾಡಿದರೆ ನಿಜವಾಗಿ ರೈತರಿಗೆ ಒಳ್ಳೆಯದಾಗುತ್ತದೆ. ಬೆಳೆ ಸಾಲಕ್ಕೆ ಮಾಡಿ. ಏನು ಮಾನ್ಯ ಚಿದಂಬರಂರವರು ಎಸ್.ಟಿ. ಕೇಸಸ್‌ಗೆ ಎಂದು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ ಅವಕ್ಕೇ ಮಾಡಿ ಏಕೆಂದರೆ the volume of loan advanced ನಿಮ್ಮ ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ ಕೊಡುವುದರ ಮೂರರಷ್ಟು, ನಾಲ್ಕರಷ್ಟು ರೈತರು ಇವೊತ್ತು ಆ ಬ್ಯಾಂಕ್‌ಗಳಲ್ಲಿ ಸಾಲವನ್ನು ಇವೊತ್ತು ತೆಗೆದುಕೊಳ್ಳುತ್ತಿದ್ದಾರೆ. ನಾವು ಇಲ್ಲೇಲ್ಲೋ ಒಂದು ಕಡೆ ಒಂದು ಸೆಕ್ಟರ್‌ನಲ್ಲಿ ತೆಗೆದುಕೊಂಡು ಕರ್ನಾಟಕ ರಾಜ್ಯದ ರೈತರಿಗೆ ಬಹಳ ಅನುಕೂಲ ಮಾಡಿದ್ದೇವೆ ಎನ್ನುವುದರ ಬದಲು, ಎಲ್ಲಾದರೂ ತೆಗೆದುಕೊಳ್ಳಲಿ, ಒಂದು ಪರ್ಸೆಂಟ್ ಜಾಸ್ತಿ ಇಡಿ. ಕೋ-ಆಪರೇಟಿವ್ ಇನ್ಸ್‌ಟಿಟ್ಯೂಷನ್ಸ್ ಬೆಳೆಯಬೇಕು ಎಂದಿದ್ದರೆ ಇಲ್ಲಿ 4 ಇದ್ದರೆ ಅಲ್ಲಿ ಐದಕ್ಕಾದರೂ ನಮಗೆ ಕೊಡಿಸುವಂಥ ಸ್ಥಿತಿಯನ್ನು ತಾವು ತರಬೇಕು. ಇನ್ನು ಮೂರನೆಯದು, ತಾವು ಕಾರ್ಯಕ್ರಮಗಳನ್ನು ಹೇಳಿಕೊಂಡು ಹೋಗಿದ್ದೀರಿ. ನಾನು ಒಂದೊಂದಾಗಿ ಮಾತನಾಡಬೇಕಾದರೆ ಪ್ರಥಮ ದರ್ಜೆ ಕಾಲೇಜುಗಳನ್ನು ಮಾಡುತ್ತೇವೆಂದು ತಾವು ಹೇಳಿದ್ದೀರಿ. ಹೊಸ ಪ್ರೌಢಶಾಲೆ, ಹೊಸ ಜೂನಿಯರ್ ಕಾಲೇಜು ಮಾಡುವುದಕ್ಕೆ ನನ್ನದೇನೂ ಅಬ್ಜೆಕ್ಷನ್ ಇಲ್ಲ ಸಾರ್, ಈ ಪ್ರಥಮ ದರ್ಜೆ

ಕಾಲೇಜುಗಳನ್ನು ಮಾಡಬೇಕೇ ಎಂಬುದರ ಬಗ್ಗೆ ಒಂದು ಬಾರಿ ಯೋಚನೆ ಮಾಡಿ. ಅಲ್ಲಿ ಎಸ್ಟಾಬ್ಲಿಶ್ಡ್ ಪ್ರೈವೇಟ್ ಕಾಲೇಜುಗಳು ಇರುತ್ತವೆ. ಮತ್ತೆ ಈ ಜನರಲ್ ಎಜ್ಯುಕೇಷನ್ ಕೋರ್ಸುಗಳಿಗೆ ಸ್ಕೋಪ್ ಕೂಡ ಇಲ್ಲ. ಯಾರೂ ಬಿ.ಎ., ಬಿ.ಎಸ್ಸಿ. ಡಿಗ್ರಿಯನ್ನು ಸೇರುವವರಿಲ್ಲ. ನಮ್ಮ ಕಡೆ ನಮಗೆ ಅನುಭವ ಆಗಿದೆ. ಎರಡು ಕಾಲೇಜು ಚಿಕ್ಕನಾಯಕನಹಳ್ಳಿಯಲ್ಲಿ ಇದೆ, ಗೌವರ್ನ್‌ಮೆಂಟ್ ಕಾಲೇಜು ನಡೆಯುವುದಿಲ್ಲ. ಮಾನ್ಯ ಸಿಂಧ್ಯಾರವರು ಇದ್ದರೆ ಇದನ್ನು ಒಪ್ಪುತ್ತಿದ್ದರು. ಇವೊತ್ತು ಕನಕಪುರದಲ್ಲಿ ತಾವು ಹೇಳಿದ್ದೀರಿ, ಗೌವರ್ನ್‌ಮೆಂಟ್ ಕಾಲೇಜು ನಡೆಯುವ ಸ್ಥಿತಿ ಅಲ್ಲಿ ಇಲ್ಲ ಎಂದು. ಮತ್ತೆ ಸ್ಟಾಫ್ ವಿಂಗ್‌ನ್ನು ಕೂಡ ಅಷ್ಟು ಚೆನ್ನಾಗಿ ಮಾಡುವುದಕ್ಕಾಗುವುದಿಲ್ಲ. ಆ ಹೆಡ್ ಕ್ವಾರ್ಟರ್‌ನಲ್ಲಿ ಗೌವರ್ನ್‌ಮೆಂಟ್ ಕಾಲೇಜು ಇಲ್ಲ ಎನ್ನುವ ಒಂದು ಕಾರಣಕ್ಕೆ ಮಾಡುವುದರ ಬದಲು ದಯಮಾಡಿ ಡೈವರ್ಸಿಫೈ ಮಾಡಿ. ಪಾಲಿಟೆಕ್ನಿಕ್ ಮಾಡಿ, ಫ್ಯಾಶನ್ಸ್ ಇನ್ಸ್‌ಟ್ಯೂಟ್ ಮಾಡಿ, ಹೋಟೆಲ್ ಮ್ಯಾನೇಜ್‌ಮೆಂಟ್‌ಗೆ ಸಂಬಂಧಪಟ್ಟಂತೆ ಮಾಡಿ, ಟೂರಿಸಂಗೆ ಸಂಬಂಧಪಟ್ಟಂತೆ ಮಾಡಿ, ಐ.ಟಿ.ಐ. ಮಾಡಿ ಇವುಗಳನ್ನು ಮಾಡುವುದರಿಂದ ಆ ಭಾಗದ ಹುಡುಗರಿಗೆ, ಜನಗಳಿಗೆ ಒಳ್ಳೆಯದಾಗುತ್ತದೆ. ಜನರಲ್ ಎಜ್ಯುಕೇಷನ್‌ಗೆ ಹೋಗಬೇಕೆನ್ನುವವರು ಪ್ರೈವೇಟ್ ಕಾಲೇಜುಗಳಲ್ಲಿ ಓದಲಿ ಬಿಡಿ. ಅಲ್ಲಿ ಜನರಲ್ ಎಜ್ಯುಕೇಷನ್‌ಗೆ ಪ್ರಥಮ ದರ್ಜೆ ಕಾಲೇಜು ಇರುವುದಿಲ್ಲವಾದ್ದರಿಂದ ಇಂಟ್ರಡ್ಯೂಸ್ ಮಾಡುತ್ತೇವೆ ಅಂದರೆ ಬಹುಶಃ ನಿಮ್ಮ ಆಸೆ, ಉದ್ದೇಶ ಸಫಲವಾಗಲಾರದು ಮತ್ತೆ ಎಕ್ಸ್‌ಪೆಂಡಿಚರ್ ಕೂಡ ಅದು ಫ್ರೂಟ್‌ಫುಲ್ ಆಗುತ್ತದೆ ಎಂದು ಭಾವಿಸುವ ಸ್ಥಿತಿಯಲ್ಲಿ ಇಲ್ಲ. ಇನ್ನು ಭೂಮಿ ಯೋಜನೆಯನ್ನು ವಿಸ್ತರಣೆ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಪ್ರಾಕ್ಟಿಕಲ್ ಆಗಿ ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಹೋಬಳಿ ಹೆಡ್ ಕ್ವಾರ್ಟರ್ಸ್‌ಗಿಂತ ಅನೇಕ ಗ್ರಾಮಗಳಿಗೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಕನ್‌ವೀನಿಯಂಟ್ ಆಗಿರುವುದು ಕರ್ನಾಟಕದಲ್ಲಿ. ನಾನು ನನ್ನ ಹಳ್ಳಿಯಿಂದ ನನ್ನ ಹೋಬಳಿ ಹೆಡ್ ಕ್ವಾರ್ಟರ್ಸ್‌ಗೆ ಹೋಗಬೇಕು ಎಂದರೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೆ ಹೋಗಿಯೇ ಹೋಗಬೇಕು. ಯಾವುದೋ ಕಾರಣಕ್ಕೆ ಹೋಬಳಿಗಳು ಹೆಡ್ ಕ್ವಾರ್ಟರ್ಸ್‌ಗಳಾಗಿವೆ. ನೀವು ನಿಜವಾಗಿ ಭೂಮಿ ಯೋಜನೆಯನ್ನು ವಿಸ್ತರಣೆ ಮಾಡಬೇಕೆಂದರೆ ವಿಲೇಜ್ ಅಕೌಂಟೆಂಟ್ ಅಥವಾ ಗ್ರಾಮ ಪಂಚಾಯತಿಯನ್ನೇ ಒಂದು ಕೇಂದ್ರವನ್ನಾಗಿ ಮಾಡಿಕೊಂಡು ಮಾಡಬೇಕಾಗುತ್ತದೆ. otherwise, you will be causing inconvenience. - ನಾವೇ ಇನ್‌ಕನ್‌ವೀನಿಯನ್ಸ್‌ನ್ನು ಕಾಸ್ ಮಾಡಿದ ಹಾಗೆ ಆಗುತ್ತದೆ. ಇಲ್ಲಾ, ಎರಡೂ ಕಡೆಗಳಲ್ಲಿಯೂ ತೆಗೆದುಕೊಳ್ಳಬಹುದು ಎನ್ನುವ ಹಾಗಾದರೂ ತಾವು ಮಾಡಿ. ತಾಲ್ಲೂಕು ಆಫೀಸ್‌ನಲ್ಲಾದರೂ ತಗೋ ಅಥವಾ ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಾದರೂ ತಗೋ ಎನ್ನುವಂತೆ ಮಾಡಿ. ಏಕೆಂದರೆ ಇದು ಕಂಪ್ಯೂಟರ್‌ನಿಂದ ಬರುವುದು ಇದ್ದು It can be taken anywhere. - - ಆ ರೀತಿ ಏನಾದರೂ ತಾವು ವ್ಯವಸ್ಥೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ನಮ್ಮ ರೈತರಿಗೆ ಅನುಕೂಲವಾಗುವುದಾದರೆ ತುಂಬಾ ಅಗತ್ಯವಾಗಿರುವಂಥ ಕಾರ್ಯಕ್ರಮಗಳಿವೆ. ಈಗ ಮೊದಲನೆಯ ಹಂತದಲ್ಲಿ ತಾಲ್ಲೂಕು ಕೇಂದ್ರಕ್ಕೆ ಅವನು ಬರುತ್ತಿದ್ದ.

ಕನಿಷ್ಠ 50 ರಿಂದ 60 ರೂಪಾಯಿಗಳನ್ನು ಒಂದು ಪಹಣಿ ತೆಗೆದುಕೊಳ್ಳಲು ಖರ್ಚು ಮಾಡುತ್ತಿದ್ದ. ಇದನ್ನು ಈಗ ಹೋಬಳಿಗೆ ವಿಸ್ತರಿಸಿದ್ದೇವೆ. ಅದನ್ನು ಬೇರೆ ಒಂದು ಏಜೆನ್ಸಿ ಮೂಲಕ ಮಾಡಿಸುವಂಥ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದು ಸಫಲ ಆದ ಮೇಲೆ ಇನ್ನೂ ಅದನ್ನು ವಿಸ್ತರಣೆ ಮಾಡುವುದಕ್ಕೆ ನೀವು ಕೊಟ್ಟಂಥ ಸಲಹೆ ಬಗ್ಗೆ ಯೋಚನೆ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ : ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲೂ, ಎರಡೂ ಜಾಗದಲ್ಲಿ ಸಿಗುವ ಹಾಗೆ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ : ಎ.ಪಿ. ಎಂ.ಸಿ.ಗೆ ಕೊಟ್ಟು ಬಿಡಿ, ಅವರು ಐದು ರೂಪಾಯಿ ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಕೆಲವು ಹೋಬಳಿಗಳು ತಾಲ್ಲೂಕುಗಳಿಗೆ ಹೋಗುವುದಕ್ಕಿಂತ ದೂರವಾಗಿವೆ. ಎರಡು ಪಟ್ಟಿನಷ್ಟು ಬಸ್‌ಛಾರ್ಜ್ ಇರುತ್ತದೆ. ನಮ್ಮಲ್ಲೇ ಉದಾಹರಣೆಗೆ ಧವಳಗಿ, ಮುದ್ದೇಬಿಹಾಳಕ್ಕೆ ಬಂದು ದಾವಳಗಿಗೆ ಹೋಗಬೇಕು. ಆದ್ದರಿಂದ ಮಟ್ಟದ್ದು ಪಂಚಾಯಿತಿ ಮಟ್ಟ ಎಂದು ಮಾಡುವುದು ಸೂಕ್ತ.

ಶ್ರೀ ಡಿ.ಆರ್. ಪಾಟೀಲ್ : ಗವರ್ನಮೆಂಟ್ ಆಫ್ ಇಂಡಿಯಾದವರು, ಗ್ರಾಮ ಪಂಚಾಯಿತಿ ಮಟ್ಟಕ್ಕೆ ಕಂಪ್ಯೂಟರೀಕರಣ ತರಬೇಕೆಂದು ಒಂದು ಯೋಜನೆ ಹಾಕಿಕೊಂಡಿದ್ದಾರೆ. ಅದರಲ್ಲಿ ಸಾಕಷ್ಟು ಹೆಲ್ಪ್ ಮಾಡುತ್ತಾರೆ ಈಗ. ಅದಕ್ಕೆ ತಾವು ದಯವಿಟ್ಟು ಪಂಚಾಯಿತಿ ಮಟ್ಟಕ್ಕೆ ಬನ್ನಿ ಸಾಕು. ಹೋಬಳಿ ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಮತ್ತೊಂದು ಸಾರಿ ಪರಿಶೀಲನೆ ಮಾಡಿ. ನಮ್ಮ ದೃಷ್ಟಿಯಲ್ಲಿ ಪಂಚಾಯಿತಿಯಲ್ಲಿ ಅಥವಾ ವಿಲೇಜ್ ಅಕೌಂಟೆಂಟ್ ಸರ್ಕಲ್‌ನಲ್ಲಿ ಮಾಡುವುದು ಒಳ್ಳೆಯದು. ನಾನು ತಿಳಿದ ಮಟ್ಟಿಗೆ, ತಾವೇನು 700 ಚಿಲ್ಲರೆ ಹೋಬಳಿ ಬಗ್ಗೆ ಹೇಳುತ್ತೀರಿ, ಹೋಬಳಿಗೆ ಹೋಗಬೇಕೆಂದರೆ ಸುಮಾರು 400, 500 ಹೋಬಳಿ ಆದರೂ ತಾಲ್ಲೂಕು ಕೇಂದ್ರಕ್ಕೆ ಒಂದು ಭಾಗದ ಜನ ಬಂದು ಹೋಗಬೇಕಾಗುತ್ತದೆ. ಯಾವುದೇ ಒಂದು ಹೋಬಳಿ ಸುತ್ತ ಹೋಬಳಿ ಮಾಡಲಿಲ್ಲ ಹಿಂದಿನ ಕಾಲದಲ್ಲಿ. ಅದು ಎರಡು ಭಾಗ ಮೂರು ಭಾಗ ಆಗಿರುತ್ತದೆ. ಅದನ್ನು ತಾವು ರೀಕನ್ಸಿಡರ್ ಮಾಡಬೇಕು. ಒಣ ಭೂಮಿ ಅಭಿವೃದ್ಧಿಗೆ 50,000 ಕೃಷಿ ಹೊಂಡಗಳ ನಿರ್ಮಾಣ ಎಂದು ತಾವು ಹೇಳಿದಿರಿ. ಈ ಒಣ ಭೂಮಿ ಕಾನ್‌ಸೆಪ್ಟನ್ನು ಬರೀ ಕೃಷಿ ಹೊಂಡಗಳಿಗೆ ತಾವು ತಂದು ನಿಲ್ಲಿಸಬಾರದು. ಕೃಷಿ ಹೊಂಡಗಳನ್ನು ಯಥೇಚ್ಛವಾಗಿ ಮಾಡಿ, ಕೃಷಿ ಹೊಂಡಗಳನ್ನು ಏಕೆ ಇಷ್ಟೊಂದು ಮಾಡಿದ್ದಾರೆ ಎಂದು ಟೀಕೆ ಮಾಡಿಸಿಕೊಂಡವರು ನಾವು. 10,000 ರೂಪಾಯಿಗಳಿಗೆ ಆಗಬೇಕಾಗಿರುವ ಕೃಷಿ ಹೊಂಡಕ್ಕೆ ನಿಮ್ಮ ಇಲಾಖೆಯವರು 25,000 ರೂಪಾಯಿ ಇಟ್ಟಿದ್ದಾರೆ. ಇವತ್ತು ಯಾರೂ ಕೈಯಲ್ಲಿ ತೆಗೆಯುವುದಿಲ್ಲ. ಜೆಸಿಬಿ ಯಂತ್ರ ಉಪಯೋಗಿಸಿ ಹೊಂಡಗಳನ್ನು ತೆಗೆಯುತ್ತಾರೆ. 6,500 ರೂಪಾಯಿಗಳಿಗೆ ನಾವು ಇವತ್ತು ಕೃಷಿ ಹೊಂಡಗಳನ್ನು ಮಾಡಿಸಿದ್ದೇವೆ. ಲೂಟಿ ಆಗಿಬಿಡುತ್ತದೆ ಇದು. ನಾನು ನಿಮಗೆ ಮಾಹಿತಿ ಕೊಡುತ್ತಿದ್ದೇನೆ. 15000 ರೂಪಾಯಿ ಕೊಟ್ಟು ಕೃಷಿ ಹೊಂಡ ಮಾಡಿಸಿದಾಗಲೂ ನಾನು ನೋಡಿದೆ. ಆಮೇಲೆ ನಾನೇ ಕೂತು ಏತಕ್ಕೆ ಇಷ್ಟು ಖರ್ಚು ಬರುತ್ತದೆ.

ಜೆಸಿಬಿ ಹೈರ್ ಮಾಡಿಕೊಂಡು ಮಾಡುತ್ತಿದ್ದೀರಿ, ಸುಳ್ಳು ಲೆಕ್ಕ ಬರೆದು ಜನಗಳ ಹತ್ತಿರ ಕೆಲಸ ಮಾಡಿಸುತ್ತೇವೆ ಎಂದು ತಿಳಿದುಕೊಂಡು ನೋಡಿ ಸರಿಯಾಗಿ ಫಿಕ್ಸ್ ಮಾಡಿದರೆ, 6,500 ರೂಪಾಯಿಗಳಿಗೆ ನಮ್ಮಲ್ಲಿ ಇವತ್ತು ಕೃಷಿ ಹೊಂಡಗಳು ಆಗುತ್ತಿವೆ. 25,000 ರೂಪಾಯಿಗಳನ್ನು ಎನ್‌ವಿಸೇಜ್ ಮಾಡುತ್ತೀರಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಯಾಗಿದ್ದಾಗ ಇದರ ಬಗ್ಗೆ ಒಂದು ಆಜ್ಞೆಯನ್ನು ಮಾಡಿ ಇಟ್ಟಿದ್ದೆ. ಇದು ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಜೆಸಿಬಿ ಯಂತ್ರದಲ್ಲಿ ಸುಮಾರು 6,500 ರಿಂದ 7,000 ರೂಪಾಯಗಳವರೆಗೆ ಆಗುತ್ತದೆ. ಬೀದರ್ ಜಿಲ್ಲೆಯ ಹುಡಿಗೆ ಎನ್ನುವ ಊರಿಗೆ ನಾನು ಒಂದು ಸಾರಿ ಹೋಗಿ ನೋಡಿದಾಗ, ಸುಮಾರು 106 ಹೊಂಡಗಳು ಮಾಡಿದ್ದರು. ಅಲ್ಲಿ ಜೆಸಿಬಿಯಲ್ಲಿಯೇ ಮಾಡಿದ್ದರು. ನಾವು ಹೇಳಿದ್ದೆವು ನಿವು ಲೇಬರರ್ಸ್‌ನ್ನೂ ಉಪಯೋಗಿಸಿ ಮಾಡಿ ಎಂದು. ನಮ್ಮ ಕಾನ್‌ಸೆಪ್ಟ್ ಇರುವುದು, ಅಲ್ಲಿ ಹೊಂಡ ಇರುವುದು ನೀರನ್ನು ಹಿಂಗಿಸುವ ಪದ್ಧತಿಗೋಸ್ಕರ. ಅದನ್ನು ನಾವು ಬರೀ ಲೇಬರ್ ಎಂದು ತಲೆಗೆ ಇಟ್ಟುಕೊಂಡು ಮಾಡುವುದು ಬೇಡ. ಇದನ್ನು 6,500 ರಿಂದ 7,000 ರೂ. ಗೆ ಒಂದು 500 ರೂಪಾಯಿ ಹೆಚ್ಚು ಕಡಿಮೆ ಆಗಬಹುದು. ಇದನ್ನು ಜೆಸಿಬಿಯಲ್ಲಿ ಮಾಡಿದರೆ ಆಗುತ್ತದೆ, ಈಗಾಗಲೇ ನಾನು ಮಂತ್ರಿಯಾಗಿದ್ದಾಗ ಅದಕ್ಕೆ ಒಂದು ಆದೇಶ ಕೂಡ ಹೊರಡಿಸಿದ್ದೆ. ಇದನ್ನು ನೋಡಿ, ನಿಮಗೆ ಇನ್ನೂ ಒಂದೆರಡು ಸಾವಿರ ರೂ. ಜಾಸ್ತಿ ಆದರೂ ಪರವಾಗಿಲ್ಲ, ಇದು ಲೇಬರ್ ಓರಿಯಂಟೆಡ್ ಎಂದು ಮಾಡಿದರೆ, ಅವರು ಮಾಡುವುದು ಜೆಸಿಬಿಯಲ್ಲಿ ಆದರೆ ಲೆಕ್ಕ ಬರೆಯುವುದು 25,000 ರಿಂದ 30,000 ರೂ. ಎಂದು ಇದು ಆಗಬಾರದು ಎಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಬಿ. ಶಿವರಾಂ : ಅದಕ್ಕೆ ಮಾನ್ಯ ಉಪಾಧ್ಯಕ್ಷರೆ, ಶೆಡ್ಯೂಲ್ ಆಫ್ ರೇಟ್ಸ್ ಮ್ಯಾನ್ಯುಯಲ್‌ನ್ನು ಬದಲಾವಣೆ ಮಾಡಿದರೆ ಸಾಕು ಅಷ್ಟೆ. ಜೆಸಿಬಿಗಳಿಂದ ಮಾಡುವುದರ ಮೂಲಕ....

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಆಗ ಸ್ಕೇರ್‌ಸಿಟಿ ಕೆಳಗೆ ತೆಗೆದುಕೊಂಡಿದ್ದರಿಂದ ಮಾಡುವುದಕ್ಕಾಗಲಿಲ್ಲ.

ಶ್ರೀ ಬಿ. ಶಿವರಾಂ : ಜೆಸಿಬಿ ಉಪಯೋಗಿಸಿ 10,000 ರೂಪಾಯಿ ನಿಗದಿ ಮಾಡಿದರೆ ಉತ್ತಮವಾದ ಕೃಷಿ ಹೊಂಡ ಮಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಕನೆಕ್ಟಿವಿಟಿಯನ್ನು ನೀವು ನಿರ್ಮಾಣ ಮಾಡಬೇಕು. ವಾಟರ್ ಶೆಡ್ ಮಾಡಿ ಎಲ್ಲೋ ಒಂದು ಕಡೆ ನಾವು ನೀರು ಶೇಖರಣೆ ಮಾಡುವುದಕ್ಕೆ ಆಗುವುದಿಲ್ಲ. ಬಿದ್ದ ನೀರನ್ನು ಹನಿ ನೀರನ್ನು ತಡೆಯಬೇಕು, ತಡೆದ ನೀರನ್ನು ಹಿಂಗಿಸಬೇಕು, ಹೆಚ್ಚಾದ ನೀರನ್ನು ಹರಿಸಬೇಕು ಎಂದು ನಾವು ಕಾರ್ಯಕ್ರಮ ಮಾಡುವುದು. ಕೃಷಿ ಹೊಂಡ ಮಾಡಿ ನಾವು ಇಡೀ ಭೂಮಿಯನ್ನು ಇವತ್ತು ಸಂರಕ್ಷಣೆ ಮಾಡುವುದು ಅಷ್ಟೊಂದು ಸುಲಭವಾಗುವುದಿಲ್ಲ. ಅಷ್ಟು ಹತ್ತಿರದಲ್ಲಿ ಕೃಷಿ ಹೊಂಡಗಳನ್ನು ಮಾಡುವುದಕ್ಕೂ ಆಗುವುದಿಲ್ಲ. 10 ಮೀಟರ್ ಉದ್ದ, 10 ಮೀಟರ್ ಅಗಲ, ಮೂರು ಮೀಟರ್, ನಾಲ್ಕು ಮೀಟರ್ ಆಳ ಕೃಷಿ ಹೊಂಡಗಳನ್ನು ಎಲ್ಲರ ಜಮೀನುಗಳಲ್ಲಿಯೂ ಮಾಡುವುದಕ್ಕಾಗುವುದಿಲ್ಲ. ಅಂತಹ ಕಡೆ ತಾವು ಮುಂದುವರೆಸಲೇಬೇಕು. ಸರ್ಕಾರ ಯಾವಾಗಲೂ ಬಡವರನ್ನು ಯೋಚನೆ ಮಾಡಿ ಕಾರ್ಯಕ್ರಮಗಳನ್ನು ಮಾಡಬೇಕು. ಐದು ಗುಂಟೆ, 10 ಗುಂಟೆ,

20 ಗುಂಟೆ, ಒಂದು ಎಕರೆ ಇರುವವನು, ಕೃಷಿ ಹೊಂಡ ಹೊಡಿ ಎಂದರೆ ಎಲ್ಲಿ ಹೊಡೆಯುತ್ತಾನೆ? ಯಾರೋ ದೊಡ್ಡ ರೈತರು ನಾವು ಹೊಡೆಯಬಹುದು.

ಶ್ರೀ ಬಿ. ಶಿವರಾಂ :– ವಾಟರ್‌ಶೆಡ್ ಕಾನ್ಸೆಪ್ಟ್ ಏನಿದೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಹೇಳಿ. ಅದರಲ್ಲಿ ಎಲ್ಲಾ ಆಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎರಡನೆಯದಾಗಿ ಮಾನ್ಯ ಉಪಾಧ್ಯಕ್ಷರೆ, ತಳಿ ಸಂರಕ್ಷಣೆಗೆ ಆದ್ಯತೆ ಕೊಡುತ್ತೇವೆಂದು ಹೇಳಿ, ಮೊದಲನೇ ಸಲ ಇಲ್ಲಿ ಕೇಳುತ್ತಿದ್ದೇನೆ. ರಾಜ್ಯದಲ್ಲಿ ಯಾವ ತಳಿಯನ್ನು ನಾವು ಇವತ್ತು ಬ್ರೀಡಿಂಗ್ ಕಮಿಟಿ ಮುಂದೆ ಇಟ್ಟುಕೊಂಡು ಈ ತಳಿ ಇರಬೇಕೆಂದು ಹೇಳಿ ನಿರ್ಧಾರ ಮಾಡಿದ್ದೇವೆ ಎಂಬುದು ಗೊತ್ತಾಗಬೇಕು, ಅದು ಮಿಲ್ಕ್ ಅನಿಮಲ್ ಅಥವಾ ಮಾಂಸಕ್ಕೋಸ್ಕರ ಮಾಡುವುದಾ ಎಂದು. ಎಲ್ಲಾ ಪ್ರಾಣಿಗಳಲ್ಲಿ ಎರಡೆರಡನ್ನು ನಾವು ಮಾಡುತ್ತೇವೆ. ಹಸು ತೆಗೆದುಕೊಂಡರೆ, ತಿನ್ನುವುದಕ್ಕೆ ಒಂದು ಹಸು, ಹಾಲು ಕರೆಯುವುದಕ್ಕೆ ಒಂದು ಹಸು, ಕುರಿ ತೆಗೆದುಕೊಂಡರೆ, ಉಣ್ಣೆಗೆ ಒಂದು ಕುರಿ, ಮಾಂಸಕ್ಕೆ ಒಂದು ಕುರಿ ಎಂದು. ಇಂತಹವು ದಿಢೀರ್ ಕಾರ್ಯಕ್ರಮಗಳು ಆಗಬಾರದು. ಒಂದು ಕಾರ್ಯಕ್ರಮಕ್ಕೆ ಅಥವಾ ಒಂದು ರಾಜ್ಯಕ್ಕೆ ನಾವು ಒಂದು ತಳಿ ಬಗ್ಗೆ ಮಾತನಾಡುತ್ತೇವೆಂದರೆ ವಿಸ್ತಾರವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿಗಳನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಿದರೆ, ಅದು ಎಕ್ಸ್‌ಟಿಂಕ್ಟ್ ಆಗುತ್ತಿದೆ ಈಗ. ಹಾಲು ಉತ್ಪಾದನೆಗೇ ಹೆಚ್ಚು ಮಹತ್ವ ಕೊಟ್ಟು, ಹೋರಿಗಳ ಅನಿವಾರ್ಯ ಇವತ್ತು ನಮಗೆ ಬೇಕಿಲ್ಲ, ಟ್ರ್ಯಾಕ್ಟರ್‌ಲ್ಲಿ ಕಲ್ಟಿವೇಷನ್ ಮಾಡಿಕೊಳ್ಳುತ್ತೇವೆ ಎನ್ನುವುದು ಬಂದ ಮೇಲೆ, ಗಂಡು ಕರು ಹುಟ್ಟಿದರೆ ತಕ್ಷಣ ಯಾರಿಗಾದರೂ ಮಾರಾಟ ಮಾಡುವ ಕಾಲದಲ್ಲಿ, ಅಮೃತ ಮಹಲ್ ಮತ್ತು ಹಳ್ಳಿಕಾರ್ ತಳಿಗಳನ್ನು ನಾವು ಮತ್ತೆ ಸಂರಕ್ಷಣೆ ಮಾಡಿ ಬೆಳೆಸುತ್ತೇವೆ ಎನ್ನುವುದು ಕಷ್ಟವಾಗುತ್ತದೆ. ಮಾಡಲೇಬೇಕೆಂದರೆ ಅದರಲ್ಲಿ ಸೆಲೆಕ್ಟೆಡ್ ಅನಿಮಲ್ಸ್ ಇಟ್ಟುಕೊಂಡು ಮಾಡಬೇಕಾಗುತ್ತದೆ. ಇಂಥದ್ದನ್ನೆಲ್ಲ ಸ್ವಲ್ಪ ಹೆಚ್ಚು ಆಳವಾಗಿ ಅಧ್ಯಯನ ಮಾಡಿ ಒಂದು ಪಾಲಿಸಿಯನ್ನು ಮಾಡಬೇಕಾಗುತ್ತದೆ. ಈ ತಳಿಯನ್ನು ಸಂರಕ್ಷಣೆ ಮಾಡುವುದಕ್ಕೆ ಏನು ಆದ್ಯತೆ ಕೊಡುತ್ತೇವೆಂದು ಹೇಳುತ್ತೀರಿ, ದಯಮಾಡಿ ಆ ಫಾರಂಗಳ ಕಡೆಗೆ ಸ್ವಲ್ಪ ನೋಡಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು, ತುಮಕೂರು ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲಿ ಮತ್ತು ತುರುವೇಕೆರೆ ಕ್ಷೇತ್ರದಲ್ಲಿ ಅಮೃತ ಮಹಲ್ ಕಾವಲ್‌ಗಳು ಇವೆ. ಅಮೃತ ಮಹಲ್ ಕಾವಲ್‌ಗಳ ದುಸ್ಥಿತಿಯನ್ನು ನಾವು ಏನಾದರೂ ಯೋಚನೆ ಮಾಡಿದರೆ, ಅದರ ಅಭಿವೃದ್ಧಿಗೆ ಮೊದಲು ಆ ಕಾವಲುಗಳನ್ನು ಉಳಿಸಿಕೊಳ್ಳುವ ಕೆಲಸವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಮಾಡಬೇಕಾಗುತ್ತದೆ. ಅಲ್ಲಿ ಏನಾದರೂ ಮೇವು ಬೆಳೆಯುವುದು, ಜಾನುವಾರುಗಳನ್ನು ಸಾಕುವುದು, ಒಳ್ಳೊಳ್ಳೆ ತಳಿಗಳನ್ನು ಕೊಂಡುಕೊಂಡು ಬರುವುದು, ಇದರ ಬಗ್ಗೆ ಗಮನ ಹರಿಸಬೇಕು. ಏಕೆಂದರೆ, ಬಹುಶಃ ಶ್ರೀನಿವಾಸಗೌಡರಿಗೆ ಗೊತ್ತು. ಸಿದ್ದಗಂಗಾ ಮಠದಲ್ಲಿ ಈ ವರ್ಷ ಎತ್ತುಗಳ ಒಳ್ಳೆಯ ತಳಿ 1.15 ಲಕ್ಷ ರೂಪಾಯಿಗಳಿಗೆ ಮಾರಾಟ ಆಯಿತು. ಸುತ್ತೂರಿನಲ್ಲಿ 1.65 ಲಕ್ಷ ರೂ.ಗೆ ಮಾರಾಟವಾಯಿತು. 1.65 ಲಕ್ಷ ರೂಪಾಯಿಗಳಿಗೆ ಒಂದು ಜೊತೆ ಎತ್ತು ಮಾರಾಟ ಆಗಿರುವುದು, 1.65 ಲಕ್ಷ ರೂಪಾಯಿಗಳಿಗೆ ಒಂದು ಜೊತೆ ಹೋರಿ ಮಾರಾಟ ಮಾಡುವ ಸ್ಥಿತಿ ಕಾರಣ ಕೇಳಲಿಲ್ಲ. ಅದಕ್ಕೆ ನನ್ನ ಭಾವನೆ ಏನು? ಮಾನ್ಯ ಯಡಿಯೂರಪ್ಪನವರಿಗೆ ಬಹುಶಃ ಈ ಬಜೆಟ್‌ನ್ನು ಸಮಗ್ರವಾಗಿ ಇನ್ನೂ ಯೋಚನೆ ಮಾಡಿ ಅಥವಾ ಮಂಥನ ಮಾಡಿ ಮಾಡಲು

ಇವತ್ತು ಕರ್ನಾಟಕದಲ್ಲಿ ಇದೆ. ಆ ಮಟ್ಟದ ತಳಿಗಳನ್ನು ಉಳಿಸಿಕೊಳ್ಳಬೇಕಾಗಿತ್ತು, ನಾವು ಎಡವಿದ್ದೇವೆ. ಆ ಕಡೆ ಹೆಚ್ಚಿನ ಒತ್ತು ಕೊಟ್ಟು ಸರಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ತೋಟಗಾರಿಕೆ ಬಗ್ಗೆ, ಹೇಳಬೇಕೆಂದರೆ ನಾವು ಹೇಳಬೇಕಾದುದು ಬಹಳ ಇದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ನೋಡಬೇಕು. ತೋಟಗಾರಿಕಾ ಕ್ಷೇತ್ರ ಸರ್ವ ನಾಶವಾಗುವ ಸ್ಥಿತಿಗೆ ಬಂದು ಬಿಟ್ಟಿದೆ. ನಾನು ತಮಗೆ ನನಗೆ ಸಂಬಂಧಪಟ್ಟ ಒಂದು ಸಣ್ಣ ಮಾಹಿತಿಯನ್ನು ಕೊಡುತ್ತೇನೆ. ತೋಟಗಾರಿಕೆಯಲ್ಲಿ, 4,58,410 ಎಕರೆ ತೆಂಗು ಬೆಳೆಯುವ ಪ್ರದೇಶ ಇತ್ತು. ಈಗ 4,58, 869 ಎಕರೆ ತೆಂಗು ಬೆಳೆಯುವ ಪ್ರದೇಶ ಇದೆ. ಈ ತೆಂಗು ಬೆಳೆ ಸರ್ವನಾಶದ ಅಂಚಿಗೆ ಬಂದು ಬಿಟ್ಟಿದೆ. ಹೋದ ಸಾರಿ ಬಜೆಟ್‌ನಲ್ಲಿ ಮಾತನಾಡಬೇಕಾದರೆ, ಎಲ್ಲಾ ರೀತಿಯ ಪೀಡೆಗಳು ಅದಕ್ಕೆ ಬಂದವು. ಆದರೆ ನಾವು ಏನು ಮಾಡಿದ್ದೇವೆಂದು ಗೊತ್ತಾಗಲಿಲ್ಲ. ಇದಕ್ಕೆ ನಾವು ಮಾಡಿರುವುದು, 2003–04ನೇ ಸಾಲಿನಲ್ಲಿ ನುಸಿ ಪೀಡೆಗೆ ತೆಂಗು ಮರಗಳಿಗೆ ಚಿಕಿತ್ಸೆಗಾಗಿ 1.32 ಕೋಟಿ ರೂಪಾಯಿ ಮತ್ತು 86.7 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 2004–05ನೇ ಸಾಲಿನಲ್ಲಿ ನುಸಿ ಪೀಡಿತ ತೆಂಗು ಮರಗಳ ಚಿಕಿತ್ಸೆಗಾಗಿ ಮತ್ತು ಪ್ರಾತ್ಯಕ್ಷಿತೆಗಾಗಿ 80 ಲಕ್ಷ ಮೊತ್ತವನ್ನು ಹಂಚಿಕೆ ಮಾಡಲಾಗಿದೆ. 2005–06ರಲ್ಲಿ 80.85 ಲಕ್ಷವನ್ನು ಹಂಚಿಕೆ ಮಾಡಲಾಗಿದ್ದು ನವೆಂಬರ್ 2005ಕ್ಕೆ 25.39 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ, ನಾಲ್ಕೂವರೆ ಲಕ್ಷ ಅಂದರೆ 4,58,869 ಎಕರೆ ತೆಂಗು ಇಟ್ಟುಕೊಂಡು ನುಸಿ ಪೀಡೆ ಬಂದಿದೆ ಎಂದರೆ, ಈ ರಾಜ್ಯದಲ್ಲಿ ಮಾಡಿರುವ ಖರ್ಚು ನವೆಂಬರ್‌ವರೆಗೆ 25,39,000 ರೂಪಾಯಿಗಳು. ಇನ್ನು ಸನ್ಮಾನ್ಯ ಕಲಾಂರವರ ಬಗ್ಗೆ ನಾವು ಇಲ್ಲಿ ಮಾತನಾಡಬೇಕೆಂದರೆ, ತೋಟಗಾರಿಕೆ ಬೆಳೆ ಬಗ್ಗೆ ಬಹಳ ಆಸಕ್ತಿ ವಹಿಸಬೇಕು ಎಂದು ಇದೆ. ನಾನು ಈ ಸಮಯದಲ್ಲಿ ಸನ್ಮಾನ್ಯ ಯಡಿಯೂರಪ್ಪನವರಿಗೆ ಕೇಳುವುದಕ್ಕೆ ಬಯಸುತ್ತೇನೆ, ನಮ್ಮದು ಪ್ರೆಸ್ಟೀಜಿಯಸ್. ತಿಪಟೂರು ತೆಂಗು ಏನು ಇತ್ತು, copra ಬರುತ್ತಿತ್ತು, ಈ ರಾಜ್ಯದಿಂದ ರಫ್ತಾಗುತ್ತಿದ್ದಂತಹ ಪ್ರಮುಖವಾದ ತೋಟಗಾರಿಕಾ ಬೆಳೆ. ಕೋಲಾರದಲ್ಲಿ ಏನು ಮಾವು ಇತ್ತು, ಈ ರಾಜ್ಯದಿಂದ ಪ್ರಮುಖವಾಗಿ ಹೊರ ರಾಜ್ಯಗಳಿಗೆ ಹೋಗುತ್ತಿದ ಬೆಳೆ. ದಕ್ಷಿಣ ಕನ್ನಡದಲ್ಲಿ ಗೋಡಂಬಿ ಏನಿತ್ತು, ಈ ರಾಜ್ಯದಿಂದ ಆಚೆ ಹೋಗುತ್ತಿದ್ದ ಪ್ರಮುಖವಾದ ತೋಟಗಾರಿಕಾ ಬೆಳೆ. what has been done to all this? - - - ಈ ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕೆ ನಾವು ಏನು ಮಾಡಿದೆವು? ಎಲ್ಲಾದರೂ ಒಂದು ಕಡೆ ನಾವು ಆಲೋಚನೆ ಮಾಡಬೇಕಾಗುತ್ತದೆ. ತೆಂಗು ವಿನಾಶದ ಕಡೆ ಬರುತ್ತಿದೆ, ಮಾವು ಬೆಳೆದಿರುವವರು ಇವತ್ತು ವಿನಾಶದ ದಿಕ್ಕು ತಲುಪುತ್ತಿದ್ದಾರೆ. ನಮಗೆ ಸ್ಪರ್ಧಿಗಳು ಜಾಸ್ತಿಯಾಗುತ್ತಿದ್ದಾರೆ. ಅಲ್ಲಿ ಏನ್ ಕನ್‌ಫ್ಯೂಶನ್ ನಡೆಯುತ್ತಿದೆ? ನಮಗೆ ಅದೇನು ಎಂದು ಹೇಳಿ. ಮಾನ್ಯ ಉಪಾಧ್ಯಕ್ಷರೆ, ಅಲ್ಲೇನು ನಡೆಯುತ್ತಿದೆ ಎಂಬುದನ್ನಾದರೂ ಹೇಳಿ ಸಾರ್, ನನ್ನ ಭಾಷಣವನ್ನಾದರೂ ನಾನು ನಿಲ್ಲಿಸುತ್ತೇನೆ. ನೀವು ನೀವೇ ಮಾತನಾಡಿಕೊಳ್ಳುತ್ತೀರಿ, ಅವರೂ ಕೂಡ ಕುಳಿತುಕೊಳ್ಳುವುದಿಲ್ಲ. ಇದರಿಂದಾಗಿ ನನಗೆ ಮಾತನಾಡುವುದಕ್ಕೆ ಮೂಡ್ ಬರುತ್ತಿಲ್ಲ.

ಉಪಾಧ್ಯಕ್ಷರು : ಈಗ ಲಂಚ್‌ಗೆ ಅಡ್ಜರ್ನ್ ಮಾಡಿ ಮತ್ತೆ 2–30ಕ್ಕೆ ಸೇರೋಣ ಅಂತ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾಡಿ ಸಾರ್. ಅಷ್ಟು ಹೇಳಿದರೆ ಸಾಕು. ಅದಕ್ಯಾಕೆ ಹೀಗೆ ಗೊಂದಲ? ನಾನು ಆಮೇಲೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು 3–00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 31 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3–00 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 3.21ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು (ಶ್ರೀ ಎಸ್. ವೈ. ಗೋಪಾಲಕೃಷ್ಣ) ಅಧ್ಯಕ್ಷ ಪೀಠವನ್ನಲಂಕರಿಸಿದರು.)

5. ಉಪಾಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮುಂದಿನ ಸಾಲಿನಲ್ಲಿ ಮಂತ್ರಿಗಳು ಇಲ್ಲದಿರುವ ಬಗ್ಗೆ.

ಶ್ರೀ ಕೆ. ಶ್ರೀನಿವಾಸಗೌಡ : ಸನ್ಮಾನ್ಯ ಉಪಾಧ್ಯಕ್ಷರೇ, ಮುಂದಿನ ಸಾಲಿನಲ್ಲಿ ಯಾರೂ ಮಂತ್ರಿಗಳಿಲ್ಲ ಎಂದು ನಿನ್ನೆ ತಾನೇ ನಾವೆಲ್ಲಾ ಆಚೆ ಹೋದೆವು. ಇವತ್ತೂ ಸಹ ಮೊದಲನೇ ಲೈನಿನಲ್ಲಿ ಅದೇ ಪರಿಸ್ಥಿತಿ ಇದೆ. ಏನಿದು?

ಶ್ರೀ ಆರ್. ವಿ. ದೇಶಪಾಂಡೆ : ಹಣಕಾಸು ಸಚಿವರು ಇರಬೇಕಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ : ಇವರಿಗೆ ಅಸೆಂಬ್ಲಿ ನಡೆಸಬೇಕು ಎನ್ನುವಂತಾದೇನಾದರೂ ಇದೆಯೋ?

(ಗೊಂದಲ)

(ಏಕಕಾಲದಲ್ಲಿ ಅನೇಕ ಸದಸ್ಯರು ಮಾತನಾಡತೊಡಗಿದರು)

ಶ್ರೀ ಹೆಚ್. ಡಿ. ಬಸವರಾಜು : ನಾವೂ ಈ ಸದನದಲ್ಲಿದ್ದೇವೆ. ನೀವು ಅಧಿಕಾರದಲ್ಲಿದ್ದಾಗ ಎಲ್ಲಾ ಮಂತ್ರಿಗಳೂ ಬಂದು ಕುಳಿತುಕೊಳ್ಳುತ್ತಿದ್ದರೇ?

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನಾವೂ ನೋಡಿದ್ದೇವೆ ಸ್ವಾಮಿ, ನಿಮ್ಮವರು ಮಂತ್ರಿಗಳಾಗಿದ್ದಾಗ ಎಷ್ಟೆಷ್ಟು ಜನ ಬಂದು ಕುಳಿತುಕೊಳ್ಳುತ್ತಿದ್ದರು ಎಂದು ನಾವು ನೋಡಿದ್ದೇವೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ನೀವು ಇಲ್ಲಿದ್ದಾಗ, ಮಂತ್ರಿಗಳಿಲ್ಲ, ಎಂದು ಹೇಳುತ್ತಿದ್ದಿರಿ. ಈಗ ಇಲ್ಲಿ ಅಧಿಕಾರಿಗಳು ಸಹಾ ಇಲ್ಲ. ಏನು ಮಾಡಬೇಕು? Sir, you please pull-up the officers...

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನೀವು ಈ ಕಡೆಯಿಂದ ಆ ಕಡೆಗೆ ಹೋದ ತಕ್ಷಣ ಎಲ್ಲಾ ಮಂತ್ರಿಗಳು ಬಂದು ಕುಳಿತುಕೊಳ್ಳಬೇಕೇ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಯಡಿಯೂರಪ್ಪನವರು ಈ ಕಡೆ ಇದ್ದಾಗ, ಮಂತ್ರಿಗಳಿಲ್ಲ, ಅಧಿಕಾರಿಗಳಿಲ್ಲ ಎಂದು ಹತ್ತಾರು ಸಾರಿ ಹೇಳುತ್ತಿದ್ದರು. ಇವತ್ತು ಅವರಿಗೆ ಏನಾಗಿದೆ?

ಉಪಾಧ್ಯಕ್ಷರು : ಬರುತ್ತಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು :- ನೀವೂ ಕೇಳಿ. ಬೇಡ ಎನ್ನುವುದಿಲ್ಲ. ಅವರು ಅಧಿಕಾರ ನಡೆಸಿದುದನ್ನು ನಾವು ನೋಡಿಲ್ಲವೇ? ಅವರಲ್ಲಿ ಎಷ್ಟು ಜನ ಮಂತ್ರಿಗಳು ಬರುತ್ತಿದ್ದರು ಎಂದು ನಾವು ನೋಡಿಲ್ಲವೇ?

(ಗೊಂದಲ)

ಉಪಾಧ್ಯಕ್ಷರು :- ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು :- ಕೇಳಬೇಕಾದರೂ ಒಂದು ಅರ್ಥ ಬೇಕಲ್ಲವೇ? ಯಾರು ಯಾರನ್ನು ಕೇಳುವುದು? ಇಲ್ಲಿ ಕುಳಿತಾಗ ಒಂದು ಮಾತು, ಅಲ್ಲಿ ಕುಳಿತಾಗ ಒಂದು ಮಾತೇ? ಇದು ಸಂಪ್ರದಾಯವಲ್ಲ. ನೀವು ಈ ಕಡೆ ಕುಳಿತಾಗ ಏನು ಮಾಡಿದ್ದಿರೋ, ಅದನ್ನೇ ನಾವು ಮಾಡುತ್ತಿರುವುದು.

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಹೆಚ್.ಡಿ. ಬಸವರಾಜು :- ಸುಮ್ಮನೇ ಬರೀ ಆರೋಪ, ಬರೀ ಮಾತಿಗೋಸ್ಕರ ಮಾತನಾಡುವುದು ಬೇಡ.

(ಗೊಂದಲ)

ಉಪಾಧ್ಯಕ್ಷರು :- ಬಸವರಾಜುರವರೇ, ಒಂದು ನಿಮಿಷ ....

ಶ್ರೀ ಕೆ. ಶ್ರೀನಿವಾಸಗೌಡ :- ಅವರೂ ನಮಗೆ ಬೆಂಬಲ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ಅವರು ಇಲ್ಲಿ ಕುಳಿತಿದ್ದಾಗ, ಇಲ್ಲಿ ಎಷ್ಟು ಜನ ಮಂತ್ರಿಗಳಿರುತ್ತಿದ್ದರು ಎನ್ನುವುದು ನಮಗೆ ಗೊತ್ತಿಲ್ಲವೇ?

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ :- ಆಫೀಸರ್ಸ್ ಗ್ಯಾಲರಿಯಲ್ಲಿ ಆಫೀಸರ್ಸ್ ಯಾರೂ ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಅವರನ್ನು ಸ್ವಲ್ಪ ಬೇಗ ಕರೆಸಿ.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಅವರನ್ನು ಕರೆಸುತ್ತಿದ್ದೀರಲ್ಲವೇ? ಎಲ್ಲಿದ್ದಾರೆ ಅವರು?

ಉಪಾಧ್ಯಕ್ಷರು : ಚೀಫ್ ವಿಪ್ ಎಲ್ಲಿ ಹೋದರು?

ಶ್ರೀ ವಾಟಾಳ್ ನಾಗರಾಜ್ :- ಅವರನ್ನು ಕರೆಸುವುದಕ್ಕೆ ಎಲ್ಲಿಗೆ ಹೇಳಿ ಕಳುಹಿಸಿದ್ದೀರಿ? ಎಲ್ಲಿದ್ದಾರೆ ಅವರು? ಇಲ್ಲಿ ಒಬ್ಬರನ್ನು ಸಚೇತಕರು ಎಂದು ವ್ಯವಸ್ಥೆ ಮಾಡಿದ್ದಾರೆ. ಅವರ ಕರ್ತವ್ಯವೇನು?

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಮಾನ್ಯ ವಾಟಾಳರೇ, ಒಂದು ನಿಮಿಷ, ಮಾನ್ಯ ಉಪಾಧ್ಯಕ್ಷರೇ, ತಾವು ಲಂಚ್‌ಗೆ ಬ್ರೇಕ್ ಮಾಡುವುದಕ್ಕೆ ಮೊದಲು ಮೂರು ಗಂಟೆಗೆ ಸದನ ಸೇರಲಿದೆ

ಎಂದು ಹೇಳಿದ್ದಿರಿ. ಬೆಲ್ ಹಾಕಿದ ತಕ್ಷಣ ಅಧಿವೇಶನದಲ್ಲಿ ಹಾಜರಿರುವುದು ನಮ್ಮ ಕರ್ತವ್ಯ. ಏಕೆ ಪ್ರತಿ ದಿವಸ ಇಂಥ ಪ್ರಸಂಗಗಳಿಗೆ ಅವಕಾಶಕೊಡುತ್ತೀರಿ?

(ಈ ಹಂತದಲ್ಲಿ ಉಪ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು ಸದನಕ್ಕೆ ಆಗಮಿಸಿದರು)

ಉಪಾಧ್ಯಕ್ಷರು : ಬಂದರಲ್ಲಾ, ಟೆನ್ ಮಿನಿಟ್ಸ್ ಲೇಟ್‌ಆಗಿ ಬಂದಿದ್ದಾರೆ. ಈಗ ಒಂದು ಪ್ರಕಟಣೆ ಇದೆ.

6. ಪ್ರಕಟಣೆ

ವಿಷಯ: ಮಾನ್ಯ ಸದಸ್ಯರುಗಳಾದ ಶ್ರೀ ಯು.ಟಿ. ಷರೀದ್ ಮತ್ತು ಶ್ರೀ ಎಂ.ಟಿ.ಬಿ. ನಾಗರಾಜು ಅವರುಗಳಿಗೆ ಪ್ರಸಕ್ತ ಅಧಿವೇಶನದಲ್ಲಿ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಉಪಾಧ್ಯಕ್ಷರು : ದಿನಾಂಕ 16–3–2006ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದಲ್ಲಿ ಅನಾರೋಗ್ಯದ ಕಾರಣದಿಂದ, ಅಧಿವೇಶನ ಮುಕ್ತಾಯವಾಗುವವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ನೀಡುವಂತೆ ಮಾನ್ಯ ಸದಸ್ಯರುಗಳಾದ ಶ್ರೀ ಯು.ಟಿ. ಫರೀದ್ ಹಾಗೂ ಎಂ.ಟಿ.ಬಿ. ನಾಗರಾಜು ಅವರುಗಳು ಕೋರಿರುತ್ತಾರೆ.

ಉಪಾಧ್ಯಕ್ಷರು : ಈಗ ಮಾನ್ಯ ಮಾಧುಸ್ವಾಮಿಯವರು.

ಮಾನ್ಯ ಸದಸ್ಯರುಗಳು ಗೈರುಹಾಜರಾಗಲು ಸದನವು ಸಮ್ಮತಿಸುತ್ತದೆಯೇ?

ಸದನವು ಒಪ್ಪಿಗೆ ಸೂಚಿಸಿತು

ಉಪಾಧ್ಯಕ್ಷರು : ಮಾನ್ಯ ಸದಸ್ಯರುಗಳ ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

7. ವಿತ್ತೀಯ ಕಾರ್ಯಕಲಾಪ

2006–07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ:

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) (ಮುಂದುವರೆದ ಭಾಷಣ) : ಮಾನ್ಯ ಉಪಾಧ್ಯಕ್ಷರೇ, ನಾನು ತೋಟಗಾರಿಕಾ ಬೆಳೆಗಳ ಬಗ್ಗೆ ಮಾತನಾಡುತ್ತಾ, ತೆಂಗಿನ ಬಗ್ಗೆ ಹೇಳುತ್ತಿದ್ದೆ. ತೆಂಗಿನ ರೋಗ ನಿಯಂತ್ರಣಕ್ಕೆ ಸರ್ಕಾರ ಮಾಡಿರುವಂಥ ಕಾರ್ಯಕ್ರಮ ಅತ್ಯಲ್ಪ. ಈ ಕಡೆ ಹೆಚ್ಚು ಗಮನ ಕೊಡಬೇಕಾಗಿತ್ತು. 44 ಲಕ್ಷದ 89 ಸಾವಿರ ಎಕರೆ ಪ್ರದೇಶದಲ್ಲಿರುವಂಥ ತೆಂಗಿನ ನುಸಿ ರೋಗ ನಿವಾರಣೆಗೆ 24 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದರೆ ಅದರ ಗತಿಯೇನಾಗಬೇಕು? ಎರಡನೆಯದಾಗಿ, ಈಗ ತೆಂಗಿಗೆ ಬೆಲೆ ಬಹಳ ಕುಸಿದುಬಿಟ್ಟಿದೆ. ಇದು ಸನ್ಮಾನ್ಯ ಯಡಿಯೂರಪ್ಪನವರಿಗೆ ಗೊತ್ತೋ, ಇಲ್ಲವೊ? ಒಂಬತ್ತು ಸಾವಿರ ರೂಪಾಯಿಗಳಿದ್ದ ಕೊಬ್ಬರಿ ಧಾರಣೆ ಐದೂಮುಕ್ಕಾಲು ಸಾವಿರಕ್ಕೆ ಇಳಿದಿದೆ. ಮಾರ್ಕೆಟ್ ಇಂಟರ್‌ವೆನ್‌ಷನ್ ಆಗುತ್ತೇವೆ. ನಾವು ಸಪೋರ್ಟ್ ಪ್ರೈಸ್ ಕೊಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಈವರೆಗೆ ಕೊಬ್ಬರಿ ಬಗ್ಗೆ ಏನೂ

ಚಕಾರವನ್ನೇ ಎತ್ತಲಿಲ್ಲ. ಕೊಬ್ಬರಿ ಧಾರಣೆ ನೆಲಕ್ಕೆ ಕುಸಿದಿದೆ. ಇದರಿಂದ ಕೇವಲ ರೈತರಿಗೆ ಮಾತ್ರ ನಷ್ಟವಲ್ಲ. ರಾಜ್ಯದಿಂದ ಹೊರಗಡೆ ಹೋಗುತ್ತಿದ್ದಂಥ ಕೊಬ್ಬರಿಗೆ ಇದ್ದ ಹತ್ತು ಸಾವಿರ ರೂಪಾಯಿಗಲ ಧಾರಣೆ ಐದರಿಂದ ಐದೂವರೆ ಸಾವಿರ ರೂಪಾಯಿಗಳಿಗೆ ಒಂದೇ ಸಲಕ್ಕೆ ಇಳಿದರೆ, ತೆಂಗು ಬೆಳೆಯುವವರಿಗೆ ಜೀವನ ಮಾಡುವುದು ಕಷ್ಟವಾಗುತ್ತದೆ. ಅದರ ಜೊತೆಗೆ, ಅದರ ಮೇಲೆ ನಾಲ್ಕು ಪರ್ಸೆಂಟ್ ತೆರಿಗೆ ಇದೆ. ತಾವು ಆ ತೆರಿಗೆಯನ್ನು ತೆಗೆದುಹಾಕಿಬಿಟ್ಟು ಜೀರೋ ಲೆವೆಲ್‌ಗೆ ತರಬೇಕಾಗುತ್ತದೆ. ಎಲ್ಲಾ ರಾಜ್ಯಗಳಲ್ಲೂ ಕೊಬ್ಬರಿ ಉತ್ಪತ್ತಿಯಾಗುವುದಿಲ್ಲ. ಹೋದ ಸಲ, ಕಾಫಿ ಪೌಡರ್ ಮೇಲೆ, 15 ಲಕ್ಷ ರೂ. ಟರ್ನ್‌ಓವರ್‌ಗಿಂತ ಜಾಸ್ತಿ ಇರುವವರ ಮೇಲೆ ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳಿಬಿಟ್ಟು, ಎಲ್ಲಾ ಪ್ರಮುಖ ಕಾಫಿ ಉದ್ದಿಮೆದಾರರು ಮುಳುಗಿ ಹೋಗುವ ಸ್ಥಿತಿ ಬಂತು. ಈ ಬಗ್ಗೆ ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿದ ಮೇಲೆ, ಅವರು ಆ ತೆರಿಗೆಯನ್ನು ತೆಗೆದ ಮೇಲೆ ಕಾಫಿ ಉದ್ದಿಮೆದಾರರೆಲ್ಲಾ ಚೇತರಿಸಿಕೊಂಡರು. ಒಳ್ಳೆಯ ಕೆಲಸವಾಯಿತು ಎಂದು ಇವತ್ತು ಅವರು ಒಪ್ಪಿಕೊಳ್ಳುತ್ತಾರೆ. ಅದೇ ರೀತಿ, ಇವತ್ತು ಕೊಬ್ಬರಿ ಮತ್ತು ಡೆಸಿಕೇಟೆಡ್ ಕೋಕೊನಟ್ ಅಂದರೆ ತೆಂಗಿನಕಾಯನ್ನು ತುರಿದುಬಿಟ್ಟು ಹೊರಗಡೆಗೆ ರವಾನೆ ಮಾಡುತ್ತಿದ್ದು, ಹೀಗೆ ಕರ್ನಾಟಕ ರಾಜ್ಯದಿಂದ ಆಚೆ ಹೋಗತಕ್ಕಂಥಾದ್ದಕ್ಕೆ ಹಾಕುತ್ತಿರುವ ನಾಲ್ಕು ಪರ್ಸೆಂಟ್ ಟ್ಯಾಕ್ಸನ್ನು ತಾವು ತೆಗೆಯಬೇಕಾಗುತ್ತದೆ. ನಮ್ಮ ಪಕ್ಕದ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳಗಳು ಆ ಕ್ಷೇತ್ರದಲ್ಲಿ ಬಹಳ ಸ್ಪರ್ಧಿಗಳಾಗಿವೆ. ಅವರು ಟ್ಯಾಕ್ಸ್ ಇಲ್ಲದೇ, ಬಿಲ್ ಇಲ್ಲದೇ, ಯಾವ ವ್ಯಾಟ್‌ಅನ್ನೂ ಕನ್ಸಿಡರೇಷನ್‌ಗೆ ತೆಗೆದುಕೊಳ್ಳದೇ ಮಾಡುತ್ತಿರುವುದರಿಂದ, ತಿಪಟೂರಿನ ಕೊಬ್ಬರಿಯನ್ನು ಕೊಳ್ಳುವವರೇ ದಿಕ್ಕಿಲ್ಲದಂತಾಗಿದೆ. ಮತ್ತೊಂದು ವಿಷಯವೆಂದರೆ, ಯಾರು ಮಾಡುತ್ತಾರೆ, ಯಾರು ಬಿಡುತ್ತಾರೆ ಎಂದೇನೂ ಇಲ್ಲ, ಎಲ್ಲಾ ಎರಡನೇ ವಹಿವಾಟಿನಲ್ಲಿ ಅಂದರೆ ಸೆಕೆಂಡ್ಸ್‌ನಲ್ಲಿ ಟ್ಯಾಕ್ಸ್ ಕದ್ದು ವ್ಯವಸ್ಥೆ ನಡೆಯುತ್ತಿರುವುದರಿಂದ, ಏನಾದರೂ ಮಾಡಿ ಆ ಮಾರುಕಟ್ಟೆಯನ್ನು ನಿಯಂತ್ರಣಕ್ಕೆ ತರಬೇಕೆಂದರೆ, ತಾವು ಏನಾದರೂ ಮಾಡಿ ಕೊಬ್ಬರಿಯ ಮೇಲಿರುವ ಟ್ಯಾಕ್ಸನ್ನು ತೆಗೆಯಬೇಕಾಗುತ್ತದೆ. ನನಗೆ ನನ್ನ ಸ್ನೇಹಿತರು ಹೇಳುತ್ತಿದ್ದರು, ಅದರ ಬಗ್ಗೆ ತಾವು ಕನ್ವಿನ್ಸ್ ಆಗಿದ್ದೀರಿ, ಯಡಿಯೂರಪ್ಪನವರ ಹತ್ತಿರ ಮಾತನಾಡಿದ್ದೇವೆ, ಅದನ್ನು ಕನ್ಸಿಡರ್ ಮಾಡುತ್ತಾರೆ ಎಂದು ಹೇಳುತ್ತಿದ್ದರು. ತಾವು ಬಜೆಟ್‌ನಲ್ಲಿ ಆ ಟ್ಯಾಕ್ಸನ್ನು ತೆಗೆಯುತ್ತೀರಿ ಎಂದು ನಾನು ಬಹಳ ಆಸೆ ಇಟ್ಟುಕೊಂಡಿದ್ದೆ. ಈಗಲೂ ನಾನು ನಿಮಗೆ ಕೇಳಿಕೊಳ್ಳುವುದೇನೆಂದರೆ, ದಯಮಾಡಿ ತಕ್ಷಣ ಒಂದು ನಿರ್ಧಾರಕ್ಕೆ ಬರಬೇಕು, ಆ ಟ್ಯಾಕ್ಸನ್ನು ತೆಗೆಯಬೇಕು.

ಇನ್ನು, ಕೃಷಿ ಬಗ್ಗೆ ತಾವು ಮಾತನಾಡಿದ್ದೀರಿ. ಕೃಷಿಯ ಬಗ್ಗೆ ನಾನು ಮೊದಲಿನಿಂದಲೂ ಇಲ್ಲಿ ಕೇಳಿಕೊಂಡು ಬಂದಿರುವಂಥ ಮನುಷ್ಯ. ಇದರಲ್ಲಿ ಕೃಷಿ ಬೆಳವಣಿಗೆ ಹೇಗಾಗಬೇಕು ಎಂಬುದು ತಮಗೆ ಗೊತ್ತಿರಬಹುದು, ಸನ್ಮಾನ್ಯ ಶ್ರೀನಿವಾಸಗೌಡರು ಈಗ ಈ ಕಡೆ ಬಂದು ಕುಳಿತಿದ್ದಾರೆ. ಇವತ್ತು ನಾವು ಕೃಷಿಗೆ ಕೊಡುತ್ತಿದ್ದಂಥ ಎಲ್ಲಾ ಇನ್‌ಪುಟ್ಸ್‌ಅನ್ನು ತೆಗೆದು ಆಗಿದೆ. ಕೇಂದ್ರ ಸರ್ಕಾರದಿಂದ ಏನು ಇನ್‌ಪುಟ್ಸ್‌ಅನ್ನು ಕೊಡುತ್ತಿದ್ದೆವು, ಒಂದು ಬೆಳೆಯನ್ನು ಹೊಸದಾಗಿ ಇಂಟ್ರೊಡ್ಯೂಸ್ ಮಾಡಿದರೆ ಹತ್ತು ವರ್ಷಗಳಿಗೆ ಕ್ಲೋಸ್ ಎಂದು ಹೇಳಿ, ಅದರ ಮೇಲಿರುವ ಎಲ್ಲಾ ಸಬ್ಸಿಡಿಯನ್ನು ತೆಗೆಯುತ್ತಾರೆ. ನಮಗೆ ಬೇಕೋ, ಬೇಡವೋ ಗೊಬ್ಬರದ ಮೇಲಿದ್ದ ಸಬ್ಸಿಡಿಯೆಲ್ಲಾ ಹೊರಟು ಹೋಯಿತು, ಹಣ

ಅಷ್ಟೇ ಇಟ್ಟು ಕಿಟ್ ಕೊಡುವುದರಿಂದ ಇವತ್ತು ನಮಗೆ ನಾಲ್ಕನೇ ಒಂದು ಭಾಗದಷ್ಟು ಕಿಟ್ ಕೂಡ ಸಪ್ಲೈ ಆಗುತ್ತಿಲ್ಲ. ಕೇಂದ್ರ ಸರ್ಕಾರ ಕೊಡುತ್ತಿರುವಂಥ ಅನುಕೂಲ ಬಹಳ ಕಡಿಮೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನೀವು ರೈತರಿಗೆ ಏನಾದರೂ ಮಾಡಬೇಕೆಂದರೆ, ಪ್ರೊಡಕ್ಷನ್ ಕಾಸ್ಟ್‌ಅನ್ನು ಕಡಿಮೆ ಮಾಡಲೇಬೇಕು. ಮಾನ್ಯ ಸಿದ್ಧರಾಮಯ್ಯನವರು ಒಂದು ಸಲ ಇಲ್ಲಿ ಮಾತನಾಡಿದ್ದರು. ನಾನು ಕೃಷಿಯನ್ನು ಉದ್ದಿಮೆ ಸ್ವರೂಪಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದ್ದರು. ಏನು ಫಾರಂ ಇದೆ ಅದನ್ನು ಕಂಪನಿ ಲೆವೆಲ್‌ಗೆ ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದರು. ಅದನ್ನು ಇಂಡಸ್ಟ್ರಿ, ಉದ್ದಿಮೆ ಎಂದು ಟ್ರೀಟ್ ಮಾಡುತ್ತೇನೆ, ಹಾಗಾದಾಗ ನಮ್ಮ ಉತ್ಪಾದನಾ ವೆಚ್ಚಕ್ಕೆ ತಗಲುವ ಎಲ್ಲಾ ಕಾಸ್ಟನ್ನು ಸೇರಿಸಿ, ನಮ್ಮ ಬೆಲೆಯನ್ನು ನಾವು ನಿಗದಿ ಮಾಡಬಹುದಿತ್ತು. ದುರದೃಷ್ಟವೆಂದರೆ, ಅದು ಮಾತಾಯಿತೇ ಹೊರತು, ಇವತ್ತಿನವರೆಗೆ ಅದು ನಡೆಯಲಿಲ್ಲ. ನಾವು ಸರ್ಕಾರವನ್ನು ಒತ್ತಾಯ ಮಾಡುವುದಿಷ್ಟೇ, ನೀವು ಎಲ್ಲಾ ಉತ್ಪಾದನೆಗಳಿಗೆ ಬೆಲೆ ನಿಗದಿ ಮಾಡಿಕೊಳ್ಳಲಿಕ್ಕೆ ಅವರಿಗೆ ಅಧಿಕಾರ ಕೊಟ್ಟಿರುವಂತೆ ನಮಗೂ ಕೊಡಿ. ಇಲ್ಲದಿದ್ದರೆ, ಸರ್ಕಾರ ನಮ್ಮ ಎಲ್ಲಾ ಖರ್ಚುಗಳನ್ನು ಲೆಕ್ಕಕ್ಕೆ ತೆಗೆದುಕೊಂಡು, ಉತ್ಪಾದನೆಗೆ ನಮಗೆ ಎಷ್ಟು ಖರ್ಚು ಬರುತ್ತದೆ ಎಂದು ನೋಡಿಬಿಟ್ಟು, ಒಂದು ಬೆಂಬಲ ಬೆಲೆಯನ್ನು ನಿಗದಿ ಮಾಡಿ. ಆರು ತಿಂಗಳಾದ ಮೇಲೆ ಅನಿವಾರ್ಯವಾಗಿ ಅವರು ಕೊಂಡುಕೊಳ್ಳುತ್ತಾರೆ. ಎಲ್ಲಿಯವರೆಗೆ ನೀವು ನಮಗೆ ಮಾರುಕಟ್ಟೆ ಧಾರಣೆಯನ್ನು ನಿಗದಿ ಮಾಡುವುದಕ್ಕೆ ಅಧಿಕಾರ ಕೊಡುವುದಿಲ್ಲ, ಅಥವಾ ನೀವು ಕಾಸ್ಟಿಂಗ್ಸ್‌ಅನ್ನು ಲೆಕ್ಕಕ್ಕೆ ತೆಗೆದುಕೊಂಡು ಮಾಡುವುದಿಲ್ಲ, ಅಲ್ಲಿಯವರೆಗೆ ನೀವು ಕೃಷಿಗೆ ಕೊಡುತ್ತಿರುವ ಎಲ್ಲಾ ಇನ್‌ಪುಟ್ಸ್‌ಅನ್ನು ಮುಂದುವರೆಸಲೇಬೇಕಾಗುತ್ತದೆ. ಇಲ್ಲದಿದ್ದರೆ ನಾವು ಉಳಿಯುವುದಕ್ಕಾಗುವುದಿಲ್ಲ. ಈ ವರ್ಷದ ಆರ್ಥಿಕ ಸಮೀಕ್ಷೆಯಲ್ಲಿ ಏನಿದೆ ಎಂದು ನಾನು ನಿಮಗೆ ಹೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೇ, ನಾನು ಮಂತ್ರಿಯಾಗಿದ್ದಾಗ ಮಾನ್ಯ ಬಿಸಲಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದೆವು. ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಮಾನ್ಯ ಯಡಿಯೂರಪ್ಪನವರು ಇದನ್ನು ಗಮನಿಸಬೇಕು. ಗ್ರಹಚಾರವೆಂದರೆ, ಕೇಂದ್ರ ಸರ್ಕಾರದವರು ನಿಗದಿ ಮಾಡಿದಂಥ ಸಪೋರ್ಟ್ ಪ್ರೈಸನ್ನೇ ರಾಜ್ಯ ಸರ್ಕಾರದವರೂ ಕೊಡುತ್ತಿದ್ದಾರೆ. ಅದನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅದು ಬಹಳ ಕಡಿಮೆ. ಮಹಾರಾಷ್ಟ್ರದಲ್ಲಿ ರೈತರಿಗೆ ನೇರವಾಗಿ ಒಂದು ಕ್ವಿಂಟಾಲ್‌ಗೆ 500 ರೂಪಾಯಿಗಳನ್ನು ಜಾಸ್ತಿ ಕೊಡುತ್ತಾರೆ. ಅದು ಆ ರಾಜ್ಯ ಸರ್ಕಾರದ ಹಣ. ಈ ರೀತಿ, ಕೇಂದ್ರ ಸರ್ಕಾರದಿಂದ ಬರುವುದನ್ನೂ ತೆಗೆದುಕೊಂಡು, ಬಿಸಲಯ್ಯನವರ ರಿಪೋರ್ಟ್ ಪ್ರಕಾರ, ನಮಗೆ ತಗಲುವಂಥ ಖರ್ಚನ್ನು ಮಾತ್ರವೇ ಕೊಟ್ಟರೂ ಸಾಕೆನ್ನುವಂಥ ಆ ಪರಿಸ್ಥಿತಿಗೆ ನಾವು ತಲುಪಬೇಕಾಗುತ್ತದೆ. ಇದಕ್ಕೆ ರಾಜ್ಯ ಸರ್ಕಾರದಿಂದ ಹಣ ಇಡಬೇಕಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಆವರ್ತನಿಧಿಗಾಗಿ ಆ ಸಮಯಕ್ಕೆ ಹೋಗುತ್ತೇವೆ, ಕೇಂದ್ರ ಸರ್ಕಾರ ಹೇಳಿದ ಹಾಗೆ 540 ರೂಪಾಯಿಗಳಿಗೆ ಮುಸುಕಿನ ಜೋಳವನ್ನು ತೆಗೆದುಕೊಳ್ಳುತ್ತೇವೆ, 525 ರೂಪಾಯಿಗಳಿಗೆ ಜವಾರ್ ತೆಗೆದುಕೊಳ್ಳುತ್ತೇವೆ. 520 ರೂಪಾಯಿಗಳಿಗೆ ರಾಗಿ ತೆಗೆದುಕೊಳ್ಳುತ್ತೇವೆ. ಇಷ್ಟು ಬಿಟ್ಟರೆ, ನಮ್ಮ ರಾಜ್ಯದ ಪಾಲು ಏನೂ ಇಲ್ಲದೇ ಇರುವುದರಿಂದ, ಇದಕ್ಕೆ ಹಣವನ್ನು ಕೊಡುವಂಥಾದ್ದಕ್ಕೆ ನೀವು ಚಿಂತನೆ ಮಾಡಬೇಕು ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಆರ್ಥಿಕ ಮಂತ್ರಿಗಳಿಗೆ ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಆರ್ಥಿಕ ಸಮೀಕ್ಷೆ ಬಗ್ಗೆ 9ನೇ ಪುಟದಲ್ಲಿ ಏನಿದೆ ಎಂಬುದನ್ನು ಹೇಳುತ್ತೇನೆ. ಈ ವರ್ಷ ಬಹಳ ಒಳ್ಳೆಯ ಮಳೆಗಾಲವಾಗಿದೆ, ಇದಕ್ಕಿಂತ ಒಳ್ಳೆಯ season ಕೃಷಿಗೆ ಬರಲಿಕ್ಕೆ ಸಾಧ್ಯವೇ ಇಲ್ಲ ಮತ್ತು ಉತ್ಪಾದನೆ ಕೂಡ ಚೆನ್ನಾಗಿ ಆಗುತ್ತದೆಂದು ಇದ್ದಿದ್ದ ಕಡೆ ಏಕದಳ ಧಾನ್ಯಗಳು ನಿಮ್ಮ ನಿರೀಕ್ಷೆಗಿಂತ 2.2 ಲಕ್ಷ ಟನ್ ಕಡಿಮೆಯಾಯಿತು. ದ್ವಿದಳ ಧಾನ್ಯಗಳು ಅಷ್ಟೇ ಬಂತು. ಆಹಾರ ಧಾನ್ಯಗಳು 2 ಲಕ್ಷ ಟನ್ ಕಡಿಮೆಯಾಯಿತು. ಎಣ್ಣೆಕಾಳುಗಳ production 1.14 ಲಕ್ಷ ಟನ್‌ನಷ್ಟು ಕಡಿಮೆಯಾಯಿತು. ಇದು ಏಕೆ ಕಡಿಮೆಯಾಯಿತು ಎಂದು ನಾವು ಒಂದು ಕಡೆ ಆಲೋಚನೆ ಮಾಡಬೇಕು. ಇವತ್ತು ಕೃಷಿಯನ್ನು ನಂಬಿಕೊಂಡಿರುವವರು ಜೀವನ ಮಾಡುವ ಸ್ಥಿತಿಯಲ್ಲಿಲ್ಲ. ನಮಗೆ ಎಲ್ಲೆಲ್ಲಿ ಹೊಡೆತ ಬಿದ್ದಿದೆ ಎಂದು ಆ ಮೇಲೆ ಮಾತನಾಡಬೇಕಾದರೆ ನಾನು ಹೇಳುತ್ತೇನೆ. ಎರಡನೆಯದಾಗಿ, ಸರ್ಕಾರದ ಯಾವುದೇ ನೆರವು ದವಸಧಾನ್ಯಗಳು ಇತ್ಯಾದಿ ಖಾರೀಫ್ ಬೆಳೆಯುವ ನಮಗೆ ಸಿಗುತ್ತಿಲ್ಲ. ಇನ್ನೊಂದು ಕಡೆ, ತೋಟಗಾರಿಕಾ ಬೆಳೆಗಳಿಗೆ ಒತ್ತು ಕೊಡುತ್ತಿಲ್ಲ. ರಫ್ತು ಮಾಡಬೇಕು, ಉದ್ದಿಮೆ ಮಾಡಬೇಕು, finished products ಮಾಡಬೇಕು, processing industry ಮಾಡಬೇಕು ಎಂದು ನಾವು ಭಾಷಣ ಮಾಡಿಕೊಂಡು ಹೋಗುತ್ತಿದ್ದೇವೆ. ನಮ್ಮ ಹತ್ತಿರ ಕಚ್ಚಾ ಪದಾರ್ಥಗಳ production ಗೆ ಇದಕ್ಕಿಂತ ಒಳ್ಳೆಯ season ಬರಲಿಕ್ಕೆ ಸಾಧ್ಯವೇ ಇಲ್ಲ. 2005–06ನೇ ಸಾಲಿಗಿಂತ ಒಳ್ಳೆಯ season ಕೃಷಿ ರಂಗಕ್ಕೆ ಬರಲಿಕ್ಕೆ ಸಾಧ್ಯವೇ ಇಲ್ಲ, ಅದು ಮೂರುವರ್ಷ fail ಆಗಿತ್ತು. Land fertility maintain ಆಗಿತ್ತು. ಮಳೆ ಆಯಿತು. Production ಬಂತು. ಆದರೂ ಕೂಡ ನಮಗೆ ಇಳುವರಿ ಕಡಿಮೆಯಾಯಿತು. ಇಳುವರಿ ಏಕೆ ಕಡಿಮೆಯಾಯಿತು ಎಂದರೆ, ಒಂದು ಕಡೆ ಕೊಟ್ಟಿಗೆ ಗೊಬ್ಬರ ಇಲ್ಲದ ಹಾಗೆ ಮಾಡಿದೆವು. ಇನ್ನೊಂದು ಕಡೆ ರಾಸಾಯನಿಕ ಗೊಬ್ಬರ ಹಾಕುವುದಕ್ಕೆ ಶಕ್ತ ಇಲ್ಲದ ಹಾಗೆ ಮಾಡಿದೆವು, ಮತ್ತೊಂದು ಕಡೆ ಭೂಮಿ ಬರಡಾಗುತ್ತಾ ಹೋಗುತ್ತಿದೆ. Chemical fertilizer ಅನ್ನು use ಮಾಡಿ ನಮ್ಮ ಭೂಮಿ ಗಟ್ಟಿಯಾಗುತ್ತಿದೆ. ಅದನ್ನೇನಾದರೂ substantiate ಮಾಡಬೇಕಾಗಿತ್ತು, ಅದಕ್ಕೆ substitute ಗೊಬ್ಬರ ಕೊಡಬೇಕಾಗಿತ್ತು ಎನ್ನುವುದರ ಕಡೆಗೆ ಶಕ್ತಿ ಇಲ್ಲದಂಥ ಸ್ಥಿತಿಯನ್ನು ನಿರ್ಮಾಣ ಮಾಡಿ agriculture production per acre has gone down. ಬಹಳ ಪ್ರಮಾಣದಲ್ಲಿ ಬೆಳೆದು ಬಿಟ್ಟಿದೆ. ಅದರೆ ಅದಕ್ಕೆ ತಕ್ಕನಾಗಿ production cost ಇವತ್ತು ಜಾಸ್ತಿಯಾಗಿದೆ. ನಾವು ಇವತ್ತು mechanized agriculture ಎಂದು ಮಾತನಾಡುತ್ತೇವೆ. Tractor ಗಳನ್ನು ನಾವು ಇವತ್ತು cultivation ಗೆ ಬಳಸುತ್ತಿದ್ದೇವೆ. ಅಲ್ಲಿ tractor ಬೆಲೆ ಎಷ್ಟು ಜಾಸ್ತಿಯಾಗುತ್ತಿದೆ? ನಾನು ಮೊದಲನೇ ಸಲ tractor ತೆಗೆದುಕೊಳ್ಳುವಾಗ ಸುಮಾರು ಒಂದು–ಒಂದೂವರೆ ಲಕ್ಷ ರೂಪಾಯಿ ಇದ್ದದ್ದು price, ಇವತ್ತು ಬರೀ engine ಸಾಧಾರಣ tractor ನದ್ದು ಮೂರು ಲಕ್ಷದ ಒಂಬತ್ತು ಸಾವಿರದಿಂದ ನಾಲ್ಕು ಲಕ್ಷ ರೂಪಾಯಿಗಳಷ್ಟು ಇದೆ. Trailor ಸೇರಿ ಸುಮಾರು ಐದು ಲಕ್ಷ ರೂಪಾಯಿಗಳು ಆಗುತ್ತದೆ. L & T Company ಆ range ನಲ್ಲಿ ಮೂರು ಲಕ್ಷದ ಎಂಭತ್ತು ಸಾವಿರ ರೂಪಾಯಿ ಇವತ್ತು tractor ಧಾರಣೆ ಇದೆ. Tractor ಉಳುಮೆಗೆ ನಾವು ಐದಾರು ವರುಷದ ಹಿಂದೆ ಲೀಟರ್ ಒಂದಕ್ಕೆ ಐದು ರೂಪಾಯಿಗಳಂತೆ

ಡೀಸಲ್ ಅನ್ನು ಹಾಕಿಸಿದ್ದೇವೆ. ಆದರೆ ಇವತ್ತು ಡೀಸಲ್ ಲೀಟರ್ ಒಂದಕ್ಕೆ ಮೂವತ್ತೈದು ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಹಿಂದೆ ಐವತ್ತರಿಂದ ಅರವತ್ತು ರೂಪಾಯಿ ಒಂದು ಎಕರೆಗೆ own tractor ಇಟ್ಟುಕೊಂಡಿರುವವರಿಗೆ minimum cost ಆಗುತ್ತದೆ. ಅವರೇ tractor ಇಟ್ಟುಕೊಂಡಿಲ್ಲದೆ, ಬಾಡಿಗೆಗೆ ತೆಗೆದುಕೊಂಡು ಬಂದರೆ ಇನ್ನೂ ಹೆಚ್ಚು ಖರ್ಚು ಆಗುತ್ತದೆ ಮತ್ತು ಉಳುಮೆ ವಿಚಾರದಲ್ಲಿ ನನಗೆ ಉತ್ತರ ಕರ್ನಾಟಕದ ಅಂದಾಜು ಇಲ್ಲ, ಒಂದು ಎಕರೆಗೆ ಈ ಭಾಗದಲ್ಲಿ ರಾಗಿ ಬೆಳೆಯುವವರು, ನಾಲ್ಕು–ಐದು–ಆರು ಸಲ ನಾವು ಉಳುಮೆ ಮಾಡಬೇಕಾಗುತ್ತದೆ. Weeds ಎಷ್ಟು ಬರುತ್ತದೆ? Weeds ಅನ್ನು ಏನಾದರೂ ನಾವು ಇವತ್ತು ಕೂಲಿ ಕೊಟ್ಟು ಕೀಳಿಸದೇ ಹೋದರೆ, ಆ ರಾಗಿನೂ ಬೇಡ, ಬೆಳೆನೂ ಬೇಡ ಎನ್ನುವ ಸ್ಥಿತಿಗೆ ಬರುತ್ತೇವೆ, ಬಂದಿದ್ದೇವೆ. ಈ mechanized agriculture ನಲ್ಲಿ ನಾವು cost ಅನ್ನು invest ಮಾಡುವುದು ಜಾಸ್ತಿಯಾಗುತ್ತಿದೆ. ಆ ಕಡೆಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಗಮನ ಕೊಡಬೇಕಾಗುತ್ತದೆ. ನಾನು ಕಳೆದ ಸಲವೂ ಇಲ್ಲಿ ಕೇಳಿದ್ದೆ. ಮೀನುಗಾರರು ತಮ್ಮ ಕಣ್ಣಿಗೆ ಕಂಡಿದ್ದಾರೆ. ನಮ್ಮನ್ನೂ ನೋಡಿ. ನಮಗೆ 200 ಲೀಟರ್, 300 ಲೀಟರ್ ಅಥವಾ 400 ಲೀಟರ್ ಡೀಸಲ್ ಅನ್ನು subsidize ಮಾಡಿ ಎಕರೆಗೆ ಇಂತಿಷ್ಟು ಎಂದು ಕೊಡಿ. ನಾವು ಏನು ತಪ್ಪು ಮಾಡಿದ್ದೇವೆ? ರೈತರು tractor ಇಟ್ಟುಕೊಂಡಿದ್ದೂ, ಜಮೀನು ಇದ್ದರೆ ನೀವೇ ಒಂದು ವೈಜ್ಞಾನಿಕವಾಗಿ ಸಮೀಕ್ಷೆ ಮಾಡಿಸಿ. ಹತ್ತು ಎಕರೆ cultivation ಗೆ ಎಷ್ಟು ಖರ್ಚು ಬರುತ್ತೆ ಎಂದು ಕೇಳಿ. ನಮಗೂ ಒಂದಿಷ್ಟು subsidize ಮಾಡಿ. ಹೇಗೆ ನೀವು ಮೀನುಗಾರರಿಗೆ ಡೀಸಲ್ ಅನ್ನು subsidize ಮಾಡಿ ಕೊಡುತ್ತೀರಿ ಅದೇ ರೀತಿ ನಮಗೂ ಅಂದರೆ Tractor ಇಟ್ಟುಕೊಂಡು ಉಳುಮೆ ಮಾಡುವವರಿಗೇ ಕೊಡಿ. ನೀವು ಏನು tractor ಮೇಲೆ subsidy ಕೊಡುತ್ತೇವೆ ಎಂದು ಹೇಳಿದಿರಿ ಅದು ನಿಜವಾಗಿಯೂ ಒಳ್ಳೆಯ ಕಾರ್ಯಗತವಾಗುವ scheme ಅಲ್ಲ. ಯಾಕೆಂದರೆ tractor ಅನ್ನು ಯಾರು ಯಾರು ತೆಗೆದುಕೊಳ್ಳಬಹುದಾಗಿತ್ತು ಅವರು tractor ತೆಗೆದು ಕೊಂಡಾಗಿದೆ. Tractor ಅನ್ನು ತೆಗೆದುಕೊಳ್ಳುವಂಥ ರೈತರನ್ನು Bank ನವರು ಬಿಟ್ಟಿಲ್ಲ. ಮೂರು ಎಕರೆ, ನಾಲ್ಕು ಎಕರೆ, ಐದು ಎಕರೆ ಇದ್ದವರಿಗೆ ಜುಟ್ಟು ಹಿಡಿದಾದರೂ ಅವರಿಗೆ tractor ಕೊಟ್ಟುಬಿಟ್ಟಿದ್ದಾರೆ. ನಾಳೆಯಿಂದ ನಿಮಗೆ tractor ತೆಗೆದುಕೊಳ್ಳುವವರು, ಯಾರು? Subsidy ಗೋಸ್ಕರ tractor ತೆಗೆದುಕೊಳ್ಳುವವರು, ಮರಳು ಹೊಡೆಯುವುದಕ್ಕೆ ತೆಗೆದುಕೊಳ್ಳುವವರು, ಇಟ್ಟಿಗೆ ಹೊಡೆಯುವುದಕ್ಕೆ ತೆಗೆದುಕೊಳ್ಳುವವರು, ಕಲ್ಲು ಹೊಡೆಯುವುದಕ್ಕೆ ತೆಗೆದುಕೊಳ್ಳುವವರನ್ನು ಬಿಟ್ಟರೆ ಈ ರಾಜ್ಯದಲ್ಲಿ ಹೊಸ ರೈತರು ಯಾರೂ tractor ತೆಗೆದುಕೊಳ್ಳುವ ಸ್ಥಿತಿಯಲ್ಲಿ ಉಳಿದುಕೊಂಡಿಲ್ಲ. ಆ ಕ್ಷೇತ್ರ exhaust ಆಗಿ ಬಿಟ್ಟಿದೆ. ಯಾರು ಎರಡು ಜೊತೆ ಎತ್ತುಗಳನ್ನು ಹಿಡಿದುಕೊಂಡು ಬೇಸಾಯ ಮಾಡುತ್ತಿದ್ದರೋ ಅವರೆಲ್ಲಾ tractor ಅನ್ನು ತೆಗೆದುಕೊಂಡಿದ್ದಾರೆ. ಐದು ಎಕರೆ ಜಾಗ ಇದ್ದವನೂ ಕೂಡ ಇವತ್ತು tractor ಇಟ್ಟುಕೊಂಡಿದ್ದಾನೆ. ಒಂದಿಷ್ಟು ಕೆಲಸ ಮಾಡಿಸಿಬಿಟ್ಟರೆ ಇವತ್ತು ಇಪ್ಪತ್ತು ಸಾವಿರ ಖರ್ಚು ಆಗುತ್ತದೆ. ಅದರ ಬದಲು ಇಪ್ಪತ್ತು ಸಾವಿರ ರೂಪಾಯಿಗಳು down payment ಕೊಟ್ಟರೆ tractor ಬರುತ್ತೆ ಎಂದು ಅದನ್ನು ತೆಗೆದುಕೊಂಡು ಸಾಲವನ್ನು ಮೇಲೆ ಎಳೆದುಕೊಂಡು ಕುಳಿತಿದ್ದಾನೆ. ಮಣ್ಯದಿಂದ ಇವತ್ತು ನೀವು

ಬಡ್ಡಿ rate ಅನ್ನು ಕಡಿಮೆ ಮಾಡಿದ್ದರಿಂದ ರೈತ ಬದುಕುತ್ತಾನೆ. ನಾನು ತಮಗೆ ಹೇಳುತ್ತೇನೆ ಅದೇ ಸ್ಥಿತಿಯಲ್ಲಿ ತಾಲ್ಲೂಕಿಗೆ ಹತ್ತು tractor, ಹತ್ತು mini tractor, power tiller, ... ಅಂತ ಇದ್ದರೆ ಇದೇನೂ ಪ್ರಯೋಜನಕ್ಕೆ ಬರುವಂಥ ಆಲೋಚನೆ ಎಂದು ತಾವು ತಿಳಿದುಕೊಳ್ಳಬಾರದು. ದಯಮಾಡಿ ಆ ಆಲೋಚನೆಯನ್ನು ಇನ್ನೊಂದು ಬಾರಿ ತಾವು reconsider ಮಾಡಬೇಕು. ಅದರ ಬದಲು diesel subsidize ಮಾಡಿ. ಅಥವಾ tractor ಮೇಲಿರುವ sales tax ಅನ್ನು ಕಡಿಮೆ ಮಾಡಿ. ಇದರ benefits ಎಲ್ಲರಿಗೂ pass on ಆಗುತ್ತದೆ. ಯಾರಿಗೋ ಹತ್ತು ಜನ ನಮಗೆ ಬೇಕಾದವರಿಗೆ ಕಾಗದ ಕೊಡುವುದಕ್ಕೆ tractor subsidy. ಆಮೇಲೆ ತಾವು 50% subsidy ಎಂದು ಹೇಳಿ ಗೊಂದಲವನ್ನು ಸೃಷ್ಟಿ ಮಾಡಿದ್ದೀರಿ. ಈವರೆಗೆ ಒಂದು tractor ಗೆ ಅರವತ್ತು ಸಾವಿರ ರೂಪಾಯಿಗಳನ್ನು subsidy ಎಂದು ಕೊಡಲಾಗುತ್ತಿತ್ತು. ಇದೇನು ಆಕಸ್ಮಿಕವಾಗಿ ಆಯಿತೋ ಅಥವಾ ತಾವು ಕೊಡಲಿಕ್ಕೇ ತಯಾರಾಗಿದ್ದರೋ ಗೊತ್ತಿಲ್ಲ. ನಾಲ್ಕು ಲಕ್ಷ ರೂಪಾಯಿಗಳ tractor ಗೆ ಈಗ ಎರಡು ಲಕ್ಷ ರೂಪಾಯಿಗಳನ್ನು subsidy ರೂಪವಾಗಿ ತಾವು ಎಂದು ನಾನು ಕೇಳುತ್ತಿದ್ದೇನೆ. ಮೂರು ಲಕ್ಷ ರೂಪಾಯಿಗಳ mini tractor ಗೆ ತಾವು ಒಂದೂವರೆ ಲಕ್ಷ ರೂಪಾಯಿಗಳ subsidy ಕೊಡುತ್ತೀರಾ? ಒಂದು ಲಕ್ಷ ರೂಪಾಯಿಗಳ ಅಥವಾ ತೊಂಭತ್ತು ಸಾವಿರ ರೂಪಾಯಿಗಳ power tiller ಗೆ ನಲವತ್ತೈದು ಸಾವಿರ ರೂಪಾಯಿಗಳ subsidy ಕೊಡುತ್ತೀರಾ, What do yo mean by 50%? Subsidy ಯಲ್ಲಿ 50% ಕೊಡುತ್ತೀರಾ, tractor price ನಲ್ಲಿ 50% ಕೊಡುತ್ತೀರಾ, ಅಥವಾ ತಮ್ಮ tax component ನಲ್ಲಿ 50% ಕೊಡುತ್ತೀರಾ ಎಂಬುದರ ಬಗ್ಗೆ ಹೇಳಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ತಾವು ಈ benefit ಅನ್ನು tractor ಮೇಲಿರುವ tax ಗೆ pass on ಮಾಡುವುದರಿಂದ ಒಳ್ಳೆಯದಾಗುತ್ತದೆ. ಯಾರಾದರೂ ಕೊಂಡುಕೊಳ್ಳಲಿ ಈ competition ತಪ್ಪುತ್ತದೆ. ಅಧಿಕಾರಿಗಳಿಗೆ ಐದು ಜನ ಅಥವಾ ಹತ್ತು ಜನರ ಪಟ್ಟಿ ಮಾಡಬೇಕೆನ್ನುವುದರಲ್ಲಿ ಭಾರೀ scope ಈಗ ಸಿಕ್ಕುತ್ತದೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿರುವಂಥದ್ದು ಬಹುಶಃ ಈ ಭಾಗದಲ್ಲಿ ಆ situation ಇರಬಹುದು. ನಮ್ಮ ಮಲೆನಾಡಿನ ಭಾಗದಲ್ಲಿ ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಇವತ್ತು ಎತ್ತು ಸಾಕುವ ಪರಿಸ್ಥಿತಿಯಲ್ಲಿ ನಾವು ಇಲ್ಲ. ನಮ್ಮಲ್ಲಿ tractor ಅಗತ್ಯ ಇದೆ. ಯಾರಾದರೂ ಈ tractor ಕೊಳ್ಳುವವರಿಗೆ ಈ subsidy ಒಂದು ವರದಾನ ಎಂದು ಭಾವಿಸಿದ್ದೇವೆ. ಕಳೆದ ಎರಡು ವರ್ಷದಿಂದ ಮಾನ್ಯ ಶ್ರೀನಿವಾಸಗೌಡರು ಇದ್ದಾಗಲೂ ಕೂಡ ತುಂಬಾ ಕೊಡಿಸಿದರು. ಇಷ್ಟೊಂದು subsidy ಸರ್ಕಾರ ಕೊಟ್ಟರು ಎಂದು ರೈತರು ಅತ್ಯಂತ ಸಂತೋಷಪಟ್ಟರು. ನೇರವಾಗಿ ರೈತನಿಗೆ ತಲುಪಿರುವ subsidy ಇದ್ದರೆ ಇದು ಮಾತ್ರ. ಹಾಗಾಗಿ ಅದನ್ನು generalize ಮಾಡದೇ ನಮ್ಮ ಮಲೆನಾಡು ತಾಲ್ಲೂಕುಗಳಿಗೆ ಅದನ್ನು ಇಡುವಂಥದು ಖಂಡಿತ ಒಳ್ಳೆಯದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಸರ್ಕಾರ ಏನು announce ಮಾಡಿದೆ ಅದಕ್ಕಿಂತ ಜಾಸ್ತಿ ಅವರು ಕೊಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಜ್ಞಾನೇಂದ್ರ ಅವರೇ, ಹತ್ತು ಎನ್ನುವುದನ್ನು ಬಿಟ್ಟು generalize ಮಾಡಿ tax concession ಎಲ್ಲಾ ರೈತರಿಗೂ ಕೊಟ್ಟು ಬಿಡಿ ಎಂದು ನಾನು ಕೇಳುತ್ತಿರುವುದು. ತಾವು ಏನು ಹತ್ತು tractor ಗಳನ್ನು ಒಂದು ತಾಲ್ಲೂಕಿಗೆ ಕೊಡುತ್ತೇವೆ ಎಂದು announce ಮಾಡಿದ್ದೀರಿ ಅದರ ಬದಲು ಅಷ್ಟು amount ನಲ್ಲಿ ರಾಜ್ಯದಲ್ಲಿ ರೈತರುಗಳು ಕೊಂಡುಕೊಳ್ಳುವ tractor ಮೇಲೆ ಇರುವ slaes tax ಅನ್ನು rebate ಕೊಟ್ಟರೆ ಅದು ರೈತರಿಗೇ pass on ಆಗುತ್ತದೆ. ಯಾರೋ ಹತ್ತು ಜನರಿಗೆ ಕೊಡುವುದನ್ನು, ಎಲ್ಲಾ ರೈತರಿಗೂ ಕೊಡಿ ಎಂದು ನಾನು ಕೇಳುತ್ತಿರುವುದು. Select ಮಾಡಿ ಹತ್ತು ಜನರಿಗೆ ಕೊಡಬೇಕೆಂದರೆ ನಮ್ಮ ಕೈಯಲ್ಲಿ ಅವರು ಸಿಕ್ಕಿ ಹಾಕಿಕೊಳ್ಳುತ್ತಾರೆ. Rebate ಕೊಡುವುದರಿಂದ automatic ಆಗಿ tractor price ಕಡಿಮೆಯಾಗುತ್ತದೆ. ಎಂ.ಎಲ್.ಎ. ರವರು ಕಾಗದ ಕೊಟ್ಟವರಿಗೇ ಕೊಡಬೇಕೆಂದು ನಾವು ನಿಬಂಧನೆ ಮಾಡಿಯೇ ಮಾಡುತ್ತೇವೆ. ಯಾರು ನಮಗೆ ಆತ್ಮೀಯರಿದ್ದಾರೆ ಅವರಿಗೆ ಸರ್ಕಾರಿ ಸೌಲಭ್ಯ ಸಿಗುವುದರ ಬದಲು ಎಲ್ಲರಿಗೂ benefit ಅನ್ನು pass on ಮಾಡಿ ಎಂದು ಹೇಳಿ, ಇನ್ನು agriculture ಬಹಳ ಗಣನೀಯವಾದ ಕ್ಷೇತ್ರ. ಇದಕ್ಕೂ ಮತ್ತು ಬಡತನ ನಿರ್ಮೂಲನ ಮಾಡುವ ಕಾರ್ಯಕ್ರಮಕ್ಕೂ ತಾವು link ಮಾಡಬೇಕಾಗುತ್ತದೆ. ಇವತ್ತು ನಮ್ಮ ಸ್ಥಿತಿ ಏನು ಆಗಿದೆ? ಬಹಳಷ್ಟು programmeಗಳು ಇವತ್ತು ಇಲ್ಲಿ ಘೋಷಣೆಯಾಗಿದೆ. 'ಬಡತನದ ರೇಖೆಯಿಂದ ಕೆಳಗಿರುವವರಿಗೆ, ಬಡತನದ ರೇಖೆಯಿಂದ ಕೆಳಗಿರುವವರಿಗೆ, ಬಡತನದ ರೇಖೆಯಿಂದ ಕೆಳಗಿರುವವರಿಗೆ,' ಎಂದು ರಾಜ್ಯದಲ್ಲಿ, ರಾಷ್ಟ್ರದಲ್ಲಿ ದೊಡ್ಡ ಮಂತ್ರ ಪಠಣ ಪ್ರಾರಂಭವಾಗಿದೆ. ಕರ್ನಾಟಕ ರಾಜ್ಯದಲ್ಲಿರುವವರೇ 19% ಜನ ಬಡತನ ರೇಖೆಯಿಂದ ಕೆಳಗೆ ಇರುವವರು ಎಂದು ಸನ್ಮಾನ್ಯ ಕಲಾಂ ಸಾಹೇಬರು ಹೇಳಿದ್ದಾರೆ. Government of India, Planning Commission ಬಡತನ ರೇಖೆಯಿಂದ ಕೆಳಗಿರುವವರು 19% ಎಂದು ಮಾತ್ರ consider ಮಾಡಿದ್ದಾರೆ. ಇನ್ಯಾರೂ ಇಲ್ಲ. ನಾವು food grains ಮಾಡಬೇಕಾದರೆ, ಹಳದಿ ಕಾರ್ಡ್ ಕೊಡಬೇಕಾದರೆ, ಹಸಿರು ಕಾರ್ಡು ಕೊಡಬೇಕಾದರೆ, 35% to 40% ಅನ್ನು cover ಮಾಡಿದ್ದೆವು. ಎಲ್ಲಾ ಕಾರ್ಯಕ್ರಮಗಳನ್ನು ಬಡತನ ರೇಖೆಯಿಂದ ಕೆಳಗಡೆ ಇರುವವರಿಗೆ ಎಂದು ನೀವು announce ಮಾಡುತ್ತಾ ಹೋದರೆ ಅಲ್ಲಿ ಬರುವ ಒತ್ತಡವನ್ನು ನೀವು ಕಡಿಮೆ ಮಾಡಲಿಕ್ಕೆ ಆಗುತ್ತದೆಯೇ? ಅಲ್ಲಿ ಬರುವ ಸ್ಥಿತಿಯನ್ನು ನೀವು ಕಡಿಮೆ ಮಾಡುವುದಕ್ಕೆ ಆಗುತ್ತದೆಯೆ? ಮತ್ತೆ ಒಂದು doctrine ಇದೆ. ಮೊನ್ನೆ ಮಾನ್ಯ ಚಿದಂಬರಂರವರೂ ಕೂಡ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದೇನೆಂದರೆ, ಬಡತನ ಕಡಿಮೆ ಮಾಡಬೇಕೆಂದರೆ, ಬಡತನ ನಿವಾರಣೆ ಕಾರ್ಯಕ್ರಮವೆಂದರೆ ಉದ್ಯೋಗ ಸೃಷ್ಟಿ ಕಾರ್ಯಕ್ರಮ. ಅವರಿಗೆ ನೀವು employment ಕೊಡಬೇಕು. ಅವರ ಕೈಗೆ ನೀವು ಕೆಲಸ ಕೊಡಬೇಕು. ಅವರ ಬಾಯಿಗೆ ಊಟ ಕೊಟ್ಟರೆ ಬಡತನ ಕಡಿಮೆ ಆಗಲಿಲ್ಲ, ಬಡತನ ಜಾಸ್ತಿ ಆಗುತ್ತದೆ. ಇನ್ನೊಂದಷ್ಟು ಜನ ಬಡವರನ್ನು ಸೃಷ್ಟಿ ಮಾಡುತ್ತಿದ್ದೀರಿ. ಗ್ರಾಮೀಣ ಪ್ರದೇಶದಲ್ಲಿ ಇವತ್ತು ಯಾರೂ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಕೆಲಸ ಮಾಡುತ್ತಿದ್ದವರಿಗೆ ನೀವೀಗ 20 ಕೆ.ಜಿ. rice ಅನ್ನು ಏನು 3 ರೂಪಾಯಿಗೆ ಒಂದು ಕೆ.ಜಿ.ಯಂತೆ ಕೊಟ್ಟುಬಿಟ್ಟರಿ, ಎರಡು ದಿವಸ ಕೆಲಸ ಮಾಡಿಬಿಟ್ಟರೆ ಒಂದು ತಿಂಗಳು ಊಟಕ್ಕೆ ಸಾಕಾಗುತ್ತದೆ. ಮತ್ತೇನೂ ದರ್ದಿಲ್ಲ.

ಇವತ್ತು ಅಗತ್ಯ ಇಲ್ಲ. ಅವರಿಗೆ ನೀವು ಸಹಾಯ ಮಾಡಬೇಕು. Create employment at rural areas. Agricultural land ನಲ್ಲಿ ಯಾರಾದರೂ ಕೆಲಸ ಮಾಡಿದರೆ ಬರೀ ಒಬ್ಬ ಜಮೀನು ಇಟ್ಟುಕೊಂಡಿರುವವನಿಗೆ ಅದು ಉದ್ಯೋಗ ಸೃಷ್ಟಿಯಾಗುವುದಿಲ್ಲ. ಜಮೀನಿನ ಮೇಲೇನಾದರೂ ನೀವು ರಿಯಾಯಿತಿಗಳನ್ನು ಕೊಟ್ಟರೆ ಅಲ್ಲಿರುವ ಅಗ್ರಿಕಲ್ಚರ್ ಆರ್ಟಿಸನ್ಸ್‌ಗೂ ಹೆಲ್ಪ್ ಆಗುತ್ತದೆ, ಅಲ್ಲಿರುವ ಕಾರ್ಮಿಕರಿಗೂ ಹೆಲ್ಪ್ ಆಗುತ್ತದೆ. ಇವತ್ತೇನು ಸ್ಥಿತಿಬಂದಿದೆ ಸಾರ್? ಬೇರೆ ಕಡೆ ನನಗೆ ಗೊತ್ತಿಲ್ಲ. ಚಿಕ್ಕನಾಯಕನಹಳ್ಳಿಯಂಥ ಕ್ಷೇತ್ರದಲ್ಲಿ ನೀವು ಏನು ಮಾಡಿದರೂ ಇವತ್ತು ಕೃಷಿ ಚಟುವಟಿಕೆಗಳಿಗೆ ಜನ ಇಲ್ಲ ಏಕೆ? ಅಎಡಕಸ್ಮಾತ್ ಇರುವವರು ಮೈನ್ಸ್‌ಗೆ ಹೋಗುತ್ತಾರೆ. ಇನ್ನೂ ಇದ್ದರೆ ಇಟ್ಟಿಗೆ ಫ್ಯಾಕ್ಟರಿಗಳು ನಮ್ಮ ಭಾಗದಲ್ಲಿ ಧಾರಾಳವಾಗಿ ಬಂದಿವೆ. ತುಮಕೂರು, ತಿಪಟೂರ್‌ಗೆ ಇಟ್ಟಿಗೆ ಹೊಡೆಯಲಿಕ್ಕೆ ನಮ್ಮ ಭಾಗದಿಂದ ಧಾರಾಳವಾಗಿ ಜನ ಹೋಗುತ್ತಾರೆ. ಲೇಬರ್ ಪ್ರಾಬ್ಲಂ ಅನ್ನು ಎಷ್ಟರಮಟ್ಟಿಗೆ ಫೇಸ್ ಮಾಡಬೇಕಾಗಿದೆ ಹಳೆ ಮೈಸೂರು ಅಥವಾ ಈ ಭಾಗದಲ್ಲಿ ಅಂದರೆ, ದಕ್ಷಿಣ ಕರ್ನಾಟಕಕ್ಕೇನು ಒಂದು ಕಾಲದಲ್ಲಿತ್ತು, ಆ ಸ್ಥಿತಿ ಈಗ ನಮಗೆ ಬಂದುಬಿಟ್ಟಿದೆ. ಗಂಟೆ ಲೆಕ್ಕದಲ್ಲಿ, ಬ್ರೇಕ್ ಕೊಟ್ಟುಕೊಂಡು ಕೆಲಸ ಮಾಡಿಸಬೇಕು. ನಿಜವಾಗಿ ನಿಮಗೆ ಬಡವರ ಬಗ್ಗೆ ಕಾಳಜಿ ಇದ್ದರೆ, ದಯವಿಟ್ಟು ಈ ಪ್ರೋಗ್ರಾಂಗಳನ್ನೆಲ್ಲಾ ನಿಲ್ಲಿಸಿಬಿಡಿ. ಈ ಪ್ರೋಗ್ರಾಂಗಳಿಂದ ಬಡವರು ಉದ್ಧಾರವಾಗುತ್ತಾರೆಂದು ಭಾವಿಸಬೇಡಿ. ನೀವು ಎಲ್ಲಿಯವರೆಗೆ ಎಳೆದುಕೊಂಡು ಹೋಗುತ್ತೀರಿ? 3 ರೂಪಾಯಿಗೆ ಕೆಜಿ ಅಕ್ಕಿ ಕೊಡುತ್ತೇವೆ, ಎನ್ನುತ್ತೀರಿ. ಸತ್ಯ, ಒಂದಷ್ಟು ಬಡವರಿಗೆ ಕೊಟ್ಟಿರಿ. ಇನ್ನೊಂದಷ್ಟು ಬಡವರನ್ನು ನೀವು ಇವತ್ತು ಕಿತ್ತುಹಾಕಿದ್ದೀರಿ. ನೀವು ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಹೇಳಿದ್ದೀರಿ ಇವತ್ತು, ಸ್ಟ್ರಿಕ್ಟ್‌ಲಿ ಸ್ಕ್ರುಟಿನೈಜ್ ಮಾಡಿಬಿಟ್ಟು, ಬಿಲೋ ಪಾವರ್ಟಿ ಲೈನ್‌ಗೆ ಇರುವವರಿಗೆ ಕನ್‌ಫೈನ್ ಮಾಡುತ್ತೇನೆ ಎಂದು ಇದರಲ್ಲಿ ಹೇಳಿದ್ದೀರಿ. ಯಾರು ಇಲ್ಲಿ ನಿಂತುಕೊಂಡು ಹೋರಾಟ ಮಾಡುತ್ತಿದ್ದಿರಿ, ಯಾರ ಕಾರ್ಡ್ ಅನ್ನು ಕಿತ್ತುಕೊಂಡಿದ್ದಾರೆ ಅವರಿಗೆ ಕಾರ್ಡ್ ಕೊಡಬೇಕೆಂದು ವಾದ ಮಾಡುತ್ತಿದ್ದಿರಿ, ಯಾರಿಗೆ ಚುನಾವಣೆಗೆ ಮೊದಲೇ ಕಾರ್ಡ್ ಇದ್ದುದ್ದನ್ನು ಕಂಟಿನ್ಯೂ ಮಾಡಿ ಎಂದು ಕೇಳಿದ್ದಿರಿ, ಯಾರ ಹತ್ತಿರ ಹಸಿರು ಕಾರ್ಡ್ ಇತ್ತೋ ಅದನ್ನು ವಿಥ್‌ಡ್ರಾ ಮಾಡಬೇಡಿ ಎಂದು ಕೇಳಿದ್ದಿರೋ, ಅಂಥವರು ಈಗ ಈ ಕಾರ್ಯಕ್ರಮದಲ್ಲಿ ನೀವು ಹೇಳಿದ್ದೀರಿ, 'It will be scrutinised very strictly.' ತಮಗೇ ಅರ್ಥವಾಗಿದೆಯೋ, ಇಲ್ಲವೋ? ಗೊತ್ತಿಲ್ಲ. you are going to reduced another 10% to 15% cards. ಬಿಪಿಎಲ್ ಪಟ್ಟಿಗೆ ಏನಾದರೂ ನೀವು ಕನ್‌ಫೈನ್ ಮಾಡುತ್ತೇನೆಂದರೆ, ಇನ್ನೂ 10 ರಿಂದ, ಏನು ಅವರು ಮಾಡಿದ್ದು ಇತ್ತು, ಕಾಂಗ್ರೆಸ್‌ನವರು, ಅದಕ್ಕಿಂತ 10, 15 ಪರ್ಸೆಂಟ್ ಕಾರ್ಡ್ ಅನ್ನು ನೀವು ರೆಡ್ಯೂಸ್ ಮಾಡುತ್ತಿದ್ದೀರಿ. ಆವಾಗ ನಿಮ್ಮ ಕಾರ್ಯಕ್ರಮ ಎಲ್ಲಿಗೆ ಹೋಗುತ್ತದೆ? ಬರೇ 19–20 ಪರ್ಸೆಂಟ್ ಜನರಿಗೆ ನೀವು ಇವತ್ತು ದವಸಧಾನ್ಯ ಕೊಡುವ ಸ್ಥಿತಿಗೆ ಬಂದರೆ ನಾನು ಇವತ್ತು ಹೇಳುತ್ತಿದ್ದೇನೆ, ನಾವು ಇವತ್ತು ಇರಿಗೇಷನ್ ಕನ್ಸಲ್‌ಟೇಟಿವ್ ಕಮಿಟಿಯಲ್ಲಿ ಕುಳಿತುಕೊಂಡು ಕೆರೆ ತೂಬು ಎತ್ತಿಬಿಟ್ಟರೆ, ಗದ್ದೆ ಮಾಡುವವರು ಯಾರೂ ಇಲ್ಲ. ಭತ್ತ ಬೆಳೆದರೆ ಇವತ್ತು ಏನೂ ಗಿಟ್ಟುವ ಹಾಗಿಲ್ಲ. ನೀವು ಅಕಸ್ಮಾತ್ ಭತ್ತ ಬೆಳೆದರೆ, ಸೋನಾ ಮಸೂರಿ ಬೆಳೆಯಬೇಕು. 18 ರೂಪಾಯಿ, 20 ರೂಪಾಯಿ ಮಾರ್ಕೆಟ್‌ನಲ್ಲಿ ಸಿಗುವಂಥಾದ್ದನ್ನು ಬೆಳೆಯಬೇಕು.

ಇಲ್ಲ ಅಂದರೆ, ನೀವೇನು 3 ರೂಪಾಯಿಗಳಿಗೆ ಅಕ್ಕಿ ಕೊಡುತ್ತಿದ್ದೀರಿ, ಅದೇ ಸಾಕಾಗಿದೆ, ತಾಲ್ಲೂಕಿನಲ್ಲಿ ಮಾರಾಟಕ್ಕೆ. Entire agricultural operation stand-still ಗೆ ಇವತ್ತು ಬರುತ್ತಿದೆ. ನೀವು ನಮಗೇನು ಮಾಡುತ್ತೀರಿ? ಇವತ್ತು ಭತ್ತ ಬೆಳೆಯುವವರನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತೀರಿ? ಇವತ್ತು ಭತ್ತ ಬೆಳೆಯುವವರ ಗತಿ ಏನು? ಕಬ್ಬು ನಿರ್ನಾಮ ಆಯಿತು. ಈಗ ಭತ್ತಕ್ಕೆ ಬಂದು ಬಿಟ್ಟಿದೆ ಆ ಸ್ಥಿತಿ. ಮಾನ್ಯ ಜ್ಞಾನೇಂದ್ರರವರೆ, ಗದ್ದೆ ಮಾಡುವುದಕ್ಕಾಗುವುದಿಲ್ಲ. ಯಾರಾದರೂ ರೈತರನ್ನು ಕೇಳಿ. ಗದ್ದೆ ಮಾಡುವುದರಿಂದೇನೂ ಆಗುವುದಿಲ್ಲ. ನಾವು ಹಾಗೇ ಕೊಂಡುಕೊಂಡು ಬಂದು ತಿನ್ನುವುದು ವಾಸಿ ಎಂದು ಆಗುತ್ತದೆ. ಅಡಿಕೆಗೆ ನಮ್ಮ ಹತ್ತಿರ ನೀರಿಲ್ಲವಲ್ಲಾ ಈಗ ನಮಗೇನಾಗಿದೆ.......

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಇನ್ನೊಂದೇನಾಗಿದೆ ಎಂದರೆ, ಆಂಧ್ರದಿಂದ ಬರತಕ್ಕಂಥ ಅಕ್ಕಿ, ಏನು ಭತ್ತ ಇದೆ ಅದು ನಮಗೆ ಮೇಜರ್ ಆಗಿ ಚಾನಲ್ ಏರಿಯಾದಿಂದ ರಾಯಚೂರಿನಿಂದ ಬರತಕ್ಕಂಥದ್ದು, ಈ ಕಡೆ ಭಾಗದ ಎಲ್ಲಾ ಓಲ್ಡ್ ಮೈಸೂರು ಸ್ಟೇಟ್‌ಗೆ ಎಲ್ಲರಿಗೂ ಕೂಡ ಹೊಡೆತ ಬಿದ್ದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಖಂಡಿತ. ನೀವು ಹೋಗಲಿ, ಅಕ್ಕಿ ಕೊಡುವುದು ಬಿಟ್ಟುಬಿಡಿ. ಗೋಧಿಯನ್ನಾದರೂ ಕೊಟ್ಟು, ನಮಗೆ ಭತ್ತ ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿಕೊಡಿ. ಅವರಿಗೆಲ್ಲಾ ಕೊಟ್ಟುಬಿಡಿ. ಅವರಿಗೆಲ್ಲಾದರೂ ನಾರ್ತ್ ಇಂಡಿಯಾದಿಂದ ಗೋಧಿ ತರಿಸಿ, ನಾನು ಬಿಲೋ ಪಾವರ್ಟಿ ಲೈನ್‌ನಲ್ಲಿರುವವರಿಗೆ ಗೋಧಿ ಕೊಡುತ್ತೇನೆ. ಅದರಲ್ಲಿ ಪೌಷ್ಠಿಕವಾದ ಅಂಶವಿದೆ ಎಂದೆಲ್ಲಾ ಹೇಳಿ, ಭತ್ತ ಜೊಳ್ಳು ಎಂದು ಮಾತಾಡುತ್ತೀರಲ್ಲಾ, ಕನಿಷ್ಠ ನಮ್ಮ ರೈತರು ಉಳಿದುಕೊಳ್ಳುತ್ತಾರೆ. ಕನಿಷ್ಠ ಅದೊಂದು ಅಗ್ರಿಕಲ್ಚರ್ ಆಪರೇಷನ್ ಉಳಿಯುತ್ತದೆ. ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ಇವತ್ತು ನಮ್ಮ ಪಾಪ್ಯುಲಾರಿಟಿಗೆ, ಚಟಕ್ಕೆ ಸ್ಕೀಮ್‌ಗಳನ್ನು ಘೋಷಣೆ ಮಾಡುತ್ತಾ ಹೋದರೆ ಮುಂದೆ ಬರುವ ಕಾಲದಲ್ಲಿ, Entire agricultural operation will be retarded or stopped. ಇದಕ್ಕೆ ಭವಿಷ್ಯ ಇಲ್ಲ. ಇದನ್ನು ಮಾಡಲೇಬೇಕಾ?

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಮಾಧುಸ್ವಾಮಿಯವರೆ, ಒಂದು ಕ್ಲಾರಿಫಿಕೇಷನ್. ಏನೆಂದರೆ, ಇಲ್ಲಿ ಸರ್ಕಾರದಲ್ಲಿ ಕುಳಿತು ನಮ್ಮ ಜಮೀನಿಗೆ ಜನರು ಕೆಲಸಕ್ಕೆ ಬರುವುದಿಲ್ಲ, ನೀವು ಬಡವರಿಗೆ ಕೊಡುವಂಥ ಬೆನಿಫಿಟ್ಸ್ ಅನ್ನು ತೆಗೆದು ಬಿಡಿ, ಜಮೀನಿಗೆ ಕೆಲಸಕ್ಕೆ ಬರಲಿ ಎಂದು ಹೇಳುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಹೇಳುತ್ತಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಬಹಶಃ ನೀವು ಮಾತನ್ನಾಡುವ ಅರ್ಥ ಅದೇ ಬರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ. I am quoting Chidambaram. ಅವರು ಇವತ್ತು ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂ ಅನ್ನು ಅಶ್ಯೂರ್ ಮಾಡಿ ಎಂದು ಹೇಳಿದ್ದಾರೆ. ಅವರು ಇವತ್ತು ಭಾರತ್ ನಿರ್ಮಾಣ್ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದಾರೆ. ಅವರ ತಲೆಯಲ್ಲಿ ಬುದ್ಧಿ ಇಲ್ಲವೆಂದು ನಾವು ಭಾವಿಸಬಾರದು. ನೀವು ಅವರಿಗೆ ಏನೇನು ಸಹಾಯ ಮಾಡಬೇಕೆಂದಿದ್ದೀರಿ,

ಅದು ದುಡಿಮೆ ಮೂಲಕ ಅವನ ಕಿಸೆ ತುಂಬಿಕೊಂಡು ಅದನ್ನು ಮಾರ್ಕೆಟ್‌ನಲ್ಲಿ ಕೊಳ್ಳುವ ಸ್ಥಿತಿ ತನ್ನಿ. ನಾವು ಬೇಡ ಅಂದಿಲ್ಲ. ಬಡವರು ಎಲಿವೇಟ್ ಆಗಬೇಕು ಎಂದರೆ, ನೀವು ಒಂದು ವರ್ಷ, ಎರಡು ವರ್ಷ ಅಕ್ಕಿ, ಭತ್ತ ಕೊಟ್ಟುಬಿಟ್ಟು ಸೋಮಾರಿ ಮಾಡುವುದರಿಂದ ಅವರು ಎಲಿವೇಟ್ ಆಗುವುದಿಲ್ಲ. ಪಾವರ್ಟಿ ಎಲಿಮಿನೇಷನ್ ಅನ್ನು ನೀವು ಊಟ ಕೊಟ್ಟು ಮಾಡುತ್ತೀರಾ? ಅದನ್ನು ಉದ್ಯೋಗ ಕೊಟ್ಟು ಮಾಡಬೇಕು. ಅವನ ಕಾಲ ಮೇಲೆ ಅವನನ್ನು ನಿಲ್ಲಿಸಬೇಕು. ಎಕನಾಮಿಕಲಿ ಅವನು ವಯೇಬಲ್ ಆಗಬೇಕು. ಆಗ ಅವನು, ನಾನು ಬಡತನ ರೇಖೆಗಿಂತ ಮೇಲೆ ಬಂದೆ ಎಂದು ಹೇಳುತ್ತಾನೆ. ನಮ್ಮ ತೀಟೆಗೆ, ಎರಡು ಓಟು ಹಾಕಿಸಿಕೊಳ್ಳುವುದಕ್ಕೆ ನಾವು ಬಂದುಬಿಟ್ಟು ಸಬ್ಸಿಡಿ ಕೊಟ್ಟುಬಿಟ್ಟು ಬಡತನ ನಿರ್ಮೂಲನೆ ಮಾಡಿದೆ ಎಂದುಬಿಟ್ಟು ಸರ್ಕಾರದಲ್ಲಿದ್ದೇವೆಂದು ನೀವು ಭಾಷಣ ಮಾಡುವುದಕ್ಕಾಗುತ್ತದೆಯೇ? Where is one rupee? Where is Rs. 18? Where is Rs. 3? Where is Rs. 12? ಆ ರೈತರಿಗೇನು ಮಾಡುತ್ತೀರಿ? ಭತ್ತ ಕೊಡುತ್ತೀರಿ ತಾನೆ? ನಮ್ಮದೇ ಭತ್ತವನ್ನು ನೀವು ಒಂದು ರೇಟ್ ಫಿಕ್ಸ್ ಮಾಡಿಕೊಂಡು ಅದಕ್ಕೆ ಸಬ್ಸಿಡಿ ಕೊಟ್ಟು ಅವರಿಗೆ ಕೊಡಿ. Yes, we agree. ಕರ್ನಾಟಕ ರಾಜ್ಯದಲ್ಲಿ ಏನು ನಾವು ಭತ್ತ ಬೆಳೆಯುತ್ತೇವೆ, ಬಯಲುಸೀಮೆಯಲ್ಲೇನು ಬೆಳೆಯುತ್ತೇವೆ, ನಾಲೆಯಲ್ಲೇನು ಬೆಳೆಯುತ್ತೇವೆ, You Procure that ಮೊದಲೇ ಅದನ್ನು ಕೊಂಡುಕೊಳ್ಳಿ. ನಮ್ಮ ರೈತರಿಗೆ ನೀವು ಈ ರೇಟ್‌ಗೆ ಅಕ್ಕಿ ಬೆಳೆದುಕೊಡಿ ನಾವು ಅದನ್ನು ಕೊಂಡುಕೊಂಡು ಸಬ್ಸಿಡೈಸ್ ಮಾಡಿ ಅವರಿಗೆ ಕೊಡುತ್ತೇವೆಂದು ಹೇಳಿ. ಈ ಕಡೆ ನಮ್ಮ ಕ್ಷೇತ್ರ ಉಳಿಯಬೇಕಲ್ಲಾ? ಆಂಧ್ರದಿಂದ, ತಮಿಳುನಾಡಿನಿಂದ ಬರುವ ಅಕ್ಕಿಯನ್ನು ನೀವು ಸಬ್ಸಿಡೈಸ್ ಮಾಡಿಕೊಟ್ಟು ಇವತ್ತು ಈ ರಾಜ್ಯದ ರೈತನನ್ನು ನಿರುದ್ಯೋಗಿಯನ್ನಾಗಿ ಮಾಡಿಬಿಟ್ಟರೆ ಅವರ ಗತಿ ಏನು? ಮಾಡಲೇಬೇಕೆಂಬ ನಿಮ್ಮ ಭಾವನೆ ಇದ್ದರೆ, ಪ್ಲೀಸ್ ನಮಗೊಂದು ಧಾರಣೆ ನಿಗದಿ ಮಾಡಿ, ಅದನ್ನು ಸಬ್ಸಿಡೈಸ್ ಮಾಡಿಕೊಡಿ. ಅದನ್ನು ಬಿಟ್ಟು, ನಾವು ಹಾಗೆ ಕೊಡುತ್ತೇವೆ, ಹೀಗೆ ಕೊಡುತ್ತೇವೆ, ಅಷ್ಟು ಕೊಡುತ್ತೇವೆ, ಇಷ್ಟು ಕೊಡುತ್ತೇವೆ ಎಂದು ಒಬ್ಬರ ಮೇಲೊಬ್ಬರಿಗೆ ಕಾಂಪಿಟೇಷನ್ ಏತಕ್ಕೆ ಎಂಬುದು ನನಗೆ ಗೊತ್ತಿಲ್ಲ. Where will your programmes go? ಈ ರಾಜ್ಯವೇ ಮುಳುಗಿ ಹೋಗುವ ಸ್ಥಿತಿ ಬರಬಹುದು. ನಾವು ಇವತ್ತು ಎಲ್ಲಿಗೆ ಹೋಗುತ್ತಿದ್ದೇವೆ? We are creating unemployes. We are creating hollow citizens. ಇವತ್ತು ಸೋಮಾರಿಗಳನ್ನು ನಾವು ನಿರ್ಮಾಣ ಮಾಡುತ್ತಿದ್ದೇವೆ. ನಾನು ರಾಜಕೀಯದ ಭಾಷಣ ಮಾಡುತ್ತಿಲ್ಲ. ನಾಳೆ ಅವರ ಗತಿ ಏನು? ಎಷ್ಟು ದಿವಸ ನೀವು ಕೊಡುವುದಕ್ಕಾಗುತ್ತದೆ? ಈ ಅಭ್ಯಾಸ ಮಾಡಿಸಿಬಿಟ್ಟು ನಿಲ್ಲಿಸಿಬಿಟ್ಟರೆ, ನಾಳೆ ಅವರು ಎಲ್ಲಿಗೆ ಹೋಗಿ ನಿಲ್ಲಬೇಕು? How long? 700, 800 ಕೋಟಿ ರೂಪಾಯಿ ಸಬ್ಸಿಡಿಯನ್ನು ಅಲ್ಲಿ ಕೊಟ್ಟುಕೊಂಡು ಹೋಗುತ್ತೀರಿ. ಒಂದು ಕಡೆ ಕೇಂದ್ರದಲ್ಲಿ ಸರ್ಕಾರ ಬರುತ್ತದೆ, ಈ ಎಲ್ಲಾ ಸಬ್ಸಿಡಿಗಳನ್ನು ಕಡಿಮೆ ಮಾಡಬೇಕು, ನಮ್ಮ ಕಾಲ ಮೇಲೆ ನಾವು ನಿಲ್ಲಬೇಕು ಎಂದು ಹೇಳುತ್ತದೆ. ಇನ್ನೊಂದು ಕಡೆ ಸರ್ಕಾರ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸ್ಟಾರ್ಟ್ ಆಗುತ್ತದೆ. ಯಾರಿಗೆ ಇನ್‌ಪುಟ್ಸ್ ಕೊಟ್ಟು ಅಗ್ರಿಕಲ್ಚರ್ ಕ್ಷೇತ್ರ ಬೆಳೆಸಬೇಕಾಗಿತ್ತೋ, ಆ ಕ್ಷೇತ್ರವನ್ನು ನಿರ್ನಾಮ ಮಾಡಿಬಿಟ್ಟು, ಅಲ್ಲಿ ಕೆಲಸ ಮಾಡುವವರನ್ನು ಕೂಡಿಸಿಬಿಟ್ಟು ನಾವು ಊಟಕ್ಕೆ ಕೊಡುತ್ತೇವೆಂದು ಬಿಟ್ಟು, ಬಿಲೋ ದಿ

ಪಾವರ್ಟಿಲೈನ್ ಎಂದು ನೀವು ಹೇಳಿಕೊಂಡು ಹೋದರೆ, ರೂರಲ್ ಏರಿಯಾದ ಗತಿ ಏನು? ನಾಳೆ ಅಲ್ಲಿ ಬರುವವರಾರು? ಅಲ್ಲಿ ಬದುಕುವರಾರು? ಎಷ್ಟು ದಿನಗಳತನಕ ಇದು ನಡೆಯುತ್ತದೆ ಸಾರ್? One fine day, will you stop all this? ಇಲ್ಲಿ ನೋಡಿ, ನಿನ್ನೆ ಒಂದು ಕಮಿಟಿಯ ಶಿಫಾರಸ್ಸು ಆಗಿದೆ. ಎನ್‌ಟೈರ್ ಕುಕ್ಕಿಂಗ್ ಗ್ಯಾಸ್ ಮೇಲಿರುವ ಸಬ್ಸಿಡಿಯನ್ನು ಬಿಲೋ ದಿ ಪಾವರ್ಟಿ ಲೈನ್ ಬಿಟ್ಟು ಎಲ್ಲರಿಗೂ ತೆಗೆದುಹಾಕಿ ಎಂದು ಕೇಂದ್ರ ಸರ್ಕಾರಕ್ಕೆ ವರದಿ ಬಂದಿದೆ. ಇದೆಲ್ಲಾ ಆದರೆ, ರೈತರು ಹೋಗಿ ಎಲ್ಲಿ ನಿಲ್ಲಬೇಕು ಎಂಬುದು ನನಗರ್ಥವಾಗುತ್ತಿಲ್ಲ. ನಾನು ಕೇಳುವುದು, ಏನೆಂದರೆ ಒಂದು ಸಲ ಅವನಿಗೆ ನಾವು ಸಹಾಯ ಮಾಡಿದರೆ ಆತನ ಜೀವನದಲ್ಲಿ ಆತ ಬಡತನ ರೇಖೆಗಿಂತ ಮೇಲೆ ಬರುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದೊಂದು ಸರ್ಕಾರಿ ಕಾರ್ಯಕ್ರಮವಾಗುವುದು ಬಿಟ್ಟರೆ ಈ ತರಹ ಅಕ್ಕಿ ಕೊಡುತ್ತೇವೆ, ಭತ್ತ ಕೊಡುತ್ತೇವೆ, ಸೈಕಲ್ ಕೊಡುತ್ತೇವೆ, ಓಲೆ ಕೊಡುತ್ತೇವೆ, ಜುಮುಕಿ ಕೊಡುತ್ತೇವೆ, ಮಾಂಗಲ್ಯ ಕೊಡುತ್ತೇವೆ ಎಂದು ಹೋದರೆ ಈ ಸರ್ಕಾರ ಎಲ್ಲಿಗೆ ಹೋಗಿ ನಿಲ್ಲುತ್ತದೆ? ಇದನ್ನೆಲ್ಲಾ ನಾವು ಏತಕ್ಕೆ ಕೊಡುತ್ತಿದ್ದೇವೆ? We have to concentrate on projects.

ನಾಳೆ ಇಲ್ಲಿ ಒಂದು ರಾಜ್ಯ ಇರಬೇಕಲ್ಲಾ? 2008–09ಕ್ಕೆ ನೀವು ಎಲ್ಲಾ ಡಿಫಿಸಿಟ್ಸ್ ಅನ್ನು ನಿಲ್ ಮಾಡಿಕೊಳ್ಳಬೇಕಲ್ಲಾ. ಎಲ್ಲಿಂದ ತರುತ್ತೀರಿ? ದುಡ್ಡಿದೆ, ಯಾರೋ ಉಳಿಸಿ ಹೋದರೆ, ಯಾರು ಬೇಕಾದರೂ ಕೊಟ್ಟುಕೊಂಡು ಹೋಗಬಹುದು. ನಮಗೆ ಕೊಡಿ ಸ್ವಾಮಿ. ಇನ್ನೂ ಒಳ್ಳೆಯ ಕಾರ್ಯಕ್ರಮಗಳನ್ನು ಅನೌನ್ಸ್ ಮಾಡಿ ಹೋಗುತ್ತೇವೆ. ನಮ್ಮದೇನು ಹೋಗಬೇಕಾಗಿದೆ. ಹಣ ಇದೆ, ಕೊಡುತ್ತೇವೆ. ಎರಡನೆಯದು, ನಾನು ಬಹುಶಃ ಜಾಸ್ತಿ ಸಮಯ ತೆಗೆದುಕೊಳ್ಳುತ್ತಿದ್ದೇನೆಂದು ಅನಿಸುತ್ತಿದೆ. ಇನ್ನೂ ನಮ್ಮ "ಸುವರ್ಣ ಕರ್ನಾಟಕ". ಈ ವರ್ಷ "ಸುವರ್ಣ ಕರ್ನಾಟಕ" ಕಾರ್ಯಕ್ರಮಗಳನ್ನು ಹಾಕಿಕೊಂಡುಬಿಟ್ಟಿರಿ. ಈ ತೀರ್ಮಾನ ಮಾಡಿದವರಾರು? ಮಾಡಬೇಕೆಂದವರು ಯಾರು? ಶುರುವಾಗಿದ್ದು ಯಾವತ್ತು? ಎಂಡ್ ಆಗಿದ್ದು ಯಾವತ್ತು? ಇದು ನಮಗೆ ಗೊತ್ತಾಗುತ್ತಿಲ್ಲ. ಮಾಡಿದ ಮೇಲೆ ಕನಿಷ್ಠ ನಮಗೆ, ಸದಸ್ಯರುಗಳಿಗೆ ಹೇಳಬೇಕು. ಈ ವರ್ಷ ಇಂತಿಂಥ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳುತ್ತಿದ್ದೇವೆ, ನಿಮಗೆಲ್ಲಾ ನಾವು ಇದರಲ್ಲಿ ಬಳಸಿಕೊಳ್ಳುತ್ತೇವೆಂದು ಹೇಳಬೇಕು. ಅದು ಆಗಲೇ ಇಲ್ಲ. ಯಾರೋ ನಾಲ್ಕು ಜನರ ಹೆಸರನ್ನು ಹೇಳಿ ನಾವು ಪೀಠ ಸ್ಥಾಪನೆ ಮಾಡುವುದು. ನಾನು ಕೇಳುತ್ತಿದ್ದೇನೆ, ಹಾಗಾದರೆ, ನಿಮ್ಮ ಇಲಾಖೆ ಸತ್ತು ಹೋಗಿತ್ತಾ? ನಮ್ಮ ತಿ.ನಂ. ಶ್ರೀಕಂಠಯ್ಯನವರದ್ದು ಈ ವರ್ಷ ಜನ್ಮಶತಾಬ್ದಿ ಇದೆ. ತಿ.ನಂ.ಶ್ರೀಕಂಠಯ್ಯನವರ ಹೆಸರನ್ನು ಎಲ್ಲಾದರೂ ಒಂದುಕಡೆ ಕರೆಯುವ ಸೌಜನ್ಯ ಇಲ್ಲವೇ ನಿಮಗೇ? ಪಂಪ ಮಹಾಕವಿ ಪ್ರಶಸ್ತಿ ವಿಜೇತ, ಕಾವ್ಯ ಮೀಮಾಂಸೆ ಬರೆದವರು ಈ ನಾಡಿನಲ್ಲಿ, ಅವರು ನನ್ನ ತಾಲ್ಲೂಕಿನಲ್ಲಿ ಹುಟ್ಟಿರುವುದು. ಪಾಪವೇನು? ಚಿಕ್ಕನಾಯಕನಹಳ್ಳಿಯಲ್ಲಿ ಹುಟ್ಟಿಬಿಟ್ಟರೆ, ಪಾಪ! ನಿಮ್ಮ ಕನ್ನಡ ಅಂಡ್ ಕಲ್ಚರ್ ಇಲಾಖೆಯವರು ತೀ.ನಂ. ಶ್ರೀಕಂಠಯ್ಯನವರದ್ದು, ಆಚರಣೆ ಏಕೆ ಮಾಡಿದರು? ಹುಟ್ಟಿದ ದಿವಸ ಎಂದು ನವೆಂಬರ್ 26ನೇ ತಾರೀಖು ಕನ್ನಡ ಅಂಡ್ ಕಲ್ಚರ್ ಇಲಾಖೆ ಒಂದು ದೀಪ ಹಚ್ಚಿ ಅಂಥ ಒಬ್ಬ ದೊಡ್ಡ ಸಾಹಿತಿಗೆ ನೀವು ಅವಮಾನ ಮಾಡುತ್ತೀರಿ. ನಿಮಗೆ ನಮ್ಮ ಗುಬ್ಬಿ ವೀರಣ್ಣನವರು

ಕಾಣುವುದಿಲ್ಲ, ನಿಮಗೆ ಬಿ.ಎಂ.ಶ್ರೀಕಂಠಯ್ಯನವರು ಕಾಣುವುದಿಲ್ಲ. ಏನು ಕತೆ ನಡೆಯುತ್ತಿದೆ ಎಂದು ನಮಗೆ ಅರ್ಥವಾಗುವುದಿಲ್ಲ. ನೀವು ಮಾಡಬೇಕು ತಾನೇ? ಕನ್ನಡ ಅಂಡ್ ಕಲ್ಚರ್‌ನಲ್ಲಿ ಅಥವಾ ಈ ರಾಜ್ಯದಲ್ಲಿ ಸುವರ್ಣ ಕರ್ನಾಟಕ. ಆಚರಣೆ ಮಾಡುವಾಗ ಯಾರ್ಯಾರು ಈ ನಾಡಿಗೆ, ಈ ಭಾಷೆಗೆ, ಸಾಹಿತ್ಯಕ್ಕೆ ದುಡಿದಿದ್ದಾರೆ, ಅವರ ಸ್ಥಿತಿಗತಿಗಳೇನು? ಅವರು ಯಾರ್ಯಾರಿಗೆ ಸ್ಮಾರಕ ಮಾಡಬಹುದು? ಅಥವಾ ಅವರ ಮನೆಯವರ ಯೋಗ ಕ್ಷೇಮವನ್ನು ಯಾರು ವಿಚಾರ ಮಾಡಬೇಕು? ಎಲ್ಲಾದರೊಂದು ಕಡೆ ಚರ್ಚೆಯಾಗಬೇಕಲ್ಲಾ I urge this Government ತೀ.ನಂ. ಶ್ರೀಕಂಠಯ್ಯನವರಿಗೆ ತಾವೇನಾದರೂ ಈ ಶಾಸನ ಸಭೆಯಲ್ಲಿ ಅಥವಾ ನಿಮ್ಮ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಂಡು ಅವರಿಗೆ ಸ್ಮಾರಕ ಮಾಡುವುದು, ಅವರ ಶತಾಬ್ದಿಯನ್ನಾಚರಣೆ ಮಾಡುವ ಕೆಲಸ ನೀವು ಮಾಡದಿದ್ದರೆ, ಕನ್ನಡ ನಾಡಿಗೆ, ಸಾಹಿತ್ಯಕ್ಕೆ ಬಗೆದ ದ್ರೋಹ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ತಮಗೆ ತಿ.ನಂ. ಶ್ರೀಕಂಠಯ್ಯನವರ ವ್ಯಕ್ತಿತ್ವ ಗೊತ್ತಿಲ್ಲ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಕಾವ್ಯ ಮೀಮಾಂಸೆ ಎಂದರೇನು ಗೊತ್ತಾ ಎಂದು ನಾನು ಕೇಳಬೇಕಾಗುತ್ತದೆ. ಕಾವ್ಯ ಮೀಮಾಂಸೆ ಎಂದರೇನು ಗೊತ್ತಾ ಎಂದು ನಾನು ಕೇಳಬೇಕಾಗುತ್ತದೆ. ನಾವು ಎಲ್ಲಿದ್ದೇವೆ? ನವೆಂಬರ್ ತಿಂಗಳಲ್ಲಿ ಅವರದ್ದು 100ನೇ ವರ್ಷ ಆಚರಣೆ ಇದೆ. ಏನೂ ಯೋಚನೆ ಮಾಡುವ ಹಾಗೇ ಇಲ್ಲ ಆ ಕಡೆ. ಅವರೇನಾದರೋ? ಏಕಾದರೋ? ಏನಾದರೋ ಎಂದು ಯೋಚನೆ ಮಾಡುವ ಹಾಗೇ ಇಲ್ಲ. ಇನ್ನು ಸಮಯ ಜಾಸ್ತಿ ತೆಗೆದುಕೊಳ್ಳಬಾರದೆನ್ನುವ ಉದ್ದೇಶದಿಂದ ಬೇಗ ಬೇಗ ನನ್ನ ಕೆಲಸವನ್ನು ಮುಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ತಾವು ರಸ್ತೆಗಳ ಬಗ್ಗೆ ಮಾತನಾಡಿದ್ದೀರಿ. ಈಗ 50 ಲಕ್ಷ ರೂಪಾಯಿಗಳನ್ನು ಪಿಡಬ್ಲ್ಯೂಡಿ ರಸ್ತೆಗಳಿಗೆ ಮೆಂಟೆನೆನ್ಸ್‌ಗೆ ಕೊಡುತ್ತೇವೆಂದು ತಾವು ಹೇಳಿದಿರಿ. ಸಿಎಂಜಿಎಸ್‌ವೈ ಮಾಡುತ್ತೇವೆ, ಇದರಲ್ಲಿ ಕೊಡುತ್ತೇವೆಂದು ಹೋದಸಾರಿ 5024 ಹೆಡ್‌ನಲ್ಲಿ ಏನೋ ಕೊಟ್ಟಿರಿ. ಇದರಲ್ಲಿ ಯಾವ ಲಾಜಿಕ್ ಇದೆ ಎಂದು ನಾವು ಕೇಳುತ್ತೇವೆ. ತಾವು ಪಿಡಬ್ಲ್ಯೂಡಿ ರಸ್ತೆಗೆ 50 ಲಕ್ಷ ರೂಪಾಯಿಗಳನ್ನು ಒಬ್ಬ ಶಾಸಕರಿಗೆ ಕೊಡುತ್ತೇವೆಂದು ಅನೌನ್ಸ್ ಮಾಡುವುದರಲ್ಲಿ ಯಾವ ಲಾಜಿಕ್ ಇದೆ? ಪಿಡಬ್ಲ್ಯೂಡಿ ರಸ್ತೆಯ ಉಸ್ತುವಾರಿ ಅಥವಾ ಮೆಂಟೆನೆನ್ಸ್ ಲೆಂಗ್ತ್ ಮೇಲೆ ಹೋಗಬೇಕಲ್ಲವೇ ಕಾರಜೋಳ್‌ರವರೇ? ನಿಮ್ಮ ಕಾನ್‌ಸ್ಟಿಟ್ಯೂಯೆನ್ಸಿನಲ್ಲಿ ನೂರು ಕಿಲೋ ಮೀಟರ್ ಪಿಡಬ್ಲ್ಯೂಡಿ ರಸ್ತೆ ಇದ್ದರೆ ನಿಮಗೂ ಅಷ್ಟೇ ಕೊಡುವುದು, ಇನ್ನೊಬ್ಬರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಹತ್ತು ಕಿಲೋ ಮೀಟರ್ ಇದ್ದರೆ ಪಿಡಬ್ಲ್ಯೂಡಿ ರಸ್ತೆಗೆ ಮೆಂಟೆನೆನ್ಸ್ ಗ್ರಾಂಟನ್ನು ಅವರಿಗೇ ಅಷ್ಟೇ ಕೊಡುವುದಾ? 3054 ಹೆಡ್ ಅನ್ನು ನೀವು ರದ್ದು ಮಾಡಿಬಿಟ್ಟಿರಿ. ಅದನ್ನು ರದ್ದು ಮಾಡಿ ಇನ್ನೊಂದು ಯಾವುದೋ ಒಂದು ಯೋಜನೆ ಒಳಗೆ ಅದನ್ನು ತರುತ್ತಿದ್ದೇವೆಂದರೆ, ಆ ಪ್ರಿನ್ಸಿಪಲ್‌ನ್ನು ಅದರಲ್ಲಿ ಅಡಾಪ್ಟ್ ಮಾಡಬಾರದಾ? ಅವರೇ ಹೇಳಲಿ, ಅವರೇ ಇದನ್ನು ಒಪ್ಪುತ್ತಾರಾ ಎಂದು ಹೇಳಿಬಿಡಲಿ, ತಾವು ಹೇಳಿಬಿಡಿ, ಪಿಡಬ್ಲ್ಯೂಡಿ ಮಂತ್ರಿಯಾಗಿದ್ದವರು, ಪಿಡಬ್ಲ್ಯೂಡಿಯನ್ನು ನೀವು ಈ ರೀತಿ ಸ್ಮ್ಯಾಶ್ ಮಾಡಬಹುದು ಎಂದು ತಿಳಿದುಕೊಂಡಿದ್ದೀರಾ? ಇನ್ನೊಂದು ಅಪ್ರೋಪಿಯೇಷನ್ ಬಿಲ್‌ನಲ್ಲಿ ನಾನು ಆ ದಿವಸ ಇಲ್ಲಿ ಕೇಳಿದೆ. 200 ಚಿಲ್ಲರೆ ರೂ. ಕಂಟಿಂಜೆನ್ಸಿ ಅಮೌಂಟ್‌ನಿಂದ ಡ್ರಾ ಮಾಡಿ ನೀವು ಪಿಡಬ್ಲ್ಯೂಡಿಗೆ ಖರ್ಚು ಮಾಡುತ್ತೀರಿ, ಯಾರ ಅಪ್ಪನದು

ಅಂತ ಖರ್ಚು ಮಾಡಿದಿರಿ ಎಂದು ನಾನು ಅವತ್ತು ಕೇಳಿದೆ. 200 ಚಿಲ್ಲರೆ ಕೋಟಿ ರೂ. ಕಂಟಿಂಜೆನ್ಸಿಯಿಂದ ಡ್ರಾ ಆಗುತ್ತದೆ. ಅಂದರೆ, ಒಬ್ಬೊಬ್ಬರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಒಂದೊಂದು ಕೋಟಿ ರೂಪಾಯಿ ಕೆಲಸ ಆಗಬಹುದಾಗಿತ್ತು. ಅದು ಖರ್ಚು ಎಲ್ಲಿ ಆಯಿತು? ನಿಮಗೆ ಯಾರು ಅಧಿಕಾರವನ್ನು ಕೊಟ್ಟರು? ಬಜೆಟನ್ನು ಮೀರಿ 200 ಚಿಲ್ಲರೆ ಕೋಟಿ ರೂ.ಯನ್ನು ಡ್ರಾ ಮಾಡುತ್ತೀರಿ. ನಮಗೆ ನೀವು ಎಲ್ಲಿ ಖರ್ಚು ಮಾಡಿದ್ದೀರೆಂದು ಹೇಳಬೇಕು ಅಲ್ಲವೇ? ಈಗ ನಮಗೆ 50 ಲಕ್ಷ ರೂಪಾಯಿ, ಕೊಡುತ್ತೀರಿ ಎಂದರೆ ಇವತ್ತು 50 ಲಕ್ಷ ರೂಪಾಯಿ ಅಂದರೆ ಏನು? ಇವತ್ತು 8 ಲಕ್ಷ ರೂಪಾಯಿ ಮೂರು ಮುಕ್ಕಾಲು ಮೀಟರ್ ಅಗಲದ ಒಂದು ಕಿಲೋ ಮೀಟರ್ ಉದ್ದದ ರಸ್ತೆಯನ್ನು ಆಸ್ಫಾಲ್ಟ್ ಮಾಡಲಿಕ್ಕೆ ಬೇಕಾಗುತ್ತದೆ. ಏಪ್ರಿಲ್ ಆದ ಮೇಲೆ ರೀವೈಸ್ಡ್ ಷೆಡ್ಯೂಲ್ಡ್ ಆಫ್ ರೇಟ್ಸ್ ಬಂದ ಮೇಲೆ 10 ಲಕ್ಷ ರೂಪಾಯಿ ಆಗುತ್ತದೆ. 5 ಕಿಲೋ ಮೀಟರ್ ರಸ್ತೆಯನ್ನು ನಾವು ಮೆಂಟೇನ್ ಮಾಡಿದರೆ ಅಥವಾ ಚಿಪ್ ಕಾರ್ಪೆಟ್ ಮಾಡಿ ಆಸ್ಫಾಲ್ಟ್ ಮಾಡಿಬಿಟ್ಟರೆ ಶಾಸಕರಾಗಿ ಉಳಿಯುವ ಸ್ಥಿತಿ ಇರುತ್ತದೆಯೇ? ನಾವು ಆ ಕ್ಷೇತ್ರಗಳಲ್ಲಿ ಇರಬಹುದಾ? ಮತ್ತೆ ಕೆಲವು ಕಡೆ ಬೇಕೇ ಇಲ್ಲ, ಸಿಟಿ ಏರಿಯಾದಲ್ಲಿ ಅವರಿಗೆ ನೀವು ಏಕೆ ಕೊಡುತ್ತೀರಿ?

ಶ್ರೀ ಎ. ಸೋಮಣ್ಣ : ನಿಮಗೆ ಸಿಟಿ ಎಂದರೆ ಬಾರಿ ಸಿಟ್ಟು ಅಲ್ಲಾ ಏಕೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಊರಿನಲ್ಲಿ ದನ ಕಾಯುತ್ತಿದ್ದೇವೆ ಅದಕ್ಕೆ.....ವೋಟು ಮಾಡಿಕೊಂಡು ನಿಮ್ಮನ್ನು ಮೇಲಕ್ಕೆ ತಂದೆವಲ್ಲಾ.................

ಶ್ರೀ ಎ. ಸೋಮಣ್ಣ :- ಒಂದ್ನಿಮಿಷ ತಾಳಿ. ಮಾನ್ಯ ಮಾಧುಸ್ವಾಮಿಯವರು ಮಾತನಾಡುವುದನ್ನು ನಾವು ಕೇಳುತ್ತಲೇ ಇದ್ದೇವೆ. ನಾವು ಹೊರಗಡೆ ಇದ್ದವರು ಇಲ್ಲಿ ಬಂದು ಕುಳಿತುಕೊಳ್ಳುತ್ತೇವೆ. ಆದರೆ, ಮಾನ್ಯ ಮಾಧುಸ್ವಾಮಿಯವರು ಕುಂಬಳಕಾಯಿ ಕಳ್ಳ ಎಂದರೆ ಅದೇನೋ ಅಂದ ಹಾಗೆ, ಬರಿ ಸಿಟಿ ಸಿಟಿ ಎನ್ನುತ್ತಾರೆ ಏನರ್ಥ? ಮಾತೆತ್ತಿದರೆ ಸಿಟಿ.......

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಕುಂಬಳಕಾಯಿ ಕಳ್ಳ ಅಂದರೆ ನೀವು.........

ಶ್ರೀ ವಾಟಾಳ್ ನಾಗರಾಜ್ : ಕುಂಬಳಕಾಯಿ ಕಳ್ಳ ಎನ್ನುವ ಗಾದೆ ಅದು ಅವರಿಗೆ ಅನ್ವಯವಾಗುತ್ತದೆ, ಇವರಿಗೆ ಅಲ್ಲ........

ಶ್ರೀ ಎ. ಸೋಮಣ್ಣ : ಇಲ್ಲ ನಮಗಲ್ಲ ಅದು, ನೀವು ತಪ್ಪು ತಿಳಿದುಕೊಂಡಿದ್ದೀರಿ. ಸಿಟಿ ಎಂದರೆ ನೀವು ಹೀಗೇಕೆ ಮಾಡುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ನನ್ನ ಅಭಿಪ್ರಾಯ; ನಾನು ಹೇಳುತ್ತೇನೆ. ನೀವು ಮಾತನಾಡುವಾಗ ಹೇಳಿ.....

ಶ್ರೀ ಕೆ. ಶ್ರೀನಿವಾಸಗೌಡ : ನೀವು ಸಿಟಿಯಲ್ಲಿ ಉತ್ತಿಲ್ಲರಿ...

ಶ್ರೀ ಎ. ಸೋಮಣ್ಣ : ನಾವು ಉತ್ತಿದ್ದೇವೆ ಕಣ್ರೀ ಸುಮ್ನಿರಿ ಏನು ಮಾತನಾಡುತ್ತೀರಿ ಮಾನ್ಯ ಶ್ರೀನಿವಾಸಗೌಡರವರೆ, ದಯವಿಟ್ಟು ಕ್ಷಮಿಸಿ, ನಾವು ಉತ್ತಿರುವವರೇ, ನಿಮಗೆ ಊಳುವುದು ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಯಮಾಡಿ ಬೆಂಗಳೂರು ನಗರದ ಬಗ್ಗೆ ಕಾಳಜಿ

ಇರುವಾಗ ಪಟ್ಟಣದ ಪ್ರದೇಶಗಳೂ ಕೂಡ ಅಷ್ಟೇ ಅವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು. ಇದು ಕೂಡ ಅಭಿವೃದ್ಧಿ ಪಥದಲ್ಲಿ ಹೋಗುತ್ತಿರುವುದು....

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರ ಓಪಿನಿಯನ್‌ನ್ನು ಅವರು ಆಮೇಲೆ ಹೇಳಲಿ. ನನ್ನದೇನೂ ಅಭ್ಯಂತರವಿಲ್ಲ. ಅದು ಅವರವರ ಇಷ್ಟ, ನನ್ನ ಇಷ್ಟ ನಾನು ಹೇಳುವುದಕ್ಕೆ ಏನು? ನಾನು ಕೇಳುವುದು ಅವರು ಲೆಕ್ಕ ಕೊಡಲಿ. ಎಡಿಬಿ ಯಿಂದ ಎಷ್ಟು ಖರ್ಚು ಆಯಿತು, ಐಡಿಎಫ್‌ಎಂಟಿ ಯಿಂದ ಎಷ್ಟು ಖರ್ಚು ಆಯಿತು? ಕಾರ್ಪೊರೇಷನ್ ಗ್ರಾಂಟ್‌ನಿಂದ ಎಷ್ಟು ಖರ್ಚು ಆಯಿತು? ಒಂದು ವಾರ್ಡಿಗೆ 1.1 ಕೋಟಿ ರೂ. ಡೆವಲಪ್‌ಮೆಂಟ್ ಆಯಿತು, ಒಂದು ವಾರ್ಡಿಗೆ 1.5 ಕೋಟಿ ರೂ. ಪ್ಯಾಕೇಜ್ ಇವತ್ತು ಬೆಂಗಳೂರಿಗೆ ಇದೆ. ಇದೆಲ್ಲವನ್ನೂ ಲೆಕ್ಕ ಕೊಡಲಿ. ಆಮೇಲೆ ಸನ್ಮಾನ್ಯ ರೈತ ಪ್ರತಿನಿಧಿಗಳು ಇಲ್ಲಿಗೆ ಶಾಸಕರಾಗಿ ಬಂದಿರುವವರು ಇದ್ದಾರೆ. ಬೆಂಗಳೂರು ಸುತ್ತ ರೋಡ್ ಮಾಡಲಿಕ್ಕೆ 600 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟಿದ್ದಾರೆ I have to move a Cut Motion on that. Why Rs. 600 crore is reserved for in and around roads for Bangalore? ಹಾಗಾದರೆ ನಮಗೆ ಅನ್ಯಾಯವಾಗಿಲ್ಲವೇ? 600 ಕೋಟಿ ರೂ. ಈ ಬಜೆಟ್‌ನಲ್ಲಿ ತೆಗೆದಿಡಲಾಗಿದೆ. ಬೆಂಗಳೂರು ಸುತ್ತ ರಸ್ತೆಗಳನ್ನು ಮೂರು ವರ್ಷದಲ್ಲಿ ಮಾಡಲಿಕ್ಕೆ they have reserved Rs. 600 crore in this Budget. ಏಕೆ ಮಾಡಿದರು? ಏನು ಸಾರ್ 600 ಕೋಟಿ ರೂ. ಎಲ್ಲರಿಗೂ ಹಂಚಿಕೊಡಿ. ಏತಕ್ಕೆ ಒಂದು ಕಡೆ ಮಾಡುತ್ತೀರಿ, ಹಾಗಾದರೆ ನಮ್ಮಷ್ಟೇ ಬೆಂಗಳೂರಿಗೂ ಕೊಡಿ. ಏನು ನಾವೇನು ಓಡುವುದಿಲ್ಲವೆಂದು ತಿಳಿದುಕೊಂಡಿದ್ದೀರಾ? ಏನೂ ಬೆಂಗಳೂರಿಗೆ ಕೊಡುವುದಿಲ್ಲ ಎಂದು ಮಾತನಾಡುತ್ತೀರಿ, ಬಜೆಟ್ ಓದಿ, ಏಕೆ ಸಾರ್ 600 ಕೋಟಿ ರೂ. ಇಟ್ಟಿದ್ದೀರಾ? ನಾವು ಎಲ್ಲಿಗೆ ಹೋಗಬೇಕು? ಬೆಂಗಳೂರಿನಲ್ಲಿ ಹೋಗುವ ರಸ್ತೆಗಳು ಯಾವ್ಯಾವುದು? ಮೇನ್ ನ್ಯಾಷನಲ್ ಹೈವೇಸ್; ಅವರು ಮಾಡುವುದಿಲ್ಲವೇ? ಒಳಗಡೆ ಇರುವ ರಸ್ತೆಗಳು ಯಾವುವು? ಎಲ್ಲಾ ಖಾಸಗಿಯವರಿಗೆ ಕೊಟ್ಟಿರುವುದು ನೈಸ್ ಕಂಪನಿ ಅಂಥವರಿಗೆ ಕೊಟ್ಟಿರುವುದು, ರಿಂಗ್ ರೋಡ್‌ಗಳು, ಪೆರಿಫೆರಾಲ್ ರೋಡ್‌ಗಳು, ಲ್ಯಾಟರಲ್ ರೋಡ್‌ಗಳು, ನೀವು ಮಾಡುವುದು ಯಾವ ರೋಡು, ಚಿಕ್ಕಪೇಟೆ, ಬಳೇಪೇಟೆ ಶಿವಾಜಿನಗರದ್ದು ಅದು ಬಿಲ್‌ಗೆ. ಇದಕ್ಕೆ ನಮ್ಮ ಬಜೆಟ್‌ನಲ್ಲಿ ದುಡ್ಡು....

ಶ್ರೀ ವಿ. ಸೋಮಣ್ಣ : ಮಾನ್ಯ ಮಾಧುಸ್ವಾಮಿಯವರಿಗೆ ಅದಕ್ಕೇ ನಾವು ಹೇಳುವುದು, ದಯವಿಟ್ಟು ಇನ್‌ಸೈಡ್ ದಿ ಬೆಂಗಳೂರು ಯಾವುದೇ ರಸ್ತೆಯನ್ನು ಸರ್ಕಾರ ಮಾಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಯೀಲ್ಡ್ ಆಗಿಲ್ಲ. ನಾನು ಓದಿದ್ದೇನೆ. ಬೆಂಗಳೂರು ಸುತ್ತಮುತ್ತ ಇರುವ ರಸ್ತೆಗಳಿಗೆ 600 ಕೋಟಿ ರೂಪಾಯಿಗಳ ಯೋಜನೆ ಇಟ್ಟುಕೊಂಡಿದ್ದೇವೆ, ಅದಕ್ಕೆ ವರ್ಷಕ್ಕೆ 200 ಕೋಟಿ ರೂ. ನಂತೆ ಖರ್ಚು ಮಾಡುತ್ತಿದ್ದೇವೆಂದು ಈ ಬಜೆಟ್‌ನಲ್ಲಿ ಬಂದಿದೆ. ಇದಕ್ಕೆ ಏನು ಜಸ್ಟಿಫಿಕೇಷನ್ ಇದೆ? ಇಡೀ ನಮಗೆಲ್ಲಾ 50 ಲಕ್ಷ ರೂ.ಯಂತೆ ಎಷ್ಟು ಆಗುತ್ತದೆ? ಇಲ್ಲಿ 16 ಜನ ಎಂಎಲ್‌ಎಗಳನ್ನು ಸೇರಿಸಿಕೊಂಡು, ಇದನ್ನು ನೀವು ಹೇಳಬೇಕಲ್ಲಾ. ಮಾತಿಗೆ ನಂಜುಂಡಪ್ಪನವರ ವರದಿ, ನಂಜುಂಡಪ್ಪನವರ ವರದಿ ಅನ್ನುತ್ತೀರಿ, ಅದನ್ನು ಹೇಳಬೇಕಲ್ಲಾ.

200 ಚಿಲ್ಲರೆ ಕೋಟಿ ರೂ. ಕಂಟಿಂಜೆನ್ಸ್ ಅಮೌಂಟ್ ಡ್ರಾ ಮಾಡಿದ್ದೀರಲ್ಲಾ, ಅದರಲ್ಲಿ ಎಲ್ಲಿ ಏನೇನು ಆಗಿದೆ ಎಂದು ಲೆಕ್ಕ ಹೇಳಿ. ನಾವು ಏನು ಪಾಪ ಮಾಡಿದ್ದೇವೆ. ಈ ಕಡೆ ಕುಳಿತು ಪಾಪ ಮಾಡಿದ್ದೇವಾ? ಹಳ್ಳಿಯಲ್ಲಿ ಹುಟ್ಟಿ ಪಾಪ ಮಾಡಿದ್ದೇವಾ? 200 ಚಿಲ್ಲರೆ ಕೋಟಿ ಕಂಟಿಂಜೆನ್ಸ್ ಅಮೌಂಟನ್ನು ನೀವು ಡ್ರಾ ಮಾಡಿದ್ದೀರೆಂದರೆ ಎಲ್ಲಿ ಖರ್ಚು ಮಾಡಿದಿರಿ ಎಂದರೆ ಅದಕ್ಕೂ ಲೆಕ್ಕ ಕೊಡುವುದಿಲ್ಲ. ಬೆಂಗಳೂರು ಸುತ್ತ ಮುತ್ತ 200 ಕೋಟಿ ರೂ. ಎಲ್ಲಿ ಖರ್ಚು ಮಾಡುತ್ತೀರಿ ಅಂದರೆ ಅದಕ್ಕೂ ಲೆಕ್ಕ ಕೊಡುವುದಿಲ್ಲ. ಇನ್‌ಫ್ರಾಸ್ಟಕ್ಚರ್ ಡೆವಲಪ್‌ಮೆಂಟ್ ಹೆಸರಿನಲ್ಲಿ ಯಾರ್‍ಯಾರಿಗೊ ರೋಡ್ ಮಾಡಿಕೊಡುತ್ತೇವೆಂದರೆ ಅದಕ್ಕೂ ಲೆಕ್ಕ ಕೊಡುವುದಿಲ್ಲ. ನಮಗೇನು? ನಾವು ಬೆಂಗಳೂರಿಗೆ ಮಾಡಬೇಡಿ ಎನ್ನುವುದಿಲ್ಲ. ನಮಗೆ ಏನು ಮಾಡುತ್ತೀರಿ ಹೇಳಿ. ಮೂರುಮುಕ್ಕಾಲು ಮೀಟರ್ ಅಗಲದ ರಸ್ತೆಯಲ್ಲಿ ನಾವು ಎಷ್ಟು ದಿವಸ ಓಡಾಡಬೇಕು? ಎದುರುಗಡೆಯಿಂದ ಒಂದು ಬಸ್ ಬಂದರೆ ನಮ್ಮ ಕಾರನ್ನು ಪಕ್ಕಕ್ಕೆ ನಿಲ್ಲಿಸಿಕೊಂಡು ಎಷ್ಟು ದಿವಸ ಓಡಾಡಬೇಕು? ಕನಿಷ್ಠ ಸೌಜನ್ಯ ಟೂ ಲೈನ್ ರೋಡ್‌ನ್ನು ಕರ್ನಾಟಕದಲ್ಲಿ ಯಾವತ್ತು ಮಾಡುತ್ತೀರಿ? ಕನಿಷ್ಠ ಸೌಜನ್ಯ ಉತ್ತರ ಕರ್ನಾಟಕ ಓಡಾಡುವಂಥ ರೋಡ್‌ಗಳನ್ನು ಯಾವತ್ತು ಮಾಡುತ್ತೀರಿ? ನಿಮ್ಮ ಪ್ರೋಗ್ರಾಂ ಏನು? ಇಲ್ಲವೇ ಇಲ್ಲ. ಎಲ್ಲರಿಗೂ 50 ಲಕ್ಷ ರೂ. ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದನ್ನು ವಿತ್ ಡ್ರಾ ಮಾಡಿಕೊಳ್ಳಬೇಕು. ನಿಮ್ಮದು 50 ಲಕ್ಷ ರೂ. ನಮಗೆ ಖಂಡಿತ ಬೇಡ. ಕಿಲೋ ಮೀಟರ್ ರಸ್ತೆಯನ್ನು ತಾವು ಪಿಡಬ್ಲ್ಯೂಡಿಯಿಂದ ಮೆಂಟೇನ್ ಮಾಡಿ, ಯಾರ್‍ಯಾರಿಗೆ ಎಷ್ಟೆಷ್ಟು ಬರುತ್ತದೆ ಅಷ್ಟು ಮಾಡಿ ಬೆಂಗಳೂರಿನವರಿಗೂ ಮಾಡಿ, ತುಮಕೂರಿನವರಿಗೂ ಮಾಡಿ, ನಮಗೂ ಮಾಡಿ ಮಾನ್ಯ ದೇಶಪಾಂಡೆಯವರು ಎಲ್ಲಿಗೆ ಹೋಗಬೇಕು? ಅವರು ಮೂರು ತಾಲ್ಲೂಕುಗಳಿಗೆ ಎಂಎಲ್‌ಎ, 50 ಲಕ್ಷ ರೂ. ಕೊಟ್ಟುಬಿಟ್ಟು ರೋಡ್ ಮೆಂಟೇನ್ ಅಂದರೆ, ಮಲ್ನಾಡ್ ಪ್ರದೇಶಗಳಲ್ಲಿ ಮೆಂಟೇನ್ ಮಾಡಿ ಮಾಡುವುದಕ್ಕಾಗುತ್ತಾ? ನೋ ನೋ. I am not for him. I know the problem of Malnad. ಒಂದು ಮಳೆ ಬಿದ್ದರೆ ಇನ್ನೊಂದು ಸಲ ನೀವು ರಸ್ತೆಗೆ ಹೋದರೆ ಅಲ್ಲಿ ಎಲ್ಲಾ ಗುಂಡಿ ಬಿದ್ದಿರುತ್ತದೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ತಾವು ಈ ಪಿಡಬ್ಲ್ಯೂಡಿ ರಸ್ತೆಯ ಬಗ್ಗೆ ಯಾರ್‍ಯಾರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಎಷ್ಟೆಷ್ಟು ಹೋಗುತ್ತದೆ ಎನ್ನುವುದರ ಬಗ್ಗೆ ನೀವು ನಿಧಿಯನ್ನು ನಿರ್ಣಯ ಮಾಡಿ, ಎಷ್ಟು ಕಿಲೋ ಮೀಟರ್ ಹೋಗುತ್ತಾರೆ ಅಂತ ಹೇಳಿದಿರಿ, ಅದೇರೀತಿ ಶಾಸಕರ ನಿಧಿ ಕೊಡುತ್ತಾರಲ್ಲಾ, ಅದನ್ನೂ ಹಾಗೆಯೇ ನಿಗದಿಯಾಗಬೇಕಲ್ಲಾ? ಯಾರ್‍ಯಾರು ಎಷ್ಟೆಷ್ಟು ಲೆಂಗ್ತ್ ಇದೆ, ಎಷ್ಟೆಷ್ಟು ವಿಡ್ತ್ ಇದೆ, ನೋಡಿ ಅದೂ ಮಾಡಬೇಕಲ್ಲಾ. ಈಗ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಪಾರ್ಲಿಮೆಂಟ್‌ನಲ್ಲಿರುವ ಮೆಂಬರ್‌ಗಳಿಗೆ ಇಕ್ವಲ್ ಆಗಿ ಕೊಡುತ್ತಾರೆ. ಕೆಲವರ ಕಾನ್‌ಸ್ಟಿಟ್ಯೂಯೆನ್ಸಿ 5 ಲಕ್ಷ ರೂ. ಇರುತ್ತದೆ. ಕೆಲವರದ್ದು 25 ಲಕ್ಷ ರೂ. ಇರುತ್ತದೆ. ಎಲ್ಲರಿಗೂ ಇಕ್ವಲ್, ಈ ರೀತಿ ಕೊಡುವಾಗ, ಫಸ್ಟ್ ಟೈಂ ಕೊಟ್ಟಿದ್ದಾರಲ್ಲಾ, ಅದಕ್ಕೆ ನೀವು ಸ್ವಾಗತ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೊಟ್ಟಿಲ್ಲ, ಕಿತ್ತು ಹಾಕಿದ್ದಾರೆ. ....

ಶ್ರೀ ನೆ.ಲ ನರೇಂದ್ರ ಬಾಬು : ಮಾನ್ಯ ಮಾಧುಸ್ವಾಮಿಯವರೇ, ಒಂದ್ನಿಮಿಷ ತಾವು ಯೀಲ್ಡ್ ಆದರೆ ಕೇಳುತ್ತೇನೆ. ಬೆಂಗಳೂರು ನಗರದಲ್ಲಿ 50 ಲಕ್ಷ ರೂ. ಕೊಡುತ್ತಾರೆ ಎಂದು ಹೇಳುತ್ತಾರೆ. ಶಾಸಕರು ಎಂದು ಅನ್ನಿಸಿಕೊಂಡವರಿಗೆ ಯಾವುದಾದರೂ ನಿರ್ವಹಣೆ ಕೊಡುತ್ತಾರಾ ಎಂದರೆ ಏನೂ ಇಲ್ಲ. ಒಳ್ಳೆಯ ಗಾಳಿ ಸಿಗುವುದಿಲ್ಲ. ಯಾವುದಾದರೂ ಸರಕಾರಿ ಬಿಲ್ಡಿಂಗ್ ಬಿದ್ದು ಹೋದರೆ ಬೇರೆ ಮಾಡಲಿಕ್ಕೆ ಜಾಗವಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಯೀಲ್ಡ್ ಆಗುವುದಿಲ್ಲ. ನಾನು ನನ್ನ ಅಭಿಪ್ರಾಯ ಹೇಳುತ್ತೇನೆ.........

ಶ್ರೀ ನೆ.ಲ. ನರೇಂದ್ರಬಾಬು : ಇಡೀ ಬೆಂಗಳೂರು ನಗರದಲ್ಲಿ ಆಗತಕ್ಕಂಥ ಉತ್ಪನ್ನದಿಂದ ಇಡೀ ರಾಜ್ಯಕ್ಕೆ ನಿರ್ವಹಣೆಯಾಗುತ್ತದೆ. ಅದನ್ನು ಮಾನ್ಯ ಮಾಧುಸ್ವಾಮಿಯವರು ಗಮನಿಸಿಲ್ಲ.

(ಗೊಂದಲ)

ಶ್ರೀ ಬಿ.ಸಿ. ಪಾಟೀಲ್ : ಬೆಂಗಳೂರು ನಗರದಿಂದ ಎಲ್ಲಾ ಹಳ್ಳಿಗಳು ಬದುಕುತ್ತವೆ ಎಂದು ಹೇಳುವುದು ಬಹಳ ತಪ್ಪು. ಇವತ್ತು ಹಳ್ಳಿಗಳಿಂದ ಬೆಂಗಳೂರು ಬದುಕುತ್ತಿರುವುದು. ಬೆಂಗಳೂರು ಬದುಕುತ್ತಿರುವುದು. ಬೆಂಗಳೂರಿನಿಂದ ಹಳ್ಳಿ ಬದುಕುತ್ತಿಲ್ಲ. ಇದನ್ನು ಅವರಿಗೆ ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ವಾದ ಅದು ಅಲ್ಲ. ನನ್ನ ವಾದ ಸ್ಪಷ್ಟ ಇದೆ. ನಾನು ಬೆಂಗಳೂರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಕಿಲೋಮೀಟರ್ ವೈಸ್ ರೋಡ್ ಮೆಂಟೇನನ್ಸ್ ಗ್ರಾಂಟ್ ಏನಿತ್ತು ದಯವಿಟ್ಟು ಆ ಕಾನ್ಸೆಪ್ಟ್‌ನ್ನು ವಾಪಸ್ಸು ತನ್ನಿ. ಬೆಂಗಳೂರು ಒಳಗೆ ಎಷ್ಟು ಕಿಲೋ ಮೀಟರ್ ರೋಡ್ ಇದೆ. ಬೆಂಗಳೂರು ಆಗಲಿ, ಎಂಎಲ್‌ಎ, ಎಂಪಿ, ಗ್ರಾಂಟ್ 50 ಲಕ್ಷ ರೂ. ಗಳ ಬಗ್ಗೆ ನಾನು ಇಲ್ಲಿ ಟೀಕೆ ಮಾಡುತ್ತಿಲ್ಲ ಮಾನ್ಯ ಅಶೋಕ್‌ರವರೆ, ಅದು ಬರೀ ರೋಡ್‌ಗೆ ಕೊಟ್ಟಿರುವ ಗ್ರಾಂಟ್ಸ್ ಅಲ್ಲ. ನೀವು ಸಮುದಾಯ ಭವನ ಕಟ್ಟುತ್ತೀರಿ, ಸ್ಕೂಲಿಗೆ ಕೊಡುತ್ತೀರಿ, ಅಂಗನವಾಡಿಗೆ ಕೊಡುತ್ತೀರಿ, ನಾನೇನೂ ಅದರ ಬಗ್ಗೆ ಹೇಳಲಿಲ್ಲ. ರೋಡ್ ಡೆವಲಪ್‌ಮೆಂಟ್ ಅದು ರೋಡ್‌ಗೆ 50 ಲಕ್ಷ ರೂಪಾಯಿ ಏನು ತೆಗೆದಿಟ್ಟಿದ್ದೀರಿ, ಅದನ್ನು ರೋಡ್ ಡೆವಲಪ್‌ಮೆಂಟ್ ಎಂದು ತೆಗೆಯುವುದಕ್ಕೆ ಮೊದಲೇ 3054 ಹೆಡ್ ಆಫ್ ಅಕೌಂಟ್ ಏನಿತ್ತು ಅದನ್ನು ನೀವು ತೆಗೆದು ಹಾಕಿದ್ದೀರಿ. ಮೇನ್‌ಟೇನೆನ್ಸ್ ಹೆಡ್‌ನ್ನು, Karjol can understand. ಅದನ್ನು ದಯವಿಟ್ಟು ರೀ ಇಂಟ್ರಡ್ಯೂಸ್ ಮಾಡಿ. ಪ್ಲೀಸ್. ನಮಗೆ ದಾಕ್ಷಿಣ್ಯವಿಲ್ಲ. ಸಿಎಂಜೆಎಸ್‌ವೈ ಇತ್ತು ಹೋದ ಸಲ, ಈಗ ಎಂಎಲ್‌ಎ ಗ್ರಾಂಟ್ ಎಂದು ಅದನ್ನು ತಂದುಬಿಟ್ಟಿರಿ ನೀವು. ಈಗ ಹೇಳಿದ್ದೀರಿ.

ಶ್ರೀ ಸಿ.ಎಂ. ಉದಾಸಿ : ಅಡಿಷನಲ್ ಗ್ರಾಂಟ್ 50 ಲಕ್ಷ ರೂ. ಅಂತ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ನನ್ನ ಮಾತು ಮುಗಿಸುವುದಕ್ಕೆ ಬಿಡಿ. ನಾನು ಕೇಳುವುದು ಇಷ್ಟೆ, ಸಿಎಂಜೆಎಸ್‌ವೈ ಬೇರೆ; 5054 ಕೆಳಗೆ, ತಾವು 40 ಲಕ್ಷ ರೂ. ಕೊಡುತ್ತಿದ್ದದ್ದನ್ನು ಈ ವರ್ಷ 50 ಲಕ್ಷ ರೂ.ಗೆ ಏರಿಸಿದ್ದೀರಿ. ನನಗೆ ಗೊತ್ತು. 50 ಲಕ್ಷಕ್ಕೆ ಏರಿಸಿದ್ದೀರಿ, ಲಕ್ಷಗಳನ್ನು ಇನ್ನು

ಮುಂದೆ ಹೇಳಬೇಡಿ. ಪರ್ ಕಿ.ಮೀ. ಗ್ರ್ಯಾಂಟ್ ಮೊದಲು ಏನಿತ್ತೋ ಅದನ್ನು ದಯಮಾಡಿ ರೀ ಇಂಟ್ರಡ್ಯೂಸ್ ಮಾಡಿ. ರೋಡ್‌ನ್ನು ತಾವು ಮೇನ್‌ಟೇನ್ ಮಾಡಿಕೊಳ್ಳಿ. ಬರೇ ಆ ಜಿಲ್ಲೆಯವರು ಆ ರೋಡ್‌ಗಳ ಮೇಲೆ ಓಡಾಡುವುದಿಲ್ಲ. ಇನ್ನೊಬ್ಬರು ಅಥವಾ ಆ ಕ್ಷೇತ್ರದ ಶಾಸಕರು ಅಲ್ಲಿನ ರೋಡ್‌ಗಳ ಮೇಲೆ ಓಡಾಡುವುದಿಲ್ಲ. ಕರ್ನಾಟಕ ರಸ್ತೆಗಳೆಲ್ಲಾ ನಿಮ್ಮ ಜವಾಬ್ದಾರಿ ಎಂದು ತೆಗೆದುಕೊಳ್ಳಿ. ಸ್ಟೇಟ್ ಹೈವೆಯನ್ನು ಮೆಂಟೇನ್ ಮಾಡುವುದಕ್ಕೆ ನೀವೇನು ಕೆಆರ್‌ಡಿಸಿಎಲ್ ಎಂದು ಮಾಡಿದ್ದೀರೋ ಅದೇ ರೀತಿಯಾಗಿ ಪಿ.ಡಬ್ಲ್ಯೂ.ಡಿ. ರಸ್ತೆಗಳನ್ನು ಮೇನ್‌ಟೇನ್ ಮಾಡಿ. ಮತ್ತೆ ಜಿಲ್ಲಾ ಪಂಚಾಯತ್ ರಸ್ತೆಗಳನ್ನು ಇವತ್ತಿನ ದಿವಸ ಯಾರು ನಿರ್ವಹಣೆ ಮಾಡುತ್ತಾರೋ ಎಂಬುದು ಅರ್ಥವಾಗುತ್ತಿಲ್ಲ. ಜಿಲ್ಲಾಪರಿಷತ್ ಸದಸ್ಯರಿಗೆ 1 ಲಕ್ಷ, 1.5 ಲಕ್ಷ, 2 ಲಕ್ಷ ರೂಪಾಯಿಗಳಷ್ಟು ನೀವು ಗ್ರ್ಯಾಂಟ್ ಕೊಟ್ಟರೆ ಎಷ್ಟು ಕಿ.ಮೀ. ಜಿಲ್ಲಾಪರಿಷತ್ ರೋಡ್‌ಗಳನ್ನು ಅವರು ಮೇನ್‌ಟೇನ್ ಮಾಡುತ್ತಾರೆ ಎನ್ನತಕ್ಕಂಥದ್ದನ್ನು ಸರ್ಕಾರ ಸ್ವಲ್ಪ ಹೇಳಬೇಕು. ದಯಮಾಡಿ ಜಿಲ್ಲಾಪರಿಷತ್ ರಸ್ತೆಗಳಿಗೂ ಒಂದು ಮೇನ್‌ಟೆನೆನ್ಸ್ ಹೆಡ್‌ನ್ನು ತಾವು ಕ್ರಿಯೇಟ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಈ ರಾಜ್ಯದಲ್ಲಿ ಏನಾಗುವುದಿಲ್ಲ. ಇವತ್ತು ಎಂಎಲ್‌ಎ ಗ್ರ್ಯಾಂಟ್ ಎಂದು ನೀವು 50 ಲಕ್ಷ ರೂಪಾಯಿ ಕೊಡುತ್ತೀರಿ, ಇದರಲ್ಲಿ ನಾವು 10 ಕಿ.ಮೀ. ರಸ್ತೆ ಮಾಡಿ ಸುಮ್ಮನೆ ಕುಳಿತುಕೊಂಡರೆ ಬೇರೆ ಕೆಲಸ ಮಾಡುವುದು ಹೇಗೆ? ಆದ್ದರಿಂದ ಈ ಕಡೆಗೆ ತಾವು ಹೆಚ್ಚು ಒತ್ತು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರೂರಲ್ ಡೆವಲಪ್‌ಮೆಂಟ್ ಬಗ್ಗೆ ಹೇಳಿರತಕ್ಕಂಥದ್ದನ್ನು ನಾನು ಈ ಬಜೆಟ್‌ನಲ್ಲಿ ಓದಿದ್ದೇನೆ. ಆದರೆ ಎಕ್ಸ್‌ಪೆಂಡಿಚರ್‌ನ್ನು ಡಿಸ್ಟ್ರಿಬ್ಯೂಷನ್ ಮಾಡುವಾಗ ನಮ್ಮ ಶೇರ್ ಕೇವಲ 2 ಪರ್ಸೆಂಟ್ ಮಾತ್ರ ಇದೆ. ಅಂದರೆ 80 ಪರ್ಸೆಂಟ್‌ನಷ್ಟು ಇರತಕ್ಕಂಥ ಜಿಯೋಗ್ರಾಫಿಕಲ್ ಏರಿಯಾಗೆ 2 ಪರ್ಸೆಂಟ್ ಇದೆ. ಇದನ್ನು ಮಾನ್ಯ ಸೋಮಣ್ಣನವರು ನೋಡಬೇಕು. ಮತ್ತೆ ಟೌನ್ ಏರಿಯಾಗೆ 13 ಪರ್ಸೆಂಟ್ ಅಲೋಕೇಷನ್ ಇದೆ. ನಮಗೆ ಕೊಟ್ಟಿರತಕ್ಕಂಥ 2 ಪರ್ಸೆಂಟ್‌ನಿಂದ ನಾವು ಏನು ಮಾಡಬಹುದು? ನಾವು ಓದಿಕೊಂಡು ಬಂದು ಇದನ್ನು ಮಾತನಾಡುತ್ತಿದ್ದೇವೆ. ಕೇವಲ 2 ಪರ್ಸೆಂಟ್‌ನಷ್ಟು ಮಾತ್ರ ರೂರಲ್ ಡೆವಲಪ್‌ಮೆಂಟ್‌ಗೆ ಇಟ್ಟಿದ್ದೀರಿ. 2 ಪರ್ಸೆಂಟ್‌ನಲ್ಲಿ ಯವ ರೀತಿಯಾಗಿ ರೂರಲ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಆಗುತ್ತದೆ? ಒಂದು ಕತೆಯನ್ನು ಅವತ್ತಿನದಿವಸ ಇಲ್ಲಿ ನಾನು ಹೇಳಿದೆ. ಅದೇನೆಂದರೆ, ಪ್ರತಿಯೊಂದು ಗ್ರಾಮಪಂಚಾಯತ್ ಕೂಡ ಇವತ್ತಿನದಿವಸ ಎಲೆಕ್ಟ್ರಿಸಿಟಿ ಟ್ಯಾರಿಫ್ ಕಟ್ಟುವಂಥ ಸ್ಥಿತಿಯಲ್ಲಿ ಇಲ್ಲ. ಬೇರೆ ಕೆಲಸಗಳನ್ನು ಇವತ್ತು ಬಿಟ್ಟುಬಿಡೋಣ. ನೀವು ಕೊಡತಕ್ಕಂಥ ಗ್ರ್ಯಾಂಟ್‌ನಲ್ಲಿ ಪವರ್ ಟ್ಯಾರಿಫ್ ಇಷ್ಟೊಂದು ಕಟ್ ಮಾಡಿಕೊಳ್ಳುತ್ತೀರಿ. ಈಗ ಒಂದು ಹೊಸ ತಂತ್ರವನ್ನು ಮಾಡುತ್ತೀರಿ. ಅದೇನೆಂದರೆ, ಹೇಗಾದರೂ ಮಾಡಿ ಹಣವನ್ನು ಕಟ್ಟಿದರೆ 25 ಪರ್ಸೆಂಟ್ ರಿಬೇಟ್ ಕೊಡುತ್ತೇವೆಂದು ಮಾಡಿದ್ದಾರೆ. ಹಣ ಕಟ್ಟಿದರೆ ತಾನೇ ನೀವು ರಿಬೇಟ್ ಕೊಡುವುದು? ಇವತ್ತಿನದಿವಸ ಎಲ್ಲಿ ಕುಳಿತಿರುವವರೆಲ್ಲರೂ ಎಲ್ಲೆಲ್ಲಿಂದ ಬಂದಿದ್ದಾರೆಂಬುದು ಗೊತ್ತಿದೆ. ಟೌನ್ ಇಲ್ಲದೇ ಇರತಕ್ಕಂಥ ಯಾವುದಾದರೊಂದು ಪಂಚಾಯತ್ ಕೆ.ಇ.ಬಿ. ಟ್ಯಾರಿಫ್ ಕಟ್ಟತಕ್ಕಂಥ ಸ್ಥಿತಿಯಲ್ಲಿದೆಯೇ ಹೇಳಿ? ನಾವು ಮಾಡಿರತಕ್ಕಂಥ ಓವರ್ ಹೆಡ್ ವಾಟರ್ ಟ್ಯಾಂಕ್ ಸ್ಕೀಂಗಳಲ್ಲಿ ಮತ್ತು ನಾವು ಮಾಡಿರತಕ್ಕಂಥ ಮಿನಿ ವಾಟರ್ ಸ್ಕೀಂಗಳಲ್ಲಿ ಮತ್ತು ನಾವು ಹಾಕಿರತಕ್ಕಂಥ ಸ್ಟ್ರೀಟ್

ಲೈಟ್ಸ್ ಹೊಂದಿರತಕ್ಕಂಥ ಪಂಚಾಯತ್‌ಗಳಲ್ಲಿ ಇವತ್ತಿನದಿವಸ 3.5 ರಿಂದ 4.00 ಲಕ್ಷ ಟ್ಯಾಕ್ಸ್ ಬರತಕ್ಕಂಥ ಪಂಚಾಯತ್‌ಗಳಲ್ಲಿ 6 ರಿಂದ 7 ಲಕ್ಷ ರೂಪಾಯಿಗಳಷ್ಟು ಇವತ್ತಿನದಿವಸ ಪವರ್ ಟ್ಯಾರಿಫ್ ಬರುತ್ತಿದೆ. ಈ ರೀತಿಯಾದರೆ ನಾವು ಆರ್‌ಡಿಪಿಆರ್‌ನಲ್ಲಿ ಹೇಗೆ ಕೆಲಸ ಮಾಡಬೇಕು? ಮತ್ತೆ ಆ ಪಂಚಾಯತ್‌ಗಳು ಹೇಗೆ Thrive on ಆಗಬೇಕೆಂಬುದು ನಮಗೆ ಗೊತ್ತಿಲ್ಲ. ಇವತ್ತಿನದಿವಸ ಹಳ್ಳಿಗಳಲ್ಲಿ ಕಂದಾಯ ವಸೂಲಿ ಎಷ್ಟು ಮಾಡಬಹುದು ಹೇಳಿ? ಎಷ್ಟು ಮಾಡುವುದಕ್ಕೆ ಆಗುತ್ತದೆ? ಎಲ್ಲದಕ್ಕೂ ಕೂಡ ಒಂದು ಲಿಮಿಟ್ ಇರುತ್ತದೆ. Perks, perquisites ಎಲ್ಲವನ್ನೂ ನಾವು ಅವರಿಗೆ ಕೊಟ್ಟು ಅಷ್ಟು ಕೊಡಿ, ಇಷ್ಟು ಕೊಡಿ ಎಂದು ನಾವು ಹೇಳಿದ್ದೇವೆಯೆ? ಇವತ್ತಿನದಿವಸ ಹಳ್ಳಿಗಳಲ್ಲಿ ವಾಟರ್ ಚಾರ್ಜ್‌ನ್ನು 25 ರೂಪಾಯಿಗಳಷ್ಟು ಮಾಡಿದ್ದೇವೆ. ಇದನ್ನು ಜನ ಎಲ್ಲಿಂದ ಕಟ್ಟುತ್ತಾರೆ? ಇಷ್ಟು ಕಟ್ಟಿದ್ದರೂ ಕೂಡ ಇವತ್ತಿನದಿವಸ ಯಾರೂ ಎಲೆಕ್ಟ್ರಿಕ್ ಟ್ಯಾರಿಫ್‌ನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ದಯಮಾಡಿ ಮಾನ್ಯ ಯಡಿಯೂರಪ್ಪನವರು ದೊಡ್ಡ ಮನಸ್ಸು ಆ ಕಡೆ ಮಾಡಬೇಕು. ಏನಾದರೂ ಮಾಡಿ ಒಂದು ಸಲಕ್ಕೆ ಆ ಟ್ಯಾರಿಫ್‌ನ್ನು ವೇ ಆಫ್ ಮಾಡಿಕೊಡಬೇಕು. ಆಮೇಲೆ ಬೇಕಾದರೆ ನೀವು ನಿರ್ಬಂಧ ಮಾಡಿ. ಅಂದರೆ ಇನ್ನು ಮುಂದಕ್ಕೆ ಸರಿಯಾಗಿಯಾದರೂ ಎಲೆಕ್ಟ್ರಿಕ್ ಟ್ಯಾರಿಫ್ ಕಟ್ಟಿಕೊಂಡು ಹೋಗಿ ಎಂದು ನಿರ್ಬಂಧ ಮಾಡಿ. ಇಲ್ಲದಿದ್ದರೆ ಇಲ್ಲಿ ಸುಮ್ಮನೆ ಚರ್ಚೆ ಆಗುತ್ತದೆ. ಅವರು ಕಟ್ಟುವುದಿಲ್ಲ, ಇವರು ಕೇಳುವುದು ಬಿಡುವುದಿಲ್ಲ. ಮತ್ತೆ ಕೆಇಬಿ ರವರು ಏನೂ ಮಾಡುವುದಿಲ್ಲ, ಜನ ಅವರನ್ನು ಬಿಡುವುದಿಲ್ಲ. ಇಲ್ಲದಿದ್ದರೆ ನಾನ್ ಕನ್‌ವೆನ್‌ಷನಲ್ ಎನರ್ಜಿಗೆ ಬಂದು ಬಿಡಿ. ಚಿಕ್ಕನಾಯಕನಹಳ್ಳಿಯಲ್ಲಿ ಪುರಸಭೆಯಲ್ಲಿ 52 ಲಕ್ಷ ರೂಪಾಯಿ ಬಾಕಿ ಇದೆ. ತಿಪಟೂರು ಪುರಸಭೆಯಲ್ಲಿ ಒಂದು ಕೋಟಿ ಚಿಲ್ಲರೆ ರೂಪಾಯಿಗಳಷ್ಟು ಕೆ.ಇ.ಬಿ. ಗೆ ಬಾಕಿ ಕೊಡಬೇಕಾಗಿದೆ. ಯಾವುದೇ ಪಂಚಾಯತ್‌ನಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿಗಿಂತ ಕಡಿಮೆ ಬಾಕಿ ಇಲ್ಲ. ಡಿಸ್ ಕನೆಕ್ಟ್ ಮಾಡುವುದಾದರೆ ಮಾಡಿ ಅಲ್ಲಿರತಕ್ಕಂಥ ಅಧ್ಯಕ್ಷರು ಮತ್ತು ಮೆಂಬರ್ಸ್‌ದ್ದು ಏನು ಹೋಗುತ್ತದೆ? ಈ ರೀತಿಯಾದರೆ ನೀವು ನಾಗರೀಕ ಸೌಲಭ್ಯ ಕೊಟ್ಟಿದ್ದು ಏನಾಯಿತು? ಅಂದರೆ ಹಳ್ಳಿಗಳಲ್ಲಿ ಲೈಟ್ ಉರಿಯಬಾರದು ಮತ್ತು ಹಳ್ಳಿಗಳಲ್ಲಿ ನೀರು ಕೊಡಬಾರದು ಅಂದರೆ ಹೇಗೆ? ಇನ್ನು ಕುಡಿಯುವ ನೀರಿಗೆ ನೀವು ಎಷ್ಟು ದುಡ್ಡು ಇಟ್ಟಿದ್ದೀರಾ? ಕುಡಿಯುವ ನೀರಿಗೆ ಮಾಡುತ್ತಿರುವ ಖರ್ಚು ವ್ಯರ್ಥವೆಂದು ನಾವು ಹೇಳುತ್ತಲೇ ಬಂದಿದ್ದೇವೆ. ಹೇಗಾದರೂ ಮಾಡಿ ಅಲ್ಲಿ ನೀರಿನ ಸ್ಥಿತಿಯನ್ನು ಮತ್ತೆ ಇಂಪ್ರೂವ್ ಆಗುವ ಹಾಗೆ ಮಾಡಿ. ಸರ್ಫೇಸ್ ವಾಟರ್ ಮ್ಯಾನೇಜ್‌ಮೆಂಟ್‌ಗೆ ಕೈ ಹಾಕಿ, ಆಗ ಈ ದುಡ್ಡಿನಲ್ಲಿ 75 ಭಾಗ ಉಳಿಯುತ್ತದೆ. ಮತ್ತೆ ಅಲ್ಲಿ ಹೇಗಾದರೂ ಮಾಡಿ ಕೆರೆಗಳಿಗೆ ನೀರು ತುಂಬಿಸತಕ್ಕಂಥ ಸ್ಥಿತಿಯನ್ನು ತೆಗೆದುಕೊಂಡು ಬನ್ನಿ. ಹಾಗೆಯೇ ಹೇಗಾದರೂ ಮಾಡಿ ಅಂಡರ್ ಗ್ರೌಂಡ್ ವಾಟರ್‌ನ್ನು ರೀಚಾರ್ಜ್ ಆಗುವ ಹಾಗೆ ಮಾಡಿ ಈ ಒಂದು ಸಮಸ್ಯೆಯಿಂದ ಋಣಮುಕ್ತರಾಗಿ ಮಾಡಿ ಎಂದು ಹೇಳಿದ್ದೇವೆ. ಪ್ರತಿ ವರ್ಷ ಕುಡಿಯುವ ನೀರಿಗೆ ದುಡ್ಡು ಕೊಡಿ ಎಂದು ಹೇಳಿದ್ದೇವೆ. ಪ್ರತಿ ವರ್ಷ ಕುಡಿಯುವ ನೀರಿಗೆ ದುಡ್ಡು ಕೊಡಿ ಎಂದು ನಾವು ನಿಮ್ಮನ್ನು ಬೇಡಬೇಕಾಗಿದೆ. ಬಂದ ಬಂದ ಸರ್ಕಾರಗಳಲ್ಲಿ ನಾವು ತಿರುಪೆ ಎತ್ತತಕ್ಕಂಥ ಸ್ಥಿತಿಯನ್ನು ತಾವು ನಮಗೆ ತಂದಿದ್ದೀರಿ ಏಕೆ? ಈ ವರ್ಷ ಹಾಕಿದ ಬೋರ್‌ವೆಲ್ ಮುಂದಿನ ವರ್ಷದಷ್ಟಿಗೆ ಇರುವುದಿಲ್ಲ. ಇನ್ನು ಮುಂದೆ 10 ಮೀಟರ್

20 ಮೀಟರ್ ಆಳಕ್ಕೆ ನೀರು ಹೊರಟು ಹೋಗುತ್ತದೆ. ಇವತ್ತಿನದಿವಸ ಕೋಲಾರ ಮತ್ತು ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ 700, 800, 1000 ಅಡಿ ಕೆಳಗಿನಿಂದ ನೀರನ್ನು ಪಂಪ್ ಮಾಡತಕ್ಕಂಥ ಸ್ಥಿತಿಗೆ ಬಂದಿದ್ದೇವೆ. 10,12,15 ಹೆಚ್.ಪಿ. ಮೋಟಾರ್‌ಗಳನ್ನು ಕುಡಿಯುವ ನೀರಿಗೆ ಹಾಕಿಕೊಳ್ಳತಕ್ಕಂಥ ಸ್ಥಿತಿ ಇವತ್ತು ನಿರ್ಮಾಣವಾಗಿದೆ. ನಿಮಗೆ ಪವರ್ ಲಾಸ್, ಹಣ ಲಾಸ್, ಪ್ರತಿ ವರ್ಷ ಪ್ರತಿಯೊಂದು ತಾಲ್ಲೂಕಿನಲ್ಲಿ 70 ರಿಂದ 80 ಕನಿಷ್ಠ ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡತಕ್ಕಂಥ ಪರಿಸ್ಥಿತಿ ಇದೆ. ಇಷ್ಟು ಮಾಡಿದರೆ ಮತ್ತೆ ಪೈಪ್‌ಲೈನ್‌ನ್ನು ಹೊಸದಾಗಿ ಹಾಕಬೇಕು. ಮತ್ತೆ ಅಷ್ಟು ಮಾಡಿದರೆ ಕೆಇಬಿ ಯಿಂದ ಸರ್ವೀಸ್‌ನ್ನು ಹೊಸದಾಗಿ ತೆಗೆದುಕೊಳ್ಳಬೇಕು. ಮಿನಿವಾಟರ್ ಆದರೆ ಪಂಚಾಯತ್‌ನವರು 50 ಸಾವಿರ ರೂ. ದುಡ್ಡು ಕಟ್ಟಬೇಕು. ಮತ್ತೆ ಓವರ್‌ಹೆಡ್ ಟ್ಯಾಂಕ್ ಆದರೆ 1 ಲಕ್ಷ ರೂ. ದುಡ್ಡು ಕಟ್ಟಬೇಕು. ಏಕೆ ಇದೆಲ್ಲಾ? ಅವರು ಎಲ್ಲಿಂದ ತಂದು ಇದನ್ನು ಕಟ್ಟುತ್ತಾರೆ? ನಾನು ಮಾನ್ಯ ಕಾರ್‌ಜೋಳ್‌ರವರ ಮೇಲೆ ಬಹಳ ವಿಶ್ವಾಸ ಇಟ್ಟುಕೊಂಡಿದ್ದೇನೆ. ದಯಮಾಡಿ ತಾವು ಟಾಸ್ಕ್‌ಫೋರ್ಸ್‌ನ್ನು ಮತ್ತೆ ಅಸ್ತಿತ್ವಕ್ಕೆ ತರಲೇಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ನಮ್ಮದೇನೂ ರಾಜಿ ಇಲ್ಲ. ಒಂದು ಬೋರ್‌ವೆಲ್ ಹಾಕಿಸಿಕೊಡುವುದಕ್ಕೆ ಎಂಎಲ್‌ಎ ಗಳಿಗೆ ಆಗುವುದಿಲ್ಲ ಎನ್ನತಕ್ಕಂಥ ಸ್ಥಿತಿಗೆ ತಾವು ನಮ್ಮನ್ನು ತರಬಾರದು. ಏಕೆಂದರೆ ನೀವು ನಮ್ಮ ಜೊತೆ ಈ ಕಡೆ ಕುಳಿತುಕೊಂಡು ಹೋರಾಟ ಮಾಡಿದ್ದೀರಿ. ಆದ್ದರಿಂದ ಇದನ್ನು ತಾವು ಮಾಡಬಾರದೆಂದು ಹೇಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದೇ ಒಂದು ಬೋರ್‌ವೆಲ್ ಕೊರೆಯುವಂಥ ಸ್ಥಿತಿಯಲ್ಲಿ ಇಲ್ಲವೆಂದು ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 'ಸುಜಲಧಾರ' ಯೋಜನೆಯಡಿಯಲ್ಲಿ 10 ಪರ್ಸೆಂಟ್ ಹಣವನ್ನು ಕಟ್ಟಿದರೆ ಮಾತ್ರ ಬೋರ್ ಕೊರೆಸುತ್ತೇವೆ ಇಲ್ಲದಿದ್ದರೆ ಬೋರ್‌ವೆಲ್ ಕೊರಿಸುವುದಿಲ್ಲವೆಂದು ನಿಮ್ಮ ಸಿ.ಇ.ಓ. ರವರು ನಮಗೆ ಆದೇಶ ಕೊಟ್ಟಿದ್ದಾರೆ. ಇವತ್ತಿನದಿವಸ ಕುಡಿಯುವ ನೀರಿಗೆ ದುಡ್ಡನ್ನು ಯಾರು ಕಟ್ಟುತ್ತಾರೆ? ತಾವು ಏನಾದರೂ ಕನಿಷ್ಠ ಸೌಜನ್ಯಕ್ಕೆ ಶಾಸಕರ ಗೌರವ ಉಳಿದು ಕೊಳ್ಳಲೆಂದು ನಿಮ್ಮ ತಲೆಗೆ ಬಂದರೆ ದಯಮಾಡಿ ಟಾಸ್ಕ್‌ಫೋರ್ಸ್‌ನ್ನು ಮತ್ತೆ ರಚನೆ ಮಾಡಬೇಕು. ಮತ್ತೆ ಇದನ್ನು ನೀವು ಪರ್ಮನೆಂಟ್ ಆಗಿ ಮಾಡಬೇಕು. ಯಾವುದೇ ಅಧಿಕಾರಿಯ ದಾಕ್ಷಿಣ್ಯಕ್ಕೆ ನಾವು ಇಲ್ಲಿ ಇಲ್ಲ. ಅಕಸ್ಮಾತ್ ಇದಕ್ಕೆ ಏನಾದರೂ ಅಮೆಂಡ್‌ಮೆಂಟ್ ಬೇಕೆಂದರೆ ತೆಗೆದುಕೊಂಡು ಬನ್ನಿ. ಎಲ್ಲರೂ ಸೇರಿ ಅದನ್ನು ಇಲ್ಲಿ ಪಾಸ್ ಮಾಡುತ್ತೇವೆ. ದಯಮಾಡಿ ತಾವು ದೊಡ್ಡ ಮನಸ್ಸು ಮಾಡಬೇಕು. ಇಲ್ಲದಿದ್ದರೆ ಇದು ಆಗುವುದಿಲ್ಲ. ಭಾರಿ ಕಷ್ಟದ ಸ್ಥಿತಿಯಲ್ಲಿ ನಾವು ಇದ್ದೇವೆ. ಯಾವುದೋ ವೇದಾಂತ ಅಥವಾ ಸಿದ್ಧಾಂತಕ್ಕೆ ಕಟ್ಟುಬಿದ್ದು ಇರುವುದಕ್ಕೆ ಆಗುವುದಿಲ್ಲ. ಆರ್‌ಡಿಪಿಆರ್ ಬಗ್ಗೆ ಹೇಳುವುದಾದರೆ ಆಶ್ರಯ ಮನೆಗಳ ಬಗ್ಗೆ ಈಗಾಗಲೇ ನಾವು ಪ್ರಶ್ನೆ ಎತ್ತಿದ್ದೇವೆ. ಆಶ್ರಯ ಯೋಜನೆಯಡಿಯಲ್ಲಿ ಸೈಟ್ ಇಲ್ಲದಿದ್ದ ಕಡೆ ಸೈಟ್ ಯಾರು ಕೊಡಬೇಕು? ಗ್ರಾಮಠಾಣ ಇರುವ ಕಡೆ ಪಂಚಾಯತ್‌ನವರು ಕೊಡುತ್ತಾರೆ. ಗ್ರಾಮಠಾಣ ಇಲ್ಲದಿದ್ದರೆ ಗೋಮಾಳದಲ್ಲಿ ಕೊಡುತ್ತಿದ್ದೆವು. ಆದರೆ, ಇದಕ್ಕೆ ಹೈಕೋರ್ಟ್ ಸ್ಟೇ ಕೊಟ್ಟಿದೆ. ನಾವು ಈಗ ಗೋಮಾಳವನ್ನು ರಿಲೀಜ್ ಮಾಡುವುದಕ್ಕೆ ಬರುವುದಿಲ್ಲ. ಅಕಸ್ಮಾತ್ ಎಲ್ಲಿಯಾದರೂ ಸೇಂದಿ ಮರ ಅಂಥಾದ್ದು ಇದ್ದರೆ ತಹಸೀಲ್ದಾರ್‌ಗೆ ಅಥವಾ ಯಾರಿಗಾದರೂ ಹೇಳಿ ಕೊಡಬಹುದು.

ಆದರೆ, ಏನೂ ಇಲ್ಲದೆ ಇರುವ ಕಡೆ ಏನು ಮಾಡಬೇಕೆಂದು ಸನ್ಮಾನ್ಯ ಮಂತ್ರಿಯವರನ್ನು ಕೇಳುವುದಕ್ಕೆ ಬಯಸುತ್ತೇನೆ. ಎಲ್ಲಿಯಾದರೂ ಇದಕ್ಕೊಂದು ಆದೇಶವನ್ನು ಮಾಡಿ ಇದಕ್ಕೆ ಒಂದಿಷ್ಟು ಹಣ ಇಡಬೇಕು. ಮತ್ತೆ ಸ್ಮಶಾನಗಳಿಗೂ ಒಂದಿಷ್ಟು ಹಣ ಇಡಬೇಕು. ಹೆಣ ಹೂಳುವುದಕ್ಕೆ ಒಂದು ಸಾವಿರ ರೂಪಾಯಿಕೊಡುತ್ತೇವೆಂದು ತಾವು ಹೇಳುತ್ತೀರಿ. ಆದರೆ ಹೂಳುವುದು ಎಲ್ಲಿ ಎಂದು ತಾವು ಹೇಳುವುದಿಲ್ಲ. ಬಡವರಿಗೆ, ಬಿಪಿಎಲ್ ಪಟ್ಟಿಯಲ್ಲಿರುವವರಿಗೆ ಇನ್ನುಮುಂದೆ ಶವಸಂಸ್ಕಾರಕ್ಕೆ ಒಂದು ಸಾವಿರ ರೂ. ದುಡ್ಡು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ, ಮೊದಲು ಇದಕ್ಕೆ ಎಲ್ಲಿಯಾದರೂ ಜಾಗಮಾಡಿಸಿ. ಜಮೀನುಗಳಲ್ಲಿ ಇವತ್ತಿನದಿವಸ ಯಾರು ಹೆಣವನ್ನು ಹೂಳಿಸುತ್ತಾರೆ? ಹಾಗೆ ಬಂದವನು ಏನು ಹೇಳುತ್ತಾನೆಂದರೆ, ನಾನು 11 ದಿವಸಕ್ಕೆ ಬಂದು ತಿಥಿ ಮಾಡುತ್ತೇನೆಂದು ಹೇಳುತ್ತಾನೆ ಮತ್ತು ಅಲ್ಲೊಂದು ಗೋರಿ ಕಟ್ಟುತ್ತೇನೆಂದು ಹೇಳುತ್ತಾನೆ.

ಶ್ರೀ ಎಂ. ಕೆ. ಸೋಮಶೇಖರ್ : ಪಟ್ಟಣ ಪ್ರದೇಶಗಳಲ್ಲಿ ಆಶ್ರಯ ಮನೆಗಳಿಗೆ ಜಮೀನು ಕೊಂಡುಕೊಳ್ಳುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಜಮೀನು ರೇಟ್ ಬಹಳಷ್ಟು ಜಾಸ್ತಿಯಾಗಿದೆ. ಆದ್ದರಿಂದ ಈಗ ದರ ನಿಗದಿಮಾಡಿರತಕ್ಕಂಥದನ್ನೂ ಕೂಡ ಜಾಸ್ತಿ ಮಾಡಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮತ್ತೆ ಸಬ್‌ರಿಜಿಸ್ಟಾರ್ ವ್ಯಾಲ್ಯುನಲ್ಲಿ ಕೊಂಡುಕೊಳ್ಳಿ ಎಂದು ನೀವು ಹೇಳುತ್ತೀರಿ. ಎಸ್‌ಆರ್ ರೇಟ್‌ನಲ್ಲಿ ಯಾರಾದರೂ ಊರಿನ ಪಕ್ಕ ಇರತಕ್ಕಂಥ ಜಮೀನನ್ನು ಕೊಡುತ್ತಾರೆಯೆ? ಊರಿನ ಪಕ್ಕ ಮತ್ತು ಮನೆ ಕಟ್ಟತಕ್ಕಂಥ ಜಮೀನನ್ನು ಎಲ್ಲಿಯಾದರೂ ಸಬ್‌ರಿಜಿಸ್ಟಾರ್ ವ್ಯಾಲ್ಯುನಲ್ಲಿ ಕೊಳ್ಳುವುದಕ್ಕೆ ಆಗುತ್ತದೆಯೆ? ಇದಕ್ಕೆ ಏನಾದರೂ ಒಂದು ಸೂತ್ರವನ್ನು ಕಂಡುಹಿಡಿಯಬೇಕು. ಅವಾಸ್ತವ ತೀರ್ಮಾನಗಳನ್ನು ನೀವು ಮಾಡಬಾರದು. ಇವತ್ತಿನದಿವಸ ಪಟ್ಟಣ ಪ್ರದೇಶ ಇರಬಹುದು ಅಥವಾ ಗ್ರಾಮೀಣ ಪ್ರದೇಶ ಇರಬಹುದು, ನಾವೇನೋ ಒಂದು ಸ್ವಲ್ಪ ಸ್ಟಾಂಪ್ ದುಡ್ಡು ಉಳಿಯುತ್ತದೆಂದು 6 ಸಾವಿರ ರೂಪಾಯಿಗೆ ಒಂದು ಗುಂಟೆ ಮಾರುವವನು ಮೂರು ಸಾವಿರ ರೂಪಾಯಿ ಎಂದು ರಿಜಿಸ್ಟರ್ ಮಾಡಿಸಿರುತ್ತೇನೆ. ಮೂರು ಸಾವಿರ ರೂಪಾಯಿಗೇ ಕೊಡಿ ಅದಕ್ಕಿಂತ ಮೇಲೆ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಯಾರೂ ಕೊಡುವುದಿಲ್ಲ. ಆದ್ದರಿಂದ ನೆಗೋಷಿಯೇಟ್ ಮಾಡಿಕೊಳ್ಳುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಇನ್ನು ಮನೆಗಳ ವಿಷಯ ನಾವು ಮಾತನಾಡಬಾರದು. ನೀವು ನಮ್ಮನ್ನು ವಿಜಿಲೆನ್ಸ್ ಕಮಿಟಿ ಅಧ್ಯಕ್ಷರೆಂದು ಮಾಡಿಬಿಟ್ಟಿದ್ದೀರಿ. ನಾನು ಸನ್ಮಾನ್ಯ ಆರ್‌ಡಿಪಿಆರ್ ಮಂತ್ರಿಯವರಿಗೆ ಪಟ್ಟಿ ಕಳುಹಿಸಿಕೊಡುತ್ತೇನೆ. ನಮ್ಮಲ್ಲಿರತಕ್ಕಂಥ 28 ಗ್ರಾಮಪಂಚಾಯತ್‌ನಲ್ಲಿಯೂ ಕೂಡ ನಮಗೆ ತಕರಾರು ಬರುತ್ತಿದೆ. ಗ್ರಾಮಸಭೆ ಸಮರ್ಪಕವಾಗಿ ಆಗಿಲ್ಲ, ಯಾರೋ ಟಿಪಿಎಸ್ ಅಧ್ಯಕ್ಷರು ಬಂದು ಅಡಚಣೆ ಮಾಡಿದರು. ಟಿಪಿಎಸ್ ಸದಸ್ಯರು ಬಂದು ಅಡಚಣೆ ಮಾಡಿದರು ಮತ್ತೆ ಇರುವವರಿಗೇ ಕೊಟ್ಟಿದ್ದಾರೆ. ಇಲ್ಲದೇ ಇರತಕ್ಕಂಥವರನ್ನು ಕೈ ಬಿಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಇನ್ನು ಎಲ್ಲಾ ಗ್ರಾಮಸಭೆಗಳಲ್ಲಿ ಕೂಡ ಗುಂಪು ಆಗುತ್ತದೆ. ನಮ್ಮ ಭಾಗಗಳಲ್ಲಿ ಹೊಡೆದಾಡುತ್ತಿದ್ದಾರೆ. ಅವರು ಹೇಳುವವರನ್ನೇ ಬರೆಯಬೇಕು. ಇನ್ನೊಬ್ಬರನ್ನು ಬರೆಯುವುದಕ್ಕೆ ಬಿಡುತ್ತಿಲ್ಲ. ಗ್ರಾಮಸಭೆಗಳ ಬಗ್ಗೆ ನಾವು ಬಹಳ ಸೈದ್ಧಾಂತಿಕವಾಗಿ ಯೋಜನೆ ಮಾಡಿದೆವು. ಆ ರೀತಿಯಲ್ಲಿ ನಡೆಯುವಂಥ ಕಾಲ ಈಗ ಇಲ್ಲ. ನಾನು ಸನ್ಮಾನ್ಯ ಆರ್‌ಡಿಪಿಆರ್

ಕಾರ್ಯದರ್ಶಿಯವರಿಗೆ ಒಂದು ಸಜೆಷನ್ ಕೊಟ್ಟಿದ್ದೆ. ಕನಿಷ್ಠ ಹೌಸ್‌ಲೆಸ್‌ನವರ ಪಟ್ಟಿಯನ್ನು ನೀವು ಮೊದಲೇ ಮಾಡಿಬಿಡಿ. ಯಾವ್ಯಾವ ಊರಿನಲ್ಲಿ ಮನೆಯಿಲ್ಲದವರು ಇದ್ದಾರೆ ಎಂಬ ಪಟ್ಟಿಯನ್ನು ಸರ್ಕಾರದ ಕಡೆಯಿಂದ ಮಾಡಿಸಿ. ಅನಂತರ ಆ ಪಟ್ಟಿಯಲ್ಲಿರತಕ್ಕಂಥವನ್ನು ಆಯ್ಕೆ ಮಾಡಿ ಎಂದು ಗ್ರಾಮಸಭೆಗಳಿಗೆ ಡಿಸ್ಕ್ರಿಷನರಿ ಕೊಡತಕ್ಕಂಥ ಸ್ಥಿತಿ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೆ. ಇವತ್ತಿನದಿವಸ ಶಕ್ತಿ ಇರತಕ್ಕಂಥವನಿಗೆ ಮತ್ತೆ ಕೊಡುವುದಕ್ಕೆ ಗ್ರಾಮ ಸಭೆಗಳು ನಡೆಯಬೇಕೇ? ಏನೂ ಮಾಡುವುದಕ್ಕೆ ಕೂಡ ಆಗುತ್ತಿಲ್ಲ. ಅಲ್ಲಿಯೇ ಒಂದು ನಿರ್ಣಯ ಪಾಸ್ ಆಗಬೇಕು, ಬ್ಲಾಂಕ್ ಬಿಟ್ಟುಕೊಂಡು ಬಂದರೆ ಅಲ್ಲಿ ಮಾಡಲಿಲ್ಲವೆಂದು ನಮಗೆ ಕಂಪ್ಲೈಂಟ್ ಬರುತ್ತದೆ. ನಿಮಗೆ ಏನಾದರೂ ಔದಾರ್ಯ ಇದ್ದರೆ, ತಕ್ಷಣ ಆಶ್ರಯ ಸಮಿತಿಯನ್ನು ಮತ್ತೆ ಅಸ್ತಿತ್ವಕ್ಕೆ ತೆಗೆದುಕೊಂಡು ಬನ್ನಿ. ತಪ್ಪು ಆಗುವುದಿಲ್ಲ. ಏಕೆಂದರೆ ಇವತ್ತಿನದಿವಸ ಬೇಕಾದಷ್ಟು ಸಮಸ್ಯೆಗಳಿವೆ.

ಶ್ರೀ ಡಿ.ಟಿ. ಜಯಕುಮಾರ್ : ಇದಕ್ಕೆ ಕಾಂಗ್ರೆಸ್‌ನವರು ಬಿಡಬೇಕಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಏಕೆ ಬಿಡುವುದಿಲ್ಲ? ಅವರೂ ಕೂಡ ಎಂಎಲ್‌ಎ ಆಗಿ ವಾಪಸ್ಸು ಹೋಗಬೇಕಲ್ಲವೆ? ಮತ್ತೆ ನಾವು ಯಾವುದೊಂದು ಡಿಕ್ಲರೇಷನ್‌ನಲ್ಲಿ ಸಿಕ್ಕಿಕೊಂಡಿದ್ದೇವೆ ಎನ್ನಬಹುದು. ಇವತ್ತಿನದಿವಸ ಪ್ರಾಫೆಟ್‌ಗಳು ಬರೆದಂಥ ಸಿದ್ಧಾಂತಗಳೇ ಚೇಂಜ್ ಆಗಿವೆ. ಬೈಬಲ್ ಬದಲಾಗುವಂಥ ಕಾಲಕ್ಕೆ ನಾವು ಬಂದಿದ್ದೇವೆ. ಇದಕ್ಕೆ ಮಾನ್ಯ ರಮೇಶ್‌ಕುಮಾರ್‌ರವರೂ ಕೂಡ ಒಪ್ಪಿಕೊಳ್ಳುತ್ತಾರೆ. ನೀವು ದಯಮಾಡಿ ಆಶ್ರಯ ಕಮಿಟಿಯನ್ನು ತಾಲ್ಲೂಕು ಲೆವೆಲ್‌ಗೆ ನೀವು ತರಲೇಬೇಕು. ಏಕೆ ಎಂದು ನಾನು ಹೇಳುತ್ತೇನೆ. ನಮ್ಮಲ್ಲಿರತಕ್ಕಂಥ ಕಷ್ಟ ಏನೆಂದರೆ, 40 ಮನೆಗಳನ್ನು ಇವರು ಕೊಡುತ್ತಾರೆ. ಕೆಲವು ಕಡೆ ಎಸ್‌ಸಿ ಫಲಾನುಭವಿಗಳು ಇಲ್ಲವೇ ಇಲ್ಲ. ಇನ್ನು ಕೆಲವು ಕಡೆ ಯಥೇಚ್ಛವಾಗಿ ಇದ್ದಾರೆ. ಮತ್ತೆ ಇದನ್ನು ಅಲ್ಲಿಗೆ ವರ್ಗಾವಣೆ ಮಾಡುವಂತಿಲ್ಲ. Try to understand the practical dificulty. ಕೆಲವು ಕಡೆ ಹಿಂದುಳಿದ ವರ್ಗದವರು ಜಾಸ್ತಿ ಇರುತ್ತಾರೆ. ಅಂದರೆ ಈ ವರ್ಗದಲ್ಲಿ ಬರತಕ್ಕಂಥ ಗೊಲ್ಲರು, ಉಪ್ಪಾರ ಜನಾಂಗದವರು ಜಾಸ್ತಿ ಇರುತ್ತಾರೆ. ಇಂಥಾದ್ದರಲ್ಲಿ ನಾವು ಎರಡೆರಡು ಮನೆ ಕೊಡುವುದಕ್ಕೆ ಆಗುತ್ತಿಲ್ಲ. ಎಸ್‌ಸಿ ಜನಾಂಗದವರಿಗೆ ಕೊಡಿ ಎಂದು ಹೇಳಿದರೆ ನಾವು ಎಲ್ಲಿಂದ ತಂದು ಕೊಡೋಣ? ಮತ್ತೆ ಇದು ಎಗ್ಸಾಸ್ಟ್ ಆಗುತ್ತದೆ. ಆದ್ದರಿಂದ ಸಣ್ಣಪುಟ್ಟ ವ್ಯತ್ಯಾಸ ಮಾಡುವುದಕ್ಕಾದರೂ.......

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ತಾವು ಬೇಗ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಮುಗಿಸಿಯೆಂದರೆ ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು : ನೀವು ಈಗಾಗಲೇ 1 ಗಂಟೆ 15 ನಿಮಿಷ ಮಾತನಾಡಿದ್ದೀರಿ. ಇನ್ನೂ ಬೇರೆಯವರು ಮಾತನಾಡಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಪ್ರಾಕ್ಟಿಕಲ್ ಡಿಫಿಕಲ್ಟಿಯನ್ನು ತಾವು ಅರ್ಥಮಾಡಿಕೊಳ್ಳಬೇಕು. ಆಶ್ರಯ ಯೋಜನೆಯಲ್ಲಿ ತಾಲ್ಲೂಕಿನ ಲೆವೆಲ್‌ನಲ್ಲಿ ಕಮಿಟಿಯನ್ನು ಮಾಡಿ 20 ರಿಂದ 40 ಮನೆಗಳನ್ನು ಏನು ಒಂದು ಪಂಚಾಯಿತಿಗೆ ಕೊಡಬೇಕೆಂದು ಇದ್ದೀರಿ, ಅದಕ್ಕೆ ಡಿಸ್‌ಕ್ರಿಮಿಶನ್ ಕೊಟ್ಟು ಆ ಕಡೆಗೆ ಬದಲು ಮಾಡುವಂತಹ ಅಧಿಕಾರವನ್ನು ಕೊಟ್ಟರೆ ಒಂದು

ನ್ಯಾಯವನ್ನು ನಾವು ಅಲ್ಲಿ ಒದಗಿಸಿಕೊಡಬಹುದು. ನೀವು ಯಾರಿಗೆ ಕೊಡುತ್ತೀರಿ? ನನ್ನ ಹಳ್ಳಿ ಜೆ.ಸಿ.ಪುರ ಎಂಬಲ್ಲಿ ಷೆಡ್ಯೂಲ್ ಕಾಸ್ಟ್ ಪಾಪ್ಯುಲೇಷನ್ ಇಲ್ಲವೇ ಇಲ್ಲ, ಅಲ್ಲಿ 4 ಮನೆಗಳನ್ನು ಕೊಡಲೇಬೇಕು. ಒಂದೊಂದು ಹಳ್ಳಿಗೆ ಇಷ್ಟಿಷ್ಟು ಮನೆ ಎಂದು ಅಲ್ಲಿ ಮೆಂಬರ್‌ಗಳು ಕುಳಿತುಕೊಂಡು ಹಂಚಿಕೊಂಡುಬಿಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಮನೆಯನ್ನು ಜಾಸ್ತಿ ಕೊಡುವುದಲ್ಲ. ಇಂದಿರಾ ಆವಾಜ್ ಮನೆಗೂ ಈಗ ಆರ್‌ಟಿಸಿ ಬೇಕೆಂದು ಹೇಳಿದ್ದಾರೆ. ಕೆಲವು ಪಂಚಾಯಿತಿಗೆ ಮಾತ್ರ ಇವರೇ ಐಡೆಂಟಿಫೈ ಮಾಡಿ ಒಂದು 4–5 ಪಂಚಾಯಿತಿಗಳಿಗೆ ಇಂದಿರಾ ಅವಾಜ್ ಮನೆ ಇದೆ, ಉಳಿದವರಿಗೆ ಇಲ್ಲ, ಈಗ ಪಂಚಾಯತಿ ಪಂಚಾಯತಿಗಳ ಮಧ್ಯೆ ಜಗಳವನ್ನು ಮಾಡಿಕೊಳ್ಳಬೇಕೇ? ಇವರು ಈ ಪರಿಸ್ಥಿತಿಗೆ ತಂದು ಇಟ್ಟಿದ್ದಾರೆ. ಬೆಂಗಳೂರಿನಲ್ಲಿ ಕುಳಿತುಕೊಂಡು ಪಂಚಾಯಿತಿಯಲ್ಲಿ ಏನಾಗಬೇಕೆಂದು ಡೈರೆಕ್ಷನ್ ಕೊಡುವುದಕ್ಕೆ ಇವರಿಗೆ ಅಧಿಕಾರವಿದೆ. ಪಂಚಾಯಿತಿಯ ಹೆಸರಿನಲ್ಲಿ ಇಲ್ಲಿಂದ ವ್ಯವಸ್ಥೆ ಆಗಿದೆ.

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಬೇಗನೆ ಮುಗಿಸಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಾನೂನು ಬದ್ಧವಾಗಿ ಕೆಲಸ ಮಾಡಬೇಕಾದರೆ ಅದನ್ನು ಮಾಡುವುದಕ್ಕಾಗುತ್ತಿಲ್ಲ. ಪರ್ಟಿಕ್ಯುಲರ್‌ಲಿ ಷೆಡ್ಯೂಲ್‌ಕಾಸ್ಟ್, ನಮ್ಮ ಏರಿಯಾದಲ್ಲಿ ಎಕ್ಸೀಡ್ ಆಗಿಬಿಟ್ಟಿದೆ ಸಾರ್. 2ನೇ ಮನೆ ಮತ್ತು 3ನೇ ಮನೆ ಕೊಡುವ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಬಿಡುವುದಕ್ಕೆ ನಮಗೂ ಕೂಡ ಮನಸ್ಸು ಬರುವುದಿಲ್ಲ. ಫಲಾನುಭವಿಗಳು ಯಾರೋ ಒಬ್ಬರು ಇರಲಿ ಬಿಡಿ ಎಂದು ಅಂದುಕೊಳ್ಳುತ್ತೇವೆ. ನಾಳೆ ಮನೆ ಇದ್ದವರಿಗೇ ಮನೆಯನ್ನು ಕೊಟ್ಟಿದ್ದಾರೆಂದರೆ ನಮಗೇನೂ ಹೇಳುವುದಕ್ಕಾಗುವುದಿಲ್ಲ. ನಮ್ಮಲ್ಲಿಯೇ ಇನ್ನೆಲ್ಲೋ ಪಾಪ, ಕಷ್ಟದಲ್ಲಿರುವಂತಹ ಷೆಡ್ಯೂಲ್‌ಕಾಸ್ಟ್‌ನವನಿಗೆ ಹೆಲ್ಪ್ ಮಾಡುವಂತಹ ಸ್ಥಿತಿಯಲ್ಲಿ ನಾವು ಇಲ್ಲ. ಹಾಗಾಗಿ ಇದು ರ್‍ಯಾಷನಲ್ ಆಗಬೇಕಾಗುತ್ತದೆ. ಒಂದು ಪಂಚಾಯಿತಿಗೆ 40 ಮನೆಗಳನ್ನು ಕೊಟ್ಟರೆ ಇಷ್ಟು ಎಸ್‌ಸಿ, ಎಸ್‌ಟಿಯವರು ಥ್ರೂಔಟ್ ಇರುವುದಿಲ್ಲ ಸಾರ್. ಎಲ್ಲಾ ಕ್ಷೇತ್ರಗಳಲ್ಲಿ ಎಸ್‌ಟಿ ಜನರು ಸಿಗುತ್ತಾರೆಯೇ? ಮನೆಗಳನ್ನು ಕೊಡಲೇಬೇಕು. ಎಲ್ಲೋ ಒಂದು ಕಡೆ ಎಸ್‌ಟಿ ಇರುತ್ತಾರೆ, ಆದರೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಸವರಾಜು : ಒಂದು ಗ್ರಾಮಪಂಚಾಯಿತಿಗೆ 20 ಸದಸ್ಯರುಗಳು ಇರುತ್ತಾರೆ. 40 ಮನೆಗಳನ್ನು ಕೊಟ್ಟಿದ್ದೀರಿ, ಅವರಿಗೂ ಎರಡು ಮನೆಗಳು; ಗ್ರಾಮಪಂಚಾಯಿತಿಯಲ್ಲಿ 10 ಜನ ಸದಸ್ಯರು ಇದ್ದಾರೆ. ಅವರಿಗೆ 4 ಮನೆಗಳು. ಈ ರೀತಿಯಾದ ತಾರತಮ್ಯಗಳು ಆಗಿದೆ. ದಯಮಾಡಿ ಯೋಚನೆ ಮಾಡಿ 20 ಜನರು ಇದ್ದಾರೆ ಅದಕ್ಕೆ ತಕ್ಕಹಾಗೆ ಮನೆಗಳನ್ನು ಕೊಡಬೇಕೆಂದು ನಿಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸದಸ್ಯರು ಹೇಳುವುದು ಸತ್ಯವಾಗಿದೆ. ಎಲ್ಲವೂ ಹಂಚಿಕೆಯಾಗಿದೆ. ನಾವು ಇಲ್ಲಿ ಸಿದ್ಧಾಂತದ ಬಗ್ಗೆ ಮಾತನಾಡಬಹುದು. ಗ್ರಾಮ ಪಂಚಾಯಿತಿಯಲ್ಲಿ ಪುರಸಭೆಯಲ್ಲಿ ನಿಮ್ಮಿಂದ ಹೋಗುವ ಅನುದಾನ, ನಿಮ್ಮಿಂದ ಹೋಗುವಂತಹ ಮನೆಗಳು ಮೆಂಬರ್ ಪ್ರಕಾರ ಅದು ಹಂಚಿಕೆಯಾಗಿರುತ್ತವೆ. ಅದರ ಬಗ್ಗೆ ಎರಡು ಮಾತೇ ಇಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಅಷ್ಟೇ ಅಲ್ಲ, ಅವರು ದೊಡ್ಡ ಗ್ರಾಮಪಂಚಾಯಿತಿಗೆ ಅಷ್ಟೇ ಮನೆಗಳು, ಸಣ್ಣ ಗ್ರಾಮಪಂಚಾಯಿತಿಗಳಿಗೆ ಅಷ್ಟೇ ಮನೆಗಳು ಇವೆ. ಅದನ್ನು ಸರಿಪಡಿಸಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು ಸಾರ್, ಅದನ್ನು ಸರಿಪಡಿಸಬೇಕು. ಆಮೇಲೆ ಡಿಸ್‌ಕ್ರಿಷನ್ ಅಲ್ಲಿ ಇರಬೇಕು, ಒಂದು ಜನಾಂಗ ಹೆಚ್ಚಿಗೆ ಇದ್ದರೆ ಅವರಿಗೆ ಜಾಸ್ತಿ ಮನೆಯನ್ನು ಕೊಡುವಂತಹ ಸ್ಥಿತಿ ಇರಬೇಕು. ಒಂದು ಸೋಷಿಯಲ್ ಜಸ್ಟೀಸ್‌ನ್ನು ನಾವು ಸರ್ವ್ ಮಾಡುತ್ತೇನೆಂದರೆ, State cannot be taken as a unit. ರಾಜ್ಯವನ್ನೇ ಒಂದು ಯೂನಿಟ್ ಆಗಿ ತೆಗೆದುಕೊಂಡು ಆವರೇಜ್ ಮಾಡಿ ನೀವು ಹಳ್ಳಿಗಳಿಗೆಲ್ಲಾ ಕೊಡುವುದಕ್ಕೆ ಆಗುತ್ತದೆಯೇ?

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ಕುಳಿತುಕೊಂಡು ಮಾತನಾಡುತ್ತಿದ್ದರು)

ಶ್ರೀ ಜೆ.ಸಿ. ಮಾಧುಸ್ವಾಮಿ : 40 ಮನೆಯೊಳಗಡೆ 15 ಮನೆಗಳನ್ನು ಎಸ್‌ಸಿಗೆ ಕೊಡಬೇಕು, 3 ಮನೆಗಳನ್ನು ಎಸ್‌ಟಿಗೆ ಕೊಡಬೇಕು. ಇನ್‌ಅಡಿಕ್ವೆಟ್ ಇರುವುದನ್ನಾದರೂ ಕೂಡ ಹಂಚಬೇಕಲ್ಲಾ, ಆದರೆ ಎಲ್ಲೋ ಷೆಡ್ಯೂಲ್ ಕಾಸ್ಟ್ ಇರುವ ಕಡೆಗೆ ಕೊಡುವುದಕ್ಕಾಗುತ್ತಿಲ್ಲ. ಸುಮ್ಮಸುಮ್ಮನೆ ಕೊಡುವಂತಹ ಸ್ಥಿತಿಯನ್ನು ಏನು ನಿರ್ಮಾಣ ಮಾಡಿದ್ದೀರಿ, ಇದಕ್ಕೆ ಎಲ್ಲಾ ಒಂದೇ ಪರಿಹಾರವೆಂದರೆ ನಿಮಗೆ ನಮ್ಮ ಎಂಎಲ್‌ಎಗಳ ಮೇಲೆ ನಂಬಿಕೆ ಇಲ್ಲದೆ ಹೋದರೆ ನೀವು ಒಂದು ಆಫೀಸರ್ಸ್ ಕಮಿಟಿಯನ್ನು ಮಾಡಿಸಿ. ಏನು ವಿಜಿಲೆನ್ಸ್ ಮಾಡಿ ಯಾವುದೇ ಶಕ್ತಿ ಇಲ್ಲದೆಯೇ ನಮಗೆ ಕುಳಿತುಕೊಂಡು ಯಾರ್ಯಾರದ್ದು ರಿಜೆಕ್ಟ್ ಮಾಡಬಹುದು, ಯಾರ್ಯಾರಿಗೆ ಕೆಟ್ಟದು ಮಾಡಬಹುದು, ಅಷ್ಟಕ್ಕೆ ಸೀಮಿತ ಮಾಡಿದ್ದೀರಿ, ಸ್ವಲ್ಪ ಆಲ್ಟರ್ ಮಾಡುವಂತಹ ಅಧಿಕಾರವನ್ನು ಕೊಡಬೇಕು. ನೀವು ಯಾರಿಗಾದರೂ ಕೊಡಿ, ದಯಮಾಡಿ ಆಶ್ರಯ ಸಮಿತಿಯನ್ನು ಮತ್ತೆ ತರಬೇಕು, ಎಂದು ನಾನು ಮಾನ್ಯ ಯಡಿಯೂರಪ್ಪನವರಿಗೆ ಒತ್ತಾಯ ಮಾಡುತ್ತಿದ್ದೇನೆ, ಹಾಗೆಯೇ ಆರ್‌ಡಿಪಿಆರ್ ಗ್ರಾಂಟನ್ನು ಜಾಸ್ತಿ ಮಾಡಲೇಬೇಕು.

ಶ್ರೀ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಉಪಾಧ್ಯಕ್ಷರೆ, ಈ ವಿಜಿಲೆನ್ಸ್ ಕಮಿಟಿಗೆ 31ನೇ ತಾರೀಖು ಲಾಸ್ಟ್‌ಡೇಟ್ ಎಂದು ಕೊಟ್ಟಿದ್ದೇವೆ. ಈಗ ಬಹಳಷ್ಟು ಸಲ ಗ್ರಾಮಸಭೆಗಳನ್ನು ಕರೆಯದೆ ಇರತಕ್ಕಂತಹ ಪರಿಸ್ಥಿತಿ ಉದ್ಭವ ಆಗಿ ಮೆಂಬರ್ಸ್‌ಗಳು ಹಾಗೂ ಅಧ್ಯಕ್ಷರುಗಳು ಅವರೇ ಲಿಸ್ಟ್ ಮಾಡಿಕೊಂಡು ತಂದು ಇಟಿದ್ದಾರೆ. ಈ ವಿಜಿಲೆನ್ಸ್ ಕಮಿಟಿಗೆ ಏನು 30ನೇ ತಾರೀಖಿನೊಳಗೆ ವಿತ್ ರಿಜಿಸ್ಟ್ರೇಷನ್ ನೀವು ಮಾಡಿ ತಂದುಕೊಡಬೇಕೆಂದು ಇದೆ, ಅದಕ್ಕೆ ಎಕ್ಸ್‌ಟೆನ್‌ಷನ್ ಆಫ್ ಟೈಮ್ ಮಾಡಲಿಲ್ಲವೆಂದರೆ ಈಗ ನಾನಾ ಕಾರಣಗಳಿಂದ ಇವೆಲ್ಲವೂ ಕೂಡ ಲ್ಯಾಪ್ಸ್ ಆಗುತ್ತವೆ. ಇನ್ನೊಂದು ಪಾಯಿಂಟ್ ಏನೆಂದರೆ, ವಿಜಿಲೆನ್ಸ್ ಕಮಿಟಿಗೆ ನೀವು ಪವರ್ಸ್‌ನ್ನು ಕೊಟ್ಟಿದ್ದೀರಿ, ಅಂದರೆ ಅದನ್ನು ತೆಗೆದುಹಾಕಬಹುದು ಎನ್ನುವ ಪವರ್ಸ್‌ನ್ನು ಮಾತ್ರ ಕೊಟ್ಟಿದ್ದೀರಿ ಆದರೆ ಆಲ್ಟರ್‌ನೇಟೀವ್ ಆಗಿ ಯಾರ್ಯಾರೋ ಪ್ರಪೋಸ್ ಮಾಡಿರುವುದನ್ನು ಅಲ್ಲಿ ರೀಪ್ಲೇಸ್‌ಮೆಂಟ್ ಮಾಡುವುದಕ್ಕೂ ಕೂಡ ಮಾಡಿರುವುದಿಲ್ಲ. ಗ್ರಾಮಸಭೆಯಲ್ಲಿ ಬಂದಿರುವಂಥದ್ದನ್ನು ತೀರ್ಮಾನ ಮಾಡುವುದಕ್ಕಾದರೂ

ಕೂಡ, ಅದಕ್ಕೆ ಅಲ್ಟರ್‌ನೇಟೀವ್ ಮಾಡುವುದಕ್ಕೆ ಪವರ್ಸ್ ಇಲ್ಲ. ಆ ನಿಟ್ಟಿನಲ್ಲಿ ಏನು ಟೈಮ್‌ನ್ನು ಕೊಟ್ಟಿದ್ದೀರಿ, ಅದನ್ನು ಎಕ್ಸ್‌ಟೆನ್‌ಷನ್ ಆಫ್ ಟೈಮ್ ಎಂದು ರಿಜಿಸ್ಟ್ರೇಷನ್‌ಗೆ ಮಾಡಬೇಕಾಗುತ್ತದೆ. ಮತ್ತೆ ಗ್ರಾಮಸಭೆಗಳು ಆಗದೆ ಇರುವ ಕಡೆಗೆ ಕ್ರಮ ಕೈಗೊಳ್ಳಬೇಕೆಂದು ಇದೆ. ಆದರೆ ಕ್ರಮವನ್ನು ಕೈಗೊಳ್ಳುವ ಬಗ್ಗೆ ಯಾರಿಗೂ ಕೂಡ ಪವರ್ಸ್ ಇಲ್ಲ. ಏಕೆಂದರೆ ಗ್ರಾಮಸಭೆಯಲ್ಲಿ ಗ್ರಾಮಪಂಚಾಯಿತಿಯದ್ದೇ ಅಂತಿಮ ಎಂದು ಮಾಡಿದೆ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಸಲಹೆ ಏನು ಇದೆ ಅದು ಪರಿಶೀಲನೆಯಲ್ಲಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಇಲ್ಲಿ ಮಗ್ಗುಲಲ್ಲಿ ಕುಳಿತುಕೊಂಡು ಹೇಳುತ್ತಿದ್ದೀರಿ, ಆಶ್ರಯ ಸಮಿತಿ ಆಗಬೇಕೆಂದು, ಈಗ ಪರಿಶೀಲನೆಯಲ್ಲಿದೆ ಎಂದರೆ ಅದು ಹೇಗೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ಆ ರೀತಿ ಹೇಳಿದವರು ಯಾರು?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉದಾಸಿಯವರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉದಾಸಿಯವರೇ, ತಾವಲ್ಲವೆ ಇಲ್ಲಿ ಕುಳಿತುಕೊಂಡು ದಿನಾಗಲೂ ಹೇಳುತ್ತಿದ್ದವರು?

ಶ್ರೀ ಸಿ.ಎಂ. ಉದಾಸಿ: ಈಗ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಏನಾದರೂ ಪರಿವರ್ತನೆಯನ್ನು ತರುವಂತಹ ಇಚ್ಛೆ ಇದೆ. ಈ ದಿಸೆಯಲ್ಲಿ ನಿಮ್ಮೆಲ್ಲರ ಸಹಕಾರ ಬೇಕು ಎಂದು ಎಲ್ಲರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉದಾಸಿಯವರು ಈಗ ಉದಾಸೀನವಾಗಿದ್ದೀರಿ. ಇಲ್ಲಿ ಉದಾಸಿಯವರು ಎಚ್ಚರದಲ್ಲಿದ್ದರು, ಈಗ ತೀರಾ ಉದಾಸೀನವಾಗಿದ್ದಾರೆ. ಸ್ವಲ್ಪ ಎಚ್ಚರ ಇರುವವರೆಂದರೆ ಮಾನ್ಯ ಕಾರಜೋಳರವರು ಎಂದು ನನಗನ್ನಿಸುತ್ತದೆ. ನನಗೆ ಅವರ ಬಗ್ಗೆ ಅಭಿಮಾನವಿದೆ.

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಬೇಗನೆ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನು ಯೂನಿಟ್ ಕಾಸ್ಟ್‌ನ್ನು 20 ರಿಂದ 25 ಸಾವಿರ ರೂ. ಎಂದು ಜಾಸ್ತಿ ಮಾಡಿದ್ದೀರಿ, ಅದರಿಂದ ಯಾವ ಪರ್ಪಸ್ ಕೂಡ ಸರ್ವ್ ಆಗುವುದಿಲ್ಲ. ನೀವು ಖಂಡಿತವಾಗಿಯೂ ಮಿನಿಮಮ್ 40 ಸಾವಿರ ರೂಪಾಯಿಗಳಿಗೆ ಒಂದು ಜನತಾ ಮನೆಗಳನ್ನು ಕೊಡುವಂತಹ ಸ್ಥಿತಿಗೆ ಬಂದಿದ್ದೀರಿ. ನೀವು ಬೆಂಗಳೂರಿನಲ್ಲಿ ಅಥವಾ ನಗರಪ್ರದೇಶಗಳಲ್ಲಿ ಅಥವಾ ಚಿಕ್ಕನಾಯಕನಹಳ್ಳಿ ಪುರಸಭೆಯಲ್ಲಿ ಮನೆಗಳನ್ನು ಕಟ್ಟಬೇಕೆಂದರೆ, 40 ಸಾವಿರ ರೂ. ಗಳನ್ನು ಕೊಡಿ ಎಂದು ಹೇಳುತ್ತೀರಿ. ಹಳ್ಳಿಯಲ್ಲಿ ಕಟ್ಟಿ ಎಂದರೆ 20 ಸಾವಿರ ರೂ.ನಲ್ಲಿ ಕಟ್ಟಿ ಎಂದು ಹೇಳುತ್ತೀರಿ. ಮನೆಯನ್ನು ಕಟ್ಟುವವನಿಗೆ ಏನಾದರೂ ತೋಟ, ಹೊಲ, ಮನೆ ಎಲ್ಲವೂ ಇದ್ದು ಹೆಂಚು ಪಕಸಟ್ಟೆ ಸಿಗುತ್ತದೆ, ಮರಗಳು ಸಿಗುತ್ತವೆ ಎಂದು ಇದ್ದರೆ ಕಾಸ್ಟನ್ನು ವ್ಯತ್ಯಾಸ ಮಾಡಿಕೊಳ್ಳಬಹುದಾಗಿತ್ತು. ಸಾರ್, ಇವತ್ತು ಸಿಮೆಂಟ್ ಬೆಲೆ ನಿನ್ನೆ ಮೊನ್ನೆಯಿಂದ ಏನಾಗಿದೆ ಎಂದರೆ, 180 ರಿಂದ 210 ರೂಪಾಯಿ ಆಗಿದೆ. ಸ್ಟೀಲ್ 23 ರಿಂದ 27 ಸಾವಿರ ರೂಪಾಯಿಗಳು ಒಂದು ಟನ್‌ಗೆ ಇದೆ. ಇವತ್ತು ಯಾರೂ ಮರವನ್ನು ಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಶೀಟ್‌ನ ಮನೆಯನ್ನು ಅಷ್ಟೇ ಕಟ್ಟಿಕೊಳ್ಳಬಹುದು. ಕಬ್ಬಿಣವನ್ನು ತೆಗೆದುಕೊಂಡು ಮೌಲ್ಡ್ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಬಾಲಕೃಷ್ಣರವರೆ, ಶೀಟ್ ಪ್ರೈಸ್ ಕೂಡ ಸಿಮೆಂಟ್‌ನ್ನು ಆಧಾರಿಸಿಯೇ ನಿರ್ಧಾರವಾಗುವುದು. ಶೀಟ್ ಬೆಲೆ ಹಾಗೆಯೇ ಆಗುವುದಿಲ್ಲ. ಸಿಮೆಂಟ್ ಪ್ರೈಸ್ ಆಧಾರದ ಮೇಲೆ ಇದು ಆಗುತ್ತದೆ. ಮರದ ಪ್ರೈಸ್ ಕೂಡ ಸ್ಟೀಲ್ ಪ್ರೈಸ್ ಆಧಾರದ ಮೇಲೆಯೇ ನಿಗದಿಯಾಗುತ್ತದೆ. ನೀವು ಏನು ಸ್ಟೀಲ್ ಫ್ರೇಮ್‌ನ್ನು ಕೊಳ್ಳಬಹುದಾಗಿತ್ತು. ಅದಕ್ಕೆ ಕಂಪ್ಯಾರಿಟೀವ್ ಆಗಿ ಇವತ್ತು ಮರದ ರೇಟನ್ನು ನಿಗದಿ ಮಾಡುವ ಕಾಲಕ್ಕೆ ನಾವು ಬಂದಿದ್ದೇವೆ. ಹೆಂಚು ಕೂಡ ಇವತ್ತು ಪುಕಸಟ್ಟೆ ಬರುವುದಿಲ್ಲ. ಇಟ್ಟಿಗೆ ಇವತ್ತು ಎರಡೂವರೆ ಸಾವಿರದಿಂದ ಮೂರು ಸಾವಿರ ರೂಪಾಯಿ ಆಗಿದೆ. ಮರಳು ಒಂದು ಲೋಡ್‌ಗೆ ಮೂರು–ಮೂರೂವರೆ ಸಾವಿರ ರೂಪಾಯಿ ಆಗಿದೆ. ಗೋಡೆಯನ್ನು ಕಟ್ಟುವುದಕ್ಕಾಗಿ ನಾನು ಸಿಮೆಂಟ್‌ನ ಲೆಕ್ಕವನ್ನು ಹೇಳಿದೆ. ನಾನು ಆರ್‌ಸಿಸಿ ಹಾಕಿ ಎಂದು ಹೇಳಲಿಲ್ಲ. ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಮನೆಯ ಯೂನಿಟ್ ಕಾಸ್ಟ್‌ನ್ನು 'ಆಶ್ರಯ ಮನೆ'ಯದ್ದು ಕೂಡ 40 ಸಾವಿರ ರೂಪಾಯಿ ಎಂದು ಮಾಡಬೇಕು. ನೀವು ಆಶ್ರಯ ಮನೆಗಳಿಗೆ 40 ಸಾವಿರ ರೂಪಾಯಿಗಳನ್ನು ಕೊಡದೇ ಹೋದರೆ ಮನೆಯನ್ನು ಇವತ್ತು ರೆಗ್ಯುಲರ್ ಆಗಿ ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಹೇಗಾದರೂ ಮಾಡಿ, ಬೇಕಾದರೆ ಒಂದಿಷ್ಟು ಮನೆಗಳನ್ನು ಕಡಿಮೆ ಕಟ್ಟಿಸಿ. ಆದರೆ ಮನೆಯನ್ನು ಚೆನ್ನಾಗಿ ಕಟ್ಟುವಂತೆ ಮಾಡಿ. ಆ ಮನೆಯು 20 ವರ್ಷ ಬಾಳಿಕೆ ಬರುವಂತೆ ಮಾಡಬೇಕು. 5 ಅಥವಾ 10 ವರ್ಷಗಳಲ್ಲಿ ಮನೆಯು ಬಿದ್ದುಹೋಗುವಂತಹ ಮನೆಯನ್ನು ಕಟ್ಟಿಸಿಬಿಟ್ಟು ನಾವು ಒಂದು ಕಾರ್ಯಕ್ರಮವನ್ನು ಮಾಡಿದೆವು, 3 ಲಕ್ಷ, 4 ಲಕ್ಷ ಮನೆಗಳನ್ನು ಮಾಡಿದೆವು ಎಂದು ಹೇಳುವುದರಲ್ಲಿ ಅರ್ಥ ಇಲ್ಲ. ಇನ್ನು ಮುಜರಾಯಿ ಇಲಾಖೆಗೆ ಹಣವನ್ನು ಜಾಸ್ತಿ ಮಾಡಿದ್ದೇವೆ, ಆರಾಧನಾ ಸ್ಕೀಮ್‌ಗೆ ಹಣವನ್ನು ಕೊಡುವುದಕ್ಕೆ ಎಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆರಾಧನಾ ಸ್ಕೀಮ್‌ಗೆ ಒಂದು ಗೈಡ್‌ಲೈನ್ ಇದೆ. ಆರಾಧನಾ ಸ್ಕೀಮ್‌ನಲ್ಲಿ ಯಾವ ದೇವಸ್ಥಾನಗಳಿಗೆ ನಾವು ಗ್ರಾಂಟನ್ನು ಕೊಡಬಹುದು ಎಂದು ಹೇಳಿ ಬೇರೆಯೇ ಒಂದು ನಿಯಮ ಇದೆ. ಮುಜರಾಯಿ ಟೆಂಪಲ್ಸ್ ಏನು ಇದೆ, ಬಹಳ ಪ್ರಮುಖವಾದಂತಹ ಟೆಂಪಲ್ಸ್. ಅದಕ್ಕೆ ನೀವು ಯಾವುದರಲ್ಲಿ ಹಣವನ್ನು ಕೊಡುತ್ತೀರೆಂಬುದು ನಮಗೆ ಗೊತ್ತಾಗಬೇಕು. 5 ರಿಂದ 15 ಲಕ್ಷ ರೂಪಾಯಿಗಳು ಎಸ್ಟಿಮೇಟ್ ಬರುವಂತಹದ್ದು ಸಾಮಾನ್ಯವಾಗಿ 100 ವರ್ಷಗಳ ಹಿಂದೆ ಆಗಿದ್ದಂತಹ ದೇವಸ್ಥಾನಗಳು ರಿಪೇರಿಗೆ ಬಂದಿವೆ. ಅವೆಲ್ಲವನ್ನೂ ನೀವು ಮಾಡಬೇಕಾದರೆ ಒಂದು ರೂಪಾಯಿ ಕೂಡ ಕೊಡುತ್ತಿಲ್ಲ. ಸನ್ಮಾನ್ಯ ಪ್ರಕಾಶ್‌ರವರು ನಮ್ಮ ಹತ್ತಿರ ಒಂದು ಪಟ್ಟಿಯನ್ನು ತೆಗೆದುಕೊಂಡು ಬಿಟ್ಟರು. ಎಲ್ಲರಿಗೂ ಮುಜರಾಯಿಯಿಂದ ಹಣ ಕೊಡಿಸುತ್ತೇವೆ, ಒಂದು ಪಟ್ಟಿಯನ್ನು ಕೊಡಿ, ಅಂದರು. ಸನ್ಮಾನ್ಯ ಸಿಂಧ್ಯಾರವರು 20 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಯಾರಾದರೂ ಪಟ್ಟಿ ಇದ್ದರೆ ಕೊಡಿ ಎಂದು ಹೇಳಿದರು. ನಾನು ಮಾನ್ಯ ಯಡಿಯೂರಪ್ಪನವರನ್ನು ಕೇಳುತ್ತೇನೆ. ಅವರು ದೈವಭಕ್ತರು ಆಗಿದ್ದಾರೆ, ಅದರಲ್ಲಿ ಎರಡು ಮಾತಿಲ್ಲ. ಆರಾಧನಕ್ಕೆ ಈಗ ಜಾಸ್ತಿ ಮಾಡಿದ್ದೀರಿ. ಮುಜರಾಯಿ ಇಲಾಖೆಗೆ ಮುಜರಾಯಿ ದೇವಸ್ಥಾನ ಕಟ್ಟುವುದಕ್ಕೆ ಏನಾದರೂ ಹಣವನ್ನು ತೆಗೆದು

ಇಡಬೇಕು. ಇವತ್ತು ಮುಜರಾಯಿ ಟೆಂಪಲ್ಸ್ ಗತಿ ಏನಾಗಬೇಕು? ಅದು ಪ್ರಮುಖವಾದುದು, ಇನ್ನು ಎರಡನೆಯದಾಗಿ ಹೇಳುವುದಾದರೆ, ಬಸವಣ್ಣನವರನ್ನು ತಾವು ಒಪ್ಪಿದ್ದೀರಿ, ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿಯನ್ನು ಒಪ್ಪುತ್ತೀರಿ, ನಮ್ಮ ಸಿದ್ಧರಾಮೇಶ್ವರರನ್ನೂ ಕೂಡ ತಾವು ಒಪ್ಪಿಕೊಳ್ಳಿ ಸಾರ್. ತುಮಕೂರು ತುಂಬಾ ಸಿದ್ಧರಾಮೇಶ್ವರರು ಓಡಾಡಿದ್ದಾರೆ. ಅಲ್ಲೆಲ್ಲಾ ಒಂದು ಕಾರ್ಯಕ್ರಮವನ್ನು ತಾವು ದಯವಿಟ್ಟು ಮಾಡಿಕೊಡಬೇಕು. ಏಕೆಂದರೆ ನಮಗೆ ಏನಾಗುತ್ತದೆ ಎಂದರೆ, ಏನಪ್ಪಾ ಶರಣರೆಲ್ಲರೂ ಶಿವಮೊಗ್ಗದಲ್ಲೇ ಇದ್ದರಾ, ಕೂಡಲಸಂಗಮದಲ್ಲಿ ಇದ್ದರಾ ನಾವು ಏನೂ ಇರಲಿಲ್ಲವೇ ಎಂದಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವೆಂಕಟರಮಣಸ್ವಾಮಿ ಶ್ರೀಮಂತ ದೇವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮಲ್ಲಿ ಬಹಳ ಪವಿತ್ರವಾದಂತಹ ದೇವಸ್ಥಾನಗಳು ಇವೆ. ಸಿದ್ಧರಾಮೇಶ್ವರರು, ಬದುಕಿದ್ದ ಜಾಗದಲ್ಲಿ ಏನಾದರೂ ನೀವು ಮಾಡಲೇಬೇಕು. ಇನ್ನು ಮೂರನೆಯದಾಗಿ ಹೇಳುವುದಾದರೆ, ಏಕೋ ನೀವು ಇನ್ನು ನಮ್ಮನಮ್ಮಗಳ ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸವನ್ನು ಮಾಡಿಕೊಳ್ಳಬೇಕಾದರೆ ಮಂತ್ರಿ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಮಾಜಿ ಉಪ ಮುಖ್ಯಮಂತ್ರಿಗಳು ಆಗುವಂತಹ ಸ್ಥಿತಿ ನಿರ್ಮಾಣ ಆಗಿಹೋಗಿಬಿಟ್ಟಿದೆ. ಎಲ್ಲಾ ಮುಖ್ಯಮಂತ್ರಿಗಳ ಕ್ಷೇತ್ರಕ್ಕೆ ಹಾಕಿಕೊಳ್ಳುವುದು, ಉಪ ಮುಖ್ಯಮಂತ್ರಿಗಳ ಕ್ಷೇತ್ರಗಳನ್ನು ಸೆಟಲೈಟ್ ಟೌನ್ ಮಾಡುತ್ತೇವೆ ಅನ್ನುವುದು, ಈ ಕಡೆ ಧರ್ಮಸಿಂಗ್ ಸಾಹೇಬರು ಬಯ್ಯುತ್ತಾರೆಂದು ಜೇವರ್ಗಿಯನ್ನೂ ಮಾಡಿಬಿಟ್ಟರೆ ನಾವೆಲ್ಲಾ ಎಲ್ಲಿಗೆ ಹೋಗಬೇಕು?

ಶ್ರೀ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ನಮ್ಮ ಕ್ಷೇತ್ರದಲ್ಲಿ ಪ್ರಯೋಗ ಮಾಡೋಣ ಎಂದು ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಊರಿನಲ್ಲಿಯೂ ಪ್ರಯೋಗ ಮಾಡಿ. ನಿಮ್ಮೂರಲ್ಲೇ ಏಕೆ ಪ್ರಯೋಗ ಮಾಡಬೇಕು? ಒಂದು ಪ್ರಯೋಗವನ್ನು ನಮ್ಮೂರಿನಲ್ಲಿಯೂ ಮಾಡಿ, ಸರ್, ನಾನು ಪ್ರಾಮಾಣಿಕವಾಗಿ ಆಗಿ ಹೇಳುತ್ತೇನೆ, ರಾಮನಗರದಲ್ಲಿ ಪ್ರಯೋಗ ಮಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇಷ್ಟು ಪ್ರಯೋಗಗಳನ್ನು ನಿಮ್ಮ ಕಾರ್ಯಕ್ಷೇತ್ರದಲ್ಲಿ ಮಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಸರ್, ರಾಮನಗರವನ್ನೂ ಏತಕ್ಕೆ ಮಾಡಬಾರದು ಅಂದರೆ ತಾವು ನೈಸ್ ಕಂಪೆನಿಯ ಅಗ್ರಿಮೆಂಟಿನಲ್ಲಿ ಒಪ್ಪಿಕೊಂಡಿದ್ದೀರಿ, you are creating five satellite towns upto Srirangapattna. ರಾಮನಗರ ಬಿಡದಿ, ಶ್ರೀರಂಗಪಟ್ಟಣದ ಮಧ್ಯೆ ಒಂದೊಂದು ಲಕ್ಷ ಜನ ವಾಸ ಮಾಡುವ ಪಟ್ಟಣಗಳಿಗೆ ಎನ್‌ವಿಸೇಜ್ ಮಾಡಿ ಇವತ್ತು ನೈಸ್ ಕಂಪೆನಿಯವರು ರೋಡ್ ಮಾಡಲಿಕ್ಕೆ ಅಲ್ಲಿಗೆ ಬಂದಿರುವುದು. ತಮಗೆ ಅವಕಾಶ ಆಗಿಹೋಗಿದೆ, ಅದರ ಬಗ್ಗೆ ನಾವ್ಯಾರೂ ಟೀಕೆ ಮಾಡಲಿಲ್ಲ. ಏತಕ್ಕೆ ನೀವು ಬೆಂಗಳೂರಿನಿಂದ ಮೈಸೂರು ಕಡೆಗೆ Infrastructure create ಮಾಡಿಕೊಳ್ಳುತ್ತಿದ್ದೀರಿ? ಏತಕ್ಕೆ ಶ್ರೀರಂಗಪಟ್ಟಣ, ರಾಮನಗರ ಸೇರಿಸಿದ್ದೀರಿ? ನಾವು ಅದರ ಬಗ್ಗೆ ಕೇಳಲೇ ಇಲ್ಲ. ಒಂದಾಗಲೇ ನಿಮಗೆ ಸೇರಿಬಿಟ್ಟಿದೆ, ಇನ್ನೂ ಒಂದು ನಿಮಗ್ಯಾಕೆ? ತುಮಕೂರಿಗೆ ಕೊಡಿ, ಯಾವುದು ಸ್ಯಾಟಲೈಟ್ ಟೌನ್ ಅಂತ ಇದೆ ಅದಕ್ಕೆ ಕೊಡಿ, ಕೋಲಾರಕ್ಕೆ ಕೊಡಿ, ತುಮಕೂರಿಗೆ ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ರಾಮನಗರದ ವಿಷಯದಲ್ಲಿ ದಯವಿಟ್ಟು ಮಾನ್ಯ ಮಾಧುಸ್ವಾಮಿಯವರು ಏನು ಮುಖ್ಯಮಂತ್ರಿಗಳ ಕ್ಷೇತ್ರ ಎಂದು ಸೇರಿಸಿದ್ದಾರೆ ಎಂದು ಹೇಳುತ್ತಿದ್ದಾರೆ ದಯವಿಟ್ಟು ಆ ಭಾವನೆ ಬೇಡವೆಂದು ಹೇಳಬಯಸುತ್ತೇನೆ. ಕಾರಣ ನೈಸ್ ಕಂಪನಿ ಬಗ್ಗೆ ಹೇಳಿದರೆ ಅದರ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ, ಅದು ತಮಗೂ ಗೊತ್ತಿರುವ ವಿಚಾರಗಳೇ, ನೈಸ್ ಕಂಪನಿಯಿಂದ ಮಾಡತಕ್ಕಂಥ ಸ್ಯಾಟಲೈಟ್ ಟೌನ್‌ನಿಂದ ರಾಮನಗರದಲ್ಲಿ ಆಗಬೇಕಾದಂಥ ಅಭಿವೃದ್ಧಿ ಕೆಲಸಗಳೇನಿವೆ, ಆ ಅಭಿವೃದ್ಧಿ ಕೆಲಸಗಳಿಗೆ ಆ ನೈಸ್ ಕಂಪನಿಗೆ ಕೊಟ್ಟಿರತಕ್ಕಂಥ ಸ್ಯಾಟಲೈಟ್ ಟೌನ್‌ನಿಂದ ಆಗುವುದಿಲ್ಲ. ಇವತ್ತು ಬೆಂಗಳೂರು ನಗರಕ್ಕೆ 45 ಕಿ.ಮೀ. ದೂರದಲ್ಲಿರುವ ಬಿಡದಿಯ ಬಳಿ ಹಲವಾರು ಕೈಗಾರಿಕೆಗಳು ಪ್ರಾರಂಭ ಮಾಡುವುದಕ್ಕೆ ಈಗಾಗಲೇ ಚಾಲನೆಯನ್ನು ಕೊಟ್ಟಿದ್ದೇವೆ. ಇವತ್ತು ಈ ಭಾಗದಲ್ಲಿ ಅಭಿವೃದ್ಧಿ ಕೆಲಸಗಳು ಆಗದಿದ್ದರೆ ಮತ್ತೆ ಬೆಂಗಳೂರು ನಗರಕ್ಕೆ ಒಂದು ಕಡೆ ಒತ್ತಡಗಳು ಏನಿವೆ, ಆ ದೃಷ್ಟಿಯಿಂದ ನಾವು ಇವತ್ತು ಸಮಗ್ರವಾಗಿ ಅದನ್ನು ಬರೇ ಸ್ಯಾಟಲೈಟ್ ಟೌನ್‌ಗೆ ಮಾತ್ರ ಉಪಯೋಗ ಮಾಡುತ್ತಿಲ್ಲ. ಬೇರೆ ಎಲ್ಲಾ ಅಭಿವೃದ್ಧಿಗಳ ದೃಷ್ಟಿಯಿಂದ ಒಂದು ಕಾರ್ಯಕ್ರಮಗಳನ್ನು ಮಾಡಬೇಕೆಂದು ಇರತಕ್ಕದ್ದು. ಮುಂದಿನ ದಿನಗಳಲ್ಲಿ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಅಂತ ಏನಿದೆ ಆಗ ಜಿಲ್ಲಾ ಹೆಡ್ ಕ್ವಾರ್ಟರ್ಸ್ ಆಗತಕ್ಕಂಥ ಅವಕಾಶಗಳಿರುವುದರಿಂದ ಆ ಮುಂದಿನ ದೃಷ್ಟಿಯನ್ನು ಇಟ್ಟುಕೊಂಡು ಆ ತೀರ್ಮಾನ ಮಾಡಿದ್ದೇವೆಯೇ ವಿನಃ ಇದರಲ್ಲಿ ಬೇರೆ ಯಾವುದೇ ಸ್ವಾರ್ಥವಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ರಾಮನಗರವನ್ನು ಸ್ಯಾಟಲೈಟ್ ಟೌನ್ ಮಾಡಿದರೆ ನೆಲಮಂಗಲ, ಹೊಸಕೋಟೆ, ಕನಕಪುರ ಇಲ್ಲವೇ? ನಿಮ್ಮ ಉದ್ದೇಶವೇನು? ರಾಮನಗರ ನಿಮ್ಮ ಕ್ಷೇತ್ರ, ಶಿಕಾರಿಪುರ ಯಡಿಯೂರಪ್ಪನವರ ಕ್ಷೇತ್ರ, ಹೋಗಲಿ ಎಂದು ಧರಂಸಿಂಗ್‌ರವರಿಗೆ ಒಂದು ಕೊಟ್ಟಿರಿ. ಈ ರೀತಿಯ ತಾರತಮ್ಯ ಸರಿಯಲ್ಲ.

ಉಪಾಧ್ಯಕ್ಷರು : ಮಾಧುಸ್ವಾಮಿಯವರೇ, ಬೇಗ ಮಾತನಾಡಿ ಮುಗಿಸಿ, ಒಂದೂವರೆ ಗಂಟೆ ಆಯಿತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮಗೆ ಒಂದನ್ನಾದರೂ ಬಿಟ್ಟುಕೊಡಿ. ಅಥವಾ ಒಂದು ತಾಲ್ಲೂಕನ್ನಾದರೂ ತೆಗೆದುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಮನಗರ ಸ್ಯಾಟಲೈಟ್ ಟೌನ್ ಆಗಬಾರದು ಸರ್, ಅದಕ್ಕೆ ವೈಜ್ಞಾನಿಕ ಕಾರಣವೊಂದಿದೆ, ನಿಮ್ಮ ಸ್ಟೇಟ್ ಇಡೀ ಲೀಡ್ ಆಗುವುದು ಈ ಕಡೆ, ಆ ಕಡೆಯಲ್ಲ, ಎರಡೂ ನ್ಯಾಷನಲ್ ಹೈವೆ ಸೇರುತ್ತದೆ, ನಾನು ಅವತ್ತೇ ಹೇಳಿದ್ದೇನೆ. ಹೆಚ್.ಎಂ.ಟಿ. ಮುಚ್ಚಿ ಹೋಗುತ್ತದೆ, 5000–6000 ಮನೆಗಳು ಖಾಲಿಯಿವೆ. ಏರ್ ಪೋರ್ಟ್‌ಗೆ ಹತ್ತಿರವಾಗುತ್ತದೆ, ಇಲ್ಲ ಕೋಲಾರ ಏರ್‌ಪೋರ್ಟ್‌ಗೆ ಹತ್ತಿರವಾಗುತ್ತದೆ, ಇಲ್ಲ ತುಮಕೂರು ಏರ್‌ಪೋರ್ಟ್‌ಗೆ ಹತ್ತಿರವಾಗುತ್ತದೆ. ನಾಳೆ ನೀವು ರಾಮನಗರದಿಂದ ಕ್ರಾಸ್ ಮಾಡಿ ನಾಳೆ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ಗೆ ಹೋಗಲಿಕ್ಕಾಗುವುದಿಲ್ಲ. ಸ್ಯಾಟಲೈಟ್ ಟೌನ್ ಕಾನ್ಸೆಪ್ಟ್ ಇದ್ದರೆ ದಯಮಾಡಿ ತಾವು ತುಮಕೂರನ್ನು ಪರಿಶೀಲನೆ ಮಾಡಲೇಬೇಕು. ಇದರಲ್ಲಿ ರಾಜಕೀಯವಿಲ್ಲ, ಅಥವಾ ಕೋಲಾರವನ್ನು ತೆಗೆದುಕೊಂಡು

ಬಿಡಿ. ಇಲ್ಲಾ ಆ ಕಡೆ ತೆಗೆದುಕೊಳ್ಳಬೇಕು, ಇಲ್ಲವೇ ಈ ಕಡೆ ತೆಗೆದುಕೊಳ್ಳಬೇಕು. ನೀವು ಮೈಸೂರಿಗೆ ಮೊದಲೇ ನ್ಯಾಷನಲ್ ಹೈವೇ ಮಾಡಿ, ಅಲ್ಲಿಗೊಂದಷ್ಟು ಟ್ರಾಫಿಕ್ ಕ್ರಿಯೇಟ್ ಮಾಡಿ, ಆಮೇಲೆ ನೋಡೋಣ, ರಾಮನಗರವನ್ನು ಅಭಿವೃದ್ಧಿ ಮಾಡಿಕೊಳ್ಳುವಂಥ ಶಕ್ತಿ ನಿಮಗೆ ಇದೆ. ನಿಮ್ಮ ತಂದೆಯವರು ಕುಳಿತು ನೈಸ್ ಕಂಪೆನಿಯಂದ ಅಗ್ರಿಮೆಂಟ್ ಮಾಡುವಾಗ ಅಲ್ಲಿಗೆ ಐದು ಸ್ಯಾಟ್‌ಲೈಟ್ ಟೌನ್ ಮಾಡಿಸಿಕೊಂಡರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನೈಸ್ ಕಂಪೆನಿ ಆಮೇಲೆ ಬಂದಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಂಗಳೂರು ಮತ್ತು ಮೈಸೂರು ಮಧ್ಯೆ ಐದು ಸ್ಯಾಟಲೈಟ್ ಟೌನ್ಸ್ ಆಗಬೇಕೆಂದು ಕಾನ್ಸೆಪ್ಟ್ ತಂದವರು ಅವರೇ. ಅದಕ್ಕೆ ನಾವು ಅಡ್ಡಿ ಮಾಡಿಲ್ಲ, ಮೈಸೂರು ನಮ್ಮದೇ, ಆ ಭಾಗವೂ ನಮ್ಮದೇ. ಆದರೆ ತುಮಕೂರು ಏನಾಗಬೇಕು, ಇಲ್ಲಿ ಭದ್ರಾವತಿ, ದಾವಣಗೆರೆ ಏನಾಗಬೇಕೆಂಬ ಚಿಂತನೆ ಆರಂಭವಾಗಬೇಕಲ್ಲಾ? ಸ್ಯಾಟಲೈಟ್ ಎಂದು ನೀವು ಕರೆದರೆ ತುಮಕೂರು, ಕೋಲಾರ ಈ ಭಾಗಗಳಿಗೆ ಸೀಮಿತ ಮಾಡಬೇಕು. ಸ್ಯಾಟಲೈಟ್ ಟೌನ್ ಎಂದಿದ್ದಕ್ಕೆ ನಾವು ಮಾತನಾಡುತ್ತಿದ್ದೇವೆ.

ಉಪಾಧ್ಯಕ್ಷರು : ಮಾಧುಸ್ವಾಮಿಯವರೇ, ಇನ್ನೂ ಮಾತನಾಡುವವರು ಬಹಳಷ್ಟು ಜನ ಇದ್ದಾರೆ. ಬೇಗ ಮುಗಿಸಿ. ಈಗಾಗಲೇ ಒಂದೂವರೆ ಗಂಟೆ ಆಯಿತು, ಲೇಟ್ ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಸ್ಟೆಲ್‌ಗಳನ್ನು ಜಾಸ್ತಿ ಮಾಡುವುದಾಗಿ ಹೇಳಿದ್ದೀರಿ ಅದನ್ನು ನಾನು ವೆಲ್‌ಕಮ್ ಮಾಡುತ್ತೇನೆ. ಆದರೆ ಹಾಸ್ಟೆಲ್‌ಗಳಲ್ಲಿರುವ ಸ್ಟ್ರೆಂಗ್ತ್ ಜಾಸ್ತಿ ಮಾಡಿ ಸರ್, ಇನ್ನೂ ಬೇಕಾದಷ್ಟು ಅಕಾಮ್‌ಡೇಷನ್ ಮಾಡಲಿಕ್ಕೆ ಅವಕಾಶವಿದೆ. ಅದರಲ್ಲೂ ಹೆಣ್ಣುಮಕ್ಕಳ ಹಾಸ್ಟೆಲ್‌ನಲ್ಲಿ ಸ್ಟ್ರೆಂಗ್ತ್ ಜಾಸ್ತಿ ಮಾಡಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಜಾಸ್ತಿ ಮಾಡಿ, ಹಾಸ್ಟೆಲ್‌ಗೆ ಮಕ್ಕಳು ಜಾಸ್ತಿ ಬರುತ್ತಿದ್ದಾರೆಂದು ನಾವು ಈ ಬಗ್ಗೆ ಹೋದ ವರ್ಷದಿಂದ ಹೇಳುತ್ತಾ ಬಂದಿದ್ದೇವೆ. ಹಾಸ್ಟೆಲ್ ಅನ್ನು ಹೊಸ ಭಾಗದಲ್ಲಿ ಮಾಡುವುದು it is a welcome stand. ನಾವ್ಯಾರೂ ಇದಕ್ಕೆ ವಿರೋಧ ಮಾಡುವುದಿಲ್ಲ. ಸ್ಟ್ರೆಂಗ್ತ್ ಕೂಡ ಈಗ ಎಕ್ಸಿಸ್ಟಿಂಗ್ ಹಾಸ್ಟೆಲ್‌ಗಳಿಗೆ ಎಲ್ಲೆಲ್ಲಿ ಬೇಡಿಕೆ ಇದೆ ಅಲ್ಲಿ ಬರೀ ಊಟಕ್ಕೆ ವ್ಯವಸ್ಥೆ ಮಾಡಬೇಕಾಗಿದೆ, ಬಿಲ್ಡಿಂಗ್ ಇದೆ, ರೂಮ್ಸ್ ಇದೆ, ಬಿಲ್ಡಿಂಗ್ ಕಟ್ಟಿ ಹೊಸ ಹಾಸ್ಟೆಲ್‌ಗಳ ಸಂಖ್ಯೆ ಜಾಸ್ತಿ ಮಾಡುತ್ತೇವೆನ್ನುವುದಕ್ಕಿಂತ ಹಾಸ್ಟೆಲ್‌ಗಳಲ್ಲಿ ಇರುವ ಸ್ಟ್ರೆಂಗ್ತ್‌ನ್ನೂ ಜಾಸ್ತಿ ಮಾಡುವುದು ಒಳ್ಳೆಯದು, ಎರಡನೆಯದು ಬಿ.ಪಿ.ಎಲ್. ಪಟ್ಟಿಯಲ್ಲಿರುವ ಮಕ್ಕಳಿಗೆ ನಾವು ಟೆಕ್ನಿಕಲ್ ಎಜ್ಯುಕೇಷನ್‌ಗೆ ಫೀಸ್‌ನ್ನು ತುಂಬುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ವಿಮರ್ಶೆಯಾಗಬೇಕು. ಪಿ.ಯು.ಸಿ. ಅಂಕಗಳ ಆಧಾರದ ಮೇಲೆ ತುಂಬುತ್ತೇವೆಂದು ತಾವು ಹೇಳುತ್ತೀರಿ. ನಾನು ಬಿ.ಪಿ.ಎಲ್. ಪಟ್ಟಿಯಲ್ಲಿದ್ದೇನೆ, ಪಿ.ಯು.ಸಿ. ಯಲ್ಲಿ 80 ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆಯುತ್ತೇನೆ, ಸಿ.ಇ.ಟಿ. ಯಲ್ಲಿ ಸೆಲೆಕ್ಟ್ ಆಗಿ ಕಾಲೇಜಿಗೆ ಸೇರುತ್ತೇನೆ, ನನಗೆ ನೀವು ಕೊಡುವುದಿಲ್ಲವೇ? ಅದು ಹೇಳಬೇಕಲ್ಲಾ? ಇವತ್ತು ನೀವು ಅಡ್ಮಿಷನ್ ಕೊಡುತ್ತಿರುವುದು ಸಿ.ಇ.ಟಿ. ಆಧಾರದ ಮೇಲೆ, ಇವತ್ತು ನೀವು ಇಲ್ಲಿ ಪ್ರೋಗ್ರಾಮ್ ಅನೌನ್ಸ್ ಮಾಡುವುದು ಪಿ.ಯು.ಸಿ. ಅಂಕಗಳ ಆಧಾರದ ಮೇಲೆ. ಹಾಗಿದ್ದರೆ ಸಿ.ಇ.ಟಿ. ಯನ್ನು ರದ್ದು ಮಾಡಿಬಿಡಿ. ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ 90% ಗಿಂತ ಮೇಲಿರುವ ಬಿ.ಪಿ.ಎಲ್. ಪಟ್ಟಿಯಲ್ಲಿರುವ ಮಕ್ಕಳಿಗೆ ಎಂದು ಹೇಳಿದಿರಿ, ಬಜೆಟ್ ಮಂಡನೆ ಮಾಡುವಾಗ 80%

ಮೇಲಿರುವವರಿಗೆ ಎಂದು ಹೇಳುತ್ತಿದ್ದೀರಿ. ಪಿ.ಯು.ಸಿ. ಪರ್ಸೆಂಟೇಜ್ ಅನ್ನು ತಾವು ಕನ್ಸಿಡರ್ ಮಾಡಬಾರದು. ಸಿ.ಇ.ಟಿ.ಯಲ್ಲಿ ಮಾರ್ಕ್ಸ್ ತೆಗೆದುಕೊಂಡು ಅಡ್ಮಿಷನ್ ಆಗುವುದರಿಂದ ಸಿ.ಇ.ಟಿ.ಯಲ್ಲಿ ಅಡ್ಮಿಷನ್............

ಉಪಾಧ್ಯಕ್ಷರು : ಮಾನ್ಯ ಮಹಿಮಾ ಪಟೇಲ್‌ರವರೇ, ಕರೆಯುತ್ತೇನೆ, ಈಗ ಕುಳಿತುಕೊಳ್ಳಿ.

ಶ್ರೀ ಮಹಿಮಾ ಜೆ. ಪಟೇಲ್ : ಮಾನ್ಯ ಅಧ್ಯಕ್ಷರೊಂದಿಗೆ ನಾನು ನಿನ್ನೆ ಮಾತನಾಡಿದ್ದೇನೆ. ಒಬ್ಬರಿಗೆ 30 ನಿಮಿಷ ಎಂದು ಅವರು ಹೇಳಿದ್ದಾರೆ. ಹಾಗಾಗಿ ಸದಸ್ಯರು ಅದಕ್ಕಿಂತ ಹತ್ತು ನಿಮಿಷವನ್ನು ಹೆಚ್ಚಿಗೆ ತೆಗೆದುಕೊಳ್ಳಲಿ, ನಾವು ಇನ್ನುಮೇಲೆ ಈ ರೀತಿ ನಿರಂತರವಾಗಿ ಯಾರಾದರೂ ಮಾತನಾಡುತ್ತಿದ್ದರೆ ಕೇಳಲಿಕ್ಕೆ ತಯಾರಿಲ್ಲ.

ಉಪಾಧ್ಯಕ್ಷರು : ಮಾಧುಸ್ವಾಮಿಯವರೇ, ಮುಗಿಸಿ,

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರಿಗೂ ಮಾತನಾಡದ ಹಾಗೆ ಹೇಳಿಬಿಡಿ, ನಾವು ಯೀಲ್ಡ್ ಆಗುವುದಿಲ್ಲ. ನಮಗೆ ಕೊಟ್ಟಿರುವ ಸಮಯಕ್ಕಿಂತ ಒಂದು ನಿಮಿಷವೂ ಜಾಸ್ತಿ ಕೇಳುವುದಿಲ್ಲ. ಸದಸ್ಯರಿದ್ದು ಮಧ್ಯೆ ಇಂಟರ್‌ವೆನ್‌ಷನ್ ಮಾಡುವುದನ್ನು ಡಿಬೇಟ್ ಎಂದು ಕರೆಯುತ್ತೇವೆ. ಅವರ್‍ಯಾರಾದರೂ ಎದ್ದುನಿಂತು ಇಲ್ಲ, ಇಲ್ಲ ನಮಗೆ ಸಮಯ ಮುಗಿದುಹೋಗುತ್ತದೆ, ನೀವು ಕುಳಿತುಕೊಳ್ಳಿ ಎಂದು ಹೇಳಿದರೆ ನಮ್ಮ ಗತಿಯೇನು?

ಶ್ರೀ ಮಹಿಮಾ ಜೆ. ಪಟೇಲ್ : ಸನ್ಮಾನ್ಯ ಅಧ್ಯಕ್ಷರೇ, ಡಿಬೇಟ್‌ಗೆ ಎಲ್ಲಾ ಸದಸ್ಯರಿಗೂ ಅವಕಾಶವನ್ನು ಕೊಡಬೇಕು. ನೀವು ಮುಂದೆ ಕುಳಿತುಕೊಂಡಿರುವವರಿಗೆ ಮಾತ್ರ ಅವಕಾಶವನ್ನು ಕೊಟ್ಟರೆ ಹಿಂದೆ ಇರುವವರು ಪ್ರತಿಸಲ ಅವಕಾಶದಿಂದ ವಂಚಿತರಾಗುತ್ತಿದ್ದೇವೆ.

ಉಪಾಧ್ಯಕ್ಷರು : ಮಾನ್ಯ ಪಟೇಲರೇ, ತಾವು ದಯವಾಡಿ ಕುಳಿತುಕೊಳ್ಳಿ, ಮಾಧುಸ್ವಾಮಿಯವರೇ ಬೇಗ ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ಈ ರೀತಿ ಮಾತನಾಡುವುದನ್ನು ಅವರಿಗೆ ನಿಲ್ಲಿಸಲಿಕ್ಕೆ ಹೇಳಿ. ಒತ್ತಡ ಮಾಡಿದರೆ ನಾವು ಮಾತನಾಡುವುದಿಲ್ಲ. ಯಾರಿಗೋಸ್ಕರ ನಾವು ಮಾತನಾಡಬೇಕು ಸರ್? ಅವರು ಬಂದು ನಿಮಗೆ ಹೇಳಿದರೆ ನೀವು ಕೇಳಬೇಕೆ? ನಾವು ಯಾವಾಗಲೂ ಹಾಗೆ ಕೇಳುತ್ತೇವೆಯೇ?

ಶ್ರೀ ಬಿ.ಸಿ. ಪಾಟೀಲ್ : ಹೊಸಬರಿಗೆ ಅವಕಾಶವೇ ಸಿಗುತ್ತಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸರ್, ಇದು ಅತಿಯಾಗಿ ಹೋಯಿತು. ಪದೇ ಪದೇ ಹೀಗೆ ಹೇಳಿದರೆ ಸರಿಯಾಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಮಾತುಗಳಿಗೆ ನಿರ್ಬಂಧ ಮಾಡಿದರೆ ನಾವು ಮಾತನಾಡುವುದೇ ಇಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಎಲ್ಲರಿಗೂ ಅವಕಾಶ ಸಿಗಬೇಕೇ ಬೇಡವೇ, ಹಿಂದಿನವರನ್ನು ಕರೆಯಿರಿ. ನಾವೇನೂ ಮಾತನಾಡುವುದು ಬೇಡವೇ?

(ಗೊಂದಲ)

ಶ್ರೀ ಸಿದ್ದು ಸಾವದಿ : ಹೊಸ ಸದಸ್ಯರಿಗೆ ಅವಕಾಶ ಕಡಿಮೆಯಾಗಿದೆ. ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳುವುದೇ ಬೇಡವೇ? ತಾಸುಗಟ್ಟಲೆ ಇವರೇ ಮಾತನಾಡಿದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು : ಮಾಧುಸ್ವಾಮಿಯವರೇ, ನೀವು ಮಾತನಾಡಿ ಮುಗಿಸಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಚರ್ಚೆಯಾಗಬೇಕು ಎಂದು ಮಾತನಾಡುತ್ತಿದ್ದೇವೆ, ಹೀಗೆ ನಿರ್ಬಂಧ ಮಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬಜೆಟ್ ಮೇಲೆ ಚರ್ಚೆಯಾಗುತ್ತಿದೆ, ಮಧ್ಯೆ ಈ ರೀತಿ ಮಾತನಾಡಿದರೆ ಹೇಗೆ?

(ಗೊಂದಲ)

(ಈ ಹಂತದಲ್ಲಿ ಹಲವಾರು ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ದಯಮಾಡಿ ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ, ಈಗ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಗಂಟೆಗಿಂತ ಹೆಚ್ಚು ಮಾತನಾಡಲಿಲ್ಲ. ಬಹಳ ಜನ ಮಾಡನಾಡುವವರಿದ್ದಾರೆ. ನಿಮಗೆ ಒಂದೂವರೆ ಗಂಟೆ ಸಮಯವನ್ನು ಕೊಟ್ಟಿದ್ದೇನೆ, ಅರ್ಧಗಂಟೆ ಹೆಚ್ಚಿಗೆ ಆಯಿತು, ಒಂದು ಗಂಟೆಯಿಂದ ಕೊಟ್ಟಿದ್ದೇನೆ. ಒಂದೂವರೆಗೆ ಕ್ಲೋಸ್ ಮಾಡಿದ್ದೇನೆ. ಮೂರುವರೆ ಗಂಟೆಗೆ ಆರಂಭ ಮಾಡಿ ಈ ನಾಲ್ಕೂವರೆ ಗಂಟೆ ಆಯಿತು. ಬಾಲಕೃಷ್ಣರವರೇ ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರಿಗೆ ನೀವು ಅವಕಾಶವನ್ನು ಕೊಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ, ಎಲ್ಲರಿಗೂ ಅವಕಾಶವನ್ನು ಕೊಡಬೇಕು. ನಾವು ಬರೇ ಕೋರಂಗೋಸ್ಕರ ಒಳಗಡೆಗೆ ಬಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಈಗ ಎಲ್ಲರಿಗೂ ಅವಕಾಶವಿದೆ, ಎಲ್ಲರೂ ಮಾತನಾಡಬೇಕು. ಇದರಲ್ಲೇ ಮತ್ತೆ ಸಮಯ ಹೋಗುತ್ತದೆ, ಈಗ ಮಾನ್ಯ ಮಾಧುಸ್ವಾಮಿಯವರೇ, ನೀವು ಬಹಳ ಚೆನ್ನಾಗಿ ಅರ್ಥಗರ್ಭಿತವಾಗಿ ಮಾತನಾಡಿದ್ದೀರಿ. ಪ್ರತಿಯೊಂದು ಅಂಶವನ್ನು ನೀವು ಎತ್ತಿ ಹಿಡಿದಿದ್ದೀರಿ. ಇದರಿಂದ ಎಲ್ಲರಿಗೂ ಸಂತೋಷವೇ, ಆದರೆ ಬೇಗ ಮುಗಿಸಿದರೆ ಬೇರೆಯವರಿಗೂ ಅವಕಾಶವನ್ನು ಕೊಡಬಹುದು. ಈಗ ಇನ್ನೈದು ನಿಮಿಷದಲ್ಲಿ ದಯಮಾಡಿ ಮಾತನಾಡಿ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೇಕಾರರ ಬಗ್ಗೆ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಮಾತನಾಡಲಿಕ್ಕೆ ಅವಕಾಶವಿಲ್ಲದಿದ್ದರೆ ಹೇಗೆ ಮಾತನಾಡುವುದು?

ಒಬ್ಬರು ಮಾನ್ಯ ಸದಸ್ಯರು : ನಮಗೂ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ನೀವು ಹೆಸರನ್ನು ಕಳುಹಿಸಿ.

(ಗೊಂದಲ)

ಶ್ರಿ ಜೆ.ಸಿ. ಮಾಧುಸ್ವಾಮಿ : ಶ್ರೀನಿವಾಸ್‌ರವರೇ, ಕುಳಿತುಕೊಳ್ಳಿ, ಅವರದ್ದು ಬೇರೆ, ನಿಮ್ಮದು ಬೇರೆ ಏನು? ಕುಳಿತುಕೊಳ್ಳುವುದಕ್ಕೆ ಹೇಳಿ ಸರ್.

ಉಪಾಧ್ಯಕ್ಷರು :– ಮಾನ್ಯ ಆಲಂಗೂರು ಶ್ರೀನಿವಾಸರವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೇಕಾರರ ಬಗ್ಗೆ ತಾವು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಆದರೆ ಒಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳವರ ದೃಷ್ಟಿಯಿಂದ ತಪ್ಪಿಸಿಕೊಂಡುಬಿಟ್ಟಿದೆ. ಕೆ.ಎಸ್.ಎಫ್.ಸಿ ಯಲ್ಲಿ ಸಾಲ ತೆಗೆದುಕೊಂಡು ಬಹಳ ಜನ ನೇಕಾರರು ಡಿಫಾಲ್ಟ್‌ರ್ಸ್ ಆಗಿದ್ದಾರೆ. ಕೆ.ಎಸ್.ಎಫ್.ಸಿ ಯಲ್ಲಿ ನೇಕಾರರು ಏನು ಸಾಲ ಮಾಡಿದ್ದಾರೆ ಅದನ್ನೂ ಕೂಡ ಒನ್ ಟೈಮ್ ಸೆಟಲ್‌ಮೆಂಟ್ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿ ಕೊಡಬೇಕು. ಮತ್ತೆ ನೇಕಾರರ ಸಮಸ್ಯೆಗಳನ್ನು ಬಗೆಹರಿಸುವಾಗ ತುಮಕೂರು ಜಿಲ್ಲೆಯಲ್ಲಿ ನೇಕಾರರು ಇಲ್ಲ ಎನ್ನುವ ಭಾವನೆ ಏಕೋ ನಿಮಗೆ ಬಂದಿದೆ. ಪ್ರಮುಖ ರೇಷ್ಮೆ ನೇಕಾರರು ಇದ್ದದ್ದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ತುಮಕೂರು, ಕೋಲಾರ, ದೊಡ್ಡಬಳ್ಳಾಪುರ ಈ ಭಾಗದಲ್ಲಿ. ಆ ಮೂರು ಜಿಲ್ಲೆಗಳು ನಿಮ್ಮ ಕಣ್ಣು ತಪ್ಪಿಸಿಕೊಂಡಿವೆ ಏಕೆ ಎಂಬುದು ನನಗೆ ಅರ್ಥವಾಗಿಲ್ಲ. ಈಗ ದೊಡ್ಡಬಳ್ಳಾಪುರ, ಕುಣಿಗಲ್, ಚಿಕ್ಕನಾಯಕನಹಳ್ಳಿ, ತಿಪಟೂರು, ಗುಬ್ಬಿ ಇವು ನಮ್ಮ ನೇಕಾರರು ಬದುಕಿರುವ ಸ್ಥಳಗಳು. ನೀವು ಯಾವುದೋ ಮೂರು ಜಿಲ್ಲೆಗಳ ನೇಕಾರರ ಸಮಸ್ಯೆಗೆ ನಾವು ಪ್ಯಾಕೇಜ್ ಕೊಡುತ್ತೇವೆಂದರೆ ಇನ್ನುಳಿದ ನೇಕಾರರಿಗೆ ನಾವು ಉತ್ತರ ಹೇಳಬೇಕಲ್ಲಾ? ದಯಮಾಡಿ ಇದನ್ನು ಯುನಿವರ್ಸಲ್ ಆಗಿ ಮಾಡಬೇಕು. ಇಡೀ ರಾಜ್ಯಕ್ಕೆ ಅನ್ವಯ ಮಾಡಬೇಕು ಅಂತ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಅರ್ಥ ವ್ಯವಸ್ಥೆಯಲ್ಲಿ ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬ್ಯಾಲೆನ್ಸ್ ಇದ್ದಾಗ ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಮುಖ್ಯವಾಗಿ ನಮ್ಮ 2005–06ನೇ ಎಕನಾಮಿಕಲ್ ಸರ್ವೇ ಪ್ರಕಾರ, State achieved a fair ate of rowth of the economy during the last years consistent with the continued developmental policies and programmes. 2005-06 is the 4th year of the 10th plan period, Althoug, short of Planning Commission's target of 10.1% annual growth rate, the state expected achievement of 8.7% growth during 2005-06 is still at large. ಹೀಗೆ 2005–06 ನಮ್ಮ ನಾಯಕರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ growth rate is 8.7% compared to 8.1% at the national level. ಅದೇ ಪ್ರಕಾರ ಇದರ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ

ಶ್ರೀ ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ 2004-05 ರಲ್ಲಿ growth rate is 10.2% ಹಾಗಾಗಿ ಇವತ್ತು ಒಂದು ಒಳ್ಳೆಯ ಸಮಯದಲ್ಲಿ ಹಣಕಾಸಿನ ಪ್ರಗತಿ ಚೆನ್ನಾಗಿದ್ದಾಗ ಎರಡೂವರೆ, ಮೂರು ಸಾವಿರ ಕೋಟಿ ರೂಪಾಯಿ ಟ್ರಜರಿಯಲ್ಲಿದ್ದಾಗ ಜೆಡಿಎಸ್-ಬಿಜೆಪಿ ಸರ್ಕಾರ ಬಂದಿದೆ. ಉಪ ಮುಖ್ಯಮಂತ್ರಿಗಳಾದ ನಮ್ಮ ಯಡಿಯೂರಪ್ಪನವರು ಇವತ್ತು ಹಣಕಾಸಿನ ಸಚಿವರಾಗಿ ಅಧಿಕಾರ ಮುಂಗಡಪತ್ರವನ್ನು ಮಂಡಿಸಿದ್ದಾರೆ. ಒಂದು ದೃಷ್ಟಿಯಿಂದ ಮಾನ್ಯ ಉಪ ಮುಖ್ಯಮಂತ್ರಿಗಳೇ, ತಾವು ಈ ಒಂದು ಒಳ್ಳೆಯ ಸಮಯದ ಲಾಭ ಪಡೆದುಕೊಂಡು ಮುಖ್ಯವಾಗಿ ತಾವು ನೋಡಬೇಕಾಗಿತ್ತು. ಏನೆಂದರೆ ಇವತ್ತು ನಮ್ಮ ಅಸ್ಸೆಟ್ ಕ್ರಿಯೇಶನ್‌ನಲ್ಲಿ ಯಾವುದೇ ಒಂದು ರಾಜ್ಯ ಪ್ರಗತಿಯಾಗಬೇಕಾದರೆ ಅಸ್ಸೆಟ್ಸ್ ಕ್ರಿಯೇಟ್ ಆಗಬೇಕು, ನಾಡಿನ ಸಂಪನ್ಮೂಲ ಕ್ರಿಯೇಟ್ ಆಗಬೇಕು. ಆ ಅಸ್ಸೆಟ್ ಕ್ರಿಯೇಶನ್‌ನಲ್ಲಿ ಇವತ್ತು ನಾವು ಮಾನ್ಯ ಸಿದ್ದರಾಮಯ್ಯನವರನ್ನು ಮೆಚ್ಚಬೇಕು. ಏಕೆಂದರೆ 2004-05 ಅಸ್ಸೆಟ್ ಕ್ರಿಯೇಟೆಡ್ ಇನ್ ಕಮರ್ಷಿಯಲ್ ಅಂಡರ್‌ಟೇಕಿಂಗ್ 2744.98 ಕೋಟಿ. ರೂ.ಗಳು ಕಂಪೇರ್ ಟು 1045 ಕೋಟಿ ರೂ. 2003-04 ರಲ್ಲಿ. ಅಂದರೆ 1100 ಕೋಟಿ ರೂಪಾಯಿ ಅಸ್ಸೆಟ್ ಕ್ರಿಯೇಶನ್ 2004-05 ರಲ್ಲಿ ಆಗಿದೆ. It is the highest in the History of Karnataka. 2005-06 ನಮ್ಮ ಮಾನ್ಯ ಧರ್ಮಸಿಂಗ್‌ರವರ ನಾಯಕತ್ವದಲ್ಲಿ 2800 ಕೋಟಿ ರೂ. ಅಸ್ಸೆಟ್ಸ್ ಕ್ರಿಯೇಶನ್ ಆಗಿದೆ. ಅದೇ ಪ್ರಕಾರ ಸರ್ಕಾರದ ಆಡಳಿತದಲ್ಲಿ 723 ಕೋಟಿ ರೂ. ಅಸ್ಸೆಟ್ ಕ್ರಿಯೇಶನ್ ಆಗಿದೆ; compare to Rs. 445 crores during 2003-04. ಮತ್ತು 2005-06 ರಲ್ಲಿ 915 ಕೋಟಿ ರೂ. ಆಗಿದೆ. ಹಾಗಾಗಿ ಒಂದು ಕಡೆ ಒಳ್ಳೆಯ ಅಸ್ಸೆಟ್ ಕ್ರಿಯೇಶನ್ ಆಗಿದೆ. ಮತ್ತೊಂದು ಕಡೆ ಟ್ಯಾಕ್ಸ್ ಕಲೆಕ್ಷನ್ ಹೆಚ್ಚಾಗಿದೆ. ಟ್ರಜರಿಯಲ್ಲಿ ಸಾಕಷ್ಟು ಹಣ ಇದೆ. ಇಂತಹ ಪರಿಸ್ಥಿತಿಯ ಒಳ್ಳೆಯ ಲಾಭ ಇವತ್ತು ಜೆಡಿಎಸ್-ಬಿಜೆಪಿ ಸರ್ಕಾರ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇತ್ತು. ಆದರೆ ಒಂದು ದೃಷ್ಟಿಯಿಂದ ಈ ಮುಂಗಡ ಪತ್ರ ಮೂಲಭೂತ ಸೌಕರ್ಯಗಳು, ಮಾನವ ಸಂಪನ್ಮೂಲಗಳನ್ನು ನಿರ್ಮಾಣ ಮಾಡಲಿಕ್ಕೆ ನಮ್ಮ ಗೌರವಾನ್ವಿತ ರಾಷ್ಟ್ರಾಧ್ಯಕ್ಷರು ಡಾ: ಅಬ್ದುಲ್ ಕಲಾಂರವರು ಏನು 11 ಅಂಶಗಳ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ ಅದನ್ನು ಪೀಸ್‌ಮೀಲ್ ಆಗಿ ನೀವು ಈ ಹರಕು ಬಟ್ಟೆ ಇದೆಯಲ್ಲಾ ಅದನ್ನು ಸ್ಟಿಚ್ ಮಾಡುವುದಕ್ಕೆ ಹೋಗಬೇಡಿ. ಕನ್‌ಸ್ಟ್ರಕ್ಟೀವ್ ಕಾಂಕ್ರೀಟ್ ಪ್ರೋಗ್ರಾಂ ಇವತ್ತು ನಿಮ್ಮ ಕಡೆ ಇಲ್ಲ. ಇವತ್ತು ನಾನು ನಿಮಗೆ ಕಾಶನ್ ಮಾಡುತ್ತೇನೆ, ಮುಂದಿನ ವಿಚಾರಗಳನ್ನು ಮಾತನಾಡುವುದಕ್ಕಿಂತ ಮುಂಚೆ. ಡೆವಲಪ್‌ಮೆಂಟ್ ಎಕ್ಸ್‌ಪೆಂಡೇಚರ್ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರು ಇದ್ದಾಗ during 2004-05, it is reduced to 54.73% from 60.70%. ಅದೇ ಪ್ರಕಾರ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೇಚರ್ ಅದು ಸಹ ಕಡಿಮೆಯಾಗಿದೆ. ಆದರೆ trend ಏನಿದೆ ಅಂದರೆ 2005-06 ರಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೇಚರ್ 60.32 ಮತ್ತು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೇಚರ್ 39.68. It is a very bad trend. ಹಾಗಾಗಿ ಮುಂದಿನ ವರ್ಷದಲ್ಲಿ ನೀವು ಯಾವ ಪ್ರಕಾರ ತಾವು ಇದರ ಮೇಲೆ ಹತೋಟಿ ತರುವುದಕ್ಕೆ ಸಾಧ್ಯತೆ ಇದರ ಬಗ್ಗೆ ತಾವು ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತು 'Mission for Karnataka

Prosperity' ಅಂತ ಮಾನ್ಯ ರಾಷ್ಟ್ರಾಧ್ಯಕ್ಷರು ನಮ್ಮ ಎರಡೂ ಸದನಗಳ ಮುಂದೆ ಭಾಷಣ ಮಾಡಿ ಏನು ಹೇಳಿದ್ದಾರೆ? with the past karnataka would always stand as a symbol in the hearts of people of a State, which can create great visions and realise them overcoming any hurdles they may come in their way. Karnataka will always to be always to be role model and would come out always with flying colours. ಅಂತ ಮಾನ್ಯ ಮುಖ್ಯಮಂತ್ರಿಗಳೇ ಇವತ್ತು ಕರ್ನಾಟಕ ಒಂದು ರೋಲ್ ಮಾಡೆಲ್ ಆಗಿ ಈ ದೇಶದಲ್ಲಿ ಕೆಲಸ ಮಾಡುತ್ತಿದೆ. ಹಾಗಾಗಿ ಆ ರೋಲ್ ಮಾಡೆಲ್ ಕನಸು ಸಾಕಾರವಾಗಬೇಕಾದರೆ ನಿಮ್ಮ ಕಾರ್ಯಕ್ರಮಗಳೂ ಸಹ ಆ ಪ್ರಕಾರ ಇರಬೇಕಾಗುತ್ತದೆ. ಇನ್ನು ಮುಖ್ಯವಾಗಿ ನಮ್ಮ ನ್ಯಾಷನಲ್ ಮಿಷನ್ ಏನು ಹೇಳುತ್ತದೆ? ಮನೆಗಳು, ವಸತಿ, ಆರೋಗ್ಯ, ಶಿಕ್ಷಣ ಮತ್ತು ಎರಡು ಹೊತ್ತು ಊಟ, ಇದರಿಂದ ಎಂಪ್ಲಾಯ್‌ಮೆಂಟ್ ಕ್ರಿಯೇಟ್ ಆಗಬೇಕು. ಯಾವುದೂ investment, it has to be linked with productivity. ನೀವು ಹಣವನ್ನು ಇನ್‌ವೆಸ್ಟ್ ಮಾಡಿದಾಗ ಆ ಹಣ ಪ್ರಾಡಕ್ಟಿವಿಟಿಗೆ ಲಿಂಕ್ ಆಗಿಲ್ಲವೆಂದರೆ that becomes a wasteful expenditure. ಹಾಗಾಗಿ ಅದು ಕೃಷಿ ಇರಬಹುದು, ಅಥವಾ ಕೈಗಾರಿಕೆಗಳು ಇರಬಹುದು, ಅದು ಸರ್ವಿಸ್ ಸೆಕ್ಟರ್ ಇರಬಹುದು. ಮ್ಯಾನುಫಾಕ್ಚರಿಂಗ್ ಸೆಕ್ಟರ್ ಇರಬಹುದು. ಅದರಲ್ಲಿ ಹೆಚ್ಚಿನ ವ್ಯಾಲ್ಯು ಅಡಿಶನ್ ಮಾಡುವುದಕ್ಕೆ ನೀವು ಪ್ರಯತ್ನ ಮಾಡಬಹುದು. ಯಾವಾಗ ಹೆಚ್ಚಿನ ವ್ಯಾಲ್ಯು ಅಡಿಶನ್ ಆಗುತ್ತದೆ ಆಗ ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಜನರ ಆರ್ಥಿಕ, ಸಾಮಾಜಿಕ ಶೈಕ್ಷಣಿಕ ಪರಿಸ್ಥಿತಿ ಸುಧಾರಿಸಿ ಒಂದು ರಾಷ್ಟ್ರ, ಒಂದು ರಾಜ್ಯ ಸಂಪನ್ನವಾಗುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನಮ್ಮ ಮಾನ್ಯ ರಾಷ್ಟ್ರಾಧ್ಯಕ್ಷರು ಹೇಳಿದ್ದಾರೆ. ನಮ್ಮ ಪರ್ ಕ್ಯಾಪಿಟಲ್ ಇನ್‌ಕಮ್ 26 ಸಾವಿರದಿಂದ 75 ಸಾವಿರಕ್ಕೆ ಹೋಗಬೇಕು. ಹಾಗೆಯೇ ಅವರು 11 ಅಂಶಗಳನ್ನು ಕೊಟ್ಟಿದ್ದಾರೆ. ಹಾಗಾದರೆ ಆ ದೃಷ್ಟಿಯಲ್ಲಿ ನಿಮ್ಮ ಪ್ರಯತ್ನ ಆಗಿದೆ ಏನು? ನನ್ನ ಅಭಿಪ್ರಾಯದಲ್ಲಿ ನಿಮ್ಮ ಪ್ರಯತ್ನ ಆ ದೃಷ್ಟಿಯಲ್ಲಿ ಆಗಿಲ್ಲ. ಮುಖ್ಯವಾಗಿ ನಿಮ್ಮ ಮುಂಗಡ ಪತ್ರದ ಪ್ರಕಾರ ಈ ಒಂದು ರೂಪಾಯಿ ಏನು ಸರ್ಕಾರಕ್ಕೆ ಆದಾಯ ಬರುತ್ತಿದೆ, ಹೇಗೆ ಬರುತ್ತಿದೆ. ಇವತ್ತು 2006–07ನೇ ಇಸವಿಯಲ್ಲಿ 53 ಪೈಸೆ ಸೇಲ್ಸ್ ಟ್ಯಾಕ್ಸ್ ಮುಖಾಂತರ ಬರುತ್ತಿದೆ. 2005–06 ರಲ್ಲಿ ಎಷ್ಟು ಇತ್ತು? 52 ಪೈಸೆ ಇತ್ತು. ಸೆಂಟ್ರಲ್ ಟ್ಯಾಕ್ಸ್ 2005–06 ರಲ್ಲಿ 10 ಪೈಸೆ ಇತ್ತು. ಈ ವರ್ಷ ನಿಮ್ಮ ಪ್ರೊಜೆಕ್ಷನ್ 11 ಪೈಸೆ ತೋರಿಸಿದ್ದೀರಿ. ಸ್ಟೇಟ್ ನಾನ್ ಟ್ಯಾಕ್ಸ್ ರೆವಿನ್ಯೂ ಕಳೆದ ವರ್ಷ 11 ಪೈಸೆ ಇತ್ತು. ಈ ವರ್ಷ 10 ಪೈಸೆ ಆಗಬೇಕು ಅಂತ ಹೇಳಿದ್ದೀರಿ. ಅದರ ನಂತರ ಗ್ರಾಂಟ್ ಫ್ರಂ ಸೆಂಟ್ರಲ್ ಗೌರ್ನಮೆಂಟ್ ಅನ್ನು ನೀವು ಮರೆಯಬಾರದು. ಕಳೆದ ವರ್ಷ ಒಂದು ರೂಪಾಯಿಯಲ್ಲಿ 8 ಪೈಸೆ ನಿಮಗೆ ಕೇಂದ್ರ ಸರ್ಕಾರದಿಂದ ಬಂದಿದೆ, ಈ ವರ್ಷ 11 ಪೈಸೆ ಬರುತ್ತಿದೆ, ಅದೂ ನಿಮ್ಮ ಫಿಗರ್ ಸರಿ ಇಲ್ಲವೆಂದು ನಾನು ತೋರಿಸಿಕೊಡುತ್ತೇನೆ. ಅದು ಹೆಚ್ಚಿದೆ. ನಿಮ್ಮ ಪ್ರಕಾರ ಕೇಂದ್ರ ಸರ್ಕಾರದಿಂದ ಬರುವುದು 11 ಪೈಸೆ ಕಳೆದ ವರ್ಷದ 8 ಪೈಸೆಗೆ ಹೋಲಿಕೆ ಮಾಡಿದರೆ, ಹಾಗಾದರೆ ಏನಿದೆ? ಬಜೆಟ್ ರೆವಿನ್ಯೂನಲ್ಲಿ ಸ್ಟೇಟಸ್ಕೋವಿದೆ, ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಬರುತ್ತಿದೆ ಎಂದು ತಾವು ಹೇಳುತ್ತಿದ್ದೀರಿ. ನಿಮ್ಮ

ಸೇಲ್ಸ್ ಟ್ಯಾಕ್ಸ್ ಆಗಲಿ, ಸೆಂಟ್ರಲ್ ರೆವಿನ್ಯೂ ಆಗಲಿ, ನಾನ್ ಟ್ಯಾಕ್ಸ್‌ನಲ್ಲಿ ಎಲ್ಲಿ ನಿಮ್ಮ ಕಡೆ ಪ್ರೋಗ್ರೆಸ್ ಇದೆ? ನಿಮ್ಮ ಮುಂಗಡ ಪತ್ರದಲ್ಲಿ ಆ ಪ್ರೋಗ್ರೆಸ್ ಇಲ್ಲ. ಇವತ್ತು ನಾನ್ ಟ್ಯಾಕ್ಸ್ ರೆವಿನ್ಯೂ ಫಾಲ್ ಆಗಿದೆ. 11–10 ಪರ್ಸೆಂಟ್, ಏಕೆ ಫಾಲ್ ಆಗಿದೆ. You have to explain this. ಬಾರೊಯಿಂಗ್ಸ್ ಕಡಿಮೆಯಾಗಿದೆ, ಸಂತೋಷ, it has come to 6%. ಅದಕ್ಕೂ ಕಾರಣ ತಾವೇ ಎಂದು ತಮ್ಮ ಮುಂಗಡ ಪತ್ರದಲ್ಲಿ ಹೇಳಿದ್ದೀರಿ. ಕಳೆದ ಮೂರ್‍ನಾಲ್ಕು ವರ್ಷದಲ್ಲಿ ಮಾನ್ಯ ಸಿದ್ದರಾಮಯ್ಯನವರು, ಎಸ್.ಎಂ. ಕೃಷ್ಣರವರು, ಫಿಸಿಕಲ್ ಡೆಫಾಸಿಟ್, ಫಿಸಿಕಲ್ ಡಿಸಿಪ್ಲಿನ್ ಏನು ತಂದರು, ಹಾಗಾಗಿ ಇವತ್ತು ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ, ಇವತ್ತು ಹೈಯರ್ ಕಾಸ್ಟ್‌ಡೆಟ್ ವಾಪಸ್ ಕೊಟ್ಟು ಡೆಟ್ ಸರ್ವಿಸಿಂಗ್ ಕಡಿಮೆಯಾಗಿ ನಿಮ್ಮ ಬಾರೋಯಿಂಗ್ಸ್ ಕಡಿಮೆಯಾಗಿದೆ. ಮುಖ್ಯವಾಗಿ ನಿಮ್ಮ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ 2005–06 ರಲ್ಲಿ ಕೇಂದ್ರ ಸರ್ಕಾರದಿಂದ ನಿಮಗೆ ಬರಬೇಕಾದ ಗ್ರಾಂಟ್ 2620.19 ಕೋಟಿ ರೂ. 2006–07 ರಲ್ಲಿ ನಿಮ್ಮ ಎಸ್ಟಿಮೇಟ್ ಪ್ರಕಾರ ಕೇಂದ್ರ ಸರ್ಕಾರದಿಂದ ಬರುವ ಗ್ರಾಂಟ್ 4643.96 ಕೋಟಿ ರೂ. ಅಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಎರಡು ಸಾವಿರ ಕೋಟಿ ರೂಪಾಯಿಗಳು ನಿಮಗೆ ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಬರುತ್ತಿದೆ. ಅದು ಇವತ್ತು ಇಲ್ಲಿ ರಿಫ್ಲೆಕ್ಟ್ ಆಗುತ್ತಿಲ್ಲ, Growth is 70%. Assistance from Government of India, ಕಳೆದ ವರ್ಷಕ್ಕಿಂತ ರಾಜ್ಯ ಸರ್ಕಾರಕ್ಕೆ ಶೇಕಡಾ 70 ರಷ್ಟು ಹೆಚ್ಚಾಗಿದೆ, ಆದರೆ ನಿಮ್ಮ ಫಿಗರ್ಸ್‌ನಲ್ಲಿ ಕೇವಲ 3 ಪೈಸೆ ಹೆಚ್ಚಾಗಿದೆ, ಹಾಗಾಗಿ ತಾವು ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗುತ್ತದೆ. ನೀವು ಒಂದು ರೂಪಾಯಿಗಳನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತೀರಿ. ಮಾನ್ಯ ರಾಷ್ಟ್ರಾಧ್ಯಕ್ಷರು ಒಂದು ದೃಷ್ಟಿಯಲ್ಲಿ ನಮಗೆಲ್ಲಾ ಮಾರ್ಗದರ್ಶನ ಮಾಡಿದ್ದಾರೆ ಮತ್ತು 11 ಪಾಯಿಂಟ್ ಮಿಷನ್‌ನನ್ನು ಮುಂದಿಟ್ಟಿದ್ದಾರೆ. ತಾವು ಆ ಪ್ರಕಾರ ಮಾಡಿದ್ದೀರೇನು? ಇಲ್ಲ. ನಿಮ್ಮ ಬಜೆಟ್ ಪ್ರಕಾರ ಹೇಳುತ್ತೇನೆ ಕೇಳಿ, ಇರಿಗೇಶನ್‌ಗೆ ಕಳೆದ ವರ್ಷ 1 ರೂಪಾಯಿಯಲ್ಲಿ ನಾವು 9 ಪೈಸೆ ಖರ್ಚು ಮಾಡಿದ್ದೇವೆ. ಈ ವರ್ಷ ತಾವು ಒಂದು ಪೈಸೆಯನ್ನೇ ಇಟ್ಟಿದ್ದೀರಿ. ರೂರಲ್ ಡೆವಲಪ್‌ಮೆಂಟ್‌ಗೆ 2005–06 ರಲ್ಲಿ 3 ಪೈಸೆ ಖರ್ಚು ಮಾಡಿದ್ದೇವೆ. ಈ ಸಾರಿ 2 ಪೈಸೆ ಇಡಲಾಗಿದೆ, ಅಗ್ರಿಕಲ್ಚರ್ ಸ್ಟ್ಯಾಗ್ನೆಂಟ್ ಇದೆ, ತಾವು ಇಲ್ಲಿ ಇದ್ದಾಗ ರೈತ ಪ್ರತಿನಿಧಿಯಾಗಿ ಸಾಲ ಮನ್ನಾ ಮಾಡಬೇಕು, ಸಾಲ ವಜಾ ಮಾಡಬೇಕು ಎಂದು ಹಲವಾರು ಹೋರಾಟಗಳನ್ನು ಮಾಡಿದಿರಿ, ಅದರ ಬಗ್ಗೆ ನಮಗೆ ಸಂತೋಷವಿದೆ, ಮೆಚ್ಚುತ್ತೇವೆ. ಆದರೆ ಇವತ್ತು ನೀವು ಅಲ್ಲಿಗೆ ಹೋಗಿದ ನಂತರ ಕೃಷಿ ಕ್ಷೇತ್ರ ಸ್ಟ್ಯಾಂಗ್ನೆಂಟ್ ಆಗಿದೆ. ಎಲ್ಲಿಯವರೆಗೆ ಕೈಗಾರಿಕೆ, ಕೃಷಿ ವ್ಯಾಪಾರ ಬೆಳೆಯುವುದಿಲ್ಲವೋ, ಇಲ್ಲೆ ಇನ್‌ವೆಸ್ಟ್‌ಮೆಂಟ್ ಬರುವುದಿಲ್ಲವೋ ಅಲ್ಲಿಯವರೆಗೆ ರಾಜ್ಯ ಪ್ರಗತಿಯಾಗುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದಕ್ಕೂ ಸಾಧ್ಯವಿಲ್ಲ. ನಂತರ ಸಮಾಜ ಕಲ್ಯಾಣಕ್ಕೆ ಕಳೆದ ಸಾರಿ 4 ಪೈಸೆ ಖರ್ಚು ಮಾಡಲಾಗಿದೆ. ಈ ಸಾರಿ 5 ಪೈಸೆ ಆರೋಗ್ಯಕ್ಕೆ ಸನ್ಮಾನ್ಯ ರಾಷ್ಟ್ರಾಧ್ಯಕ್ಷರು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಇದಕ್ಕೆ ಕಳೆದ ಸಾರಿ 4 ಪೈಸೆ ಖರ್ಚು ಮಾಡಿದ್ದರೆ, ಈ ವರ್ಷವೂ ಸಹ 4 ಪೈಸೆ ಖರ್ಚು ಮಾಡುತ್ತಿದ್ದಾರೆ, ಏನೂ ಹೆಚ್ಚಳ ಇಲ್ಲ.

ಹಾಗಾಗಿ ನಿಮ್ಮ ವೆಚ್ಚವೇನಿದೆ, ಇನ್‌ಫ್ಲೇಷನ್ ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡಾಗ, It is just stagnant. ಯಾವ ರೀತಿಯ ಸುಧಾರಣೆಯೂ ಇಲ್ಲ. ಹಾಗಾಗಿ ಇವತ್ತು ಇದೊಂದು ಬಹಳ ಆದರ್ಶವಾದ ಮುಂಗಡ ಪತ್ರವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲವು ಗುಡಿಗಳಿಗೆ ನೀವು ಕೊಟ್ಟಿರಬಹುದು, ಪತ್ರಿಕೆಗಳಲ್ಲಿ ಹೈಲೈಟ್ ಆಗಿರಬಹುದು, ಆದರೆ ಸ್ಕೆಲಿಟನ್ ಆಗಿ ಡೀಪ್ ಆಗಿ ನಿಮ್ಮ ಮುಂಗಡ ಪತ್ರವನ್ನು ಸಮೀಕ್ಷೆ ಮಾಡಿದಾಗ ಈ ಮುಂಗಡ ಪತ್ರ ರಾಜ್ಯದ ದೃಷ್ಟಿಯಿಂದ ಇಲ್ಲ, ಮತ್ತು ರಾಜ್ಯದ ಪ್ರಗತಿಯ ದೃಷ್ಟಿಯಿಂದ ಇಲ್ಲ. ಯಾವ ಸ್ಪೀಡ್‌ನಿಂದ ಕರ್ನಾಟಕ ಮುಂದು ಹೋಗಬೇಕೋ ಆ ಸ್ಪೀಡ್ ಅನ್ನು ನೀವು ಅಚೀವ್ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ನಿಮ್ಮ ಟ್ಯಾಕ್ಸ್‌ಗಳು ಯಾವ ಪ್ರಕಾರ ಬರುತ್ತಿವೆ? ನಿಮಗೆ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಕಳೆದ ಸಾರಿ 64.23 ರೆವಿನ್ಯೂ ಬಂದಿತು, ಈ ವರ್ಷ 62.97 ಕಡಿಮೆ ಪ್ರೊಜೆಕ್ಷನ್ ಮಾಡಿದಿರಿ. Mean average is 63.63 ಆ ಮೀನ್ ಅವರೇಜ್‌ಗಿಂತ ಮಾನ್ಯ ಮುಖ್ಯಮಂತ್ರಿಗಳೆ, ನಿಮ್ಮ ಕಮರ್ಷಿಯಲ್ ಟ್ಯಾಕ್ಸ್ ಪ್ರೊಜೆಕ್ಷನ್ ಇವೆ. ಸ್ಟೇಟ್ ಎಕ್ಸೈಸ್ ಕಳೆದ ಬಾರಿ 16.0 ಇತ್ತು, ಈ ಸಾರಿ 18.2 ಆಗಿದೆ. ಇದು ಮೀನ್ ಆವರೇಜ್‌ಗಿಂತ ಹೆಚ್ಚಿದೆ. ಅಂದರೆ 17.42 ಗಿಂತ ಸ್ಲೈಟ್ಲಿ ಹೆಚ್ಚಿದೆ. ಪುನಃ ಮೋಟಾರ್ ವೆಹಿಕಲ್ ಟ್ಯಾಕ್ಸ್ ನೋಡಿ. ತೆರಿಗೆ 2005–06 ರಲ್ಲಿ 5.98 ಆದಾಯ ಬಂದರೆ, ನಿಮ್ಮ 2006–07ರ ಪ್ರಕಾರ ಕೇವಲ 5.17 mean average is 6.35. There is a fall. Motor vehicle collection ಎಲ್ಲಿ? Projection ಎಲ್ಲಿ? ಅದೇ ಪ್ರಕಾರ ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್ ಅದೂ ಸ್ಟ್ಯಾಗ್ನೆಮಟ್ ಇದೆ, 2005–06 ಗಿಂತ 11.45 ಕಡಿಮೆ ಇದೆ. ಹಾಗಾಗಿ ಇದರ mean overage is 10.69 ಹಾಗಾಗಿಇದನ್ನು ನೋಡಿದರೆ ಏನು ಕಾಣಿಸಬಹುದು. ಅದು ನಿಮ್ಮ tax mobilization effort has gone in winds. 2005–06ನೇ ಸಾಲಿನಲ್ಲಿ ಮಾನ್ಯ ಧರ್ಮಸಿಂಗ್ ಸರ್ಕಾರವೇನು ಸಾಧನೆ ಮಾಡಿತೋ, ಅದರ ಆಧಾರದ ಮೇಲೆ ನಿಮ್ಮ ಪ್ರೊಜೆಕ್ಷನ್ ಹೆಚ್ಚಾಗಬೇಕಾಗಿತ್ತು. ಇವತ್ತು ಎಕಾನಮಿ ಬೂಮ್‌ನಲ್ಲಿದೆ, ಟ್ಯಾಕ್ಸ್ ಕಲೆಕ್ಷನ್ ಹೆಚ್ಚಾಗುತ್ತಿದೆ. ಆದರೆ ಈ ಪರಿಸ್ಥಿತಿಯಲ್ಲಿ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೆ ನಿಮಗೆ ಏತಕ್ಕೆ ಆಗುತ್ತಿಲ್ಲ? ಅದಕ್ಕೆ ಕಾರಣಗಳೇನೆಂಬುದನ್ನು ತಾವು ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಒಂದು ಮುಂಗಡ ಪತ್ರಕ್ಕೆ ದೂರದೃಷ್ಟಿಕೋನವಿರಬೇಕು, ನಾಳೆ ಏನಾಗುತ್ತದೆಂಬುದು ಮುಖ್ಯವಲ್ಲ, ಕರ್ನಾಟಕ ರಾಜ್ಯ ಬರುವ 10–15 ವರ್ಷಗಳಲ್ಲಿ ಸೂಪರ್ ಪವರ್ ಆಗಬೇಕು, ಅದು ಒಳ್ಳೆಯ ಸ್ಥಾನದಲ್ಲಿರಬೇಕು. ಆ ದೃಷ್ಟಿಯಿಂದ ಮಾನ್ಯ ಹಣಕಾಸಿನ ಸಚಿವರು, ರಾಜ್ಯ ಸರ್ಕಾರದ ವಿಷನ್ ಇಟ್ಟುಕೊಂಡು, ದೂರದೃಷ್ಟಿಕೋನ ಇಟ್ಟುಕೊಂಡು ಮುಂಗಡ ಪತ್ರವನ್ನು ಮಂಡಿಸಬೇಕಾಗಿದೆ, ಇವತ್ತೇನು ಆಗಿದೆ, ಟೋಟಲ್ ಶಾರ್ಟ್ ಸೈಟೆಡ್. ಎಷ್ಟು ಕಮಿಟಿಗಳು ಅನೌನ್ಸ್ ಮಾಡಿದ್ದಾರೆ, ಎಷ್ಟು ಅವಾರ್ಡ್ ಮಂಜೂರು ಮಾಡಿದ್ದಾರೆ, ಅದಕ್ಕೆ ಲೆಕ್ಕವಿಲ್ಲ. Budget is full of promises, committees and awards. No reform, no tax. ಟ್ಯಾಕ್ಸ್ ಇಲ್ಲ, ರಿಫಾರ್ಮು ಇಲ್ಲ, ಸ್ವರವೇ ಇಲ್ಲ, ಹಾಗಾಗಿ ಇವತ್ತು ರೈತರ ಬಗ್ಗೆ ಹೇಳಬೇಕಾದರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ, ಹೃದಯದಲ್ಲಿ ಸ್ಪಂದನೆ ಮಾಡಿ ಆ

ರೈತನಿಗೆ ಸಹಾಯ ಮಾಡಬೇಕೆಂಬ ಸದಿಚ್ಛೆ ಇದೆ ಎಂಬುದು ನನಗೆ ಗೊತ್ತಿದೆ. ಆ ಬಗ್ಗೆ ವಾದಕ್ಕೆ ನಾನು ಹೋಗುವುದಿಲ್ಲ. ಆದರೆ ತಾವು 4 ಪರ್ಸೆಂಟ್ ಇಂಟ್ರೆಸ್ಟ್ ಸ್ಕೀಂ ಮಾಡಿದ್ದೀರಲ್ಲಾ, ಈ 4 ಪರ್ಸೆಂಟ್ ಮಾಡಿದರೂ ನಿಮಗೆ ಲಾಭವಿದೆ, ಕೇಂದ್ರ ಸರ್ಕಾರ ತನ್ನ ಮುಂಗಡ ಪತ್ರದಲ್ಲಿ ರೈತರಿಗೆ 7 ಪರ್ಸೆಂಟ್‌ಗೆ ಸಾಲ ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಧರ್ಮಸಿಂಗ್ ಸರ್ಕಾರ 6 ಪರ್ಸೆಂಟ್ ಅನೌನ್ಸ್ ಮಾಡಿದಾಗ, ನಾವು ಐದೂವರೆ, 6 ಪರ್ಸೆಂಟ್ ಹಣ ಸಬ್ಸಿಡೈಸ್ ಮಾಡಬೇಕಾಗಿತ್ತು. ಆದರೆ ಇವತ್ತು ನೀವು ಸಬ್ಸಿಡೈಸ್ ಮಾಡುವುದು ಕೇವಲ 3 ಪರ್ಸೆಂಟ್, 7 ಪರ್ಸೆಂಟ್ ಕೇಂದ್ರ ಸರ್ಕಾರ ಕೊಡುತ್ತಿದೆ. ನಿಮ್ಮಿಂದ ರೈತರಿಗೆ ಸಹಾಯ ಕಡಿಮೆಯಾಗಿದೆ, ಇಲ್ಲಿ ಉಳಿತಾಯವಾಗಿದೆ. ಎಂದು ಹೇಳಬೇಕಾಗುತ್ತದೆ. ತಾವೇ ವಿರೋಧ ಪಕ್ಷದ ನಾಯಕರಾಗಿದ್ದಾಗ, ನಾವು ಈ ಸದನದಲ್ಲಿ ಒಂದು ರೆಸಲ್ಯೂಶನ್ ಮೂವ್ ಮಾಡಿ ಈ 6 ಪರ್ಸೆಂಟ್ ಸ್ಕೀಂ ಅನ್ನು ಕೇಂದ್ರ ಸರ್ಕಾರ ಕಮರ್ಷಿಯಲ್ ಬ್ಯಾಂಕ್‌ನಿಂದಲೂ ಮಾಡಬೇಕೆಂದು ಹೇಳಿದಿರಿ. ಇವತ್ತು ಮಾನ್ಯ ಚಿದಂಬರಂರವರು ಕೋ-ಆಪರೇಟಿವ್ ಇರಲಿ, ಆರ್‌ಆರ್‌ಬಿ ಇರಲಿ, ಕಮರ್ಷಿಯಲ್ ಇರಲಿ ಎಲ್ಲರಿಗೂ 7 ಪರ್ಸೆಂಟ್ ಇಂಟರೆಸ್ಟ್‌ನಲ್ಲೇ ಕೊಡಬೇಕೆಂದು ಮಾಡಿದ್ದಾರೆ. ತಾವು ಏಕೆ ಇದನ್ನೂ ಎಕ್ಸ್‌ಟೆಂಡ್ ಮಾಡುತ್ತಿಲ್ಲ? ರೈತರ ಬಗ್ಗೆ ನಿಮಗೆ ಬಹಳ ಪ್ರೀತಿ ಗೌರವವಿದ್ದರೆ, ತಾವೇನು ಅವತ್ತು ಇಲ್ಲಿ ಕಮರ್ಷಿಯಲ್ ಬ್ಯಾಂಕ್‌ಗೆ ಇದನ್ನು ವಿಸ್ತರಿಸಬೇಕೆಂದು ಹೇಳಿದಿರಿ, extend this scheme to Commercial Banks. ಇದಕ್ಕೆ ಏನೂ ಬಹಳ ಖರ್ಚು ಬರುವುದಿಲ್ಲ. ಇದರಿಂದ ಏನೂ ದೊಡ್ಡ ಭಾರ ಬರುವುದಿಲ್ಲ. ಟೋಟಲ್ ಲೋನ್ ಕರ್ನಾಟಕ ರಾಜ್ಯದಲ್ಲಿ ರೈತರು ಕೃಷಿಗೆ ತೆಗೆದುಕೊಳ್ಳುವ ಸಾಲ Nationalized Banks, RRB and Co-operative/Sectors ನಿಂದ 5 ಸಾವಿರ ಕೋಟಿ ರೂ. 3 ಪರ್ಸೆಂಟ್ ನಿಮ್ಮ ಜವಾಬ್ದಾರಿ ಅಂದರೆ 150 ಕೋಟಿ ರೂ. ಅಷ್ಟೇ ಕೊಡಿ. ಯಾಕೆ ಕೊಡುವುದಿಲ್ಲ? ಏನು ಸಮಸ್ಯೆ ಇದೆ? What is the problem? ರೈತರ ಬಗ್ಗೆ ನಿಮಗೆ ಚಿಂತನೆ ಇದ್ದರೆ ಎಲ್ಲಾ ರೈತರ ಬಗ್ಗೆಯೂ ಇರಬೇಕು. ಮತ್ತೆ ತಾವು ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ನಿಂತು ಆ ವಿಚಾರ ಪ್ರಸ್ತಾಪ ಮಾಡಿದ್ದಿರಿ. ನಿಮಗೆ ಅವಕಾಶ ಬಂತು, ಅದರ ಲಾಭ ನೀವು ರೈತರಿಗೆ ಮಾಡಿಕೊಡಲಿಕ್ಕೆ ಆಗಿಲ್ಲ. ಆದನಂತರ ಬಡ್ಡಿ, ದಂಡಬಡ್ಡಿ ಮನ್ನಾ ತಮಗೆ ಗೊತ್ತು. ಇವತ್ತು ಬಡ್ಡಿ, ದಂಡಬಡ್ಡಿ ರೈತರು ಮರುಪಾವತಿ ಮಾಡಿದರೆ ಅದು ಸೆಪ್ಟೆಂಬರ್ 2005ಕ್ಕೆ ಅಂತ್ಯವಾಯಿತು. ಅಲ್ಲಿಂದ ಈ ಟೈಮ್ ಎಕ್ಸ್‌ಟೆಂಡ್ ಆಗಿಲ್ಲ. ತಾವೀಗ ಮುಂಗಡ ಪತ್ರದಲ್ಲಿ ಏನು ಹೇಳಿದ್ದೀರಿ ಎಂದರೆ 30-4-2006 ರತನಕ ನಾನು ವಿಸ್ತರಿಸುತ್ತೇನೆ ಎಂದು ಸಂತೋಷ. ಮಾನ್ಯ ಉದಾಸಿಯವರೇ, ತಾವು ಬಹಳ ಗಲಾಟೆ ಮಾಡಿದಿರಿ ಇಲ್ಲಿ ಕುಳಿತು. ಈಗ ನೀವು ಉಪನಾಯಕರಾಗಿದ್ದೀರಿ. ಆಹಾರ ಸಚಿವರೇ, ನಾವು ಒಂದೊಂದು ವರ್ಷ ಕೊಟ್ಟಾಗ ಏನ್ರೀ, ಆದರೆ ಇವತ್ತು ನಿಮ್ಮ ನಾಯಕರು ಒಂದು ತಿಂಗಳು ಟೈಂ ಕೊಟ್ಟಿದ್ದಾರೆ ರೈತರಿಗೆ ಸಾಲ ಅಸಲು ಕೊಡಲಿಕ್ಕೆ ಸಾಧ್ಯವಾಗುತ್ತದೇನ್ರಿ ನೀವೆಲ್ಲ ಕೊಡಿ ಸಾಧ್ಯವಾಗುತ್ತದೆ ಅಂತ ಹೇಳಿದರೆ ನಾವೂ ಸಾಧ್ಯ ಅಂತೇವೆ. ಆದರೆ ನಮ್ಮ ದೃಷ್ಟಿಯಲ್ಲಿ ಯಾರು

ಫಸ್ಟ್ ಅಕ್ಟೋಬರ್‌ದಿಂದ ಹಣ ತುಂಬಿದ್ದಾರೆ ಅವರ ಹಣ ಬಡ್ಡಿ ದಂಡಬಡ್ಡಿ ಜೊತೆ ವಾಪಸ್ ಕೊಡಬೇಕಾಗುತ್ತದೆ. ಅವರಿಗೆ ಹೇಗೆ ಅನ್ಯಾಯ ಮಾಡುತ್ತೀರಿ ನೀವು? ಹಾಗೆ ಮಾಡುವುದಕ್ಕೆ ಬರುವುದಿಲ್ಲ ನಿಮಗೆ. ಹಾಗಾಗಿ ನೀವು ಒಂದು, ಟೈಂ ಎಕ್ಸ್‌ಟೆಂಡ್ ಮಾಡಬೇಕಾಗುತ್ತದೆ. ಎರಡನೆಯದು ಯಾರು ಫಸ್ಟ್ ಅಕ್ಟೋಬರ್‌ದಿಂದ ತುಂಬಿದ್ದಾರೆ ಅದರ ಮರುಪಾವತಿ ಮಾಡಲಿಲ್ಲ ಅಂದರೆ ನೀವು ವಚನಭ್ರಷ್ಟರಾಗುತ್ತೀರಿ, ರೈತರ ದ್ರೋಹಿ ಆಗುತ್ತೀರಿ. ಇದನ್ನು ನಿಮಗೆ ಹೇಳುವ ಅವಶ್ಯಕತೆ ನನಗೇನೂ ಇಲ್ಲ, ನಾನು ಸುಮ್ಮನೆ ಕೂರಬೇಕಾಗಿತ್ತು. ಆದರೆ ಮಾನ್ಯ ಯಡಿಯೂರಪ್ಪನವರಿಗೆ ರೈತರ ಮೇಲೆ ಬಹಳ ಪ್ರೀತಿ ಇದೆ. ಮಾನ್ಯ ಮುಖ್ಯಮಂತ್ರಿಗಳಿಗೂ ರೈತರ ಮೇಲೆ ಬಹಳ ಪ್ರೀತಿ ಇದೆ. ಹಾಗಾಗಿ ನಾವು ನಿಮ್ಮ ಗಮನಕ್ಕೆ ತಂದಿದ್ದೇವೆ. ಎರಡನೆಯದು, ನೇಕಾರರು ಮತ್ತು ಮೀನುಗಾರರಿಗೆ ಕೆಲವು ಒಳ್ಳೆಯ ಸ್ಕೀಂಗಳನ್ನು ತಂದಿರಿ, ಸಂತೋಷ. ಅವನ್ನು ಸರಿಯಾಗಿ ಅನುಷ್ಠಾನಕ್ಕೆ ತನ್ನಿ. ಆದರೆ ನಾವು ನೇಕಾರರಿಗೆ ಮತ್ತು ಮೀನುಗಾರರಿಗೆ ಅವರು ಅಸಲು ಪಾವತಿ ಮಾಡಿದರೆ ಬಡ್ಡಿ ದಂಡಬಡ್ಡಿ ವಿನಾಯ್ತಿ ಯೋಜನೆ ಮಾಡಿದ್ದವು. ಮಾನ್ಯ ಉದಾಸಿಯವರೇ ನಿಜಾನಾ? ಮಾನ್ಯ ಕಾರಜೋಳ್‌ರವರೇ ಮಾಡಿದ್ದೆವಲ್ಲಪ್ಪ? ರೈತರಿಗೆ ಮಾಡಿದಂತೆಯೇ ಇವರಿಗೂ ಯಾಕೆ ನಿಮ್ಮ ಬಜೆಟ್‌ನಲ್ಲಿಲ್ಲ? ಮೀನುಗಾರರ ಬಗ್ಗೆ ಇಲ್ಲ. ಹಾಗಾಗಿ ನೇಕಾರರು, ಮೀನುಗಾರರು ಇವತ್ತು ಡಿಫಾಲ್ಟರ್ಸ್ ಅನ್ನು ಆಗಿದ್ದಾರೆ ಅವರಿಗೂ ಸಹ ಇದೇ ವ್ಯವಸ್ಥೆ ನೀವು ಮುಂದುವರೆಸಬೇಕಾಗುತ್ತದೆ. ಇದನ್ನು ತಪ್ಪಿಸಲು ಆಗುವುದಿಲ್ಲ. ಹಾಗಾಗಿ ಮುಖ್ಯವಾಗಿ ಈ ಬಜೆಟ್ ರೈತರ ಪರವಾದ ಬಜೆಟ್ ಅಲ್ಲ. ಕೇಂದ್ರ ಸರ್ಕಾರದ ಕಾರ್ಯಕ್ರಮದಿಂದ 4 ಪರ್ಸೆಂಟ್ ಹೇಳಿರುವುದು ಹೈಲೈಟಾಗಿದೆ. ಇದರ ನಿಜವಾದ ಶ್ರೇಯಸ್ಸು ಮನಮೋಹನ್‌ಸಿಂಗ್ ಸರ್ಕಾರಕ್ಕೆ ಹೋಗಬೇಕಾಗಿದೆ. ಯುಪಿಎ ಅಧ್ಯಕ್ಷೆ ಶ್ರೀಮತಿ ಸೋನಿಯಾಗಾಂಧಿಯವರಿಗೆ ಮತ್ತು ಶ್ರೀ ಚಿದಂಬರಂಗೆ ಹೋಗಬೇಕಾಗಿದೆ. ನೀವು ಅದರ ಲಾಭ ಪಡೆದಿರಿ. ನಾವೂ ತೆಗೆದುಕೊಳ್ಳುತ್ತೇವೆ ನೀವೂ ತೆಗೆದುಕೊಳ್ಳಿ. ಅದನ್ನು ಪ್ರಾಮಾಣಿಕವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಕಡೆ ಒಪ್ಪಿಕೊಂಡಿದ್ದಾರೆ. ಭಾರತ ಸರ್ಕಾರದ 7 ಪರ್ಸೆಂಟ್ ಬಗ್ಗೆ. ಇನ್ನು ಮುಖ್ಯವಾಗಿ ಕೈಗಾರಿಕೆಗಳು. ಕೈಗಾರಿಕೆಗಳು ಬೆಳೆಯಬೇಕು. ಹಾಗೆಯೇ ಹೂಡಿಕೆಗಳು ಬರಬೇಕು. ಆದರೆ ಅದು ಹೇಗೆ ಬರಲಿಕ್ಕೆ ಸಾಧ್ಯ? ಇವತ್ತು ಮೂಲಭೂತ ಸೌಕರ್ಯಗಳ ಬಗ್ಗೆ ತಾವೇನು ವಿಚಾರ ಮಾಡಿದಿರಿ? ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಕೈಗಾರಿಕೆಗಳು ಕೇಂದ್ರೀಕೃತವಾಗಿವೆ ಎಂದು. ಕೈಗಾರಿಕೆಗಳ ಹಂಚಿಕೆಯಾಗಬೇಕು ಅಂತ ಅವರೇನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಉಪನಗರಗಳು ಆಗಬೇಕು, ಅದೂ ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ What is the concept of Satellite Town? ನೀವು ತಿಳಿದುಕೊಳ್ಳಬೇಕು. ಇದನ್ನು ಸುಮ್ಮನೆ ಮಾನ್ಯ ಗುರುಪಾದಪ್ಪರ ಔರಾದ್‌ನಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಹಳಿಯಾಳದಲ್ಲಿ ಮಾಡಲು ಆಗುವುದಿಲ್ಲ. ಉಪನಗರ ಎಂದರೇನು? ಇವತ್ತು ಬೆಂಗಳೂರು ಮೇಲೆ ಪ್ರೆಶರ್ ಬರುತ್ತಾ ಇದೆ. ಕುಡಿಯಲಿಕ್ಕೆ ನೀರಿಲ್ಲ, ವಿದ್ಯುತ್ ಸಮಸ್ಯೆ, ಟ್ರಾಫಿಕ್ ಸಮಸ್ಯೆ–ಹಾಗಾಗಿ ಅದನ್ನು ಕಡಿಮೆ ಮಾಡಲಿಕ್ಕೆ ಉಪನಗರಗಳು ತುಮಕೂರು ಕಡೆ ಕೋಲಾರದ

ಕಡೆ ಬರಬೇಕು. ರಾಮನಗರ ಮಾಡಬೇಡಿ ಅಂತ ನಾನೇನೂ ಹೇಳುವುದಿಲ್ಲ. ಆದರೆ ನನಗೆ ಆಶ್ಚರ್ಯವಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಬೇಜಾರು ಮಾಡಿಕೊಳ್ಳಬಾರದು. ನೀವು ಶಿಕಾರಿಪುರದಲ್ಲಿ ಮಾಡಿಕೊಳ್ಳಿ ನಮಗೆ ಸಂತೋಷವಿದೆ. ಆದರೆ ಶಿಕಾರಿಪುರದಲ್ಲಿ ಸ್ಯಾಟಲೈಟ್ ಟೌನ್ ಮಾಡಲಿಕ್ಕೆ ಆಗುವುದಿಲ್ಲ. ಹೇಗೆ ಮಾಡಲು ಸಾಧ್ಯ? Tell me. What is the concept of Satellite Town? ನಮ್ಮ ಅಧಿಕಾರಿಗಳೇನು ನಿಮಗೆ ಗೈಡ್ ಮಾಡಿದರೋ ಇಲ್ಲವೋ What is Satellite Town ಅಂತ ನನಗೆ ಗೊತ್ತಿಲ್ಲ. ಸ್ಯಾಟಲೈಟ್ ಟೌನ್ ಅಂದರೆ ಏನು ಅಂತ ಮೊದಲು ಗೊತ್ತಾಗಬೇಕಲ್ಲಾ. ಮೊದಲು ಉಪನಗರದ ವ್ಯಾಖ್ಯಾನ ಏನಂತ ತಿಳಿದುಕೊಳ್ಳಿ ತಿಳಿದು ಮಾಡಿದರೆ ಸರಿ.

ಶ್ರೀ ಕೆ.ಎಂ. ಶ್ರೀನಿವಾಸಗೌಡ : ಮಾನ್ಯ ಉಪಮುಖ್ಯಮಂತ್ರಿಗಳಿಗೆ ಸ್ಯಾಟ್‌ಲೈಟ್ ಟೌನ್ ಅಂದ್ರೆ ಮೇಲೆ ಸ್ಯಾಟಲೈಟ್ಸ್ ಇರುತ್ತವಲ್ಲಾ ಹಾಗೆ ಅಂದುಕೊಂಡು ಶಿಕಾರಿಪುರದ್ದು ಉದ್ದೇಶ ಇರಬೇಕು. ಬೆಂಗಳೂರು ಸ್ಯಾಟಲೈಟ್ ಟೌನ್ಸ್ ಮಾಡಬೇಕು ಅನ್ನುವ ಉದ್ದೇಶ ಇದ್ದಿದ್ದರೆ ರಾಮನಗರ ಮಾಡಬಾರದಾಗಿತ್ತು. ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಹೇಳುತ್ತಾರೆ. ರಾಮನಗರಕ್ಕೆ ಬೇಡಪ್ಪ, ಕೋಲಾರಕ್ಕೆ ಮಾಡಿಕೊಳ್ಳಿ ಅಂತ ಹೇಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಆದರೆ ಇವರ ತಲೆಯಲ್ಲಿ ಸ್ಯಾಟಲೈಟ್ ಅಂದರೆ ಮೇಲಿದೆಯಲ್ಲಾ, ಆ ಸ್ಯಾಟಲೈಟ್ ಏನಾದರೂ ಅಲ್ಲಿಗೇ ನೇರವಾಗಿ ಹೋಗಬಹುದಾ ಅಂತ.

ಶ್ರೀ ಎಲ್. ಧರ್ಮೇಗೌಡ: ಅಧ್ಯಕ್ಷರೇ, ಮಾನ್ಯ ಶ್ರೀನಿವಾಸಗೌಡರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ಹಿರಿಯರು, ಅನುಭವಿಗಳು ಒಳ್ಳೊಳ್ಳೆಯ ಮೇಧಾವಿಗಳು ಆ ಸಾಲಿನಲ್ಲಿರುವುದರಿಂದ ದಯಮಾಡಿ ತಾವು ಮೆಚ್ಚಬೇಕಾಗುತ್ತದೆ ಸ್ವಾಮಿ. ಗುಣಕ್ಕೆ ಮತ್ಸರವೇಕೆ? ಬರೀ ವಿರೋಧವನ್ನೇ ಮಾಡಬೇಕು ಅಂತ ಹೇಳುವುದು ಸೂಕ್ತವಲ್ಲ. ಸರ್ಕಾರಕ್ಕೆ ಒಳ್ಳೆಯ ಸಲಹೆ ಕೊಡಿ.

ಡಾ. ಎಂ. ಸಿ. ಸುಧಾಕರ ರೆಡ್ಡಿ: ಅಧ್ಯಕ್ಷರೇ, ಯಾಕೋ ಮಾನ್ಯ ಶ್ರೀನಿವಾಸಗೌಡರು ಎದ್ದುನಿಂತಾಗೆಲ್ಲಾ ಧರ್ಮೇಗೌಡರು ಎದ್ದುನಿಲ್ಲುತ್ತಾರೆ, ಅವರಿಬ್ಬರಲ್ಲಿ ಏನೋ ಇರಬೇಕು, ದಯವಿಟ್ಟು ಅದನ್ನು ಪತ್ತೆ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ: ಹಾಗಾಗಿ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಕೈಗಾರಿಕೆಗಳು ಬರಬಾರದು ಶಿಕಾರಿಪುರಕ್ಕೆ ಹೋಗಬೇಕು, ಜೇವರ್ಗಿಗೆ ಹೋಗಬೇಕು. ಅಂದರೆ ಹೇಗೆ ಹೋಗಲು ಸಾಧ್ಯ? ಸರ್ಕಾರ ಒಂದು ವಿಚಾರ ಮಾಡಬೇಕು. ನಾನು 10 ವರ್ಷ ಕೈಗಾರಿಕಾ ಮಂತ್ರಿಯಾಗಿ ಅನುಭವ ಪಡೆದಿದ್ದೇನೆ. No investor will go because the Chief Minister wants ಅವನಿಗೆ ಲಾಭವಾಗಬೇಕು. ಅಲ್ಲಿ ಅವನಿಗೆ ರಾಮೆಟಿರಿಯಲ್ಸ್ ಸಿಗಬೇಕು, ಆಗ ಹೋಗುತ್ತಾನೆ. ಮುಂಜಾನೆ ಹೋಗಿ ಸಂಜೆ ಅವನು ಬರಬೇಕು. ಅಲ್ಲಿ ಮೂಲಭೂತ ಸೌಕರ್ಯಗಳು ಇರಬೇಕು. ದೇಶಪಾಂಡೆ ಬೇಕು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಿಗೆ ಬೇಕು ಅಂತ ಶಿವಮೊಗ್ಗ, ಶಿಕಾರಿಪುರಕ್ಕೆ ಯಾರೂ ಹೋಗುವುದಿಲ್ಲ. ಇಲ್ಲಿ ಹಳಿಯಾಳದಲ್ಲಿ ನಾನೂ 10 ಇಂಡಸ್ಟ್ರಿಯನ್ನು

ಹಾಕುತ್ತಿದ್ದೆ. ಹಾಗಾಗಿ ಮುಖ್ಯ ಏನಿದೆ ಅಂದರೆ ನೀವು ಹಿಂದುಳಿದ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ನಿರ್ಮಾಣ ಮಾಡಲು ಪ್ರಯತ್ನ ಮಾಡಬೇಕಾಗಿತ್ತು. ಏನು ಪ್ರಯತ್ನ ಇದೆ ನಿಮ್ಮದು? ಮಾನ್ಯ ನಂಜುಂಡಪ್ಪ ವರದಿ ಪ್ರಕಾರ 20–25 ಇಂಡಸ್ಟ್ರಿ ಮಾಡುತ್ತೇವೆ ಅಂದಿದ್ದೀರಿ. ಮುಖ್ಯವಾಗಿ ಹೊಸ ಕೈಗಾರಿಕಾ ನೀತಿಯನ್ನು ತರಬೇಕು. ಇದು 2000ಕ್ಕೇ ಅಂತ್ಯವಾಗಿದೆ. ಅಟ್‌ಲೀಸ್ಟ್ ಈ ಬಜೆಟ್‌ನಲ್ಲಿ ನೀವು ಡೈರೆಕ್ಷನ್ ಕೊಡಬೇಕಾಗಿತ್ತು. Industrial Policy which we are bringing would attract large investments. Thrust will be on research, thrust will be on so many things, ಎಂದು ಹೇಳಬೇಕಾಗಿತ್ತು. ಇಷ್ಟು ದೊಡ್ಡ ಕೈಗಾರಿಕೆಗಳ ಬಗ್ಗೆ ಒಂದು ಲೈನ್ ಇದೆ ಕೈಗಾರಿಕಾ ನೀತಿ ತರುತ್ತೇವೆ ಅಂತ ಜಗತ್ತಿಗೇ ಗೊತ್ತಿದೆ, 2005–06ಕ್ಕೆ ಅದು ಮುಗಿಯುತ್ತದೆ. ಅದನ್ನು ಬಜೆಟ್‌ನಲ್ಲಿ ಯಾಕೆ ಹೇಳಬೇಕು? ಹೇಳಬೇಕಾದರೆ ಸ್ಪಷ್ಟ ಸ್ಪಷ್ಟೀಕರಣಗಳಿರಬೇಕಾಗಿತ್ತು. ಇವತ್ತು ಸೇಲ್ಸ್‌ಟ್ಯಾಕ್ಸ್ ಇನ್‌ಸೆಂಟೀವ್ಸ್ ಬಂದ್ ಆಗಿವೆ, ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳೇ, ಪಶ್ಚಿಮಬಂಗಾಳದಂತಹ ರಾಜ್ಯ ಇವತ್ತು ಕೈಗಾರಿಕೆಗೆ ಇನ್‌ಸೆಂಟೀವ್ಸ್ ಕೊಡುತ್ತಾ ಇದೆ. ಇದನ್ನು ತಾವು ಸ್ಟಡಿ ಮಾಡಬೇಕಾಗುತ್ತದೆ. ನಿಮ್ಮ ಹಣಕಾಸು ಇಲಾಖೆಯವರು ಕೊಡಬೇಡಿ ಅಂತ ಹೇಳುತ್ತಾರೆ ಅನ್ನುವುದು ನನಗೆ ಗೊತ್ತು. ಕೇಂದ್ರ ಸರ್ಕಾರದವರು ನಮಗೆ ಗ್ರಾಂಟ್ ಬಂದ್ ಮಾಡುತ್ತೇವೆ ಅನ್ನುತ್ತಾರೆ. ಅದು ಪದ್ಧತಿ ಇದೆ. ಮತ್ತು ಹಾಗೆ ಅವರು ಹೇಳಲೇಬೇಕು. ಹೇಳುವುದೆಲ್ಲಾ ಸರೀನೇ? But you should have the capacity to over rule them infrasdtructure ಕೊಡಿ. ಇವತ್ತು ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇಡೀ ಇಂಡಿಯಾದಲ್ಲೇ ಭೂಮಿ ಕಾಸ್ಟ್ಲಿಯಸ್ಟ್ ಕರ್ನಾಟಕದಲ್ಲಿ Water charges are highest in the World, and the power/charges are also highest ಯಾರು ಬರಬೇಕು ಕರ್ನಾಟಕಕ್ಕೆ? ವಿದ್ಯುಚ್ಛಕ್ತಿ ಸರಿಯಾಗಿ ಸಪ್ಲೈ ಇಲ್ಲ, ರೇಟು ಹೈ ಇದ, ಲ್ಯಾಂಡ್ ಕಾಸ್ಟ್ ಹೆಚ್ಚಿದೆ ಎಂದರೆ ಯಾರು ಬರುತ್ತಾರೆ? ಅವರು ಬರಬೇಕಾದರೆ, ಅವರನ್ನು ಅಟ್ರಾಕ್ಟ್ ಮಾಡಬೇಕಾದರೆ ಮೂಲಭೂತ ಸೌಕರ್ಯಗಳ ನಿರ್ಮಾಣವಾಗಬೇಕು. ಮತ್ತೊಂದು ಕಡೆ ಮಾನವ ಸಂಪನ್ಮೂಲ ನಿರ್ಮಾಣವಾಗಬೇಕು. ಹಿಂದುಳಿದ ಪ್ರದೇಶದಲ್ಲಿ ಬೇಕಾದ ಮೂಲಭೂತ ಸೌಕರ್ಯಗಳನ್ನು ತಾವು ನಿರ್ಮಾಣ ಮಾಡಿದಾಗ ಖಂಡಿತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹೂಡಿಕೆದಾರರು ಬರುತ್ತಾರೆ. ಕರ್ನಾಟಕದ ಮೇಲೆ ಜನರಿಗೆ ವಿಶ್ವಾಸ ಇದೆ.

ಕರ್ನಾಟಕ ಒಂದು ಒಳ್ಳೆಯ ರಾಜ್ಯ. ಇಲ್ಲಿ ಒಳ್ಳೆಯ ವಾತಾವರಣ ಇದೆ. ಇಲ್ಲಿಗೆ ನಾವು ಬರಬೇಕೆನ್ನುವ ಸದಿಚ್ಛೆ ಜನರಿಗೆ ಇದೆ. ಆದರೆ ನಾವು ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಆ ಪ್ರಕಾರ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಮುಖ್ಯವಾಗಿ ನೀವು ಹಲವಾರು ಐಟಿಐ ಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ, ಹಲವಾರು ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಮತ್ತು ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಸಂತೋಷ ಮಾಡಿ. ಇನ್ನು ಹೆಚ್ಚು ಮಾಡಿ. ಆದರೆ ಮಾಡಿದರೆ ಮುಂದೇನು? ಅವರು ಹೊರಗೆ ಬರುತ್ತಾರಲ್ಲ, ಅವರ ಪರಿಸ್ಥಿತಿಯೇನು? ಆ ರೀತಿ ಬಂದರೆ ಅವರನ್ನು ತೆಗೆದುಕೊಂಡು ಏನು ಮಾಡುತ್ತೀರಿ ಉದಾಸಿಯುವರೇ? They have to be productive assets ಅವರಿಗೆ ಒಳ್ಳೆಯ

ತರಬೇತಿಯನ್ನು ಕೊಡಬೇಕಾಗುತ್ತದೆ. 21 ನೇಯ ಶತಮಾನ ಇದು, ಸ್ಪರ್ಧೆಯ ಶತಮಾನ. ಇದು ಗುಣಮಟ್ಟದ ಶತಮಾನ. ಇಲ್ಲಿ ಚಾರಿಟೀಸ್ ಇಲ್ಲ. Struggle for existence. Survival of the fittest. ಹಾಗಾಗಿ ಆ ದೃಷ್ಟಿಯಿಂದ ನಾವು ಯುವಕರನ್ನು ಸಿದ್ಧಪಡಿಸಬೇಕಾಗಿದ್ದರೆ ಆ ತರಹದ ತರಬೇತಿಯನ್ನು ಕೊಡಬೇಕು. ಕೇವಲ ಡಿಗ್ರಿ ಕಾಲೇಜು ಪ್ರಾರಂಭ ಮಾಡುವುದಲ್ಲ. ಕ್ವಾಲಿಟಿ ಎಜುಕೇಷನ್ ಇರಬೇಕು, ತರಬೇತಿ ಇರಬೇಕು, ಮತ್ತು ಅಂತಹ ಆಧುನಿಕ ಕೈಗಾರಿಕೆಗಳು ಬರಬೇಕು. ಇವತ್ತು ಕೈಗಾರಿಕೆಗಳು ಬಂದಿಲ್ಲವೆಂದರೆ ಅವರು ಎಲ್ಲಿಗೆ ಹೋಗಬೇಕು? ಮಹಾರಾಷ್ಟ್ರಕ್ಕೆ ಕಳುಹಿಸೋಣವೇ? ಇಲ್ಲಾ ಆಂಧ್ರ ಪ್ರದೇಶಕ್ಕೆ ಕಳುಹಿಸೋಣವೇ? ಅದನ್ನು ನೀವು ನಿರ್ಣಯ ಮಾಡಬೇಕು. ಇವತ್ತು ಐಟಿ ಬಿಟಿ ಬಗ್ಗೆ ಬಹಳಷ್ಟು ವಾದವಿವಾದ ಬರುತ್ತಿವೆ. ಅದ್ಯಾಕೆ ಎಂದು ನಮಗೆ ಗೊತ್ತಿಲ್ಲ. ದಯಮಾಡಿ ನನ್ನನ್ನು ನಂಬಿ. ನಿಮ್ಮ ಪೂಜ್ಯ ತಂದೆಯವರ ಜೊತೆಯಲ್ಲಿಯೇ 1996ನೇ ಇಸವಿಯಲ್ಲಿ ದಾವೋಸ್, ಅಮೇರಿಕಾ, ಇಸ್ರೇಲ್‌ಗೆ ಹೋದಾಗ, ಅದರ ನಂತರ ಜೆ.ಹೆಚ್. ಪಟೇಲರ ಜೊತೆಗೆ ಹೋದಾಗ ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ಕರ್ನಾಟಕ ಎಲ್ಲಿದೆ ಎಂದು ಪ್ರೆಸೆಂಟೇಷನ್‌ನಲ್ಲಿ ಹೇಳಬೇಕಾಗಿತ್ತು. Karnataka is to south of India and Bangalore is the Capital City ಎಂದು ಹೇಳಬೇಕಾಗಿತ್ತು. I am talking of 1995-96 ಆದರೆ ಇವತ್ತು ಇಡೀ ವಿಶ್ವಕ್ಕೆ ಕರ್ನಾಟಕ ಮತ್ತು ಬೆಂಗಳೂರು ಪರಿಚಯವಾಗಿದೆ. ಏಕೆ ಆಗಿದೆ ಎಂದರೆ ಅದು ಐಟಿ ಬಿಟಿ ಯಿಂದ ಆಗಿದೆ. ಆ ಬ್ರಾಂಡ್ ಭಾರತದೇಶಕ್ಕೆ ಅಲ್ಲದೆ ಮತ್ತೊಂದು ಯಾವ ಬ್ರ್ಯಾಂಡೂ ಇಲ್ಲ. This is the only brand you are having. ಇದನ್ನು ನೀವು ಮರೆಯಬಾರದು. ರೂರಲ್ ಡೆವಲಪ್‌ಮೆಂಟ್‌ಗೆ ಮತ್ತು ಐಟಿ ಬಿಟಿ ಗ್ರೋಥ್‌ಗೆ ಏನು ಸಂಬಂಧ ಇದೆ? 1997ನೇ ಇಸವಿಯ ತನಕ ಮಾಹಿತಿ ತಂತ್ರಜ್ಞಾನ ಕ್ಷೇತ್ರ ತನ್ನ ಶಕ್ತಿಯ ಮೇಲೆ ಬೆಳೆದಿದೆ. ರಾಜ್ಯಸರ್ಕಾರದಿಂದ ಯಾವ ಚಾರಿಟಿಯನ್ನು ಅವರಿಗೆ ಕೊಟ್ಟಿಲ್ಲ. ಅದರಿಂದ ಕೆಲವು ಸಹಾಯಗಳು ಆಗಿರಬಹುದು. ಹೊಸ ಐಟಿ:ಪಾಲಿಸಿಯನ್ನು 1997 ರಲ್ಲಿ ತಂದೆವು. That is O.K. ಆದರೆ ಇವತ್ತು ನಾವು ವಿಚಾರ ಮಾಡಬೇಕು. ಐಟಿ ಬಿಟಿ ಗೆ ನಾವು ಸಹಾಯ ಮಾಡಿದರೆ ಗ್ರಾಮಾಂತರ ಪ್ರದೇಶದ ಜನರು ನಮ್ಮ ವಿರುದ್ಧವಾಗುತ್ತಾರೆ ಎಂದರೆ It is all nonsense. ಮಾನ್ಯ ಉಪ ಮುಖ್ಯಮಂತ್ರಿಗಳೇ, ಇದು ತಮ್ಮ ಗಮನಕ್ಕೆ ಬಂದಿರಬಹುದು. ಐಟಿ ಬಿಟಿ ಯಿಂದ ಎಕ್ಸ್‌ಪೋರ್ಟ್ ಆಗುತ್ತದೆ. ಮೂರು ಲಕ್ಷ ಜನರಿಗೆ ಉದ್ಯೋಗಾವಕಾಶ ಆಗಿದೆ. ಈ 37 ಸಾವಿರದಲ್ಲಿ 40% is waste component. ಹದಿನೇಳು ಸಾವಿರ ಕೋಟಿ ರೂಪಾಯಿಗಳನ್ನು ಬೆಂಗಳೂರಿನಲ್ಲಿ ಕೆಲಸ ಮಾಡುವ ಐಟಿ ಪ್ರೊಫೆಶನಲ್‌ಗಳು ಸಂಬಳವನ್ನು ತೆಗೆದುಕೊಳ್ಳುತ್ತಾರೆ. ಅವರಿಗೆ ಸಾಲವನ್ನು ತೆಗೆದುಕೊಳ್ಳುವ ಶಕ್ತಿ 60 ಸಾವಿರ ಕೋಟಿ ರೂ. ಇದೆ. ಇವತ್ತು ನಿಮಗೆ ಟ್ಯಾಕ್ಸ್ ಹಣ ಏನು ಬರುತ್ತಿದೆಯಲ್ಲಾ, ನಿಮ್ಮ ಟ್ರೆಜರಿಯಲ್ಲಿ ಹಣ ಬರುತ್ತಿದೆಯಲ್ಲಾ, ಅದು ಇನ್‌ಕಂ ಟ್ಯಾಕ್ಸ್‌ನಿಂದ 80 ಪರ್‌ಸೆಂಟ್ ಬರುತ್ತಿದೆ. ಅದು ಎಲ್ಲಿಂದ ಬರುತ್ತಿದೆ? ಮನೆಗಳು ಬರುತ್ತಿವೆ. ಅವರು ಫ್ಲಾಟ್‌ಗಳನ್ನು ಖರೀದಿ ಮಾಡುತ್ತಿದ್ದಾರೆ, ಅವರು ವಾಹನಗಳನ್ನು ಖರೀದಿ ಮಾಡುತ್ತಿದ್ದಾರೆ. ಗ್ರೋಸರಿ ಅಂಗಡಿಗೆ ಹೋಗುತ್ತಿದ್ದಾರೆ, ಟೆಕ್ಸ್‌ಟೈಲ್ ಖರೀದಿ ಮಾಡುತ್ತಿದ್ದಾರೆ. ಹಾಗಾಗಿ ಇವತ್ತು ನಿಮ್ಮ ಎಕಾನಮಿಯಲ್ಲಿ buoyancy ಬಂದಿದೆ. Can

you forget? ನೀವು ನೆಗ್ಲೆಕ್ಟ್ ಆಗಿ ಐಟಿ ಬಿಟಿ ಗಳನ್ನು ಬಂದ್ ಮಾಡಿ 'ಹೋಗಿ' ಎಂದರೆ ಅವರು ಹೋಗುತ್ತಾರೆ. ಇವತ್ತು ಮ್ಯಾನ್ಯುಫ್ಯಾಕ್ಚರಿಂಗ್ ಇಂಡಸ್ಟ್ರಿಗಳು ಎಷ್ಟು ಬಂದಿದೆ ಹೇಳಿ? ಟೊಯೆಟಾ, ವೊಲ್ವಾ ಕಂಪನಿ ತರಹ ಎಷ್ಟು ಬಂದಿವೆ ಹೇಳಿ. You tell me. ಇಂಜಿನಿಯರಿಂಗ್ ಇಂಡಸ್ಟ್ರಿ ಯಾವುದಾದರೂ ಹೇಳಿ. Give me the names. ಹಾಗಾಗಿ ಇವತ್ತು ಒಂದು ಕ್ಷೇತ್ರ ಬೆಳೆಯುವಾಗ ಅದರಿಂದ ಇನ್‌ಡೈರೆಕ್ಟ್‌ಲಿ ನಿಮಗೆ ಸಾವಿರಾರು ಕೋಟಿ ರೂ. ಆದಾಯ ಬರುವಾಗ, ಇನ್ನೂ ಸಾಕಷ್ಟು ಜನರಿಗೆ ಉದ್ಯೋಗಾವಕಾಶ ಇರುವಾಗ ಆ ಕ್ಷೇತ್ರದ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಿಲ್ಲವೆಂದು ನಾನು ಭಾವಿಸುತ್ತೇನೆ, In the interest of the State and also the Cuntry. ಹಾಗಾಗಿ ನೀವೇನೂ ಅವರಿಗೆ ಹೆಚ್ಚು ಉತ್ತೇಜನವನ್ನು ಕೊಡುವುದಕ್ಕೆ ಹೋಗಬೇಡಿ. ಅವರಿಗೆ ನೀವು ಕೊಡಿ ಎಂದು ನಾನೇನೂ ಹೇಳುತ್ತಿಲ್ಲ. ಅದು ಅವರಷ್ಟಕ್ಕೇ ಅವರು ಕೆಲಸವನ್ನು ಮಾಡುತ್ತಿದ್ದಾರೆ. ಹಾಗೆ ಕೆಲಸ ಮಾಡುವುದಕ್ಕೆ ಅನುಕೂಲವನ್ನು ಮಾಡಿಕೊಡಿ. ಇವತ್ತು ಹೊಸೂರಿಗೆ ಬರುವುದಕ್ಕೆ, ಹೋಗುವುದಕ್ಕೆ ತೊಂದರೆ ಇದೆ ಎಂದು ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ, ಮಾನ್ಯ ಯಡಿಯೂರಪ್ಪನವರಿಗೂ ಗೊತ್ತಿದೆ. ಹಾಗಾಗಿ ಅವರು ರಸ್ತೆ ಮಾಡಿ ಎಂದು ಹೇಳಿದರೆ ಬೇಜಾರು ಏಕೆ ಮಾಡಿಕೊಳ್ಳಬೇಕು? ಸಿಟ್ಟು ಏಕೆ ಆಗಬೇಕು? ಹಾಗಾಗಿ ಇವತ್ತು ಆ ವಿಚಾರದಲ್ಲಿ ಸರ್ಕಾರ ವಿಚಾರವನ್ನು ಮಾಡಬೇಕಾಗುತ್ತದೆ. ಮತ್ತು ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳೇ, ನನಗೆ ಆಶ್ಚರ್ಯವಾಯಿತು. ಪಾಯಿಂಟ್ 63 ರಲ್ಲಿ ನಮ್ಮ ವಿಶ್ವೇಶ್ವರಯ್ಯ ಏಕೆ ಸುಮ್ಮನೆ ಕೂತರು? ಅದೆಲ್ಲಾ ನಮಗೆ ಗೊತ್ತಿಲ್ಲ, ಮಲೆನಾಡಿನವರಿಗೆ ಗೊತ್ತು. ತಾವು ಹೇಳಿದಿರಿ. ಮಾನ್ಯ ಉಪಮುಖ್ಯಮಂತ್ರಿಗಳೇ, ಮಾನ್ಯ ಮುಖ್ಯಮಂತ್ರಿಗಳೇ, ಎರಡು ಹೆಕ್ಟೇರ್ ತನಕ ರೆವಿನ್ಯೂ ಲ್ಯಾಂಡ್ಸ್ ರೆಗ್ಯುಲರೈಜ್ ಮಾಡುತ್ತೇವೆಂದು ಹೇಳಿದ್ದೀರಿ. ಮಾಡಿ, ಸಂತೋಷ. ಈಗ ಅಕ್ರಮ ಸಕ್ರಮದಲ್ಲಿ ರೆಗ್ಯುಲರೈಜ್ ಮಾಡುತ್ತಿದ್ದೇವೆ, ಇನ್ನೂ ಮಾಡಿ. ಆದರೆ ಫಾರೆಸ್ಟ್ ಲ್ಯಾಂಡನ್ನು ಮಾಡುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. 30–40 ವರ್ಷದಿಂದ ಇವತ್ತು ಆ ಬಡಜನರು ಜಮೀನನ್ನು ಮಾಡುತ್ತಿದ್ದಾರೆ. ರಾಜ್ಯ ಸರ್ಕಾರದಿಂದ ಈಗಲ್ಲ, 1985–86ರಿಂದ ಆಜ್ಞೆ ಮಾಡುತ್ತಾ ಬಂದಿದ್ದೇವೆ. 1996ನೇ ಇಸವಿಯಲ್ಲಿ ಆರ್ಡರನ್ನು ಮಾಡಿದ್ದೇವೆ ರೆಗ್ಯುಲರೈಜ್‌ನ್ನು ಮಾಡಬೇಕೆಂದು. ಕೆಲವು ರೆಗ್ಯುಲರೈಜ್ ಆಗಿವೆ. ಆದರೆ ಕಮಿಟಿಗಳು ಹಾಗೆಯೇ ನಿಂತಿವೆ. ನೀವು ಇವತ್ತು ಅರಣ್ಯ ಭೂಮಿಯನ್ನು ರೆಗ್ಯುಲರೈಜ್ ಮಾಡುವುದಿಲ್ಲವೆಂದು ಹೇಳಿದರೆ ಬಹಳ ದೊಡ್ಡ ದ್ರೋಹ, ಅನ್ಯಾಯ ಆ ಬಡ ಜನರಿಗೆ ಮಾಡಿದಂತಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ದೇವೇಗೌಡರು ಪಾರ್ಲಿಮೆಂಟ್‌ನಲ್ಲಿ ಹೋರಾಟವನ್ನು ಮಾಡಿ ಸಾವಿರ ಎಕರೆ ಅರಣ್ಯ ಭೂಮಿಯಲ್ಲಿ ಏನು ಸಾಗುವಳಿ ಮಾಡುತ್ತಿದ್ದರು, ಅದನ್ನು ಕನ್‌ಫರ್ಮ್ ಮಾಡತಕ್ಕದ್ದಕ್ಕೆ ತೀರ್ಮಾನವನ್ನು ಅಲ್ಲೇನು ಮಾಡಿಸಿದರು, ಇಲ್ಲಿ ಬಂದಿರುವ ಹಿಂದಿನ ಸರ್ಕಾರಗಳು ಇದುವರೆಗೂ ಯಾರೂ ಕೂಡ ಅದರ ಬಗ್ಗೆ ಸರಿಯಾದ ರೀತಿ ಕ್ರಮವನ್ನು ತೆಗೆದುಕೊಂಡಿಲ್ಲ. ಇದು ನಾವು ಮಾಡಿರತಕ್ಕ ತಪ್ಪುಗಳಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಆ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದೆ. ತಮಗೆ ಬಹುತೇಕ ಅಷ್ಟು ರಾಜಕೀಯದಲ್ಲಿ ಅದರ ಪರಿಚಯ ಇಲ್ಲ. ನಿಜ ಹೆಚ್ಚಿನ ಆಸಕ್ತಿಯನ್ನು ಅವರು ತೆಗೆದುಕೊಂಡು ರೆಗ್ಯುಲರೈಜ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿ 24–48 ಗಂಟೆಗಳಲ್ಲಿ ಪ್ರಪೋಸಲ್ಸ್ ತಂದು ದೆಹಲಿಗೆ ಕಳುಹಿಸಿದರು. ಎಲ್ಲಾ ಪ್ರೊಪೋಸಲ್ಸ್ ಮಂಜೂರಾಗಿ ಬಂದಿಲ್ಲ. ಕೆಲವು ಮಾತ್ರ ಬಂದವು. ಕೆಲವು ಬಂದಿದ್ದು ಈಗ ಡಿ.ಸಿ. ಕಡೆಯಿಂದ ಆಜ್ಞೆ ಆಗಿವೆ. ಆದರೆ ಕರ್ನಾಟಕದಲ್ಲಿ ವಿಧಾನಸೌಧ ಇದೆಯಲ್ಲಾ, ಅಲ್ಲಿ ಅದಕ್ಕೆ ಅಡೆತಡೆ ಹೇಗೆ ಆಗಿದೆ ಎಂದರೆ ಅವರ ಹೆಸರು ಹಾಕಬೇಕಾದರೆ ಫಾರೆಸ್ಟ್ ಎನ್ನುವ ಹೆಸರನ್ನು ಕಡಿಮೆ ಮಾಡಬೇಕು. ಅದರ ಮೇಲೆ ಒಂದು ವರ್ಷದಿಂದಲೂ ಚರ್ಚೆ ನಡೆಯುತ್ತಿದೆ. ನಾನೇ ಒಂದಿಷ್ಟು ಫಾಲೋ ಮಾಡುತ್ತಿದ್ದೇನೆ. ಹಾಗಾಗಿ ಆ ಪ್ರಯತ್ನ ಮಾನ್ಯ ಧರ್ಮಸಿಂಗ್ ಸರ್ಕಾರದಲ್ಲೂ ಆಗಿದೆ. ಆದರೆ ಬ್ಯುರೋಕ್ರಸಿಯಿಂದ ಅದಕ್ಕೆ ಸಮಸ್ಯೆ ಆಗಿದೆ. ಹಾಗಾಗಿ ತಾವು ಇದರ ಬಗ್ಗೆ ಒಂದು ಸ್ಪೆಷಲ್ ಮೀಟಿಂಗನ್ನು ಮಾಡಿ ಆ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ಹಾಗೂ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾವ ಬಡವರು ಅಲ್ಲಿ ಅತಿಕ್ರಮಣ ಮಾಡಿದ್ದಾರೆ, ಸರ್ಕಾರದ ಆಜ್ಞೆಗಳೇನು ಇವೆ, ಅವುಗಳನ್ನು ನಾವು ರೆಗ್ಯುಲರೈಜ್ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ದ್ರೋಹ ನಮ್ಮ ಬಡಜನರಿಗೆ ಆಗುತ್ತದೆ. ಇವತ್ತು ನಿಮ್ಮ ಬಜೆಟ್‌ನಲ್ಲಿ ಕಾಮನ್ ಮಿನಿಮಮ್ ಪ್ರೊಗ್ರಾಂ ಬಗ್ಗೆ ನೀವೇನು ಹೇಳಿದ್ದೀರಿ? ಗ್ಲೋಬಲ್ ಸಿಟಿ ಬೆಂಗಳೂರನ್ನು ಮಾಡುತ್ತೇವೆಂದು ಹೇಳೀದ್ದೀರಿ. Bangalore will be global city. ಆದರೆ ಏನೂ ಅದರ ಬಗ್ಗೆ ಉಲ್ಲೇಖ ಇಲ್ಲ. ಏನೂ ಉಲ್ಲೇಖ ಇಲ್ಲ. ನಂತರ ಐಟಿ ಬಿಟಿ ಸುಪ್ರಿಮೆಸಿಮೆಂಟೇನ್ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ಚಕಾರ ಮಾತು ಕೂಡ ಇಲ್ಲ. ಒಂದು ಶಬ್ದ ಐಟಿ ಬಿಟಿ ಬಗ್ಗೆ ನಿಮ್ಮ ಬಜೆಟ್‌ನಲ್ಲಿ ಇಲ್ಲ. ಅದು ನಿಮ್ಮ ಸಿಎಂಪಿ ಯಲ್ಲಿ ಇದೆ, ಸುಪ್ರಮೆಸಿಯನ್ನು ಎಸ್ಟಾಬ್ಲಿಷ್ ಮಾಡುತ್ತೇವೆಂದು. ಅದರ ನಂತರ Mysore, Hassan, Hubli, Mangalore, Gulbarga will be alternate IT/Cities. ಬಜೆಟ್‌ನಲ್ಲಿ ಏನೂ ಇಲ್ಲ. ಅದನ್ನು ನೀವು ಹೇಳಬೇಕಾಗಿತ್ತಲ್ಲಾ. ಒಪ್ಪಿಕೊಳ್ಳುತ್ತೇನೆ. ಎಲ್ಲಾ ಸ್ಕೀಮುಗಳನ್ನು ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲ. ಆದರೆ ನೀವು ಸಿಎಂಪಿ ಯಲ್ಲಿ ಹೇಳಿದ ನಂತರ ಅಟ್‌ಲೀಸ್ಟ್ ಒಂದು ಯಾರ್ಡ್‌ಸ್ಟಿಕ್‌ನ್ನು ಇನ್‌ಕ್ಲೂಡ್ ಮಾಡಬೇಕಾಗಿತ್ತು. ಒಂದು ಸಿಟಿ ಬಗ್ಗೆಯೂ ನಿಮ್ಮ ಕಾಮನ್ ಮಿನಿಮಮ್ ಪ್ರೊಗ್ರಾಮ್‌ನಲ್ಲಿ ಇಲ್ಲ. ಹಾಗಾಗಿ Tech Parks in all the districts. ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ, ಸಿಎಂಪಿ ನಲ್ಲಿ ಮರೆತಿರೇನು? ಬಜೆಟ್ ಮಾಡುವಾಗ ಮೋಸ್ಟ್‌ಲಿ ಮಾನ್ಯ ಮುಖ್ಯಮಂತ್ರಿಗಳು ಸಿಎಂಪಿ ಯನ್ನು ನೋಡಿಲ್ಲವೆಂದು ಕಾಣಿಸುತ್ತದೆ. Tech parks in every district. ಒಂದು District ನಲ್ಲಿ ಕೂಡ tech park ಬಗ್ಗೆ ಮೆನ್ಷನ್ ಇಲ್ಲ. ಎಲ್ಲಾ ಸಿಎಂಪಿ ಹೇಳಿದ್ದು ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ಕ್ರಮೇಣ ಆಗುತ್ತದೆ. ನಿಮಗೆ 40 ತಿಂಗಳ ಅವಕಾಶ ಇದೆ. ನೀವು ಮಾಡಿ. ಆದರೆ ಕೆಲವು ವಿಚಾರ ಬರಬೇಕಾಗಿತ್ತಲ್ಲಾ ಅದು ಏನೂ ಇಲ್ಲ. ಹಾಗಾಗಿ ಇದರ ಬಗ್ಗೆ ಸ್ವಲ್ಪ ಚಿಂತನೆಯನ್ನು ಮಾಡಬೇಕು. ಮೋಸ್ಟ್‌ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು

ಮುಂಗಡ ಪತ್ರವನ್ನು ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ತೆಗೆದುಕೊಂಡಿಲ್ಲವೆಂದು ಕಾಣಿಸುತ್ತದೆ. ಎಲ್ಲ ಅಧಿಕಾರಿಗಳಿಗೇ ಬಿಟ್ಟು, ಅಧಿಕಾರಿಗಳು ಇದನ್ನು ಮಾಡಿದ್ದಾರೆ. ನಿಮ್ಮ ಸಿಎಂಪಿ ಇದರಲ್ಲಿ ಏನೂ ಇಲ್ಲ. ಏಕೆ ಇಲ್ಲ ಎಂದು ನೀವು ನೋಡಿಕೊಳ್ಳಿ, ನನಗೆ ಗೊತ್ತಿಲ್ಲ. ಹಾಗಾಗಿ ಇವತ್ತು ತಾವು two tier, three tier ಸಿಟೀಸ್ ಬಗ್ಗೆ ಹೇಳಿದ್ದೀರಿ. ಅದರ ಬಗ್ಗೆ ಏನೂ ಮೆನ್ಷನ್ ಇಲ್ಲ. ಆದರೆ ಮಂಗಳೂರು ಬಗ್ಗೆ ಹೇಳಿದಿರಿ. ಸಂತೋಷ ಮಾಡಿ. ಮಂಗಳೂರು ಬೆಳಗಾಂ, ಧಾರವಾಡ, ಹುಬ್ಬಳ್ಳಿ ಅದರ ಬಗ್ಗೆ ಯಾವ ಮೆನ್ಷನ್ ನಿಮ್ಮ ಬಜೆಟ್‌ನಲ್ಲಿ ಇಲ್ಲ. ಹಾಗಾಗಿ ಇವತ್ತು 80 ಸಾವಿರ Government posts ಅವುಗಳನ್ನು ರೆಗ್ಯುಲರೈಜ್ ಮಾಡುತ್ತೇವೆಂದು ಹೇಳಿದ್ದೀರಿ. ಮಾಡುವುದಕ್ಕೆ ಸಾಧ್ಯ ಇದೆಯೇನು? ಯೋಚನೆ ಮಾಡಿ. ನಾನೇನು ವಿರೋಧಿ ಇಲ್ಲ. ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮೀಷನ್‌ನ ಹಾರ್‍ನಳ್ಳಿ ರಾಮಸ್ವಾಮಿ ರಿಪೋರ್ಟ್‌ನ್ನು ಆಕ್ಸೆಪ್ಟ್ ಮಾಡಿದಿರಿ. ವಿಶ್ವಬ್ಯಾಂಕ್ ನಿಮಗೆ ರೆಸ್ಟ್ರಿಕ್ಷನ್‌ನ್ನು ಹಾಕಿದೆ. ಹೆಲ್ತ್, ಲಾ ಅಂಡ್ ಆರ್ಡರ್, ಶಿಕ್ಷಣ. ಅದನ್ನು ಮಾಡಿ. ಇವತ್ತು ಡೈಲಿ ವೇಜಸ್ ಜನ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಅವರದ್ದೇ ನಿಮಗೆ ರೆಗ್ಯುಲರೈಸ್ ಮಾಡಲಿಕ್ಕೆ ಆಗಲಿಲ್ಲ. ಹಾಗಾಗಿ ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಏನು ಕೊಡುತ್ತಿದ್ದೀರಿ ಅದನ್ನು ಅನುಷ್ಠಾನದಲ್ಲಿ ತರುವುದು ಬಹಳ ಕಷ್ಟ. ಏಕೆಂದರೆ ನೀವು ಕಾಲು ಕೈ ಎಲ್ಲಾ ಕಟ್ಟಿಕೊಂಡು ಬಿಟ್ಟಿದ್ದೀರಿ. ವರ್ಲ್ಡ್ ಬ್ಯಾಂಕ್‌ನವರು ಒಪ್ಪಿಕೊಂಡಿದ್ದಾರೆ. ಹಾರನಹಳ್ಳಿ ರಾಮಸ್ವಾಮಿ ರಿಪೋರ್ಟನ್ನು ನೀವು ಒಪ್ಪಿಕೊಂಡಿದ್ದೀರಿ. ಸರ್ಕಾರ ಒಪ್ಪಿಕೊಂಡು ಆ ಪ್ರಕಾರ ಪ್ರೋಗ್ರಾಮನ್ನು ನೀವು ಹಾಕಿಕೊಂಡಿದ್ದೀರಿ. ಹಾಗೆ ಇದರ ಬಗ್ಗೆ ಯಾವುದೇ ವಿಚಾರ ಪ್ರಸ್ತಾಪ ಮಾಡುವಾಗ ಗ್ಯಾಲರಿಗಳು ಪ್ಲೀಸ್ ಆಗಬಹುದು. ಕ್ಷಣಿಕವಾಗಿ ಜನರಿಗೆ ಸಂತೋಷ ಆಗಬಹುದು. ಆದರೆ ಲಾಂಗ್‌ಟರ್ಮ್‌ನಲ್ಲಿ ಇದು ಸರಿಯಾದ ಪಾಲಿಸಿ ಅಲ್ಲ. ಇವತ್ತು ಭಾಗ್ಯಲಕ್ಷ್ಮಿ ಯೋಜನೆ. ಮಾನ್ಯ ಯಡಿಯೂರಪ್ಪನವರೇ ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ತಾವು ಸ್ವಲ್ಪ ಕೇಳಬೇಕು. ಒಂದು ಮಗು ಅದು ಹೆಣ್ಣು ಹುಟ್ಟಿದಾಗ 10 ಸಾವಿರ ರೂಪಾಯಿ ಡಿಪಾಸಿಟ್ ಇಡುತ್ತೀರಿ. 18 ವರ್ಷವಾದ ನಂತರ ಹತ್ತು ಸಾವಿರ ರೂಪಾಯಿ ಮಗುವಿನ ಹೆಸರಿನಲ್ಲಿ ಇರುತ್ತದೆ. 18 ವರ್ಷ ಆದ ನಂತರ ಆ ಮಗುವಿಗೆ ಆ ಹತ್ತು ಸಾವಿರ ರೂಪಾಯಿ ಮತ್ತು 30–35 ಸಾವಿರ ರೂಪಾಯಿ ಬಡ್ಡಿ ಕೊಡುತ್ತೀರಿ. ಇದು ಸಂತೋಷದ ಹಾಗೂ ಒಳ್ಳೆಯ ವಿಚಾರ ಆಗಿದೆ. ಆದರೆ ಇದು ಪ್ರಾಕ್ಟಿಕಲ್ ಆಗಿ ಇದೆಯೇನು? ಒಂದು ಸಿಸ್ಟಂ ನೋಡಿ ಯಾವ ಪ್ರಕಾರ ಇದೆ ಗೊತ್ತಿದೆಯೇ? ಒಂದು ಓಲ್ಡ್ ಏಜ್ ಪೆನ್ಷನ್ ಸಿಗಬೇಕಾದರೆ ಆರು ತಿಂಗಳು ಓಡಾಡಬೇಕು. ನಿಮ್ಮದು ಏನು ಮಾನಿಟರಿಂಗ್ ಸಿಸ್ಟಂ ಇದೆ. ಕೆಲವು ಸಲಹೆಗಳು ಇವೆ. ಇನ್ನೂ ಕರಪ್ಷನ್ ವಿಚಾರ, ಏನೇ ಹೇಳಿ. ಪ್ರಾಮಾಣಿಕವಾಗಿ ಮಾತನಾಡೋಣ. ಕರಪ್ಷನ್ ಇಲ್ಲ ಎಂದು ಹೇಳುತ್ತೀರೇನು? ಲೋಯರ್ ಲೆವೆಲ್‌ನಲ್ಲಿ ಬಹಳ ಇದೆ. How are you going to overcome? ಮೂರನೆಯದು, ಆ ಮಗು ಹುಟ್ಟಿದ ನಂತರ 18 ವರ್ಷದ ತನಕ ಆ ಹಣದ ಕಡೆಗೆ ನೋಡಲಿಕ್ಕೂ ಆಗುವುದಿಲ್ಲ. ಆ ಮಗು 18 ವರ್ಷದ ತನಕ ಅದು ಬಡ ಕುಟುಂಬದಲ್ಲಿ ಹುಟ್ಟಿದೆ, ಬಿಪಿಎಲ್ ಫ್ಯಾಮಿಲಿಯಲ್ಲಿ ಹುಟ್ಟಿದೆ. ಹಾಗಾಗಿ ಅದಕ್ಕೆ ಸಹಾಯ ಆಗಬೇಕೆಂದು ಹೇಳಿ ನೀವು ಮಾಡಿದಂತಹ ಯೋಜನೆ. ಆಕೆಗೆ 18 ವರ್ಷ ಆಗುವ ತನಕ ಒಂದು ರೂಪಾಯಿನೂ ಸಹ ಇಲ್ಲ, ಶಿಕ್ಷಣಕ್ಕೂ ಇಲ್ಲ, ಆರೋಗ್ಯಕ್ಕೂ ಇಲ್ಲ, ಏನೂ ಇಲ್ಲ. ಆದರೆ ನೀವೇನು ತಿಳಿದುಕೊಳ್ಳುತ್ತೀರಿ? 18 ವರ್ಷ ಆದ ನಂತರ ಸಹ ಕರ್ನಾಟಕದಲ್ಲಿ ಇದೇ ತರಹ ಬಡತನ ಇರುತ್ತದೆ ಎಂದು ತಿಳಿದುಕೊಂಡಿದ್ದೀರೇನು?

ಶ್ರೀ ಬಸವರಾಜ ರಾಯರೆಡ್ಡಿ: 18 ವರ್ಷ ಡಿಪಾಸಿಟ್ ಇಡುವುದಕ್ಕೆ ಬರುವುದಿಲ್ಲ. ಮ್ಯಾಕ್ಸಿಮಮ್ ಪೀರಿಯಡ್ 10 ವರ್ಷ ಮಾತ್ರ. 18 ವರ್ಷ ಹೇಗೆ ಇಡುತ್ತೀರಿ? 18 ವರ್ಷ ಡಿಪಾಸಿಟ್ ಇಡುವುದಕ್ಕೇ ಬರುವುದಿಲ್ಲ. ಅದನ್ನು ನಾನು ಹೇಳುತ್ತಿರುವುದು.

ಶ್ರೀ ಆರ್.ವಿ. ದೇಶಪಾಂಡೆ: ಅದೇನೂ ತೊಂದರೆ ಇಲ್ಲ. ಡಿಪಾಸಿಟ್ಸ್ ಇತ್ತು ಎಂದರೆ ಗವರ್ನಮೆಂಟ್ ಸ್ಪೆಷಲ್ ಆರ್ಡರ್ ಮಾಡಬಹುದು. ಡಿಪಾಸಿಟ್ ಸಿಗದೇ ಹೋದರೆ ಸರ್ಕಾರ ಆರ್ಡರ್ ಮಾಡಬಹುದು. ನಾನು ಬೇರೆ ವಿಷಯಕ್ಕೆ ಬರುತ್ತಿದ್ದೇನೆ. ಹಾಗಾಗಿ ಒಂದು ಕಡೆ ಮಾನಿಟರಿಂಗ್, ಒಂದು ಕಡೆ ಕರಪ್ಷನ್ ಸಿಸ್ಟಂ, ಮತ್ತು 18 ವರ್ಷ ಆ ಮಗು ಏನು ಮಾಡಬೇಕು? ಎಲ್ಲಿ ಹೋಗಬೇಕು? ಬಡ ಮಗು ಎಂದು ಸಹಾಯ ಮಾಡುತ್ತಿದ್ದೀರಿ. 18 ವರ್ಷ ಮಗು ಏನು ಮಾಡಬೇಕು ಮಾನ್ಯ ಉದಾಸಿಯವರೇ. ನಿಮ್ಮ ಮನೆಗೆ ಬರಬೇಕಾ? ನೀವು ದೊಡ್ಡ ಮನುಷ್ಯರು. ದೊಡ್ಡ ಹೃದಯ ಇದೆ, ಏನೋ ಸಹಾಯ ಮಾಡಬಹುದು. ನಮ್ಮಂಥವರು ಏನು ಸಹಾಯ ಮಾಡುತ್ತಾರೆ? ಎಲ್ಲಿ ಹೋಗಬೇಕು? ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಗುವಿಗೆ ಎಲ್ಲಿ ಹೋಗು ಎಂದು ಹೇಳುತ್ತಾರೆ? ಹಾಗಾಗಿ ಇದು ಪ್ರಾಕ್ಟಿಕಲ್ ಯೋಜನೆ ಅಲ್ಲ. ನೀವೇನು ಮಾಡಬೇಕಾಗಿತ್ತು ಎಂದರೆ ಲೈಫ್ ಇನ್‌ಶ್ಯೂರೆನ್ಸ್ ಕಾರ್ಪೋರೇಷನ್ ಅಥವಾ ಕೆಲವು ಪ್ರೈವೇಟ್ ಇನ್‌ಶ್ಯೂರೆನ್ಸ್ ಕಂಪನಿಯವರನ್ನು ಕರೆದು ಒಂದು ಟೈಲರ್ ಮೇಡ್ ಪಾಲಿಸಿ ಮಾಡಿಕೊಡಿ ಎಂದು ಹೇಳಬೇಕಾಗಿತ್ತು. 25 ಸಾವಿರ ರೂ. ಪಾಲಿಸಿ linked with health care, linked with education ಎಂದು ಮಾಡಬೇಕಾಗಿತ್ತು. ನಿಮಗೆ 400, 500 ರೂಪಾಯಿ ಪ್ರೀಮಿಯಮ್‌ಗೆ ಪಾಲಿಸಿ ಸಿಗುತ್ತಿತ್ತು. ಆ ಮಗುವಿಗೆ ಆರೋಗ್ಯಕ್ಕೂ ಹಣ ಸಿಗುತ್ತಿತ್ತು. ಇದನ್ನು ಕೇಂದ್ರ ಸರ್ಕಾರ ಮಾಡಿದೆ. ಮಾನ್ಯ ಚಿದಂಬರಂ ಅವರು 300 ರೂಪಾಯಿ ಕೊಡುತ್ತಿದ್ದಾರೆ. ಒಂದು ಹೆಣ್ಣು ಮಗುವಿಗೆ 300 ರೂಪಾಯಿ ಕಲಿಯಲಿಕ್ಕೆ ಎಂದು ಕೊಡುತ್ತಿದ್ದಾರೆ.

ಶ್ರೀ ಎಸ್. ಶಿವಣ್ಣ: ಕಮೀಷನ್ ಯಾರಿಗೆ ಹೋಗಬೇಕು ಎಂದು ಹೇಳುತ್ತಿದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ: ಯಾವ ಕಮೀಷನ್? ಲೈಫ್ ಇನ್‌ಶ್ಯೂರೆನ್ಸ್ ಕಾರ್ಪೋರೇಷನ್ ನಿಮ್ಮದೇ ಕಂಪನಿ, ಭಾರತ ಸರ್ಕಾರದ್ದು. ನಿಮಗೆ ಗೊತ್ತಿಲ್ಲದಿದ್ದರೆ ತಿಳಿದುಕೊಳ್ಳಿ. ಲೈಫ್ ಇನ್‌ಶ್ಯೂರೆನ್ಸ್ ಕಾರ್ಪೋರೇಷನ್ ಭಾರತ ಸರ್ಕಾರದ್ದು. ಬೇಕಾದರೆ ನಾನೇ ಒಂದು ಪಾಲಿಸಿ ತೆಗೆದುಕೊಳ್ಳುತ್ತೇನೆ. ನನಗೆ ಕಮೀಷನ್ ಕೊಟ್ಟು ಬಿಡಿ. ಮತ್ತೇನು ಹೇಳಬೇಕು? ಏನು ಹೇಳಬೇಕು? ನೀವೇನು ಮಾತನಾಡುತ್ತೀರಿ? ಹಾಗಾಗಿ ಇವತ್ತು ನೀವು ಒಂದು ಪಾಲಿಸಿ ತೆಗೆದುಕೊಳ್ಳಬೇಕಾಗಿತ್ತು. linked with health care, education. ಎಂದು ರಾಜಸ್ಥಾನದಲ್ಲಿ ನಿಮ್ಮ ಸರ್ಕಾರ ಇವತ್ತು 26 ಲಕ್ಷ ರೂಪಾಯಿ ಬಿಪಿಎಲ್ ಫ್ಯಾಮಿಲಿಗೆ ಇನ್‌ಶ್ಯೂರೆನ್ಸ್ ಮಾಡಿದ್ದಾಳೆ. 100 ರೂಪಾಯಿಗಳ ಪ್ರೀಮಿಯಂ. Hunded Rupees is given by Government of India. ಆದರೆ ಸಣ್ಣ ಮಗುವಿಗೆ ಅಲ್ಲ, ಅಡಲ್ಟ್ ಮೆಂಬರ್‌ಗೆ. ಆ ತರಹದ ಒಂದು ಪರಿಸ್ಥಿತಿ ಮಾಡಿದರೆ ಆ ಮಗುವಿಗೆ ಲಾಭ ಆಗುತ್ತಿತ್ತು. ಇದೊಂದು ವಿಚಾರ ಮಾಡಿ. ನನಗೆ ಬಂದ ಇನ್‌ಫರ್ಮೇಷನ್ ಪ್ರಕಾರ ಮಾನ್ಯ ಕಾರಜೋಳ್ ಅವರು ನಿನ್ನೆ ಕೌನ್ಸಿಲ್‌ನಲ್ಲಿ ಉತ್ತರ ಕೊಟ್ಟಿದ್ದಾರೆ. ಅಂತ್ಯೋದಯ ಫ್ಯಾಮಿಲೀಸ್, ಕಾರ್ಡ್ ಹೋಲ್ಡರ್ಸ್ 9.5 ಲಕ್ಷ ಇದೆ. ಬಿಪಿಎಲ್ ಫ್ಯಾಮಿಲೀಸ್ 60 ಲಕ್ಷ 65 ಸಾವಿರ ಇದೆ. ಟೋಟಲ್ ಬಿಪಿಎಲ್

ಫ್ಯಾಮಲೀಸ್ 70 ಲಕ್ಷ 15 ಸಾವಿರ, 925 ಫೆಬ್ರವರಿ 2006ಕ್ಕೆ ರಾಜ್ಯದಲ್ಲಿ ಇದೆ ಎಂದು ನಿನ್ನೆ ಉತ್ತರವನ್ನು ಕೊಟ್ಟಿದ್ದೀರಿ. ಇವತ್ತು ರಾಜ್ಯದ ಜನಸಂಖ್ಯೆ 2001 ಸೆನ್ಸಸ್ ಪ್ರಕಾರ 5 ಕೋಟಿ 22 ಲಕ್ಷ ಇದೆ. 2006ರ ಅಂದಾಜಿನ ಪ್ರಕಾರ ಅದು 5 ಕೋಟಿ 74 ಲಕ್ಷ ಆಗಬೇಕು. ಅಂದರೆ 46 ಲಕ್ಷ ಜನಸಂಖ್ಯೆ 5 ವರ್ಷದಲ್ಲಿ ಹೆಚ್ಚಾಗಿದೆ. ಅದರ ಅರ್ಥ ಲೆಸ್ ದ್ಯಾನ್ 2 ಪರ್ಸೆಂಟ್. ಪಾಪ್ಯುಲೇಷನ್ ಗ್ರೋತ್ ಆಗಿದೆ. ಈ 2 ಪರ್ಸೆಂಟ್ ಗ್ರೋತ್ ಹಿಡಿದರೂ ಸಹಿತ ಮುಂದಿನ ವರ್ಷ 7 ಲಕ್ಷ babies will be born. 7 ಲಕ್ಷ babies will be born at less than two percent. ನಾನೇನು ಹೇಳುತ್ತಿದ್ದೇನೆ? ನಾನು ಟೋಟಲ್ ಪಾಪ್ಯುಲೇಷನ ಗಮನದಲ್ಲಿ ತೆಗೆದುಕೊಂಡಿಲ್ಲ. Only 3½ crores ತೆಗೆದುಕೊಂಡಿದ್ದೇನೆ. 70 ಲಕ್ಷ multiplied by five. ಮೂರೂವರೆ ಕೋಟಿ ಮೇಲೆ 7 ಲಕ್ಷ babies will be born. 50:50 ಪರ್ಸೆಂಟ್ ಹಿಡಿಯಿರಿ. 50 ಗಂಡು, 50 ಹೆಣ್ಣು. 350 ಕೋಟಿ ರೂಪಾಯಿ ನಿಮ್ಮ ಬಜೆಟ್‌ನಲ್ಲಿ ಬೇಕು ಸಾರ್. ನಾನು ಬಿಪಿಎಲ್ ವಿಚಾರವನ್ನೇ ಹೇಳುತ್ತಿದ್ದೇನೆ. I am talking about BPL. ಇದು ನಿಮ್ಮ ಮಂತ್ರಿಗಳು ಕೊಟ್ಟಂತಹ ಉತ್ತರ, ಅದರ ಮೇಲೆಯೇ ನಾನು ಹೇಳುತ್ತಿದ್ದೇನೆ. ಹಾಗಾಗಿ 7 ಲಕ್ಷ babies born ಆದರೆ ಫೀಮೇಲ್ 50 ಪರ್ಸೆಂಟ್ ಹಿಡಿದರೂ ಸಹ ಅಥವಾ ಐದು ಸಾವಿರ ಕಡಿಮೆ ಹಿಡಿದರೂ ಸಹ 350 ಕೋಟಿ ರೂಪಾಯಿ ನೀವು ಬಜೆಟ್‌ನಲ್ಲಿ ಇಡಬೇಕು ಸ್ವಾಮಿ. ಪ್ರತಿ ವರ್ಷ 232 ಕೋಟಿ ರೂಪಾಯಿ ಇಟ್ಟಿರಿ. ಇದರ ಅವಶ್ಯಕತೆ ಏನು ಇತ್ತು? ಆ ಹತ್ತು ಸಾವಿರದ ಮೇಲೆ ಎಷ್ಟು ಬಡ್ಡಿ ಬರುತ್ತದೆ? 6 ಪರ್ಸೆಂಟ್ ಎಂದರೆ 600 ಅಲ್ಲವೇ? 600 ರ ಮೇಲೆ ಒಳ್ಳೆಯ ಪಾಲಿಸಿ ಕೊಟ್ಟು ಹೆಲ್ತ್ ಕೇರ್, ಎಜುಕೇಶನ್ ಕೇರ್ ತೆಗೆದುಕೊಂಡು ಮೆಚೂರಿಟಿ ವ್ಯಾಲ್ಯೂ 40 ಸಾವಿರ ರೂ. ಸಿಗುತ್ತಿತ್ತು. 25 ಸಾವಿರ ರೂ. ಪ್ಲಸ್ ಬೋನಸ್ ಸಿಗುತ್ತಿತ್ತು. ಹಾಗಾಗಿ ಇಂತಹ ಸ್ಕೀಮ್‌ಗಳನ್ನು ಮಾಡುವಾಗ you should not be guided by officers. ಇದಕ್ಕೆ ಸ್ವಲ್ಪ ನಮ್ಮ ಮನಸ್ಸನ್ನು ಅಪ್ಲೈ ಮಾಡಬೇಕು, ನಮ್ಮ ಮೈಂಡ್ ಅಪ್ಲೈ ಮಾಡಬೇಕು. ಇದು ಆದರೆ ಎಷ್ಟೋ ಬಡ ಮಕ್ಕಳಿಗೆ ಅನುಕೂಲ ಆಗುತ್ತಿತ್ತು. ಮತ್ತೊಂದು ಮಾನ್ಯ ಮಾಧುಸ್ವಾಮಿಯವರು ರೈಸ್ ಮಾಡಿದ ಪಾಯಿಂಟ್. ಪ್ರಸಿಡೆಂಟ್ ಆಫ್ ಇಂಡಿಯಾ ಪ್ರಕಾರ 19 ಪರ್ಸೆಂಟ್ BPL ಫ್ಯಾಮಿಲೀಸ್ ಇವೆ. ನಿಮ್ಮ ಅಧಿಕಾರಿಗಳು 19 ಪರ್ಸೆಂಟ್ ಮೇಲೆ ಹೋಗಬಾರದು ಎಂದು ನಿಮಗೆ ಹೇಳುತ್ತಾರೆ. No. you have to help seventy lakh families. ನಿಮ್ಮ ಸರ್ಕಾರ ಉತ್ತರ ಕೊಟ್ಟಿದೆ. ನೀವು ಅಲ್ಲೇನಾದರೂ ಮಾಡಲು ಹೋದರೆ ಈ ಪೇಪರ್‌ನಲ್ಲಿ ಏನು ಹೊಗಳಿದರಲ್ಲಾ ಎಲ್ಲಾ ರಿವರ್ಸ್ ಗೇರ್ ಶುರು ಆಗುತ್ತದೆ. ಹಾಗಾಗಿ ತಾವು ಇದರ ಬಗ್ಗೆ ಬಹಳ ಕೂಲಂಕಷವಾಗಿ ವಿಚಾರ ಮಾಡಬೇಕಾಗಿತ್ತು. ಇವತ್ತು ಮುಖ್ಯವಾಗಿ ನಮ್ಮ ಈ ಸುವರ್ಣ ಸುರಕ್ಷಾ ಸ್ಕೀಮ್ ಬಹಳ ಒಳ್ಳೆಯದು ಇದೆ, ಮಾಡಿ. ಅಲ್ಲಿ ನಿಮಗೆ ಕೇಂದ್ರ ಸರ್ಕಾರ 300 ರೂಪಾಯಿ ಕೊಡುತ್ತಿದೆ. ಅದೂ ಸಹ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ. ಇವರು ಬಜೆಟ್‌ನಲ್ಲಿ ಹೇಳಿದ್ದಾರಲ್ಲಾ. ಸುವರ್ಣ ಸುರಕ್ಷಾ ಸ್ಕೀಮು, ಇದು ಕೇಂದ್ರ ಸರ್ಕಾರದ ಪುರಸ್ಕೃತ ಸ್ಕೀಮು. ಕೇಂದ್ರ ಸರ್ಕಾರ 300 ರೂಪಾಯಿ ಕೊಡುತ್ತದೆ. 248 ರೂಪಾಯಿ ರಾಜ್ಯ ಸರ್ಕಾರ ಕೊಡುತ್ತದೆ. ಬೆನಿಫಿಷರೀಸ್ ಸ್ವಲ್ಪ ಹಣ ಹಾಕಿ ಆ

ಇನ್‌ಶ್ಯೂರೆನ್ಸ್ ಪಾಲಿಸಿ ತೆಗೆದುಕೊಳ್ಳುವುದು. ಇದು ಅಗ್ರಿಕಲ್ಚರ್ ಲೇಬರರ್ಸ್ ಸಲುವಾಗಿ. ಹಾಗಾಗಿ ಇಲ್ಲಿ ಸಹ ತಾವು ಕೇಂದ್ರ ಸರ್ಕಾರವನ್ನು ಮರೆಯಬಾರದೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಹಾಗಾಗಿ ಇವತ್ತು ನಮ್ಮ ಐಸಿಆರ್‌ಐ ನಿಗಮ ಆಗಬಹುದು. 'ಟ್ರಿಬಲ್ ಎ' ರೇಟಿಂಗ್ ಕೊಟ್ಟಿದೆ. ನಿಮಗೆ ಒಳ್ಳೆಯ ಅವಕಾಶ ಇದೆ, ಒಳ್ಳೆಯ ಕೆಲಸ ಮಾಡಿ, ಒಳ್ಳೆಯ ಯೋಜನೆಗಳನ್ನು ತನ್ನಿ. ರಾಜ್ಯದ ಅಭಿವೃದ್ಧಿ ಮಾಡಿ. ಆದರೆ ಈ ತರಹದ ಯೋಜನೆಯಿಂದ ನಿಮಗೆ ಸಮಾಧಾನ ಆಗಬಹುದು. ಹೆಣ್ಣು ಮಗಳಿಗೆ 6 ಸಾವಿರ ಕೊಟ್ಟೆ, 2 ಸಾವಿರ ಕೊಟ್ಟೆ ಅಂತ, ಮಾನಸ ಸರೋವರಕ್ಕೆ ಹೋಗಲು 22 ಲಕ್ಷ ಕೊಟ್ಟಿದ್ದೀರಿ ಎಂದರೆ ಏನು ಸಾರ್ ಮಾನಸ ಸರೋವರಕ್ಕೆ 22 ಲಕ್ಷ ರೂಪಾಯಿ ಕೊಟ್ಟಿರುವುದು? ಯಾರು ಹೋಗುವವರು? 10 ಜನ ಹೋಗಬಹುದು ಮಾನ್ಯ ಉದಾಸಿಯವರೇ, 25 ಲಕ್ಷದಲ್ಲಿ 10 ಜನ ಹೋಗಬಹುದು. ಇಲ್ಲಿ ಯಾರಾದರೂ ಸತ್ತರೆ ಒಂದು ಸಾವಿರ ರೂಪಾಯಿ ಪರಿಹಾರ. ಯಾರು ಒಂದು ಸಾವಿರ ರೂಪಾಯಿ ಕೊಡುವವರು? ಯಾರು ತೆಗೆದುಕೊಳ್ಳುವವರು? ಯಾರು ಪಾವತಿ ಕೊಡುವವರು? ನೀವು ಅಪೋಸಿಷನ್ ಲೀಡರ್ ಆಗಿ 25 ವರ್ಷ 30 ವರ್ಷ ಫೈಟ್ ಮಾಡಿದ್ದೀರಿ. ನಿಮಗೆ ಜನರ ಕಷ್ಟ ಗೊತ್ತಿದೆ. ಒಂದು ಸಾವಿರ ರೂಪಾಯಿ ಸಿಕ್ಕಬೇಕು ಎಂದರೆ ಮೂರು ಸಾವಿರ ರೂಪಾಯಿ ಆತನು ಖರ್ಚು ಮಾಡಬೇಕು. What are these programmes? ನೀವು ರಾಜ್ಯದ ಸಂಪತ್ತನ್ನು ಹೆಚ್ಚಿಸಬೇಕು. You are squandering off. You have no right. ನಿಮಗೆ ಅಧಿಕಾರ ಇಲ್ಲ. ಕಾಶಿಯಸ್ ಆಗಿ ಇರಬೇಕು. ಯಾವ ಒಂದು ವರ್ಗಕ್ಕೆ ಇದು ಮಾಡಿದರೆ ಆ ವರ್ಗಕ್ಕೆ ಲಾಭ ಆಗಬೇಕು. ಒಂದು ಸಾವಿರ ರೂಪಾಯಿಯಿಂದ ಏನು ಮಾಡುತ್ತಾರೆ? ಕೊಡುವುದಿದ್ದರೆ ಐದು ಸಾವಿರ ರೂಪಾಯಿ, ಹತ್ತು ಸಾವಿರ ರೂಪಾಯಿ ಕೊಡಿ. ಒಂದು ಸಾವಿರ ರೂಪಾಯಿನಿಂದ ಏನು ಮಾಡಲು ಆಗುತ್ತದೆ? ಹಾಗಾಗಿ ಯೋಜನೆಗಳು ಸರಿ. ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ. ಅನುಷ್ಠಾನದಿಂದ ಅದರ ಉಪಯೋಗ ಆಗಬೇಕಾಗುತ್ತದೆ. ಅದರಿಂದ ಉದ್ಯೋಗ ನಿರ್ಮಾಣ ಆಗಬೇಕಾಗುತ್ತದೆ. ಕ್ವಾಲಿಟಿ ನಿರ್ಮಾಣ ಆಗಬೇಕಾಗುತ್ತದೆ. ಇವತ್ತು ಪವರ್ ಜನರೇಷನ್ ಬಗ್ಗೆ ವಿಚಾರ. ಪವರ್ ರಿಫಾರ್ಮ್ಸ್ ಬಗ್ಗೆ ಏನು ಇದೆ? ಏನೂ ಇಲ್ಲ. ಯಾರು ನಿಮಗೆ ಗಂಟು ಬಿದ್ದರೋ ಗೊತ್ತಿಲ್ಲ. ಏನೂ ಪವರ್ ರಿಫಾರ್ಮ್ಸ್ ನಿಮ್ಮದು ಇಲ್ಲ. ಆದರೆ ನಿಮ್ಮ ಪವರ್ ರಿಫಾರ್ಮ್ಸ್ ಏನು ಟ್ರಾನ್ಸ್‌ಮಿಷನ್ ವಿಚಾರ ಏನು? ಇವತ್ತು ಕರ್ನಾಟಕ ಪ್ರೆಸಿಡೆಂಟ್ ಆಫ್ ಇಂಡಿಯಾ ಪ್ರಕಾರ ಅಭಿವೃದ್ಧಿ ಪಡೆಯಬೇಕಾದರೆ ಪವರ್ ರಿಫಾರ್ಮ್ಸ್ ಆಗಬೇಕು ಎಂದು ಹೇಳಿದ್ದಾರೆ. ನಿಮ್ಮ ಬಜೆಟ್‌ನಲ್ಲಿ power reforms ಬಗ್ಗೆ ಏನು ತಿಳಿಸಿದ್ದೀರಿ? ಒಂದಾದರೂ ಶಬ್ದ ಇದೆಯೇ? ಏನೂ ಇಲ್ಲ. distribution ಇರಬಹುದು, transmission ಇರಬಹುದು. ಹಾಗಾಗಿ, ತಾವು ಇದರ ಬಗ್ಗೆ ವಿಚಾರ ಮಾಡಬೇಕಾಗಿತ್ತು, ಇವೊತ್ತು ನಮ್ಮ ಜಿಲ್ಲೆಯ ತದಡಿಯಲ್ಲಿ 4000 ಮೆಗಾವ್ಯಾಟ್ ಸಾಮರ್ಥ್ಯದ ಪವರ್ ಪ್ರಾಜೆಕ್ಟ್ ಕುರಿತಂತೆ mention ಮಾಡಿದ್ದೀರಿ, ಅದನ್ನು Government of India ಮಾಡಿದೆ. ನಾನು ಸಭೆಗೆ ಹೋಗಿದ್ದೆ, ಆದರೆ, ವಿಶ್ವೇಶ್ವರ ಹೆಗಡೆಯವರು ಬರಲಿಲ್ಲ. ನಾನು ವಿರೋಧ ಮಾಡುತ್ತೇನೆಂದು ಹೇಳಿ ಅವರು ಹೋರಾಟಕ್ಕಷ್ಟೇ ಹೋದರು ರೈತರು, ಮೀನುಗಾರರು ಹಾಗೂ ಸಾಮಾನ್ಯ ಜನರಲ್ಲಿ ಒಂದು ಭೀತಿ, ಸಂದೇಹ ಇದೆ. ಹಾಗಾಗಿ ಆ ಎಲ್ಲಾ

concern ಗೆ ನೀವು ಅಡ್ರೆಸ್ ಮಾಡಬೇಕಾಗುತ್ತದೆ. ಆ concern ಗೆ ನೀವು ಅಡ್ರೆಸ್ ಮಾಡುವ ಮೂಲಕ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆಯೇ ವಿನಾ ಇವೊತ್ತು ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಮನಸ್ಸು ಬಂದಂತೆ ಪ್ರಾಜೆಕ್ಟ್ ಮಾಡುವುದಕ್ಕಾಗುವುದಿಲ್ಲ. ನಾನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ಮತ್ತು ಮಾನ್ಯ ಸುಶೀಲ್‌ಕುಮಾರ್ ಶಿಂಧೆಯವರಿಗೂ ಪತ್ರ ಬರೆದಿದ್ದೇನೆ. ಬಹಳ hurry ಯಲ್ಲಿ, ಗಡಿಬಿಡಿಯಲ್ಲಿ ಮಾಡುವುದಕ್ಕೆ ಹೋಗಬೇಡಿ. Please go slow. ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿ. ಇದರಲ್ಲಿ ಜನರ ಹಿತವಿದ್ದರೆ, ಜನರನ್ನು convince ಮಾಡಿ, ನನ್ನನ್ನಲ್ಲ. ಮೀನುಗಾರರನ್ನು ರೈತರನ್ನು convince ಮಾಡಬೇಕು. ಹಾಗೆಯೇ, ಅವರುಗಳನ್ನು convince ಮಾಡಿದ ನಂತರ ತಾವು ಆ ಬಗ್ಗೆ ಚಿಂತನೆ ಮಾಡಬೇಕು. ಇಲ್ಲಿ ನಿಮ್ಮದ್ಯಾವುದೇ ಪ್ರಾಜೆಕ್ಟ್ ಇಲ್ಲ. ಹೊಸ power generation ಬಗ್ಗೆ ಪ್ರೋಗ್ರಾಂ ಇಲ್ಲ. ಹಾಗಾಗಿ, ಯಾವ ಪ್ರಕಾರ ನೀವು ಇದನ್ನು ಮಾಡಿದಿರೋ ನನಗೆ ಗೊತ್ತಿಲ್ಲ. ಆದರೆ, ನಾನು ಇಷ್ಟೇ ಹೇಳುತ್ತೇನೆ. ಇವೊತ್ತು ಮುಖ್ಯವಾಗಿ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಪಿ.ಡಬ್ಲ್ಯೂ.ಡಿ. ಬಗ್ಗೆ ಮಾತನಾಡಿದರು. ತಾವು ಒಂದು ಕಡೆ ಹೇಳಿದ್ದೀರಿ. ನನ್ನ ಅಲೋಕೇಶನ್ ಏನಿದೆಯೆಂದರೆ, 95% like ಮಾಡಿದ್ದೇನೆಂದು para no.148 ನಲ್ಲಿ ಹೇಳಿದ್ದೀರಿ. "..Special emphasis for repair and maintenance of PWD works". The FM said that provision of Rs.600 crores". Rs.95 Crores more ಮಾಡಿದ್ದೇವೆಂದು ಹೇಳಿದ್ದೀರಿ. 95% ಅದು ಹಾಗಲ್ಲ ಸರ್. ಅದು ಏನಿದೆಯೆಂದರೆ, ನೀವು ತಿಳಿದುಕೊಳ್ಳಬೇಕು. ನಮ್ಮ strategic road investment requires a multi year road investment plan. ಆ ಪ್ಲಾನ್ ಈಗಾಗಲೇ ರಾಜ್ಯ ಸರ್ಕಾರದಿಂದ ಆಗಿದೆ. ರಾಜ್ಯ ಸರ್ಕಾರದವರು ಆ ಪ್ಲಾನ್ ಮಾಡಿದ್ದಾರೆ. ಆ ಪ್ಲಾನ್ ಪ್ರಕಾರ ಕರ್ನಾಟಕ Public Works Department ಜುಲೈ 2003ರಲ್ಲಿ Department of Medium Term Fiscal Plan ಮಾಡಿ 2003ರಿಂದ 2006ರ ತನಕ ಅಲೋಕೇಶನ್ ಏನಾಗಬೇಕೆಂದು ಆವಾಗ ಹೇಳಿದ್ದಾರೆ. ಆ ಪ್ರಕಾರ ನೀವು ಅಲೋಕೇಶನ್ ಮಾಡಿದ್ದೀರಿ. ವಿಶ್ವಬ್ಯಾಂಕ್ ಪ್ರಾಜೆಕ್ಟ್‌ನಲ್ಲಿ ನಾವು 10,000 ಕಿಲೋಮೀಟರ್‌ಗಳಷ್ಟು ರೋಡ್ ಮಾಡುತ್ತೇವೆಂದು ಹೇಳಿದ್ದೇವೆ. ಆದರೆ, ವಿಶ್ವಬ್ಯಾಂಕ್ ಪ್ರಾಜೆಕ್ಟ್ 2006ಕ್ಕೆ end ಆಗುತ್ತಿದೆ. ಅದಕ್ಕೋಸ್ಕರ, ನೀವು ಬಜೆಟ್‌ನಲ್ಲಿ additional provisions ಮಾಡಬೇಕಾಗುತ್ತದೆ. ಆದುದರಿಂದ, 95% ಮಾಡಿರುವುದು ಹೆಚ್ಚಲ್ಲ. ಇವೊತ್ತು World Bank programme, O.K. ಆದರೆ ಮುಕ್ತಾಯಕ್ಕೆ ಬರುವಾಗ ತಾವು ಹೆಚ್ಚಿನ outlay ಅನ್ನು ಇವೊತ್ತು PWD ಗೆ ಕೊಡಬೇಕಾಗಿತ್ತು. ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಕಷ್ಟದಲ್ಲಿ ಸಿಲುಕಿಕೊಳ್ಳುತ್ತೀರಿ. ಏಕೆಂದರೆ, World Bank road project will end in December 2006. ಹಾಗಾಗಿ, ಏನಾಗಿದೆಯೆಂದರೆ, ತಮಗೆ ಇದರ ಬಗ್ಗೆ ಸರಿಯಾಗಿ guidance ಮಾಡಿಲ್ಲವೆಂಬ ವಿಷಯವನ್ನು ನಾನು ವಿನಯದಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಂತರ, world Bankದ್ದು ನಮ್ಮ Karnataka Highways Improvement Project. ಅದರಲ್ಲಿ 10,000

ಕಿಲೋಮೀಟರ್‌ಗಳಷ್ಟು ರೋಡ್ ಮಾಡಬೇಕು. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ, 50 ಲಕ್ಷ ರೂಪಾಯಿಗಳಿಂದ ಏನು ಮಾಡುವುದಕ್ಕಾಗುತ್ತದೆ? ಒಂದೊಂದು constitutency ಗೆ ತಾವು 50 ಲಕ್ಷ ರೂಪಾಯಿಗಳನ್ನು ಗ್ರಾಂಟ್ಸ್ ಕೊಟ್ಟಿರಿ, ಸಂತೋಷ. 50 ಲಕ್ಷ ರೂಪಾಯಿಗಳನ್ನು ರೋಡ್ ಮೇಂಟೆನೆನ್ಸ್‌ಗೆಂದು ಒಂದೊಂದು constituencyಗೆ ಕೊಡಬಾರದು. ಅವರು ಹೇಳಿದ ಹಾಗೆ, he is correct. Public Works Department ನಲ್ಲಿ ಯಾವಾಗಲೂ road length ಮೇಲೆ ಹಣ ಬಿಡುಗಡೆ ಮಾಡಿದೆಯೇ ವಿನಾ, ad hoc ಮೇಲೆ ಹಣ ಬಿಡುಗಡೆ ಮಾಡಿಲ್ಲ. Ad hoc ಮೇಲೆ ಹಣ ಬಿಡುಗಡೆ ಮಾಡಿದರೆ, how can you get the result? ಅವರು ಹೇಳಿದ ಹಾಗೆ, ಒಂದು constituency ಯಲ್ಲಿ 200 ಕಿಲೋಮೀಟರ್‌ಗಳಿದ್ದರೆ, ಮತ್ತೊಂದು constituency ಯಲ್ಲಿ 50 ಕಿಲೋಮೀಟರ್‌ಗಳಿರುತ್ತದೆ. ರಾಜ್ಯದಲ್ಲಿರುವ ಎಲ್ಲಾ ರಸ್ತೆಗಳು ಸರಿಯಾಗಿ Develop ಆಗಬೇಕಾದರೆ, ಸಮತೋಲನವಾಗಿ development ಆಗಬೇಕಾಗಿದ್ದರೆ, ಅಲ್ಲಿರುವ road length ಮೇಲೆ ನೀವು grants ಅನ್ನು release ಮಾಡಬೇಕೇ ವಿನಾ, ಈ ರೀತಿ ad hoc grants ಅನ್ನು release ಮಾಡುವುದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ನಂತರ, ಈಗಾಗಲೇ ನಿಮಗೆ vacancies ಬಗ್ಗೆ ಹೇಳಿದ್ದೇನೆ. KPC ಯಲ್ಲಿ ಏನು ಅನಾಹುತ ನಡೆಯುತ್ತಿದೆ, ಅದರ ಬಗ್ಗೆ ಹೇಳಿದ್ದೇನೆ. ಕೊನೆಯದಾಗಿ, ತಾವೂ ನಮ್ಮ ಮಾತನ್ನು ಕೇಳಲಿಲ್ಲ, ಮತ್ತು ಡಾ. ಆಚಾರ್‌ರವರೂ ನಮ್ಮ ಮಾತನ್ನು ಕೇಳಲಿಲ್ಲ. ಮಾನ್ಯ ಧರ್ಮಸಿಂಗ್‌ರವರ, ನಮ್ಮ ಸರ್ಕಾರ ಇದ್ದಾಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಮೆಡಿಕಲ್ ಕಾಲೇಜು ಮಾಡುತ್ತೇವೆಂದು ಹೇಳಿದ್ದರು. ಮೆಡಿಕಲ್ ಕಾಲೇಜ್ ಬಗ್ಗೆ ನಿಮಗೆ ಪತ್ರ ಬರೆದೆವು, ನಿಮಗೆ ಫೋನ್ ಮಾಡಿ ಹೇಳಿದೆವು. ಮಾನ್ಯ ವಿಶ್ವೇಶ್ವರ ಹೆಗಡೆಯವರು ಆಗ ನಮ್ಮ ಮೇಲೆ ಗಲಾಟೆ ಮಾಡುತ್ತಿದ್ದರು. ಇಲ್ಲಿಂದ ಪ್ರಶ್ನೆ ಹಾಕುತ್ತಿದ್ದರು. ಈಗ ಆತ ನಿಮ್ಮ ಶಿಷ್ಯನಾಗಿದ್ದಾನೆ. ನಿಮ್ಮನ್ನು ಕೇಳುವ ಧೈರ್ಯ ಅವರಿಗಿಲ್ಲ. ಹಾಗಾಗಿ, ಅದು ಆಗಿಲ್ಲ. ಆದರೆ, ಕಾರವಾರ ಏರ್‌ಪೋರ್ಟ್ ಬಗ್ಗೆ ತಾವೇನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದೀರಿ, ಅದರ ಬಗ್ಗೆ ಧನ್ಯವಾದಗಳು. ಮೂಲಭೂತ ಸೌಕರ್ಯಕ್ಕೆ ತಾವು ಹೆಚ್ಚು ಮಹತ್ವ ಕೊಡಿ. ಮಾನವ ಸಂಪನ್ಮೂಲ ನಿರ್ಮಾಣ ಮಾಡುವುದಕ್ಕೆ ಒತ್ತು ಕೊಡಿ. ಈ ಮುಂಗಡಪತ್ರ ಏನಿದೆ, ಇದು full of promises ಆಗಿದೆ. ಮಾನ್ಯ ಯಡಿಯೂರಪ್ಪನವರೆ, ನಿಮಗೆ ಸಮಾಧಾನವಾಗಿರಬಹುದು. These are all patches. ಈ path work ನಿಂದ ಒಂದು ರಾಜ್ಯ ನಿಲ್ಲುವುದಿಲ್ಲ. You have to take constructive concrete decisions. Capital assets ಹೆಚ್ಚು ಮಾಡಬೇಕು. ಆ ದೃಷ್ಟಿಯಿಂದ Finance Minister ಆಗಿರುವ ನೀವು ಕೆಲಸ ಮಾಡಬೇಕಾಗಿದೆಯೇ ವಿನಾ, ಗುಡಿಗಳನ್ನು ಕೊಟ್ಟು ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ಮುಂಗಡ ಆಯವ್ಯಯ ಪತ್ರವನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

8. ಗಮನ ಸೆಳೆಯುವ ಸೂಚನೆಗಳು

ಅ. ವಿಷಯ: ಉತ್ತರ ಕರ್ನಾಟಕದ ನಗರಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಎ.ಡಿ.ಬಿ. ಸಂಸ್ಥೆಯಿಂದ ಹಣ ಬಿಡುಗಡೆಯಾಗದಿರುವುದು.

....

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದ ನಗರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಎ.ಡಿ.ಬಿ. ಸಂಸ್ಥೆಯಿಂದ ಹಣಕಾಸು ಸೌಲಭ್ಯ ಪಡೆದುಕೊಂಡು ಆ ನಗರದ ನಾಗರಿಕರ ಜೊತೆಗೆ ಈಗಾಗಲೇ ಸರ್ಕಾರದ ಸಚಿವರಾದಿಯಾಗಿ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳೂ ಚರ್ಚೆ ಮಾಡಿ ಭರವಸೆ ಕೊಟ್ಟ ಪ್ರಕಾರ ಯೋಜನೆಗಳಿಗೆ ಒದಗಿಸುವ ಹಣಕಾಸು ಈಗ ಕಡಿತಗೊಳ್ಳುತ್ತದೆಂದು ತಿಳಿದುಬಂದಿದೆ. ಇದು ಆ ಭಾಗದ ಜನರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ. ದಯವಿಟ್ಟು ತಾವು ಈ ವಿಷಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಆ ಭಾಗದ ನಾಗರಿಕರಿಗೆ ಅನ್ಯಾಯವಾಗದ ಹಾಗೆ ನೋಡಿಕೊಂಡು, ಆ ನಾಗರಿಕರಿಗೆ ಈಗಾಗಲೇ ತಿಳಿಸಿದ ಪ್ರಕಾರ ಹಣಕಾಸನ್ನು ಜೋಡಿಸಿ ಅವರಿಗೆ ಭರವಸೆ ಕೊಟ್ಟಿರುವ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೇಕಾಗುವ 700 ಮಿಲಿಯನ್ ಡಾಲರ್ ಹಣಕಾಸಿನ ಸಹಾಯವನ್ನು ಎ.ಡಿ.ಬಿ. ಬ್ಯಾಂಕ್‌ನಿಂದ ಕೂಡಲೇ ತೆಗೆದುಕೊಂಡು ಈ ಯೋಜನೆಯ ಕಾರ್ಯಾನುಷ್ಠಾನವನ್ನು ತೀವ್ರವಾಗಿ ಪ್ರಾರಂಭಿಸಲು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಉತ್ತರ ಕರ್ನಾಟಕದ ನಗರಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವ ಯೋಜನೆಗಳಿಗೆ ಎ.ಡಿ.ಬಿ. ಯಿಂದ ಹಣಕಾಸು ಒದಗಿಸಲು ಆಗಿರುವ ಅಂತಿಮ ತೀರ್ಮಾನವನ್ನು ಈಗ ಕಡಿತಗೊಳಿಸಲು ಯತ್ನಿಸುತ್ತಿರುವುದರಿಂದ ಆ ಭಾಗದ ನಾಗರೀಕರಿಗೆ ಅನ್ಯಾಯವಾಗುವುದನ್ನು ತಪ್ಪಿಸುವ ಸಲುವಾಗಿ ಈ ಹಿಂದೆ ನೀಡಿದ ಭರವಸೆಯಂತೆ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೇಕಾಗುವ 700 ಮಿಲಿಯನ್ ಡಾಲರ್ ಹಣಕಾಸಿನ ಸಹಾಯವನ್ನು ಎ.ಡಿ.ಬಿ. ಯಿಂದ ಕೂಡಲೇ ತೆಗೆದುಕೊಂಡು ತೀವ್ರವಾಗಿ ಪ್ರಾರಂಭಿಸುವಂತೆ ಸೂಚನಾ ಪತ್ರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಿರುತ್ತಾರೆ.

ಉತ್ತರ ಕರ್ನಾಟಕದ ಆಯ್ದ ಮುಖ್ಯ ಪಟ್ಟಣಗಳಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ:ಯುಡಿಡಿ 82 ಪಿಆರ್‌ಜೆ 2003, ದಿನಾಂಕ: 17-09-2003ರ ಪ್ರಕಾರ ಕೆ.ಯು.ಐ.ಡಿ.ಎಫ್.ಸಿ.ಯನ್ನು ನೋಡಲ್ ಸಂಸ್ಥೆಯನ್ನಾಗಿ ನೇಮಿಸಿರುತ್ತದೆ.

ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ಸಹಾಯದೊಂದಿಗೆ ಉತ್ತರ ಕರ್ನಾಟಕದ ಈ ಯೋಜನೆಯಡಿಯಲ್ಲಿ 25 ಆಯ್ಕೆಮಾಡಲಾಗಿರುವ ಪಟ್ಟಣಗಳಾವುವೆಂದರೆ; ಬಾದಾಮಿ, ಬೀದರ್, ಬಿಜಾಪುರ, ಬೆಳಗಾಂ, ಬಳ್ಳಾರಿ, ಚಾಮರಾಜನಗರ, ದಾವಣಗೆರೆ, ಗದಗ-ಬೆಟಗೇರಿ, ಗಂಗಾವತಿ, ಗೋಕಾಕ್, ಗುಲಬರ್ಗಾ, ಹಾವೇರಿ, ಹೊಸಪೇಟೆ, ಹುಬ್ಬಳ್ಳಿ-ಧಾರವಾಡ, ಜಮಖಂಡಿ, ಕೊಪ್ಪಳ, ರಬಕವಿ-ಬನಹಟ್ಟಿ, ರಾಯಚೂರು, ರಾಣೆಬೆನ್ನೂರು, ಯಾದಗೀರ್, ಬಸವಕಲ್ಯಾಣ, ಸಿಂಧನೂರು, ಶಹಾಬಾದ್, ನಿಪ್ಪಾಣಿ ಮತ್ತು ಇಳಕಲ್.

ಕೆ.ಯು.ಐ.ಡಿ.ಎಫ್.ಸಿ.ಯು ಮೆ:ವಿಲ್ಬರ್ ಸ್ಮಿತ್ ಅಸೋಸಿಯೇಟ್ಸ್‌ರವರನ್ನು ಯೋಜನೆಯ ಸಮಾಲೋಚಕರನ್ನಾಗಿ ನೇಮಿಸಿರುತ್ತದೆ. ಈ ಕೆಳಕಂಡ ಆಧ್ಯತೆಯ ಕಾಮಗಾರಿಗಳನ್ನು ಮಾತ್ರ ಹಂತಗಳಲ್ಲಿ ತೆಗೆದುಕೊಳ್ಳಲಾಗುವುದು.

ಮೊದಲನೆಯ ಹಂತ :

* ಕುಡಿಯುವ ನೀರಿನ ವ್ಯವಸ್ಥೆ
* ಒಳ ಚರಂಡಿ ನೀರಿನ ವ್ಯವಸ್ಥೆ
* ಮಳೆ ನೀರಿನ ಚರಂಡಿಗಳು
* ಘನತ್ಯಾಜ್ಯ ವಸ್ತುಗಳ ನಿರ್ವಹಣೆ
* ಬಡತನ ನಿರ್ಮೂಲನಾ ಕಾರ್ಯಕ್ರಮ (ಕೊಳಚೆ ಪ್ರದೇಶ ಅಭಿವೃದ್ಧಿ, ಕಡಿಮೆ ವೆಚ್ಚದ ಶೌಚಾಲಯ, ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮ ಇತ್ಯಾದಿ)

ಎರಡನೇ ಹಂತ:

* ನಗರ ರಸ್ತೆಗಳು
* ಪೌರ ಸಭೆಯ ಇತರೆ ಮೂಲಸೌಕರ್ಯ

(ಅಗ್ನಿ ಶಾಮಕ ಸೇವೆ, ಪ್ರವಾಸೋದ್ಯಮ ಅಭಿವೃದ್ಧಿ, ಕೆರೆ ಅಭಿವೃದ್ಧಿ ಇತ್ಯಾದಿಗಳು)

ಈ ಯೋಜನೆಯಲ್ಲಿ ಪುರಸಭಾ ಸುಧಾರಣೆ ಮತ್ತು ಸಾಮರ್ಥ್ಯನ ಅಭಿವೃದ್ಧಿ ಸೇರಿರುತ್ತದೆ.

ಸಮಾಲೋಚಕರು ಆಯ್ದ ಪಟ್ಟಣಗಳ ಒಟ್ಟು ಅಗತ್ಯತೆಗಳನ್ನು ಹಾಗೂ ಪಟ್ಟಣಗಳ ಬೋರೋವಿಂಗ್ ಕೆಪಾಸಿಟಿ / ರೀಪೇಮೆಂಟ್ ಕೆಪ್ಯಾಸಿಟಿ (Borrowing capacity / Re payment capacity) ಗಳನ್ನು ಅಂದಾಜು ಮಾಡಿರುತ್ತಾರೆ. ಈ ಆಧಾರದ ಮೇಲೆ ಪ್ರತಿಯೊಂದು ಪಟ್ಟಣಗಳಲ್ಲಿ ಪ್ರಾತಿನಿಧ್ಯತೆ ಮೇರೆಗೆ ತೆಗೆದುಕೊಳ್ಳಬಹುದಾದ ಕಾಮಗಾರಿಗಳನ್ನು ಪಟ್ಟಿ ಮಾಡಲಾಯಿತು. ಈ ಎಲ್ಲಾ ಪಟ್ಟಣಗಳ ಎಲ್ಲಾ ಕಾಮಗಾರಿಗಳನ್ನು ವೆಚ್ಚವನ್ನು ಕೂಡ ಅಂದಾಜಿಸಿ ನಗರ ಮಟ್ಟದ ಯೋಜನೆಯನ್ನು ಸಮಾಲೋಚಕರಿಂದ ತಯಾರಿಸಲಾಗಿದೆ. ಈ ಹಂತದಲ್ಲಿ ಯೋಜನೆಯ ಎಲ್ಲಾ ನಗರಗಳಲ್ಲಿ ಕಾರ್ಯಾಗಾರಗಳನ್ನು ನಡೆಸಲಾಯಿತು. ಇದಾದ ನಂತರ ಸಚಿವ ಸಂಪುಟವು ಯೋಜನಾ ಗಾತ್ರ ಮತ್ತು ಒಟ್ಟು ಮೊತ್ತವನ್ನು U.S $ 400 ಮಿಲಿಯನ್‌ಗೆ ನಿಗದಿಗೊಳಿಸಿ ಯೋಜನೆಯನ್ನು ಹಾಗೂ ಯೋಜನೆಗಾಗಿ ರಚಿಸಲಾದ ಅಧಿಕಾರಸ್ಥ ಮಂಡಳಿಯನ್ನು (Empowered Committee) ಅನುಮೋದಿಸಿದೆ.

ಇದರಿಂದಾಗಿ ರಸ್ತೆಗಳ ಅಭಿವೃದ್ಧಿಗೆ ಮೊದಲ ಅಂದಾಜನ್ನು ಉಳಿಸಿಕೊಳ್ಳುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ ಯೋಜನೆಯನ್ನು ಹಣಕಾಸಿನ ನೆರವಿಗಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ (ಎ.ಡಿ.ಬಿ) ಮುಂದಿಡಲಾಗಿದೆ. ಅಂತಿಮ ವರದಿಯನ್ನು ಬ್ಯಾಂಕ್ ಪರಿಶೀಲಿಸಿ ಸಾಲದ ಪ್ರಮಾಣವನ್ನು ನಿಗದಿಮಾಡಲಾಗಿದೆ. ಈ ಸಾಲವನ್ನು ಸಂಬಂಧಪಟ್ಟ ಕ್ಷೇತ್ರದ ಸಾಲದಡಿಯಲ್ಲಿ 8 ವರ್ಷಗಳ ಅವಧಿಯೊಂದಿಗೆ ತೆಗೆದುಕೊಳ್ಳಲಾಗುತ್ತದೆ.

ಯೋಜನಾ ಸಾಲದ ಮಾತುಕತೆಗಳು ಮೇ ಅಥವಾ ಜೂನ್–2006 ರಂದು ನಡೆಯುವ ಸಂಭವವಿದ್ದು, ತದನಂತರ ಸಾಲ ಪತ್ರಗಳಿಗೆ ಸಹಿ ಹಾಕಲಾಗುವುದು. ಈ ಒಪ್ಪಂದವನ್ನು ಪ್ರಸಕ್ತ ವರ್ಷ ಅಂದರೆ 2006ನೇ ಇಸವಿಯಲ್ಲಿ ಜಾರಿಗೊಳಿಸಲಾಗುವುದು.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಮುಖ್ಯಮಂತ್ರಿಯವರೆ ನಮ್ಮ ಪ್ರಶ್ನೆಗೆ ಸರಿಯಾದ ಉತ್ತರವಾಗಲಿಲ್ಲ. ಈ ಯೋಜನೆಯನ್ನು ಕೈಗೆತ್ತಿಕೊಂಡಾಗ 20 ನಗರಗಳಿಗೆ 700 ಮಿಲಿಯನ್ ಡಾಲರ್ಸ್ ಎಂದು ಒಂದು ನಿರ್ಣಯಕ್ಕೆ ಬಂದಿತ್ತು. ಮುಂದೆ ಐದು ನಗರಗಳನ್ನು ಹೆಚ್ಚು ಕೂಡಿಸಿದರು. ಆದರೆ ಸಾಲವನ್ನು 400 ಮಿಲಿಯನ್ ಡಾಲರ್ಸ್ ತೆಗೆದುಕೊಳ್ಳಬೇಕೆಂದು ಕಡಿತಗೊಳಿಸಿದರು. ಇದರಿಂದ ಉತ್ತರ ಕರ್ನಾಟಕದ ನಗರಗಳಿಗೆ ಬಹಳಷ್ಟು ಅನ್ಯಾಯವಾಗುತ್ತದೆ. ನಮ್ಮ ಗದಗಿನದನ್ನೇ ತೆಗೆದುಕೊಳ್ಳಿ. ಮಾನ್ಯ ಮೋರೆಯವರು ಸಚಿವರಾಗಿ ತಮ್ಮೆಲ್ಲಾ ಸಿಬ್ಬಂದಿಯನ್ನು ಕರೆದುಕೊಂಡು ಬಂದಿದ್ದರು. ಅಲ್ಲಿ 170 ಕೋಟಿ ರೂಪಾಯಿ ನಿಮ್ಮ ಊರಿಗೆ ಯೋಜನೆಯಲ್ಲಿ ಮಂಜೂರಾಗುತ್ತದೆಂದು ಭರವಸೆಯನ್ನು ಕೊಟ್ಟು ಬಂದರು. ಮರುದಿವಸ ಅದೆಲ್ಲಾ ಪತ್ರಿಕೆಗಳಲ್ಲಿ ಬಂತು. ಈಗ ಅದನ್ನು 98 ಕೋಟಿ ರೂ.ಗೆ ಇಳಿಸಿದ್ದಾರೆ. ಏಕೆ ಸ್ವಾಮಿ ಅದನ್ನು ಇಳಿಸಬೇಕು? ನಾವೇನು ಸೆಕೆಂಡರಿ ಸಿಟಿಜನ್ಸ್ ಇಲ್ಲಿ ಕರಾವಳಿ ಪಟ್ಟಣವನ್ನು ತೆಗೆದುಕೊಂಡಿದ್ದಾರೆ. 9 ಪಟ್ಟಣದಲ್ಲಿ 930 ಕೋಟಿ ರೂಪಾಯಿ ಯೋಜನೆಯನ್ನು ನೀವು ಈಗ ಜಾರಿಗೊಳಿಸುತ್ತಿದ್ದೀರಿ. ಕೆಲಸ ಮುಗಿಯುವ ಹಂತದಲ್ಲಿದೆ. 930 ಕೋಟಿ ರೂಪಾಯಿಗೆ ಪಾಪ್ಯುಲೇಷನ್ 8 ಲಕ್ಷದ 85 ಸಾವಿರ. 18 ನೂರು ಕೋಟಿಗೆ ನೀವೇನು ಮಾಡಿದ್ದೀರಿ ಅದಕ್ಕೆ ಪಾಪ್ಯುಲೇಷನ್ 14 ಲಕ್ಷ. ನಮಗೆ 43.34 ಲಕ್ಷ per thousand population ಬರುತ್ತದೆ. ಕರಾವಳಿ ನಗರಗಳಿಗೆ 105.03 ಲಕ್ಷ ಬರುತ್ತದೆ. ಅವರದ್ದರ ಅರ್ಧವನ್ನು ತೆಗೆದುಕೊಂಡು ನಾವೇಕೆ ಸಮಾಧಾನ ಪಡಬೇಕು? ದಯವಿಟ್ಟು ಆ 700 ಮಿಲಿಯನ್ ಡಾಲರ್ಸ್ ಮೊದಲು ಏನು ನಿರ್ಣಯವಾಗಿತ್ತು ಆ ನಿರ್ಣಯವನ್ನು ಅನುಷ್ಠಾನಗೊಳಿಸಿ. ಏಕೆಂದರೆ ಅನ್ಯಾಯವಾಗಬಾರದು. ನಿಮ್ಮ ಪಕ್ಷಕ್ಕಂತೂ ಆ ಭಾಗದ ನಗರಗಳಿಂದ ಬಹಳಷ್ಟು ಬೆಂಬಲ ಸಿಕ್ಕಿರುವುದು. ಮಾನ್ಯ ಯಡಿಯೂರಪ್ಪನವರು ಹಣಕಾಸು ಸಚಿವರಾದಾಗ ಈ ಅನ್ಯಾಯವಾಯಿತು ಎಂದು ರೆಕಾರ್ಡ್‌ನಲ್ಲಿ ಹೋಗಬಾರದು. ನಮ್ಮ ಕಡೆಯೇ ನೀವು ಈ ರೀತಿ ಮಾಡಿದ್ದೀರಿ. ಆದ್ದರಿಂದ ದಯವಿಟ್ಟು ಈ ಅನ್ಯಾಯವನ್ನು ನಾನು ಸರಿಪಡಿಸುತ್ತೇನೆ ಎಂದು ನೀವು ಹೇಳಬೇಕು. 700 ಮಿಲಿಯನ್ ಡಾಲರ್ಸ್ ಸಹ ಕಡಿಮೆಯೆ. ಆದರೆ ಏನೋ ಒಂದು ನಿರ್ಣಯವಾಗಿದೆ ಒಂದು ಹಂತದಲ್ಲಿ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈಗ ಅದನ್ನೇನೂ ಹೆಚ್ಚು ಮಾಡಿ ಎಂದು

ಹೇಳುವುದಿಲ್ಲ. ದಯವಿಟ್ಟು ಮೊದಲು ಏನು 700 ಮಿಲಿಯನ್ ಡಾಲರ್ಸ್ ಎಂದು ಮಾಡಿದ್ದಿರಿ ಅದನ್ನು ಕಡಿಮೆ ಮಾಡಬೇಡಿ. ಅದು 400 ಮಿಲಿಯನ್ ಡಾಲರ್ಸ್ ಆಗುತ್ತದೆಂದು ಗೊತ್ತಾದಕೂಡಲೇ ನಾನು ಒಂದು ಲೆಟರ್‌ನ್ನು ಕೊಟ್ಟಿದ್ದೆ. ಮಾನ್ಯ ಸಿಂಧ್ಯಾರವರು ಅದನ್ನು 460 ಮಿಲಿಯನ್ ಡಾಲರ್ಸ್ ಮಾಡಿದರು ಎಂದು ನನಗೆ ಅನ್ ಅಫೀಶಿಯಲ್ ಆಗಿ ತಿಳಿದಿದೆ. ಈಗ ತಾವು ಬಂದಿದ್ದೀರಿ, ಅದನ್ನು 700 ಮಿಲಿಯನ್ ಡಾಲರ್ಸ್‌ಗೆ ಏರಿಸಿ ಈ ಎಲ್ಲಾ ನಗರಗಳ ಸಂಪೂರ್ಣ ಅಭಿವೃದ್ಧಿಯಾಗಲು ಸಹಾಯ ಮಾಡಬೇಕು. ತಾವೇನು ಅಲ್ಲಿ ಹೋಗಿ ಭರವಸೆ ಕೊಟ್ಟು ಬಂದಿದ್ದೀರಿ ಅದನ್ನು ಮಾಡಬೇಕು. ಮಾನ್ಯ ಮೋರೆಯವರೇನು ಅಲ್ಲಿಗೆ ಬಂದು 170 ಕೋಟಿಯನ್ನು ಗದಗ್ ಬೆಟಗೇರಿಗೆ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ, ನಾನೇನು ಅದನ್ನು ಹೇಳಿ ಎಂದು ಹೇಳಿಲ್ಲ. ನೀವು ಅಲ್ಲಿ 100 ಕೋಟಿ ರೂ. ಖರ್ಚು ಮಾಡುತ್ತೇವೆಂದು ಹೇಳಿದ್ದರೆ ಅಷ್ಟಕ್ಕೆ ನಾವು ಸಮಾಧಾನವಾಗುತ್ತಿದ್ದೆವು. ಆದರೆ 170 ಕೋಟಿ ಖರ್ಚು ಮಾಡುತ್ತೇವೆಂದು ಮೊದಲು ಹೇಳಿ ಈಗ 100 ಕೋಟಿ ರೂ. ಮಾಡುತ್ತೇವೆಂದರೆ ಅದಕ್ಕೆ ಮಾತ್ರ ಜನರಿಗೆ ಸಮಾದಾನವಾಗುವುದಿಲ್ಲ. ದಯವಿಟ್ಟು ನೀವು ಏನೇನು ಭರವಸೆಯನ್ನು ಯಾವ್ಯಾವ ನಗರಕ್ಕೆ ಹೋಗಿ ಕೊಟ್ಟು ಬಂದಿದ್ದೀರಿ ಆ ಅಷ್ಟು ಹಣವನ್ನು ಜೋಡಿಸಿ ಕೂಡಲೇ ಕೆಲಸವನ್ನು ಕೈಗೊಳ್ಳುತ್ತೇವೆ ಎಂಬ ನಿರ್ಣಯಕ್ಕೆ ತಾವು ಬರಬೇಕು. ಕಳೆದ ಎರಡು ವರ್ಷದಿಂದ ಇದು ನಡೆಯುತ್ತಿದೆ. ಟೈಮ್ ಹೆಚ್ಚಾದಂತೆ ಕಾಸ್ಟ್ ಎಸ್ಕಲೇಷನ್ ಆಗುತ್ತಾ ಹೋಗುತ್ತದೆ. ಬೇಗ ನಿರ್ಣಯ ಮಾಡಿ ಎಂದು ಹೇಳಿ. ಹಣಕಾಸು ಇಲಾಖೆಯವರು ಏಕೆ ಈ ರೀತಿ ಮಾಡುತ್ತಾರೊ ಏನೋ. ಈಗ ಮತ್ತೊಂದು ಪ್ರಪೋಸಲ್‌ನ್ನು ಸಾಲವೇ ಬೇಡ ನಾವೇ ಏನಾದರೂ ಹಣಕಾಸಿನ ವ್ಯವಸ್ಥೆ ಮಾಡುತ್ತೇವೆಂದು ಕಳುಹಿಸಿದ್ದಾರಂತೆ. ಹಣ ಉಳಿದಿದೆಯೆಂದು ಆ ರೀತಿ ಕಳುಹಿಸಿದ್ದಾರಂತೆ. ದಯವಿಟ್ಟು ಸಾಲ ತೆಗೆದುಕೊಳ್ಳಿ. ಸೋವಿ ಬಡ್ಡಿಯೊಳಗಾಗುತ್ತದೆ. ಮುಂದೆ 25–30 ವರ್ಷದಲ್ಲಿ ರೀಪೇಮೆಂಟ್ ಆಗುತ್ತದೆ. ಆಗ Rupee value will go down. ರೀಪೇಮೆಂಟ್ ಬಹಳ ಅನುಕೂಲವಾಗುತ್ತದೆ. ಅವರ ಮಾತನ್ನು ನೀವು ಕೇಳಬೇಡಿ. ನೀವು ಹಣಕಾಸನ್ನು ಎಷ್ಟೆಷ್ಟು ಸಾಧ್ಯವಾಗುತ್ತದೋ ಅಷ್ಟನ್ನು ತೆಗೆದುಕೊಳ್ಳಿ. ಅಷ್ಟನ್ನು ತೆಗೆದುಕೊಂಡು ಹಿಂದಿನ ಸರ್ಕಾರದ ಸಚಿವರು ಏನೇನು ಭರವಸೆಯನ್ನು ಕೊಟ್ಟಿದ್ದಾರೆ ಅದನ್ನು ಈಡೇರಿಸಿ. ಪರವಾಗಿಲ್ಲ ಮಾನ್ಯ ಯಡಿಯೂರಪ್ಪನವರು ನಮ್ಮ ಬೀಗತನ ಮಾಡಿದ್ದಕ್ಕೆ ಆ ಭಾಗದಲ್ಲಿನ ಜನರು ಬೆಂಬಲ ಮಾಡಿದ್ದಕ್ಕೆ ಕೃತಜ್ಞತೆಯನ್ನು ವ್ಯಕ್ತ ಮಾಡಿದರು ಎಂಬ ಭಾವನೆ ಆ ಭಾಗದಲ್ಲಿ ಬರುತ್ತದೆ. ಆದ್ದರಿಂದ ಅದರ ಬಗ್ಗೆ ದಯವಿಟ್ಟು ಇವತ್ತು ಭರವಸೆಯನ್ನು ತಾವು ಕೊಡಬೇಕು.

ಶ್ರೀ ಎಸ್.ಆರ್. ಮೋರೆ (ಧಾರವಾಡ) : ಮಾನ್ಯ ಅಧ್ಯಕ್ಷರೆ, ಇದು 700 ಮಿಲಿಯನ್ ಡಾಲರ್ಸ್ ಇದ್ದದ್ದು 460 ಮಿಲಿಯನ್ ಡಾಲರ್ಸ್ ಆಗಿತ್ತು. ಮುಂದೆ ಕ್ಯಾಬಿನೆಟ್‌ನೊಳಗೆ ಅದು 460 ಮಿಲಿಯನ್ ಡಾಲರ್ ಎಂದರೆ 1800 ಕೋಟಿ ರೂಪಾಯಿಗಳಿಗೆ ಆಯಿತು. ಆ ಇತ್ತೀಚೆಗೆ ಮತ್ತೆ ಹಣಕಾಸು ಇಲಾಖೆಯವರು ನಮ್ಮ ಹತ್ತಿರ ದುಡ್ಡಿದೆ ಎ.ಡಿ.ಬಿ.ಯವರ ಸಾಲವೇ ಬೇಡವೆಂದು ಹೇಳುತ್ತಿದ್ದಾರಂತೆ. ಅದಕ್ಕೋಸ್ಕರ ಮಾನ್ಯ ಡಿ.ಆರ್. ಪಾಟೀಲರೇನು ಬೇಡಿಕೆ ಇಟ್ಟಿದ್ದಾರೆ ಅದಕ್ಕೆ ನಮ್ಮ ರಿಸೋರ್ಸ್‌ನಿಂದ ಮಾಡಬಹುದು. ನಮ್ಮ ಆರ್ಥಿಕ ಇಲಾಖೆಯವರು ಸಾಕಷ್ಟು ದುಡ್ಡಿರುವುದರಿಂದ

ನಮ್ಮ ರಾಜ್ಯ ಸರ್ಕಾರವೇ 70 ಪರ್‌ಸೆಂಟ್ ತುಂಬುತ್ತೇವೆ, ಇನ್ನು 30 ಪರ್‌ಸೆಂಟ್ ಎ.ಡಿ.ಬಿ. ಹಣ ಸಾಕು ಎಂದು ಈಗ ಹೇಳುತ್ತಾರೆ. ಸರ್ಕಾರದಲ್ಲಿ ಈಗಾಗಲೇ ಐದು ಸಾವಿರ ಕೋಟಿ ರೂ. ಇರುವುದರಿಂದ, ಉತ್ತರ ಕರ್ನಾಟಕಕ್ಕೆ ಇದು 25 ನಗರಗಳಿಗೆ ಬಹಳ ಪ್ರಾಮುಖ್ಯವಾದದ್ದು. ಈಗಾಗಲೇ ಎ.ಡಿ.ಬಿ.–1 ಮತ್ತು 2 ಬಹಳ ಯಶಸ್ವಿಯಾಗಿದೆ. ಎ.ಡಿ.ಬಿ.–2 ಮುಗಿಯುವ ಹಂತದಲ್ಲಿದೆ. ಯಾವಾಗ ಈ ಕೆಲಸ ಆರಂಭವಾಗುತ್ತದೆ, ಶೆಡ್ಯೂಲ್ ಪ್ರಕಾರ ಈಗಾಗಲೇ ಇದನ್ನು ನಾವು ಲಾಂಚ್ ಮಾಡಬೇಕಾಗುತ್ತದೆ. ಏಕೆ ಇನ್ನೂ ಲಾಂಚ್ ಆಗಿಲ್ಲ ಎಂಬುದನ್ನು ದಯಮಾಡಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮೋರೆಯವರು ಹೋದ ವರ್ಷ ನಮ್ಮ ರಾಯಚೂರಿಗೆ ಬಂದಿದ್ದರು. ನವೆಂಬರ್‌ನಲ್ಲಿ ಕೆಲಸ ಪ್ರಾರಂಭವಾಗುತ್ತದೆಂದು ಹೇಳಿ ಬಂದಿದ್ದರು. ಆದರೆ ಸತತವಾಗಿ ಎರಡು ವರ್ಷದಿಂದ ಈ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಏನು 400 ಮಿಲಿಯನ್ ಡಾಲರ್ಸ್ ಹಣವನ್ನು ಕೊಟ್ಟಿದೆ, ಅದು 1800 ಕೋಟಿ ರೂ. ಆಗುತ್ತದೆ. ಇದು 25 ಪಟ್ಟಣಗಳಿಗೆ, ಕಳೆದ ಎರಡು ವರ್ಷಗಳಿಂದ ಅದರ ಬಗ್ಗೆ ಹೇಳುತ್ತಾ ಬಂದಿದ್ದಾರೆ. ಆದರೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿಲ್ಲ. ಈಗಲಾದರೂ ಮಾನ್ಯ ಯಡಿಯೂರಪ್ಪನವರು ಹಣಕಾಸು ಸಚಿವರಾಗಿದ್ದಾರೆ, ಉತ್ತರ ಕರ್ನಾಟಕ ಬಹಳಷ್ಟು ಅಭಿವೃದ್ಧಿಯಾಗಿಲ್ಲ, ಎಲ್ಲಾ ಪಟ್ಟಣಗಳಿಗೆ ಅಭಿವೃದ್ಧಿಯಾಗಲು ಅವಕಾಶ ಮಾಡಿಕೊಡಬೇಕು. ಈ ಕೆಲಸಕ್ಕೆ ಕೇವಲ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ಕೊಡಬೇಕೋ ಅಥವಾ ಸರ್ಕಾರ ಕೊಡಬೇಕೋ ಎಂಬ ಗೊಂದಲಮಯ ವಾತಾವರಣದಲ್ಲಿ ಕಡತ ಅಲ್ಲೇ ನಿಂತಿದೆ. ಅದು ಏಕೆ ಅಲ್ಲಿ ನಿಂತಿರಬೇಕು? ಇದು ತಕ್ಷಣವೆ ಕ್ಲಿಯರ್ ಆಗಬೇಕು. 25 ಪಟ್ಟಣಗಳಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕೊಡುವಂಥ ಬಹುದೊಡ್ಡವಾದ ಯೋಜನೆ ಇದು. ಈಗಾಗಲೇ ಹಳೆ ಮೈಸೂರಿನಲ್ಲಾಗಿದೆ, ಕರಾವಳಿ ಪ್ರದೇಶದಲ್ಲಾಗಿದೆ, ಅಲ್ಲಿ ಸಂಪೂರ್ಣವಾಗುತ್ತಾ ಬಂದಿದೆ. ನಮ್ಮ ಉತ್ತರ ಕರ್ನಾಟಕದ ಬಗ್ಗೆ ಮಲತಾಯಿಧೋರಣೆ ಏಕೆ? ಇದು ಆಗಬಾರದು. ಈ ಕೆಲಸ ತಕ್ಷಣ ಆಗುವುದರಿಂದ ಅಲ್ಲಿದ್ದಂಥ ಎಲ್ಲಾ ಜನರಿಗೆ ಮೂಲಭೂತ ಸೌಲಭ್ಯಗಳು ಸಿಗುತ್ತವೆ. ಮಾನ್ಯ ಮೋರೆಯವರಂತೂ ಮಾಡಲಿಲ್ಲ, ಈಗ ನಮ್ಮ ಸರ್ಕಾರ ಬಂದಿದೆ, ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಯಡಿಯೂರಪ್ಪನವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಆ ಭಾಗದ ಎಲ್ಲಾ ಶಾಸಕರು ಇದರ ಬಗ್ಗೆ ಕಳಕಳಿ ಹೊಂದಿರುವುದು ಸ್ವಾಭಾವಿಕ. ಈ ಮನೆಯಲ್ಲಿ ಒಂದು ಭರವಸೆಯನ್ನು ಕೊಡಲು ನಾನು ಇಷ್ಟಪಡುತ್ತೇನೆ. ಎಂಪವರ್ಡ್ ಕಮಿಟಿಯವರು ಈಗಾಗಲೇ 700 ಮಿಲಿಯನ್ ಡಾಲರ್ಸ್‌ನ ಬದಲು 400 ಮಿಲಿಯನ್ ಡಾಲರ್ಸ್‌ಗೆ ಇದನ್ನು ನಿಗದಿಗೊಳಿಸಿ ಈ ಯೋಜನೆಯನ್ನು ಒಂದು ಹಂತಕ್ಕೆ ತರುವಂಥ ಪ್ರಯತ್ನವಾಗಿದೆ. ಬಹಳ ಮುಖ್ಯವಾಗಿರುವುದು ಈ ರೀತಿ ನಾವು ಸಾಲವನ್ನು ಪಡೆದಾಗ, ಅತಿ ಕಡಿಮೆ ಬಡ್ಡಿಗೆ ಸಾಲ ಸಿಕ್ಕಿದರೂ ಸಹ, ನಮ್ಮ ಕಾಲ ಮೇಲೆಯೇ ನಾವು ನಿಲ್ಲುವಂಥ ಹಣಕಾಸಿನ

ಸ್ಥಿತಿ ಸುಧಾರಣೆಯಾಗುತ್ತದೆ ಎಂಬ ಮಾತು ಕೇಳಿಬರುತ್ತಿದೆ. ಇದನ್ನು ನಾವೆಲ್ಲರೂ ಸಮಾಧಾನ ತಂದುಕೊಳ್ಳುವುದಾಗುತ್ತದೆ. ಅದರ ಅರ್ಥ ಈ ಸಾಲವನ್ನು ತರಬಾರದು ಎಂದು ನಾನು ಹೇಳುವುದಿಲ್ಲ. ಅತ್ಯಂತ ಕಡಿಮೆ ಬಡ್ಡಿಗೆ ಈ ಹಣ ಸಿಗುತ್ತಿರುವುದರಿಂದ ರಾಜ್ಯದ ಅನೇಕ ಜ್ವಲಂತ ಸಮಸ್ಯೆಗಳಿಗೆ ನಾವು ಪರಿಹಾರ ಹುಡುಕಬೇಕಾಗಿದೆ. ಇನ್ನೂ ಅನೇಕ ಕಾಮಗಾರಿಗೆ ಹಣವನ್ನು ತೊಡಗಿಸಬೇಕಾಗಿರುವ ಈ ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ನಮ್ಮ ರಾಷ್ಟ್ರಪತಿಗಳಾದ ಮಾನ್ಯ ಡಾ: ಅಬ್ದುಲ್ ಕಲಾಂ ರವರೇನು ಕುಡಿಯುವ ನೀರು ಮುಂತಾದ ಬಗ್ಗೆ ಹೇಳಿದರು, ಅದರ ಬಗ್ಗೆ ಅವರದ್ದೇ ಆದ ವಿಚಾರಧಾರೆಯೇನಿದೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಡಾ: ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಇದೊಂದು ಬಹಳ ಒಳ್ಳೆಯ ಅವಕಾಶವೆಂದು ನಾನಾದರೂ ಭಾವಿಸುತ್ತೇನೆ. ಆದ್ದರಿಂದ ನಿಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡು ನಾನು ಮತ್ತೊಮ್ಮೆ ಇಲಾಖೆಯ ಮತ್ತು ಎಂಪವರ್ಡ್ ಕಮಿಟಿ ಒಟ್ಟಿಗೆ ಸೇರಿ ಚಿಂತನೆ ಮಾಡಿ, ಇದು ಕೇವಲ ಭರವಸೆಯಲ್ಲ, ಎಷ್ಟು ಸಾಧ್ಯವೋ ಅಷ್ಟು ಬೇಗ ಇದಕ್ಕೆ ಬೇಕಾದಂಥ ಫಾರ್ಮಾಲಿಟೀಸನ್ನು ಮುಗಿಸಿ ಕೆಲಸವನ್ನು ಅನುಷ್ಠಾನಗೊಳಿಸಲು ಏನೇನು ಬೇಕೊ ಅದನ್ನೆಲ್ಲ ಮಾಡುತ್ತೇನೆ. ಇದು ಮಾತ್ರವಲ್ಲ, ಇವತ್ತು ನಾನು ಹಣಕಾಸು ಸಚಿವನಾಗಿ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಮಾತನಾಡುತ್ತೇನೆ. ಇವು ಟೈಮ್ ಬಾಂಡ್ ಪ್ರೋಗ್ರಾಮ್‌ಗಳಾಗಬೇಕು. ಒಂದು ಸಲ ಹಣವನ್ನು ಬಡ್ಡಿ ಕೊಟ್ಟು ಸಾಲ ತಂದಮೇಲೆ ನಿಗದಿತ ಅವಧಿಯೊಳಗಾಗಿ ಆ ಕೆಲಸ ಪೂರ್ತಿಯಾಗಬೇಕು. ಕ್ವಾಲಿಟಿ ವರ್ಕ್ ಆಗಬೇಕು, ಮತ್ತು ಅದು ಫಲಾನುಭವಿಗಳಿಗೆ ತಲುಪಬೇಕು. ಈ ಹಿನ್ನೆಲೆಯಲ್ಲಿ ನಾನು ಈ ಕಡೆ ವಿಶೇಷವಾದ ಗಮನವನ್ನು ತೆಗೆದುಕೊಳ್ಳುತ್ತೇನೆ ಮತ್ತು ಸಂಬಂಧಪಟ್ಟ ಈ ಭಾಗದ ಶಾಸಕರನ್ನು ಮತ್ತು ಪ್ರಮುಖರನ್ನು ಕರೆಸಿ ನಿಮ್ಮ ಜೊತೆ ಸಮಾಲೋಚನೆ ಮಾಡಿ ಇದಕ್ಕೆ ಆದ್ಯತೆ ಮೇರೆ ನಾನು ಕೆಲಸ ಮಾಡುತ್ತೇನೆ ಎಂಬ ಭರವಸೆಯನ್ನು ನಿಮಗೆ ಕೊಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಸಾರ್, ಈಗ ನೀವು ಸಾಲಕ್ಕೆ ಅಗ್ರಿಮೆಂಟ್ ಮಾಡಿಕೊಳ್ಳಿರಿ. ನಿಮಗೆ ದುಡ್ಡು ಎಷ್ಟು ಬೇಕೋ ಅಷ್ಟನ್ನು ವಿತ್‌ಡ್ರಾ ಮಾಡಿಕೊಳ್ಳುವಿರಂತೆ. ನಾವು ಸಾಲಕ್ಕೆ ಅಗ್ರಿಮೆಂಟ್ ಮಾಡಿಕೊಂಡ ಕೂಡಲೇ, ಅಷ್ಟೂ ಸಾಲ ತೆಗೆದುಕೊಳ್ಳಲೇ ಬೇಕು ಎಂದೇನಿಲ್ಲ. ಬರೀ consultation ಇತ್ಯಾದಿಗಳಿಗೇ ದಯವಿಟ್ಟು ಟೈಮ್ ಹೋಗುವುದು ಬೇಡ. ADB ಯವರು 700 million dollars ಕೊಡಲಿಕ್ಕೆ ಕಬೂಲ್ ಇದ್ದಾರೆ. ನೀವು ಅದಕ್ಕೆ ಅಗ್ರಿಮೆಂಟ್ ಮಾಡಿಕೊಳ್ಳಿರಿ. ಮುಂದೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ವಿತ್‌ಡ್ರಾ ಮಾಡಿಕೊಳ್ಳುತ್ತಾ ಹೋಗಿ. ನಿಮ್ಮ ಹತ್ತಿರ ದುಡ್ಡು ಇದ್ದರೆ, ಕಡಿಮೆ ವಿತ್‌ಡ್ರಾ ಮಾಡಿ. ದುಡ್ಡಿಲ್ಲದಿದ್ದರೆ, ಪೂರ್ತಿ ವಿತ್‌ಡ್ರಾ ಮಡಿ. ಸಚಿವರು, ಕಾರ್ಯದರ್ಶಿಗಳು ಮತ್ತು ಸಂಬಂಧಿತ ಅಧಿಕಾರಿಗಳು ಈ ನಗರಗಳಿಗೆ ಹೋಗಿ ಏನೊಂದು ಭರವಸೆ ಕೊಟ್ಟು ಬಂದಿದ್ದೀರೋ, ಆ ಭರವಸೆಗಳು ಈಡೇರಬೇಕಲ್ಲವೇ? ಅವುಗಳು ಸುಳ್ಳಾಗಬಾರದು. ಅದಕ್ಕೆ ದಯವಿಟ್ಟು ಅಗ್ರಿಮೆಂಟನ್ನು immediate ಆಗಿ ಮಾಡಿಕೊಳ್ಳಿ. ಹಣಕಾಸಿನ ಲಭ್ಯತೆ ನಿಮ್ಮಲ್ಲಿ ಏನೇನಿದೆ ಎಂಬುದನ್ನು ನೋಡಿಕೊಂಡು, ಅದರ ಮೇಲೆ ಸಾಲ ಎಷ್ಟು ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಆಗಾಗ ಅಂದರೆ ವರ್ಷ ವರ್ಷ ನೀವು ನಿರ್ಣಯ ಮಾಡಿ, ಬೇಕೆಂದರೆ ಕಡಿಮೆ ವಿತ್‌ಡ್ರಾ ಮಾಡಿಕೊಳ್ಳುವಿರಂತೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಬಹಳ ಕಡಿಮೆ ದರದಲ್ಲಿ ನಮಗೆ ಸಾಲ ಸಿಗುವುದರಿಂದ ಅದನ್ನು ನಾವು ಮಾನ್ಯ ಪಾಟೀಲರು ಹೇಳಿದಂತೆ ಉಪಯೋಗ ಮಾಡಿಕೊಳ್ಳಬೇಕು. ನಿಮ್ಮಲ್ಲಿ surplus ಇದೆ ಎಂದರೆ ನಮ್ಮಲ್ಲಿ ನೆನೆಗುದಿಗೆ ಬಿದ್ದಿರತಕ್ಕಂಥ ಅನೇಕ project ಗಳಿವೆ, ಅದಕ್ಕೆ ನಾವು ಬೇಕಾದರೆ ಆ ಹಣವನ್ನು ಖರ್ಚು ಮಾಡಿ 4 ವರ್ಷಗಳಲ್ಲಿ complete ಮಾಡತಕ್ಕಂಥ project ಅನ್ನು ಮೂರು ವರ್ಷಗಳಲ್ಲೇ ಅಥವಾ ಎರಡು ವರ್ಷಗಳಲ್ಲೇ ಮಾಡಬಹುದು. ಅದೇ ರೀತಿಯಾಗಿ ಬೇರೆ ಬೇರೆಯ ಅಂದರೆ ಡಾ: ನಂಜುಂಡಪ್ಪ ವರದಿ ಇದೆ, ಅಂತಹದ್ದನ್ನು ಅನುಷ್ಠಾನಕ್ಕೆ ತರುವುದಕ್ಕೆ ನಮ್ಮ ದುಡ್ಡು ಖರ್ಚು ಮಾಡಿ. ಅದನ್ನು ಬಿಟ್ಟು ನಮ್ಮಲ್ಲಿ surplus ಹಣ ಇದೆ, ಇದಕ್ಕೆ ನಾವೇ ಹಣ ಕೊಡುತ್ತೇವೆ ಎಂದು ಹೇಳುವುದು ಸರಿಯಲ್ಲ. ನಾವು ಉಳಿದ irrigation projects ಮತ್ತು ಇತ್ಯಾದಿಗಳಿಗೆ ಎಲ್ಲದಕ್ಕೂ ಕೂಡ ಕಾರ್ಪೋರೇಷನ್‌ನಿಂದ ಸಾಲ ತೆಗೆದುಕೊಳ್ಳುವುದು ಸರಿಯಲ್ಲ. ಅಲ್ಲಿ ಏಳರಿಂದ ಎಂಟು ಪರ್ಸೆಂಟ್‌ವರೆಗೆ ನಾವು ಬಡ್ಡಿಯನ್ನು ಕೊಡುತ್ತೇವೆ. ಅಲ್ಲಿ ಏಳು ಪರ್ಸೆಂಟ್ ಅಥವಾ ಎಂಟು ಪರ್ಸೆಂಟ್ ಬಡ್ಡಿ ಕೊಡುವುದಕ್ಕಿಂತಲೂ ಇಲ್ಲಿ ಕೇವಲ ನಾಲ್ಕು ಪರ್ಸೆಂಟ್ ಬಡ್ಡಿ ಮೇಲೆ ಸಿಗತಕ್ಕಂಥಾದ್ದನ್ನು ನಾವು ತೆಗೆದುಕೊಂಡರೆ ಇದೂ ಅನುಕೂಲವಾಗುತ್ತದೆ, ಅದೂ ಅನುಕೂಲವಾಗುತ್ತದೆ. ಅದಕ್ಕೆ ದಯವಿಟ್ಟು ನೀವು ಆ ಕೊಡತಕ್ಕಂಥ ಸಾಲವನ್ನು ತೆಗೆದುಕೊಳ್ಳಬೇಕು. ಅದರ re-payment time ಕೂಡ ಜಾಸ್ತಿ ಅಂದರೆ 25 ವರ್ಷಗಳು ಇದೆ. ಅದಕ್ಕೆ ಇದರ ಕಡೆಗೆ ಗಮನ ಕೊಡುವುದು ಬಹಳ ಮುಖ್ಯ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಕ್ಲಾರಿಫಿಕೇಷನ್ ಇದೆ. ಇದರ parameters select ಮಾಡುವಾಗ, ನಾನು ಹಿಂದೆ ಈ ಬಗ್ಗೆ ಮಾನ್ಯ ಮೋರೆಯವರಿಗೆ repeatedly request ಮಾಡಿಕೊಂಡಿದ್ದೆ. Borrowing capacity ಮತ್ತು re-paying capacity ನೋಡಿ select ಮಾಡಬೇಡಿ. ಡಾ: ನಂಜುಂಡಪ್ಪ ವರದಿ ಬಗ್ಗೆ ಮಾತನಾಡುತ್ತೀರಿ, ಆ ವರದಿಯಲ್ಲಿ ಅತಿ ಹಿಂದುಳಿದಂತಹ town panchayaths ಇವೆ, assets ಇಲ್ಲದಿರತಕ್ಕಂಥ CMC ಗಳ ಬಗ್ಗೆ ಇದೆ. KUIDFC ನಲ್ಲೂ ಕೂಡ ಇದು include ಆಗಿಲ್ಲ, ADB ನಲ್ಲೂ ಇದು include ಆಗಿಲ್ಲ. ಅವುಗಳ ಬಗ್ಗೆ ಮಾತನಾಡಲಿಕ್ಕೆ ನಿಮಗೇನು ನೈತಿಕ ಹಕ್ಕಿದೆ? ನಾನು ಅದಕ್ಕೇ ನಿಮ್ಮನ್ನು request ಮಾಡಿಕೊಳ್ಳುತ್ತೇನೆ. ಯಾವುದಕ್ಕೆ re-paying capacity ಇಲ್ಲ, borrowing capacity ಇಲ್ಲವೋ, asset creating capacity ಇಲ್ಲವೋ, ಆ Town Municipalities ನ್ನು ಸ್ವಲ್ಪ consideration ಮಾಡತಕ್ಕಂಥ ಒಂದು ಯೋಜನೆಯನ್ನು ತಾವು ರೂಪಿಸಬೇಕು. ನೀವೇನು surplus ಹಣ ಇದೆ ಎಂದು ಹೇಳುತ್ತಿದ್ದೀರಲ್ಲಾ, atleast ಅದನ್ನದರೂ ಅವುಗಳಿಗೆ divert ಮಾಡಿ. ಏನೂ ಇಲ್ಲದಿರತಕ್ಕಂಥ ಟೌನ್ ಮುನಿಸಿಪಾಲಿಟಿಗಳ ಬಗ್ಗೆ ಯರೂ ಕಾಳಜಿ ಮಾಡುತ್ತಾರೆ? ಹೇಳಿ. ನಮ್ಮ ಬಾಗೇವಾಡಿ ಟೌನ್ ಮುನಿಸಿಪಾಲಿಟಿಯಲ್ಲಿ re-paying capacity ಇಲ್ಲ, UGD ಯನ್ನೂ ಕೊಡಲಿಕ್ಕೆ ತಯಾರಿಲ್ಲ, water connection ಕೂಡ ಕೊಡಲಿಕ್ಕೆ ತಯಾರಿಲ್ಲ. ಅಲ್ಲಿ ಒಂದು asset creation ಮಾಡಬೇಕಲ್ಲವೇ? ಅದರ ಬಗ್ಗೆಯೂ ಸ್ವಲ್ಪ ಚಿಂತನೆಯಾಗಬೇಕು ಎಂದು ಹೇಳುತ್ತೇನೆ. ನಾನು ಅದಕ್ಕಾಗಿಯೇ ಮಾನ್ಯ ಮೋರೆಯವರಿಗೆ request ಮಾಡಿಕೊಂಡಿದ್ದೆ. ಮಾನ್ಯ ಮೋರೆಯವರಂತೂ ಮಾಡಲಿಲ್ಲ, atleast ನೀವಾದರೂ ಮಾಡಿ.

ಶ್ರೀ. ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಈಗ ಹಿರಿಯ ಸದಸ್ಯರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಇತರ ಎಲ್ಲಾ ಪ್ರಮುಖ ಸದಸ್ಯರುಗಳು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಯಾರೂ ಈ ಮನೆಯಲ್ಲಿ ಇರುವಂತಹವರಿಗೆ, ನಮ್ಮ ಸರ್ಕಾರದ ಬೊಕ್ಕಸದಲ್ಲಿ ಏನೋ ಹಣ ತುಂಬಿ ತುಳುಕುತ್ತಿದೆ, surplus ಹಣ ಇದೆ ಎನ್ನುವಂತಹ ಭಾವನೆ ಬೇಡ. ನಾವೇನು ಈಗ ನಮ್ಮ ಬಡ್ಜೆಟ್‌ನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದ್ದೇವೋ ಅದಕ್ಕೆ budget allocation ಮಾಡಿದ್ದೇವೆ. ಅದರಲ್ಲಿ ಹೇಳಿರುವಂತಹ ಕಾರ್ಯ ಕ್ರಮಗಳನ್ನು ಪೂರ್ಣ ಮಾಡುತ್ತೇವೆ ಎನ್ನುವಂತಹ ಹಿನ್ನೆಲೆಯಲ್ಲಿ ನಮ್ಮ ಹಣಕಾಸಿನ ಸ್ಥಿತಿ ಪರವಾಗಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದೇವೆಯೇ ಹೊರತು, ಆ ಭಾವನೆ ಬೇಡ. ಇದು ಮೊದಲನೆಯದು. ಎರಡನೆಯದಾಗಿ, ಅತ್ಯಂತ ಕಡಿಮೆ ಬಡ್ಡಿಯಲ್ಲಿ ಈ ಹಣ ನಮಗೆ ಸಿಗುತ್ತಿರುವುದರಿಂದ, ಮತ್ತೆ ಆ ಹಣದ ಸಂಪೂರ್ಣ ಉಪಯೋಗ ಮಾಡಿಕೊಂಡರೆ, ಕೆಲವೊಂದು ಜ್ವಲಂತ ಸಮಸ್ಯೆಗಳು ಏನಿರುತ್ತವೆಯೋ ಆ ಕೆಲವು ಮಂಜೂರಾಗಿರುವಂತಹ ನಗರಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ, ಇನ್ನೂ ಕೆಲವು ಸದಸ್ಯರು ಇನ್ನೂ ಕೆಲವು ಪ್ರಮುಖವಾದಂತಹ ನಗರಗಳು, ತಾಲ್ಲೂಕುಗಳು ಕೈ ಬಿಟ್ಟು ಹೋಗಿವೆ, ಅದಕ್ಕೇನು ಎಂದು ಹೇಳಿದಾಗ, ಯಾವುದಕ್ಕೆ ನಾವು ಈ ಒಂದು ಯೋಜನೆ ಮೂಲಕ ಹಣವನ್ನು ಕೊಡುತ್ತಿದ್ದೇವೋ, ಹೆಚ್ಚು ಒತ್ತು ಕೊಟ್ಟಿದ್ದೇವೋ, ಅದಕ್ಕೆ ಈ ಹಣ ತೊಡಗಿಸಿದ ಮೇಲೆ, ಯಾವ ಒಂದು ನಗರಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆಯೋ, ಈ ಯೋಜನೆಗಳಲ್ಲಿ ಸೇರಿಲ್ಲವೋ, ಅವುಗಳ ಕಡೆಗೆ ಗಮನ ಕೊಡಬೇಕಾದುದು ಹಣಕಾಸಿನ ಸಚಿವನಾಗಿ ನನ್ನ ಆದ್ಯ ಕರ್ತವ್ಯವಾಗಿದೆ. ನಿಮ್ಮ ಸಲಹೆಯನ್ನು ನಾನು ಸಂಪೂರ್ಣ ಒಪ್ಪಿಕೊಳ್ಳುತ್ತೇನೆ. ಅದನ್ನು ಗಂಭೀರವಾಗಿ ನಾನು ಗಮನಿಸುತ್ತೇನೆ. ಯಾರಿಗೆ ಈ ಯೋಜನೆಯ ಅನುಕೂಲಗಳು ಆಗಿ, ಅಲ್ಲಿ ಸಾಕಷ್ಟು ಪ್ರಗತಿ ಹಂತದಲ್ಲಿ ಮುಂದಕ್ಕೆ ಹೋಗುತ್ತಾರೋ, ಅವುಗಳು ಅಲ್ಲದೆ ಯಾವ ನಗರಗಳು, ತಾಲ್ಲೂಕುಗಳು neglect ಆಗಿರುತ್ತವೆಯೋ, ಅವುಗಳ ಕಡೆಗೆ ನಾನು ವಿಶೇಷವಾದಂತಹ ಗಮನವನ್ನು ಕೊಡುವವನಿದ್ದೇನೆ. ನಾನು ತತ್‌ಕ್ಷಣ ಈ ಬಗ್ಗೆ ಸಂಬಂಧಪಟ್ಟವರ ಜೊತೆಗೆ ಮಾತುಕತೆಯಾಡಿ ಆದಷ್ಟು ಬೇಗ ಇದೊಂದು ನಿರ್ಣಯಕ್ಕೆ ಬಂದು, ಹಣವನ್ನು ಪಡೆದು, ಅಭಿವೃದ್ಧಿ ಕಡೆಗೆ ಗಮನ ಕೊಡುವುದಕ್ಕೆ ವಿಶೇಷ ಗಮನವನ್ನು ಕೊಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಎಡಿಬಿ ನೆರವಿನ ಯೋಜನೆ ಅಡಿಯಲ್ಲಿ ಯಾವ ಟೌನ್ ಪಂಚಾಯತ್‌ಗಳು ಬಿಟ್ಟು ಹೋಗಿವೆಯೋ, ಅವುಗಳ ಸಭೆಯೊಂದನ್ನು ಕರೆಯಿರಿ. ಅವರನ್ನು ಕರೆದು ಸಭೆ ಮಾಡಿ, ಅವರಿಂದಲೂ ಒಂದು consultation ತೆಗೆದುಕೊಳ್ಳಿ. ಏಕೆಂದರೆ, ಹಣ ಯಾರಿಗೆ ಸಿಗುತ್ತಿದೆಯೋ, ಅವರಿಗೇ ಸಿಗುತ್ತದೆ ಅನ್ನತಕ್ಕಂಥ ಅಭಿಪ್ರಾಯ ಬರಬಾರದು.

ಶ್ರೀ ಡಿ.ಆರ್. ಪಾಟೀಲ್ : ದಯವಿಟ್ಟು ತಾವು Monday or Tuesday ಸಂಬಂಧಿಸಿದ ಎಲ್ಲಾ ಶಾಸಕರ meeting ಅನ್ನು ಕರೆಯಿರಿ. Officers ಅನ್ನೂ ಸಹಿತ ಕರೆಯಿರಿ. ನಮ್ಮನ್ನು ಮತ್ತು ಅವರನ್ನು ಕೂರಿಸಿಯೇ ನಿರ್ಣಯ ಮಾಡಿರಿ. ಇಲ್ಲವೆಂದರೆ, ಅವರು ನಿಮ್ಮನ್ನು mis-guide ಮಾಡಿಬಿಡುತ್ತಾರೆ. ನಮ್ಮನ್ನು secondary citizen ಎನ್ನುವಂತಹ ರೀತಿಯಲ್ಲಿ treat ಮಾಡುವಂತಹ ವ್ಯವಸ್ಥೆ ಆಗಿಬಿಡುತ್ತದೆ. ಅದಕ್ಕೆ scope ಕೊಡುವುದು ಬೇಡ. ತಾವು Monday

ಅಥವಾ Tuesday, ಈ ಸದನ ಮುಗಿಯುವುದಕ್ಕಿಂತ ಪೂರ್ವದಲ್ಲಿ ನಮ್ಮೆಲ್ಲರ meeting ಮಾಡಿ ಇದರ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಂಡು, ಕೆಲಸ ಪ್ರಾರಂಭವಾಗಲಿಕ್ಕೆ ಕ್ರಮ ಕೈಗೊಳ್ಳಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಆ ಕೆಲಸವನ್ನು ಮಾಡುತ್ತೇವೆ ಎಂದು ತಾವು ಹೇಳಿ. ತಾವು ಗೋಣು ಹಾಕಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಶಿವಾನಂದ ಪಾಟೀಲರು ಏನು ಹೇಳಿದರಲ್ಲಾ, overall small and medium towns ಎಂದೇ you have a different scheme. You come on to the integrated development of small and medium towns.....

SRI SHIVANAND S.PATIL: Sir, I know that. I learnt that scheme. I am very much aware of it...

SRI KUMAR BANGARAPPA : At least let me finish it.

ಉಪಾಧ್ಯಕ್ಷರು : ಮಾನ್ಯ ಪಾಟೀಲರೇ, ಅವರು ಏನು ಹೇಳುತ್ತಾರೋ ಕೇಳೋಣ ಇರಿ.

[Interruptions]

SRI SHIVANAND S. PATIL : I was a Municipal President. I am very much aware of it. ನನಗೆ ಗೊತ್ತು.

SRI KUMAR BANGARAPPA : Interated Development of Small and Medium towns ಎಂದೇ Municipal capacities ಮೇಲೆ, you first give a concurrence to your department. You give it to she State and further it will go to the Central Government. ನೀವು ADB ನಲ್ಲೇ ಎಲ್ಲಾ programmes include ಮಾಡಿ ಅಂದರೆ ಹೇಗಾಗುತ್ತದೆ? You first come under the schemes. You have to come under one of the schemes where you have a provision. ನೀವು ಪಟ್ಟಣ ಪಂಚಾಯಿತಿಯನ್ನು ತೆಗೆದುಕೊಂಡು ಹೋಗಿ, where it does not have a re-payment capacity ಅದನ್ನು ತೆಗೆದುಕೊಂಡು ಹೋಗಿ ನೀವು ಬ್ಯಾಂಕಿಗೆ ಸೇರಿಸಿದರೆ ಹೇಗೆ?

ಶ್ರೀ ಎಸ್.ಎಸ್.ಪಾಟೀಲ್ : ಏನಾದರೂ ಮಾಡಿ ನಮ್ಮನ್ನೂ ತೆಗೆದುಕೊಳ್ಳಿ. ಸುಮ್ಮನೆ ಇವೆಲ್ಲಾ ಮಾತನಾಡಬೇಡಿ. ಎಲ್ಲಾ ನೀವೇ ತೆಗೆದುಕೊಳ್ಳಬೇಡಿ. ನಾವೆಲ್ಲಾ ಇದರ ಕಥೆಯನ್ನು ನೋಡಿದ್ದೇವೆ. ಅದಕ್ಕೆ ದಯವಿಟ್ಟು ಬೇಡ. ಮಾನ್ಯ ಶಿವಾನಂದ ಪಾಟೀಲರು ಹೇಳಿದ್ದು correct ಇದೆ. ನಮ್ಮದು ಹಳ್ಳಿಯೂ ಅಲ್ಲ, ಪಟ್ಟಣವೂ ಅಲ್ಲ ಎನ್ನುವಂತಹ ಸ್ಥಿತಿಯಲ್ಲಿವೆ. ಅವುಗಳನ್ನೂ ತಾವೂ ಸ್ವಲ್ಪ ಅಭಿವೃದ್ಧಿ ಮಾಡಿಕೊಡಿ.

(ಉತ್ತರ ಇಲ್ಲ)

ಆ) ವಿಷಯ :- ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಡಿಸಿಸಿ ಬ್ಯಾಂಕುಗಳು ಲಕ್ಕಿ ಡಿಪ್ ಯೋಜನೆ ಮುಖಾಂತರ ಸಾರ್ವಜನಿಕರಿಗೆ ವಂಚಿಸಿರುವ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಡಿಸಿಸಿ ಬ್ಯಾಂಕುಗಳು ಲಕ್ಕಿ ಡಿಪ್ ಯೋಜನೆಯ ಮುಖಾಂತರ ಸಾರ್ವಜನಿಕರಿಗೆ ವಂಚಿಸಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಈ ಎರಡೂ ಜಿಲ್ಲೆಗಳು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಕಾರ್ಯವ್ಯಾಪ್ತಿಗೆ ಸೇರಿವೆ. ಈ ಬ್ಯಾಂಕಿನ ಹೆಸರಿನಲ್ಲಿ ಯಾವುದೇ ಲಕ್ಕಿ ಡಿಪ್ ಟಿಕೇಟುಗಳು ಮುದ್ರಣ ಆಗಿರುವುದಿಲ್ಲ. ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್ ಎಂಬ ಸಂಸ್ಥೆ ಮಂಗಳೂರಿನಲ್ಲಿದ್ದು, ಇದು ದಿನಾಂಕ: 08.07.2004ರಂದು ಕಂದಾಯ ಇಲಾಖೆಯ ಉಪನೋಂದಣಾಧಿಕಾರಿಯವರಿಂದ ನೋಂದಾಯಿಸಲ್ಪಟ್ಟಿದೆ. ಇದರ ಕಾರ್ಯವ್ಯಾಪ್ತಿ ಕರ್ನಾಟಕ ರಾಜ್ಯವಾಗಿರುತ್ತದೆ. ಟ್ರಸ್ಟಿನ ಮುಖ್ಯ ಉದ್ದೇಶ ಗ್ರಾಮೀಣ ಜನರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸುವುದು, ನವೋದಯ ಸ್ವಸಹಾಯ ಗುಂಪುಗಳನ್ನು ಬಲಪಡಿಸುವುದು ಇತ್ಯಾದಿ ಆಗಿರುತ್ತದೆ.

ಈ ಟ್ರಸ್ಟು ತನ್ನ ಕೆಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ವೆಚ್ಚ ಭರಿಸಲು ಲಕ್ಕಿಡಿಪ್ ಯೋಜನೆಯನ್ನು ಪ್ರಾರಂಭಿಸಿರುತ್ತದೆ ಎಂದೂ ಪ್ರತಿ ಟಿಕೇಟಿನ ಮುಖ ಬೆಲೆ ರೂ. 10.00 ಇದ್ದು ಇವುಗಳನ್ನು ಸ್ವಸಹಾಯ ಗುಂಪುಗಳ ಸದಸ್ಯರಿಗೆ ಮಾರಾಟ ಮಾಡಲಾಗಿರುತ್ತದೆ ಎಂದೂ ವರದಿಯಾಗಿದೆ. ಈ ಲಕ್ಕಿಡಿಪ್ಪಿನ ಟಿಕೇಟಿನ ಹಿಂಬದಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಪ್ರಚಾರದ ಹಿತದೃಷ್ಟಿಯಿಂದ ಜಾಹಿರಾತನ್ನು ಮುದ್ರಿಸಲಾಗಿದೆ ಎಂದು ನಮೂದಿಸಲಾಗಿದೆ.

ಶ್ರೀ ಎಂ.ಎನ್. ರಾಜೇಂದ್ರ ಕುಮಾರ ಅವರು ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟಿನಲ್ಲಿ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದು ಶ್ರೀ ಭಾಸ್ಕರ್ ಕೊಟ್ಯಾನ್, ಶ್ರೀ ಮೊನ್ನಪ್ಪ ಶೆಟ್ಟಿ ಶ್ರೀ ಸುನೀಲ್ ಕುಮಾರ್ ಇವರುಗಳು ಟ್ರಸ್ಟಿಗಳಾಗಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಯಾವುದೇ ಲಕ್ಕಿ ಡಿಪ್‌ನ ಯೋಜನೆಯನ್ನು ಪ್ರತಿನಿಧಿಸುವುದಿಲ್ಲ ಹಾಗೂ ಸಾರ್ವಜನಿಕರಿಗೆ ಈ ಮುಖಾಂತರ ವಂಚಿಸಿರುವುದು ಕಂಡುಬರುವುದಿಲ್ಲ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್‌ನಿಂದ ಎರಡು ನಮೂನೆಯಲ್ಲಿ ವಂಚನೆಯಾಗಿದೆ.

ಮೊದಲನೆಯದು ಏನೆಂದರೆ, ದಕ್ಷಿಣ ಕನ್ನಡ DCC ಬ್ಯಾಂಕಿನ ಅಧ್ಯಕ್ಷರು, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರು ಮತ್ತು ಇದರ ಮ್ಯಾನೇಜಿಂಗ್ ಟ್ರಸ್ಟಿ ಒಬ್ಬರೇ ಆಗಿದ್ದಾರೆ. ಅದರಲ್ಲಿರುವಂತಹ ಟ್ರಸ್ಟಿಗಳೇ ಇದರಲ್ಲೂ ಟ್ರಸ್ಟಿಗಳಾಗಿದ್ದಾರೆ. ಈ ಒಂದು ಡಿಸಿಸಿ ಬ್ಯಾಂಕಿನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಂತಹ ಕೆಲಸಗಳು ಇಲ್ಲಿ ಆಗಿವೆ. ನಾನು ಇಲ್ಲಿಗೆ ಲಾಟರಿ ಟಿಕೆಟ್ ಅನ್ನು ತೆಗೆದುಕೊಂಡು ಬಂದಿದ್ದೇನೆ. ಇದರ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ advertisement ಅನ್ನು ಹಾಕಿದ್ದಾರೆ. ನಮ್ಮಲ್ಲಿ ಏನಾಗಿದೆ ಎಂದರೆ, ನಮ್ಮ ಜಿಲ್ಲೆಯಲ್ಲಿನ ಎಲ್ಲಾ ಜನ ಇದು ಸಹಕಾರಿ ಬ್ಯಾಂಕಿನದ್ದೇ ಲಕ್ಕಿ ಡಿಪ್ ಎಂದು ಎಲ್ಲರೂ ತೆಗೆದುಕೊಂಡಿದ್ದಾರೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ನಾನು ನಿಮ್ಮ ಗಮನ ಸೆಳೆಯುವುದಕ್ಕೆ ಇಚ್ಚೆ ಪಡುಂಥದ್ದು, ಏಳು ಸೀರಿಯಲ್ ನಂಬರ್‌ಗಳ ಸುಮಾರು 28,000 ದಷ್ಟು ಲಾಟರಿ ಟಿಕೇಟುಗಳು ಮಾರಾಟ ಆಗಿದೆ ಎಂದು ಸಾರ್ವಜನಿಕರು ಹೇಳುತ್ತಿದ್ದಾರೆ. 60 ಸಾವಿರ ಅವರು ಪ್ರಿಂಟ್ ಮಾಡಿದ್ದರಲ್ಲಿ 32,000 ಟಿಕೇಟುಗಳು ಉಳಿದಿವೆ. ಇದು ಏಳು ಡಿಜಿಟ್ ಇದ್ದು, ಒಂದನ್ನೂ ಡ್ರಾಗೆ ಹಾಕಲಿಲ್ಲ. 28,000 ಟಿಕೇಟುಗಳನ್ನು 10 ರೂಪಾಯಿ ಹಾಗೆ ಮಾರಾಟ ಮಾಡಿ, ಅದನ್ನು ಡ್ರಾಗೆ ಹಾಕದೆ ಮೋಸ ಆಗಿದೆ ಎಂದು ಇಡೀ ಜಿಲ್ಲೆಯಲ್ಲಿ ಮಾತನಾಡುತ್ತಿದ್ದಾರೆ ಮತ್ತು ಪತ್ರಿಕೆಯಲ್ಲಿ ಕೂಡ ಬಂದಿದೆ. ಇದು ಸತ್ಯ ಸಂಗತಿ ಆಗಿದೆ. ಇದರ ಬಗ್ಗೆ ನಮಗೆ ಸಂಶಯ ಇದೆ. ಆದ್ದರಿಂದ ಇವತ್ತು ಈ ಸಂಶಯ ಬರಲಿಕ್ಕೆ ಕಾರಣ ಏನೆಂದರೆ, ಸುಮಾರು 100–200 ಪ್ರೈಜ್‌ಗಳನ್ನು ಅನೌನ್ಸ್ ಮಾಡಿದ್ದಾರೆ. ಅದರಲ್ಲಿ ಒಂದೂ ಕೂಡ ಏಳು ಡಿಜಿಟ್‌ಗಳ ನಂಬರ್ ಇಲ್ಲ. ನಾನು ಇಲ್ಲಿ ಲಾಟರಿ ಟಿಕೇಟುಗಳನ್ನು ತೆಗೆದುಕೊಂಡು ಬಂದಿದ್ದೇನೆ. ಇದನ್ನು ನೋಡಿದರೆ ಮೇಲ್ನೋಟಕ್ಕೆ ಬಹಳ ದೊಡ್ಡ ಅವ್ಯವಹಾರ ಆಗಿದೆ ಎನ್ನುವುದು ಗೊತ್ತಾಗುತ್ತದೆ. ಅದನ್ನು ನಾವು ಹೊರಗೆ ಹಾಕಬೇಕಾಗಿದೆ. ಇನ್ನೊಂದು ವಿಷಯ ಏನೆಂದರೆ, ನಮಗೆ ಸರ್ಕಾರದಿಂದ ಉತ್ತರ ಬರುವಾಗ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೂ ಮತ್ತು ಈ ನವೋದಯ ಗ್ರಾಮ ವಿಕಾಸ ಟ್ರಸ್ಟ್‌ಗೆ ಏನೂ ಸಂಬಂಧ ಇಲ್ಲ ಎಂದು ಬರೆದಿದ್ದಾರೆ. ಸಂಬಂದ ಹೇಗೆ ಇರುವುದು ಎಂದು ನಾನು ಹೇಳುವುದಾದರೆ ಇದರ ಮ್ಯಾನೇಜಿಂಗ್ ಟ್ರಸ್ಟಿ ಮತ್ತು, ಅಪೆಕ್ಸ್ ಬ್ಯಾಂಕ್ ಮತ್ತು ಡಿಸಿಸಿ ಬ್ಯಾಂಕಿನ ಅಧ್ಯಕ್ಷರೂ ಒಬ್ಬರೇ ಆಗಿದ್ದಾರೆ. ಹಾಗಿರುವಾಗ ಅದೇ ಒಂದು ಸಂಬಂಧವನ್ನು ನಾವು ಕಲ್ಪಿಸಬಹುದು. ಇನ್ನೊಂದು ಮಾನ್ಯ ಅಧ್ಯಕ್ಷರೆ, ತನಿಖೆ ಮಾಡುವಾಗ ಎಲ್ಲಾ ಹೊರಗೆ ಬರುತ್ತದೆ. ಇವತ್ತು ಸುಮಾರು ಎರಡು ವರ್ಷಗಳಿಂದ 40 ಲಕ್ಷ, 40 ಲಕ್ಷ ಮತ್ತು 80 ಲಕ್ಷ ರೂಪಾಯಿಗಳನ್ನು ಡಿಸಿಸಿ ಬ್ಯಾಂಕಿನಿಂದ ಈ ನವೋದಯ ಚಾರಿಟಬಲ್ ಟ್ರಸ್ಟ್‌ಗೆ ದೇಣಿಗೆ ರೂಪದಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ನನ್ನ ಬಳಿ ದಾಖಲೆ ಇದೆ. ಸುಮಾರು 120 ಜನ ಸಹಾಯಕರಿಗೆ, ಫೀಲ್ಡ್ ವರ್ಕರ್ಸ್ ಸೇವಾ ನಿರತರಿಗೆ ಇವತ್ತಿಗೂ 2,500 ರೂಪಾಯಿ ಸಂಬಳವನ್ನು ಡಿಸಿಸಿ ಬ್ಯಾಂಕಿನಿಂದ ಕೊಡುತ್ತಾರೆ. ಅದರ ಬಗ್ಗೆ ಕೇಳಿದರೆ ಇದಕ್ಕೆ ಲಾಭವಾಗುತ್ತಿದೆ ಎಂದು ಹೇಳುತ್ತಾರೆ.

ಉಪಾಧ್ಯಕ್ಷರು : ಮಾನ್ಯ ರಘುಪತಿ ಭಟ್‌ರವರೇ, ಮಂತ್ರಿಗಳು ಇದರ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳೋಣ. ಬರೀ ಭಾಷಣ ಮಾಡುತ್ತಿದ್ದೀರಿ.

ಶ್ರೀ ಕೆ. ರಘುಪತಿ ಭಟ್ : ಇದು ಬಹಳ ಗಂಭೀರವಾದ ವಿಷಯ ಇದೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರು ಮತ್ತು ಡಿಸಿಸಿ ಬ್ಯಾಂಕ್ ಅಧ್ಯಕ್ಷರು ಸೇರಿಕೊಂಡು ಮಾಡಿರುವಂತಹ ಅವ್ಯವಹಾರ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಎಲ್ಲ ಹೊರಗೆ ಬರಬೇಕು. ಇಂತಹ ಅಕ್ರಮ ದಂಧೆ ಹೊರಗೆ ಬರಬೇಕೆಂದರೆ ಇದರ ಬಗ್ಗೆ ಸಿಓಡಿ ತನಿಖೆ ಆಗಬೇಕು. ಸಿಓಡಿ ತನಿಖೆ ಆದರೆ ಸಂಪೂರ್ಣವಾಗಿ ಇದು ಹೊರಗೆ ಬರುತ್ತದೆ. ಸರ್ಕಾರ ಡಿಸಿಸಿ ಬ್ಯಾಂಕ್ ಮತ್ತು ನವೋದಯ ಚಾರಿಟಬಲ್ ಟ್ರಸ್ಟ್‌ಗೆ ಸಂಬಂಧ ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಅಧ್ಯಕ್ಷರು ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಒಬ್ಬರೇ ಆಗಿರುವುದರಿಂದ ಇದನ್ನು ಸಿಓಡಿ ತನಿಖೆ ಮಾಡಿದರೆ ಆಗ ಎಲ್ಲ ಸತ್ಯ ಸಂಗತಿ ಹೊರಗೆ ಬರುತ್ತದೆ ಎಂದು ಹೇಳಿ ನಾನು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಉತ್ತರ ಸಮರ್ಪಕವಾಗಿಲ್ಲ. ಅದರಲ್ಲಿ ಅವ್ಯವಹಾರ ನಡೆದಿದೆ ಎಂದು ಪತ್ರಿಕಾಗೋಷ್ಠಿ ಕರೆದು ಹೇಳಿದ್ದಾರೆ. ಇದು ದೂರದರ್ಶನದಲ್ಲಿ, ಈ ಟಿವಿಯಲ್ಲಿ ಮತ್ತು ಉದಯ ಟಿವಿಯಲ್ಲಿ ಬಂದಿದೆ. ಅದರ ನಂತರ ಪುನಃ ಅದೇ ವ್ಯಕ್ತಿ ಯಾರು ಹಿಂದೆ ಉಡುಪಿಯಲ್ಲಿ ಪತ್ರಿಕಾಗೋಷ್ಠಿಯನ್ನು ಮಾಡಿದ್ದಾರೆ, ಅವರೇ ಪುನಃ ಮಂಗಳೂರಿಗೆ ಪತ್ರಕರ್ತರನ್ನು ಕರೆಸಿ ಅದು ಆಗಿಲ್ಲ, ನನಗೆ ಸುಳ್ಳು ಮಾಹಿತಿ ಬಂದಿದೆ ಎಂದು ಪುನಃ ಹೇಳಿಕೆ ಕೊಟ್ಟಿರುವುದು ಅನುಮಾನಕ್ಕೆ ಆಸ್ಪದ ಆಗಿದೆ. ಅದಕ್ಕೋಸ್ಕರ ನಿಮ್ಮ ಇಲಾಖೆಯಿಂದ ನೀವು ತನಿಖೆ ಮಾಡಿಸುವುದಾದರೆ ದಯವಿಟ್ಟು ಬೇಡ. ಸಿಓಡಿ ತನಿಖೆ ಮಾಡಿಸಿ ಎಂದು ಮಾನ್ಯ ಅಧ್ಯಕ್ಷರ ಮುಖೇನ ನಾನು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಉಪಾಧ್ಯಕ್ಷರೆ, ನಾನು ನೋಟೀಸ್ ಕೊಟ್ಟ ಮೇಲೆ, ನನಗೆ ಆ ಅಧ್ಯಕ್ಷರಿಂದ ಮತ್ತು ಬೇರೆ ಬೇರೆ ಜನರಿಂದ ಒತ್ತಡ ಶುರುವಾಗಿದೆ. ನೀವು ಸದನದಲ್ಲಿ ಹಾಜರಿರಬೇಡಿ, ಅದನ್ನು ತನಿಖೆಗೆ ಒತ್ತಾಯ ಮಾಡಬೇಡಿ ಎಂದು ನನಗೆ ಒತ್ತಡ ಮಾಡುತ್ತಾ, ಇರುವುದರಿಂದ ಇದರಲ್ಲಿ ಸತ್ಯವಾಗಿ ಏನೋ ಇದೆ ಎಂದು ಹೇಳುವುದಕ್ಕೆ ನನಗೆ ಇನ್ನೂ ಬಲ ಬಂದ ಹಾಗಾಗಿದೆ.

ಶ್ರೀ ಸುನಿಲ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ನವೋದಯ ಗ್ರಾಮ ಚಾರಿಟಬಲ್ ಟ್ರಸ್ಟ್ .

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಇದು ಗಮನ ಸೆಳೆಯುವ ಸೂಚನೆಯೋ, ಅಥವಾ ಚರ್ಚೆಯೋ ಒಂದೂ ಅರ್ಥವಾಗುತ್ತಿಲ್ಲ. ಅವರು ಉತ್ತರ ಕೊಟ್ಟ ಮೇಲೆ ಅವರು ಮಾತನಾಡಿದರೆ ನಮಗೆ ಅರ್ಥವಾಗುತ್ತದೆ.

ಉಪಾಧ್ಯಕ್ಷರು : ಹಿಂದಿನಸಾಲಿನವರಿಗೆ ಅವಕಾಶ ಕೊಡಬೇಕೆಂದು ನೀವೇ ಕೇಳುತ್ತೀರಿ. ಈ ಕಡೆ ಮುಗಿಯಿತು, ನಿಮ್ಮ ಕಡೆ ಬರುತ್ತಿದ್ದೇವೆ ಈಗ.

ಶ್ರೀ ವಿ. ಸುನಿಲ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಚಾರಿಟಬಲ್ ಟ್ರಸ್ಟ್‌ನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಲಾಟರಿ ಟಿಕೇಟುಗಳನ್ನು ಮಾಡಿದ್ದಾರೆಂದು ಸರ್ಕಾರದಿಂದ ಉತ್ತರ ಬಂದಿದೆ. ಈ ಲಾಟರಿ ಟಿಕೇಟುಗಳಿಂದ ಸುಮಾರು ಎರಡು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಲಾಭ ಆಗಿದೆ ಎಂದು ಪತ್ರಿಕೆಗಳ ಮುಖಾಂತರ ಗೊತ್ತಾಗಿದೆ. ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಬಹಳ

ಗಮನ ಕೊಡಬೇಕಾಗಿರುವುದು, ಈ ಎಲ್ಲಾ ಲಾಟರಿ ಟಿಕೇಟುಗಳನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಲ್ಲಾ ಡಿಸಿಸಿ ಬ್ಯಾಂಕಿನ ಮುಖಾಂತರ ಬಲಾತ್ಕಾರವಾಗಿ ಮಾರಾಟ ಮಾಡಿದ್ದಾರೆ ಎನ್ನುವಂಥಾದ್ದು.

ಶ್ರೀ ಕೆ. ಜಯಪ್ರಕಾಶ್ : ಡಿಸಿಸಿ ಬ್ಯಾಂಕ್ ಮಾತ್ರ ಅಲ್ಲ, ಎಲ್ಲಾ ಸೊಸೈಟಿಗಳು, ಸ್ತ್ರೀ ಶಕ್ತಿ ಸಂಘಗಳು ಅವರ ಮುಖಾಂತರ ಕೂಡ ಮಾರಾಟ ಮಾಡಿಸಿದ್ದಾರೆ. ಎಲ್ಲಾ ಸಹಕಾರಿ ಬ್ಯಾಂಕುಗಳು ಮತ್ತು ಸೊಸೈಟಿಗಳು ಇವುಗಳನ್ನು ಮಾರಾಟ ಮಾಡಿದ್ದಾರೆ.

ಶ್ರೀ ವಿ. ಸುನಿಲ್ ಕುಮಾರ್ : ಗ್ರಾಮೀಣ ಪ್ರದೇಶಗಳಲ್ಲಿರುವಂತಹ ಎಲ್ಲಾ ಸೊಸೈಟಿಗಳಿಗೆ ಇಷ್ಟು ಟಿಕೇಟುಗಳನ್ನು ಮಾರಾಟ ಮಾಡಲೇಬೇಕೆಂದು ಟಾರ್ಗೆಟ್‌ಗಳನ್ನು ಕೊಟ್ಟು ಮಾರಾಟ ಮಾಡಿಸಿದ್ದಾರೆ. ಸ್ತ್ರೀ ಶಕ್ತಿ ಗುಂಪುಗಳು ಕೂಡ ನೀವು ಇಷ್ಟು ಮಾರಾಟ ಮಾಡಬೇಕೆಂದು ಕಡ್ಡಾಯ ಮಾಡಿದ್ದಾರೆ. ಎರಡನೆಯದು ಚಾರಿಟಬಲ್ ಟ್ರಸ್ಟ್‌ಗೂ ಮತ್ತು ಡಿಸಿಸಿ ಬ್ಯಾಂಕಿಗೂ ಏನು ಸಂಬಂಧ ಎಂದರೆ, ಕಳೆದ ಒಂದೂವರೆ ವರ್ಷದಿಂದ ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್ ಏನು ಕೆಲಸ ಮಾಡುತ್ತಿದೆ, ಅದರ ಎಲ್ಲಾ ಜಾಹೀರಾತನ್ನು ಮತ್ತು ಪ್ರಾಯೋಜಕತ್ವವನ್ನು ವಹಿಸಿಕೊಂಡಿರುವುದು ಡಿಸಿಸಿ ಬ್ಯಾಂಕ್. ಹಾಗಾಗಿ ಇದರಲ್ಲಿ ಬಹಳ ದೊಡ್ಡ ಅವ್ಯವಹಾರವಾಗಿದೆ. ಸುಮಾರು ಎರಡು ಕೋಟಿ ರೂಪಾಯಿಗಳಿಗೂ ಹೆಚ್ಚು ಅವ್ಯವಹಾರವಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ದಯಮಾಡಿ ಮಾನ್ಯ ಉಪ ಮುಖ್ಯಮಂತ್ರಿಗಳು ಇದನ್ನು ಸಿಓಡಿ ತನಿಖೆಗೆ ಕೊಟ್ಟು ತನಿಖೆ ಮಾಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯ ನನಗೆ ಅರ್ಥವಾಗಿದೆ. ಮೇಲ್ನೋಟಕ್ಕೆ ಸಾಕಷ್ಟು ಅವ್ಯವಹಾರ ನಡೆದಿದೆ ಎಂದು ಕಾಣುತ್ತಿರುವುದರಿಂದ ಇದನ್ನು ಸಮಗ್ರವಾಗಿ ಸಿಓಡಿ ತನಿಖೆಗೆ ಒಪ್ಪಿಸುತ್ತೇವೆ. ಒಳ್ಳೆಯ ಅಧಿಕಾರಿಯಿಂದ ಇದನ್ನು ತನಿಖೆ ಮಾಡಿಸಿ ಆದಷ್ಟು ಬೇಗ ಇದರ ವರದಿಯನ್ನು ತರಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

9. ನಿಯಮ 69ರ ಮೇರೆಗೆ

ವಿಷಯ : ತಹಶೀಲ್ದಾರ್‌ಗಳ ನೇಮಕಾತಿಯಲ್ಲಿ ಆಗಿರುವ ವಿಳಂಬದ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೆ, ನಿಯಮ 69ರ ಮೇರೆಗೆ ಅತ್ಯಂತ ಪ್ರಮುಖವಾಗಿರತಕ್ಕಂತಹ ತಹಶೀಲ್ದಾರರ ನೇರ ನೇಮಕಾತಿ ಬಹಳ ವಿಳಂಬವಾಗುತ್ತಿದ್ದು, ಅದರಿಂದ ಆಡಳಿತದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯ. ಇವತ್ತು ಆಡಳಿತ ಬಹಳ ಸ್ವಚ್ಛವಾಗಿರಬೇಕೆಂದರೆ, ಒಳ್ಳೆಯ ಅಧಿಕಾರಿಗಳು ಕೂಡ ಇರಬೇಕಾಗುತ್ತದೆ. ಸರ್ಕಾರ ಹಲವಾರು ಉತ್ತಮವಾದ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಆದರೆ ಅ ಕಾರ್ಯಕ್ರಮಗಳ ಅನುಷ್ಠಾನವನ್ನು ಮಂತ್ರಿಗಳು ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ನಮ್ಮ ಅಧಿಕಾರಿಶಾಹಿ ಮಾಡಬೇಕಾಗುತ್ತದೆ. ಒಳ್ಳೆಯ ಬದ್ಧತೆ ಇರತಕ್ಕಂತಹ ಪ್ರಾಮಾಣಿಕವಾದ ಅಧಿಕಾರಿಗಳು ಇಲ್ಲದಿದ್ದರೆ ಸರ್ಕಾರ ಸಕ್ಸಸ್ ಆಗಿ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಇವತ್ತು ಸರ್ಕಾರ ಈ ವಿಷಯದಲ್ಲಿ 'ತಾತ್ಕಾಲಿಕವಾಗಿ ನಿಯಮ 32ರ ಅಡಿಯಲ್ಲಿ ಸ್ವತಂತ್ರ ಪ್ರಭಾರದ ಮೇಲೆ ತಹಶೀಲ್ದಾರ್‌ಗಳು ಕೆಲಸ ನಿರ್ವಹಿಸುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಹುದ್ದೆ ಏನಿದೆ ಅದು ಬಹಳ ಪ್ರಮುಖವಾದ ಹುದ್ದೆ. ಈ ಹುದ್ದೆಗಳನ್ನು ರೆಗ್ಯುಲರ್ ಆಗಿ ತುಂಬತಕ್ಕಂತಹ ಅವಶ್ಯಕತೆ ಇದೆ,' ಎನ್ನತಕ್ಕಂಥಾದ್ದನ್ನು ಸರ್ಕಾರವೇ ಅವರ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅಷ್ಟೇ ಅಲ್ಲ, ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಈಗಾಗಲೇ 170 ತಹಶೀಲ್ದಾರ್‌ಗಳನ್ನು ನೇಮಕ ಮಾಡುತ್ತಿರುವುದರಿಂದ ಆ ದಿಕ್ಕಿನಲ್ಲಿ ಕೂಡ ಸಾಕಷ್ಟು ಸುಧಾರಣೆ ಆಗುತ್ತದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಕೂಡ ಹೇಳಿದ್ದಾರೆ. ಸರ್ಕಾರ ಮೊದಲು 5.10.05ರಲ್ಲಿ ಒಂದು ನಿಯಮವನ್ನು ರೂಪಿಸಿ ಇಲಾಖೆಯ ಮೂಲಕವೇ ತಹಶೀಲ್ದಾರ್ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವುದಕ್ಕೆ ಒಂದು ಆದೇಶವನ್ನು ಹೊರಡಿಸಿತ್ತು. ಆದರೆ ಈ ಬಗ್ಗೆ ಪ್ರಕಟಣೆಯನ್ನು ಹೊರಡಿಸಿಲ್ಲ. ಏನು ಕ್ರಮ ಕೈಗೊಂಡಿತ್ತು, ಅದು ಹಾಗೆಯೇ ನೆನೆಗುದಿಗೆ ಬಿದ್ದಿದೆ. ಏಕೆ ನೆನೆಗುದಿಗೆ ಬಿದ್ದಿತು ಎಂದರೆ ಸನ್ಮಾನ್ಯ ರೆವಿನ್ಯೂ ಮಂತ್ರಿಗಳೇ ತಹಶೀಲ್ದಾರರ ನೇರ ನೇಮಕಾತಿ ಮಾಡಿಕೊಳ್ಳುವುದಕ್ಕೆ 5.10.2005ರಲ್ಲಿ ನಿಯಮಗಳನ್ನು ಪ್ರಕಟ ಮಾಡಿದ್ದಿರಿ, ಆದರೆ ನಿಯಮಗಳನ್ನು ಪ್ರಕಟ ಮಾಡಿ ಆ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವುದಕ್ಕೆ ನೀವು ಇನ್ನೂ ಕೂಡ ಕ್ರಮ ಕೈಗೊಂಡಿಲ್ಲ ಏಕೆ? ಕರ್ನಾಟಕ ಲೋಕ ಸೇವಾ ಆಯೋಗದವರೇ ಮಾಡಿಕೊಳ್ಳಲಿ ಎಂದು ಏನಾದರೂ ಸುಮ್ಮನಿದ್ದೀರಾ? ಈಗಾಗಲೇ ನಮಗೆ ನಿಮಗೆ ಗೊತ್ತಿದೆ, ಕರ್ನಾಟಕ ಲೋಕ ಸೇವಾ ಆಯೋಗ ಎಷ್ಟರ ಮಟ್ಟಿಗೆ ಕಾರ್ಯನಿರ್ವಹಿಸುತ್ತಿದೆ ಎಂದು. ಹಿಂದಿನ ಸರ್ಕಾರದ ನಮ್ಮ ಮಾನ್ಯ ಖರ್ಗೆಯವರು ಇಲ್ಲಿ ಇಲ್ಲ. ಅವರು ಸಬ್ ಇನ್‌ಸ್ಪೆಕ್ಟರ್‌ಗಳನ್ನು ಎಷ್ಟೊಂದು ಪಾರದರ್ಶಕವಾಗಿ, ನೇಮಕ ಮಾಡಿಕೊಂಡರು, ಇದನ್ನು ಪ್ರಾಮಾಣಿಕವಾಗಿ ಮಾಡಿದರು. ಮಾಡಿದ್ದನ್ನು ನಾವು ಪ್ರಶಂಸೆ ಮಾಡಲೇ ಬೇಕಾಗಿದೆ. ಅವರ ಸಂದರ್ಶನಕ್ಕೆ ಇಟ್ಟ ಮಾರ್ಕ್ಸ್ ಕೇವಲ ಏಳೂವರೆ ಮಾರ್ಕ್ಸ್. ಅವರ ಬರವಣಿಗೆ ಪರೀಕ್ಷೆಯಲ್ಲಿ ಎಷ್ಟು ಅಂಕಗಳನ್ನು ಪಡೆದುಕೊಂಡಿದ್ದರೂ ಮತ್ತು ಸಂದರ್ಶನ ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರುಗಳು ಯಾರು ಇರುತ್ತಾರೆ ಅವರಿಗೇ ಗೊತ್ತಾಗಲಿಲ್ಲ. ಅವರು ಅಂಕಗಳನ್ನು ಪ್ರಕಟಿಸಲಿಲ್ಲ. ಆ ಏಳೂವರೆ ಅಂಕಗಳಲ್ಲಿ ಹೆಚ್ಚು ಕಡಿಮೆ ಮಾಡಲಿಕ್ಕೆ, ಬಹಳ ಕೆಳಗೆ ಇದ್ದವನಿಗೆ ಮೇಲಕ್ಕೆ ತೆಗೆದುಕೊಂಡು ಹೋಗುವುದು, ಮೇಲೆ ಇದ್ದವನಿಗೆ ಕೆಳಕ್ಕೆ ತೆಗೆದುಕೊಂಡು ಬರುವುದು, ಈ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಅರ್ಹರಿಗೆ ಯೋಗ್ಯತೆ ಇರತಕ್ಕಂಥವರಿಗೆ ಮತ್ತು ಪ್ರತಿಭಾನ್ವಿತರಿಗೆ ಅವಕಾಶವಾಯಿತು. ಹಾಗೆಯೇ ನ್ಯಾಯಾಂಗ ಇಲಾಖೆಯಲ್ಲಿ ಕೂಡ ಕಳೆದ ಮೂರು-ನಾಲ್ಕು ತಿಂಗಳುಗಳ ಹಿಂದೆ ಎಪಿಪಿ ಸೆಲೆಕ್ಷನ್ ಆಯಿತು. ಅವರೂ ಕೂಡ ಸಂದರ್ಶನಕ್ಕೆ ಕೇವಲ ಏಳೂವರೆ ಮಾರ್ಕ್ಸನ್ನು ಇಟ್ಟಿದ್ದರು. ಇವೊತ್ತು ನಮ್ಮ ರಾಜ್ಯದ ಕರ್ನಾಟಕ ಲೋಕಸೇವಾ ಆಯೋಗವು ಸಂದರ್ಶನಕ್ಕೆ 200 ಮಾರ್ಕ್ಸ್‌ಗಳನ್ನು ಇಟ್ಟಿದ್ದಾರೆ. ಅಭ್ಯರ್ಥಿಗಳೂ ಬರವಣಿಗೆಯ ಪರೀಕ್ಷೆಯಲ್ಲಿ ಎಷ್ಟೆಷ್ಟು ಮಾರ್ಕ್ಸ್ ಪಡೆದಿದ್ದಾರೆ ಎಂದು ಮೊದಲೇ ಪ್ರಕಟವಾಗಿರುತ್ತದೆ. ಇಂಟರ್‌ವ್ಯೂ ಮಾಡುವ ಮೆಂಬರ್ಸ್‌ಗೆ ಇದು ಗೊತ್ತಿರುತ್ತದೆ. ಎಲ್ಲರೂ ಒಂದು ಟೇಬಲ್ ಹಾಕಿಕೊಂಡು ಕೂತಿರುತ್ತಾರೆ. ಇವರಿಗೆ ಎಷ್ಟು ಕೊಟ್ಟರೆ ಇವರನ್ನು ಮೇಲಕ್ಕೆ ತೆಗೆದುಕೊಂಡು ಹೋಗಬಹುದು, ಇವನಿಗೆ ಎಷ್ಟು ಕೊಟ್ಟರೆ ಕೆಳಕ್ಕೆ ತೆಗೆದುಕೊಂಡು ಹೋಗಬಹುದು ಎಂದು ಅವರು ನೋಡುತ್ತಿರುತ್ತಾರೆ.

ಇಂಟರ್‌ವ್ಯೂ ಮಾರ್ಕ್ಸ್‌ನ್ನು ಇಂಟರ್‌ವ್ಯೂ ಮಾಡಿದ ದಿವಸವೇ ಅನೌನ್ಸ್ ಮಾಡಬೇಕು. ಆದರೆ ಅವೊತ್ತು ಅನೌನ್ಸ್ ಮಾಡುವುದಿಲ್ಲ. ತೂಕ ನೋಡಿಕೊಂಡು, ಕೊನೆಯ ದಿವಸ ಎಲ್ಲಾ ಆದಮೇಲೆ ಕುಳಿತುಕೊಂಡು ಚರ್ಚೆ ಮಾಡಿ ಅನೌನ್ಸ್ ಮಾಡುತ್ತಾರೆ. ಇದನ್ನು ಕರ್ನಾಟಕ ಲೋಕಸೇವಾ ಆಯೋಗ ಎಂದು ಹೇಳುವುದಕ್ಕೆ ನನಗಂತೂ ಬಹಳ ನಾಚಿಕೆಯಾಗುತ್ತದೆ, ಸಂಕೋಚವಾಗುತ್ತದೆ. ಇದು ಲೋಕಸೇವಾ ಆಯೋಗವಲ್ಲ, ಇದು ಕಂಟಕ ಆಯೋಗ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಏನು ತೂಕ ಎಂದು ಇಲ್ಲಿ ಸ್ಪಷ್ಟಪಡಿಸಬೇಕು. ಬರೀ ತೂಕ ಎಂದರೆ ಗೊತ್ತಾಗುವುದಿಲ್ಲ. ತೂಕ ಎಂದರೆ ಏನು ಎಂದು ಇಲ್ಲಿ ಗೊತ್ತಾಗಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಸ್ನೇಹಿತರಾದ ಮಾನ್ಯ ಬಾಲಕೃಷ್ಣರವರೆ, ಇವೊತ್ತು ನೇಮಕಾತಿ ಮಾಡುವುದಕ್ಕೆ ಕೆ.ಪಿ.ಎಸ್.ಸಿ.ಗೆ ಎರಡು ಸೀಟ್ ಖಾಲಿ ಇರಬಹುದು. ಸರ್ಕಾರಕ್ಕೆ ಗೊತ್ತಿದೆ ನೇಮಕಾತಿ ಮಾಡುವುದಕ್ಕೆ ಎಷ್ಟು ಒತ್ತಡಗಳು ಬರುತ್ತದೆ ಎಂದು. ಏಕೆ? ಒಳ್ಳೆಯವರನ್ನು ಆಯ್ಕೆ ಮಾಡಿ ಈ ರಾಜ್ಯಕ್ಕೆ ಕೊಡುಗೆ ಕೊಡಬೇಕು ಎಂದಲ್ಲ. ಕಲ್ಲು ಕಟ್ಟಡ ಕಟ್ಟಿ ಉದ್ಯೋಗ ಸೌಧವನ್ನು ಕಟ್ಟಿ ಅವರನ್ನು ಅಲ್ಲಿ ಕೂರಿಸಿರುವುದು. ಮೂಟೆಗಟ್ಟಲೇ ದುಡ್ಡು, ತಿನ್ನುವುದಕ್ಕೆ ಆ ಉದ್ಯೋಗ ಸೌಧ ಇರುವುದು ಎಂದು ಭಾವಿಸಿಕೊಳ್ಳಬಾರದು. ಈ ವಿಧಾನಸೌಧದ ಕೂಗಳತೆಯಲ್ಲಿ ಆ ಉದ್ಯೋಗ ಸೌಧ ಇದೆ. ನಾವೆಲ್ಲಾ ಆತ್ಮಾವಲೋಕನ ಮಾಡಿಕೊಳ್ಳೋಣ. ಅಂಥ ಪರಮ ಪವಿತ್ರವಾದಂಥ ಉದ್ಯೋಗ ಸೌಧದಲ್ಲಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳನ್ನು ಬಹು ಮುಖ್ಯವಾಗಿ ಏನು ಸಂದರ್ಶನ ಮಾಡಿ ಆಯ್ಕೆ ಮಾಡುತ್ತಾರೆ, ಪ್ರಾಮಾಣಿಕವಾಗಿ ಯೋಗ್ಯತೆ ಇರುವವರನ್ನು ಅರ್ಹತೆ ಇರತಕ್ಕಂಥವರನ್ನು, ಬುದ್ಧಿವಂತರನ್ನು ಆಯ್ಕೆ ಮಾಡಿ ಆ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸುರುತ್ತಾರೆಯೇ ಎನ್ನುವುದನ್ನು ಸರ್ಕಾರ ಎದೆ ಮುಟ್ಟಿಕೊಂಡು ಹೇಳಲಿ. ಏಕೆಂದರೆ ಇಷ್ಟೊಂದು ಕೂಗಳತೆ ದೂರದಲ್ಲಿ ಇಷ್ಟು ಅವ್ಯವಹಾರ ಆಗುತ್ತಿದ್ದರೂ ಕೂಡ ನಾವು ನೋಡಿಕೊಂಡು ಕುಳಿತುಕೊಂಡರೆ, ಹೇಗೆ? ಓ ಅದೊಂದು ಸಂವಿಧಾನಿಕ ಸಂಸ್ಥೆ, ರಾಜ್ಯಾಂಗಬದ್ಧವಾದ ಸಂಸ್ಥೆ, ಅದರ ಬಗ್ಗೆ ಮಾತನಾಡಬಾರದು ಎಂದರೆ, ಸರ್ಕಾರದಿಂದ ಕೊಡುವ ಬಡವರ ಜನರ ಹಣ ಅದು. ರಾಜ್ಯಾಂಗಬದ್ಧವಾದಂಥ ಸಂಸ್ಥೆಯಲ್ಲಿರುವವರು ರಾಜ್ಯಾಂಗಬದ್ಧವಾಗಿ ಅವರು ನಡೆದುಕೊಳ್ಳಬೇಕು; ನ್ಯಾಯಬದ್ಧವಾಗಿ ನಡೆದುಕೊಳ್ಳಬೇಕು, ಸಂವಿಧಾನಬದ್ಧವಾಗಿ ನಡೆದುಕೊಳ್ಳಬೇಕು, ನಾವು ಆಗ ತಕರಾರನ್ನು ಎತ್ತುವುದಿಲ್ಲ. ಆದರೆ ಅದು ರಾಜ್ಯಾಂಗಬದ್ಧಕ್ಕೆ ವಿರೋಧವಾಗಿ ನಡೆದುಕೊಂಡಾಗ ನಾವು ತಕರಾರನ್ನು ಎತ್ತಲೇಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತಿದ್ದೇನೆ. 2002 ರಲ್ಲಿ ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿದರು. ಆ ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಏನು ಹೇಳಿದ್ದಾರೆಂದರೆ, ಮಾನ್ಯ ಉಪಾಧ್ಯಕ್ಷರೆ–

> "Viva Voce-personality test, as the case may be, any in respect of Direct Recruitment shall not exceed five percent of the maximum marks specified for written competitive examination or qualifying examination".

ಬರವಣಿಗೆ ಪರೀಕ್ಷೆಗೆ ಎಷ್ಟು ಮಾರ್ಕ್ಸ್ ನಮೂದು ಮಾಡುತ್ತಾರೋ ಅದರಲ್ಲಿ ಶೇಕಡ 5ಕ್ಕಿಂತ ಹೆಚ್ಚು ಮಾರ್ಕ್ಸ್‌ನ್ನು ಸಂದರ್ಶನಕ್ಕೆ ಇಡಬಾರದು ಎಂದು ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಹೇಳುತ್ತಾರೆ. ಅಂದರೆ ಅವರು 1800 ಮಾರ್ಕ್ಸ್‌ಗೆ ಬರವಣಿಗೆ ಪರೀಕ್ಷೆಯನ್ನು ಮಾಡಿದರೆ 90 ಮಾರ್ಕ್ಸ್‌ಗಿಂತ ಹೆಚ್ಚು ಮಾರ್ಕ್ಸ್‌ನ್ನು ಅವರು ಸಂದರ್ಶನಕ್ಕೆ ಇಡಲೇಬಾರದು. ಆದರೆ ಅವರು 200 ಮಾರ್ಕ್ಸ್‌ಗೆ ಸಂದರ್ಶನವನ್ನು ಇಟ್ಟುಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ರಾಮಸ್ವಾಮಿಯವರೆ, 90 ಮಾರ್ಕ್ಸ್ ಆದರೂ ಏಕೆ ಬೇಕು ಹೇಳಿ? ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಂತ್ರಿಗಳಾದ ಮಾನ್ಯ ಗೋವಿಂದ ಕಾರ್‌ಜೋಳ್‌ರವರು ಈಗ ಇಲ್ಲಿ ಇದ್ದ ಹಾಗೆ ಇಲ್ಲ. ಮಾನ್ಯ ಯಡಿಯೂರಪ್ಪನವರು ಇಲ್ಲೇ ಇದ್ದಾರೆ. ಆ ದಿವಸ ಅವರ ಮನೆಗೆ ಹೋದಾಗ ಮೊನ್ನೆಯ ಅಪಾಯಿಂಟ್‌ಮೆಂಟ್‌ನಲ್ಲಿ ಮಾನ್ಯ ಗೋವಿಂದ ಕಾರ್‌ಜೋಳ್‌ರವರು ಒಂದ್ನೈವತ್ತು ಮಂದಿಯನ್ನು ಕರೆದುಕೊಂಡು ಬಂದು ಇವರ ಮುಂದೆ ಹೇಳಿದ್ದಾರೆ. ಆ ದಿವಸ ನಿಮ್ಮ ಮನೆಗೆ ಬಂದಾಗ, ಆಗ ಮಾನ್ಯ ಕಾರ್‌ಜೋಳ್‌ರವರು ಇನ್ನೂ ಮಂತ್ರಿ ಆಗಿರಲಿಲ್ಲ. ಬಂದು ಈ ಹುಡುಗರ ಮೂಲಕ ಹೇಳಿದ್ದಾರೆ, ಮೊನ್ನೆಯ ಅಪಾಯಿಂಟ್‌ಮೆಂಟ್‌ನಲ್ಲಿ ಎಷ್ಟು ಅನ್ಯಾಯವಾಗಿದೆ, ಏನು ನಡೆದಿದೆ ಎಂದು ಮಾನ್ಯ ಯಡಿಯೂರಪ್ಪನವರಿಗೆ ಅವೊತ್ತು ನನ್ನ ಎದುರಿನಲ್ಲಿಯೇ ಎಲ್ಲರೂ ಬಂದುಹೇಳಿದ್ದರೆ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಿ. 90 ಮಾರ್ಕ್ಸ್ ಆದರೂ ಏಕೆ ಬೇಕು ಹೇಳಿ. 200 ಮಾರ್ಕ್ಸ್ ಇಟ್ಟಿದ್ದೀರಿ, ಏಕೆ ಬೇಕು? 90 ಮಾರ್ಕ್ಸ್ ಆದರೂ ಏಕೆ ಬೇಕು ಹೇಳಿ?

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಪಾಟೀಲರೆ, ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಹೇಳಿರತಕ್ಕಂಥಾದ್ದು ಗರಿಷ್ಟ ಅವರು 5 ಪರ್ಸೆಂಟ್‌ವರೆಗೂ ಇಟ್ಟುಕೊಳ್ಳಬಹುದು ಎಂದು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ರಾಮಸ್ವಾಮಿಯವರೇ, ಎಲ್ಲರನ್ನೂ ಭ್ರಷ್ಟರು ಎಂದು ದಯಮಾಡಿ ನೀವು ತೂಗಬಾರದು. ಕೆಲವರು ಭ್ರಷ್ಟರು ಇರುತ್ತಾರೆ, ಕೆಲವರು ಹಾಗೆ ಇಲ್ಲದೇ ಇರುವವರೂ ಇರುತ್ತಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಭ್ರಷ್ಟರು ಎಂದ ತಕ್ಷಣ ಇವರೇಕೆ ಹೀಗೆ ಹೇಳಬೇಕು?

ಶ್ರೀ ಎ.ಟಿ. ರಾಮಸ್ವಾಮಿ : ಬರ್ತೀನಿ, ಬರ್ತೀನಿ ಪುಟ್ಟೇಗೌಡರೆ, ಈಗ ಗರಿಷ್ಠ 5 ಪರ್ಸೆಂಟ್‌ವರೆಗೂ ಇಟ್ಟುಕೊಳ್ಳಬಹುದು ಎಂದಿದೆ. ಅದನ್ನು ಇಟ್ಟುಕೊಳ್ಳಬೇಕಾಗಿಲ್ಲ. ನಾನು ಆಗಲೆ ಹೇಳಿದೆನಲ್ಲಾ ಹಿಂದೆ ಖರ್ಗೆಯವರು ಇದ್ದಾಗ ಎಸ್.ಐ. ಸೆಲೆಕ್ಷನ್‌ನಲ್ಲಿ ಕೇವಲ ಏಳೂವರೆ ಮಾರ್ಕ್ಸ್ ಇಟ್ಟಿದ್ದರು. ಆದ್ದರಿಂದ ಕಡಿಮೆ ಇಟ್ಟುಕೊಳ್ಳಬಹುದು. ಆದರೂ ಅವರು 90 ಮಾರ್ಕ್ಸ್‌ವರೆಗೂ ಗರಿಷ್ಠವಾಗಿ ಇಟ್ಟುಕೊಳ್ಳಬಹುದು. ಆದರೆ ಅವರು 200 ಮಾರ್ಕ್ಸ್ ಇಟ್ಟುಕೊಂಡರು. Are they above the law of this land? KPSC, are they above the law of this land? ಹೇಳಿ ಇದು ಏನಿದೆ ಎಲ್ಲಾ ರೂಲ್ಸ್‌ಗೂ ಇದು "Mother of all rules".. ಎಂದು ನಾನು ತಿಳಿದುಕೊಂಡಿದ್ದೇನೆ. ಈ General Recruitment Rules. ಇದಕ್ಕೆ ವಿರುದ್ಧವಾಗಿ ಅವರು

ಆಯ್ಕೆಯನ್ನು ಮಾಡತಕ್ಕಂಥಾದ್ದು ಸಂದರ್ಶನಕ್ಕೆ ಮಾರ್ಕ್ಸ್‌ನ್ನು ಇಟ್ಟುಕೊಳ್ಳತಕ್ಕಂಥದ್ದು, ಅವೊತ್ತು ಅವೊತ್ತೇನೇ ಸಂದರ್ಶನದ ಮಾರ್ಕ್ಸ್‌ನ್ನು ಅನೌನ್ಸ್ ಮಾಡದೇ ಇರತಕ್ಕಂಥಾದ್ದು, ಈ ರೀತಿಯ ಲೋಪದೋಷಗಳು ಏನು ಆಗುತ್ತಿದೆ, ಇದಕ್ಕಾಗಿಯೇ ನಾನು ಹೇಳಿದ್ದು, ಇವೊತ್ತು ಕೆ.ಪಿ.ಎಸ್.ಸಿ.ಗೆ ಎರಡು ಸೀಟ್ ಖಾಲಿ ಬಿದ್ದಿದೆ ಎಂದರೆ ಸರ್ಕಾರದ ಮೇಲೆ ಇಲ್ಲದ ಒತ್ತಡ, ನನ್ನನ್ನು ಮಾಡಿ, ನನ್ನನ್ನು ಮಾಡಿ ಎಂದು ಒತ್ತಡ ಏಕೆ? ನಾನು ಆಗಲೇ ಹೇಳಿದೆ ಇದು ಈ ರಾಜ್ಯಕ್ಕೆ ಕೊಡುಗೆ ಕೊಡಿಸುವುದಕ್ಕೆ ಅಲ್ಲ. ಅವರ ಜೇಬುಗಳನ್ನು ಭರ್ತಿ ಮಾಡುವುದಕ್ಕೆ. ಈ ಮಟ್ಟಕ್ಕೆ ನಾವು ಕೆ.ಪಿ.ಎಸ್.ಸಿ. ಯನ್ನು ಬೆಳೆಯುವುದಕ್ಕೆ ಬಿಟ್ಟರೆ ಅದು ಸರಿಯಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಚಿಸುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ಈಗ ಅಲ್ಲಿ ಸಂದರ್ಶನ ಎಂದು ಪರ್ಸನಾಲಿಟಿ ಟೆಸ್ಟ್‌ನ್ನು ಏನು ಮಾಡುತ್ತಾರೆ ನಿಜಕ್ಕೂ ಅಲ್ಲಿ ಆ ಪರ್ಸನಾಲಿಟಿ ಟೆಸ್ಟ್‌ನಲ್ಲಿ ಸೆಲೆಕ್ಟ್ ಮಾಡುವಾಗ ಯೋಗ್ಯರನ್ನು ಅಥವಾ ಅರ್ಹತೆ ಇರುವವರನ್ನು, ಮೌಲ್ಯವನ್ನು ಅಳತೆ ಮಾಡಿ ಸೆಲೆಕ್ಟ್ ಮಾಡುವುದಿಲ್ಲ. ಅದೊಂದು ಪಾರ್ಸನಾಲಿಟಿ ಟೆಸ್ಟ್ ಎನ್ನತಕ್ಕಂಥಾದ್ದು ಒಂದು ದೊಡ್ಡ ಡ್ರಾಮ. ಅದು ಒಂದು ಥೊಡ್ಡ ನಾಟಕ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ರಾಮಸ್ವಾಮಿಯವರೆ, ಅದನ್ನು ವಿಡಿಯೋ ಮಾಡಬೇಕು ಅದರೆ ಇವರು ವಿಡಿಯೋ ಮಾಡುವುದಿಲ್ಲವಲ್ಲಾ. ಕಂಪ್ಲೀಟ್ ವಿಡಿಯೋ ಮಾಡಿದರೆ ನೀವು ಹೇಳಿದ ಹಾಗೆ ಎಲ್ಲರೂ ಹೊರಗೆ ಬರುತ್ತಾರೆ. ಆದರೆ ಇವರು ವಿಡಿಯೋ ಮಾಡುವುದಿಲ್ಲವಲ್ಲಾ.

ಶ್ರೀ ಎ.ಟಿ. ರಾಮಸ್ವಾಮಿ : ಪರ್ಸನಾಲಿಟಿ ಟೆಸ್ಟ್ ಎಂದು ಇವರು ಏನು ಮಾಡುತ್ತಾರೆ ಅದೊಂದು ದೊಡ್ಡ ಡ್ರಾಮ, ದೊಡ್ಡ ನಾಟಕ.

ಶ್ರೀ ಬಸವರಾಜ ರಾಯರೆಡ್ಡಿ : ಅದು ಹಣ ಮಾಡುವುದಕ್ಕೆ ಒಂದು ದಂಧೆ. ಹಣ ಮಾಡುವುದಕ್ಕೆ ಒಂದು ಉಪಾಯ.

ಶ್ರೀ ಎ.ಟಿ.ರಾಮಸ್ವಾಮಿ : ದೊಡ್ಡ ನಾಟಕ. ಆ ದೃಷ್ಟಿಯಿಂದ ಇದನ್ನು ಸರಿಪಡಿಸತಕ್ಕಂಥ ದಿಕ್ಕಿನಲ್ಲಿ ಸರ್ಕಾರ ಬಹಳ ಗಂಭೀರವಾಗಿ, ಆಲೋಚನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸುತ್ತಾರೆ. ಇದನ್ನು ಎಲ್ಲಿ ಮುದ್ರಿಸಬೇಕು? ಕರ್ನಾಟಕ ಸರ್ಕಾರದ ಮುದ್ರಣಾಲಯದಲ್ಲಿ ಮುದ್ರಿಸಬೇಕು. ಗೌಪ್ಯತೆಯನ್ನು ಕಾಪಾಡುವ ಒಂದು ದೃಷ್ಟಿಯಿಂದ. ಒಂದು ವೇಳೆ ನಮ್ಮ ಸರ್ಕಾರಿ ಮುದ್ರಣಾಲಯದಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದರೆ ಅವರಿಂದ ಒಪ್ಪಿಗೆಯನ್ನು ಪಡೆದುಕೊಂಡು ಅಷ್ಟನ್ನು ಬೇರೆ ಮುದ್ರಣಾಲಯದಲ್ಲಿ ಮಾಡುವುದಕ್ಕೆ ಆಮೇಲೆ ಆಲೋಚನೆಯನ್ನು ಮಾಡಬೇಕು. ಇವರು ಕರ್ನಾಟಕ ಸರ್ಕಾರದ ಮುದ್ರಣಾಲಯದಲ್ಲಿ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿಯೇ ಇಲ್ಲ. ಹೀಗಾಗಿಯೇ ಪ್ರಶ್ನೆಪತ್ರಿಕೆಗಳು ಔಟ್ ಆಗಿದ್ದು, ನೋಡಿದಿರಲ್ಲಾ, ಒಂದೇ ಮನೆಯಲ್ಲಿ ಮೂರ್‍ನಾಲ್ಕು ಜನರು ಆಯ್ಕೆ ಆಗುವುದಕ್ಕೆ ಅವಕಾಶ ಆಗಿದ್ದು. ಇದೊಂದು ದೋಷವನ್ನು ಮಹತ್ತರವಾಗಿ ಅವರು ಮಾಡಿದ್ದಾರೆ. ಅಷ್ಟೇ ಅಲ್ಲ, ಎರಡನೆಯದಾಗಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆ ನಡೆಯಿತು. ನಮ್ಮ ಕರ್ನಾಟಕ ಲೋಕಸೇವಾ ಆಯೋಗದಲ್ಲಿಯೇ ಬಹಳ ಸುಸಜ್ಜಿತವಾದಂಥ ಗಣಕಯಂತ್ರ

ಮೌಲ್ಯಮಾಪನ ಮಾಡುವುದಕ್ಕಾಗಿ ಇದೆ. ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮೌಲ್ಯಮಾಪನ ಮಾಡುವುದಕ್ಕೆ ಗಣಕ ಯಂತ್ರ ಇದೆ. ಆದರೆ ಅಲ್ಲಿ ಮೌಲ್ಯಮಾಪನ ಮಾಡಿಸಲಿಲ್ಲ. ಅವರು ಖಾಸಗಿಯವರಿಗೆ ಕೊಟ್ಟು ಮೌಲ್ಯಮಾಪನ ಮಾಡಿಸಿದರು. ಏಕೆ? ಇವರಿಗೆ ಬೇಕು ಬೇಕಾದವರಿಗೆ ಹೆಚ್ಚು ಮಾರ್ಕ್ಸ್‌ನ್ನು ಹಾಕಿಸಿಕೊಳ್ಳುವುದಕ್ಕೆ, ಭ್ರಷ್ಟಾಚಾರ ಮಾಡುವುದಕ್ಕೆ, ಸ್ವಜನ ಪಕ್ಷಪಾತ ಮಾಡುವುದಕ್ಕೆ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಖಾಸಗಿಯವರಿಗೆ ಮೌಲ್ಯ ಮಾಪನ ಮಾಡುವುದಕ್ಕೆ ಕೊಟ್ಟಿದ್ದರಿಂದ ಗೌಪ್ಯತೆಯನ್ನೂ ಕೂಡ ಕಾಪಾಡುವುದಕ್ಕೆ ಆಗುವುದಿಲ್ಲ ಸನ್ಮಾನ್ಯ ಉಪಾಧ್ಯಕ್ಷರೆ. ಇಷ್ಟರ ಮಟ್ಟಿಗೆ ಅವ್ಯವಹಾರಗಳು ಅಲ್ಲಿ ನಡೆಯುತ್ತಿರತಕ್ಕಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತಿದ್ದೇನೆ. ಈಗ 1999ರ ಕೆಎಎಸ್ ಪರೀಕ್ಷೆಯ ಫಲಿತಾಂಶ ಏನಾಯಿತು? ಅದನ್ನು ವೆಬ್‌ಸೈಟ್‌ನಲ್ಲಿ ಬಿತ್ತರಿಸಲಿಲ್ಲ. ಏಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿಲ್ಲ? ಒಂದು ಸಾರಿ ನಾಮಫಲಕದಲ್ಲಿ ಪ್ರಕಟಿಸಿದರು, ಮತ್ತೆ ಅದನ್ನು ಬದಲಾಯಿಸಿ ಮತ್ತೊಂದು ಮಾಡಿದರು. ಇದರಲ್ಲಿ ಅವ್ಯವಹಾರ ಮಾಡಿಕೊಂಡರು. ಅದಕ್ಕಾಗಿಯೇ, ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು ಎನ್ನುವಂತಹ ಮಾತನ್ನು ನಾನು ಹೇಳಿದ್ದು ಮೊನ್ನೆ ಮೊನ್ನೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು, 4ನೇ ತಾರೀಖು ಇಡೀ ರಾಷ್ಟ್ರದ ಲೋಕ ಸೇವಾ ಆಯೋಗದ ಎಲ್ಲಾ ರಾಜ್ಯಗಳ ಅಧ್ಯಕ್ಷರು ಬಂದಿದ್ದರು, ಅಲ್ಲಿ ಅವರು ಮಾತನಾಡುತ್ತಾ ಹೇಳಿದರು "Government is streamlining the KPSC to make it more viable."ಎಂದು. ಎಂದರೆ ವಯಬಲ್ ಅಲ್ಲ ಎನ್ನುವಂಥಾದ್ದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. "Make it more viable" -- ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರು ಒಪ್ಪಿಕೊಂಡಿದ್ದಾರೆ. ಆದುದರಿಂಗ ಸರ್ಕಾರ ಅವರಿಗೆ ಏಕೆ ನೇಮಕಾತಿ ಮಾಡುವುದಕ್ಕೆ ಕೊಡುತ್ತೀರಿ? ಇಲಾಖೆಗಳು ಇವೆ, ಪಾರದರ್ಶಕವಾಗಿ ಮಾಡುವುದಕ್ಕೆ ಕಾನೂನು ಮಾಡಿಕೊಳ್ಳಿ. ನೇರ ನೇಮಕಾತಿ ಮಾಡಿ, ಸುಲಿಗೆ ಮಾಡುವುದಕ್ಕೆ ಬಿಡಬೇಡಿ. ಇವತ್ತು ಒಬ್ಬ ಅಬ್ಯರ್ಥಿ 10 ಲಕ್ಷ 12 ಲಕ್ಷ ರೂ ಕೊಟ್ಟು ಅವನು ಎಂಟ್ರಿ ಆಗುವಾಗ ದುಡ್ಡು ಕೊಟ್ಟುಬಿಟ್ಟು ಅವನು ತಹಸೀಲ್ದಾರ್ ಅಥವಾ ಎಸಿ ಆದರೆ ಅವರಿಂದ ನಾವು ಪ್ರಾಮಾಣಿಕತೆ ಹೇಗೆ ನಿರೀಕ್ಷೆ ಮಾಡುವುದಕ್ಕಾಗುತ್ತದೆ? ಕಾರ್ಯಾಂಗದ ಶುದ್ಧಿಯನ್ನು ನಾವು ಹೇಗೆ ಎಕ್ಸ್‌ಪೆಕ್ಟ್ ಮಾಡುವುದಕ್ಕಾಗುತ್ತದೆ ಹೇಳಿ. ಆಡಳಿತ ಶುದ್ಧಿಯನ್ನು ನಾವು ಹೇಗೆ ನಿರೀಕ್ಷೆ ಮಾಡುವುದಕ್ಕಾಗುತ್ತದೆ?

ಶ್ರೀ ಎಸ್. ಎಸ್. ಪಾಟೀಲ್ : ಒಬ್ಬ ಎಸಿಗೆ 10 ಲಕ್ಷ ರೂಪಾಯಿ ಎಂದು ಹೇಳುತ್ತೀರಲ್ಲಾ, ಅಲ್ಲಿ ಹೋಗಿ ಮಾಡಿಸಿಕೊಂಡಿರುವವರನ್ನು ಕೇಳಿ ಗೊತ್ತಾಗುತ್ತದೆ.

ಶ್ರೀ ಎ. ಟಿ. ರಾಮಸ್ವಾಮಿ : ಜಾಸ್ತಿಯಿದೆಯಾ? ನನ್ನ ಗಮನಕ್ಕೆ ಅಷ್ಟೇ ಬಂದಿರುವುದು. ನನ್ನ ಆಲೋಚನಾ ಶಕ್ತಿ ಅಷ್ಟೇ ಇರುವುದು. ನಿಮಗೆ ಹೆಚ್ಚು ಇರಬಹುದು, ಅದನ್ನು ಬೆಳಕು ಚೆಲ್ಲಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಳೆದ ವರ್ಷ ಜುಲೈ 5ನೇ ತಾರೀಖು ಇದೇ ಸದನದಲ್ಲಿ ಸಾಮಾಜಿಕ ಕಳಕಳಿ ಇಟ್ಟುಕೊಂಡು ನಾನು ಮಾತನಾಡಿದೆ. ಕೆಪಿಎಸ್‌ಸಿ ಇಲ್ಲಿಂದ ಕೂಗಳತೆ ದೂರದಲ್ಲಿದೆ. ಅಲ್ಲಿ 10 ರಿಂದ 12 ಲಕ್ಷ ರೂಪಾಯಿಗೆ ವ್ಯಾಪಾರವಾಗುತ್ತಿದೆ. ಅಲ್ಲಿರುವಂತಹ

ಎಲ್ಲರೂ ಕೂಡ ಅಪ್ರಾಮಾಣಿಕರು ಎಂದು ಸಾರಾಸಗಟಾಗಿ ನಾನು ಹೇಳುವುದಿಲ್ಲ. ಕೆಲವರು ಪ್ರಾಮಾಣಿಕರು ಕೂಡ ಅಲ್ಲಿ ಇರಬಹುದು, ಇದ್ದಾರೆ. ಆದರೆ ಸರ್ಕಾರ ಅವರನ್ನು ನೇಮಕಾತಿ ಮಾಡುವಾಗ ಅವರ ಹಿನ್ನೆಲೆಯನ್ನು ಗಮನಿಸಿ ನೇಮಕಾತಿ ಮಾಡಿ. ಒಳ್ಳೆಯ ಅಭ್ಯರ್ಥಿಗಳನ್ನು, ಯೋಗ್ಯರನ್ನು, ಪ್ರಾಮಾಣಿಕರನ್ನು ಬದ್ಧತೆ ಇರುವವರನ್ನು, ಸೇವಾ ಮನೋಭಾವನೆ ಇರತಕ್ಕಂಥವರನ್ನು ಆಯ್ಕೆ ಮಾಡುವುದಕ್ಕೆ ತಾವು ಕ್ರಮ ಕೈಗೊಳ್ಳಬೇಕೆಂದು ನಾನಿಲ್ಲಿ ಪ್ರಸ್ತಾಪ ಮಾಡಿದ್ದು. ನಾನು ಇಲ್ಲಿ ಪ್ರಸ್ತಾಪ ಮಾಡಿದ್ದು, ನಾನು ಇಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದು, ತಪ್ಪಾ ಹೇಳಿ ಮಾನ್ಯ ಬಾಲಕೃಷ್ಣರವರೇ ನಿಮಗೆ ಇದು ಗೊತ್ತಿದೆ. ಸ್ವಾಮಿ ಉಪಾಧ್ಯಕ್ಷರೆ, ಅಲ್ಲಿ ಕುಳಿತುಕೊಂಡು ದಿನನಿತ್ಯ ಟೀಕೆ. ನಿಮ್ಮ ಎಂಎಲ್‌ಎ ಈ ರೀತಿ ಮಾತನಾಡಿದ್ದಾರೆ, ತೆಗೆದುಕೊಂಡು ಬನ್ನಿ ಹತ್ತು ಲಕ್ಷ ರೂಪಾಯಿಯನ್ನು, ಹನ್ನೆರಡು ಲಕ್ಷ ಕೊಡಿ ನಾನು ಮಾಡಿಕೊಡುತ್ತೇನೆ ಎಂದು ಹೇಳುವುದು ಎಷ್ಟರಮಟ್ಟಿಗೆ ಗತ್ತಿನ ಮಾತದು! ನನ್ನ ಹಕ್ಕಿಗೆ, ನನ್ನ ಅಭಿಪ್ರಾಯಕ್ಕೆ, ನನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ. ದಯವಿಟ್ಟು ತಾವು ನನ್ನ ಹಕ್ಕಿಗೆ, ನನ್ನ ಅಭಿಪ್ರಾಯಕ್ಕೆ, ನನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ. ದಯವಿಟ್ಟು ತಾವು ನನ್ನ ರಕ್ಷಣೆಗೆ ಬರಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಾ, ಇಷ್ಟೊಂದು ದುರುಪಯೋಗ, ಇಷ್ಟೊಂದು ದುರ್ವ್ಯವಹಾರ ಮಾಡುತ್ತಿರತಕ್ಕಂಥ ಲೋಕಸೇವಾ ಆಯೋಗದ ಅಧ್ಯಕ್ಷರಿರಬಹುದು ಅವರು ಸದಸ್ಯರುಗಳಿರಬಹುದು ಅವರನ್ನು ತೆಗೆಯುವುದಕ್ಕೂ ಕೂಡ ಕಾನೂನಿನಲ್ಲಿ, ಸಂವಿಧಾನದಲ್ಲಿ ಅವಕಾಶ ಇದೆ. ಯಾರು ದುರ್ವ್ಯವಹಾರದಲ್ಲಿ, ದುರುಪಯೋಗದಲ್ಲಿ ಅವ್ಯವಹಾರದಲ್ಲಿ ತೊಡಗಿರತಕ್ಕಂಥ ಕೆಪಿಎಸ್‌ಸಿ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ತೆಗೆಯುವುದಕ್ಕೆ ಅವಕಾಶ ಇದೆ. ದಯಮಾಡಿ ತನಿಖೆಗೆ ತಾವು ಅದನ್ನು ಒಳಪಡಿಸಬೇಕು. ಇಲ್ಲವೆಂದರೆ ಅವರಿಗೆ ಈ ಸದನದ ಮೂಲಕ ಛೀಮಾರಿ ಹಾಕಬೇಕು. ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು .....

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ತಹಸೀಲ್ದಾರ್ ನೇಮಕಾತಿ ವಿಚಾರ ಮಾತನಾಡುತ್ತಿದ್ದಾರೋ ಅಥವಾ ಕೆಪಿಎಸ್‌ಸಿ ವಿಚಾರ ಮಾತನಾಡುತ್ತಿದ್ದಾರೋ ಎಂದು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಇಲ್ಲಿ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ : ಈಗ ಸಂವಿಧಾನದ 317ರ ಪ್ರಕಾರ "Removal and Suspension of a Member of a public Service Commission" ನಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇಷ್ಟೊಂದು ದುರುಪಯೋಗ ನಮ್ಮ ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಡೆಯುತ್ತಿದೆ. ದಯವಿಟ್ಟು ಅವರನ್ನು ಅಮಾನತ್ತು ಪಡಿಸುವುದಕ್ಕೆ ಅಥವಾ ರಿಮೂವ್ ಮಾಡುವುದಕ್ಕೆ . . .

ಶ್ರೀ ವಾಟಾಳ್ ನಾಗರಾಜ್ : ತಮಗೆ ಇಷ್ಟು ದುರುಪಯೋಗವಾಗಿದೆಯೆಂದು ಗೊತ್ತಾಗಿದ್ದು ತಮಗೆ ಯಾವಾಗ? ಯಾವಾಗ ಗೊತ್ತಾಯಿತು?

ಶ್ರೀ ಎ.ಟಿ. ರಾಮಸ್ವಾಮಿ : ನಾನು ಹಿಂದೆ ಕೂಡ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಎಷ್ಟು ವರ್ಷದಿಂದ ಇದ್ದಾರೆ? ಅವರನ್ನು ನೇಮಕ ಮಾಡಿದವರು ಯಾರು? ಯಾವ ಸರ್ಕಾರ ನೇಮಕ ಮಾಡಿತು? ಅದರ ಬಗ್ಗೆ ನಿಮಗೆ ಗೊತ್ತೇ ಇಲ್ಲವೆ? ಹೇಳಿ ಮಾನ್ಯ ರಾಮಸ್ವಾಮಿಯವರೆ, ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ನೀವು ಚೆನ್ನಾಗಿ ಮಾತನಾಡುತ್ತೀರಿ. ಬಹಳ ನೇರವಾಗಿ ಹಾಗೂ ನಿಷ್ಠುರವಾಗಿ ಮಾತನಾಡುತ್ತೀರಿ, ಅದರ ಬಗ್ಗೆ ತಕರಾರು ಇಲ್ಲ. ಈ ವಿಚಾರದಲ್ಲಿ ತಾವು ಸ್ವಲ್ಪ ಬೆಳಕು ಚೆಲ್ಲಬೇಕು. ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಯಾವ ಸರ್ಕಾರ ನೇಮಕ ಮಾಡಿತು? ಯಾವಾಗ ಮಾಡಿತು? ಯಾರು ಮಾಡಿದರು? ಯಾವ ಕಾಲದಲ್ಲಿ ಆಯಿತು? ಎಲ್ಲಾ ಬರಲಿ.

ಒಬ್ಬ ಮಾನ್ಯ ಸದಸ್ಯರು : ಈಗ ಆ ಸರ್ಕಾರ ಈ ಸರ್ಕಾರ ಎಂದು ರಾಡಿ ಎಬ್ಬಿಸುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಯಾರ ಕಾಲದಲ್ಲಿ ಮಾಡಿದರು ಎನ್ನುವುದು ಮುಖ್ಯವಲ್ಲ. ಎಲ್ಲಾ ಸರ್ಕಾರಗಳಿದ್ದಾಗ ನೇಮಕ ಮಾಡಿದ್ದಾರೆ. ದಯಮಾಡಿ ಕೇವಲ ಈಗಿರತಕ್ಕಂಥ ಅಧ್ಯಕ್ಷರ ಬಗ್ಗೆ ಮಾತನಾಡುವುದು ಅಲ್ಲ. ಎಲ್ಲಾ ಸರ್ಕಾರಗಳಲ್ಲು ಇದು ಮಾಡಿಕೊಂಡು ಬಂದಿದ್ದಾರೆ. ಇದು ಜನರಲ್ ಆಗಿ ಮಾತನಾಡತಕ್ಕಂಥಾದ್ದು, ಪರ್ಟಿಕ್ಯೂಲರ್ ಆಗಿ ಮಾತನಾಡುವುದಲ್ಲ.

(ಗೊಂದಲ)

ಶ್ರೀ ಎ. ಟಿ. ರಾಮಸ್ವಾಮಿ : ಸರ್ಕಾರಗಳ ಬಗ್ಗೆ ಚರ್ಚೆ ಮಾಡುವುದು ಬೇಡ. ಆಗಿರುವಂತಹ ಲೋಪದೋಷಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡೋಣ. ನಿಯಮ 317ರ ಅಡಿಯಲ್ಲಿ "Removal and Suspension of a Member of a public Service Commission" ಎಂದಿದೆ. ಅದರ ಅಡಿಯಲ್ಲಿ ಯಾರು ಅವ್ಯವಹಾರದಲ್ಲಿ ತೊಡಗಿದ್ದಾರೆ, ನಿಯಮಾವಳಿಗಳನ್ನು ಗಾಳಿಗೆ ತೂರಿ, ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್ ಏನಿದೆ ಅದನ್ನು ಗಾಳಿಗೆ ತೂರಿ, ನೇಮಕಾತಿ ಮಾಡಿಕೊಳ್ಳತಕ್ಕಂಥ ಪ್ರಕ್ರಿಯೆ ನಡೆಸಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರನ್ನು ಆ ಸ್ಥಾನದಿಂದಲೇ ತೆಗೆಯಬೇಕು, ಉಚ್ಚಾಟಿಸಬೇಕು ಎಂದು ಹೇಳಿ ನಾನು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಈಗ ಸ್ಪೆಸಿಫಿಕ್ ಅಲಿಗೇಷನ್ಸ್ ಇದ್ದು, ಅದಕ್ಕೆ ಎಲ್ಲಾ ದಾಖಲೆಗಳು ಅವರಲ್ಲಿದ್ದು, ಇಂತಹ ಸದಸ್ಯರು ಅಥವಾ ಇಂತಹ ಅಧ್ಯಕ್ಷರು, ಇಂತಹ ನೇಮಕಾತಿ ವಿಚಾರದಲ್ಲಿ ಇಷ್ಟು ಹಣ ಇಂತಹ ಕ್ಯಾಂಡಿಡೇಟ್‌ನಿಂದ ಪಡೆದುಕೊಂಡಿದ್ದಾರೆ, ಇಂತಹ ಅರ್ಹ ಅಭ್ಯರ್ಥಿಗೆ ಅನ್ಯಾಯ ಮಾಡಿದ್ದಾರೆ ಎಂದು ಎಲ್ಲಾ ಹೇಳಿದರೆ ಅದರ ಬಗ್ಗೆ ಸರ್ಕಾರ ಎನ್‌ಕ್ವೈರಿ ಮಾಡಬಹುದು, ಆ ಪ್ರಾವಿಜನ್ಸ್ ಎಲ್ಲಾ ಯೂಸ್ ಮಾಡುವುದು ಇದೆಲ್ಲಾ ಇದೆ.

ಉಪಾಧ್ಯಕ್ಷರು : ಜನರಲ್ ಆಗಿ ಹೇಳಿದ್ದಾರೆ.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಈಗ ನಾನು ಏನು ಹೇಳುತ್ತೇನೆ ಎಂದರೆ ಅವರು ಹೇಳಿ ಸ್ವೀಪಿಂಗ್ ರಿಮಾರ್ಕ್ಸ್ ಮಾಡಿ ತೆಗೆಯಬೇಕು ಎಂದೆಲ್ಲಾ ಹೇಳಿದ್ದಾರೆ. ಅದನ್ನು ಪತ್ರಿಕೆಯವರು ನಾಳೆ ಬರೆಯುತ್ತಾರೆ. ಈ ಸದನದಲ್ಲಿ ಅವರ್‍ಯಾರೂ ಸದಸ್ಯರಲ್ಲ. ಅಲ್ಲಿರತಕ್ಕಂಥವರಲ್ಲಿ ಒಳ್ಳೆಯವರು ಹಾಗೂ ಕೆಟ್ಟವರು ಎಲ್ಲರೂ ಇರುತ್ತಾರೆ. ಅವರಿಗೆ ಬೇಕಾದಂತಹ ಜನ ಸಮಾಜದಲ್ಲಿ ಹತ್ತು ಕಡೆ ಇರುತ್ತಾರೆ. ಅವರು ಹೇಗೆ ತಲೆ ಎತ್ತಿಕೊಂಡು ನಾಳೆ ತಿರುಗಾಡಬೇಕು? ನಿರಪರಾಧಿ ಇದ್ದರೆ, ಇದೆಲ್ಲಾ ನಾಳೆ ಪತ್ರಿಕೆಗಳಲ್ಲಿ ಅಚ್ಚಾದರೆ, ಸ್ಪಷ್ಟ ಆರೋಪಗಳು ಇಂತಹವರು ಮಾಡಿದ್ದಾರೆ ಎಂದು ಇಲ್ಲದೇ ಹೋದರೆ ಆ ನಿರಾಪರಾಧಿ ಆಗಿರುವವನ ಗತಿ ಏನು ನಾಳೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಅದಕ್ಕಿಂತ ಮುಂಚಿತವಾಗಿ ತಮಗೆ ದಾಖಲೆಗಳನ್ನೆಲ್ಲಾ ಒದಗಿಸಬೇಕು. ಸ್ಪೀಕರ್‌ರವರಿಗೆ ತಮ್ಮ ಕಾರ್ಯಾಲಯಕ್ಕೆ ಬಂದು, ಈ ದಾಖಲೆಗಳನ್ನು ಒದಗಿಸುತ್ತಿದ್ದೇವೆ, ಇವರ ಮೇಲೆ ನಾವು ಆಪಾದನೆ..

ಶ್ರೀ ಎ.ಟಿ. ರಾಮಸ್ವಾಮಿ : ನಾನು ಸಾರಾಸಗಟಾಗಿ ಹೇಳಿಲ್ಲ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ : ಪ್ರತಿಸಲ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ಖಾಸಗಿಯವರಿಗೆ ಕೊಟ್ಟಿದ್ದಿದೆ, ಅಲ್ಲೆ ಗಣಕ ಯಂತ್ರ ಇದ್ದರೂ ಕೂಡ. ನಿರ್ದಿಷ್ಟವಾಗಿ ಕೆಲವನ್ನು ಹೇಳಿದ್ದೇನೆ. ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ 5 ಪರ್ಸೆಂಟ್ . . .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಇದನ್ನು ತಪ್ಪು ದಾರಿಗೆ ಎಳೆಯಬಾರದು. ಮಾನ್ಯ ಉಪಾಧ್ಯಕ್ಷರೇ ತಮ್ಮ ಕಾರ್ಯಾಲಯಕ್ಕೆ ಬಂದು ಅಧಿಕಾರಿಯವರ ಮೇಲಾಗಲಿ, ಯಾವ ಮೇಲಾಗಲಿ ನಾನು ಆರೋಪ ಮಾಡಬೇಕಾದರೆ ಹೊರಗಡೆ ಇರುವವರಿಗೆ, ಎಲ್ಲಾ ರೀತಿಯ ದಾಖಲೆಗಳನ್ನು ನಿಮಗೆ ಕೊಡಬೇಕಾದ್ದು ಕರ್ತವ್ಯ. ಅದು ಬಿಟ್ಟು ತಾವು ಇಲ್ಲಿ ಬಂದು ಹೇಳಿದ ತಕ್ಷಣ ಅವರನ್ನೇನು ಕರೆಯೋಣವೇ ಇಲ್ಲಿ? ಅವರನ್ನು ಸಾಕ್ಷಿ ಹೇಳುವುದಕ್ಕೆ ಕರೆಯೋಣವೆ? ಅವರಿಗೆ, ಬನ್ನಿ ನಿಮ್ಮ ಬಗ್ಗೆ ಸಮರ್ಥನೆ ಮಾಡಿಕೊಳ್ಳಿ ಎಂದು. ಸಮರ್ಥನೆ ಮಾಡಿಕೊಳ್ಳುವುದಕ್ಕೆ ಇಲ್ಲದೆ ಇದ್ದವರ ಬಗ್ಗೆ ಹೇಗೆ ಮಾತಾನಾಡಿದರೆ ಹೇಗೆ?

ಶ್ರೀ ಎಸ್. ಶಿವಾನಂದ ಪಾಟೀಲ್ : ಅದೂ ಒಂದು ಕಾನ್ಸ್‌ಟಿಟ್ಯೂಷನಲ್ ಬಾಡಿ. ಎ.ಜಿ ಆಫೀಸ್, ಲೋಕಸೇವಾ ಆಯೋಗ, ಅಂತಹ ಆಫೀಸ್ ಮೇಲೆ ರಿಮಾರ್ಕ್ ಮಾಡಬೇಕಾದರೆ we must be aware.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಅವರು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದರೆ, ಅದಕ್ಕೆ ನಾವು ತಡೆ ಹಾಕಬೇಕು ಎನ್ನುವಂತಹ ಉದ್ದೇಶದಿಂದ ನಾನು ನಿಂತಿಲ್ಲ. ಭ್ರಷ್ಟಾಚಾರ ಎನ್ನುವಂಥಾದ್ದನ್ನು ನಾವು ಯಾರೂ ಸಹಿಸುವುದಿಲ್ಲ. ನಮ್ಮ ನಮ್ಮ ಜೀವನದ ಶೈಲಿಯೇ ಅದಕ್ಕೆ

ಸಾಕ್ಷಿ ಅದಕ್ಕೆ ಯಾವುದೋ ಒಂದು ವಾಮ ಮಾರ್ಗವನ್ನು ನಾನು ಹುಡುಕುತ್ತಿದ್ದೇನೆ ಎಂದು ತಾವು ಭಾವಿಸುವುದು ಬೇಡ. ನೂರಕ್ಕೆ ನೂರರಷ್ಟು I am with you. ಆ ತರಹ ಇದ್ದರೆ ಅದನ್ನು ಚೆಕ್ ಮಾಡಲೇಬೇಕಾಗುತ್ತದೆ. ಆದರೆ ಎಲ್ಲೋ ಒಂದು ಕಡೆ ನಾವು ಶಾಸನ ಸಭೆಯಲ್ಲಿ ಕೆಲಸ ಮಾಡುವಾಗ KPSC is a creation of the Constitution ಎಂಬುದನ್ನು ಅರಿತುಕೊಳ್ಳಬೇಕು. ನೆಗಡಿ ಹಿಡಿದರೆ ಮೂಗು ತೆಗೆದು ಹಾಕಿದರೆ ಸರಿಯೆ?

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ಪುಟ್ಟೇಗೌಡರೇ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಅವರ ಬಗ್ಗೆ ಮಾತನಾಡುವುದಿಲ್ಲ. ನಾನು ಅವರನ್ನು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ನಾನು ದೊಡ್ಡವನಲ್ಲ, ನಾನು ಬಹಳ ಚಿಕ್ಕವನು ಈ ಶಾಸನ ಸಭೆಯಲ್ಲಿ. ನಾನು ಹಳ್ಳಿಯಿಂದ ಬಂದವನು, ನಾನು ಬಹಳ ದೊಡ್ಡವನು ನನ್ನಲ್ಲಿ ಬ್ರಹ್ಮತ್ವ ಇದೆ ಎಂದು ತಿಳಿದುಕೊಂಡಿಲ್ಲ. ಶಾಸನ ಸಭಾ ಸದಸ್ಯರಾದ ನಮಗೆ ಮರ್ಯಾದೆ ಇಲ್ಲವೆ? ಐದಾರು ವರ್ಷದಿಂದ ಅಲ್ಲಿಗೆ ನಮ್ಮವರ್‍ಯಾರೂ ಹೋಗಿಲ್ಲ, ನಮ್ಮ ಮಕ್ಕಳು ಯಾರಾದರೂ ಹೋದರೆ ಅಲ್ಲಿ, ಏಯ್ ನಿಮ್ಮ ಶಾಸಕನಿಗೋಸ್ಕರ ನಾವು ಕೆಲಸ ಕೊಡುವುದಿಲ್ಲ ಎನ್ನುತ್ತಾರೆ. ಹೀಗೆಲ್ಲ ಮಾತನಾಡಿದರೆ ನಾವು ಹೇಗೆ ಸಹಿಸಿಕೊಳ್ಳಬೇಕು ಸ್ವಾಮಿ? ಈ ಶಾಸನ ಸಭೆಯಲ್ಲಿ ಕುಳಿತುಕೊಳ್ಳುವ ಸದಸ್ಯರಾದ ನಮಗೆ ಮರ್ಯಾದೆ ಇಲ್ಲವಾ? ದಯಮಾಡಿ ಬೇಕಾದರೆ ನೀವು ಪರೀಕ್ಷೆ ಮಾಡಿ. ನಾನು ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಿಲ್ಲ. ಅವರು ಯಾರಿಗಾದರೂ ಕೆಲಸ ಕೊಡಲಿ, ನಾವು ಆ ಕಡೆಗೆ ತಲೆ ಹಾಕಿಲ್ಲ ಮಾನ್ಯ ರಮೇಶ್‌ಕುಮಾರ್‌ರವರೇ. ನಮ್ಮ ಹಾಸನ ಜಿಲ್ಲೆಯವರು ನಾಲ್ಕೈದು ಜನ ಆ ಕಡೆ ತಲೆ ಹಾಕಿಲ್ಲ, ನಮ್ಮ ಕಡೆಯವರು ಯಾರಾದರೂ ಹೋದರೆ ಅವರು ಫಸ್ಟ್ ಹೇಳುವುದು, ಯಾಕಾದರೂ ನಮ್ಮನ್ನು ಅಲ್ಲಿಗೆ ಕಳುಹಿಸಿದಿರಿ ಇಲ್ಲಿ ಎಲ್ಲಾದರೂ ಎಲೆ ಅಡಿಕೆ ಹಾಕಿಕೊಳ್ಳುವಂತಹ ಅಜ್ಜಿಯ ಹತ್ತಿರ ಹೋಗಿದ್ದರೆ ಸಮಾಧಾನ ಹೇಳುತ್ತಿದ್ದಳು. ಮುಖ ಮುಖಕ್ಕೆ ಉಗಿದು ಕಳುಹಿಸುತ್ತಾರೆ ನಮ್ಮನ್ನು ಎಂದು ಹೇಳುತ್ತಾರಲ್ಲಾ ಇದು ಯಾವ ನ್ಯಾಯ ಎಂದು ಹೇಳುತ್ತಾರೆ. ನಮ್ಮನ್ನು ಬಯ್ಯುವುದಕ್ಕೆ ಕೆಪಿಎಸ್‌ಸಿ ಆಫೀಸ್‌ನಲ್ಲಿ ಅವರಿಗೆ ಏನು ರೈಟ್ಸ್ ಇದೆ? ನೀವು ಬಯ್ಯಿರಿ. ನೀವು ವಿರೋಧ ಪಕ್ಷದವರು, ಇಲ್ಲಿ ಬಯ್ದಾಡುತ್ತೇವೆ, ಒಳಗಡೆ ಸೌಜನ್ಯದಿಂದ ನೋಡುತ್ತೇವೆ. ಅವರು ಹೀನಾಮಾನವಾಗಿ ನಮ್ಮ ಕಡೆಯವರು ಹೋದವರ ಮೇಲೆ, ದಯಮಾಡಿ ಕೇಳಿ ನಮ್ಮ ಹಾಸನದಿಂದ ಹೋಗುವವರನ್ನು, ನಮ್ಮ ಅಭಿಪ್ರಾಯ ಕೇಳುತ್ತೇವೆ, ನಮ್ಮ ಕಡೆ ಹುಡುಗರು ಅಲ್ಲಿಗೆ ಹೋದರೆ ಅವರು ಫಸ್ಟ್ ಹೇಳುವುದು, ನಿಮ್ಮ ಎಂಎಲ್‌ಎಗೋಸ್ಕರ ನಿಮಗೆ ಕೆಲಸ ಕೊಡುವುದಿಲ್ಲ ಎಂದು. ಈ ರೀತಿ ಹೇಳಿದರೆ ಹಳ್ಳಿ ಹುಡುಗರಿಗೆ ಮಾನಸಿಕವಾಗಿ ಎಷ್ಟು ನೋವಾಗುತ್ತದೆ? ನಮಗೆ ಹೊಟ್ಟೆ ಉರಿಯುವುದಿಲ್ಲವೆ? ನಮಗೆ ವಿರೋಧವಾಗಿ ರಾಜಕೀಯದಲ್ಲಿ ಇರುವವರು ನಮ್ಮನ್ನು ಯಾರೂ ಬಯ್ಯುವುದಿಲ್ಲ, ಅವರು ಸೌಜನ್ಯವಾಗಿ

ನಡೆದುಕೊಳ್ಳುತ್ತಾರೆ. ಆ ಆಫೀಸಿನಲ್ಲಿ ಕುಳಿತುಕೊಂಡು ನಿಮ್ಮ ಎಂಎಲ್ಎ ಇದ್ದರೇನಂತೆ ನಿಮಗೆ ನಾವು ಕೆಲಸ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇದು ಯಾವ ನ್ಯಾಯ ಸ್ವಾಮಿ? ದಯಮಾಡಿ ನೀವು ನಮ್ಮ ನೋವನ್ನೂ ಕೂಡ ಅರ್ಥ ಮಾಡಿಕೊಳ್ಳಬೇಕು. ಆ ವಿವೇಕವನ್ನು ಅಲ್ಲಿ ಕುಳಿತಿರುವಂತಹ ಪುಣ್ಯಾತ್ಮರಿಗೆ, ಅಲ್ಲಿ ನಿಮ್ಮ ಇತಿಮಿತಿಯೆಷ್ಟು? ನಿಮ್ಮ ವ್ಯಾಪ್ತಿಯಲ್ಲಿ ನೀವು ಕೆಲಸವನ್ನು ಮಾಡಿ. ಎನ್ನುವಂಥಾದ್ದನ್ನು ಗಂಭೀರವಾಗಿ ಸರ್ಕಾರ ಹೇಳಬೇಕೋ ಯಾರು ಹೇಳಬೇಕೋ ಗೊತ್ತಿಲ್ಲ. ದಯಮಾಡಿ ಅದನ್ನು ಹೇಳಬೇಕು. ನನಗೆ ಇನ್ನೂ ನೆನಪು ಇದೆ, ಆನಂದ ಎನ್ನುವವನು ಮೈಸೂರಿನವನು ನಮ್ಮ ಸ್ನೇಹಿತರು ಹೇಳಿದರು, ನಾನು ಯಾರೋ ಒಬ್ಬರು ದೊಡ್ಡವರ ಕೈಯಲ್ಲಿ ಹೇಳಿಸಿದ್ದೆ, ಏನಪ್ಪಾ 20 ಕೊಡುವುದು ಗೊತ್ತು, 200 ಕೊಡುವುದು ಗೊತ್ತು. ನೀನು ಪುಟ್ಟೇಗೌಡರ ಮನೆಯವರ ನಿಶ್ಚಿತಾರ್ಥ ಮಾಡಿಕೊಳ್ಳಬೇಡವೆಂದು ಹೇಳುತ್ತಾರೆ. ನಮ್ಮ ಮಕ್ಕಳನ್ನು ಇವರಿಗೋಸ್ಕರ ಹುಟ್ಟಿಸಿಕೊಂಡಿದ್ದನಾ? ನಮಗೂ ಸ್ವಾಭಿಮಾನ ಇದೆ. ದಯಮಾಡಿ ನೀವು ದೊಡ್ಡವರು, ಇವರು ನಿಮಗೆಲ್ಲಾ ಗೌರವವನ್ನು ತೋರಿಸುತ್ತಿಲ್ಲ. ಕಟ್ಟಕಡೆಯದಾಗಿ ಶಾಸಕರ ಮರ್ಯಾದೆ ಹೋದರೆ, ಇಡೀ ಸದನದ ಮರ್ಯಾದೆ ಹೋದ ಹಾಗೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವರಿಗೆ 20 ಕೊಡುವುದು ಗೊತ್ತು, 200 ಕೊಡುವುದು ಗೊತ್ತು. ಆ ಪುಟ್ಟೇಗೌಡರ ಮನೆಯವರ ನಿಶ್ಚಿತಾರ್ಥವನ್ನು ಮಾಡಿಕೊಳ್ಳಬೇಡ ಎಂದು ಹೇಳುತ್ತಾರೆ. ಆ ಕೆ.ಪಿ.ಎಸ್.ಸಿ. ಆಫೀಸ್‌ನಲ್ಲಿ ಮಾನ್ಯ ಗುಂಡಪ್ಪನಂಥವರು, ಚಂದ್ರಶೇಖರ್‌ನಂಥ ಮರ್ಯಾದಸ್ಥರು ಅಲ್ಲಿ ಕುಳಿತು ಹೋಗಿದ್ದಾರೆ. ಅಲ್ಲಿ ಕುಳಿತುಕೊಳ್ಳುವುದಕ್ಕೆ ಅವರಿಗೆ ಕನಿಷ್ಟ ಸೌಜನ್ಯದ ನಡವಳಿಕೆ ಇರಬೇಕು. ಅವರ ಮಗ ಸತ್ತು ಹೋಗಿದ್ದಕ್ಕೆ, ಅದರ ಬಗ್ಗೆ ನಮ್ಮ ಕಡೆಯ ಹುಡುಗರಿಗೆ ಹೇಳುತ್ತಾರೆ. ಪುಟ್ಟೇಗೌಡ. . . ಅದಕ್ಕೋಸ್ಕರ ಅವನ ಮಗನನ್ನು ಕಳೆದುಕೊಂಡ ಎಂದು ಹೇಳುತ್ತಾರೆಂದರೆ, ಊರಲ್ಲಿ ಜಗಲಿಯ ಮೇಲೆ ಕುಳಿತುಕೊಳ್ಳುವ ಅಜ್ಜಿಯರು ಕಡ್ಡಿಪುಡಿ ಹಾಕಿಕೊಳ್ಳುವವರು ಇಂತಹ ಮಾತನ್ನು ಹೇಳುತ್ತಾರಾ? ದಯಮಾಡಿ ಅವರಿಗೂ ವಿವೇಕವನ್ನು ನಾವು ಹೇಳಿ ಕಲಿತುಕೊಳ್ಳುತ್ತೇವೆ, ನಾವು ದೊಡ್ಡವರೆಂದು ಭಾವಿಸಿಲ್ಲ.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿ.ಎಸ್. ಪುಟ್ಟೇಗೌಡರ ಭಾವನೆಗಳನ್ನು ನಾನು ಸಂಪೂರ್ಣವಾಗಿ ಗೌರವಿಸುತ್ತೇನೆ. ಅವರು ನನ್ನ ಅತ್ಯಂತ ಆತ್ಮೀಯ ಸ್ನೇಹಿತರು, ಅವರ ಮನೆಗೆ ಹೋಗಿದ್ದೇನೆ, ಅವರ ಕುಟುಂಬವನ್ನು ನೋಡಿದ್ದೇನೆ. ನಾನು ಪ್ರತಿಸಲ ಅವರು ಸಿಕ್ಕಾಗಲೆಲ್ಲಾ ಅದನ್ನು ನೆನಪು ಮಾಡುತ್ತೇನೆ. ಆ ರೀತಿ ಯಾರೋ ಮಾತನಾಡಿದ್ದರೆ, ಅದನ್ನೆಲ್ಲಾ ಸರಿಯೆಂದು ಹೇಳುವ ಪೈಕಿ ನಾನಲ್ಲ. ಶಾಸಕರ ಬಗ್ಗೆ ಯಾರೇ ಆಗಲಿ ಆ ರೀತಿ ನಡೆದುಕೊಳ್ಳುವಂಥಾದ್ದನ್ನು ನಾನು ಅನುಮೋದನೆಯನ್ನು ಮಾಡುವವನಲ್ಲ. ನಾನು ಏನು ಹೇಳಿದೆನೆಂದರೆ ನಾವು ಕಲಾಪವನ್ನು ನಡೆಸುವ ವೇಳೆಯಲ್ಲಿ sweeping remarks - ಮಾಡಿ ಅವರ defenceಗೆ ಯಾವುದು ಇಲ್ಲಿ ಇರುವುದಿಲ್ಲ. ಅವರು ಮಾಡುತ್ತಿರುವಂಥಾದ್ದು ಸರಿ, ಅಲ್ಲಿ ಆ ರೀತಿಯಲ್ಲಿ ಆಗುತ್ತಾ ಇಲ್ಲ. ಹೀಗೆಲ್ಲಾ ಆಗಬಹುದು, ಈ ಎಲ್ಲವನ್ನೂ ನಾನು ಒಂದನ್ನೂ

ಸಮರ್ಥನೆ ಮಾಡುತ್ತಾ ಇಲ್ಲ. ಎಲ್ಲೋ ಒಂದು ಕಡೆ ನಮ್ಮನ್ನು ನಾವು ಪ್ರತಿಬಿಂಬಿಸಿಕೊಳ್ಳೋಣವೆಂಬ ಮಾತನ್ನು ಅಷ್ಟೇ ನಾನು ಹೇಳುತ್ತೇನೆ. ನಾನು ಹೇಳಿದಂಥಾದ್ದನ್ನು ಪುನರ್ ಆಲೋಚನೆ ಮಾಡಿ, ನಾನು ಹೇಳಿದ್ದು ಸರೀನಾ, ಅಲ್ಲವಾ, ಎಂದು. ತಾವು ಸ್ಪಷ್ಟವಾಗಿ ಆಲೋಚನೆ ಮಾಡಿ You can communicate the speaker and definitely meet him. ತಮಗೆ authority ಇದೆ. That is your right as a member. ನಾನು ಬೇಡವೆಂದು ಹೇಳುವುದಿಲ್ಲ, ಈ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಪ್ರಾಮಾಣಿಕರು ಇದ್ದಾರೆ. ಈ ರಾಜ್ಯವನ್ನು ಹರಾಜು ಹಾಕಿದರೆ ಕೊಂಡುಕೊಳ್ಳುವಂತಹ ಪೋಲೀಸರೂ ಇದ್ದಾರೆ. ನಾನು 1978ರಲ್ಲಿ ಈ ಸದನಕ್ಕೆ ಬಂದಾಗ ಐ.ಪಿ.ಎಸ್. ಆಫೀಸರ್‌ಗಳ 5–6 ಜನರ ಹೆಸರುಗಳನ್ನು ಹೇಳುತ್ತಾ ಇದ್ದೆ, ಇಂಥವರು untouchable ಆಗಿ ದುಡ್ಡನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದ್ದೆ, ಐಎಎಸ್‌ನಲ್ಲಿ ಆ ರೀತಿ ಇದೆ. ಈಗ ಅದು ರಿವರ್ಸ್ ಆಗಿದೆ. ಈಗ ತೆಗೆದುಕೊಳ್ಳದೇ ಇರುವವರು 5–6 ಜನ ಐಎಎಸ್‌ನಲ್ಲಿ, ಐಪಿಎಸ್‌ನಲ್ಲಿ ಇದ್ದಾರೆ. ಏನು ಮಾಡುವುದಕ್ಕೆ ಆಗುತ್ತದೆ? ಬೆಂಗಳೂರಿನಲ್ಲಿ ಎಲ್ಲಾ ಭವ್ಯ ಬಂಗಲೆಗಳಲ್ಲಿರುವಂತಹ ಭಾರಿ ಬಂಗಲೆಗಳೆಲ್ಲಾ ಇವರದ್ದೇ, ಆಗಿವೆ ಈಗ ಮಾನ್ಯ ರಾಮಸ್ವಾಮಿಯವರೋ, ನಾನೋ, ನೀವೋ, ಒಂದು ಗಾಡಿಯನ್ನು ತೆಗೆದುಕೊಂಡರೆ, ಒಂದು ವೇಳೆ ನಿಮ್ಮ ಮಗ ಕಾಲೇಜಿಗೆ ಬಂದಿದ್ದು, ಅವನು ಒಂದು ಮೋಟಾರ್ ಸೈಕಲ್‌ನ್ನೂ ತೆಗೆದುಕೊಂಡು ಜೋರಾಗಿ ಓಡಿಸಿದರೆ ಜನ ಮಾತನಾಡುತ್ತಾರೆ, 'ನೋಡಪ್ಪ, ಎಂಎಲ್‌ಎ ಮಗ ಗಾಡಿ ಓಡಿಸುತ್ತಾನೆಂದು ಹೇಳುತ್ತಾರೆ. ನಾವು ಪಾಪಿಗಳು, ನಾವು ಹೇಗೆ ಬದುಕಿದರೂ ನಿಷ್ಠುರಕ್ಕೆ ಒಳಗಾಗಬೇಕು, ಟೀಕೆಗೆ ಒಳಗಾಗಬೇಕು. ಇವರು ದೇಶವೆಲ್ಲಾ ಲೂಟಿ ಹೊಡೆದರೂ ಕೂಡ ಇವರ ಬಗ್ಗೆ ಮಾತನಾಡುವವರು ಇಲ್ಲ. ನಾನು ಅದರ ಬಗ್ಗೆ ಬೇರೆ ಅಭಿಪ್ರಾಯದಲ್ಲಿ ಸಮರ್ಥನೆ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. Limited issue, I raised. You can re-consider it.

ಉಪಾಧ್ಯಕ್ಷರು : ಮಾನ್ಯ ಎ.ಟಿ.ರಾಮಸ್ವಾಮಿಯವರೆ, ತಮ್ಮ ಭಾಷಣ ಮುಗಿಯಿತಾ?

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ತಾವು ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ, ನಮ್ಮ ಹಿರಿಯ ಸದಸ್ಯರು ಇಬ್ಬರೂ ಮಾತನಾಡಿದ್ದಾರೆ.

ಉಪಾಧ್ಯಕ್ಷರು : ತಾವು ಮಂತ್ರಿಗಳು, ಆಮೇಲೆ ಉತ್ತರವನ್ನು ಕೊಡುವಾಗ ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದು ದಾರಿ ತಪ್ಪುವಂಥಾದ್ದು ಬೇಡವೆನ್ನುವುದಕ್ಕೋಸ್ಕರ ತಮ್ಮಲ್ಲಿ ಮನವಿ ಮಾಡುವುದಕ್ಕೋಸ್ಕರ ನಿಂತಿದ್ದೇನೆ. ಇದಕ್ಕೆ ಉತ್ತರವನ್ನು ಕೊಡುವಂಥಾದ್ದನ್ನು ನಮ್ಮ ಹಿರಿಯರಾದ ಮುಖ್ಯಮಂತ್ರಿಯವರು ಇದ್ದಾರೆ, ಅವರು ಉತ್ತರವನ್ನು ಕೊಡುತ್ತಾರೆ. ದಯಮಾಡಿ ಮಾನ್ಯ ಹಿರಿಯ ಸದಸ್ಯರು ಇದ್ದಾರೆ, ಅವರಿಗೆ ಅನುಭವ ಇದೆ. ಒಂದು ಸಂಸ್ಥೆಯ ಬಗ್ಗೆ ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನಾವು ಒಳ್ಳೆಯದಾಗಿರುವುದನ್ನು ಎಣಿಸುವುದಕ್ಕೆ ಆಗುವುದಿಲ್ಲ. ಕೆಟ್ಟದ್ದು ಆದಾಗ ಮಾತ್ರ ಅದು

ನಮಗೆ ಎದ್ದು ಕಾಣಿಸುತ್ತದೆ. ಇಲ್ಲಿ ನೂರರಲ್ಲಿ 99 ಒಳ್ಳೆಯದು ಮಾಡಿ ಒಂದು ಕೆಟ್ಟದ್ದು ಮಾಡಿದರೂ ಅದು ಎದ್ದು ಕಾಣಿಸುತ್ತದೆ. ದಯಮಾಡಿ ತಮ್ಮ ಮೂಲಕ ಈ ವಿಚಾರದ ಬಗ್ಗೆ ಅವಕಾಶವನ್ನು ಕೊಟ್ಟಿದ್ದೀರಿ, ಅದು ಸಾಕು ಎಂದು ಅನ್ನಿಸುತ್ತದೆ. ಆ ಸಂಸ್ಥೆಯ ಬಗ್ಗೆ ಸಾಕಷ್ಟು ಒಳ್ಳೆಯ ಕೆಲಸವೂ ಆಗಿದೆ, ಒಂದು constitution ನಲ್ಲಿ ಇರುವಂತಹ ಒಂದು ಅವಕಾಶವನ್ನು, ಸರ್ಕಾರ ಮಾಡಿರುವಂತಹ ಒಂದು ಸಂಸ್ಥೆಯ ಬಗ್ಗೆ ಇಷ್ಟೊಂದು ಸದನದಲ್ಲಿ ಚರ್ಚೆಯನ್ನು ಮಾಡುತ್ತಾ ಹೋದಾಗ, ಇಲ್ಲಿ ನಾವೆಲ್ಲರೂ ಕುಳಿತಿರುವವರಿಗೆ ಜವಾಬ್ದಾರಿ ಇದೆಯೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ದಯಮಾಡಿ ಅವರಿಗೆ ತಮ್ಮ ಮೂಲಕ ರಿಕ್ವೆಸ್ಟ್ ಮಾಡುತ್ತೇನೆ. ಇದನ್ನು ಅಷ್ಟಕ್ಕೇ ಸಾಕು, ಮುಂದುವರೆಸುವಂಥಾದ್ದು ಸೂಕ್ತ ಅಲ್ಲ.

ಶ್ರೀ ಹೆಚ್. ಡಿ. ರೇವಣ್ಣ (ಹೊಳೇನರಸೀಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ಎ.ಟಿ.ರಾಮಸ್ವಾಮಿಯವರು, ಮಾನ್ಯ ಸಿ.ಎಸ್.ಪುಟ್ಟೇಗೌಡರು, ಮಾನ್ಯ ಕೆ.ಆರ್. ರಮೇಶ್‌ಕುಮಾರ್‌ರವರು, ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು, ಎಲ್ಲರೂ ಕೆಪಿಎಸ್‌ಸಿ ಬಗ್ಗೆ ಸುಮಾರು 15--20 ನಿಮಿಷಗಳ ಕಾಲ ಚರ್ಚೆ ಮಾಡಿ ಮಾತನಾಡಿದರು. ಈಗ ಏನಾಗುತ್ತದೆಂದರೆ ಯಾವುದೇ ಒಂದು ಸಂಸ್ಥೆಗೆ ಸರಿಯೋ, ತಪ್ಪೋ, ನ್ಯಾಯಾಧೀಶರನ್ನು ನೇಮಕ ಮಾಡುತ್ತೇವೆ. ಅದು ಇಲ್ಲಿ ಸಣ್ಣ ಪುಟ್ಟದ್ದು ಯಾವುದೇ ಇದ್ದರೂ, ನಾನು ಮಾನ್ಯ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ತಾವು ಹಿರಿಯ ಸದಸ್ಯರು ಇದ್ದೀರಿ. ಇದರಲ್ಲಿ ತಪ್ಪುಗಳು ಕೆಲವು ಸಲ ಏನಾಗುತ್ತದೆ ಎಂದರೆ ತಾವೇ ಇರುತ್ತೀರಿ, ಇನ್ನೊಬ್ಬರು ಇರುತ್ತಾರೆ, ಶಾಸಕರು ಇರಬಹುದು, ಮಂತ್ರಿಗಳ ಹತ್ತಿರ ಇರಬಹುದು, ಒಂದು ಕೆಲಸ ಆಗಬೇಕಾದಾಗ, ಏನಾದರೂ ಒಂದು ಕೆಲಸ ಆಗದೇ ಹೋದರೆ, ನನ್ನ ಬಗ್ಗೆಯೆ ಬೇಕಾದರೆ ಹೇಳುತ್ತಾರೆ. 'ರೇವಣ್ಣನವರ ಹತ್ತಿರ ಹೋಗಿದ್ದೆ. ಈ ರೀತಿಯಲ್ಲಿ ಬೈಯ್ದು ಕಳುಹಿಸಿದರು'. ಎಂದು ಹೇಳುವಂಥಾದ್ದು ಇದೆ. ಅದಕ್ಕೆ ಮಾನ್ಯ ಸದಸ್ಯರು ದಯಮಾಡಿ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡುವಂಥಾದ್ದು ಅವಶ್ಯಕತೆ ಇಲ್ಲವೆಂಬುದು ನನ್ನ ಭಾವನೆ. ನಾನು ಉದಾಹರಣೆಗೆ ಹೇಳುವುದಾದರೆ, ಈಗ ನನ್ನ ಮೇಲೆ ಒಬ್ಬ ಅಧಿಕಾರಿಯಾದವರು ಈ ರೀತಿ ಒಂದು ಪೊಲೀಸ್ ಕಂಪ್ಲೇಂಟ್ ಕೊಟ್ಟರು. ಎಂದರೆ ಅವರನ್ನು ನಮ್ಮ ಸ್ಟೇಟ್‌ನಲ್ಲಿ ಕೆಪಿಟಿಯ ಮೆಂಬರ್ ಮಾಡಿದರು. ನಾನು ವೈಯಕ್ತಿಕವಾಗಿ ಟೀಕೆ ಮಾಡುವುದಕ್ಕೆ ಆಗುವುದಿಲ್ಲ, ಏಕೆಂದರೆ ನ್ಯಾಯಧೀಶರು ಎಂದು ಮಾಡಿದ ಮೇಲೆ ನಾವು ಸರಿಯೋ, ತಪ್ಪೋ, ಒಪ್ಪಬೇಕಾಗುತ್ತದೆ, ಏಕೆಂದರೆ ಇವತ್ತು ಕೆಇಆರ್‌ಸಿ ನಲ್ಲಿ ನಾವು ಮೆಂಬರ್ ಮಾಡಿದ್ದೇವೆ. ಇವತ್ತು ಕಳೆದ 40 ವರ್ಷಗಳಲ್ಲಿ, ಇವತ್ತು ರಾಜ್ಯದಲ್ಲಿ ಏನಾಗಿದೆಯೆಂದರೆ, 63 ತಾಲ್ಲೂಕಿಗೆ 5 ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ನಾನು ಇರುವ ವಿಚಾರವನ್ನು ಹೇಳುತ್ತೇನೆ. ಈಗ ಕೆಇಆರ್‌ಸಿಯಲ್ಲಿ ಮೂರು ಸಾವಿರ ಕೋಟಿ ರೂಪಾಯಿಗಳನ್ನು ನಾವು ಇನ್‌ವೆಸ್ಟ್ ಮಾಡುತ್ತೇವೆಂದರೆ ಬೇಡಿ ಎಂದು ಅಡ್ಡ ಹಾಕುತ್ತಾರೆ. ಈಗ ಒಂದೊಂದು ಕಡೆಗಳಲ್ಲಿ ಒಂದೊಂದು ಸಂಸ್ಥೆ, ಇರುತ್ತದೆ. ಈಗ ಮಾನ್ಯ

ಎ.ಟಿ.ರಾಮಸ್ವಾಮಿಯವರು 200 ನಂಬರ್ ಇದೆಯೆಂದು ಹೇಳಿದರು. ನಮ್ಮ ಸರ್ಕಾರಿ ಆದೇಶ ಶೇ. 5ರ ಮೇಲೆ ಕೊಡಬಾರದೆಂದು ಇದೆಯೆಂದು ಹೇಳುತ್ತಾರೆ. ಹಳ್ಳಿ ಕ್ಷೇತ್ರದ ಮಕ್ಕಳು ಎಲ್ಲಿಗೆ ಹೋಗುತ್ತಾರೆ? ಅದನ್ನು ಸರಿಯೋ, ತಪ್ಪೋ, ಬೇರೆ ವಿಷಯ. ಇಲ್ಲಿ ಕಾನೂನನ್ನು ಬಿಟ್ಟು ಮಾಡಿದ್ದರೆ ಕ್ರಮವನ್ನು ತೆಗೆದುಕೊಳ್ಳಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ 200 ನಂಬರ್ ಇರುವುದನ್ನು ಕಟ್ ಮಾಡಿಯೆಂದು ಹೇಳುವಂಥಾದ್ದು ಸೂಕ್ತವಲ್ಲ, ಏಕೆಂದರೆ [illegible] ಗ್ರಾಮೀಣ ಪ್ರದೇಶದ ಮಕ್ಕಳು ಎಲ್ಲರ ಜೊತೆಯಲ್ಲಿ ಕಾಂಪೀಟ್ ಮಾಡುವುದಕ್ಕೆ [illegible] ಸಚಿವ ಸಂಪುಟ ಸಭೆಯಲ್ಲಿ ನಾವೇ ಮಾತನಾಡಿದ್ದೇವೆ. ಮಾನ್ಯ ರಾಮಸ್ವಾಮಿ[illegible] ಏನಾದರೂ ನೋವು ಆಗಿರಬಹುದು, ಮಾನ್ಯ ಸಿ.ಎಸ್.ಪುಟ್ಟೇಗೌಡರಿಗೆ ನೋವಾ[illegible]. ಮಾನ್ಯ ರಮೇಶ್‌ಕುಮಾರ್‌ರವರು ಅಂತಹ ಹಿರಿಯ ಸದಸ್ಯರುಗಳು ಕುಳಿತು[illegible] ಏನಾದರೂ ಇದ್ದರೆ ಬೇಕಾದರೆ ಅದನ್ನು ಸರಿ ಮಾಡಿ; ಏಕೆಂದರೆ [illegible] ಮೇಲೆ ಮಾತನಾಡುವಂಥಾದ್ದು ಬೇಡ. ಈಗ ಕರ್ನಾಟಕ ಪಬ್ಲಿಕ್ ಸರ್ವಿಸ್ ಬಗ್ಗೆ [illegible]ವಂಥಾದ್ದು ಸರಿಯಲ್ಲವೆಂಬುದು ನನ್ನ ಭಾವನೆ. ನಾನು ಇನ್ನು ಬೇರೇನೂ ಹೇಳು[illegible].

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ರೇವಣ್ಣನವರೆ, [illegible] ಮಕ್ಕಳಿಗೆ ಏನು ಒಳ್ಳೆಯದಾಗುತ್ತದಾ ಇದನ್ನೂ ಮಾತನಾಡುವುದರಿಂದ? ಬರೀ ಹೇಳುವುದಕ್ಕೆ [illegible].

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಇದು [illegible] ತಹಶೀಲ್ದಾರರ ನೇಮಕಾತಿಯ ಚರ್ಚೆಯೋ, ಅಥವಾ ಕೆಪಿಎಸ್‌ಸಿಯ ಚರ್ಚೆಯೋ, [illegible]ನ್ನು ತಾವು ದಯಮಾಡಿ ಹೇಳಬೇಕು.

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡತೊಡಗಿದರು)

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು [illegible] ಸಂಗತಿ ಏನೆಂದರೆ ನಾನು ಹೇಳಿದ ಕೆಲಸವನ್ನು ಮಾಡಿಕೊಡಲಿಲ್ಲವೆಂದು ಮಾತ[illegible] ಒಂದು ಸಣ್ಣತನ, ಸಣ್ಣ ಮನುಷ್ಯ ನಾನಲ್ಲ. ದಯವಿಟ್ಟು ಇದನ್ನು ಅರ್ಥ ಮಾಡಿ[illegible]. ನಾನು ಹಿಂದೆ ನಿರ್ದಿಷ್ಟವಾಗಿ ಯಾರ ಮೇಲೂ ಆರೋಪವನ್ನು ಮಾಡಲಿಲ್ಲ. ಅಲ್ಲಿ ಇರು[illegible]ಸಗಟಾಗಿ ಅಪ್ರಮಾಣಿಕರು ಎಂದು ಹೇಳುತ್ತಾ ಇಲ್ಲವೆಂದು ನಾನು ಹಿಂದೆ ಭಾಷಣ [illegible] ಹೇಳಿದ್ದೆ. ಸರ್ಕಾರ ನೇಮಕಾತಿಯನ್ನು ಮಾಡುವಾಗ ಕೆ.ಪಿ.ಎಸ್.ಸಿ.ಮೆಂಬರ್‌ಗಳನ್ನು [illegible]ಯನ್ನು ನೋಡಿಕೊಂಡು ಒಳ್ಳೆಯವರನ್ನು ನೇಮಕಾತಿ ಮಾಡಿ. ಒಳ್ಳೆಯವರನ್ನು ನೇಮಕಾತಿ ಮಾಡಿದರೆ, ಪ್ರಾಮಾಣಿಕತೆ ಇರುವಂಥವರನ್ನೋ ಬದ್ಧತೆ ಇರುವಂಥವರನ್ನೋ, [illegible] ಅವರು ಯೋಗ್ಯರನ್ನು ಬಡವರನ್ನು, ಅರ್ಹರನ್ನು ಆಯ್ಕೆ ಮಾಡುತ್ತಾರೆಂಬುದನ್ನು ನಾನು ಹೇಳಿದ್ದು ತಪ್ಪಾ? ನಮ್ಮ ಅಭಿಪ್ರಾಯವನ್ನು ಹೇಳುವುದು ತಪ್ಪಾ? ಅದಕ್ಕೆ ನಾವು ಏನಾದರೂ ಹೇಳಿದರೆ, ಅಥವಾ

ಯಾರಾದರೂ ಏನಾದರೂ ಹೇಳಿದರೆ, ನಿಮ್ಮ ಎಂಎಲ್‌ಎ ಹೀಗೆ ಮಾತನಾಡಿದ್ದಾರೆ, 10 ಲಕ್ಷ ಕೊಡಿಸಿ ಕೆಲಸವನ್ನು ಮಾಡಿಸಿ ಕೊಡುತ್ತೇನೆಂಬ ಮಟ್ಟದಲ್ಲಿ ಕೇಳುತ್ತಾರಲ್ಲಾ, ಹಾಗೆ ಹೇಳಬಹುದಾ? ಮಾನ್ಯ ರೇವಣ್ಣನವರೆ, ಬಾಲಕೃಷ್ಣರವರೆ, ನೀವೇ ಅನ್ನಿಸಿಕೊಂಡು ಬಂದಿಲ್ಲವಾ? ನಾನು ನನ್ನ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸುತ್ತೇನೆ. 7ನೇ ತಿಂಗಳು 5ನೇ ತಾರೀಖಿನಂದು ನಾನು ಮಾತನಾಡಿರುವಂತಹ ಕಡತವನ್ನು ತೆಗೆದುನೋಡಿ, ಸಾರಾಸಗಟಾಗಿ ನಾನು ಯಾರ ಮೇಲೂ ಆರೋಪವನ್ನು ಮಾಡುತ್ತಿಲ್ಲವೆಂಬ ಮಾತನ್ನು ಹೇಳಿದ್ದೇನೆ. ಒಳ್ಳೆಯವರನ್ನು ಕೆ.ಪಿ.ಎಸ್.ಸಿ ಸದಸ್ಯರನ್ನಾಗಿ ಮಾಡಿ ಎಂದು ಹೇಳಿದರೆ ಅದು ತಪ್ಪೇನು? ಹಾಗೆ ಹೇಳಬಾರದೇನು? ಆ ಬದ್ಧತೆ ಬೇಡವೇ ನಮಗೆ? ಕಳಕಳಿ ಬೇಡವೇ? ಸಾರ್ವಜನಿಕ ಹಿತದೃಷ್ಟಿಯಿಂದ ನನ್ನ ಅಭಿಪ್ರಾಯ ವ್ಯಕ್ತಪಡಿಸುವುದು ತಪ್ಪು, ಅದು ಸಂವಿಧಾನಿಕ ಸಂಸ್ಥೆ ಎನ್ನುವುದಾದರೆ ಇಲ್ಲಿ ನ್ಯಾಯಾಂಗದ ಬಗ್ಗೆ ಚರ್ಚೆಯಾಗಿಲ್ಲವೇ? ಆರೋಪ ಮಾಡಿಲ್ಲವೆಳ ವ್ಯಕ್ತಿಗತವಾಗಿ ಅವರ ಜಡ್ಜ್‌ಮೆಂಟ್ ಬಗ್ಗೆ ಆರೋಪ ಮಾಡಿಲ್ಲವೇ? ಎಷ್ಟು ಜನ ನ್ಯಾಯಾಧೀಶರನ್ನು ನೌಕರಿಯಿಂದ ಸಸ್ಪೆಂಡ್ ಮಾಡಿಲ್ಲವೇ, ಡಿಸ್ಮಿಸ್ ಮಾಡಿಲ್ಲವೇ? ನ್ಯಾಯಾಂಗ ವ್ಯವಸ್ಥೆ ಹಾಗೆ ಆಗಬಾರದು ಎಂದು ನಾವು ಚರ್ಚೆ ಮಾಡಿಲ್ಲವೇ? ಕಳ್ಳರನ್ನು ಕಳ್ಳರು, ಭ್ರಷ್ಟರನ್ನು ಭ್ರಷ್ಟರು ಎಂದು ಹೇಳುವವರು ನ್ಯಾಯಾಂಗ ಇಲಾಖೆಯವರು. ಅವರೇ ಭ್ರಷ್ಟರಾಗಿಬಿಟ್ಟರೆ ಹೇಗಪ್ಪಾ ಎಂದು ನಾವು ಹೇಳಿಲ್ಲವೇ? ತಪ್ಪೇ ಅದು? ಇದು ತಪ್ಪೇ ಹೇಳಿ. ಇವರು ಹೇಳಿದ ಯಾರೋ ಒಬ್ಬರಿಗೆ ಕೆಲಸ ಕೊಡಲಿಲ್ಲ, ಅದಕ್ಕಾಗಿ ಹೀಗೆ ಮಾತನಾಡುತ್ತಿದ್ದಾರೆ ಎನ್ನುವ ಸಂದೇಶವನ್ನು ದಯವಿಟ್ಟು ಕೊಡಬೇಡಿ ಅಂಥ ಕೀಳುತನ ಸಣ್ಣತನ ನಮ್ಮಲ್ಲಿ ಇಲ್ಲ. ಇಡೀ ರಾಜ್ಯದ ಹಿತದೃಷ್ಟಿಯಿಂದ ಆಲೋಚನೆ ಮಾಡಿ ಮಾತನಾಡಬೇಕಲ್ಲವೇ? ದಯವಿಟ್ಟು ಎಲ್ಲಾ ಸದಸ್ಯರು ಸ್ಪಂದಿಸಬೇಕು, ಈ ಕಳಕಳಿಯ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು ಎಂದು ನಾನು ಮಾನ್ಯ ಉಪಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಎಸ್. ಪುಟ್ಟೇಗೌಡ : ಇದಕ್ಕೆ ಸೈನ್ನ್ನು ಹಾಕಿರುವ ಹಾಸನ ಜಿಲ್ಲೆಯವರಾದ ನಾವು ನಾಲ್ಕು ಜನ; ನಾವ್ಯಾರೂ ಅವರ ಮನೆ ಬಾಗಿಲಿಗೆ ಹೋಗಿಲ್ಲ.

ಉಪಾಧ್ಯಕ್ಷರು : ಆಯಿತು, ಈಗ ಸಂಬಂಧಪಟ್ಟಂಥ ಮಂತ್ರಿಗಳು ಉತ್ತರ ಹೇಳಿಬಿಡಿ.

ಶ್ರೀ ಹೆಚ್.ಎಂ.ವಿಶ್ವನಾಥ : ಮಾನ್ಯ ಅಧ್ಯಕ್ಷರೇ, ...

ಉಪಾಧ್ಯಕ್ಷರು : ಸಾಕು, ಮಂತ್ರಿಗಳು ಉತ್ತರ ಹೇಳುತ್ತಾರೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಎಂ. ವಿಶ್ವನಾಥ : ದಯಮಾಡಿ ನನ್ನದೂ ಒಂದು ಮಾತು ಕೇಳಬೇಕು.

ಉಪಾಧ್ಯಕ್ಷರು : ಅವರು ಈಗ ಉತ್ತರ ಹೇಳುತ್ತಾರೆ.

ಶ್ರೀ ಹೆಚ್. ಎಂ. ವಿಶ್ವನಾಥ್ (ಸಕಲೇಶಪುರ) : ದಯಮಾಡಿ ನನಗೆ ಎರಡು ನಿಮಿಷ ಟೈಂ ಕೊಡಿ. ನನ್ನ ಗಂಟಲು ಸರಿಯಿಲ್ಲ, ಹೆಚ್ಚು ಮಾತನಾಡುವುದಿಲ್ಲ. ನನ್ನ ಗಂಟಲು ಆಪರೇಷನ್ ಆಗಿದೆ, ಹೆಚ್ಚು ಮಾತನಾಡುವ ಹಾಗಿಲ್ಲ, ದಯಮಾಡಿ ಎರಡು ನಿಮಿಷ ಟೈಂ ಕೊಡಿ.

ಉಪಾಧ್ಯಕ್ಷರು : ಆಯಿತು.

ಶ್ರೀ ಹೆಚ್.ಎಂ. ವಿಶ್ವನಾಥ : ಮಾನ್ಯ ಉಪಾಧ್ಯಕ್ಷರೇ, ಕೆ.ಪಿ.ಎಸ್.ಸಿ. ಸಂಸ್ಥೆಯ ಬಗ್ಗೆ ಈಗ ಮಾನ್ಯ ಪುಟ್ಟೇಗೌಡರು ಮತ್ತು ಮಾನ್ಯ ರಾಮಸ್ವಾಮಿಯವರು ಪ್ರಸ್ತಾಪ ಮಾಡಿದರು. ಬಹುಶಃ ಮಾನ್ಯ ರಮೇಶ್ ಕುಮಾರ್‌ರವರು ಏನು ಹೇಳಿದರು, ಅವರು ಅತ್ಯಂತ ಸಮಂಜಸವಾಗಿ ಮಾತನಾಡಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ. ಕೆ.ಪಿ.ಎಸ್.ಸಿ. ಸಂಸ್ಥೆಗೆ ನಾನು ಕಳೆದ ಹತ್ತು ವರ್ಷಗಳಿಂದ ಹೋಗಿ ಬರುತ್ತಿರುವವನು. xx

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ : ದಯವಿಟ್ಟು ತಾವು ಅದರ ಗುಟ್ಟು ಹೇಳಬೇಕು.

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್ : ದಯವಿಟ್ಟು ಅವರಿಗೆ ಮಾತನಾಡಲು ಅವಕಾಶಕೊಡಿ. ಅವರಿಗೆ ಮಾತನಾಡುವುದಕ್ಕೆ ಏಕೆ ನೀವು ಅವಕಾಶ ಕೊಡುವುದಿಲ್ಲ?

ಶ್ರೀ ಹೆಚ್.ಎಂ. ವಿಶ್ವನಾಥ್ : xx

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ : ಇವರೇನು ಕೆ.ಪಿ.ಎಸ್.ಸಿ. ಮೆಂಬರ್ರಾ ಅಥವಾ ಕೆ.ಪಿ.ಎಸ್.ಸಿ. ಛೇರ್‌ಮನ್ನೇ. xx

ಒಬ್ಬ ಮಾನ್ಯ ಸದಸ್ಯರು : ಆ ಗುಟ್ಟು ಬಹಿರಂಗಪಡಿಸಲು ಉಪಾಧ್ಯಕ್ಷರು ದಯಮಾಡಿ ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು : ದಯವಿಟ್ಟು ಅದು ರೆಕಾರ್ಡ್‌ಗೆ ಹೋಗುವುದು ಬೇಡ.

ಉಪಾಧ್ಯಕ್ಷರು : ಆಯಿತು, ರೆಕಾರ್ಡ್‌ನಿಂದ ತೆಗೆಸಿದ್ದೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಇದರ ಗುಟ್ಟು ಬಹಿರಂಗವಾಗಬೇಕು.

ಶ್ರೀ ಹೆಚ್.ಎಂ. ವಿಶ್ವನಾಥ್ : ನನಗೆ ಗೊತ್ತಿರುವ ಹಾಗೆ, ನನ್ನ ತಾಲ್ಲೂಕಿನ 15 ಜನ ಕೆಲಸ ತೆಗೆದುಕೊಂಡಿದ್ದಾರೆ. ಕೆಲಸ ತೆಗೆದುಕೊಂಡಿರುವ ಆ 15 ಜನರು ನನಗೆ ಗೊತ್ತಿರುವ ಹಾಗೆ ಒಂದು ರೂಪಾಯಿ ದುಡ್ಡನ್ನು ಕೂಡ ಯಾರಿಗೂ ಕೊಟ್ಟಿಲ್ಲ. ಆದ್ದರಿಂದ, ಅಲ್ಲಿ ಹಣ ಕೊಡುವಂಥ ವ್ಯವಸ್ಥೆಯಾಗಿದೆ ಎನ್ನುವುದರ ಬಗ್ಗೆ ಹೇಳುವುದಾದರೆ, ಒಟ್ಟಾರೆ ಅಭಿಪ್ರಾಯದಲ್ಲಿ ಒಟ್ಟಾರೆ ಭ್ರಷ್ಟ ವ್ಯವಸ್ಥೆಯಲ್ಲಿ ಅದೂ ಕೂಡ ಒಂದಾಗಿರಬಹುದು. ಆದರೆ ಅಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ, ಹಳ್ಳಿಯವರು, ಸಾಮಾನ್ಯ ಜನರು, ಬಡವರ ಬಗ್ಗೆ ಕಳಕಳಿ ಇಟ್ಟುಕೊಂಡು ಕೆಲಸ ಮಾಡತಕ್ಕಂಥ ಅಧಿಕಾರಿಗಳು, ಸದಸ್ಯರುಗಳು ಅಲ್ಲಿ ಇದ್ದಾರೆ ಎನ್ನುವುದನ್ನೂ ನಾವು ನೆನಪಿಟ್ಟುಕೊಳ್ಳಬೇಕು. ಅನಗತ್ಯವಾಗಿ ಆಪಾದನೆ ಮಾಡತಕ್ಕಂಥಾದ್ದು ಸರಿಯಲ್ಲ.

---

xx ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ವಿಶ್ವನಾಥ್‌ರವರು ಬೇಕಾದರೆ ಅವರಿಗೆ ಪಿ.ಹೆಚ್‌ಡಿ ಕೊಡಲಿ. ಪಿ.ಹೆಚ್.ಡಿ. ಕೊಟ್ಟು ಡಾಕ್ಟರೇಟನ್ನೂ ಕೊಡಲಿ ವಿಶ್ವನಾಥ್‌ರವರು. ನಾವು ನಮ್ಮ ನೋವನ್ನು ಹೇಳುತ್ತಿದ್ದೇವೆ. ನಾವು ಅವರ ಮನೆ ಬಾಗಿಲಿಗೂ ಹೋಗಲಿಲ್ಲ. ಅರ್ಥವಾಯಿತಲ್ಲಾ ಸ್ವಾಮಿ?

ಶ್ರೀ ಹೆಚ್.ಎಂ. ವಿಶ್ವನಾಥ್ : ಮಾನ್ಯ ಪುಟ್ಟೇಗೌಡರಿಗೆ ವೈಯಕ್ತಿಕವಾಗಿ ಏನಾದರೂ ಬೇಜಾರು ಆಗಿದ್ದರೆ. ಅದನ್ನು ಸದನದ ಹೊರಗೆ ಮಾತನಾಡುವುದು ಉತ್ತಮ ಎಂದು ನನ್ನ ಭಾವನೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ನಾವ್ಯಾರೂ ಅವರ ಮನೆ ಬಾಗಿಲಿಗೆ ಹೋಗಿಲ್ಲ. ನಾವು ನಾಲ್ಕು ಜನ ಇದಕ್ಕೆ ಸಹಿ ಹಾಕಿರುವವರು. ಬೇಕಾದರೆ ಇವರು ಪಿಹೆಚ್‌ಡಿ ಕೊಟ್ಟುಕೊಂಡು, ಬೇಕಾದರೆ ಹಾಸನದ ಒಂದು ಕ್ರೀಡಾಂಗಣದಲ್ಲಿ ಒಂದು ಸನ್ಮಾನವನ್ನು ಏರ್ಪಡಿಸಲಿ, ಅದರೆ ಯಾರಿಗೂ ಪಿಹೆಚ್‌ಡಿ ಕೊಡುವ ಅಗತ್ಯವಿಲ್ಲ. ನಾವು ನಮ್ಮ ನೋವನ್ನು ಹೇಳಿಕೊಳ್ಳುತ್ತಿದ್ದೇವೆ.

ಉಪಾಧ್ಯಕ್ಷರು :- ಆಯಿತು.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೇ, ವಿಷಯ ಡೀವಿಯೇಟ್ ಆಗುತ್ತಿದೆ. ವಿಷಯ ಎಲ್ಲೆಲ್ಲಿಗೋ ಹೋಗುತ್ತಿದೆ. ದಯವಿಟ್ಟು ತಹಶೀಲ್ದಾರರ ನೇಮಕಾತಿ ಬಗ್ಗೆ ಸರ್ಕಾರ ಹೇಳಬೇಕು.

ಉಪಾಧ್ಯಕ್ಷರು : ಇದು ಯಾವಾಗಲೋ ಮುಗಿದು ಹೋಗುತ್ತಿತ್ತು. ಹಿಂದೆ ಕುಳಿತುಕೊಂಡು ಎಲ್ಲರಿಗೂ ನೀವೇ ಎತ್ತಿಕೊಡುತ್ತಿದ್ದೀರಿ. ಸುಮ್ಮನೆ ಇದ್ದವರಿಗೆಲ್ಲಾ ನೀವು ಎತ್ತಿ ಕೊಡುತ್ತಿದ್ದೀರಿ. ನೀವು ಹೇಳಿ, ನೀವು ಮಾತನಾಡಿ ಎಂದು ಹೇಳುತ್ತಿದ್ದೀರಿ. ಆಯಿತು, ಈಗ ಉತ್ತರ. ಮಾನ್ಯ ಜಗದೀಶ್ ಶೆಟ್ಟರ್‌ರವರೇ ಹೇಳಿ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೇ, ದಯಮಾಡಿ ಒಂದು ನಿಮಿಷ ಟೈಂ ಕೊಡಿ.

ಉಪಾಧ್ಯಕ್ಷರು : ಆಯಿತು ಬಿಡಿ. ಈಗಾಗಲೇ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮತ್ತೆ ಏಕೆ? ನಾಳೆ ಮಾತನಾಡೋಣ. ನೀವು ಕುಳಿತುಕೊಳ್ಳಿ. ನೀವು ಉತ್ತರ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಖಾಲಿ ಇರುವ ತಹಶೀಲ್ದಾರ್ ಹುದ್ದೆಗಳು ಮತ್ತು ಅವುಗಳ ನೇಮಕಾತಿಯ ಬಗ್ಗೆ ಮಾನ್ಯ ಎ.ಟಿ.ರಾಮಸ್ವಾಮಿಯವರು ಮತ್ತು ಇನ್ನಿತರ ಶಾಸಕರು ನಿಯಮ 69ರಡಿಯಲ್ಲಿ ನೀಡಿರುವ ಸೂಚನೆ ಲಿಖಿತವಾಗಿ ಉತ್ತರವನ್ನು ಸದನ ಮುಂದೆ ಮಂಡನೆ ಮಾಡುತ್ತಿದ್ದೇನೆ.

1) ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ತಹಶೀಲ್ದಾರ್‌ಗಳ ವೃಂದ ಬಲ ಈ ಕೆಳಗಿನಂತಿರುತ್ತದೆ.

ತಹಶೀಲ್ದಾರ್ ಗ್ರೇಡ್–I : 204 ಹುದ್ದೆಗಳು
(ರೂ. 7400–13120)
ತಹಶೀಲ್ದಾರ್ ಗ್ರೇಡ್–II : 170 ಹುದ್ದೆಗಳು
(ರೂ. 6000–11200)

ವೃಂದಬಲ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2) ಈ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳು ಕೆಳಕಂಡಂತೆ ಇವೆ.

ತಹಶೀಲ್ದಾರ್ ಗ್ರೇಡ್–I : ತಹಶೀಲ್ದಾರ್ ಗ್ರೇಡ್–II ವೃಂದದಿಂದ ಶೇಕಡಾ 100ರಷ್ಟು ಬಡ್ತಿ ಮೂಲಕ (ಕನಿಷ್ಟ 3 ವರ್ಷ ಅರ್ಹತಾದಾಯಕ ಸೇವೆ ಸಲ್ಲಿಸಿರಬೇಕು)

ತಹಶೀಲ್ದಾರ್ ಗ್ರೇಡ್–II : ಎ) ಶೇಕಡಾ 50 ರಷ್ಟು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ

ಬಿ) ಶೇಕಡಾ 50 ರಷ್ಟು ಶಿರಸ್ತೇದಾರ್ ವೃಂದದಿಂದ ಬಡ್ತಿ ಮೂಲಕ ಕನಿಷ್ಟ 5 ವರ್ಷ ಅರ್ಹತಾದಾಯಕ ಸೇವೆ ಸಲ್ಲಿಸಿರಬೇಕು.

3) ತಹಶೀಲ್ದಾರ್ ಗ್ರೇಡ್ II ವೃಂದಕ್ಕೆ ಮಾತ್ರ ನೇರ ನೇಮಕಾತಿ ಇದ್ದು, 1986 ರಿಂದ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಆಗಿರುವುದಿಲ್ಲ. ಆದರೆ ಕಂದಾಯ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಈ ಅಭ್ಯರ್ಥಿಗಳನ್ನು ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ತಹಶೀಲ್ದಾರ್ ಗ್ರೇಡ್–II ವೃಂದಕ್ಕೆ ನೇರ ನೇಮಕ ಮಾಡಲಾಗಿದೆ.

1993ರಲ್ಲಿ – 5 ಅಭ್ಯರ್ಥಿಗಳು

1998ರಲ್ಲಿ – 3 ಅಭ್ಯರ್ಥಿಗಳು

2002ರಲ್ಲಿ – 5 ಅಭ್ಯರ್ಥಿಗಳು

4) ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ತಹಶೀಲ್ದಾರ್ ಗ್ರೇಡ್–II ವೃಂದಕ್ಕೆ ನೇರ ನೇಮಕಾತಿ ಮಾಡಲು ವಿಳಂಬವಾದ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಶಿರಸ್ತೇದಾರ್ ವೃಂದದಿಂದ ತಾತ್ಕಾಲಿಕವಾಗಿ ನಿಯಮ 32 ರಡಿಯಲ್ಲಿ ಸ್ವತಂತ್ರ ಪ್ರಭಾರೆ ಮೇಲೆ ಕಾರ್ಯ ವ್ಯವಸ್ಥೆ ಮಾಡಲಾಗಿದೆ. ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಹುದ್ದೆಯು ಅತ್ಯಂತ ಪ್ರಮುಖ ಹುದ್ದೆಯಾಗಿದ್ದು ಈ ಹುದ್ದೆಗಳನ್ನು ರೆಗ್ಯುಲರ್ ಆಗಿ ತುಂಬುವ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬಿಡುಗಡೆ ಮಾಡಿರುವ ಖಾಲಿ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಕಂದಾಯ ಇಲಾಖಾ ವತಿಯಿಂದಲೇ ನೇರ ನೇಮಕಾತಿ ಮಾಡಲು ಕರ್ನಾಟಕ ಆಡಳಿತ ಸೇವಾ (ತಹಶೀಲ್ದಾರ್ ಗುಂಪು ಬಿ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು 2005 ಅನ್ನು ರೂಪಿಸಲಾಗಿದೆ. ಈ ಸಂಬಂಧ ಅಧಿಸೂಚನೆ ಸಂಖ್ಯೆ: ಆರ್‌ಡಿ 207 ಎಎಸ್‌ಡಿ 2004 ದಿನಾಂಕ: 5–10–2005 ರಲ್ಲಿ ನಿಯಮಗಳನ್ನು ಪ್ರಕಟಿಸಲಾಗಿದೆ. ಆದರೆ ಈ ನಿಯಮದಡಿ ತಹಶೀಲ್ದಾರ್ ಹುದ್ದೆಗಳಿಗೆ ನೇರ ನೇಮಕ ಮಾಡಲು ಪ್ರಕಟಣೆ ಹೊರಡಿಸಿರುವುದಿಲ್ಲ.

5) ಕಂದಾಯ ಇಲಾಖೆಯಲ್ಲಿ 1986 ರಿಂದ ತಹಶೀಲ್ದಾರ್ ಗುಂಪು ಬಿ ಹುದ್ದೆಗಳಿಗೆ ನೇರ ನೇಮಕಾತಿ ನಡೆದಿರುವುದಿಲ್ಲವಾದ್ದರಿಂದ, ನೇರ ನೇಮಕಾತಿ ಕೋಟಾ ಪ್ರಕಾರ ಒಟ್ಟು 381 ಹುದ್ದೆಗಳಿಗೆ ನೇಮಕಾತಿ ಆಗಬೇಕಿರುತ್ತದೆ. ಈ ಪೈಕಿ 100 ಹುದ್ದೆಗಳನ್ನು ಬಡ್ತಿ ಹುದ್ದೆಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಉಳಿದ 281 ಹುದ್ದೆಗಳಲ್ಲಿ 170 ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ನಡೆಸಲು ಈ ಕೆಳಕಂಡಂತೆ ಪ್ರಕಟಣೆ ಹೊರಡಿಸಲಾಗಿರುತ್ತವೆ.

19989ರಲ್ಲಿ	:	50 ಹುದ್ದೆಗಳು
1999ರಲ್ಲಿ	:	80 ಹುದ್ದೆಗಳು
2004ರಲ್ಲಿ	:	40 ಹುದ್ದೆಗಳು
ಒಟ್ಟು	:	170 ಹುದ್ದೆಗಳು

6) ಈ ಪೈಕಿ ಕರ್ನಾಟಕ ಲೋಕಸೇವಾ ಆಯೋಗವು 1999ನೇ ತಂಡದ 80 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ದಿನಾಂಕ: 29–11–2005 ರಂದು ಅಂತಿಮವಾಗಿ ಪ್ರಕಟಿಸಿ ಸರ್ಕಾರಕ್ಕೆ ಕಳುಹಿಸಿತ್ತು. ಇವರುಗಳಲ್ಲಿ 78 ಅಭ್ಯರ್ಥಿಗಳನ್ನು ತಹಶೀಲ್ದಾರ್ ಗ್ರೇಡ್–II ವೃಂದಕ್ಕೆ ನೇಮಕ ಮಾಡಿ ದಿನಾಂಕ: 25–1–2006ರಂದು ಆದೇಶ ಹೊರಡಿಸಲಾಗಿದೆ. ಇವರುಗಳು ಮೈಸೂರಿನ ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ತರಬೇತಿ ಕೇಂದ್ರದಲ್ಲಿ ಈಗಾಗಲೇ ಒಂದು ತಿಂಗಳ ತರಬೇತಿಯನ್ನು ಪೂರೈಸಿರುತ್ತಾರೆ. ಇವರನ್ನು ಮಾರ್ಚ್ 27 ರಿಂದ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ 2 ತಿಂಗಳ ತರಬೇತಿ ಪಡೆಯಲು ನಿಯೋಜಿಸಲಾಗಿರುತ್ತದೆ.

7) 1998ನೇ ತಂಡದಲ್ಲಿ ಆಯೋಗದಿಂದ ಆಯ್ಕೆಯಾದ 50 ಅಭ್ಯರ್ಥಿಗಳ ಪಟ್ಟಿ ದಿನಾಂಕ: 07–03–2006ರಿಂದ ಸ್ವೀಕೃತವಾಗಿದ್ದು ಇವರುಗಳನನು ತಹಶೀಲ್ದಾರ್ ವೃಂದಕ್ಕೆ ನೇಮಕ ಮಾಡಲು ವೈದ್ಯಕೀಯ ಪರೀಕ್ಷೆ ಹಾಗೂ ಪೋಲೀಸ್ ವೆರಿಫಿಕೇಶನ್ ನಡೆಸಲಾಗುತ್ತಿದೆ. ಇವರುಗಳಿಗೆ ಪರಿಶೀಲನೆ ಮುಗಿದ ನಂತರ ನೇಮಕಾತಿ ಆದೇಶ ನೀಡಲಾಗುವುದು.

8) ಇದಲ್ಲದೆ 2004ನೇ ತಂಡದ 40 ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕರ್ನಾಟಕ ಲೋಕಸೇವಾ ಆಯೋಗವು ಸಂದರ್ಶನಗಳನ್ನು ನಡೆಸುತ್ತಿದೆ. ಈ ಆಯ್ಕೆ ಪಟ್ಟಿಯು ಸದ್ಯದಲ್ಲಿಯೇ ಬರುವ ನಿರೀಕ್ಷೆ ಇದೆ.

9) ಕರ್ನಾಟಕ ಲೋಕಸೇವಾ ಆಯೋಗದಿಂದ ಮೇಲೆ ತಿಳಿಸಿದಂತೆ 170 ತಹಶೀಲ್ದಾರ್‌ಗಳು ನೇಮಕಗೊಳ್ಳುವುದರಿಂದ ಪರಿಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆ ಆಗಲಿದೆ. ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ಖಾಲಿ ಉಳಿದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಬಗ್ಗೆ ವಸ್ತುಸ್ಥಿತಿಯನ್ನು ಪರಿಶೀಲಿಸಿ ಸರ್ಕಾರ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

10) ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿಯಲ್ಲಿ ವಿಳಂಬವಾದ ಕಾರಣ ತಹಶೀಲ್ದಾರ್ ಗ್ರೇಡ್–II ಹಾಗೂ ಗ್ರೇಡ್–I ಹುದ್ದೆಗಳಿಗೆ ನಿಯಮ 32ರಡಿಯಲ್ಲಿ ಸ್ವತಂತ್ರ ಪ್ರಭಾರೆ ಆಧಾರದ ವ್ಯವಸ್ಥೆ ಮಾಡಲಾಗಿರುತ್ತದೆ. ಪೋಷಕ ವೃಂದವಾದ ಶಿರಸ್ತೆದಾರ್ ವೃಂದದ ಜೇಷ್ಠತಾ ಪಟ್ಟಿಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಲಾಗಿದ್ದು, ನ್ಯಾಯಾಲಯದ ಆದೇಶದಂತೆ ಜೇಷ್ಠತಾ ಪಟ್ಟಿಯನ್ನು ಪುನರ್ ಪರಿಷ್ಕರಿಸಿ ತಾತ್ಕಾಲಿಕ ಪಟ್ಟಿಯನ್ನು ದಿನಾಂಕ: 12–12–2006 ರಂದು ಪ್ರಕಟಿಸಿ ಆಕ್ಷೇಪಣೆಗಳನ್ನು ಕರೆಯಲಾಗಿದೆ. ಈ ಬಗ್ಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಜೇಷ್ಠತಾ ಪಟ್ಟಿಯನ್ನು ಸದ್ಯದಲ್ಲಿಯೇ ಅಂತಿಮಗೊಳಿಸಲಾಗುವುದು. ಶಿರಸ್ತೆದಾರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆಗೊಂಡ ನಂತರ ತಹಶೀಲ್ದಾರ್ ಗ್ರೇಡ್–II ವೃಂದದಲ್ಲಿ ಸ್ವತಂತ್ರ ಪ್ರಭಾರೆ ಮೇಲೆ ಇರುವವರನ್ನು ಬಡ್ತಿ ಕೋಟಾದ ಹುದ್ದೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಸ್ಥಾನಪನ್ನ ಬಡ್ತಿ ನೀಡಲಾಗುವುದು. ಇದಾದ ನಂತರ ತಹಶೀಲ್ದಾರ್ ಗ್ರೇಡ್–I ವೃಂದದಲ್ಲಿ ಸ್ವತಂತ್ರ ಪ್ರಭಾರೆಯಲ್ಲಿರುವವರಿಗೆ ಸ್ಥಾನಪನ್ನ ಬಡ್ತಿ ನೀಡಲಾಗುವುದು.

Details regarding sanctioned strength, working strength of Tahsildars Grade-1 and Tahsildars Grade-2 cadre

Name of the cadre	Sanctioned strength	working strength		No-of Deputationists	Leave Reserve	Working arrangement
		Regular	under Rule-32			
Tahsildar Grade-1 (Rs.7400-13120)	204	12	43	15 (not filled)	17	117
Tahsildar Grade-2 (Rs.6000-11200)	170	11	199			Out of 199 Grade-, Rule-32 Tahsildars, 117 are working against Grade-2 posts.

ಅದರ ಜೊತೆಗೆ. ತಹಶೀಲ್ದಾರ್ ಗ್ರೇಡ್–I ರಲ್ಲಿ ಮಂಜೂರಾಗಿದ ಒಟ್ಟು ಹುದ್ದೆಗಳು 204, ತಹಶೀಲ್ದಾರ್ ಗ್ರೇಡ್–II ರಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳು 170. ಇದರಲ್ಲಿ ಖಾಲಿ ಇದ್ದಂಥ ಹುದ್ದೆಗಳೆಂದರೆ, ಗ್ರೇಡ್–I ರಲ್ಲಿ 162, ಗ್ರೇಡ್–II ರಲ್ಲಿ 117. 1986ರಿಂದ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪ್ರಕ್ರಿಯೆಗಳು ಆಗಿರಲಿಲ್ಲ. ಹೀಗಾಗಿ, 300ಕ್ಕೂ ಹೆಚ್ಚು ತಹಶೀಲ್ದಾರ್ ಹುದ್ದೆಗಳನ್ನು ಭರ್ತಿ ಮಾಡುವಂಥ ಪರಿಸ್ಥಿತಿ ನಿರ್ಮಾಣವಾದಂಥ ಸಂದರ್ಭದಲ್ಲಿ ಹಿಂದಿನ ಸರ್ಕಾರ, ಈ ಹುದ್ದೆಗಳನ್ನು ಇಲಾಖೆಯ ಮುಖಾಂತರ ನೇರ ನೇಮಕಾತಿ ಮಾಡಬೇಕು ಎನ್ನುವುದರ ಬಗ್ಗೆ ಆಲೋಚನೆಯನ್ನು ಮಾಡಿ, ಆ ನೇಮಕಾತಿ ಪ್ರಕ್ರಿಯೆಯ ಬಗ್ಗೆ ಗವರ್ನಮೆಂಟ್ ಆರ್ಡರ್ ಸಹ ಹೊರಡಿಸಿ, ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿತ್ತು. ಆದರೆ ಅಂಥ ಸಂದರ್ಭದಲ್ಲಿ ಸರ್ಕಾರ ಬದಲಾವಣೆಯಾಯಿತು ಮತ್ತು ಜನವರಿ 25ನೇ ತಾರೀಖು ಕರ್ನಾಟಕ ಲೋಕಸೇವಾ ಆಯೋಗದವರು 80 ಅಭ್ಯರ್ಥಿಗಳನ್ನು ನೇಮಕ ಮಾಡಿದರು. ಆಯೋಗದಿಂದ 1986ರಿಂದ ನೇಮಕಾತಿ ಆಗಿರಲಿಲ್ಲ. ಅವರು 1998 ರಲ್ಲಿ ಒಂದು ಬ್ಯಾಚನ್ನು ಅಪಾಯಿಂಟ್‌ಮೆಂಟ್ ಮಾಡಬೇಕಾಗಿತ್ತು, 1999ರಲ್ಲೂ ಮಾಡಬೇಕಾಗಿತ್ತು, 2002ರಲ್ಲೂ ಮಾಡಬೇಕಾಗಿತ್ತು. ಆದರೆ ಕೆಲವೊಂದು ಪ್ರಕರಣಗಳು ಕೋರ್ಟು ಕಛೇರಿಗಳಲ್ಲಿ ನಡೆದಿದ್ದರಿಂದ ನೇಮಕಾತಿಯಲ್ಲಿ ವಿಳಂಬವಾಯಿತು ಮತ್ತು 1986ರಿಂದ ನೇಮಕಾತಿ ಆಗಲೇ ಇಲ್ಲ. ಹೀಗಾಗಿ, ಸರ್ಕಾರವೇ ಇಲಾಖೆಯ ಮೂಲಕ ನೇರ ನೇಮಕಾತಿ ಮಾಡಬೇಕು ಎನ್ನುವಂಥ ಸಂದರ್ಭದಲ್ಲಿ ಅವರು ಜನವರಿ 25ರಂದು 1999ರ ಬ್ಯಾಚಿನ 80 ಹುದ್ದೆಗಳಿಗೆ ಕೆ.ಪಿ.ಎಸ್.ಸಿ ಯವರು ನೇಮಕ ಮಾಡಿದ್ದು, ಈಗಾಗಲೇ ಅವರಿಗೆ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟಿದ್ದೇವೆ ಮತ್ತು ಆ 80 ಜನ ತಹಶೀಲ್ದಾರರು ಟ್ರೈನಿಂಗಿಗೆ ಹೋಗಿದ್ದಾರೆ. 1998ರ ಬ್ಯಾಚಿನ 50 ಹುದ್ದೆಗಳ ಒಂದು ಲಿಸ್ಟ್ ಸರ್ಕಾರಕ್ಕೆ ಬಂದಿದೆ. ಈ 50 ಜನರ ಮೆಡಿಕಲ್ ಟೆಸ್ಟ್ ಮತ್ತು ಉಳಿದ ವೆರಿಫಿಕೇಷನ್ ಪ್ರೋಸೆಸ್ ನಡೆಯುತ್ತಿದೆ. 2004ರ ಬ್ಯಾಚಿನಲ್ಲಿ 40 ಹುದ್ದೆಗಳಿಗೆ ಈಗಾಗಲೇ ಕೆ.ಪಿ.ಎಸ್.ಸಿ ಯವರು ಸಂದರ್ಶನ ಮತ್ತು ಉಳಿದೆಲ್ಲಾ ಪ್ರೋಸೆಸ್‌ಅನ್ನು ನಡೆಸುತ್ತಿದ್ದಾರೆ. ಹೀಗಾಗಿ, 170 ಹುದ್ದೆಗಳು ಆದಷ್ಟು ಬೇಗನೆ ಭರ್ತಿಯಾಗುತ್ತವೆ. ಮಾನ್ಯ ರಾಮಸ್ವಾಮಿಯವರು ಮತ್ತು ಇನ್ನಿತರ ಶಾಸಕರು ಕೆಲವೊಂದು ಸಂಶಯಗಳನ್ನು ವ್ಯಕ್ತಪಡಿಸಿದ್ದು, ಇದರಿಂದ ಆಡಳಿತ ವ್ಯವಸ್ಥೆಗೆ ತೊಂದರೆ ಆಗುತ್ತದೆ ಎಂದು ಹೇಳಿದ್ದಾರೆ. ಆದರೆ ಈ ವಿಷಯದಲ್ಲಿ ಯಾವುದೇ ತೊಂದರೆಯಗುವುದಿಲ್ಲ. ಆದಷ್ಟು ಬೇಗ ಈ ಹುದ್ದೆಗಳನ್ನು ಭರ್ತಿ ಮಾಡುವಂಥ ಪ್ರಕ್ರಿಯೆಯನ್ನು ನಾವು ಮಾಡುತ್ತೇವೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಮತ್ತು, ಇನ್ನೂ 111 ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ ಅದನ್ನು ಕೆ.ಪಿ.ಎಸ್.ಸಿ. ಮುಖಾಂತರ ಮಾಡಬೇಕೋ ಅಥವಾ ಇಲಾಖೆಯ ಮುಖಾಂತರ ನೇರ ನೇಮಕಾತಿ ಮಾಡಬೇಕೋ ಎನ್ನುವುದರ ಬಗ್ಗೆ ಸರ್ಕಾರ ವಿಚಾರವನ್ನು ಮಾಡುತ್ತಿದೆ. ಅದರ ಬಗ್ಗೆ ನಾವು ಸರ್ಕಾರದವರು ಯೋಗ್ಯವಾದ ನಿರ್ಧಾರವನ್ನು ಕೈಗೊಳ್ಳುವವರಿದ್ದೇವೆ. ಮಾನ್ಯ ಸದಸ್ಯರಾದ ಎ.ಟಿ. ರಾಮಸ್ವಾಮಿಯವರು ಮತ್ತು ಇನ್ನಿತರರು ಕೆ.ಪಿ.ಎಸ್.ಸಿ. ಬಗ್ಗೆ ಕೆಲವೊಂದು ಆಪಾದನೆಗಳನ್ನು ಮಾಡಿದ್ದಾರೆ. ಯಾವುದಾದರೂ ಸ್ಪೆಸಿಫಿಕ್ ಆದಂಥ, ಸ್ಪಷ್ಟವಾದಂಥ ಆಪಾದನೆಗಳಿದ್ದರೆ

ಅವುಗಳನ್ನು ನಿಯಮವಳಿ ಅಡಿಯಲ್ಲಿ ನಮಗೆ ಕೊಡಬಹುದು. ಆದರೆ, ವೇಗ ಆಗಿ ಆಪಾದನೆಯನ್ನು ಮಾಡುವುದರ ಮುಖಾಂತರ ಒಂದು ಸಂಸ್ಥೆಗೆ ಅಥವಾ ವ್ಯಕ್ತಿಗಳಿಗೆ ಅಪಮಾನ ಆಗುವಂಥಾದ್ದು ಆಗಬಾರದು. ಕೆ.ಪಿ.ಎಸ್.ಸಿ ಬಗ್ಗೆ ನಾನು ಹೆಚ್ಚಿಗೆ ಏನೂ ಮಾತನಾಡಲು ಹೋಗುವುದಿಲ್ಲ. ಆದರೆ ಏನಾದರೂ ಸ್ಪೆಸಿಫಿಕ್ ಆದಂಥ ಆಪಾದನೆಗಳಿದ್ದರೆ, ಸ್ಪಷ್ಟವಾದಂಥ ಉದಾಹರಣೆಗಳ ಸಮೇತ ತಮ್ಮ ಗಮನಕ್ಕೆ ಬಂದುದನ್ನು ನಮಗೆ ಹೇಳಿದರೆ, ಅದರ ಬಗ್ಗೆ ವಿಚಾರಣೆ ಮಾಡಬಹುದು. ಭ್ರಷ್ಟಾಚಾರದ ಏನಾದರೂ ಪ್ರಕರಣಗಳಿದ್ದರೆ, ಅದರ ಬಗ್ಗೆಯೂ ನಾವು ವಿಚಾರಣೆ ಮಾಡಬಹುದಾಗಿದೆ. ಆದರೆ ಸ್ಪೆಸಿಫಿಕ್ ಆದ ಕೇಸುಗಳನ್ನೂ ತೆಗೆದುಕೊಂಡು ಬಂದರೆ ಮಾತ್ರ ನಾವು ವಿಚಾರಣೆ ಮಾಡಲು ಸಾಧ್ಯವಿದೆ. ಇದು ಸರ್ಕಾರದ ನಿಲುವು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಈ ಸದನದಲ್ಲಿ ಹೇಳಲು ಬಯಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 40 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 23ನೇ ಮಾರ್ಚ್ 2006ರಂದು ಗುರುವಾರ ಬೆಳಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-II

43 (138) ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇತ್ತೀಚೆಗೆ ವಿವಿಧ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳನ್ನು ಗ್ರಾಮ ಪಂಚಾಯ್ತಿಗಳಿಗೆ ವರ್ಗಾಯಿಸಿರುವುದರಿಂದ ಗ್ರಾಮ ಪಂಚಾಯ್ತಿಗಳ ಯೋಜನೆ ಗಾತ್ರವು ಹೆಚ್ಚಾಗಿದೆಯೇ;

ಆ) ಹಾಗಿದ್ದಲ್ಲಿ, ಅನುಷ್ಠಾನಗೊಳಿಸಲು ಒದಗಿಸಲಾಗಿರುವ ಸರ್ಕಾರಿ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಯಾವ ಗುಂಪಿಗೆ ಸೇರಿದ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು,

ಆ) ವಿವಿಧ ಇಲಾಖೆಯ ಯೋಜನೆಗಳನ್ನು ಆಯಾಯ ಇಲಾಖೆಯ ಗ್ರಾಮ ಪಂಚಾಯ್ತಿ ಹಂತದ ನೌಕರರು ಅನುಷ್ಠಾನಗೊಳಿಸುತ್ತಿದ್ದಾರೆ.

ಇ) ಗ್ರಾಮ ಪಂಚಾಯ್ತಿಯ ಸಿಬ್ಬಂದಿಯ ಗ್ರೂಪ್ ಸಿ ಮತ್ತು ಡಿ ಗುಂಪಿನವರು ಎ ಹಾಗೂ ಬಿ ಸಮೂಹದ ಸಿಬ್ಬಂದಿಗಳು ಸಹ ಗ್ರಾಮ ಪಂಚಾಯ್ತಿ ಹಂತದಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಿಬ್ಬಂದಿಗಳಾಗಿರುತ್ತಾರೆ.

44(159) ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬಿಜಾಪುರ ನಗರದ ಜುಮ್ಮಾ ಮಸೀದಿ ಹಿಂದಿನ ಪ್ರದೇಶದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ನಿರ್ಮಿಸಿದ ಮನೆಗಳು ತೀರ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ;

ಇ) ಈ ಪ್ರದೇಶದಲ್ಲಿ ರಸ್ತೆ, ನೀರು ಮತ್ತು ಮೂಲಭೂತ ಸೌಲಭ್ಯಗಳಿಲ್ಲದೇ ಇದೊಂದು ಕೊಳಚೆ ಪ್ರದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಪ್ರದೇಶಕ್ಕೆ ಮೂಲಭೂತ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು;

ಉ) ಅದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಬಿಜಾಪುರ ನಗರದ ಮಹಲ್ ಬಾಗಯತ್ ಸ್ಥಳದ ಬಡಾವಣೆಯಲ್ಲಿ ಮಂಡಳಿಯು ಸಂಯುಕ್ತ ವಸತಿ ಯೋಜನೆಯನ್ವಯ ವಿವಿಧ ವರ್ಗಗಳಲ್ಲಿ ಒಟ್ಟು 404 ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿ ಗುತ್ತಿಗೆ ನೀಡಲಾಗಿತ್ತು. ಆದರೆ ಈ ಕೆಲಸವನ್ನು ವಹಿಸಿದ ಗುತ್ತಿಗೆದಾರರು, ಕಾಮಗಾರಿಗಳನ್ನು ಪ್ರಾರಂಭಿಸಿ ಆಯಾ ಹಂತದಲ್ಲಿಯೇ ಅಪೂರ್ಣ ನಿರ್ಮಾಣಗಳನ್ನು ಮಾಡಿ ತದನಂತರ ದರಗಳಿಗೆ ಸಂಬಂಧಿಸಿದಂತೆ ಮಂಡಳಿಯ ವಿರುದ್ಧ ಮಾನ್ಯ ಉಚ್ಚ–ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು. ಇವರಿಂದಾಗಿ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡು ಅಪೂರ್ಣವಾಗಲು ಕಾರಣವಾಯಿತು. ಈ ವಿಳಂಬತೆಯನ್ನು ಮಂಡಳಿಯು ಪರಿಶೀಲಿಸಿ ಸಾರ್ವಜನಿಕರ ಬೇಡಿಕೆ ಅನುಗುಣವಾಗಿ ಹೇಗಿದೆಯೋ ಹಾಗೆ ಯಾವುದೇ ನಿರ್ವಹಣಾ ಶುಲ್ಕವಿಲ್ಲದೆ ತಗಲಿದ ಭೌತಿಕ ವಾಸ್ತವಿಕ ವೆಚ್ಚದೊಂದಿಗೆ ರಿಯಾಯಿತಿಯ ಸೌಲಭ್ಯವನ್ನು ಸಹಾ ನೀಡಿ ಹಂಚಿಕೆ ಮಾಡಲಾಗಿದೆ. ಗುತ್ತಿಗೆದಾರರು ಕಾಮಗಾರಿಗಳ ನಿರ್ಮಾಣವನ್ನು ಸ್ಥಗಿತ ಗೊಳಿಸಿರುವುದರಿಂದ ಈ ನಿರ್ಮಾಣದಲ್ಲಿನ ಮನೆಗಳು ಅಪೂರ್ಣವಾಗಲು ಕಾರಣವಾಯಿತೇ ಹೊರತು ಈ ರೀತಿಯ ಕಾಮಗಾರಿಗಳು ಮಂಡಳಿಯ ಉದ್ದೇಶಿತ ನಿರ್ಮಾಣವಾಗಿರುವುದಿಲ್ಲ.

ಆ) ಈ ಮನೆಗಳ ನಿರ್ಮಾಣಗಳನ್ನು ಗುತ್ತಿಗೆದಾರರು ಸ್ಥಗಿತಗೊಳಿಸಿ ಮಾನ್ಯ ನ್ಯಾಯಾಲಯದಲ್ಲಿ ಹೆಚ್ಚಿನ ದರಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಸಾರ್ವಜನಿಕರ ಬೇಡಿಕೆಯ ಮೇರೆಗೆ ಅಪೂರ್ಣವಾದ ಮನೆಗಳನ್ನು ವಿಲೇವಾರಿ ಮಾಡಲಾಗಿದೆ. ಇದರಿಂದ ಮಂಡಳಿಗೆ ಯಾವುದೇ ನಷ್ಟ ಉದ್ಭವಿಸಿರುವುದಿಲ್ಲ. ಅಪೂರ್ಣವಾದ ಮನೆಗಳನ್ನು ಹೇಗಿವೆಯೋ ಹಾಗೆ ವಿಲೇವಾರಿ ಮಾಡಲಾಗಿದೆ. ಹಾಗೂ ಈ ಮನೆಗಳ ಗುಣಮಟ್ಟದ ಬಗ್ಗೆ ಟಾರ್ ಸ್ಟೀಲ್ ಸಂಸ್ಥೆ, ಬೆಂಗಳೂರು ಇವರು ಪರಿಶೀಲಿಸಿ ತೃಪ್ತಿಕರವಾಗಿದೆಂದು ದೃಢೀಕರಿಸಿರುತ್ತದೆ.

ಇ) ಈ ಬಡಾವಣೆಗೆ ನಾಗರೀಕ ಮೂಲ ಸೌಲಭ್ಯಗಳಾದ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರಿನ ಸೌಕರ್ಯ, ಒಳಚರಂಡಿ, ಹಾಗೂ ನೈರ್ಮಲ್ಯ ವ್ಯವಸ್ಥೆ, ಹೊರವಿದ್ಯುತ್ ಸೌಕರ್ಯಗಳು ಇತ್ಯಾದಿಗಳನ್ನು ಒದಗಿಸಲಾಗಿದೆ. ಈ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಲಾಗಿದ್ದು ಸ್ಥಳೀಯ ಸಂಸ್ಥೆಯಾದ ನಗರಸಭೆಗೆ ಹಸ್ತಾಂತರಿಸುವ ಬಗ್ಗೆ ಪ್ರಕ್ರಿಯೆಯು ಚಾಲನೆಯಲ್ಲಿದೆ.

ಈ) ರಸ್ತೆಗಳಿಗೆ ಡಾಂಬರೀಕರಣ ಹೊರತುಪಡಿಸಿ ಉಳಿದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಸದರಿ ಬಡಾವಣೆಯನ್ನು ಬಿಜಾಪುರದ ನಗರಸಭೆಗೆ ಹಸ್ತಾಂತರ ಮಾಡುವ ಕಾರ್ಯವು ಚಾಲ್ತಿಯಲ್ಲಿದೆ ಈ ಬಡಾವಣೆಯಲ್ಲಿನ ಮನೆಗಳು ಹಂಚಿಕೆದಾರರಿಗೆ ಈಗಾಗಲೇ ಯಾವುದೇ ಅಭಿವೃದ್ಧಿ ಶುಲ್ಕಗಳನ್ನು ವಿಧಿಸದೇ ವಾಸ್ತವಿಕ ವೆಚ್ಚದ ಮೇಲೆ ನೀಡಿ ಮೂಲ ಸೌಲಭ್ಯಗಳನ್ನು ನೀಡಿರುವುದರಿಂದ ಹಾಗೂ ಈ ಯೋಜನೆಯ ಮನೆಗಳಿಗೆ ಅಂತಿಮ ಬೆಲೆ ನಿಗದಿ ಮಾಡಿರುವುದರಿಂದ ಉಳಿದ ಅಭಿವೃದ್ಧಿ ಕೆಲಸಗಳನ್ನು ಮಾಡಲು ಅವಕಾಶವಿರುವುದಿಲ್ಲ. ಉಳಿದ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಯೇ ನಿರ್ವಹಿಸಬೇಕಾಗಿರುತ್ತದೆ.

ಉ) ಈ ಬಡಾವಣೆಯು ಬಹಳ ಹಳೆಯದಾಗಿದ್ದು, ಮೂಲ ಅಭಿವೃದ್ಧಿ ಕೆಲಸಗಳನ್ನು ಯೋಜನಾ ಸಮಯದಲ್ಲಿ ಮಾಡಲಾಗಿದೆ. ಹಳೆಯ ಬಡಾವಣೆಗಳ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾಗಿರುತ್ತದೆ.

45(43) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರದ ಕೇಂದ್ರ ಸ್ಥಾನದಿಂದ ಸಂತೇಮರಳ್ಳಿಯಲ್ಲಿ "ಕ್ಷೇತ್ರ ಶಿಕ್ಷಣಾಧಿಕಾರಿಗಳ" ಕಛೇರಿಯನ್ನು ತೆರೆಯುವ ಬಗ್ಗೆ ಸರ್ಕಾರ ಚಿಂತನೆಗಳೇನಾದರು ನಡೆದಿದೆಯೇ?

ಆ) ನಡೆದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ. ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

46(45) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಬಿನಿ ಎರಡನೇ ಹಂತ ನೀರಾವರಿ ಯೋಜನೆಯ ಸರ್ವೇ ಕಾರ್ಯ ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು :

ಇ) ಈ ಯೋಜನೆ ಪೂರ್ಣಗೊಳಿಸಲು ಇರುವ ಕಾಲಮಿತಿ ಎಷ್ಟು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಸರ್ವೇ ಕಾರ್ಯ ಪೂರ್ಣಗೊಂಡಿದೆ.

ಆ) ರೂ. 63.00 ಲಕ್ಷಗಳು.

ಇ) ಯೋಜನೆಯ ಸರ್ವೆ ಕಾರ್ಯ ಮಾತ್ರ ಪೂರ್ಣಗೊಂಡಿರುವುದರಿಂದ ಯಾವುದೇ ಕಾರ್ಯಕ್ರಮವನ್ನು ರೂಪಿಸಿಕೊಂಡಿರುವುದಿಲ್ಲ.

47 (46) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಶಾಲಾ ಕೊಠಡಿಗಳ ಹಾಗೂ ಪೀಠೋಪಕರಣಗಳ ತೀವ್ರಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದು ಕೊಂಡಿರುವ ಕ್ರಮವೇನು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಸಂತೇಮರಹಳ್ಳಿ ಕ್ಷೇತ್ರದ 8 ಪ್ರೌಢಶಾಲೆಗಳಲ್ಲಿ ಹಾಗೂ 4 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ನಬಾರ್ಡ್‌ನ ಆರ್‌ಐಡಿಎಫ್–10 ಯೋಜನೆಯಡಿಯಲ್ಲಿ ಮಂಜೂರಾದ 6 ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಎಲ್ಲಾ 11 ಕೊಠಡಿಗಳ ನಿರ್ಮಾಣವನ್ನು ಪೂರೈಸಲು ಕ್ರಮ ಕೈ ಗೊಳ್ಳಲಾಗುತ್ತಿದೆ. ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸದಂತೆ ಆರ್.ಐ.ಡಿ.ಎಫ್.–11ರಡಿಯಲ್ಲಿ ಎರಡು ಪದವಿಪೂರ್ವ ಕಾಲೇಜುಗಳಿಗೆ 6 ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಸದರಿ ಕ್ಷೇತ್ರದ ಪದವಿ ಪೂರ್ವ ಕಾಲೇಜುಗಳಿಗೆ ಪೀಠೋಪಕರಣಗಳ ಖರೀದಿಗಾಗಿ 2005–06ನೇ ಸಾಲಿನಲ್ಲಿ ರೂ. 70,000 ಬಿಡುಗಡೆ ಮಾಡಿದೆ. ಉಳಿದ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸೌಲಭ್ಯ ಕಲ್ಪಿಸಲು ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತದೆ.

48(47) ಶ್ರೀ ಆರ್. ಧ್ರುವನಾರಾಯಣ್ (ಸಂತೇಮರಳ್ಳಿ) : ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಚಾಮರಾಜನಗರ ತಾಲ್ಲೂಕು ಹೊಂಗನೂರು ಏತ ನೀರಾವರಿ ಯೋಜನೆ ನನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಪ್ರಗತಿ ಕುಂಠಿತಗೊಂಡಿದೆ.

ಆ) ಕಾಮಗಾರಿಯನ್ನು 3/2007ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

49 (48) ಶ್ರೀ ಧ್ರುವನಾರಾಯಣ. ಆರ್. (ಸಂತೇಮರಳ್ಳಿ) : ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬದನವಾಳು ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ದೊರಕಿದೆಯೇ ;

ಆ) ದೊರೆತಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಹೌದು.

ಆ) ಯೋಜನೆಯಲ್ಲಿನ ಕೆಲವು ಅಂಗಗಳಲ್ಲಿನ ಸ್ವರೂಪ ಬದಲಾದ ಕಾರಣ, ವಿನ್ಯಾಸದಲ್ಲಿ ಉಂಟಾದ ಮಾರ್ಪಾಡಿನನ್ವಯ ಅಂದಾಜನ್ನು ಪರಿಷ್ಕರಿಸಲಾಗುತ್ತಿದೆ. 2006–07ನೇ ಸಾಲಿಗೆ ರೂ. 8.00 ಕೋಟಿಗಳ ಅನುದಾನವನ್ನು ಒದಗಿಸಿಕೊಳ್ಳಲಾಗಿದೆ.

50(130) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ರಾಜ್ಯ ಹಾಗೂ ಕೇಂದ್ರದ ವಿವಿಧ ವಸತಿ ಯೋಜನೆಯಡಿಯಲ್ಲಿ ಕಳೆದ ಸಾಲಿನಲ್ಲಿ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು ? (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಆ) ಮೇಲ್ಕಂಡ ಅವಧಿಯಲ್ಲಿ ಎಷ್ಟು ಗುರಿಯನ್ನು ಹೊಂದಲಾಗಿತ್ತು ಮತ್ತು ಈ ಅವಧಿಯಲ್ಲಿ ಸಾಧಿಸಿರುವ ಪ್ರಗತಿ ಎಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು);

ಇ) ಈ ಸಾಲಿನ ಆಯವ್ಯಯದಲ್ಲಿ ರಾಜ್ಯ ಹಾಗೂ ಕೇಂದ್ರದ ಸರ್ಕಾರವು ವಿವಿಧ ವಸತಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು (ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳ ಪೂರ್ಣ ವಿವರಗಳನ್ನು ಒದಗಿಸುವುದು);.

ಈ) ಇದಕ್ಕಾಗಿ ವೆಚ್ಚ ಮಾಡಲಾಗುವ ಹಣದ ಮೊತ್ತವೆಷ್ಟು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ರಾಜ್ಯ ಹಾಗೂ ಕೇಂದ್ರದ ವಿವಿಧ ವಸತಿ ಯೋಜನೆಯಡಿಯಲ್ಲಿ ಕಳೆದ ಸಾಲಿನಲ್ಲಿ ಅಂದರೆ 2004–05ನೇ ಸಾಲಿನಲ್ಲಿ ಒಟ್ಟು 4599 ಮನೆಗಳನ್ನು ನಿರ್ಮಿಸಲಾಗಿದೆ. ಅವುಗಳ ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.

ಆ) ಈ ಅವಧಿಯಲ್ಲಿ ಅಂದರೆ 2004–05ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಯಾವುದೇ ಗುರಿಯನ್ನು ನೀಡಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 1908 ಮನೆಗಳ ಗುರಿಯನ್ನು ಮತ್ತು ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿಯಲ್ಲಿ 163 ಮನೆಗಳ ಗುರಿಯನ್ನು ಹೊಂದಲಾಗಿತ್ತು. ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 1079

ಮನೆಗಳನ್ನು ಮತ್ತು ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿಯಲ್ಲಿ 161 ಮನೆಗಳ ಪೂರ್ಣಗೊಳಿಸಲಾಗಿದೆ. ಅಲ್ಲದೆ ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿ 3359 ಬ್ಯಾಕ್‌ಲಾಗ್ ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ತಾಲ್ಲೂಕುವಾರು ವಿವರ ಅನುಬಂಧ 'ಅ'ದಲ್ಲಿ ನೀಡಲಾಗಿದೆ.

ಇ) ಈ ಸಾಲಿನಲ್ಲಿ ಅಂದರೆ 2005–06ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣಕ್ಕೆ ತಕ್ಕಂತೆ, ಬೀದರ್ ಜಿಲ್ಲೆಯಲ್ಲಿ ಒಟ್ಟು 6466 ಬ್ಯಾಕ್‌ಲಾಗ್ ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ರೂ. 1319.9 ಲಕ್ಷಗಳು ವೆಚ್ಚವಾಗುತ್ತದೆ. ಕೇಂದ್ರ ಸರ್ಕಾರದ ಯೋಜನೆಯಾದ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 1175 ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಇದಲ್ಲದೆ 2005–06ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ 7000 ಮನೆಗಳ ಗುರಿಯನ್ನು ಸರ್ಕಾರದ ಆದೇಶ ಸಂಖ್ಯೆ ವಣ 74 ಹೆಚ್‌ಎವೈ 2004, ದಿನಾಂಕ: 20.11.2004 ರಲ್ಲಿ ಮತ್ತು ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿಯಲ್ಲಿ 240 ಮನೆಗಳ ಗುರಿಯನ್ನು ಸರಕಾರವು ನೀಡಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ "ಇ" ನಲ್ಲಿ ನೀಡಲಾಗಿದೆ.

ಈ) ಇದಕ್ಕಾಗಿ ಈ ಕೆಳಗಿನಂತೆ ಹಣ ವೆಚ್ಚವಾಗುತ್ತದೆ.

		ರೂ. ಲಕ್ಷಗಳಲ್ಲಿ
1	6466 ಬ್ಯಾಕ್‌ಲಾಗ್ ಮನೆಗಳಿಗೆ	1319.90
2	2005–06 ಇಂದಿರಾ ಆವಾಸ್ ಯೋಜನೆ	293.75
3	2005–06 ಸಾಲಿನ 7240 ಮನೆಗಳಿಗೆ	1148.00
	ಒಟ್ಟು	**3061.65**

ಅನುಬಂಧ "ಅ"

ಬೀದರ್ ಜಿಲ್ಲೆಯಲ್ಲಿ 2004-05ನೇ ಸಾಲಿನಲ್ಲಿ ಪೂರ್ಣಗೊಂಡ ಮನೆಗಳ ಯೋಜನಾವಾರು ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ವಿಧಾನಸಭಾ ಕ್ಷೇತ್ರ	ಗ್ರಾಮೀಣ ಆಶ್ರಯ	ನಗರ ಆಶ್ರಯ	ನವಗ್ರಾಮ ಆಶ್ರಯ	ಎ.ಸಿ.ಎ	ಗ್ರಾಮೀಣ ಅಂಬೇಡ್ಕರ್	ಇಂದಿರಾ ಆವಾಸ್ ಯೋಜನೆ	ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆ	ಒಟ್ಟು
1	ಔರಾದ	ಔರಾದ	540	0	133	297	19	216	45	1250
2	ಭಾಲ್ಕಿ	ಭಾಲ್ಕಿ	49	12		61	6	206	25	359
3	ಭಾಲ್ಕಿ	ಹುಲಸೂರು	111			0	37			148
4	ಬಸವಕಲ್ಯಾಣ	ಬಸವಕಲ್ಯಾಣ	261	10	59	0	45	223	19	617
5	ಬಸವಕಲ್ಯಾಣ	ಹುಲಸೂರು			5	140	2			147
6	ಬೀದರ್	ಬೀದರ್	84	269	63	244	53	209	31	953
7	ಬೀದರ್	ಭಾಲ್ಕಿ	6			14	22			42
8	ಬೀದರ್	ಹುಮನಾಬಾದ	50			28	49			127
9	ಹುಮನಾಬಾದ	ಹುಮನಾಬಾದ	264	26	28	106	34	225	41	724
10	ಹುಮನಾಬಾದ	ಹುಲಸೂರು	115			10	85			210
11	ಚಿಟಗುಪ್ಪ	ಹುಮನಾಬಾದ		22						22
	ಒಟ್ಟು		**1480**	**339**	**288**	**900**	**352**	**1079**	**161**	**4599**

ಅನುಬಂಧ "ಆ"

2004-05ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಸಾಧಿಸಿದ ಪ್ರಗತಿ

ತಾಲ್ಲೂಕು / ಪಟ್ಟಣ	ಇಂದಿರಾ ಆವಾಸ್ ಯೋಜನೆ		ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ		ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿ ಪೂರ್ಣಗೊಳಿಸಲಾದ ಬ್ಯಾಕ್‌ಲಾಗ್ ಮನೆಗಳು
	ಗುರಿ	ಪೂರ್ಣಗೊಂಡ ಮನೆಗಳು	ಗುರಿ	ಪೂರ್ಣಗೊಂಡ ಮನೆಗಳು	
ಔರಾಧ	612	216	52	45	989
ಬಸವಕಲ್ಯಾಣ	309	223	26	19	522
ಭಾಲ್ಕಿ	311	206	27	25	276
ಬೀದರ್	312	209	27	31	882
ಹುಮನಾಬಾದ	364	225	31	41	668
ಚಿಟಗುಪ್ಪ					22
ಒಟ್ಟು	**1908**	**1079**	**163**	**161**	**3359**

ಅನುಬಂಧ "ಇ"

ಈ ಸಾಲಿನಲ್ಲಿ ಆಯವ್ಯಯದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರವು ವಿವರ ವಸತಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಸಂಖ್ಯೆ

			ಗುರಿ	
ಕ್ರಮ ಸಂಖ್ಯೆ	ತಾಲ್ಲೂಕು	ಇಂದಿರಾ ಆವಾಸ್	ಗ್ರಾಮೀಣ ಆವಾಸ್	ಗ್ರಾಮೀಣ ಅಂಬೇಡ್ಕರ್
1	ಔರಾಧ	318	1520	20
2	ಬಸವ ಕಲ್ಯಾಣ	200	1140	20
3	ಭಾಲ್ಕಿ	212	1400	0
4	ಬೀದರ್	207	1320	0
5	ಹುಮನಾಬಾದ	238	1320	200
	ಒಟ್ಟು	**1175**	**7000**	**240**

51(131) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕಾಗಿ ಸರ್ವೆ ಮಾಡಲಾಗಿದೆ ಮತ್ತು ಯಾವಾಗ ಈ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ;

ಆ) ಈ ಪೈಕಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ;

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳ ನಿರ್ಮಾಣ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು ಮತ್ತು ಇದರ ಅಂದಾಜು ವೆಚ್ಚವೆಷ್ಟು;

ಈ) ಹೊಸ ಕೆರೆಗಳ ನಿರ್ಮಾಣದಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ?

ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಈ ಕೆಳಗಿನ ಕಾಮಗಾರಿಗಳ ಸರ್ವೆ ಕಾರ್ಯ ಪೂರ್ಣಗೊಂಡಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಸರ್ವೆ ಪೂರ್ಣಗೊಂಡ ವರ್ಷ
1	ಬೆಂಬ್ರಾ ಕೆರೆ	1993–94
2	ಕೌಡಗಾಂವ ಕೆರೆ	1993–94
3	ಆಲೂರು ಬೇಲೂರು ಕೆರೆ	1997–98
4	ಅಕನಾಪೂರ ಕೆರೆ	2005–06
5	ನಾಗಮಾರಪಳ್ಳಿಕೆರೆ	2004–05
6	ಸೂರಳ್ಳಿ ಕೆರೆ	1998–99
7	ನಾಗನೂರಬಾಬಜಿ	1998–99

ಆ) 1. ಬೆಂಬ್ರಾ ಕೆರೆ

2. ನಾಗಮಾರಪಳ್ಳಿಕೆರೆ

3. ಆಲೂರು ಬೇಲೂರು (ಪ್ರಸ್ತುತ ಸ್ಥಗಿತಗೊಂಡಿರುತ್ತದೆ)

ಇ) 2005–06ನೇ ಸಾಲಿನ ಆಯವ್ಯಯದಲ್ಲಿ ನಾಗಮಾರಪಳ್ಳಿ ಹೊಸ ಕೆರೆ ನಿರ್ಮಾಣ ಕಾಮಗಾರಿ ಸೇರಿದೆ. ಅಂದಾಜು ವೆಚ್ಚ ರೂ. 78.00 ಲಕ್ಷಗಳು.

ಈ) 551 ಹೆಕ್ಟೇರ್‌ಗಳು.

52 (155) ಶ್ರೀ ಹಾಲಪ್ಪ ಹೆಚ್ (ಹೊಸನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಶಿಕ್ಷಣ ಇಲಾಖೆಗೆ ಮಂಜೂರಾದ ಕಾಮಗಾರಿಗಳಾವುವು; (ತಾಲ್ಲೂಕುವಾರು ವಿವರ ನೀಡುವುದು);

ಆ) ಕಾಮಗಾರಿಗಳು ಮಂದಗತಿಯಲ್ಲಿ ನಡೆಯುತ್ತಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಬಂದಿದೆ.

ಇ) ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಶಾಲಾ ಕೊಠಡಿಗಳ ನಿರ್ಮಾಣವು ಪೂರ್ಣಗೊಂಡಿರುತ್ತದೆ. ಪ್ರೌಢಶಾಲೆಗೆ ಸಂಬಂಧಿಸಿದಂತೆ ಇದು 3 ವರ್ಷಗಳ ಯೋಜನೆ ಆದ್ದರಿಂದ ಮಂಜೂರದ 28 ಶಾಲೆಗಳ 44 ಕೊಠಡಿಗಳ ಪೈಕಿ 2005-06ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ವಿಧಾನ ಸಭಾ ಸದಸ್ಯರಾದ ಶ್ರೀ ಹಾಲಪ್ಪ ಹೆಚ್. (ಹೊಸನಗರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 155 ಶಿವಮೊಗ್ಗ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಶಿಕ್ಷಣ ಇಲಾಖೆಗೆ ಮಂಜೂರಾದ ಕಾಮಗಾರಿಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಅನುಬಂಧ

ಪ್ರಾಥಮಿಕ

ಕ್ರ ಸಂ	ಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ತಾಲ್ಲೂಕು
1	2	3	5
1	ಸಿದ್ದನಮಟ್ಟಿ	1	ಭದ್ರಾವತಿ
2	ವಡೆಯರಪುರ	1	ಭದ್ರಾವತಿ
3	ಅಗರದ ಹಳ್ಳಿ	1	ಭದ್ರಾವತಿ
4	ಎಮ್ಮೆಹಟ್ಟಿ	1	ಭದ್ರಾವತಿ
5	ಅರತೊಳಲು ವಡ್ಡರಹಟ್ಟಿ	1	ಭದ್ರಾವತಿ
6	ಹೊಳೆಹೊನ್ನೂರು ಎ.ಕೆ.ಕಾ	1	ಭದ್ರಾವತಿ
7	ಉರ್ದು ಹೊಳೆನೇರಳೆಕೆರೆ	1	ಭದ್ರಾವತಿ

1	2	3	5
8	ಕಾಗಲಿಜೆಡ್ಡು	1	ಭದ್ರಾವತಿ
9	ಕುಂಬತ್ತಿ	1	ಭದ್ರಾವತಿ
10	ಬೈಸಗುಂದ	1	ಭದ್ರಾವತಿ
11	ಕೊಳಗಿ	1	ಭದ್ರಾವತಿ
12	ಹೊರಬೈಲು	1	ಭದ್ರಾವತಿ
13	ದೋಣ	1	ಭದ್ರಾವತಿ
14	ಕಂಕಳಲೆ	1	ಭದ್ರಾವತಿ
15	ಸೂರನಗದ್ದೆ	1	ಸಾಗರ
16	ಶಿರವಾಲ	1	ಸಾಗರ
17	ಕಟ್ಟಿನಕಾರು	1	ಸಾಗರ
18	ಕಂಡಿಕಾ	1	ಸಾಗರ
19	ಮೇಗನೆ	1	ಸಾಗರ
20	ಭೀಮಕ್ಕಿ	1	ಸಾಗರ
21	ನೀಲೆಹಳೆತೋಟ	1	ಸಾಗರ
22	ಉರ್ದು ಜನ್ನತ್ ನಗರ	1	ಸಾಗರ
23	ಉರ್ದು ಗಿಲಾಲಗುಂಡಿ	1	ಸಾಗರ
24	ಬಾಲೂರು	1	ಶಿಕಾರಿಪುರ
25	ಉಡಗಣೆ	1	ಶಿಕಾರಿಪುರ
26	ನಗಿನಾಳ್	1	ಶಿಕಾರಿಪುರ
27	ಬನ್ನೂರು	1	ಶಿಕಾರಿಪುರ
28	ಚೌಡನಾಳ್	1	ಶಿಕಾರಿಪುರ
29	ಅಗ್ರಹಾರ ಮುಟ್ಟಹಳ್ಳಿ	1	ಶಿಕಾರಿಪುರ
30	ಡಿ.ಬಿ. ಹಾಳ	1	ಶಿಕಾರಿಪುರ
31	ಯರೆಕೊಪ್ಪ	1	ಶಿಕಾರಿಪುರ
32	ಕೊಪ್ಪದಕೆರೆ	1	ಶಿಕಾರಿಪುರ
33	ಶಿವಪುರ ಗೋಕಲ	1	ಶಿಕಾರಿಪುರ
34	ಅಪ್ಪನ ಕಟ್ಟೆ	1	ಶಿಕಾರಿಪುರ
35	ಆಯನೂರು ಕೋಟೆ	1	ಶಿವಮೊಗ್ಗ
36	ಹೊಸಕೊಪ್ಪ	1	ಶಿವಮೊಗ್ಗ

1	2	3	5
37	ದುಮ್ಮಳ್ಳಿ	1	ಶಿವಮೊಗ್ಗ
38	ಕಲ್ಲಿಕೆರೆ	1	ಶಿವಮೊಗ್ಗ
39	ಕುಸ್ಕೂರು	1	ಶಿವಮೊಗ್ಗ
40	ಚಾಮುಂಡಿಪುರ	1	ಶಿವಮೊಗ್ಗ
41	ಹಲ್ಕುಣಿ	1	ಶಿವಮೊಗ್ಗ
42	ಹನುಂತಾಪುರ	1	ಶಿವಮೊಗ್ಗ
43	ಸಿದ್ದೇಶ್ವರನಗರ	1	ಶಿವಮೊಗ್ಗ
44	ಚಿಕ್ಕಶಕುನ	1	ಸೊರಬ
45	ಗೊಲ್ಲರದೊಡ್ಡಿ	1	ಸೊರಬ
46	ಸುರನಗಿ ಗೋಮಾಳ	1	ಸೊರಬ
47	ಅಂಬಲಿಕೊಪ್ಪ	1	ಸೊರಬ
48	ಹೊಸಪೇಟೆ ಹಕ್ಕಲು	1	ಸೊರಬ
49	ಮಂಗರಶಿಕೊಪ್ಪ	1	ಸೊರಬ
50	ಹೊಸಗದ್ದೆ	1	ಸೊರಬ
51	ಕರಜಿಕೊಪ್ಪ	1	ಸೊರಬ
52	ಜೋಗಿಕೊಪ್ಪ	1	ತೀರ್ಥಹಳ್ಳಿ
53	ಸೀಕೆ	1	ತೀರ್ಥಹಳ್ಳಿ
54	ಮಳಗಾರು	1	ತೀರ್ಥಹಳ್ಳಿ
55	ಹುಳಿಗೊಡ್ಡು	1	ತೀರ್ಥಹಳ್ಳಿ
56	ಮಜತಾನಿ	1	ತೀರ್ಥಹಳ್ಳಿ
57	ಮರಗಳಲೆ	1	ತೀರ್ಥಹಳ್ಳಿ
58	ಹೊಸಕೆಸ್ಲೂರು	1	ತೀರ್ಥಹಳ್ಳಿ
59	ಬಿಳುಮನೆ	1	ತೀರ್ಥಹಳ್ಳಿ
60	ತೋಟದ ಕೊಪ್ಪ	1	ತೀರ್ಥಹಳ್ಳಿ
61	ಜಂಬೆ	1	ತೀರ್ಥಹಳ್ಳಿ
62	ಬಾಳೆಕೊಡಲು	1	ತೀರ್ಥಹಳ್ಳಿ
63	ಉರ್ದು–ಕೈಮರ	1	ತೀರ್ಥಹಳ್ಳಿ
64	ತಮಿಳು–ಅರಳಿಹಳ್ಳಿ	2	ತೀರ್ಥಹಳ್ಳಿ
65	ಆನೇಗಡ್ಡೆ ರೋಡ್	2	ತೀರ್ಥಹಳ್ಳಿ
66	ಕೆಂಚನಹಳ್ಳಿ	3	ತೀರ್ಥಹಳ್ಳಿ

ಪ್ರೌಢ			
ಕ್ರ ಸಂ	ಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ತಾಲ್ಲೂಕು
1	2	3	5
1	ಯಡೇಹಳ್ಳಿಗ್ರಾಮ	2	ಭದ್ರಾವತಿ
2	ಎಸ್.ಕೆ. ಮಗ್ಗಿ	1	ಭದ್ರಾವತಿ
3	ದೊಡ್ಡಮಗಟ್ಟ	1	ಭದ್ರಾವತಿ
4	ಬಳೇಮಾರನಹಳ್ಳಿ	1	ಭದ್ರಾವತಿ
5	ಕಲ್ಲಿಹಾಳ್	2	ಭದ್ರಾವತಿ
6	ಅರಳಿಹಳ್ಳೀ	1	ಭದ್ರಾವತಿ
7	ಅರಕೆರೆ ಗ್ರಾಮ	3	ಭದ್ರಾವತಿ
8	ಅಮೃತ್	1	ಹೊಸನಗರ
9	ಅರಸಾಳು	1	ಹೊಸನಗರ
10	ಹೊಸನಗರ ಜಿ.ಜೆ.ಸಿ	2	ಹೊಸನಗರ
11	ಮಾರುತಿಪುರ	1	ಹೊಸನಗರ
12	ಆನಂದಪುರಂ	2	ಸಾಗರ
13	ತ್ಯಾಗರ್ತಿ	3	ಸಾಗರ
14	ಉಲ್ಲೂರು	1	ಸಾಗರ
15	ಹಿರೇನಲ್ಲೂರು	1	ಸಾಗರ
16	ಆವಿನಹಳ್ಳಿ	1	ಸಾಗರ
17	ಶಿರವಂತೆ	1	ಸಾಗರ
18	ಶಿಕಾರಿಪುರ	2	ಶಿಕಾರಿಪುರ
19	ಅರಗುವಲ್ಲಿ	3	ಶಿಕಾರಿಪುರ
20	ಹುಲಗಿನಕೊಪ್ಪ	2	ಶಿಕಾರಿಪುರ
21	ಹೊಸಮುಗಳುಗೆರೆ	3	ಶಿಕಾರಿಪುರ
22	ಇಸ್ಸೂರು	1	ಶಿಕಾರಿಪುರ
23	ಮಂಡಗಟ್ಟ	1	ಶಿವಮೊಗ್ಗ
24	ತಮಡಿಹಳ್ಳಿ	1	ಶಿವಮೊಗ್ಗ
25	ಶೆಟ್ಟಿಹಳ್ಳಿ	1	ಶಿವಮೊಗ್ಗ
26	ಗಾಜನೂರು	1	ಶಿವಮೊಗ್ಗ
27	ಕೊಮ್ಮನಾಳ್	1	ಶಿವಮೊಗ್ಗ
28	ಬೆಟ್ಟೂರು	3	ಶಿವಮೊಗ್ಗ

53 (41) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಯಾವ ಯಾವ ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಇನ್ನೂ ಎಷ್ಟು ರಸ್ತೆಗಳು ಈ ಯೋಜನೆಗೆ ಒಳಪಡಿಸುವ ನಿರೀಕ್ಷೆ ಇದೆ (ತಾಲ್ಲೂಕುವಾರು ವಿವರ ಒದಗಿಸುವುದು);

ಇ) ಜಿಲ್ಲೆಗೆ ಈ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾದ ಹಣವೆಷ್ಟು;

ಈ) ಈವರೆಗೆ ಖರ್ಚು ಮಾಡಿದ ಹಣವೆಷ್ಟು ಹಾಗೂ ಉಳಿದ ಹಣವೆಷ್ಟು (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಧಾರವಾಡ ಜಿಲ್ಲೆಯಲ್ಲಿ ತೆಗೆದುಕೊಳ್ಳಲಾದ ರಸ್ತೆ ಕಾಮಗಾರಿಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಆ) ಈ ಜಿಲ್ಲೆಯಲ್ಲಿ ಈ ಯೋಜನೆಗೆ ಒಳಪಡುವ ರಸ್ತೆಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

ಇ) ಕೇಂದ್ರ ಸರ್ಕಾರದಿಂದ ಈ ಜಿಲ್ಲೆಗೆ ರೂ. 1121.03 ಲಕ್ಷಗಳು ಮಂಜೂರಾಗಿರುತ್ತದೆ.

ಈ) ಈವರೆಗೆ ವೆಚ್ಚ ಮಾಡಿದ ಹಣ ರೂ. 1105.99 ಲಕ್ಷಗಳಾಗಿದ್ದು, ರೂ. 15.04 ಲಕ್ಷ ಬಾಕಿ ಉಳಿದಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 41ರ ಉತ್ತರದ ಲಗತ್ತು

ಅನುಬಂಧ–1

ಧಾರವಾಡ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರಗಳು.

ಅ.ನಂ.	ಕಾಮಗಾರಿಗಳ ವಿವರ	ಹಂತ	ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	2	3	4	5
	ಧಾರವಾಡ ತಾಲ್ಲೂಕು			
1	ಧಾರವಾಡ ತಾಲ್ಲೂಕಿನ ಲೋಕೂರ–ಶಿಭಾರಗಟ್ಟಿ ರಸ್ತೆ ಕಿ.ಮೀ. 0.00 ದಿಂದ 2.50 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-I	2.50	23.07
2.	ಧಾರವಾಡ ತಾಲ್ಲೂಕಿನ ಅಳ್ನಾವರ–ಕಾಶಿನಟ್ಟಿ ರಸ್ತೆ ಕಿ.ಮೀ. 0.00 ದಿಂದ 4.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-I	4.00	25.86
3.	ಧಾರವಾಡ ತಾಲ್ಲೂಕಿನ ಕ್ಯಾರಕೊಪ್ಪ–ಕಲಕೇರಿ ರಸ್ತೆ ಕಿ.ಮೀ. 0.00 ದಿಂದ 6.20 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	6.20	47.30
4.	ಧಾರವಾಡ ತಾಲ್ಲೂಕಿನ ರಾಮಾಪೂರ–ಹೊನ್ನಾವರ ರಸ್ತೆ ಕಿ.ಮೀ. 0.00 ದಿಂದ 7.50 ಕಿ.ಮೀ. ದವರೆಗೆ ಸುಧಾರಣೆ.	Phase-II	7.50	59.55
5.	ಧಾರವಾಡ ತಾಲ್ಲೂಕಿನ ಮುಗದ–ಕೆ.ಎಂ. ತಡಕೋಡ ರಸ್ತೆ ಕಿ.ಮೀ. 0.00 ದಿಂದ 5.50 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-III	5.50	54.00
		ಮೊತ್ತ:	25.70	209.78
	ಹುಬ್ಬಳ್ಳಿ ತಾಲ್ಲೂಕು :			
1.	ಹುಬ್ಬಳ್ಳಿ ತಾಲ್ಲೂಕು ಹಳೇಹುಬ್ಬಳ್ಳಿ–ಮಾವನೂರ–ಕಟ್ನೂರ–ಗಿರಿಯಾಲ ರಸ್ತೆ ಕಿ.ಮೀ. 0.00 ದಿಂದ 7.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-I	7.00	61.52

1	2	3	4	5
2.	ಹುಬ್ಬಳ್ಳಿ ತಾಲ್ಲೂಕಿನ ಅದರಗುಂಚಿ–ಹಳ್ಯಾಳ–ಮಂಟುರ ರಸ್ತೆ ಕಿ.ಮೀ. 0.00 ದಿಂದ 5.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	5.00	48.89
3.	ಹುಬ್ಬಳ್ಳಿ ತಾಲ್ಲೂಕಿನ ಬ್ಯಾಹಟ್ಟಿ–ಇಂಗಳಹಳ್ಳಿ ರಸ್ತೆ ಕಿ.ಮೀ. 0.00 ದಿಂದ 3.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	3.00	57.57
4.	ಹುಬ್ಬಳ್ಳಿ ತಾಲ್ಲೂಕಿನ ಗಾಮನಗಟ್ಟಿ–ತಾರಿಹಾಳ ರಸ್ತೆ ಕಿ.ಮೀ. 0.00 ದಿಂದ 3.20 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-III	3.20	30.00
5.	ಹುಬ್ಬಳ್ಳಿ ತಾಲ್ಲೂಕಿನ–ಛಬ್ಬಿ–ಶೆರೇವಾಡ ರಸ್ತೆ ಕಿ.ಮೀ. 0.00 ದಿಂದ 3.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-III	3.00	24.00
		ಮೊತ್ತ:	21.20	221.98
	ಕಲಘಟಗಿ ತಾಲ್ಲೂಕು :			
1.	ಕಲಘಟಗಿ ತಾಲ್ಲೂಕಿನ ದಿಂಬನಹಳ್ಳಿ N.H.-63 ದವರೆಗೆ ಕಿ.ಮೀ. 0.00 ದಿಂದ 7.50 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-I	7.50	55.41
2.	ಕಲಘಟಗಿ ತಾಲ್ಲೂಕಿನ ರಾಮನಾಳ–ಸಂಗೇದೇವರ ಕೊಪ್ಪ ರಸ್ತೆ ಕಿ.ಮೀ. 0.00 ದಿಂದ 2.50 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	2.50	28.06
3.	ಕಲಘಟಗಿ ತಾಲ್ಲೂಕಿನ ಬೆಳವಂತರ–ಹುಣಸಿಕಟ್ಟಿ ರಸ್ತೆ ಕಿ.ಮೀ. 0.00 ದಿಂದ 5.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	5.00	33.26
4.	ಕಲಘಟಗಿ ತಾಲ್ಲೂಕಿನ ಬೋಗೇನಾಗರಕೊಪ್ಪದಿಂದ N.H.-63 ದವರೆಗೆ ಕಿ.ಮೀ. 0.00 ದಿಂದ 1.60 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	1.60	13.84
5.	ಕಲಘಟಗಿ ತಾಲ್ಲೂಕಿನ ಹುಲಕೊಪ್ಪದಿಂದ ಜಿ.ಬಸವನಕೊಪ್ಪ ರಸ್ತೆ ದವರೆಗೆ ಕಿ.ಮೀ. 0.00 ದಿಂದ 5.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	5.00	36.50

1	2	3	4	5
6.	ಕಲಘಟಗಿ ತಾಲ್ಲೂಕಿನ ಆಲದಕಟ್ಟಿ ವಾಯ್ಹ ಹನುಮಾಪೂರ ರಸ್ತೆಯವರೆಗೆ ಕಿ.ಮೀ. 0.00 ದಿಂದ 4.20 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-III	4.20	36.00
7.	ಕಲಘಟಗಿ ತಾಲ್ಲೂಕಿನ ಹಂಚಿನಾಳ ಕೊಡು ರಸ್ತೆ ದವರೆಗೆ ಕಿ.ಮೀ. 0.00 ದಿಂದ 2.00 ಕಿ.ಮೀ. ದವರೆಗೆ ಅಭಿವೃದ್ಧಿಗೊಳಿಸುವುದು.	Phase-II	2.00	18.00
		ಮೊತ್ತ :	**27.80**	**221.07**
	ಕುಂದಗೋಳ ತಾಲ್ಲೂಕು :			
1.	ಕುಂದಗೋಳ ತಾಲ್ಲೂಕಿನ ಗುಡಗೇರಿ–ಗೌಡಗೇರಿ ರಸ್ತೆ ಕಿ.ಮೀ. 0.00 ದಿಂದ 5.75 ರವರೆಗೆ.	Phase-I	5.75	38.86
2.	ಕುಂದಗೋಳ ತಾಲ್ಲೂಕಿನ ಯರೇಬೂದಿಹಾಳ–ಹೊಸಳ್ಳಿ ರಸ್ತೆ ಕಿ.ಮೀ. 0.00 ದಿಂದ 4.00 ರವರೆಗೆ	Phase-I	4.00	29.84
3.	ಕುಂದಗೋಳ ತಾಲ್ಲೂಕಿನ ತಿಮ್ಮಾಪೂರ–ಮಾಗಡಿ ರಸ್ತೆ ಕಿ.ಮೀ. 0.00 ದಿಂದ 5.00 ರವರೆಗೆ	Phase-II	5.00	45.00
4.	ಕುಂದಗೋಳ ತಾಲ್ಲೂಕಿನ ತಿಮ್ಮಾಪೂರ–ಯರೇಬೂದಿಹಾಳ ರಸ್ತೆ ಕಿ.ಮೀ. 0.00 ದಿಂದ 5.00 ದವರೆಗೆ	Phase-II	5.00	37.20
5.	ಕುಂದಗೋಳ ತಾಲ್ಲೂಕಿನ ತಿಮ್ಮಾಪೂರ–ಮತ್ತಿಗಟ್ಟಿ ರಸ್ತೆ ಕಿ.ಮೀ. 0.00 ದಿಂದ 3.00 ರವರೆಗೆ.	Phase-II	5.00	21.51
6.	ಕುಂದಗೋಳ ತಾಲ್ಲೂಕಿನ ಕುಂದಗೋಳ–ಗುಡೇನಕಟ್ಟಿ ರಸ್ತೆ ಕಿ.ಮೀ. 0.00 ದಿಂದ 6.00 ರವರೆಗೆ.	Phase-III	6.00	54.00
		ಮೊತ್ತ :	**28.75**	**226.41**

ನವಲಗುಂದ ತಾಲ್ಲೂಕು :

1	2	3	4	5
1.	ನವಲಗುಂದ ತಾಲ್ಲೂಕಿನ ನರಗುಂದ-ತಿರ್ಲಾಪೂರ ರಸ್ತೆಯಿಂದ ಬಳ್ಳೂರ-ಜಾವೂರ ರಸ್ತೆ ಕಿ.ಮೀ. 0.00 ದಿಂದ 8.00 ರವರೆಗೆ	Phase-I	8.00	75.88
2.	ನವಲಗುಂದ ತಾಲ್ಲೂಕಿನ ತಿರ್ಲಾಪೂರ-ಶೀರಕೋಳ ರಸ್ತೆ ಕಿ.ಮೀ. 0.00 ದಿಂದ 3.00 ರವರೆಗೆ	Phase-II	3.00	47.30
3.	ನವಲಗುಂದ ತಾಲ್ಲೂಕಿನ ಬೆನ್ನೂರ ಕೂಡು ರಸ್ತೆ ಕಿ.ಮೀ. 0.00 ದಿಂದ 1.70 ರವರೆಗೆ	Phase-II	1.70	21.42
4.	ನವಲಗುಂದ ತಾಲ್ಲೂಕಿನ ಮಜ್ಜಿಗುಡ್ಡ ಕೂಡ ರಸ್ತೆ ಕಿ.ಮೀ. 0.00 ದಿಂದ 5.00 ರವರೆಗೆ	Phase-II	5.00	33.84
5.	ನವಲಗುಂದ ತಾಲ್ಲೂಕಿನ ಸೈದಾಪೂರ ಕೂಡು ರಸ್ತೆ ಕಿ.ಮೀ. 0.00 ದಿಂದ 1.50 ರವರೆಗೆ.	Phase-II	1.50	9.38
6.	ನವಲಗುಂದ ತಾಲ್ಲೂಕಿನ ತಿರ್ಲಾಪೂರ-ಶಿರಕೋಳ ರಸ್ತೆ ಕಿ.ಮೀ. 4.00 ದಿಂದ 7.00 ರವರೆಗೆ.	Phase-II	4.00	54.00
		ಮೊತ್ತ :	23.20	241.8

ಅನುಬಂಧ-2

ಧಾರವಾಡ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಇನ್ನುಮುಂದೆ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ವಿವರಗಳು.

ಅ.ನಂ.	ಕಾಮಗಾರಿಗಳ ವಿವರ	ಹಂತ	ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	2	3	4	5
	ಹುಬ್ಬಳ್ಳಿ ತಾಲ್ಲೂಕು			
1	ರಾಮಾಪೂರದಿಂದ ಅಂಚಟಗೇರಿರವರೆಗೆ ವಾಯಾ ಚವರಗುಡ್ಡ ಚೆನ್ನಾಪೂರ ರಸ್ತೆ ಅಭಿವೃದ್ಧಿಗೊಳಿಸುವುದು	ಫೇಸ-IV	6.60	78.38
		ಮೊತ್ತ :	**6.60**	**78.38**
	ಕಲಘಟಗಿ ತಾಲ್ಲೂಕು			
2	ನೆಲ್ಲಿಹರವಿ ತಾಂಡಾದಿಂದ ತಾವರಗೇರಿ ವರೆಗೆ ಅಭಿವೃದ್ಧಿಗೊಳಿಸುವುದು ವಾಯಾ ಅರಳಿಹೊಂಡ.	ಫೇಸ-V ಬ್ಯಾಚ್-I	7.00	97.96
3	ಬೆಂಡಾಲಗಟ್ಟಿಯಿಂದ ಕಲಘಟಗಿ ತಡಸ ರಸ್ತೆಯವರೆಗೆ ಅಭಿವೃದ್ಧಿಗೊಳಿಸುವುದು.	ಫೇಸ-V ಬ್ಯಾಚ್-I	3.50	42.50
4	ಮಸಳೀಕಟ್ಟಿಯಿಂದ ಕಲಘಟಗಿ ಹಳ್ಯಾಳ್ ರಸ್ತೆಯವರೆಗೆ ಅಭಿವೃದ್ಧಿಗೊಳಿಸುವುದು	ಫೇಸ-IV	8.55	89.30
5	ಗಂಭ್ಯಾಪೂರದಿಂದ ದೇವಲಿಂಗನಕೊಪ್ಪ ವಾಯಾ ಜಮ್ಮಿಹಾಳ ರಸ್ತೆ ಅಭಿವೃದ್ಧಿಗೊಳಿಸುವುದು.	ಫೇಸ-V ಬ್ಯಾಚ್-I	5.00	44.8
6	ಕಂದ್ಲಿ ವಾಯಾ ದಿಂಬವಳ್ಳಿ ಬೈಚವಾಡದಿಂದ ದೇವಿಕೊಪ್ಪದವರೆಗೆ ಅಭಿವೃದ್ಧಿಗೊಳಿಸುವುದು.	ಮಿಸ್ಸಿಂಗ್ ಲಿಂಕ್ ಫೇಜ್-1	4.15	70.30
7	ದ್ಯಾಮಾಪೂರದಿಂದ ಕಾಡನಕೊಪ್ಪವರೆಗೆ ರಸ್ತೆ ಸುಧಾರಣೆ.	ಫೇಸ-V ಬ್ಯಾಚ್-II	10.35	142.32
		ಮೊತ್ತ :	**38.55**	**487.18**

ಕುಂದಗೋಳ ತಾಲ್ಲೂಕು

1	2	3	4	5
8	ಗುರುವಿನಹಳ್ಳಿಯಿಂದ NH4 ರಸ್ತೆ ವರೆಗೆ ವಾಯಾ ಮಳಲಿ ಕುಂಕೂರ ರಸ್ತೆ ಅಭಿವೃದ್ಧಿಗೊಳಿಸುವುದು.	ಫೇಸ–IV	6.90	61.90
		ಮೊತ್ತ :	**6.90**	**61.90**

ನವಲಗುಂದ ತಾಲ್ಲೂಕು

1	2	3	4	5
9	ಅರಹಟ್ಟಿ ಗ್ರಾಮದಿಂದ ವಾಯಾ ಗುಡಿಸಾಗರ ರೋಣ ನವಲಗುಂದ ರಸ್ತೆವರೆಗೆ ಅಭಿವೃದ್ಧಿಗೊಳಿಸುವುದು.	ಫೇಸ–V ಬ್ಯಾಚ್–I	6.84	87.65
10	ನಾವಳ್ಳಿ ಗ್ರಾಮದಿಂ ದ ಹುಬ್ಬಳ್ಳಿ ಬಿಜಾಪೂರ ರಸ್ತೆ ವರೆಗೆ ವಾಯಾ ಇಬ್ರಾಹಿಂಪೂರ ಅಭಿವೃದ್ಧಿಗೊಳಿಸುವುದು.	ಫೇಸ–V ಬ್ಯಾಚ್–I	6.50	87.49
11	ಹಳ್ಳಿಕೇರಿಯಿಂದ ಕಿತ್ತೂರ ವರೆಗೆ ರಸ್ತೆ ಸುಧಾರಣೆ	ಫೇಸ–V ಬ್ಯಾಚ್–II	5.00	67.38
		ಮೊತ್ತ :	**18.34**	**242.52**
		ಒಟ್ಟು ಮೊತ್ತ :	**70.39**	**869.98**

54 (157) ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. (ವೇಮಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸಿ.ಎಂ.ಜಿ.ಎಸ್.ವೈ ಯೋಜನೆಯು ಚಾಲ್ತಿಯಲ್ಲಿದೆಯೇ;

ಆ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆಗೆ ಯಾವ ಅನುಪಾತದಲ್ಲಿ ಅನುದಾನವನ್ನು ನಿಗದಿ ಪಡಿಸಲಾಗುತ್ತದೆ; (ವಿವರ ನೀಡುವುದು)

ಇ) ಈ ರಸ್ತೆಗಳ ನಿರ್ವಹಣೆಗೆ ರಸ್ತೆಗಳ ಉದ್ದಕ್ಕೆ ತಕ್ಕಂತೆ ನಿರ್ವಹಣಾ ಅನುದಾನವನ್ನು ನಿಗದಿ ಪಡಿಸುವುದು ವೈಜ್ಞಾನಿಕ ಹಾಗೂ ಸೂಕ್ತವಲ್ಲವೇ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಮತ್ತು ಆ) 2005–06ನೇ ಸಾಲಿನಲ್ಲಿ ಈ ಯೋಜನೆಯಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ನೀಡಿರುವ ಮೊತ್ತವನ್ನು ಡಾ:ಡಿ.ಎಂ.ನಂಜುಂಡಪ್ಪ ರವರ ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತ ಅಧಿಕಾರದ ಸಮಿತಿ ವರದಿ ಶಿಫಾರಸ್ಸಿನಲ್ಲಿ ಸೂಚಿಸಲಾದ ಅಭಿವೃದ್ಧಿ ಸೂಚ್ಯಾಂಕ ಆಧಾರದ ಮೇಲೆ ವಿಲೋಮ ಅನುಪಾತದಲ್ಲಿ ತಾಲ್ಲೂಕುವಾರು ಅನುದಾನವನ್ನು ಹಂಚಿಕೆ ಮಾಡಲಾಗಿದೆ. (ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ).

ಇ) ಮೇಲಿನ ಅಭಿವೃದ್ಧಿ ಸೂಚಿಯಲ್ಲಿ ತಿಳಿಸಿರುವಂತೆ ಈ ಕೆಳಕಂಡ ಅಂಶಗಳು ಸೇರಿವೆ.

(1) ಪ್ರತಿ 100 ಚದರ ಕಿ.ಮೀ.ಗಳಿಗೆ, ರಸ್ತೆಯ ಉದ್ದ ಕಿ.ಮೀ.ಗಳಲ್ಲಿ ಮತ್ತು

(2) ಸರ್ವಋತು ರಸ್ತೆಗಳಿಗೆ ಪ್ರವೇಶಾವಕಾಶ ಹೊಂದಿರುವಂತ ಗ್ರಾಮಗಳ ದಾಮಾಷ ಪ್ರಮಾಣ.

ಅನುಬಂಧ–1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:157 ರ ಲಗತ್ತು

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಅನುದಾನ
1	2	3	4
1	ಬಾಗಲಕೋಟೆ	ಬಾಗಲಕೋಟೆ	29.57
		ಬಾದಾಮಿ	37.88
		ಬೀಳಗಿ	40.36
		ಹುನಗುಂದ	36.53
		ಜಮಖಂಡಿ	30.73
		ಮುಧೋಳ	30.73
	ಒಟ್ಟು		**205.81**
2	ಬೆಂಗಳೂರು (ನಗರ)	ಬೆಂಗಳೂರು ಉತ್ತರ	20.19
		ಬೆಂಗಳೂರು ದಕ್ಷಿಣ	20.33
		ಆನೇಕಲ್	33.88
	ಒಟ್ಟು		**74.40**

1	2	3	4
3	ಬೆಂಗಳೂರು (ಗ್ರಾ)	ಚನ್ನಪಟ್ಟಣ	32.12
		ದೇವನಹಳ್ಳಿ	29.63
		ದೊಡ್ಡಬಳ್ಳಾಪುರ	28.52
		ಹೊಸಕೋಟೆ	31.46
		ಕನಕಪುರ	41.23
		ಮಾಗಡಿ	38.61
		ನೆಲಮಂಗಲ	30.19
		ರಾಮನಗರ	30.50
	ಒಟ್ಟು		262.26
4	ಬೆಳಗಾಂ	ಬೆಳಗಾಂ	23.29
		ಅಥಣಿ	34.68
		ಬೈಲಹೊಂಗಲ	32.12
		ಚಿಕ್ಕೋಡಿ	30.52
		ಗೋಕಾಕ್	35.49
		ಹುಕ್ಕೇರಿ	34.29
		ಖಾನಾಪುರ	30.54
		ರಾಯ್‌ಬಾಗ್	31.48
		ರಾಮದುರ್ಗ	33.93
		ಸವದತ್ತಿ	35.51
	ಒಟ್ಟು		**321.84**
5	ಬಳ್ಳಾರಿ	ಬಳ್ಳಾರಿ	26.07
		ಹಡಗಲಿ	35.47
		ಹಗರಿಬೊಮ್ಮನಹಳ್ಳಿ	35.47
		ಹೊಸಪೇಟೆ	22.76
		ಕೂಡ್ಲಿಗಿ	41.23
		ಸಂಡೂರು	40.68
		ಸಿರುಗುಪ್ಪ	35.49
	ಒಟ್ಟು		**237.17**
6	ಬೀದರ್	ಬೀದರ್	30.61
		ಔರಾದ್	47.09
		ಬಸವಕಲ್ಯಾಣ	44.35
		ಬಾಲ್ಕಿ	41.35
		ಹುಮನಾಬಾದ್	41.92
	ಒಟ್ಟು		**205.32**

1	2	3	4
7	ಬಿಜಾಪುರ	ಬಿಜಾಪುರ	33.16
		ಬಸವನ ಬಾಗೇವಾಡಿ	44.22
		ಇಂಡಿ	46.22
		ಮುದ್ದೇಬಿಹಾಳ	44.21
		ಸಿಂದಗಿ	47.67
	ಒಟ್ಟು		**215.48**
8	ಚಾಮರಾಜ ನಗರ	ಚಾಮರಾಜನಗರ	39.10
		ಗುಂಡ್ಲುಪೇಟೆ	37.65
		ಕೊಳ್ಳೆಗಾಲ	38.12
		ಯಳಂದೂರು	26.97
	ಒಟ್ಟು		**141.84**
9	ಚಿಕ್ಕಮಗಳೂರು	ಚಿಕ್ಕಮಗಳೂರು	19.68
		ಕಡೂರು	37.65
		ಕೊಪ್ಪ	21.32
		ಮೂಡಿಗೆರೆ	20.46
		ನರಸಿಂಹರಾಜಪುರ	23.45
		ಶೃಂಗೇರಿ	16.05
		ತರೀಕೆರೆ	34.26
	ಒಟ್ಟು		**172.87**
10	ಚಿತ್ರದುರ್ಗ	ಚಿತ್ರದುರ್ಗ	27.03
		ಚಳ್ಳಕೆರೆ	37.72
		ಹಿರಿಯೂರು	35.13
		ಹೊಳಲಕೆರೆ	36.39
		ಹೊಸದುರ್ಗ	39.19
		ಮೊಳಕಾಲ್ಮೂರು	36.39
	ಒಟ್ಟು		**211.86**
11	ದಕ್ಷಿಣ ಕನ್ನಡ	ಬೆಳ್ತಂಗಡಿ	23.16
		ಬಂಟ್ವಾಳ	25.69
		ಮಂಗಳೂರು	17.46
		ಪುತ್ತೂರು	20.93
		ಸುಳ್ಯ	23.50
	ಒಟ್ಟು		**110.74**

1	2	3	4
12	ದಾವಣಗೆರೆ	ದಾವಣಗೆರೆ	19.56
		ಚನ್ನಗಿರಿ	39.09
		ಹರಿಹರ	26.06
		ಹರಪನಹಳ್ಳಿ	42.35
		ಹೊನ್ನಾಳಿ	35.45
		ಜಗಳೂರು	38.11
	ಒಟ್ಟು		**200.62**
13	ಧಾರವಾಡ	ಧಾರವಾಡ	28.22
		ಹುಬ್ಬಳ್ಳಿ	17.43
		ಕಲಘಟಗಿ	36.31
		ಕುಂದಗೋಳ	32.10
		ನವಲಗುಂದ	30.80
	ಒಟ್ಟು		**144.86**
14	ಗದಗ	ಗದಗ	25.83
		ಮುಂಡರಗಿ	34.65
		ನರಗುಂದ	24.98
		ರೋಣ	33.14
		ಶಿರಹಟ್ಟಿ	34.29
	ಒಟ್ಟು		**152.89**
15	ಗುಲ್ಬರ್ಗಾ	ಗುಲ್ಬರ್ಗಾ	34.28
		ಅಫ್ಜಲ್‌ಪುರ	49.20
		ಆಳಂದ	50.00
		ಚಿಂಚೋಳಿ	53.51
		ಚಿತ್ತಾಪುರ	46.90
		ಜೇವರ್ಗಿ	53.48
		ಸೇಡಂ	42.34
		ಶಹಾಪುರ	49.17
		ಶೋರಾಪುರ	43.55
		ಯಾದಗೀರ್	45.50
	ಒಟ್ಟು		**467.92**
16	ಹಾಸನ	ಹಾಸನ	24.41
		ಆಲೂರು	26.53
		ಅರಸೀಕೆರೆ	33.52

		ಅರಕಲಗೂಡು	36.31
		ಬೇಲೂರು	32.42
		ಚನ್ನರಾಯಪಟ್ಟಣ	33.13
		ಹೊಳೆನರಸೀಪುರ	31.42
		ಸಕಲೇಶಪುರ	20.59
	ಒಟ್ಟು		**238.34**
17	ಹಾವೇರಿ	ಹಾವೇರಿ	30.80
		ಬ್ಯಾಡಗಿ	31.43
		ಹಾನಗಲ್	33.14
		ಹಿರೇಕೆರೂರು	34.65
		ರಾಣೇಬೆನ್ನೂರು	26.51
		ಸವಣೂರು	35.05
		ಶಿಗ್ಗಾವಿ	36.31
	ಒಟ್ಟು		**227.89**
18	ಕೊಡಗು	ಮಡಿಕೇರಿ	15.57
		ಸೋಮವಾರಪೇಟೆ	22.26
		ವಿರಾಜಪೇಟೆ	18.81
	ಒಟ್ಟು		**56.64**
19	ಕೋಲಾರ	ಕೋಲಾರ	27.50
		ಬಾಗೇಪಲ್ಲಿ	40.15
		ಬಂಗಾರಪೇಟೆ	31.79
		ಚಿಕ್ಕಬಳ್ಳಾಪುರ	29.92
		ಚಿಂತಾಮಣಿ	31.46
		ಗೌರಿಬಿದನೂರು	36.76
		ಗುಡಿಬಂಡೆ	36.31
		ಮಾಲೂರು	32.79
		ಮುಳಬಾಗಿಲು	34.66
		ಶಿಡ್ಲಘಟ್ಟ	33.51
		ಶ್ರೀನಿವಾಸಪುರ	31.12
	ಒಟ್ಟು		**365.97**
20	ಕೊಪ್ಪಳ	ಕೊಪ್ಪಳ	37.67
		ಗಂಗಾವತಿ	32.81

1	2	3	4
		ಕುಷ್ಟಗಿ	47.67
		ಯಲ್ಬುರ್ಗ	48.43
	ಒಟ್ಟು		**166.58**
21	ಮಂಡ್ಯ	ಮಂಡ್ಯ	23.10
		ಕೃಷ್ಣರಾಜಪೇಟೆ	38.11
		ಮದ್ದೂರು	32.10
		ಮಳವಳ್ಳಿ	36.30
		ನಾಗಮಂಗಲ	36.74
		ಪಾಂಡವಪುರ	32.44
		ಶ್ರೀರಂಗಪಟ್ಟಣ	31.11
	ಒಟ್ಟು		**229.90**
22	ಮೈಸೂರು	ಮೈಸೂರು	19.32
		ಹೆಗ್ಗಡದೇವನಕೋಟೆ	42.44
		ಹುಣಸೂರು	34.72
		ಕೃಷ್ಣರಾಜನಗರ	33.21
		ನಂಜನಗೂಡು	35.12
		ಪಿರಿಯಾಪಟ್ಟಣ	31.52
		ಟಿ.ನರಸಿಪುರ	35.15
	ಒಟ್ಟು		**231.48**
23	ರಾಯಚೂರು	ರಾಯಚೂರು	35.43
		ದೇವದುರ್ಗ	58.17
		ಲಿಂಗಸುಗೂರು	48.94
		ಮಾನ್ವಿ	44.68
		ಸಿಂದನೂರು	39.52
	ಒಟ್ಟು		**226.74**
24	ಶಿವಮೊಗ್ಗ	ಶಿವಮೊಗ್ಗ	20.89
		ಭದ್ರಾವತಿ	25.21
		ಹೊಸನಗರ	28.50
		ಸಾಗರ	25.41
		ಶಿಕಾರಿಪುರ	33.14
		ಸೊರಬ	37.18
		ತೀರ್ಥಹಳ್ಳಿ	23.27
	ಒಟ್ಟು		**193.82**

1	2	3	4
25	ತುಮಕೂರು	ತುಮಕೂರು	25.82
		ಚಿಕ್ಕನಾಯಕನಹಳ್ಳಿ	36.73
		ಗುಬ್ಬಿ	41.77
		ಕೊರಟಗೆರೆ	36.74
		ಕುಣಿಗಲ್	38.60
		ಮಧುಗಿರಿ	41.21
		ಪಾವಗಡ	42.35
		ಶಿರಾ	41.77
		ತಿಪಟೂರು	28.77
		ತುರುವೇಕೆರೆ	36.74
	ಒಟ್ಟು		**370.52**
26	ಉಡುಪಿ	ಉಡುಪಿ	21.05
		ಕಾರ್ಕಳ	19.68
		ಕುಂದಾಪುರ	27.00
	ಒಟ್ಟು		**67.72**
27	ಉತ್ತರ ಕನ್ನಡ	ಕಾರವಾರ	23.95
		ಅಂಕೋಲ	31.53
		ಭಟ್ಕಳ	37.68
		ಹಳಿಯಾಳ	30.89
		ಹೊನ್ನಾವರ	28.87
		ಕುಮಟಾ	28.34
		ಮುಂಡಗೋಡು	30.28
		ಸಿದ್ದಾಪುರ	33.57
		ಸಿರ್ಸಿ	28.60
		ಜೊಯ್ಡಾ (ಸುಪಾ)	35.50
		ಯಲ್ಲಾಪುರ	28.08
	ಒಟ್ಟು		**337.30**
	ಒಟ್ಟು ಮೊತ್ತ		**5838.56**

55 (8) ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ರಾಜ್ಯದ ಯಾವ ಯಾವ ವಿಭಾಗದಲ್ಲಿ ಯಾವ ಯಾವ ಜಿಲ್ಲೆಯನ್ನು ಅಭಿವೃದ್ಧಿಪಡಿಸಲಾಗಿದೆ.

ಆ) ಈ ಕಾರ್ಯಕ್ರಮದ ಹಂತವೇನು;

ಇ) ವಿಶ್ವಬ್ಯಾಂಕ್ ಮತ್ತು ನಬಾರ್ಡ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಶಿವಮೊಗ್ಗ ಜಿಲ್ಲೆಗೆ ಮಂಜೂರಾದ ಕಾಮಗಾರಿಗಳು ಯಾವುವು ಹಾಗೂ ಅವುಗಳು ಈಗ ಯಾವ ಹಂತದಲ್ಲಿವೆ;

ಈ) ಸೊರಬ ತಾಲ್ಲೂಕಿನ ಮೂಡಿ ಏತ ನೀರಾವರಿ ಯೋಜನೆ ಮಂಜೂರಾಗಿರುವ ಕಾಮಗಾರಿಗಳನ್ನು ವಿಳಂಬ ಮಾಡಲು ಕಾರಣಗಳೇನು;

ಉ) ಈ ಕಾಮಗಾರಿಗೆ ತಗಲುವ ಪೂರ್ಣ ವೆಚ್ಚದ ಅಂದಾಜು ಮೊತ್ತವೆಷ್ಟು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯಿಂದ ವಿಶ್ವಬ್ಯಾಂಕ್ (ಜಲಸಂವರ್ಧನೆ) ಯೋಜನೆಯಡಿಯಲ್ಲಿ 9 ಜಿಲ್ಲೆಗಳಲ್ಲಿ ಅಂದರೆ ತುಮಕೂರು, ಕೋಲಾರ, ಹಾವೇರಿ, ಚಿತ್ರದುರ್ಗ, ರಾಯಚೂರು, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ ಮತ್ತು ಬೀದರ್ ಕೆರೆಗಳ ಅಭಿವೃದ್ಧಿಪಡಿಸಲಾಗುತ್ತಿದೆ.

ಆ) ಈ ಕಾರ್ಯಕ್ರಮದಡಿಯಲ್ಲಿ 1391 ಕೆರೆಗಳ ಕೆಲಸ ವಿವಿಧ ಹಂತದಲ್ಲಿದೆ.

ಇ) ಮೇಲ್ಕಂಡ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆ ಸೇರಿರುವುದಿಲ್ಲ. ನಬಾರ್ಡ್ ಯೋಜನೆಯಡಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮಂಜೂರಾದ ಕಾಮಗಾರಿಗಳ ವಿವರಗಳ ಪಟ್ಟಿ ಲಗತ್ತಿಸಲಾಗಿದೆ.

ಈ) ಮತ್ತು ಉ) ಸುಮಾರು 15 ವರ್ಷಗಳ ಹಿಂದೆ ಅಂದರೆ 1991ರಲ್ಲಿ ಮಂಜೂರಾಗಿದ್ದು ನಂತರ ವಿವಿಧ ಕಾರಣಗಳಿಂದ ಈ ಮಂಜೂರಾತಿಗೆ ಚಾಲನೆ ನೀಡಿಲ್ಲ. 1991ರಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ. 1350.00 ಲಕ್ಷಗಳು ಆಗಿತ್ತು.

ಅನುಬಂಧ-1

ನಬಾರ್ಡ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಶಿವಮೊಗ್ಗಕ್ಕೆ ಮಂಜೂರಾದ ಕಾಮಗಾರಿಗಳ ಹಾಗೂ ಅವುಗಳ ಹಂತ ಈ ಕೆಳಕಂಡಂತಿರುತ್ತದೆ

ಕ್ರ.ಸಂ	ನಬಾರ್ಡ್‌ನಿಂದ ಮಂಜೂರಾದ ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ)	ಕಾಮಗಾರಿಯ ಹಂತ	ಷರಾ
1	2	3	4	5
ಆರ್.ಐ.ಡಿ.ಎಫ್-1				
1	ಸಾಗರ ತಾಲ್ಲೂಕು ಕಾಗೋಡು ಬಳಿ ಏತ ನೀರಾವರಿ ಯೋಜನೆ	10.00	ಕಾಮಗಾರಿ ಪೂರ್ಣಗೊಂಡಿದೆ.	
2	ಸಾಗರ ತಾಲ್ಲೂಕು ತಡಗಡಲೆ ಬಳಿ ಏತ ನೀರಾವರಿ ಯೋಜನೆ	10.00	ಕಾಮಗಾರಿ ಪೂರ್ಣಗೊಂಡಿದೆ.	
ಆರ್.ಐ.ಡಿ.ಎಫ್-6				
1	ಸಾಗರ ತಾಲ್ಲೂಕು ನಾಗವಳ್ಳಿ ಬಳಿ ಏತ ನೀರಾವರಿ ಯೋಜನೆ	13.00	ಕಾಮಗಾರಿ ಪೂರ್ಣಗೊಂಡಿದೆ.	
2	ಸಾಗರ ತಾಲ್ಲೂಕು ಶಿರವಾಳು ಬಳಿ ಏತ ನೀರಾವರಿ ಯೋಜನೆ	14.00	ಕಾಮಗಾರಿ ಪೂರ್ಣಗೊಂಡಿದೆ.	
3	ಶಿಕಾರಿಪುರ ತಾಲ್ಲೂಕು ಮಾರವಳ್ಳಿ ಬಳಿ ಹೊಸಕೆರೆ ನಿರ್ಮಾಣ	72.00	ಕಾಮಗಾರಿ ಪೂರ್ಣಗೊಂಡಿದೆ.	
4	ಶಿಕಾರಿಪುರ ತಾಲ್ಲೂಕು ಗುಡ್ಡದ ತುಮ್ಮಿನ ಕಟ್ಟೆ ಹತ್ತಿರ ಹೊಸಕೆರೆ ನಿರ್ಮಾಣ	29.90	ಕಾಮಗಾರಿ ಪೂರ್ಣಗೊಂಡಿದೆ.	
5	ತೀರ್ಥಹಳ್ಳಿ ತಾಲ್ಲೂಕು ಮೀನುಗುಂದ ಬಳಿ ಏತ ನೀರಾವರಿ ಯೋಜನೆ	30.00	ಕಾಮಗಾರಿ ಪೂರ್ಣಗೊಂಡಿದೆ.	
6	ತೀರ್ಥಹಳ್ಳಿ ತಾಲ್ಲೂಕು ಹೊಸಹಳ್ಳಿ ಬಳಿ ಏತ ನೀರಾವರಿ ಯೋಜನೆ	116.89	ಕಾಮಗಾರಿ ಪೂರ್ಣಗೊಂಡಿದೆ.	
ಆರ್.ಐ.ಡಿ.ಎಫ್-8				
1	ಸೊರಬ ತಾಲ್ಲೂಕು ಸಿದ್ದಿಹಳ್ಳಿ ಬ್ರಿಡ್ಜ ಕಂ ಬ್ಯಾರೇಜು ನಿರ್ಮಾಣ	25.00	ಕಾಮಗಾರಿ ಪೂರ್ಣಗೊಂಡಿದೆ.	
2	ಸೊರಬ ತಾಲ್ಲೂಕು ತಟ್ಟಿಕೆರೆ ಬಳಿ ಬ್ಯಾರೇಜು ನಿರ್ಮಾಣ	20.00	ಕಾಮಗಾರಿ ಪೂರ್ಣಗೊಂಡಿದೆ.	
3	ಸೊರಬ ತಾಲ್ಲೂಕು ಕೋಟೆಕೊಪ್ಪ ಬಳಿ ಬ್ಯಾರೇಜು ನಿರ್ಮಾಣ	20.00	ಕಾಮಗಾರಿ ಪೂರ್ಣಗೊಂಡಿದೆ.	
4	ಸೊರಬ ತಾಲ್ಲೂಕು ಬೆನ್ನೂರು ಬಳಿ ಬ್ರಿಡ್ಜ ಕಂ ಬ್ಯಾರೇಜು ನಿರ್ಮಾಣ	30.00	ಕಾಮಗಾರಿ ಪೂರ್ಣಗೊಂಡಿದೆ.	
5	ಸೊರಬ ತಾಲ್ಲೂಕು ಕುಪ್ಪಗದ್ದೆ ಬಳಿ ಬ್ಯಾರೇಜು ನಿರ್ಮಾಣ	22.00	ಕಾಮಗಾರಿ ಪೂರ್ಣಗೊಂಡಿದೆ.	
6	ಸೊರಬ ತಾಲ್ಲೂಕು ತೆಕ್ಕೂರು ಗ್ರಾಮದ ಹತ್ತಿರ ಸರ್ವೆ ನಂ 64ರಲ್ಲಿ ಹೊಸಕೆರೆ ನಿರ್ಮಾಣ	20.00	ಕಾಮಗಾರಿ ಪೂರ್ಣಗೊಂಡಿದೆ.	

1	2	3	4	5
ಆರ್.ಐ.ಡಿ.ಎಫ್-9				
1	ಭದ್ರಾವತಿ ತಾಲ್ಲೂಕು ದ್ಯಾಮಣ್ಣನ ಕೆರೆ ಅಭಿವೃದ್ಧಿ	10.00	ಕಾಮಗಾರಿ ಪೂರ್ಣಗೊಂಡಿದೆ.	
2	ಸೊರಬ ತಾಲ್ಲೂಕು ಕುಬತೂರು ದೊಡ್ಡಕೆರೆಯ ಕೆರೆ ಮತ್ತು ಕಾಲುವೆ ಆಧುನೀಕರಣ	25.00	ಕಾಮಗಾರಿ ಪೂರ್ಣಗೊಂಡಿದೆ.	
3	ಭದ್ರಾವತಿ ತಾಲ್ಲೂಕು ಹುಣಸೆಕಟ್ಟೆ ಸಿದ್ದರಕಟ್ಟೆ ಕೆರೆ ಅಭಿವೃದ್ಧಿ	20.00	ಕಾಮಗಾರಿ ಪೂರ್ಣಗೊಂಡಿದೆ.	
4	ಹೊಸನಗರ ತಾಲ್ಲೂಕು ಬೋಲಾಡಿ ಬಳಿ ಪಿಕಪ್ ನಿರ್ಮಾಣ	15.00	ಕಾಮಗಾರಿ ಪೂರ್ಣಗೊಂಡಿದೆ.	
5	ಭದ್ರಾವತಿ ತಾಲ್ಲೂಕು ಸಿಂಗನಮನೆ ಕರ್ಕಿಕೆರೆ ಅಭಿವೃದ್ಧಿ	30.00	ಕಾಮಗಾರಿ ಪೂರ್ಣಗೊಂಡಿದೆ.	
6	ಸೊರಬ ತಾಲ್ಲೂಕು ಹಯದ ಬ್ಯಾರೇಜು ನಿರ್ಮಾಣ	15.00	ಕಾಮಗಾರಿ ಪೂರ್ಣಗೊಂಡಿದೆ.	
7	ಸೊರಬ ತಾಲ್ಲೂಕು ತೆಕ್ಕೂರು ಕೆರೆ ಆಧುನೀಕರಣ	20.00	ಕಾಮಗಾರಿ ಪೂರ್ಣಗೊಂಡಿದೆ.	
8	ಸಾಗರ ತಾಲ್ಲೂಕು ಕಾಗೋಡು ಬಳಿ ವರದಾ ನದಿಗೆ ಬ್ಯಾರೇಜು ನಿರ್ಮಾಣ	30.00	ಕಾಮಗಾರಿ ಪೂರ್ಣಗೊಂಡಿದೆ.	
9	ಸಾಗರ ತಾಲ್ಲೂಕು ಕೊಳ್ಳಿಬಚ್ಚಲು ಹಳ್ಳಕ್ಕೆ ಹೊಸಕೆರೆ ನಿರ್ಮಾಣ	100.00	ಕಾಮಗಾರಿ ಪ್ರಗತಿಯಲ್ಲಿದೆ.	
10	ಸಾಗರ ತಾಲ್ಲೂಕು ತಡಗಡಲೆ ಬಳಿ ವರದಾ ನದಿಗೆ ಬ್ಯಾರೇಜು ನಿರ್ಮಾಣ	30.00	ಕಾಮಗಾರಿ ಪೂರ್ಣಗೊಂಡಿದೆ.	
11	ಸೊರಬ ತಾಲ್ಲೂಕು ಮೂಗೂರು ಬಳಿ ಬ್ಯಾರೇಜು ನಿರ್ಮಾಣ	350.00	ಕಾಮಗಾರಿ ಪ್ರಗತಿಯಲ್ಲಿದೆ.	
12	ಶಿಕಾರಿಪುರ ತಾಲ್ಲೂಕು ಮೂಲೂರು ಅರಸೀಕಟ್ಟೆ ಕೆರೆಯ ಹೂಳೆತ್ತುವುದು ಮತ್ತು ಅಭಿವೃದ್ಧಿ ಕಾಮಗಾರಿ	10.00	ಕಾಮಗಾರಿ ಪ್ರಗತಿಯಲ್ಲಿದೆ.	
13	ಸೊರಬ ತಾಲ್ಲೂಕು ಹಿರೇಶಕುನ ಕೆರೆಯ ಅಭಿವೃದ್ಧಿ ಕಾಮಗಾರಿ	29.00	ಕಾಮಗಾರಿ ಪ್ರಗತಿಯಲ್ಲಿದೆ.	
14	ಶಿಕಾರಿಪುರ ತಾಲ್ಲೂಕು ತಾಳಗುಂದು ಹಿರೇಕೆರೆ ದುರಸ್ಥಿ ಕಾಮಗಾರಿ	20.00	ಕಾಮಗಾರಿ ಪ್ರಗತಿಯಲ್ಲಿದೆ.	
ಆರ್.ಐ.ಡಿ.ಎಫ್-10				
1	ಶಿವಮೊಗ್ಗ ತಾಲ್ಲೂಕು ಸೀಗೇಹಳ್ಳ ಹೊಸಕೆರೆಯ ಕಾಲುವೆ ಅಭಿವೃದ್ಧಿ	29.90	ಕಾಮಗಾರಿ ಪೂರ್ಣಗೊಂಡಿದೆ.	
2	ಸೊರಬ ತಾಲ್ಲೂಕು ಕಟ್ಟೆಹಳ್ಳ ಏತ ನೀರಾವರಿ ಯೋಜನೆ	75.00	ಕಾಮಗಾರಿ ಪ್ರಗತಿಯಲ್ಲಿದೆ.	
3	ಸೊರಬ ತಾಲ್ಲೂಕು ಕ್ಯಾಸನೂರು ಹತ್ತಿರ ಗೌರಿಹಳ್ಳಕ್ಕೆ ಬ್ರಿಡ್ಜ ಕಂ ಬ್ಯಾರೇಜು ನಿರ್ಮಾಣ	20.00	ಕಾಮಗಾರಿ ಪ್ರಗತಿಯಲ್ಲಿದೆ.	

56 (133) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಸರ್ಕಾರಿ ನೀಲಾಂಬಿಕಾ ಪ್ರಾಥಮಿಕ/ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು? [ವಿಭಾಗವಾರು ವಿವರ ನೀಡುವುದು)

ಆ) ಈ ಶಿಕ್ಷಣ ಸಂಸ್ಥೆಯಲ್ಲಿ ನಿಗದಿಗೊಳಿಸಿರುವ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಇ) ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿನಿಯರ ಬೇಡಿಕೆಗೆ ಅನುಗುಣವಾಗಿ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 1. ಪ್ರಾಥಮಿಕ ಶಾಲೆ – ಇಲ್ಲ

2. ಪ್ರೌಢಶಾಲೆ – 670

3. ಪ.ಪೂ.ಕಾಲೇಜು – 738

[ವಿಭಾಗವಾರು ಪಟ್ಟಿಯನ್ನು ಲಗತ್ತಿಸಿದೆ]

ಆ) 1. ಪ್ರಾಥಮಿಕ ಶಾಲೆ – ಇಲ್ಲ

2. ಪ್ರೌಢಶಾಲೆ – ಪ್ರತಿ ವಿಭಾಗಕ್ಕೆ 60 ವಿದ್ಯಾರ್ಥಿಗಳು

3. ಪ.ಪೂ.ಕಾಲೇಜು – ವಿದ್ಯಾರ್ಥಿಗಳ ದಾಖಲಾತಿಯನ್ನು ನಿಗದಿಗೊಳಿಸಿರುವುದಿಲ್ಲ. ಅವಶ್ಯಕತೆ ಮತ್ತು ಅನುಕೂಲತೆ ಅನ್ವಯ ದಾಖಲಾತಿ ಮಾಡಿಕೊಳ್ಳಲಾಗುವುದು.

ಇ) ಪ್ರೌಢಶಾಲಾ ಕೊಠಡಿಗಳನ್ನು ಮತ್ತು ಕಾಲೇಜು ಕೊಠಡಿಗಳನ್ನು ಉಪಯೋಗಿಸಿಕೊಂಡು ಪಾಳಿ ಪದ್ಧತಿಯಲ್ಲಿ ತರಗತಿಯನ್ನು ನಿರ್ವಹಿಸಲಾಗುತ್ತಿದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತಹಂತವಾಗಿ ಇನ್ನು ಹೆಚ್ಚಿನ ಕೊಠಡಿಗಳನ್ನು ನಿರ್ಮಿಸಿ ಹೆಚ್ಚಿನ ವಿದ್ಯಾರ್ಥಿನಿಯರನ್ನು ದಾಖಲಿಸುವ ವ್ಯವಸ್ಥೆ ಮಾಡಲಾಗುವುದು.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 133ಕ್ಕೆ ಸಂಬಂಧಿಸಿದ ಅನುಬಂಧ

ಪ್ರೌಢಶಾಲಾ ವಿಭಾಗ

ಕ್ರ. ಸಂ.	ಮಾಧ್ಯಮ	8ನೇ ತರಗತಿ	9ನೇ ತರಗತಿ	10ನೇ ತರಗತಿ	ಒಟ್ಟು
01.	ಕನ್ನಡ	156	155	126	437
02.	ಮರಾಠಿ	67	100	66	238
	ಒಟ್ಟು	**223**	**255**	**192**	**670**

ಪದವಿ ಪೂರ್ವ ಕಾಲೇಜು ವಿಭಾಗ

ಕ್ರ. ಸಂ.	ವಿಷಯ	ಪಿಯುಸಿ	ಪಿಯುಸಿ2	ಒಟ್ಟು
01.	ಕಲೆ	298	209	507
02.	ವಾಣಿಜ್ಯ	83	53	136
03.	ವಿಜ್ಞಾನ	57	38	95
	ಒಟ್ಟು	**438**	**300**	**738**

57 (134) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಮಂಜೂರಾಗಿರುವ ಒಟ್ಟು ಶಿಕ್ಷಕರುಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಭರ್ತಿಯಾಗಿರುವ ಮತ್ತು ಖಾಲಿ ಇರುವ ಶಿಕ್ಷಕರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು);

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಈ) ಇಲಾಖೆಯು ಸಿಬ್ಬಂದಿ ಕೊರತೆಯನ್ನು ಎದುರಿಸುತ್ತಿರುವುದರಿಂದ ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗೆ ನಿಯೋಜನೆಯ ಮೇಲಿರುವ ಎಲ್ಲಾ ಸಿಬ್ಬಂದಿ ವರ್ಗದ ನಿಯೋಜನೆಯನ್ನು ರದ್ದುಪಡಿಸುವ ಮೂಲಕ ಸಿಬ್ಬಂದಿ ಕೊರತೆಯನ್ನು ತಪ್ಪಿಸಲಾಗುವುದೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) * ರಾಜ್ಯದಲ್ಲಿರುವ ಮಂಜೂರಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಒಟ್ಟು ಸಂಖ್ಯೆ 1,85,800

* ರಾಜ್ಯದಲ್ಲಿರುವ ಮಂಜೂರಾಗಿರುವ ಪ್ರೌಢ ಶಾಲಾ ಶಿಕ್ಷಕರ ಒಟ್ಟು ಸಂಖ್ಯೆ 38,380

ಆ) * ಭರ್ತಿಯಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಸಂಖ್ಯೆ 1,75,210

* ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಸಂಖ್ಯೆ 10,680

* ಭರ್ತಿಯಾಗಿರುವ ಪ್ರೌಢಶಾಲಾ ಶಿಕ್ಷಕರುಗಳ ಸಂಖ್ಯೆ 37,203

* ಖಾಲಿ ಇರುವ ಪ್ರೌಢ ಶಾಲಾ ಶಿಕ್ಷಕರುಗಳ ಸಂಖ್ಯೆ 1,177
(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಇ) * ಖಾಲಿ ಇರುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ 4768 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿದ್ದು, ಈ ನೇಮಕಾತಿ ಸಂಬಂಧ ಪ್ರಕರಣವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಇದ್ದು, ಈ ದಾವೆ ಇತ್ಯರ್ಥವಾದ ಕೂಡಲೇ ಭರ್ತಿ ಮಾಡಲಾಗುವುದು.

* ಇನ್ನೂ ಖಾಲಿ ಉಳಿದಿರುವ 5912 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿ ಬಗ್ಗೆ ಪರಿಶೀಲಿಸಲಾಗುವುದು.
* ಭೋಧಕೇತರ ವೃಂದದಲ್ಲಿನ ನೇರ ನೇಮಕಾತಿ ಕೋಟಾದಡಿಯಲ್ಲಿ ಭರ್ತಿ ಮಾಡಬೇಕಾಗಿರುವ 250 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.

ಈ) * ನಿಯೋಜನೆ ಮೇಲಿರುವ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನಿಯೋಜನೆಗಳನ್ನು ರದ್ದುಪಡಿಸಿ ಶಾಲೆಗಳಿಗೆ ಹಿಂದಿರುಗಿಸುವ ಮೂಲಕ ಕೊರತೆಯನ್ನು ತಪ್ಪಿಸಲಾಗುತ್ತಿದೆ.

* ಪ್ರೌಢಶಾಲಾ ಸಿಬ್ಬಂದಿ ವ್ಯಾಪ್ತಿಯಲ್ಲಿ ಬೇರೆ ಇಲಾಖೆಗೆ ನಿಯೋಜನೆ ಮಾಡಿಲ್ಲ. ಆದ್ದರಿಂದ, ಈ ಕ್ರಮ ಅನ್ವಯಿಸುವುದಿಲ್ಲ.
* ಮಾನ್ಯ ಸಚಿವರುಗಳ/ಶಾಸಕರುಗಳ ಕೋರಿಕೆಯ ಮೇರೆಗೆ ಅಲ್ಪ ಪ್ರಮಾಣದ ಸಿಬ್ಬಂದಿಯನ್ನು ಸಚಿವರು/ಶಾಸಕರ ಆಪ್ತ ಶಾಖೆಗಳಿಗೆ ನಿಯೋಜಿಸಲಾಗಿದೆ.

ಸರ್ಕಾರಿ ಪ್ರಾಥಮಿಕ ಶಾಲೆಗಳು

ಕ್ರಸಂ.	ಜಿಲ್ಲೆಯ ಹೆಸರು	ಈಗಾಗಲೇ ಅಧಿಸೂಚನೆ ಹೊರಡಿಸಿರುವ ಖಾಲಿ ಹುದ್ದೆಗಳು	ಸರ್ಕಾರದ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿರುವ ಖಾಲಿ ಹುದ್ದೆಗಳು	ಷರಾ
1	2	3	4	5
01	ಬೆಂಗಳೂರು ಉತ್ತರ	29	48	4768 ಪ್ರಾಥಮಿಕ ಶಾಲಾ
02	ಬೆಂಗಳೂರು ದಕ್ಷಿಣ	29	123	ಶಿಕ್ಷಕರ ನೇಮಕಾತಿ ಬಗ್ಗೆ
03	ಬೆಂಗಳೂರು ಗ್ರಾ	200	552	ಅಧಿಸೂಚನೆ ಹೊರಡಿಸಿದ್ದು
04	ಚಿಕ್ಕಬಳ್ಳಾಪುರ	144	120	ಈ ಅಧಿಸೂಚನೆ ವಿರುದ್ಧ
05	ಕೋಲಾರ	42	191	ಆಯುಕ್ತರು ಅಂಗವಿಕಲರ
06	ಚಿತ್ರದುರ್ಗ	141	134	ಅಧಿನಿಯಮ ಬೆಂಗಳೂರು
07	ದಾವಣಗೆರೆ	84	134	ಇವರು ನೀಡಿದ್ದ ತಡೆಯಾಜ್ಞೆಯ
08	ಶಿವಮೊಗ್ಗ	202	73	ವಿರುದ್ಧ ರಾಜ್ಯ
09	ತುಮಕೂರು	144	214	ಉಚ್ಚನ್ಯಾಯಾಲಯದಲ್ಲಿ
10	ಮಧುಗಿರಿ	207	167	ದಾವೆ ಹೂಡಲಾಗಿದೆ.
11	ಬೆಳಗಾವಿ	148	314	ದಿನಾಂಕ: 31-05-05ರ ವರೆಗೆ
12	ಚಿಕ್ಕೋಡಿ	296	199	ತೆರವಾಗುವ ಒಟ್ಟು 9912
13	ಬಾಗಲಕೋಟೆ	173	173	ಹುದ್ದೆಗಳ ಭರ್ತಿ ಮಾಡಲು

1	2	3	4	5
14	ಬಿಜಾಪುರ	234	117	ಸರ್ಕಾರದ ಅನುಮತಿ ಕೋರಿ
15	ಧಾರವಾಡ	77	155	ಪ್ರಸ್ತಾವನೆ ಸಲ್ಲಿಸಲಾಗಿದೆ.
16	ಗದಗ	59	207	
17	ಹಾವೇರಿ	156	312	
18	ಉತ್ತರ ಕನ್ನಡ	203	98	
19	ಗುಲ್ಬರ್ಗಾ	64	139	ಒಟ್ಟು ಖಾಲಿ ಹುದ್ದೆಗಳು
20	ಯಾದಗಿರಿ	130	67	10,000
21	ಬೀದರ್	32	264	
22	ಬಳ್ಳಾರಿ	337	141	
23	ಕೊಪ್ಪಳ	269	192	
24	ರಾಯಚೂರು	210	192	
25	ಮೈಸೂರು	79	314	
26	ಚಾಮರಾಜನಗರ	47	110	
27	ಕೊಡಗು	61	221	
28	ಮಂಡ್ಯ	120	181	
29	ಹಾಸನ	252	300	
30	ಚಿಕ್ಕಮಗಳೂರು	192	176	
31	ದಕ್ಷಿಣ ಕನ್ನಡ	199	168	
32	ಉಡುಪಿ	107	95	
	ಒಟ್ಟು	4.768	9912	

ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾದ ಜಿಲ್ಲಾವಾರು ಒಟ್ಟು ಶಿಕ್ಷಕರ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾದ ಒಟ್ಟು ಶಿಕ್ಷಕರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	2	3	4
01	ಬೆಂಗಳೂರು ಉತ್ತರ	669	7
02	ಬೆಂಗಳೂರು ದಕ್ಷಿಣ	1066	32
03	ಬೆಂಗಳೂರು ಗ್ರಾಮಾಂತರ	2436	61
04	ಕೋಲಾರ	2228	36
05	ಚಿಕ್ಕಬಳ್ಳಾಪುರ	800	32

1	2	3	4
06	ತುಮಕೂರು	2064	41
07	ಮಧುಗಿರಿ	850	37
08	ಶಿವಮೊಗ್ಗ	1588	59
09	ಚಿತ್ರದುರ್ಗ	1171	73
10	ದಾವಣಗೆರೆ	1332	105
11	ಮೈಸೂರು	1018	39
12	ಚಾಮರಾಜನಗರ	786	48
13	ಮಂಡ್ಯ	1738	65
14	ಹಾಸನ	2187	98
15	ಚಿಕ್ಕಮಗಳೂರು	1139	35
16	ಕೊಡಗು	563	17
17	ದಕ್ಷಿಣ ಕನ್ನಡ	1389	25
18	ಉಡುಪಿ	919	27
19	ಬೆಳಗಾಂ	1307	27
20	ಚಿಕ್ಕೋಡಿ	502	32
21	ಬಿಜಾಪುರ	935	–
22	ಬಾಗಲಕೋಟೆ	912	5
23	ಧಾರವಾಡ	695	3
24	ಗದಗ್	537	28
25	ಹಾವೇರಿ	760	50
26	ಉತ್ತರ ಕನ್ನಡ	811	13
27	ಗುಲ್ಬರ್ಗ	2288	50
28	ಯಾದಗಿರಿ	866	21
29	ಬಳ್ಳಾರಿ	1115	15
30	ರಾಯಚೂರು	1131	25
31	ಕೊಪ್ಪಳ	925	23
32	ಬೀದರ್	1563	48
	ಒಟ್ಟು	**38380**	**1177**

ಷರಾ:

ಒಟ್ಟು ಮಂಜೂರಾದ ಹುದ್ದೆಗಳು – 38,380

ಭರ್ತಿ ಮಾಡಲಾದ ಹುದ್ದೆಗಳು – 37,203

ಖಾಲಿ ಹುದ್ದೆಗಳ ಸಂಖ್ಯೆ – 1177

58 (135) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಲೇಜು ಶಿಕ್ಷಣ ಇಲಾಖೆಗೆ ಮಂಜೂರಾಗಿರುವ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರು ಮತ್ತು ಇತರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಕಾಲೇಜು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ವಿವಿಧ ಇಲಾಖೆಗಳಲ್ಲಿ/ ಸಚಿವಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ/ಅಧಿಕಾರಿಗಳ/ಉಪನ್ಯಾಸಕರ ಸಂಖ್ಯೆ ಎಷ್ಟು (ಹೆಸರುಗಳೊಂದಿಗೆ ವಿವರಗಳನ್ನು ಒದಗಿಸುವುದು):

ಈ) ಇವರುಗಳು ಎಷ್ಟು ವರ್ಷದಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ;

ಉ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರ/ಉಪನ್ಯಾಸಕರ ಕೊರತೆ ಇರುವುದನ್ನು ಗಮನಿಸಿ ಶಿಕ್ಷಣ ಇಲಾಖೆಯು ಕ್ರಮಕೈಗೊಂಡಿರುವ ಮಾದರಿಯಲ್ಲಿಯೇ ಕ್ರಮಕೈಗೊಂಡು ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ನಿಯೋಜನೆಗಳನ್ನು ರದ್ದುಪಡಿಸಲು ಹಾಗೂ ಇನ್ನು ಮುಂದೆ ಯಾವುದೇ ನಿಯೋಜನೆ ನೀಡದಿರಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಮತ್ತು ಆ) ಗೆ ಉತ್ತರ ಅನುಬಂಧ-1ರಲ್ಲಿ ವಿವರಿಸಲಾಗಿದೆ.

ಇ) ಮತ್ತು ಈ) ಗೆ ಉತ್ತರ ಅನುಬಂಧ-2ರಲ್ಲಿ ವಿವರಿಸಲಾಗಿದೆ.

ಉ) ಉಪನ್ಯಾಸಕರು ಯುಜಿಸಿ ವೇತನ ಪಡೆಯುತ್ತಿರುವುದರಿಂದ ಹಾಗೂ ಸಾಕಷ್ಟು ಉಪನ್ಯಾಸಕರ ಕೊರತೆ ಇರುವುದರಿಂದ ಬೋಧನಾ ಕಾರ್ಯ ಹೊರತುಪಡಿಸಿ ಇತರೆ ಬೋಧಕೇತರ ಹುದ್ದೆಗಳಿಗೆ ಇನ್ನು ಮುಂದೆ ನಿಯೋಜನೆ ಮಾಡದಿರಲು ಗಂಭೀರ ಆಲೋಚನೆ ನಡೆಸುತ್ತಿದೆ.

ಅನುಬಂಧ-1

ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	2	3	4	5
1	ಆಯುಕ್ತರು	1	1	0
2	ನಿರ್ದೇಶಕರು	1	1	0
3	ಹೆಚ್ಚುವರಿ ನಿರ್ದೇಶಕರು	1	1	0

1	2	3	4	5
4	ಮುಖ್ಯ ಆಡಳಿತಾಧಿಕಾರಿ	1	1	0
5	ಜಂಟಿ ನಿರ್ದೇಶಕರು	8	5	3
6	ಲೆಕ್ಕಾಧಿಕಾರಿಗಳು	2	2	0
7	ಪ್ರಾಂಶುಪಾಲರು–ಗ್ರೇಡ್–II	23	15	8
8	ಪ್ರಾಂಶುಪಾಲರು–ಗ್ರೇಡ್–I	128	73	55
9	ಉಪನ್ಯಾಸಕರು	3059	2525	534
10	ಗ್ರಂಥಪಾಲಕರು	167	106	61
11	ದೈಹಿಕ ಶಿಕ್ಷಣ ಬೋಧಕರು	106	84	22
12	ಉಪ ನಿರ್ದೇಶಕರು	3	3	0
13	ಸಹಾಯಕ ನಿರ್ದೇಶಕರು	15	1	14
14	ಮ್ಯಾನೇಜರ್	76	44	32
15	ಅಧೀಕ್ಷಕರು	41	125	16
16	ಪ್ರಥಮ ದರ್ಜೆ ಸಹಾಯಕರು	238	201	37
17	ದ್ವಿತೀಯ ದರ್ಜೆ ಸಹಾಯಕರು	430	374	56
18	ಶೀಘ್ರಲಿಪಿಗಾರರು	13	12	1
19	ಬೆರಳಚ್ಚುಗಾರರು	200	127	73
20	ಗ್ರಂಥಾಲಯ ಸಹಾಯಕರು	90	7	83
21	ವಾಹನ ಚಾಲಕರು	11	9	2
22	ಅಟೆಂಡರ್	606	456	150
23	ಪರಿಚಾರಕರು ಹಾಗೂ ಇತರೆ ಸಮಾನ ವೇತನ ಶ್ರೇಣಿ	778	662	116

ಅನುಬಂಧ–2

ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಪ್ರಾಂಶುಪಾಲರು ಉಪನ್ಯಾಸಕರ ಬಗ್ಗೆ ವಿವರ

ಕ್ರಮ ಸಂಖ್ಯೆ	ಹೆಸರು, ಪದನಾಮ ಮತ್ತು ವಿಳಾಸ ಶ್ರೀ /ಶ್ರೀಮತಿ	ಯಾವ ಇಲಾಖೆಗೆ ನಿಯೋಜಿಸಲಾಗಿದೆ	ಎಷ್ಟು ವರ್ಷಗಳಿಂದ ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ
1	2	3	4
1	ಡಾ: ದೇವಾನಂದ ಗಾಂವ್‌ಕರ್, ಗ್ರೇಡ್–1 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ	ಜಿಲ್ಲಾ ಶಿಕ್ಷಣ ಅಧಿಕಾರಿ, ವಯಸ್ಕರ ಶಿಕ್ಷಣ ಇಲಾಖೆ, ಗುಲ್ಬರ್ಗಾ	3 ವರ್ಷ
2	ಡಾ: ಗುರುಮೂರ್ತಿ ಎಸ್. ಗ್ರೇಡ್–I ಪ್ರಾಂಶುಪಾಲರು, ಬೆಂಗಳೂರು	ಮಾನ್ಯ ರಾಜ್ಯಪಾಲರ ಆಪ್ತ ಕಾರ್ಯದರ್ಶಿ, ರಾಜಭವನ, ಬೆಂಗಳೂರು	6 ವರ್ಷ
3	ನರಸಿಂಹಮೂರ್ತಿ. ಆರ್. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಬಾಲಕರ ಕಾಲೇಜು, ಕೋಲಾರ	ಹಿಂದಿನ ಲೋಕೋಪಯೋಗಿ ಮತ್ತು ಇಂಧನ ಸಚಿವರ ವಿಶೇಷ ಕರ್ತವ್ಯಾಧಿಕಾರಿ	10 ವರ್ಷಗಳಿಂದ ಹಿಂದಿನ ಬೇರೆ ಬೇರೆ ಸಚಿವರ ವಿಶೇಷ ಕರ್ತವ್ಯಾಧಿಕಾರಿಯಾಗಿ ನಿಯೋಜನೆ ಮೇಲಿದ್ದು, ಇವರ ಸೇವೆಯನ್ನು ದಿನಾಂಕ: 03–02–06 ರಿಂದ ಮಾತ್ರ ಇಲಾಖೆ ಹಿಂದಿರುಗಿಸಲಾಗಿದೆ. ಆದರೆ ಇವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.

1	2	3	4
4	ಮೊಹಮ್ಮದ್ ಅಜಂ. ಅರ್ಥಶಾಸ್ತ್ರ ಉಪನ್ಯಾಸಕರು ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ	ಹಿಂದಿನ ಪಶುಸಂಗೋಪನಾ ಮತ್ತು ವಕ್ಫ್ ಸಚಿವರ ವಿಶೇಷ ಕರ್ತವ್ಯಾಧಿಕಾರಿ	10 ವರ್ಷಗಳಿಂದ ಹಿಂದಿನ ಬೇರೆ ಬೇರೆ ಸಚಿವರ ವಿಶೇಷ ಕರ್ತವ್ಯಾಧಿಕಾರಿಯಾಗಿ ನಿಯೋಜನೆ ಮೇಲಿದ್ದು, ಇವರ ಸೇವೆಯನ್ನು ದಿನಾಂಕ: 03–02–06 ರಿಂದ ಮಾತ್ರ ಇಲಾಖೆ ಹಿಂದಿರುಗಿಸಲಾಗಿದೆ. ಆದರೆ ಇವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
5.	ಹಿರೇಮಠ ಎಸ್.ಎಸ್. ರಾಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಶಹಾಪುರ	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜಿಲ್ಲಾಧಿಕಾರಿ ಗುಲ್ಬರ್ಗಾ	3 ವರ್ಷದಿಂದ ನಿಯೋಜನೆ ಮೇಲಿದ್ದು ಜನರ ಸೇವೆಯನ್ನು ದಿನಾಂಕ: 27–01–06 ರಿಂದ ಮಾತ್ಯ ಇಲಾಖೆ ಹಿಂದಿರುಗಿಸಲಗಿದೆ ಆದರೆ ಇವರು ದಿನಾಂಕ 27–02–06 ರಂದು ಕೆ.ಎ.ಸಿ. ಬಂದ ದಿನಾಂಕ: 3–03–06 ರವರೆಗೆ ತಡೆಯಾಜ್ಞೆ, ನಿಯೋಜನೆ ಮೇಲೆ ಮುಂದುವರೆದಿರುತ್ತಾರೆ.
6.	ಚನ್ನನರಸಿಂಹಪ್ಪ, ರಾಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಬಾಲಕರ ಕಾಲೇಜು, ಚಿಂತಾಮಣಿ	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜಿಲ್ಲಾಧಿಕಾರಿ ರಾಯಚೂರು	05 ವರ್ಷ
7	ಗೋಪಾಲ್ ಕೆ.ಎಸ್. ಭೌತಶಾಸ್ತ್ರ ಹಿ.ಶ್ರೇ.ಉ. ಸರ್ಕಾರಿ ಬಾಲಕರ ಕಾಲೇಜು ಚಿಂತಾಮಣಿ	ಯೋಜನಾ ಸಮನ್ವಯಾಧಿಕಾರಿ ಐ.ಟಿ.ಡಿ.ಪಿ. ಮಂಗಳೂರು	01 ವರ್ಷ

1	2	3	4
8	ಬಸವರಾಜು ಡಿ. ರಸಾಯನಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿರಾ	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಶಿವಮೊಗ್ಗ	02 ವರ್ಷ
9	ಕೊಟ್ರಯ್ಯ ಎ.ಎಂ.ಆರ್. ರಸಾಯನಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು	ಲೈಸನ್ ಆಫೀಸರ್, ಎನ್.ಎಸ್.ಎಸ್. ಸೆಲ್, ವಾರ್ತಾ ಮತ್ತು ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ ಬೆಂಗಳೂರು.	05 ವರ್ಷ
10	ಸೈಯದ್ ಅಹಮದ್ ಮುಜಾದಾವಿ, ಗಣಿತಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಕಾಲೇಜು, ಗುಲ್ಬರ್ಗಾ	ಪ್ರಾಂಶುಪಾಲರು, ಗುಲ್ಬರ್ಗಾ ಜಿಲ್ಲಾ ತರಬೇತಿ ಸಂಸ್ಥೆ, ಗುಲ್ಬರ್ಗಾ.	04 ವರ್ಷ
11	ಗೋವಿಂದೇಗೌಡ ಎಸ್.ಎನ್. ರಾಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೆಬ್ಬೂರು	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಸನ	05 ವರ್ಷ

1	2	3	4
12	ವಸಂತರಾಜಶೆಟ್ಟಿ ಅರ್ಥಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು ಐಡಿಎಸ್‌ಜಿ ಸರ್ಕಾರಿ ಕಾಲೇಜು ಚಿಕ್ಕಮಗಳೂರು	ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿ, ಕಾರವಾರ.	05 ವರ್ಷ
13	ಡಾ: ಎಂ. ಮಾರ್ತಾಂಡಪ್ಪ ಭೌತಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಧಾರವಾಡ	01 ವರ್ಷ
14	ಜಿ. ಯೋಗಾನಂದ, ವಾಣಿಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಉಡುಪಿ	01 ವರ್ಷ
15	ಎಂ.ಜಿ.ಶಂಕರಲಿಂಗೇಗೌಡ, ಪ್ರಾಣಿಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿ, ಹಾಸನ	09 ವರ್ಷ

1	2	3	4
16	ಡಿ. ಅಂಜನಪ್ಪ, ಕನ್ನಡ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ನರಸಿಂಹರಾಜಪುರ	ಕರ್ನಾಟಕ ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಉಡುಪಿ	06 ತಿಂಗಳು
17	ಡಾ: ಫಾರೂಕ್ ಅಹ್ಮದ್ ವಾಣಿಜ್ಯ ಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ್	ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಬೀದರ್.	06 ತಿಂಗಳು
18	ಚಿಂತಾಮಣಿ. ಎಂ.ಐ. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬೈಲಹೊಂಗಲ .	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ
19	ಡಾ: ವಿಜಯ. ಎಸ್.ಎಸ್. ಕನ್ನಡ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ ಎಂ.ವಿ. ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ
20	ಡಾ: ವಿಜಯಕುಮಾರಿ ಎಸ್.ಕರಿಕರ್. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಕಾಲೇಜು, ಗುಲ್ಬರ್ಗಾ.	ಮಹಿಳಾ ವಿಶ್ವವಿದ್ಯಾಲಯ, ಬಿಜಾಪರ	03 ವರ್ಷ

1	2	3	4
21	ಡಾ: ವಿಜಯ ಬಿ.ಕೋರಿಶೆಟ್ಟಿ, ಸಮಾಜಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	3 ವರ್ಷ
22	ಆರ್. ನಾರಾಯಣ್ ರೆಡ್ಡಿ. ವಾಣಿಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ. ಮಡಿಕೇರಿ.	07 ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇದ್ದ ಇವರ ಸೇವೆಯನ್ನು ಮಾತ್ರ ಇಲಾಖೆಗೆ ವಾಪಸ್ ಪಡೆಯಲಾಗಿದೆ. ಆದರೆ ಇವರು ಇದುವರೆವಿಗೂ ಮಾತೃ ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
23	ಎನ್.ಎಸ್. ರಾಮಾಂಜನೇಯಲು ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಬಾಲಕರ ಕಾಲೇಜು, ಚಿಂತಾಮಣಿ.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು	06 ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇದ್ದ ಇವರ ಸೇವೆಯನ್ನು ಮಾತೃ ಇಲಾಖೆಗೆ ವಾಪಸ್ ಪಡೆಯಲಾಗಿದೆ. ಆದರೆ ಇವರು ಇದುವರೆವಿಗೂ ಮಾತೃ ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
24	ಡಾ: ನಾರಾಯಣ ಬಿ.ಪವಾರ್, ಪ್ರಥಮ ದರ್ಜೆ ಸಹಾಯಕರು, ಕಾಲೇಜು ಶಿಕ್ಷಣ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ

59 (10) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಆಡಳಿತ ಮಂಡಳಿ ಇರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಅನುದಾನಕ್ಕೊಳಪಡಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಶಾಲೆಗಳನ್ನು ಅನುದಾನಕ್ಕೊಳಪಡಿಸಿ ಆದೇಶ ನೀಡಲಾಗಿದೆ?

ಇ) ಉಳಿದ ಶಾಲೆಗಳನ್ನು ಅನುದಾನಕ್ಕೊಳಪಡಿಸಿ ಆದೇಶವನ್ನು ಯಾವಾಗ ಹೊರಡಿಸಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ದಿನಾಂಕ: 01.06.1987 ರಿಂದ 31.03.1992 ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಲು ದಿನಾಂಕ: 13.9.2002ರ ಸರ್ಕಾರಿ ಆದೇಶ ಸಂಖ್ಯೆ ಇಡಿ 65 ವಿವಿಧ 97ರ ಅನ್ವಯ ಆಸ್ಪದ ಕಲ್ಪಿಸಲಾಗಿದೆ. ಹಾಗೂ ದಿನಾಂಕ 01.04.1992 ರಿಂದ 01.07.1993ರ ಅವಧಿಯವರೆವಿಗೂ ಇಂತಹ ಶಾಲೆಗಳನ್ನು ಅನುದಾನಕ್ಕೊಳಪಡಿಸಲು ಸರ್ಕಾರದ ಆದೇಶ ಸಂಖ್ಯೆ ಇಡಿ 114 ಎಸ್.ಇ.ಪಿ. 2004 ದಿ. 02.01.2006 ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆ) ರಾಜ್ಯದಲ್ಲಿ ಈವರೆವಿಗೂ ಒಟ್ಟು 183 ಪ್ರೌಢ ಶಾಲೆಗಳನ್ನು ಹಾಗೂ 53 ಪ್ರಾಥಮಿಕ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ.

ಇ) ಇಲಾಖೆಯು ನಿಗದಿತ ನಮೂನೆಯಲ್ಲಿ (ಸರ್ಕಾರದ ಆದೇಶದನ್ವಯ) ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಪ್ರಸ್ತಾವನೆಗಳನ್ನು ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಸರ್ಕಾರದ ಪರಿಶೀಲನೆಗೆ ಕಳುಹಿಸಬೇಕಾಗಿರುತ್ತದೆ. ಇಲಾಖೆಯಿಂದ ಬಂದ ಇಂತಹ ಪ್ರಸ್ತಾವನೆಗಳನ್ನು ಸರ್ಕಾರದ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

60 (11) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ ಆಡಳಿತ ಮಂಡಳಿ ಇರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಅನುದಾನಕ್ಕೊಳಪಡಿಸಲು ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳನ್ನು [ಶಾಲೆವಾರು ವಿವರ ನೀಡುವುದು]

ಆ) ಇದರಲ್ಲಿ ಈವರೆಗೆ ಎಷ್ಟು ಶಾಲೆಗಳನ್ನು ಅನುದಾನಕ್ಕೊಳಪಡಿಸಿ ಆದೇಶ ನೀಡಲಾಗಿದೆ [ಆದೇಶದ ಪ್ರತಿ ನೀಡುವುದು]

ಇ) ಹಾಗಿದ್ದಲ್ಲಿ, ಬಾಕಿ ಇರುವ ಶಾಲೆಗಳನ್ನು ಅನುದಾನಕ್ಕೊಳಪಡಿಸಿ ಆದೇಶವನ್ನು ಯಾವಾಗ ಹೊರಡಿಸಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪರಿಶಿಷ್ಟ ಜಾತಿ/ಪಂಗಡದ ಆಡಳಿತ ಮಂಡಳಿ ವತಿಯ ಒಟ್ಟು 59 ಪ್ರಾಥಮಿಕ ಶಾಲೆಗಳ ಹಾಗೂ 223 ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರಕ್ಕೆ ಈವರೆವಿಗೂ ಪ್ರಸ್ತಾವನೆ ಬಂದಿರುತ್ತವೆ.

ಆ) ರಾಜ್ಯದಲ್ಲಿ ಈವರೆವಿಗೂ ಒಟ್ಟು 183 ಪ್ರೌಢಶಾಲೆಗಳನ್ನು ಹಾಗೂ 53 ಪ್ರಾಥಮಿಕ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ.

ಇ) ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ [ದಿನಾಂಕ: 13-09-2002ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 65 ವಿವಿಧ 97 ಮತ್ತು ದಿನಾಂಕ: 20-02-2004ರ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 110 ಎಸ್‌ಇಪಿ 2003 [ಭಾಗ-2] ರನ್ವಯ] ಸಂಬಂಧಿಸಿದ ಸಂಸ್ಥೆ ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಪ್ರಸ್ತಾವನೆಗಳನ್ನು ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಕ್ಕೆ ಪರಿಶೀಲನೆಗೆ ಕಳುಹಿಸಬೇಕಾಗಿರುತ್ತದೆ. ಸಕ್ಷಮ ಪ್ರಾಧಿಕಾರದಿಂದ ಸರ್ಕಾರದಲ್ಲಿ ಸ್ವೀಕೃತವಾದ ಇಂತಹ ಪ್ರಸ್ತಾವನೆಗಳನ್ನು ಸರ್ಕಾರದ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿ ಸಂಬಂಧಿಸಿದ ಶಾಲೆಯನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತಿದೆ.

61 (12) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಮತ್ತು ಬೋಧಕೇತರ ಖಾಲಿ ಇರುವ ಹುದ್ದೆಗಳು ಎಷ್ಟು [ವಿವರ ನೀಡುವುದು]

ಆ) ಅವುಗಳನ್ನು ತುಂಬಲು ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಲಾಗುವುದೇ?

ಇ) ಅನುಮತಿ ಕೊಡದಿದ್ದರೆ, ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

ಈ) ಇದ್ದಲ್ಲಿ, ಕೂಡಲೇ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡುವುದೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ)	ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳು	563
	ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳು	2512
	ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಬೋಧಕೇತರ ಹುದ್ದೆಗಳು	252

ಆ) ಮತ್ತು ಇ) ಗೆ ಉತ್ತರ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ವರ್ಗದ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಪ್ರಾಥಮಿಕ ಶಾಲೆಗಳಲ್ಲಿರುವ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಶಿಕ್ಷಕರಿಂದ ಮರು ಹೊಂದಾಣಿಕೆ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ದಿನಾಂಕ: 05-07-2004ರ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಬಿಇಎಂ 2003 ಮಿತವ್ಯಯಕ್ಕೆ ಸಂಬಂಧಿಸಿದ ಆದೇಶದ ಅನ್ವಯ ಇತರೆ ಅಂಶಗಳ ಜೊತೆಗೆ ಈ ಕೆಳಕಂಡಂತೆ ಸೂಚಿಸಲಾಗಿದೆ:

" (g) The ban on creation and filling up of posts both under plan and non-plan through direct recruitment continues. All promotions, recruitment and post creation ofany kind would require prior concurrence of Finance Department. Proposals for creation of posts, recruitment, and promotions will not be considered unless the proportion of vacant posts as indicated in D.P.A.R.'s U.O. Note No: ಸಿಆಸುಇ 02 ಈಕಾಅ 2004, ದಿನಾಂಕ: 01-03-2004, is abolished.

(h) Theban on recruitment / creation and filling up of posts also covers all Grant-inAid Institution.

(i) All the existing vacant posts or those falling vacant under Grnat-in-Aid Institutions should remain vacant without exception until further orders".

ಅದರನ್ವಯ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ನಿಷೇಧವನ್ನು ಸಡಿಲಿಸಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ 2106 ಮತ್ತು ಅನುದಾನಿತ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿನ 282 [ಒಟ್ಟು 2388] ಬೋಧಕ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಸಡಿಲಿಸಿ, ಸಧ್ಯದಲ್ಲೆ ಆದೇಶವನ್ನು ಹೊರಡಿಸಲಾಗುವುದು.

ಈ) ಮೇಲೆ ಉಲ್ಲೇಖಿಸಿರುವ ಬೋಧಕ ಹುದ್ದೆಗಳನ್ನು ತುಂಬಲು ಅನುಮತಿ ನೀಡಿ ಸಧ್ಯದಲ್ಲೇ ಸರ್ಕಾರಿ ಆದೇಶವನ್ನು ಹೊರಡಿಸಲಾಗುವುದು. ಬೋಧಕೇತರ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಮುಂದುವರೆದಿದೆ.

62 (13) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಮತದಾರ ಕ್ಷೇತ್ರಕ್ಕೆ ಸೇರಿದ ಮುಂಡರಗಿ ಪಟ್ಟಣ ಪಂಚಾಯತ್ ಹಾಗೂ ಗದಗ ತಾಲ್ಲೂಕಿನ ಮುಳಗುಂದ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನ ರಹಿತರ ಸಂಖ್ಯೆ ಎಷ್ಟು;

ಆ) ಅವರಿಗೆ ನಿವೇಶನ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹೊಸದಾಗಿ ನಿವೇಶನ ಖರೀದಿ ಮಾಡಲು ಹಣಕಾಸಿನ ಅವಶ್ಯಕತೆ ಇದ್ದು ಹಣ ಬೇಡಿಕೆ ಪ್ರಕಾರ ಬಿಡುಗಡೆ ಆಗಿದೆಯೇ;

ಈ) ಬಿಡುಗಡೆ ಆಗದಿದ್ದರೆ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಮುಂಡರಗಿ ಪಟ್ಟಣದಲ್ಲಿ 1132 ಮತ್ತು ಮುಳಗುಂದ ಪಟ್ಟಣದಲ್ಲಿ 725 ನಿವೇಶನ ರಹಿತರಿರುತ್ತಾರೆ.

ಆ) ಮುಂಡರಗಿ ಪಟ್ಟಣದಲ್ಲಿ ಈಗಾಗಲೇ 812 ಜನರಿಗೆ ನಿವೇಶನ ಒದಗಿಸಲಾಗಿದ್ದು ಇನ್ನುಳಿದ 320 ಜನರಿಗೆ ಬೇಕಾಗುವ 8ಎ–4ಗು ಜಮೀನು ಖರೀದಿಯ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಪರಿಶೀಲನೆಯಲ್ಲಿದೆ.

ಮುಳಗುಂದ ಪಟ್ಟಣದಲ್ಲಿ ಈಗಾಗಲೇ 500 ಜನರಿಗೆ ನಿವೇಶನ ಒದಗಿಸಲಾಗಿದ್ದು ಇನ್ನುಳಿದ 225 ಜನರಿಗೆ ಬೇಕಾಗುವ 8–00 ಎಕರೆ ಜಮೀನು ಖರೀದಿಯ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಪರಿಶೀಲನೆಯಲ್ಲಿದೆ.

ಇ) ಹೌದು.

ಈ) ಜಿಲ್ಲಾಧಿಕಾರಿಗಳು ಜಮೀನು ಖರೀದಿಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

64 (142) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಯೋಗ ಮತ್ತು ನೈತಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ;

ಆ) ಹೌದಾದಲ್ಲಿ, ಆ ಕುರಿತಾದ ವಿವರಗಳೇನು;

ಇ) ವಿದ್ಯಾರ್ಥಿಗಳ ಶೈಕ್ಷಣಿಕ ಮುನ್ನಡೆಗೆ ಅನುವು ಮಾಡಿಕೊಡುವ ಯೋಗ ಮತ್ತು ನೈತಿಕ ಶಿಕ್ಷಣವನ್ನು ಜಾರಿಗೊಳಿಸಲು ಕಾಲನಿಗದಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗುವುದೇ;

ಈ) ರಾಜ್ಯದಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಶಿಕ್ಷಣ ನೀಡುವ ಮಾನ್ಯತೆ ಪಡೆದ ಎಷ್ಟು ಶಿಕ್ಷಣ ನೀಡುವ ಮಾನ್ಯತೆ ಪಡೆದ ಎಷ್ಟು ಶಿಕ್ಷಣಾಲಯಗಳು ಸರ್ಕಾರ ಮತ್ತು ಖಾಸಗಿ ವಲಯದಲ್ಲಿವೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ತ್ರೈಮಾಸಿಕ ಪದ್ಧತಿಯಲ್ಲಿ 'ಬಿ' ಭಾಗದಲ್ಲಿ ಜೀವನ ವಿಜ್ಞಾನದಡಿಯಲ್ಲಿ ದೈಹಿಕ ಶಿಕ್ಷಣ, ಯೋಗ ಮತ್ತು ಆರೋಗ್ಯ ಶಿಕ್ಷಣಕ್ಕೆ 20 ಅಂಕಗಳನ್ನು ನಿಗಧಿಪಡಿಸಲಾಗಿದೆ.

ಇ) ಈಗಾಗಲೇ ಈ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಈ) ಯೋಗ ಶಿಕ್ಷಣವನ್ನು ದೈಹಿಕ ಶಿಕ್ಷಣದ ಅಂಗವಾಗಿ ಬೋಧಿಸಲಾಗುತ್ತಿದೆ. ಶಿಕ್ಷಣ ಇಲಾಖೆಯ ಪ್ರಕೃತಿ ಚಿಕಿತ್ಸೆ ಶಿಕ್ಷಣ, ಯೋಗ ಶಿಕ್ಷಣ ಶಿಕ್ಷಣಾಲಯಗಳಿಗೆ ಪ್ರತ್ಯೇಕ ಮಾನ್ಯತೆ ನೀಡುತ್ತಿಲ್ಲ.

65 (143) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಮುಖ್ಯೋಪಾಧ್ಯಾಯರ ಮತ್ತು ಶಿಕ್ಷಕರುಗಳ ಹುದ್ದೆಗಳು ಎಷ್ಟು?

ಆ) ಇವುಗಳನ್ನು ತುಂಬಲು ಸರಕಾರದ ಸಕಾಲಿಕ ಕ್ರಮಗಳೇನು?

ಇ) ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯನ್ನು ಗಮನಿಸಿ ಕೂಡಲೇ ಖಾಲಿ ಹುದ್ದೆಗಳನ್ನು ತುಂಬಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

	ಮುಖ್ಯೋಪಾಧ್ಯಾಯರ ಖಾಲಿ ಇರುವ ಹುದ್ದೆಗಳ ಸಂಖ್ಯೆ	ಸಹ ಶಿಕ್ಷಕರುಗಳ ಖಾಲಿ ಇರುವ ಹುದ್ದೆಗಳ ಸಂಖ್ಯೆ
ಪ್ರಾಥಮಿಕ ಶಾಲೆ	29	98
ಪ್ರೌಢ ಶಾಲೆ	16	18

ಆ) * ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ ಮತ್ತು ಪದವೀಧರೇತರ ಮುಖ್ಯ ಶಿಕ್ಷಕರ ಖಾಲಿ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಲು ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸುತ್ತೋಲೆ ಹೊರಡಿಸಲಾಗಿದೆ.

* ಖಾಲಿ ಇರುವ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿದ್ದು, ಈ ನೇಮಕಾತಿ ಸಂಬಂಧ ಪ್ರಕರಣವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಇದ್ದು, ಈ ದಾವೆ ಇತ್ಯರ್ಥವಾದ ಕೂಡಲೇ ಭರ್ತಿ ಮಾಡಲಾಗುವುದು.

* ಪ್ರಸ್ತುತ ಖಾಲಿ ಇರುವ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಎಲ್ಲಾ ಹುದ್ದೆಗಳು ನೇರ ನೇಮಕಾತಿಗೆ ಮೀಸಲಿರುವ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮುಖಾಂತರ ತುಂಬ ಬೇಕಿದ್ದು, ಕೆ.ಪಿ.ಎಸ್.ಸಿ. ಮುಖೇನ ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿರುವ ಕಾರಣದಿಂದ, ಅರ್ಹ ಪ್ರೌಢ ಶಾಲಾ ಗ್ರೇಡ್-1 ಸಹ ಶಿಕ್ಷಕರುಗಳನ್ನು ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ.

* ನೇರ ನೇಮಕಾತಿ ಮೂಲಕ ತುಂಬುವ ಮುಖ್ಯ ಶಿಕ್ಷಕರುಗಳ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಬಡ್ತಿ ಶೇ 50 ಇರುವುದನ್ನು ಶೇ 75 ಎಂದು ಹೆಚ್ಚಿಸಲು ನಿಯಮಗಳಿಗೆ ತಿದ್ದುಪಡಿ ತರುವುದು ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಬಗ್ಗೆ ಶೀಘ್ರವೇ ಮುಂದಿನ ಕ್ರಮ ವಹಿಸಲಾಗುವುದು.

* 2005–06 ನೇ ಸಾಲಿನಲ್ಲಿ 2104 ಪ್ರೌಢಶಾಲಾ ಸಹಶಿಕ್ಷಕರುಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ. ಅಲ್ಲದೇ, ಈ ರೀತಿ ನೇಮಕವಾದ ಶಿಕ್ಷಕರನ್ನು ಗ್ರಾಮಾಂತರ ಪ್ರದೇಶಗಳಿಗೆ ಸ್ಥಳನಿಯುಕ್ತಿಗೊಳಿಸಲು ಒತ್ತು ನೀಡಲಾಗಿದೆ. ಜೊತೆಗೆ ಹೆಚ್ಚುವರಿ ಇರುವ ಶಿಕ್ಷಕರನ್ನು ಶಿಕ್ಷಕರ ಕೊರತೆ ಇರುವ ಪ್ರೌಢ ಶಾಲೆಗಳಿಗೆ ನಿಯೋಜನೆ ಮಾಡಲಾಗಿದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ.

ಇ) ಹೌದು. ಮೇಲೆ ತಿಳಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

66 (144) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಷ್ಟು ಸಣ್ಣ ಮತ್ತು ದೊಡ್ಡ ಕೆರೆಗಳನ್ನು 2003–04 ಮತ್ತು 2004–05ನೇ ಸಾಲಿನಲ್ಲಿ ಹೂಳೆತ್ತಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ;

ಆ) ಈ ಕಾಮಗಾರಿಗಳಿಗಾಗಿ ಮಂಜೂರಾದ ಹಣದ ಮೊತ್ತ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಇ) ಕೆರೆಗಳ ಹೂಳೆತ್ತಿ ಅಭಿವೃದ್ಧಿಪಡಿಸುವ ಮೂಲಕ ನೀರಾವರಿ ಸೌಲಭ್ಯಗಳೊಂದಿಗೆ ಅಂತರ್ಜಲ ಮಟ್ಟದಲ್ಲಿ ಸುಧಾರಣೆ ಸಾಧಿಸುವ ಕುರಿತು ಸರ್ಕಾರ ಆದ್ಯತೆಯನ್ನು ನೀಡುವುದೇ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) 2003–04ನೇ ಸಾಲಿನಲ್ಲಿ ಸಣ್ಣ ಪ್ರಮಾಣದ 6 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಆ) ರೈತ ಕಾಯಕ ಕೆರೆ ಯೋಜನೆಯಡಿ 2003–04ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಿರುವ ಕೆರೆಗಳ ವೆಚ್ಚದ ವಿವರಗಳು ಈ ಕೆಳಕಂಡಂತಿದೆ;

(ರೂ. ಲಕ್ಷಗಳಲ್ಲಿ)

ಕ್ರ. ಸಂ	ತಾಲ್ಲೂಕು	ಕಾಮಗಾರಿ ಸಂಖ್ಯೆ	ಆಗಿರುವ ವೆಚ್ಚ
1	ಬಂಟ್ವಾಳ	1	4.00
2	ಪುತ್ತೂರು	1	1.12
3	ಬೆಳ್ತಂಗಡಿ	1	5.84
4	ಮಂಗಳೂರು	3	17.18

ಇ) ಹೌದು.

67 (145) ಶ್ರೀ ರಾಜೇಂದ್ರನ್ ಎಸ್. : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾನೂನು ಇಲಾಖೆಯಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ಅಭಿಪ್ರಾಯಕ್ಕಾಗಿ ಬಾಕಿ ಉಳಿದಿರುವ ಕಡತಗಳು ಎಷ್ಟು; (ವಿವರ ನೀಡುವುದು)

ಆ) ವಿಳಂಬಕ್ಕೆ ಕಾರಣಗಳೇನು? ಮತ್ತು ಕಡತಗಳನ್ನು ಯಾವಾಗ ವಿಲೇವಾರಿ ಮಾಡಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಅಂತಹ 9 ಕಡತಗಳಿದ್ದು ಅವುಗಳ ವಿವರ ಈ ಕೆಳಗಿನಂತಿದೆ :-

ಲಾ	702	ಅಭಿ	04
ಲಾ	838	ಅಭಿ	04
ಲಾ	853	ಅಭಿ	04
ಲಾ	95	ಅಭಿ	05
ಲಾ	115	ಅಭಿ	05
ಲಾ	122	ಅಭಿ	05
ಲಾ	194	ಅಭಿ	05
ಲಾ	201	ಅಭಿ	05
ಲಾ	212	ಅಭಿ	05

ಆ) ಸದರಿ ಕಡತಗಳಲ್ಲಿ ಸಂಬಂಧಪಟ್ಟ ಆಡಳಿತ ಇಲಾಖೆಗಳೊಂದಿಗೆ ಸಮಾಲೋಚಿಸಲಾಗುತ್ತಿದ್ದು, ಅವುಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

68 (146) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕ್ಷಣ ಇಲಾಖೆಯಲ್ಲಿ ಅನುದಾನಿತ / ಅನುದಾನರಹಿತ ಕಾಲೇಜುಗಳು ಸೇರಿದಂತೆ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ;

ಆ) ಈ ಹುದ್ದೆಗಳನ್ನು ತುಂಬದೇ ಇರಲು ಕಾರಣಗಳೇನು?

ಇ) ಸರ್ಕಾರವು ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತದೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಗುರುತಿಸಲಾದ ಬ್ಯಾಕ್‌ಲಾಗ್ ಹುದ್ದೆಯ ವಿವರಗಳು ಇಂತಿವೆ.

1)	ಸರ್ಕಾರಿ ಪ್ರಾಥಮಿಕ	–	2094
2)	ಅನುದಾನಿತ ಪ್ರೌಢಶಾಲೆ	–	174
3)	ಸರ್ಕಾರಿ ಪ್ರೌಢಶಾಲೆ	–	ಇಲ್ಲ
4)	ಅನುದಾನಿತ ಪ್ರೌಢಶಾಲೆ	–	450
5)	ಸರ್ಕಾರಿ ಪ.ಪೂ.ಕಾಲೇಜು	–	26
6)	ಅನುದಾನಿತ ಪ.ಪೂ.ಕಾಲೇಜು	–	377

ಈ ಪೈಕಿ ಸರ್ಕಾರಿ ಪ್ರಾಥಮಿಕ ಶಾಲೆಯ 2094 ಹುದ್ದೆಗಳು, ಅನುದಾನಿತ ಪ್ರಾಥಮಿಕ ಶಾಲೆಯ 72 ಹುದ್ದೆಗಳು, ಅನುದಾನಿದ ಪ್ರೌಢಶಾಲೆಯ 428 ಹುದ್ದೆಗಳು, ಸರ್ಕಾರಿ, ಅನುದಾನಿತ ಪದವಿ ಪೂರ್ವ ಕಾಲೇಜುಗಳ 152 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.

ಆ) ಅನುದಾನಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ಒಟ್ಟು 275 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕಾಗಿದೆ. ಈ ಹುದ್ದೆಗಳು ಉದ್ಭವವಾದೊಡನೆ ಭರ್ತಿ ಮಾಡಲು ಸಂಬಂಧಿಸಿದ ಆಡಳಿತ ಮಂಡಳಿಗೆ ಸೂಚಿಸಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ 02 ಪರಿಶಿಷ್ಟ ಪಂಗಡದ ಭೌತಶಾಸ್ತ್ರ ಉಪನ್ಯಾಸಕ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಸಿಗುತ್ತಿಲ್ಲವೆಂದು ಆಡಳಿತ ಮಂಡಳಿ ತಿಳಿಸಿದೆ. ಆದಾಗ್ಯೂ ಈ ಹುದ್ದೆಗಳನ್ನು ಪದೇ ಪದೇ ಜಾಹಿರಾತು ನೀಡುವ ಮೂಲಕ ಕೂಡಲೇ ತುಂಬಿಕೊಳ್ಳಲು ಸೂಚಿಸಿದೆ. ಈ ಹುದ್ದೆಗಳನ್ನು ಆಡಳಿತ ಮಂಡಳಿ ತುಂಬಿಕೊಂಡ ನಂತರ ನೇಮಕಾತಿಗಳು ನಿಯಮಾನುಸಾರವಿದ್ದಲ್ಲಿ ಪರಿಶೀಲಿಸಿ ಅನುಮೋದನೆ ನೀಡಲಾಗುವುದು.

69 (148) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಅಧಿಕಾರಿಗಳು/ನೌಕರರು ಅಕ್ರಮ, ಅವ್ಯವಹಾರ, ಹಣ ದುರುಪಯೋಗ, ದುರಾಡಳಿತ ಎಸಗಿರುವ ಪ್ರಕರಣಗಳು (ಜಿ.ಪಂ., ತಾ.ಪಂ., ಮತ್ತು ಗ್ರಾ.ಪಂ. ವಾರು ಮೊತ್ತ ವಿವರಗಳನ್ನು ನೀಡುವುದು.)

ಬಿ) ಮೇಲ್ಕಂಡ ಅವ್ಯವಹಾರಗಳಲ್ಲಿ ಒಳಗೊಂಡಿರುವ ಅಧಿಕಾರಿ ಮತ್ತು ನೌಕರರುಗಳ ವಿವರಗಳನ್ನು ನೀಡುವುದು.

ಸಿ) ತಪ್ಪಿತಸ್ಥ ನೌಕರರುಗಳ ವಿರುದ್ಧ ದುರುಪಯೋಗವಾಗಿರುವ ಮೊತ್ತವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಎ) ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಬಿ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಸಿ) ಆಪಾದಿತ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿದೆ/ನಡೆಸಲಾಗುತ್ತಿದೆ. ತಪ್ಪಿತಸ್ಥರೆಂದು ಸಾಬೀತಾದ ಪ್ರಕರಣಗಳಲ್ಲಿ ಸರ್ಕಾರಕ್ಕೆ ಉಂಟಾದ ನಷ್ಟವನ್ನು ಅವರುಗಳಿಂದ ವಸೂಲು ಮಾಡಲು ಮತ್ತು ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದಂತೆ, ವಿಚಾರಣಾ ವರದಿಗಳು ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧಗಳಲ್ಲಿ ನೀಡಲಾಗಿದೆ.)

ಶ್ರೀ ಎಸ್. ರಾಜೇಂದ್ರನ್, ಮಾನ್ಯ ವಿಧಾನಸಭಾ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 148 / 2006 ಕ್ಕೆ ಸಂಬಂಧಿಸಿದಂತೆ ವಿವರಗಳು

ಅನುಬಂಧ-1

ಕ್ರ. ಸಂ.	ಜಿಲ್ಲೆಯ ಹೆಸರು	ಜಿಲ್ಲಾ ಪಂಚಾಯತಿ ಪ್ರಕರಣಗಳು	ತಾಲ್ಲೂಕು ಪಂಚಾಯತಿ ಪ್ರಕರಣಗಳು	ಗ್ರಾಮ ಪಂಚಾಯತಿ ಪ್ರಕರಣಗಳು	ಆರೋಪಿತ ಅಧಿಕಾರಿ / ನೌಕರರ ಸಂಖ್ಯೆ
1	2	3	4	5	6
1	ಬೆಂಗಳೂರು (ನಗರ)	03	01	03	14
2	ಬೆಂಗಳೂರು (ಗ್ರಾ)	–	–	03	03
3	ಬಳ್ಳಾರಿ	–	–	22	22
4	ಬೆಳಗಾವಿ	–	–	09	13
5	ಬಿಜಾಪುರ	–	04	27	43
6	ಚಿಕ್ಕಮಗಳೂರು	–	19	20	114
7	ದಕ್ಷಿಣ ಕನ್ನಡ	–	03	09	13
8	ಹಾಸನ	–	–	03	03
9	ಮಂಡ್ಯ	01	04	03	08
10	ಮೈಸೂರು	–	–	12	12
11	ರಾಯಚೂರು	02	02	11	17
12	ಉತ್ತರ ಕನ್ನಡ	–	–	07	07
13	ಚಾಮರಾಜನಗರ	–	02	09	17
14	ದಾವಣಗೆರೆ	05	–	12	17
15	ಹಾವೇರಿ	–	–	05	05
16	ಕೊಪ್ಪಳ	–	–	03	03
17	ಉಡುಪಿ	01	–	05	10
18	ಧಾರವಾಡ	01	01	13	18
19	ಬೀದರ್	09	01	24	34
20	ಬಾಗಲಕೋಟೆ	01	01	–	03
21	ಗದಗ	01	01	05	07
22	ಚಿತ್ರದುರ್ಗ	02	01	05	08
23	ಕೊಡಗು	01	05	09	17
24	ಗುಲ್ಬರ್ಗಾ	–	–	–	–
25	ಶಿವಮೊಗ್ಗ	06	03	08	26
26	ತುಮಕೂರು	–	–	06	06
27	ಕೋಲಾರ	01	01	–	12
	ಒಟ್ಟು	34	49	233	452

ಅನುಬಂಧ–2

ಶ್ರೀ ಎಸ್. ರಾಜೇಂದ್ರನ್, ಮಾನ್ಯ ವಿಧಾನಸಭಾ ಸದಸ್ಯರು ಇವರ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ: 148 / 2006 ಕ್ಕೆ ಸಂಬಂಧಿಸಿದಂತೆ ವಿವರಗಳು

ಜಿಲ್ಲಾ ಪಂಚಾಯಿತಿ ಹೆಸರು	ಜಿಲ್ಲಾ ಪಂಚಾಯಿತಿ /ತಾಲ್ಲೂಕು ಪಂಚಾಯಿತಿ /ಗ್ರಾಮ ಪಂಚಾಯಿತಿ ಕಛೇರಿಯಲ್ಲಿನ ಪ್ರಕರಣಗಳು	ಆರೋಪಿತ ಅಧಿಕಾರಿ / ನೌಕರರುಗಳು ಶ್ರೀ /ಶ್ರೀಮತಿ	ಆರೋಪದಲ್ಲಿ ಒಳಗೊಂಡ ಮೊತ್ತ ಮತ್ತು ಇತರೆ ವಿವರಗಳು. ರೂ.ಗಳಲ್ಲಿ	ಇವರುಗಳ ವಿರುದ್ಧ ತೆಗದುಕೊಂಡ ಕ್ರಮ
1	2	3	4	5
1. ಬೆಂಗಳೂರು (ನಗರ)	3 (ಜಿಲ್ಲಾ ಪಂಚಾಯಿತಿ)	1. ಶಾಂತಕುಮಾರಿ, ಹಿಂದಿನ ಮುಲೆಅ. 2. ಕೃಷ್ಣಯ್ಯ, ಲೆಕ್ಕಾಧೀಕ್ಷಕ 3. ಅಬ್ದುಲ್‌ಕಾದರ್ 4. ಜಯರಾಮಯ್ಯ, ಲೆಕ್ಕ ಸಹಾಯಕ	4,16,47,276–00	ಸಿ.ಬಿ.ಐ.ನಿಂದ ತನಿಖೆ ನಡೆಯುತ್ತಿದೆ.
		1. ಶಿವರಾಜು, ಹಿಂದಿನ ಯೋಜನಾಧಿಕಾರಿ, ಐಆರ್‌ಇಪಿ	8,661–00	ವಿಚಾರಣೆ ನಂತರ ಇವರಿಗೆ ಹಿಂಬಡ್ತಿ ನೀಡಿ ರೂ.8,661–00 ಗಳನ್ನು ವಸೂಲು ಮಾಡಲು ಆದೇಶಿಸಲಾಗಿದೆ
		1. ಟಿ.ವಿ. ಮೂರ್ತಿ, ದ್ವಿದ.ಸ.	2,012–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
	1 (ತಾಲ್ಲೂಕು ಪಂಚಾಯಿತಿ)	1. ಸರ್ವರ್‌ಮರ್ಚಂಟ್, ಹಿಂದಿನ ಕಾನಿಅ ತಾ.ಪಂ. ಬೆಂಗಳೂರು (ಉತ್ತರ) 2. ಜಿ.ವಿ. ಹನುಮಂತರಾಯಪ್ಪ, ಲೆಕ್ಕಾಧೀಕ್ಷಕರು 3. ಎಸ್.ವಿ. ರಾಜಶೇಖರ್, ಕಿ.ಇಂ. 4. ಜಿ.ವಿ. ಸತ್ಯನಾರಾಯಣ, ಕಿ.ಇಂ 5. ಎಂ.ಎಸ್.ಬಸವರಾಜು, ಕಿ.ಇಂ.	250 ಮೆಟ್ರಿಕ್ ಟನ್ ಅಕ್ಕಿ	ವಿಚಾರಣೆ ನಡೆಸಿ ಇವರನ್ನು ಆರೋಪಮುಕ್ತಗೊಳಿಸಿದೆ.

1	2	3	4	5
	3 (ಗ್ರಾಮ ಪಂಚಾಯಿತಿ)	1. ಕೋಮಲ, ಗ್ರಾಪಂಕಾ, ಕಿತ್ತನಹಳ್ಳಿ ಬೆಂಗಳೂರು (ಉತ್ತರ) ತಾಲ್ಲೂಕು	8,181–00	ವಿಚಾರಣೆ ನಡೆಸಿ ಇವರನ್ನು ಆರೋಪಮುಕ್ತಗೊಳಿಸಿದೆ.
		1. ವಿ. ರಾಮಯ್ಯ, ಗ್ರಾಪಂಕಾ, ಚುಂಚನಕುಪ್ಪೆ ಬೆಂಗಳೂರು (ದಕ್ಷಿಣ) ತಾಲ್ಲೂಕು	39,428–00	ಇಲಾಖಾ ವಿಚಾರಣೆಗೆ ಆದೇಶಿಸಿದೆ.
		1. ಆರ್. ಗೋಪಾಲ್, ಗ್ರಾಪಂಕಾ, ಬಳ್ಳೂರು ಆನೇಕಲ್ ತಾಲ್ಲೂಕು.	6,40,400–00	ವಿಚಾರಣೆಗೆ ಆದೇಶವಾಗಿದ್ದು ಈ ನೌಕರರು ನಿಧನ ಹೊಂದಿರುತ್ತಾರೆ.
2. ಬೆಂಗಳೂರು (ಗ್ರಾ)	ಜಿಲ್ಲಾ ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.			
	1 (ತಾಲ್ಲೂಕು ಪಂಚಾಯಿತಿ)	1. ನಜೀರಹ್ಮದ್‌ಖಾನ್, ದ್ವಿ.ದ.ಸ. ದೊಡ್ಡಬಳ್ಳಾಪುರ ತಾಲ್ಲೂಕು ಪಂಚಾಯಿತಿ.	87,000–00	ವಿಚಾರಣೆ ನಂತರ ಇವರ ವೇತನದಿಂದ ಮಾಸಿಕ ರೂ. 1,450–00 ಕಟಾಯಿಸುವ ಹಾಗೂ ಇವರ ಮೂರು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.
	2 (ಗ್ರಾಮ ಪಂಚಾಯಿತಿ)	1. ಎನ್.ಜಿ. ಗೋಪಿಕೃಷ್ಣ, ಗ್ರಾಪಂಕಾ ಕೋರಮಂಗಲ, ದೇವನಹಳ್ಳಿ ತಾಲ್ಲೂಕು	27,392–00	ವಿಚಾರಣೆಗೆ ಆದೇಶಿಸಲಾಗಿದೆ.
		1. ಚೆಲುವರಾಮು, ಗ್ರಾಪಂಕಾ, ಹೆಚ್.ಬ್ಯಾಡರಹಳ್ಳಿ ಚೆನ್ನಪಟ್ಟಣ ತಾಲ್ಲೂಕು.		ವಿಚಾರಣೆಗೆ ಆದೇಶಿಸಲಾಗಿದೆ
3 ಬಳ್ಳಾರಿ	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.	–		

1	2	3	4	5
	22 (ಗ್ರಾಮ ಪಂಚಾಯಿತಿ)	1. ಹೆಚ್. ಮಾರಪ್ಪ, ಗ್ರಾಪಂಕಾ, ಸಿಡಿಗಿನಮೊಳ, ಬಳ್ಳಾರಿ ತಾಲ್ಲೂಕು	25,000—00	ವಿಚಾರಣೆ ಪ್ರಗತಿಯಲ್ಲಿದೆ.
		1. ಇಂದಿರಾ ಆನಂದರಾಜ್, ಗ್ರಾಪಂಕಾ, ಎಂ. ಗೋನಾಳ್ ಬಳ್ಳಾರಿ ತಾಲ್ಲೂಕು	17,140—00	ವಿಚಾರಣೆ ನಡೆಸಿ ಆರೋಪಮುಕ್ತ ಮಾಡಿದೆ.
		1. ಆರ್. ಶಿವ್ವನಗೌಡ, ಗ್ರಾಪಂಕಾ, ಹೆಚ್. ವೀರಾಪುರ, ಬಳ್ಳಾರಿ ತಾಲ್ಲೂಕು	15,490—00	ಸದರಿ ನೌಕರರು ನಿಧನರಾಗಿದ್ದು ಇವರಿಂದ ಬರಬೇಕಾದ ಹಣವನ್ನು ಅವರ ಪತ್ನಿಯವರು ಸರ್ಕಾರಕ್ಕೆ ಜಮಾ ಮಾಡಿದ್ದಾರೆ.
		1. ಬಸವರಾಜ ನಿಂಗಪ್ಪ ಪೂಜಾರ, ಗ್ರಾಪಂಕಾ ಸೋಮಸಮುದ್ರ, ಬಳ್ಳಾರಿ ತಾಲ್ಲೂಕು	63,960—00	ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ. ಬಸವರಾಜ್, ಗ್ರಾಪಂಕಾ, ವಣೆನೂರು, ಬಳ್ಳಾರಿ ತಾಲ್ಲೂಕು	1,29,375—00	ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ. ಹನುಮಂತಪ್ಪ, ಗ್ರಾಪಂಕಾ, ಹಲಕುಂದಿ, ಬಳ್ಳಾರಿ ತಾಲ್ಲೂಕು	7,50,000—00	ವಿಚಾರಣೆ ಪ್ರಗತಿಯಲ್ಲಿದೆ.
		1. ಬಿ.ಎಂ. ನಾಗಯ್ಯ, ಗ್ರಾಪಂಕಾ, ಕುರುಗೋಡು / ಶ್ರೀಧರಗಡ್ಡ, ಬಳ್ಳಾರಿ ತಾಲ್ಲೂಕು	8,55,665—00	ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ. ಬಸವರಾಜ್, ಗ್ರಾಪಂಕಾ, ತಂಬ್ರಹಳ್ಳಿ, ಹ.ಬೊ.ಹಳ್ಳಿ ತಾಲ್ಲೂಕು	11,580—00	ವಿಚಾರಣೆ ನಂತರ ಈ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿಸಿಕೊಳ್ಳಲಾಗಿದೆ.
		1. ಕೆ.ಎಂ. ಸ್ವಾಮಿ, ಗ್ರಾಪಂಕಾ, ಬನ್ನಿಕಲ್ಲು, ಹ.ಬೊ. ಹಳ್ಳಿ ತಾಲ್ಲೂಕು	8,000—00	ವಿಚಾರಣೆ ನಂತರ ಈ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲಾಗಿದೆ.

1	2	3	4	5
		1. ಪಿ.ಎಸ್. ನಾಯಕ್, ಗ್ರಾಪಂಕಾ, ಹಂಪಾಪಟ್ಟಣ, ಹ.ಬೊ.ಹಳ್ಳಿ ತಾಲ್ಲೂಕು	88,332–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಅಸ್ಗರ್ ಷರೀಫ್, ಗ್ರಾಪಂಕಾ, ಮೊರಬ್ಬಿಹಾಳ್, ಹ.ಬೊ.ಹಳ್ಳಿ ತಾಲ್ಲೂಕು	1,62,900–00	ವಿಚಾರಣೆ ಪ್ರಗತಿಯಲ್ಲಿದೆ.
		1. ಬಾಬಾಸಾಬ್ ನದಾಫ್, ಗ್ರಾಪಂಕಾ ಮೋರಗೇರಿ, ಹ.ಬೊ. ಹಳ್ಳಿ ತಾಲ್ಲೂಕು	1,800–00	ವಿಚಾರಣೆ ಪ್ರಗತಿಯಲ್ಲಿದೆ.
		1. ಆರ್. ಪುರುಷೋತ್ತಮ್, ಗ್ರಾಪಂಕಾ, ಸೋವೇನಹಳ್ಳಿ, ಹಡಗಲಿ ತಾಲ್ಲೂಕು	1,43,636–00	ವಿಚಾರಣೆ ಪ್ರಗತಿಯಲ್ಲಿದೆ.
		1. ಆರ್. ಪುರುಷೋತ್ತಮ್ ಗ್ರಾಪಂಕಾ ಸೋಗಿ ಹಡಗಲಿ ತಾಲ್ಲೂಕು	1,75,638–00	ವಿಚಾರಣೆ ಪ್ರಗತಿಯಲ್ಲಿದೆ
		1. ಆರ್. ಪುರುಷೋತ್ತಮ್, ಗ್ರಾಪಂಕಾ, ಸೋಗಿ, ಹಡಗಲಿ ತಾಲ್ಲೂಕು.	59,000–00	ವಿಚಾರಣೆ ಪ್ರಾರಂಭವಾಗಿದೆ.
		1. ಸಿ. ಚಾಮರಾಜ್, ಕಿ.ಇಂ. ಪಂ.ರಾ.ಇಂ.ಉ.ವಿ ಹಡಗಲಿ	4,14,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಪಿ. ಪರಮೇಶ್ವರಪ್ಪ, ಕಿ.ಇಂ. ಪಂ.ರಾ.ಇಂ.ಉ.ವಿ ಹಡಗಲಿ	4,27,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ರಾಮಪುರೆ ಸಂಗ್ರಾಮ, ಗ್ರಾಪಂಕಾ, ಬಗ್ಗೂರು, ಸಿರಗುಪ್ಪ ತಾಲ್ಲೂಕು	1,79,922–00	ವಿಚಾರಣೆ ನಡೆಸಿ ದುರುಪಯೋಗವಾದ ಹಣ ವಸೂಲಿ ಮಾಡಲು ಹಾಗೂ ಇವರ ಒಂದು ವಾರ್ಷಿಕ ವೇತನ ಬಡ್ತಿ ಸಂಚಿತ ಪರಿಣಾಮವಾಗುವಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.

1	2	3	4	5
		1. ಸುಧಾಕರ್, ಗ್ರಾಪಂಕಾ, ಕರೂರು, ಶಿರಗುಪ್ಪ ತಾಲ್ಲೂಕು	2,53,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಒಂಟಿಬಸಪ್ಪ, ಗ್ರಾಪಂಕಾ, ಕಾಳಿಂಗೇರಿ, ಸಂಡೂರು ತಾಲ್ಲೂಕು.	1,00,000–00	ವಿಚಾರಣೆನಂತರ ಆರೋಪಮುಕ್ತರನ್ನಾಗಿ ಮಾಡಿದೆ.
		1. ಎಚ್.ಎಂ. ವಿಜಯಕುಮಾರ್, ಗ್ರಾಪಂಕಾ, ದರೋಜಿ, ಸಂಡೂರು ತಾಲ್ಲೂಕು	1,66,111–00	ವಿಚಾರಣೆ ನಂತರ ಇವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.
		1. ಜೆ. ನಾಗಪ್ಪ, ಗ್ರಾಪಂಕಾ, ಮಾಕನಡಕು, ಕೂಡ್ಲಿಗಿ ತಾಲ್ಲೂಕು.	1,85,000–00	ವಿಚಾರಣೆ ಪ್ರಗತಿಯಲ್ಲಿದೆ.
4 ಬೆಳಗಾವಿ.	ಜಿಲ್ಲಾ ಪಂಚಾಯತ / ತಾಲ್ಲೂಕು ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.			
	9 (ಗ್ರಾಮ ಪಂಚಾಯಿತಿ)	1. ಬಿ.ಆರ್. ನವಲಗುಂದ, ಗ್ರಾಪಂಕಾ ಮುರಗೋಡ, ಸವದತ್ತಿ ತಾಲ್ಲೂಕು.	1,12,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್. ಸಾಗರ, ಗ್ರಾಪಂಕಾ, ಬೆರಡಿ, ಸವದತ್ತಿ ತಾಲ್ಲೂಕು	7,58,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಎಸ್. ಪಟ್ಟೇದ, ಗ್ರಾಪಂಕಾ, ಯಮಕನಮರಡಿ, ಹುಕ್ಕೇರಿ ತಾಲ್ಲೂಕು	1,65,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಎಲ್. ಚೂನಪ್ಪಗೋಳ, ಗ್ರಾಪಂಕಾ, ಯಮಕನಮರಡಿ, ಹುಕ್ಕೇರಿ ತಾಲ್ಲೂಕು	2,10,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಜಿ. ಗುಡಸಕರ, ಗ್ರಾಪಂಕಾ, ಯಮಕನಮರಡಿ, ಹುಕ್ಕೇರಿ ತಾಲ್ಲೂಕು	1,10,000–00	ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಎನ್.ಎ. ಪೀರಜಾಡೆ, ಗ್ರಾಪಂಕಾ, ಯಮಕನಮರಡಿ, ಹುಕ್ಕೇರಿ ತಾಲ್ಲೂಕು.	1,08,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಸಿ.ಎಂ. ಮಠಪತಿ, ಗ್ರಾಪಂಕಾ, ಪಾಲಭಾವಿ, ರಾಯಬಾಗ ತಾಲ್ಲೂಕು	3,09,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎ.ಎ. ಮಾನೆ, ಗ್ರಾಪಂಕಾ, ಕಾಗವಾಡ, ಅಥಣಿ ತಾಲ್ಲೂಕು	10,80,000–00	ವಿಚಾರಣೆ ಪ್ರಗತಿಯಲ್ಲಿದೆ.
		2. ಎ.ಎ. ಲಿಂಬಿಕಾಯಿ, ಗ್ರಾಪಂಕಾ, ಕಾಗವಾಡ, ಅಥಣಿ ತಾಲ್ಲೂಕು		
		1. ಪಿ.ಆರ್. ಕುಲಕರ್ಣಿ, ಗ್ರಾಪಂಕಾ, ಉಗರಗೋಳ, ಸವದತ್ತಿ ತಾಲ್ಲೂಕ.	51,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಆರ್.ಆರ್. ಉಳ್ಳಾಗಡ್ಡಿ, ಗ್ರಾಪಂಕಾ, ಕೆ. ಬಾಗೇವಾಡಿ, ಖಾನಾಪುರ ತಾಲ್ಲೂಕು.	3,17,000–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎ.ಎಸ್. ಮಾಳಿ, ಗ್ರಾಪಂಕಾ, ಭೋಜ, ಚಿಕ್ಕೋಡಿ ತಾಲ್ಲೂಕು	2,29,000–00	ವಿಚಾರಣೆ ಪ್ರಗತಿಯಲ್ಲಿದೆ.
		ಆರ್.ಆರ್. ಉಳ್ಳಾಗಡ್ಡಿ, ಗ್ರಾಪಂಕಾ, ಕೇರವಾಡ, ಖಾನಾಪುರ ತಾಲ್ಲೂಕು	6,20,000–00	ವಿಚಾರಣೆ ಪ್ರಗತಿಯಲ್ಲಿದೆ.
5 ಬಿಜಾಪುರ	ಜಿಲ್ಲಾ ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.1	–	–	–
	4 (ತಾಲ್ಲೂಕು ಪಂಚಾಯಿತಿ).	1. ಬಿ.ಜಿ. ಚೌಡಪ್ಪನವರ, ಹಿಂ.ಕಾನಿಅ, ತಾ.ಪಂ. ಬಿಜಾಪುರ	13,44,177–00	ಈ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಸಹ
		2. ಎಸ್.ಆರ್. ಬರಡೋಲ, ಹಿಂ.ಕಾನಿಅ, ತಾ.ಪಂ. ಬಿಜಾಪುರ.	23,91,529–00	

1	2	3	4	5
		3. ಬಿ.ಕೆ. ಆಶ್ರೀತ, ಕಿ.ಇಂ. ತಾ.ಪಂ. ಬಿಜಾಪುರ (ನಿವೃತ್ತಿ)	4,691–00	ದಾಖಲು ಮಾಡಲಾಗಿರುತ್ತದೆ.
		4. ಪಿ.ಬಿ. ಸರದೇಶಪಾಂಡೆ, ಹಿಂ.ಕಿ.ಇಂ. ತಾ.ಪಂ. ಬಿಜಾಪುರ	37,57,251–00	
		5. ಎಸ್.ಎಂ. ಮುತ್ತಪ್ಪನವರ, ಹಿಂ.ಕಿ.ಇಂ. ತಾ.ಪಂ. ಬಿಜಾಪುರ.	25,586–00	
		1. ಎಸ್.ಎಚ್. ಮಮದಾಪುರ, ಹಿಂ. ಕಾನಿಅ, ತಾಪಂ. ಇಂಡಿ, (ನಿವೃತ್ತಿ)	3,61,223–00	ಈ ಅಧಿಕಾರಿ / ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಸಹ ದಾಖಲು ಮಾಡಲಾಗಿರುತ್ತದೆ.
		2. ಬಿ.ಹೆಚ್. ಬೆಲ್ಲದ, ಹಿಂ. ಕಾನಿಅ, ತಾ.ಪಂ. ಇಂಡಿ (ನಿವೃತ್ತಿ)	8,02,446–00	
		3. ಪಿ.ಬಿ. ಸರದೇಶಪಾಂಡೆ, ಹಿಂ.ಕಿ.ಇಂ. ತಾ.ಪಂ ಇಂಡಿ.	9,51,600–00	
		4. ಎಸ್.ಬಿ. ಪಾಟೀಲ,ಹಿಂ.ಕಿ.ಇಂ. ತಾ.ಪಂ. ಇಂಡಿ	1,42,266–00	
		5. ಎಸ್.ಎಂ. ಮುತ್ತಪ್ಪನವರ, ಹಿಂ.ಕಿ.ಇಂ. ತಾ.ಪಂ. ಇಂಡಿ	14,000–00	
		6. ಎಸ್.ಎಸ್. ವಾಲಿ, ಹಿಂ.ಕಿ.ಇಂ. ತಾ.ಪಂ. ಇಂಡಿ	29,545–00	
		7. ಬಿ.ವೈ. ಕಂಬಾರ, ಕಿ.ಇಂ. ತಾ.ಪಂ. ಇಂಡಿ, (ನಿಧನ)	26,249–00	
		1. ಪಿ.ಬಿ. ಸರದೇಶಪಾಂಡೆ, ಹಿಂ.ಕಿ.ಇಂ. ತಾ.ಪಂ. ಬಿಜಾಪುರ		ಈ ಅಧಿಕಾರಿ / ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಸಹ ದಾಖಲು ಮಾಡಲಾಗಿರುತ್ತದೆ.
		2. ಎಸ್.ಆರ್. ಬರಡೋಲ, ಹಿಂ.ಕಾನಿಅ, ತಾ.ಪಂ. ಬಿಜಾಪುರ.	4,77,638–00	
		3. ಬಿ.ಜಿ. ಚೌಡಪ್ಪನವರ, ಹಿಂ. ಕಾನಿಅ, ತಾ.ಪಂ. ಬಿಜಾಪುರ		

1	2	3	4	5
		1. ಎಲ್.ಎಂ. ಕುಮಠೆ, ಅಧೀಕ್ಷಕರು, ಹಿಂ.ತಾ.ಪಂ.	10,173–00	ಇಲಾಖಾ ವಿಚಾರಣೆ ಇಂಡಿ ಪ್ರಗತಿಯಲ್ಲಿದೆ.
	27 (ಗ್ರಾಮ ಪಂಚಾಯಿತಿ)	1. ಆರ್.ಎಂ. ಗುಣಕಿ, (ಪ್ರಭಾರ) ಗ್ರಾಪಂಕಾ, ರಾಮಪೂರ, ಪಿ.ಎ. ಸಿಂದಿಗಿ ತಾಲ್ಲೂಕು.	7,63,711–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ.ಎಲ್. ಕಿಣಗಿ, ಗ್ರಾಪಂಕಾ, ಗುಬ್ಬೇವಾಡ, ಸಿಂದಗಿ ತಾಲ್ಲೂಕು	60,400–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಜಿ. ಕಲಾವಂತ, ಗ್ರಾಪಂಕಾ, ಯಂಕಂಚಿ, ಮತ್ತು ಗೋಲಗೇರಿ, ಸಿಂದಗಿ ತಾಲ್ಲೂಕು	6,23,493–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಆರ್.ವಿ. ಹಜೇರಿ, ಗ್ರಾಪಂಕಾ, ಆಲಮೇಲ, ಸಿಂದಗಿ ತಾಲ್ಲೂಕ.	11,70,227–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎ.ಆರ್. ಬದಾಮಿ, ಗ್ರಾಪಂಕಾ, ಆಲಮೇಲ, ಸಿಂದಗಿ ತಾಲ್ಲೂಕು.	6,00,424–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಸಿ.ಎಸ್. ಪಾಟೀಲ, ಗ್ರಾಪಂಕಾ, ಬರಡೋಲ, ಇಂಡಿ ತಾಲ್ಲೂಕು.	57,353–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಟಿ.ಜಿ. ಲಮಾಣಿ, ಗ್ರಾಪಂಕಾ. ಹಿಟ್ನಳ್ಳಿ, ಸಿಂದಗಿ ತಾಲ್ಲೂಕು.	1,91,9922–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಡಿ. ಕೋಲಕಾರ ಗ್ರಾಪಂಕಾ, ಕಲಕೇರಿ ಸಿಂದಗಿ ತಾಲ್ಲೂಕು.	34,935–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಡಿ. ಚಟ್ಟೇರ, ಗ್ರಾಪಂಕಾ, ಅಸ್ಕಿ, ಸಿಂದಗಿ ತಾಲ್ಲೂಕು	20,625–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ.ಜಿ. ಕೋಲಾರ್, ಗ್ರಾಪಂಕಾ, ಆಲೂರ.	5,29,671–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ವಿ.ಕೆ. ಕೊಟ್ಟಲಗಿ, ಗ್ರಾಪಂಕ, ನಾದ ಕೆ.ಡಿ. ಇಂಡಿ ತಾಲ್ಲೂಕು.	2,96,390–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎ.ಜಿ. ಬಿರಾದಾರ, ಗ್ರಾಪಂಕಾ, ಬಳ್ಳೊಳ್ಳಿ, ಇಂಡಿ ತಾಲ್ಲೂಕು.	3,38,594–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ.ಡಿ. ದೇಶಪಾಂಡೆ, ಗ್ರಾಪಂಕಾ, ಹಡಲಗೇರಿ, ಮುದ್ದೇಬಿಹಾಳ ತಾಲ್ಲೂಕು.	1,41,200–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಪಿ.ಬಿ. ಹರಿಜನ, ಗ್ರಾಪಂಕಾ, ಕುಂಟೋಜಿ, ಮುದ್ದೇಬಿಹಾಳ ತಾಲ್ಲೂಕು.	3,00–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ವೈ.ಎಸ್. ಅಲಮೇಲ, ಗ್ರಾಪಂಕಾ, ಶಿವಣಗಿ, ಬಿಜಾಪುರ ತಾಲ್ಲೂಕು.	1,25,933–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ.ಜಿ. ಯಂಕಪ್ಪಗೋಳ, ಗ್ರಾಪಂಕಾ, ಭರಟಗಿ, ಬಿಜಾಪುರ ತಾಲ್ಲೂಕು.	1,06,350–00 (170 ಕ್ವಿಂಟಾಲ್ ಆಹಾರಧಾನ್ಯ ಸೇರಿ)	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಅಬ್ದುಲ್ ಗಫೂರ್ ಲೋಣಿ, ಗ್ರಾಪಂಕಾ, ಐನಾಪುರ, ಬಿಜಾಪುರ ತಾಲ್ಲೂಕು.	9,96,187–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಫ್.ಸಿ. ಮಸಲಗಿ, ಗ್ರಾಪಂಕಾ, ಕೊರ್ತಿ, ಇಂಡಿ ತಾಲ್ಲೂಕು.	91,720–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ.ಎಂ. ಜುಂಜರಡೆ, ಗ್ರಾಪಂಕಾ, ಝಳಕಿ, ಇಂಡಿ ತಾಲ್ಲೂಕು.	53,026–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಜಿ. ಬಿರಾದಾರ, ಗ್ರಾಪಂಕಾ, ಬರಡೋಲ, ಇಂಡಿ ತಾಲ್ಲೂಕು.	11,31,909–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಆರ್.ಎಸ್. ಪಾದಗಟ್ಟಿ, ಗ್ರಾಪಂಕಾ, ಹಿರೇಬೇವನೂರ, ಇಂಡಿ ತಾಲ್ಲೂಕು.	1,81,250–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎನ್.ಸಿ. ಭಾಸಗಿ, ಗ್ರಾಪಂಕಾ, ಮೂಕಿಹಾಳ, ಮುದ್ದೇಬಿಹಾಳ ತಾಲ್ಲೂಕು.	2,57,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಆರ್.ಎಸ್. ಶಹಾಪೂರ, ಗ್ರಾಪಂಕಾ, ಅಹೀರಸಂಗ, ಇಂಡಿ ತಾಲ್ಲೂಕ.	10,42,540–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಎಂ. ದಂಡಿನ, ಗ್ರಾಪಂಕಾ, ಅಹೇರಿ, ಬಿಜಾಪುರ ತಾಲ್ಲೂಕು.	75,819–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಜಿ.ಎಸ್. ಹಿರೇಮಠ, ಗ್ರಾಪಂಕಾ, ಮಸಳಿ, ಬಿಕೆ. ಇಂಡಿ ತಾಲ್ಲೂಕು.	2,64,975–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಜಿ.ಎಸ್. ಹಡಪದ, ಗ್ರಾಪಂಕಾ, ಗಬಸಾವಳಗಿ, ಸಿಂದಗಿ ತಾಲ್ಲೂಕು.	1,30,929–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಬಿ.ವಿ. ಹಿರೇಂಟ, ಗ್ರಾಪಂಕಾ, ದೇವರಹಿಪ್ಪರಗಿ, ಸಿಂದಗಿ ತಾಲ್ಲೂಕು.	15,00,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
6. ಚಿಕ್ಕಮಗಳೂರು.	ಜಿಲ್ಲಾ ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.	–	–	–
	19 (ತಾಲ್ಲೂಕ ಪಂಚಾಯತಿ)	1. ಕಡೂರು ತಾಲ್ಲೂಕ ಪಂಚಾಯಿತಿಯ ವಸತಿ ಯೋಜನೆಗಳಲ್ಲಿನ ಅವ್ಯವಹಾರಗಳಲ್ಲಿ 65 ಜನ ಅಧಿಕಾರಿ / ನೌಕರರು ಒಳಗೊಂಡಿರುತ್ತಾರೆ.	ಅಧಿಕಾರ ಹಾಗೂ ಹಣ ದುರುಪಯೋಗ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಡಾ. ಎಸ್.ಕೆ. ಪ್ರಭು, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಪಂಚನಹಳ್ಳಿ, ಕಡೂರು ತಾಲ್ಲೂಕು.	ಕರ್ತವ್ಯಲೋಪ ವೆಸಗಿರುವ ಬಗ್ಗೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಮೂಡಿಗೆರೆ ತಾಲ್ಲೂಕ ಪಂಚಾಯಿತಿಯ ವಸತಿ ಯೋಜನೆಗಳಲ್ಲಿನ ಅವ್ಯವಹಾರದಲ್ಲಿ 10 ಜನ ಅಧಿಕಾರಿ / ನೌಕರರು ಒಳಗೊಂಡಿರುತ್ತಾರೆ.	ಅಧಿಕಾರ ಹಾಗೂ ಹಣ ದುರುಪಯೋಗ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಜಿ.ಎಸ್. ಶಿವಪ್ರಸಾದ್, ತೋಟಗಾರಿಕೆ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಮಗಳೂರು.	11,80,000–00	ಈ ಅಧಿಕಾರಿ ವಿರುದ್ಧ ಶಿಸ್ತುಕ್ರಮಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.
		1. ಟಿ. ನಾಗರಾಜಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಕಡೂರು	ಕರ್ತವ್ಯಲೋಪ.	ವಿಚಾರಣೆಗೆ ಆದೇಶಿಸಲಾಗಿದೆ.
		1. ಯೋಗಾನಂದಮೂರ್ತಿ, ಅಧೀಕ್ಷಕರು, 2. ಕೃಷ್ಣಮೂರ್ತಿ, ತೋಟಗಾರಿಕಾ ಸಹಾಯಕರು, ಕಡೂರು	ಕರ್ತವ್ಯಲೋಪದ ಆಪಾದನೆ ಮಾಡಲಾಗಿದೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಜಿ.ಕೆ. ಮಲ್ಲಯ್ಯ, ಮೇಲ್ವಿಚಾರಕರು, ಬಿ.ಸಿ.ಎಂ. ಇಲಾಖೆ.	48,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ತುಳಸಿ,ಮೇಲ್ವಿಚಾರಕಿ, ಗಿರಿಜನ ಆಶ್ರಮಶಾಲೆ, ಕಳಸ.	ಕರ್ತವ್ಯಲೋಪ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ರಾಜೇಂದ್ರ, ಪ್ರ.ದ.ಸ. ಪ್ರಾಥಮಿಕ ಆರೋಗ್ಯ ಕೇಂದ್ರ, ಕೈಮರ.	ಕರ್ತವ್ಯಲೋಪ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಜೈರಾಜು, ಕೃಷಿ ಸಹಾಯಕ, ಕೊಪ್ಪ	37,500–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಮೋಹನರಾವ್, ಪ್ರ.ದ.ಸ.	ಕರ್ತವ್ಯಲೋಪ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಪಿ.ಸಿದ್ದಣ್ಣ, ಪ್ರ.ದ.ಸ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ. ಚಿಕ್ಕಮಗಳೂರು.		
		1. ಕೆ. ಲೋಕೇಶ್ವರ, ಉಪ ಪ್ರಾಚಾರ್ಯ, ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜು, ತರೀಕೆರೆ.	62,000–00	ವಿಚಾರಣಾಧಿಕಾರಿಗಳನ್ನು ನೇಮಕ ಮಾಡಬೇಕಿದೆ.
		1. ಜಯಸುಂದರ, ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಧಿಕಾರಿ, ತರೀಕೆರೆ.	3,00,000–00	ವಿಚಾರಣಾಧಿಕಾರಿಗಳನ್ನು ನೇಮಕ ಮಾಡಬೇಕಿದೆ.
		1. ಜಕಣಾಚಾರ್ಯ, ಕ್ಷೇತ್ರ ಸಮನ್ವಯಾಧಿಕಾರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ ಶೃಂಗೇರಿ.	ಅನುಚಿತ ವರ್ತನೆ.	ವಿಚಾರಣಾಧಿಕಾರಿಗಳನ್ನು ನೇಮಕ ಮಾಡಬೇಕಿದೆ.
		1. ಗಿರಿಯಪ್ಪ, ಕಚೇರಿ ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು.	ಕರ್ತವ್ಯಲೋಪ	ವಿಚಾರಣಾಧಿಕಾರಿಗಳನ್ನು ನೇಮಕ ಮಾಡಬೇಕಿದೆ.
		1. ವಿ. ಕೃಷ್ಣಪ್ಪ, ಪ್ರ.ದ.ಸ. ತಾಲ್ಲೂಕ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ತರೀಕೆರೆ.	ಗೈರು ಹಾಜರಿ ಹಾಗೂ ಕರ್ತವ್ಯಲೋಪ	ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿದೆ.
		1. ಟಿ.ಎನ್. ನಿಂಗಮ್ಮ, ದ್ವಿ.ದ.ಸ. ತಾ.ಪಂ. ಚಿಕ್ಕಮಗಳೂರು.	ಕರ್ತವ್ಯಲೋಪ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಚುಂಚೇಗೌಡ, ವಾಹನ ಚಾಲಕ, ಪಶುಪಾಲನಾ ಇಲಾಖೆ, ಚಿಕ್ಕಮಗಳೂರು	ಅನುಚಿತ ವರ್ತನೆ ಕರ್ತವ್ಯಲೋಪ	ವಿಚಾರಣಾಧಿಕಾರಿಗಳನ್ನು ನೇಮಿಸಬೇಕಿದೆ.
	20 (ಗ್ರಾಮ ಪಂಚಾಯಿತಿ)	1. ಟಿ.ಎಸ್. ರಾಜು, ಗ್ರಾಪಂಕಾ, ನಿಲುವಾಗಿಲು, ಕೊಪ್ಪ ತಾಲ್ಲೂಕು.	39,161–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ.ಡಿ. ಕುಲಕರ್ಣಿ, ಗ್ರಾಪಂಕಾ, ಕೊದುವಳ್ಳಿ, ಚಿಕ್ಕಮಗಳೂರು ತಾಲ್ಲೂಕು.	1,99,911–00 (ಅನಧಿಕೃತ ಗೈರು ಹಾಜರಿ)	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಸಿ.ಎಂ. ಚಂದ್ರೇಗೌಡ, ಗ್ರಾಪಂಕಾ, ಹುಲಿಕೆರೆ, ಹಾಗೂ ಊಳಿಗೆರೆ, ಕಡೂರು ತಾಲ್ಲೂಕು.	1,33,968-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ.ಎಸ್. ಶಿವಶಂಕರ, ಗ್ರಾಪಂಕಾ, ಹಿರೇಕೊಡುಗೆ, ಕೊಪ್ಪ ತಾಲ್ಲೂಕು.	2,96,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ ಹಾಗೂ ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.
		1. ಕೆ. ಚಂದ್ರಪ್ಪ, ಗ್ರಾಪಂಕಾ, ಜೆಗಣಹಳ್ಳಿ	ಎಸ್.ಜಿ.ಆರ್.ವೈ. ಆಹಾರ ಧಾನ್ಯ ಮಾರಾಟ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಆರ್. ಶೇಖರಪ್ಪ ಗ್ರಾಪಂಕಾ ಅತ್ತಿಮೊಗ್ಗೆ ತರೀಕೆರೆ ತಾಲ್ಲೂಕು	2,21,379-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಬಿ.ಓ. ಕಲ್ಲೇಶಪ್ಪ, ಗ್ರಾಪಂಕಾ, ಕೆ. ಬಿದರೆ, ಕಡೂರು ತಾಲ್ಲೂಕು.	89,837-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಧನಂಜಯ ದೊಡ್ಡಮನಿ, ಗ್ರಾಪಂಕಾ, ಬೆಳವಾಡಿ, ಚಿಕ್ಕಮಗಳೂರು ತಾಲ್ಲೂಕು	1,99,400-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್. ನಾಗರಾಜು, ಗ್ರಾಪಂಕಾ, ಹಂತರೂ, ಮೂಡಿಗೆರೆ ತಾಲ್ಲೂಕು.	22,681-00 (ಗೈರು ಹಾಜರಿ)	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಟಿ.ಜಿ. ಉಪೇಂದ್ರ, ಗ್ರಾಪಂಕಾ, ಕೂತಗೋಡು.	74,014-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ. (ಇವರ ವಿರುದ್ಧ ಕ್ರಿಮಿನಲ್ ಕೇಸ್ ಸಹ ದಾಖಲಿಸಿದೆ)
		1. ಟಿ.ಎಸ್. ರಾಜು, ಗ್ರಾಪಂಕಾ, ಹುಲಿಕೆರೆ,	ಹಣ ದುರುಪಯೋಗ ಮತ್ತು ಗೈರು ಹಾಜರಿ.	ಇವರು ವಿರುದ್ಧ ಆರೋಪ ಪಟ್ಟಿ ಜಾರಿ ಕ್ರಮ ಕೈಗೊಳ್ಳಲಾಗಿದೆ.

1	2	3	4	5
		1. ವಿಸಿದ್ದಪ್ಪ, ಗ್ರಾಪಂಕಾ, ಬಗ್ಗವಳ್ಳಿ, ತರೀಕೆರೆ ತಾಲ್ಲೂಕು.	1,70,474–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಶ್ರೀನಿವಾಸ್, ಗ್ರಾಪಂಕಾ, ಬೆಟ್ಟದಹಳ್ಳಿ, ತರೀಕೆರೆ ತಾಲ್ಲೂಕು.	3,08,788–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಬಾಲಾಜಿ ನಾಯಕ್, ಗ್ರಾಪಂಕಾ, ಅಗಳಗಂಡಿ, ಕೊಪ್ಪ ತಾಲ್ಲೂಕು	37,805–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಫಾಲಾಕ್ಷಪ್ಪ, ಗ್ರಾಪಂಕಾ, ಯೆಳ್ಳಂಬಳಸೆ, ಕಡೂರು ತಾಲ್ಲೂಕು.	87,432–00	ದಿನಾಂಕ 22–6–2005 ರಂದು ಇವರು ನಿಧನ ಹೊಂದಿರುವುದರಿಂದ, ಇವರ ವಾರಸದಾರರಿಂದ, ದುರುಪಯೋಗವಾದ ಹಣ ವಸೂಲಾತಿ ಮಾಡಲು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚಿಸಲಾಗಿದೆ.
		1. ಅಬ್ದುಲ್ ಲತೀಫ್, ಗ್ರಾಪಂಕಾ, ಕಾನೂರು, ನರಸಿಂಹರಾಜಪುರ ತಾಲ್ಲೂಕು	15,33,470–00	ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ಲೋಕಾಯುಕ್ತರಿಗೆ ವಹಿಸಲಾಗಿದೆ.
		1. ಎಂ.ಎಂ. ಪುಟ್ಟಪ್ಪ, ಗ್ರಾಪಂಕಾ, ಕೊಪ್ಪ (ಗ್ರಾಮಾಂತರ), ಕೊಪ್ಪ ತಾಲ್ಲೂಕು	25,035–00	ವಿಚಾರಣೆ ನಂತರ ದುರುಪಯೋಗ ಮಾಡಿರುವ ಹಣವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಜಮ ಮಾಡಿರುತ್ತಾರೆ.
		1. ಸಿ.ಎಂ. ಚಂದ್ರೇಗೌಡ, ಗ್ರಾಪಂಕಾ, ಬಾಳೆ, ನರಸಿಂಹರಾಜಪುರ ತಾಲ್ಲೂಕು.	1,86,543–00	ಇವರಿಗೆ ದಂಡನೆ ವಿಧಿಸಿ ಆದೇಶಿಸಲಾಗಿದ್ದು, ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ.

1	2	3	4	5
		1. ಎಚ್.ಎಂ. ಕರಿಸಿದ್ದಪ್ಪ, ಗ್ರಾಪಂಕಾ, ಎಂ.ಸಿ. ಹಳ್ಳಿ, ತರೀಕೆರೆ ತಾಲ್ಲೂಕು.	40,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎ. ಮಲ್ಲೇಶಪ್ಪ, ಗ್ರಾಪಂಕಾ, ಚಿಕ್ಕಂಗಳ ಕಡೂರು ತಾಲ್ಲೂಕು.	13,30,619–00	ಇಲಾಖಾ ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿದೆ.
7. ದಕ್ಷಿಣ ಕನ್ನಡ	1 (ಜಿಲ್ಲಾ ಪಂಚಾಯತ್)	1. ಸಿ.ಕೆ. ದೇವದಾಸ, ಹಿಂದಿನ ಉಪ ಕೃಷಿ ನಿರ್ದೇಶಕರು, ಭೂ ಸಾರ ಸಂರಕ್ಷಣೆ, ಚಿಕ್ಕಮಗಳೂರು	1,68,500–00	ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದೋಷಾರೋಪಣ ಪಟ್ಟಿ ತಯಾರಿಸಿ, ಕೃಷಿ ಆಯುಕ್ತರಿಗೆ ಸಲ್ಲಿಸಲಾಗಿದೆ.
	3 (ತಾಲ್ಲೂಕು ಪಂಚಾಯತ್)	1. ಕೆ. ರಾಮಚಂದ್ರ, ಹಿಂ. ಕಾನಿಅ, ತಾ.ಪಂ. ಪುತ್ತೂರು	20,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ.ಎಸ್. ಮೋಹನದಾಸ,ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಳ್ತಂಗಡಿ ತಾಲ್ಲೂಕು.	10,000–00	ಇವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ದೋಷಾರೋಪಣ ಪಟ್ಟಿಯನ್ನು ತಯಾರಿಸಿ, ಜಲಾಯನ ಅಭಿವೃದ್ಧಿ ಇಲಾಖೆಯ ಆಯುಕ್ತರಿಗೆ ಸಲ್ಲಿಸಲಾಗಿದೆ.
		1. ಸುಬ್ರಹ್ಮಣ್ಯಂ, ಸಕಾಇಂ, ಪಂ.ರಾ.ಇಂ. ಉಪ. ವಿಭಾಗ, ಬಂಟ್ವಾಳ	ಅಧಿಕಾರ ದುರುಪಯೋಗ.	ಇವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು, ದೋಷಾರೋಪನ ಪಟ್ಟಿ ಜಾರಿಗೊಳಿಸಲಾಗಿದೆ.
	9 (ಗ್ರಾಮ ಪಂಚಾಯಿತಿ)	1. ಅಬೂಬಕ್ಕರ್, ಗ್ರಾಪಂಕಾ, ತೆಂಕಮಿಜಾರೋ, ಮಂಗಳೂರು ತಾಲ್ಲೂಕು.	96,200–00	ವಿಚಾರಣೆ ವರದಿ ಬಂದಿದ್ದು, ಪರಿಶೀಲಿಸಲಾಗುತ್ತಿದೆ.
		1. ರತ್ನಾವತಿ, ಗ್ರಾಪಂಕಾ, ನರೀಮೊಗರು.	5,28,027–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ದೀಪಕ ಮಾರುತಿ ನಾಯಕ್, ಗ್ರಾಪಂಕಾ, ಆಂಬ್ಲಮೊಗರು, ಮಂಗಳೂರು ತಾಲ್ಲೂಕು.	40,515–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಸದಾಶಿವ, ಗ್ರಾಪಂಕಾ, ಪೆರುವಾಯಿ, ಬಂಟ್ವಾಳ ತಾಲ್ಲೂಕು.	ಹಣ ದುರುಪಯೋಗ	ವಿಚಾರಣೆ ಕ್ರಮ ಕೈಗೊಳ್ಳಲಾಗುತ್ತಿದೆ.
		1. ಮಹಾಂತಯ್ಯ, ಗ್ರಾಪಂಕಾ, ಹರಿಹರಪಲ್ಲತಡಕ, ಸುಬ್ರಹ್ಮಣ್ಯ, ಸುಳ್ಯ ತಾಲ್ಲೂಕು.	ಅನಧಿಕೃತ ಗೈರು ಹಾಜರಿ.	ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಪರಪ್ಪ ಮಲ್ಲಪ್ಪ ಹಣಜಿ, ಗ್ರಾಪಂಕಾ, ಬಾಳಿಲಾ, ಸುಳ್ಯ ತಾಲ್ಲೂಕು.	ಅನಧಿಕೃತ ಗೈರು ಹಾಜರಿ.	ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಪದ್ಮನಾಭ ಸಾಲಿಯಾನ್, ಗ್ರಾಪಂಕಾ, ನೆರಿಯಾ, ಬೆಳ್ತಂಗಡಿ ತಾಲ್ಲೂಕು.	ಅಧಿಕಾರ ದುರುಪಯೋಗ.	ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಪಳಂಗಪ್ಪ, ಗ್ರಾಪಂಕಾ, ಮಣಚ.	ಅನಧಿಕೃತ ಗೈರು ಹಾಜರಿ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ತಾರಾನಾಥ್, ಗ್ರಾಪಂಕಾ, ಬಾಳ್ತಿಲ, ಬಂಟ್ವಾಳ ತಾಲ್ಲೂಕು.	ಅಧಿಕಾರ ದುರುಪಯೋಗ.	ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
8. ಹಾಸನ	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.			
	3 (ಗ್ರಾಮ ಪಂಚಾಯತಿ)	1. ಸಿ. ರಾಜಪ್ಪ, ಗ್ರಾಪಂಕಾ, ದೊಡ್ಡಬ್ಯಾಗತವಳ್ಳಿ.	152.91 ಕ್ವಿಂಟಾಲ್ ಆಹಾರಧಾನ್ಯ ದುರುಪಯೋಗ.	ತನಿಖೆ ನಡೆಯುತ್ತಿದೆ.
		1. ಎಂ.ಬಿ. ಪ್ರಶಾಂತಕುಮಾರ್, ಗ್ರಾಪಂಕಾ. ಹುಣಸವಳ್ಳಿ.	1,30,547–00	ತನಿಖೆ ನಡೆಯುತ್ತಿದೆ.
		1. ಪುಟ್ಟಸ್ವಾಮಿಗೌಡ, ಗ್ರಾಪಂಕಾ, ಹೆಗ್ಗಟ್ಟ.	2,97,253–00	ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ.

1	2	3	4	5
9. ಮಂಡ್ಯ	1 (ಜಿಲ್ಲಾ ಪಂಚಾಯತ್)	1. ಸಿ.ಎಂ. ಕೆಂಪೇಗೌಡ, ಹಿಂದಿನ ವಲಯ ಅರಣ್ಯಾಧಿಕಾರಿ, ಹಾಸನ.	ಹಣ ದುರುಪಯೋಗದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
	4 (ತಾಲ್ಲೂಕು ಪಂಚಾಯತ್)	1. ಅಣ್ಣಪ್ಪ, ಹಿಂ. ಕಾನಿಅ, ತಾ.ಪಂ. ಮದ್ದೂರು.	ಹಣ ದುರುಪಯೋಗದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಬಿ.ಹೆಚ್. ಶಿವಸ್ವಾಮಿ ಹಿಂ.ಕಾನಿಅ. ತಾ.ಪಂ. ನಾಗಮಂಗಲ ಮತ್ತು ಇತರ ಸಿಬ್ಬಂದಿ	ಅಕ್ಕಿ ದುರುಪಯೋಗದ ಆಪಾದನೆ	ಪ್ರಾಥಮಿಕ ತನಿಖೆಗಾಗಿ ಕರ್ನಾಟಕ ಲೋಕಾಯುಕ್ತಕ್ಕೆ ವಹಿಸಲಾಗಿದೆ.
		1. ವಿ.ಸಿ. ಸುನೀಲ ದ್ವಿ.ದ.ಸ. ಪಂ.ರಾ.ಇಂ.ಉ. ನಾಗಮಂಗಲ ಮತ್ತು ಇತರ ಸಿಬ್ಬಂದಿ. ವಿಭಾಗ, ಶ್ರೀರಂಗಪಟ್ಟಣ.	ಉಗ್ರಾಣದ ಸಾಮಗ್ರಿ ಮತ್ತು ಹಣ ದುರುಪಯೋಗದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಡಿ.ಕೆ. ಲಿಂಗರಾಜು, ಹಿಂ. ಕಾನಿಅ, ತಾ.ಪಂ. ಮಳವಳ್ಳಿ ಮತ್ತು ಇತರರು.	ಆಹಾರಧಾನ್ಯ ದುರುಪಯೋಗ	ತನಿಖೆ ನಡೆಯುತ್ತಿದೆ.
	3 (ಗ್ರಾಮ ಪಂಚಾಯತಿ)	1. ಸಿ. ಕೃಷ್ಣಯ್ಯ, ಗ್ರಾಪಂಕಾ ಟಿ.ಕೆ. ಹಳ್ಳಿ, ಮಳವಳ್ಳಿ ತಾಲ್ಲೂಕು	ಹಣ ದುರುಪಯೋಗದ ಆಪಾದನೆ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ. ವ್ಯಾಸರಾವ್, ಗ್ರಾಪಂಕಾ, ಟಿ.ಕೆ.ಹಳ್ಳಿ, ಮಳವಳ್ಳಿ ತಾಲ್ಲೂಕು.	ಹಣ ದುರುಪಯೋಗದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ. ಅಂಕೇಗೌಡ, ಗ್ರಾಪಂಕಾ, ಹೆಚ್. ಬಸಾಪುರ, ಮಳವಳ್ಳಿ ತಾಲ್ಲೂಕು.	ಅಕ್ಕಿ / ಹಣ ದುರುಪಯೋಗದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
10. ಮೈಸೂರು	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.			

1	2	3	4	5
	12 (ಗ್ರಾಮ ಪಂಚಾಯತ್)	1. ಶಿವಣ್ಣ, ಗ್ರಾಪಂಕಾ, ಆಲನಹಳ್ಳಿ, ಮೈಸೂರು ತಾಲ್ಲೂಕು	3,44,331–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ಅನಂತರಾಮ, ಗ್ರಾಪಂಕಾ, ಸೋಮೇಶ್ವರಪುರ, ಮೈಸೂರು ತಾಲ್ಲೂಕು.	2,88,698–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ನರಸಿಂಹರಾಜು, ಗ್ರಾಪಂಕಾ, ದೇಬೂರು, ನಂಜನಗೂಡು ತಾಲ್ಲೂಕು	3,86,032–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ನಾಗರಾಜು, ಗ್ರಾಪಂಕಾ, ಹೆಮ್ಮರಗಾಲ, ನಂಜನಗೂಡು ತಾಲ್ಲೂಕು	1,03,218–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ವೈ.ಎಸ್.ಕುಮಾರ್, ಗ್ರಾಪಂಕಾ, ತಗಡೂರು, ನಂಜನಗೂಡು ತಾಲ್ಲೂಕು	3,35,561–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ಜವರೇಗೌಡ, ಗ್ರಾಪಂಕಾ, ಮರಡೂರು/ ಹಿರಿಕ್ಯಾತನಹಳ್ಳಿ, ಹುಣಸೂರು ತಾಲ್ಲೂಕು.	55,61,928–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ಮರಿಗೌಡ, ಗ್ರಾಪಂಕಾ, ಕರ್ಣಕುಪ್ಪೆ, ಹುಣಸೂರು ತಾಲ್ಲೂಕು.	1,40,000–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ಎನ್.ಸಿ.ಸ್ವಾಮಿ, ಗ್ರಾಪಂಕಾ, ಬ್ಯಾಡರಹಳ್ಳಿ, ಕೆ.ಆರ್. ನಗರ ತಾಲ್ಲೂಕು	9,122–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ಅನಂತರಾಮಾಚಾರ, ಗ್ರಾಪಂಕಾ, ನರಚನಹಳ್ಳಿ, ಕೆ.ಆರ್. ನಗರ ತಾಲ್ಲೂಕು	12,78,000–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ನಂಜುಂಡಸ್ವಾಮಿ, ಗ್ರಾಪಂಕಾ, ದೊಡ್ಡ ಬ್ಯಾಲಾಳು, ಪಿರಿಯಾಪಟ್ಟಣ ತಾಲ್ಲೂಕು.	24,241–00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

1	2	3	4	5
		1. ಗ್ರಾಪಂಕಾ, ಅಂತರಸಂತೆ, ಹೆಚ್.ಡಿ. ಕೋಟೆ ತಾಲ್ಲೂಕು	33,000—00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
		1. ಗ್ರಾಪಂಕಾ, ಕಲ್ಲಂಬಾಳು, ಹೆಚ್.ಡಿ.ಕೋಟೆ ತಾಲ್ಲೂಕು	74,805—00	ವಿಚಾರಣೆ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
11. ರಾಯಚೂರು	2 (ಜಿಲ್ಲಾ ಪಂಚಾಯಿತಿ)	1. ಅಮೃತಕುಮಾರ್ ಸಾಲಂಕಿ, ಕಿ.ಇಂ. ಪಂ.ರಾ.ಇಂ. ವಿಭಾಗ, ರಾಯಚೂರು	–	ಲಂಚನಿರ್ಮೂಲನಾ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ತನಿಖಾ ವರದಿ ಬರುವುದು ಬಾಕಿ ಇದೆ.
		1. ಅಮೃತಕುಮಾರ್ ಸಾಲಂಕಿ, ಕಿ.ಇಂ. ಪಂ.ರಾ.ಇಂ. ವಿಭಾಗ, ರಾಯಚೂರು	10,95,000—00	ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಯನ್ನು ದಾಖಲು ಮಾಡಲಾಗಿದೆ.
	2 (ತಾಲ್ಲೂಕು ಪಂಚಾಯಿತಿ)	1. ಬಿ.ಓಂಕಾರಮೂರ್ತಿ, ಕಿ.ಇಂ. ತಾ.ಪಂ. ಸಿಂಧನೂರು.	2,08,333—00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್. ಜವರಯ್ಯ, ಹಿಂ. ಕಾನಿಅ, ತಾ.ಪಂ ಲಿಂಗಸಗೂರು 2. ಚಂದ್ರಶೇಖರ್, ಕಿ.ಇಂ. 3. ಎಸ್.ಎಂ. ದ್ಯಾಮಣ್ಣ, ಕಿ.ಇಂ. 4. ಓಂಕಾರಮೂರ್ತಿ, ಕಿ.ಇಂ.	4,47,368—00	ವಿಚಾರಣಾಧಿಕಾರಿಗಳನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
	10 (ಗ್ರಾಮ ಪಂಚಾಯಿತಿ)	1. ಬಸವರಾಜ ಪಾಟೀಲ್, ಗ್ರಾಪಂಕಾ, ಸಿರವಾರ	200 ಚೀಲ ಅಕ್ಕಿ ಅಕ್ರಮ ಸಾಗಣೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಶಂಕ್ರಪ್ಪ ಮ್ಯಾಗೇರಿ, ಹಟ್ಟಿ	ರೂ. 5,00 ಲಕ್ಷ ಬೆಲೆಯ ಆಹಾರಧಾನ್ಯ ಲೆಕ್ಕಪತ್ರ ಒಪ್ಪಿಸದಿರುವ ಬಗ್ಗೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ

1	2	3	4	5
		1. ಹನುಮಂತಪ್ಪ ಉಪ್ಪಾರ, ಗ್ರಾಪಂಕಾ, ಕ್ಯಾದಿಗೇರಾ.	70,772–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ರಾಘವೇಂದ್ರರಾವ್ ಕುಲಕರ್ಣಿ, ಗ್ರಾಪಂಕಾ, ಗಬ್ಬೂರು.	1,47,000–00	ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ.
		1. ಹೆಚ್. ಶಿವಣ್ಣ, ಗ್ರಾಪಂಕಾ, ಪಲಕನಮರಡಿ.	3,41,000–00	ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ.
		1. ಶಂಕ್ರಪ್ಪ ಅಕ್ಕಸಾಲಿ, ಗ್ರಾಪಂಕಾ, ಬಾಗಲವಾಡ	10,000–00	ಆರೋಪ ಪಟ್ಟಿ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಮೊಯಿನುದ್ದೀನ್, ಗ್ರಾಪಂಕಾ, ಕಮಲಾಪೂರ	80,000–00	ವಿಚಾರಣಾಧಿಕಾರಿಗಳನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಎ. ವಿರೂಪಾಕ್ಷಿ, ಗ್ರಾಪಂಕಾ, ಹಿರೇಕೊಟ್ನೇಕಲ್	1,83,370–00	ಇವರಿಗೆ ಆರೋಪ ಪಟ್ಟಿಗಳನ್ನು ಜಾರಿ ಮಾಡಲಾಗಿದೆ.
		1. ಕುಮಾರಿ ಖಮರಬೇಗಂ, ಗ್ರಾಪಂಕಾ, ಮಿಟ್ಟಿಮಲಕಾಪುರ.	4,000–00	ಲಂಚ ನಿರ್ಮೂಲನಾ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.
		1. ವಿಶ್ವನಾಥ್ ರೆಡ್ಡಿ, ಗ್ರಾಪಂಕಾ, ಸುಂಕೇಶ್ವರ,	4,848–00	ಆರೋಪ ಪಟ್ಟಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
12. ಉತ್ತರ ಕನ್ನಡ	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.			

1	2	3	4	5
	7 (ಗ್ರಾಮ ಪಂಚಾಯತಿ)	1. ಎಸ್.ಬಿ. ಗೌಡ, ಗ್ರಾಪಂಕಾ, ದೇ.ಹಳ್ಳಿ, ಯಲ್ಲಾಪುರ ತಾಲ್ಲೂಕು.	1,14,000—00	ಆಪಾದನೆಗೊಳಗಾದ ಹಣವನ್ನು ಸ್ವಚ್ಛಗ್ರಾಮಯೋಜನೆ ಖಾತೆಗೆ ಜಮಾ ಮಾಡಲಾಗಿದೆ. ಹಾಗೂ ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಎಲ್. ದಾನ್ವೇನವರ, ಗ್ರಾಪಂಕಾ, ಹುನಗುಂದ, ಮುಂಡಗೋಡ ತಾಲ್ಲೂಕು.	4,49,255—00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಶಶಿಕಲ ಎಚ್. ಭಟ್ ಗ್ರಾಪಂಕಾ ಹೊಸಾಕುಳಿ, ಹೊನ್ನಾವರ ತಾಲ್ಲೂಕು	ಹಣ ದುರುಪಯೋಗ ಆಪಾದನೆ	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ವಿ.ಭಟ್, ಗ್ರಾಪಂಕಾ, ಕೋಣಾರ, ಭಟ್ಕಳ ತಾಲ್ಲೂಕು.	ಹಣ ದುರುಪಯೋಗ ಮತ್ತು ಅನುದಾನ ಮಾರ್ಗಪಲ್ಲಟದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ದೇವಪ್ಪ ಅನಂತನಾಯಕ್, ಗ್ರಾಪಂಕಾ, ಬೆಳಕೆ, ಭಟ್ಕಳ ತಾಲ್ಲೂಕು.	ಅಕ್ರಮ ಹಾಗೂ ಅವ್ಯವಹಾರ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಎಸ್. ಹೆಬ್ಬಾರ್, ಗ್ರಾಪಂಕಾ, ಯಲ್ವಡಿಕಾವೂರ, ಭಟ್ಕಳ ತಾಲ್ಲೂಕು.	ಅಕ್ರಮ ಹಾಗೂ ಅವ್ಯವಹಾರ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಸಿ.ಎಚ್. ಹಿರೇಮಠ್, ಗ್ರಾಪಂಕಾ ಪಾಳಾ, ಮುಂಡಗೋಡ ತಾಲ್ಲೂಕು.	ಅಕ್ರಮ ಹಾಗೂ ಅವ್ಯವಹಾರ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
13. ಚಾಮರಾಜನಗರ.	ಜಿಲ್ಲಾ ಪಂಚಾಯತ್‌ನಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.			

1	2	3	4	5
	2 (ತಾಲ್ಲೂಕು ಪಂಚಾಯಿತಿ)	1. ಕೆ. ಶಿವರಾಮೇಗೌಡ, ಹಿಂದಿನ ಕಾನಿಅ, ತಾ.ಪಂ. ಚಾಮರಾಜನಗರ 2. ರಾಜಶೇಖರ್, ಲೆಕ್ಕಾಧೀಕ್ಷಕರು 3. ವೆಂಕಟೇಶ್, ಕಿ.ಇಂ. 4. ಪಾಂಡುರಂಗ ನಾಯಕ್, ಕಿ.ಇಂ. 5. ಗೋಪಾಲಕೃಷ್ಣ, ಕಿ.ಇಂ. 6. ಪುಟ್ಟಸ್ವಾಮಿ, ಪ್ರ.ದ.ಸ. 7. ಜೆ.ಬಿ. ಮಹೇಶ್‌ಬಾಬು ದ್ವಿ.ದ.ಸ.	ಬರಪರಿಹಾರ ಯೋಜನೆ ಆಪಾದಿತರಿಗೆ ಮೊದಲನೇ ಕಾರಣ ಬಾಬ್ತು 562-75 ಕ್ವಿಂಟಾಲ್ ಕೇಳುವ ನೋಟೀಸ್ ಜಾರಿ ಮಾಡಿದ್ದು, ಅಕ್ಕಿಯ ದುರುಪಯೋಗ. ವಿಚಾರಣೆ ಪ್ರಕ್ರಿಯೆ ಪ್ರಾರಂಭವಾಗಿದೆ.	
		1. ಶಿವಾನಂದ ಶೀಕಲವಾಡಿ, ಪಂಚಾಯಿತಿ ವಿಸ್ತರಣಾಧಿಕಾರಿ, ಚಾಮರಾಜನಗರ.	1,42,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
	9 (ಗ್ರಾಮ ಪಂಚಾಯಿತಿ)	1. ಆರ್. ಕೆಂಪಯ್ಯ, ಗ್ರಾಪಂಕಾ, ಹೊಂಗನೂರು, ಚಾಮರಾಜನಗರ ತಾಲ್ಲೂಕು.	4,15,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ಚಿಕ್ಕಮಾದಯ್ಯ, ಗ್ರಾಪಂಕಾ, ಶಿವಪುರ, ಚಾಮರಾಜನಗರ ತಾಲ್ಲೂಕು.	76,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ವೈ.ಎನ್. ರಾಮಪ್ರಸಾದ್, ಗ್ರಾಪಂಕಾ, ಪೊನ್ನಾಚಿ ಕೊಳ್ಳೇಗಾಲ ತಾಲ್ಲೂಕು.	80,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ಎಂ. ಸಿದ್ದಯ್ಯ, ಗ್ರಾಪಂಕಾ, ಧನಗೆರೆ, ಕೊಳ್ಳೇಗಾಲ ತಾಲ್ಲೂಕು.	1,71,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ರಾಮಚಂದ್ರಪ್ಪ ಸತ್ಯಪ್ಪ ಮಾನೆ, (ನಿಧನ) ಗ್ರಾಪಂಕಾ, ಮಲಯಮಹಾದೇಶ್ವರ ಬೆಟ್ಟ ಕೊಳ್ಳೇಗಾಲ ತಾಲ್ಲೂಕು.	4,51,000-00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ

1	2	3	4	5
		1. ಶಿವರಾಜಪ್ಪ, ಗ್ರಾಪಂಕಾ, ಅಣ್ಣೂರು ಗುಂಡ್ಲುಪೇಟೆ ತಾಲ್ಲೂಕು	22,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ಟಿ.ಜಿ. ಬೇವಿನಹಳ್ಳಿ, ಗ್ರಾಪಂಕಾ, ಭೀಮನಬೀಡು, ಗುಂಡ್ಲು ಪೇಟೆ ತಾಲ್ಲೂಕು	1,50,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ಎಲ್. ನಾಗೇಗೌಡ, ಗ್ರಾಪಂಕಾ, ಚಿಕ್ಕಾಟಿ, ಗುಂಡ್ಲುಪೇಟೆ ತಾಲ್ಲೂಕು.	97,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ಎನ್. ನಿಂಗಯ್ಯ, ಗ್ರಾಪಂಕಾ, ಗೌಡಹಳ್ಳಿ, ಯಳಂದೂರು ತಾಲ್ಲೂಕು.	1,70,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
14. ದಾವಣಗೆರೆ	5 (ಜಿಲ್ಲಾ ಪಂಚಾಯಿತಿ)	1. ಬಿ.ಕೆ. ಮಂಳಗಿ, ಪ್ರದ. ಉಗ್ರಾಣ ಪಾಲಕ (ನಿವೃತ್ತ) ಪಂ.ರಾ.ಇಂ. ವಿಭಾಗ, ಹರಪ್ಪನಹಳ್ಳಿ	20,79,000–00	ಇವರ ನಿವೃತ್ತಿ ವೇತನ ಪಿಂಚಣಿ, ಮತ್ತು ಡಿ.ಸಿ.ಆರ್.ಜಿ. ಯಿಂದ ವಸೂಲು ಮಾಡಲು ಆದೇಶವಾಗಿರುತ್ತದೆ.
		1. ವೈ. ರುದ್ರಮುನಿ, ಕಾಪಾಇಂ. ನಿವೃತ್ತ, ಪಂ.ಇಂ. ವಿಭಾಗ	10,39,000–00	ಇವರ ನಿವೃತ್ತಿ ವೇತನ ಪಿಂಚಣಿ, ಮತ್ತು ಡಿ.ಸಿ.ಆರ್.ಜಿ. ಯಿಂದ ವಸೂಲು ಮಾಡಲು ಆದೇಶವಾಗಿರುತ್ತದೆ.
		1. ಎಸ್.ಎ. ಪಾಟೀಲ, ಕಾಪಾಇಂ. (ನಿಧನ), ಪಂ.ರಾ.ಇಂ. ವಿಭಾಗ, ಹರಪನಹಳ್ಳಿ.	10,39,000–00	ಇವರ ನಿವೃತ್ತಿ ವೇತನ ಪಿಂಚಣಿ, ಮತ್ತು ಡಿ.ಸಿ.ಆರ್.ಜಿ. ಯಿಂದ ವಸೂಲು ಮಾಡಲು ಆದೇಶವಾಗಿರುತ್ತದೆ.
		1. ಕೋದಂಡರಾಮಪ್ಪ, ಪ್ರ.ದ. ಉಗ್ರಾಣ ಪಾಲಕ, ಪಂ.ರಾ.ಉ.ಇಂ. ವಿಭಾಗ, ಹರಪನಹಳ್ಳಿ.	51–330–00	ಇವರ ನಿವೃತ್ತಿ ವೇತನ ಪಿಂಚಣಿ, ಮತ್ತು ಡಿ.ಸಿ.ಆರ್.ಜಿ. ಯಿಂದ ವಸೂಲು ಮಾಡಲು ಆದೇಶವಾಗಿರುತ್ತದೆ.
		1. ಎನ್.ನಾಗೇಶ್, ದ್ವಿದಸ. ಆರೋಗ್ಯ ಇಲಾಖೆ.	3,45,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.

1	2	3	4	5
	ತಾಲ್ಲೂಕು ಪಂಚಾಯಿತಿಯಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ.	–	–	–
	12 (ಗ್ರಾಮ ಪಂಚಾಯಿತಿ)	1. ಎಸ್.ಎಸ್. ಕಂಬಾರ್, ಗ್ರಾಪಂಕಾ, ಕೂಲಂಬಿ.	2,37,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ
		1. ಎಸ್. ರೇವಣಸಿದ್ದಪ್ಪ, ಗ್ರಾಪಂಕಾ, ಸಂತೇಬೆನ್ನೂರು.	1,65,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಬಿ. ನಾಗೇಂದ್ರಪ್ಪ, ಗ್ರಾಪಂಕಾ, ಗುಡ್ಡದಕುಮಾರನ ಹಳ್ಳಿ	2,25,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಆರ್. ನಾಗಪ್ಪ, ಪ್ರದಸ, ಶಿಶು ಅಭಿವೃದ್ಧಿ, ಯೋಜನಾಧಿಕಾರಿ ಕಛೇರಿ, ಹೊನ್ನಾಳಿ	1,600–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಕೆ. ಉಮಾದೇವಿ, ಗ್ರಾಪಂಕಾ, ಬೆಳಗುತ್ತಿ	1,35,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಬಿ. ಲಕ್ಷ್ಮೀಪತಿ, ಗ್ರಾಪಂಕಾ, ದೋಣಿಹಳ್ಳಿ,	2,25,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಕೆ. ರಾಜೇಂದ್ರಪ್ರಸಾದ್, ಗ್ರಾಪಂಕಾ, ತಿಮ್ಲಾಪುರ.	3,70,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಹೆಚ್. ಹೊನ್ನಪ್ಪ, ಗ್ರಾಪಂಕಾ, ಸಂತೇಬೆನ್ನೂರು.	9,70,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಜಿ. ಸಿದ್ದಪ್ಪ, ಗ್ರಾಪಂಕಾ, ಬಾನುವಳ್ಳಿ,	90,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಎನ್.ಎಂ. ಚಂದ್ರಪ್ಪ, ಗ್ರಾಪಂಕಾ, ಕಾಕನೂರು	70,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಶಂಭಣ್ಣ ಬ್ಯಾಹಟ್ಟಿ, ಗ್ರಾಪಂಕಾ, ಅಣಜಿಗೆರೆ.	1,10,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
		1. ಎಸ್.ಎಂ. ವೀರೇಶ್, ಗ್ರಾಪಂಕಾ, ತೊಗರಿಕಟ್ಟೆ.	6,000–00	ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.
15. ಹಾವೇರಿ	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯಿತಿಯಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ.	–	–	–

1	2	3	4	5
	5 (ಗ್ರಾಮ ಪಂಚಾಯಿತಿ)	1. ಬಿ.ಸಿ. ಪಾಟೀಲ, ಗ್ರಾಪಂಕಾ, ಹಿರೇಬೆಂಡಿಗೇರಿ, ಶಿಗ್ಗಾಂವ್ ತಾಲ್ಲೂಕು	64,177–00	ದೋಷಾರೋಪಣ ಪಟ್ಟಿ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಎ.ಎನ್. ಕಮ್ಮಾರ್, ಗ್ರಾಪಂಕಾ, ಬಸಾಮರ, ಹಾವೇರಿ ತಾಲ್ಲೂಕು	26,188–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ವಿ.ಎಂ. ಪಾಟೀಲ, ಗ್ರಾಪಂಕಾ, ಅರಳೀಕಟ್ಟೆ ಹಿರೇಕೆರೂರು ತಾಲ್ಲೂಕು.	12,382–00	ದೋಷಾರೋಪಣ ಪಟ್ಟಿ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಎನ್.ಸಿ.ಪಾಟೀಲ, ಗ್ರಾಪಂಕಾ, ಹೂವಿನಶಿಗ್ಗಿ, ಸವಣೂರು ತಾಲ್ಲೂಕು.	1,31,465–00	ಇಲಾಖಾ ವಿಚಾರಣಾ ಪ್ರಗತಿಯಲ್ಲಿದೆ.
		1. ವಿ.ಬಿ. ನಂದಿಹಳ್ಳಿ, ಗ್ರಾಪಂಕಾ, ಕಲ್ಲೇದೇವರು, ಬ್ಯಾಡಗಿ ತಾಲ್ಲೂಕು.	2,88,806–00	ದೋಷಾರೋಪಣ ಪಟ್ಟಿ ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
16. ಕೊಪ್ಪಳ	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯಿತಿಯಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ.	–	–	–
	3 (ಗ್ರಾಮ ಪಂಚಾಯಿತಿ)	1. ಚೆನ್ನವೀರಸ್ವಾಮಿ, ಗ್ರಾಪಂಕಾ, ಬೇವೂರ (ಪ್ರಭಾರ), ಕುದುರೆಮೂತಿ.	3,36,885–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ. ವಾಗೀಶ್, ಹಿಂ. ಗ್ರಾಪಂಕಾ, ಬೆನಕನಾಳ ಕುಷ್ಟಗಿ ತಾಲ್ಲೂಕು.	ವಿವಿಧ ಯೋಜನೆಗಳಲ್ಲಿ ಹಣ ದುರುಪಯೋಗ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಶರಣಬಸವಸ್ವಾಮಿ, ಹಿಂ. ಗ್ರಾಪಂಕಾ, ಬೆಟಗೇರಿ, ಕೊಪ್ಪಳ ತಾಲ್ಲೂಕು.	35,865–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
17. ಉಡುಪಿ	1 (ಜಿಲ್ಲಾ ಪಂಚಾಯತ್)	1. ಸಿ.ಅನಂತರಾಮು, ಹಿಂ. ಕಾಪಾಇಂ. ಪಂ.ರಾ.ಇಂ. ವಿಭಾಗ ಮತ್ತು ಉಪ ವಿಭಾಗ, ಉಡುಪಿ.	2002–03ನೇ ಸಾಲಿನಲ್ಲಿ 32 ಕಾಮಗಾರಿಗಳಲ್ಲಿ ಅವ್ಯವಹಾರವಾಗಿರುವು.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		2. ಟಿ.ಆರ್. ಶಿವರಾಮು, ಹಿಂ. ಸ.ಕಾಇಂ. 3. ಟಿ.ಜಿ. ತಿಮ್ಮೇಗೌಡ, ಹಿಂ. ಸಕಾಇಂ. 4. ಸೂರ್ಯನಾರಾಯಣ, ಹಿಂ.ಕಿ.ಇಂ. 5. ರಘುರಾಮ ಶೆಟ್ಟಿ, ಹಿಂ.ಕಿ.ಇಂ.	2002–03ನೇ ಸಾಲಿನಲ್ಲಿ 32 ಕಾಮಗಾರಿಗಳಲ್ಲಿ ಅವ್ಯವಹಾರವಾಗಿರುವುದು	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
	ತಾಲ್ಲೂಕು ಪಂಚಾಯತಿಯಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ.			
	5 (ಗ್ರಾಮ ಪಂಚಾಯಿತಿ)	1. ಯು.ಸದಾಶಿವ, ಗ್ರಾಪಂಕಾ, ಹಾರಾಡಿ,	15,000–00	ದುರುಪಯೋಗಪಡಿಸಿಕೊಂಡ ಹಣ ವಸೂಲಾತಿಗೆ ಆದೇಶವಾಗಿದೆ.
		1. ಭೋಜರಾಜ ಶೆಟ್ಟಿ, ಗ್ರಾಪಂಕಾ, ಕೋಟೇಶ್ವರ	48,878–00	ದುರುಪಯೋಗಪಡಿಸಿಕೊಂಡ ಹಣವನ್ನು ಪಂಚಾಯಿತಿಗೆ ಜಮೆ ಮಾಡಿರುವುದರಿಂದ ವಾಗ್ದಂಡನೆ ವಿಧಿಸಿ, ಪ್ರಕರಣ ಮುಕ್ತಾಯಗೊಳಿಸಿದೆ.
		1. ನಿರಂಜನ ಹರಿರಾಮ್, ಗ್ರಾಪಂಕಾ,	1,50,000–00	ಬಡ್ಡಿ ಸಮೇತ ಸರ್ಕಾರಕ್ಕೆ ಜಮಾ ಮಾಡಿರುವುದರಿಂದ ಪ್ರಕರಣ ಮುಕ್ತಾಯಗೊಳಿಸಿದೆ.
		1. ಎಸ್. ಸಂಜೀವ, ಗ್ರಾಪಂಕಾ, ಪಡುಬಿದರೆ.	ಹಣ ದುರುಪಯೋಗದ ಆಪಾದನೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಯು. ಸದಾಶಿವ, ಗ್ರಾಪಂಕಾ, ಕಳತ್ತೂರು.	3,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
18. ಧಾರವಾಡ	1 (ಜಿಲ್ಲಾ ಪಂಚಾಯಿತಿ)	1. ಮಹ್ಮದ್ ಸಕ್ಸೇನ, ಹಿಂ. ಕೃಷಿ ಸಹಾಯಕ	7,070-00	ಆಪಾದಿತರ ನಿವೃತ್ತಿ ಸೌಲಭ್ಯಗಳಿಂದ ವಸೂಲಿ ಮಾಡಿ, ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.
	1 (ತಾಲ್ಲೂಕ ಪಂಚಾಯಿತಿ)	1. ಎಂ.ಜಿ. ಶಿವಲಿಂಗಪ್ಪ, ಕಿ.ಇಂ. ತಾ.ಪಂ. ಹುಬ್ಬಳ್ಳಿ 2. ಎಂ.ಪಿ. ಹಿರೇಮಠ ಹಿಂ. ಕಾನಿಅ 3. ವೈ.ಎನ್. ಬೋವಿ. ಹಿಂ. ಕಿ.ಇಂ.	18,53,000-00	1. ಶ್ರೀ ಎಂ.ಜಿ. ಶಿವಲಿಂಗಪ್ಪ ಇವರಿಂದ 4.17 ಲಕ್ಷ ಹಣ ವಸೂಲು ಮಾಡಲು ಹಾಗೂ ಅವರ ನಿವೃತ್ತಿ ವೇತನದಿಂದ ಮಾಸಿಕ ಒಂದು ಸಾವಿರದಂತೆ ಒಂದು ವರ್ಷದವರೆಗೆ ತಡೆಹಿಡಿಯುವ ದಂಡನೆ ವಿಧಿಸಿದೆ.
		4.17		2. ಶ್ರೀ ಎಂ.ಪಿ. ಹಿರೇಮಠ, ಇವರಿಂದ ಲಕ್ಷ ಹಣ ವಸೂಲು ಮಾಡಲು ಹಾಗೂ ಅವರ ನಿವೃತ್ತಿ ವೇತನದಿಂದ ಮಾಸಿಕ ಒಂದು ಸಾವಿರದಂತೆ ಒಂದು ವರ್ಷದವರೆಗೆ ತಡೆಹಿಡಿಯುವ ದಂಡನೆ ವಿಧಿಸಿದೆ.
				3. ವೈ.ಎನ್. ಬೋವಿ ಇವರಿಂದ ರೂ. 19,000-00 ಗಳನ್ನು ವಸೂಲು ಮಾಡುವ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.

1	2	3	4	5
	13 (ಗ್ರಾಮ ಪಂಚಾಯಿತಿ)	1. ಎಸ್.ಕೆ. ದೀಕ್ಷಿತ್, ಹಿಂ. ಗ್ರಾಪಂಕಾ, ಹರಿಕೊಪ್ಪ, ಧಾರವಾಡ ತಾಲ್ಲೂಕು.	1,79,977–00	ಸರ್ಕಾರಿ ಸೇವೆಯಿಂದ ವಜಾ ಮಾಡಿದ್ದು, ದುರುಪಯೋಗವಾದ ಮೊತ್ತವನ್ನು ಶೇ.12ರ ಬಡ್ಡಿ ಸಮೇತ ವಸೂಲಾತಿಗೆ ಆದೇಶಿಸಿದೆ.
		1. ಎಸ್.ಕೆ. ದೀಕ್ಷಿತ್, ಹಿಂ. ಗ್ರಾಪಂಕಾ, ಮತ್ತಿಗಟ್ಟಿ, ಕುಂದಗೋಳ ತಾಲ್ಲೂಕು.	42,708–00	ದುರುಪಯೋಗದ ಮೊತ್ತ ವಸೂಲಿ ಮಾಡುವ ದಂಡನೆ ವಿಧಿಸಿದೆ.
		1. ಎಸ್.ಕೆ.ದೀಕ್ಷಿತ್, ಹಿಂ. ಗ್ರಾಪಂಕಾ, ಕೋಟೂರ ಧಾರವಾಡ ತಾಲ್ಲೂಕು.	57,862–00	ಸರ್ಕಾರಿ ಸೇವೆಯಿಂದ ವಜಾ ಮಾಡಿರುವುದರಿಂದ ನಷ್ಟದ ಮೊತ್ತವನ್ನು ವಸೂಲಿ ಮಾಡಲು ಆದೇಶಿಸಿದೆ.
		1. ಆರ್.ಹೆಚ್. ಕಿಲ್ಲೇದಾರ, ಹಿಂ. ಗ್ರಾಪಂಕಾ, ಬೂದಿಹಾಳ, ಕುಂದಗೋಳ ತಾಲ್ಲೂಕು	30,189–00	ವಿಚಾರಣೆಯ ನಂತರ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಾಗುವಂತೆ ತಡೆಹಿಡಿಯುವ ದಂಡನೆ ವಿಧಿಸಲಾಗಿದೆ.
		1. ಹೆಚ್.ಡಿ. ಕೊಂಬಳೆ, ಹಿಂ. ಗ್ರಾಪಂಕಾ, ಮಾದನಭಾವಿ, ಧಾರವಾಡ ತಾಲ್ಲೂಕು	2,31,119–00	ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ, ದುರುಪಯೋಗದ ಮೊತ್ತವನ್ನು ಅವರ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡುವಂತೆ ದಂಡನೆ ವಿಧಿಸಿದೆ.
		1. ಎಫ್.ಎಂ. ಧಾರವಾಡ, ಗ್ರಾಪಂಕಾ, ಕನಕೂರ, ಧಾರವಾಡ ತಾಲ್ಲೂಕು	1,76,205–00	ಕೆ.ಎ.ಟಿ. ಆದೇಶದನ್ವಯ ಮರುವಿಚಾರಣೆ ಮಾಡಲು ವಿಚಾರಣಾಧಿಕಾರಿಗಳನ್ನು ನೇಮಿಸಿದೆ.

1	2	3	4	5
		1. ಹೆಚ್.ಎ. ಬೆಳಗಲಿ, ಹಿಂ. ಗ್ರಾಪಂಕಾ, ಕೂಬಿಹಾಳ ಕುಂದಗೋಳ ತಾಲ್ಲೂಕು	1,55,371–00	ವಿಚಾರಣೆ ನಂತರ ಇವರಿಂದ ರೂ. 50,000,00 ವಸೂಲಿ ಮಾಡಲು ಹಾಗೂ ಇವರ ವೇತನವನ್ನು 3 ಹಂತ ಕೆಳಗಿಳಿಸಿ ಆದೇಶಿಸಲಾಗಿದೆ.
		1. ಹೆಚ್.ಎ. ಬೆಳಗಲಿ, ಹಿಂ. ಗ್ರಾಪಂಕಾ, ಕೂಬಿಹಾಳ ಕುಂದಗೋಳ ತಾಲ್ಲೂಕು.	1,05,371–00	ವಿಚಾರಣೆ ನಂತರ ಆಪಾದಿತರಿಂದಲೂ ತಲಾ ರೂ. 52,685,50 ಗಳಂತೆ ವಸೂಲು ಮಾಡುವ ಹಾಗೂ ಅವರ 2 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಾಗದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.
		1. ಸಿ.ಎಸ್. ಅಂಗಡಿ, ಗ್ರಾಪಂಕಾ, ಹಿಂ. (ಪ್ರಭಾರ) ಗ್ರಾಪಂಕಾ, ಕೂಬಿಹಾಳ, ಕುಂದಗೋಳ ತಾಲ್ಲೂಕು		ವಿಚಾರಣೆ ನಂತರ, ರೂ. 15,000–00 ವಸೂಲು ಮಾಡುವ ಹಾಗೂ ಇವರ ಒಂದು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಾಗದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.
		1. ಸಿ.ಎಸ್. ಅಂಗಡಿ, ಗ್ರಾಪಂಕಾ, ಭೂತರ್ಲಘಟ್ಟ, ಕುಂದಗೋಳ ತಾಲ್ಲೂಕು	ಹಣಕಾಸಿನ ದುರುಪಯೋಗ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಬಿ.ಎಲ್. ಗೋನಾಳ, ಹಿಂ. ಗ್ರಾಪಂಕಾ, ಛಬ್ಬಿ,	ಹಣಕಾಸಿನ ದುರುಪಯೋಗ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಐ.ಎಸ್. ಗುಗ್ಗರಿ, ಗ್ರಾಪಂಕಾ, ಮುತ್ತಗಿ.	86,934–00	ವಿಚಾರಣೆಯ ನಂತರ ದುರುಪಯೋಗದ ಮೊತ್ತ ವಸೂಲು ಮಾಡಲು ಹಾಗೂ ಇವರ ಒಂದು ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮವಾಗದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.

1	2	3	4	5
		1. ಬಿ.ಎಲ್. ಗೋನಾಳ, ಹಿಂ.ಗ್ರಾಪಂಕಾ, ಛಬ್ಬಿ,	81,939–00	ವಿಚಾರಣೆಯ ನಂತರ ದುರುಪಯೋಗದ ಮೊತ್ತ ವಸೂಲು ಮಾಡಲು ಹಾಗೂ ಇವರ ಒಂದು ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮವಾಗದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.
19. ಬಾಗಲಕೋಟೆ	1 (ಜಿಲ್ಲಾ ಪಂಚಾಯತ್)	1. ಬಿ.ಎಂ. ಹೂನೂರ, ಸಕಾಇಂ. ಜಿಪಂಇಂ ಉಪ ವಿಭಾಗ, ಬೀಳಗಿ. 2. ಆರ್.ವಿ.ಕಟ್ಟಿ, ದ್ವಿ.ದ.ಸ.	12,11,072–00	
	1 (ತಾಲ್ಲೂಕು ಪಂಚಾಯತ್)	1. ಪಿ.ಬಿ. ನಾಟೀಕಾರ, ಪ್ರ.ದ.ಸ. ತಾ.ಪಂ. ಹುನಗುಂದ.	ಹಣ ದುರುಪಯೋಗ	ಹಣ ದುರುಪಯೋಗ ಮೊತ್ತದ ವಸೂಲಾತಿಗೆ ಆದೇಶಿಸಲಾಗಿದೆ.
20. ಗದಗ	1 (ಜಿಲ್ಲಾ ಪಂಚಾಯತ್)	1. ಎಂ.ವಿ. ರಾಜಶೇಖರ್, ಸಕಾಇಂ. ಪಂ.ರಾಇಂ ಉಪ ವಿಭಾಗ, ಮುಂಡರಗಿ.	1,81,625–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
	1 (ತಾಲ್ಲೂಕು ಪಂಚಾಯತ್)	1. ವೈ.ಬಿ. ಕುದರಿ, ಕಿ.ಇಂ. ತಾ.ಪಂ. ಶಿರಹಟ್ಟಿ.	14,950,–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
	5 (ಗ್ರಾಮ ಪಂಚಾಯಿತಿ)	1. ಎಂ.ಬಿ. ಮುಲ್ಲಾನವರ, ಗ್ರಾಪಂಕಾ, ಗುಡ್ಡಿ, ಶಿರಹಟ್ಟಿ ತಾಲ್ಲೂಕು.	14,950–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ವಿ.ಐ. ಚಿತ್ರಾಲು, ಗ್ರಾಪಂಕಾ, ಸಿಂಗಟಲೂರು, ಮುಂಡರಗಿ ತಾಲ್ಲೂಕು.	1,11,423–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಸ್.ಸಿ. ಕೊಡ್ಲಿ, ಗ್ರಾಪಂಕಾ. ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು.	35,500–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎ.ಬಿ. ಹಕ್ಕಿ, ಗ್ರಾಪಂಕಾ, ಹಾಳಕೇರಿ, ರೋಣ ತಾಲ್ಲೂಕು.	44,600–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

1	2	3	4	5
		1. ಕೆ.ಆರ್. ಕುಲಕರ್ಣಿ, ಗ್ರಾಪಂಕಾ, ಗದಗ ತಾಲ್ಲೂಕು.	10,600—00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
21. ಬೀದರ್	9 (ಜಿಲ್ಲಾ ಪಂಚಾಯತ್)	1. ಅಮೃತ ಬೆಟ್ಟದ, ಹಿಂ. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್.	ಅಧಿಕಾರಿ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಶಮಿಯುದ್ದೀನ್, ಕಿ.ಇಂ. ಸೀನಿಯರ್ ಜುಆಲಾಜಿಸ್ಟ್ ಕಛೇರಿ.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ದೇವೇಂದ್ರಪ್ಪ, ಲೆಕ್ಕಾಧೀಕ್ಷಕರು ಎಮ್.ಐ. ವಿಭಾಗ, ಬೀದರ್.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಎಸ್.ಎ. ಮಾನಕೇರಿ, ಸಹಾಯಕ ಇಂಜಿನಿಯರ್, ಎಮ್.ಐ.ವಿಭಾಗ, ಚಿಂಚೋಳಿ	ಅಧಿಕಾರಿ ಹಾಗೂ ಹಣ ದುರುಪಯೋಗ	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಶ್ಯಾಮರಾವ್ ಕಟ್ಟಿ, ಪ್ರ.ದ.ಲೆ.ಸ. ಬೀದರ್.	ಅಧಿಕಾರ ಹಾಗೂ ಹಣ ದುರುಪಯೋಗ	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಎಸ್.ವಿ. ಮುಂಡರಗಿ, ಉಗ್ರಾಣ ಅಧೀಕ್ಷಕರು (ನಿವೃತ್ತ) ಧಾರವಾಡ.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಎಸ್.ಎಂ. ಖೈಸರ್, ಕಿ.ಇಂ. ಜಿಪಂಇಂ ಉಪ ವಿಭಾಗ, ಬಸವಕಲ್ಯಾಣ.	ಅಧಿಕಾರ ಹಾಗೂ ಹಣ ದುರುಪಯೋಗ	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ತುಕಾರಾಮ, ಲೆಕ್ಕಾಧಿಕಾರಿಗಳು ಜಿಪಂ. ಬೀದರ್	ಅಧಿಕಾರ ಹಾಗೂ ಹಣ ದುರುಪಯೋಗ	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಶಿವಕುಮಾರ್, ಪ್ರ.ದ.ಸ. ಜಿಪಂ. ಬೀದರ್.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.

1	2	3	4	5
	1 (ತಾಲ್ಲೂಕು ಪಂಚಾಯತ್)	1. ಭಾನುಪ್ರಕಾಶ್, ಕಿ.ಇಂ. ಹಮ್ನಾಬಾದ್,	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
	24 (ಗ್ರಾಮ ಪಂಚಾಯಿತಿ)	1. ವರದೇಂದ್ರ ಕುಲಕರ್ಣಿ, ಗ್ರಾಪಂಕಾ, ಮುರಕಿ, ಔರಾದ್ ತಾಲ್ಲೂಕು	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ವೀರಶೆಟ್ಟಿ, (ಅಧ್ಯಕ್ಷರ ಮಗ), ಔರಾದ್ ಎಸ್ ಗ್ರಾಪಂ. ಬೀದರ್ ತಾಲ್ಲೂಕು	ಅಧಿಕಾರ ಹಾಗೂ ಹಣ ದುರುಪಯೋಗ	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಕಿರಣ ಕುಲಕರ್ಣಿ, ಗ್ರಾಪಂಕಾ, ಔರಾದ್ ಎಸ್ ಬೀದರ್ ತಾಲ್ಲೂಕು	ಅಧಿಕಾರ ಹಾಗೂ ಹಣ ದುರುಪಯೊಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಮೈಪಾಲ್ ರೆಡ್ಡಿ, ಗ್ರಾ.ಪಂ. ಸದಸ್ಯರು ಔರಾದ್ ಎಸ್. ಬೀದರ್ ತಾಲ್ಲೂಕು	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಜಹಿರುದ್ದೀನ್, ಗ್ರಾಪಂ. ಸದಸ್ಯರು, ರಂಜೋಳ ಖಿಣಿ, ಬೀದರ್ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಪೀರಮಾಂಬಿ, ಗ್ರಾ.ಪಂ. ಅಧ್ಯಕ್ಷರು, ರಂಜೋಳ ಖಿಣಿ, ಬೀದರ್ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಭೀಮಶಾ, ಗ್ರಾಪಂ. ಸದಸ್ಯರು, ರಂಜೋಳ ಖಿಣಿ, ಬೀದರ್ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ನಂದಕುಮಾರ್, ಗ್ರಾ.ಪಂ. ಸದಸ್ಯರು, ರಂಜೋಳ ಖಿಣಿ, ಬೀದರ್ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಸಮಿಯುದ್ದೀನ್, ಗ್ರಾ.ಪಂ. ಸದಸ್ಯರು, ರಂಜೋಳ ಖಿಣಿ, ಬೀದರ್ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.

1	2	3	4	5
		1. ಗೋಪಾಲ್ ರೆಡ್ಡಿ, ಗ್ರಾ.ಪಂ. ಸದಸ್ಯರು, ರಂಜೋಳ ಖೇಣಿ, ಬೀದರ್ ತಾಲ್ಲೂಕು	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಭಗವಂತ, ಗ್ರಾ.ಪಂ. ಸದಸ್ಯರು, ರಂಜೋಳ ಖೇಣಿ, ಬೀದರ್ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ರತನಕುಮಾರ್, ಗ್ರಾಪಂಕಾ. ವರವಟ್ಟಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಕಿಶನರಾವ್, ಗ್ರಾಪಂ, ಅಧ್ಯಕ್ಷರು, ವರವಟ್ಟಿ, ಭಾಲ್ಕಿ ತಾಲ್ಲೂಕು	ಅಧಿಕಾರ ಹಾಗೂ ಹಣ ದುರುಪಯೋಗ	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ನೀಲಕಂಠಪ್ಪ, ಗ್ರಾಪಂಕಾ ವರವಟ್ಟಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಅಶೋಕ ಧೋಂಡಿಬಾರಾವ್, ಗ್ರಾಪಂ. ಸದಸ್ಯರು ವರವಟ್ಟಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಮೈನುದ್ದೀನ್ ಮೊದ್ದೀನಸಾಬ್, ಗ್ರಾಪಂ. ಸದಸ್ಯರು ವರವಟ್ಟಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಭೀಮಣ್ಣ, ಗ್ರಾಪಂ. ಸದಸ್ಯರು, ವರವಟ್ಟಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ದೌಲತ್, ಗ್ರಾಪಂ ಸದಸ್ಯರು, ಮುನ್ನಾಎಖೆಳ್ಳಿ.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಧೋಳಪ್ಪ, ಗ್ರಾಪಂ ಸದಸ್ಯರು, ಬ್ಯಾಲಹಳ್ಳಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಸಂಜು, ಗ್ರಾಪಂ ಸದಸ್ಯರು, ನಾವಡಗಿ, ಭಾಲ್ಕಿ ಶಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.

1	2	3	4	5
		1. ಮಿರಾಜೋದ್ದೀನ್ ರಿಯಾಜಮಿಯಾ, ಗ್ರಾಪಂ. ಸದಸ್ಯರು, ನಾವಡಗಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೊಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಕಿಶನ್, ಗ್ರಾಪಂ ಸದಸ್ಯರು, ನಾವಡಗಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಗೀತಾಬಾಯಿ ಶಿವರಾಜ, ಗ್ರಾಪಂ ಸದಸ್ಯರು, ಮಾವಿನಹಳ್ಳಿ, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
		1. ಪಂಡಿತಮಲ್ಲಪ್ಪ, ಗ್ರಾಪಂ ಸದಸ್ಯರು, ಭಾಲ್ಕಿ ತಾಲ್ಲೂಕು.	ಅಧಿಕಾರ ಹಾಗೂ ಹಣ ದುರುಪಯೋಗ.	ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
22. ಗುಲ್ಬರ್ಗಾ	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ / ಗ್ರಾಮ ಪಂಚಾಯತ್‌ಗಳಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ.	–	–	–
23. ಚಿತ್ರದುರ್ಗ	2 (ಜಿಲ್ಲಾ ಪಂಚಾಯತ್)	1. ಜಿ. ಚಂದ್ರಪ್ಪ, ಕಿ.ಇಂ. ಜಿಪಂ ಉಪ ವಿಭಾಗ, ದಾವಣಗೆರೆ.	18,698–00	ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
		1. ಎ.ಕೆ.ಪಿ. ಶಿವಣ್ಣ, ವಾರ್ಡನ್, ಸರ್ಕಾರಿ ಬಾಲಕರ ಹಾಸ್ಟೆಲ್, ಹಿರಿಯೂರು.	54,676–00	ವಿಚಾರಣೆ ನಂತರ ಆರೋಪಗಳು ಸಾಬೀತಾಗದ ಕಾರಣ ಆರೋಪಮುಕ್ತಗೊಳಿಸಿದೆ.
	1 (ತಾಲ್ಲೂಕು ಪಂಚಾಯತ್)	1. ಸೈಫುರ್‌ರೆಹಮಾನ್, ದ್ವಿದಸ. ತಾ.ಪಂ. ಹಿರಿಯೂರು.	2,140–00	ವಿಚಾರಣೆ ನಂತರ ಆಪಾದಿತರಿಂದ ದುರುಪಯೋಗವಾದ ಮೊತ್ತವನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ.

1	2	3	4	5
	5 (ಗ್ರಾಮ ಪಂಚಾಯಿತಿ)	1. ಕೆ.ಮಹೇಶ್ವರಪ್ಪ, ಗ್ರಾಪಂಕಾ, ಅದನೂರು, ಹೊಳಲ್ಕೆರೆ ತಾಲ್ಲೂಕು. (ನಿಧನ)	4,969–00	ದುರುಪಯೋಗದ ಮೊತ್ತದಲ್ಲಿ ರೂ. 1,100–00 ಗಳನ್ನು ಸರ್ಕಾರಕ್ಕೆ ಭರ್ತಿ ಮಾಡಿದ್ದು ಉಳಿದ ಮೊತ್ತವನ್ನು ಈ ನೌಕರರ ವಾರಸುದಾರರಿಂದ ಅವರ ನಿವೃತ್ತಿ ಸೌಲಭ್ಯಗಳಲ್ಲಿ ವಸೂಲು ಮಾಡಲು ಆದೇಶಿಸಲಾಗಿದೆ.
		1. ಎಂ.ಆರ್. ಬಸವರಾಜಯ್ಯ, ಗ್ರಾಪಂಕಾ, ಹಿರಿಯೂರು ತಾಲ್ಲೂಕು.	43,939–00	ವಿಚಾರಣೆಯ ನಂತರ ಇವರ ವಿರುದ್ಧ ಸಾಬೀತಾದ ರೂ. 3,220–00ನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ.
		1. ಜಿ. ಬೋರಯ್ಯ, ಗ್ರಾಪಂಕಾ ದಿಂಡಾವರ,	2,63,391–00	ವಿಚಾರಣೆ ನಂತರ ಆರೋಪಿತ ನೌಕರರನ್ನು ಹಿರಿಯೂರು ತಾಲ್ಲೂಕು. ಸೇವೆಯಿಂದ ವಜಾಗೊಳಿಸಲಾಗಿದ್ದು ದುರುಪಯೋಗವಾದ ಮೊತ್ತವನ್ನು ಅವರ ಜೀವವಿಮೆ, ಕೆ.ಜಿ.ಐ.ಡಿ.ಮತ್ತು ಜಿ.ಪಿ.ಎಫ್. ಗಳ ಉಳಿದಾಯದಿಂದ ವಸೂಲು ಮಾಡುವಂತೆ ಆದೇಶಿಸಲಾಗಿದೆ.
		1. ಓ. ಸಣ್ಣವೀರಪ್ಪ, ಗ್ರಾಪಂಕಾ, ಜಾಜೂರು, ಚಳ್ಳಕೆರೆ ತಾಲ್ಲೂಕು.	88,665–00	ವಿಚಾರಣೆ ನಂತರ ಆರೋಪಿತರಿಂದ ದುರುಪಯೋಗವಾದ ಮೊತ್ತವನ್ನು ವಸೂಲು ಮಾಡುವ ಹಾಗೂ ಅವರ 1 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಾಗುವಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.

1	2	3	4	5
		1. ಎಸ್.ವಿ. ರಾಜಕಂಠೀರವ, ಗ್ರಾವಂಕಾ, ಕೊಂಡ್ಲಹಳ್ಳಿ, ಮೊಳಕಾಲ್ಮೂರು ತಾಲ್ಲೂಕು.	43,194–00	ಆರೋಪಿತ ನೌಕರರು ನಿವೃತ್ತರಾಗಿರುವುದರಿಂದ ಇವರ ವಿರುದ್ಧ ನಿಯಮ–214ರಡಿ ಕ್ರಮ ಕೈಗೊಳ್ಳಲು ಅವರ ಮಾತೃ ಇಲಾಖೆಯಾದ ಕಂದಾಯ ಇಲಾಖೆಗೆ ಪ್ರಕರಣವನ್ನು ವರ್ಗಾಯಿಸಲಾಗಿದೆ.
24. ಕೊಡಗು	1 (ಜಿಲ್ಲಾ ಪಂಚಾಯತ್)	1. ಸಿ.ಎಸ್. ನಟರಾಜ್, ಕಾಪಾಇಂ, ಮತ್ತು ಇತರರು.	ಉಗ್ರಾಣದಲ್ಲಿನ ದಾಸ್ತಾನು ಕೊರತೆ ಬಗ್ಗೆ.	ವಿಚಾರಣೆಯ ನಂತರ ಆಪಾದಿತರಿಂದ ರೂ. 1,922–00ನ್ನು ವಸೂಲಿ ಮಾಡಲು ಹಾಗೂ ಇವರ ಒಂದು ವಾರ್ಷಿಕವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದಂತೆ ತಡೆಹಿಡಿಯುವ ದಂಡನೆ ವಿಧಿಸಲಾಗಿದೆ.
	5 (ಜಿಲ್ಲಾ ಪಂಚಾಯತ್)	1. ಸಿ.ಎಲ್. ಜಾನ್ ಗುತ್ತಿಗೆದಾರರು ಮಡಿಕೇರಿ ತಾಲ್ಲೂಕು	91,800–00	ಪೊಲೀಸ್ ಇಲಾಖೆಗೆ ದೂರು ನೀಡಲಾಗಿದ್ದು ರೂ. 91,800–00 ಗಳನ್ನು ಬ್ಯಾಂಕಿಗೆ ಜಮಾ ಮಾಡಿದ್ದಾರೆ.
		1. ಮಡಿಕೇರಿ ತಾಲ್ಲೂಕು ಪಂಚಾಯಿತಿಯಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳಲ್ಲಿ ಅವ್ಯವಹಾರ.	23,31,000–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಶಿವನಂಜಪ್ಪ, ಹಿಂದಿನ ಕ್ಷೇ.ಅ. ಪೊನ್ನಂಪೇಟೆ. 2. ಟಿ.ಡಿ. ಅಶೋಕಕುಮಾರ್, 3. ಎಸ್.ಡಿ. ಸಿದ್ದಪ್ಪ, ಹಿಂ.ಕ್ಷೇ.ಅ. (ನಿಧನ)	12,41,210–00	ವಿಚಾರಣೆ ಮುಗಿದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಮರುಪರಿಶೀಲನೆಗೆ ಜಿಲ್ಲಾ ಪಂಚಾಯಿತಿಗೆ ಕಳುಹಿಸಲಾಗಿದೆ.

1	2	3	4	5
		1. ಕುಟ್ಟಮ್ಮ, ಹಿಂ. ಕಾನಿಅ, ತಾ.ಪಂ. ಪೊನ್ನಂಪೇಟೆ (ನಿವೃತ್ತಿ).	3,61,980–00	ವಿಚಾರಣೆ ನಂತರ ಆಪಾದಿತರಿಗೆ, ಅವರು ದುರುಪಯೋಗಪಡಿಸಿಕೊಂಡ ಮೊತ್ತ ವಸೂಲಿ ಮಾಡುವ ಹಾಗೂ ಅವರ ನಿವೃತ್ತಿ ವೇತನದಲ್ಲಿ ಶೇ.10 ರಷ್ಟವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸಲಾಗಿದೆ.
		1. ಮಹದೇವಸ್ವಾಮಿ, ದ್ವಿದಸ, (ನಿವೃತ್ತ), ತಾ.ಪಂ. ಪೊನ್ನಂಪೇಟೆ.	1,12,869–00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
	9 (ಗ್ರಾಮ ಪಂಚಾಯತ್)	1. ಎನ್.ಕೆ. ಅಯ್ಯಣ್ಣ, ನಿವೃತ್ತ ಗ್ರಾಮ ಲೆಕ್ಕಿಗರು ಬಾಳಲೆ ಗ್ರಾಮ ಪಂಚಾಯಿತಿ.	ಆಡಿಟ್ ಆಕ್ಷೇಪಣೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ.ಪಿ. ಗಣಪತಿ, ಗ್ರಾಪಂಕಾ,	35,575–00	ವಿಚಾರಣೆಯ ನಂತರ ಆರೋಪ ಮುಕ್ತಗೊಳಿಸಲಾಗಿದೆ.
		1. ಪಿ.ಡಿ. ಉಮೇಶ್, ಗ್ರಾಪಂಕಾ, ನಿಡುಗಣೆ, (ನಿಧನ)	13,062–00	ವಿಚಾರಣೆ ನಂತರ, ದುರುಪಯೋಗದ ಮೊತ್ತವನ್ನು ಅವರ ಡಿ.ಸಿ.ಆರ್.ಜಿ.ಯಲ್ಲಿ ಕಟಾವುಮಾಡಿಕೊಳ್ಳಲು ಆದೇಶ ಮಾಡಲಾಗಿದೆ.
		1. ಬಿ.ಎಂ. ಭಾಸ್ಕರ್, ಗ್ರಾಪಂಕಾ,	1,922–00	ವಿಚಾರಣೆಯ ನಂತರ ದುರುಪಯೋಗದ ಮೊತ್ತವನ್ನು ವಸೂಲಿ ಮಾಡುವ ಹಾಗೂ ಅವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಾಗದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.

1	2	3	4	5
		1. ಕೆ.ಯು. ಆನಂದ, ಗ್ರಾಪಂಕಾ,	12,500—00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕುಮಾರಿ ಟಿ.ಎ. ಶೈಲ, ಗ್ರಾಪಂಕಾ,	ಕರ್ತವ್ಯ ನಿರ್ಲಕ್ಷತೆ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ.ಸಿ. ಸೀತಮ್ಮ, ಗ್ರಾಪಂಕಾ,	ಕರ್ತವ್ಯಲೋಪ.	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಚ್.ಕೆ. ರಾಜಪ್ಪ, ಗ್ರಾಪಂಕಾ,	2,03,250—00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಬಿ.ಎನ್. ರಾಜಪ್ಪ, ಗ್ರಾಪಂಕಾ,	1,02,975—00	ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.
		1. ಎಂ.ಬಿ. ಅಪ್ಪಯ್ಯ, ಗ್ರಾಪಂಕಾ, ಗರಗಂದೂರು.	ಲಂಚ ನಿರ್ಮೂಲನೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.	ವಿಚಾರಣೆ ಪ್ರಗತಿಯಲ್ಲಿದೆ.
		1. ಕೆ.ಯು. ಆನಂದ, ಮಾದಾಪುರ	18,750—00	ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿದೆ.
25. ತುಮಕೂರು	ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್‌ಗಳಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ.			
	6 (ಗ್ರಾಮ ಪಂಚಾಯಿತಿ)	1. ಕೆ.ನಾರಾಯಣ, ಗ್ರಾಪಂಕಾ, ಹುತ್ರಿದುರ್ಗ,	16,041—00	ವಸೂಲಾತಿಗೆ ಕ್ರಮ ವಹಿಸಿದೆ.
		1. ಹೆಚ್.ಎಂ. ವೀರಣ್ಣಯ್ಯ, ಗ್ರಾಪಂಕಾ, ಗೊಂದಿಹಳ್ಳಿ,	15,470—00	ವಸೂಲಾತಿಗೆ ಕ್ರಮ ವಹಿಸಿದೆ.
		1. ಎನ್. ಜಯಸಿಂಹ, ಗ್ರಾಪಂಕಾ, ಇಡಗೂರು.	2,52,210—00	ವಸೂಲಾತಿಗೆ ಕ್ರಮ ವಹಿಸಿದೆ.
		1. ಸೋಮಲಾನಾಯಕ್, ಗ್ರಾಪಂಕಾ, ವಿರುಪಸಮುದ್ರ.	16,000—00	ಪೂರ್ಣ ವಸೂಲಾತಿ ಆಗಿದೆ.
		1. ಟಿ.ಎ. ಲಕ್ಷ್ಮೀಕಾಂತ, ಗ್ರಾಪಂ. ಬಿ.ಡಿ.ಪುರ.	14,812—00	ವಸೂಲಾತಿಗೆ ಕ್ರಮ ವಹಿಸಿದೆ.
		1. ಹಮಜದ್‌ಪಾಷಾ, ಗ್ರಾಪಂಕಾ ದಂಡಿನಶಿವರ,	78,000—00	ಪೂರ್ಣ ವಸೂಲಾತಿಯಾಗಿದೆ.

1	2	3	4	5
26. ಶಿವಮೊಗ್ಗ	6 (ಜಿಲ್ಲಾ ಪಂಚಾಯತ್)	1. ಎಸ್.ಟಿ. ಕೃಷ್ಣಮೂರ್ತಿ, ಕಾಪಾಇಂ, (ನಿವೃತ್ತ) ಪಂ.ರಾ. ವಿಭಾಗ, ಸಾಗರ. 2. ಜೆ.ಡಿ. ನಂಜುಂಡಪ್ಪ, ಲೆಕ್ಕಾಧೀಕ್ಷಕರು.	1,28,000–00	ಎಸ್.ಟಿ. ಕೃಷ್ಣಮೂರ್ತಿಯವರು ನಿವೃತ್ತಿ ಹೊಂದಿರುವುದರಿಂದ ಅವರನ್ನು ಹೊರತುಪಡಿಸಿ, ಶ್ರೀ ನಂಜುಂಡಪ್ಪ ಇವರ ವಿರುದ್ಧ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣೆ ಪ್ರಗತಿಯಲ್ಲಿದೆ.
		1. ಟಿ. ನಾಗರಾಜ, ಕಿ.ಇಂ. ಪಂ.ರಾ.ಇಂ. ಉಪ ವಿಭಾಗ, ಸಾಗರ.	1,27,700–00	ವಿಚಾರಣೆ ನಂತರ ಇವರಿಂದ ದುರುಪಯೋಗದ ಹಣ ವಸೂಲಿ ಮಾಡಲು ಆದೇಶಿಸಲಾಗಿದೆ.
		1. ಎಸ್.ಎಸ್.ಕೋಳಿಮಠ, ಕಾಪಾಇಂ. (ನಿವೃತ್ತ) ವಿಶ್ವಬ್ಯಾಂಕ್ ಯೋಜನೆ, ಶಿವಮೊಗ್ಗ	37,20,300–00	ವಿಚಾರಣಾ ವರದಿ ಬಂದಿದ್ದು, ದಂಡನೆ ವಿಧಿಸಲು ಪರಿಶೀಲಿಸಲಾಗುತ್ತಿದೆ.
		1. ಶೇಖರಗೌಡ, ಕಾಪಾಇಂ. (ನಿವೃತ್ತ). ಪಂ.ರಾ.ವಿಭಾಗ, ಶಿವಮೊಗ್ಗ 2. ಕೆ.ಟಿ.ರತ್ನಾಕರ, ಸಕಾಇಂ. ನಿವೃತ್ತ.	43,93,600–00	ವಿಚಾರಣೆ ನಂತರ ಇಬ್ಬರ ಅಧಿಕಾರಿಗಳು ನಿವೃತ್ತಿ ಹೊಂದಿರುವುದರಿಂದ ಇವರ ನಿವೃತ್ತಿ ವೇತನದಲ್ಲಿ ಶೇ.25 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸಲಾಗಿದೆ.
		1. ವೈ.ಜಿ. ಪರಮೇಶ್ವರಪ್ಪ, ಸಹಾಯಕ ಇಂಜಿನಿಯರ್ 2. ಎನ್. ರಾಜಶೇಖರಪ್ಪ, ಕಿ.ಇಂ. 3. ಕೆ. ತಿಮ್ಮೇಗೌಡ, ಸಹಾಯಕ ಇಂಜಿನಿಯರ್ 4. ಬಿ. ಮಟ್ಟಪ್ಪ, ಕಿ.ಇಂ.	ಕರ್ತವ್ಯಲೋಪ.	ವಿಚಾರಣೆ ನಂತರ, ಮೊದಲ ಮೂರು ಜನ ಆರೋಪಿತರನ್ನು ದೋಷಮುಕ್ತರನ್ನಾಗಿಸಿದೆ. ಶ್ರೀ ಮಟ್ಟಪ್ಪ ಇವರ ನಿವೃತ್ತಿ ವೇತನದಿಂದ ಶೇ.5ರಷ್ಟನ್ನು ಒಂದು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆ ವಿಧಿಸಿದೆ.

1	2	3	4	5
		1. ಕಾಮೇಶ್ವರಚಾರ್, ಕಾಪಾಇಂ. ಪಂರಾಇಂ ವಿಭಾಗ, ಶಿವಮೊಗ್ಗ.	26,293–00	ವಿಚಾರಣೆ ನಂತರ ನಷ್ಟದ ಮೊತ್ತಕ್ಕೆ ಶೇ.8ರ ಬಡ್ಡಿ ಸಹಿತವಾಗಿ, ಡಿ.ಸಿ.ಆರ್.ಜಿ. ಮೊತ್ತದಿಂದ ವಸೂಲಿ ಮಾಡುವುದು ಹಾಗೂ ನಿವೃತ್ತಿ ವೇತನದಿಂದ ಪ್ರತಿ ತಿಂಗಳು 100–00ರಂತೆ ಕಡಿತಗೊಳಿಸುವ ದಂಡನೆ ವಿಧಿಸಿದೆ.
	3 (ತಾಲ್ಲೂಕು ಪಂಚಾಯತ್)	1. ಬಿ.ಮಲ್ಲಿಕಾರ್ಜುನಪ್ಪ, ಹಿಂ. ಕಾನಿಅ, ತಾ.ಪಂ. ಶಿಕಾರಿಪುರ. 2. ಎಸ್.ರಾಜು, ಕಿ.ಇಂ. 3. ಎಸ್.ಎಲ್. ಮಂಜುನಾಥ್, ಕಿ.ಇಂ.	1,07,500–00	ವಿಚಾರಣೆ ಪ್ರಗತಿಯಲ್ಲಿದೆ.
		1. ಎ.ಎಸ್. ಜಯದೇವಕುಮಾರ್, ಕಾನಿಅ, ನಿವೃತ್ತಿ ತಾ.ಪಂ. ಶಿವಮೊಗ್ಗ.	1,00,000–00	ವಿಚಾರಣೆಯ ನಂತರ ಆಪಾದಿತರಿಬ್ಬರಿಂದ ರೂ. 50,000–00ಗಳಂತೆ ವಸೂಲಿ ಮಾಡುವ ಹಾಗೂ ಶ್ರೀ ಎಸ್.ಎಲ್.ರಾಜು ಕಿ.ಇಂ. ಇವರಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ
		ಪರಿಣಾಮವಾಗದಂತೆ ವಿಧಿಸಿದೆ.		ತಡೆಹಿಡಿಯುವ ದಂಡನೆ
		1. ಡಿ.ಆರ್. ರಾಜಣ್ಣ, ದ್ವಿ.ದ.ಸ. ತಾ.ಪಂ. ಶಿಕಾರಿಪುರ 2. ಎಸ್. ರಾಜು, ಕಿ.ಇಂ.	42,880–00	ವಿಚಾರಣೆ ಪ್ರಗತಿಯಲ್ಲಿದೆ.
	8 (ಗ್ರಾಮ ಪಂಚಾಯತ್)	1. ಮಲ್ಲಿಕಾರ್ಜುನ ಸಿ.ಹೊಸಕೋಟೆ, ಗ್ರಾ.ಪಂ.ಕಾ ಮಾಲ್ವೆ, ಸಾಗರ ತಾಲ್ಲೂಕು.	ಅನಧಿಕೃತ ಗೈರು ಹಾಜರಿ.	ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿದೆ.

1	2	3	4	5
		1. ಬಿ.ಎಂ. ಮಡಿವಾಳರ, ಗ್ರಾಪಂಕಾ, ಈಸೂರು ಶಿಕಾರಿಪುರ ತಾಲ್ಲೂಕು.	ಅನಧಿಕೃತ ಗೈರು ಹಾಜರಿ ಮತ್ತು ಸ್ವಚ್ಛ ಗ್ರಾಮದಡಿ ಹಣ ದುರುಪಯೋಗ.	ತನಿಖೆ ನಡೆಸಲಾಗುತ್ತಿದೆ.
		1. ಸಿ.ಎನ್. ರಾಘವೇಂದ್ರರಾವ್, ಗ್ರಾಪಂಕಾ, ಅರಸಾಳು, ಹೊಸನಗರ ತಾಲ್ಲೂಕು.	ಅಕ್ರಮ ಮರ ಕಡಿತಕ್ಕೆ ಎನ್.ಓ.ಸಿ. ನೀಡಿರುವುದು ಹಾಗೂ ನಿಯಮಬಾಹಿರವಾಗಿ ಖಾತೆ ಬದಲಾವಣೆ ಮಾಡಿರುವುದು.	ಇಲಾಖಾ ವಿಚಾರಣಾ ಪ್ರಗತಿಯಲ್ಲಿದೆ.
		1. ಬಿ. ಲಕ್ಷ್ಮೀನಾರಾಯಣ, ಗ್ರಾಪಂಕಾ,	ವಿವಿಧ ಯೋಜನೆಗಳಡಿ ಹಣ ದುರುಪಯೋಗ.	ವಿಚಾರಣಾ ಪ್ರಕ್ರಿಯೆ ಜಾರಿಯಲ್ಲಿದೆ.
		1. ವೀರೇಶಪ್ಪ, ಗ್ರಾಪಂಕಾ, ಆನವಟ್ಟಿ, ಸೊರಬ ತಾಲ್ಲೂಕು.	ಎಸ್.ಜಿ.ಆರ್.ವೈ ಯೋಜನೆಯಡಿ ತಾತ್ಕಾಲಿಕ ಹಣ ದುರುಪಯೋಗ.	ಆರೋಪ ಪಟ್ಟಿ ಜಾರಿ ಮಾಡಲಾಗಿದೆ.
		1. ಅಮೃತಪ್ಪ, ಗ್ರಾಪಂಕಾ, ಮಾವಲಿ, ಸೊರಬ ತಾಲ್ಲೂಕು.	ಕರ್ತವ್ಯಲೋಪ	ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿದೆ.
		1. ಕೆ.ಎನ್. ಲೋಕೇಶಪ್ಪ, ಗ್ರಾಪಂಕಾ, ಬೈದೂರು ಸಾಗರ ತಾಲ್ಲೂಕು.	ಹಣ ದುರುಪಯೋಗ	ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿದೆ.
		1. ಕೆ.ಎಸ್.ಕಾಂತರಾಜು, ಗ್ರಾಪಂಕಾ,	ಎಸ್.ಜಿ.ಆರ್.ವೈ ಯೋಜನೆಯಡಿ ಹಣ ದುರುಪಯೋಗ.	ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿದೆ.

1	2	3	4	5
27. ಕೋಲಾರ	1 (ಜಿಲ್ಲಾ ಪಂಚಾಯಿತಿ)	1. ನಾರಾಯಣರೆಡ್ಡಿ, ಹಿಂದಿನ ಸಕಾಇಂ. ಜಿ.ಪಂ. ಉಪ ವಿಭಾಗ, ಚಿಕ್ಕಬಳ್ಳಾಪುರ. 2. ಡಿ.ಬಿ. ಶ್ರೀಧರ, ಉಗ್ರಾಣ ಪಾಲಕ.	6,83,000–00	ವಿಚಾರಣೆ ನಡೆಸಲು ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದ್ದು ಪ್ರಕ್ರಿಯೆ ಜಾರಿಯಲ್ಲಿದೆ.
	1 (ತಾಲ್ಲೂಕು ಪಂಚಾಯಿತಿ)	1. ಕೆ.ಎ. ಶ್ರೀನಿವಾಸಯ್ಯ, ಹಿಂ.ಕಾನಿಅ, ತಾ.ಪಂ. ಮಾಲೂರು. 2. ಸುಂದರರಾವ್, ಹಿಂ. ವ್ಯವಸ್ಥಾಪಕರು, 3. ಎ.ಎನ್. ಬಸವರಾಜು, ಹಿಂ. ಲೆಕ್ಕಾಧೀಕ್ಷಕರು. 4. ಮೊಹಮ್ಮದಯೂನಸ್, ಹಿಂ. ಲೆಕ್ಕಾಧೀಕ್ಷಕರು. 5. ನಾರಾಯಣಪ್ಪ, ಹಿಂ. ಪ್ರದಸ. 6. ಶ್ರೀನಿವಾಸ ಕಿ.ಇಂ. 7. ಕೆ.ಎನ್. ಶಂಕರಾಚಾರಿ, ಹಿಂ.ಕಿ.ಇಂ. 8. ಚಾಂದಪಾಶಾ, ಹಿಂ. ದ್ವಿದಸ. 9. ವಿಶ್ವನಾಥ್, ಗ್ರಾಪಂಕಾ, ನಿಯೋಜನೆ ಮೇಲೆ ತಾ.ಪಂ. ಯಲ್ಲಿ ಕರ್ತವ್ಯ. 10. ಗೋಪಾಲಕೃಷ್ಣ, ಗ್ರಾಪಂಕಾ, ನಿಯೋಜನೆ ಮೇಲೆ ತಾ.ಪಂ. ಯಲ್ಲಿ ಕರ್ತವ್ಯ.	2,06,49,000–00	ಮಾಲೂರು ತಾಲ್ಲೂಕು ಪಂಚಾಯಿತಿಯಲ್ಲಿ ಬಿಲ್ಲುಗಳನ್ನು ತಿದ್ದಿ ಹೆಚ್ಚಿನ ಹಣ ಡ್ರಾ ಮಾಡಿರುವ ಬಗ್ಗೆ, ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು 19–1–2005 ರಲ್ಲಿ ಸಿ.ಒ.ಡಿ.ಗೆ ವಹಿಸಿದೆ. ಅದರನ್ವಯ, ಕೋಲಾರ ಜಿಲ್ಲಾ ಪಂಚಾಯಿತಿಯಲ್ಲಿ ಉಪ ಕಾರ್ಯದರ್ಶಿ (ಅಭಿವೃದ್ಧಿ)ಯಾಗಿ) ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎನ್.ಕೃಷ್ಣಪ್ಪ, ಇವರನ್ನು ಈ ಬಿಲ್ಲುಗಳಿಗೆ ಮೇಲುಸಹಿ ಮಾಡಿದ ಆರೋಪದ ಮೇಲೆ ದಿನಾಂಕ 28–5–2005 ರಂದು ಸಿ.ಒ.ಡಿ. ಪೋಲೀಸರು ಬಂಧಿಸಿ, ಇವರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ. ಸಿ.ಒ.ಡಿ ಯಲ್ಲಿ ಪ್ರಕರಣದ ತನಿಖೆ ನಡೆಯುತ್ತಿದೆ.

70(149) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬಾಕಿ ಇರುವ ನೀರಾವರಿ ಯೋಜನೆಗಳ ಹೆಸರನ್ನು ಒದಗಿಸುವುದು;

ಆ) ಈ ಯೋಜನೆಗಳ ಇತ್ತೀಚಿನ ವಿವಿಧ ಹಂತ ಹಾಗೂ ಸರ್ಕಾರವು ಈ ಯೋಜನೆಗಳ ಮೇಲೆ ಮಾಡಿರುವ ವೆಚ್ಚದ ವಿವರಗಳು;

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ಮೊತ್ತ (ಯೋಜನಾವಾರು ವಿವರ ಒದಗಿಸುವುದು)?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಆ) ಮತ್ತು ಇ) ಜಲ ಸಂಪನ್ಮೂಲ (ಭಾರಿ ಮತ್ತು ಮಧ್ಯಮ ನೀರಾವರಿ) ಯಡಿ ಪ್ರಗತಿಯಲ್ಲಿರುವ ವಿವಿಧ ನೀರಾವರಿ ಯೋಜನೆಗಳ ಹೆಸರು, ಈವರೆಗಿನ ವೆಚ್ಚ, ಪೂರ್ಣಗೊಳಿಸಲು ಬೇಕಾದ ಮೊತ್ತ ಹಾಗೂ ಇತ್ತೀಚಿನ ಹಂತಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ ವಿವರಗಳು

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಪ್ರಗತಿಯಲ್ಲಿರುವ ಯೋಜನೆಗಳು	02/2006 ರ ವರೆಗಿನ ವೆಚ್ಚ	ಪೂರ್ಣಗೊಳಿಸಲು ಬೇಕಾದ ಬಾಕಿ ಮೊತ್ತ	ಯೋಜನೆಯ ಇತ್ತೀಚಿನ ಹಂತ
1	2	3	4	5
1	ಕೃಷ್ಣಾ ಮೇಲ್ದಂಡೆ ಯೋಜನೆ	8714.41	1808.34	ಯೋಜನೆ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ಮಾರ್ಚ್ 2007ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
2	ಘಟಪ್ರಭಾ ಯೋಜನೆ ಹಂತ–3	938.06	177.94	ಅಣೆಕಟ್ಟು ಎಡದಂಡೆ ಕಾಲುವೆಯು ಹಾಗೂ ಬಲದಂಡೆ ಕಾಲುವೆ 119 ಕಿ.ಮೀ ವರೆಗೆ ಪೂರ್ಣಗೊಳಿಸಲಗಿದೆ. 25 ವಿತರಣಾ ನಾಲೆಗಳ ಪೈಕಿ 21ನೇ ಬ್ಲಾಕ್‌ನ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ.
3	ಮಲಪ್ರಭಾ ಯೋಜನೆ	807.18	126.82	ಮಲಪ್ರಭಾ ಎಡದಂಡೆ ಕಾಲುವೆಯ ಬಾಕಿ ಕಾಮಗಾರಿ ಹಾಗೂ 41 ವಿರತಣಾ ನಾಲೆಗಳ ಬಾಕಿ ಕಾಮಾಗಾರಿ ಪ್ರಗತಿ ವಿವಿಧ ಹಂತದಲ್ಲಿರುತ್ತದೆ.
4	ಹಿಪ್ಪರಗಿ ನೀರವಾರಿ ಯೋಜನೆ	172.46	940.54	ಬಾರೇಜ್ ಕಾಮಗಾರಿಗಳು ಪೂರ್ಣಗೊಂಡಿವೆ. ಹಳಿಯಾಳ ಮತ್ತು ಐನಾಪುರ ಏತ ನೀರಾವರಿ ಯೋಜನೆಗಳ ಕಾಮಗಾರಿಗಳು ಹಾಗೂ ಸಂಯುಕ್ತ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ
5	ಮಾರ್ಕಂಡೇಯ ಯೋಜನೆ	283.2	58.52	15 ಕಿ.ಮೀ ಉದ್ದದ ಎಡದಂಡೆ ನಾಲೆಯ ಕಿ.ಮೀ 5ರಿಂದ 10ರವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
6	ಹರಿನಾಲಾ ಯೋಜನೆ	64.99	–	ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿದೆ.
7	ದೂದ್‌ಗಂಗಾ	82.64	41.36	ರಾಜ್ಯದ ಪಾಳಿನ ಬಿದರಿ ಹಾಗೂ ನಿಡೋರಿ ಶಾಖಾ ನಾಲೆಯ ಕಾಮಗಾರಿಗಳು ಪ್ರಗತಿಯಲ್ಲಿದೆ.

1	2	3	4	5
8	ಕಳಸನಾಲಾ	1.07	43.71	ಅರಣ್ಯ ಇಲಾಖೆಯ ಹಾಗೂ ಕೇಂದ್ರ ಸರ್ಕಾರದ ತೀರುವಳಿ
9	ಬಂದೂರುನಾಲಾ	0.24	48.96	ನಿರೀಕ್ಷಿಸಲಾಗಿದೆ.
10	ಬೆಣ್ಣೆಹಳ್ಳ ನೀರಾವರಿ	0.00	17.33	ಸರ್ವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
11	ತುಂಗಾ ಮೇಲ್ದಂಡೆ ಯೋಜನೆ	587.48	1056.63	ಅಣೆಕಟ್ಟು ಪೂರ್ಣಗೊಂಡಿರುತ್ತದೆ. ಕಿಮೀ 4,5 ಹಾಗೂ 6ರ ಲೈನಿಂಗ್ ಕಾಮಗಾರಿಗಳು ಹಾಗೂ ವಿತರಣಾ ನಾಲೆಯ ಕಾಮಾಗಾರಿಯ ಪ್ರಗತಿಯು ವಿವಿಧ ಹಂತದಲ್ಲಿರುತ್ತದೆ.
12	ಇಟಗಿ–ಸಾಸಲವಾಡ ಏತ ನೀರಾವತಿ	3.37	15.18	ರೈಸಿಂಗ್ ಮೇನ್, ಪಂಪ್ ಹೌಸ್ ಹಾಗೂ ನಾಲೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.
13	ಬಸಾಪುರ ಏತ ನೀರಾವರಿ	4.23	22.73	ರೇಸಿಂಗ್ ಮೇನ್ ಹಾಗು ಮುಖ್ಯ ಕಾಲುವೆಯ ಕಾಮಗಾರಿಗಳು ವಿವಿಧ ಹಂತದಲ್ಲಿವೆ.,
14	ಸಿಂಗಟಾಲೂರು ಏತ ನೀರಾವರಿ	70.50	524.5	ಅಣೆಕಟ್ಟು ಮತ್ತು ತತ್ಸಂಬಂಧ ಕಾಮಗಾರಿಗಳು ಗೇಟುಗಳ ಸ್ಥಾಪನೆ ಪ್ರಗತಿಯಲ್ಲಿವೆ. ಬಲದಂಡೆಯ ಮೊದಲನೇ ನೀರೆತ್ತುವ ಘಟಕದ ಕಾಮಗಾರಿಗಳು ಸಹ ಪ್ರಗತಿಯಲ್ಲಿದೆ.
15	ಭೀಮಾ ಏತ ನೀರಾವರಿ	52.58	222.95	ಮಣ್ಣಿನ ಏರಿಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಬಲುಂಡಿಗಿ ಹಾಗೂ ಹಳಗಿ ಏತ ನೀರಾವರಿ ಕಾಮಗಾರಿಗಳು ನಾಲೆಗಳು ಪ್ರಗತಿಯಲ್ಲಿವೆ.
16	ಗಂಡೋರಿನಾಲಾ ಯೋಜನೆ	135.43	67.57	ಅಣೆಕಟ್ಟು ಹಾಗೂ ಸಂಬಂಧಿತ ಕಾಮಗಾರಿಗಳು ಹಾಗೂ ಎಡದಂಡೆ ಕಾಲುವೆಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
17	ಕೆಳದಂಡೆ ಮುಲ್ಲಾಮಾರಿ	149,89	10.31	66 ವಿತರಣಾ ನಾಲೆಗಳ ಪೈಕಿ 64 ನಾಲೆಗಳು ಪೂರ್ಣಗೊಂಡಿದ್ದು ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

1	2	3	4	5
18	ವಾರಾಹಿ	85.17	48.43	ಡೈವರ್ಷನ್ ವಿಯರ್‌ನ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ ಕಾಮಗಾರಿಯು ವಿವಿಧ ಹಂತದಲ್ಲಿರುತ್ತದೆ.
19	ಬೆಣ್ಣೆ ತೊರಾ ಯೋಜನೆ	270.76	44.29	ಅಣೆಕಟ್ಟು ಪೂರ್ಣಗೊಂಡಿದ್ದು ಜಲಾಶಯದಲ್ಲಿ ನೀರನ್ನು ಸಂಗ್ರಹಿಸಲಾಗಿದೆ. 54 ಕಿಮೀ ಉದ್ದದ ಎಡದಂಡೆ ಕಾಲುವೆಯ ಕಾಮಗಾರಿಯು ಪ್ರಾರಂಭಗೊಂಡಿರುತ್ತದೆ. ಉಪ ನಾಲೆಗಳು, ಸಿ.ಡಿ.ಗಳು, ವಿತರಣಾ ನಾಲೆಗಳು, ಎಡದಂಡೆ ಹಾಗೂ ಬಲದಂಡೆ ಮುಖ್ಯ ನಾಲೆಯ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿವೆ.
20	ಅಮರ್ಜಾ	180.35	111.10	ಅಮರ್ಜಾ ಯೋಜನೆಯ ರೀಮಾಡಲಿಂಗ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಲಾಗಿದೆ. ಕಾಮಗಾರಿಗಳನ್ನು 2006–07ರಲ್ಲಿ ಪೂರ್ಣಗೊಳಿಸುವ ಉದ್ದೇಶವಿರುತ್ತದೆ.
21	ಹಿರೇಹಳ್ಳ	193.29	33.61	ಮುಖ್ಯ ನಾಲೆ ಮತ್ತು ವಿತರಣಾ ನಾಲೆಗಳ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿವೆ.
22	ಮಸ್ಕಿನಾಲಾ	44.65	2.18	ವಿತರಣಾ ಕಾಲುವೆಗಳ ಲೈನಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
23	ಕಾರಂಜಾ	433.52	36.48	ಮುಖ್ಯ ಕಾಲುವೆ ಹಾಗೂ ವಿತರಣಾ ಕಾಳುವೆಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
24	ಚುಲ್ಕಿನಾಲಾ	70.04	0.96	ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
25	ಡಿ. ದೇವರಾಜ್ ಅರಸ್ ನಾಲಾ	356.16	30.00	ಯೋಜನೆಯ ಮುಖ್ಯನಾಲೆ ಹಾಗೂ ವಿತರಣಾ ನಾಲೆಗಳ ಬಾಕಿ ಲೈನಿಂಗದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

1	2	3	4	5
26	ಕೆ.ಆರ್.ಎಸ್. ಆಧುನೀಕರಣ	314.92	50.00	ಯೋಜನೆಯ ಕಾಮಗಾರಿಯು ಮುಕ್ತಾಯಹಂತದಲ್ಲಿದೆ.
27	ಕಬಿನಿ	466.8	800.00	ಎಡದಂಡೆ ಹಾಗೂ ಬಲದಂಡೆ ನಾಲೆಯ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ತೆಳ್ಳನೂರು ಉಪನಾಲೆಯ ಕಾಮಗಾರಿಯ ಪ್ರಗತಿಯಲ್ಲಿದೆ.
28	ಹಾರಂಗಿ	393.5	50.00	ಪಿರಿಯಾಪಟ್ಟಣ ಏತ ನೀರಾವರಿ ಯೋಜನೆ ಮುಖ್ಯ ಕಾಲುವೆಯ ಬಾಕಿ ಕಾಮಗಾರಿಯು ಪ್ರಗತಿಯಲ್ಲಿವೆ.
29	ಅರ್ಕಾವತಿ	96.93	25.00	ಎಡದಂಡೆ ಹಾಗೂ ಬಲದಂಡೆ ಕಾಲುವೆಯ ಶಾಖಾ ಕಾಲುವೆಗಳು ಮತ್ತು ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.
30	ಚಿಕ್ಲಿಹೊಳೆ	18.08	2.00	ಯೋಜನೆಯ ಏತ ನೀರಾವರಿಯ ವಿದ್ಯುತೀಕರಣ ಪ್ರಗತಿಯಲ್ಲಿದೆ
31	ಉಡುತೊರೆಹಳ್ಳ	17.177	30.00	ಎಡದಂಡೆ ನಾಲೆಯ ಶಾಖಾ ಕಾಲುವೆ ಕಿ.ಮೀ 2 ಹಾಗೂ 3ರಲ್ಲಿರುವ ಅಕ್ವಡಕ್ಟ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
32	ಇಗ್ಗಲೂರು	57.57	15.00	ಬ್ಯಾರೇಜ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಎಡದಂಡೆ ನಾಲೆಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
33	ಮಂಚನಬೆಲೆ	74.81	5.00	ಎಡದಂಡೆ ಹಾಗೂ ಬಲದಂಡೆ ನಾಲೆಯ ಶಾಖಾ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
34	ನಂಜಾಪುರ ಏತ ನೀರಾವರಿ ಯೋಜನೆ	25.17	15.00	ಪಂಪ್ ಹೌಸ್, ಸಂಪ್ ವೆಲ್, ಹಾಗೂ ರೈಸಿಂಗ್ ಮೇನ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.
35	ಯಗಚಿ	192.06	50.00	ನಾಲೆಗಳ ಮಣ್ಣು ಅಗೆತದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
36	ಕಾಮಸಮುದ್ರ	26.20	10.00	1ನೇ ಹಾಗೂ 2ನೇ ಹಂತದ ಕಾಲುವೆಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

1	2	3	4	5
37	ಹೇಮಾವತಿ ಯೋಜನೆ ಬಲದಂಡೆ	1908.23	3825.80	ಎಡದಂಡೆ ಕಾಲುವೆಯ ಕಿಮೀ 0 ರಿಂದ ಕಿ.ಮೀ 72ರವರೆಗೆ ಹಾಗು ಕಾಲುವೆಯ ಕಿಮೀ 0 ರಿಂದ ಕಿ.ಮೀ 48ರವರೆಗೆ ಆಧುನೀಕರಣದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಹೇಮವಾತಿ ಚಿ ನಾಲೆಯ ಲೈನಿಂಗ್ ಕಾಮಗಾರಿಗಳು ಹಾಗೂ ನಾಗಮಂಗಲ ಶಾಖಾ ಕಾಲುವೆ ಬಾಕಿ ಕಾಮಾಗಾರಿಗಳು ಪ್ರಗತಿಯಲ್ಲಿರುತ್ತವೆ.
38	ಹುಚ್ಚನಕೊಪ್ಪಲು	20.83	15.00	ಹೆಡ್ ವರ್ಕ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಪಂಪ್ ಹಾಗೂ ಯಂತ್ರೋಪಕರಣಗಳ ಜೋಡಣೆಯು, ನಾಲೆಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತವೆ.
39	ತಾರಕ	43.32	7.68	ತಾರಕ ಏತ ನೀರಾವರಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.
40	ಕಾಚೇನಹಳ್ಳಿ	3.90	5.00	ಪಂಪ್ ಹಾಗೂ ಯಂತ್ರೋಪಕರಣಗಳ ಜೋಡಣೆಯು ನಾಲೆಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತವೆ.
41	ವಾಟೆಹೊಳೆ	50.16	2.34	ನಾಲೆಗಳ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.
42	ವೈ–ಕಗ್ಗಲ್	0.63	12.53	ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ.
43	ತಿಮ್ಮಾಪುರ	0.04	20.59	ನಬಾರ್ಡ್ ಮಂಜೂರಾತಿ ನಿರೀಕ್ಷಿಸಲಾಗಿದೆ.
44	ಹೋಡಿರಾಯನಹಳ್ಳಕ್ಕೆ ತಿರುವು ಯೋಜನೆ	0.49	15.36	ಅರಣ್ಯ ಇಲಾಖೆ ತೀರುವಳಿ ನಿರೀಕ್ಷಿಸಲಾಗಿದೆ.
45	ಕಡುವಿನಬೈಲು	0.00	6.90	ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.
46	ಕೆಂಚನಗುಡ್ಡ	0.00	4.95	ತಾಂತ್ರಿಕ ಸಲಹಾ ಸಮಿತಿ ಮುಂದೆ ಮಂಡಿಸಲಾಗಿದೆ.
47	ಕೋಲ್ಲೂರು ಏತ ನೀರಾವತಿ	0.00	0.74	ಯೋಜನೆ ಕಾಮಗಾರಿಗಳು ಪ್ರಗತಿಯಲ್ಲಿದೆ.

71 (240) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿನ ಜಲಸಂಪನ್ಮೂಲ ಯೋಜನೆಯಡಿಯಲ್ಲಿ ಕೇವಲ 6 ತಾಲ್ಲೂಕುಗಳಲ್ಲಿ ಕೆರೆಗಳ ಅಭಿವೃದ್ಧಿ ಕೆಲಸಗಳನ್ನು ನಡೆಸುತ್ತಿರುವುದು ನಿಜವಲ್ಲವೇ;

ಆ) ಹಾಗಿದ್ದರೆ ಯಾವ ಯಾವ ಕಾಮಗಾರಿಗಳನ್ನು ಪೂರೈಸಲಾಗಿದೆ;

ಇ) ಈ ಪೈಕಿ ಗೌರಿಬಿದನೂರು ಕ್ಷೇತ್ರದ ಕೆರೆಗಳ ಅಭಿವೃದ್ಧಿಯನ್ನು ಯಾವಾಗ ಸರಿಪಡಿಸಲಾಗುವುದು? (ತಾಲ್ಲೂಕುವಾರು ಕೆರೆಗಳ ಅಭಿವೃದ್ಧಿಪಡಿಸುವ ಬಗ್ಗೆ ವಿವರ ಒದಗಿಸುವುದು)

ಶ್ರೀ ಸಿ. ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಕೋಲಾರ ಜಿಲ್ಲೆಯ 07 ತಾಲ್ಲೂಕುಗಳಲ್ಲಿ ಜಲಸಂವರ್ಧನೆ ಯೋಜನೆ ಆ ಸಂಘದಡಿಯಲ್ಲಿ ಕೆರೆಗಳ ಅಭಿವೃದ್ಧಿ ಕೆಲಸಗಳನ್ನು ನಡೆಸಲಾಗುತ್ತಿದೆ.

ಆ) 225 ಕೆರೆಗಳ ಅಭಿವೃದ್ಧಿ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಯೋಜನೆಯಡಿಯಲ್ಲಿ ಗೌರಿಬಿದನೂರು ತಾಲ್ಲೂಕು ಸೇರಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.240 ಕ್ಕೆ ಅನುಬಂಧ.

List of Tanks in Kolar Districts

[Major works completed]

Sl. No.	Taluk	Village/Tank
1	2	3
1	Bagepalli	Brahmanahalli
2	Bagepalli	Malakachervupalli
3	Bagepalli	Boyanavarapalli
4	Bagepalli	Thimmampalli
5	Bagepalli	Gowdanakere, Naireddyoalli (Guiur)
6	Bagepalli	Devarakere, Sakavandlapalli
7	Bagepalli	Narasapur
8	Bagepalli	Doddakere, Gulur

1	2	3
9	Bagepalli	Kemparajanakere, D. Saddupalli
10	Bagepalli	Jakkalakunte, Gulur
11	Bagepalli	Narayanaswamy Kote
12	Bagepalli	Vaddukunte
13	Bagepalli	Sunnepparakalere
14	Bagepalli	Marganakunre
15	Bagepalli	Jettkere
16	Bagepalli	Hosakere, Achepalli
17	Bagepalli	Nimmaiapalli kere-Puttaparthi
18	Bagepalli	Uramundkina kere Sadlavarapalli
19	Bagepalli	Uramundhina kere Yellampalli
20	Bagepalli	Karkuru kere, karkuru
21	Bagepalli	Gurammenna kere Balareddypalli
22	Bagepalli	Penamale
23	Bagepalli	Uramundhina kere-Kondareddypalli
24	Bagepalli	Dhashavanthana kere-Pathabagepalli
25	Chintamani	Pindigana kunte chikkamunmangala
26	Chintamani	Dudukere Goplapura
27	Chintamani	Goval kunte, Narasapura
28	Chintamani	Masalahalli Tank Masalahalli
29	Chintameni	sunjvareddykere, Mohemmadpura
30	Chintamani	Hosakere Bommekallu
31	Chintamani	Hosakere Rayapalli
32	Chintamani	Veearapalli Tank, Veerapalli
33	Chintamani	Boppankere, Tummalahalli
34	Chintamani	Bareddkunte Neelappalli
35	Chintamani	Venkatarayanakere, Palllgadda
36	Chintamani	Bakamankunte, Myakapothalahalli
37	Chintamani	Myalakunte, Yagavadevapalli
38	Chintamani	Mavinkare, S, Rattahalli
39	Chintamani	Jeenagalkore Nallagutlahalli

1	2	3
40	Chintamani	Doddakere, Guttapalya
41	Chintamani	Konarayankere Guttapalya
42	Chintamani	Doddalikunte Murugamalla
43	Chintamani	Doddahalli Kelginakere
44	Chintamani	Mamidikere Bynahalli
45	Chintamani	Paraganoddukere, K. Raguttahalli
46	Chintamani	Kamakashamma -Thippenahalli
47	Chintamani	Doddabommanahelli
48	Chintamani	Talagavara, Amanikere
49	Chintamani	Doddahalli Melinakere
50	Chintamani	Moogfalmari
51	Chintamani	Siddepalli
52	Chintamani	I. Kurupalli
53	Chintamani	Gudariahalli
54	Chintamani	Doddakere (Anakal)
55	Chintamani	Diguvakere, Marabahalli
56	Chintamani	Ankalammakere, Ankalamadagu
57	Chintamani	Doddekere, Muganahalli
58	Chintamani	Ragunyakanakere, Billandlahalli
59	Chintamani	Muliyanakunte, Minchenahalli
60	Chintamani	Yaguvamindigal
61	Chintamani	Ammayanakere-Anupalli
62	Chintamani	Nandanavanakere, Nandanavana.
63	Chintamani	Doddakere-Kencharlahalli
64	Chintamani	Doddakere Mittahalli
65	Chintamani	Nallasanekere Rammapamthatti
66	Chintamani	Paddayanakere-Anupalli
67	Gudibande	Bullasandra
68	Gudibande	Ullodu
69	Gudibande	Garudachariahalli
70	Gudibande	Chouthkuntanahally

1	2	3
71	Gudibande	Chilume Anjaneyaswamy Kere-Bramanarahalli
72	Gudibande	Apparasanakunte kere-Gandhamnagenahalli
73	Gudibande	Kannikala kunte kere-Gandhamnagenahalli
74	Gudibande	Konda Reddyhally
75	Gudibande	Kondavabanahalli-KhanlaKunte Kere
76	Gudibande	Sollapuramma kere-Lashimisagara
77	Gudibande	Sathya Sai kere-Kadehalli
78	Kolar	Settikunte
79	Kolar	Kallur
80	Kloar	Vaddakuntekere, Kimandur
81	Kolar	Tannekre Mullahalli
82	Kolar	Bhudalakere Gottahalli
83	Kolar	Annekere Thotli
84	Kolar	Uramundinakere-Haleri
85	Kolar	Cheluvanahalli
86	Kolar	Dimbachamanahally
87	Kolar	Chunchadenahally
88	Kolar	Athikere, Singodahalli
89	Kolar	Hullguttekere,Kallandur
90	Kolar	Doddakere, Settganahalli
91	Kolar	Mylaranakere, Singodahalli
92	Kolar	Doddahasala
93	Kolar	Dodda kere, Hollamballi
94	Kolar	Mallammanakere,Chikkayyur
95	Kolar	Kodagikere, Dima
96	Kolar	Uramundinakere,Chikkanahalli
97	Kolar	Doddakere, Kooteri
98	Kolar	Hosakere,Kallandur

1	2	3
99	Kolar	Sannakere, Kooteri
100	Kolar	Thimmanakere BegliBenajenahalli
101	Kolar	Kodagikee Beeramarahalli
102	Kolar	Kamadenahalli
103	Kolar	Poovandahalli
104	Kolar	Cinnapura
105	Kolar	Yalachipura
106	Kolar	Malasandra
107	Kolar	Banakere Atchatnahalli
108	Kolar	Kalkere
109	Kolar	Thippareddy kere Jambapura
110	Kolar	Hosakere Jambapura
111	Kolar	ThokalaGhatta
112	Kolar	Koratimailandahalli
113	Kolar	Kamanadahalli
114	Kolar	Urmundinakeren Chandrashekarapura
115	Kolar	Uramudinaker Jambapura
116	Kolar	Manchandalahali kere
117	Kolar	Dyavarakere, Rajenahalli
118	Kolar	Nagalkere Alambadi
119	Kolar	Kunigakere, Dinneri
120	Kolar	Bangaranakere, Rajenahallis
121	Kolar	Thimmarayagoundra Kere, Natuvaranalli
122	Malur	Hasadahalli-Jambukere
123	Malur	Mathangapura
124	Malur	Nallandahalli
125	Malur	Chikkakunthuru
126	Malur	Doddakunthur
127	Malur	Hijuvanahalli

1	2	3
128	Malur	Dasanakere, Maliappanahalli
129	Malur	Anepura
130	Malur	Kalegowdanakere Hungenahalli
131	Malur	Kelagina Kere, Pura
132	Malur	BanjiKere, Chowdadenahalli
133	Malur	UramudiaKere, Rampura
134	Malur	Hale Kere, Sonnappanahatti
135	Malur	Timmegowdana Kere,Ahanya
136	Mulbagal	Rachabandahalli Uramundinkere
137	Mulbagal	Hongikere-M.Agrahar
138	Mulbagal	Y. Gollahalli Chikkakere
139	Mulbagal	Y. Gollahalli Doddakere
140	Mulbagal	Alganahalli Kangalakere
141	Mulbagal	Kadadhavanakere Hosur
142	Mulbagal	Kadhirenahalli Settikunte
143	Mulbagal	Kadhirenalli Nasalikunte
144	Mulbagal	Kalikere Renukunte
145	Mulbagal	Kunibaned Kanagalakere
146	Mulbagal	Kallkere Tumkunte
147	Mulbagal	Gokunte Halekere
148	Mulbagal	Doddakere Nachahalli
149	Mulbagal	Chikkakere, Hosakre
150	Mulbagal	Minijenahalli
151	Mulbagal	Honnasettihalli
152	Mulbagal	Doddamadenahalliker, Doddamadenahalli
153	Mulbagal	Suddakunte Kere, Nagasandra
154	Mulbagal	Uramudhinakere-Gopasandra
155	Mulbagal	Kagginahalli kere, kagginahalli
156	Mulbagal	Doddakere, Cholangunte
157	Mulbagal	Hosaere Keelaholali
158	Mulbagal	Doddakere Nagamangala
159	Mulbagal	Hosakere Kere, Pitchguntalahalli

1	2	3
160	Mulbagal	Ramasandra
161	Mulbagal	Malakunte Kere Keelaholali
162	Mulbagal	Gowdanakere, Honaganahalli
163	Mulbagal	Doddakere Sanyasipalli
164	Mulbagal	Mindahalli
165	Mulbagal	Gaddamachinnapalli
166	Mulbagal	Byrasandra
167	Mulbagal	Sornarasanahalli
168	Mulbagal	Vegamadagu
169	Mulbagal	Doolapalli
170	Mulbagal	Doddakere Maddori
171	Mulbagal	Gummareddikere Mopurahalli
172	Mulbagal	T. Agara
173	Mulbagal	Kirumani
174	Mulbagal	Sunapakunte (Gudlu)
175	Mulbagal	Sunapakunte (Ooru)
176	Mulbagal	Dharenahalli Doddakere
177	Mulbagal	Hosahallikere Marandahally
178	Mulbagal	Kuthandahalli-Doddakere
179	Mulbagal	Bevahalli Ooramundinakere
180	Mulbagal	Amblikal Hongekere
181	Mulbagal	Bevahalll Shivasangarakere
182	Mulbagal	Kurubarahalli, (Doddakere)
183	Mulbagal	Amblika Doddakere
184	Mulbagal	Karavireddihalli Doddakere
185	Mulbagal	Marandanlii Adavikere
186	Mulbagal	Balasandra-Doddakere
187	Mulbagal	Bhangavadhi
188	Mulbagal	Thimanayakanakunte Kallarasanahalli
189	Mulbagal	C. Gundlehalli
190	Mulbagal	Chinappanakunte Kallarasanahalli
191	Mulbagal	G.Voddahalli
192	Mulbagal	Doddakere Doddathihalli

1	2	3
193	Mulbagal	Uppara Doddathihalli
194	Mulbagal	Doddakere-Punyahalli
195	Mulbagal	Kodihalli, Poolakunte
196	Mulbagal	Olagarenahalii, Neelasandhra kere
197	Mulbagal	Konanakunte
198	Mulbagal	Gownikunte Thippadoddi
199	Mulbagal	Thathikallu-Doddakere
200	Mulbagal	Poojenahalli
201	Mulbagal	Mudigere/Gaddur
202	Mulbagal	Mallekuppa
203	Mulbagal	D. Nagavara-Ballappanakere
204	Mulbagal	Seegehallikere Seegehosahalli
205	Mulbagal	Seegehosahalli-Nagarasakunte
206	Mulbagal	Thathikallu-Ballamkere
207	Mulbagal	Budamasanakere Thippadoddi
208	Mulbagal	Doddakere, Banonalli
209	Mulbagal	Doddakere Jammanahalli
210	Mulbagal	Uramundinakere Kammadatti
211	Shidlaghatta	Kondarajanahalli
212	Shidlaghatta	Pendlivarahalli
213	Shidlaghatta	Rajanakere-Valasenahalli
214	Shidlaghatta	G. Nakkalahalli
215	Shidlaghatta	Tholakunte-Valasenahalll
216	Shidlaghatta	Halehalli
217	Shidlaghatta	Ganjigunte
218	Shidlaghatta	Doddadasenahalli
219	Shidlaghatta	Bramanahally kere-Brahanarahally
220	Shidlaghatta	Amanikere - Devaramallur
221	Shidlaghatta	Sadalammanakere-Sadaii
222	Shidlaghatta	Mallur-Mallur Kere
223	Shidlaghatta	Byradagara kere, Dibburahalli
224	Shidlaghatta	Rallakere-Handiganala
225	Shidlaghatta	Hosakere Sadali

72(241) ಶ್ರೀ ಶಿವಶಂಕರ್‌ರೆಡ್ಡಿ ಎಲ್.ಹೆಚ್. (ಗೌರಿಬಿದನೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಕೇವಲ ಎರಡು ಜೂನಿಯರ್ ಕಾಲೇಜುಗಳು ಇರುವುದು ನಿಜವಲ್ಲವೇ;

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಒಂದೂ ಇಲ್ಲದೇ ಈ ಭಾಗದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಮಂಡಿಸಿದ್ದರೂ ಮಂಜೂರಾಗದೇ ಇರುವುದು ನಿಜವಲ್ಲವೇ;

ಈ) 2006–07ನೇ ಸಾಲಿನ ಆಯವ್ಯಯದಲ್ಲಿ ಹಣ ಮಂಜೂರು ಮಾಡಿ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಿ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗುವುದೇ;

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಆದರೆ ಎರಡು ಖಾಸಗಿ ಅನುದಾನಿತ ಕಾಲೇಜುಗಳು ಇರುತ್ತದೆ. (ಎ.ಇ.ಎಸ್. ನ್ಯಾಷನಲ್ ಕಾಲೇಜು ಮತ್ತು ಆಚಾರ್ಯ ಮಹಿಳಾ ಪ್ರಥಮ ದರ್ಜೆ ಕಾಲೇಜು)

ಇ) ಸರ್ಕಾರದಿಂದಲೇ ವೇತನ ಅನುದಾನ ಪಡೆಯುತ್ತಿರುವ ಎರಡು ಕಾಲೇಜುಗಳು ಇರುವುದರಿಂದ ಸರ್ಕಾರಿ ಕಾಲೇಜನ್ನು ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸಲಾಗುತ್ತಿಲ್ಲ.

ಈ) ಉದ್ಭವಿಸುವುದಿಲ್ಲ.

73 (151) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಬಡಜನರಿಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಉಚಿತವಾಗಿ ಹಂಚಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಇದಕ್ಕಾಗಿ ಉಚಿತ ನಿವೇಶನಕಾಂಕ್ಷಿಗಳ ಸಂಖ್ಯೆ ಎಷ್ಟು; ಈ ಬೇಡಿಕೆಗಳನ್ನು ಪೂರೈಸಲು ಸರ್ಕಾರ ಯಾವ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ;

ಇ) ರಾಜ್ಯದ ಕಡುಬಡವರಿಗೆ ಎಷ್ಟು ಮನೆಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ ಇದಕ್ಕಾಗಿ ಬೇಡಿಕೆಯಿರುವ ಸಂಖ್ಯೆ ಎಷ್ಟು : (ಜಿಲ್ಲಾವಾರು) ಮಾಹಿತಿ ಒದಗಿಸುವುದು)?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಬಡಜನರಿಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಉಚಿತವಾಗಿ ಹಂಚಲಾಗಿರುವ ನಿವೇಶನಗಳ ಸಂಖ್ಯೆ 13236 ಜಿಲ್ಲಾವಾರು ವಿವರವನ್ನು ಅನುಬಂಧ 'ಅ'ದಲ್ಲಿ ನೀಡಲಾಗಿದೆ.

ಆ) ಜೂನ್ 2003ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆ ಮಾಡಿದ್ದು, ಈ ಸಮೀಕ್ಷೆ ಪ್ರಕಾರ ನಿವೇಶನಾಕಾಂಕ್ಷಿಗಳ ಸಂಖ್ಯೆ 1042986. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಯ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆಯ ನಂತರ 2003–04 ರಿಂದ 2005–06 ಸಾಲಿನ ವರೆಗೆ 13236 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಉಳಿದವರಿಗೆ ಆದಷ್ಟು ಶೀಘ್ರವಾಗಿ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಇ) ಸಮೀಕ್ಷೆ ಪ್ರಕಾರ 1226345 ವಸತಿ ರಹಿತರು ಇರುವುದು ಕಂಡುಬಂದಿರುತ್ತದೆ. ಸಮೀಕ್ಷೆಯ ನಂತರ 2003–2004 ರಿಂದ 2005–2006ರ ಸಾಲಿನ ವರೆಗೆ 575925 ಮನೆಗಳ ಗುರಿಯನ್ನು ನೀಡಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ 'ಆ'ದಲ್ಲಿ ನೀಡಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ಬಡಜನರಿಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಉಚಿತವಾಗಿ ಹಂಚಲಾಗಿರುವ ನಿವೇಶನಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಗಳು	2003–2004	2004–2005	2005–2006	ಒಟ್ಟು
1	2	3	4	5	6
1	ಬಾಗಲ ಕೋಟೆ	0	0	0	0
2	ಬೆಂಗಳೂರು ಗ್ರಾಮಾಂತರ	0	0	0	0
3	ಬೆಂಗಳೂರು ನಗರ	0	0	838	838
4	ಬೆಳಗಾವಿ	0	928	0	928
5	ಬೆಳ್ಳಾರಿ	0	0	0	0
6	ಬೀದರ	0	0	0	0
7	ವಿಜಾಪುರ	1653	54	45	1752
8	ಚಾಮರಾಜ ನಗರ	0	0	0	0
9	ಚಿಕ್ಕಮಗಳೂರು	46	305	0	351
10	ಚಿತ್ರದುರ್ಗ	0	819	0	819
11	ದಕ್ಷಿಣ ನ್ನಡ	791	`490	5	1286
12	ದಾವಣಗೆರೆ	0	412	0	412
13	ಧಾರವಾಡ	0	0	0	0
14	ಗದಗ	0	125	0	125

15	ಗುಲ್ಬರ್ಗಾ	408	0	0	480
16	ಹಾಸನ	2174	0	0	2174
17	ಹಾವೇರಿ	524	0	0	524
18	ಕೊಡಗು	0	118	0	118
19	ಕೋಲಾರ್	0	0	0	0
20	ಕೊಪ್ಪಳ	0	0	0	0
21	ಮಂಡ್ಯ	0	0	0	0
22	ಮೈಸೂರು	0	0	0	0
23	ರಾಯಚೂರು	0	825	0	825
24	ಶಿವಮೊಗ್ಗ	0	65	0	65
25	ತುಮಕೂರು	0	496	0	496
26	ಉಡುಪಿ	1796	125	194	2115
27	ಉತ್ತರ ಕನ್ನಡ	0	0	0	0
	ಒಟ್ಟು	**7392**	**4762**	**1082**	**13236**

ಅನುಬಂಧ 'ಆ'

ರಾಜ್ಯದಲ್ಲಿ ಬೇಡಿಕೆ ಇರುವ ವಸತಿರಹಿತ ಸಂಖ್ಯೆ

1	Bagalkot	16234
2	Bangalore Rural	67347
3	Bangalore Urban	24738
4	Belgaum	99286
5	Bellary	47909
6	Bidar	54092
7	Bijapur	40895
8	Chamarajanagar	52648
9	Chikmagalur	26291
10	Chitradurga	90101

11	Dakshina Kannada	14736
12	Davanagere	38390
13	Dharwad	25019
14	Gadag	14332
15	Gulbarga	74497
16	Hassan	45524
17	Haveri	35365
18	Kodagu	5471
19	Kolar	76304
20	Koppal	36330
21	Mandya	47720
22	Mysore	76042
23	Raichur	78241
25	Shimoga	33311
25	Tumkur	71345
26	Udupi	12250
26	Uttara Kannada	21927
	Total	**1226345**

74 (152) ಶ್ರೀ ವಾಟಾಳ್ ನಾಗರಾಜ್ (ಚಾಮರಾಗನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳೆಷ್ಟು? [ಜಿಲ್ಲಾವಾರು ಮಾಹಿತಿ ಒದಗಿಸುವುದು];

ಆ) ಈ ಶಾಲೆಗಳಲ್ಲಿ ಕೊರತೆಯಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು;

ಇ) ಚಾಮರಾಜನಗರ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೊರತೆಯಿರುವ ಶಿಕ್ಷಕರ ಹುದ್ದೆಯನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 3,017 [ಪಟ್ಟಿ ಲಗತ್ತಿಸಿದೆ]

ಆ) 1,177

ಇ) ಬಂದಿದೆ ಚಾಮರಾಜನಗರ ಜಿಲ್ಲೆಯಲ್ಲಿ 63 ಸರ್ಕಾರಿ ಪ್ರೌಢಶಾಲೆ ಸಹ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ.

ಈ) ಈವರೆಗೆ ರಾಜ್ಯದಲ್ಲಿ ಖಾಲಿ ಇದ್ದ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಹಾಗೂ ಬಡ್ತಿ ಮುಖಾಂತರ ತುಂಬಲಾಗಿದೆ. ಸದರಿ 1,77 ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಸರ್ಕಾರಿ ಪ್ರೌಢಶಾಲೆಗಳ ಜಿಲ್ಲಾವರು ವಿವರ.

ಕ್ರ.ಸಂ	ಜಿಲ್ಲೆ	ಒಟ್ಟು
1	2	3
01.	ಬೆಂಗಳೂರು ಉತ್ತರ	44
02.	ಬೆಂಗಳೂರು ದಕ್ಷಿಣ	61
03.	ಬೆಂಗಳೂರು ಗ್ರಾಮಾಂತರ	120
04.	ಕೋಲಾರ	156
05	ಚಿಕ್ಕಬಳ್ಳಾಪುರ	14
06.	ತುಮಕೂರು	146
07.	ಮಧುಗಿರಿ	14
08.	ಶಿವಮೊಗ್ಗ	123
09.	ಚಿತ್ರದುರ್ಗ	88
10.	ದಾವಣಗೆರೆ	121
11.	ಮೈಸೂರು	158
12.	ಚಾಮರಾಜನಗರ	53
13.	ಮಂಡ್ಯ	159
14.	ಹಾಸನ	173
15.	ಚಿಕ್ಕಮಗಳೂರು	91

1	2	3
16.	ಕೊಡಗು	32
17.	ದಕ್ಷಿಣ ಕನ್ನಡ ಜಿಲ್ಲೆ	110
18.	ಉಡುಪಿ	95
19.	ಬೆಳಗಾಂ	144
20.	ಚಿಕ್ಕೋಡಿ	08
21.	ಬಿಜಾಪುರ	81
22.	ಬಾಗಲಕೋಟೆ	95
23.	ಧಾರವಾಡ	53
24.	ಹಾವೇರಿ	58
25.	ಗದಗ್	75
26	ಉತ್ತರ ಕನ್ನಡ	81
27.	ಗುಲ್ಬರ್ಗಾ	228
28.	ಯಾದಗಿರಿ	07
29.	ಬಳ್ಳಾರಿ	111
30.	ರಾಯಚೂರು	105
31.	ಕೊಪ್ಪಳ	98
32.	ಬೀದರ್	115
	ಒಟ್ಟು	**3017**

75(153) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು, ನ್ಯಾಯ ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳೆಷ್ಟು

ಆ) ಯಾವ ನ್ಯಾಯಾಲಯಗಳಲ್ಲಿ ಯಾವ ಹಂತದಲ್ಲಿ ಮೊಕದಮ್ಮೆಗಳು ಬಾಕಿ ಉಳಿದಿವೆ:

ಇ) ರಾಜ್ಯದಲ್ಲಿ ಎಷ್ಟು ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಕೊರತೆ ಇದೆ:

ಈ) ಕೊರತೆ ಇರುವಂತಹ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ:

ಉ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮ್ಮೆಗಳೆಷ್ಟು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು, ನ್ಯಾಯ ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) 10,55,278 (1–2–2006ರಂದು)

ಆ) ರಾಜ್ಯದಲ್ಲಿರುವ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು, ಸಿವಿಲ್ ನ್ಯಾಯಾಲಯಗಳ (ಹಿರಿಯ ವಿಭಾಗ) ಮತ್ತು ಸಿವಿಲ್ ನ್ಯಾಯಾಲಯಗಳು (ಕಿರಿಯ ವಿಭಾಗ) ಇಲ್ಲಿ ಬಾಕಿ ಇದ್ದು, ನೋಟೀಸ್ ಜಾರಿ, ವಾಗ್ವಾದ ಹಾಗೂ ಸಾಕ್ಷಿ ಹಂತದಲ್ಲಿವೆ.

ಇ) 63

ಈ) ಜಿಲ್ಲಾ ನ್ಯಾಯಾಧೀಶರ ವೃಂದದಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಉಚ್ಚ ನ್ಯಾಯಾಲಯ ಕ್ರಮ ಕೈಗೊಳ್ಳುತ್ತಿದೆ, ಇತರೆ ನ್ಯಾಯಾಂಗ ಅಧಿಕಾರಿಗಳ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) 85911

76 (154) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶದ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅವುಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು?

ಈ) ಯಾವ ಯಾವ ಕ್ಷೇತ್ರಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗಿದೆ? (ವಿಧಾನ ಕ್ಷೇತವಾರು ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಪ್ರಸ್ತುತ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಸರ್ಕಾರವು ರೂ.80.12 ಕೋಟಿ ಅನುದಾನ ಒದಗಿಸಿದೆ.

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ರೂ. 332.75 ಕೋಟಿಗಳನ್ನು ಖರ್ಚುಮಾಡಿದೆ.

ಈ) ಕ್ಷೇತ್ರವಾರು ವೆಚ್ಚದ ವಿವರವನ್ನು ಅನುಬಂಧ–1ರಲ್ಲಿ ನೀಡಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 154ರ ಉತ್ತರದ ಲಗತ್ತು

ಅನುಬಂಧ-1

ಕ್ರ.ಸಂ	ಜಿಲ್ಲೆ	ವಿಧಾನಸಭಾ ಕ್ಷೇತ್ರದ ಹೆಸರು	ಕ್ಷೇತ್ರವಾರು ಖರ್ಚು ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)
1	2	3	4
1	ಧಾರವಾಡ	ಧಾರವಾಡ	133.46
2		ಹುಬ್ಬಳ್ಳಿ	93.32
3		ಕಲಘಟಗಿ	131.44
4		ಕುಂದಗೋಳ	123.77
5		ನವಲಗುಂದ	90.75
6	ಗದಗ	ಗದಗ	64.34
7		ಮುಂಡರಗಿ	88.02
8		ನರಗುಂದ	71.02
9		ರೋಣ	61.13
10		ಶಿರಹಟ್ಟಿ	62.78
11	ಹಾವೇರಿ	ಹಾವೇರಿ	293.31
12		ಹಾನಗಲ್	234.02
13		ಹಿರೇಕೆರೂರು	202.06
14		ರಾಣೆಬೆನ್ನೂರು	22.3.15
15		ಬ್ಯಾಡಗಿ	129.21
16		ಶಿಗ್ಗಾಂವ್	302.85
17	ಉತ್ತರ ಕನ್ನಡ	ಕಾರವಾರ	302.85
18		ಅಂಕೋಲ	217.49
19		ಕುಮಟಾ	162.12
20		ಭಟ್ಕಳ್	316.04
21		ಶಿರಸಿ	203.01
22		ಹಳಿಯಾಳ	289.73
23	ಬಳ್ಳಾರಿ	ಕುರುಗೋಡು	275.81

1	2	3	4
24		ಹೊಸಪೇಟೆ	193.22
25		ಶಿರಗುಪ್ಪ	255.43
26		ಸಂಡೂರು	160.08
27		ಹಡಗಲಿ	171.71
28		ಕೂಡ್ಲಗಿ	128.09
29		ಕೊಟ್ಟೂರು	137.44
30	ಶಿವಮೊಗ್ಗ	ಶಿವಮೊಗ್ಗ	113.92
31		ಹೊಸನಗರ	193.12
32		ಭದ್ರಾವತಿ	108.98
33		ಹೊಳೆಹೊನ್ನೂರು	288.23
34		ತೀರ್ಥಹಳ್ಳಿ	294.06
35		ಸಾಗರ	71.54
36		ಸೊರಬ	75.00
37		ಶಿಕಾರಿಪುರ	98.09
38	ಮಂಡ್ಯ	ಕೆ.ಆರ್.ಪೇಟೆ	234.72
39		ಮದ್ದೂರು	221.68
40		ಕಿರುಗಾವಲು	91.28
41		ಮಳವಳ್ಳಿ	130.04
42		ಮಂಡ್ಯ	84.02
43		ಕೆರಗೋಡು	10.04
44		ನಾಗಮಂಗಲ	180.00
45		ಪಾಂಡವಪುರ	160.00
46		ಶ್ರೀರಂಗಪುರ	191.03
47	ರಾಯಚೂರು	ರಾಯಚೂರು	63.77
48		ಕಲ್ಮಲ	95.42
49		ಮಾನ್ವಿ	126.06
50		ಲಿಂಗಸೂಗೂರು	133.91
51		ಸಿಂಧನೂರು	109.49
52		ದೇವದುರ್ಗ	125.93

1	2	3	4
53	ಕೊಡಗು	ಮಡಿಕೇರಿ	264.49
54		ಸೋಮವಾರಪೇಟೆ	253.01
55		ವಿರಾಜಪೇಟೆ	240.41
56	ಉಡುಪಿ	ಉಡುಪಿ	49.56
57		ಕಾಪು	42.91
58		ಬ್ರಹ್ಮಾವರ	59.41
59		ಕುಂದಾಪುರ	61.01
60		ಬೈಂದೂರು	64.93
61		ಕಾರ್ಕಳ	81.02
62	ಹಾಸನ	ಹಾಸನ	145.69
63		ಗಂಡಸಿ	139.24
64		ಬೇಲೂರು	139.51
65		ಸಕಲೇಶಪುರ	235.87
66		ಅರಕಲಗೂಡು	135.49
67		ಶ್ರವಣಬೆಳಗೋಳ	108.08
68		ಅರಶಿಕೆರೆ	58.31
69		ಹೊಳೆನರಸೀಪುರ	135.06
70	ಮೈಸೂರು	ಚಾಮುಂಡೇಶ್ವರಿ	452.08
71		ನಂಜನಗೂಡು	198.23
72		ನರಸೀಪುರ	267.11
73		ಬನ್ನೂರು	55.90
74		ಕೆ.ಆರ್ ನಗರ	207.42
75		ಪಿರಿಯಾಪಟ್ಟಣ	410.93
76		ಹುಣಸೂರು	290.11
77		ಹೆಚ್.ಡಿ.ಕೋಟೆ	400.47
78	ಚಾಮರಾಜನಗರ	ಚಾಮರಾಜನಗರ	158.23
79		ಸಂತೇಮರಳ್ಳಿ	219.17
80		ಗುಂಡ್ಲುಪೇಟೆ	198.98
81		ಕೊಳ್ಳೇಗಾಲ	194.24

1	2	3	4
82		ಹನ್ನೂರು	340.08
83	ಬಿಜಾಪುರ	ಬಿಜಾಪುರ	57.76
84		ತಿಕೋಟಾ	133.44
85		ಬಳ್ಳೋಳಿ	132.44
86		ಹೂವಿನ ಇಪ್ಪರಗಿ	127.07
87		ಮುದ್ದೇಬಿಹಾಳ	136.84
88		ಸಿಂಧಗಿ	126.16
89		ಬಾಗೇವಾಡಿ	112.69
90		ಇಂಡಿ	128.74
91	ಕೊಪ್ಪಳ	ಕೊಪ್ಪಳ	136.71
92		ಗಂಗಾವತಿ	121.47
93		ಕನಕಗಿರಿ	119.78
94		ಯಲಬುರ್ಗಾ	214.48
95		ಕುಷ್ಟಗಿ	143.14
96	ಚಿಕ್ಕಮಗಳೂರು	ಚಿಕ್ಕಮಗಳೂರು	254.97
97		ಕಡೂರು	177.00
98		ಬೀರೂರು	156.84
99		ಮೂಡಿಗೆರೆ	213.14
100		ತರೀಕೆರೆ	187.98
101		ಶೃಂಗೇರಿ	511.51
102	ದಕ್ಷಿಣ ಕನ್ನಡ	ಸೂರತ್ಕಲ್	35.42
103		ಉಲ್ಲಾಳ	33.03
104		ಬಂಟ್ವಾಳ	56.22
105		ಮೂಡುಬಿದರೆ	33.16
106		ವಿಟ್ಲಾ	53.05
107		ಪುತ್ತೂರು	66.42
108		ಸೂಳ್ಯ	78.92
109		ಬೆಳ್ತಂಗಡಿ	76.50
110	ಬಾಗಲಕೋಟೆ	ಬಾಗಲಕೋಟೆ	115.34
111		ಬದಾಮಿ	124.27
112		ಹುನಗುಂದ	145.53

1	2	3	4
113		ಬೀಳಗಿ	237.07
114		ಗುಳೇದಗುಡ್ಡ	69.77
115		ಮುದೋಳ್	224.10
116		ಜಮಖಂಡಿ	218.63
117	ಬೆಳಗಾಂ	ಉಚ್ಚಗಾಂ	130.44
118		ಹಿರೇಬಾಗೆವಾಡಿ	150.64
119		ಖಾನಾಪೂರ	196.55
120		ಕಿತ್ತೂರು	206.96
121		ಬೈಲಹೊಂಗಲ	81.26
122		ಸವದತ್ತಿ	152.11
123		ರಾಮದುರ್ಗ	84.78
124		ಅಥಣಿ	477.79
125		ಕಾಗೆವಾಡ	404.78
126		ಚಿಕ್ಕೋಡಿ	371.29
127		ಸದಲಗಾ	490.21
128		ನಿಪ್ಪಾಣಿ	247.53
129		ಗೋಕಾಕ್	237.81
130		ಅರಬಾವಿ	316.03
131		ಹುಕ್ಕೇರಿ	171.74
132		ಸಂಕೇಶ್ವರ	235.10
133		ರಾಯಬಾಗ್	425.28
134	ಕೋಲಾರ	ಕೋಲಾರ	240.59
135		ವೇಮಗಲ್	95.33
136		ಮಾಲೂರು	169.21
137		ಬೇತಮಂಗಲ	262.69
138		ಮುಳಬಾಗಿಲು	170.72
139		ಶ್ರೀನಿವಾಸಪುರ	153.96
140		ಚಿಕ್ಕಬಳ್ಳಾಪುರ	141.84
141		ಚಿಂತಾಮಣಿ	121.21
142		ಶಿಡ್ಲಘಟ್ಟ	133.27

1	2	3	4
143		ಗೌರಿಬಿದನೂರು	133.31
144		ಬಾಗೇಪಲ್ಲಿ	259.34
145	ತುಮಕೂರು	ತುಮಕೂರು	48.97
146		ಗುಬ್ಬಿ	207.51
147		ಕಳ್ಳಂಬೆಳ್ಳ	83.63
148		ಬೆಳ್ಳಾವಿ	170.62
149		ತಿಪಟೂರು	108.05
150		ಚಿಕ್ಕನಾಯ್ಕನಹಳ್ಳಿ	286.93
151		ತುರುವೇಕೆರೆ	124.57
152		ಕುಣಿಗಲ್	152.34
153		ಹುಲಿಯೂರುದುರ್ಗ	180.94
154		ಶಿರಾ	202.29
155		ಮಧುಗಿರಿ	270.53
156		ಕೊರಟಗೆರೆ	322.13
157		ಪಾವಗಡ	249.93
158	ಚಿತ್ರದುರ್ಗ	ಚಿತ್ರದುರ್ಗ	146.39
159		ಚಳ್ಳಕೆರೆ	245.71
160		ಹಿರಿಯೂರು	223.94
161		ಹೊಸದುರ್ಗ	225.06
162		ಹೊಳಲ್ಕೆರೆ	235.93
163		ಮೊಳಕಾಲ್ಮೂರು	192.55
164	ಗುಲ್ಬರ್ಗಾ	ಅಫಜಲ್‌ಪುರ	86.73
165		ಆಳಂದ	59.85
166		ಕಮಲಾಪುರ	89.17
167		ಚಿಂಚೋಳಿ	80.49
168		ಚಿತ್ತಾಪುರ	52.37
169		ಶಹಬಾದ್	66.81
170		ಸೇಡಂ	54.50
171		ಯಾದಗಿರಿ	70.38
172		ಶಹಾಪೂರ	82.84
173		ಸುರಪುರ	68.17

1	2	3	4
174		ಜೇವರ್ಗಿ	77.12
175		ಗುರುಮಿಟ್‌ಗಲ್	52.30
176	ಬೆಂಗಳೂರು (ಗ್ರಾ)	ರಾಮನಗರ	148.76
177		ಚನ್ನಪಟ್ಟಣ	95.23
178		ಮಾಗಡಿ	205.49
179		ಕನಕಪುರ	136.68
180		ಸಾತನೂರು	84.46
181		ದೇವನಹಳ್ಳಿ	171.53
182		ನೆಲಮಂಗಲ	236.82
183		ಹೊಸಕೋಟೆ	271.07
184		ದೊಡ್ಡಬಳ್ಳಾಪುರ	189.47
185	ಬೆಂಗಳೂರು (ನ)	ಆನೇಕಲ್	198.83
186		ಉತ್ತರಹಳ್ಳಿ	70.25
187		ವರ್ತೂರು	56.75
188		ಯಲಹಂಕ	71.01
189	ಬೀದರ್	ಬೀದರ್	77.67
190		ಹುಮ್ನಾಬಾದ್	79.56
191		ಔರಾದ್	81.82
192		ಹುಲುಸೂರು	84.00
193		ಭಾಲ್ಕಿ	76.89
194		ಬಸವಕಲ್ಯಾಣ	87.63
195	ದಾವಣಗೆರೆ	ಮಾಯಕೊಂಡ	195.65
196		ಚೆನ್ನಗಿರಿ	197.03
197		ಹರಿಹರ	202.19
198		ಜಗಳೂರು	152.41
199		ಹರಪ್ಪನಹಳ್ಳಿ	80.16
200		ಬರಮಸಾಗರ	264.57
201		ಹೊನ್ನಾಳಿ	317.36
		ಒಟ್ಟು	33274.55

ಕರ್ನಾಟಕ ವಿಧಾನ ಸಭೆ

ಗುರುವಾರ 23ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 29 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಹುತಾತ್ಮರ ಸ್ಮರಣೆ.

ವಿಷಯ: ಭಗತ್‌ಸಿಂಗ್ ರಾಜಗುರು ಸುಖದೇವ್ ಹುತಾತ್ಮರ ಬಗ್ಗೆ ಸ್ಮರಣೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಭಗತ್‌ಸಿಂಗ್ ರಾಜಗುರು ಸುಖದೇವ್‌ರವರನ್ನು ನೇಣುಗಂಬಕ್ಕೆ ಹಾಕಿದ ದಿವಸ. ಆದಕಾರಣ ಸದನದಲ್ಲಿ ಅವರಿಗೆ ಒಂದು ನಿಮಿಷ ಮೌನವನ್ನಾಚರಿಸಿ ಗೌರವ ಸಲ್ಲಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸುಖದೇವ್‌ರವರನ್ನು 1931ರ ಈ ದಿನ ಗಲ್ಲಿಗೇರಿಸಿದ್ದರು. ಅವರಿಗೆ ಈ ದಿನ ಗೌರವ ಸೂಚಿಸಿ ನೆನೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಆಗಿರುತ್ತದೆ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಕಾಲ ಎದ್ದು ನಿಂತು ಗೌರವ ಸೂಚಿಸಬೇಕು.

(ಸದನದಲ್ಲಿ ಎಲ್ಲಾ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಕಾಲ ಗೌರವ ಸೂಚಿಸಿದರು)

2. ಪ್ರಶ್ನೋತ್ತರ :

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು)

ವಿಷಯ: ಗದಗ್‌ನ ಅನಾಥಾಲಯಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

31(208) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದುಗಿನಲ್ಲಿ ಒಂದು ಅತ್ಯುತ್ತಮ ಅನಾಥಾಲಯ ನಡೆಸುತ್ತಿರುವ ಬಾಸೆಲ್ ಮಿಶನ್ ಸಂಸ್ಥೆಗೆ ಕಳೆದ ಎರಡು ವರ್ಷಗಳಿಂದ ಅನುದಾನ ನಿಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಬೇರ್ಪಡಿಸಿರುವುದರಿಂದ ಹಲವು ತೊಂದರೆಗೆ ಸಂಸ್ಥೆ ಒಳಗಾಗಿದ್ದು ಕೂಡಲೇ ಅವರಿಗೆ ಬರಬೇಕಾದ ಕಳೆದ ಎರಡು ವರ್ಷಗಳ ಅನುದಾನದೊಂದಿಗೆ ವರ್ಷದ ಅನುದಾನವನ್ನು ಕೂಡಲೇ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಸರ್ಕಾರದ ಯೋಜನೆಗಳನ್ನು ಪ್ರಾಮಾಣಿಕವಾಗಿ ಪಾರದರ್ಶಕವಾಗಿ ಹಾಗೂ ಅನುಕರಣೀಯವಾಗಿ ಅನುಷ್ಠಾನಗೊಳಿಸುತ್ತಿರುವ ಇಂತಹ ಆದರ್ಶ ಸಂಸ್ಥೆಗಳಿಗೆ ಇನ್ನು ಮುಂದಾದರೂ ಅನುದಾನವನ್ನು ಪ್ರತಿ 3 ತಿಂಗಳಿಗೊಮ್ಮೆ ಸಿಗುವ ವ್ಯವಸ್ಥೆಯನ್ನು ಸರ್ಕಾರ ಮಾಡುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು)

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ ಸಕಇ 219 ಬಿಎಂಎಸ್ 99, ದಿನಾಂಕ: 17-2-2000ರಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿದ್ದ ಅಲ್ಪಸಂಖ್ಯಾತರ ಯೋಜನೆಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಗಿದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ ಸಕಇ 219 ಬಿಎಂಎಸ್ 99, ದಿನಾಂಕ: 31-10-2000ರಲ್ಲಿ 39 ಅನಾಥಾಲಯಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಯಿತು. ಆದರೆ ಸದರಿ ಅನಾಥಾಲಯ ಪಟ್ಟಿಯಲ್ಲಿ **ಬಾಸೆಲ್ ಮಿಶನ್** ಅನಾಥಾಲಯ ಬೆಟಗೇರಿ, ಗದಗ್ ಸೇರಿರುವುದಿಲ್ಲ. ಈ ಸಂಸ್ಥೆಯು ಇನ್ನೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲೇ ಇದ್ದು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸುವವರೆಗೆ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಜಿಲ್ಲಾ ಪಂಚಾಯತ್ ಗದಗ್ ಇವರಿಂದ ಬಾಕಿ ಅನುದಾನ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಸೂಕ್ತ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವರ್ಗ ಬೇರೆ ಬೇರೆಯಾಗಿಲ್ಲ. ಇದು ಜಿಲ್ಲಾ ಸೆಕ್ಟಾರ್‌ಗೆ ಟ್ರಾನ್ಸ್‌ಫರ್ ಆದ ಮೇಲೆ ಅನುದಾನ ಬಿಡುಗಡೆಯಾಗುವುದರಲ್ಲಿ ತಡವಾಗಬಾರದು. ಎರಡು ವರ್ಷಗಳಿಂದ ಅಂತಹ ಒಂದು ಸಂಸ್ಥೆಗೆ ಅನುದಾನ ಸಿಕ್ಕಿಲ್ಲವೆಂದರೆ ಪರಿಸ್ಥಿತಿಯನ್ನು ತಾವು ಊಹಿಸಿ. ಗದಗ್ ಜಿಲ್ಲಾ ಪಂಚಾಯತ್ ಚೀಫ್ ಸೆಕ್ರೆಟರಿಗೆ ತಾವು ಡೈರೆಕ್ಷನ್ ಕೊಟ್ಟು ಮಾರ್ಚ್ 31ರೊಳಗೆ ಪೂರ್ತಿ ಅನುದಾನ ಸಿಗುವಂತಹ ಭರವಸೆಯನ್ನು ತಾವು ಕೊಡಬೇಕು.

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದೆ ಅನಾಥಾಲಯಗಳನ್ನು ಹಿಂದುಳಿದ ವರ್ಗಗಳ ಇಲಾಖೆಯ ವತಿಯಿಂದ ನಡೆಸುತ್ತಿದ್ದು, ಈಗ ಅಲ್ಪಸಂಖ್ಯಾತರ ಇಲಾಖೆಗೆ ಸರ್ಕಾರದ ಆದೇಶ 2000ದ ಸಾಲಿನಲ್ಲಿ ಯೋಜನೆಗಳನ್ನು ವರ್ಗಾಯಿಸಲಾಯಿತು. ಆ ರೀತಿಯಾಗಿ 39 ಅನಾಥಾಲಯಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಗಿದೆ. ಆದರೆ ತಾವು ಕೇಳಿರುವ ಬಾಸೆಲ್ ಮಿಶನ್, ಬೆಟಗೇರಿ ಅನಾಥಾಲಯವನ್ನು ಅಲ್ಪಸಂಖ್ಯಾತರ ಇಲಾಖೆಗೆ ಸೇರಿಸಲಾಗಿಲ್ಲ. ಇಲ್ಲಿಯವರೆಗೆ ಜಿಲ್ಲಾ ಪಂಚಾಯತ್ ವತಿಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಮಾನ್ಯ ಹಿರಿಯ ಶಾಸಕರಾದ ಪಾಟೀಲ್‌ರವರು ಹೇಳಿದ ಪ್ರಕಾರ ಅದರ ಬಗ್ಗೆ ತಕ್ಷಣ ಜಿಲ್ಲಾ ಪಂಚಾಯತ್‌ನವರಿಗೆ ಆದೇಶ ಕೊಟ್ಟು ಇಲ್ಲಿಯವರೆಗೆ ನಿಲ್ಲಿಸಿರುವ ಹಣವನ್ನು ಕೊಡುವುದಕ್ಕೆ ಆದೇಶಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅನುದಾನದ ಬಗ್ಗೆ ಹೇಳುವುದಾದರೆ ತಾವು ಹಾಗೂ ಮಾನ್ಯ ಸಮಾಜ ಕಲ್ಯಾಣ ಸಚಿವರು ಹೇಳಬೇಕು. ಸಂಸ್ಥೆಗಳು ಏನು ಅನುದಾನವನ್ನು ಸ್ವೀಕರಿಸುವುದು ಇರುತ್ತದೆ. ಅವುಗಳಿಗೆ ಆ ಅನುದಾನದ ಹಣ ಮೂರು ತಿಂಗಳಿಗೆ ಸರಿಯಾಗಿ ಬ್ಯಾಂಕ್ ಅಕೌಂಟ್‌ಗೆ ಜಮೆಯಾಗುವ ಹಾಗೆ ಆಗಬೇಕು. ಆ ರೀತಿಯಾಗಿ ಜಮೆಯಾಗುವ ಹಾಗೆ ಮಾಡಿದರೆ, ಬಹಳಷ್ಟು ದೂರು ಬರದಂತೆ ಆಗುತ್ತದೆ. ಅದರ ಬಗ್ಗೆ ತಾವು ಮತ್ತು ಮಾನ್ಯ ಬಾಲಚಂದ್ರ ಅವರು ಭರವಸೆ ಕೊಡಬೇಕು. ನಾವು ಕಾಲೇಜು ಕಲಿಯುವ ಸಂದರ್ಭದಲ್ಲಿ ಡಿವೈಡಿಂಗ್ ಸಿಸ್ಟಂ

ಎಂದು ಇತ್ತು. ಆಗ ನಾವೇ ಮೆನ್ಯು ಫಿಕ್ಸ್ ಮಾಡಿ ಅಡುಗೆಗೆ ಬೇಕಾದಂತಹ ಸಾಮಾನುಗಳನ್ನು ಖರೀದಿ ಮಾಡುತ್ತಿದ್ದೆವು. ಆ ರೀತಿಯಾಗಿ ಸಿಸ್ಟಂ ಇಂಟ್ರಡ್ಯೂಸ್ ಮಾಡುವುದಕ್ಕೆ ತೊಂದರೆ ಏನಿದೆ? ಈ ಸಿಸ್ಟಂ ಅನ್ನು ಮೊದಲು ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ಇಂಟ್ರಡ್ಯೂಸ್ ಮಾಡಿ. ಈಗ ಹಾಸ್ಟೆಲ್‌ನಲ್ಲಿ ಏನು ಅವ್ಯವಹಾರ ಇದೆ. ಆ ಅವ್ಯವಹಾರ ಆಗದ ಹಾಗೆ ಆಗುತ್ತದೆ. ಆಗ ಹುಡುಗರೂ ಕೂಡ ಖುಷಿಯಿಂದ ಊಟವನ್ನು ಮಾಡುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರವರು ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಇದು ಬಹಳಷ್ಟು ಗಂಭೀರವಾಗಿರತಕ್ಕಂಥ ವಿಷಯ. ಅನುದಾನದ ಹಣವನ್ನು ಮೂರು ತಿಂಗಳಿಗೆ ಕೊಡುವಂತಹ ವ್ಯವಸ್ಥೆಯ ಬಗ್ಗೆ ಹೇಳಿದರು. ಆದರೆ ಕೆಲವು ಜಿಲ್ಲೆಗಳಲ್ಲಿ ಆರು ತಿಂಗಳವರೆಗೆ ಜಿಲ್ಲಾ ಪಂಚಾಯತ್ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ತಮ್ಮ ಹತ್ತಿರ ಇಟ್ಟುಕೊಂಡಿದ್ದಾರೆ. ಬಿಲ್ ಸರಿಯಾಗಿ ಮಾಡಿಲ್ಲ ಎಂದು ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ ಕೊಡುವುದಾಗಿದ್ದು, ಮಕ್ಕಳಿಗೆ ಕೊಡುವಂತಹ ಆಹಾರವನ್ನು ಯಾರು ಸಪ್ಲೈ ಮಾಡುತ್ತಾರೆ. ಅವರು ಸರಿಯಾಗಿ ಸಪ್ಲೈ ಮಾಡದೆ ಇದ್ದು, ಅವರನ್ನು ಕೇಳಿದರೆ ನಮಗೆ ದುಡ್ಡು ಬಂದಿಲ್ಲ. ಎಲ್ಲಿಂದ ನಾವು ಸಪ್ಲೈ ಮಾಡುವುದು ಎಂದು ಹೇಳುತ್ತಾರೆ. ನೌಕರರಿಗೆ ಯಾವ ರೀತಿಯಾಗಿ ಸಂಬಳಕ್ಕೆ 28ನೇ ತಾರೀಖಿನಂದು ಚೆಕ್ ಕೊಡುತ್ತಾರೆ. ಅದೇ ರೀತಿಯಾಗಿ ಈ ಅನುದಾನವೂ ಕೂಡ ಅವರಿಗೆ ಸರಿಯಾದ ಸಮಯಕ್ಕೆ ಮುಟ್ಟತಕ್ಕಂಥ ರೀತಿಯಲ್ಲಿ ಆಗಬೇಕು. ನಾನು ಶಾಸಕನಾಗಿ 12 ವರ್ಷಗಳಾದರೂ ಪ್ರತಿವರ್ಷ ಇದೇ ಗೋಳಾಗಿದೆ. ನೀವು ಅಧಿಕಾರಿಗಳನ್ನು ಕರೆದು ಕೇಳಿ. ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಈ ವರ್ಷದ ದುಡ್ಡು ಕೊಡುತ್ತಾರೆ. ಈ ರೀತಿ ಆದರೆ ಹಾಸ್ಟೆಲ್‌ಗಳನ್ನು ಹೇಗೆ ನಡೆಸುವುದು, ಅದು ಸರಿಯಾಗುವುದಿಲ್ಲ. ಆದುದರಿಂದ ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ, 28ನೇ ತಾರೀಖಿನ ದಿವಸ ಬಿಲ್ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲರು ಹಾಗೂ ಮಾನ್ಯ ಬಯ್ಯಾಪುರರವರು ಬಹಳ ಸೂಕ್ತವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ತಿಳಿಸಿದ ಪ್ರಕಾರ ಮೂರು ತಿಂಗಳಿಗೊಮ್ಮೆ ಹಣವನ್ನು ನೇರವಾಗಿ ಸಂಸ್ಥೆಗೆ ಮುಟ್ಟುವಂತೆ ಮಾಡಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ಹಣಕಾಸು ಇಲಾಖೆಯಲ್ಲಿ ಹಣ ಏನು ಬಿಡುಗಡೆ ಮಾಡಬೇಕಾಗಿದೆ. ಯಾರು ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಎಸ್‌ಸಿ : ಎಸ್‌ಟಿ ಬ್ಯಾಕ್‌ವರ್ಡ್ ಹಾಸ್ಟೆಲ್‌ಗೆ ಸಂಬಂಧಪಟ್ಟ ಹಾಗೆ ಸಮಾಜ ಕಲ್ಯಾಣ ಸಚಿವರು .....

ಅಧ್ಯಕ್ಷರು : ಮಾನ್ಯ ಸದಸ್ಯರು ನೀವು ಏನು ಪ್ರಶ್ನೆ ಹಾಕಿದ್ದೀರಿ. ಅದರ ಬಗ್ಗೆ ಸಂಬಂಧಪಟ್ಟ ಸಚಿವರು ತಯಾರಾಗಿ ಬಂದಿದ್ದಾರೆ, ಉತ್ತರ ಹೇಳಿದ್ದಾರೆ. ಅವರು ಬೇರೆ ಇಲಾಖೆ ಮಂತ್ರಿಗಳು ಅದಕ್ಕೆ ನೀವು ಬೇರೆ ಪ್ರಶ್ನೆ ಹಾಕಿ ಅವರು ತಯಾರಾಗಿ ಬರಲಿ. ಅವರು ಆಯಿತು ಮಾಡುತ್ತೇವೆ ಎಂದರೆ, ನೀವು ಸಚಿವರು ಅಶ್ಯೂರೆನ್ಸ್ ಕೊಟ್ಟಿದ್ದಾರೆ ಎಂದು ಮತ್ತೆ ನಿಮ್ಮ ಅಶ್ಯೂರೆನ್ಸ್ ಕಮಿಟಿ ಮುಂದೆ ಬರುತ್ತದೆ.

ವಿಷಯ: ಹಿಂದುಳಿದ ವರ್ಗಗಳ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ವ್ಯವಸ್ಥೆ ಮಾಡುವುದು.

32 (210) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಹಿಂದುಳಿದ ವರ್ಗಗಳ ವಿವಿಧ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ಎಷ್ಟು ಹಾಸ್ಟೆಲ್‌ಗಳಿಗೆ ಇರುವರೆಗೆ ಸ್ವಂತ ಕಟ್ಟಡದ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ;

ಇ) ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಬಡ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಮತ್ತಿತರ ಪೂರಕ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿಕೊಡುವ ದಿಶೆಯಲ್ಲಿ ಸರ್ಕಾರದವರು ಹಮ್ಮಿಕೊಂಡಿರುವ ಯೋಜನೆಗಳೇನು?

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹಿಂದುಳಿದ ವರ್ಗಗಳ ಇಲಾಖೆಯಿಂದ 1440 ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ.

ಆ) ಇವುಗಳಲ್ಲಿ ಒಟ್ಟು 906 ವಿದ್ಯಾರ್ಥಿನಿಲಯಗಳಿಗೆ ಇದುವರೆಗೆ ಸ್ವಂತ ಕಟ್ಟಡದ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ. ಅಲ್ಲದೆ 42 ವಿದ್ಯಾರ್ಥಿನಿಲಯಗಳ ಬಾಡಿಗೆ ರಹಿತ ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇ) ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಹಾಲಿ ಈ ಕೆಳಕಂಡ ಕಾರ್ಯಕ್ರಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ :

ಈ ಕಾರ್ಯಕ್ರಮದಡಿಯಲ್ಲಿ ಒಟ್ಟು 1175 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿದ್ದು ಈ ನಿಲಯಗಳ ಮಂಜೂರಾತಿ ಸಂಖ್ಯಾ ಬಲ 60530, ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 450/–ರ ವೆಚ್ಚದಲ್ಲಿ ಆಹಾರ ನೀಡಲಾಗುತ್ತಿದೆ. ಅಲ್ಲದೆ ಉಚಿತ ಪಠ್ಯ ಪುಸ್ತಕ ಲೇಖನ ಸಾಮಗ್ರಿ ಸೋಪು, ಎಣ್ಣೆ ಹಾಗೂ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸಲಾಗುತ್ತಿದೆ. ದಿನ ಪತ್ರಿಕೆಗಳನ್ನು ನಿಲಯಗಳಿಗೆ ಪೂರೈಸಲಾಗುತ್ತಿದೆ. ಅಲ್ಪಕಾಲಿಕ ಬೋಧಕರ ಮುಖಾಂತರ ವಿಶೇಷ ಬೋಧನೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ.

2. ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ನಿರ್ವಹಣೆ :

ಈ ಕಾರ್ಯಕ್ರಮದಡಿಯಲ್ಲಿ ಒಟ್ಟು 265 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿದ್ದು ಈ ನಿಲಯಗಳ ಮಂಜೂರಾತಿ ಸಂಖ್ಯಾ ಬಲ 16725, ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 500/–ರ ವೆಚ್ಚದಲ್ಲಿ ಆಹಾರ ನೀಡಲಾಗುತ್ತಿದೆ. ದಿನ ಪತ್ರಿಕೆಗಳನ್ನು ನಿಲಯಗಳಿಗೆ ಪೂರೈಸಲಾಗುತ್ತಿದೆ.

3. ಪ್ರೋತ್ಸಾಹ ಧನ ಮಂಜೂರಾತಿ ಕಾರ್ಯಕ್ರಮ :

ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ನಿಲಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡಲಾಗುತ್ತಿದೆ.

4. ಹೆಚ್ಚುವರಿ ಭೋಜನಾ ವೆಚ್ಚ ನೀಡಿಕೆ :

ಮೆಟ್ರಿಕ್ ನಂತರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 200/- ಹೆಚ್ಚುವರಿ ಭೋಜನಾ ಮಂಜೂರು ಮಾಡಲಾಗುತ್ತಿದೆ.

ಹಿಂದುಳಿದ ವರ್ಗಗಳ ಸೇರಿದ ವೃತ್ತಿ ಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಸಹ ಈ ಸೌಲಭ್ಯ ನೀಡಲಾಗುತ್ತಿದೆ.

5. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ ಮಂಜೂರು :

ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣ ಮುಂದುವರೆಸಿಕೊಂಡು ಹೋಗಲು ಅನುಕೂಲ ಕಲ್ಪಿಸಿ ಉತ್ತೇಜನ ನೀಡುವ ದೃಷ್ಟಿಯಿಂದ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

6. ಆಶ್ರಮ ಶಾಲೆಗಳು :

ಒಟ್ಟು 74 ಆಶ್ರಮ ಶಾಲೆಗಳಿದ್ದು ಇವುಗಳಲ್ಲಿ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 2990. ಈ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ನೀಡಲಾಗುತ್ತಿದೆ.

7. ಖಾಸಗಿ ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು :

ಒಟ್ಟು 213 ನಿಲಯಗಳಿದ್ದು ಇವುಗಳಲ್ಲಿಯ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 10483. ಈ ಖಾಸಗಿ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಸಹಾಯ ಧನ ಮಂಜೂರು ಮಾಡಲಾಗುತ್ತಿದೆ.

8. ಖಾಸಗಿ ಅನುದಾನಿತ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು :

ಒಟ್ಟು 12 ನಿಲಯಗಳಿದ್ದು, ಇವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ 300, ಖಾಸಗಿ ಸಂಸ್ಥೆಗಳಿಗೆ ಸಹಾಯ ಧನ ಮಂಜೂರು ಮಾಡಲಾಗುವುದು.

9. ಸರ್ಕಾರಿ ಹಿಂದುಳಿದ ವರ್ಗಗಳ ಮಾದರಿ ವಸತಿ ಶಾಲೆಗಳ ನಿರ್ವಹಣೆ :

ಒಟ್ಟು 45 ಮಾದರಿ ವಸತಿ ಶಾಲೆಗಳಿದ್ದು, ಇವುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10850. ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ ಹಾಗೂ ಶಿಕ್ಷಣವನ್ನು ಸೌಲಭ್ಯವನ್ನು ನೀಡಲಾಗುತ್ತಿದೆ.

10. ಶುಲ್ಕ ವಿನಾಯಿತಿ :

ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅಂದರೆ ಪೋಷಕರ ವಾರ್ಷಿಕ ಆದಾಯ ರೂ. 11,000/- ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಬೋಧನ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷೆಯಾ ಶುಲ್ಕಗಳು ಮತ್ತು ಹಿಂದುಳಿದ ವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ನಿಗದಿ ಪಡಿಸಿರುವ ಎಲ್ಲಾ ಬಗ್ಗೆ ಶುಲ್ಕಗಳನ್ನು ಇಲಾಖೆಯಿಂದ ಮರುಪಾವತಿಸಲಾಗುವುದು.

ಶ್ರೀ ಜಿ. ಕೃಷ್ಣ ಪಾಲೇಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಹಿಂದುಳಿದ ವರ್ಗಗಳ ಇಲಾಖೆಯಿಂದ 1440 ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸುತ್ತಿದ್ದು, ಅದರಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಇವತ್ತು ನಾನು ಸರ್ಕಾರದ

ಗಮನಕ್ಕೆ ತರುವುದೇನೆಂದರೆ ಬಾಡಿಗೆ ಕಟ್ಟಡದಲ್ಲಿ ಇವತ್ತೇನು ಹಾಸ್ಟೆಲ್‌ಗಳು ನಡೆಯುತ್ತಿವೆ. ಅವುಗಳನ್ನು ಕಡಿಮೆ ಮಾಡಿ ಸ್ವಂತ ಕಟ್ಟಡದಲ್ಲಿ ನಡೆಯುವಂತೆ ಮಾಡುವುದು ಒಳ್ಳೆಯದು ಎಂದು ಹೇಳುತ್ತಿದ್ದೇನೆ. ಅದಲ್ಲದೆ ಬಾಡಿಗೆ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾದ ರಕ್ಷಣೆ ಇಲ್ಲ. ಅದರಲ್ಲೂ ವಿದ್ಯಾರ್ಥಿನಿಯರ ನಿಲಯಗಳನ್ನು ಹೆಚ್ಚು ಬಾಡಿಗೆ ಕಟ್ಟಡದಲ್ಲಿ ನಡೆಸದೆ, ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಯಾವುದೇ ಹಾಸ್ಟೆಲ್ ಕಟ್ಟಡಗಳ ಮೇಂಟೆನೆನ್ಸ್ ಆಗುತ್ತಿಲ್ಲ. ಸ್ವಂತ ಕಟ್ಟಡಗಳು ಬಹಳ ಇದ್ದು, ಅವುಗಳ ಮೇಂಟೆನೆನ್ಸ್ ಕೂಡ ಸರಿಯಾಗಿಲ್ಲ. ಕಟ್ಟಡಗಳು ಬಿದ್ದು ಹೋಗುವಂತಹ ಸ್ಥಿತಿಯಲ್ಲಿ ಕೆಲವು ವಿದ್ಯಾರ್ಥಿನಿಲಯಗಳು ಇದೆ. ಅದರ ಬಗ್ಗೆ ಸರ್ಕಾರ ಹೆಚ್ಚು ಗಮನಹರಿಸಬೇಕು. ಅದಲ್ಲದೆ ಹಾಸ್ಟೆಲ್‌ಗಳ ಅಭಿವೃದ್ಧಿಗೆ ಎಂದರೆ ಕುಡಿಯುವ ನೀರು, ಕಾಂಪೌಂಡ್ ಈ ರೀತಿಯ ನಿರ್ವಹಣೆಗೆ ಬಜೆಟ್‌ಅನ್ನು ಇಡಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆ ಹಾಸ್ಟೆಲ್‌ಗಳಲ್ಲಿ ಶಿಕ್ಷಕರಿಗೆ ಏನು ಪಾರ್ಟ್‌ಟೈಂ ಕೆಲಸ ಮಾಡಿದ್ದಕ್ಕೆ 200 ರೂಪಾಯಿ ಕೊಡುತ್ತಿದ್ದೀರಿ, ಅದನ್ನು 200 ರಿಂದ 600 ರೂಪಾಯಿ ಜಾಸ್ತಿ ಮಾಡುವಂತಹ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ. ಇನ್ನು ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಸ್ಟಾಫ್ ಇಲ್ಲ. ಅಲ್ಲಿ ಸರಿಯಾಗಿ ಮೇಲ್ವಿಚಾರಣೆ ಆಗುತ್ತಿಲ್ಲ. ಅಲ್ಲಿ ವಾರ್ಡನ್ ಹಾಗೂ ಅಡುಗೆಯವರು ಇಲ್ಲ. ನನ್ನ ಕ್ಷೇತ್ರದಲ್ಲಿ ಒಂದು ಕೇಂದ್ರೀಯ ಮಾದರಿ ವಸತಿ ಶಾಲೆ ಎಂದಿದೆ. ಆ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಸ್ಟ್ರೆಂಥ್ 250 ಇದ್ದು, ಅಲ್ಲಿ ಕೇವಲ 119 ಮಕ್ಕಳು ಮಾತ್ರ ಇದ್ದಾರೆ. ಎಲ್ಲಾ ಹಾಸ್ಟೆಲ್‌ಗಳಲ್ಲಿ ಮಕ್ಕಳು ಜಾಸ್ತಿ ಇದ್ದು, ಇಲ್ಲಿ ಏಕೆ ಕಡಿಮೆ ಎಂದರೆ ......

ಅಧ್ಯಕ್ಷರು : ನೀವು ಏನು ಪ್ರಶ್ನೆಗಳನ್ನು ಕೇಳಬೇಕಾಗಿದೆ ಕೇಳಿ.

ಶ್ರೀ ಜೆ. ಕೃಷ್ಣ ಪಾಲೇಮಾರ್ : ಅಲ್ಲಿ 20 ಸ್ಟಾಫ್‌ಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಒಂದೇ ಒಂದು ವಾರ್ಡನ್ ಇಲ್ಲ, ಟೀಚರ್ ಇಲ್ಲ. ಐಟಿಡಿಜಿ ಯಿಂದ ಒಂದು ಸ್ಟಾಫ್ ಕೊಟ್ಟು ಆ ಹಾಸ್ಟೆಲ್ ರನ್ ಮಾಡುತ್ತಿದ್ದಾರೆ. ದಯಮಾಡಿ ಬೇಕಾದಂತಹ ಸ್ಟಾಫ್ ಅನ್ನು ಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಕೆಲವೊಂದು ಕಡೆ ಹಾಸ್ಟೆಲ್‌ಗಳು ಸರಿಯಾಗಿ ಇಲ್ಲ, ಟೀಚರ್ಸ್ ಸರಿಯಾಗಿ ಇಲ್ಲವೆಂದು ಹೇಳುತ್ತಿದ್ದಾರೆ. ಈ 2006–07ನೇ ಸಾಲಿನ ಬಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಾಕಷ್ಟು ಹಣ ಬಂದಿದೆ. ಆದುದರಿಂದ ಮುಂದಿನ ದಿವಸಗಳಲ್ಲಿ ಈ ಕೊರತೆಯಾಗುವುದಿಲ್ಲ. ಮಾನ್ಯ ಸದಸ್ಯರು ಹಾಸ್ಟೆಲ್ ಸರಿಯಾಗಿಲ್ಲ, ಟೀಚರ್ ಇಲ್ಲವೆಂದು ಆರೋಪವನ್ನು ಮಾಡಿದ್ದಾರೆ. ಈ ಸಮಸ್ಯೆ ಮುಂದಿನ ದಿವಸಗಳಲ್ಲಿ ಇರುವುದಿಲ್ಲ. ಇನ್ನು ಮಾನ್ಯ ಸದಸ್ಯರು ಕೆಲವೊಂದು ಕ್ಲಾರಿಫಿಕೇಶನ್ ಕೇಳಿರುವಂಥದ್ದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಜೆ. ಕೃಷ್ಣ ಪಾಲೇಮಾರ್ : ಮಾನ್ಯ ಅಧ್ಯಕ್ಷರೆ, ಸ್ಟಾಫ್ ಬಗ್ಗೆ ಹೇಳುವುದಾದರೆ 20 ಟೀಚರ್ಸ್‌ಗೆ ಒಂದು ವಾರ್ಡನ್ ಕೊಡಬೇಕು, ಸ್ಟಾಫ್ ಅನ್ನು ಕೊಡಲಿಲ್ಲವೆಂದು ಹೇಗೆ ನಡೆಸಿಕೊಂಡು ಹೋಗುವುದು? ಐಟಿಡಿಪಿಯವರನ್ನು ಒಬ್ಬರನ್ನು ಕೊಟ್ಟಿದ್ದಾರೆ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸ್ಟ್ಯಾಫ್ ಕೊರತೆ ಇರುವ ಬಗ್ಗೆ ಕೇಳಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ: ಗೌರಿಬಿದನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ.

33 (206) ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ನಾಲ್ಕು ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೇಡಿಯೋಲಾಜಿಸ್ಟ್, ಫಿಜಿಶಿಯನ್, ಗೈನೋಕಾಲಾಜಿಸ್ಟ್, ಅರವಳಿಕೆ ತಜ್ಞರು, ಎಕ್ಸ್‌ರೇ ಟೆಕ್ನಿಶಿಯನ್ ಹುದ್ದೆಗಳು ಖಾಲಿ ಇರುವುದರಿಂದ, ಚಿಕಿತ್ಸೆಗೆ ಬರುವ ರೋಗಿಗಳಿಗೆ ಅನಾನುಕೂಲವಾಗಿರುವುದು ನಿಜವಲ್ಲವೇ;

ಇ) ಈ ಹುದ್ದೆಗಳು ಎಷ್ಟು ವರ್ಷದಿಂದ ಖಾಲಿ ಇವೆ ವಿವರ ಒದಗಿಸುವುದು;

ಈ) ಈ ಹುದ್ದೆಗಳನ್ನು ತುರ್ತಾಗಿ ತುಂಬಿ ರೋಗಿಗಳ ಚಿಕಿತ್ಸೆಗೆ ಅನುಕೂಲ ಮಾಡಿಕೊಡಲಾಗುವುದೇ ಹಾಗೂ ಯಾವಾಗ ಮಾಡಿಕೊಡಲಾಗುವುದು;

ಉ) ಗೌರಿಬಿದನೂರು ತಾಲ್ಲೂಕಿನಲ್ಲಿ ಮಂಚೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಾಮಗೊಂಡ್ಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯರ ಹುದ್ದೆ ಖಾಲಿ ಇದ್ದು, ಇದನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ಕೈಗೊಂಡು ಬಡ ರೋಗಿಗಳ ಚಿಕಿತ್ಸೆಗೆ ಅನುಕೂಲ ಮಾಡಿಕೊಡಲಾಗುವುದೆ ಹಾಗೂ ಯಾವ ಕಾಲಮಿತಿಯಲ್ಲಿ ಮಾಡಲಾಗುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ರೇಡಿಯೋಲಾಜಿಸ್ಟ್, ಫಿಜಿಶಿಯನ್, ಗೈನೋಕಾಲಾಜಿಸ್ಟ್, ಅರವಳಿಕೆ ತಜ್ಞರ ಹುದ್ದೆಗಳನ್ನು ಫೆಬ್ರವರಿ 2006ರಲ್ಲಿ ಭರ್ತಿಮಾಡಲಾಗಿದೆ. ಫಿಜಿಶಿಯನ್ ಹುದ್ದೆಯ ಎದುರು ಸಾಮಾನ್ಯ ಕರ್ತವ್ಯ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಂದು ಕ್ಷ-ಕಿರಣ ತಂತ್ರಜ್ಞರ ಹುದ್ದೆ ಖಾಲಿ ಇರುತ್ತದೆ. ರೋಗಿಗಳಿಗೆ ಅನಾನುಕೂಲವಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಇ) ಎರಡು ವರ್ಷಗಳಿಂದ ಖಾಲಿಯಿದೆ. ಇಲಾಖೆಯಲ್ಲಿ ಫಿಜಿಶಿಯನ್ನರ ಕೊರತೆ ಇರುವುದರಿಂದ ಭರ್ತಿಮಾಡಲಾಗಿಲ್ಲ. ಈ ಹುದ್ದೆ ಎದುರು ಸಾಮಾನ್ಯ ಕರ್ತವ್ಯ ವೈದ್ಯರು ಈಗ ಹಾಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಈ) ತಾತ್ಕಾಲಿಕವಾಗಿ ಸಾಮಾನ್ಯ ಕರ್ತವ್ಯ ವೈದ್ಯರನ್ನು ತುಂಬಿ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆ ಮಾಡಲಾಗುತ್ತಿದೆ.

ಉ) ಪ್ರಾಥಮಿಕ ಆರೋಗ್ಯ ಕೇಂದ್ರ ಮಂಚೇನಹಳ್ಳಿ ಮತ್ತು ನಾಮಗೊಂಡ್ಲು ಇಲ್ಲಿಗೆ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು ಮಹಿಳಾ ವೈದ್ಯರ ಬದಲಿಗೆ ಪುರುಷ ವೈದ್ಯರುಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಹುದ್ದೆ ಖಾಲಿ ಇರುವುದಿಲ್ಲ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ : ಮಾನ್ಯ ಅಧ್ಯಕ್ಷರೆ, ಗೌರಿಬಿದನೂರು ಆಸ್ಪತ್ರೆಯಲ್ಲಿರುವಂತಹ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಅದಕ್ಕೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ, ಮತ್ತೆ ಸ್ವಾಗತಾರ್ಹವೆಂದು ತಿಳಿಸುತ್ತೇನೆ. ಆದರೆ ಎಕ್ಸ್‌ರೇ ಟೆಕ್ನೀಷಿಯನ್ ಹುದ್ದೆಯನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಎರಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಕೊರತೆ ಇದೆಯೆಂದು ಹೇಳಿದ್ದೆವು. ಅದನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಮಹಿಳಾ ವೈದ್ಯರುಗಳು ಇರುವಂಥ ಕಡೆಗಳಲ್ಲಿ ಸಾಕಷ್ಟು ಖಾಲಿ ಇವೆ. ನಮ್ಮ ತಾಲ್ಲೂಕಿನಲ್ಲಿ ಮಂಚೇನಹಳ್ಳಿ ಮತ್ತು ನಾಮಗೊಂಡ್ಲುನಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ. ನಮ್ಮ ತಾಲ್ಲೂಕಿನಲ್ಲಿ ನಾಲ್ಕೈದು ಹುದ್ದೆಗಳು ಖಾಲಿ ಇದೆ. ಇದನ್ನು ಭರ್ತಿ ಮಾಡುವಂತಹ ಕೆಲಸ ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ. ಇನ್ನು ನಾನು ಪ್ರಶ್ನೆಯಲ್ಲಿ ಕೇಳಿಲ್ಲ. ಆದರೂ ಈ ಪ್ರಶ್ನೆಯನ್ನು ಕೇಳುತ್ತೇನೆ. ಪಿಹೆಚ್‌ಯುಗೆ 50 ಸಾವಿರ ರೂಪಾಯಿಗಳು ಹಾಗೂ ಪಿಹೆಚ್‌ಸಿಗೆ 30 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಕೇವಲ ಮೂರು ತಿಂಗಳಿಗೆ ಸಾಕಾಗುವುದಿಲ್ಲ. ಪ್ರತಿ ಆಸ್ಪತ್ರೆಗಳಲ್ಲೂ ಔಷಧಗಳ ಕೊರತೆ ಪ್ರತಿ ಮೂರು ತಿಂಗಳಿಗೆ ಇರುತ್ತದೆ. ಆದುದರಿಂದ ಇದನ್ನು ಹೆಚ್ಚಿಗೆ ಮಾಡುವಂತಹ ಕೆಲಸವನ್ನು ಮಾಡಬೇಕು. ಪಿಹೆಚ್‌ಸಿಯಲ್ಲಿ ಎಎನ್‌ಎಂಗಳು ದುಃಸ್ಥಿತಿಯಲ್ಲಿ ಇದೆ. ಪ್ರತಿ ಹಳ್ಳಿಗಳಲ್ಲೂ ರಿಪೇರಿಯಾಗುವಂತಹ ಅಗತ್ಯತೆ ಇದೆ. ಇದಕ್ಕೆ ಅನುದಾನವನ್ನು ಕೊಡುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಾದ ಶ್ರೀ ಶಿವಶಂಕರರೆಡ್ಡಿಯವರು ಕೇಳಿರುವಂತಹ ವೈದ್ಯ ತಜ್ಞರ ಹುದ್ದೆಗಳನ್ನು ಈಗಾಗಲೇ ತುಂಬಿದ್ದೇವೆ. ಕ್ಷ-ಕಿರಣ ತಂತ್ರಜ್ಞರ ಹುದ್ದೆಯನ್ನು ತುಂಬಬೇಕಾಗಿದೆ. ಆದರೂ ಬೇರೆ ತಾಲ್ಲೂಕಿನಿಂದ 2 ದಿವಸ ಅಲ್ಲಿಗೆ ಹೋಗಿ ಕೆಲಸ ಮಾಡಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದೇವೆ. ಜೊತೆಗೆ ಮಹಿಳಾ ವೈದ್ಯರುಗಳ ಸಂಖ್ಯೆ ಕಡಿಮೆ ಇದ್ದರೂ ಪುರುಷರು ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಮಹಿಳಾ ವೈದ್ಯರುಗಳನ್ನು ಕರೆದಿದ್ದೇವೆ. ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಮಾಡಿದ್ದಾರೆ. ನರ್ಸಿಂಗ್ ಹೋಂನ ವೈದ್ಯರುಗಳು ಗೌರ್ವನಮೆಂಟ್ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆ ರೀತಿಯಾದರೆ ಗೌರ್ವನಮೆಂಟ್ ಆಸ್ಪತ್ರೆಯ ಪೇಷಂಟ್ಸ್‌ಗಳನ್ನು ನರ್ಸಿಂಗ್ ಹೋಂಗಳಿಗೆ ಶಿಫ್ಟ್ ಮಾಡಿಕೊಂಡರೆ ಏನು ಮಾಡುತ್ತೀರಿ? ಈ ರೀತಿ ಸ್ಟೇಟ್‌ಮೆಂಟ್ ಕೊಟ್ಟಿರುವಂಥಾದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಇದರ ಬಗ್ಗೆ ಗೌರ್ವನಮೆಂಟ್ ಪಾಲಿಸಿ ಏನಾದರೂ ಇದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ 11 ಜನ ವೈದ್ಯರಿಗೆ ಒಬ್ಬ ವೈದ್ಯರು ಮಾತ್ರ ಇದ್ದಾರೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಪಾಲಿಸಿ ಡಿಸಿಷನ್ ಎಂದು ಮಾಡಿಲ್ಲ. ಅದು ಈ ಪ್ರಶ್ನೆಗೆ ಸಂಬಂಧವಿಲ್ಲ. ಈ ಪ್ರಶ್ನೆ ಗೌರಿಬಿದನೂರಿಗೆ ಸಂಬಂಧಪಟ್ಟ ಹಾಗೆ ಇದೆ; ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಕಾಂಟ್ರಾಕ್ಟ್ ಬೆಸಿಸ್‌ನಲ್ಲಿ ವೈದ್ಯರುಗಳನ್ನು ನೇಮಕ ಮಾಡುತ್ತೇವೆಂದು ಹೇಳಿದ್ದೀರಿ. ಖಾಸಗಿ ಆಸ್ಪತ್ರೆಯ ವೈದ್ಯರುಗಳನ್ನು ಗೌವರ್ನಮೆಂಟ್ ಆಸ್ಪತ್ರೆಗೆ ತುಂಬುವಂಥಾದ್ದರ ಬಗ್ಗೆ ಗೌವರ್ನಮೆಂಟ್ ಪಾಲಿಸಿಯನ್ನು ತಾವು ಮಾಡಿದ್ದೀರಾ?

ಶ್ರೀಮತಿ ಸುನೀತಾ ವೀರಪ್ಪಗೌಡ ಜೆ. : ಮಾನ್ಯ ಅಧ್ಯಕ್ಷರೆ, ತಲಕಾಡಿನಲ್ಲಿ ಕಳೆದ 6 ತಿಂಗಳುಗಳಿಂದ ಮಹಿಳಾ ವೈದ್ಯರುಗಳು ಇಲ್ಲ. ಮಹಿಳಾ ವೈದ್ಯರುಗಳು ಬಂದರೂ ಅಲ್ಲಿ ಇರುವುದಿಲ್ಲ. ಇದರ ಬಗ್ಗೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡಬೇಕು.

ಅಧ್ಯಕ್ಷರು : ವೈದ್ಯರುಗಳ ಕೊರತೆ ಎಲ್ಲಾ ಕಡೆಗಳಲ್ಲೂ ಇದೆ. ಗುತ್ತಿಗೆ ಆಧಾರದ ಮೇಲೆ ಅಪಾಯಿಂಟ್ ಮಾಡಿದರೂ ಗ್ರಾಮೀಣ ಪ್ರದೇಶಗಳಿಗೆ ಬರುವುದಿಲ್ಲ. ಈ ಕೊರತೆ ನೀಗಿಸುವ ಬಗ್ಗೆ ಸಮಗ್ರ ಚಿಂತನೆಯ ಅಗತ್ಯ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶೇ. 50ರಷ್ಟು ವೈದ್ಯರುಗಳು ಇಲ್ಲ. ಇದರ ಬಗ್ಗೆ ಉನ್ನತ ಅಧಿಕಾರಿಗಳನ್ನು ಹಾಗೂ ಶಾಸಕರನ್ನು ಕರೆದು ಚಿಂತನೆ ಮಾಡಿ ಒಂದು ಪಾಲಸಿಯನ್ನು ರೂಪಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಒಂದು ಪ್ರಶ್ನೆ ಮಾಡಿದ್ದಾರೆ. ರಾಜ್ಯದ ಮಂತ್ರಿಮಂಡಲದ ಸಚಿವರು ಏನಾದರೂ ಒಂದು ಹೇಳಿಕೆಯನ್ನು ಕೊಟ್ಟರೆ ಅದು ಸರ್ಕಾರದ ಹೇಳಿಕೆಯಾಗುತ್ತದೆ. ಅದಕ್ಕೋಸ್ಕರ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಉತ್ತರವನ್ನು ನೀಡಬೇಕು. ಅವರು ಹೇಳಿರುವ ಪ್ರಕಾರ ಖಾಸಗಿ ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡುವವರು ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸವನ್ನು ಮಾಡಬಹುದಾ? ಆ ರೀತಿ ಸರ್ಕಾರ ಪಾಲಿಸಿ ಮಾಡಿದೆಯೇ? ಆ ರೀತಿ ಪಾಲಿಸಿ ಮಾಡದಿದ್ದರೂ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಂದರೆ ಇದು ಗಂಭೀರವಾದಂತಹ ವಿಚಾರವಾಗುತ್ತದೆ. ಇದಕ್ಕೆ ಇಡೀ ಸರ್ಕಾರ ಹೊಣೆಯಾಗಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತುರ್ತು ಸಂದರ್ಭದಲ್ಲಿ ಖಾಸಗಿ ಡಾಕ್ಟರ್‌ಗಳನ್ನು ಆಕ್ಸಿಡೆಂಟ್, ಎಮರ್ಜೆನ್ಸಿ ಇರುವಾಗ ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆಯೇ ಹೊರತು ಖಾಸಗಿ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಹೇಳಿಲ್ಲ. ಇದು ಪತ್ರಿಕೆಗಳಲ್ಲಿ ತಪ್ಪು ಮಾಹಿತಿ ಬಂದಿರಬಹುದು. ನಾನು ಇದನ್ನು ಸ್ಪಷ್ಟನೆ ಮಾಡುತ್ತಿಲ್ಲ. ಯಾವುದೇ ಕಾರಣಕ್ಕೂ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ ಖಾಸಗಿ ಆಸ್ಪತ್ರೆಗಳ ನರ್ಸ್‌ಗಳು ಗೌವರ್ನಮೆಂಟ್ ಆಸ್ಪತ್ರೆಗಳಲ್ಲಿ ಎಮರ್ಜೆನ್ಸಿ ವರ್ಕ್ ಮಾಡಿದಾಗ will they be held responsible for legal lapses? Will they be accountable?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, will they accountable for medical injustice? Are they responsible? ವಾರದಲ್ಲಿ ಒಂದು ದಿವಸ, ಎರಡು ದಿವಸ ಖಾಸಗಿ ನರ್ಸಿಂಗ್ ಹೋಂನವರು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೊಸಬರಿದ್ದಾರೆ. ಅನೇಕ ವಿಷಯಗಳ ಮಾಹಿತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಗೌವರ್ನಮೆಂಟ್ ಡಾಕ್ಟರ್‌ಗಳು ಎಮರ್ಜೆನ್ಸಿ ಇದ್ದಾಗ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸವನ್ನು ಮಾಡಬಹುದಾ?

ಅಧ್ಯಕ್ಷರು : ಆಯಿತು. ಮುಂದಿನ ಪ್ರಶ್ನೆ

ಚಾಮರಾಜನಗರ ಜಿಲ್ಲೆ ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ.

34(51) ಶ್ರೀ ಧ್ರುವ ನಾರಾಯಣ್ ಆರ್. (ಸಂತೇಮರಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ತಜ್ಞ ವೈದ್ಯರುಗಳ ಹುದ್ದೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಭರ್ತಿ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಚಾಮರಾಜನಗರ ಜಿಲ್ಲೆಯ ಆರು ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಹುದ್ದೆ ಖಾಲಿಯಿದೆ.

ಆ) ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮುಖಾಂತರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಪ್ರಕ್ರಿಯೆ ಜರುಗಿಸಿದ್ದು ನೇಮಕಾತಿ ಆದೇಶ ನೀಡುವ ಹಂತದಲ್ಲಿದೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜನಗರ ಜಿಲ್ಲೆ ಅತ್ಯಂತ ಹಿಂದುಳಿದ ಜಿಲ್ಲೆ. ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಕೂಡ ಇದು ಅತ್ಯಂತ ಹಿಂದುಳಿದಿರತಕ್ಕಂಥ ಜಿಲ್ಲೆ. ನಮ್ಮ ಜಿಲ್ಲೆಯ ಬಹಳಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇದೆ. ಕರ್ನಾಟಕ ರಾಜ್ಯದಲ್ಲಿರುವಷ್ಟು ಮೆಡಿಕಲ್ ಕಾಲೇಜುಗಳು ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಪ್ರತಿವರ್ಷ ಸಾವಿರಾರು ವೈದ್ಯರುಗಳು ಈ ಕಾಲೇಜುಗಳಿಂದ ಹೊರಬೀಳುತ್ತಾರೆ. ಈ ರೀತಿ ಬಂದಂಥ ವೈದ್ಯರುಗಳು ಎಲ್ಲಿ ಹೋಗುತ್ತಾರೆ? ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಏಕೆ ಈ ರೀತಿ ಹುದ್ದೆಗಳು ಖಾಲಿ ಇವೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಸುಮಾರು ಆರು ಪ್ರಾಥಮಿಕ ಕೇಂದ್ರಗಳಲ್ಲಿ ವೈದ್ಯರುಗಳಿಲ್ಲ. ಸುಮಾರು 39 ಎ.ಎನ್.ಎಂ. ಹುದ್ದೆಗಳು ವೇಕೆಂಟ್ ಇವೆ. 46 ಫಾರ್ಮಸಿಸ್ಟ್ ಹುದ್ದೆಗಳು ವೇಕೆಂಟ್ ಇವೆ. ಗ್ರೂಫ್–ಡಿಯ 59 ಹುದ್ದೆಗಳು ವೇಕೆಂಟ್ ಇವೆ. ಅದರಲ್ಲೂ, ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿರತಕ್ಕಂಥ ಜಿಲ್ಲಾ ಆಸ್ಪತ್ರೆಯಲ್ಲಿ ಒಬ್ಬರು ಗೈನಕಾಲಜಿಸ್ಟ್ ಕೂಡ ಇಲ್ಲ. ಇ ಎನ್ ಟಿ ಸ್ಪೆಷಲಿಸ್ಟ್ ಇಲ್ಲ. ದಯಮಾಡಿ ಮಾನ್ಯ ಸಚಿವರು ತತ್‌ಕ್ಷಣ ಚಾಮರಾಜನಗರ ಜಿಲ್ಲೆಗೆ ವಿಶೇಷವಾದಂಥ ಆದ್ಯತೆ ಕೊಡಬೇಕು. ಅದು ಗಡಿ ಜಿಲ್ಲೆಯಾಗಿದ್ದು, ಅತ್ಯಂತ ಹಿಂದುಳಿದಿರತಕ್ಕಂಥ ಜಿಲ್ಲೆಯಾಗಿದ್ದು ಅದಕ್ಕೆ ವಿಶೇಷ ಆದ್ಯತೆ

ಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ. ಈ ಬಗ್ಗೆ ಮೊನ್ನೆ ನಾವು ಅವರ ಹತ್ತಿರ ಚರ್ಚೆ ಮಾಡಿದಾಗ, ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡವರಿಗೆ ನಾವು ಕೊಡತಕ್ಕಂಥ ಸಂಬಳ ಸಾಲುವುದಿಲ್ಲ. ಅದನ್ನು ಸರಿಪಡಿಸಬೇಕು. ಕೇರಳ ರಾಜ್ಯದಲ್ಲಿ ಡಾಕ್ಟರುಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತಾರೆ. ಆ ರೀತಿ ನಮ್ಮಲ್ಲೂ ಮಾಡಬೇಕು ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಆದ್ದರಿಂದ, ದಯಮಾಡಿ ಕರ್ನಾಟಕ ರಾಜ್ಯದಲ್ಲಿನ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಂಥ ಡಾಕ್ಟರುಗಳಿಗೆ ಹೆಚ್ಚಿನ ಸಂಬಳ ಕೊಡಬೇಕು. ಕೇರಳ ರಾಜ್ಯದ ಮಾದರಿಯಲ್ಲಿ ನಮ್ಮಲ್ಲಿಯೂ ಹೆಚ್ಚು ಹಣವನ್ನು ಕೊಟ್ಟಾಗ ನಮ್ಮಲ್ಲೂ ಕೂಡ ಡಾಕ್ಟರ್‌ಗಳು ಇರುತ್ತಾರೆ. ಇನ್ನೊಂದು ವಿಷಯ ಮಾನ್ಯ ಸಚಿವರ ಗಮನಕ್ಕೆ ತರಬಯಸತಕ್ಕಂಥಾದ್ದು, ನಮ್ಮಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕ್ವಾರ್ಟರ್ಸ್ ಇದ್ದರೂ ಕೂಡ, ಅಲ್ಲಿ ಡಾಕ್ಟರ್‌ಗಳು ಯಾರೂ ವಾಸ್ತವ್ಯ ಮಾಡುವುದಿಲ್ಲ. ಡಾಕ್ಟರ್‌ಗಳು ಅಲ್ಲಿ ಹಾಲ್ಟ್ ಮಾಡಬೇಕು ಎಂದು ತಾವು ಕಾನೂನು ಕೂಡ ಮಾಡಿದ್ದೀರಿ. ಆದರೂ, ಯಾರೂ ಕೂಡ ಇರುವುದಿಲ್ಲ. ದಯಮಾಡಿ, ಅವರಿಗೆ ಕೊಡತಕ್ಕಂಥ ವೇತನವನ್ನು ಕೇರಳ ರಾಜ್ಯದ ಮಾದರಿಯಲ್ಲಿ ತಾವೂ ಮಾಡಿದರೆ ಇಲ್ಲೂ ಕೂಡ ಸುಗಮವಾಗುತ್ತದೆ. ಇದರ ಜೊತೆಗೆ ಖಾಲಿ ಇರತಕ್ಕಂಥ ಹುದ್ದೆಗಳನ್ನು ತಾವು ತತ್‌ಕ್ಷಣ ಭರ್ತಿ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಚಾಮರಾಜನಗರಕ್ಕೆ 83 ವೈದ್ಯರ ಹುದ್ದೆಗಳು ಮಂಜೂರಾಗಿದ್ದರೆ, ಅಲ್ಲಿ 77 ವೈದ್ಯರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆ ಜಿಲ್ಲೆಯಲ್ಲಿ ಆರು ವೈದ್ಯರುಗಳ ಹುದ್ದೆ ಖಾಲಿ ಇದೆ ಎಂದು ಹೇಳಿದ್ದಾರೆ. 5 ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಆದೇಶ ಮಾಡಿದ್ದು, 5 ವೈದ್ಯರುಗಳನ್ನು ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿ, ಇನ್ನೊಂದೆರಡು ಮೂರು ದಿವಸಗಳಲ್ಲಿ ಅವರನ್ನು ಅಲ್ಲಿಗೆ ಕಳುಹಿಸುವಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ತಮಗೆ ಅಧ್ಯಕ್ಷರ ಮುಖಾಂತರ ತಿಳಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವೈದ್ಯರುಗಳನ್ನು ನೇಮಕ ಮಾಡುತ್ತೇವೆಂದು ಮಾನ್ಯ ಆರೋಗ್ಯ ಸಚಿವರು ಹೇಳಿದ್ದಾರೆ. ಅದರ ಜೊತೆಗೆ ಅಲ್ಲಿ ಔಷಧಿಗಳಿಲ್ಲ, ಚೇಳು ಕಡಿದರೆ ಔಷಧಿ ಇಲ್ಲ, ಹಾವು ಕಡಿದರೆ ಔಷಧಿ ಇಲ್ಲ. ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದು ಒಂದು ರೀತಿ ಬೇವರ್ಸಿ ಆಸ್ಪತ್ರೆ ಆದ ಹಾಗೆ ಆಗಿಬಿಟ್ಟಿದೆ. ನೀವು ಇದನ್ನು ಸರಿಪಡಿಸಬೇಕು. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ.

ಶ್ರೀ ಆರ್. ಅಶೋಕ್ : ಖಾಲಿ ಇರುವ ವೈದ್ಯರುಗಳು ಹುದ್ದೆಗಳನ್ನು ತುಂಬುವುದಕ್ಕೆ ಈಗಾಗಲೇ ನೇಮಕಾತಿ ಮಾಡಿದ್ದೇವೆ. ತಾವು ಔಷಧಿ ಬಗ್ಗೆ ಹೇಳುತ್ತಿದ್ದೀರಿ. ಈ ವರ್ಷದ ಬಜೆಟ್‌ನಲ್ಲಿ ವಿಶೇಷವಾಗಿ ಹೆಚ್ಚುವರಿ ಔಷಧಿ ಖರೀದಿ ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಸಾರಿ ನೀವು ಚಾಮರಾಜನಗರ ಆಸ್ಪತ್ರೆಗೆ ಬರುತ್ತೀರಾ? ಮುಂದಿನ ವಾರ ಬಂದುಬಿಟ್ಟರೆ ಒಳ್ಳೆಯದು. ಆಗ ನಾವೆಲ್ಲಾ ಒಟ್ಟಿಗೆ ಇರುತ್ತೇವೆ, ನೀವು ಬಂದು ಅಲ್ಲಿಯ ಪರಿಸ್ಥಿತಿಯನ್ನು ನೋಡಿ.

ಶ್ರೀ ಆರ್. ಅಶೋಕ್ : ಈಗಾಗಲೇ ನಾನು ರಾಜ್ಯದ ಹಲವಾರು ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೇನೆ. ಎಲ್ಲಾ ಜಿಲ್ಲೆಗಳ ಆಸ್ಪತ್ರೆಗಳನ್ನು ಭೇಟಿ ಮಾಡುವಂಥ ಉದ್ದೇಶವನ್ನು ನಾನು ಇಟ್ಟುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ವಿಶೇಷವಾಗಿ, ಗಡಿನಾಡಿನಲ್ಲಿರುವಂಥ ಚಾಮರಾಜನಗರದ ಆಸ್ಪತ್ರೆಗೆ ತಾವು ಬರುವುದಾದರೆ ನಾವು, ನೀವು, ಎಲ್ಲರೂ ಒಟ್ಟಿಗೆ ಹೋಗೋಣ. ಯಾವತ್ತು ಬರುತ್ತೀರಿ ಎಂದು ಇಲ್ಲಿ ಹೇಳಿಬಿಟ್ಟರೆ ಒಳ್ಳೆಯದು. ಅಲ್ಲಿನ ನರಕದ ಪರಿಸ್ಥಿತಿಯನ್ನು ನೀವೇ ಬಂದು ನೋಡಿ ಎಂದು ಅಧ್ಯಕ್ಷರ ಮೂಲಕ ತಮಗೆ ಹೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್ : ನಾನು ಬರುವ ಸಮಯ, ಸಂದರ್ಭ ಎಲ್ಲವನ್ನೂ ಮಾನ್ಯ ಸದಸ್ಯರಿಗೆ ತಿಳಿಸಿ, ತಮ್ಮ ಮುಖಾಂತರವೇ, ತಮ್ಮ ಜೊತೆಯಲ್ಲೇ ಬರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರಕ್ಕೆ ಬರುತ್ತೇನೆ ಎಂದು ಧೈರ್ಯವಾಗಿ ಹೇಳಿ. ಏಕೆ ಈ ರೀತಿ ಎಂದು ನನಗರ್ಥವಾಗುತ್ತಿಲ್ಲ. ಧೈರ್ಯವಾಗಿ ಬನ್ನಿ, ನಾವಿದ್ದೇವೆ, ಏನೂ ಹೆದರಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಯಾರು ಬರುತ್ತಾರೋ, ಇಲ್ಲವೋ ಗೊತ್ತಿಲ್ಲ. ನಾನಂತೂ ಡೆಫನೆಟ್ ಆಗಿ ಬರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಬರುತ್ತೀರಿ. ಮಾನ್ಯ ಯಡಿಯೂರಪ್ಪನವರೇ, ನೀವು?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನಂತೂ ಆ ತಪ್ಪು ಮಾಡುವುದಿಲ್ಲ.

(ಸದನದಲ್ಲಿ ನಗು)

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ಉತ್ತರ ಸಿಕ್ಕಿದೆಯಲ್ಲವೇ?

ಶ್ರೀ ಆರಗ ಜ್ಞಾನೇಂದ್ರ : ಚಾಮರಾಜನಗರಕ್ಕೆ ಕರೆಯುವುದು ಅಂದರೆ ಒಂದು ರೀತಿ ಧೃತರಾಷ್ಟ್ರ ಆಲಿಂಗನ ಆದ ಹಾಗೆ, ಅವರು ಯಾರ್‍ಯಾರ ಮೇಲೆ ಕಣ್ಣಿಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಹೆಸರುಗಳನ್ನು ಹೇಳಿ.

(ಸದನದಲ್ಲಿ ನಗು)

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರಕ್ಕೆ ಯಾರು ಬರುತ್ತಾರೋ, ಅವರು ಮುಖ್ಯಮಂತ್ರಿಗಳಾಗುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಹಿಂದಿನ ಮುಖ್ಯಮಂತ್ರಿ ಧರಂಸಿಂಗ್‌ರವರನ್ನು ನಾವು ಜಿಲ್ಲಾ ಸಂಕೀರ್ಣ ಉದ್ಘಾಟನೆಗೆ ಕರೆಯಬೇಕು ಎಂದಾಗ, ಮಾನ್ಯ ವಾಟಾಳ್ ನಾಗರಾಜ್‌ರವರೇ, ಪಾಪ, ಏಕೆ ಅವರನ್ನು ಕರೆದು ತೊಂದರೆಗೆ ಸಿಕ್ಕಿಸುವುದು ಬೇಡ ಎಂದು ಹೇಳಿದರು. ಆದರೂ, ಅವರ ಅಧಿಕಾರ ಹೋಗಿಬಿಟ್ಟಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರು ಹೇಳುವುದು ಸರಿ. ನಾನು ಏಕೆ ಹಾಗಂದೆ ಅಂದರೆ ಅವರನ್ನು ಕೆಳಕ್ಕೆ ಕೆಡವುದಕ್ಕೆ ಇವರೆಲ್ಲಾ ಕಾಲು ಎಳೆಯುತ್ತಿದ್ದರು. ಇವರು ಕಾಲು ಎಳೆದು ಅವರು ಬಿದ್ದು ಹೋದರೆ, ಚಾಮರಾಜನಗರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಕರೆಸುವುದು ಬೇಡ ಎಂದು ನಾನೇ ಹೇಳಿದೆ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ಒಂದು ವಿಷಯ, ಅಲ್ಲಿಗೆ ಯಾರು ಮುಖ್ಯಮಂತ್ರಿಗಳು ಹೋಗುತ್ತಾರೆ. ಅವರೆಲ್ಲಾ ಸ್ಥಾನ ಕಳೆದುಕೊಳ್ಳುತ್ತಾರೆ. ಉಪ ಮುಖ್ಯಮಂತ್ರಿ ಅಥವಾ ಬೇರೆ ಮಂತ್ರಿಗಳಾದವರು ಅಲ್ಲಿ ಹೋದರೆ ಮುಖ್ಯಮಂತ್ರಿಗಳಾಗುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇವರ ಮಾತು ಕೇಳಿ, ಗ್ರಾನೈಟ್ ಎನ್‌ಕ್ವೈರಿ ಕಮಿಟಿಯಲ್ಲಿದ್ದ ಎಲ್ಲಾ ಸದಸ್ಯರೂ ಚಾಮರಾಜನಗರಕ್ಕೆ ಹೋದೆವು. ಅಲ್ಲಿಂದ ವಾಪಸ್ಸು ಬಂದವರೊಬ್ಬರೂ ಮತ್ತೆ ಚುನಾವಣೆಯಲ್ಲಿ ಆಯ್ಕೆಯಾಗಿ ಬರಲಿಲ್ಲ.

(ಸದನದಲ್ಲಿ ನಗು)

ಶ್ರೀ ವಾಟಾಳ್ ನಾಗರಾಜ್ : ಇವೆಲ್ಲಾ ಸತ್ಯಕ್ಕೆ ದೂರವಾದಂಥವುಗಳು. ಅಧ್ಯಕ್ಷರಾದ ತಾವೂ ಈ ಸಾರಿ ಬರಬೇಕಾಗಿತ್ತು. ನೀವೂ ಹೆದರಿಬಿಟ್ಟಿರಿ. ನನ್ನನ್ನು ಕಂಡರೆ ಇಷ್ಟೊಂದು ಭಯವೇಕೆ?

ಅಧ್ಯಕ್ಷರು : ನಾನು ಅನೇಕ ಸಾರಿ ಬಂದಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಅಧ್ಯಕ್ಷರಾಗಿ ಒಂದು ಕಾರ್ಯಕ್ರಮಕ್ಕೆ ಬರಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪ ಮುಖ್ಯಮಂತ್ರಿಗಳು ನಾನು ಬರುವುದಿಲ್ಲ ಎಂದು ತುಂಬಾ ಸ್ಪಷ್ಟವಾಗಿ ಹೇಳಿದರು. ಮಾನ್ಯ ಜಗದೀಶ್ ಶೆಟ್ಟರ್‌ರವರು ಏನೋ ಆಶ್ವಾಸನೆ ಕೊಟ್ಟರು. ದಯವಿಟ್ಟು ಅದನ್ನು ಮರುಪರಿಶೀಲನೆ ಮಾಡಿ. ನೀವು ಏಕೆ ಸ್ಥಾನ ಕಳೆದುಕೊಳ್ಳುತ್ತೀರಿ?

(ಸದನದಲ್ಲಿ ನಗು)

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ನಮ್ಮ ಮುಂಡರಗಿ ಕ್ಷೇತ್ರಕ್ಕೆ ಮಾನ್ಯ ಈಶ್ವರಪ್ಪನವರು ಪ್ರೋಗ್ರಾಂ ಹಾಕಿಕೊಂಡಿದ್ದರು. ನಾನು ಕೇಳಿದಾಗ, ಬರುತ್ತೇನೆ ಎಂದು ಹೇಳಿದ್ದರು. ಆದರೆ ಕೊಪ್ಪಳಕ್ಕೆ ಬಂದವರು, ಏನೋ ಒಂದು ಕಾರಣಕ್ಕೆ ನಮ್ಮ ಪ್ರೋಗ್ರಾಂ ಅನ್ನು ಕ್ಯಾನ್ಸಲ್ ಮಾಡಿಕೊಂಡು ಬಂದುಬಿಟ್ಟರು. ಅದು ಪೇಪರ್‌ನಲ್ಲಿ ಬಂತು. ಏನೆಂದರೆ, ...

ಶ್ರೀ ಕೆ.ಎಸ್. ಈಶ್ವರಪ್ಪ : ಹಾಗಾದರೆ ನಿಮ್ಮದೂ ಅದೇ ಸ್ಥಿತಿಯೇ? ನಮಗೆ ಗೊತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಮಾನ್ಯ ಯಡಿಯೂರಪ್ಪನವರನ್ನು ಕರೆದುಕೊಂಡು ಹೋಗೇ ಹೋಗುತ್ತೇನೆ. ಅವರು ನನ್ನ ಮಾತು ಅದು ಹೇಗೆ ಕೇಳುವುದಿಲ್ಲವೋ ನಾನೂ ನೋಡಿಯೇ ಬಿಡುತ್ತೇನೆ. ಅವರನ್ನು ಕರೆದುಕೊಂಡು ಹೋಗೇ ಹೋಗುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವಿಬ್ಬರೂ ಒಂದು ಎನ್ನುವುದು ಇಡೀ ಸದನಕ್ಕೆ ಗೊತ್ತು.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಇದು ಹುಡುಗಾಟಿಕೆ ಮಾಡುವ ಮಾತಲ್ಲ. ನಿಜವಾಗಿ ಹೇಳುತ್ತೇನೆ. ನಾನು ಇದರ ಬಗ್ಗೆ ಬಹಳ ದೀರ್ಘವಾಗಿ ಹೋಗುತ್ತೇನೆ. ಈ ಮೂಢನಂಬಿಕೆಯಿಂದ, ನಿಜವಾಗಿ ಆ ಎರಡೂ ಕ್ಷೇತ್ರಗಳೂ ಹಾಳಾಗಿ ಹೋಗುತ್ತಿವೆ. ಯಾರೂ ಅಲ್ಲಿಗೆ ಬರುವುದಿಲ್ಲವೆಂದರೆ, ನಮ್ಮನ್ನು ದಯವಿಟ್ಟು ರಾಜ್ಯದಿಂದ ಹೊರಗೆ ಹಾಕಿಬಿಡಿ. ಇದರ ಬಗ್ಗೆ ನಾನು ಬಹಳ ಸೀರಿಯಸ್ ಆಗಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಬರಬೇಕು, ಎಲ್ಲರೂ

ಬರಬೇಕು ಆ ಎರಡೂ ಕ್ಷೇತ್ರಗಳಿಗೆ ಬರದಿದ್ದರೆ, ನಾನು ಸತ್ಯಾಗ್ರಹ ಕೊಡುತ್ತೇನೆ. ಇದು ಬಹಳ ಅನ್ಯಾಯ. ಯಾವ ಒಂದು ವಿಚಾರವಿದು?

ಅಧ್ಯಕ್ಷರು : ಆಯಿತು, ಪಾಟೀಲರೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಎಸ್.ಎಸ್. ಪಾಟೀಲರು ಏನು ಹೇಳುತ್ತಿದ್ದಾರೆ ಅದು ಸರಿ. ಈ ಮೂಢನಂಬಿಕೆಗಳು, ಈ ಅನಾದರಣೆ ಸರಿಯಲ್ಲ. ಇವುಗಳು ಈ ರಾಜ್ಯದಲ್ಲಿರತಕ್ಕಂಥ ಕ್ಷೇತ್ರಗಳು ಮತ್ತು ಪವಿತ್ರವಾದ ಕ್ಷೇತ್ರ. ಇವರು ಮೂಢನಂಬಿಕೆಗಳ ಹೆಸರು ಹೇಳಿಕೊಂಡು ಅಲ್ಲಿಗೆ ಬರದೇ ಇರತಕ್ಕಂಥಾದ್ದು ಒಳ್ಳೆಯ ಸೂಚನೆಯಲ್ಲ. ನಾನು ಮತ್ತು ಎಸ್.ಎಸ್. ಪಾಟೀಲರು .....

ಶ್ರೀ ಎಸ್.ಎಸ್. ಪಾಟೀಲ್ : ಮೂಢನಂಬಿಕೆಗಳಿಗೆ ಅಂಟಿಕೊಂಡು ಈ ಕ್ಷೇತ್ರಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ನಾವು ಏನು ಅನ್ಯಾಯ ಮಾಡಿದ್ದೇವೆ? ಆ ಜನ ಏನು ಅನ್ಯಾಯ ಮಾಡಿದ್ದಾರೆ? ಇದನ್ನು ಇಲ್ಲಿ ನಾನು ಹುಡುಗಾಟಿಕೆಗೆ ಹೇಳುತ್ತಿಲ್ಲ. ಈ ಕ್ಷೇತ್ರಗಳಿಗೆ ಬರುವುದು ಎಂದರೆ ಇಲ್ಲಿ ಹುಡುಗಾಟಿಕೆಯಾಗಿದೆ.

ಅಧ್ಯಕ್ಷರು : ಈಗ ಇದಕ್ಕೆ ಮುಕ್ತಾಯ ಹಾಡೋಣ. ಈಗ ಮುಂದಿನ ಪ್ರಶ್ನೆ, ಮಾನ್ಯ ಅಪ್ಪಸಾಹೇಬ್ ಮಲ್ಲಪ್ಪ ಪಟ್ಟಣಶೆಟ್ಟಿಯವರು ಪ್ರಶ್ನೆ ಕೇಳಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಇದರ ಬಗ್ಗೆ ನಾನು ಸೀರಿಯಸ್ ಆಗಿ ಹೋಗುತ್ತೇನೆ.

ಅಧ್ಯಕ್ಷರು : ಆಯಿತು ಪಾಟೀಲರೆ, ಈಗ ಅಪ್ಪಸಾಹೇಬರು.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಅಪ್ಪಾಸಾಹೇಬ್ ಮಲ್ಲಪ್ಪ ಪಟ್ಟಣಶೆಟ್ಟಿಯವರು ಪ್ರಶ್ನೆ ಕೇಳಲು ಎದ್ದುನಿಂತರು)

ಶ್ರೀ ಎಸ್.ಎಸ್. ಪಾಟೀಲ್ : ಈ ಎರಡೂ ಕ್ಷೇತ್ರಗಳನ್ನೂ ಕರ್ನಾಟಕದಿಂದ ಹೊರಗೆ ಹಾಕಿಬಿಡಿ.

ಅಧ್ಯಕ್ಷರು : ಅಪ್ಪಾಸಾಹೇಬ್ ಮಲ್ಲಪ್ಪ ಪಟ್ಟಣಶೆಟ್ಟಿಯವರು ಇದ್ದಾರೆಯೇ?

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಹಿಂದಿನ ಬೆಂಚ್‌ನವರಿಗೂ ಸ್ವಲ್ಪ ಅವಕಾಶ ಕೊಡಿ. ಅರಸೀಕೆರೆಯಲ್ಲಿ 150 ಹಾಸಿಗೆಯ ಆಸ್ಪತ್ರೆಯಿದೆ. ಅಲ್ಲಿ 9 ಜನ ಡಾಕ್ಟರ್‌ಗಳಿದ್ದಾರೆ. ಆದರೆ ಅಲ್ಲಿ ರೋಗಿಗಳು ಹೋದರೆ, ಅಲ್ಲಿ ಯಾವ ಡಾಕ್ಟರ್‌ಗಳೂ ಇರುವುದಿಲ್ಲ. ಹೊರಗಡೆಗೆ ಹೋಗಬೇಕಾದ ಪರಿಸ್ಥಿತಿ ಇದೆ.

ಅಧ್ಯಕ್ಷರು : ಆಯಿತು, ಆ ಪ್ರಶ್ನೆ ಮುಕ್ತಾಯವಾಯಿತಲ್ಲಾ.

ಶ್ರೀ ಎ.ಎಸ್. ಬಸವರಾಜು : ಅಲ್ಲಿರುವ ಡಿ–ಗ್ರೂಪ್ ನೌಕರನು ಕುಡಿದು ಓಲಾಡುತ್ತಿರುತ್ತಾರೆ. ಅಂಥವರನ್ನು ಸಸ್ಪೆಂಡ್ ಮಾಡಿ ಎಂದರೆ ಯಾರೂ ಸಸ್ಪೆಂಡ್ ಮಾಡುತ್ತಿಲ್ಲ. ಆದ್ದರಿಂದ, ಅಲ್ಲಿರುವ ಡಾಕ್ಟರ್‌ಗಳೆಲ್ಲರೂ ವಾಲೆಂಟರಿ ರಿಟೈರ್‌ಮೆಂಟ್ ಕೇಳಿದ್ದಾರೆ. ಸರ್ಕಾರ ಅವರ ವಾಲುಯೆಂಟರಿ ರಿಟೈರ್‌ಮೆಂಟನ್ನು ಅಕ್ಸೆಪ್ಟ್ ಮಾಡಿಲ್ಲ. ಹೀಗಾಗಿ, ವೈದ್ಯರುಗಳು ಅಲ್ಲಿಗೆ ಹೋಗದೇ ವೈದ್ಯರುಗಳ ಹುದ್ದೆ ಖಾಲಿ ಇವೆ. ಆದ್ದರಿಂದ, ಅವರ ವಾಲೆಂಟರಿ ರಿಟೈರ್‌ಮೆಂಟನ್ನು ಅಕ್ಸೆಪ್ಟ್ ಮಾಡಿ ಬೇರೆ ಡಾಕ್ಟರ್‌ಗಳನ್ನು ತುಂಬಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಕುಡಿದು

ಓಲಾಡತಕ್ಕಂಥ ಡಿ-ಗ್ರೂಪ್ ನೌಕರರನ್ನು ಸಸ್ಪೆಂಡ್ ಮಾಡಿ. ಇಲ್ಲವೇ, ಅವರನ್ನು ಡಿಸ್ಮಿಸ್ ಮಾಡಿ. ಇದರಿಂದ ರೋಗಿಗಳಿಗೆ ನಿಜವಾಗಿ ತುಂಬಾ ತೊಂದರೆಯಾಗುತ್ತಿದೆ ಮತ್ತು ಅಲ್ಲಿನ ಆಂಬ್ಯುಲೆನ್ಸ್‌ಗೆ ಚಾಲಕರಿಲ್ಲ. ದಯವಿಟ್ಟು ಅಲ್ಲಿಗೆ ಚಾಲಕರನ್ನು ಕೊಡಿ. ಏಕೆಂದರೆ, ಅದು ರಾಷ್ಟ್ರೀಯ ಹೆದ್ದಾರಿ. ಇಲ್ಲಿ ಅನೇಕ ಆ್ಯಕ್ಸಿಡೆಂಟ್‌ಗಳಾಗುತ್ತಿವೆ. ಅಪಘಾತಕ್ಕೀಡಾದವರನ್ನು ಬೇರೆ ವೆಹಿಕಲ್‌ಗಳಲ್ಲಿ ಬೆಂಗಳೂರಿಗೆ ಕರೆದುಕೊಂಡು ಬರುವ ಹೊತ್ತಿಗೆ, ಅನೇಕ ವೇಳೆ ಪ್ರಾಣವೇ ಹೋಗಿದೆ. ಆ ದೃಷ್ಟಿಯಿಂದ ಆಂಬ್ಯುಲೆನ್ಸ್ ಚಾಲಕರ ಅವಶ್ಯಕತೆ ಇದೆ. ಡಾಕ್ಟರ್‌ಗಳ ಅವಶ್ಯಕತೆ ಇದೆ. ದಯಮಾಡಿ, ಈ 150 ಬೆಡ್‌ಗಳ ಆಸ್ಪತ್ರೆಗೆ ಸಾಕಷ್ಟು ಡಾಕ್ಟರ್‌ಗಳನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಅವರು ಹೇಳುತ್ತಾರೆ. ನೀವು ಕುಳಿತುಕೊಳ್ಳಿ. ಮಾನ್ಯ ಆರೋಗ್ಯ ಸಚಿವರೇ, ನಿಮ್ಮನ್ನೇ ಕೇಳುತ್ತಿರುವುದು, ಹೇಳಿ.

ಶ್ರೀ ಆರ್. ಧ್ರುವನಾರಾಯಣ್ : ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗುವ ವೈದ್ಯರುಗಳ ಸಂಬಳ ಜಾಸ್ತಿ ಮಾಡಬೇಕು.

ಶ್ರೀಮತಿ ಸುನೀತಾ ವೀರಪ್ಪಗೌಡ ಜಿ. : ಹತ್ತು ಸಾವಿರ ರೂಪಾಯಿ ಕೊಡುತ್ತೇವೆ ಎಂದರೂ ಯಾರೂ ಡಾಕ್ಟರ್ಸ್ ಬರುವುದಿಲ್ಲ. ಅದನ್ನು ಸ್ವಲ್ಪ ಜಾಸ್ತಿ ಮಾಡಬೇಕು.

ಅಧ್ಯಕ್ಷರು : ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳಬೇಕೆನ್ನುತ್ತೀರಿ. ಒಂದೊಂದು ಪ್ರಶ್ನೆಗೆ ಎಲ್ಲರೂ ಐದೈದು ನಿಮಿಷ ಉಪಪ್ರಶ್ನೆಗಳನ್ನು ಕೇಳಿದರೆ, ಪ್ರಶ್ನೋತ್ತರವನ್ನು ಹೇಗೆ ನಡೆಸುವುದು?

ಶ್ರೀಮತಿ ಸುನೀತಾ ವೀರಪ್ಪಗೌಡ ಜಿ. : ಅವರು ವೈದ್ಯರುಗಳಿಗೆ 10 ಸಾವಿರ ರೂಪಾಯಿ ಕೊಡುತ್ತಾರೆ. ಅಲ್ಲಿ ಯಾರೂ ಇರುವುದಿಲ್ಲ. ಸ್ವಲ್ಪ ಜಾಸ್ತಿ ಕೊಡಲು ಹೇಳಿ.

ಅಧ್ಯಕ್ಷರು : ಎಲ್ಲಾ ತಾಲ್ಲೂಕುಗಳಲ್ಲೂ ಇದೇ ಪರಿಸ್ಥಿತಿ ಇದೆ. ವೈದ್ಯರುಗಳ ಕೊರತೆ ಇದೆ. ವಸತಿ ಗೃಹಗಳಿದ್ದರೂ ಅಲ್ಲಿ ವೈದ್ಯರುಗಳ್ಯಾರೂ ಇರುವುದಿಲ್ಲ. ಇದು ಎಲ್ಲರ ಜನರಲ್ ಕಂಪ್ಲೇಂಟ್. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ. ಜಿಲ್ಲಾವಾರು ಒಂದು ಸಭೆ ಕರೆದು ಏನಾದರೊಂದು ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳಿ. ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಈಗ ಅಪ್ಪಾಸಾಹೇಬ್ ಮಲ್ಲಪ್ಪ ಪಟ್ಟಣಶೆಟ್ಟಿಯವರು.

ವಿಷಯ: ವಿಜಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ದುಡಿಯುತ್ತಿರುವ ಬಾಲಕಾರ್ಮಿಕರು

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) : ಮಾನ್ಯ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೇಕರಿ, ಇಟ್ಟಂಗಿ ಭಟ್ಟಿ, ಹೋಟೆಲ್, ಅಂಗಡಿ ಮತ್ತು ಗ್ಯಾರೇಜ್‌ಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಾಲಕಾರ್ಮಿಕ ಪದ್ಧತಿಯನ್ನು ನಿವಾರಿಸುವಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಾಲಕಾರ್ಮಿಕ ಪದ್ಧತಿಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು ಹಾಗೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕಠಿಣ ಕ್ರಮ ಕೈಗೊಂಡಿದೆ;

ಈ) ಬಾಲ ಕಾರ್ಮಿಕರ ಪುನರ್ ವಸತಿ ಮತ್ತು ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಹೌದು.

ಆ) ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಬಾಲ ಕಾರ್ಮಿಕ ಪದ್ಧತಿಯನ್ನು ನಿವಾರಿಸುವಲ್ಲಿ ವಿಫಲರಾಗಿರುವ ಬಗ್ಗೆ ಯಾವುದೇ ನಿರ್ದಿಷ್ಟ ದೂರು ಸರ್ಕಾರಕ್ಕೆ ಬಂದಿರುವುದಿಲ್ಲ.

ಬಾಲಕಾರ್ಮಿಕ ಪದ್ಧತಿಯನ್ನು ನಿವಾರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಿಜಾಪುರ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ ಕಾರ್ಯನಿರ್ವಹಿಸುತ್ತಿದೆ. ಇದಕ್ಕೆ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಈ ಸಂಘವು ಬಾಲಕಾರ್ಮಿಕರ ಪದ್ಧತಿಯನ್ನು ನಿವಾರಿಸಲು ಭಾರತ ಸರ್ಕಾರದ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಇ) ಸರ್ಕಾರವು ಬಾಲಕಾರ್ಮಿಕ ಪದ್ಧತಿಯನ್ನು ನಿವಾರಿಸಲು ಅನೇಕ ಕ್ರಮಗಳನ್ನು ಕೈಗೊಂಡಿದೆ.

1. ಬಾಲಕಾರ್ಮಿಕರಿಗೆ ಸಂಬಂಧಪಟ್ಟ ಕಾರ್ಮಿಕ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗುತ್ತಿದೆ.
2. ಕಾರ್ಮಿಕ ಇಲಾಖಾ ಅಧಿಕಾರಿಗಳ ಜೊತೆಗೆ ಸರ್ಕಾರದ ಇತರೆ 9 ಇಲಾಖೆಗಳ ಅಧಿಕಾರಿಗಳನ್ನು ಪರಿವೀಕ್ಷರೆಂದು ಘೋಷಿಸಿ ತಪಾಸಣಾ ಅಧಿಕಾರ ನೀಡಲಾಗಿದೆ. ತಪಾಸಣೆಗಳಲ್ಲಿ ಕಂಡು ಬಂದ ಕಾನೂನಿನ ಉಲ್ಲಂಘನೆಗಳಲ್ಲಿ ಸಂಬಂಧಪಟ್ಟವರ ವಿರುದ್ಧ ಮೊಕದ್ದಮೆ ಹೂಡಲಾಗುತ್ತಿದೆ.
3. ಕಾನೂನನ್ನು ಉಲ್ಲಂಘಿಸಿದ ಅಪಾಯಕಾರಿ ಉದ್ದಿಮೆಗಳ ಮಾಲೀಕರಿಂದ ಪ್ರತಿ ಬಾಲ ಕಾರ್ಮಿಕನಿಗೆ ರೂ. 20,000ಗಳ ಪರಿಹಾರ ಧನವನ್ನು ಸರ್ವೋಚ್ಛ ನ್ಯಾಯಾಲಯದ ಆದೇಶದ ಪ್ರಕಾರ ವಸೂಲು ಮಾಡಲಾಗುತ್ತಿದೆ.

ಬಾಲಕಾರ್ಮಿಕ ಪದ್ಧತಿ ನಿವಾರಿಸುವಲ್ಲಿ ಸರಿಯಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಈ) ಬಿಡುಗಡೆ ಮಾಡಿರುವ ಬಾಲಕಾರ್ಮಿಕರಿಗೆ ಶಿಕ್ಷಣ ಮತ್ತು ಪುನರ್ ವಸತಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಅಪಾಯಕಾರಿ ಹಾಗೂ ಅಪಾಯಕಾರಿ ಅಲ್ಲದ ಉದ್ದಿಮೆಗಳಿಂದ ಬಿಡಿಸಿದ ಬಾಲ ಕಾರ್ಮಿಕರನ್ನು ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ವಸತಿ ಶಾಲೆಗಳಿಗೆ ದಾಖಲು ಮಾಡಲಾಗುತ್ತಿದೆ.
2. ರಾಜ್ಯದಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಅಡಿಯಲ್ಲಿ ಬಿಜಾಪುರ ಜಿಲ್ಲೆಯ 40 ವಿಶೇಷ ಶಾಲೆಗಳು ಸೇರಿದಂತೆ 267 ವಿಶೇಷ ಶಾಲೆಗಳು ನಡೆಯುತ್ತಿವೆ. ಹಾಗೂ ರಾಜ್ಯ ಬಾಲಕಾರ್ಮಿಕ ಕ್ರಿಯಾ ಯೋಜನೆ ಅಡಿಯಲ್ಲಿ 51 ವಿಶೇಷ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

3. ಈ ಶಾಲೆಗಳಲ್ಲಿ 6 ತಿಂಗಳಿನಿಂದ 1 ವರ್ಷದವರೆಗೆ ಪುನರ್ ವಸತಿ ಕಲ್ಪಿಸಿದ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣವನ್ನು ನೀಡಲಾಗುವುದು. ತದನಂತರ ಅವರ ವಯಸ್ಸಿಗೆ ಹಾಗೂ ಕಲಿಕಾ ಸಾಮರ್ಥ್ಯದ ಆಧಾರದ ಮೇಲೆ ಮುಖ್ಯವಾಹಿನಿ ಶಾಲೆಗೆ ಸೇರಿಸಲಾಗುತ್ತದೆ.
4. ಈ ವಿಶೇಷ ಶಾಲೆಗಳಲ್ಲಿ ಕೆಲಸದಿಂದ ಬಿಡುಗಡೆಗೊಂಡ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವುದು, ಜೊತೆಗೆ ಅವರಿಗೆ ಊಟ, ವಸತಿ ಹಾಗೂ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ಬಾಲ ಕಾರ್ಮಿಕರ ಪದ್ಧತಿ ಹಾಗೂ ಅವರ ವಿಶೇಷ ಕಾಳಜಿ ಬಗ್ಗೆ ಕೇಳಲಾದ ಪ್ರಶ್ನೆಗೆ ಬಿಜಾಪುರ ಘಟಕದಲ್ಲಿ 40 ವಿಶೇಷ ಶಾಲೆಗಳು ಹಾಗೂ 51 ವಿಶೇಷ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ ಎಂದು ಸರ್ಕಾರದ ಉತ್ತರದಲ್ಲಿ ತಿಳಿಸಿದ್ದಾರೆ. ಅಲ್ಲಿಯ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಈ ಬಾಲ ಕಾರ್ಮಿಕರ ಶಾಲೆಗಳ ಸಂಪರ್ಕ ಮಾಡಿದಾಗ, ಹಲವಾರು ಶಾಲೆಗಳಲ್ಲಿ ಅಗತ್ಯ ಸಂಖ್ಯೆ ಇರಲಾರದ, ಹಾಗೂ ಒಂದು ಶಾಲೆ ಮುಚ್ಚಿದ್ದು ಈ ಎಲ್ಲಾ ವರದಿಗಳು ಈಗಾಗಲೇ ಸರ್ಕಾರದ ಮಟ್ಟದಲ್ಲಿ ಬಂದಿದೆ. ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆ ಬಗ್ಗೆ ಮಾನ್ಯ ಸಚಿವರಿಗೆ ಏನಾದರೂ ಮಾಹಿತಿ ಇದ್ದರೆ ಅದನ್ನು ತಿಳಿಸಬೇಕು ಮತ್ತು ಏನಾದರೂ ಕ್ರಮ ತೆಗೆದುಕೊಂಡಿದ್ದರೆ ತಿಳಿಸಬೇಕೆಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಬಾಲ ಕಾರ್ಮಿಕರಾಗಿ ದುಡಿಯತಕ್ಕಂಥ ಮಕ್ಕಳನ್ನು ಗುರುತಿಸಿ 40 NCLP ವಿಶೇಷ ಶಾಲೆಗಳಲ್ಲಿ ಸೇರಿಸಲಾಗಿದೆ. ಆ 40 NCLP ವಿಶೇಷ ಶಾಲೆಗಳು, ಅದರಲ್ಲಿ ನಮ್ಮ ಪರಿವೀಕ್ಷಕರು ಏನಿದ್ದಾರೆ, ಸುಮಾರು 9 ಇಲಾಖೆಗಳು ಒಳಗೊಂಡು, ಈ ಇಲಾಖೆಯ ಅಧಿಕಾರಿಗಳು ಸೇರಿಕೊಂಡು inspection ಮಾಡಿ cases ಅನ್ನು book ಮಾಡಲಾಗಿದೆ. ಅದರಡಿಯಲ್ಲಿ ನಾವು ಅಲ್ಲಿರತಕ್ಕಂಥ ಈ ಜಿಲ್ಲಾಧಿಕಾರಿಗಳಿಗೆ ದೂರನ್ನು ಕೊಡುತ್ತೇವೆ. ಈ ಕ್ರಮವನ್ನು ಜಿಲ್ಲಾಧಿಕಾರಿಯವರಿಂದ ತೆಗೆದುಕೊಳ್ಳುವ ಹಾಗೆ ಮಾಡುತ್ತೇವೆಂದು ನಾವು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಬಯಸುತ್ತೇವೆ. ಏಕೆಂದರೆ, ಈ NCLP ಮತ್ತು SCLP ಶಾಲೆಗಳು ಏನಿವೆ, Local ನಲ್ಲಿರತಕ್ಕಂಥ NGO's ಗಳಿಗೆ ಆಯ್ಕೆ ಮಾಡುವುದಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಅವರು ಅದನ್ನು ಆಯ್ಕೆ ಮಾಡುತ್ತಾರೆ. ಅವರೇ ಅದರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಒಂದು ಕಾನೂನು ಇದೆ. ನಾವೇನು ಮಾಡುತ್ತೇವೆಂದರೆ, 9 ಇಲಾಖೆಗಳು ಸೇರಿಕೊಂಡು inspection ಮಾಡಿ ಯಾರು defaulter ಆಗಿದ್ದಾರೆ, ಯಾರು ತಪ್ಪೆಸಗಿದ್ದಾರೆ ಆ ಒಂದು ದೂರನ್ನು ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟು ಕ್ರಮ ತೆಗೆದುಕೊಳ್ಳುವಂಥ ಕೆಲಸವನ್ನು ಮಾಡುತ್ತಿದ್ದೇವೆ ಇದು ಜಾರಿಯಲ್ಲಿದೆ. ಬಹಳಷ್ಟು ಕೆಲಸ ಮಾಡಿದ್ದೇವೆ. ಬಿಜಾಪುರದಲ್ಲಿ ಸಹ ಸಾಕಷ್ಟು complaint ಗಳು ಇವೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಸಹಿತ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ವಸತಿ ಶಾಲೆಗಳನ್ನು visit ಮಾಡಿ ಕಾರ್ಮಿಕ ಅಧಿಕಾರಿಗಳು ತಪಾಸಣೆ ಮಾಡಿದಾಗ 1745 ಬಾಲ ಕಾರ್ಮಿಕರು ಇದ್ದಾರೆಂದು ಹಾಜರಿ ಪುಸ್ತಕದಲ್ಲಿ ಇದ್ದರೆ, ಅಲ್ಲಿ ನಿಜವಾಗಿ ಇದ್ದದ್ದು 885 ಸಂಖ್ಯೆಯಲ್ಲಿ ಕಂಡು ಬಂದ ಸಂದರ್ಭದಲ್ಲಿ, 6 ವರ್ಷದ ಮಕ್ಕಳಿಗೆ ಅಲ್ಲಿ ಇರಲಿಕ್ಕೆ ಅವಕಾಶ ಇರುವುದಿಲ್ಲ. ಆದರೂ ಕೂಡ ಅಂಥ ಮಕ್ಕಳು ಅಲ್ಲಿ ಕಂಡುಬಂದಿದ್ದು, ಅನಂತರ 9 ವರ್ಷದೊಳಗೆ ಇರಕೂಡದು ಎಂದು ಇರುತ್ತದೆ. ಆದರೂ ಕೂಡ ಹೆಚ್ಚಿನ ವಯಸ್ಸಿನ ಮಕ್ಕಳು ಕೂಡ ಇದ್ದದ್ದು ಕಂಡುಬಂದಿದೆ. ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಇದರ ಬಗ್ಗೆ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಆ ಒಂದು ವರದಿ, ಇನ್ನೊಂದು visit ಮಾಡಿ ತಪಾಸಣೆಯನ್ನು ಕಾರ್ಮಿಕ ಅಧಿಕಾರಿಗಳು ಮಾಡಿದ್ದಾರೆ. ಆ ವರದಿ ಇಲ್ಲಿಗೆ ಬಂದು ಕುಳಿತು ಬಹಳ ದಿವಸಗಳಾಯಿತು. ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಬಹಳ ಶಾಲೆಗಳು ಮುಚ್ಚಿದ್ದು ಹಾಗೂ ಮಕ್ಕಳ ಸಂಖ್ಯೆ 1, 2, 3, 4 ಈ ತರಹ ಇದ್ದದ್ದು ಕೂಡ ಆ ವರದಿಯನ್ನು ನಾನು ಇಲ್ಲಿ ತಂದಿದ್ದೇನೆ. ತಾವು ಕೂಡ ಆ ವರದಿಯನ್ನು ತರಿಸಿಕೊಂಡು ಸಮಗ್ರವಾದಂಥ ಮಾಹಿತಿಯನ್ನು ತರಿಸಿಕೊಂಡು ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅದು ಬಹಳ ಸತ್ಯವಾಗಿದೆ. ಬಿಜಾಪುರ ಜಿಲ್ಲೆಯಲ್ಲಿ 40 NCLP ಅಡಿಯಲ್ಲಿ ವಿಶೇಷ ಶಾಲೆಗಳು ನಡೆಯುತ್ತಿವೆ. ಅದರಲ್ಲಿ ಈ ಹಾಜರಾತಿ ಏನಿದೆ, ಸುಮಾರು 2 ಸಾವಿರ ಮಕ್ಕಳು ಅಲ್ಲಿರಬೇಕು. ಆದರೆ ಕೇವಲ 800 ಮಕ್ಕಳನ್ನು ತೋರಿಸಿ 2 ಸಾವಿರ ಮಕ್ಕಳ ಅನುದಾನವನ್ನು ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ತಾವು ಹೇಳಿದ ಹಾಗೆ ಅಲ್ಲಿ ಒಂದು Committee ಏನಿದೆ, ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಆ Committee NGO's ಮುಖಾಂತರ ಈ ಶಾಲೆಗಳನ್ನು ನಡೆಸಲಿಕ್ಕೆ NGO's ಗೆ ನೇಮಿಸಲಾಗುತ್ತದೆ. So, NCLP ಎಂದರೆ ಕೇಂದ್ರದಿಂದ ಹಣ ಬರುತ್ತದೆ. SCLP ಎಂದರೆ ರಾಜ್ಯದಿಂದ ಹಣ ಬರುತ್ತದೆ. ಬಿಜಾಪುರದಲ್ಲಿ ಈ 40 ಶಾಲೆಗಳು NCLP ಅಡಿಯಲ್ಲಿ ನಡೆಯುತ್ತಿದೆ. ಈಗಾಗಲೇ ನಮ್ಮ ಅಧಿಕಾರಿಗಳು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ನಾವು ದೂರನ್ನು ಕೊಟ್ಟು ಕ್ರಮ ತೆಗೆದುಕೊಳ್ಳಲಿಕ್ಕೆ ಮುಂದಾಗುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಸದನದ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ವಿಷಯ: ಉಡುಪಿ ಜಿಲ್ಲೆ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭಿಸುವುದು.

36 (209) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಕಂಬದ ಕೋಣೆ ಗ್ರಾಮದಲ್ಲಿ ಮಂಜೂರಾದ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಈ ತನಕವೂ ಕಾರ್ಯಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಳಂಬವಾಗಲು ಕಾರಣಗಳೇನು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ವಸತಿ ಶಾಲೆ ಮಂಜೂರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಗೋಪಾಲ ಪೂಜಾರಿ :- ಮಾನ್ಯ ಅಧ್ಯಕ್ಷರೆ, ಈ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ನನ್ನ ಕ್ಷೇತ್ರದಲ್ಲಿ ಹಿಂದಿನ ಸರ್ಕಾರ ಅಂದರೆ ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಾಗ, ಆ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಅನುಮತಿಯನ್ನು ಕೊಟ್ಟಿದ್ದರು. ಜಾಗ ಸಹ ಇಲಾಖೆಗೆ ಹಸ್ತಾಂತರವಾಗಿದೆ. ಆ ಶಾಲೆ ಪ್ರಾರಂಭವಾಗುವ ಹಂತದಲ್ಲಿ ಚುನಾವಣೆ ಘೋಷಣೆಯಾಯಿತು. ಚುನಾವಣೆ ಆದ ನಂತರ ಬಂದಂಥ ಸರ್ಕಾರದಿಂದ ಈ ಶಾಲೆ ಅನುಷ್ಠಾನವಾಗಲಿಲ್ಲ ಅದೇ ಇಲಾಖೆಯವರು 'ಅನುಮತಿ ಆಗಿಲ್ಲ' ಎನ್ನುವ ಉತ್ತರವನ್ನು ಈಗ ಕೊಟ್ಟಿದ್ದಾರೆ. ನನಗೆ ಇದರ ಬಗ್ಗೆ ಒಂದು ಸರಿಯಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :- ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂಥ ಮಾನ್ಯ ಗೋಪಾಲ ಪೂಜಾರಿಯವರಿಗೆ ತಿಳಿಸಬಯಸುವುದೇನೆಂದರೆ, ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಯಾವುದೂ ವಸತಿ ಶಾಲೆ ಮಂಜೂರು ಆಗಿರುವುದಿಲ್ಲ. ಏಕೆಂದರೆ, ಅವರು ಹೇಳಿರುವಂತೆ ಸನ್ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಈ ತರಹ ಮಂಜೂರು ಆಗಿದೆ ಎಂದು ಹೇಳಿದರು. ಆ ತರಹ ಪ್ರಸ್ತಾವನೆ ಆಗಿದೆಯೇ ಎಂದು ನಾನು ಈಗಾಗಲೇ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇನೆ. ಯಾವುದೇ ಪ್ರಸ್ತಾವ ನಮ್ಮ ಸರ್ಕಾರದ ಮುಂದಿಲ್ಲ. ಅದಕ್ಕೆ ಅವರು ವಿಳಂಬವಾಗಲು ಕಾರಣವೇನೆಂದು ಕೇಳಿದರು. ಪ್ರಸ್ತಾವ ನಮ್ಮ ಸರ್ಕಾರದ ಮುಂದೆ ಇರದ ಕಾರಣ ವಿಳಂಬವಾಗುವ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ ಅವರಿಗೆ ಅನುಮತಿ ಯಾವುದೂ ಸಿಕ್ಕಿಲ್ಲ. ದಯಮಾಡಿ ತಾವು ಇನ್ನೊಂದು ಸಲ ಕಾಗದ ಪತ್ರಗಳನ್ನು ನೋಡಿದರೆ ಒಳ್ಳೆಯದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಗೋಪಾಲ ಪೂಜಾರಿ :- ಮಾನ್ಯ ಅಧ್ಯಕ್ಷರೆ, ಇಲಾಖೆಯ ಅಧಿಕಾರಿಗಳ ಜೊತೆ ನೀವು ಸರಿಯಾಗಿ ಚರ್ಚೆ ಮಾಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ನನ್ನ ಕ್ಷೇತ್ರಕ್ಕೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹೇರೂರು ಗ್ರಾಮಕ್ಕೆ sanction ಆಗಿದೆ. ಜಾಗವನ್ನು ಕೊಟ್ಟಿದ್ದೇವೆ. Theatre ಅನ್ನು ಬಾಡಿಗೆಗೆ ತೆಗೆದುಕೊಳ್ಳಲಿಕ್ಕೆ ಇಲಾಖೆಯವರೊಂದಿಗೆ ಚರ್ಚೆ ಮಾಡಿದ್ದೇವೆ. ಅದೇ ಅಧಿಕಾರಿಗಳು ಇವತ್ತು ಅನುಮತಿ ಆಗಿಲ್ಲವೆಂದು ಹೇಳಿದರೆ ಒಂದು ಸರ್ಕಾರ ಹೋದ ತಕ್ಷಣ sanction ಆದ ಕಾರ್ಯಕ್ರಮವನ್ನು ತೆಗೆದುಹಾಕುತ್ತಾರೆಂದರೆ ಇದರ ಅರ್ಥವೇನು? ನಾನು ಹೇಳುವುದಿಷ್ಟೆ. ಅದೇನೆಂದರೆ, sanction ಆಗಿರುವ copy ಇಲಾಖೆಯಲ್ಲಿ ಇದೆಯೋ ಅಥವಾ ಇಲ್ಲವೇ ಎಂದು ಕೇಳಿ. ಇಲ್ಲದಿದ್ದರೆ ಆ copy ಯನ್ನು ನಾನು ತರಿಸಿಕೊಡುತ್ತೇನೆ. ಹಾಗಾಗಿ ನೀವು ಯಾವಾಗ ಅನುಮತಿಯನ್ನು ಕೊಡುತ್ತೀರಿ? ಯಾವಾಗ ವಸತಿ ಶಾಲೆಯನ್ನು ಪ್ರಾರಂಭ ಮಾಡುತ್ತೀರಿ? ಎನ್ನುವ ಬಗ್ಗೆ ನನಗೆ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ :- ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಿಂದ ಅನುಮತಿ ಇದೆ ಎಂದು ಮಾನ್ಯ ಹಿರಿಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರಿಗೆ ಇವತ್ತು ನಾನೊಂದು ಸಲಹೆ ಮಾಡುತ್ತೇನೆ. ನಮ್ಮ ಇಲಾಖೆಯ ಅಧಿಕಾರಿಗಳನ್ನು, ಮಾನ್ಯ ಶಾಸಕರನ್ನು ನನ್ನ ಕಛೇರಿಗೆ ಕರೆಸಿ ಚರ್ಚೆ ಮಾಡುತ್ತೇನೆ. ಚರ್ಚೆ ಮಾಡಿದಾಗ ಅಕಸ್ಮಾತ್ ಅನುಮತಿ ಇತ್ತು ಎಂದರೆ ಅವರಿಗೆ permission ಕೊಡುತ್ತೇವೆ. ಅನುಮತಿ ಇಲ್ಲ ಎಂದರೆ ಅವರು ಅದಕ್ಕೆ ಒಂದು ಪತ್ರ ಕೊಡಲಿ, ನಂತರ ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ: ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಪಶುವೀರ್ಯಾಣು ಕೊರತೆಯನ್ನು ನೀಗಿಸುವುದು.

37 (166) ಶ್ರೀ ಕೃಷ್ಣಬೈರೇಗೌಡ ಸಿ.ಬಿ. (ವೇಮಗಲ್) : ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ವೃಂದವಾರು ಮಂಜೂರಾದ ಹುದ್ದೆಗಳೆಷ್ಟು ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು;

ಆ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮಕೈಗೊಂಡಿದೆ; (ವಿವರ ನೀಡುವುದು ಹಾಗೂ ಜಿಲ್ಲಾವಾರು ಅದರಲ್ಲೂ ಮುಖ್ಯವಾಗಿ ಕೋಲಾರ ಜಿಲ್ಲೆಯ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು);

ಇ) ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಪಶು ವೀರ್ಯಾಣು (ಸೆಮೆನ್) ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಹೈನುಗಾರಿಕೆಗೆ ಅತ್ಯಂತ ಅವಶ್ಯವಾದ ಪಶುವೀರ್ಯಾಣು (ಸೆಮೆನ್) ವನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಲು ವಿಫಲವಾಗಿರುವುದಕ್ಕೆ ಕಾರಣಗಳೇನು?

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಮತ್ತು ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ವೃಂದವಾರು ಮಂಜೂರಾದ ಹುದ್ದೆಗಳು ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ 1-ರಲ್ಲಿ ನೀಡಲಾಗಿದೆ.

ಆ) ಕೋಲಾರ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ವೃಂದವಾರು ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಏಳು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

577 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮೋದನೆ ನೀಡಿದೆ. ಆಯ್ಕೆ ಮಾಡಲಾದ 250 ಪಶುವೈದ್ಯಾಧಿಕಾರಿಗಳ ಅಂತಿಮ ಪಟ್ಟಿಯನ್ನು ದಿನಾಂಕ: 10-3-2006 ರಂದು ಪ್ರಕಟಿಸಿದೆ. ಉಳಿದ 327 ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

33 ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳನ್ನು ಹಿರಿಯ ಪಶುಪರೀಕ್ಷಕರ ಹುದ್ದೆಯಿಂದ ಮುಂಬಡ್ತಿಯ ಮುಖಾಂತರ ಭರ್ತಿ ಮಾಡಲಾಗುವುದು.

425 ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಮುಂಬಡ್ತಿಯ ಮುಖಾಂತರ ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

400 ಪಶುವೈದ್ಯಕೀಯ ಪರೀಕ್ಷಕರರ ಖಾಲಿ ಹುದ್ದೆಗಳಲ್ಲಿ ಶೇಕಡ 50ನ್ನು ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಮುಂಬಡ್ತಿ ಮುಖಾಂತರ ಹಾಗೂ ಶೇಕಡ 50ನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದೆ. 150 ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡಿದೆ. ಇಲಾಖಾ ಮುಂಬಡ್ತಿ ಸಮಿತಿಯ ಸಭೆಯನ್ನು ಸದ್ಯದಲ್ಲೇ ನಡೆಸಲಾಗುವುದು.

286 ಪಶುವೈದ್ಯಕೀಯ ಸಹಾಯಕರ ಖಾಲಿ ಹುದ್ದೆಗಳಲ್ಲಿ ಶೇಕಡ 75 ನ್ನು ನೇರ ನೇಮಕಾತಿ ಮುಖಾಂತರ ಹಾಗೂ ಶೇಕಡ 25 ನ್ನು ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದ್ದು 5 ವರ್ಷ ಸೇವೆ ಪೂರ್ಣವಾಗಿರುವ ಹಾಗೂ 6 ತಿಂಗಳು ಪಶುವೈದ್ಯಕೀಯ ಸಹಾಯಕರ ತರಬೇತಿಯನ್ನು ಪಡೆದಿರುವ ಡಿ ದರ್ಜೆ ನೌಕರರಿಗೆ ಮುಂಬಡ್ತಿ ನೀಡುವ ಮುಖಾಂತರ ಭರ್ತಿ ಮಾಡಬೇಕಾಗಿದೆ. ದಿನಾಂಕ: 04-10-2005 ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾಗಿದ್ದು 5 ವರ್ಷ ಸೇವೆ ಪೂರ್ಣಗೊಳಿಸಿರುವ 244 ಡಿ ದರ್ಜೆ ನೌಕರರು ಪಶುವೈದ್ಯಕೀಯ ಸಹಾಯಕರ ತರಬೇತಿ ಪಡೆಯುತ್ತಿರುತ್ತಾರೆ.

ಭಾರಿ ವಾಹನ ಚಾಲನೆ ಪರವಾನಗಿ ಪಡೆದಿರುವ 11 ಡಿ ದರ್ಜೆ ನೌಕರರಿಗೆ ವಾಹನ ಚಾಲಕರಾಗಿ ಬಡ್ತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

1385 ಡಿ ದರ್ಜೆ ನೌಕರರ ಹುದ್ದೆಗಳು ಖಾಲಿ ಇದೆ. ಈ ಖಾಲಿ ಹುದ್ದೆಗಳು ಅನುಕಂಪದ ಆಧಾರದ ಮೇಲೆ ಹಾಗೂ ಬೇರೆ ಇಲಾಖೆಗಳಿಂದ ಮರುವಿನ್ಯಾಸದ ಮೂಲಕ ಭರ್ತಿ ಮಾಡಲಾಗುವುದು.

ಇ) ಬಂದಿದೆ.

ಈ) ಕೇಂದ್ರ ಸರ್ಕಾರವು ವಿದೇಶದ ಹೋರಿಗಳನ್ನು ಆಮದು ಮಾಡಿಕೊಳ್ಳುವ ಪ್ರಕ್ರಿಯೆಗೆ ನಿರ್ಬಂಧ ವಿಧಿಸಿದೆ. ದೇಶದಲ್ಲಿ ಉತ್ತರ ಗುಣ ಮಟ್ಟದ ಅಧಿಕ ಹಾಲು ಉತ್ಪತ್ತಿಯ ಅನುವಂಶಿಕತೆಯುಳ್ಳ ಹೆಚ್‌ಎಫ್ ಮತ್ತು ಜರ್ಸಿ ಹೋರಿ ಕರುಗಳು ಹೆಚ್ಚು ಸಂಖ್ಯೆಯಲ್ಲಿ ಇಲ್ಲ. ಆದ್ದರಿಂದ ವೀರ್ಯ ಉತ್ಪಾದನೆ ಕುಂಟಿತವಾಗಿದೆ. ಆದರೆ ಹೆಸರುಘಟ್ಟದಲ್ಲಿ ಇರುವ ಕೇಂದ್ರ ಸರ್ಕಾರದ ಘನೀಕೃತ್ತ ವೀಯೋತ್ಪತ್ತಿ ಕೇಂದ್ರದಿಂದ ವೀರ್ಯ ನಳಿಕೆಗಳನ್ನು ಕೊಳ್ಳುವ ಮೂಲಕ ಕೊರತೆಯನ್ನು ಸರಿದೂಗಿಸಲಾಗುತ್ತಿದೆ.

ಅನುಬಂಧ-1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 166 ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. (ವೇಮಗಲ್)

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1.	ಆಯುಕ್ತರು	1	1	0

1	2	3	4	5
2.	ನಿರ್ದೇಶಕರು	1	0	1
3.	ಅಪರ ನಿರ್ದೇಶಕರು	4	1	3
4.	ಜಂಟಿ ನಿರ್ದೇಶಕರು	7	7	0
5.	ಜಂಟಿ ನಿರ್ದೇಶಕರು (ಅಂಕಿಅಂಶ)	1	1	0
6.	ಉಪ ನಿರ್ದೇಶಕರು	53	51	2
7.	ಆರ್ಥಿಕ ಸಹಾಯಕರು	1	1	0
8.	ಕೇಂದ್ರ ಕಛೇರಿ ಸಹಾಯಕರು	2	1	1
9.	ಆಡಳಿತ ಸಹಾಯಕರು	11	8	3
10.	ಸಹಾಯಕ ನಿರ್ದೇಶಕರು	461	376	85
11.	ಸಹಾಯಕ ನಿರ್ದೇಶಕರು (ಅಂಕಿಅಂಶ)	4	4	0
12.	ಪಶುವೈದ್ಯಾಧಿಕಾರಿ	2022	1000	1022
13.	ಪಶುವೈದ್ಯಕೀಯ ಮೇಲ್ವಿಚಾರಕರು	266	236	30
14.	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	2101	1636	465
15.	ಪಶುವೈದ್ಯಕೀಯ ಪರೀಕ್ಷಕರು	1656	1242	414
16.	ಪಶುವೈದ್ಯಕೀಯ ಸಹಾಯಕರು	2442	2156	286
17.	ಅಧೀಕ್ಷಕರು	69	54	15
18.	ಪ್ರಥಮ ದರ್ಜೆ ಸಹಾಯಕರು	179	164	15
19.	ದ್ವಿತೀಯ ದರ್ಜೆ ಸಹಾಯಕರು	218	195	23
20.	ಶೀಘ್ರಲಿಪಿಗಾರರು	16	7	9
21.	ಹಿರಿಯ ಬೆರಳಚ್ಚುಗಾರರು	11	5	6
22.	ಬೆರಳಚ್ಚುಗಾರರು	91	69	22
23.	ವಾಹನ ಚಾಲಕರು	301	213	88
24.	ಡಿ ದರ್ಜೆ ನೌಕರರು	6634	5249	1385
25.	ಇತರೆ ವೃಂದ	94	35	59
	ಒಟ್ಟು	**16646**	**12712**	**3934**

ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. (ವೇಮಗಲ್) ಮಾನ್ಯ ವಿಧಾನ ಸಭೆ ಸದಸ್ಯರು ರವರ ಗುರುತಿನ ಸಂಖ್ಯೆ: 166 ಕ್ಕೆ ಅನುಬಂಧ-2 (ಕೋಲಾರದ ಜಿಲ್ಲೆ)

ಕ್ರಮ ಸಂಖ್ಯೆ	ಹುದ್ದೆಗಳ	ಮಂಜೂರಾತಿ	ಭರ್ತಿ	ಖಾಲಿ	ಶೇಕಡವಾರು ಭರ್ತಿ	ಶೇಕಡವಾರು ಖಾಲಿ
1	2	3	4	5	6	
1.	ಉಪ ನಿರ್ದೇಶಕರು	1	1	0	100	0

ಕ್ರಮ ಸಂಖ್ಯೆ	ಹುದ್ದೆಗಳ	ಮಂಜೂರಾತಿ	ಭರ್ತಿ	ಖಾಲಿ	ಶೇಕಡವಾರು	
					ಭರ್ತಿ	ಖಾಲಿ
2.	ಸಹಾಯಕ ನಿರ್ದೇಶಕರು	27	26	1	96	3.7
3.	ಪಶುವೈದ್ಯಾಧಿಕಾರಿಗಳು	105	63	42	59	41
4.	ಪಶುವೈದ್ಯಕೀಯ ಮೇಲ್ವಿಚಾರಕರು	20	6	14	30	70
5.	ಹಿರಿಯ ಪಶುವೈದ್ಯಕೀಯ ಪರೀಕ್ಷರು	84	44	40	52.4	47.6
6.	ಪಶುವೈದ್ಯಕೀಯ ಪರೀಕ್ಷಕರು	103	33	70	32.0	88.0
7.	ಪಶುವೈದ್ಯಕೀಯ ಸಹಾಯಕರು	92	58	34	63.0	37.0
8.	ವಾಹನ ಚಾಲಕರು	16	12	4	75	25
9.	ಡಿ ದರ್ಜೆ ನೌಕರರು	314	230	84	73.2	26.8
	ಲಿಪಿಕ ಸಿಬ್ಬಂದಿ					
1.	ಅಧೀಕ್ಷಕರು	2	0	2	0	100
2.	ಪ್ರಥಮ ದರ್ಜೆ ಸಹಾಯಕರು	0	0	1	83	17
3.	ದ್ವಿತೀಯ ದರ್ಜೆ ಸಹಾಯಕರು	13	11	2	84	16
4.	ಬೆರಳಚ್ಚುಗಾರರು	3	2	1	66	34
	ಒಟ್ಟು	**786**	**491**	**295**	**63%**	**37%**

ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಬಡ್ತಿ ಆಧಾರದ ಮೇಲೆ ಹುದ್ದೆಗಳನ್ನು ಬಡ್ತಿ ನೀಡಿ ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಹಾಗೂ 250 ಹೊಸ ಪಶುವೈದ್ಯಾಧಿಕಾರಿಗಳನ್ನು ಸಹ ಸರ್ಕಾರ ತೆಗೆದುಕೊಳ್ಳುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದೇ ಒಂದು ನಿಮಿಷ ನನಗೆ ಸಹಕಾರವನ್ನು ಕೊಡಬೇಕೆಂದು ಹೇಳುತ್ತಾ, ಇವತ್ತು ನಮ್ಮ ರಾಜ್ಯದಲ್ಲಿ ಪಶು ವೈದ್ಯಾಧಿಕಾರಿಗಳ ಹುದ್ದೆಗೆ ಮಂಜೂರಾತಿ ಇರತಕ್ಕಂಥದ್ದು 2022 ಸಂಖ್ಯೆ. ಇದರಲ್ಲಿ ಎಷ್ಟು ಸಂಖ್ಯೆ ಭರ್ತಿಯಾಗಿದೆ ಎಂಬುದನ್ನು ತಾವು ಊಹೆ ಮಾಡಲಿಕ್ಕೂ ಸಾಧ್ಯವಿಲ್ಲ. ಶೇಕಡ 48ರಷ್ಟು ಭರ್ತಿಯಾಗಿದೆ. ಶೇಕಡ 52ರಷ್ಟು ಪಶುವೈದ್ಯಾಧಿಕಾರಿಗಳ, ಡಾಕ್ಟರುಗಳ ಹುದ್ದೆ ಖಾಲಿ ಇದೆ. ಈಗ ಹೊಸದಾಗಿ 214 ಅನ್ನು ಮೇಲ್ದರ್ಜೆಗೇರಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿಗೆ ಖಾಲಿ ಇರತಕ್ಕಂಥ ಹುದ್ದೆ ಹೆಚ್ಚು ಕಡಿಮೆ 1240 ಆಗುತ್ತದೆ. ಬಜೆಟ್‌ನಲ್ಲಿ ಹೊಸ ಕೇಂದ್ರಗಳನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಅಲ್ಲಿಗೆ ಹೆಚ್ಚು ಕಡಿಮೆ ಖಾಲಿ ಹುದ್ದೆಗಳೇ 1300 ರಿಂದ 1350 ಆಸುಪಾಸು ಬರುತ್ತದೆಂದು ನಾನು ಭಾವಿಸಿದ್ದೇನೆ. 1300–1400 ಆಸುಪಾಸು ಇರತಕ್ಕಂಥ ಖಾಲಿ ಹುದ್ದೆಗಳಿಗೆ ಭರ್ತಿ ಮಾಡುತ್ತಿರತಕ್ಕಂಥದ್ದು 250 ಮಾತ್ರ. ಇನ್ನು ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಹೆಚ್ಚಿಗೆ ಒತ್ತು

ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಎಷ್ಟು ಖಾಲಿ ಇದೆಯೆಂದು ಓದಿ ಹೇಳುತ್ತೇನೆ. ದಯವಿಟ್ಟು ಸಹಕರಿಸಬೇಕು. ಬೀದರ್‌ನಲ್ಲಿ ಪಶು ವಿಶ್ವವಿದ್ಯಾಲಯ ಇದೆ. ಗುಲ್ಬರ್ಗಾದಲ್ಲಿ Total sanctioned posts ನಲ್ಲಿ ಪಶುವೈದ್ಯ ಅಧಿಕಾರಿಗಳೇನಿದ್ದಾರೆ, ಕೆಳಗಿನ ಹುದ್ದೆಗಳು ಸೇರಿದಂತೆ ಶೇಕಡ 80 ರಷ್ಟು ಖಾಲಿ ಇವೆ. ಗದಗ್‌ನಲ್ಲಿ ಶೇಕಡ 72ರಷ್ಟು ಖಾಲಿ ಇದೆ. ಬಳ್ಳಾರಿಯಲ್ಲಿ ಶೇಕಡ 73ರಷ್ಟು ಖಾಲಿ ಇದೆ. ಚಾಮರಾಜನಗರದಲ್ಲಿ ಶೇಕಡ 70, ಆದರೆ ಬೆಂಗಳೂರಿನಲ್ಲಿ ಮಾತ್ರ ಶೇಕಡ 7ರಷ್ಟು ಖಾಲಿ ಇದೆ. ಇನ್ನು ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಶೇಕಡ 50, 70 ಈ ಶ್ರೇಣಿಯಲ್ಲಿ ಖಾಲಿ ಇದೆ. ನಾವು ಹೈನುಗಾರಿಕೆಯನ್ನು ಭಾರಿ ಮುಂದಕ್ಕೆ ತೆಗೆದುಕೊಂಡು ಹೋಗಬೇಕೆಂದು ಹೇಳುತ್ತೇವೆ. ಅದಕ್ಕೆ ಮೂಲಭೂತ ಸೌಲಭ್ಯವನ್ನು ಎಲ್ಲಿ ಒದಗಿಸಿದ್ದೇವೆ? ಈ ರೀತಿಯಾದರೆ ....

ಶ್ರೀ ಜೆ.ಸಿ. ಮಾಧುಸ್ವಾಮಿ : ಜನಗಳಲ್ಲ, ದನಗಳೂ ಜಾಸ್ತಿ ಇವೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಅದು ಸರಿ, ದನಗಳ ಸಂಖ್ಯೆಯೂ ಇದೆ. ಓದುವುದಕ್ಕೆ ಹೋದರೆ ಮಾನ್ಯ ಅಧ್ಯಕ್ಷರು ಬೇಗ ಮುಗಿಸಿರಿ ಎಂದು ಹೇಳುತ್ತಾರೆ. ದನಗಳ ಸಂಖ್ಯೆಯನ್ನು ಓದುವುದಕ್ಕೆ ಹೋಗುವುದಿಲ್ಲ. ಆದರೆ, ಇದನ್ನು ನಾನು ಪಕ್ಷಾತೀತವಾಗಿ ಕೇಳಬಯಸತಕ್ಕಂಥದ್ದು. 2001 ಏಪ್ರಿಲ್ 31 ರಂದು ಕ್ಯಾಬಿನೆಟ್‌ನಲ್ಲಿ ಸುಮಾರು 577 ವೈದ್ಯಾಧಿಕಾರಿಗಳನ್ನು ನೇಮಕ ಮಾಡಿ ಎಂದು ತೀರ್ಮಾನವಾಗಿದೆ. ಎಷ್ಟು ದಿನಗಳಾಯಿತು? ಇವತ್ತಿನವರೆಗೆ ಏನೂ ಆಗಿಲ್ಲ. 250 ನೇಮಕಾತಿಗೆ ಆದೇಶ ಮಾಡಿದ್ದೇವೆಂದು ಹೇಳುತ್ತಾರೆ. 1300 ಖಾಲಿ ಇರುವುದಕ್ಕೆ 250. ಡಾ: ಆಚಾರ್ಯರವರು ಹೊಸದಾಗಿ ಸಚಿವರಾಗಿ ಬಂದಿದ್ದಾರೆ. ಅವರ ಮೇಲೆ ನಮಗಂತೂ ವಿಶ್ವಾಸವಿದೆ. ಖಂಡಿತ, ಇದರ ಬಗ್ಗೆ ಏನಾದರೂ ಮಾಡುತ್ತಾರೆ ಎಂದು ಹೇಳಿ ವಿಶ್ವಾಸವಿದೆ. ಆದರೆ, ಪರಿಸ್ಥಿತಿ ಹೀಗೆ ಇದೆ. ಯಾರ ಮೇಲೆ ನಾವು ಈ ಕೋಪವನ್ನು ತೋರಿಸಿಕೊಳ್ಳಬೇಕು? ನನ್ನ ಕ್ಷೇತ್ರದಲ್ಲೇ 4–5 ಹೊಸ ಕೇಂದ್ರಗಳಿಗೆ ಮಂಜೂರಾತಿ ಕೊಡಿ ಎಂದು ಕೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಕೃಷ್ಣ ಬೈರೇಗೌಡರೆ, ನೀವು ಡಿಮಾಂಡ್ಸ್ ಮೇಲೆ ಮಾತನಾಡುತ್ತಿಲ್ಲ ಸ್ವಾಮಿ. ಇದು ಪ್ರಶ್ನೋತ್ತರ. ಇದೇನು ಈ ತರಹವಾದರೆ? ನಾನು ಪದೇ ಪದೇ ಹೇಳುತ್ತೇನೆ, ಪ್ರಶ್ನೋತ್ತರವನ್ನು ಒಂದು ಗಂಟೆಯಲ್ಲಿ 15 ಪ್ರಶ್ನೆಗಳನ್ನು ಮುಕ್ತಾಯ ಮಾಡಬೇಕಾಗುತ್ತದೆ. ಎಲ್ಲರೂ ನೀವು ಈ ರೀತಿ ಕೇಳುತ್ತಾ ಹೋದರೆ ಹೇಗೆ? ಡಿಮಾಂಡ್ಸಾ ಇದು? ನೀವು ಮಾತನಾಡುತ್ತಿರುವುದು ನೋಡಿದರೆ, ಡಿಮಾಂಡ್ಸ್ ಮೇಲೆ ಮಾತನಾಡುವ ಹಾಗೆ ಇದ್ದೀರಿ. ಏನು ಕಿರಿಯ ಸದಸ್ಯರು ನೀವು? ಕೇಳಿ ದಯಮಾಡಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಕೊನೆಯ ಸೆಂಟೆನ್ಸ್‌ನಲ್ಲಿದ್ದೆ ಅಷ್ಟರಲ್ಲಿ ತಾವು ಹೀಗೆ ಹೇಳಿದಿರಿ. ಕೊನೆಗೆ, ನಾನು ಕೇಳತಕ್ಕಂಥದ್ದು ಏನೆಂದರೆ, ಇವತ್ತು ಪಶುವೈದ್ಯ ಸೇವೆ ಏನಿದೆ, ಇದು ಸರ್ಕಾರದ ಜವಾಬ್ದಾರಿಯೇ? ಅಲ್ಲವೆ? ಅಷ್ಟು ಹೇಳಿಬಿಡಿ. ಸರ್ಕಾರದ ಜವಾಬ್ದಾರಿ ಅಲ್ಲವೆಂದು ತಾವು ಒಪ್ಪಿಕೊಳ್ಳುವುದಾದರೆ, ಬಿಟ್ಟುಬಿಡಿ. ನಾನೇನೂ ಇಲ್ಲವೆಂದು ಹೇಳುವುದಿಲ್ಲ. ಸರ್ಕಾರದ ಜವಾಬ್ದಾರಿ ಹೌದು ಎಂದು ಹೇಳಿದರೆ, ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ವೀರ್ಯಾಣು ಬಗ್ಗೆಯೂ ಸಹ ನಾನು ಕೇಳಿದ್ದೇನೆ. ಇವತ್ತು ಸೆಮನ್ ಇಲ್ಲ. ಸೆಮನ್ ಇಲ್ಲದೇ ಇದ್ದರೆ, ನಾವು ಪಶುಗಳಿಗೆ

ಸೆಮನ್ ಕೊಡುವುದು, ಅದು ಉತ್ಪತ್ತಿ ಆಗುವುದು ಹೇಗೆ? ಈ ತರಹ ಪರಿಸ್ಥಿತಿ ಇದೆ. ಮಂಡ್ಯದಲ್ಲಿ ಶೇಕಡ 52 ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಎ.ಟಿ. ರಾಮಸ್ವಾಮಿ : ಅಧ್ಯಕ್ಷರೆ, ಒಂದು ನಿಮಿಷ ......

ಅಧ್ಯಕ್ಷರು : ನೀವು ಉಪ ಪ್ರಶ್ನೆ ಕೇಳುವಾಗ ಕೇಳಿ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟ ಹಾಗೆಯೇ, ಉತ್ತರವನ್ನು ಒಂದೇ ಸಾರಿ ಹೇಳಲಿ. ಈಗ ನಾವು ವಿಜ್ಞಾನದಲ್ಲಿ ಬಹಳವಾಗಿ ಪ್ರಗತಿಯನ್ನು ಹೊಂದಿದ್ದರೂ ಕೂಡ ಇನ್ನೂ ನಾವು ನಮ್ಮ ರಾಷ್ಟ್ರದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಉತ್ತಮವಾದ ಹೋರಿ ಕರುಗಳನ್ನು ಉತ್ಪಾದನೆ ಮಾಡಲಿಕ್ಕೆ ಹಿಂದೆ ಬಿದ್ದಿದ್ದೇವೆಂದೂ ಸಾಕಷ್ಟು ಸಂಖ್ಯೆಯಲ್ಲಿ ಒಳ್ಳೆಯ ಪಶು ವೀರ್ಯ ಉತ್ಪಾದನೆ ಆಗುತ್ತಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಆ ಬಗ್ಗೆ ಪಶು ವೈದ್ಯ ವಿಶ್ವವಿದ್ಯಾನಿಲಯ ಇದೆ, ಪಶು ಕಾಲೇಜ್ ಇದೆ, ಇಲಾಖೆ ಇದೆ. ಇಷ್ಟು ವರ್ಷ ಇವರೇನು ಮಾಡುತ್ತಿದ್ದಾರೆ? ನೀವೇನು ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ದಯಮಾಡಿ ತಿಳಿಸಿ.

ಅಧ್ಯಕ್ಷರು : ಮಾನ್ಯ ಕುಮಾರ್ ಬಂಗಾರಪ್ಪನವರು ಏನೋ ಕೇಳಬೇಕೆಂದು ಅನ್ನುತ್ತಿದ್ದರು. ಕೇಳುತ್ತೀರಾ? ಕೇಳಿಬಿಡಿ. ಆಮೇಲೆ ಅವರು ಸಮಗ್ರವಾಗಿ ಉತ್ತರ ಹೇಳಲಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈಗ ನಾವು ವಿವಿಸಿಯನ್ನು ಮಾಡಿಕೊಂಡಿದ್ದೇವೆ. ಏನು ಈ ವಿವಿಸಿ ಕಾನ್ಸೆಪ್ಟ್ ಅನ್ನು ನಾವು ಬಿಡುವುದು ತುಂಬಾ ಒಳ್ಳೆಯದು. ಏಕೆಂದರೆ ನಾವು ಡೈರೆಕ್ಟ್ ಆಗಿ ವಿ.ಡಿ. ಯಿಂದ ಡೈರೆಕ್ಟ್ ಆಗಿ ಪ್ರಮೋಷನ್ ಕೊಟ್ಟುಬಿಟ್ಟು ನಾವು ವೆಟರ್ನರಿ ಹಾಸ್ಪಿಟಲ್‌ಗೆ ಹೋದರೆ, ಇವೆಲ್ಲಾ ಪ್ರಾಬ್ಲಮ್ಸ್ ಸಾಲ್ವ್ ಆಗುತ್ತವೆ. ಇಲ್ಲವೆಂದರೆ ಏನಾಗುತ್ತದೆಂದರೆ, ಪ್ರತಿಸಾರಿಯೂ ನಾವು ಇಲ್ಲಿಂದ ಒಂದೊಂದು ಮಂಜೂರಾತಿ ಮಾಡಿಕೊಡುತ್ತೇವೆ. ನಾವು ವಿವಿಸಿಯನ್ನು ಅಪ್‌ಗ್ರೇಡ್ ಮಾಡುತ್ತಲೇ ಹೋಗುತ್ತೇವೆ. ಆದರೆ, ಇದು ಬೇಸಿಕ್ ಆಗಿ ನಮಗೆ ಪ್ರಾಬ್ಲಮ್ಸ್ ಬರುತ್ತದೆಂದರೆ, ಅಲ್ಲಿ ಯಾವುದೇ ತರಹದ ಹುದ್ದೆಗಳೂ ಕೂಡ ಇರುವುದಿಲ್ಲ. ಮಾನ್ಯ ಕೃಷ್ಣ ಬೈರೇಗೌಡರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. 577 ಹುದ್ದೆಗಳಿಗೆ ಕ್ಯಾಬಿನೆಟ್ ಏನು ಮಂಜೂರಾತಿ ಕೊಟ್ಟಿತ್ತೋ, ಇಲಾಖೆಯವರು ಅದರ ಮೇಲೆ, ಕ್ಯಾಬಿನೆಟ್ ಡಿಸಿಷನ್ ಮೇಲೆ, they cleared only 250 and what powers did they have to go against the Cabinet decision? ಯಾವುದೇ ಕಾರಣಕ್ಕೂ ಇಲಾಖೆಯವರು ಈ ಕ್ಯಾಬಿನೆಟ್ ಡಿಸಿಷನ್ ಮೇಲೆ ಕ್ಲಿಯರ್ ಮಾಡಿರತಕ್ಕಂಥ 577 ರಲ್ಲಿ ಇವರು ಅರ್ಧ ಕಟ್ ಮಾಡಿಕೊಂಡು ಮಾಡಿರತಕ್ಕಂಥದ್ದು ಸೂಕ್ತವಾಗಿರತಕ್ಕಂಥದ್ದಲ್ಲ.

ಅಧ್ಯಕ್ಷರು : ಎಷ್ಟು ಹೊತ್ತು ನೀವು ಪ್ರಶ್ನೆ ಕೇಳುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ : ನೀವು 377 ಹುದ್ದೆಗಳನ್ನು ಹೊಸದಾಗಿ ತೆಗೆದುಕೊಳ್ಳಬೇಕೆಂದಿದ್ದೀರಿ, ಇದನ್ನೂ ಕೂಡ ಅದರಲ್ಲಿ ಇನ್‌ಕ್ಲೂಡ್ ಮಾಡಬೇಕಾಗುತ್ತದೆ. ಆಮೇಲೆ, ಪ್ರತಿ ಸಾರಿಯೂ ಕೂಡ ವರ್ಷಕ್ಕೆ 80 ರಿಂದ 100 ಜನ ನಮ್ಮ ವೆಟರ್ನರಿ ಡಾಕ್ಟರ್ಸ್ ಬರುತ್ತಾರೆ, ಅವರನ್ನು ನಾವು ರೆಗ್ಯುಲರ್ ಆಗಿ ಮಾಡಿಕೊಂಡರೆ ಎಲ್ಲಾ ಪ್ರಾಬ್ಲಮ್ಸ್ ಕೂಡ ಸಾಲ್ವ್ ಆಗುತ್ತವೆ. ಹಾಗಾಗಿ, ಇದರಲ್ಲಿ ನಮಗೆ ಯಾವುದೇ ಫೈನಾನ್ಷಿಯಲ್ ಬರ್ಡನ್ಸ್ ಕೂಡ ಇಲ್ಲ. ವಿಡಿಯಿಂದ

ನಾವು ವೆಟರ್ನರಿ ಹಾಸ್ಪಿಟಲ್ ಮಾಡುವುದಕ್ಕೆ ಕೂಡ ಬರ್ಡನ್ಸ್ ಇರುವುದಿಲ್ಲ. ಮ್ಯಾಗ್ಜಿಮಮ್ ಅಂದರೆ 25 ಲ್ಯಾಕ್ಸ್ ಟು 30 ಲ್ಯಾಕ್ಸ್ ಮಾತ್ರ ಬರುತ್ತದೆ. ಆ ನಿಟ್ಟಿನಲ್ಲಿ ತಾವು ಸ್ವಲ್ಪ ಯೋಚನೆ ಮಾಡಬೇಕು. ಆಮೇಲೆ, ಈಗೇನು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದಾರೆ. ಅದರ ಮೇಲೆ ತಾವು ಒತ್ತಾಯ ಮಾಡಿ ಕ್ಲಿಯರ್ ಮಾಡತಕ್ಕಂಥದ್ದು ಮಾಡಬೇಕು.

ಅಧ್ಯಕ್ಷರು : ಆಯಿತು, ಉತ್ತರ ಹೇಳಿ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಪಶು ವೈದ್ಯಾಧಿಕಾರಿಗಳ ಖಾಲಿ ಇರತಕ್ಕಂಥ ಹುದ್ದೆಯನ್ನು ಭರ್ತಿ ಮಾಡತಕ್ಕಂಥದ್ದು ತುರ್ತಾಗಿ ಆಗಬೇಕು. ಈ ಬಗ್ಗೆ ನನ್ನ ಸಲಹೆ ಏನೆಂದರೆ, ಪಶು ವೈದ್ಯಾಧಿಕಾರಿಗಳಾಗಿ ನೇಮಕ ಮಾಡಿರತಕ್ಕಂಥವರು ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಮೊದಲು ವಾಪಸ್ಸು ತಂದು, ಇಲ್ಲಿ ಕೆಲಸ ಮಾಡಲಿಕ್ಕೆ ಹೇಳಿ. ಪಶು ವೈದ್ಯಾಧಿಕಾರಿಗಳಾಗಿ ಸೇರಿಕೊಂಡು ಬೇರೆ ಇಲಾಖೆಗಳಿಗೆ ಹೋಗಿ ಯಾವ್ಯಾವುದೋ ಕೆಲಸ ಮಾಡುತ್ತಾರೆ. ಡೆಪ್ಯುಟೇಷನ್ ಮೇಲೆ ಹೋಗುತ್ತಾರೆ. ಮೊದಲು ಅವರನ್ನು ವಾಪಸ್ಸು ಕರೆಸಿ ಆ ಇಲಾಖೆಯಲ್ಲಿ ಆ ಕೆಲಸ ಮಾಡಲಿಕ್ಕೆ ವ್ಯವಸ್ಥೆ ಮಾಡುವ ಒಂದು ಸ್ಪಷ್ಟವಾದ ತೀರ್ಮಾನವನ್ನು ಸನ್ಮಾನ್ಯ ಸಚಿವರು ತಿಳಿಸಬೇಕೆಂದು ಬಯಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸಾರ್, ನಾನೀಗ ಮಾನ್ಯ ಮಂತ್ರಿಗಳಿಗೆ ಇಷ್ಟೇ ಕೇಳುತ್ತೇನೆ. ಎಷ್ಟು ಪೋಸ್ಟು? ಏನು? ಯಾವಾಗ ಫಿಲ್-ಅಫ್ ಮಾಡುತ್ತೀರಾ, ಆ ಡೀಟೇಲ್ಸ್‌ಗೆ ನಾನು ಹೋಗುವುದಿಲ್ಲ. ನಮ್ಮಲ್ಲಿ ಸ್ವಲ್ಪ ಸುಮಾರಾಗಿರತಕ್ಕಂಥ ಒಂದು ಹಸುವನ್ನು ನಾವು ಹೈನುಗಾರಿಕೆ ಮಾಡುವವರು ಕೊಳ್ಳಬೇಕಾಗಿದ್ದರೆ 25 ಸಾವಿರ ರೂ. ಗೆ ಕಡಿಮೆ ನಾವು ಕೊಟ್ಟರೆ ಬರುವುದಿಲ್ಲ. ಹಸು ಗರ್ಭಧಾರಣೆ ಮಾಡಬೇಕಾಗಿದ್ದರೆ, ಎ.ಐ. (ಆರ್ಟಿಫಿಷಿಯಲ್ ಇನ್ಸ್‌ಸೆಮಿನೇಷನ್) (ಕೃತಕ ಗರ್ಭಧಾರಣೆ) ಮಾಡುತ್ತೇವೆ. ಈ ಕೆಲಸವನ್ನು ಮಿಲ್ಕ್ ಸೊಸೈಟಿಯಲ್ಲಿ ನಮ್ಮ ಟೆಸ್ಟರ್ಸ್ ಇರುತ್ತಾರೆ. ಅವರಿಗೊಂದು ಟ್ರೇನಿಂಗ್ ಮಾಡಿ ಕಳುಹಿಸುತ್ತಾರೆ. ಅವರಿಗೆ, most unscientific way ನಲ್ಲಿ ಮಾಡುತ್ತಾರೆ. ಒಂದು ಹಸು ರಿಪೀಟ್ ಆದರೆ, ಅದು ಕನ್‌ಸೀವ್ ಆಗದೇ ಹೋದರೆ, ಅದರ ಪ್ರೆಗ್ನೆನ್ಸಿ ಕನ್‌ಫರ್ಮ್ ಆಗದೇ ಹೋದರೆ ಅದನ್ನು ಸಾಕಿರತಕ್ಕಂಥ ರೈತ ಮುಳುಗಿ ಹೋಗಿಬಿಡುತ್ತಾನೆ. ಎಷ್ಟು ಮಿಲ್ಕ್ ಸೊಸೈಟೀಸ್ ಇವೆ; ರೂಟ್ಸ್ ಎಲ್ಲಾ ಕಡೆಗೆ ಎಸ್ಟಾಬ್ಲಿಷ್ ಮಾಡಿದ್ದೇವೆ. ಎಷ್ಟೆಷ್ಟು ಮಿಲ್ಕ್ ಸೊಸೈಟಿಗೆ ಆವರೇಜ್ ಒಬ್ಬ ನಿಮ್ಮ ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್ ಇದ್ದಾರೆಂದು ತಾವು ವೆರಿಫೈ ಮಾಡಿ ನೋಡಿ. ನನ್ನ ಒಂದು ತಾಲ್ಲೂಕು ಒಂದು ಮತ ಕ್ಷೇತ್ರ. ನಾವು ಒಂದು ದಿವಸಕ್ಕೆ ಆವರೇಜ್ ಒಂದು ಲಕ್ಷ ಲೀಟರ್ ಹಾಲನ್ನು ಉತ್ಪಾದನೆ ಮಾಡುತ್ತೇವೆ. ಒಂದು ಲಕ್ಷ ಲೀಟರ್ ಹಾಲು ಎಂದರೆ, ಎಷ್ಟು ಹಣ ಎಂದು ಲೆಕ್ಕ ಹಾಕಿ. ಎಷ್ಟು ಕುಟುಂಬಗಳು ಅದರ ಮೇಲೆ ಅವಲಂಬಿಸಿದೆ ಎಂಬುದನ್ನು ನೋಡಿ. ಅದರ ಪ್ರೊಪೋರ್ಶನ್ ತೆಗೆದುಕೊಂಡಾಗ, ನಮ್ಮ ವೆಟರ್ನರಿ ಇನ್‌ಫ್ರಾಸ್ಟ್ರಕ್ಚರ್ ಹೇಗಿದೆ ಎಂಬುದನ್ನು ನೋಡಿ. They don't agree at all. ಒಂದು ಸೈಂಟಿಫಿಕ್ ಅಪ್ರೋಚ್‌ಬೇಕು. ಮಿಲ್ಕ್ ಪ್ರೊಡಕ್ಷನ್ ಎಷ್ಟಿದೆ? ಮಿಲ್ಕ್ ಸೊಸೈಟೀಸ್ ಎಷ್ಟಿವೆ? ಮಿಲ್ಕ್ ರೂಟ್ ಎಷ್ಟಿದೆ? ಎಷ್ಟು ಜನ ಸ್ಟಾಫ್ ಇದ್ದಾರೆ? ಕಡೇ ಪಕ್ಷ, ಅವನೂ ಮಾಡುವುದು ಬೇಡ, ಮಿನಿಮಂ ನಮಗೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮಾಡತಕ್ಕಂಥದ್ದು, ಸಣ್ಣಪುಟ್ಟ ಕಾಯಿಲೆಗೆ ಕೂಡ ಔಷಧಿ ಕೊಡುವುದು ಮಾಡಿದರೆ ಸಾಕು. ಬಹಳ ಜನ ನಾವೆಲ್ಲಾ ಲಾರ್ಜ್ ಸ್ಕೇಲ್‌ನಲ್ಲಿ ಮಾಡುತ್ತಿದ್ದರು.

we have given up ಒಂದು ದಿವಸಕ್ಕೆ 100 ರಿಂದ 150 ಲೀಟರ್ ಮಿಲ್ಕ್ ಕೊಡುತ್ತಿದ್ದ ನಮ್ಮ ಹಸುಗಳನ್ನು ಕಂಪ್ಲೀಟ್ ಇವತ್ತು ಮಾರಿಬಿಟ್ಟು, ಎಳೆ ಕರುಗಳನ್ನು ತೆಗೆದುಕೊಂಡು ಬಂದು ಸಾಕಿ, ನಾವು ಮಾರುತ್ತಿದ್ದೇವೆ. ಇಂಜೆಕ್ಷನ್ ಕೊಡುವುದು, ಪ್ರೆಗ್ನೆನ್ಸಿ ಕನ್‌ಫರ್ಮ್ ಆದ ತಕ್ಷಣ semens - ಅನ್ನು ಮಾರಾಟ ಮಾಡುವ ಕೆಲಸಕ್ಕೆ ನಾವು ಬಂದಿದ್ದೇವೆ. We have stopped producing milk. It is very discouraging.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರು, ಮಾನ್ಯ ಕೃಷ್ಣ ಬೈರೇಗೌಡರು ಕೇಳಿದ ಪ್ರಶ್ನೆಗೆ ಸುಮಾರು 5 ಮಂದಿ ಸನ್ಮಾನ್ಯ ಸದಸ್ಯರು ಉಪ ಪ್ರಶ್ನೆಗಳ ರೂಪದಲ್ಲಿ ನನಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಒಪ್ಪುತ್ತೇನೆ. ಕರ್ನಾಟಕದಲ್ಲಿ ಆಗಿರತಕ್ಕಂಥ ಶ್ವೇತ ಕ್ರಾಂತಿ ಇದಕ್ಕೆ ಸರಿದೂಗುವಂಥ ಮಟ್ಟದಲ್ಲಿ ನಮ್ಮ ಪಶು ಸಂಗೋಪನ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳಲಿಕ್ಕಾಗಲಿಲ್ಲ. ಕಾರಣಗಳ ಬಗ್ಗೆ ನಾನು ಹೋಗುವುದಿಲ್ಲ. ಇವತ್ತು ಸುಮಾರು 16,646 ಸಿಬ್ಬಂದಿ ಇರಬೇಕಾದಲ್ಲಿ, 12,717 ಜನ ಇದ್ದಾರೆ. ಅದರಲ್ಲಿಯೂ ಬಹಳ ಆತಂಕದ ವಿಷಯವೆಂದರೆ, ತಾವೆಲ್ಲರೂ ಹೇಳಿದ ಹಾಗೆ, ಪಶು ವೈದ್ಯಾಧಿಕಾರಿಗಳು ನೇರವಾಗಿ ಪಶುಗಳ ಯೋಗಕ್ಷೇಮವನ್ನು ನೋಡುವವರು, ಕಾಯಿಲೆಗೆ ಅಟೆಂಡ್ ಆಗುವವರು, 2,022 ಜನ ಇರಬೇಕಾದಲ್ಲಿ, ಕೇವಲ ಸಾವಿರ ಜನ ಇದ್ದಾರೆ. ಅದರಲ್ಲಿಯೂ ಮಾನ್ಯ ರಾಜಣ್ಣನವರು ಹೇಳಿದ ಹಾಗೆ, ಡೆಪ್ಯುಟೇಷನ್ ಮೇಲೆ, ಇ.ಓ. ಅಥವಾ ಇತ್ಯಾದಿಗಳಿಗೆ ಹೋಗಿದ್ದರೆ ಮತ್ತೂ ಅದು ಕಡಿಮೆಯಾಗಿರಬಹುದು. ಆದರೆ, ಪ್ರತ್ಯಕ್ಷದಲ್ಲಿ 1,022 ಖಾಲಿ ಇವೆ. ಇವತ್ತು ಪ್ರಮುಖವಾಗಿ 2 ಪ್ರಶ್ನೆಗಳನ್ನು ಈ ಸದನದಲ್ಲಿ ಈ ಪ್ರಶ್ನೆ ಬಗ್ಗೆ ತಾವು ಎತ್ತಿದ್ದೀರಿ. ಒಂದನೆಯದಾಗಿ, ಸಿಬ್ಬಂದಿ ಕೊರತೆ. ಎರಡನೆಯದು, ಈ ತಳಿ ಗರ್ಭಧಾರಣೆಗೋಸ್ಕರ, ಈ ಪಶು ವೀರ್ಯಾಣು ಕೊರತೆ ಬಗ್ಗೆ ಕೇಳಿದ್ದೀರಿ. ನಾನು ಒಪ್ಪುತ್ತೇನೆ. ಅದೇ ರೀತಿ, ಹಿರಿಯ ಪಶು ವೈದ್ಯಕೀಯ ಪರೀಕ್ಷಕರೂ ಸಹ ಸುಮಾರು, 2,010 ಜನ ಇರಬೇಕಾದಲ್ಲಿ 1546 ಜನ ಮಾತ್ರ ಇದ್ದಾರೆ. 446 ಜನ ಇಲ್ಲ. ಈ ಬಗ್ಗೆ ನಾನು ಈಗಾಗಲೇ ತಮಗೆಲ್ಲರಿಗೂ ಒಂದು ಭರವಸೆ ಕೊಡಲಿಕ್ಕೆ ಬಯಸುತ್ತೇನೆ. ಒಟ್ಟು 3934 ಹುದ್ದೆಗಳಲ್ಲೂ ಸುಮಾರು 2132 ಖಾಲಿ ಇರತಕ್ಕಂಥ ಸಿಬ್ಬಂದಿ ಅದರಲ್ಲಿ 1385 ಜನ 'ಡಿ' ಗ್ರೂಪ್‌ನವರು. ನಮಗೆ ಕೆಲವು ನಿರ್ಬಂಧಗಳಿವೆ. ಬೇರೆ ಇಲಾಖೆಯಿಂದ ನೀವು ತೆಗೆದುಕೊಳ್ಳಿ ಎಂಬುದೊಂದು, ಮತ್ತೊಂದು ಅನುಕಂಪದ ಆಧಾರದ ಮೇಲೆ ಬರತಕ್ಕಂಥವರಿಗೆ ಸ್ಥಾನ ಕೊಡಿ ಎಂದು ಮಿತಿ ಹಾಕಿದ್ದಾರೆ. ಉಳಿದಂತೆ, 2132 ಜನರನ್ನು ನೇಮಕಾತಿ ಮತ್ತು ಬಡ್ತಿ ಮುಖಾಂತರ ನಾವು ಸೇರಿಸಿಕೊಳ್ಳುವಂಥ ಒಂದು ಪ್ರಕ್ರಿಯೆಯನ್ನು ಚಾಲೂ ಮಾಡಿದ್ದೇವೆ. ಒಂದು ಪ್ರಮುಖ ಪ್ರಶ್ನೆಯನ್ನು ಕೇಳಿದ್ದಾರೆ. 577 ಜನ ನೇಮಕವಾಗಬೇಕಾಗಿದ್ದಾಗ ಕ್ಯಾಬಿನೆಟ್ ಮಂಜೂರಾತಿಯಾದಾಗ, 250 ಜನರನ್ನು ಮಾತ್ರ ಮೊನ್ನೆ 10ನೇ ತಾರೀಖು ಮಾರ್ಚ್‌ಗೆ ನೇಮಕ ಮಾಡಿದಂಥ ಒಂದು ಪಟ್ಟಿ ಏನು ತಯಾರು ಮಾಡಿದ್ದೀರಿ, ಏಕೆ ಇದು ಎಂದು ಕೇಳಿದ್ದಾರೆ. ಆ ಕಾಲದಲ್ಲಿ 2001 ರಲ್ಲಿ 577 ಹುದ್ದೆ ಖಾಲಿ ಇತ್ತು. 577 ಪಶು ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದ್ದರೆ, ನಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು, ಆ ಕಾಲದ ಪರಿಸ್ಥಿತಿ ಏನೋ ಇರಬಹುದು ನನಗೆ ಗೊತ್ತಿಲ್ಲ ಈಗ ಆ ಬಗ್ಗೆ ವಿಶ್ಲೇಷಣೆ ಮಾಡುವುದು ಉಚಿತವಲ್ಲ. ಅವರು 250ಕ್ಕೆ ಮಾತ್ರ ಅನುಮತಿ ಕೊಟ್ಟಿರುವುದು. ತಮಗೆ ಗೊತ್ತಿದೆ ಅವರು ತಮ್ಮ ಪರ್ಸ್ ಬಿಚ್ಚಿದರೆ ಮಾತ್ರ ನಮ್ಮ ಮುಂದಿನ ಕೆಲಸ. ಅವರು 250ಕ್ಕೆ ಮಾತ್ರ ಅನುಮತಿ ಕೊಟ್ಟರು.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಕ್ಯಾಬಿನೆಟ್ ತೀರ್ಮಾನವನ್ನು ಓವರ್ ರೂಲ್ ಮಾಡಿದರಾ?

ಡಾ: ವಿ.ಎಸ್. ಆಚಾರ್ಯ : ಸ್ವಲ್ಪ ತಡೀರಿ. ಆ ಕಾಲದ್ದು ನಾನು ಈಗ ಹೇಗೆ ಡಿಸ್‌ಕಸ್ ಮಾಡಲಿ? 2001ರಲ್ಲಿ, ಕೊನೆಗೆ ನಮಗೂ ಅವರಿಗೂ ಹೊಯ್ದಾಟ ಆಗಿದೆ, ಇಲಾಖೆಯಿಂದ 277ಕ್ಕೆ ಅನುಮತಿ ಕೊಡಿ ಎಂದು ಪುನಃ ಕಡತ ಮಂಡಿಸಿದ್ದಾರೆ. ಪುನಃ ವಾಪಸ್ ಬಂದಿದೆ. ಕೊನೆಗೆ 2003 ರಲ್ಲಿ ನೋಟಿಫಿಕೇಷನ್ ಹೊರಡಿಸಿದೆ. 250 ಪಶು ವೈದ್ಯಾಧಿಕಾರಿಗಳ ನೇಮಕಕ್ಕೆ, 2003 ರಲ್ಲಿ ನೋಟಿಫಿಕೇಷನ್ ಹೊರಟರೆ, ಸುಮಾರು 394 ಜನ ಅರ್ಜಿ ಹಾಕಿದ್ದರು. ಆ 394 ರಲ್ಲಿ ನಾವು ನ್ಯಾಯವಾದಿಗಳು ನಮ್ಮ ಅಡ್ವೊಕೇಟ್‌ರವರ ಅಭಿಪ್ರಾಯ ತಿಳಿದುಕೊಂಡು 250 ಜನರನ್ನು ಈಗ ಮೊನ್ನೆ ನೇಮಕ ಮಾಡಿದ್ದೇವೆ. ಉಳಿದ 327 ಹುದ್ದೆಗಳ ಬಗ್ಗೆ ಅದೇ ದಿವಸ ನೇಮಕಾತಿ ಮಾಡಲಿಕ್ಕೆ ನೋಟಿಫಿಕೇಷನ್ ಹೊರಡಿಸಿದ್ದೇವೆ. ನಮ್ಮ ಕಳಕಳಿಯನ್ನು ತಾವು ಅರ್ಥಮಾಡಿಕೊಳ್ಳಬೇಕು. ಆಮೇಲೆ ಉಳಿದಂಥ 445 ಮಂದಿ, ಅಂದರೆ ಇವತ್ತಿನ 1022 ಪಶು ವೈದ್ಯಾಧಿಕಾರಿಗಳ ಹುದ್ದೆ ಕೊರತೆಗೋಸ್ಕರ ನಾವು ಮತ್ತೆ ಈಗ ಮುಂದೆ ಮಾಡುತ್ತಿದ್ದೇವೆ. ಪಶು ವೀಯರ್ಾಣು ಕೊರತೆ ಇರುವಂಥದ್ದು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, as it is ಈ ಮ್ಯಾಟರ್ ಬಗ್ಗೆ ಹೈಕೋರ್ಟಿನಲ್ಲಿ ಈಗ ಅಪೀಲ್ ಹೋಗಿದ್ದಾರೆ. ಹೀಗಿರುವಾಗ ನೀವು ಡಿಸಿಷನ್ ಯಾವುದರ ಮೇಲೆ ತೆಗೆದುಕೊಳ್ಳುತ್ತೀರಾ? ಹೈಕೋರ್ಟಿಗೆ ನೀವು ಅಫಿಡ್‌ವಿಟ್ ಹಾಕಿಬಿಟ್ಟು 577 ಏನು ಇತ್ತು ಅದನ್ನು ಮಾಡುತ್ತೀರಾ? ಅಥವಾ ಕೋರ್ಟಿನ ಮ್ಯಾಟರ್ ಬಿಟ್ಟು ನೀವು ಡಿಸಿಷನ್ ತೆಗೆದುಕೊಳ್ಳುತ್ತೀರಾ?

ಡಾ: ವಿ.ಎಸ್. ಆಚಾರ್ಯ : ಈ 250 ಕ್ಕೆ ಏನೂ ಆಪತ್ತು ಇಲ್ಲ. ನಮ್ಮ ಇಲಾಖೆಯವರು ಅದರ ಬಗ್ಗೆ ಏನೂ ಅಡೆತಡೆ ಇದೆ ಅದರ ನಿವಾರಣೆಗೋಸ್ಕರ ಪ್ರಯತ್ನ ಮಾಡುತ್ತಾರೆ. ವಿವರವಾದಂಥ ಮಾಹಿತಿ ಕೊಡಲಿಕ್ಕೆ ಬರುವುದಿಲ್ಲ. ಸುಪ್ರೀಂ ಕೋರ್ಟಿನ ಕೆಲವು ನಿರ್ದೇಶನದ ಪ್ರಕಾರ 250 ಜನರನ್ನು ಮಾತ್ರ ನಾವು ಮೊನ್ನೆ ನೇಮಕ ಮಾಡಿಕೊಂಡಿದ್ದೇವೆ. ಪಶು ವೀಯರ್ಾಣು ಕೊರತೆಯ ಬಗ್ಗೆ.

Sri S. KUMAR BANGARAPPA : You are going to take them for appointment or you are going to wait for High Court Judgement. You are telling that you will take them. But, how will you take them when the case is pending in the Court?

Dr. V.S. ACHARYA : We are fully commited to recruit them. We will see how the obstacle can be removed.

Sri S. KUMAR BANGARAPPA : The obstacle is, the decision of the High Court has to be upheld ಹೈಕೋರ್ಟಿನಲ್ಲಿ ಇವರು ಅಪೀಲ್ ಹೋಗಿರಬೇಕಾದರೆ, Can you make a decision?

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಇಲಾಖೆ ಮತ್ತು ನಾವು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲ್‌ರವರು......

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಕೋರ್ಟಿನಲ್ಲಿ ಪೆಂಡಿಂಗ್ ಇರಬೇಕಾದರೆ ಅಪಾಯಿಂಟ್ ಆರ್ಡರ್ ಇಶ್ಯೂ ಮಾಡುತ್ತೇವೆಂದು ಹೇಳಿದರು. Half baked ಆಗುತ್ತದೆ ಎಲ್ಲಾ......

ಅಧ್ಯಕ್ಷರು : ಅದು ಆಯಿತು. ಇಲ್ಲಿಗೆ ಮುಕ್ತಾಯ ಮಾಡೋಣ. ನಾನು ಈಗ ಮಾನ್ಯ ಶಿವಾನಂದ ಪಾಟೀಲ್‌ರವರನ್ನು ಕರೆದಿದ್ದೇನೆ. ದಯಮಾಡಿ ನೀವು ಸಚಿವರ ಹತ್ತಿರ ಹೋಗಿ, ಚರ್ಚೆ ಮಾಡಿ.

ಶ್ರೀ ಎಸ್. ರಾಜೇಂದ್ರನ್ : ನನ್ನದು ಪ್ರಶ್ನೆ ಇದೆ ಸಾರ್.

ಅಧ್ಯಕ್ಷರು : ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ, ನಿಮ್ಮ ಪ್ರಶ್ನೆ ಶಿಕ್ಷಣ ಇಲಾಖೆಗೆ ವರ್ಗಾವಣೆ ಆಗಿದೆ ಎಂದು ಆ ಇಲಾಖೆಯದ್ದು ಬಂದಾಗ ನಿಮಗೆ ಅವಕಾಶ ಕೊಡುತ್ತೇನೆ.

ವಿಷಯ: ಬಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವುದು.

39 (204) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಆ) ಪ್ರಸ್ತಾವಿತ ಪಟ್ಟಿಯಲ್ಲಿ ಯಾವ ಯಾವ ಸ್ಥಳಗಳನ್ನು ಸೂಚಿಸಲಾಗಿದೆ;

ಇ) ಪ್ರಸ್ತಾವನೆಗೆ ಅನುಗುಣವಾಗಿ ಸರ್ಕಾರ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಯಾವ ಕ್ರಮ ಕೈಗೊಂಡಿದೆ;

ಈ) ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಈ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ)

ತಾಲ್ಲೂಕುಗಳು	ಹಾಲಿ ಇರುವ ಪ್ರಾ.ಆ. ಕೇಂದ್ರಗಳ ಸಂಖ್ಯೆ	ಪ್ರಸ್ತಾವಿತ ಸ್ಥಳಗಳು
1	2	3
ಬಸವನಬಾಗೇವಾಡಿ	14	ಮುತ್ತಗಿ
ಇಂಡಿ	13	ಶಿರಾಡೋಣ, ಗೋಳಸಾರ, ಬಂದನಾಳ, ಸಾರೊಟಗಿ
ಸಿಂಧಗಿ	11	ಹರನಾಳು, ಹುನಸ್ಯಾಳ, ಮುಳಸಾವಳಗಿ, ದೇವಣಗಾಂ,

ತಾಲ್ಲೂಕುಗಳು	ಹಾಲಿ ಇರುವ ಪ್ರಾ.ಆ. ಕೇಂದ್ರ ಸಂಖ್ಯೆ	ಪ್ರಸ್ತಾವಿತ ಸ್ಥಳಗಳು
		ಅಟ್ಟರಗಿ, ಯರಗಲ್-ಬಿ.ಕೆ, ಹಿಟ್ನಳ್ಳಿ-ಎಲ್.ಟಿ.
ಬಿಜಾಪುರ	11	ಅರಕೇರಿ, ಬಿಜ್ಜರಗಿ, ದೇವರಗೊಣ್ಣೂರು, ಮಕಣಾಪುರ, ಜಂಬಗಿ, ತಿಡಗುಂಡಿ, ಜೈನಾಪುರ
ಮುದ್ದೇಬಿಹಾಳ್	11	ಇಲ್ಲ
ಒಟ್ಟು	**60**	

ಇ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಲಾಗುತ್ತಿದೆ.

ಈ) ಆದಷ್ಟು ಬೇಗ ಪರಿಶೀಲಿಸಿ ಮಾರ್ಗಸೂಚಿ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್. ರಾಜೇಂದ್ರನ್ : ಹಾಗಾದರೆ 28ನೇ ತಾರೀಖು ಅದನ್ನು ಸೇರಿಸಿ ನನಗೆ ಉತ್ತರ ಕೊಡಿಸಿ.

ಅಧ್ಯಕ್ಷರು : ಆಯಿತು. ಮಾನ್ಯ ಶಿವಾನಂದ ಪಾಟೀಲ್.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪ್ರಸ್ತಾವನೆಗೆ ಅನುಗುಣವಾಗಿ ಹೊಸ ಮಾರ್ಗಸೂಚಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳುತ್ತಾರೆ. ಈ ಹೊಸ ಮಾರ್ಗಸೂಚಿ ಯಾವಾಗ ಜಾರಿಗೆ ಬರುತ್ತದೆಂದು ನಾನು ತಮ್ಮ ಮುಖಾಂತರ ಅವರನ್ನು ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ಏಕೆಂದರೆ, ಕಳೆದ ಎಂಟು ವರ್ಷಗಳಿಂದ ಈ ಮಾರ್ಗಸೂಚಿ ಪರಿಶೀಲನೆಗೆ ಬಂದಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆಗೆಯಬೇಕಾದರೆ ಈಗ ಶೂನ್ಯ ಗುರಿ ಇದೆ ಎನ್ನತಕ್ಕಂಥ ಮಾತನ್ನು ತಮ್ಮ ಇಲಾಖೆಯವರೇ ಹೇಳುತ್ತಿದ್ದಾರೆ. ಆದರೆ disparities ಆಗಿವೆ. ಎಲ್ಲಿ 30 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡಬೇಕಾಗಿತ್ತು, ಎಲ್ಲಿ 20 ಸಾವಿರ ಜನಸಂಖ್ಯೆಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡಬೇಕಾಗಿತ್ತು. ಆ ನಿಯಮ ಕೂಡ ಪಾಲನೆ ಮಾಡುತ್ತಿಲ್ಲ. 10 ಸಾವಿರ ಜನಸಂಖ್ಯೆಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೂ ಕೂಡ ಕೊಟ್ಟಿದ್ದಾರೆ. ಕೆಲವು ಕಡೆ 50 ಸಾವಿರ ಜನಸಂಖ್ಯೆಯಿರತಕ್ಕ ಕಡೆಗೆ ಇದುವರೆವಿಗೂ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನೂ ಕೊಟ್ಟಿಲ್ಲ. ಮತ್ತೆ ಶೂನ್ಯ ಗುರಿ ಇದ್ದಾಗ, ಕಳೆದ ಮೂರು ವರ್ಷದಲ್ಲಿ ಒಂದನ್ನಾದರೂ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆಗೆದಿದ್ದೀರೋ ಇಲ್ಲವೋ ಎನ್ನತಕ್ಕಂಥದ್ದನ್ನು ಸಭೆಗೆ ತಿಳಿಸಬೇಕು ಅದು ಆದ ನಂತರ ನಾನು ಸಪ್ಲಿಮೆಂಟರಿ ಪ್ರಶ್ನೆ ಕೇಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ ಹಾಲಿ 60 ಪ್ರಾಥಮಿಕ ಆರೋಗ್ಯ ಕೇಂಧ್ರಗಳು ಇವೆ. ಅಲ್ಲಿ 30 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಎಂದರೂ ಸುಮಾರು 50 ಪ್ರಾಥಮಿಕ ಆರೋಗ್ಯ ಕೇಂದ್ರ ಅಲ್ಲಿ ಇರಬೇಕಾಗಿತ್ತು. ನಾವು ಆಲ್‌ರೆಡಿ 10 ಹೆಚ್ಚಿಗೆ, 60 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ, ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಏನು ಇದೆ, 30 ಸಾವಿರ ಜನಸಂಖ್ಯೆಗೆ ಒಂದು

ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಬೇಕೆಂದು ಏನು ಇದೆ, ಅದು ಮಾರ್ಗಸೂಚಿ, ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಏನು ಈಗ ಬೇಡಿಕೆ ಇಟ್ಟಿದ್ದಾರೆ. ಇದು ಹಲವಾರು ಜಿಲ್ಲೆಗಳಿಂದ ಬೇಡಿಕೆ ಬಂದಿದೆ. ಬಿಜಾಪುರ ಜಿಲ್ಲೆಯಿಂದಲೇ ಸುಮಾರು 15 ಬೇಡಿಕೆಗಳು ಬಂದಿವೆ. ಇದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತಾವೇನು ಪ್ರಾರಂಭ ಮಾಡಿದ್ದಿರೋ ಇಲ್ಲವೋ? ಅದರ ಬಗ್ಗೆ ತಮ್ಮ ಕಡೆ ಏನು ಉತ್ತರ ಇದೆ?

ಶ್ರೀ ಆರ್. ಅಶೋಕ್ : ಅದನ್ನು ನಾನು ತರಿಸಿಕೊಡುತ್ತೇನೆ. ಆ ಪ್ರಶ್ನೆ ಇಲ್ಲಿ ಇಲ್ಲ. ನಾನು ಅದನ್ನು ತರಿಸಿಕೊಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಪ್ರಶ್ನೆಯಲ್ಲ ಸ್ವಾಮಿ, ನಾನು ಕೇಳುತ್ತಿದ್ದೇನೆ. ಶೂನ್ಯ ಗುರಿ ಇದೆ ಎಂದು ನಿಮ್ಮ ಇಲಾಖೆಯವರು ಹೇಳುತ್ತಾರೆ. ನನ್ನ ಹತ್ತಿರ ಇಲ್ಲಿ ನಿಮ್ಮ ಆನ್ಯುಯಲ್ ರಿಪೋರ್ಟ್ ಇದೆ. 2005–06ನೇ ಸಾಲಿನದ್ದು, ಶೂನ್ಯ ಗುರಿ ಇದ್ದಾಗ ಎರಡು ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಸನದಲ್ಲಿ ಹೋದ ವರ್ಷ ಪ್ರಾರಂಭ ಮಾಡಿದ್ದಾರೆ. ಟಾರ್ಗೆಟ್ ಇಲ್ಲ. ಇದು ಏನು ತೋರಿಸುತ್ತದೆ? Might is right. ಎಲ್ಲಿ ಬೇಕು ಅಲ್ಲಿ ಮಾಡಿಕೊಳ್ಳುತ್ತಾರೆ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಆಗುತ್ತಿಲ್ಲ.

ಶ್ರೀ ಆರ್. ಅಶೋಕ್ : ನಾನು ಆ ಮಾಹಿತಿಯನ್ನು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ತಮಗೆ ನಂತರ ತಿಳಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಶಿವಾನಂದ ಪಾಟೀಲರೆ, ಮಾನ್ಯ ಮಂತ್ರಿಗಳು ಹೊಸಬರು ಇದ್ದಾರೆ, ನೀವು ಕೇಳಿದರಲ್ಲಾ, ಕೆಲವು ಕಡೆ 25 ಕಿಲೋಮೀಟರ್‌ಗೆ ಒಂದು ಕಡೆ ಇದೆ ಎಂದು. ದಯಮಾಡಿ ನಾನು ಹೇಳುವುದನ್ನು ಕೇಳಿ. ಎಲ್ಲಾ ಸರ್ಕಾರಗಳಲ್ಲೂ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ನಡೆದುಕೊಂಡು ಬಂದಿದೆ. ಕೇಂದ್ರ ಸರ್ಕಾರದಲ್ಲಿಯೇ ರೈಲ್ವೆ ಮಂತ್ರಿ ಯಾವ ರಾಜ್ಯದವರು ರೈಲ್ವೆ ಮಂತ್ರಿಯಾಗುತ್ತಾರೋ ಆ ರಾಜ್ಯಕ್ಕೆ ಜಾಸ್ತಿ ರೈಲು ವ್ಯವಸ್ಥೆ ಹಾಕಿಕೊಂಡಿರುವುದನ್ನು ತಾವೆಲ್ಲಾ ನೋಡಿದ್ದೀರಿ. ನಾವು ಎಲ್ಲಾ ಕೇಳಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದೀರಲ್ಲಾ ಸ್ವಾಮಿ ಸ್ವಲ್ಪ ಸಹಕಾರ ಮಾಡಿ, ಹೊಸ ಸಚಿವರಿಗೆ ನೀವು ಸಹಕಾರ ಕೊಡಲಿಲ್ಲವೆಂದರೆ ಯಾರು ಕೊಡುತ್ತಾರೆ? ದಯವಿಟ್ಟು ಸಹಕಾರ ಕೊಡಿ ಸ್ವಾಮಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗ ಸಮಗ್ರವಾಗಿ ಯಾವುದೇ ಸರ್ಕಾರಗಳಾಗಲಿ, ಇಲ್ಲಿ backward pocket ಎಂದು ಐಡೆಂಟಿಫೈ ಮಾಡಬೇಕು. ಆ backward pockcet identify ಮಾಡಿರುವುದಕ್ಕೆ ಸ್ವಲ್ಪ ಜಾಸ್ತಿ ಅನುದಾನವನ್ನು ಕೊಡಬೇಕು. ಆ ರೀತಿ ಸಮಗ್ರವಾಗಿ ಏನಾದರೂ ಒಂದು ಚಿಂತನೆ ಮಾಡಿ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಒಂದು ಪಾಲಿಸಿ ಮಾಡದಿದ್ದರೆ ಇದು ಇದ್ದದ್ದೇ. Survival of the fittest. ಆದುದರಿಂದ, ಮಾನ್ಯ ಮಂತ್ರಿಗಳು

ಇದರ ಬಗ್ಗೆ ಚರ್ಚೆ ಮಾಡಿ ನಿಮಗೆ ಹೇಳುತ್ತಾರೆ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಮಾನ್ಯ ಬಾಲರಾಜ್‌ರವರು

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಪ್ರಜಾಪ್ರಭುತ್ವ ಬಂದಿರುವುದು ಸಮತೋಲನವಾಗಿ ಇಡೀ ರಾಜ್ಯವನ್ನು ನೋಡಬೇಕೆಂದು ಇರುವುದು......... ಆದರೆ dictatorship ಇದ್ದರೆ ಅವರು ಎಲ್ಲಿ ಬೇಕಾದರೂ ಮಾಡಬಹುದು. ಪ್ರಜಾತಂತ್ರದಲ್ಲಿ ನಾವು ಏಕೆ ಇರಬೇಕು?

ಅಧ್ಯಕ್ಷರು : ಆಯಿತು ಮಾನ್ಯ ಶ್ರೀನಿವಾಸಗೌಡರೆ, ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡು ಬಂದಿದೆ. ಅದಕ್ಕೆ ನನಗೇನು ಅನುಭವ ಆಗಿದೆ ಅದನ್ನು ನಾನು ಹೇಳಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಇದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಹೆಚ್.ಡಿ. ಬಸವರಾಜು : ಇಷ್ಟು ದಿವಸ ಮಾಡಿರುವುದನ್ನು ತಾನೇ, ಬದಲು ಮಾಡಿ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳು ಅವಕಾಶ ಕೇಳುತ್ತಿದ್ದಾರೆ. ಅವಕಾಶ ಕೊಡಿ. ಇಷ್ಟು ದಿವಸ ತಾವು ಇದ್ದರಲ್ಲಾ ; ಅದನ್ನು ಬದಲು ಮಾಡುತ್ತಾರೆ. ಮಾಡುವುದಿಲ್ಲ ಎಂದೇನೂ ಅವರು ಹೇಳಲಿಲ್ಲವಲ್ಲಾ?

(ಗೊಂದಲ)

ಅಧ್ಯಕ್ಷರು : ಆಯಿತು. ಮಾನ್ಯ ಬಾಲರಾಜ್‌ರವರು ಪ್ರಶ್ನೆ ಕೇಳಿ. ಆಯಿತು ಮಾಹಿತಿ ತರಿಸುತ್ತೇನೆ, ಎಂದು ಮಂತ್ರಿಗಳು ಹೇಳಿದ್ದಾರೆ, ಕುಳಿತುಕೊಳ್ಳಿ.

ಶ್ರೀ ಎಸ್. ಬಾಲರಾಜ್ : ಮಾನ್ಯ ಸಚಿವರಿಗೆ 211ನೇ ಪ್ರಶ್ನೆ ಕೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬಾಲರಾಜ್‌ರವರ 211ನೇ ಪ್ರಶ್ನೆಗೆ ಉತ್ತರ ಹೇಳಿ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲ್‌ರವರು ಕೇಳಿದ ಪ್ರಶ್ನೆಗೆ ಮಾನ್ಯ ಆರೋಗ್ಯ ಸಚಿವರು ಸರಿಯಾದ ಉತ್ತರ ಕೊಡಲಿಲ್ಲ. ಇಲ್ಲಿ ಏನಾಗುತ್ತಿದೆ, ನಿನ್ನೆ ಕೂಡ ಮಾನ್ಯ ಕುಮಾರ್‌ಸ್ವಾಮಿಯವರು, ಮುಖ್ಯಮಂತ್ರಿಗಳು ಇಲ್ಲಿ ಸದನದಲ್ಲಿ ಇದ್ದರು. ಮಾನ್ಯ ಮುಖ್ಯಮಂತ್ರಿಗಳಿಗೆ ನಾವೇನು ಕೇಳತಕ್ಕಂಥ ಪ್ರಶ್ನೆಗಳು ಇರುತ್ತವೆ. ಎಲ್ಲಾ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ನೆರವಾಗಬೇಕು ಎನ್ನತಕ್ಕಂಥ ರೀತಿಯಲ್ಲಿ ಸದಸ್ಯರು ಹೇಳುತ್ತಾರೆ, ಮಂತ್ರಿಗಳು ಉತ್ತರ ಹೇಳುತ್ತಾರೆ. ಇವತ್ತು ನಮ್ಮ ಮಾನ್ಯ ಅಶೋಕ್‌ರವರಿಗೆ ಸಾಮರ್ಥ್ಯ ಇದೆ. ಮೊಟ್ಟ ಮೊದಲನೆಯದಾಗಿ ಆರೋಗ್ಯ ಖಾತೆ ಯುವಕರಿಗೆ ಸಿಕ್ಕಿದೆ. ಮಾನ್ಯ ಶಿವಾನಂದ ಪಾಟೀಲ್‌ರವರು ಹಿಂದುಳಿದ ಪ್ರದೇಶಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದಾಗ, ಇವತ್ತು ಯಾರು ಒಬ್ಬ ಸದಸ್ಯರು ಪ್ರಶ್ನೆ ಕೇಳುತ್ತಾರೆ. ಅದಕ್ಕೆ ಸರಿಯಾದ ರೀತಿಯಲ್ಲಿ ಉತ್ತರ ಕೊಡಿಸತಕ್ಕಂಥದ್ದು ತಮ್ಮ ಕರ್ತವ್ಯ. ಮಾನ್ಯ ಬಸವರಾಜ್‌ರವರು ಹೇಳುತ್ತಾರೆ. ಅದು ಸರಿಯಾದುದಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳೇ, ಉಪ ಮುಖ್ಯಮಂತ್ರಿಗಳೇ, ಓ ಮಾನ್ಯ ಮಂಜುನಾಥರವರೇ, ಈಗ ಏಕೆ ಮಾತನಾಡುತ್ತೀರಿ? ಎಲ್ಲಾ ಮುಗಿದು ಹೋಗಿದೆ.

(ನಗು)

ನಾನು ಏಕೆ ಹೇಳುತ್ತಿದ್ದೇನೆಂದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಇವತ್ತು ಏನಾಗಿದೆ, ಸಚಿವ ಸಂಪುಟ ವಿಸ್ತರಣೆಯಲ್ಲಿ ಸೆಕೆಂಡ್ ರೌಂಡು ನೋಡೋಣ. ಅಲ್ಲವೇ ಉಪ ಮುಖ್ಯಮಂತ್ರಿಗಳೇ. ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ನಾನು ಹೇಳತಕ್ಕಂಥದ್ದು ಏನೆಂದರೆ, ಯಾರಾದರೂ ಒಬ್ಬ ಸದಸ್ಯರು ಸಂಬಂಧಪಟ್ಟಂಥ ಮಂತ್ರಿಗೆ ಪ್ರಶ್ನೆ ಕೇಳಿದಾಗ, ಅವರಿಗೆ ಸೂಕ್ತವಾದಂಥ ಉತ್ತರ ಸಿಗಬೇಕು ಮತ್ತು ಉತ್ತರ ಕೊಡಿಸತಕ್ಕಂಥದ್ದು ತಮ್ಮ ಕೆಲಸ. ಆದರೆ, ಅವರು ಅಲ್ಲಿಯೇ ಗಂಟೆ ಬಾರಿಸುತ್ತಾ ಇದ್ದರೆ ಹೇಗೆ? ಮಾನ್ಯ ಬಸವರಾಜ್‌ರವರು ಎದ್ದು ಉತ್ತರ ಹೇಳುವುದಕ್ಕೆ ಹೋಗುತ್ತಾರೆ. ಈ ರೀತಿಯಾಗಿ ಏಕೆ ಮಾಡುತ್ತೀರಿ? ಇದೇನು ಶೂನ್ಯ ವೇಳೆಯೆ ಅಥವಾ ಬೇರೆ ಏನಾದರೂ ಕೆಲಸ ಇದೆಯೆ?

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಉಪ ಪ್ರಶ್ನೆಗಳಿಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಈ ಮಾಹಿತಿಯನ್ನು ಕೊಡುತ್ತೇನೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, But, he is not satisfied. He is a Senior Member. ಮಾನ್ಯ ಶಿವಾನಂದ ಪಾಟೀಲ್‌ರವರು ಈ ಸದನದ ಬಹಳ ಹಿರಿಯ ಸದಸ್ಯರಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಹೇಳುವುದೇನೆಂದರೆ, ಅವರಿಗೆ ಪೂರಕವಾಗಿ ನಾನೇ ಹೇಳಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ : ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ತಾವು ಕೇಳಬೇಕು. Survival of the fittest. 25 ಕಿಲೋಮೀಟರ್‌ವರೆಗೂ ಕೂಡ ಒಂದು ಆಸ್ಪತ್ರೆ ಇಲ್ಲವೆಂದು ಅವರು ಹೇಳಿದರು. ಮತ್ತೆ ಕೆಲವು ಕಡೆ ಏಳೆಂಟು ಇದೆ ಎಂದು ಒಂದೆರಡು ಉದಾಹರಣೆಯನ್ನೂ ಸಹ ಅವರು ಹೇಳಿದರು. ಅದು ಆಗಿದೆ. ಆದ್ದರಿಂದ, ಇನ್ನು ಮುಂದೆ ಒಂದು ಸಮಗ್ರವಾದ ನೀತಿಯನ್ನು ಸರ್ಕಾರ ತರಬೇಕು.

ಶ್ರೀ ಎನ್. ಧರ್ಮಸಿಂಗ್ : ಅವರು ಹೇಳುತ್ತಾರೆ. ಆದರೆ ನೀವು ಅವರಿಗೆ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು : ಅದನ್ನೇ ನಾನು ಹೇಳಿರುವುದು. ಅವರಿಗೆ ಪೂರಕವಾಗಿ ನಾನೇ ಹೇಳಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ : ಯಾರು ಪ್ರಶ್ನೆ ಕೇಳುತ್ತಾರೆಯೋ ಅವರಿಗೆ ನೀವು ಅವಕಾಶ ಕೊಡುತ್ತಿಲ್ಲ. ಇದು ಸದನ ನಡೆಸತಕ್ಕಂಥ ರೀತಿ ನೀತಿ ಅಲ್ಲ.

ಅಧ್ಯಕ್ಷರು : ಅವರಿಗೆ ಅವಕಾಶವನ್ನು ನಾನು ಕೊಟ್ಟಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಸದಸ್ಯರು ಎರಡು ವರ್ಷಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಕೇಳಿದ್ದಾರೆ. ಈ ಮಾಹಿತಿಗಳನ್ನು ತರಿಸಿಕೊಂಡು ಅವರಿಗೆ ಮಾಹಿತಿ ಒದಗಿಸಿಕೊಡುತ್ತೇನೆ. ನೀವು ಹೊಸದಾಗಿ ಕೇಳಿರತಕ್ಕಂಥದ್ದು ನಮ್ಮ ಮಾರ್ಗಸೂಚಿ ಪ್ರಕಾರ ಕೊಡುವುದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ. ಎರಡು ವರ್ಷದ ಮಾಹಿತಿಗಳನ್ನು ತಾವು ಕೇಳಿದ್ದೀರಿ ಅದನ್ನು ತರಿಸಿ ತಮಗೆ ತಿಳಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, 8 ವರ್ಷಗಳಿಂದ ಈ ಮಾರ್ಗಸೂಚಿ ಪರಿಶೀಲನೆ ಆಗಿಲ್ಲ. ಇವತ್ತಿನದಿವಸ ನಿಮ್ಮ ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರೂ ಕೂಡ ಬಂದಿಲ್ಲ. ಆದರೆ, ದುರ್ದೈವಕ್ಕೆ ನೀವು ಉತ್ತರ ಕೊಡುತ್ತಿದ್ದೀರಿ.

ಶ್ರೀ ಆರ್. ಅಶೋಕ್ : ಮಾನ್ಯ ಕಾರ್ಯದರ್ಶಿಯವರು ವಿಧಾನಪರಿಷತ್‌ಗೆ ಹೋಗಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ಹೇಳುವುದೇನೆಂದರೆ, ನೀವು ಕೂಡ ನನ್ನ ಜೊತೆಯಲ್ಲಿಯೇ ಶಾಸಕರಾಗಿ ಇಲ್ಲಿಗೆ ಬಂದಿದ್ದೀರಿ. ನೀವು ಹೊಸಬರು ಇರಬಹುದೆಂದು ನಾನು ಇಲ್ಲವೆಂದು ಹೇಳುವುದಿಲ್ಲ. ಅಟ್‌ಲೀಸ್ಟ್ ನಿಮಗೆ ಮಿಸ್‌ಗೈಡ್ ಮಾಡಬಾರದು. ವಾರ್ಷಿಕ ವರದಿಯಲ್ಲಿ ಗುರಿ ಶೂನ್ಯವೆಂದು ಹೇಳುತ್ತಾರೆ. ಆದ್ದರಿಂದ ಎರಡು ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಯಾವ ರೀತಿಯಾಗಿ ಮಂಜೂರು ಆದವು? ನಾನು ಅವರ ಮೇಲೆ ಪ್ರಿವಿಲೇಜ್ ಮೂವ್ ಮಾಡಲೆ? When there is no target, how can he sanction two PHCs? ಕೊನೇ ಪಕ್ಷ ಅವರು ನಿಮಗೆ ಮಿಸ್‌ಲೀಡ್ ಮಾಡಬಾರದಷ್ಟೆ. ಬೇಕಾದರೆ ನನಗೆ ಅವರು ಮಿಸ್‌ಲೀಡ್ ಮಾಡಲಿ.

ಶ್ರೀ ಆರ್. ಅಶೋಕ್ : ಆ ರೀತಿಯಾಗಿ ಸ್ಯಾಂಕ್ಷನ್ ಆಗಿರತಕ್ಕಂಥದ್ದು ನನ್ನ ಗಮನಕ್ಕೆ ಬಂದಿಲ್ಲ. ಆದ್ದರಿಂದ, ಎರಡು ವರ್ಷಗಳಿಂದ ಏನೇನು ಆಗಿದೆ ಮತ್ತು ಯಾರು ಸ್ಯಾಂಕ್ಷನ್ ಮಾಡಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ತರಿಸಿ ಕೊಡುತ್ತೀನಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಿಮ್ಮ ಇಲಾಖೆಯವರೇ ಕೊಟ್ಟಿರತಕ್ಕಂಥ ವಾರ್ಷಿಕ ವರದಿಯಲ್ಲಿ ಇದು ಇದೆ. ಇದನ್ನು ನಾನೇನೂ ಮನೆಯಿಂದ ಪ್ರಿಂಟ್ ಮಾಡಿಕೊಂಡು ಇಲ್ಲಿಗೆ ತಂದಿಲ್ಲ. ಯಾವುದೇ ಟಾರ್ಗೆಟ್ ಇಲ್ಲದೆ ಇರುವಾಗ ಇದನ್ನು ಯಾವ ರೀತಿಯಾಗಿ ಮಾಡಿದ್ದೀರಿ?

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಹೊಸಬರಿದ್ದಾರೆ. ಮತ್ತೆ ಅವರ ಹತ್ತಿರ ಈ ಎಲ್ಲಾ ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ. ದಯಮಾಡಿ ಅವರ ಜೊತೆ ಕುಳಿತುಕೊಂಡು ಚರ್ಚೆ ಮಾಡಿ. ಈ ರೀತಿಯಾದರೆ ಪ್ರಶ್ನೋತ್ತರವನ್ನು ಹೇಗೆ ನಡೆಸುವುದು?

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ : ಇಲಾಖೆಯವರು ಮಾನ್ಯ ಸಚಿವರನ್ನು ಮಿಸ್‌ಲೀಡ್ ಮಾಡಿದರೆ ನೀವು ಒಪ್ಪಿಕೊಳ್ಳುತ್ತಿರೋ ಅಥವಾ ಇಲ್ಲವೋ? I am very sorry. ಇಲಾಖೆಯವರು ಅವರನ್ನು ಮಿಸ್‌ಲೀಡ್ ಮಾಡಬಾರದು. ಈಗ ನಾನೇ ಮಾನ್ಯ ಅಶೋಕ್‌ರವರ ಮೇಲೆ ಪ್ರಿವಿಲೇಜ್ ಮೂವ್ ಮಾಡಬಹುದಲ್ಲವೆ?

Mr. SPEAKER : What are you talking? - ನಾನು ಪ್ರಶ್ನೋತ್ತರ ಮುಗಿಸಬೇಕಾಗಿದೆ. ನಾನು ಈಗಾಗಲೇ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ನೀವುಗಳೇ ಪರಸ್ಪರ ಮಾತನಾಡುತ್ತಾ ಹೋದರೆ ಹೇಗೆ? I can't understand. ನೀವು ಏನು ಮಾತನಾಡುತ್ತಿದ್ದೀರಿ? No. No.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೇರೆ ಆಸ್ಪತ್ರೆಗಳಿಗೆ ಸ್ಯಾಂಕ್ಷನ್ ಆಗಿರತಕ್ಕಂಥ ವೈದ್ಯರುಗಳನ್ನು ಯಾರಿಗೂ ಹೇಳದೆ ಕೇಳದೆ ಬೇರೆ ಕಡೆಗೆ ಡೆಪ್ಯೂಟ್ ಮಾಡಿರುವುದಲ್ಲದೆ

ಅನಧಿಕೃತವಾಗಿ ಎರಡು ಆಸ್ಪತ್ರೆಗಳು ಈ ರಾಜ್ಯದಲ್ಲಿ ಪ್ರಾರಂಭವಾಗಿದ್ದರೆ ಅದನ್ನು ಇಲ್ಲಿ ಕೇಳಬಾರದೆ? ನಮ್ಮ ಆಸ್ಪತ್ರೆಯಿಂದ ಕೂಡ ಒಬ್ಬ ಡಾಕ್ಟರ್ ಕೊಟ್ಟಿದ್ದೇವೆ. 15 ದಿವಸಗಳ ಮೊದಲೇ ಪ್ರಶ್ನೆಯನ್ನು ಕೊಟ್ಟಿರುತ್ತೇವೆ. ಆದ್ದರಿಂದ ಅವರು ಉತ್ತರ ಹೇಳಬೇಕಲ್ಲವೆ?

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಈಗ ನನ್ನ ಹತ್ತಿರ ಸಂಬಂಧಪಟ್ಟಂಥ ಮಾಹಿತಿಗಳು ಇಲ್ಲ. ಆದ್ದರಿಂದ, ಇವುಗಳನ್ನು ತರಿಸಿಕೊಡುತ್ತೇನೆಂದು ಹೇಳುತ್ತಿದ್ದಾರೆ. ಅವರೂ ಸಹ ಹೊಸಬರಿದ್ದಾರೆ. ಅವರು ಯಾವುದೇ ಮಾಹಿತಿಗಳು ಇಲ್ಲದೆ ಇರುವಾಗ ಅವರು ಏನೇ ಪ್ರಶ್ನೆ ಕೇಳಿದರೂ ಕೂಡ ಮಾನ್ಯ ಮಂತ್ರಿಗಳು ಅಷ್ಟೇ ಉತ್ತರ ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡಿ. ಅವರು ಈಗಾಗಲೇ ಹೇಳಿದಂತೆ ಈ ವ್ಯವಸ್ಥೆ, ಅವ್ಯವಸ್ಥೆ ಆಗಿರತಕ್ಕಂಥದ್ದು ನಿಜ. ಇದು ಎಲ್ಲಾ ಕಾಲದಿಂದಲೂ ಕೂಡ ನಡೆದುಕೊಂಡು ಬಂದಿದೆ. ಅದಕ್ಕೆ ಏನಾದರೊಂದು ಸಮಗ್ರವಾದ ನೀತಿಯನ್ನು ರೂಪಿಸಿ ಎಂದು ನಾನೇ ಹೇಳುತ್ತಿದ್ದೇನೆ.

ವಿಷಯ: ಯಳಂದೂರು ತಾಲ್ಲೂಕು ಗೌಡಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಕೊರತೆ.

40 (211) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಳಂದೂರು ತಾಲ್ಲೂಕು ಗೌಡಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು ಹಾಗೂ ಕಟ್ಟಡ ಕಟ್ಟಲು ಯಾವ ಯೋಜನೆ ರೂಪಿಸಲಾಗಿದೆ;

ಇ) ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ ನಂತರವೂ ಮೊದಲಿದ್ದ ಸಂಖ್ಯೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗದವರೇ ಕಾರ್ಯನಿರ್ವಹಿಸುತ್ತಿರಲು ಕಾರಣಗಳೇನು;

ಈ) ಇವರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರಕ್ಕೆ ಒತ್ತಾಯ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಕಟ್ಟಡವನ್ನು ಕಟ್ಟಲು ನಿವೇಶನ ಲಭ್ಯತೆ ಇರುವುದಿಲ್ಲ. ನಿವೇಶನ ದೊರಕಿದ ನಂತರ ಕಟ್ಟಡ ಕಟ್ಟಲು ಪ್ರಸ್ತಾಪಿಸಲಾಗುವುದು.

ಇ) ವೈದ್ಯರು ಮತ್ತು ಸಿಬ್ಬಂದಿಗಳ ಹೆಚ್ಚುವರಿ ಮಂಜೂರಾತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಸಧ್ಯದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಈ) ಬಂದಿದೆ.

ಉ) ವೈದ್ಯರು ಮತ್ತು ಸಿಬ್ಬಂದಿಗಳ ಹೆಚ್ಚುವರಿ ಮಂಜೂರಾತಿಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಸಧ್ಯದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಎಸ್. ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಯಳಂದೂರು ತಾಲ್ಲೂಕು ಗೌಡಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಕೊರತೆ ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಕಳೆದ ಸಾರಿ ನಾನು ಕೂಡ ಸಂಬಂಧಪಟ್ಟಂಥ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಇದಕ್ಕೆ ನಿವೇಶನವನ್ನು ಕೊಟ್ಟಿದ್ದೇವೆ. ಆದರೆ, ಉತ್ತರದಲ್ಲಿ ಬಂದಿಲ್ಲವೆಂದು ಏಕೆ ಈ ರೀತಿಯಾಗಿ ಉತ್ತರ ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಅಂದರೆ ನಿವೇಶನ ಇಲ್ಲ ಎನ್ನತಕ್ಕಂಥ ಪ್ರಶ್ನೆ ಏತಕ್ಕಾಗಿ ಉದ್ಭವವಾಗುತ್ತದೆ? ನಿವೇಶನ ಕೊಟ್ಟಿದ್ದರೆ ಈ ಸಾಲಿನಲ್ಲಿ ಕಟ್ಟಡ ಕಟ್ಟಿಕೊಡುತ್ತೀರಾ?

ಶ್ರೀ ಆರ್. ಅಶೋಕ್ : ನಿವೇಶನ ಕೊಟ್ಟರೆ ಈ ಸಾಲಿನಲ್ಲಿಯೇ ಸದರಿ ಕಟ್ಟಡವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್. ಬಾಲರಾಜ್ : ಮಾನ್ಯ ಸಚಿವರೆ, ಈಗಾಗಲೇ ನಿವೇಶನ ಕೊಡಲಾಗಿದೆ.

ಶ್ರೀ ಆರ್. ಅಶೋಕ್ : ನಿವೇಶನ ಕೊಟ್ಟಿರುವ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಸ್. ಬಾಲರಾಜ್ : ಇದನ್ನು ನೋಡಿದರೆ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಪ್ರಶ್ನೆ ಬರುತ್ತದೆ.

ಶ್ರೀ ಆರ್. ಅಶೋಕ್ : ನಿವೇಶನ ಕೊಟ್ಟರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಾಡಿಕೊಡುತ್ತೀರಾ ಎಂದು ತಾವು ಕೇಳುತ್ತಿದ್ದೀರಿ. ಖಂಡಿತ ಮಾಡಿಕೊಡುತ್ತೇವೆ.

ಶ್ರೀ ಎಸ್. ಬಾಲರಾಜ್ : ಈ ಸಾಲಿನಲ್ಲಿಯೇ ಮಾಡಿಕೊಡುತ್ತೀರಾ?

ಶ್ರೀ ಆರ್. ಅಶೋಕ್ : ಮಾಡಿಕೊಡುತ್ತೇವೆ.

ಶ್ರೀ ಎಸ್. ಬಾಲರಾಜ್ : ನನ್ನ ಎರಡನೇ ಪ್ರಶ್ನೆಯಲ್ಲಿ ಕೊಳ್ಳೇಗಾಲದಲ್ಲಿರುವ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದ್ದಾರೆ. ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವಾಗ ಅಲ್ಲಿ ಕೇವಲ 8 ವೈದ್ಯರು ಮಾತ್ರ ಇದ್ದಾರೆ. ಅಂದರೆ ಹಿಂದೆ 60 ಬೆಡ್ ಇದ್ದಂಥ ಕಾಲದಲ್ಲಿ ಇದ್ದ 8 ವೈದ್ಯರು ಇವತ್ತೂ ಕೂಡ ಇದ್ದಾರೆ. ಸರ್ಕಾರದ ಆರ್ಥಿಕ ಸಮೀಕ್ಷೆ ಪುಸ್ತಕದಲ್ಲಿ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ 10,260 ಜನಸಂಖ್ಯೆಗೆ ಒಬ್ಬರು ವೈದ್ಯರು ಎಂದು ಅನುಪಾತದಲ್ಲಿ ಕೊಟ್ಟಿದ್ದಾರೆ. ಇರತಕ್ಕಂಥ ಅಂಕಿ-ಅಂಶಗಳ ಪ್ರಕಾರ ಸುಮಾರು 19 ಜನ ವೈದ್ಯರು ನಮ್ಮಲ್ಲಿರಬೇಕು. ಅಷ್ಟು ಜನಸಂಖ್ಯೆ ಇದ್ದರೂ ಕೂಡ 8 ಜನ ವೈದ್ಯರನ್ನು ಮಾತ್ರ ಕೊಟ್ಟಿದ್ದೀರಿ. ಆದ್ದರಿಂದ ಇರತಕ್ಕಂಥ ಅನುಪಾತದ ಪ್ರಕಾರ ಮುಂದಕ್ಕಾದರೂ ಮಾಡಿಕೊಡುತ್ತೀರಾ? ಇದನ್ನು ಮಾಡುವುದಕ್ಕೆ ನಿಮ್ಮಲ್ಲಿ ಸಾಧ್ಯತೆ ಇದೆಯೆ?

ಶ್ರೀ ಆರ್. ಅಶೋಕ್ : ರಾಜ್ಯದಲ್ಲಿ ಸುಮಾರು 596 ವೈದ್ಯರ ಕೊರತೆ ಇದೆ. ಇದರ ಜೊತೆಗೆ ಸುಮಾರು 73 ದಂತ ವೈದ್ಯರ ಕೊರತೆ ಕೂಡ ಇದೆ. ಏನು ಈಗಾಗಲೇ ಇರತಕ್ಕಂಥ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದು, ಇಲ್ಲಿಗೆ ಅವಶ್ಯಕತೆ ಇರತಕ್ಕಂಥ ವೈದ್ಯರನ್ನು ಟೆಂಪರರಿ ಬೇಸಿಸ್ ಮೇಲೆ ನೇಮಕಾತಿ ಮಾಡಿಕೊಳ್ಳುವುದಕ್ಕೋಸ್ಕರ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮತ್ತು ನಮ್ಮ ಡಿಹೆಚ್ಓಗಳಿಗೆ ಸೂಚನೆ ನೀಡಿದ್ದೇವೆ. ಈಗಾಗಲೇ ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದು, ಹಂತ ಹಂತವಾಗಿ ವೈದ್ಯರನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಹೇಳಿರತಕ್ಕಂಥ ಉತ್ತರ ಸರಿಯಾದುದಲ್ಲ. ನಾನು ಹೇಳುವುದೇನೆಂದರೆ, 150 ಬೆಡ್ ಹೊಂದಿರತಕ್ಕಂಥ ಆಸ್ಪತ್ರೆಗೆ 18 ಜನ ವೈದ್ಯರು ಇರಬೇಕು. 18 ಜನರು ವೈದ್ಯರು ಇರುವಂಥ ಕಡೆ ಮಂಜೂರಾತಿ ಇರತಕ್ಕಂಥದ್ದು ಕೇವಲ 8 ಮಾತ್ರ. ಇನ್ನೂ 10 ವೈದ್ಯರ ಪೋಸ್ಟ್ ಖಾಲಿ ಇದೆ. ನಮಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಟ್ಟರೂ ಪರವಾಗಿಲ್ಲ. ಆದರೆ, ಮಂಜೂರಾತಿ ಮಾಡದೇ ಇರತಕ್ಕಂಥ ಪ್ರಶ್ನೆ ಇಲ್ಲಿ ಉದ್ಭವವಾಗಿರುವುದರಿಂದ ನೀವು 18 ಜನರನ್ನು ನೇಮಕ ಮಾಡಿಕೊಳ್ಳುವುದಕ್ಕೆ ನೀವು ಬದ್ಧರಾಗಿದ್ದೀರಾ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಮೇಲ್ದರ್ಜೆಗೇರಿಸಿರುವುದರಿಂದ ಹಂತ ಹಂತವಾಗಿ ತುಂಬಿಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅಂದರೆ ಎಲ್ಲಾ ಹುದ್ದೆಗಳನ್ನು ತುಂಬಿಕೊಳ್ಳುತ್ತೇವೆಂದು ಅವರಿಗೆ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ 50 ಬೆಡ್ ಇರುವ ಕಡೆ 100 ಬೆಡ್‌ಗೆ ಮತ್ತು 100 ಬೆಡ್ ಇರುವಂಥ ಕಡೆ 150 ಬೆಡ್ ಮಾಡಿ ಕೆಲವು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದ್ದಾರೆ. ಹಿಂದೆ ವಿಶ್ವಬ್ಯಾಂಕ್ ನೆರವಿನಿಂದ ಒಳ್ಳೆಯ ಕಟ್ಟಡಗಳನ್ನು ಕಟ್ಟಿ ಆಪರೇಷನ್ ಥಿಯೇಟರ್ ಮಾಡಿದ್ದರೂ ಕೂಡ ಇವತ್ತಿನ ದಿವಸ ಅಂಥ ಕಡೆ ಅರವಳಿಕೆ ತಜ್ಞರು ಇಲ್ಲ ಮತ್ತೆ ಜನರಲ್ ಮೆಡಿಸನ್ ಇಲ್ಲ. ಯಾರಾದರೂ ಅರವಳಿಕೆ ತಜ್ಞರು ಆಸ್ಪತ್ರೆಗಳ ಹತ್ತಿರ ಇದ್ದು, ಒಬ್ಬ ಪೇಸೆಂಟ್‌ಗೆ ಆಪರೇಷನ್ ಮಾಡಿದರೆ 800 ರೂಪಾಯಿ ಕೊಡುತ್ತೇವೆಂದು ಮೊನ್ನೆ ದಿವಸ ಮಾನ್ಯ ಅಶೋಕ್‌ರವರು ಹೇಳಿದ್ದಾರೆ. ಆದ್ದರಿಂದ, ಈ ರೀತಿಯಾದ ಒಂದು ವ್ಯವಸ್ಥೆಯನ್ನು ಬೇಗ ಮಾಡಬೇಕು. ಏಕೆಂದರೆ ವಿಶ್ವಬ್ಯಾಂಕ್ ನೆರವಿನಿಂದ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡಿ ಅಲ್ಲಿ ವೈದ್ಯರು ಇಲ್ಲದೇ ಇದ್ದರೆ ಅಲ್ಲಿರತಕ್ಕಂಥ ಆಸ್ಪತ್ರೆಗಳು ಏನೂ ಉಪಯೋಗಕ್ಕೆ ಬರುವುದಿಲ್ಲ. ಮತ್ತೆ ಜಾಗಗಳು ಇಲ್ಲವೆಂದು ಅವರು ಹೇಳಿದರು. ನನ್ನ ಕ್ಷೇತ್ರದಲ್ಲಿ ಈಗಾಗಲೇ 15 ಜಾಗಗಳನ್ನು ಕೊಟ್ಟಿದ್ದೇವೆ. ಇದು ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಸೇರಲಿಲ್ಲ. ಅಂದರೆ, ದಾದಿಯರ ಉಪ ಕೇಂದ್ರಗಳ ಪ್ರಾರಂಭ ಮಾಡತಕ್ಕಂಥದ್ದು ಇದರಲ್ಲಿ ಸೇರಿಲ್ಲ. ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಲ್ಲಿ ಇದರ ಅವಶ್ಯಕತೆ ಬಹಳ ಇದೆ. ಮಾನ್ಯ ಬಾಲ್‌ರಾಜ್‌ರವರು ಕೇವಲ ಕೊಳ್ಳೇಗಾಲಕ್ಕೆ ಅಲ್ಲ. ಆದರೆ ಇಡೀ ರಾಜ್ಯದಲ್ಲಿ ಈ ಒಂದು ಪರಿಸ್ಥಿತಿ ಇದೆ. ಈ ಪರಿಸ್ಥಿತಿಯನ್ನು ಆದಷ್ಟು ಬೇಗ ವ್ಯವಸ್ಥಿತಗೊಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಅರವಳಿಕೆ ತಜ್ಞರ ಕೊರತೆ ಇದೆ. ಖಾಸಗಿಯ ವೈದ್ಯರು ಆಪರೇಷನ್ ಸಂದರ್ಭದಲ್ಲಿ ನಮ್ಮ ಆಸ್ಪತ್ರೆಗಳಿಗೆ ಬಂದಾಗ ಅವರಿಗೆ 800 ರೂಪಾಯಿ ಕೊಡಬೇಕೆಂದು ಆದೇಶ ಕೂಡ ಮಾಡಿದ್ದೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : 800 ರೂಪಾಯಿ ಸಾಕಾಗುವುದಿಲ್ಲ. 1000 ರೂಪಾಯಿ–ಗಳಾದರೂ ಕೊಡುವಂತೆ ಆದೇಶ ಮಾಡಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ಮಧ್ಯದಲ್ಲಿ ನೀವು ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ನಮ್ಮ ಆಸ್ಪತ್ರೆಗಳಲ್ಲಿ ಕಳೆದ 5 ವರ್ಷಗಳಿಂದ ಸುಮಾರು 325 ಜನ ವೈದ್ಯರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಮಾರ್ಚ್ ಮೊದಲನೇ ವಾರದಲ್ಲಿ ಈ ಎಲ್ಲಾ ಗುತ್ತಿಗೆ ವೈದ್ಯರುಗಳನ್ನು ನೇಮಕ ಮಾಡುವುದಕ್ಕೆ ಈಗಾಗಲೇ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿಯಾಗಿ ಟೆಕ್ನಿಷಿಯನ್ಸ್, ಡ್ರೈವರ್ಸ್ ಎಕ್ಸ್‌ರೇ ಟೆಕ್ನಿಷಿಯನ್ಸ್ ಈ ರೀತಿಯಾಗಿ ಸುಮಾರು 1236 ಜನರು 5 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರುಗಳನ್ನೂ ಸಹ ಕನ್‌ಫರ್ಮ್ ಮಾಡುವುದಕ್ಕೆ ಈ ಮಾರ್ಚ್ ತಿಂಗಳೊಳಗಾಗಿ ಆದೇಶವನ್ನು ಹೊರಡಿಸುತ್ತಿದ್ದೇವೆ.

ಶ್ರೀ ಜಿ.ಎಸ್. ಗಡ್ಡದೇವರಮಠ್ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಈಗ ಆ ಪ್ರಶ್ನೆ ಮುಕ್ತಾಯವಾಗಿದೆ. ಒಂದು ಪ್ರಶ್ನೆಗೆ ಎಷ್ಟು ಹೊತ್ತು ಸಮಯ ಕೊಡುವುದು? ಮಾನ್ಯ ಆರೋಗ್ಯ ಸಚಿವರೆ, ಮಾನ್ಯ ಗಡ್ಡದೇವರಮಠ್‌ರವರು ಏನೋ ಹೇಳುತ್ತಿದ್ದಾರೆ ದಯವಿಟ್ಟು ಕೇಳಿ.

ಶ್ರೀ ಜಿ.ಎಸ್. ಗಡ್ಡದೇವರಮಠ್ : ಮಾನ್ಯ ಮಂತ್ರಿಗಳು ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೀರಿ. ಆದರೆ ಇದು ಏನಾಗಿದೆ ಎಂದರೆ ಕೇವಲ ನೆವಕ್ಕೆ ಮಾತ್ರ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಕೆಲಸ ಆಗುತ್ತಿದೆ. ಭರ್ತಿ ಮಾಡಿದಾಗ ಒಂದು ಕಡೆ ಪೋಸ್ಟ್ ತೋರಿಸುತ್ತಾರೆ. ಆದರೆ ಅವರು ಅಲ್ಲಿಗೆ ಬರದೆ ಬೇರೆ ಕಡೆಗೆ ಡೆಪ್ಯುಟೇಷನ್ ಮೇಲೆ ಹೊರಟು ಹೋಗುತ್ತಾರೆ. ನಿಮ್ಮ ಇಲಾಖೆಗೆ ಬಂದು ಅಧಿಕಾರಿಗಳನ್ನು ಕೇಳಿದರೆ ಅಲ್ಲಿ ಈಗಾಗಲೇ ಪೋಸ್ಟ್ ಭರ್ತಿಯಾಗಿದೆ ಎಂದು ನಮಗೆ ಉತ್ತರ ಹೇಳುತ್ತಾರೆ. ಆದರೆ ಅಲ್ಲಿ ಆ ಪೋಸ್ಟ್ ಖಾಲಿ ಇರುತ್ತದೆ. ವೈದ್ಯಾಧಿಕಾರಿಗಳು ಅಲ್ಲಿ ಇರುವುದೇ ಇಲ್ಲ. ಆದ್ದರಿಂದ ನಿಮ್ಮ ಆರೋಗ್ಯ ಇಲಾಖೆಯಿಂದ ಡೆಪ್ಯುಟೇಷನ್‌ನ್ನು ಪೂರ್ತಿಯಾಗಿ ತೆಗೆದರೆ ಒಳ್ಳೆಯದು ಆಗುತ್ತದೆಂಬುದು ನಮ್ಮ ಭಾವನೆ. ಏಕೆಂದರೆ ನನ್ನ ಕ್ಷೇತ್ರದೊಳಗಡೆ 4–6 ಮಂದಿ ಡಾಕ್ಟರ್‌ಗಳಿಗೆ ನೆವಕ್ಕೆ ಅಲ್ಲಿ ಹುದ್ದೆಯನ್ನು ತೋರಿಸಿದ್ದಾರೆ. ಅವರು ಡೆಪ್ಯುಟೇಷನ್ ಮೇಲೆ ಹೋಗಿ ಎಲ್ಲೆಲ್ಲೋ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲಿ ಇಲಾಖೆಯ ಅಧಿಕಾರಿಗಳನ್ನು ಬಂದು ಕೇಳಿದರೆ ನಿಮ್ಮಲ್ಲಿ ಯಾವ ಪೋಸ್ಟ್‌ಗಳೂ ವೇಕೆಂಟ್ ಇಲ್ಲ ಎಂದು ಹೇಳುತ್ತಾರೆ. ಇದೇನು ಅನಾಹುತ? ನಾವು ಯಾರನ್ನು ಕೇಳುವುದು?

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಇನ್ನೊಂದು ಸಣ್ಣ ವಿಷಯ, ಏಕೆಂದರೆ, ಆರೋಗ್ಯ ಇಲಾಖೆ.....

ಅಧ್ಯಕ್ಷರು : ಎಲ್ಲರೂ ಹೀಗೆ ಎದ್ದು ನಿಂತುಕೊಂಡು ಈ ರೀತಿ ಮಾತನಾಡಿದರೆ ಹೇಗೆ? ಅವರು ಕೊಳ್ಳೇಗಾಲಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. ನೀವೆಲ್ಲರೂ ಎದ್ದು ನಿಂತುಕೊಂಡು ಕೇಳಿದರೆ ಹೇಗೆ ಉತ್ತರವನ್ನು ಕೊಡುತ್ತಾರೆ? ಅದನ್ನು ಕ್ಲೋಸ್ ಮಾಡಿದ್ದೇನೆ. ಮಾನ್ಯ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್ ಖಾನ್ ಸದನದಲ್ಲಿ ಇಲ್ಲ. ಮಾನ್ಯ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾರವರೇ, ಪ್ರಶ್ನೆ ಕೇಳಿ.

ವಿಷಯ: ಬೀದರ್‌ನಲ್ಲಿರುವ ಪಶುವೈದ್ಯ ವಿಶ್ವವಿದ್ಯಾಲಯದ ಉಪ ಕುಲಪತಿಗಳ ಕಛೇರಿಯನ್ನು ಬೆಂಗಳೂರಿನಿಂದ ಬೀದರ್‌ಗೆ ಸ್ಥಳಾಂತರಿಸುವುದು.

42 (193) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) : ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್‌ನಲ್ಲಿ ಪಶುವೈದ್ಯ ವಿಶ್ವವಿದ್ಯಾಲಯಕ್ಕೆ ಎಂದು ಮಂಜೂರಾತಿ ನೀಡಲಾಯಿತು;

ಆ) ಇದಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಯಾವ ಯಾವ ಬಾಬ್ತುಗಳಿಗಾಗಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇ) ಪಶುವೈದ್ಯ ವಿಶ್ವವಿದ್ಯಾಲಯ ಸ್ಥಾಪನೆಯ ಸಂಬಂಧ ಇಲ್ಲಿಯವರೆವಿಗೆ ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರಗಳನ್ನು ಒದಗಿಸುವುದು)

ಈ) ಪಶುವೈದ್ಯ ವಿಶ್ವವಿದ್ಯಾಲಯಕ್ಕೆ ಇಲ್ಲಿಯವರೆವಿಗೆ ಯಾವ ಯಾವ ಸಿಬ್ಬಂದಿಯನ್ನು ಯಾವ ಮಾನದಂಡದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ;

ಉ) ಪಶುವೈದ್ಯ ವಿಶ್ವವಿದ್ಯಾಲಯವನ್ನು ಬೀದರ್‌ನಲ್ಲಿ ಸ್ಥಾಪಿಸುತ್ತಿದ್ದರೂ ಕುಲಪತಿಗಳ ಮುಖ್ಯ ಕಛೇರಿಯು ಮಾತ್ರ ಬೆಂಗಳೂರಿನಲ್ಲಿ ಇರುವುದು ನಿಜವೇ;

ಊ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಋ) ವಿಶ್ವವಿದ್ಯಾಲಯದ ಕುಲಪತಿಗಳು ಇಲ್ಲಿಯವರೆವಿಗೆ ಬೀದರ್‌ನಿಂದ ಬೆಂಗಳೂರಿಗೆ ಎಷ್ಟು ಬಾರಿ ಪ್ರಯಾಣ ಮಾಡಿದ್ದಾರೆ ಹಾಗೂ ಎಷ್ಟು ಟಿ.ಎ/ಡಿ.ಎ. ಪಡೆದುಕೊಂಡಿರುತ್ತಾರೆ?

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಹಾಗೂ ಪಶುಸಂಗೋಪನೆ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕರ್ನಾಟಕ ಕಾಯ್ದೆ ಸಂಖ್ಯೆ 9/2004 ದಿನಾಂಕ: 28–2–2004 ರಂದು ಅಸ್ತಿತ್ವಕ್ಕೆ ಬಂದಿದ್ದು ಕುಲಪತಿಗಳ ನೇಮಕಾತಿ ದಿನಾಂಕ: 1–9–2004 ರಂದು ಆಗಿದ್ದು ನೂತನ ವಿಶ್ವವಿದ್ಯಾಲಯವನ್ನು ದಿನಾಂಕ: 17–1–2005 ರಂದು ಉದ್ಘಾಟಿಸಲಾಗಿದೆ.

ಆ) ಸರ್ಕಾರದಿಂದ ಬಿಡುಗಡೆಯಾದ ಹಣ ಮತ್ತು ಖರ್ಚಾದ ವಿವರಗಳನ್ನು ಅನುಬಂಧ–1 (Annexure-1) ರಲ್ಲಿ ವಿವರಿಸಲಾಗಿದೆ.

ಇ) ಪಶುವೈದ್ಯ ವಿಶ್ವವಿದ್ಯಾಲಯದ ಸ್ಥಾಪನೆಯ ಸಂಬಂಧ ಇಲ್ಲಿಯವರೆವಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ;

- ಅ) ಪಶುವೈದ್ಯ ವಿಶ್ವವಿದ್ಯಾಲಯದ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯಾದ್ಯಂತ ಹರಡಿರುವುದರಿಂದ ಮುಖ್ಯ ಕಛೇರಿಯನ್ನು ಬೀದರ್‌ನಲ್ಲಿ ಸ್ಥಾಪಿಸಲಾಗಿದ್ದು, ಬೆಂಗಳೂರು ಮತ್ತು ಮಂಗಳೂರಿನಲ್ಲಿ ಪ್ರಾದೇಶಿಕ ಕಛೇರಿಗಳನ್ನು ಸ್ಥಾಪಿಸಲಾಗಿದೆ.
- ಆ) ಮುಖ್ಯವಾಗಿ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಧಾರವಾಡಗಳಿಂದ ಬರಬೇಕಾದ ಸ್ವತ್ತು ಮತ್ತು ಆಸ್ತಿ ವಿಭಜನೆ ಪ್ರಕ್ರಿಯೆ ನಡೆದಿದೆ.
- ಇ) ಈ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವಂತಹ ಫಾರಂಗಳ ವರ್ಗಾವಣೆ ನಡೆದಿದೆ.

ಈ) ಈ ಫಾರಂಗಳಲ್ಲಿ ಬರುವ ಸಿಬ್ಬಂದಿ ಮತ್ತು ಆಸ್ತಿ ವಿಭಜನೆ ಪ್ರಕ್ರಿಯೆ ನಡೆದಿದೆ.

ಉ) ಸರ್ಕಾರದಿಂದ ಬರಬೇಕಾದ 2005-06ರ ಯೋಜನೆ ಮತ್ತು ಯೋಜನೇತರ ಆಯವ್ಯಯದ ಬಿಡುಗಡೆ ಪ್ರಕ್ರಿಯೆ ನಡೆದಿದೆ.

ಊ) 2005ರ ವರ್ಷಕ್ಕೆ ಬಿ.ವಿ.ಎಸ್ಸಿ., ಬಿ.ಎಫ್.ಎಸ್ಸಿ ಮತ್ತು ಡೈರಿ ಟೆಕ್ನಾಲಜಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ.

ಎ) ಸ್ನಾತಕೋತ್ತರ ಪದವಿಗೂ ಸಹ 2005 ರಿಂದ ಆಯ್ಕೆ ಪ್ರಕ್ರಿಯೆ ನಡೆದಿದೆ.

ಏ) ಪ್ರತಿಯೊಂದು ವಿಶ್ವವಿದ್ಯಾಲಯದ ಫಾರಂಗಳಲ್ಲಿ ಕೈಗೊಂಡ ಕೆಲಸಗಳು:

1) ಬೀದರ್ ಕಾಲೇಜಿನ ದೇವಣಿ ಫಾರಂ ಅನ್ನು ಪೂರ್ಣ ಜೈವಿಕ ಗ್ರಾಮವನ್ನಾಗಿ ಪರಿವರ್ತಿಸಿ ಇಲ್ಲಿ ದೇವಣಿ ತಳಿಗಳ ಜೊತೆಗೆ ಉತ್ತಮ ತಳಿಗಳ ಸಂವರ್ಧನೆ, ಟರ್ಕಿ ಕೋಳಿ ಸಾಕಣೆ, ಎಮೋ ಪಕ್ಷಿ ಸಾಕಣೆ, ಕುರಿ ಸಾಕಣೆ, ಎರೆ ಹುಳು ಗೊಬ್ಬರ ತಯಾರಿಕೆ ಮತ್ತು ವಿವಿಧ ಹುಲ್ಲುಗಳ ಬೆಳೆ ತಾಟುತಳ ವೃದ್ಧಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2) ಹಾಗೆಯೇ ಹೆಸರಘಟ್ಟ ಫಾರಂನಲ್ಲಿ ಒಳನಾಡು ಮೀನು ಮತ್ತು ಸಿಗಡಿ ಮರಿಗಳ ಉತ್ಪಾದನೆ.

3) ನಾಗಮಂಗಲದ ಫಾರಂನಲ್ಲಿ ಕುರಿ ತಳಿ ಅಭಿವೃದ್ಧಿಗೆ ಒತ್ತುಕೊಟ್ಟು ಅದರ ಪ್ರಕ್ರಿಯೆ ನಡೆಸಲಾಗುತ್ತಿದೆ.

4) ತುಮಕೂರಿನ ಕೋನೆಹಳ್ಳಿ ಫಾರಂನಲ್ಲಿ ಅಮೃತಮಹಲ್ ಮತ್ತು ಹಳ್ಳಿಕಾರ್ ನಂತಹ ಉತ್ತಮ ತಳಿಗಳ ಸಂರಕ್ಷಣೆ, ವಿವಿಧ ಹುಲ್ಲುಗಳ ಪ್ರಾತ್ಯಕ್ಷತೆ.

5) ಮಂಗಳೂರು ಮತ್ಸ್ಯ ವಿಜ್ಞಾನ ಕಾಲೇಜಿನ ಆವರಣದಲ್ಲಿ ಒಳನಾಡು ಮೀನು ಸಾಕಣೆ ಕಾರ್ಯಕ್ರಮ ಮತ್ತು

6) ಕಾರವಾರದ ಅಂಕೋಲ ಫಾರಂನಲ್ಲಿ ಸಮುದ್ರದ ಸಿಗಡಿ ಮತ್ತು ಮೀನು ಮರಿಗಳ ಉತ್ಪಾದನಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಐ) ಬೀದರ್ ಮುಖ್ಯ ಕಚೇರಿ ಸ್ಥಾಪನೆಗೆ ಜಮೀನು ಕಡಿಮೆ ಇದ್ದು ಆವರಣದ ಪಕ್ಕದಲ್ಲಿರುವ ಜಮೀನನ್ನು ಖರೀದಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ.

ಒ) ಬೀದರ್ ಕಚೇರಿಯ ಆವರಣದಲ್ಲಿ ಅತಿಥಿ ಗೃಹ ವಿಸ್ತರಣಾ ಕೆಲಸ ಮುಂದುವರೆದಿದೆ.

ಓ) ಬೀದರ್‌ನಲ್ಲಿ ವಿದ್ಯಾರ್ಥಿನಿಯರ ವಸತಿ ಗೃಹ ಸ್ಥಾಪನೆಗೆ ಕೆಲಸ ಮುಂದುವರೆದಿದೆ.

ಔ) ಮುಖ್ಯ ಆಡಳಿತ ಭವನದ ಗಣಕೀಕರಣ, ವಿದ್ಯುತ್ ಸ್ಥಾಪನೆ ಮುಂತಾದ ಕೆಲಸಗಳ ಪೂರೈಕೆಯಾಗಿದೆ.

ಅಂ) ಬೀದರ್‌ನಲ್ಲಿ ಮುಖ್ಯ ಕಚೇರಿ ಮತ್ತು ಎಲ್ಲ ಆವರಣಗಳನ್ನು ಹೆಚ್.ಟಿ. ವಿದ್ಯುತ್ ಅಳವಡಿಸುವಿಕೆ ಕಾರ್ಯಕ್ರಮ ಮುಂದುವರೆದಿದೆ.

ಅಃ) ಮಂಗಳೂರಿನಲ್ಲಿ ಕಾಲೇಜು ಆವರಣದಲ್ಲಿ ನೀರು ಸೋರುವಿಕೆ ತಡೆ ಗಟ್ಟುವಿಕೆ ಮತ್ತು ಕಾಲೇಜು ಮತ್ತು ಶೈಕ್ಷಣಿಕಾ ಗೃಹದ ವಿಸ್ತರಣಾ ಕಾರ್ಯಕ್ರಮ ಮುಂದುವರೆದಿದೆ.

ಕ) ಹೆಬ್ಬಾಳದ ಪಶುವೈದ್ಯ ಮತ್ತು ಹೈನುಗಾರಿಕಾ ಕಾಲೇಜುಗಳ ಕಟ್ಟಡಗಳ ದುರಸ್ತಿ ಕಾರ್ಯಕ್ರಮ ಹಾಗೂ ಹೆಬ್ಬಾಳದ ವಸತಿ ಗೃಹದ ವಿಸ್ತರಣಾ ಕಾರ್ಯಕ್ರಮಗಳ ಟೆಂಡರ್ ಕರೆಯಲಾಗಿದೆ.

ಈ) ಪಶುವೈದ್ಯ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ಕೊರತೆ ಇದ್ದು, ಈ ವಿಶ್ವವಿದ್ಯಾಲಯದಲ್ಲಿ ಅರ್ಧ ಭಾಗದಷ್ಟು ಶಿಕ್ಷಕರು ಮಾತ್ರ ಇದ್ದು ಇವರುಗಳ ನೇಮಕಾತಿಯ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಪಶುವೈದ್ಯ ವಿಶ್ವವಿದ್ಯಾಲಯದಲ್ಲಿ 100 ಬೋಧಕ ಮತ್ತು 110 ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ತುಂಬಬೇಕಾಗಿರುವುದರಿಂದ ಇವರ ನೇಮಕಾತಿಗೆ ಸಂಬಂಧಪಟ್ಟ ಪ್ರಸ್ತಾವನೆಯು, ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲನೆಯಲ್ಲಿದೆ.

ಇಲ್ಲಿಯುವರೆಗೆ ಕೇವಲ ಬೀದರ್‌ನ ಮುಖ್ಯ ಕಛೇರಿಯಲ್ಲಿ ಮಾತ್ರ ಕೆಲವು ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣವಾಗಿ ತಾತ್ಕಾಲಿಕ ನೇಮಕಾತಿಯಾಗಿರುತ್ತದೆ.

ಉ) ಕರ್ನಾಟಕ ಪಶುವೈದ್ಯ, ಪಶು ಹಾಗೂ ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಕಛೇರಿಯು ಬೀದರ್‌ನಲ್ಲಿ ಸ್ಥಾಪಿಸಲಾಗಿದೆ. ಈ ವಿಶ್ವವಿದ್ಯಾಲಯದ ವ್ಯಾಪ್ತಿಯು ಇಡೀ ರಾಜ್ಯಕ್ಕೆ ಸೀಮಿತವಾಗಿರುವುದರಿಂದ ಪ್ರತಿಯೊಂದು ಹಣಕಾಸಿನ ಮತ್ತು ಇತರೆ ಸರ್ಕಾರದ ಅನುಮತಿ ಬೇಕಾಗಿರುವ ಕಾರಣ ಮತ್ತು ಇತರೆ ಎಲ್ಲ ಕೆಲಸಗಳಿಗಾಗಿ ಹಾಗೂ ಸಭೆಗಳಲ್ಲಿ ಪಾಲ್ಗೊಳ್ಳಲು ವಿಶ್ವವಿದ್ಯಾಲಯದ ಕುಲಪತಿಗಳು ಬೆಂಗಳೂರಿಗೆ ಬರಬೇಕಾಗಿರುತ್ತದೆ. ಆದುದರಿಂದ ಬೆಂಗಳೂರು ಮತ್ತು ಮಂಗಳೂರು ಕಾಲೇಜು ನೌಕರರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎರಡು ಸ್ಥಳಗಳಲ್ಲಿ ಪ್ರಾದೇಶಿಕ ಕಛೇರಿಗಳನ್ನು ಸರ್ಕಾರದ ಅನುಮತಿಯೊಡನೆ ಸ್ಥಾಪಿಸಿದ್ದು ಅಲ್ಲಿಯೂ ಕುಲಪತಿಗಳ ಭೇಟಿ ಅವಶ್ಯಕವಿರುತ್ತದೆ.

ಊ) ಅನ್ವಯಿಸುವುದಿಲ್ಲ.

ಋ) ಕುಲಪತಿಗಳು ಬೀದರ್‌ನಿಂದ ಬೆಂಗಳೂರಿಗೆ 20 ಭಾರಿ ಪ್ರಯಾಣ ಮಾಡಿರುತ್ತಾರೆ.

ಕುಲಪತಿಗಳು ವಿಶ್ವವಿದ್ಯಾಲಯದ ಆಡಳಿತಾತ್ಮಕ ಕೆಲಸ ಕಾರ್ಯಗಳಿಗೆ ಸರ್ಕಾರದ ಅನುಮತಿ ಪಡೆಯಬೇಕಾಗಿರುವುದರಿಂದ, ಸಭೆಗಳಲ್ಲಿ, ಸಮ್ಮೇಳನ/ ತಾಂತ್ರಿಕ ಉಪನ್ಯಾಸಗಳಲ್ಲಿ ಪಾಲ್ಗೊಳ್ಳಲು ಮತ್ತು ಇತರೆ ಕಾರ್ಯ ನಿಮಿತ್ತದ ಮೇಲೆ ಕುಲಾಧಿಪತಿಗಳ ಪೂರ್ವಾನುಮತಿ ಪಡೆದು ಬೀದರ್‌ನಿಂದ ಬೆಂಗಳೂರು ಮತ್ತು ಇತರೆ ಸ್ಥಳಗಳಿಗೆ ಭೇಟಿ ನೀಡುತ್ತಾರೆ.

ಕುಲಪತಿಗಳು 2005–06ನೇ ಸಾಲಿನಲ್ಲಿ ಒಟ್ಟು ರೂ. 98,367.00/–ಗಳ ಟಿ.ಎ./ಡಿ.ಎ. ಪಡೆದುಕೊಂಡಿರುತ್ತಾರೆ.

ANNEXURE-1

THE DETAILS OF GRANT RELEASED AND EXPENDITURE MADE DURING 2005-06

Non Plan	Plan
1,352.76 Lakhs	500.00 Lakhs

Expenditure incurred upto 16th March 2006.

Sl. No.	Expenditure	Non-Plan	Plan
1	2	3	4
1.	Salary	93,903,456.00	-
2.	Contingency & N.R.C.	19,014,574.00	12,801,675.00
3.	Travelling Allowance	714,729.00	-
4.	Medical Allowance	425,102.00	-
5.	Works	209,871.00	7,419,294.00
	Total	**114,267,732.00**	**20,220,969.00**

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪಶುವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ 100 ಬೋಧಕರ, 110 ಬೋಧಕೇತರ ಸಿಬ್ಬಂದಿ ಹುದ್ದೆ ಬೀದರ್ ಜಿಲ್ಲೆಯಲ್ಲಿ ಭರ್ತಿ ಮಾಡಬೇಕಾಗಿದೆ. ಈಗಾಗಲೇ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಸಮಾಲೋಚನೆಯೊಂದಿಗೆ ಪರಿಶೀಲಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. 100 ಟೀಚಿಂಗ್ 110 ನಾನ್ ಟೀಚಿಂಗ್ ಪೋಸ್ಟ್‌ಗಳನ್ನು ಯಾವಾಗ ಭರ್ತಿ ಮಾಡುತ್ತೀರೆಂಬುದನ್ನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ.

ಡಾ:ಎ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಪಶುವಿಶ್ವವಿದ್ಯಾನಿಲಯ ಪ್ರಾರಂಭವಾಗಿ ಸುಮಾರು 1 ವರ್ಷ 2 ತಿಂಗಳು ಆಗಿದೆ. ಅಲ್ಲಿಯವರೆವಿಗೆ ನಮ್ಮದು ಕೃಷಿ ವಿಶ್ವವಿದ್ಯಾನಿಲಯಗಳು ಎರಡು ಇದ್ದು, ಅಲ್ಲಿಂದ ಬರಬೇಕಾದಂತಹ ಸಿಬ್ಬಂದಿಗಳು ಇದ್ದಾರೆ. 100 ಬೋಧಕ ಹಾಗೂ 110 ಬೋಧಕೇತರ ಸಿಬ್ಬಂದಿಗಳ ನೇಮಕದ ಬಗ್ಗೆ ಆರ್ಥಿಕ ಇಲಾಖೆ ಜೊತೆ ಸಮಾಲೋಚನೆಯಲ್ಲಿದ್ದೇವೆ. ಅತೀ ಶೀಘ್ರದಲ್ಲಿಯೇ ನೇಮಕ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದಂತಹ ವಿಚಾರವಾಗಿದೆ. ಪಶುವೈದ್ಯಕೀಯ ಕುಲಪತಿಗಳು ಬೆಂಗಳೂರಿನಲ್ಲಿರುತ್ತಾರೆ. ಬೆಂಗಳೂರಿನಲ್ಲಿರುವ ಕುಲಪತಿಗಳು ಅಲ್ಲಿ ಓಡಾಡುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ವಿಶ್ವವಿದ್ಯಾನಿಲಯ ಇರುವುದು ಬೀದರ್, ಕುಲಪತಿ ಇರುವುದು ಬೆಂಗಳೂರಿನಲ್ಲಿ ! ಇದು ಯಾವ ನೀತಿ? ಏನಾದರೂ ಮಾಡಿ ಬೀದರ್‌ನಲ್ಲಿ ಇರುವ ಹಾಗೆ ವ್ಯವಸ್ಥೆಯನ್ನು ಮಾಡುತ್ತೀರಾ?

ಡಾ: ಎ.ಎಸ್. ಆಚಾರ್ಯ : ಪಶು ವೈದ್ಯಕೀಯಾ, ಮೀನುಗಾರಿಕಾ ವಿಶ್ವವಿದ್ಯಾನಿಲಯ ಕೇಂದ್ರ ಕಛೇರಿ ಬೀದರ್‌ನಲ್ಲಿದೆ. ನಮ್ಮಲ್ಲಿ 2 ವೆಟರ್ನರಿ ಸೈನ್ಸ್ ಕಾಲೇಜುಗಳು ಇವೆ. ಒಂದು ಡೈರಿ

ಸೈನ್ಸ್ ಕಾಲೇಜ್ ಮೀನುಗಾರಿಕಾ ವಿಜ್ಞಾನ ಕಾಲೇಜು ಮಂಗಳೂರಿನಲ್ಲಿದೆ. ಹಾಗಾಗಿ ವಿಶ್ವವಿದ್ಯಾನಿಲಯದಲ್ಲಿ ಪ್ರಮುಖವಾಗಿರುವಂತಹ ಸಂಸ್ಥೆಗಳು ಬೀದರ್, ಬೆಂಗಳೂರು ಹಾಗೂ ಮಂಗಳೂರಿನಲ್ಲಿದೆ. ಕುಲಪತಿಗಳು ಈ ಮೂರು ಕಡೆಗೆ ಹೋಗಬೇಕಾಗಿರುತ್ತದೆ. ಬೀದರ್‌ನಿಂದ ಬೆಂಗಳೂರಿಗೆ ಬಂದು ಮಂಗಳೂರಿಗೆ ಹೋಗಬೇಕಾಗುತ್ತದೆ. ಸುಮಾರು ಅವರು 20 ಸಲ ಆ ಕಡೆಯಿಂದ ಈ ಕಡೆಗೆ ಬರಬೇಕಾಗುತ್ತದೆ. ಬಂದಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅಲ್ಲಿ ವಿಶ್ವವಿದ್ಯಾನಿಲಯ ಒಂದೇ ಇರುವುದು, ಅಲ್ಲಿ ಕುಲಪತಿಗಳನ್ನು ತಾವು ನೇಮಿಸಿಯೇ ಇಲ್ಲ.

ಡಾ: ವಿ.ಎಸ್. ಆಚಾರ್ಯ : ನೇಮಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮತ್ತೆ ಏತಕ್ಕಾಗಿ ಅವರು ಅಲ್ಲಿಯೇ ಇರಬಾರದು? ವಿಶ್ವವಿದ್ಯಾನಿಲಯದ ಕುಲಪತಿಗಳು ಹೆಡ್‌ಕ್ವಾರ್ಟರ್ ಎಲ್ಲಿ ಇರುತ್ತದೆಯೋ ಅಲ್ಲಿ ಇರುವುದು ಅದು ಸತ್ಯವು ಹೌದು, ಧರ್ಮವು ಹೌದು.

ಡಾ: ವಿ.ಎಸ್. ಆಚಾರ್ಯ : ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಉಪಕುಲಪತಿಗಳ ಕಾರ್ಯ ಸ್ಥಾನ ಬೀದರ್‌ನಲ್ಲಿಯೇ ಇದೆ. ಅವರು ಅವರ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ಬೆಂಗಳೂರು, ಮಂಗಳೂರು ಸಂಬಂಧಪಟ್ಟಂತಹ ಕಾಲೇಜುಗಳಿಗೆ ಸಂಸ್ಥೆಗಳಿಗೆ ಹೋಗಬೇಕಾಗಿರುತ್ತದೆ. ಅದಕ್ಕಾಗಿ ಅವರು ಬಂದು ಹೋಗುತ್ತಿರುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ವಿಶ್ವವಿದ್ಯಾನಿಲಯ ಇರುವುದು ಬೀದರ್‌ನಲ್ಲಿ, ಕುಲಪತಿಗಳು ಇರುವುದು ಬೆಂಗಳೂರಿನಲ್ಲಿ ! ಬೀದರ್‌ನಲ್ಲಿ ವಿಶ್ವವಿದ್ಯಾನಿಲಯವನ್ನು ಏತಕ್ಕಾಗಿ ಮಾಡಿದ್ದೀರಿ? ಅದನ್ನು ಬೆಂಗಳೂರಿನಲ್ಲಿಟ್ಟುಕೊಂಡು ಬಿಡಿ. ಅಲ್ಲಿ ಮಾಡಿರುವ ಉದ್ದೇಶವೇನು? ದಯವಿಟ್ಟು ಕುಲಪತಿಗಳು ಅಲ್ಲಿರುವ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಖಂಡಿತವಾಗಿಯೂ ತಾವು ಹೇಳಬೇಕಾಗುತ್ತದೆ. ಅವರು ಬೀದರ್‌ನಲ್ಲಿಯೇ ಇರಬೇಕು.

ಡಾ: ವಿ.ಎಸ್. ಆಚಾರ್ಯ : ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಎಸ್.ಎಸ್. ಪಾಟೀಲ್‌ರವರೇ ನಿಮ್ಮ ಪ್ರಶ್ನೆ ಸಂಖ್ಯೆ: 43 (15) ಇದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಒಂದು ತಿಂಗಳ ಕಾಲಾವಕಾಶವನ್ನು ಕೋರಿರುತ್ತಾರೆ. ಈಗ ಸಭೆಯು ಒಂದು ತಿಂಗಳ ಕಾಲ ಇರುವುದಿಲ್ಲ. ಈ ಸಭೆಯು ಮುಕ್ತಾಯವಾಗುವುದರೊಳಗಡೆ ಅವರಿಗೆ ಉತ್ತರವನ್ನು ತರಿಸಿಕೊಡುವುದು ಆರೋಗ್ಯ ಸಚಿವರ ಕರ್ತವ್ಯವಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಆ ಪ್ರಶ್ನೆ ಏನು ಇದೆ ಅದನ್ನು ಕೇಳಿ. ರಾಜ್ಯದಲ್ಲಿ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೊರತೆ ಇರುವ ಹುದ್ದೆಗಳೆಷ್ಟು? ಎಲ್ಲಾ ಐ.ಟಿ./ಬಿ.ಟಿ. ಮತ್ತು ಕಂಪ್ಯೂಟರೈಸ್ಡ್ ಮಾಡಿಕೊಂಡಿದ್ದೀರಿ, ನಿಮ್ಮ ಅಧಿಕಾರಿಗಳು ಎಲ್ಲವನ್ನೂ ಮಾಡಿಕೊಂಡಿದ್ದಾರೆ. ಮುಂಡರಗಿ ತಾಲ್ಲೂಕಿನಲ್ಲಿ ಕೊರತೆ ಇರುವ ಹುದ್ದೆಗಳೆಷ್ಟು? ಅದಕ್ಕೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದಕ್ಕೆ ಏತಕ್ಕಾಗಿ ಒಂದು ತಿಂಗಳು ಸಮಯ ಬೇಕು? ನಿಮ್ಮ ಅಧಿಕಾರಿಗಳಿಗೆ ಎಷ್ಟು ಬೇಜವಾಬ್ದಾರಿ ಇದೆ.

ಶ್ರೀ ಆರ್. ಅಶೋಕ್ : ಮಾನ್ಯ ಸದಸ್ಯರು 175 ತಾಲ್ಲೂಕುಗಳ ಬಗ್ಗೆ ಮಾಹಿತಿ ಕೇಳಿದ್ದಾರೆ. ಅದಕ್ಕೆ ಸಮಯ ಬೇಕಾಗುತ್ತದೆ. ಅವರು ತಾಲ್ಲೂಕುವೈಸ್ ವಿವರ ಕೇಳಿದ್ದಾರೆ.

ಅಧ್ಯಕ್ಷರು : ಈ ಸದನ ಮುಕ್ತಾಯವಾಗುವುದರೊಳಗಡೆ ಅದಕ್ಕೆ ಉತ್ತರವನ್ನು ತರಿಸಿಕೊಡುವುದು ನಿಮ್ಮ ಜವಾಬ್ದಾರಿಯಾಗಿರುತ್ತದೆ.

ವಿಷಯ: ಬೀಳಗಿ ಮತ ಕ್ಷೇತ್ರದಲ್ಲಿ ವಸತಿ ನಿಲಯಗಳ ಮಂಜೂರಾತಿ.

44 (54) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ (ಜಮಖಂಡಿ ತಾಲ್ಲೂಕು ಸೇರಿ) ಬರುವ ಮೆಟ್ರಿಕ್ ಪೂರ್ವ ಹಾಗೂ ನಂತರದ ವಸತಿನಿಲಯಗಳ ಸಂಖ್ಯೆ ಎಷ್ಟು;

ಆ) ಈ ಕ್ಷೇತ್ರದಲ್ಲಿ ವಸತಿನಿಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ವರ್ಷ ಎಷ್ಟು ವಸತಿ ನಿಲಯಗಳಿಗೆ ಮಂಜೂರಾತಿ ನೀಡಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ)

ಕ್ರಮ ಸಂಖ್ಯೆ	ಇಲಾಖೆ	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು
1	2	3	4
1)	ಪರಿಶಿಷ್ಟ ಜಾತಿ	05	–
2)	ಪರಿಶಿಷ್ಟ ವರ್ಗಗಳು	01	ಇಲ್ಲ
3)	ಹಿಂದುಳಿದ ವರ್ಗಗಳು	04	ಇಲ್ಲ

ಆ) ಹೌದು.

ಇ) 2006–07ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದರಲ್ಲಿ ಪರಿಶಿಷ್ಟ ಜಾತಿಗಳಿಗಾಗಿ 50 ವಿದ್ಯಾರ್ಥಿನಿಲಯಗಳನ್ನು ಪರಿಶಿಷ್ಟ ಪಂಗಡಗಳಿಗಾಗಿ 10 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಡಾ: ಡಿ.ಎಂ. ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಲಾಗಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕಾಗಿ ಪ್ರಸ್ತುತ ಸಾಲಿನ ಆಯವ್ಯಯದಲ್ಲಿ 42.84 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ : ಮಾನ್ಯ ಅಧ್ಯಕ್ಷರೆ, ಬೀಳಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಹಾಸ್ಟಲ್‌ಗಳ ಸಂಖ್ಯೆ, ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಬಹಳ ಕಡಿಮೆ ಇದೆ. ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಇಡೀ ಮತಕ್ಷೇತ್ರದಲ್ಲಿ ಒಂದು ಇಲ್ಲದೇ ಇರುವುದರಿಂದ ಅಲ್ಲಿರುವಂತಹ ವಿದ್ಯಾರ್ಥಿ–ವಿದ್ಯಾರ್ಥಿನಿಯರುಗಳಿಗೆ ಬಹಳ ಕಷ್ಟವಾಗುತ್ತಿರುವುದರಿಂದ ಅಲ್ಲಿ ಕನಿಷ್ಠ ಪರಿಶಿಷ್ಟ ಜಾತಿಯವರಿಗೆ –2, ಪರಿಶಿಷ್ಟ ವರ್ಗದವರಿಗೆ –02, ಹಿಂದುಳಿದ ವರ್ಗದವರಿಗೆ –2 ವಿದ್ಯಾರ್ಥಿನಿಲಯುಗಳನ್ನು ಸಾಧ್ಯವಾದಷ್ಟು ಬೇಗನೆ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಈಗಾಗಲೇ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಪರಿಶಿಷ್ಟ ಜಾತಿಗೆ 5, ಪರಿಶಿಷ್ಟ ವರ್ಗಕ್ಕೆ 1, ಹಿಂದುಳಿದ ವರ್ಗಕ್ಕೆ 4 ಇರುತ್ತದೆ. ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಯಾವುದು ಇರುವುದಿಲ್ಲ. ಈಗಾಗಲೇ ತಮ್ಮ ಮುಖಾಂತರ ಎಲ್ಲಾ ಸದಸ್ಯರುಗಳಿಗೆ ಈ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ. ಏಕೆಂದರೆ, ಈ ಪ್ರಶ್ನೆ ಪ್ರತಿ ಸಲ ಸದನದಲ್ಲಿ ಬರುವುದರಿಂದ ಒಂದೇ ಸಲ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ. 2006–07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಗೆ 50 ಹಾಸ್ಟಲ್, ಪರಿಶಿಷ್ಟ ವರ್ಗಕ್ಕೆ 10 ಹಾಸ್ಟಲ್, ಹಿಂದುಳಿದ ವರ್ಗಕ್ಕೆ 50 ಹಾಸ್ಟಲ್ 110 ಹಾಸ್ಟಲ್‌ಗಳು ಸ್ಯಾಂಕ್ಷನ್ಡ್ ಆಗಿರುತ್ತದೆ. ಅದರಂತೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಪರಿಶಿಷ್ಟ ಜಾತಿ 20, ಪರಿಶಿಷ್ಟ ವರ್ಗ–5, ಹಿಂದುಳಿದ ವರ್ಗ–20 ಒಟ್ಟು 45 ಮೊರಾರ್ಜಿ ದೇಸಾಯಿ ಶಾಲೆಗಳು ಪ್ರಾರಂಭವಾಗಿರುತ್ತವೆ. ಆದರೆ ನಾವು ಡಾ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಈ ರಾಜ್ಯದಲ್ಲಿ ಅತೀ ಹಿಂದುಳಿದ ತಾಲ್ಲೂಕುಗಳಾದ 39 ತಾಲ್ಲೂಕುಗಳನ್ನು ಅದನ್ನು ಗಣನೆಯಲ್ಲಿ ಇಟ್ಟುಕೊಂಡು ನಾವು ಈ ಹಾಸ್ಟಲ್‌ಗಳಿಗೆ ಸ್ಯಾಂಕ್ಷನ್ಡ್ ಕೊಡುತ್ತೇವೆ. ಈಗಾಗಲೇ 30 ಹಿಂದುಳಿದ ತಾಲ್ಲೂಕಿನಲ್ಲಿ ಮೊರಾರ್ಜಿ ದೇಸಾಯಿ ಹಾಸ್ಟಲ್‌ಗಳಿಗೆ ಸ್ಯಾಂಕ್ಷನ್ಡ್ ಕೊಡುತ್ತೇವೆ. ಬೀಳಗಿ ತಾಲ್ಲೂಕು ಅತಿ ಹಿಂದುಳಿದ ತಾಲ್ಲೂಕಿಗೆ ಬರುತ್ತದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ತಮ್ಮ ಮುಖಾಂತರ ಈ ವಿಷಯ ಮಾನ್ಯ ಸದಸ್ಯರುಗಳಿಗೆ ತಿಳಿಸಬಯಸುತ್ತೇವೆ.

ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ : ರಾಜ್ಯದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿಯರ ಹಾಸ್ಟಲ್‌ಗಳನ್ನು ಎಷ್ಟು ಮಾಡುತ್ತೇನೆಂಬುದರ ಬಗ್ಗೆ ತಿಳಿಸಿದ್ದಾರೆ ಬಹಳ ಸಂತೋಷ. ಆದರೆ ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ಮೆಟ್ರಿಕ್ ನಂತರ ಮತ್ತು ಮೆಟ್ರಿಕ್ ಪೂರ್ವ 2006–07ನೇ ಸಾಲಿನಲ್ಲಿ ಎಷ್ಟು ಹಾಸ್ಟಲ್‌ಗಳನ್ನು ಕೊಡುತ್ತೀರೆನ್ನುವುದರ ಬಗ್ಗೆ ತಿಳಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ರಾಜ್ಯದಲ್ಲಿ 39 ಅತಿ ಹಿಂದುಳಿದ ತಾಲ್ಲೂಕು ಇರುವುದರಿಂದ ಅವುಗಳನ್ನು ಮೊದಲು ಗಣನೆಗೆ ತೆಗೆದುಕೊಂಡು, ನಂತರ ಉಳಿದ ತಾಲ್ಲೂಕುಗಳಿಗೆ ಅದನ್ನು ಮಂಜೂರು ಮಾಡುತ್ತೇವೆ. ಏಕೆಂದರೆ ಯಾವ ಕ್ಷೇತ್ರಕ್ಕೆ ಯಾವ ತಾಲ್ಲೂಕಿಗೆ ಎಷ್ಟು ಹಾಸ್ಟಲ್‌ಗಳನ್ನು ಕೊಡುವುದಕ್ಕಾಗುತ್ತದೆ. ಎಷ್ಟು ಮೊರಾರ್ಜಿ ದೇಸಾಯಿ ಸ್ಕೂಲ್ ಕೊಡುವುದಕ್ಕಾಗುತ್ತದೆ. ಈಗ ಅದನ್ನು ತಿಳಿಸುವುದಕ್ಕೆ ನನಗೆ ಆಗುವುದಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿ ಅಲ್ಲಿ ಎಸ್‌ಸಿ ಮತ್ತು ಎಸ್‌ಟಿ ಜನಾಂಗದವರು ಇದ್ದಾರೆ. ಅಲ್ಲಿ ಎಸ್‌ಸಿ ಹಾಸ್ಟಲ್‌ಗಳನ್ನು ಕೊಡಬೇಕು ಎಲ್ಲಿ ಎಸ್‌ಟಿ ಜನಾಂಗದವರು ಇದ್ದಾರೆ ಅಲ್ಲಿ ಎಸ್‌ಟಿ ಹಾಸ್ಟಲ್‌ಗಳನ್ನು ಕೊಡಬೇಕು. ಹಾಗೂ ಹಿಂದುಳಿದ ವರ್ಗದವರು ಇದ್ದಲ್ಲಿ ಅಲ್ಲಿ ಹಿಂದುಳಿದ ವರ್ಗದವರ ಹಾಸ್ಟಲ್‌ಗಳನ್ನು ಕೊಡಬೇಕು ಎಂಬುದರ ಬಗ್ಗೆ ಸಂಬಂಧಪಟ್ಟ ಎಲ್ಲಾ ಶಾಸಕರುಗಳ ಜೊತೆಯಲ್ಲಿ ಚರ್ಚೆ ಮಾಡಿ, ಈ ಸದನ ಮುಗಿದ ನಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಏನು ಹೊಸದಾಗಿ ವಿದ್ಯಾರ್ಥಿನಿಲಯಗಳ ಬಗ್ಗೆ ಹೇಳಿದ್ದಾರೆ. ಅದು ಅತಿ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಮಾತ್ರ

ಆಗುತ್ತದೆ. ಆದರೆ ಕೆಲವೊಂದು ತಾಲ್ಲೂಕುಗಳಲ್ಲಿ ಏನಾಗಿದೆ ಎಂದರೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆ. ವಿದ್ಯಾರ್ಥಿನಿಲಯಗಳು ಇದ್ದರೂ ಕೂಡ ಅಲ್ಲಿ 50–75 ಇದೆ. ಮಾನ್ಯ ಸಚಿವರು ಏನು ಮೊರಾರ್ಜಿ ದೇಸಾಯಿ ವಸತಿ ಶಾಲೆ 45 ರಲ್ಲೂ ಹಿಂದುಳಿದ ವರ್ಗದವರಿಗೆ ಶೇಕಡ 50 ಮತ್ತೆ ಪರಿಶಿಷ್ಟ ಜಾತಿಯವರಿಗೆ ಶೇಕಡ 50, ಪರಿಶಿಷ್ಟ ಪಂಗಡದವರಿಗೆ ಶೇಕಡ 20 ಎಂದು ಹೇಳಿದ್ದಾರೆ. ಇದರ ಜೊತೆಗೆ ಏನು ಹಾಲಿ ಬೇರೆ ಬೇರೆ ಕ್ಷೇತ್ರದಲ್ಲಿ ಬೇರೆ ಬೇರೆ ತಾಲ್ಲುಕುಗಳಲ್ಲಿ ವಿದ್ಯಾರ್ಥಿನಿಲಯಗಳು ಇದೆ. ಅಲ್ಲಿ ಮಕ್ಕಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳಿ ತಮ್ಮ ಪರವಾಗಿ ಮಾನ್ಯ ಸಚಿವರನ್ನು ಕೋರುತ್ತೇನೆ.

ವಿಷಯ: ಅಫಜಲ್‌ಪುರ ತಾಲ್ಲೂಕಿನಲ್ಲಿ ಅರ್ಧಕ್ಕೆ ಸ್ಥಗಿತಗೊಂಡ ಗಂಗಾ ಅಫಜಲ್‌ಪುರ ತಾಲ್ಲೂಕಿನ ಕಲ್ಯಾಣ ಯೋಜನೆ ಪೂರ್ಣಗೊಳಿಸುವುದು.

45 (202) ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಪಂಗಡದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಮಂಜೂರಾದ ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗಳನ್ನು ಪೂರ್ಣಗೊಳಿಸದಿರಲು ಕಾರಣವೇನು;

ಇ) ಫಲಾನುಭವಿಗಳು ಈ ಯೋಜನೆಯ ಅಡಿಯಲ್ಲಿ ಲಾಭವನ್ನು ಯಾವ ಪ್ರಮಾಣದಲ್ಲಿ ಪಡೆದಿದ್ದಾರೆ?

ಶ್ರೀ ಬಾಲಚಂದ್ರ ಎಲ್. ಜಾರಕಿಹೋಳಿ (ಸಮಾಜ ಕಲ್ಯಾಣ ಸಚಿವರು)

ಅ) ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಸಾಮೂಹಿಕ ನೀರಾವರಿ ಯೋಜನೆಯ ಏತ ನೀರಾವರಿ ಸೇರಿ 39 ಘಟಕಗಳಲ್ಲಿ 123 ಫಲಾನುಭವಿಗಳು ಹಾಗೂ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ 14 ಫಲಾನುಭವಿಗಳು ಸೇರಿ ಒಟ್ಟು 137 ಫಲಾನುಭವಿಗಳಿಗೆ ಮಂಜೂರಾಗಿರುತ್ತದೆ. ಹಿಂದುಳಿದ ವರ್ಗಗಳ ಫಲಾನುಭವಿಗಳ ಸಂಖ್ಯೆ 137 ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು 6 ಒಟ್ಟು 143 ಫಲಾನುಭವಿಗಳು.

ಆ) ಗಂಗಾ ಕಲ್ಯಾಣ ವೈಯಕ್ತಿಕ ಯೋಜನೆಯ ನಿಯಮದನ್ವಯ ವಿದ್ಯುತ್ ಠೇವಣಿ ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕಾಗುವುದು ಕೆ.ಪಿ.ಟಿ.ಸಿ.ಎಲ್. ರವರು ಇತ್ತೀಚೆಗೆ ಹೊರಡಿಸಿರುವ ಸ್ಪಷ್ಟೀಕರಣದ ಪ್ರಕಾರ ವೈಯಕ್ತಿಕ ಯೋಜನೆಯ ಫಲಾನುಭವಿಗಳು ವಾರ್ಷಿಕ ಕನಿಷ್ಟ ಠೇವಣಿ (ವೈ.ಎಂ.ಡಿ.) ಹಾಗೂ ಮಾಪಕ ಠೇವಣಿ (ಎಂ.ಎಸ್.ಡಿ) ಮೊತ್ತ ಸರಾಸರಿ 5000–7000 ರೂ.ಗಳನ್ನು ಮಾತ್ರ ಪಾವತಿಸಿ ವಿದ್ಯುತ್ ಸಂಪರ್ಕ ಪಡೆಯಲು ಕ್ರಮವಹಿಸಬೇಕಾಗಿರುತ್ತದೆ. ಠೇವಣಿ ಪಾವತಿಸಲು ಹಣ ಹೊಂದಿಸಲಾಗದ ಫಲಾನುಭವಿಗಳಿಗೆ ನಿಗಮದಿಂದ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡಿ ಠೇವಣಿ ಪಾವತಿಸಲು ಸಹ ಕ್ರಮವಹಿಸಲಾಗಿರುತ್ತದೆ. ಆದುದರಿಂದ ವೈಯಕ್ತಿಕ ಯೋಜನೆಯಲ್ಲಿ ಹಿಂದುಳಿದ ವರ್ಗಗಳಿಗೆ 12 ಕೊಳವೆ ಬಾವಿಗಳ ಕ್ರಮ ಬಾಕಿ ಇರುತ್ತದೆ ಹಾಗೂ ಪರಿಶಿಷ್ಟ ಪಂಗಡಗಳು 3 ಕೊಳವೆ ಬಾವಿಗಳ ವಿದ್ಯುದ್ಧೀಕರಣ ಬಾಕಿ ಇರುತ್ತದೆ. ಆದಾಗ್ಯೂ ಇವುಗಳ ಕೆಲಸ ಜಾರಿಯಲ್ಲಿರುತ್ತದೆ.

ಇ) ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಕಲ್ಪಿಸಿರುವುದರಿಂದ ಫಲಾನುಭವಿಗಳು ಮಳೆಯಾಶ್ರಿತ ಬೆಳೆಗಳನ್ನು ಬೆಳೆ ಯಾವುದರ ಬದಲಾಗಿ ನೀರಾವರಿ ಆಧಾರಿತ ಕೃಷಿ, ತೋಟಗಾರಿಕೆಯಲ್ಲಿ ಹೆಚ್ಚು ಲಾಭ ನೀಡುವ ವಾಣಿಜ್ಯ ಬೆಳೆಗಳನ್ನು ಬೆಳೆದು ಹೆಚ್ಚಿನ ಆರ್ಥಿಕ ಪ್ರಗತಿಯನ್ನು ಹೊಂದಲು ಸಹಕಾರಿಯಾಗಿರುವುದರಿಂದ ಯೋಜನೆಯಿಂದ ಪೂರ್ಣಪ್ರಮಾಣದ ಲಾಭ ಪಡೆಯುತ್ತಿರುತ್ತಾರೆ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅಪೂರ್ಣವಾದ ಮಾಹಿತಿಯನ್ನು ಮಾನ್ಯ ಸಚಿವರು ನೀಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಎಸ್‌ಟಿಗೆ ಮತ್ತು ಹಿಂದುಳಿದ ವರ್ಗದ ಗಂಗಾಕಲ್ಯಾಣ ಯೋಜನೆಯ ಬಗ್ಗೆ ಮಾತ್ರ ಹೇಳಿದ್ದಾರೆ. ಆದರೆ ಪರಿಶಿಷ್ಟ ಜಾತಿ ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ತಿಳಿಸಿಲ್ಲ. ಆದರೆ ಇಡೀ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಗಂಗಾ ಕಲ್ಯಾಣ ಯೋಜನೆ ಸುಮಾರು 7,500 ಸ್ಥಗಿತಗೊಂಡಿವೆ, ಕಾರಣವೇನೆಂದರೆ ಎಲೆಕ್ಟ್ರಿಸಿಟಿ ಅದಕ್ಕೆ ಒದಗಿಸಿಲ್ಲ ಮತ್ತು ಹಣದ ಕೊರತೆ ಕೂಡ ಆಗಿದೆ. ಏಕೆಂದರೆ ಇಲ್ಲಿಯವರೆಗೆ ಫಲಾನುಭವಿಗಳಿಗೆ 75,000 ರೂಪಾಯಿ ಮಾತ್ರ ಕೊಡುತ್ತಿದ್ದರು. ಈಗ ಹೊಸ ಸರ್ಕಾರ ಅದನ್ನು ಒಂದು ಲಕ್ಷಕ್ಕೆ ಏರಿಸಿದ್ದಾರೆ. ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆದರೆ ಈ ಅಪೂರ್ಣವಾದಂಥ 7500 ಏನು ಈ ಯೋಜನೆಗಳು ನಿಂತು ಹೋಗಿವೆ ಇದು ನ್ಯಾಷನಲ್ ವೇಸ್ಟ್ ಆಗುತ್ತಿದೆ, ಏಕೆಂದರೆ ಮೂರು ನಾಲ್ಕು ವರ್ಷದಿಂದ ಅದು ಇನ್ನೂ ಪೂರ್ಣವಾಗಿದೆ, ಅದಕ್ಕೆ ಬರತಕ್ಕಂಥ ರಾಷ್ಟ್ರೀಯ ಆದಾಯ ಕೂಡ ಮೊಟಕುಗೊಳಿಸಿದಂತಾಗುತ್ತದೆ. ಇದನ್ನು ಪೂರ್ಣಗೊಳಿಸಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) : ಸನ್ಮಾನ್ಯ ಪಾಟೀಲ್‌ರವರು ಕೇಳಿದ ಪ್ರಶ್ನೆಗೆ ಈಗಾಗಲೇ ಕೆಲವೊಂದು ವಿದ್ಯುತ್ ಪ್ರೋಗ್ರಾಮ್ ಕೆ.ಇ.ಬಿ.ಯಿಂದ ಡಿಲೇ ಆಗಿದೆ. ಏತಕ್ಕೆ ಈ ರೀತಿ ಡಿಲೇ ಆಗಿದೆಯೆಂದರೆ ಮೊದಲು ಗಂಗಾ ಕಲ್ಯಾಣ ವೈಯಕ್ತಿಕ ಯೋಜನೆಯಲ್ಲಿ ವಿದ್ಯುತ್ ಠೇವಣಿಯನ್ನು ಫಲಾನುಭವಿಗಳು ಭರಿಸಬೇಕಾಗಿತ್ತು ಅದು ಬಹಳ ಜಾಸ್ತಿಯಾಗುತ್ತಿತ್ತು. 20–25 ಸಾವಿರ ಆಗುತ್ತಿತ್ತು. ಆದರೆ ಅದನ್ನು ಈಗ ಕೆ.ಪಿ.ಟಿ.ಸಿ.ಎಲ್. ರವರು ಇತ್ತೀಚೆಗೆ ಹೊರಡಿಸಿರುವ ಸ್ಪಷ್ಟೀಕರಣದ ಪ್ರಕಾರ ವೈಯಕ್ತಿಕ ಯೋಜನೆಯ ಫಲಾನುಭವಿಗಳು ವಾರ್ಷಿಕ ಕನಿಷ್ಟ ಠೇವಣಿ (ವೈ.ಎಂ.ಡಿ.) ಹಾಗೂ ಮಾಪಕ ಠೇವಣಿ (ಎಸ್.ಎಂ.ಡಿ.) ಮೊತ್ತ ಸರ್ಕಾರ ಸರಾಸರಿ 5000 ರಿಂದ 7000ಗಳಿಗೆ ಇಳಿಸಿದ್ದಾರೆ. ಅದಕ್ಕೆ ನಮ್ಮದೇ ದೇವರಾಜ ಅರಸ್ ಅಭಿವೃದ್ಧಿ ನಿಗಮದಿಂದ 4% ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದೇವೆ. ಅದನ್ನು ತೆಗೆದುಕೊಂಡು ಈ ರೀತಿಯ ವೆಚ್ಚವನ್ನು ಅವರು ಭರಿಸಬಹುದು, ಹಿಂದೆ ಆದಂತಹ ಸಮಸ್ಯೆಗಳು ಮುಂದಾಗುವುದಿಲ್ಲವೆಂದು ಮಾನ್ಯ ಶಾಸಕರಿಗೆ ತಮ್ಮ ಮೂಲಕ ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮೂರನೇ ಪಟ್ಟಿ.

3. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮೂರನೇ ಪಟ್ಟಿ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ದಿನಾಂಕ: 23–03–2006ರ 3ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 28 ಪ್ರಶ್ನೆಗಳ ಪೈಕಿ 27 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–I)

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ : ಹುಬ್ಬಳ್ಳಿಯ ಈದ್ಗಾ ಮೈದಾನದ ಸಮಸ್ಯೆಯ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಕೋರುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ವತಿಯಿಂದ ನಿನ್ನೆ ದಿವಸ ಸುಪ್ರೀಂಕೋರ್ಟಿನಲ್ಲಿ ಕರ್ನಾಟಕ ಸರ್ಕಾರದಿಂದ ಹುಬ್ಬಳ್ಳಿ ಈದ್ಗಾ ಮೈದಾನದ ಸಮಸ್ಯೆಯ ಬಗ್ಗೆ ಸರ್ಕಾರದ ನಿಲುವು ಏನು ಎಂಬ ಬಗ್ಗೆ ಈ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ತಮ್ಮ ಹೇಳಿಕೆಯನ್ನು ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಿದ್ದಾರೆ. ಈಗ ತಮಗೆ ಗೊತ್ತಿರುವ ಹಾಗೆ ಕಳೆದ ಹಲವಾರು ವರ್ಷಗಳಲ್ಲಿ 1996 ರವರೆಗೆ ಸಹಿತ ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನದ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿತ್ತು. ಆಡಳಿತವನ್ನು ನಡೆಸತಕ್ಕಂಥ ಜನ ಅದರಲ್ಲಿಯೂ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಸೂಕ್ಷ್ಮವಾಗಿ ನಡೆದುಕೊಳ್ಳಬೇಕಾದುದು ಬಹಳ ಮುಖ್ಯವಾಗಿರತಕ್ಕದ್ದು. ನನಗೆ ಬಹಳ ಹೆಮ್ಮೆ ಇದೆ. 1996ನೇ ಇಸವಿಯಲ್ಲಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಗೃಹ ಮಂತ್ರಿಯಾಗಿ ಕೆಲಸ ಮಾಡುವಂತಹ ಅವಕಾಶ ನನ್ನ ಪಾಲಿಗೆ ಸಿಕ್ಕಿತ್ತು. ಆ ದಿವಸ ಈಗಿನ ನಮ್ಮ ಕಂದಾಯ ಸಚಿವರಾಗಿರತಕ್ಕಂಥ ಮಾನ್ಯ ಜಗದೀಶ್ ಶೆಟ್ಟರ್‌ರವರೂ ಕೂಡ ಶಾಸಕರಾಗಿದ್ದರು. ಮತ್ತೊಬ್ಬರು ಬಿ.ಜೆ.ಪಿ. ಪಕ್ಷದಿಂದ ಶ್ರೀ ಅಶೋಕ್ ಕಾಟೆ ಅವರು ಹುಬ್ಬಳ್ಳಿಯ ಶಾಸಕರಾಗಿದ್ದರು. ಇವರ ಸಹಕಾರವಿತ್ತು ಮತ್ತು ನಮ್ಮ ಹಿಂಡಸಗೇರಿಯವರು ರಾಜ್ಯ ಸರ್ಕಾರದ ಮಂತ್ರಿಗಳಾಗಿದ್ದರು ಅವರ ಸಹಕಾರ ಮತ್ತು ಎ.ಬಿ.ಜೆ.ಡಿ.ಯ ನಾಯಕರಾಗಿರುವಂಥ ಶ್ರೀಮಾನ್ ಇಬ್ರಾಹಿಂ ಅವರು ನಮ್ಮ ಪಕ್ಷದ ಅಧ್ಯಕ್ಷರಾಗಿದ್ದರು. ವಿಶೇಷವಾಗಿ ಮಾನ್ಯ ರಾಮಲಿಂಗಂ ಅವರನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ. ಆ ಸಂದರ್ಭದಲ್ಲಿ ನಾವೆಲ್ಲರೂ ಸೇರಿಕೊಂಡು ಹಿಂದು-ಮುಸ್ಲಿಂರನ್ನು ಕರೆದು ರಾಷ್ಟ್ರಧ್ವಜವನ್ನು ಈದ್ಗಾ ಮೈದಾನದಲ್ಲಿ ಏರಿಸಲಿಕ್ಕೆ ಅವಕಾಶವನ್ನು ಮಾಡಿಕೊಟ್ಟೆವು. ಇವತ್ತಿಗೂ ಸಹ ಅವತ್ತು ಸರ್ವಪಕ್ಷಗಳ ಮುಖಂಡರುಗಳು ಕೊಟ್ಟಂತಹ ಸಹಕಾರವನ್ನು ನಾವು ಮೆಚ್ಚುತ್ತೇವೆ. ಮಾನ್ಯ ಧರಂಸಿಂಗ್‌ರವರು ಒಂದೂವರೆ ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಸಮಸ್ಯೆಗೆ ಸ್ಪಂದಿಸಿದರು. ಇಡೀ ರಾಜ್ಯದಲ್ಲಿ ಹಿಂದು-ಮುಸಲ್ಮಾನ್ ಗಲಭೆಗಳು ಎಲ್ಲಿಯೂ ನಡೆಯದ ರೀತಿಯಲ್ಲಿ ನೋಡಿಕೊಂಡಂತಹ ಕೀರ್ತಿ ಮಾನ್ಯ ಧರಂಸಿಂಗ್‌ರವರಿಗೆ ಹೋಗಬೇಕಾಗುತ್ತದೆ. ಇವತ್ತು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಿನ್ನೆ ದಿವಸ ಸರ್ಕಾರ ಒಂದು ನಿಲುವನ್ನು ತೆಗೆದುಕೊಂಡು ಸುಪ್ರೀಂಕೋರ್ಟಿನ ಮುಂದೆ ರಾಜ್ಯ ಸರ್ಕಾರದ ನಿಲುವೇನು ಎಂಬುದನ್ನು ತಿಳಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇವತ್ತು ಭಾರತೀಯ ಜನತಾ ಪಾರ್ಟಿಯವರು ಆಡಳಿತವನ್ನು ನಡೆಸುತ್ತಿರುವುದರಿಂದಾಗಿ ಅವರ ಮೇಲೆ ಜವಾಬ್ದಾರಿ ಜಾಸ್ತಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲೂ ಅನೇಕ ಪ್ರಮುಖವಾದಂತಹ ಮಂತ್ರಿಗಳು ಆ ಭಾಗದಿಂದ

ಬಂದಿರುವುದರಿಂದ ರಥಯಾತ್ರೆ, ಪಾದಯಾತ್ರೆ, ಪಾದುಕಯಾತ್ರೆ, ರಾಮಯಾತ್ರೆ ಮುಂದೆ ಇರತಕ್ಕಂಥ ಅನೇಕ ಯಾತ್ರೆಗಳಲ್ಲಿ ಭಾಗವಹಿಸಿರತಕ್ಕಂಥ, ಭಾಗವಹಿಸಬಹುದಾದಂಥ ಮಂತ್ರಿಗಳು, ಮುಖಂಡರುಗಳೂ ಸರ್ಕಾರದ ಆಡಳಿತ ಯಂತ್ರವನ್ನು ಹಿಡಿದುಕೊಂಡಿರುವುದರಿಂದಾಗಿ ಎಲ್ಲಾ ವರ್ಗದ ಹಿಂದು-ಮುಸ್ಲಿಂ, ಎಲ್ಲಾ ವರ್ಗದ ಜನರ ಹಿತವನ್ನು ಕಾಪಾಡುವ ದೃಷ್ಟಿಯಿಂದಾಗಿ ರಾಜ್ಯದಲ್ಲಿ ಕೋಮು ಗಲಭೆಗಳು ನಡೆಯದಿರುವ ಹಾಗೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯೂ ಸಹಿತ ಸರ್ಕಾರದ ಮೇಲಿದೆ, ನನ್ನ ಅಭಿಪ್ರಾಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಜಗದೀಶ್ ಶೆಟ್ಟರ್‌ರವರು ಇವರೆಲ್ಲರೂ ಸಹಿತ ಸೇರಿ ವಿರೋಧ ಪಕ್ಷದ ನಾಯಕರನ್ನು, ವಿವಿಧ ಪಕ್ಷಗಳ ನಾಯಕರುಗಳನ್ನು ಈ ವಾರದಲ್ಲಿ ಕರೆಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಕೇಂದ್ರ ಸುಪ್ರೀಂಕೋರ್ಟಿನ ಮುಂದೆ ಅಫಿಡವಿಟ್ ಅನ್ನು ಸಲ್ಲಿಸಲಿಕ್ಕೆ ಮುಂಚೆ ಸಮಾಲೋಚನೆಯನ್ನು ಮಾಡಬೇಕಾಗಿತ್ತು ಎನ್ನುವುದು ಒಂದು ಭಾಗ. ಇದರ ಜೊತೆಗೆ ಹಿಂಡಸಗೇರಿಯವರಂಥ, ಕಾಳೇಬುಡ್ಡಿಯವರಂಥ ಮತ್ತು ಪ್ರಹ್ಲಾದ ಜೋಶಿಯವರು ಅಲ್ಲಿರತಕ್ಕಂಥ ಲೋಕಸಭಾ ಸದಸ್ಯರು. ಇವರೆಲ್ಲರೂ ಸಹ ಅಲ್ಲಿಯ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಹಕಾರವನ್ನು ಕೊಟ್ಟಿರತಕ್ಕಂಥವರು, ಇವರೆಲ್ಲರನ್ನೂ, ಎಲ್ಲಾ ಪಕ್ಷದ ನಾಯಕರನ್ನು ಸಭೆಗೆ ಕರೆಸಿ ವಿಧಾನಸಭೆ ಅಧಿವೇಶನ ನಡೆಯತಕ್ಕಂಥ ಸಂದರ್ಭದಲ್ಲಿ ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ ಸರ್ಕಾರ ಸುಪ್ರೀಂಕೋರ್ಟಿಗೆ ಹೋಗಲಿಕ್ಕೆ ಮುನ್ನ ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ನನಗೆ ಗೊತ್ತಿದೆ ಸುಪ್ರೀಂಕೋರ್ಟಿಗೆ ಹೋಗುವ ಮುನ್ನ ಸಚಿವರ ಸಂಪುಟದಲ್ಲಿ ಈ ವಿಷಯವನ್ನು ಚರ್ಚೆ ಮಾಡುವಂಥ ವ್ಯವಧಾನವನ್ನು ಸಹಿತ ಈ ಸರ್ಕಾರ ತೋರಿಸಿಲ್ಲ, ತರಾತುರಿಯಲ್ಲಿ ಸುಪ್ರೀಂಕೋರ್ಟ್- ನಲ್ಲಿರತಕ್ಕಂಥ ವಿಷಯದ ಬಗ್ಗೆ ಕರ್ನಾಟಕ ಸರ್ಕಾರದ ಪರವಾಗಿ ವಾದ ಮಾಡುತ್ತಿರುವಂಥ ವಕೀಲರುಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಇದಕ್ಕೆ ಪ್ರಚೋದನೆಯನ್ನು ನೀಡುತ್ತಿದ್ದಾರೆಯೇ, ಇದರಿಂದ ರಾಜಕೀಯ ಲಾಭ, ಮತ್ತಾವುದೇ ರಾಜಕೀಯ ಪಕ್ಷಗಳಿಗೆ ಆಗಬೇಕೆಂಬ ವಿಚಾರ ನಿಮಗೆ ಇದೆಯೇ ಎನ್ನುವುದರ ಬಗ್ಗೆ ವಿಶೇಷವಾಗಿ ಸದನ ನಡೆಯುತ್ತಿರುವಂಥ ಸಂದರ್ಭದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕದ್ದು. ಮುಖ್ಯಮಂತ್ರಿಗಳ ಸರ್ಕಾರದ, ಸರ್ಕಾರದ ಮುಖಂಡರುಗಳ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ಭಾವೈಕ್ಯತೆಯನ್ನು ಕರ್ನಾಟಕದಲ್ಲಿ ಕಾಪಾಡುವ ದೃಷ್ಟಿಯಿಂದಾಗಿ ಸರ್ಕಾರದ ನಿಲುವೇನು? ಹಿಂದೆ ಎಸ್.ಎಮ್. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಸುಪ್ರೀಂಕೋರ್ಟಿನಲ್ಲಿ ಇದಕ್ಕೆ ಸ್ವಲ್ಪ ಸಮಯವನ್ನು ಕೊಟ್ಟಿದ್ದರು. ಅದಾದ ನಂತರ ಧರಂಸಿಂಗ್‌ರವರ ಸರ್ಕಾರದಲ್ಲೂ ಸಹಿತ ಸುಪ್ರೀಂಕೋರ್ಟಿನ ಮುಂದೆ ಅಫಿಡವಿಟ್ ಅನ್ನು ಹಾಕಿದ್ದರು. ಇದರ ಬಗ್ಗೆ ಏನಾದರೂ ಬದಲಾವಣೆಯಾಗಿದೆಯೇ, ಪ್ರಜಾವಾಣಿಯಂಥ ಪತ್ರಿಕೆಗಳಲ್ಲಿ ಇವತ್ತು ಇದರ ಬಗ್ಗೆ ವರದಿಯನ್ನೂ ಸಹ ನಾವು ಓದಿದ್ದೇವೆ. ಆದ್ದರಿಂದ ದಯಮಾಡಿ ಈ ಸದನಕ್ಕೆ ಈ ಎಲ್ಲಾ ವಿಚಾರಗಳನ್ನು ನಾನು ಈಗಲೇ ತಿಳಿಸಬೇಕೆಂದು ಹೇಳುವುದಿಲ್ಲ. ಏಕೆಂದರೆ ಮುಖ್ಯಮಂತ್ರಿಗಳಿಲ್ಲ. ಗೃಹ ಇಲಾಖೆಯ ಜವಾಬ್ದಾರಿಯನ್ನು ಅವರೇ ಹೊತ್ತಿರತಕ್ಕಂಥವರು, ಉಪ ಮುಖ್ಯಮಂತ್ರಿಗಳು ಸಹಿತ ಸದನದಲ್ಲಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ತಾವು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನಾನು ಚಿರಋಣಿ, ಇದು ಒಂದು ಕಾನೂನಿನ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದಾಗಿ,

ರಾಜ್ಯದ ಮುಂದಿನ ಭವಿಷ್ಯದ ದೃಷ್ಟಿಯಿಂದಾಗಿ ಇದರ ಬಗ್ಗೆ ರಾಜಕೀಯವನ್ನು ಬೆರಸದೆ ದೃಢವಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಒಂದು ದೀರ್ಘವಾದ ಹೇಳಿಕೆಯನ್ನು ಸರ್ಕಾರದ ವಕ್ತಾರರುಗಳು ತಿಳಿಸಿ ಮಂಡಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಸಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

†**ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ನಮ್ಮ ಸದನದ ಹಿರಿಯ ಸದಸ್ಯರು ಮತ್ತು ಮಾಜಿ ಗೃಹಮಂತ್ರಿಗಳು ಕೂಡ ಭಾಗವಹಿಸಿ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆ ಆಗದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಸಿಂಧ್ಯಾರವರು ಮಹತ್ವವಾದ ವಿಚಾರವನ್ನು ಎತ್ತಿದ್ದಾರೆ. ನಾನೂ ಕೂಡ ರಾಜ್ಯದ ಗೃಹ ಮಂತ್ರಿಯಾಗಿ 1990 ರಿಂದ ಕೆಲಸ ಮಾಡಿದ್ದೇನೆ. ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಇವತ್ತು ಬಜೆಟ್ ಭಾಷಣದಲ್ಲಿ ಉಪ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಯಾವ ತರಹದ ಕೋಮು ಗಲಭೆಗಳು ಆಗದೇ ಇರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಯಾಕೋ ಮಿರಾಜುದ್ದೀನ್ ಪಟೇಲ್, ಜಮೀರ್ ಅಹ್ಮದ್, ಇಕ್ಬಾಲ್ ಅನ್ಸಾರಿ ಯಾರೂ ಇಲ್ಲಿ ಇದ್ದ ಹಾಗಿಲ್ಲ. ಇದು ಸೂಕ್ಷ್ಮವಾದಂಥ ವಿಚಾರ, ಈ ವಿಷಯ ಈಗ ಸುಪ್ರೀಂಕೋರ್ಟಿನ ಮುಂದೆ ಇದೆ. ಆಗಸ್ಟ್ 15 ಬಂತೆಂದರೆ ನಮ್ಮ ಯಡಿಯೂರಪ್ಪನವರು, ಜಗದೀಶ್‌ಶೆಟ್ಟರ್‌ರವರು ಒಂದು ದಿವಸ ಮೊದಲೇ ಅಲ್ಲಿಗೆ ಹೋಗಿರುತ್ತಿದ್ದರು. ಏನೇ ಬರಲಿ, ಯಾವುದೇ ತರಹದ ಗಲಾಟೆಗಳು ನಡೆಯಲಿಕ್ಕೆ ನನ್ನ ಕಾಲದಲ್ಲಿ ನಾನು ಅವಕಾಶವನ್ನು ಕೊಟ್ಟಿಲ್ಲ. ಇದು ಬಹಳ ದಿವಸದಿಂದ ನಡೆದಿರತಕ್ಕಂಥ ಸಮಸ್ಯೆ ಬಗ್ಗೆ ಈಗಾಗಲೇ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ 1990ರಲ್ಲಿ ಸಮಾಲೋಚನೆ ಮಾಡಿ ಬಗೆಹರಿಸತಕ್ಕಂಥ ರೀತಿಯಲ್ಲಿ 1994ರಲ್ಲಿ ಏನಾಯಿತು? ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ಉಮಾಭಾರತಿ ಅಲ್ಲಿಗೆ ಬಂದರು, ಅಲ್ಲಿ ಫ್ಲಾಗ್ ಹಾರಿಸಿದರು. ಬೇರೆ ಬೇರೆ ರೀತಿ ಪ್ರಚೋದನೆಯಾಯಿತು. ಗಲಭೆಯಲ್ಲಿ 5 ಮಂದಿ ಸತ್ತು ಹೋದರು. ಸತ್ತು ಹೋದ ಮೇಲೆ ಸೆಷನ್ಸ್ ಕೋರ್ಟಿನಲ್ಲಿ ನಾನ್ ಬೇಲಬಲ್ ವಾರೆಂಟ್ ಇಶ್ಯೂ ಆದ ಮೇಲೆ, ಶ್ರೀಮತಿ ಉಮಾಭಾರತಿ ಮತ್ತು ನೈತಿಕತೆ ಬಗ್ಗೆ ಹೇಳತಕ್ಕಂಥ ಬಿ.ಜೆ.ಪಿ. ಪಕ್ಷ, ಎಲೆಕ್ಷನ್ ಕಮೀಷನ್ ಮುಂದೆ ಹೇಳಬೇಕಾಗುತ್ತದೆ. "ನನ್ನ ಮೇಲೆ ಯಾವ ತರಹದ ಕ್ರಿಮಿನಲ್ ಕೇಸ್ ಇಲ್ಲ" ಅಂತ. ನಂತರ ಅವರು ಮಧ್ಯಪ್ರದೇಶದ ಮುಖ್ಯಮಂತ್ರಿಯಾದರು. ನಾನು ಮುಖ್ಯಮಂತ್ರಿಯಾದ ಮೇಲೆ 18ನೇ ಆಗಸ್ಟ್‌ಗೆ ಶ್ರೀಮತಿ ಉಮಾಭಾರತಿ ಇಲ್ಲಿಗೆ ಬಂದರು. ಏಕೆ ಬಂದರು ಅಂತ ಕೇಳಿದೆ, ಆಗ ಪೋಲೀಸ್ ಇಲಾಖೆಯವರು ಹೇಳಿದರು ಅವರ ಮೇಲೆ ಕೇಸ್ ಇದೆ ಅದಕ್ಕೆ ಬಂದಿದ್ದಾರೆ ಅಂತ. ನಾನ್ ಬೇಲಬಲ್ ವಾರೆಂಟ್ ಇತ್ತು. 10 ಕೇಸ್‌ಗಳು ಶ್ರೀಮತಿ ಉಮಾಭಾರತಿಯವರ ವಿರುದ್ಧ ಹಾಕಿದ್ದರು. ಆಗ ರಾಜ್ಯದಲ್ಲಿ ಏನು ರಾಜಕೀಯ ನಡೆಯಿತು ಎನ್ನುವ ಮಾತುಗಳನ್ನು ಮಾತ್ರ ಹೇಳುತ್ತಿದ್ದೇವೆ. ಕೊನೆಯದಾಗಿ ಇಲ್ಲಿ 8 ದಿನಗಳ ಕಾಲ ಟೌನ್‌ಹಾಲ್ ಎದುರುಗಡೆ, ಮಾರ್ಕೆಟ್ ಎದುರುಗಡೆ ಬಹಿರಂಗ ಸಭೆಗಳು ನಡೆದು ಜನಸಂದಣಿ, ಸಾಕಷ್ಟು, ಸೇರುತ್ತಿತ್ತು. ಅಟಲ್ ಬಿಹಾರಿ ವಾಜಪೇಯಿಯವರೂ ಬಂದರು. ಜಸ್ವಂತ್ ಸಿಂಗ್‌ರವರೂ ಬಂದರು. ಅದ್ವಾನಿಯವರೂ ಬಂದರು, ತಿರಂಗಾ ಜಂಡಾ ಮೆರವಣಿಗೆ ಅನಂತ್ ಕುಮಾರ್‌ರವರ ನೇತೃತ್ವದಲ್ಲಿ ಕರ್ನಾಟಕದ

---

† ಈ ಚಿಹ್ನೆಯು ಮಾನ್ಯ ಸದಸ್ಯರಿಂದ ಭಾಷಣ ಪರಿಷ್ಕರಿಸಲ್ಪಟ್ಟಿದೆಯೆಂದು ಸೂಚಿಸುತ್ತದೆ.

ತುಂಬಾ ಆಯಿತು. ಇದೆಲ್ಲಾ ಕಥೆ ಆಗಿದೆ. ಇದು ಬಹಳ ಸೂಕ್ಷ್ಮವಾದಂತಹ ವಿಚಾರ. ಇವತ್ತು ಏನಾಗಿದೆ? ಮಾನ್ಯ ಜಗದೀಶ್ ಶೆಟ್ಟರ್ ಅವರು ಆ ಪ್ರದೇಶದವರು ಮತ್ತು ಆ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರು ಇವತ್ತು ರಾಜ್ಯದ ರೆವಿನ್ಯೂ ಮಂತ್ರಿಗಳಾಗಿದ್ದಾರೆ. ಇವತ್ತು ನೀವು ಸುಪ್ರೀಂಕೋರ್ಟ್ ಮುಂದೆ ಅಫಿಡವಿಟ್ ಹಾಕತಕ್ಕಂಥ ಸಂದರ್ಭದಲ್ಲಿ ಇವೆಲ್ಲಾ ಸಮಾಲೋಚನೆಗಳಿಂದ ಬಗೆಹರಿಸತಕ್ಕಂಥ ಕೆಲಸ. ಸೂಕ್ಷ್ಮವಾದಂಥ ಕೆಲಸ. ಏನೋ ಏಕಾಏಕಿಯಾಗಿ ಇವತ್ತು ಎರಡೂ ಪಕ್ಷಗಳು ಒಂದಾಗಿ ಕೋಮು ಘರ್ಷಣೆಗೆ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತೀರಿ. ಬಾಬಾಬುಡನ್‌ಗಿರಿ ದತ್ತ ಪೀಠದಲ್ಲಿ ಉರುಸ್ ನಡೆಯಬೇಕಾದ ಸಮಯದಲ್ಲಿ ಕೂಡ ಅಲ್ಪಸಂಖ್ಯಾತರಿಗೆ ಅವಕಾಶ ಸಿಗುತ್ತಿಲ್ಲ. ಅಲ್ಲಿ ಗೋರಿ ಮೇಲೆ ವಸ್ತ್ರ ಹಾಕತಕ್ಕಂಥಾದ್ದಕ್ಕೂ ಕೂಡ ಅವಕಾಶ ಕೊಡುತ್ತಿಲ್ಲ. ಇವತ್ತು ರಾಜ್ಯ ನಡೆಸುತ್ತಿರುವ ತಾವು ತಿಳಿದುಕೊಳ್ಳಬೇಕು. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ, ಇದು ಒಂದು ಗಂಭೀರವಾದಂತಹ ಸಮಸ್ಯೆ. ಸುಪ್ರೀಂಕೋರ್ಟ್ ಮುಂದೆ ಅಫಿಡವಿಟ್ ಹಾಕುವುದಕ್ಕಿಂತ ಮುಂಚೆ ತಾವು ಎಲ್ಲರನ್ನೂ ಕರೆಸಿ ಮಾತನಾಡಬೇಕು. ಇಲ್ಲವಾದರೆ ಕರ್ನಾಟಕ ರಾಜ್ಯದಲ್ಲಿ ಕೋಮು ಗಲಭೆಯನ್ನು ನಿಯಂತ್ರಣ ಮಾಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ ಇದಕ್ಕೆ ಮತ್ತೆ ಪ್ರಚೋದನೆ ಆಗುತ್ತದೆ. ಏಕೆಂದರೆ ಮಾನ್ಯ ಅದ್ವಾನಿಯವರ ತೀರ್ಥಯಾತ್ರೆ, ಮತ್ತೊಂದು ಯಾತ್ರೆ ಹೊರಟಿದೆ. ನಾವು ಅದನ್ನು ತೀರ್ಥಯಾತ್ರೆ ಅಂತಲೇ ಹೇಳಬೇಕು. ಎಷ್ಟೊಂದು ಯಾತ್ರೆಗಳನ್ನು ಮಾಡುತ್ತಾರೆ ಅವರು. ಅಂತಹ ಸಂದರ್ಭದಲ್ಲಿ ಸಮಸ್ಯೆಗಳು ಏಳಬಹುದು, ಮಾನ್ಯ ಜಗದೀಶ ಶೆಟ್ಟರ್‌ರವರೇ, ಮೊದಲು ಇಲ್ಲಿ ಕುಳಿತು ಮಾತನಾಡಿದಂತೆ ಅಲ್ಲ. ಜವಾಬ್ದಾರಿಯುತವಾಗಿ ತಮ್ಮ ಪ್ರತಿಯೊಂದು ಮಾತೂ ಈ ರಾಜ್ಯದಲ್ಲಿರತಕ್ಕಂಥ ಪ್ರತಿಯೊಬ್ಬ ಅಲ್ಪಸಂಖ್ಯಾತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚಿಸಿ ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಇರಬೇಕು. ಈ ದಿಸೆಯಲ್ಲಿ ಯಾವ ರೀತಿಯಾಗಿ ಕಾರ್ಯಕ್ರಮ ಕೈಗೊಳ್ಳುತ್ತೀರಿ ಎನ್ನುತಕ್ಕಂಥಾದ್ದೂ ಕೂಡ ಹೇಳಬೇಕು. ಮಾನ್ಯ ಸಿಂಧ್ಯಾರವರು ಎತ್ತಿದ ಪ್ರಶ್ನೆಗೆ ನಾನೂ ಕೂಡ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇದು ಸೂಕ್ಷ್ಮವಾದಂತಹ ವಿಚಾರ ಇದೆ. ಆದ್ದರಿಂದ ಇದರ ಬಗ್ಗೆ ಬಹಳ ಜಾಗ್ರತೆಯಿಂದ ಹೋಗತಕ್ಕಂಥ ಕೆಲಸವನ್ನು ಮಾಡಬೇಕು.

ಶ್ರೀ ಆರ್. ರೋಷನ್ ಬೇಗ್ (ಜಯಮಹಲ್) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾ ಸಾಹೇಬರು ಆಮೇಲೆ ನಮ್ಮ ಪಕ್ಷದ ನಾಯಕರಾದ, ವಿರೋಧಪಕ್ಷದ ನಾಯಕರೂ ಆದ ಮಾನ್ಯ ಧರ್ಮಸಿಂಗ್ ಸಾಹೇಬರು ಈ ಬಗ್ಗೆ ಮಾತನಾಡಿದ್ದಾರೆ. ಈ ಈದ್ಗಾ ಮೈದಾನದ ವಿಷಯದಲ್ಲಿ ನಾನು ಪೊಲಿಟಿಕ್ಸ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ರಾಜ್ಯದಲ್ಲಿ ಹಾಗೂ ದೇಶದಲ್ಲಿ ನಮ್ಮ ಅಲ್ಪಸಂಖ್ಯಾತರ ಸಮಸ್ಯೆ ಏನೆಂದರೆ ಕುಡಿಯಲು ಒಳ್ಳೆಯ ನೀರು, ನಮ್ಮ ಹಳ್ಳಿಗಳಲ್ಲಿ ಮೂಲಭೂತ ಸವಲತ್ತುಗಳು, ನಮ್ಮ ಮಕ್ಕಳಿಗೆ ಒಳ್ಳೆಯ ಸ್ಕೂಲ್, ನಮ್ಮ ಮಕ್ಕಳಿಗೆ ಅಂಗನವಾಡಿ ಇಲ್ಲದೇ ಇರುವುದು. ಈ ರಾಜ್ಯದಲ್ಲಿ ಸುಮಾರು 4 ಸಾವಿರ ಉರ್ದು ಸ್ಕೂಲ್‌ಗಳು ಇವೆ. ನಮ್ಮ ಸ್ಕೂಲ್‌ಗಳಲ್ಲಿ ಅಂಗನವಾಡಿಗಳು ಇಲ್ಲ. ಇದು ನಮ್ಮ ಸಮಸ್ಯೆ. ನಮ್ಮ ಜನಾಂಗದವರಿಗೆ ವಿದ್ಯಾಭ್ಯಾಸ ಬೇಕು. ಆದರೆ ಈ ಈದ್ಗಾ ಮೈದಾನದ ಬಗ್ಗೆ ಇಷ್ಟು ವರ್ಷ ಯಾರ್‍ಯಾರು ರಾಜಕೀಯ ಮಾಡಿಕೊಂಡು ಬಂದರು. ನಾನು ಆ ಬಗ್ಗೆ ಹೇಳುವುದಿಲ್ಲ. ಈ ಹೊಸ ಸರ್ಕಾರ ಬಂದಿದೆಯಲ್ಲಾ ಜನತಾ ದಳ ಮತ್ತು ಬಿ.ಜೆ.ಪಿ. ಮೈತ್ರಿ ಸರ್ಕಾರ, ಈ ರಾಜ್ಯದ ಅಲ್ಪಸಂಖ್ಯಾತರಿಗೆ ಏನು ಫಸ್ಟ್ ಗಿಫ್ಟ್ ಕೊಟ್ಟಿರುವುದು? ಈದ್ಗಾ ಮೈದಾನ ಹುಬ್ಬಳ್ಳಿಯಲ್ಲಿ ಈ ಜನಾಂಗದವರು ಅಲ್ಲಿ ಹೋಗಿ ಆಗ ಈ ರಾಜ್ಯದಲ್ಲಿ

ಮುಸಲ್ಮಾನರು ಹೋಗಿ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಅಪೋಸ್ ಮಾಡಿದರು ಅಂತ ಇವರು ಆಗ ಹೇಳಿದರು. ನಾವೆಲ್ಲಾ ಹೋಗಿ ರಾಷ್ಟ್ರಧ್ವಜ ಹಾರಿಸಲಿಲ್ಲವೇ? ಆಗ ನಾನೇ ಹೇಳಿದೆ, ನಾವು ರಾಷ್ಟ್ರಧ್ವಜ ಹಾರಿಸುತ್ತೇವೆ ನಡೆಯಿರಿ ಅಂತ. ಈ ಬಗ್ಗೆ ರಾಜಕೀಯ ಮಾಡಿಕೊಂಡು ಬಂದರು. ಯು.ಪಿ.ಯಿಂದ ನಾಯಕರು ಬರುವುದು. ಡೆಲ್ಲಿಯಿಂದ ನಾಯಕರು ಬರುವುದು. ಏಯ್, ನಾವು ರಾಷ್ಟ್ರಧ್ವಜ ಹಾಕುತ್ತೇವೆಂದು ಹೇಳುವುದು. ಮುಸಲ್ಮಾನರಿಗೂ ಈ ದೇಶದಲ್ಲಿ ರಾಷ್ಟ್ರಧ್ವಜದ ಬಗ್ಗೆ ನಿಮಗೆಷ್ಟು ಮರ್ಯಾದೆ ಇದೆ, ಅವರಿಗೂ ಅಷ್ಟೇ ರಾಷ್ಟ್ರಧ್ವಜದ ಬಗ್ಗೆ ಮರ್ಯಾದೆ ಇದೆ. ನಾವು ಈ ದೇಶಕ್ಕೆ ನಮ್ಮ ಪ್ರಾಣ ಬೇಕಾದರೂ ಕೊಡುತ್ತೇವೆ. ಮೊದಲೂ ಕೊಟ್ಟಿದ್ದೇವೆ. ಈಗಲೂ ಕೊಡುತ್ತೇವೆ. ಈ ಈದ್ಗಾ ಮೈದಾನದ ಬಗ್ಗೆ ನಾವು ಸುಮ್ಮನೆ ಇರುವಾಗ ಅಲ್ಪಸಂಖ್ಯಾತರಿಗೆ ಒಂದು ತರಹ ಇವರು ದೇಶದ್ರೋಹಿಗಳು, ಅಂತ ಅವಮಾನ ಮಾಡಬೇಡಿ. ನಾನು ಇವತ್ತು ನಿಮಗೆ ಹೇಳುತ್ತಿರುವುದು, ತಾವು ಇವರನ್ನೆಲ್ಲಾ ಏಕೆ ಕೇಳಲಿಲ್ಲ? ನಮ್ಮ ವಿರೋಧ ಪಕ್ಷದ ನಾಯಕರನ್ನು, ಯಾರ್‍ಯಾರು ಲೋಕಲ್ ಲೀಡರ್ಸ್ ಇದ್ದಾರೆ, ಯಾರು ಹುಬ್ಬಳ್ಳಿಯಲ್ಲಿ ಲೋಕಲ್ ಲೀಡರ್ಸ್ ಇದ್ದಾರೆ. ನಮ್ಮ ಮಾನ್ಯ ಸಿಂಧ್ಯಾ ಸಾಹೇಬರು ಏನು ಹೇಳಿದರು ಆ ರೀತಿ ಅವರನ್ನು ಕೇಳಬೇಕಾಗಿತ್ತು. ಈ ಬಗ್ಗೆ ಕ್ಯಾಬಿನೆಟ್‌ನಲ್ಲೂ ಈ ಪ್ರಸ್ತಾಪ ಬರಲಿಲ್ಲ. ಲಾ ಮಿನಿಸ್ಟರ್ ಅವರ ಕಡೆಯಿಂದ ಸುಪ್ರೀಂ ಕೋರ್ಟ್‌ನಲ್ಲಿ ಲಾಯರ್ ಒಂದು ಅಫಿಡವಿಟ್ ಹಾಕುತ್ತಾರೆ. ಇದರಿಂದ ನಮಗೆಲ್ಲಾ ಅವಮಾನ ಆಗಿದೆ ಅಂತ ನಾನು ಹೇಳಲು ಇಷ್ಟಪಡುತ್ತೇನೆ.

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು, ಮಾನ್ಯ ಪ್ರತಿಪಕ್ಷದ ನಾಯಕರು, ಮತ್ತು ಮಾನ್ಯ ರೋಷನ್ ಬೇಗ್‌ರವರು ಏನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಈ ಈದ್ಗಾ ಮೈದಾನದ ವಿಷಯವನ್ನು ಸರ್ಕಾರ ಒಂದು ಸೌಹಾರ್ದ ರೀತಿಯಿಂದ ಬಗೆಹರಿಸುವುದಕ್ಕೆ ಬದ್ಧವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಈ ಪ್ರಕರಣ ಇವತ್ತು ಸುಪ್ರೀಂ ಕೋರ್ಟಿನ ಮುಂದೆ ಚಾಲ್ತಿಯಲ್ಲಿದೆ. ಕಳೆದ ವಾರ 2–3 ಹಿಯರಿಂಗ್‌ಗಳು ಆಗಿವೆ. ಅದರ ಬಗ್ಗೆ ಮಾನ್ಯ ನ್ಯಾಯಾಧೀಶರು ಕೆಲವೊಂದು ಅಬ್ಸರ್‌ವೇಶನ್ಸ್ ಮಾಡಿದ್ದಾರೆ. ಈ ವಿಷಯ ಬಹಳ ಸೂಕ್ಷ್ಮವಾಗಿದೆ. ಇದರ ಬಗ್ಗೆ ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲೂ ಸಮಾಲೋಚನೆ ಮಾಡಿಕೊಂಡು ಈ ವಿಷಯದ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಏನೇನು ನಡೆಯುತ್ತಿವೆ ಯಾವ ರೀತಿ ಮಾನ್ಯ ನ್ಯಾಯಾಧೀಶರು ಅಬ್ಸರ್‌ವೇಶನ್ಸ್ ಮಾಡಿದ್ದಾರೆ ಮತ್ತು ಸರ್ಕಾರದ ನಿಲುವು ಏನಿದೆ ಮತ್ತು ಯಾವ ರೀತಿಯಲ್ಲಿ ವಾದ ವಿವಾದಗಳು ನಡೆದಿವೆ. ಮತ್ತು ಸುಪ್ರೀಂಕೋರ್ಟ್‌ನವರು ನಿನ್ನೆ ಏನು ಕೆಲವೊಂದು ಅಬ್ಸರ್‌ವೇಶನ್ಸ್ ಮಾಡಿದ್ದಾರೆ. ಮತ್ತು ಕೆಲವೊಂದು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಒಂದು ದೀರ್ಘವಾದ ಹೇಳಿಕೆಯನ್ನು ಇವತ್ತು ಅಥವಾ ನಾಳೆಯೊಳಗೆ ಕೊಡುತ್ತೇನೆ.

(ಆ) ವಿಷಯ: ಬಯೋಕಾನ್ ಎಂಬ ವಿದೇಶಿ ಕಂಪನಿಯಿಂದ ನೂರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿರುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಒಂದು ವಿದೇಶಿ ಕಂಪನಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವನ್ನು ನಡೆಸಿದೆ.

ಬಯೋಕಾನ್ ಕಂಪನಿ. ಈ ಬಯೋಕಾನ್ ಎನ್ನತಕ್ಕಂಥ ವಿದೇಶಿ ಕಂಪನಿ, ನಮ್ಮ ದೇಶದಲ್ಲಿ ನರಸಂಬಂಧಿ ಖಾಯಿಲೆಗಳಿಗೆ ಸಂಬಂಧಪಟ್ಟಂತಹ ಔಷಧಿಯನ್ನು ಮಿಥೈಲ್ ಕೋಬಾಲ್ ಮಿನ್ ಎನ್ನತಕ್ಕಂಥ ಔಷಧಿಯನ್ನು ತಯಾರು ಮಾಡಲಿಕ್ಕೆ ನಮ್ಮ ಸರ್ಕಾರದಿಂದ ಅನುಮತಿಯನ್ನು ತೆಗೆದುಕೊಂಡು ಈ ಔಷಧಿಯನ್ನು ತಯಾರು ಮಾಡುತ್ತಿದ್ದೇನೆಂದು ಹೇಳಿ ಔಷಧಿ ಮಾರುಕಟ್ಟೆಯಲ್ಲಿ ಇದನ್ನು ಸರಬರಾಜು ಮಾಡಿದ್ದಾರೆ. ಆದರೆ ಕೆಮಿಕಲ್ಸ್ ನೇಮ್ ಏನೆಂದರೆ COCA-A- (5-6-Dimethyl Benzimidazole) ಇದನ್ನು ತಯಾರು ಮಾಡುತ್ತೇವೆಂದು ಹೇಳಿ ನಮ್ಮ ಸರ್ಕಾರದಿಂದ ನಮ್ಮ ಔಷಧಿ ನಿಯಂತ್ರಣ ಮಂಡಲಿಯಿಂದ ಲೈಸೆನ್ಸ್‌ನ್ನು ಪಡೆದಿದ್ದಾರೆ. ಲೈಸೆನ್ಸ್ ಪಡೆದು ನಾವು ತಯಾರು ಮಾಡುತ್ತಿದ್ದೇವೆಂದು ಹೇಳಿ ಸುಮಾರು 7 ವರ್ಷಗಳಿಂದ ಔಷಧಿ ಮಾರುಕಟ್ಟೆಯಲ್ಲಿ ಔಷಧಿಯನ್ನು ಸರಬರಾಜು ಮಾಡುತ್ತಿದ್ದಾರೆ. ಆದರೆ ವಾಸ್ತವವಾಗಿ ಅವರು ಅದನ್ನು ಇಲ್ಲಿ ತಯಾರು ಮಾಡುತ್ತಿಲ್ಲ. ಅವರು ಇಲ್ಲಿ ತಯಾರು ಮಾಡದೇ ಚೈನಾದಲ್ಲಿರತಕ್ಕಂಥ ಒಂದು ಕಂಪನಿಯಿಂದ ಔಷಧಿಯನ್ನು ತರಿಸಿ, ಚೈನಾದ ಮೆಸೆಸ್: Asfure Biotech (ಆ್ಯಸ್ ಫ್ಯೂರ್ ಬಯೋಟೆಕ್ ಸಂಸ್ಥೆ) ಸಂಸ್ಥೆಯಿಂದ ಆಮದು ಮಾಡಿಕೊಂಡಂತಹ ಔಷಧಿಯನ್ನು ತೆಗೆದುಕೊಂಡು ಬಂದು ನಾವೇ ಇಲ್ಲಿ ತಯಾರು ಮಾಡುತ್ತಿದ್ದೇವೆಂದು ಹೇಳಿ ನಮ್ಮ ದೇಶದ ಮಾರುಕಟ್ಟೆಯಲ್ಲಿ ಅವರು ಅದನ್ನು ಮಾರಾಟ ಮಾಡುತ್ತಿದ್ದಾರೆ. ಮಾರಾಟ ಮಾಡಿ ಸಾವಿರಾರು ಕೋಟಿ ರೂಪಾಯಿಗಳನ್ನು ಅವರು ನಮ್ಮ ದೇಶದಲ್ಲಿ ಲೂಟಿ ಹೊಡೆಯುತ್ತಿದ್ದಾರೆ. ನಮ್ಮ ಔಷಧಿ ನಿಯಂತ್ರಣ ಮಂಡಲಿಯವರು ತನಿಖೆ ಮಾಡಿದಂತಹ ಸಂದರ್ಭದಲ್ಲಿ ಜನವರಿ 17–18ನೇ ತಾರೀಖು ಆ ಘಟಕಕ್ಕೆ ಅವರು ಭೇಟಿ ಕೊಡುತ್ತಾರೆ. ಆ ಘಟಕಕ್ಕೆ ಭೇಟಿ ಕೊಟ್ಟು ಅದನ್ನು ಪರಿಶೀಲಿಸಿದರೆ, ಯಾವ ಲೈಸೆನ್ಸ್ ತೆಗೆದುಕೊಂಡಿದ್ದಾರೆ. ನಾವು ಇಂತಹ ಔಷಧಿಯನ್ನು ಈ ದೇಶದಲ್ಲಿ ತಯಾರು ಮಾಡುತ್ತಿದ್ದೇವೆ ಅಂತ ಹೇಳಿ. ಯಾವುದಕ್ಕೆ ಪರ್ಮಿಟ್ ತೆಗೆದುಕೊಂಡಿದ್ದಾರೆ ಆ ಔಷಧಿಯನ್ನು ಆ ಘಟಕದಲ್ಲಿ ತಯಾರು ಮಾಡುತ್ತಿಲ್ಲ ಎನ್ನತಕ್ಕಂಥಾದ್ದು ಖುದ್ದಾಗಿ ಅಲ್ಲಿಗೆ ಭೇಟಿ ಕೊಟ್ಟಂತಹ ಔಷಧ ನಿಯಂತ್ರಣ ಮಂಡಲಿ ಅಧಿಕಾರಿಗಳ ಗಮನಕ್ಕೆ ಬಂದಿದೆ. ಅದಾದ ನಂತರ ಕಾನೂನು ಬಾಹಿರವಾಗಿ ನೀವು ವಿದೇಶದಿಂದ ಔಷಧಿಯನ್ನು ತೆಗೆದುಕೊಂಡು ಮಾರಾಟ ಮಾಡುತ್ತಿದ್ದೀರಿ ಇದಕ್ಕೆ ನೀವು ಅನುಮತಿಯನ್ನು ತೆಗೆದುಕೊಂಡಿಲ್ಲ ಎಂದು ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ. ವಿದೇಶದಿಂದ ಔಷಧಿಯನ್ನು ತರಿಸಿ ಮಾರಾಟ ಮಾಡಬೇಕಾದರೆ ಅನುಮತಿಯನ್ನು ತೆಗೆದುಕೊಳ್ಳಬೇಕು. ಆ ಅನುಮತಿಯನ್ನು ತೆಗೆದುಕೊಂಡಿಲ್ಲ. ನಾವು ಕೊಟ್ಟಿರತಕ್ಕಂಥ ಲೈಸೆನ್ಸ್‌ನ್ನು ದುರುಪಯೋಗ-ಪಡಿಸಿಕೊಂಡು ನೀವು ವಿದೇಶದಿಂದ ಔಷಧಿಯನ್ನು ತೆಗೆದುಕೊಂಡು ಬಂದು ಇಲ್ಲಿ ಮಾರಾಟ ಮಾಡುತ್ತಿದ್ದೀರಿ ಅಂತ ಹೇಳಿ ಇವರಿಗೆ ನೋಟೀಸ್ ಕೊಟ್ಟ ಮೇಲೆ ತರಾತುರಿಯಾಗಿ ಫೆಬ್ರವರಿ 10ನೇ ತಾರೀಖು ಡೆಲ್ಲಿಗೆ ಹೋಗಿ, ಕೇಂದ್ರ ಸರ್ಕಾರದಿಂದ ಒಂದು ಪರ್ಮಿಷನ್ ತೆಗೆದುಕೊಂಡು ಬರುತ್ತಾರೆ. ಇವರು ನೋಟೀಸ್ ಕೊಟ್ಟ ಮೇಲೆ, ನಮ್ಮ ರಾಜ್ಯದ ಔಷಧಿ ನಿಯಂತ್ರಣ ಮಂಡಲಿಯವರು ನೋಟೀಸ್ ಕೊಡುತ್ತಾರೆ. ಆ ನೋಟೀಸ್ ಕೊಟ್ಟ ಮೇಲೆ ತರಾತುರಿಯಾಗಿ ದೆಹಲಿಗೆ ಹಾರಿ ಫೆಬ್ರವರಿ 10ನೇ ತಾರೀಖು ಒಂದು ಪರ್ಮಿಷನ್ ತೆಗೆದುಕೊಂಡು ಬಂದು ಬಿಡುತ್ತಾರೆ. ಇದರಲ್ಲಿ ಯಾರ್‍ಯಾರ ಕೈವಾಡ ಇದೆ? ಎನ್ನುವ ಬಗ್ಗೆ ಇವತ್ತು ಸರ್ಕಾರ ಹೇಳಿಕೆ ಕೊಡಬೇಕು. ಏಕೆಂದರೆ ಇದು ನರಸಂಬಂಧಿ ಖಾಯಿಲೆಯ ಔಷಧಿ, ವಿದೇಶಿ ಚೈನಾ ಕಂಪನಿಯಿಂದ

ತೆಗೆದುಕೊಂಡು ಬರುವ ಔಷಧಿಗೆ ಯಾವುದೇ ಗ್ಯಾರಂಟಿ ಇಲ್ಲ. ಸರ್ಕಾರದ ಅನುಮತಿ ಇಲ್ಲ. ಕದ್ದು ತಂದು ಮಾರಾಟ ಮಾಡುತ್ತಿರುವುದು, ಅದಕ್ಕೆ ನಮ್ಮ ಐಎಸ್ಐ ಮುದ್ರೆ ಇಲ್ಲ, ಸೆಂಟ್ರಲ್ ಗೌರ್ನಮೆಂಟ್ ಅನುಮತಿ ಇಲ್ಲ. ನಮ್ಮ ಆಲ್ ಇಂಡಿಯಾ ಡ್ರಗ್ಸ್ ಕಂಟ್ರೋಲ್ ಲೈಸೆನ್ಸ್ ಅದಕ್ಕೆ ಇಲ್ಲ. ಕದ್ದು ಕಳ್ಳತನದಿಂದ ಚೈನಾದೇಶದಿಂದ ತಂದು ಇಲ್ಲಿ ಮಾರಾಟ ಮಾಡಲಾಗುತ್ತಿದೆ. ಇದನ್ನು 7 ವರ್ಷಗಳಿಂದ ಕಣ್ಣು ಮುಚ್ಚಿಕೊಂಡು ನೋಡುತ್ತಿರುವ ಸರ್ಕಾರಗಳು, ನಮ್ಮ ಇಲ್ಲಿಯ ಅಧಿಕಾರಿಗಳು ನೋಟೀಸ್ ಕೊಟ್ಟ ಮೇಲೆ, ಜನವರಿ 17 ರಂದು ಇನ್‌ಸ್ಪೆಕ್ಷನ್ ಮಾಡುತ್ತಾರೆ. ಜನವರಿ 27ನೇ ತಾರೀಖು ಷೋಕಾಸ್ ನೋಟೀಸ್ ಕೊಡುತ್ತಾರೆ. ಫೆಬ್ರವರಿ 10ನೇ ತಾರೀಖು ಬಯೋಕಾನ್ ಕಂಪನಿಗೆ ಕೇಂದ್ರ ಸರ್ಕಾರದವರು ಲೈಸೆನ್ಸ್ ಕೊಡುತ್ತಾರೆ. ಇದರ ಹಿಂದೆ ಯಾರ ಕೈವಾಡವಿದೆ? ಯಾರ್ಯಾರು ಇದರಲ್ಲಿ ಶಾಮೀಲಾಗಿದ್ದಾರೆ? ಜನರ ಜೀವನದ ಜೊತೆ ಇದೊಂದು ಚೆಲ್ಲಾಟ, ಏಕೆಂದರೆ ನರಸಂಬಂಧಿ ಖಾಯಿಲೆಗೆ ಬಹಳ ಪ್ರಮುಖವಾಗಿ ಉಪಯೋಗ ಮಾಡುವ ಔಷಧಿ ಇದಾಗಿದೆ. ಇವತ್ತು ಮುಗ್ಧ ಜನರಿಗೆ ಈ ಔಷಧಿಯನ್ನು ಮಾರಾಟ ಮಾಡುವುದರಿಂದ, ಈ ದೇಶದಲ್ಲಿ ಏನೆಲ್ಲಾ ಅನಾಹುತಗಳಾಗಬಹುದು, ನಮ್ಮ ಬಡ ಜನರ ಪರಿಸ್ಥಿತಿ ಏನು ಇದಕ್ಕೆ ಸರ್ಕಾರ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಇದರಲ್ಲಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ಹೇಳಿಕೆ ಕೊಡಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ಆ ಕಿರಣ್ ಮಜೂಂದಾರ್‌ಗೆ ಅರೆಸ್ಟ್ ಮಾಡಿ ಸ್ವಾಮಿ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರೇನು ಶೂನ್ಯ ವೇಳೆಯಲ್ಲಿ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ನನ್ನ ಗಮನಕ್ಕೂ ಬಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎರಡೂ ಇದಕ್ಕೆ ಅನುಮತಿ ಕೊಟ್ಟಿರುವುದು, ನಮ್ಮ ರಾಜ್ಯ ಸರ್ಕಾರ ಅದನ್ನು ಕ್ಯಾನ್ಸಲ್ ಮಾಡಿರುವುದು, ಮತ್ತೆ ಕೇಂದ್ರ ಸರ್ಕಾರಕ್ಕೆ ಅವರು ಹೋಗಿ ವಿಶೇಷವಾಗಿ ಇಂಪೋರ್ಟ್ ಮಾಡುವುದಕ್ಕೆ ಲೈಸೆನ್ಸ್ ಪಡೆದುಕೊಳ್ಳುವ ಕೆಲಸ ಮಾಡಿದ್ದಾರೆ. ನಾನು ಈಗಾಗಲೇ ಈ ಬಗ್ಗೆ ತನಿಖೆ ಮಾಡಿ ವರದಿಯನ್ನು ನೀಡಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ವರದಿ ಬಂದ ತಕ್ಷಣ ಅದನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಸರ್ಕಾರ ಔಷಧ ನಿಯಂತ್ರಣ ಮಂಡಳಿಯವರು ಲೈಸೆನ್ಸ್ ಕೊಟ್ಟಿರುವುದು ಉತ್ಪಾದನೆ ಮಾಡುವುದಕ್ಕೆ, ಅವರು ಇಲ್ಲಿ ಉತ್ಪಾದನೆ ಮಾಡುತ್ತಿದ್ದೇವೆಂದು ತಪ್ಪು ಮಾಹಿತಿಯನ್ನು ಕೊಟ್ಟು ವಿದೇಶದಿಂದ ಯಾವುದೇ ಅನುಮತಿ ಇಲ್ಲದೆ ಕದ್ದು ಸಾಗಾಣಿಕೆ ಮಾಡಿ, ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರ ಲೈಸೆನ್ಸ್ ಕೊಡುವ ಪ್ರಶ್ನೆ ಬರುವುದಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎರಡೂ ಸೇರಿ ಕೊಟ್ಟಿಲ್ಲ. ರಾಜ್ಯ ಸರ್ಕಾರ, ಇಲ್ಲಿನ ಔಷಧ ನಿಯಂತ್ರಣ ಮಂಡಳಿಯವರು ಉತ್ಪಾದನೆ ಮಾಡುವುದಕ್ಕೆ ಕೊಟ್ಟಿರುವುದು ಬೇರೆ, ಅಲ್ಲಿ ಅವರು ಲೈಸೆನ್ಸ್ ತೆಗೆದುಕೊಂಡು ಬಂದಿರುವುದು ಮಾರಾಟ ಮಾಡುವುದಕ್ಕೆ; ಹಾಗಾಗಿ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ರಾಜ್ಯ ಸರ್ಕಾರದ್ದೇ ಬೇರೆ, ಕೇಂದ್ರ ಸರ್ಕಾರದ್ದೇ ಬೇರೆ.

ಶ್ರೀ ಆರ್. ಅಶೋಕ್ : ಇಲ್ಲಿ ತಯಾರು ಮಾಡುತ್ತಿಲ್ಲ. ನೇರವಾಗಿ ಚೈನಾದಿಂದ ಇಂಪೋರ್ಟ್ ಮಾಡುತ್ತಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಆಮದು ಮಾಡಿಕೊಳ್ಳಲಿಕ್ಕೆ ಪರ್ಮಿಷನ್ ತೆಗೆದುಕೊಂಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕೆ ಮೊದಲು, ಅವರು ಫೆಬ್ರವರಿ 10ನೇ ತಾರೀಖು ಪರ್ಮಿಷನ್ ತೆಗೆದುಕೊಂಡಿರುವುದು. ಇಲ್ಲಿ ಏಳು ವರ್ಷದಿಂದ ವ್ಯವಹಾರ ನಡೆಯುತ್ತಿದೆ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕಾಗಿದೆ.

ಶ್ರೀ ಆರ್. ಅಶೋಕ್ : ಈಗಾಗಲೇ ರಾಜ್ಯ ಸರ್ಕಾರ ಅದನ್ನು ಕ್ಯಾನ್ಸಲ್ ಮಾಡಿದೆ. ಕೇಂದ್ರ ಸರ್ಕಾರ ಅನುಮತಿ ಕೊಟ್ಟ ಮೇಲೆ ಮೊನ್ನೆ ರಾಜ್ಯ ಸರ್ಕಾರ ಅನುಮತಿಯನ್ನು ಕೊಟ್ಟಿರುವುದು, ಈ ಬಗ್ಗೆ ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಮಾಡಿದ್ದೇನೆ. ವರದಿಯನ್ನು ತರಿಸಿಕೊಂಡು ಸಭೆಯ ಮುಂದೆ ಮಂಡಿಸುತ್ತೇನೆ.

5. ಗಮನ ಸೆಳೆಯುವ ಸೂಚನೆಗಳು:

ವಿಷಯ: ಚಿತ್ತಾಪುರ ತಾಲ್ಲೂಕಿನ ಬೆಣ್ಣೆತೊರಾ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ) : ಮಾನ್ಯ ಅಧ್ಯಕ್ಷರೆ, ಚಿತ್ತಾಪುರ ತಾಲ್ಲೂಕಿನ ಬೆಣ್ಣೆತೊರಾ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ತಮ್ಮ ದಿನಾಂಕ: 23–3–2004ರ ಪತ್ರದಲ್ಲಿ ಬೆಣ್ಣೆತೊರಾ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಡಿಸಿದ ನಂತರ ಸುಮಾರು ರೂ. 2.00 ಕೋಟಿಗಳ ಬೋಗಸ್ ಬಿಲ್ಲುಗಳನ್ನು ಹೆಬ್ಬಾಳ ಉಪ ವಿಭಾಗದಲ್ಲಿ ಕೈಗೊಂಡಿರುವ ಕಾಮಗಾರಿಯಲ್ಲಿ ತಯಾರಿಸಿದ್ದು, ಅವ್ಯವಹಾರ ಮಾಡಿರುವ ಬಗ್ಗೆ ತಿಳಿದು ಬಂದಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸುತ್ತಾ, ಎಲ್ಲಾ ಕಾಮಗಾರಿಗಳನ್ನು ಹಣ ಪಾವತಿಸುವ ಮುಂಚೆ ಪರಿಶೀಲನೆ ಮಾಡಲು ತಿಳಿಸಿರುತ್ತಾರೆ. ಹೆಬ್ಬಾಳದ ಸಹಾಯಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ರವರು ಕಾಮಗಾರಿಗಳನ್ನು ಕೈಗೊಳ್ಳದೆ ಬೋಗಸ್ ಬಿಲ್ಲುಗಳನ್ನು ತಯಾರಿಸಿರುತ್ತಾರೆಂದು ತಿಳಿಸಿರುತ್ತಾರೆ.

ಇದೇ ಶಾಸಕರು ದಿನಾಂಕ: 2–8–2004ರ ಪತ್ರದಲ್ಲಿ ಬೆಣ್ಣೆತೊರಾ ಯೋಜನೆಯಲ್ಲಿ ಅನಾವಶ್ಯಕ ಹಾಗೂ ಅಗತ್ಯಕ್ಕಿಂತ ಹೆಚ್ಚಿನ ಸಾಮಗ್ರಿಗಳನ್ನು ಖರೀದಿಸಲಾಗಿದ್ದು, ಇವುಗಳೆಲ್ಲವು ಉಗ್ರಾಣದಲ್ಲಿ ಹಾಗೂ ಕಛೇರಿಯ ಆವರಣದಲ್ಲಿ ಕೊಳೆಯುತ್ತಿವೆ. ಕೆಲವು ವ್ಯಕ್ತಿಗಳು ಒಬ್ಬೊಬ್ಬರ ಹೆಸರಿನಲ್ಲಿ ನಾಲ್ಕಾರು ಫಾರ್ಮ್‌ಗಳ ಹೆಸರಿನಲ್ಲಿ ಸರಬರಾಜು ಮಾಡಿದ್ದಾರೆ. ಬೆಲೆಯಲ್ಲಿಯೂ ಕೂಡ ಅತೀ ಹೆಚ್ಚಿನ ದರದಲ್ಲಿ ಖರೀದಿಸಲಾಗಿದೆಯೆಂದು ತಿಳಿದು ಬಂದಿದೆ ಎಂದು ತಿಳಿಸುತ್ತಾ, ಈ ಬೋಗಸ್ ಫರ್ಮ್‌ಗಳ ಹೆಸರುಗಳನ್ನು ಇಟ್ಟುಕೊಂಡು ಸರಬರಾಜು ಮಾಡಿದವರಿಂದ ಹಣ ವಸೂಲು ಮಾಡಲು ಕ್ರಮ ಕೈಗೊಳ್ಳುವಂತೆ ಸಹ ತಿಳಿಸಿರುತ್ತಾರೆ. ಯೋಜನೆಯ ಎಡದಂತೆ ಕಾಲುವೆಗೆ ಹೂಳೆತ್ತುವ ಹಾಗೂ ಗಿಡಗಂಟೆಗಳನ್ನು ಕಡಿಯುವ ಹೆಸರಿನಲ್ಲಿ ಸುಮಾರು ರೂ. 28.00

ಲಕ್ಷಗಳ ಹಣ ಕೆಲವು ಅಧಿಕಾರಿಗಳು ಅವರಿಗೆ ಅನುಕೂಲವಾಗುವ ನಾಲ್ಕಾರು ಗುತ್ತಿಗೆದಾರರ ಹೆಸರಿನಲ್ಲಿ ಕೆಲಸ ಮಾಡದೆ ಹಣ ಎತ್ತಿ ಹಾಕಿರುತ್ತಾರೆ. ಗುತ್ತಿಗೆದಾರರಾದ ಶ್ರೀ ರಘು ಭಗವಂತ್, ಇವರು ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಸಹೋದರೆಂದು ತಿಳಿದು ಬಂದಿದ್ದು, ಇವರು ಕೆಲಸ ಮಾಡದೇ ದುಡ್ಡು ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಅದೇ ರೀತಿ ಬಲದಂಡೆ ಕಾಲುವೆಯಲ್ಲಿಯೂ ಕೂಡ ಸುಮಾರು ರೂ. 32.00 ಲಕ್ಷಗಳಷ್ಟು ಹೂಳೆತ್ತಲು ಹಾಗೂ ಗಿಡಗಂಟೆಗಳು ಕಡಿಯುವ ಹೆಸರಿನಲ್ಲಿ ಖರ್ಚು ಮಾಡಲಾಗಿದ್ದು, ಎಷ್ಟು ಸಲ ರಿಪೇರಿ ಹೆಸರಿನಲ್ಲಿ ಖರ್ಚು ಮಾಡಲಾಗಿರುವ ಬಗ್ಗೆ ವಿಚಾರಣೆಗೊಳಿಸಬೇಕು ಎಂದು ಸಹ ತಿಳಿಸಿರುತ್ತಾರೆ. ಕಳಪೆ ಮಟ್ಟದ ಬಲದಂಡೆ ಕಾಲುವೆಯ ಸ್ಲೂಯಿಸ್ ಗೇಟ್ ಅನ್ನು ಅಳವಡಿಸಿರುವುದರಿಂದ ಕಾಲುವೆಯಲ್ಲಿ ಸತತವಾಗಿ ಕಾಲುವೆಯ ಮುಖಾಂತರ ನೀರು ಸೋರಿಹೋಗುತ್ತಿದ್ದು, ಸಂಬಂಧ ಪಟ್ಟ ಗುತ್ತಿಗೆದಾರರಿಂದ ಕಳಪೆ ಸ್ಲೂಯಿಸ್ ಗೇಟ್ ಅಳವಡಿಸಿರುವುದರಿಂದ ಹಣ ವಸೂಲಿ ಮಾಡಲು ಹಾಗೂ ಈ ಗೇಟುಗಳನ್ನು ಬದಲಿಸಿ ನೀರು ಸೋರುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಬೆಣ್ಣಿತೋರ ಯೋಜನೆ 1972ರಲ್ಲಿ ರೂ. 7.50 ಕೋಟಿಗಳ ಯೋಜನೆಯಾಗಿದ್ದು ಈಗ ರೂ. 300.00 ಕೋಟಿಗಳಾಗಿದ್ದು, ಮುಗಿಯಬೇಕಾದರೆ ಈ ಪರಿಸ್ಥಿತಿಯಲ್ಲಿ ಇನ್ನೂ ರೂ. 80–100 ಕೋಟಿಗಳು ಬೇಕಾಗಬಹುದೆಂದು ಅನಿಸುತ್ತದೆ ಎಂದು ತಿಳಿಸಿರುತ್ತಾರೆ.

ಮಾನ್ಯ ಶಾಸಕರ ಈ ದೂರಿನ ಕುರಿತು ಹಾಗೂ ಇತರ ಜನ ಪ್ರತಿನಿಧಿಗಳ ದೂರುಗಳು ಹಾಗೂ ವ್ಯವಸ್ಥಾಪಕ, ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ಸಹ ಯೋಜನೆಯ ತಪಾಸಣೆಗಾಗಿ ದಿನಾಂಕ: 24–7–2004ರಂದು ಯೋಜನೆಗೆ ಭೇಟಿ ನೀಡಿದ್ದು, ಎಡದಂಡೆ ಕಾಲುವೆ ತೃಪ್ತಿಕರವಾಗಿ ನಡೆಯದಿಲ್ಲದಿರುವುದು ಕಂಡು ಬಂದಿದೆ ಎಂದು, ಹಾಗೂ ದಿನಾಂಕ: 31–8–04ರಲ್ಲಿ ಎಡದಂಡೆ ಕಾಮಗಾರಿಯಲ್ಲಿ ಅಧಿಕಾರಿಯ ಸಹೋದರರೇ ಸುಮಾರು 24 ಕಾಮಗಾರಿಗಳಲ್ಲಿ 13 ಕಾಮಗಾರಿಗಳ ಕೆಲಸ ಮಾಡದೇ ದುಡ್ಡು ಪಡೆಯುತ್ತಿರುತ್ತಾರೆ ಎಂಬ ಆಪಾದನೆ ಇದ್ದು ಈ ಕುರಿತು ತನಿಖೆ ನಡೆಸಲು ಇಲಾಖೆಯ ವಿಚಕ್ಷಣಾದಳವನ್ನು ಕೋರಿದ್ದು, ಇವೆಲ್ಲದರ ಸಂಬಂಧವಾಗಿ ಜಲ ಸಂಪನ್ಮೂಲ ಇಲಾಖೆಯ ವಿಚಕ್ಷಣಾ ದಳದಿಂದ ತನಿಖೆ ನಡೆಸಲು ಸಹ ಕೋರಿರುತ್ತಾರೆ.

ಈ ವಿಚಕ್ಷಣಾ ದಳದ ಅಧಿಕಾರಿಗಳು ದಿನಾಂಕ: 8–11–04 ಮತ್ತು 9–11–2004ರಂದು ಸ್ಥಳಕ್ಕೆ ಭೇಟಿ ನೀಡಿ, ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಕಡತದೊಂದಿಗೆ ವಿಚಕ್ಷಣಾದಳ ಕಛೇರಿಯಲ್ಲಿ ಹಾಜರಾಗುವಂತೆ ತಿಳಿಸಿ, ಅವರ ಹೇಳಿಕೆಯನ್ನು ಸಹ ಪಡೆದಿರುತ್ತಾರೆ. ದೂರುಗಳಲ್ಲಿನ ಅಂಶವಾರು ತನಿಖೆ, ವಿಚಾರಣೆ ಮತ್ತು ಕಡತಗಳ ಪರಿಶೀಲನೆ ಮಾಡಿರುತ್ತಾರೆ ಹಾಗೂ ಅಧಿಕಾರಿಗಳ ಹೇಳಿಕೆಯನ್ನು ಸಹ ಪಡೆದಿರುತ್ತಾರೆ. ವಿಚಕ್ಷಣಾ ದಳವು ವಿವರವಾದ ವರದಿಯನ್ನು ದಿನಾಂಕ: 19–3–2005ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಚಕ್ಷಣಾದಳವು ತನ್ನ ವರದಿಯಲ್ಲಿ ನೀಡಿರುವ ಅಭಿಪ್ರಾಯದ ವಿವರಗಳನ್ನು ಈ ಕೆಳಗೆ ವಿವರಿಸಿದೆ:

1. ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ವಹಿಸಿರುವುದರಲ್ಲಿ ಗುತ್ತಿಗೆ ಕರಾರಿನ ಸ್ಪೆಸಿಫಿಕೇಷನ್‌ನಂತೆ

ಕಾಮಗಾರಿಯನ್ನು ನಿರ್ಮಾಣ ಮಾಡದಿರುವುದಕ್ಕೆ ಹಾಗೂ ಕಾಮಗಾರಿಯನ್ನು ನಿರ್ವಹಿಸದೆ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಿರುವುದರಿಂದ ಸರ್ಕಾರಕ್ಕೆ ನಷ್ಟ ಉಂಟುಮಾಡಿರುವುದು ತನಿಖೆಯಿಂದ ಕಂಡು ಬರುತ್ತದೆ.

2. ಬಲದಂಡೆ ಕಾಲುವೆಯ ಕಿ.ಮೀ. 0.00 ರಿಂದ 49.55 ಕಿ.ಮೀ. ರವರೆಗೆ ಕಾಮಗಾರಿಯನ್ನು ತುಂಡು ತುಂಡಾಗಿಸಿ ವಹಿಸಿ ಕಾಮಗಾರಿಯ ವಿಶಿಷ್ಟತೆಗೆ ಅನುಗುಣವಾಗಿ ಸಂಪೂರ್ಣವಾಗಿ ನಿರ್ವಹಿಸದಿರುವುದು ಕಂಡು ಬಂದಿದ್ದು ಇದಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಗುರುತಿಸಲಾಗಿರುತ್ತದೆ.

3. ಅಂದಿನ ಮಾನ್ಯ ಸಚಿವರು ದಿನಾಂಕ: 20–6–03 ರಂದು ಹಿರಿಯ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳ ಎದುರಿಗೆ ನೀಡಿದ ನಿರ್ದೇಶನ ಹಾಗೂ ದಿನಾಂಕ: 17–7–03ರಂದು ನಡೆದ ಸಭೆಯಲ್ಲಿ ನೀಡಿರುವ ನಡವಳಿಯನ್ನು ಗಮನ–ದಲ್ಲಿಟ್ಟುಕೊಂಡು ನೋಡಿದಾಗ, ಎಲ್ಲಾ ಕಾಮಗಾರಿಗಳನ್ನು ಅವರು ನೀಡಿದ ಕಾರ್ಯಾದೇಶದಲ್ಲಿದ್ದ ಗುಣಮಟ್ಟ ಹಾಗೂ ಪ್ರಾಮಾಣಿಕತೆಯಂತೆ ಕಾಮಗಾರಿಗಳನ್ನು ನಿರ್ವಹಿಸಿರುವುದರಿಂದ ರೂ. 91.00 ಲಕ್ಷಗಳ ಬಿಲ್ಲುಗಳಲ್ಲಿ ರೂ. 33.00 ಲಕ್ಷಗಳ ಭಾಗಶಃ ಪಾವತಿಸಿರುವುದು ಹಾಗೂ ಉದ್ದೇಶಿಸಿದಂತೆ ನೀರಿ ಪೂರೈಸಿರುವುದು ಸಹ ಕಂಡುಬಂದಿದೆ.

4. ಸಹಾಯಕ ಕಾರ್ಯಪಾಲಕರಾದ ಶ್ರೀ ಗೋವಿಂದ ಇವರು ಸಣ್ಣ ನೀರಾವರಿಯಲ್ಲಿ ಸಹ ಕಾಮಗಾರಿಗಳನ್ನು ಇಲಾಖಾ ನಿಯಮಗಳ ಪ್ರಕಾರ ನಿರ್ವಹಿಸದೆ ಅಳತೆ ಪುಸ್ತಕದಲ್ಲಿ ದಾಖಲಿಸಿರುವುದನ್ನು ಮೇಲಾಧಿಕಾರಿಗಳು ಸ್ಥಳ ಪರೀಕ್ಷೆ ಮಾಡಿದಾಗ ಕಾಮಗಾರಿ ನಿರ್ವಹಿಸದೇ ಇರುವುದು ಕಂಡು ಬಂದು, ಇವರನ್ನು ಜವಾಬ್ದಾರರನ್ನಾಗಿ ಮಾಡಿರುವುದು ಸಹ ಕಡತದಲ್ಲಿ ಕಂಡು ಬಂದಿದೆ.

ಸಂಬಂಧಿಸಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಬಹುದೆಂದು ವಿಚಕ್ಷಣಾದಳದ ಅಭಿಪ್ರಾಯವಾಗಿರುತ್ತದೆ.

ಅದರಂತೆ ಈಗ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಸರ್ಕಾರದಿಂದ ದಿನಾಂಕ: 17–1–06ರ ಪತ್ರದಲ್ಲಿ ಕಾರಣ ಕೇಳುವ ನೋಟೀಸನ್ನು ಜಾರಿಮಾಡಿದೆ.

1. ಶ್ರೀ ಎಂ. ನಂಜಪ್ಪ, ಅಧೀಕ್ಷಕ ಅಭಿಯಂತರರು
2. ಶ್ರೀ ಹೆಚ್.ವಿ. ಹರೀಶ್, ಕಾರ್ಯಪಾಲಕ ಇಂಜಿನಿಯರ್
3. ಶ್ರೀ ಅಂಜಣ್ಣಾ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
4. ಶ್ರೀ ಬಿ.ಎ. ಗೋವಿಂದ, ಕಾರ್ಯಪಾಲಕ ಇಂಜಿನಿಯರ್
5. ಶ್ರೀ ಶಾಂತಮಲ್ಲಪ್ಪ ಶಿವಕೇರಿ, ಸಹಾಯಕ ಇಂಜಿನಿಯರ್
6. ಶ್ರೀ ಅಬ್ದುಲ್ ಅಜೀಮ, ಕಿರಿಯ ಇಂಜಿನಿಯರ್
7. ಶ್ರೀ ಸಾಯಿಬಣ್ಣ, ಕಿರಿಯ ಇಂಜಿನಿಯರ್

ಇದಲ್ಲದೇ ಬೆಣ್ಣೆತೋರ ಯೋಜನೆಯನ್ನು ಸೇರಿಸಿಕೊಂಡು ಇತರ ನಾಲ್ಕು ಯೋಜನೆಗಳಲ್ಲಿ (ನಬಾರ್ಡ್ ಸಹಾಯ ದನವನ್ನು) ಒದಗಿಸಲಾದ ಅನಾವಶ್ಯಕ, ಅನಗತ್ಯ ಸಾಮಗ್ರಿಗಳನ್ನು ಖರೀದಿಸಿದ್ದು,

ಹಾಗೂ ಈ ಸಾಮಗ್ರಿಗಳು ಈಗ ಉಗ್ರಾಣಗಳಲ್ಲಿ ಹಾಗೂ ಕಛೇರಿಗಳ ಆವರಣಗಳಲ್ಲಿ ಉಳಿದಿರುವುದನ್ನು ನಿವೃತ್ತ ಲೇಖಪಾಲರು, ಶ್ರೀ ಜಾಲಿಹಾಳ್‌ರವರ ನೇತೃತ್ವದಲ್ಲಿ ಸರ್ಕಾರ ರಚಿಸಲಾಗಿದ್ದ ತಂಡವು ಸಹ ಸರ್ಕಾರಕ್ಕೆ ಸಲ್ಲಿಸಿದ ವರದಿಯ ವಿವರಗಳನ್ನು ಆದರಿಸಿ ಈ ರೀತಿ ಅನಗತ್ಯ ಹಾಗೂ ಅನಾವಶ್ಯಕ ಹಾಗೂ ಅಧಿಕ ಪ್ರಮಾಣದಲ್ಲಿ ಸಾಮಗ್ರಿಗಳನ್ನು ಖರೀದಿಸಿ ಸರ್ಕಾರಕ್ಕೆ ಆಗಿರುವ ನಷ್ಟಕ್ಕೆ ಕಾರಣವಾದ ಅಧಿಕಾರಿಗಳನ್ನು ಗುರುತಿಸಿ ದೋಷಾರೋಪಣ ಪಟ್ಟಿ, ಮುಖ್ಯ ಇಂಜಿನಿಯರ್‌ರವರು 11/05ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಅಧಿಕಾರಿಗಳು ಎಷ್ಟರ ಮಟ್ಟಿಗೆ ಜವಾಬ್ದಾರರು ಎಂಬುವುದರ ಕುರಿತು ಹೆಚ್ಚುವರಿ ಮಾಹಿತಿ ಒದಗಿಸುವಂತೆ ಈಗ ದಿನಾಂಕ: 17–1–2006ರ ಪತ್ರದಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರವರನ್ನು ನೇರವಾಗಿ ಕೇಳಿದೆ. ಹೆಚ್ಚುವರಿ ಮಾಹಿತಿಯನ್ನು ನಿರೀಕ್ಷಿಸಿದೆ.

ಈಗ ಯೋಜನಾ ಅಧಿಕಾರಿಗಳಿಂದ ಬಂದಿರುವ ವಿವರಗಳಂತೆ ಹೆಬ್ಬಾಳ ವಿಭಾಗದಲ್ಲಿ 14 ಅಧಿಕಾರಿ/ನೌಕರರನ್ನು ಗುರುತಿಸಲಾಗಿದೆ. ಇದರಲ್ಲಿ 4 ಅಧಿಕಾರಿಗಳು ನಿವೃತ್ತರಾಗಿದ್ದು, ಉಳಿದ 10 ಅಧಿಕಾರಿ/ನೌಕರರು ಸೇವೆಯಲ್ಲಿರುತ್ತಾರೆ. ಸೇವೆಯಲ್ಲಿರುವ ಅಧಿಕಾರಿಗಳು/ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಇನ್ನುಳಿದ ಸೇವೆಯಿಂದ ನಿವೃತ್ತರಾದ ಅಧಿಕಾರಿಗಳಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ಅವರುಗಳ ಮೇಲೆ ಸಕ್ಷಮ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಲು ಕ್ರಮ ಜರುಗಿಸಲಾಗುತ್ತದೆ. ಉಳಿದಂತೆ ಎಲ್ಲಾ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಆದ್ಯತೆ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಗುಲ್ಬರ್ಗಾ ವಿಭಾಗದಲ್ಲೂ ಸಹ ಒಟ್ಟು 13 ಅಧಿಕಾರಿ/ನೌಕರರನ್ನು ಗುರುತಿಸಲಾಗಿದೆ. ಇದರಲ್ಲಿ 8 ಅಧಿಕಾರಿಗಳು ನಿವೃತ್ತರಾಗಿದ್ದು, ಉಳಿದ 5 ಅಧಿಕಾರಿ/ನೌಕರರು ಸೇವೆಯಲ್ಲಿರುತ್ತಾರೆ. ಸೇವೆಯಲ್ಲಿರುವ ಅಧಿಕಾರಿಗಳು/ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಇನ್ನುಳಿದ ಸೇವೆಯಿಂದ ನಿವೃತ್ತರಾದ ಅಧಿಕಾರಿಗಳಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ಅವರುಗಳ ಮೇಲೆ ಸಕ್ಷಮ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಲು ಕ್ರಮ ಜರುಗಿಸಲಾಗುತ್ತದೆ.

ಈ ಮೇಲೆ ವಿವರಿಸಿರುವಂತೆ, ಬೆಣ್ಣೆತೋರ ಯೋಜನೆಯ ಅನುಷ್ಠಾನದಲ್ಲಿ ನಡೆದಿರುವ ಅವ್ಯವಹಾರ ಕುರಿತು ಸರ್ಕಾರ ವಿವಿಧ ಮೂಲಗಳಿಂದ ತನಿಖೆ ನಡೆಸಿ ವರದಿಗಳನ್ನು ಪಡೆದಿದ್ದು ಈ ತನಿಖಾ ವರದಿಗಳಲ್ಲಿ ಗುರುತಿಸಲಾದ ಅಧಿಕಾರಿಗಳ ಮೇಲೆ ಈಗಾಗಲೇ ಶಿಸ್ತು ಕ್ರಮ ಜರುಗಿಸಲು ದೋಶಾರೋಪಣ ಪಟ್ಟಿಗಳನ್ನು ಎಲ್ಲಾ ಆರೋಪಿತ ಅಧಿಕಾರಿಗಳಿಗೆ ಜಾರಿಮಾಡಲಾಗಿದೆ. ಈ ಪೈಕಿ 6 ಅಧಿಕಾರಿಗಳಿಂದ ಉತ್ತರ ಬಂದಿದ್ದು ಒಬ್ಬರು ಉತ್ತರ ಸಲ್ಲಿಸಿರುವುದಿಲ್ಲ. ಆದ್ಯತೆ ಮೇಲೆ ವಿಚಾರಣಾ ಅಧಿಕಾರಿಗಳನ್ನು ನೇಮಕ ಮಾಡಿ ಮುಂದಿನ ಕ್ರಮ ಜರುಗಿಸಲಾಗುವುದು. ನಿವೃತ್ತಿ ಹೊಂದಿದ ಅಧಿಕಾರಿಯಾದ ಶ್ರೀ ಎಂ. ನಂಜಪ್ಪ, ಕಾರ್ಯಪಾಲಕ ಇಂಜಿನಿಯರ್, ಇವರ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯಲಾಗಿದೆ. ಮುಂದಿನ ಕ್ರಮಗಳನ್ನು ನಿಯಮಾನುಸಾರ ತ್ವರಿತಗತಿಯಲ್ಲಿ ತೆಗೆದುಕೊಳ್ಳಲಾಗುವುದು.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ : ಮಾನ್ಯ ಅಧ್ಯಕ್ಷರೆ, ಈ ಬೆಣ್ಣೆತೊರ ಯೋಜನೆಯಲ್ಲಿ 259 ತನಿಖೆಗಳಿವೆ. ಇಲ್ಲಿಯವರೆಗೆ ಕೇವಲ 59 ತನಿಖೆಗಳು ಪೂರ್ತಿಯಾಗಿವೆ. ಇನ್ನೂ 200 ತನಿಖೆಗಳಾಗಬೇಕಾಗಿದೆ. ಕಳೆದ ಸಲವೂ ನಾನು ಹೇಳುತ್ತಿದ್ದೆ. ಇದು ದೊಡ್ಡ ಹಗರಣವಿದೆ ಕೋಟ್ಯಾಂತರ ರೂಪಾಯಿ ತಿಂದು ಹಾಕಿದ್ದಾರೆ. ಇದರ ಬಗ್ಗೆ ತಕ್ಷಣ ವಿಚಾರಣೆಯಾಗಬೇಕು ಅಂತ ಹೇಳಿದರೂ ಇಲ್ಲಿಯವರೆಗೆ 5 ಮುಖ್ಯ ಅಭಿಯಂತರರು ನಿವೃತ್ತರಾಗಿದ್ದಾರೆ. ಅವರ ಮೇಲೆ ತನಿಖೆ ನಡೆಸಲು ಆಗಲಿಲ್ಲ. ಅವರು ಮನೆಗೆ ಹೋಗಿದ್ದಾರೆ. ಈಗ ಎಷ್ಟು ಜನ ಭೂಮಿಬಿಟ್ಟು ಹೋಗಿದ್ದಾರೋ ಅದು ಗೊತ್ತಿಲ್ಲ. ಈ ಹಗರಣದಲ್ಲಿದ್ದವರಿಗೆ ಎಷ್ಟೋ ಜನಕ್ಕೆ ಎಸ್‌ಇಗಳು ಅಂತ ಬಡ್ತಿ ಕೊಟ್ಟಿದ್ದಾರೆ. ಎಇಇ ಇದ್ದವರಿಗೆ ಇಇ ಮಾಡಿದ್ದಾರೆ. ಹಗರಣದಲ್ಲಿದ್ದವರಿಗೆ ಬಡ್ತಿ ಕೊಡಬಾರದಾಗಿತ್ತು. ತಪ್ಪಾಗಿದೆ. ಈಗಲಾದರೂ ಸಚಿವರು ಅದನ್ನು ಹಿಂತೆಗೆದುಕೊಳ್ಳಬೇಕು. ಬರೀ ಅಧಿಕಾರಿಗಳ ಮಟ್ಟದಲ್ಲಿ ವಿಚಾರಣೆ ನಡೆಸಿಕೊಂಡು ಹೋದರೆ ಇದು ಎಂದಿಗೂ ಮುಗಿಯುವುದಿಲ್ಲ. ಅದಕ್ಕಾಗಿ ಒಂದು ಸದನ ಸಮಿತಿ ರಚನೆ ಮಾಡಿರಿ ಇಲ್ಲಾಂದ್ರೆ ಅಂದಾಜು ಸಮಿತಿಗೆ ರೆಫರ್ ಮಾಡಿರಿ. ಇದು ದೊಡ್ಡ ಹಗರಣ. ತಮ್ಮ ಕಣ್ಣಿಗೂ ಕಾಣುತ್ತಿದೆ. ಮಾನ್ಯ ಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ. ಎಲ್ಲಾ ಹಂತದಲ್ಲಿ ಅಧಿಕಾರಿಗಳು ಈ ಹಗರಣದಲ್ಲಿ ಶಾಮೀಲಾಗಿದ್ದಾರೆ. ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದರ ಪೂರ್ತಿ ತನಿಖೆ ಸದನದ ಸಮಿತಿಯಿಂದಲೇ ಆಗಬೇಕು ಅಂತ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯ ಪಕ್ಷ ಅಂದಾಜು ಸಮಿತಿಗಾದರೂ ರೆಫರ್ ಮಾಡಿದರೆ ಒಳ್ಳೆಯದಾಗುತ್ತದೆ. ಕಳೆದ ಹತ್ತಾರು ವರ್ಷಗಳಿಂದ ಇದರಲ್ಲಿ ಕೋಟಿಗಟ್ಟಲೆ ದುಡ್ಡು ತಿಂದು ಹಾಕಿದ್ದಾರೆ. ಹೂಳೆತ್ತುವ ಹೆಸರಿನಲ್ಲಿ ರಸ್ತೆ ರಿಪೇರಿ ಹೆಸರಿನಲ್ಲಿ ಎಷ್ಟೋ ದುಡ್ಡು ತಿಂದು ಹಾಕಿದ್ದಾರೆ. ಸದನ ಸಮಿತಿ ವಿಚಾರಣೆ ಮಾಡಲಿಕ್ಕೆ ವ್ಯವಸ್ಥೆ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಇಲಾಖೆ ಏನಾಗಿದೆ ಅಂದರೆ, ಇವರ ಎಸ್ಟಿಮೇಟ್ ಆಗಲಿ ದುಡ್ಡು ಕೊಡೋದಾಗಲಿ ಜನ ಸಾಮಾನ್ಯರಿಗೆ ಅಥವಾ ಜನಪ್ರತಿನಿಧಿಗಳಿಗೆ ಯಾರನ್ನೂ ಕೇಳಿ ಮಾಡುವುದಿಲ್ಲ. ಗುತ್ತಿಗೆದಾರರಿಗೆ ಹೇಗೆ ಬೇಕೋ ಹಾಗೆ ಮಾಡಿಕೊಂಡು ನೀರಾವರಿ ಇಲಾಖೆಯಲ್ಲಿ ಪ್ರಗತಿಯನ್ನು ನಾವು ಹೇಗೆ ಹೇಳುತ್ತೇವೆ ಅಂದರೆ ಎಷ್ಟು ಕಿಲೋ ಮೀಟರ್ ನೀರು ಮುಂದಕ್ಕೆ ಹರಿಯಿತು ಅಂತ ಯಾರೂ ಕೇಳುವುದಿಲ್ಲ. ಎಷ್ಟು ದುಡ್ಡು ಖರ್ಚಾಯಿತು ಎಂಬುದರ ಮೇಲೆ ನಮ್ಮ ರಾಜ್ಯಕ್ಕೆ ನೀರಾವರಿ ಸಮರ್ಪಕವಾಗಿದೆ ಎಂದು ಹೇಳುತ್ತೇವೆ. ನಮ್ಮ ಮಾನ್ಯ ಈಶ್ವರಪ್ಪನವರು ಹೊಸದಾಗಿ ಈ ಇಲಾಖೆಯನ್ನು ಸ್ವೀಕಾರ ಮಾಡಿದ್ದಾರೆ. ಸಮಸ್ತ ರಾಜ್ಯದಲ್ಲಿ ನೀರಾವರಿಯಡಿ ಖರ್ಚಾಗುತ್ತಿರುವ ದುಡ್ಡು ಜನಸಾಮಾನ್ಯರಿಗೆ ತಲುಪಬೇಕು. ರಾಜ್ಯದ ನೀರಾವರಿ ಇಲಾಖೆ ನೌಕರರಿಗೆ ಕಟ್ಟುನಿಟ್ಟಾಗಿ ನಿರ್ದೇಶನ ಮಾಡಿ ಜನ ಸಾಮಾನ್ಯರಿಗೆ ಅವರು ಬೇಕಾದ ಕೆಲಸ ಮಾಡಬೇಕು ಅಥವಾ ಜನ ಪ್ರತಿನಿಧಿಗಳನ್ನು ಕೇಳಿ ಯಾರಾದರೂ ಮಾಡಬೇಕು. ಎಲ್ಲಾ ಬಿಟ್ಟು ರಾತ್ರೋ ರಾತ್ರಿ, ಒಬ್ಬ ಇಂಜನಿಯರ್ ಒಬ್ಬ ಡಿಪ್ಲೋಮಾ ಹೋಲ್ಡರನ್ನು ಇಟ್ಟುಕೊಂಡಿರುತ್ತಾನೆ.

(ಗೊಂದಲ)

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೆಣ್ಣೆತೊರಾ ಅಮರ್ಜ ನಮಗೂ ಸೇರುತ್ತದೆ. ಏಳೂವರೆ ಕೋಟಿ ರೂಪಾಯಿ ಯೋಜನೆಗೆ 300 ಕೋಟಿ ರೂ. ಖರ್ಚು ಮಾಡಲಾಗಿದೆ.

ಇನ್ನೂ ನೂರು ಕೋಟಿ ಬೇಕು ಅಂತ ಸಚಿವರು ಕೇಳುತ್ತಿದ್ದೀರಿ, ಅಷ್ಟು ಕೊಟ್ಟರೆ ನೀವು ಏನು ಮಾಡೋರಿದ್ದೀರಿ ಅದು ನಮಗೆ ಗೊತ್ತಾಗಬೇಕಲ್ಲಾ.

ಅಧ್ಯಕ್ಷರು : ಮಾನ್ಯ ಸಚಿವರೆ, ನೋಡಿ ಅವರೆಲ್ಲಾ ಹೇಳಿದ್ದಾರೆ. ಯಾವ ರೀತಿ ತನಿಖೆ ಮಾಡಿಸುತ್ತಿದ್ದೀರಿ? ಅವರು ಏನು ಹೇಳುತ್ತಾರೆ ಅಂದರೆ ನಿಮ್ಮ ಇಲಾಖೆ ವಿಚಾರಣೆಯಿಂದ ಏನೂ ಪ್ರಯೋಜನವಾಗುವುದಿಲ್ಲ. 250 ತನಿಖೆಗಳಿದ್ದು ಇಲ್ಲಿವರೆಗೆ 50 ಮುಗಿದಿದ್ದು ಇನ್ನೂ 200 ತನಿಖೆ ಇದೆ ಅಂದರೆ ಬಹುಶಃ ಇನ್ನು 10, 15 ವರ್ಷವೋ ಆಗುತ್ತದೆ, ಎಲ್ಲಾ ರಿಟೈರಾಗಿ ಹೋಗುತ್ತಾರೆ. ಆ ಕಾರಣದಿಂದ ಯಾವ ರೀತಿ ಎನ್‌ಕ್ವಾಯರಿ ಮಾಡುತ್ತೀರಿ? ಒಂದು ನಿಗದಿತ ಅವಧಿಯಲ್ಲಿ ಹೇಗೆ ಮುಗಿಸುತ್ತೀರಿ ಅದನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಗುಲ್ಬರ್ಗಾ ಹಿಂದುಳಿದ ಜಿಲ್ಲೆ ಇದೆ. ಬೆಣ್ಣೆತೊರ ಒಂದೇ ಅಲ್ಲ ಅಮರ್ಜದಲ್ಲೂ ಅವ್ಯವಹಾರ ಆಗಿ ಇವತ್ತು ಕಾಲುವೆಗೆ ಹೋಗುವ ನೀರು ಡ್ಯಾಮಿಗೆ ಹೋಗುತ್ತಾ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ ಮಾನ್ಯ ಶಾಸಕರು ಸರ್ಕಾರದ ಗಮನ ಸೆಳೆದಿದ್ದಕ್ಕೋಸ್ಕರವೇ ಪೂರ್ಣ ವಿವರ ಕೊಟ್ಟಿದ್ದೇನೆ. ಈ ಸರ್ಕಾರ ಇಂತಹ ಯಾವುದೇ ಅವ್ಯವಹಾರಕ್ಕೆ ಯಾವುದೇ ಕಾರಣಕ್ಕೂ ಅವರಿಗೆ ಬೆಂಬಲ ಕೊಡುವ ಪ್ರಶ್ನೆಯಿಲ್ಲ. ತಪ್ಪಿತಸ್ಥರ ವಿರುದ್ಧ ನಾವು ಕ್ರಮ ಕೈಗೊಳ್ಳುತ್ತೇವೆ ಎನ್ನುವುದಕ್ಕಾಗಿ ಅವರಿಗೆ ಈ ವಿವರ ಕೊಟ್ಟಿದ್ದೇವೆ. ಎರಡನೆಯದು ಇನ್ನೂ 200 ತನಿಖೆ ಆಗಬೇಕಾಗಿದೆ ಎಂದು ಹೇಳಿದ್ದಾರೆ. ಆಮೇಲೆ ಬಡ್ತಿ ಕೊಟ್ಟಿರುವ ಅಂಶವನ್ನು ಗಮನಕ್ಕೆ ತಂದಿದ್ದಾರೆ. ಸದನದ ಸಮಿತಿ ಅಥವಾ ಅಂದಾಜು ಸಮಿತಿಗೆ ಕೊಡುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವ ಪ್ರಶ್ನೆಯಿಲ್ಲ. ಆದರೆ ನನಗೆ ಅವರು ಒಂದು ತಿಂಗಳು ಸಮಯ ಕೊಡಲಿ. ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದನ್ನು ಅವರು ನೋಡಲಿ. ಸಮಾಧಾನವಾಗಲಿಲ್ಲ ಅಂದರೆ ಅವರು ಕೇಳಿದ ಸಮಿತಿಯನ್ನು ಮಾಡಲು ಸರ್ಕಾರ ಖಂಡಿತ ತಯಾರಿದೆ ಎಂದು ಅವರಿಗೆ ಹೇಳಲು ಬಯಸುತ್ತೇನೆ. ಮಾನ್ಯ ಶಾಸಕರು ಹೇಳಿದ್ದು ನಿಜ, ಅನೇಕ ಯೋಜನೆಗಳಿಗೆ ದುಡ್ಡು ಎಷ್ಟು ಕೊಟ್ಟಿದ್ದೇವೆ ಎಂಬುದರ ಮೂಲಕವೇ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಎಷ್ಟು ಹಣ ಕೊಟ್ಟಿದ್ದೇವೆ ಆ ಹಣವನ್ನು ಎಷ್ಟು ಸಮಯದಲ್ಲಿ ಮುಗಿಸಬೇಕು, ಅವರು ಸಾಧನೆ ಮಾಡಿ ತೋರಿಸಿದ್ದಾರೋ ಇಲ್ಲವೋ ಎಂಬುದೂ ಬಹಳ ಮುಖ್ಯವಾಗುತ್ತದೆ. ಈ ಸರ್ಕಾರ ಹಣ ಎಷ್ಟು ಕೊಟ್ಟಿದೆ, ಹಣಕ್ಕೆ ತಕ್ಕಂತೆ ಪೂರ್ಣ ಕಾಮಗಾರಿಯನ್ನೂ ತೆಗೆದುಕೊಳ್ಳುವ ದಿಕ್ಕಿನಲ್ಲಿ ಖಂಡಿತಾ ಅವರಿಗೆ ತೃಪ್ತಿಯಾಗುವ ರೀತಿಯಲ್ಲಿ ಕೆಲಸ ಮಾಡುತ್ತೇವೆನ್ನುವ ಅಂಶವನ್ನು ತಮ್ಮ ಮುಖಾಂತರ ಹೇಳಲಿಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು. ಮಾನ್ಯ ಪಾಟೀಲ್‌ರೆ, ಮಾನ್ಯ ಸಚಿವರು ಎಲ್ಲಾ ವಿಚಾರ ಹೇಳಿದ್ದಾರೆ. ಒಂದು ತಿಂಗಳು ಸಮಯ ಕೇಳಿದ್ದಾರೆ. ಯಾವ ರೀತಿ ಎನ್‌ಕ್ವಾಯರಿ ಬೇಕೋ ಅದನ್ನು ಮಾಡಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ. ಈಗ ವಿತ್ತೀಯ ಕಾರ್ಯಕಲಾಪ. ಮಾನ್ಯ ವಾಟಾಳ್ ನಾಗರಾಜ್‌ರವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್ ನನ್ನದು ಕಾಲಿಂಗ್ ಅಟೆನ್‌ಶನ್ ಇದೆ.

ಅಧ್ಯಕ್ಷರು : ಇಲ್ಲ, ನಿಮ್ಮ ಕಾಲಿಂಗ್ ಅಟೆನ್‌ಶನ್ ಸೋಮವಾರ, ಮಾನ್ಯ ಮುಖ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಈಗ ವಿತ್ತೀಯ ಕಾರ್ಯಕಲಾಪಗಳು, ಮಾನ್ಯ ವಾಟಾಳ್ ನಾಗರಾಜ್‌ರವರು, ಎಲ್ಲಾ ಹಿರಿಯ ಸದಸ್ಯರಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಹಿರಿಯ ಸದಸ್ಯರು ತಮ್ಮ ಭಾಷಣವನ್ನು ಅರ್ಧ ಗಂಟೆಗೆ ಸೀಮಿತಮಾಡಬೇಕೆಂದು ವಿನಂತಿ ಮಾಡುತ್ತೇವೆ. ಅದೇ ರೀತಿ ಹೊಸಬರು ಕಿರಿಯ ಸದಸ್ಯರು 15 ನಿಮಿಷದಲ್ಲಿ ಅವರ ಭಾಷಣ ಸೀಮಿತಗೊಳಿಸಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಸಾಧ್ಯವಾದಷ್ಟು ಆ ರೀತಿ ನಿಗದಿತ ಅವಧಿಯಲ್ಲೇ ತಮ್ಮ ಭಾಷಣ ಮುಗಿಸಲು ಪ್ರಯತ್ನಿಸಬೇಕೆಂದು ನಾನು ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ವಿನಂತಿ-ಮಾಡಿಕೊಳ್ಳುತ್ತೇನೆ.

(ಗೊಂದಲ)

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಸಭಾಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್ ಹಾಗೂ ಇತರೆ ಮಾನ್ಯ ಸದಸ್ಯರು ಕೊಟ್ಟ ಮನವಿಗೆ ತೀರ್ಪು ನೀಡುವ ಬಗ್ಗೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಆಯವ್ಯಯ ಭಾಷಣಕ್ಕೆ ಮುಂಚೆ ತಮ್ಮಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ತಾವು ಬೇಜಾರು ಮಾಡಿಕೊಳ್ಳಬಾರದು. ತಮಗೆ ಹಿಂದೆ ನಾವೊಂದು ಅರ್ಜಿಯನ್ನು ಸಲ್ಲಿಸಿದ್ದೆವು. ನಾನು ಶ್ರೀರಾಮರೆಡ್ಡಿಯವರು ಮತ್ತು ರಾಜೇಂದ್ರನ್‌ರವರು.

ಅಧ್ಯಕ್ಷರು : ನೋಟೀಸ್ ಆರ್ಡರ್ ಮಾಡಿದ್ದೇನೆ. ತಮಗೆ ಇನ್ನೂ ಬಂದಿಲ್ಲವೆನಿಸುತ್ತದೆ. I have order for notice.

ಶ್ರೀ ವಾಟಾಳ್ ನಾಗರಾಜ್ : ತಮಗೆ ಮನವಿ ಸಲ್ಲಿಸಿದ್ದೆವು. ತಾವು ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿರಿ? ಇದುವರೆಗೂ ಗೊತ್ತಿಲ್ಲ.

ಅಧ್ಯಕ್ಷರು : ಎಲ್ಲಾ ಪರಾಂಬರಿಸಿ ರೆಸ್ಪಾಂಡೆಂಡ್ಸ್‌ಗೆ ನೋಟೀಸನ್ನು ಜಾರಿ ಮಾಡುವುದಕ್ಕೆ ಮಾಡಿದ್ದೇನೆ. ಟ್ರಿಬ್ಯೂನಲ್ ಪ್ರಕಾರ ಕೇಸ್ ನಡೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದೆಲ್ಲೋ ಒಂದು ಕಡೆ ಶೂನ್ಯವಾಗಿ ಉಳಿದಿದೆ.

ಅಧ್ಯಕ್ಷರು : ಇಲ್ಲ. ಇಲ್ಲ. ನಾನು ಹೇಳಿದೆನಲ್ಲಾ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ಗೌರವ ಇಟ್ಟುಕೊಂಡೇ ನಾವು ಕೇಳುತ್ತೇವೆ. ತೀರ್ಪು ಕೊಡುವುದು ನಿಮಗೆ ಸೇರಿದ್ದು.

ಅಧ್ಯಕ್ಷರು : ನಾನು ಅದಕ್ಕೇ ಹೇಳಿದ್ದು. ನೋಟೀಸನ್ನು ಇಷ್ಯೂ ಮಾಡುವುದಕ್ಕೆ ಆರ್ಡರನ್ನು ಮಾಡಿದ್ದೇನೆ. ನೋಟೀಸ್ ರೆಸ್ಪಾಂಡೆಂಟ್ಸ್‌ಗೆ ಇಷ್ಯೂ ಆಗುತ್ತದೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಇತರರೂ ಕೂಡ ಹೈಕೋರ್ಟಿಗೆ ಹೋಗಿದ್ದಾರೆ. The High

Court has given direction to the Speaker. ಇದು ಸ್ಪೀಕರ್‌ರವರಲ್ಲಿಯೇ ಇತ್ಯರ್ಥವಾಗಬೇಕು. ಮತ್ತು ಆ ರಿಟ್ ಪಿಟಿಷನ್‌ನಲ್ಲಿ ಸಾಕಷ್ಟು ಅರ್ಥ ಇದೆ. ಇದು ಸದನಕ್ಕೆ ಸೀಮಿತವಾಗಿರುವುದರಿಂದ ಸ್ಪೀಕರ್‌ರವರು ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಯಾವಾಗ 27ನೇ ತಾರೀಖಿನ ದಿವಸ ಕೂಡ ಸದನದಲ್ಲಿ ವಾಟಾಳ್ ನಾಗರಾಜ್‌ರವರು ಮತ್ತು ಇತರ ಎಲ್ಲಾ ವಿರೋಧ ಪಕ್ಷದ ಸದಸ್ಯರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ನಾವೂ ಕೂಡ ಪ್ರಸ್ತಾಪ ಮಾಡಿದೆವು. ನೀವು ಅದರ ಬಗ್ಗೆ ಏನೂ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ. ಬಹಳ ಸಡನ್ ಆಗಿ ನೀವು ಕುಮಾರಸ್ವಾಮಿಯವರು ಶಾಸಕಾಂಗ ಪಕ್ಷದ ಸಭಾ ನಾಯಕರು ಎಂದು ಹೇಳಿದಿರಿ. ಆಗ ನಮ್ಮ ಹಿಂದಿನ ಉಪ ಮುಖ್ಯಮಂತ್ರಿಗಳು ಮತ್ತು ಶಾಸಕಾಂಗ ಪಕ್ಷದ ನಾಯಕರಾದ ಎಂ.ಪಿ. ಪ್ರಕಾಶ್‌ರವರೂ ಕೂಡ ಇಲ್ಲೇ ಇದ್ದರು. ಅದೇನೋ ಪ್ರಕಾಶ್‌ರವರು ಹೋದರು. ಈ ನಾಟಕ ಇಡೀ ಜಗತ್ತಿಗೆ ಎಲ್ಲಾ ಗೊತ್ತಾಗಿದೆ. ನಾವು ನಿಮ್ಮಿಂದ ಕೇಳುವುದೇನೆಂದರೆ ಇಂಥ ಒಂದು ಮಹತ್ವವಾದ ವಿಚಾರ break-away ಗ್ರೂಪ್ ಜೆಡಿ (ಎಸ್) ನಿಂದ ಹೋಗಿ ರಾಜ್ಯಪಾಲರ ಬಳಿ ಹೋದರು. ಆಗ ಮಾನ್ಯ ದೇವೇಗೌಡರು ರಾಜ್ಯಪಾಲರಿಗೆ ಏನು ಹೇಳಿದರು. Kumaaraswamy is not our recognised leader. ಅದು ತಮಗೇ ಬರೆದಿದ್ದಿದ್ದರೆ ಮುಗಿದೇ ಹೋಗುತ್ತಿತ್ತು. ತಮಗೆ ಬರೆದಿಲ್ಲ. ಇವತ್ತು ನಾವು ಎಲ್ಲಾ ಕಡೆಗೆ ತಲೆಬಾಗಿಸಿ ಹೇಳುತ್ತಿದ್ದೇವೆ. ಅಧ್ಯಕ್ಷರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಇಂಥ ವಿಚಾರಗಳ ಬಗ್ಗೆ ತೀರ್ಪು ಬೇಕು. ಕೋರ್ಟ್‌ನವರು ಏನು ಹೇಳಿದ್ದಾರೆಂದರೆ ನೀವು ಇವತ್ತಿನ ದಿವಸ ಸ್ಪೀಕರ್‌ರವರಿಂದ ಅವರು ಏನು ಹೇಳುತ್ತಾರೋ ಅದನ್ನು ಪಡೆಯಿರಿ. ತದನಂತರ you come to the court.... ಅಂತ ಸ್ಪೀಕರ್‌ರವರು ಅದಕ್ಕೆ ಒಂದು ವೇಳೆ ತೀರ್ಮಾನವನ್ನು ಕೊಡಲಾರದೆ ಹೋದರೆ ಬರಬೇಕೆಂದು ಹೇಳಿದ್ದಾರೆ. ಅಲಹಾಬಾದ್ ಹೈಕೋರ್ಟ್ ಜಡ್ಜ್‌ಮೆಂಟ್ ಕಾಪಿ ಬೇಕಾದರೆ ಓದಿ ತೋರಿಸುತ್ತೇನೆ. ಅಲಾಹಾಬಾದ್ ಹೈಕೋರ್ಟ್ ಕೂಡ ಇದೇ ತರಹದ ಘಟನೆ ಬಗ್ಗೆ ಅವರ ಒಂದು ತೀರ್ಮಾನವನ್ನು ಕೊಟ್ಟಿದೆ. ಇಂಥ ಒಂದು ಸಂದರ್ಭದಲ್ಲಿ ಸದನ ನಡೆಯುತ್ತಿದೆ. ಎರಡು ಪಕ್ಷಗಳೂ ಕೂಡ ಸರ್ಕಾರವನ್ನು ನಡೆಸುತ್ತಿದ್ದಾರೆ: ಈ ಸರ್ಕಾರಕ್ಕೆ ಔಚಿತ್ಯವೇನು? ಇದಕ್ಕೆ ಕ್ರಮ ಇದೆ. ಇವತ್ತು ಎರಡು ಪಕ್ಷಗಳು ಒಂದಾಗಿ ಮರ್ಜ್ ಆದರೆ ಅದು ಬೇರೆ. ಪಕ್ಷ ಬಿಟ್ಟು ಹೋದರೆ ಡಿಸ್-ಕ್ವಾಲಿಫಿಕೇಷನ್ ಬೇರೆ. ಇಂಥ ಸಂದರ್ಭದಲ್ಲಿ ಸರ್ಕಾರ ನಡೆಯತಕ್ಕ ಕಾಲದಲ್ಲಿ ತಮ್ಮ ತೀರ್ಮಾನ ಬಹಳ ತೀವ್ರ. ಅದಕ್ಕೇ ಅವರ ಆತಂಕ. ಇಲ್ಲದಿದ್ದರೆ ಕೋರ್ಟಿಗೆ ಹೋಗುತ್ತಾರೆ. ಗೋವಾದಲ್ಲಿ 1994ರಲ್ಲಿ ಏನಾಯಿತು? ಅಲ್ಟಿಮೇಟ್‌ಲಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದ್ದೇ ಇದೆ. ಬೊಮ್ಮಾಯಿ ಕೇಸ್‌ನಲ್ಲಿ ಏನಾಯಿತು? ಇವೆಲ್ಲಾ ವಿಚಾರಗಳೂ ಕೂಡ ಇದೆ. ಅದಕ್ಕೆ ಇವತ್ತಿನ ದಿವಸ ಈ ಒಂದು ಮಾತನ್ನು ವಾಟಾಳ್ ನಾಗರಾಜ್‌ರವರು ಏನು ಎತ್ತಿದ್ದಾರೆ, ಮತ್ತು ಇತರ ಸದಸ್ಯರು ಎತ್ತಿದ್ದಾರೆ, ಇದಕ್ಕೆ ತಾವು ತಮ್ಮದೇ ಆದ ಒಂದು ತೀರ್ಪನ್ನು ಕೊಡಲೇಬೇಕು. ನಾವು ಹೇಳಿದ್ದೇವೆ. ತಾವು ಬಾಳಿಗಾರವರು ಕುಳಿತಂಥ ಸೀಟಿನಲ್ಲಿ ಕೂತಿದ್ದೀರಿ. ಇವತ್ತು ನೀವು ಸುಮ್ಮನೆ ಹಾಗೆ ಹೀಗೆ ಎನ್ನತಕ್ಕ ರೀತಿ ಇಲ್ಲ. ನಿಮ್ಮ ಘನತೆ ಗೌರವ ಇವತ್ತು ನಮ್ಮ ಸದಸ್ಯರು ಎತ್ತಿದಂಥ ಪ್ರಶ್ನೆಗೆ ಸಮಾಧಾನಪೂರಕವಾಗಿ ತಾವೊಂದು ತೀರ್ಪನ್ನು ಕೊಟ್ಟರೆ ಸರಿ-ಹೋಗುತ್ತದೆಂದು ಹೇಳುತ್ತೇನೆ. ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ನನ್ನ ಎರಡು ಮಾತುಗಳನ್ನು ಹೇಳುವುದಕ್ಕೆ ತಾವು ದಯಮಾಡಿ ನನಗೆ ಅವಕಾಶವನ್ನು ಕೊಡಬೇಕು. ಮೊದಲನೆಯದಾಗಿ ಆ ದಿವಸ ಮಾನ್ಯ ....

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೇ, ಏಕೆಂದರೆ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದೇ ನಿಮಿಷ. I will not take more than 2 minutes.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ನಿಂತುಕೊಂಡು ಸಹಜವಾಗಿ. ಅವರು ಏನು ಕೇಳಿದರು. ಅವರೇನೋ ನನಗೆ ಪಿಟಿಷನನ್ನು ಕೊಟ್ಟಿದ್ದಾರೆ. ನಾನು ಟ್ರಿಬ್ಯೂನಲ್ ಆಗಿ ಕೆಲಸವನ್ನು ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಮಗೆ ಸಹಾಯ ಮಾಡುತ್ತೇನೆ. ನೀವು ಮಾತನಾಡುವುದರೊಳಗಾಗಿ ನಾನು ಮುಗಿಸಿ ಬಿಡುತ್ತಿದ್ದೆ.

ಅಧ್ಯಕ್ಷರು : ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಏನೆಂದರೆ ತಾವು ಶ್ರೀಮಾನ್ ಕುಮಾರಸ್ವಾಮಿಯವರನ್ನು ಈ ಜಾತ್ಯಾತೀತ ಜನತಾ ದಳದ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಈ ವಿಧಾನಸಭೆಯ ಒಳಗಡೆ ಗುರುತು ಮಾಡಿದಂಥ ಸಂದರ್ಭದಲ್ಲಿ ನಾನು ಜಾತ್ಯಾತೀತ ಜನತಾದಳದ ಸದಸ್ಯನಾಗಿದ್ದೆ. ನಮ್ಮ ಪಕ್ಷದ ರಾಷ್ಟ್ರೀಯ ಘಟಕದ ಅಧ್ಯಕ್ಷರು ಅವತ್ತು ಇದ್ದಂಥ ಮೈತ್ರಿ ಸರ್ಕಾರವನ್ನು ಉಳಿಸಬೇಕೆಂದು ಹೇಳಿ ಮಾನ್ಯ ಎ.ಕೆ. ಆಂಟನಿ ಅವರನ್ನು ಭೇಟಿ ಮಾಡಬೇಕೆಂದು ಹೇಳಿ ನನಗೂ ಮತ್ತು ಎಂ.ಪಿ. ಪ್ರಕಾಶ್ ಅವರಿಗೆ ಕಳುಹಿಸಿದಂಥ ಸೂಚನೆ ಮೇರೆಗೆ ನಾನು ಅಲ್ಲಿ ಕುಮಾರಕೃಪಾದಲ್ಲಿ ಮಾತುಕತೆಗೆ ಹೋಗಿದ್ದೆ. ತಾವು ಆ ತೀರ್ಪನ್ನು ಕೊಡತಕ್ಕ ಸಂದರ್ಭದಲ್ಲಿ ನಾನು ಸದನದಲ್ಲಿ ಇಲ್ಲಿ ಕುಳಿತಿದ್ದಿದ್ದರೆ ನನ್ನ ಅಭಿಪ್ರಾಯವನ್ನು ನಾನು ಜಾತ್ಯಾತೀತ ಜನತಾದಳದ ಪಕ್ಷದ ಪರವಾಗಿ ಗೆದ್ದು ಬಂದಿರುವುದರಿಂದ ನನ್ನ ಅಭಿಪ್ರಾಯವನ್ನು ಕೊಡಲಿಕ್ಕೆ ನನಗೆ ಅವಕಾಶವಿರುತ್ತಿತ್ತು. ಇವತ್ತು ಏನಾಗಿದೆ, ತಾವು ಸದನದ ಒಳಗಡೆ ಇದು ಒಂದು ಜಾತ್ಯಾತೀತ ಜನತಾದಳದ ಉಚ್ಚಾಟಿತ ಗುಂಪು ಎಂದು ಹೇಳಿ, ತಾವು ಅದನ್ನು ರೆಕಗ್ನೈಸ್ ಮಾಡಿದ್ದೀರಿ. ನಮ್ಮ ರಾಷ್ಟ್ರೀಯ ಘಟಕದ ಅಧ್ಯಕ್ಷರೇನು ಹೇಳಿದ್ದಾರೆ. ಅದು ಪಕ್ಷದ ವ್ಯವಹಾರ. ಅದು ಸದನದ ಹೊರಗಡೆ ಇರತಕ್ಕಂಥದ್ದು. ನಮಗೆ ಇವತ್ತೂ ಸಹಿತ ಎಂ.ಪಿ. ಪ್ರಕಾಶ್ ಅವರೇ ನಮ್ಮ ನಾಯಕರು. ಇವತ್ತೂ ಸಹಿತ ನನಗೆ ನಮ್ಮ ಜಾತ್ಯಾತೀತ ಜನತಾ ದಳದ ಪಕ್ಷಕ್ಕೆ, ಶಾಸಕಾಂಗ ಪಕ್ಷಕ್ಕೆ ಎಂ.ಪಿ. ಪ್ರಕಾಶ್‌ರವರೇ ನಾಯಕರು. ಪಕ್ಷದ ಸಿದ್ಧಾಂತ, ನಮ್ಮ ಪಕ್ಷದ ಕಾನೂನಿನ ಮೇರೆಗೆ ಈಗ ಸರ್ಕಾರ ಮಾಡಿರತಕ್ಕ ಜಾತ್ಯಾತೀತ ಜನತಾದಳದ ಶಾಸಕ ಮಿತ್ರರು ಪಕ್ಷದಿಂದ ಉಚ್ಚಾಟಿತರು. ಅದರಿಂದಾಗಿ ಏನು ಪರಿಸ್ಥಿತಿ ಬರುತ್ತದೆ ಎಂದರೆ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ. ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಯಾರೂ ಕೂಡ ಇದಕ್ಕೆ ಕೋಪ ಮಾಡಿಕೊಳ್ಳುವ ಅವಶ್ಯಕತೆ ಏನೂ ಇಲ್ಲ. ವಸ್ತು ಸ್ಥಿತಿ ಅಷ್ಟೆ. ಇರತಕ್ಕ ವಸ್ತು ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ನಾನು ಈಲ್ಡ್ ಆಗಿಲ್ಲ. ಮಧ್ಯದಲ್ಲಿ ಯಾರೂ ದಯವಿಟ್ಟು ಪ್ರವೇಶ ಮಾಡಬೇಡಿ. ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಏತಕ್ಕೆ ನಾನು ಇದನ್ನು ಕೇಳುತ್ತಿದ್ದೇನೆಂದರೆ, ನಾನು ಇದನ್ನು ಕೇಳುತ್ತಲೂ ಇರಲಿಲ್ಲ. ಇದಕ್ಕೆ ನಾನು ಸೊಪ್ಪು ಹಾಕುತ್ತಿರಲಿಲ್ಲ. ದುರಹಂಕಾರಕ್ಕೆ ಉದಾಸೀನವೇ ಮದ್ದು ಎಂದು ಹೇಳುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಏನೇನೋ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಹೇಗೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಚೆಲುವರಾಯಸ್ವಾಮಿಯವರು ಮಾತನಾಡಲಿ. ನನ್ನದೇನೂ ತಕರಾರಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಏಕೆ ಇದನ್ನು ಮನವಿ ಮಾಡುತ್ತಿದ್ದೇನೆಂದರೆ ಅಲಹಾಬಾದ್‌ನ ಹೈಕೋರ್ಟ್‌ನಲ್ಲಿ ಬಂದಿರತಕ್ಕ ತೀರ್ಮಾನ, ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅವರನ್ನು ತೆಗೆದಂಥ ರೀತಿ, ಗೋವಾ ಸರ್ಕಾರ ಹೋದಂಥ ರೀತಿ, ಇದರ ಹಿನ್ನೆಲೆಯಲ್ಲಿ ಸರ್ಕಾರದಲ್ಲಿ ಅಭದ್ರತೆ ಇದೆ. ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳು ಇವತ್ತೇನು ಆಯವ್ಯಯವನ್ನು ಮಂಡನೆ ಮಾಡಿದ್ದಾರೆ, ಅದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಮೊನ್ನೆ ಉದಯ ಟಿವಿಯಲ್ಲಿ ಮತ್ತು ಚಂದನದಲ್ಲಿ ಒಂದು ಡಿಸ್ಕಷನ್ ಬಂತು. ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಕೇಳುತ್ತಾರೆ. ಇದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ನಿಮ್ಮ ಹತ್ತಿರ ಬ್ಯುರೋಕ್ರಸಿ ಇದೆಯೊ ಎಂದು ಕೇಳುತ್ತಾರೆ. ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು : ಈ ರೀತಿ ಎಲ್ಲಾ ಎದ್ದು ನಿಂತು ಮಾತನಾಡಿದರೆ ಇದೇನೂ ಹೌಸ್ ಆಗುವುದಿಲ್ಲ. ನೋ., ನೋ. ಇದೇನಿದು? ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, He is an aggrieved member.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನಾನು ಮಾನ್ಯ ಸಿಂಧ್ಯಾರವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೆ. ದಯಮಾಡಿ ಕೇಳ್ರಿ. ಏನಿದು? ಈ ಮನೆ ಸರಾಗವಾಗಿ ನಡೆಯಬಾರದೆ? ವಾಟಾಳ್ ನಾಗರಾಜ್‌ರು ಒಂದು ಪ್ರಶ್ನೆ ಎತ್ತಿದರು. ಅವರು ನಮ್ಮ ಮುಂದೆ ಪೆಟಿಷನ್ ಕೊಟ್ಟಿದ್ದಾರೆ. ಅದರ ಗತಿಯೇನಾಯಿತು ಎಂದು ಕೇಳಿದರು. ಈಗ ಏನಾಗಿದೆ ಎಂದರೆ ಸ್ಪೀಕರ್ ಆಗಿ ನಾನು ಟ್ರಿಬ್ಯುನಲ್ ಆಗಿ ಕೆಲಸ ಮಾಡಬೇಕು. ಅದಕ್ಕೆ ಆ ಘಟ್ಟದಲ್ಲಿ ನಾನು ಒಂದು ನೋಟೀಸ್‌ನ್ನು ಇಷ್ಯೂ ಮಾಡಲು ಆರ್ಡರ್ ಮಾಡಿದ್ದೇನೆ ಎಂದು ಹೇಳಿದೆ. ಅದು ಅಲ್ಲಿಗೆ ಮುಗಿಯಿತು. ಆದರೆ ಎಲ್ಲಾ ವಿಚಾರಗಳನ್ನು ಹಿಂದೆ ನಡೆದಿರತಕ್ಕ ಘಟನೆಗಳನ್ನು ಎತ್ತಿಕೊಂಡು ಅವರು ಹತ್ತು ಜನ ನಿಂತುಕೊಳ್ಳುವುದು. ನೀವು ಹತ್ತು ಜನ ನಿಂತುಕೊಳ್ಳುವುದಾದರೆ ಇದೇನಿದು? ಏತಕ್ಕೆ ನೀವು ಪೋಸ್ಟ್‌ಮಾರ್ಟಮ್ ಮಾಡುತ್ತಿದ್ದೀರಿ? I can't understand ಈಗ ವಾಟಾಳ್ ನಾಗರಾಜ್‌ರವರನ್ನು ವಿತ್ತೀಯ ಕಾರ್ಯಕಲಾಪದ ಬಗ್ಗೆ ಮಾತನಾಡಲು ಕರೆದಿದ್ದೇನೆ. ಅವರು ಮಾತನಾಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಏನಿದು? ಸುಮ್ಮನೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಸಿಂಧ್ಯಾರವರು ಪೂರ್ಣ ಮಾಡಲಿ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ಮನೆ ಸರಾಗವಾಗಿ ನಡೆಯಬಾರದೆ?

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ನಮಗೂ ಒಂದು ನಿಮಿಷ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ, ನೀವು ಮಾತನಾಡುವುದಿಲ್ಲವೆಂದರೆ next ಕರೆಯುತ್ತೇನೆ. This is not correct.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ನಮ್ಮ ಪಕ್ಷದ ಆಂತರಿಕ ವಿಚಾರವಾಗಿರುವುದರಿಂದ ನಮಗೆ ಎರಡು ನಿಮಿಷ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ನಾನು ಮಾನ್ಯ ಖರ್ಗೆ ಸಾಹೇಬರಿಗೆ, ಈಗ ನೀವು ಈ ಮನೆಯನ್ನು ನಡೆಸಲು ಅವಕಾಶ ಕೊಡುತ್ತೀರೊ ಇಲ್ಲವೊ ಎಂದು ಕೇಳುತ್ತಿದ್ದೇನೆ. ನನಗೂ ಸಾಕು ಸಾಕಾಗಿಹೋಗಿದೆ. ಏನಿದು? ಅವರು ಕೇಳಿದರು ಅವರಿಗೆ ಉತ್ತರ ಹೇಳಿದೆ. ಅನಂತರ ಮತ್ತೆ ಆ ಕಡೆ ನಿಂತುಕೊಳ್ಳುವುದು ಎಲ್ಲರೂ ನಿಂತುಕೊಳ್ಳುವುದು ಎಂದರೆ ಅರ್ಥವೇನಿದೆ? ಹೀಗಾದರೆ ಈ ಮನೆಯನ್ನು ಹೇಗೆ ನಡೆಸುವುದು? ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ನೀವು ಈ ರೀತಿ ಆದರೆ ನಾವು ಸರಾಗವಾಗಿ ಈ ಮನೆಯ ಕಲಾಪವನ್ನು ನಡೆಸಲು ಸಾಧ್ಯವಾಗುವುದಿಲ್ಲ. ನಾನು ಎಷ್ಟೋ ಸಾರಿ ವಿನಂತಿ ಮಾಡಿದ್ದೇನೆ. ರಾಜಕೀಯ ಇಷ್ಯೂಗಳೇನಿದ್ದರೂ ಹೊರಗಡೆ ಇಡಿ. ಈ ಮನೆಯಲ್ಲಿ ಹೆಚ್ಚು ಪ್ರಚೋದಾನಾತ್ಮಕವಾದ ವಿಚಾರಗಳನ್ನು ಎತ್ತಬೇಡಿ. ಸರಾಗವಾಗಿ ಇಲ್ಲಿಯ ಕಲಾಪ ನಡೆಯಲು ಅವಕಾಶ ಮಾಡಿಕೊಡಿ ಎಂದು ಅನೇಕ ಸಲ ವಿನಂತಿ ಮಾಡಿಕೊಂಡರು ಈ ರೀತಿಯಾದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ......

ಶ್ರೀ ಎನ್. ಚಲುವರಾಯಸ್ವಾಮಿ : ಈಗ ಮಾನ್ಯ ಖರ್ಗೆ ಸಾಹೇಬರು ನಿಂತಿದ್ದಾರೆ. ದಯಮಾಡಿ ನಮಗೆ ಒಂದು ಅವಕಾಶ ಕೊಡಿ. ನಮ್ಮ ಪಕ್ಷದ ಆಂತರಿಕ ವಿಚಾರವನ್ನು ಇವರು ಎತ್ತಿದಾಗ ನಾವು ಪಕ್ಷದ ನಿಲುವೇನು ಎಂದು ಹೇಳಬೇಕಾಗುತ್ತದೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಖರ್ಗೆಯವರು ** ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾನು ಉತ್ತರ ಕೊಟ್ಟಿದ್ದೇನೆ. ವಿರೋಧ ಪಕ್ಷದ ನಾಯಕರನ್ನು ಕೇಳಿದ್ದೇನೆ. ಆದರೂ ಇದೇನಿದು? ಈ ರೀತಿಯಾದರೆ ಸದನವನ್ನು ನಡೆಸಲು ಸಾಧ್ಯವಾಗುವುದಿಲ್ಲ. ಅವರಾಗಲಿ, ನೀವಾಗಲಿ, ಯಾರೇ ಆಗಲಿ ಇದೇನಿದು? ದಯಮಾಡಿ ನಾನು ನಿಮ್ಮಲ್ಲೆಲ್ಲಾ ಮನವಿ ಮಾಡಿಕೊಳ್ಳುತ್ತೇನೆ. ಈಗ ವಿತ್ತೀಯ ಕಾರ್ಯಕಲಾಪಗಳು ನಡೆಯಬೇಕು. ನಾನು ಅವರನ್ನು ಮಾತನಾಡಲು ಕರೆದಿದ್ದೆ. ಅದೇನೋ ಅವರು ಪ್ರಶ್ನೆ ಎತ್ತಿದರು. ಅದು ನಿಜ. ಅವರು ಒಂದು ಪಿಟಿಷನ್ ಹಾಕಿದ್ದಾರೆ. ನಾನು ಅದಕ್ಕೆ ಉತ್ತರ ಹೇಳಿದ್ದೇನೆ. ಅದಕ್ಕೆ ಉತ್ತರ ಹೇಳಿದ ಮೇಲೆ ಅದು ಮುಗಿದುಹೋಯಿತು. ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಅಭಿಪ್ರಾಯವನ್ನು

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಹೇಳಲು ನಿಂತುಕೊಂಡರು. ಅದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಈ ರೀತಿಯ ಗಲಾಟೆಯಾದರೆ ನಾವೇನು ಮಾಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಅವಕಾಶ ಕೊಟ್ಟವರೇ ನೀವು. ಮತ್ತೆ ನಮಗೆ ಹೇಳುತ್ತೀರಿ.

(ಗೊಂದಲ)

ಡಾ: ಕೆ. ಅನ್ನದಾನಿ : ಐವತ್ತು ವರ್ಷ ನೀವೇ ಆಡಳಿತ ಮಾಡಿದ್ದೀರಿ. ನಮ್ಮನ್ನು 9 ವರ್ಷ ಆಳಲು ಬಿಡಿ. ಏತಕ್ಕೆ ಹೊಟ್ಟೆಯುರಿಪಡುತ್ತೀರಿ?

(ಗೊಂದಲ)

ಅಧ್ಯಕ್ಷರು : ಈ ರೀತಿ ನಡವಳಿಕೆಯಿಂದ ಯಾರಿಗೂ ಗೌರವ ಬರುವುದಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ. ಈ ಸದನದ ಕಾರ್ಯಕಲಾಪಗಳು ಸರಾಗವಾಗಿ ನಡೆಯಲಿ. ದಯಮಾಡಿ ಎಲ್ಲರೂ ಸಹಕರಿಸಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಒಂದು ವಾಕ್ಯದಲ್ಲಿ.

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ನಮ್ಮ ಪಕ್ಷದ ಬಗ್ಗೆ ಮಾತನಾಡಲು ಅವರಿಗೆ ಹಕ್ಕಿಲ್ಲ.

ಅಧ್ಯಕ್ಷರು : ಅವರು ಏನೋ ಅವರ ಅಭಿಪ್ರಾಯವನ್ನು ಹೇಳಿದರೆ ಏನೀಗ? ಅವರ ಅಭಿಪ್ರಾಯವನ್ನು ಹೇಳಲು ಅವಕಾಶ ಕೊಟ್ಟಿದ್ದೆ ಮಧ್ಯೆದಲ್ಲಿ

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ನಮಗೆ ಅದು ಸಂಬಂಧಪಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಅವರಿಗೆ ಮಾತನಾಡಲು ನೈತಿಕವಾದ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರು ಮಧ್ಯದಲ್ಲಿ ಹೇಳಿದರು. ನಾನು ಮಾನ್ಯ ಸಿಂಧ್ಯಾರವರಲ್ಲೂ ಮನವಿ ಮಾಡಿಕೊಳ್ಳುತ್ತೇನೆ. ನಿಮ್ಮ ಅಭಿಪ್ರಾಯವೇನೆಂದು ಹೇಳಿ. ಆದರು ಈ ರೀತಿ ಘರ್ಷಣೆಗೆ ಅವಕಾಶ ಆಗುವ ರೀತಿಯ ಮಾತುಗಳನ್ನು ಆಡಬೇಡಿ. ದಯಮಾಡಿ ನಿಮ್ಮ ಸಲಹೆಗಳು ಏನಾದರೂ ಇದ್ದರೆ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಸಿಂಧ್ಯಾರವರೆ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಲ್ಲ. ಒಂದು ನಿಮಿಷ. ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, No. I am on a point of order.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನ್ನದು ಮುಗಿದ ಮೇಲೆ ಎತ್ತಿ ಸಾರ್.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸ್ವಾಮಿ I am on point of order. Please.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, I am on a point of order.

ಅಧ್ಯಕ್ಷರು : ಎಲ್ಲರೂ point of order. ಎಂದರೆ ಏನು? This is very bad.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಈ ಚರ್ಚೆಗೆ ಯಾವ ನಿಯಮದ ಪ್ರಕಾರ ನೀವು ಅವಕಾಶ ಕೊಟ್ಟಿದ್ದೀರಾ?

ಅಧ್ಯಕ್ಷರು : ಕೇಳಿ ಇಲ್ಲಿ. ಮನಸ್ಸಿದ್ದರೆ ಮಾರ್ಗ ಇದೆ ಎಂದು ಎಲ್ಲರೂ ಕೂಡ ದೊಡ್ಡ ಮನಸ್ಸು ಮಾಡಿ ಈ ಸದನದ ಕಲಾಪಗಳು ಸರಾಗವಾಗಿ ನಡೆಯಲು ಅವಕಾಶ ಮಾಡಿಕೊಡಬೇಕು. ಏನೋ ಒಂದನ್ನೇ ದೊಡ್ಡದು ಮಾಡಿಕೊಂಡು ಕುಳಿತರೆ ಹೇಗೆ?

ಶ್ರೀ ಡಿ.ಟಿ. ಜಯಕುಮಾರ್ : ಯಾವ ನಿಯಮದ ಪ್ರಕಾರ ಇವರಿಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೀರಿ ದಯಮಾಡಿ ತಿಳಿಸಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು point of order raise ಮಾಡಿದರೆ ಅವರು ಮಾತನಾಡುತ್ತಿದ್ದಾರೆ. He is a Minister. ಅವರು ಮಾತನಾಡುತ್ತಿದ್ದಾರೆ. ನಾವೇನು ಮಾಡಬೇಕು?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದು ವಿಷಯಾಂತರವಾಗುವುದಕ್ಕೆ ಮೊದಲು....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, I will have the clarification done. There is an insinuation passed on to Mr. Mallikarjun Kharge by the Hon'ble Minister.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಒಂದೇ ಒಂದು ನಿಮಿಷ. ನಾನು ಮುಗಿಸಿಬಿಡುತ್ತೇನೆ. ನಾನು ಹೇಳತಕ್ಕದ್ದು ಇಷ್ಟೆ. ಪಕ್ಷಗಳ ಆಂತರಿಕ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಇದು ವೇದಿಕೆಯಲ್ಲ ಎಂಬುದನ್ನು ನಾನು ಸಂಪೂರ್ಣವಾಗಿ ಮಾನ್ಯ ಮಂತ್ರಿಗಳನ್ನು ಹೇಳಿರುವುದನ್ನು ಒಪ್ಪುತ್ತೇನೆ. ನಾನಾದರೂ ಕೇಳತಕ್ಕದ್ದು ಏನೆಂದರೆ, ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಆಗಿರತಕ್ಕಂಥ ಅನೇಕ ಕೋರ್ಟ್‌ನ ತೀರ್ಮಾನಗಳ ಹಿನ್ನೆಲೆಯಲ್ಲಿ ಸರ್ಕಾರದ ಬದ್ಧತೆಯ ಪ್ರಶ್ನೆ ಬರುತ್ತದೆ. ಮೊನ್ನೆ ಚರ್ಚೆಯಾದಂಥ ಸಂದರ್ಭದಲ್ಲಿ, ವಿಶ್ವಾಸ ಮತವನ್ನು ಮಾನ್ಯ ಮುಖ್ಯಮಂತ್ರಿಯವರು ಯಾಚನೆ ಮಾಡಿದಂಥ ಸಂದರ್ಭದಲ್ಲಿ, ಮಂಡಿಸಿದಂಥ ಸಂದರ್ಭದಲ್ಲಿ ಹಿಂದೆ ಇದ್ದಂಥ ಅಧ್ಯಕ್ಷರುಗಳು ಒಂದು ವರ್ಷ ಎರಡು ವರ್ಷ ಈ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳಲು ಸಮಯವನ್ನು ತೆಗೆದುಕೊಂಡಿರತಕ್ಕ ಆಜ್ಞೆಗಳನ್ನು ಸಹ ನಾವು ನೋಡಿದ್ದೇವೆ. ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ನಿಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳಲು ನಿಂತುಕೊಂಡಿದ್ದೇನೆ. ಏಕೆಂದರೆ, ಸರ್ಕಾರವೆಂದರೆ ಅಧಿಕಾರಿಗಳು ಕೆಲಸ ಮಾಡಬೇಕಾಗುತ್ತದೆ. ಬ್ಯುರೋಕ್ರಸಿ ಕೆಲಸ ಮಾಡಬೇಕಾದರೆ, ಈ ಸರ್ಕಾರ ಸ್ಟೇಬಲ್ ಆಗಿ ಇರುತ್ತದೆ ಎನ್ನತಕ್ಕ ಭಾವನೆ ಬರಬೇಕು. ಏಕೆಂದರೆ 39 ಜನ ಶಾಸಕರುಗಳ ಸದಸ್ಯತ್ವವನ್ನು ರದ್ದು ಮಾಡತಕ್ಕ ತೀರ್ಮಾನವನ್ನು ಕೊಡುವುದು ಬಿಡುವುದು ನಿಮಗೆ ಸಂಬಂಧಪಟ್ಟಿದ್ದು. ನೀವು ತೀರ್ಮಾನ ಕೊಡಿ. ಆದ್ದರಿಂದ ಅಧಿಕಾರಿಗಳು, ಸಾರ್ವಜನಿಕರು ಏನು ಕಾಯುತ್ತಿರುತ್ತಾರೆ, ಇನ್‌ವೆಸ್ಟರ್ಸ್, ಅಭಿವೃದ್ಧಿಯ ದೃಷ್ಟಿಯಿಂದ ಆಗತಕ್ಕ ವಿಚಾರದ ಬಗ್ಗೆ ಒಂದು ಸ್ಟೇಬಲ್ ಗೌರ್ನಮೆಂಟ್ ಇರಬೇಕಾಗುತ್ತದೆ. ಈ ಸರ್ಕಾರ ಉಳಿಯುತ್ತದೊ ಇಲ್ಲವೊ, ಆಯಿತು ಆರು ತಿಂಗಳಾದ ಮೇಲೆ ತೀರ್ಮಾನ ತೆಗೆದುಕೊಳ್ಳೋಣವಂತೆ ಎನ್ನತಕ್ಕ ಭಾವನೆ ಬರುತ್ತದೆ. ಆದ್ದರಿಂದ ತಾವು ಕೊಡತಕ್ಕ ತೀರ್ಮಾನವನ್ನು

ಆದಷ್ಟು ಬೇಗ ಕೊಡಬೇಕೆಂದು ತಮ್ಮ ಮನಸ್ಸನ್ನು ಓಲೈಸಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆಯೇ ಹೊರತು ಬೇರೆ ಇನ್ನೇನೂ ಇಲ್ಲ. ಆದಷ್ಟು ಬೇಗ ತೀರ್ಮಾನ ಕೊಡಿ.

(ಗೊಂದಲ)

ಅಧ್ಯಕ್ಷರು : ಆಯಿತು ಬಿಡಿ. ಅವರದ್ದು ಮುಕ್ತಾಯವಾಯಿತಲ್ಲಾ.

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ಅವರಿಗೆ ಹೊಟ್ಟೆಯುರಿ.

ಅಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೇ, ತಾವು ಮಾತನಾಡುತ್ತೀರಾ?

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, I have raised a Point of order, Chair ಗಮನ ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ಏನೂ ಗಮನ ಕೊಡುವ ಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಎಲ್ಲರೂ ಎದ್ದು ಮಾತನಾಡಲು ಶುರು ಮಾಡಿದರೆ ಹೇಗೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಮಾಡಿರತಕ್ಕ ಒಂದು observation ಬಗ್ಗೆ ಹೇಳಬೇಕಾಗಿದೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಬಗ್ಗೆ ಅವರು ಮಾತನಾಡಿರುವುದರಿಂದ ನಿಮ್ಮ ರೂಲಿಂಗ್‌ನ್ನು ಕೊಟ್ಟಿದ್ದೀರಿ. ತಮ್ಮ judgmentನ್ನು press ಮಾಡಲಿ, ಅದನ್ನು ಬೇಡವೆಂದು ನಾವೇನು ಹೇಳಲಿಲ್ಲ. ಆದರೆ ದಯಮಾಡಿ ಹಿರಿಯ ಸದಸ್ಯರಾದ ಸಿಂಧ್ಯಾರವರು ಮಾತನಾಡತಕ್ಕದ್ದನ್ನು ಪತ್ರಿಕೆಯಲ್ಲಿ ಹೋದಾಗ ನಾವೂ ಸಹ ಉತ್ತರವನ್ನು ಹೇಳಬೇಕಾಗುತ್ತದೆ. ಉಚ್ಛಾಟಿತ ಪಕ್ಷ, ಸಪರೇಟ್ ಗುಂಪು, ... ನಮಗೂ ಮಾತನಾಡಲು ಬರುತ್ತದೆ, ದಯಮಾಡಿ ಕುಳಿತುಕೊಳ್ಳಿ. ಗಲಾಟೆ ಮಾಡುವುದಕ್ಕೆ ನಾವೂ ಕೂಡ ತಯಾರಾಗಿದ್ದೇವೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಇದೇ ರೀತಿ ಒಂದೇ ಪ್ರಶ್ನೆಯಿಂದ ಮಾಡಿದರೆ ಈ ಸದನವನ್ನು ನಡೆಸುವುದು ಹೇಗೆ? ಈ ಸದನದ ಕಾರ್ಯಕಲಾಪಗಳು ನಡೆಯಬಾರದೆ?

ಶ್ರೀ ಎನ್. ಚಲುವರಾಯಸ್ವಾಮಿ : ನಾನು ಬೇರೆ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ. ನಮ್ಮ ವಿರೋಧಿ ಸ್ನೇಹಿತರು ಏತಕ್ಕೋ ಎಷ್ಟು ದೊಡ್ಡ ಆತಂಕ ಪಡತಕ್ಕ ಅವಶ್ಯಕತೆ ಇಲ್ಲವೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ದಯಮಾಡಿ ಸರ್ಕಾರದಲ್ಲಿ ನಾವು ಕೆಲಸ ಮಾಡಬೇಕಾದರೆ ನಮ್ಮ ನಿಲುವನ್ನು ಹೇಳಬೇಕಾಗುತ್ತದೆ. ಸರ್ಕಾರ ಎಷ್ಟು ದಿವಸ ಇರುತ್ತದೆ. ನಮಗೆ ಗೊತ್ತಿದೆ. ಯಾರ್ಯಾರು ಇದ್ದಾಗ ಯಾವ್ಯಾವ ಪಕ್ಷದಲ್ಲಿ ಆಂತರಿಕವಾಗಿ ಏನೇನು ತೀರ್ಮಾನ ತೆಗೆದುಕೊಂಡಿದ್ದಾರೆ. ರಾಜ್ಯದಲ್ಲಿ, ರಾಷ್ಟದಲ್ಲಿ ಏನೇನು ತೀರ್ಮಾನವಾಗಿದೆ ಎಂಬುದು ಹೊಸದೇನಲ್ಲ. ಜನರಿಗೂ ಗೊತ್ತಿದೆ, ಸದಸ್ಯರಿಗೂ ಗೊತ್ತಿದೆ. ಮಾಧ್ಯಮ ಸ್ನೇಹಿತರಿಗೂ ಗೊತ್ತಿದೆ. ನಮ್ಮ ವಿರೋಧ ಪಕ್ಷದ ನಾಯಕರು

ಬಾಳಿಗಾರವರು ಅಲ್ಲಿ ಕುಳಿತಿದ್ದ ಸ್ಥಾನವೆಂದು ಹೇಳಿದರು. ದಯಮಾಡಿ 10ನೇ ಅಸೆಂಬ್ಲಿಯಲ್ಲಿ ಯಾವ ರೀತಿ judgment ಕೊಟ್ಟಿದ್ದಾರೆ. 11ನೇ ಅಸೆಂಬ್ಲಿಯಲ್ಲಿ.....

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ತಾವು ದಯಮಾಡಿ ಸಮಾಧಾನವಾಗಿರಿ. ವಿರೋಧ ಪಕ್ಷದ ನಾಯಕರು ಬಾಳಿಗಾರವರು ಕುಳಿತಿರತಕ್ಕ ಜಾಗವೆಂದು ಹೇಳಿದಿರಿ. 10ನೇ ಮತ್ತು 11ನೇ ಅಸೆಂಬ್ಲಿಯಲ್ಲಿ ಏನೆಂದು ತೀರ್ಮಾನ ಕೊಟ್ಟಿದ್ದಾರೆಂದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕೂತುಕೊಳ್ಳಿ. ಇದೇನಿದು ಈ ರೀತಿಯಾದರೆ? This is very bad. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇದೇನಿದು? ಎಲ್ಲರೂ ನಿಂತುಕೊಂಡರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 12.40ಕ್ಕೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(ಸದನವು ಮತ್ತೆ ಮಧ್ಯಾಹ್ನ 1–30ಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ವಿಧಾನಸಭಾಧ್ಯಕ್ಷರಾದ (ಶ್ರೀ ಕೃಷ್ಣಾರವರು) ಉಪಸ್ಥಿತರಿದ್ದರು)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಮಾತನಾಡಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಅಬ್‌ಸ್ಟ್ರಕ್ಟ್ ಮಾಡಿದ್ದೇನೆ ಎಂದು ಹೇಳಿದ್ದರು. ಅದನ್ನು ತಾವು ರೆಕಾರ್ಡ್‌ನಿಂದ ತೆಗೆಸಬೇಕು. ರೆಕಾರ್ಡ್‌ನಲ್ಲಿ ನೋಡಿ ತೆಗೆದು ಹಾಕಿಸಬೇಕು.

ಅಧ್ಯಕ್ಷರು : ಆಯಿತು. ತೆಗೆಸುತ್ತೇನೆ.

ಆ) ಶಾಸಕರು ಸದನದಲ್ಲಿ ಅಧಿಕಾರಿಗಳ ಬಳಿ ಹೋಗಿ ಅಸಭ್ಯವಾಗಿ ವರ್ತಿಸಿದರೆನ್ನಲಾದ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾವು ಈ ಸಭೆಯಲ್ಲಿ ಅಧಿಕಾರಿಗಳ ಬಗ್ಗೆ ಮಾತನಾಡುತ್ತೇವೆ. ಟೀಕೆ ಮಾಡುತ್ತೇವೆ. ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತೇವೆ ಇವೆಲ್ಲಾ ಆಗುತ್ತವೆ. ಆದರೆ ಇಲ್ಲಿರುವ ಅಧಿಕಾರಿಗಳಿಗೆ ನಾವು ಅಸಭ್ಯವಾಗಿ ವರ್ತಿಸುವುದು, ಡ್ಯೂಟಿ ಮಾಡುವಾಗ ನಾವು ರಕ್ಷಣೆ ಕೊಡೋಲ್ಲ ಎನ್ನುವ ಸ್ಥಿತಿಗೆ ತರುವ ನಿರ್ಮಾಣ ಆಗಬಾರದು. ನಾವು ಅನೇಕ ಸಲ ತಮಗೆ ಹೇಳುತ್ತಲೇ ಬಂದಿದ್ದೇವೆ. ಶಾಸಕರನ್ನು ಅಧಿಕಾರಿಗಳ ಗ್ಯಾಲರಿ ಹತ್ತಿರ ಹೋಗುವುದನ್ನು ನಿರ್ಬಂಧ ಮಾಡಿ, ಎಂ.ಎಲ್.ಎ. ಗಳಿಗೆಲ್ಲಾ ಅಧಿಕಾರಿಗಳು ಅಲ್ಲಿ ಅಸಿಸ್ಟ್ ಮಾಡುವುದಕ್ಕೆ ಇರುವುದು. ನಾವು ಯಾವತ್ತೂ ಅಲ್ಲಿಗೆ ಹೋಗುವುದಿಲ್ಲ. ನಮಗೆ ಗೊತ್ತು ಡೆಕೋರಂ. ಈ ರೀತಿ ಸಭೆಯಲ್ಲಿ ಶುರುವಾಗಿ ಬಿಟ್ಟರೆ ನಮ್ಮ ಗತಿಯೇನು ಸಾರ್?

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಎಂ.ಎಲ್.ಎ.ಗಳು ಪ್ರೈಮರಿ ಸ್ಕೂಲ್ ಮಕ್ಕಳೆ? ನೀವು ಹೇಳಿ. ಯಾವ ಯಾವ ರೀತಿಯಲ್ಲಿ ಹೇಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಶಾಸಕರಾದವರು ತಿಳಿದುಕೊಂಡಿರಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸೆಲ್ಫ್ ಡಿಸಿಪ್ಲೀನ್ ಇಲ್ಲದೇ ಇದ್ದರೆ ಏನು ಮಾಡುತ್ತೀರಿ? ಸೆಲ್ಫ್ ಡಿಸಿಪ್ಲೀನ್ ಇಲ್ಲದೇ ಇದ್ದಾಗ.....

ಶ್ರೀ ವಾಟಾಳ್ ನಾಗರಾಜ್ : ಒಬ್ಬ ಅಧಿಕಾರಿಯ ಬಳಿಗೆ ನಾವು ಶಾಸಕರಾದವರು ಹೋಗಿ ಅಸಭ್ಯವಾಗಿ ಅಲ್ಲಿ ಮಾತನಾಡತಕ್ಕಂಥದ್ದು ಸರಿಯಲ್ಲ. ಅಧಿಕಾರಿಗಳ ಬಗ್ಗೆ ನಾವು ಸಮಗ್ರವಾಗಿ ಚರ್ಚೆ ಮಾಡುತ್ತೇವೆ. ಬಳಿಗಾರ್ ಎನ್ನುವ ಒಬ್ಬ ಐ.ಎ.ಎಸ್. ಅಧಿಕಾರಿಯ ಮೇಲೆ .....

(ಗೊಂದಲ)

ನಮಗೆ ಬಹಳ ನೋವಾಗುತ್ತದೆ. ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ಸದನವನ್ನು ನಾಳೆ ನಡೆಸಿಕೊಂಡು ಹೋಗಲು ಬಹಳ ಕಷ್ಟವಾಗುತ್ತದೆ. ಆ ಶಾಸಕರ ಬಗ್ಗೆ ನಮ್ಮದೇನೂ ವಿರೋಧವೇನಿಲ್ಲ. ಅವರೂ ನಮ್ಮ ಸ್ನೇಹಿತರೇ. ಆದರೆ ಅವರು ಈ ಮಟ್ಟಕ್ಕೆ ಇಳಿಯಬಾರದು.

ಶ್ರೀ ಎಂ.ಪಿ. ರೇಣುಕಾಚಾರ್ಯ : ಎಂ.ಎಲ್.ಎ. ಆದ ನನಗೆ ಕೊಡಬೇಕಾದ ಬೆಲೆಯನ್ನು ಅಧಿಕಾರಿಗಳಾದವರು ಕೊಡದಿದ್ದರೆ ಏನು ಮಾಡಬೇಕು ಹೇಳಿ? ನಾವೂ ಜೋರಾಗಿ ಮಾತನಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದನ್ನು ಎಲ್ಲಿ ಮಾಡಬೇಕು. ಎಲ್ಲಿ ಮಾಡಬೇಕು ಹೇಳಿ. ಈ ಸದನದಲ್ಲಿಯೇ ಮಾಡುವುದು.

ಆ ಶಾಸಕರು ಮಾಡಿರುವುದು ತಪ್ಪು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, otherwise it will be very bad. ಆಫೀಸರ್‌ಗೆ ನೀವು ಹೊಡೆಯುತ್ತೀರೇನು? ಅಧಿಕಾರಿಗಳು ಸರಿಯಾಗಿ ನಡೆದುಕೊಳ್ಳದಿದ್ದರೆ ಕಾಯಿದೆ ಇದೆ, ಕಾನೂನು ಇದೆ, ಕ್ರಮ ತೆಗೆದುಕೊಳ್ಳಲಿ. No problem. You can't assault an officer. You can't raise your voice against the officer.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ರೆವಿನ್ಯೂ ಮಂತ್ರಿಗಳು ಸರ್ಕಾರದ ಪರವಾಗಿ ಏನೋ ಹೇಳುವವರಿದ್ದಾರೆ. ಅವರು ಹೇಳಲಿ, ಮಾನ್ಯ ರಾಯರೆಡ್ಡಿಯವರೇ, ತಾವು ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ I am the witness for that. ಆದ್ದರಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅಲ್ಲೇನು ನಡೆಯಿತು ಎಂಬುದನ್ನು ನಾನು ಹೇಳುತ್ತೇನೆ. ಒಂದು ನಿಮಿಷ ನನಗೆ ಅವಕಾಶ ಮಾಡಿಕೊಟ್ಟರೆ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಈ ವಿಷಯವನ್ನು ಸದನದಲ್ಲಿ ಏಕೆ ಚರ್ಚೆ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅಧ್ಯಕ್ಷರಾದವರು ತಾವು ನಮಗೆ ರಕ್ಷಣೆ ಕೊಡಬೇಕು. ಅಧ್ಯಕ್ಷರಾದವರು ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕು. ಪತ್ರಕರ್ತರಿಗೆ ರಕ್ಷಣೆ ಕೊಡಬೇಕು. ರಕ್ಷಣೆ ಕೊಡುವುದು ತಮ್ಮ ಜವಾಬ್ದಾರಿ.

ಶ್ರೀ ಬಸವರಾಜ ರಾಯರೆಡ್ಡಿ : ಒಂದು ನಿಮಿಷದಲ್ಲಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಬೇರೆ ರೀತಿಯಲ್ಲಿಯೇ ಹೋಗುತ್ತದೆ. ಆ ವಿಚಾರವನ್ನು ಸದನದಲ್ಲಿ ಏಕೆ ಚರ್ಚೆ ಮಾಡುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಘಟನೆ ನಡೆದಿರುವ ಬಗ್ಗೆ ......

(ಗೊಂದಲ)

ಅಧ್ಯಕ್ಷರು : ಮಾತನಾಡುವುದಕ್ಕೆ ಒಬ್ಬರಿಗೆ ಅವಕಾಶ ಕೊಟ್ಟಿರುವಾಗ ಮಧ್ಯೆ ಮಧ್ಯೆ ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿ ಗೊಂದಲ ಮಾಡಿದರೆ ಹೇಗೆ ಸದನ ನಡೆಸುವುದು? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಕಂದಾಯ ಸಚಿವರು ಉತ್ತರ ಕೊಡಲಿ. ಅದಕ್ಕೂ ಮುಂಚೆ ಮಾನ್ಯ ಬಸವರಾಜ ರಾಯರೆಡ್ಡಿಯವರು ಏನು ಹೇಳುತ್ತಾರೆ ಕೇಳಲಿ. ಆಮೇಲೆ ಉತ್ತರ ಕೊಡಲಿ.

ಅಧ್ಯಕ್ಷರು : ಆಯಿತು. ಏನು ಹೇಳಿ ಮಾನ್ಯ ರಾಯರೆಡ್ಡಿಯವರೆ, ದಯಮಾಡಿ ಎಲ್ಲರೂ ಕುಳಿತುಕೊಂಡು ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ಸದಸ್ಯರಾದಂಥ ಮಾಧುಸ್ವಾಮಿಯವರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ತಾವು ಸದನವನ್ನು ಮುಂದೂಡಿದಿರಿ. ಮುಂದೂಡಿದ ತಕ್ಷಣ ಹೊನ್ನಾಳಿ ಶಾಸಕರಾದಂಥ ರೇಣುಕಾಚಾರ್ಯರು ಬಳಿಗಾರ್‌ರವರ ಹತ್ತಿರ ಬಂದರು. ನಾನು ಆಗ ಅಲ್ಲಿದ್ದೆ. ಯಾವುದೋ ಒಂದು ಆದೇಶ ಕಲೆಕ್ಟ್ ಮಾಡಬೇಕಾಗಿದ್ದ ಕಾರಣ ನಾನು ಅದನ್ನು ಕಲೆಕ್ಟ್ ಮಾಡುವುದಕ್ಕೆ ಅಲ್ಲಿದ್ದೆ. ಅಲ್ಲಿಗೆ ರೇಣುಕಾಚಾರ್ಯರವರು ಬಂದ ಮೇಲೆ ಹೊನ್ನಾಳಿ ನಗರದಲ್ಲೋ ಅಥವಾ ಹೊನ್ನಾಳಿಯಲ್ಲಿ ಬರುವ ಯಾವುದೋ ಒಂದು ಗ್ರಾಮ ಪಂಚಾಯತಿಯಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಟೆಂಡರ್ ಕರೆದಿದ್ದಾರೆ. ಟೆಂಡರ್ ಕರೆದಿರುವುದಕ್ಕೆ, ಟೆಂಡರ್‌ನಲ್ಲಿ ಲ್ಯಾಂಡ್ ಆರ್ಮಿಯವರು ಭಾಗವಹಿಸುತ್ತಿದ್ದಾರೆ. ಅಧ್ಯಕ್ಷರೆ, ತಮಗೆ ಗೊತ್ತಿದೆ. ಈಗ ಟ್ರಾನ್ಸ್‌ಫರೆನ್ಸಿ ಆಕ್ಟ್ ಬಂದ ಮೇಲೆ, ಲ್ಯಾಂಡ್ ಆರ್ಮಿ ಇರಲಿ ಅಥವಾ ಯಾವುದೇ ಒಂದು ನಿಗಮ ಇರಲಿ ಕೆಲಸ ತೆಗೆದುಕೊಳ್ಳಬೇಕಾದರೆ ಅವರು ಟೆಂಡರ್‌ನಲ್ಲಿ ಭಾಗವಹಿಸಲೇ ಬೇಕಾಗುತ್ತದೆ. ಶಾಸಕರು ಏನು ಹೇಳುತ್ತಿದ್ದರೆಂದರೆ ಏನ್ರಿ ನೀವು ಲ್ಯಾಂಡ್ ಆರ್ಮಿಯವರು, ನೀವು ಟೆಂಡರ್ ಹೇಗೆ ಹಾಕುತ್ತೀರಿ ಎಂದು ಕೇಳಿದರು. ಬಳಿಗಾರ್‌ರವರು ಹೇಳಿದರು ಅವರಿಗೆ, ಇಲ್ಲಾ I am the Chairman of the Land Army. ಅದಕ್ಕೆ ನಾನು, ನಮ್ಮ ಅಧಿಕಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಿ ಎಂದು ಹೇಳಿದ್ದೇನೆ ಎಂದು ಹೇಳಿದರು ಅದರಲ್ಲಿ ತಪ್ಪೇನಿದೆ?

ಶ್ರೀ ಜಗದೀಶ್ ಶೆಟ್ಟರ್ (ರೆವಿನ್ಯೂ ಸಚಿವರು) : ಮಾನ್ಯ ಅಧ್ಯಕ್ಷರೆ, ಯಾವ ನಿಯಮದಡಿಯಲ್ಲಿ ಇವರು ಮಾತನಾಡುತ್ತಿದ್ದಾರೆ. ಇದನ್ನು ಚರ್ಚೆ ಮಾಡುವುದಕ್ಕೆ ಎಲ್ಲಿ ಅವಕಾಶ ಇದೆ? ಯಾವ ನಿಯಮದಡಿಯಲ್ಲಿ ಅವಕಾಶ ಕೊಟ್ಟಿದ್ದೀರಿ ಎಂಬ ಬಗ್ಗೆ ಏನಾದರೂ ಹೇಳಬೇಕಲ್ಲಾ.

(ಗೊಂದಲ)

ರೇಣುಕಾಚಾರ್ಯರವರ ಹೆಸರನ್ನು ವೈಯಕ್ತಿಕವಾಗಿ ಅವರು ತೆಗೆದುಕೊಂಡಿದ್ದಾರೆ.

(ಗೊಂದಲ)

ಬಳಿಗಾರ್‌ರವರನ್ನು ಕರೆಸಿ ಸ್ಟೇಟ್‌ಮೆಂಟ್ ಮಾಡಿಸುತ್ತೀರಾ ಇಲ್ಲಿ? ಅವರ ಹೇಳಿಕೆಯನ್ನು ತೆಗೆದುಕೊಳ್ಳುತ್ತೀರೇನು? ಇದು ಕೋರ್ಟ್ ಏನು? ನೇರವಾಗಿ ಲಿಖಿತ ಮೂಲಕ ಕೊಟ್ಟು ಏನು ಅವರಿಗೆ ಅಪಮಾನವಾಗಿದೆ ಎಂದು ಕೊಡಿ. ಅಧ್ಯಕ್ಷರಿಗೆ ಒಂದು ನೋಟೀಸ್ ಮೊದಲು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಬ್ಯಾಡ್ ಪ್ರಿಸಿಡೆಂಟ್ ಬೇಡ. ಬ್ಯಾಡ್ ಪ್ರಿಸಿಡೆಂಟ್ ಬೇಡ.

ಶ್ರೀ ಜಗದೀಶ್ ಶೆಟ್ಟರ್ : ನೀವು ಬ್ಯಾಡ್ ಪ್ರಿಸಿಡೆಂಟ್ ಹಾಕುತ್ತಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಇದು ಬ್ಯಾಡ್ ಪ್ರಿಸಿಡೆಂಟ್ ನಾವು ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ನನಗೆ ಅಲೋ ಮಾಡಿದ್ದೀರಿ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ಅವರಿಗೆ ಮಾತನಾಡಲು ಅಲೋ ಮಾಡಿದ್ದೇನೆ. ಅವರು ಏನು ಹೇಳುತ್ತಾರೆ ಎಂಬುದನ್ನು ದಯಮಾಡಿ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರು ಯಾವ ನಿಯಮದಡಿಯಲ್ಲಿ ಹೇಳುತ್ತಿದ್ದಾರೆ. ನನಗೇನೂ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮನ್ನು ಒಂದು ಪ್ರಶ್ನೆ ಕೇಳಿದರು. ಯಾವ ನಿಯಮದ ಕೆಳಗೆ ಅವರು ಮಾತನಾಡುತ್ತಿದ್ದಾರೆ ಎಂದು ಕೇಳಿದರು. ಕರೆಕ್ಟ್ ಅವರು ಕೇಳಿದ್ದು. ನಾನು ಇಷ್ಟೇ ಹೇಳುತ್ತೇನೆ. ಈ ಸದನಕ್ಕೆ ಕೆಲವು ಇತಿಮಿತಿಗಳಿವೆ. Where we are now transacting the Business, this is called the House. That is the Chair, this is the well. ಹೊರಗಡೆಗೆ ಹೋದರೆ ಲಾಬಿ. ಈ ಇಡೀ ಆವರಣ ಏನಿದೆ Precincts of the Assembly. ತಾವು You are the custodian of the House, the lobbies, precincts, everything. ಯಾವುದೇ ಒಂದು ಘಟನೆ ಈ ಇಡೀ precincts ನಲ್ಲಿ ಅಹಿತಕರವಾದಂಥದ್ದು ನಡೆದರೆ ಅದಕ್ಕೆ ನೇರ ಜವಾಬ್ದಾರಿ ತಮ್ಮದು ಇರುತ್ತದೆ. ಇಲ್ಲಿ ಒಂದು ನಡೆದಂಥ ಘಟನೆ ಬಗ್ಗೆ ಖುದ್ದು ಸಾಕ್ಷಿಯಾಗಿದ್ದಂಥವರು ತಮ್ಮ ವಿವರಣೆಯನ್ನು ಕೊಡುತ್ತಿದ್ದಾರೆ. ಅದೂ ಅಧ್ಯಕ್ಷರ ಅನುಮತಿಯನ್ನು ಪಡೆದು, ಸಂಬಂಧಿಸಿದಂಥವರೂ ಕೂಡ ಸದನದಲ್ಲಿ ಹಾಜರಿದ್ದಾರೆ. ಅವರೂ ಕೂಡ ಎದ್ದು ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಅವಕಾಶವಿರುತ್ತದೆ. ನಾನು ತಮ್ಮ ಕೊಠಡಿಯಲ್ಲೂ ಅದನ್ನೇ ವಿನಂತಿ ಮಾಡಿಕೊಂಡಿದ್ದು. ತಮ್ಮನ್ನು ಅತ್ಯಂತ ಕಳಕಳಿಯಿಂದ ಕೈಜೋಡಿಸಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸದನದಲ್ಲಿ......

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಯಾವಾಗ ಬೇಕಾದರೂ, ಯಾರು ಬೇಕಾದರೂ ನಿಯಮವಿಲ್ಲದೇ ನಿಂತುಕೊಂಡು ಮಾತನಾಡಬಹುದೇ?

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇದೇ ರೀತಿ ಬೇರೆ ಯಾರೋ ಸದಸ್ಯರು ಹೇಳಿದ್ದರೆ ಪರವಾಗಿಲ್ಲ. ಮೂರು, ನಾಲ್ಕು ಸಲ.... ನಾವು ಯಾವುದಾದರೂ ಸಂತೆ ವಿಚಾರ ಮಾತನಾಡಿದೆವಾ, ಜಾತ್ರೆ ವಿಚಾರ ಮಾತನಾಡಿದೆವಾ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸ್ವಾಮಿ, This is the problem. ನಿಮಗೆ ಗೌರವ ಕೊಟ್ಟು, ನಿಮ್ಮ ಅನುಮತಿಯನ್ನು ಪಡೆದು... ನೋಡಿ ಅಧ್ಯಕ್ಷರೆ, ನನಗೆ ಏನೂ ನಾಚಿಕೆ ಇಲ್ಲ. ಮಾನ್ಯ ಜಯಕುಮಾರ್‌ರವರಿಗೆ, ವೆಂಕಟೇಶ್‌ರವರಿಗೆ ಸರಿಸಾಟಿಯಾಗಿ ಉತ್ತರ ಕೊಡುವ

ಶಕ್ತಿ ಅವರಿಗಿಲ್ಲ. ನಾವು ಶರಣಾಗತರಾಗಿಬಿಡುತ್ತೇವೆ ನಿಮ್ಮ ಎದುರಿಗೆ ತಾವು ತೀರ್ಮ ಕೊಟ್ಟುಬಿಡಿ. ಅವರಿಗೆ ಅಸೆಂಬ್ಲಿಯಲ್ಲಿ ಸ್ಪೆಶಲ್ ಸ್ಟೇಟಸ್ ಕೊಟ್ಟಿದ್ದೇವೆ ಎಂದು. ನಾವು ಕೈಜೋಡಿಸಿ ನಿಮಗೆ ಶರಣಾಗತರಾಗಿ, ಅವರು ಎದ್ದರೆ ನಾವು ಎದ್ದು ಹೊರಗೆ ಹೋಗುತ್ತೇವೆ... ಈ ತರಹ ಅಸೆಂಬ್ಲಿಯನ್ನು ತಮ್ಮ ಮನಸೋ ಇಚ್ಛೆ ನಡೆಸಿಕೊಳ್ಳತಕ್ಕಂಥವರಿಗೆ ಗೌರವ, ಘನತೆ ಇಲ್ಲದಂತಹವರಿಗೆ ಅವಕಾಶ ಕೊಟ್ಟು ಇಲ್ಲಿ ಕುಳಿತು ವಾಚ್ ಮಾಡುವುದಾದರೆ, ನಮ್ಮಂಥ ಗೌರವಸ್ಥರಿಗೆ....

ಅಧ್ಯಕ್ಷರು : ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಒಂದು ಆವರಣದಲ್ಲಿ ನಡೆದಂಥ ಘಟನೆ ಬಗ್ಗೆ ಮಾನ್ಯ ರಾಯರೆಡ್ಡಿಯವರು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳುತ್ತಿದ್ದಾರೆ. ಅವರು ಯಾವುದೋ ಒಂದು ನಿಯಮದಡಿಯಲ್ಲಿ ಇವೊತ್ತು ವೈಯಕ್ತಿಕವಾಗಿ ಒಬ್ಬ ಶಾಸಕರ ಹೆಸರನ್ನೇ ಮಾನ್ಯ ರಾಯರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. ಅವರ ಮೇಲೆ ಒಂದು ಆಪಾದನೆಯನ್ನು ಅವರು ಮಾಡುತ್ತಿದ್ದಾರೆ. ಆ ರೀತಿ ಮಾಡುವುದಾದರೆ ಅವರು ಲಿಖಿತವಾದಂಥ ಒಂದು ಸೂಚನೆಯನ್ನು ಕೊಡಲಿ. ಆಮೇಲೆ ಚರ್ಚೆ ಮಾಡಬಹುದು. ಆ ಸೂಚನೆಗೆ ಅಧ್ಯಕ್ಷರಾದ ತಾವು ಅಲೋ ಮಾಡಿದರೆ ಚರ್ಚೆ ಮಾಡಬಹುದು. ಮಾನ್ಯ ರೇಣುಕಾಚಾರ್ಯರವರು ಹೇಳಿಕೆಯನ್ನು ಕೊಡಲಿ. ಅವರು ಹೇಳಿಕೆಯನ್ನೂ ಕೊಡಲಿ.

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ಪ್ರಕಾಶ್‌ರವರು ಮಾತನಾಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ರಾಯರೆಡ್ಡಿಯವರು ಅಲಿಗೇಷನ್ ಮಾಡುತ್ತಿಲ್ಲ. ಬಳಿಗಾರ್‌ರವರು ಇದ್ದಾಗ ಏನಾಯಿತು ಎಂಬ ಬಗ್ಗೆ ಅಷ್ಟೇ ಹೇಳುತ್ತಿದ್ದಾರೆ. He is not making any allegation against the Hon'ble Member.

ಶ್ರೀ ಜಗದೀಶ್ ಶೆಟ್ಟರ್ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ರಾಯರೆಡ್ಡಿಯವರು ಯಾವ ನಿಯಮದ ಅಡಿ ಚರ್ಚೆಗೆ ಅವಕಾಶ ಕೇಳುತ್ತಿದ್ದಾರೆ? ನನ್ನದು ಪಾಯಿಂಟ್ ಆಫ್ ಆರ್ಡರ್.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಆಪಾದನೆ ಮಾಡಲಿಲ್ಲ. ಆ ವಿಚಾರವನ್ನು ನಾನು ಪ್ರಸ್ತಾಪ ಮಾಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಯಾವ ನಿಯಮದ ಅಡಿ, ಒಬ್ಬ ಶಾಸಕರ ಹೆಸರನ್ನು ಅವರು ಸ್ಪಷ್ಟವಾಗಿ ಹೆಸರು ಎತ್ತಿ ಈ ರೀತಿಯಾಗಿ ಅಧಿಕಾರಿ ಜೊತೆ ನಡೆದುಕೊಂಡರು ಎನ್ನುವಂತಹ ರೀತಿಯಲ್ಲಿ ಅವರು ಹೇಳುತ್ತಿದ್ದಾರೆ. ಅವರು ಜನರಲ್ಲಾಗಿ ಮಾತನಾಡಿದ್ದರೆ ಬೇರೆ ಇತ್ತು. ಆದರೆ ಅವರು ಶಾಸಕರ ಹೆಸರನ್ನು ಎತ್ತಿ ಹೇಳುವಂತಹ ಸಂದರ್ಭದಲ್ಲಿ ಅವರು ಲಿಖಿತವಾಗಿ ಒಂದು ಸೂಚನೆ ಕೊಡಲಿ. ನಾವು ಇದರ ಬಗ್ಗೆ ಚರ್ಚೆ ಮಾಡುತ್ತೇವೆಂದು, ಅದಕ್ಕೆ ತಾವು ಅನುಮತಿ ಕೊಟ್ಟರೆ ಚರ್ಚೆಯನ್ನು ಮಾಡಬಹುದು ಹಾಗೂ ಆ ಶಾಸಕರ ಹೇಳಿಕೆಯನ್ನು ತೆಗೆದುಕೊಳ್ಳಬಹುದು. ಇವರ ಒಂದು ಹೇಳಿಕೆಯನ್ನು ತೆಗೆದುಕೊಳ್ಳಬಹುದು. ಅದೇನಾಗಿದೆ ಎಂದು ವಿಚಾರ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ನೋಡಿ, ಅವರು ಆಪಾದನೆ ಮಾಡುತ್ತಿಲ್ಲ. Please understand ನೋಟೀಸ್ ಯಾವಾಗ ಕೊಡುತ್ತಾರೆ. ಆಪಾದನೆ ಮಾಡಿದಾಗ ಅವರು ಆಪಾದನೆ ಮಾಡುತ್ತಿಲ್ಲ. ಅಲ್ಲಿ ಏನು ನಡೆಯಿತು ಅಷ್ಟೇ ಹೇಳುತ್ತಿದ್ದಾರೆ. Why are you so shy?

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ : ನೋಡಿ, ಈ ಘಟನೆ ಬಗ್ಗೆ.

ಅಧ್ಯಕ್ಷರು : ಆಯಿತು ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡುತ್ತಾರೆ. ಅವರು ಹಿರಿಯ ಸದಸ್ಯರು ಏನು ಸಲಹೆ ಹೇಳುತ್ತಾರೆ ಕೇಳೋಣ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಾವೆಲ್ಲರೂ ಬಹಳ ಗಂಭೀರವಾಗಿ ವರ್ತಿಸಬೇಕಾಗಿರತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ. ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿದಂತೆ ಇಡೀ ಸದನದ ವ್ಯಾಪ್ತಿ ಲಾಂಜ್ ಅನ್ನು ಸೇರಿದಂತೆ ತಮ್ಮ ಅಧಿಪತ್ಯಕ್ಕೆ ಒಳಪಡುತ್ತದೆ. ಇಲ್ಲಿ ನಡೆಯತಕ್ಕಂಥ ಎಲ್ಲಾ ವಿಚಾರಗಳೂ ಕೂಡ ಸದನದ ಗಮನಕ್ಕೆ ತರುವಂಥಾದ್ದೂ ಕೂಡ ಬಹಳ ಮುಖ್ಯವಾಗಿರುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಚರ್ಚೆಯಾಗುವಾಗ ಒಬ್ಬ ಅಧಿಕಾರಿಯಾಗಿರಲಿ ಅಥವಾ ಬೇರೆ ಯಾರೇ ಆಗಿರಲಿ, ಅವರ್‍ಯಾರು ಈ ಸದನದ ಒಳಗಡೆ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರ ಹೆಸರುಗಳನ್ನು ಪ್ರಸ್ತಾಪ ಮಾಡಬಾರದು. ಅದು ಸಂಪ್ರದಾಯ ಮತ್ತು ಕಾನೂನು ಕೂಡ ಇದೆ. ಆದುದರಿಂದ ಈಗ ಅಧಿಕಾರಿಯ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ಸಾಧ್ಯವಿಲ್ಲವೆಂದು ಅವರ ಗಮನಕ್ಕೆ ತಂದಿರಬಹುದು. ನಾನು ಮಾನ್ಯ ರೇಣುಕಾಚಾರ್ಯ ಅವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾರು ಇಲ್ಲಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಾಗಿರುವುದಿಲ್ಲ. ಅಂತಹ ವಿಚಾರವನ್ನು ದೀರ್ಘವಾಗಿ ತೆಗೆದುಕೊಂಡು ಹೋಗತಕ್ಕಂಥಾದ್ದೂ ಕೂಡ ಸರಿಯಾದಂತಹ ಕ್ರಮವಲ್ಲ. ಇದು ಒಂದು ಮರೆತುಬಿಡುವಂತಹ ಪ್ರಸಂಗ. ಯಾವುದೋ ಒಂದು ಉದ್ವಿಗ್ನತೆ ಕಾರಣಕ್ಕಾಗಿ ಅವರು ಏನಾದರೂ ಮಾತನಾಡಿದ್ದರೆ ಇದು ಸರಿಯಾದುದಲ್ಲ. ಅದನ್ನು ಯಾರೇ ಒಬ್ಬ ಅಧಿಕಾರಿ.....

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನಾನು ಮಾತನಾಡುವುದಕ್ಕೆ ಬಿಡುತ್ತೀರೋ ಅಥವಾ ಬಿಡುವುದಿಲ್ಲವೋ ಅಷ್ಟು ಹೇಳಿ. ನಿಮಗೆ ಹೇಗೆ ಹೇಳಬೇಕೆಂದು ಗೊತ್ತಾಗುತ್ತಿಲ್ಲ. ನಿಮ್ಮ ಪರವಾಗಿ ಮಾತನಾಡುತ್ತಿದ್ದೇನೆ. ನೀವು ನಿಮ್ಮದೇ ಆದಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಇಲ್ಲಿ ಸಭೆಯೊಳಗೆ ಇರತಕ್ಕಂಥ ಸಂದರ್ಭದಲ್ಲಿ ಮಾತನಾಡಿರತಕ್ಕಂಥಾದ್ದು ಕೂಡ ಸದನದಲ್ಲಿ ಗಮನ ಸೆಳೆದಿರತಕ್ಕಂಥಾದ್ದು ತಪ್ಪು ಎಂದು ಹೇಳುವುದಿಲ್ಲ. ಅದನ್ನು ನೀವು ಕೇಳಲಿಲ್ಲ, ನೀವು ಬಹಳ ಅವಸರದಲ್ಲಿದ್ದೀರಿ, ಅದೇ ಬಂದಿರುವುದು.

ಶ್ರೀ ಬಸವರಾಜ್ ರಾಯರೆಡ್ಡಿ : ದಯಮಾಡಿ ಕೇಳಿ, I am not in a hurry. ಮಾನ್ಯ ಪ್ರಕಾಶ್‌ರವರು ವಿಚಾರ ಗೊತ್ತಿಲ್ಲದೆ ಮಾತನಾಡುತ್ತಾರೆ. ತಾವು ನನಗೆ ಅವಸರದಲ್ಲಿದ್ದೀರಿ ಎಂದು ಹೇಳಿದಿರಿ ಅದಕ್ಕೆ ನಾನು I am not in a hurry ಎಂದು ಹೇಳಿದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಇದು ಸದನದಲ್ಲಿ ಆಗಿರುವಂತಾದ್ದಾದರೆ ಈ ವಿಚಾರದಲ್ಲಿ ಸ್ಪೀಕರ್ ಅವರೂ ಕೂಡ ಅದನ್ನು ಪರಿಗಣಿಸಬೇಕು ಎಂದು ಏನು ಮಾನ್ಯ ರಮೇಶ್‌ಕುಮಾರ್‌ರವರು

ಪ್ರಸ್ತಾಪ ಮಾಡಿದ್ದಾರೆ. ಅದು ಸರಿಯಾದಂತಹ ಕ್ರಮ ಕೂಡ ಮತ್ತು ಸತ್ಸಂಪ್ರದಾಯವಾಗಿದೆ. ಯಾವುದೇ ಪ್ರೆಮಿಸಸ್‌ನಲ್ಲಿ ಆಗಿರತಕ್ಕಂಥ ವಿಚಾರದಲ್ಲಿ ಕೂಡ ಅದನ್ನು ಗಮನಕ್ಕೆ ತೆಗೆದು ಕೊಳ್ಳಬೇಕಾಗಿರುತ್ತದೆ. ಇದೊಂದು ಅಹಿತಕರವಾದಂತಹ ರೀತಿಯಲ್ಲಿ ಆಗಬಾರದು. ನಾವು ಮತ್ತೆ ಈಗ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಆ ಅಧಿಕಾರಿ ಹೆಸರನ್ನು ಹೇಳುವುದಾಗಲಿ, ಅದರ ಬಗ್ಗೆ ಮಾತನಾಡತಕ್ಕಂಥಾದ್ದು ಸೂಕ್ತವಲ್ಲ. ಏಕೆಂದರೆ ಅವರು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ ನಿಮಗೆಲ್ಲಾ ಗೊತ್ತಿರಬಹುದು: ಹಿರಿಯರಾಗಿರತಕ್ಕಂಥ ಮಾನ್ಯ ನಂಜೇಗೌಡರು ಅವತ್ತಿನ ಮುಖ್ಯ ಕಾರ್ಯದರ್ಶಿಗಳ ಹೆಸರನ್ನು ತೆಗೆದುಕೊಂಡು ಮಾತನಾಡಿದರು. ಆಗ ಶ್ರೀ ಎಸ್.ಬಿ. ಮುದ್ದಪ್ಪನವರು ಇದ್ದರು. ನಾವು ಆಗ ಆಡಳಿತ ಪಕ್ಷದಲ್ಲಿದ್ದರೂ ಕೂಡ ಅದಕ್ಕೆ ಪ್ರತಿಭಟನೆ ಮಾಡಿದೆವು. ಏಕೆಂದರೆ ಅವರು ಮುಖ್ಯ ಕಾರ್ಯದರ್ಶಿಗಳಾಗಿದ್ದು ಇಲ್ಲಿ ಅವರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಆದ್ದರಿಂದ ತಾವು ಆ ರೀತಿ ಆಪಾದನೆ ಮಾಡಬಾರದು. ಒಂದು ವೇಳೆ ಆಪಾದನೆ ಮಾಡಬೇಕಾಗಿದ್ದರೆ ಅದರ ಬಗ್ಗೆ ಒಂದು ನೋಟೀಸ್ ಅನ್ನು ಕೊಡಿ ಎನ್ನುವಂಥಾದ್ದನ್ನೂ ಕೂಡ ಇಲ್ಲಿ ಮಾಡಿದ್ದೆವು. ಆಗ ಮಾನ್ಯ ರಮೇಶ್‌ಕುಮಾರ್‌ರವರೇ ಸ್ಪೀಕರ್ ಆಗಿದ್ದರು. ಇಂತಹ ಸಂದರ್ಭಗಳಿರುವುದರಿಂದ ನಾನು ವಿನಂತಿ ಮಾಡಿಕೊಳ್ಳುವುದಿಷ್ಟೆ. ಅಧಿಕಾರಿ ಅಥವಾ ಯಾರೇ ಆಗಲಿ, ಈಗ ತೆಗೆದುಕೊಂಡಿರತಕ್ಕಂಥ ನಿಲುವಿಗೆ ನಾವು ಕಾನೂನನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಲ್ಯಾಂಡ್ ಆರ್ಮಿಗೆ ಸಂಬಂಧಪಡತಕ್ಕಂಥವರು ಪಾರದರ್ಶಕ ಕಾನೂನಿನ ಕೆಳಗೆ ಟೆಂಡರ್‌ನಲ್ಲಿ ಭಾಗವಹಿಸಬೇಕು ಎನ್ನುವಂತಹ ನಿಯಮ ಇದೆ. ಅದು ನಮಗೆ ಇಷ್ಟವಾಗಲಿ, ಇಷ್ಟವಾಗದೇ ಇರಲಿ. ನಾವು ಅದನ್ನು ತಿದ್ದುಪಡಿ ಮಾಡಿಕೊಳ್ಳತಕ್ಕಂಥದ್ದು ನಮ್ಮ ಅಧಿಕಾರವೇ ವಿನಃ ನೀವು ಆ ರೀತಿ ಕಾನೂನು ಹೇಳುತ್ತೀರಲ್ಲಾ ಎಂದು ಅಧಿಕಾರಿಗಳ ಮೇಲೆ ಸಿಟ್ಟಾಗತಕ್ಕಂಥಾದ್ದೂ ಕೂಡ ಸರಿಯಾದುದಲ್ಲ. ನಾನು ಮಾನ್ಯ ರೇಣುಕಾಚಾರ್ಯ ಅವರಿಗೆ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು, ಅದನ್ನು ನಾವು ಬೇರೆ ರೀತಿಯಲ್ಲಿ ಬಗೆಹರಿಸಬೇಕು. ದಯವಿಟ್ಟು ನಮ್ಮಷ್ಟಕ್ಕೆ ನಾವೇ ಸ್ವಯಂ ನಿಯಂತ್ರಣಕ್ಕೆ ಒಳಪಟ್ಟು, ಇದನ್ನು ಇಲ್ಲಿಗೇ ಮರೆತು ಬಿಟ್ಟು ಮುಂದುವರೆಯಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

7. ಅಧ್ಯಕ್ಷರ ತೀರ್ಪು.

ವಿಷಯ: ವಿಧಾನಸಭೆಯ ಸಭಾಂಗಣದೊಳಗಡೆ ಅಧಿಕಾರಿಗಳೊಂದಿಗೆ ಶಾಸಕರುಗಳು ಅಧ್ಯಕ್ಷರ ಅನುಮತಿ ಮೇರೆಗೆ ಮಾತನಾಡುವ ಬಗ್ಗೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಐದು ನಿಮಿಷ ಮಾತನಾಡಿಬಿಡಿ. ಇಲ್ಲಿ ಅಧಿಕಾರಿಗಳ ಗ್ಯಾಲರಿ ಇದೆ. ಅಲ್ಲಿ ಅಧಿಕಾರಿಗಳು ಸಚಿವರಿಗೆ ಸಹಾಯ ಮಾಡುವುದಕ್ಕೆ ಬಂದಿರುತ್ತಾರೆ. ಇದನ್ನು ನಾನು ಏಕೆ ಹೇಳಬೇಕಾಗಿದೆ ಎಂದರೆ ನನ್ನ ಪರ್ಮಿಷನ್ ಇಲ್ಲದೆ ಯಾರೂ ಅಧಿಕಾರಿಗಳ ಹತ್ತಿರ ಮಾತನಾಡಬಾರದು. ಇಲ್ಲದೇ ಇದ್ದರೆ ಜವಾಬ್ದಾರಿ ನನ್ನ ಮೇಲೆ ಬರುತ್ತದೆ. ಯಾರಾದರೂ ಕೂಡ ಏನಾದರೂ ಇದ್ದರೆ ಸಚಿವರ ಹತ್ತಿರ ಮಾತನಾಡಿಕೊಳ್ಳಿ. ಏನಾದರೂ ಮಾಡಿಕೊಳ್ಳಿ. ಆದರೆ ಅಧಿಕಾರಿಗಳ ಹತ್ತಿರ ಯಾರೂ ಇನ್ನು ಮುಂದೆ ದಯಮಾಡಿ ನನ್ನ ಪರ್ಮಿಷನ್ ಇಲ್ಲದೆ ಮಾತನಾಡಬಾರದು. ಆಯಿತು. ವಾಟಾಳ್ ನಾಗರಾಜ್‌ರವರೇ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳಿಗಿಲ್ಲ.

8. ವಿತ್ತೀಯ ಕಾರ್ಯಕಲಾಪ.

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, 2006-07ರ ಆಯವ್ಯಯವನ್ನು, ನಮ್ಮ ವಿರೋಧ ಪಕ್ಷದಲ್ಲಿ ಬಹಳ ವರ್ಷಗಳ ಕಾಲ ಕುಳಿತು, ನಮ್ಮ ಜೊತೆಯಲ್ಲಿ ಸರ್ಕಾರದ ಮೇಲೆ ನಿರಂತರವಾಗಿ ಧಾಳಿ ಮಾಡುತ್ತಿದ್ದಂತಹ ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಹಣಕಾಸು ಖಾತೆಯನ್ನು ಅವರೇ ವಹಿಸಿಕೊಂಡಿದ್ದಾರೆ. ಅವರು ಆಯವ್ಯಯವನ್ನು ಮಂಡಿಸುವಾಗ ಸಮಗ್ರ ಆಯವ್ಯಯದಲ್ಲಿ ರಂಜನೆ, ಮನರಂಜನೆ, ಜನರಲ್ಲಿ ಆಶ್ಚರ್ಯ ಮತ್ತು ಆಸೆ ಆಶೋತ್ತರಗಳನ್ನು ಹುಟ್ಟಿಸತಕ್ಕಂಥ ರೀತಿಯಲ್ಲಿ ಬಹಳ ಪ್ರಾಮಾಣಿಕವಾದಂತಹ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ನಾನು ಅವರ ಭಾಷಣದಲ್ಲಿ ಗಮನಿಸಿದ್ದು, ವಿರೋಧ ಪಕ್ಷದ ನಾಯಕರಾಗಿ ಹತ್ತಾರು ವರ್ಷಗಳ ಕಾಲ ಇದ್ದಾಗ ಒಂದು ದಿನ ಕೂಡ ಬಸವಣ್ಣನವರ ವಚನವಾಗಲಿ, ಅಕ್ಕಮಹಾದೇವಿಯವರ ವಚನವಾಗಲಿ, ಪುರಂದರದಾಸರ ಕೀರ್ತನೆಯಾಗಲಿ, ಕನಕದಾಸರ ಪದ್ಯವಾಗಲಿ, ದೇವರ ದಾಸಿಮಯ್ಯನವರದಾಗಲಿ ಯಾವುದನ್ನು ಎಲ್ಲೂ ಕೂಡ ಒಂದು ದಿನ ಹೇಳಿಲ್ಲ. ನಾನು ಅವರು 30 ವರ್ಷದಿಂದ ಜೊತೆಯಲ್ಲಿ ಕುಳಿತಿದ್ದೇವೆ. ಅಷ್ಟು ದಿನ ಹೇಳದೇ ಇದ್ದು ಇದ್ದಕ್ಕಿದ್ದ ಹಾಗೆ ಇಡೀ ಆಯವ್ಯಯದಲ್ಲಿ ಹತ್ತಾರು ವಚನಗಳನ್ನು ಹಾಗೂ ಪದ್ಯಗಳನ್ನು ನಮೂದು ಮಾಡಿರುವುದನ್ನು ನೋಡಿದಾಗ ಎಷ್ಟು ಬೇಗ ಮಾನ್ಯ ಯಡಿಯೂರಪ್ಪನವರು ಬದಲಾವಣೆಯಾಗಿ ಬಿಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಇಷ್ಟು ಬೇಗ ಸುಮಾರು 15-16 ವರ್ಷ ಇಲ್ಲದೆ ಇರುವಂತಹದ್ದು, ವಚನಗಳು ಅವರ ಗಮನಕ್ಕೆ ಹೋಗಿರಲಿಲ್ಲ. ಅಕ್ಕಮಹಾದೇವಿ ವಚನ ಅವರ ಗಮನಕ್ಕೆ ಹೋಗಿರಲಿಲ್ಲ. ರಾಷ್ಟ್ರಕವಿ ಕುವೆಂಪು ಅವರದ್ದು ಅವರ ಗಮನಕ್ಕೆ ಹೋಗಿರಲಿಲ್ಲ. ಕನಕದಾಸರು ಅವರ ಗಮನಕ್ಕೆ ಹೋಗಿರಲಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ : ಅವರು ವಚನ ಭ್ರಷ್ಟರಾಗಿದ್ದಾರೆ ಎಂದೇ ನಿಮ್ಮ ಲೆಕ್ಕಚಾರ.

ಶ್ರೀ ವಾಟಾಳ್ ನಾಗರಾಜ್ : ಛೇ, ಛೇ ಆ ತರಹ ಅಲ್ಲ. ನನಗೆ ಅನಿಸುತ್ತದೆ ಎಷ್ಟು ಬೇಗ ಯಡಿಯೂರಪ್ಪನವರು ಬದಲಾವಣೆಯಾದರು? ಇದಕ್ಕೆ ಕಾರಣಗಳೇನು? ನನಗೆ ಆಶ್ಚರ್ಯ. ನಾನು ಅನೇಕ ಬಾರಿ ವಚನ ಓದುವಾಗ ನನಗೆ ಜ್ಞಾಪಕ ಇದ್ದಂತೆ ಒಂದು ಸಾರಿ ಬಂದು ಈ ವಚನ ಯಾವುದರಲ್ಲಿದೆ ಆ ಪುಸ್ತಕ ಒಂದು ತಂದು ಕೊಡಬೇಕೆಂದು ಹೇಳಿದರು. ನಾನು ತಂದು ಕೊಡುತ್ತೇನೆಂದು ಹೇಳಿದ್ದೆ. ಅಷ್ಟಕ್ಕೆ ಅವರು ವಚನದ ಬಗ್ಗೆ ಸೀಮಿತವಾಗಿದ್ದರೇ ಹೊರತು, ಅವರು ಹಣಕಾಸು ಖಾತೆ ಹೊಂದಿರತಕ್ಕಂಥ ಉಪ ಮುಖ್ಯಮಂತ್ರಿಯಾಗಿದ್ದೇನೆ ಈ ಸಂದರ್ಭದಲ್ಲಿ ನಾನು ಬಹಳ ಪ್ರತಿಭಾವಂತನಾಗಿ, ಪ್ರಚಂಡರಾಗಿ ಎಲ್ಲಾ ರೀತಿಯಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ವಿರೋಧ ಪಕ್ಷದ ನಾಯಕರಾಗಿ ಇಲ್ಲಿ ಸಮರ್ಥನೆಯನ್ನು ನಾನು ಚೆನ್ನಾಗಿ ಮಾಡಿದ್ದೆ. ಹಾಗೆ ಅಷ್ಟೇ ಸಮರ್ಥವಾಗಿ ಅಲ್ಲಿ ನಾನು ನನ್ನ ಆಯವ್ಯಯವನ್ನು ಮಂಡಿಸಬೇಕೆಂದು ಹೇಳಿ ಒಂದು ತೀರ್ಮಾನಕ್ಕೆ ಬಂದಿರಬೇಕು. ಅವರು ಇಡೀ ಸಮೂಹ, ಮಾನ್ಯ ಯಡಿಯೂರಪ್ಪನವರಿಗೆ ಬಹಳ ಜನರ ಸಮೂಹ ಇದೆ. ಅನೇಕರಿದ್ದಾರೆ, ಅವರು ಹೇಳಿದ್ದಾರೆ ಸಾರ್. ನೀವು ಅಕ್ಕಮಹಾದೇವಿಯದ್ದು ಹಾಕಬೇಕು. ಅಕ್ಕಮಹಾದೇವಿಯವರದ್ದು ವಚನ ಹಾಕಿದರೆ ಮಹಿಳೆಯರಿಗೆಲ್ಲಾ ಕೀರ್ತಿ. ಕನಕದಾಸರದ್ದು ಹಾಕಬೇಕು. ಅವರದು ಹಾಕಿದರೆ ಕುರುಬರಿಗೆ ಕೀರ್ತಿ. ಇನ್ನು ಬಸವಣ್ಣನವರದು ಹಾಕಿದರೆ ಲಿಂಗಾಯಿತರಿಗೆಲ್ಲಾ

ಕೀರ್ತಿ, ಇದೆಲ್ಲಾ ಸೇರಿಸಿ ಬಿಡಬೇಡಿ. ಇದರಲ್ಲಿ ಎಲ್ಲಾ ವಚನಗಳನ್ನು ಸೇರಿಸಬೇಕು. ಪ್ರತಿವಚನ ಬರಬೇಕು ಎಂದು.........

ಶ್ರೀ ಸಿದ್ದರಾಮಯ್ಯ : ಕಾಗಿನೆಲೆ ಅಭಿವೃದ್ಧಿ ಮಾಡುವುದು, ಬಸವ ಕಲ್ಯಾಣ ಅಭಿವೃದ್ಧಿ ಮಾಡುವುದು ಅವರು ಹೊಸದಾಗಿ ಸೇರಿಸಿದ್ದಲ್ಲ. ಹಿಂದೆ ಏನು ಪ್ರೋಗ್ರಾಂ ಇತ್ತು. ಅವುಗಳು ಮುಂದುವರೆದಿದೆ. ಹೊಸ ಕಾರ್ಯಕ್ರಮ ಏನೂ ಮಾಡಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ : ಕಂಟಿನ್ಯೂ ಮಾಡುವುದೂ ಕೂಡ ಸರ್ಕಾರದ ಒಂದು ಸಾಧನೆ ಅಲ್ಲವೆ? ಅದನ್ನು ಮುಂದುವರೆಸಿಕೊಂಡು ಹೋಗತಕ್ಕಂಥದ್ದು ಸರ್ಕಾರದ ಜವಾಬ್ದಾರಿ ಅಲ್ಲವೇ? ನಮ್ಮ ಮಾಜಿ ಉಪ ಮುಖ್ಯಮಂತ್ರಿಗಳು ಬಹಳ ವರ್ಷ ಅಧಿಕಾರ ಮಾಡಿ ಈ ರೀತಿ ಹೇಳಿಬಿಟ್ಟರೆ ಬಹಳ ಚೆನ್ನಾಗಿ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಕಾಗಿನೆಲೆ ಅಭಿವೃದ್ಧಿಗೆ ಹೋದ ಸಲವೇ ದುಡ್ಡು ಇಟ್ಟಿದ್ದು, ಅದರಲ್ಲಿ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. ಅದು ಹಾಗೆಯೇ ಇದೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಹೋದ ಸಲ ಅವರೇ ಇದ್ದರಲ್ಲಾ, ಏಕೆ ಖರ್ಚು ಮಾಡಿಲ್ಲವೆಂದು ಕೇಳಿ. ಇವರು ಇರುವಷ್ಟು ದಿವಸ ಏಕೆ ಖರ್ಚು ಮಾಡಿಲ್ಲ? ಇವರು ಬಜೆಟ್‌ನಲ್ಲಿ ಇಟ್ಟು ಶೋ ಮಾಡಿದರು. ಈಗ ನಾವು ಮುಂದುವರೆಸುತ್ತಿದ್ದೇವೆ. ಕೆಲಸವನ್ನು ಮಾಡಿ ತೋರಿಸುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಮಾನ್ಯ ಸಿದ್ದರಾಮಯ್ಯನವರಿಗೆ ಆಮೇಲೆ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತೇನೆ. ನೀವು ಈ ರೀತಿ ಎಲ್ಲಾ ವಚನಗಳನ್ನು ಇಲ್ಲಿ ಇಟ್ಟರೆ, ಆ ವಚನಗಳನ್ನು ಬರೆದಂತಹ ಅವರ ಭಕ್ತರು, ಅವರ ಸಮೂಹ, ಆ ಎಲ್ಲರೂ, ಎಲ್ಲಾ ಕಡೆಯಲ್ಲೂ ಅತ್ಯಂತ ವಿಶ್ವಾಸದಿಂದ, ಪ್ರೀತಿಯಿಂದ, ನಿಮ್ಮ ಆಯವ್ಯಯವನ್ನು ಸ್ವಾಗತಿಸುತ್ತಾರೆ. ಒಬ್ಬ ಸ್ನೇಹಿತರು ಬಂದು, ಅಕ್ಕಮಹಾದೇವಿಯವರ ವಚನವನ್ನು ಸೇರಿಸಲೇ ಬೇಕು ಅಂದರು. ಅದು ಆಯಿತು. ಇನ್ನೊಬ್ಬರು ಬಂದು, ದೇವರ ದಾಸಿಮಯ್ಯನವರ ವಚನವನ್ನು ಸೇರಿಸಬೇಕೆಂದು ಅಂದರು. ಅದು ಆಯಿತು. ಇನ್ನೊಬ್ಬರು ಬಂದು, ಬಸವಣ್ಣನವರ ವಚನವನ್ನು ಸೇರಿಸಿ ಅಂದರು. ಅದು ಆಯಿತು. ಇನ್ನೊಬ್ಬರು ಬಂದು, ಕನ್ನಡ ಎಂದ ಮೇಲೆ ರಾಷ್ಟ್ರಕವಿ ಕುವೆಂಪುರವರದು ಸೇರಿಸಿ ಎನ್ನುತ್ತಾರೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಇದು ಒಟ್ಟಾರೆ ಜನಪರವಾಗಿ ಇದೆಯಾ, ಇಲ್ಲವಾ, ಎಂಬುದು ಮುಖ್ಯವೇ ಹೊರತು, ಅದನ್ನೇ ಒಂದು ದೊಡ್ಡ ವಿಚಾರ ಮಾಡುವುದಲ್ಲ. ಅದು ಏನೂ ದೊಡ್ಡ ತಪ್ಪು ಅಲ್ಲ. ಅದು ಏನು ದೊಡ್ಡ ತಪ್ಪಾ? ಹಿಂದೆ ಇದ್ದಂತಹ ಜೆ.ಹೆಚ್. ಪಟೇಲ್‌ರವರು ಮಾಡಿರಲಿಲ್ಲವೇ? ಅವರು ಹೆಜ್ಜೆ ಹೆಜ್ಜೆಗೂ ವಚನಗಳನ್ನು ಹೇಳುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಜಯಕುಮಾರ್‌ರವರೇ ನಾನು ಎಲ್ಲಾದರೂ ಒಂದು ಕಡೆ ಅದು ತಪ್ಪು ಎಂದು ಹೇಳಿದ್ದರೆ, ಎಲ್ಲಾದರೂ ಒಂದು ಪದ, ಆಗ ಹೇಳಿ. ತಾವು ಸ್ವಲ್ಪ

ಸಾವಧಾನವಾಗಿ ಕೇಳಿ. ನಿಮ್ಮ ಮುಖ್ಯಮಂತ್ರಿಯವರು ಬಂದಿದ್ದಾರೆ. ಈಗ ಅವರು ನಿಮ್ಮನ್ನು ಮಂತ್ರಿಯನ್ನಾಗಿ ಮಾಡಿಬಿಟ್ಟಿದ್ದಾರೆ. ನೀವು ಮಂತ್ರಿಗಳಾದ ಮೇಲೆ ಉತ್ತರ ಹೇಳಬೇಕೇ ಹೊರತು, ನೀವು ಕೂಗುವುದರಿಂದ ಪ್ರಯೋಜನವಾಗುವುದಿಲ್ಲ. ಮಾನ್ಯ ಕುಮಾರಸ್ವಾಮಿಯವರೆ, ತಾವು ಬಂದಿದ್ದೀರಿ. ನೀವೇ ಸಾಕ್ಷಿ ಅಧ್ಯಕ್ಷರೆ, ನಾನು ಎಲ್ಲಾದರೂ, ಒಂದು ಕಡೆ ಅದು ತಪ್ಪು ಎಂದು ಹೇಳಿದ್ದೇನೆಯೆ?

ಶ್ರೀ ಡಿ.ಟಿ. ಜಯಕುಮಾರ್ : ಪತ್ರಕರ್ತರು ಒಳ್ಳೆಯ ಬಜೆಟ್ ಎಂದು ಹೇಳಿದ್ದಾರೆ. ತಾವು ಇದೆಲ್ಲವನ್ನೂ ಯೋಚನೆ ಮಾಡಿ. ರೈತರ ಸಾಲಕ್ಕೆ ನಾವು ಶೇಕಡ 6ರಷ್ಟು ಬಡ್ಡಿ ಇದ್ದದ್ದನ್ನು ಶೇಕಡ 4ರಂತೆ ಮಾಡಿದ್ದು ತಪ್ಪಾ?

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳಿದ್ದೇನೆ. ಮಾನ್ಯ ಮಂತ್ರಿಗಳು ಏನೋ ಮಾತನಾಡುತ್ತಿರಲ್ಲಾ ನಾನು ಇನ್ನೂ ಏನೂ ಮಾತನಾಡಿಲ್ಲ. ಇದು ಏನು ಅರ್ಥ? ನಾನು ತಪ್ಪು ಎಂದು ಹೇಳಿಲ್ಲ. ನಾನು ವಚನ ಸಾಹಿತ್ಯದ ಬಗ್ಗೆ, ನಾನು ಯಾವುದನ್ನು ತಪ್ಪು ಎಂದು ಹೇಳಬೇಕೋ, ಅದನ್ನು ಅಲ್ಲಿ ಹೇಳುತ್ತೇನೆ. ಇನ್ನೂ ನಾನು ತಪ್ಪು ಎಂದು ಅಂದಿಲ್ಲ. ನಾನು ತಪ್ಪು ಎನ್ನುವುದಕ್ಕೂ ಮುಂಚೆ ಬಸವ ಎಂದು ಅನ್ನಲಿಲ್ಲ. ಮುಂದೆ ಬಸವ ಎಂದರೆ ಪಾಪ ಎಂದು ಹೇಳಲೇ ಇಲ್ಲ. ನಾನು ಬಸವ ಎನ್ನಬಹುದೇ ಎಂದು ಮಾನ್ಯ ಜಯಕುಮಾರ್‌ರವರು ಎದ್ದು ನಿಂತುಕೊಂಡರೆ ಹೇಗೆ? ನಿಮ್ಮನ್ನು ಮಂತ್ರಿ ಎಂದು ಮಾಡಿದ್ದು ಆಯಿತು. ನೀವು ಇನ್ನು ಎದ್ದುನಿಂತು ವಿರೋಧ ಪಕ್ಷದ ಕಡೆಗೆ ನಿಲ್ಲಬೇಕಾಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಬಸವನೆಂದೊಡೆ ಪಾಪ, ಅಂದಿದ್ದೆ ದಶಗೆಟ್ಟು ಪೋಪುದು ಎನ್ನುವುದನ್ನು ಬಿಟ್ಟು ಈಗಲೇ ಹೇಳಿಬಿಟ್ಟಿರಲ್ಲಾ, "ಬಸವನೆಂದೊಡೆ ಪಾಪ, ದಶಗೆಟ್ಟು ಪೋಪುದು" ಎಂದು ಅದನ್ನು ನೀವು ಮುಂದಿನ ಭಾಗಕ್ಕೆ ಹೇಳಲಿಲ್ಲ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅಷ್ಟಕ್ಕೆ ಹೋಗೇ ಇಲ್ಲ. ಮಾನ್ಯ ಜಯಕುಮಾರ್‌ರವರು ಇನ್ನೂ ಅದನ್ನು ಕೇಳೇ ಇಲ್ಲ, ತಕ್ಷಣ ಎದ್ದು ತಪ್ಪು ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಮಂತ್ರಿ ಮಂಡಲವನ್ನು ರಚನೆ ಮಾಡುತ್ತಾರೆ. ಅವರು ಹೇಳಿದಂಥವರು ಮಂತ್ರಿ ಆಗುತ್ತಾರೆ. ನಾವು ಹೇಳಿದವರು ಮಂತ್ರಿಯಾಗುವುದಿಲ್ಲವೆನ್ನುವಂತಹ ವ್ಯವಸ್ಥೆ ಇದ್ದರೆ ಆ ರೀತಿ ಮಾತನಾಡಲಿ. ಅವರು ಬೇಕಾದರೆ ಏನು ಬೇಕಾದರೂ ಮಾತನಾಡಬಹುದು, ಗಂಟೆಗಟ್ಟಲೆ ಮಾತನಾಡಬಹುದು. ಇಲ್ಲಿ ಯಾರೂ ಮೆಂಬರ್‌ಗಳು ಇಲ್ಲವಾ? ಸದಸ್ಯರು ಇಲ್ಲವಾ? ಬಹಳ ಜನರಿಗೆ ಅವಕಾಶ ಸಿಗುವುದಿಲ್ಲ. ಇವರಿಗೆ ಅವಕಾಶವನ್ನು ಕೊಟ್ಟಿದ್ದೀರಿ. ಅದನ್ನೇ ಒಂದು ಪೀಠಿಕೆ ಮಾಡಿ, ಅದು "ಮೂಗಿಗಿಂತ ಮೂಗುತಿ ಭಾರ" ಎನ್ನುವಂತೆ, ಇವರು ಅದನ್ನೇ ಹೇಳುತ್ತಾ ಕುಳಿತುಕೊಂಡರೆ ಹೇಗೆ, ಇವರು ಸಬ್ಜೆಕ್ಟ್‌ಗೆ ಬರಲಿ.

ಶ್ರೀ ವಾಟಾಳ್ ನಾಗರಾಜ್ : ಈಗ ಮೂಗುತಿಗಳ ವಿಚಾರಗಳೆಲ್ಲಾ ಅವರಿಗೆ ಗೊತ್ತು. ನನಗೆ ಗೊತ್ತಿಲ್ಲ. ಆದುದರಿಂದ ಅದು ಯಾವುದು ದಪ್ಪ, ಯಾವುದು ಸಣ್ಣ, ಎಂಬುದು ಅವರಿಗೆ ಗೊತ್ತು. ನನಗೆ ಗೊತ್ತಿಲ್ಲ. ಅವರಿಗೆ ಮೂಗುತಿಯ ಬಗ್ಗೆ ಅಭ್ಯಾಸ, ನನಗೆ ಅದು ಗೊತ್ತಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ : ಅದು ನಾಣ್ಣುಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅದೇ ನಾಣ್ಣುಡಿ ಹೇಳಿದ್ದು, ಕೆಳನುಡಿ ಹೇಳಿಲ್ಲ. ನಾನು ಹೇಳಿದ್ದು ಅದೇ, ನಾನು ಇನ್ಯಾವ ನುಡಿ ಹೇಳಿದೆ. ನಾನು ಅದೇ ನುಡಿ ಹೇಳುತ್ತಿರುವುದು. ನಾನು ಯಾವ ನುಡಿ ಹೇಳಿದೆ, ನಾಣ್ಣುಡಿಯೇ ನಾನು ಹೇಳಿದ್ದು.

ಅಧ್ಯಕ್ಷರು : ಆಯಿತು, ಮಾತನಾಡಿ. ಪರಸ್ಪರ ವಾದ ಏಕೆ?

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ಕೇಳಿ ಸ್ವಾಮಿ. ಇದು ಏನು ಇದು ಸುಮ್ಮನೆ, ನಾನು ಮಾನ್ಯ ಬಿ.ಎಸ್. ಯಡಿಯೂರಪ್ಪನವರನ್ನು ಪ್ರಶಂಸೆ ಮಾಡುತ್ತಿದ್ದೇನೆ. ಮಾನ್ಯ ಜಯಕುಮಾರ್‌ರವರೆ, ಮಾನ್ಯ ಯಡಿಯೂರಪ್ಪನವರನ್ನು ನಾನು ಪ್ರಶಂಸೆ ಮಾಡುತ್ತಿದ್ದೇನೆ. ಸರಿನಾ? ಸಂತೋಷನಾ? ಮರಣಾನಂದ ಖುಷಿನೋ ಖುಷಿ.

ಶ್ರೀ ಡಿ.ಟಿ. ಜಯಕುಮಾರ್ : ನಾವು ಮಾಡಿದ್ದೇವೆ. ಕೆಲಸ......

ಶ್ರೀ ವಾಟಾಳ್ ನಾಗರಾಜ್ : ನೀವು ಏನು ಒಂದೂವರೆ ತಿಂಗಳಲ್ಲಿ ಮಾಡಿದ್ದೀರಿ. ಕೆಲಸ? ನೀವು ಸುಮ್ಮನೆ ಕುಳಿತುಕೊಳ್ಳಿ. ಅಧಿಕಾರಕ್ಕೆ ಬಂದು ಒಂದೂವರೆ ತಿಂಗಳು ಆಗಿದೆ. ಮಾಡಿರುವ ಕೆಲಸ ಎಂದು ಹೇಳುತ್ತೀರಿ. ಮಾನ್ಯ ಯಡಿಯೂರಪ್ಪನವರು ಎಷ್ಟು ಬದಲಾವಣೆ ಯಾದರು? ಸಂತೋಷ, ನಾನು ಅನೇಕ ವಚನಗಳನ್ನು ತಂದಿದ್ದೇನೆ. ರಾಷ್ಟ್ರಕವಿ ಕುವೆಂಪುರವರು ಹೇಳಿರುವಂಥಾದ್ದನ್ನು ತಂದಿದ್ದೇನೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ಈ ಸದನದಲ್ಲಿ ಹೇಳಿರುವಂಥ ವಿಚಾರವನ್ನು ತಂದಿದ್ದೇನೆ. ಇಲ್ಲಿ ಬಜೆಟ್ ಪುಸ್ತಕದ ಆರಂಭದಲ್ಲಿ ವಿತ್ತೀಯ ಸುಧಾರಣೆಯ ಹಾದಿಯಲ್ಲಿ ರಾಜ್ಯವು ಕಳೆದ ಐದು ವರ್ಷಗಳಲ್ಲಿ ಹಲವಾರು ತೆರಿಗೆ ಮತ್ತು ವೆಚ್ಚಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದಿದೆ ಎಂದು ಇದೆ. ಇದನ್ನು ಮಾನ್ಯ ಯಡಿಯೂರಪ್ಪನವರು ಹೇಳಿರುವಂಥಾದ್ದು. ಇಲ್ಲಿ ಮಾನ್ಯ ಯಡಿಯೂರಪ್ಪನವರು ನಾಲ್ಕು ವರ್ಷಗಳು ಇರಲಿಲ್ಲ. ಹಿಂದಿನ ಆಯವ್ಯಯವನ್ನು ಮಂಡಿಸಿದಂತಹ ಆರ್ಥಿಕ ಮಂತ್ರಿಗಳು ಇಲ್ಲೇ ಇದ್ದಾರೆ. ಇದರಲ್ಲಿ ನಾವು ವಿಶಾಲವಾದಂತಹ ಮನೋಭಾವನೆಯಿಂದ ನೋಡಿದಾಗ ಹಿಂದೆ ಆಯವ್ಯಯವನ್ನು ಮಂಡಿಸಿದಂತಹ ಮಾನ್ಯ ಸಿದ್ದರಾಮಯ್ಯನವರು ಆಯವ್ಯಯಕ್ಕೆ ಒಂದು ಶಕ್ತಿಯನ್ನು ಕೊಟ್ಟಿದ್ದಾರೆ. ಒಂದು ಆಯವ್ಯಯ ಆರ್ಥಿಕ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಸುಧಾರಣೆಯಾಗಿದೆಯೆಂಬ ಒಂದು ಲೈನ್ ಅನ್ನು ಒಂದು ಪದವನ್ನು, ಈ ನಾಲ್ಕು ವರ್ಷಗಳು ಇದ್ದಂಥವರು ಯಾರು? ಇಲ್ಲಿ ನಾಲ್ಕು ವರ್ಷಗಳು ಎಂದು ಹೇಳಿದ ಮೇಲೆ, ಹಿಂದಿನ ಎರಡು ವರ್ಷಗಳು ಸೇರಿ ಒಟ್ಟು ನಾಲ್ಕು ವರ್ಷಗಳು ಆಗುತ್ತದೆ. ಕನಿಷ್ಠ ಸೌಜನ್ಯಕ್ಕಾದರೂ ಹೇಳಬಹುದಾಗಿತ್ತು. ತಪ್ಪು ಏನೂ ಇಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಬದಲಾವಣೆಯಾಗುವಂಥಾದ್ದು, ಆ ವಿಚಾರ ಬೇರೆ. ಆದರೆ ವಿಚಾರವನ್ನು ಹೇಳಬೇಕಾದಂಥಾದ್ದು ಕರ್ತವ್ಯ, ಅದನ್ನು ಸ್ಪಷ್ಟವಾಗಿ ಅವರು ಹೇಳದೇ ಇರುವಂಥಾದ್ದು ಎಲ್ಲೋ ಒಂದು ಕಡೆ, ಇದು ಹೇಳಿದರೆ ಏನು ಆಗಬಹುದು, ಹೇಳದೆ ಇದ್ದರೆ ಏನು ಆಗಬಹುದು. ಇಲ್ಲಿ ಅವರು ಒಂದು ಮಾತನ್ನು ಒಪ್ಪಿಕೊಳ್ಳುತ್ತಾರೆ. ನಾಲ್ಕು ವರ್ಷಗಳ ಹಿಂದೆ ಹಲವಾರು ತೆರಿಗೆ ಮತ್ತು ವೆಚ್ಚಗಳ ಸುಧಾರಣೆಯನ್ನು ಜಾರಿಗೆ ತರಲಾಗಿದೆ. ಆದ್ದರಿಂದ ನಾನು ವಿತ್ತೀಯ ಸುಧಾರಣೆಯ ಹಾದಿಯಲ್ಲಿ ಮುನ್ನಡೆಯುವುದನ್ನು ಪ್ರಸ್ತಾಪಿಸಿದ್ದೇನೆ ಎಂದು ಹೇಳಿದ್ದಾರೆ. ಇದು ಸಂತೋಷ ಪಡುವಂಥಾದ್ದೇ. ಇದರಲ್ಲಿ ಹೆಸರನ್ನು ಹೇಳದೆ ಇರಬಹುದು, ನಾಲ್ಕು ವರ್ಷಗಳು ಯಾರು ಇದ್ದರು

ಎಂದರೆ ಇಲ್ಲಿ ಮಾನ್ಯ ಯಡಿಯೂರಪ್ಪನವರು ಇರಲಿಲ್ಲ. ಮಾನ್ಯ ಎಸ್.ಎಂ. ಕೃಷ್ಣರವರು ಹಿಂದೆ ಇದ್ದರು. ಈಗ ಒಂದೂವರೆ ವರ್ಷಗಳ ಹಿಂದೆ ಮಾನ್ಯ ಸಿದ್ದರಾಮಯ್ಯನವರು ಇದ್ದರು. ನಾವು ಪ್ರಾಮಾಣಿಕತೆಯನ್ನು ಎಲ್ಲೋ ಒಂದು ಕಡೆ, ಅದನ್ನು ಹೊರಗೆ ಹಾಕುವಂಥಾದ್ದು ಅಲ್ಲ. ಈ ಪ್ರಶ್ನೆ ಬಂದಾಗ ಅನೇಕ ವಿಚಾರಗಳನ್ನು ಅತ್ಯಂತ ಗಂಭೀರವಾಗಿ ಚೆನ್ನಾಗಿ ಮಾತನಾಡಿದ್ದಾರೆ. ಶಾಸಕರ ಕ್ಷೇತ್ರ ನಿಧಿ ಮುಂದುವರಿಕೆ ಎಂದು ಹೇಳಿದ್ದಾರೆ. ಇದು ಹಿಂದೆಯೂ ಇತ್ತು. ಇದು ಹೊಸದಾಗಿ ಮುಂದುವರಿಕೆಯಾಗಿಲ್ಲ. ನಾವು ಇಲ್ಲಿ ಮಾನ್ಯ ಸಿದ್ದರಾಮಯ್ಯನವರು ಇದ್ದಾಗ, ಇಲ್ಲಿ ಸತ್ಯಾಗ್ರಹವನ್ನು ಮಾಡಿದ್ದೇವೆ. ಇದು ಇಡೀ ಸದನದ ಶಾಸಕರಿಗೂ ಗೊತ್ತು. ನಾವು ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದೆವು. ಅವರು 50 ಲಕ್ಷ ರೂಪಾಯಿಗಳನ್ನು ಕೊಟ್ಟರು. ನಾನು ಹೇಳುವುದೇನೆಂದರೆ ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತು ಒಂದು ಕೋಟಿ ರೂಪಾಯಿಗಳ ಬಗ್ಗೆ ಹೇಳಿದ್ದರು. ಲೋಕಸಭೆಯ ಸದಸ್ಯರಿಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇಲ್ಲಿ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಮಾನ್ಯ ಯಡಿಯೂರಪ್ಪನವರು ಕೇಳಿದರು. ತಮಗೆ ಗೊತ್ತಿದೆ, ನಾನು ಈ ಸದನದಲ್ಲಿ ಧರಣಾವನ್ನು ಮಾಡಿದೆ, ನಾನು ಏನು ಹೇಳುತ್ತಿದ್ದೆನೆಂದರೆ ಈಗಲೂ ತಾವು ಇದರ ಶಹಭಾಸ್‌ಗಿರಿ ತಮಗೆ ಬರಬೇಕೆಂದರೆ, ದಯಮಾಡಿ ತಾವು ಒಂದು ಕೋಟಿ ರೂಪಾಯಿಗಳಿಗೆ ಶಾಸಕರ ನಿಧಿಯನ್ನು ಹೆಚ್ಚಿಸಬೇಕು. ಶಾಸಕರ ನಿಧಿಯನ್ನು ಒಂದು ಕೋಟಿ ರೂಪಾಯಿ ಮಾಡಿದರೆ ಅದು ನ್ಯಾಯ, ಅದಕ್ಕೆ ಧರ್ಮ, ಲೋಕಸಭೆಯ ಸದಸ್ಯರಿಗೆ 2 ಕೋಟಿ ರೂಪಾಯಿಗಳು ಇವೆ. ನಮಗೆ ಇವತ್ತಿನ ಪರಿಸ್ಥಿತಿಯಲ್ಲಿ ಒಂದು ಸಣ್ಣ ಕೊಳವೆ ಬಾವಿಯನ್ನು ಹಾಕಿಸಲು ಸಹಾಯ ಆಗುತ್ತದೆ. ಈ ಬಗ್ಗೆ ನಾವು ಮಾನ್ಯ ಸತ್ಯನಾರಾಯಣರವರನ್ನು ನೆನಪು ಮಾಡಿಕೊಳ್ಳಬೇಕು. ನಾನು ಅವರನ್ನು ಅಭಿನಂದಿಸುತ್ತೇನೆ. ಒಂದು ಹಂತದಲ್ಲಿ ಅವರು ತೆಗೆದುಕೊಂಡಂತಹ ನಿರ್ಧಾರ ನಮ್ಮ ಇಡೀ ಶಾಸಕರಿಗೆ, ಎಲ್ಲಾ ಕ್ಷೇತ್ರಗಳಿಗೂ ಕಿಂಚಿತ್ತು ಮರ್ಯಾದೆ ಬಂತು. ನಾನು ತಮಗೆ ಹೇಳುತ್ತೇನೆ. ಅದು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗೂ ಮುಂಚೆ ಮಾಡಿದಂತಹ ವಿಚಾರದಲ್ಲಿ ಸಂತೋಷ, ಅವರೇ ಬಂದು ನಮಗೆಲ್ಲಾ ಹೇಳಿಕೊಟ್ಟರು. ನೀವು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದರು. ಇರಲಿ ಅದು ಸಂತೋಷ. ಶಾಸಕರ ನಿಧಿಯನ್ನು ಒಂದು ಕೋಟಿ ರೂಪಾಯಿ ಮಾಡಬೇಕು. ಇನ್ನು ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಇದಕ್ಕೆ 82 ಕೋಟಿ ರೂಪಾಯಿಗಳು ಎಂದು ಮಾಡಿದ್ದೀರಿ, ಸಂತೋಷ. ಅದಕ್ಕೆ ಮತ್ತೆ ಮೀಟರ್ ಅನ್ನು ಹಾಕಬೇಕೆಂದು ಹೊರಟಿದ್ದೀರಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು 15 ನಿಮಿಷಗಳ ಕಾಲ ಮಾತನಾಡಿದ್ದೀರಿ, ಈಗ ಎರಡು ಗಂಟೆಯಾಗಿದೆ. ತಾವು ಮತ್ತೆ 3 ಗಂಟೆಯಾದ ಮೇಲೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಆಗಬಹುದು.

ಅಧ್ಯಕ್ಷರು : ಈಗ ಸದನವನ್ನು ಮತ್ತೆ 3 ಗಂಟೆಗೆ ಸೇರುವಂತೆ ಭೋಜನ ವಿರಾಮಕ್ಕೆ ಮುಂದೂಡುತ್ತಿದ್ದೇನೆ.

(ಸದನವನ್ನು ಭೋಜನ ವಿರಾಮಕ್ಕೆಂದು ಮಧ್ಯಾಹ್ನ 2.00 ಗಂಟೆಗೆ ಮುಂದೂಡಲ್ಪಟ್ಟು ಪುನಃ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

8. ವಿತ್ತೀಯ ಕಾರ್ಯಕಲಾಪಗಳು.

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರಿದ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಆಯವ್ಯಯವನ್ನು ಒಂದು ರೀತಿ ದೊಡ್ಡ ಭೂತವಾಗಿ ಸೃಷ್ಟಿ ಮಾಡಿ ಎಲ್ಲಾ ಕಡೆ ಕೈಯಾಡಿಸಿದ್ದಾರೆ. ಎಲ್ಲರ ಪ್ರೀತಿಗಳಿಸಬೇಕು. ಎಲ್ಲಾ ಜನಾಂಗದ ಪ್ರೀತಿಯನ್ನು ಗಳಿಸಬೇಕೆಂದು ಹೇಳಿ ಸರ್ವ ಪ್ರಯತ್ನ ಮಾಡಿದ್ದಾರೆ. ಕೇವಲ ಅವರೊಬ್ಬರೇ ತೀರ್ಮಾನ ತೆಗೆದುಕೊಂಡಿಲ್ಲ. ಎಲ್ಲಾ ಸ್ನೇಹಿತರನ್ನೂ ಏನು ಮಾಡಬೇಕು. ಇದರಲ್ಲೇನು ಮಾಡಬೇಕು. ಎಲ್ಲವನ್ನೂ ಕೇಳಿ ಮಾಡಿದ್ದಾರೆ. ನನಗೆ ಅವರನ್ನು ತೀರಾ ಸರಿಯಿಲ್ಲವೆಂದು ಹೇಳಿ ಈ ತಕ್ಷಣ ನಾನು ಅವರನ್ನು ಹೇಳುವುದಕ್ಕೆ ತಯಾರಾಗಿಲ್ಲ. ಈಗ ತಾನೇ ಅವರು ಮತ್ತು ಅವರ ಗುಂಪು ಅಧಿಕಾರಕ್ಕೆ ಬಂದಿದ್ದಾರೆ. ಕನಿಷ್ಠ ಈ ಸರ್ಕಾರವನ್ನು ನಾವು ಟೀಕೆ ಮಾಡಬೇಕಾದರೂ ಒಂದು ಆರು ತಿಂಗಳಾದರೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶ ಕೊಡಬೇಕಾಗುತ್ತದೆ. ಆದರೂ, ಯಡಿಯೂರಪ್ಪನವರು ಈ ಕಡೆ ಕುಳಿತಿದ್ದು ಅದೊಂದು ವಿಶೇಷವಾದುದು. 10 ವರ್ಷ, 15 ವರ್ಷ ನಮ್ಮ ಜೊತೆಯಲ್ಲೇ ಇದ್ದವರು. ಅವರು ಉಪ ಮುಖ್ಯಮಂತ್ರಿಗಳಾಗುವಾಗ ಒಂದು ದೂರವಾಣಿ ಮೂಲಕ ನಮಗೆ ಹೇಳಲಿಲ್ಲ. ನಿಜವಾಗಲೂ ಅವರಾಗುತ್ತಾರೆ. ಬಿಡುತ್ತಾರೆ. ಸಂಜೇ ನಮಗೆ ಗೊತ್ತಾಗಲಿಲ್ಲ. ಯಾವ ರೀತಿ ಸಂಚು ನಡೆಯಿತು? ಹೇಗಾಯಿತು ಎಂದು ನಮಗೆ ಗೊತ್ತೇ ಆಗಲಿಲ್ಲ. ಆದರೂ ಚಿಂತೆ ಇಲ್ಲ ಬಹಳ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು) : ಆತ್ಮೀಯರು ಎಂದು ಹೇಳಿದ್ದರೆ, ಅದರ ಪರಿಣಾಮ ನಾವಿಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಾಟಾಳ್‌ರವರೆ, ಅಂದರೆ ಅವರು ಹೇಳಿದ್ದರೆ ನೀವೂ ಅಲ್ಲಿಗೆ ಹೋಗುವವರಿದ್ದಿರೇನು?

ಶ್ರೀ ವಾಟಾಳ್ ನಾಗರಾಜ್ : ನೋಡೋಣ, ನನ್ನ ಬಗ್ಗೆ ಅವರಿನ್ನೂ ಚಿಂತನೆ ಮಾಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) : ಒಳ್ಳೆಯ ಪ್ರಶ್ನೆ ಕೇಳಿದಿರಿ. ಈಗ ಬಹಳ ವರ್ಷಗಳಿಂದ ವಿರೋಧ ಪಕ್ಷದಲ್ಲಿ ಯಡಿಯೂರಪ್ಪನವರು, ಅವರು ಕರ್ನಾಟಕ ರಾಜ್ಯದಲ್ಲಿ ಹಿಂದಿನ ಸರ್ಕಾರಗಳು ಮಾಡಿದಂಥದ್ದಕ್ಕೆ ಟೀಕೆ ಮಾಡಿಕೊಂಡು ಜನರ ಕಾರ್ಯಗಳನ್ನು, ರೈತರ ಕಾರ್ಯಗಳನ್ನು, ಕನ್ನಡದ ಕಾರ್ಯಗಳನ್ನು ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಿಕೊಂಡು ಬಂದಿದ್ದಾರೆ. ನಿಮಗೂ ಗೊತ್ತಿದೆ. ಮೊದಲನೇ ಯಶಸ್ಸು ಈಗ ರೈತರ ಪರವಾಗಿ ಮಾನ್ಯ ಯಡಿಯೂರಪ್ಪನವರಾಗಿದ್ದಾರೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರೇನು ಹೇಳಿದ್ದು, ಉಳಿದಿದ್ದ ಎಲ್ಲಾ ವಿಚಾರಗಳೂ ಕೂಡ ತುಂಬಾ ಸ್ಪಷ್ಟವಾಗಿ ನಾನು ಇಲ್ಲ. ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದರು. ಈಗ ಅವರೊಂದು ಮಾತು ಹೇಳಿದ್ದಾರೆ. ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಅವರಷ್ಟೇ ಅಲ್ಲ. ನಾನು ಉಪ ಮುಖ್ಯಮಂತ್ರಿಗಳಿಗೂ ಹೇಳುತ್ತೇನೆ, ದಯವಿಟ್ಟು ಪರಿಶೀಲನೆ ಮಾಡಬೇಕು ಅಂತ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಅವರನ್ನು ಅಲ್ಲಿಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ತೀರ್ಮಾನ ಅಂದರೆ ಆ ಪ್ರಮೋಸಲ್ ಇಡುತ್ತಲೇ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇನ್ನೂ ಅವರು ನನ್ನನ್ನು ಮಂತ್ರಿಯಾಗೆಂದು ಕರೆದೇ ಇಲ್ಲ. ಸುಮ್ಮನೆ ನೀವು ಬೇರೆ. ನನಗೆ ಅವರಿಂದ ಸುದ್ದಿಯೇ ಬಂದಿಲ್ಲ. ನನಗೆ ಯಾವ ವಿಚಾರವೂ ಬಂದಿಲ್ಲ. ಎಷ್ಟು ಜನ ಅಲ್ಲೇ ಕಾಯ್ದುಕೊಂಡು ಕುಳಿತಿದ್ದಾರೆ. ನನ್ನನ್ನು ಎಲ್ಲಿ ಕರೆಯುತ್ತಾರೆ? ಸಾಧ್ಯವಿಲ್ಲ ಅದು. ಅವರಿಗೇ ಕಷ್ಟವಾಗಿದೆ. ಯಡಿಯೂರಪ್ಪನವರಿಗೇ ಬಹುಶಃ ಕಷ್ಟವಾಗಿರಬಹುದು. ಯಡಿಯೂರಪ್ಪನವರು ನನ್ನ ಒಳ್ಳೆಯ ಸ್ನೇಹಿತರಲ್ಲಿ ಒಬ್ಬರು. ಆ ವಿಚಾರ ಬೇರೆ. ಬಹುಶಃ ಅವರು ಕರೆಯಬೇಕೆಂಬ ಮನಸ್ಸಿತ್ತೋ, ಬಿಡ್ತೋ ಅಂತೂ ಕರೆದರೆ ಬಂದುಗಿಂದು ಬಿಡುತ್ತಾರಲ್ಲಾ ಎಂದು ಭಯದಿಂದ ಅವರು ಕರೆದೂ ಇಲ್ಲ. ಅದನ್ನು ನಾನು ಒಪ್ಪುತ್ತೇನೆ. ಆದರೆ, ಅನೇಕ ವಿಚಾರಗಳನ್ನು ಅವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಬಹಳ ಬೇಗನೆ ಹೋಗುತ್ತೇನೆ. ಬಸವ ಪುರಸ್ಕಾರ ಪ್ರಶಸ್ತಿಗೆಂದು 10 ಲಕ್ಷ ರೂಪಾಯಿ ಇಟ್ಟಿದ್ದಾರೆ. ಸಂತೋಷ. ಆದರೆ, ಇಲ್ಲಿ ಬಸವ ಪುರಸ್ಕಾರ, ಕಿತ್ತೂರು ರಾಣಿ ಚೆನ್ನಮ್ಮ, ಹೊಯ್ಸಳ ಇವೆಲ್ಲವನ್ನೂ ಇಡಬೇಕಾದದ್ದೇ. ಇದರ ಜೊತೆಗೆ, ಟಿಪ್ಪು ಸುಲ್ತಾನ್ ಇತಿಹಾಸಕ್ಕೆ ಬರತಕ್ಕಂಥ ವ್ಯಕ್ತಿ. ಅವರ ಬಗ್ಗೆ ಹೇಳಿದ್ದರೆ, ಏನಾಗುತ್ತಿತ್ತೆಂದರೆ, ಯಡಿಯೂರಪ್ಪನವರ ಆಯವ್ಯಯಕ್ಕೆ ಒಳ್ಳೆಯ ಭೂಷಣ ಬರುತ್ತಿತ್ತು. ಏನು ಯಡಿಯೂರಪ್ಪನವರು ಸಿದ್ಧಾಂತಗಳೇನು? ತತ್ವಗಳೇನು? ಈ ಕಡೆ ವಿರೋಧ ಪಕ್ಷದ ನಾಯಕರಾಗಿದ್ದರು. ಆ ಕಡೆ ಹೋಗಿ ಬರೇ ಬಸವ ....

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ರೇಷ್ಮೆ ಮತ್ತು ಸಣ್ಣ ಕೈಗಾರಿಕೆ ಸಚಿವರು) : ಕಳೆದ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಎಷ್ಟು ಹಣವನ್ನು ಮೀಸಲಾಗಿಟ್ಟಿತ್ತೆಂದು ತಾವು ಓದಿದ್ದೀರಿ. ಟಿಪ್ಪು ಸುಲ್ತಾನ್ ಬಗ್ಗೆ ಹೇಳಿದಾಗ ನಾನೂ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಳೆದ ವರ್ಷ 60 ಕೋಟಿ ರೂಪಾಯಿ ಇದ್ದುದ್ದನ್ನು ಈ ವರ್ಷ 115 ಕೋಟಿ ರೂಪಾಯಿಗಳಿಗೆ ಹೆಚ್ಚಳ ಮಾಡಿರುವುದನ್ನು ತಮ್ಮ ಗಮನಕ್ಕೆ ತರಬೇಕೆಂದು ನಾನು ಬಯಸುತ್ತೇನೆ. ಟಿಪ್ಪು ಸುಲ್ತಾನ್ ಬಗ್ಗೆ ಹೇಳಿದಿರಲ್ಲಾ, ಅಲ್ಪ ಸಂಖ್ಯಾತರ ಬಗ್ಗೆ ನೀವು ಹೇಳಿದಿರಲ್ಲಾ, ಅದರ ಬಗ್ಗೆ ನಾನು ಹೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಈಗಲೂ ಮಾನ್ಯ ಯಡಿಯೂರಪ್ಪನವರು ಮನಸ್ಸು ಮಾಡಬೇಕು. ಬಹಳ ದೊಡ್ಡಸ್ತಿಕೆ. ಏಕೆಂದರೆ, ಇತಿಹಾಸದಲ್ಲಿ ಬರತಕ್ಕಂಥವರು ಟಿಪ್ಪು ಸುಲ್ತಾನ್. ಈ ದೇಶದ ಸ್ವಾತಂತ್ರ್ಯಕ್ಕೆ ಹೋಗಿ ಹೋರಾಟ ಮಾಡಿದಂಥ, ತನ್ನ ಮಕ್ಕಳನ್ನೇ ಒತ್ತೆ ಇಟ್ಟಂಥ ವ್ಯಕ್ತಿತ್ವ. ಟಿಪ್ಪು ಪ್ರಶಸ್ತಿ ಎಂದು ಹೇಳಿದರೆ, ಅದಕ್ಕೇನು ಹೊಸ ಸಂದೇಶ ಇಡೀ ರಾಜ್ಯಕ್ಕೆ ಹೋಗುತ್ತದೆಂಬುವ ಮಾತನ್ನು ನಾನು ಹೇಳುತ್ತೇನೆ. ಇದಾದನಂತರ.....

ಅಧ್ಯಕ್ಷರು : ಮಾನ್ಯ ವಾಟಾಳ್‌ರವರೆ, ನಿಮ್ಮ ಮಾತನ್ನು ನಾನೂ ಎಂಡಾರ್ಸ್ ಮಾಡುತ್ತೇನೆ. ನೀವೇನು ಸಲಹೆ ಹೇಳಿದಿರಲ್ಲಾ, ಅದನ್ನು ನಾನೂ ಎಂಡಾರ್ಸ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಖಂಡಿತ. ಸರಿ ಆ ಕೆಲಸ ಮಾಡಿ. ನಿಮಗೆ ಒಂದು ಸಾವಿರ ವಂದನೆಗಳು. ನನಗೆ ಬೆಂಬಲವನ್ನು ಕೊಟ್ಟರು. ಅವರೂ ಹೇಳುತ್ತೇನೆಂದರು. ತಾವು ಉತ್ತರ ಕೊಡುವಾಗ ನೀವು ಹೇಳಿ.

ಶ್ರೀ ಎಸ್. ರಾಜೇಂದ್ರನ್ : ಫಸ್ಟ್ ಟೈಂ ಬೆಂಬಲ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ. ಅವರು ಯಾವಾಗಲೂ ಕೊಡುತ್ತಾರೆ. ನಾನೇಕೆ ನಿಮಗೆ ಹೇಳುತ್ತೇನೆಂದರೆ, ಇವತ್ತು ಹೊಸ ಯಡಿಯೂರಪ್ಪ ಎಂದು ತೀರ್ಮಾನ ಆಗಿ ಹೋಗುತ್ತೀರಿ. ಒಂದು ಇತಿಹಾಸದಲ್ಲಿ, ಏನಪ್ಪ, ವಿರೋಧ ಪಕ್ಷದಲ್ಲಿದ್ದಂಥ ಯಡಿಯೂರಪ್ಪನವರು, ಅವರ ತತ್ವ, ಸಿದ್ಧಾಂತಗಳು, ಇಲ್ಲಿ ಹೋದ ತಕ್ಷಣ ಅವೆಲ್ಲಾ ಏನಾಯಿತು? ಅಲ್ಲಿ ದೇವರಾಜ ಅರಸುರವರು ಏನು ಹೇಳುತ್ತಿದ್ದರೆಂಬುದನ್ನು ತಮಗೆ ಹೇಳುತ್ತೇನೆ. ಕರ್ನಾಟಕವನ್ನು ನನ್ನ ಹೆಣದ ಮೇಲೆ, ಸಮಾಧಿ ಮೇಲೆ ಕಟ್ಟಿ ಎಂದು ಕರ್ನಾಟಕ ನಾಮಕರಣದ ಬಗ್ಗೆ ಹೇಳುತ್ತಿದ್ದರು. ಅಧಿಕಾರಕ್ಕೆ ಬಂದ ತಕ್ಷಣ ಇದು ಜನರ ಬೇಡಿಕೆಯಾದ್ದರಿಂದ ಕರ್ನಾಟಕ ನಾಮಕರಣಕ್ಕೆ ನಾನೇ ಮೊದಲಾಗುತ್ತೇನೆಂದು ಹೇಳಿದರು. ಅವರೆಲ್ಲಾ ಹಳೆಯ ಸಿದ್ಧಾಂತ ಬಿಟ್ಟು ರಾಜ್ಯದ ಜನತೆಗೆ ಸ್ಪಂದಿಸಿದರು. ನಾನು ಇವತ್ತು ಏನು ಹೇಳುತ್ತೇನೆ ಅಂದರೆ ಈ ಮಾತನ್ನು ತಾವು ಗಂಭೀರವಾಗಿ ಬರೆದುಕೊಂಡು 10 ಲಕ್ಷ ರೂಪಾಯಿಗಳನ್ನು ಟಿಪ್ಪು ಪ್ರಶಸ್ತಿಗೆ ನಾವು ಇಟ್ಟಿದ್ದೇವೆ ಎಂದು ಹೇಳಿ. ಅದಕ್ಕೇನಾಗುತ್ತದೆಂದರೆ, ಒಂದು ಸ್ವಾತಂತ್ರ್ಯ ಹೋರಾಟ, ಮತ್ತೊಂದು ಅಧಿಕಾರಕ್ಕೆ ಬಂದ ಮೇಲೆ ತತ್ವ, ಸಿದ್ಧಾಂತಕ್ಕಿಂತ ಜನರ ಬೇಡಿಕೆ ಮುಖ್ಯ ಎನ್ನುವುದು ಬರುತ್ತದೆ. ಅದನ್ನು ತಾವು ಮಾಡಬೇಕಾದ್ದು ಇದೆ. ಆಮೇಲೆ, ಪ್ರತಿ ಕ್ಷೇತ್ರಕ್ಕೆ ಸುವರ್ಣ ಕರ್ನಾಟಕದ ಅಂಗವಾಗಿ ....

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಯಡಿಯೂರಪ್ಪನವರ ತತ್ವ, ಸಿದ್ಧಾಂತಗಳನ್ನು ಹೇಳಿ ನೀವು ಈ ತರಹ ತಿರುಗಿಸಿದರೆ, ನಾಳೆ ಅಡ್ವಾಣಿಯವರು ಅವರನ್ನೇನಾದರೂ ಪಕ್ಷದಿಂದ ಉಚ್ಛಾಟನೆ ಮಾಡಲಿ ಎಂಬುದು ನಿಮ್ಮ ಏನಾದರೂ ಉದ್ದೇಶವೇ?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಅಲ್ಪಸಂಖ್ಯಾತರಿಗೆ ಇವರೇನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಇಲ್ಲಿ ಯಡಿಯೂರಪ್ಪನವರ ಗುಣ ನೋಡಿರುವುದೇನೆಂದರೆ, ಅವರಿಗೆ ಜನರಿಂದ ಪ್ರಶಂಸೆ ಪಡೆಯಬೇಕೆಂಬ ಭಾವನೆ ಇದೆ. ಇಲ್ಲಿದ್ದಾಗಲೂ ಅಷ್ಟೆ. ಅಲ್ಲಿದ್ದಾಗಲೂ ಅಷ್ಟೆ. ಆ ಸಂದರ್ಭ ಬಂದಾಗ ಯಾವುದನ್ನೂ ಲೆಕ್ಕಿಸದೇ ಮಾಡತಕ್ಕಂಥ ದಿಟ್ಟತನ ಇದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ಪ್ರಾಮಾಣಿಕವಾಗಿ ಹೇಳುತ್ತೇನೆ. ಸುವರ್ಣ ಕರ್ನಾಟಕ ಎಂದರೇನೆಂದರೆ, ಸುಮ್ಮನೆ ಕೇವಲ ಎಲ್ಲೋ ಒಂದು ಸಮಾರಂಭ, ಸಭೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಸುವರ್ಣ ಕರ್ನಾಟಕ ಎಂದರೆ, ಅದಕ್ಕೊಂದು ಶಕ್ತಿ, ಒಂದು ಇತಿಹಾಸ ಇದೆ. 1956ರಲ್ಲಿ ಏಕೀಕರಣ ಆಗಿ 50 ವರ್ಷ. ಈ 50ನೇ ವರ್ಷದ ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ಅಧಿಕಾರ ಸಿಕ್ಕಿರತಕ್ಕಂಥದ್ದು ನಿಮ್ಮ ಪೂರ್ವ ಜನ್ಮದ ಪುಣ್ಯ. ನಾವು ಶಾಸಕರಾಗಿ ಇರತಕ್ಕಂಥದ್ದು ನಮ್ಮ ಜನ್ಮದ ಪುಣ್ಯ. ಸಂತೋಷ. ಇದು ಬರುವುದು ಬಹಳ ಸುಲಭವಲ್ಲ. ತಾವು ಇತಿಹಾಸದಲ್ಲಿ ಹೋಗುತ್ತೀರಿ. ಅದಕ್ಕೆ ನಾನೇನು ಹೇಳುತ್ತೇನೆಂದರೆ.....

ಶ್ರೀ ಮಹದೇವ (ಕೆ.ಆರ್. ನಗರ) : ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಸುವರ್ಣ ಕರ್ನಾಟಕ ಎಂದು ಬಂದಾಗ, ಮಾನ್ಯ ಸಭಾಧ್ಯಕ್ಷರು ಈ ಸುವರ್ಣ ಕರ್ನಾಟಕ ಕಾರ್ಯಕ್ರಮದ ವಿಚಾರದಲ್ಲಿ ಶಾಸಕರುಗಳಿಗೆಲ್ಲಾ ಲ್ಯಾಪ್‌ಟಾಪ್ ಕೊಡಬೇಕೆಂದು ಹೇಳಿ ಕೆಲವು ಪತ್ರಿಕೆಗಳಲ್ಲಿ ನಾವು ಓದಿದ್ದೆವು. ಹಾಗಾಗಿ, ನಮ್ಮ ಮನೆ ಮಕ್ಕಳೆಲ್ಲಾ ಹೌದಪ್ಪ ನಿಮ್ಮಪ್ಪಂದಿರಿಗೆಲ್ಲಾ

ಲ್ಯಾಪ್‌ಟಾಪ್ ಎಲ್ಲಾ ಕೊಡುತ್ತಾರೆಂದು ಕೊಂಡಿದ್ದರು. ಅದಾದಮೇಲೆ ಬೆಳ್ಳಿದೀಪ ಕೊಡುತ್ತಾರೆ. ಮಾಜಿ ಶಾಸಕರಿಗೆ ಎಂದು ಹೇಳಿದರು. ಅದಾದ ಮೇಲೆ ಸಭಾಧ್ಯಕ್ಷರಿಗೆ ಹೋಗಿ ಎಲ್ಲಿ ಸಾರ್ ಲ್ಯಾಪ್‌ಟಾಪ್ ನಮಗೆ ಬರಲಿಲ್ಲ ಎಂದು ಕೇಳಿದಾಗ, ಅವರು ನಮಗೆ ಹೇಳಿದರು. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಒಂದು ಮಾತು ಹೇಳಿದ್ದಾರೆ. It is going to be a burden on the State exchequer ಎಂದು. ಎಷ್ಟು ಸಾರ್ ಇದಕ್ಕೆ ಕಾಸ್ಟ್ ಆಗುವುದು ಲ್ಯಾಪ್‌ಟಾಪ್‌ಗೆ? ಎರಡೂಕಾಲು ಕೋಟಿಯಾಗುತ್ತದೆ. ಇದು ಬಾರಿ ದೊಡ್ಡ ಬರ್ಡನ್ ಆಗುತ್ತದೆ, government exchequerಗೆ ಎಂದು ಹೇಳಿದ್ದಾರೆ. ಆಮೇಲೆ, ಇನ್ನೊಂದು ಮಾತು ಹೇಳಿದ್ದಾರೆ, ನಾವೆಲ್ಲಾ ಕಂಪ್ಯೂಟರ್ ಪ್ರೊವೈಡ್ ಮಾಡಿದ್ದೇವೆ. ಶಾಸಕರಿಗೆ ಲ್ಯಾಪ್‌ಟಾಪ್ ಕೊಡುವ ಅಗತ್ಯ ಏನಿದೆ ಎಂದು ಹೇಳಿದ್ದಾರೆ. Computer stationery, laptap is an accessory .... ಅಷ್ಟಾನ್ನಾದರೂ ಅಧಿಕಾರಿಗಳು ತಿಳಿದುಕೊಳ್ಳಬೇಕು ಅಲ್ಲವೆ? ಹತ್ತು ಹತ್ತು ವರ್ಷ ಆ ಹೊರದೇಶಕ್ಕೆ ಹೋಗುತ್ತಾರೆ. ಪಾಂಡಿತ್ಯ ಮಾಡಿಕೊಂಡು ಬರುತ್ತಾರೆ. ಪತ್ರಿಕೆಯಲ್ಲಿ ಬಂದು ನಮಗೆಲ್ಲಾ ಅವಮಾನ ಮಾಡಿದ ಹಾಗೆ ಆಗಲಿಲ್ಲವೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಮಗೆ ಲ್ಯಾಪ್‌ಟಾಪ್ ಕೊಡದಿದ್ದರ ಬಗ್ಗೆ ಬೇಸರವಿಲ್ಲ. ಅದು ಪತ್ರಿಕೆಯಲ್ಲಿ ಬಂದು ಬೈಸಿಕೊಂಡಾಯಿತು. ಅದು ಕ್ಲಾರಿಫೈ ಆಗಬೇಕು. ಲ್ಯಾಪ್‌ಟಾಪ್ ಕೊಟ್ಟಿಲ್ಲ ಎನ್ನುವುದು ಜನಕ್ಕೆ ಗೊತ್ತಾಗಬೇಕಾಗುತ್ತದೆ. ಸುಮ್ಮನೆ ನಮಗೆ ಆಪಾದನೆ ಬೇಡ.

ಶ್ರೀ ಮಹದೇವ್ : ಮಾನ್ಯ ಸಭಾಧ್ಯಕ್ಷರೆ, ಈ ರೀತಿ ಪ್ರೆಸ್‌ನಲ್ಲಿ ಅನೌನ್ಸ್ ಮಾಡಿದ್ದು, ನಿಮಗೆಲ್ಲಾ ಲ್ಯಾಪ್‌ಟಾಪ್ ಕೊಡುತ್ತಿದ್ದೇವೆ ಎಂದು. ಮಾಜಿ ಶಾಸಕರುಗಳಿಗೆ ಬೆಳ್ಳಿದೀಪ ಕೊಡುತ್ತೇವೆ ಎಂದು.

ಅಧ್ಯಕ್ಷರು : ನಾವು ಹೇಳುವುದು ಏನೆಂದರೆ, ಪತ್ರಿಕೆಯಲ್ಲಿ ಬಂದಿತ್ತು. ಈಗ ಹೊಸದಾಗಿ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಗಳಾಗಿದ್ದಾರೆ, ಅವರು ಉದಾರವಾಗಿ ನಿಮ್ಮ ಮನವಿಯನ್ನು ಪುರಸ್ಕರಿಸಿ ಆದಷ್ಟು ಬೇಗ ಲ್ಯಾಪ್‌ಟ್ಯಾಪ್ ಕೊಡಿಸುತ್ತಾರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಮಹದೇವ್ : ತಮ್ಮ ಗಮನಕ್ಕೆ ತರುವುದೇನೆಂದರೆ, ಅತ್ತು ಕರೆದು ನಮಗೆ ಔತಣ ಬೇಡ ಸ್ವಾಮಿ? ....

ಶ್ರೀ ಆರಗ ಜ್ಞಾನೇಂದ್ರ : ಇದು ಮತ್ತೊಂದು ಸಲ ಪತ್ರಿಕೆಯಲ್ಲಿ ಹೋಗಿ ಎರಡನೇ ಸಲ ಲ್ಯಾಪ್‌ಟಾಪ್ ಕೊಡುತ್ತಾರೆಂದಾಗಬಾರದು ......

ಅಧ್ಯಕ್ಷರು : ಅಳುವುದು ಅಗತ್ಯವಿಲ್ಲ ಕೊಡುತ್ತಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಂರಕ್ಷಣಾ ಪ್ರಾಧಿಕಾರ ರಚನೆ, ಸಂತೋಷ ಇದನ್ನು ಮಾಡಬೇಕಾಗಿರುವುದು. ಕರ್ನಾಟಕ ಸಂಸ್ಕೃತಿಯ ಪ್ರಾಧಿಕಾರ ರಚನೆ, ಇದು ಯಾರದೋ ಒಂದು ಇಚ್ಛೆಗೆ ಮಾಡತಕ್ಕಂಥದ್ದಲ್ಲ. ಇದಕ್ಕೆ ಪ್ರಾಮಾಣಿಕವಾದ ಚಿಂತನೆಬೇಕು. ಕರ್ನಾಟಕ ಸಂರಕ್ಷಣೆಯ ಪ್ರಾಧಿಕಾರ ಅಂದರೆ ಅದಕ್ಕೆ ವಿಶೇಷವಾಗಿ ಆ ಸಂರಕ್ಷಣೆಯ ಹೊಣೆಯನ್ನು ಹೊರತಕ್ಕಂಥವರು, ಜವಾಬ್ದಾರಿ ಹೊರತಕ್ಕಂಥವರು, ಅವರಿಗೊಂದು ಇತಿಹಾಸ ಇರಬೇಕು. ಅದನ್ನು ತಾವು ಪ್ರಾಮಾಣಿಕವಾಗಿ ಮಾಡಬೇಕಾಗಿರುತ್ತದೆ. ಈ ಸುವರ್ಣ ಕರ್ನಾಟಕ ಅದ್ದೂರಿಯ ಸಿದ್ಧತೆ, 50 ವರ್ಷ ಇಡೀ ನಾಡಿನ ಐದು ಕೋಟಿ ಕನ್ನಡಿಗರು ಹರಿದು ಹಂಚಿ ಹೋಗಿದ್ದವರು ಅದು ಒಂದಾದಂಥ

ದಿನ. 50 ವರ್ಷಗಳವರೆಗೆ ನಾವು ಬಂದಿದ್ದೇವಲ್ಲಾ, ಈ 50 ವರ್ಷ ಬರತಕ್ಕಂಥದ್ದೇ ನಮ್ಮ ಜನ್ಮದ ಪುಣ್ಯ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ತಮಗೆ ಹೆಸರು ಬರುತ್ತದೆ. ಏನು ಸಿದ್ಧತೆ ಮಾಡಿದ್ದೀರಿ ಎಂದು ನಮಗೆ ಹೇಳಿಲ್ಲ. ನಾನು ನಿಮಗೊಂದು ಸಲಹೆ ಕೊಡುತ್ತೇನೆ. ಪ್ರತಿ ಕ್ಷೇತ್ರಕ್ಕೆ ಕನಿಷ್ಠ ಎರಡು ಕೋಟಿ ರೂಪಾಯಿ ಇಟ್ಟು ಒಂದೊಂದು ಕ್ಷೇತ್ರದಲ್ಲಿ ಕನಿಷ್ಠ 30 ರಿಂದ 35 "ಸುವರ್ಣ ಕರ್ನಾಟಕ ಭವನ" ಗಳನ್ನು ಹೋಬಳಿಯಲ್ಲಾದರೂ ಕಟ್ಟಿಸಲಿ, ತಾಲ್ಲೂಕುಗಳಲ್ಲಾದರೂ ಕಟ್ಟಿಸಲಿ, ಈ "ಸುವರ್ಣ ಕರ್ನಾಟಕ ಭವನ"ಕ್ಕೆ 50 ವರ್ಷ ಇತಿಹಾಸ ಇರತಕ್ಕಂಥ ಏಕೀಕರಣಕ್ಕೆ ದುಡಿದಂಥವರು, ಕನ್ನಡಕ್ಕೆ ಸೇವೆ ಮಾಡಿದಂಥವರು, ಎಲ್ಲಾ ವರ್ಗದವರು, ಬರಹಗಾರರು, ಪತ್ರಕರ್ತರು, ಸಾಹಿತಿಗಳು, ಕವಿಗಳು, ಎಲ್ಲರ ಹೆಸರನ್ನು ನೀವು ಇಡಬಹುದು. ಪ್ರತಿ ಕ್ಷೇತ್ರಕ್ಕೆ ಕನಿಷ್ಠ 30 ರಿಂದ 40 ಭವನಗಳು. ಒಂದು ಭವನಕ್ಕೆ ಇಂತಿಷ್ಟು ಎಂದು ತೀರ್ಮಾನ ಮಾಡಿ ನೀವು ಮಾಡತಕ್ಕಂಥದ್ದು. ಮತ್ತು ಗಡಿನಾಡಿನ ಅಭಿವೃದ್ಧಿ ಇದನ್ನೆಲ್ಲಾ ಮಾಡಬೇಕಾಗುತ್ತದೆ. ಯಡಿಯೂರಪ್ಪನವರೇ, ತಾವು ಎಷ್ಟು ವರ್ಷ ಬೇಕಾದರೂ ಇರಿ. ತಮಗೆ ಮೆಜಾರಿಟಿ ಇದೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಮುಂದೆ ಏನಾಗುತ್ತದೆ ಎನ್ನುವ ಪ್ರಶ್ನೆಗಿಂತ ಹೆಚ್ಚಾಗಿ, ಯಾರ ಕಾಲದಲ್ಲಿ ಆಯಿತು ಎನ್ನತಕ್ಕದ್ದು ಬರುತ್ತದೆ. ಗಡಿನಾಡು ಅಭಿವೃದ್ಧಿಗೆ ಕನಿಷ್ಠ ಪ್ರತಿ ವರ್ಷ 500 ಕೋಟಿ ರೂಪಾಯಿಗಳನ್ನು ತಾವು ಮುಡುಪಾಗಿಡಿ. ಇವತ್ತೇನಾಗಿದೆ ಬೆಳಗಾವಿಯಲ್ಲಿ, ಸುಮ್ಮನೆ ಬೆಳಗಾವಿ ನಮ್ಮದು ಎಂದು ಹೇಳುತ್ತೇವೆಯೇ ಹೊರತು, ಬೆಳಗಾವಿಯ ಸಮಗ್ರ ಅಭಿವೃದ್ಧಿಯ ಬಗ್ಗೆ ನಾವು ಕಾಳಜಿ ವಹಿಸಿಲ್ಲ. ಅದಕ್ಕೆ ವಿಶೇಷವಾದಂಥ ಗಮನವನ್ನು ತಾವು ಕೊಡಬೇಕು. ಆಮೇಲೆ ಹೊರನಾಡು ಕನ್ನಡಿಗರು, ತಾವು ಕರೆಸಿರಿ, ಒಂದು ಸಭೆ ಕರೆಸಿರಿ. ಹೊರನಾಡು ಕನ್ನಡಿಗರು, ಎಲ್ಲಾ ಕಡೆ, ಕಾಸರಗೋಡಿನಿಂದ, ಸೊಲ್ಲಾಪುರದಿಂದ, ಅಕ್ಕಲಕೋಟೆಯಿಂದ, ಹೊಸೂರಿನಿಂದ, ತಾಳವಾಡಿಯಿಂದ, ಮಡಕಶಿರಾದಿಂದ, ಎಲ್ಲಾ ಕಡೆಯಿಂದಲೂ ಹೋರಾಟ ಮಾಡಿದಂಥ ಜನರನ್ನು ಕರೆಸಿ ಒಂದು ಸಭೆ ನಡೆಸಿ ಅವರಿಗೆ ಏನು ಅನುಕೂಲಗಳು ಬೇಕು. ನಾವು ಯಾವ ರೀತಿ ಹೊರನಾಡು ಕನ್ನಡಿಗರಿಗೆ ಸಹಾಯ ಮಾಡಬಹುದು ಎನ್ನುವ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಿ. ಇದರ ಜೊತೆಗೆ ನೀವು ಇಲ್ಲಿ ಕುಳಿತು ಹೇಳುತ್ತಿದ್ದೀರಿ. ರೈತರ ಪಂಪುಸೆಟ್ಟುಗಳಿಗೆ, ಮೀಟರ್ ಹಾಕಬಾರದೆಂದು ಬಹಳ ಭದ್ರವಾಗಿ ಹೇಳುತ್ತಿದ್ದೀರಿ. ಈಗ ನೀವು ಮೀಟರ್ ಹಾಕುವ ಚಿಂತನೆಯನ್ನು ಮಾಡಿದ್ದೀರಿ. ಇಲ್ಲಿ ಯಡಿಯೂರಪ್ಪನವರು ಹೇಳಿದ ಮಾತನ್ನೇ ಅಲ್ಲಿ ಯಡಿಯೂರಪ್ಪನವರು ಉಳಿಸಿಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ಪ್ರಾಮಾಣಿಕವಾಗಿ ಹಣಕಾಸಿನ ಸಚಿವನಾದ ಮೇಲೆ, ಈ ಪವರ್ ಸೆಕ್ಟಾರ್‌ನಲ್ಲಿ ಏನಾಗುತ್ತದೆಂದು ನಾನು ಬಹಳ ಗಂಭೀರವಾಗಿ ಗಮನಿಸಿದ್ದೇನೆ. ನಮ್ಮ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ, ಸಂಪರ್ಕಗಳಿಗೆ ಕಡ್ಡಾಯವಾಗಿ ಏಕೆ ಮೀಟರ್ ಹಾಕಬೇಕೆಂದರೆ, ಈಗೇನು ಬಹಳ ದೊಡ್ಡ ಪ್ರಮಾಣದಲ್ಲಿ ಸೋರಿಕೆಯಾಗುತ್ತಿದೆ. ಅದನ್ನು ದೊಡ್ಡವರು ಮಾಡುತ್ತಿರುವುದು, ಹೆಸರು ರೈತ ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ, ಈ ಹಿನ್ನೆಲೆಯಲ್ಲಿ ಯೋಚನೆ ಮಾಡಿದ್ದೇವೆಯೇ ಹೊರತು, ಯಾವ ಕಾರಣಕ್ಕೂ ಬೇಕಾದರೂ ಈಗ ಕೊಡುತ್ತಿರುವ ದರವನ್ನು ಕಡಿಮೆ ಮಾಡೋಣ. ಆದರೆ ಅವರಿಗೆ ಬಾರ ಹೇರುವ ಪ್ರಶ್ನೆಯಿಲ್ಲ. ಆದರೆ ಮೀಟರ್ ಹಾಕುವ ಉದ್ದೇಶ, ಬೇರೆ ಭಾಗದಲ್ಲಿ ಸೋರಿಕೆಯಾಗುವುದನ್ನು ತಡೆಗಟ್ಟಲಿಕ್ಕೆ ಹಾಗೂ ಲೆಕ್ಕ ಬುಕ್ ಸಿಗಲಿ ಎನ್ನುವ ಸದುದ್ದೇಶಕ್ಕಾಗಿ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಅದು ನಿಮಗೆ ಸೇರಿದ್ದು. ನಾನು ಹೇಳುವುದು, ತಾವು ಆ ದಿವಸ ಹೇಳಿದ ಮಾತುಗಳನ್ನು ನಾನು ಹೇಳುತ್ತಿದ್ದೇನೆ. ತಾವು ಆ ದಿವಸ ತಮ್ಮ ಧ್ವನಿಯಲ್ಲಿ ಹೇಳಿದಿರಿ. ಇವತ್ತು ನನ್ನ ಧ್ವನಿಯಲ್ಲಿ ಹೇಳುತ್ತಿದ್ದೇನೆ. ಆವತ್ತು ತಾವು ಇಲ್ಲಿ ಬಿಡುತ್ತಿದ್ದಿರಲ್ಲಾ; ಏನು ಸುಮ್ಮನೆ ಬಿಟ್ಟಿದ್ದಿರಾ? ನೀವೇನು ವಸಿ ಬಿಟ್ಟಿದ್ದಿರಾ? ಯಾರನ್ನು ಬಿಟ್ಟಿದ್ದೀರಾ? ಹರಾಜು ಹಾಕಿದ್ದೀರಿ. ಏನು ಸಾಮಾನ್ಯನ ಒಂದೊಂದು ಪೈಸೆಗೆ ಹರಾಜು ಹಾಕಿದ್ದೀರಿ. ಆದುದರಿಂದ ತಾವು ಅಲ್ಲಿಗೆ ಹೋದ ಮೇಲೆ ಸ್ವಲ್ಪ ನೀವು ಇಲ್ಲಿ ಹೇಳಿದ್ದೆಲ್ಲವನ್ನೂ ಒಂದು ದಿನ ಫ್ಲಾಶ್ ಬ್ಯಾಕ್ ಮಾಡಿಕೊಳ್ಳಿ. ಕಂಪ್ಲೀಟ್ ಎಲ್ಲಾ ಚಿತ್ರ ನಿಮ್ಮ ನೆನಪಿಗೆ ಬರುತ್ತಿರಬೇಕು. ಒಂದಾದ ಮೇಲೊಂದು ನಾನು ಅಲ್ಲಿ ಏನು ಹೇಳಿದೆ ಎಂದು ಬರುತ್ತಿರಬೇಕು. ಅದೇ ಯಡಿಯೂರಪ್ಪನವರು ಆಗಬೇಕು, ಇದು ಇತಿಹಾಸ. ಅಧಿಕಾರ ಬರುತ್ತೆ ಹೋಗುತ್ತೆ, ಆ ಖುರ್ಚಿಯಲ್ಲಿ ಎಷ್ಟೋ ಜನ ಬಂದು ಹೋಗಿದ್ದಾರೆ. ಆದುದರಿಂದ ಇತಿಹಾಸ, ಎರಡನೆಯದಾಗಿ ತಾವು ಅಸಲು ಬಡ್ಡಿ ಮನ್ನಾ ಎಂದು ತಾವೇ ಹೇಳಿದ್ದೀರಿ ಇಲ್ಲಿ. ಹೇಳಿ ಸ್ವಾಮಿ ಯಾವಾಗ ಮಾಡುತ್ತೀರಿ ಹೇಳಿ. ಏನು ನಿಮ್ಮದು. ಏನು ವಸೀನೇ ಧ್ವನಿ. ಏನು ನಿಮ್ಮ ಕೂಗಾಟ, ನನ್ನ ಕಣ್ಣು ಮುಂದೆ ನೀವು ಅಲ್ಲಿ ಕುಳಿತ್ತಿದ್ದರೂ ಇಲ್ಲಿಯೇ ಕುಳಿತಿದ್ದೀರಿ ಎನ್ನುವ ಭಾವನೆ ಬರುತ್ತಿದೆ. ಇಲ್ಲಿ ಖುರ್ಚಿ ಖಾಲಿ ಇದ್ದರೂ, ಏನೋ ಯಡಿಯೂರಪ್ಪನವರು ಅಲ್ಲಿ ಕುಳಿತಿರಬೇಕು ಅನ್ನುವ ಭಾವನೆ ಇದೆ. ನನಗೆ ಅದೇ ಭಾವನೆ ಬರುತ್ತಿದೆ. ಇನ್ನೂ ಹೋಗಿಲ್ಲ. ಇದು ಬದಲಾವಣೆ ಯಾಗಬೇಕಾದರೆ ಇನ್ನೊಂದೆರಡು ಸದನ ಮುಗಿಯಬೇಕು. ಈಗ ನನಗೆ ಅದೇ ಭಾವನೆ ಬರುತ್ತಿದೆ.

(ಗೊಂದಲ)

ನಾನೇನು ಎಂಬುದು ಯಡಿಯೂರಪ್ಪನವರಿಗೆ ಗೊತ್ತಿದೆ. ಇಲ್ಲಿ ಕಿತಾಪತಿ ಮಾಡುವುದು ಬೇಡ.

ಶ್ರೀ ಆರಗ ಜ್ಞಾನೇಂದ್ರ : ಇದರಲ್ಲಿ ಇನ್ನೊಂದು ಇರಬಹುದು ಮಾನ್ಯ ವಾಟಾಳ್‌ರ, ಸಹವಾಸ ದೋಷನೂ ಇರಬಹುದು. ನೀವು ಅವರ ಪಕ್ಕಕ್ಕೆ ಕುಳಿತುಕೊಂಡರೆ. ಆ ರೀತಿ ಅನ್ನಿಸಬಹುದೇನೊ, ನೀವು ಈ ಕಡೆಗೆ ಬಂದು ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಯಡಿಯೂರಪ್ಪನವರದ್ದು, ಇವರದ್ದು ಸಂಬಂಧ ಹೇಗೆ ಇದೆ ಎಂದು ಇಡೀ ಜಗತ್ತಿಗೆಲ್ಲಾ ಗೊತ್ತಿದೆ. ಅದನ್ನು ನಾವು ಹೇಳಬೇಕಾ?

ಶ್ರೀ ಸಿದ್ದರಾಮಯ್ಯ : ನೀವು ಎಂದೂ ಭಯಪಟ್ಟವರಲ್ಲ. ಭಯದಿಂದ ಹೇಳುತ್ತೀರಾ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಇದು ಬಜೆಟ್ ಪ್ರೀತಿ ಸಾರ್.

ಶ್ರೀ ವಾಟಾಳ್ ನಾಗರಾಜ್ : ಈ ಜನ್ಮದಲ್ಲಿ ಇಲ್ಲ ನಾನೆಂದೂ ಭಯಪಟ್ಟಿಲ್ಲ. ಮಾನ್ಯ ಸಿದ್ದರಾಮಯ್ಯನವರೆ, ಛೇ ಛೇ, ನಾವು – ನೀವು ಭಯಪಡುವುದುಂಟೆ ಸಾಧ್ಯವಿಲ್ಲ. ಆಕಾಶವೇ ಬೀಳಲಿ, ಭೂಮಿಯೇ ಸೀಳಲಿ, ಯಾರಿಗೂ ಭಯ ಪಡುವ ಪ್ರಶ್ನೆಯಿಲ್ಲ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಕಾಶ ಬೀಳಲ್ಲ, ಭೂಮಿ ಬಾಯಿ ಬಿಡಲ್ಲ. ಹೀಗಾಗಿ ನೀವು ಭಯ ಬೀಳತಕ್ಕಂಥ ಪ್ರಶ್ನೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಬಹಳ ಚೆನ್ನಾಗಿ ಹೇಳಿದ್ದಾರೆ.

"ಪೆಣ್ಣಲ್ಲವೇ ತಮ್ಮನ್ನೆಲ್ಲಾ ಹಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು"

ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸ್ವಾಮಿ, ತಮಗೆ ಇದನ್ನು ನಾನು ಹೇಳುತ್ತೇನೆ. ಇಷ್ಟು ವರ್ಷವಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಬೇಲಿಯ ಪಕ್ಕದಲ್ಲಿ ಕುಳಿತು ಶೌಚಾಲಯಕ್ಕೆ ಹೋಗುತ್ತಾರಲ್ಲಾ ಇದನ್ನು ತಪ್ಪಿಸಿದ್ದೇವೆಯೇ? 50–55 ವರ್ಷ ಆಯಿತು ನಮಗೆ ಸ್ವತಂತ್ರ ಬಂದು, ನಮಗೆ ಮಾನ, ಮರ್ಯಾದೆ, ಗೌರವ, ಆತ್ಮಶೋಧನೆ, ನಮಗೇನಾದರೂ ಇದ್ದರೆ, ನಾವು ಈ ವಿಷಯದ ಬಗ್ಗೆ ಗಂಭೀರ ಚಿಂತನೆ ಮಾಡಬೇಕು. ನಾನು ಇಡೀ ಸಮಾಜವನ್ನು ಕೇಳುತ್ತಿದ್ದೇನೆ. ನಮ್ಮ ಹೆಣ್ಣು ಮಕ್ಕಳು ನಮ್ಮ ತಾಯಿಯಾಗಬಹುದು. ಅವರಿಗೆ ಯಾವಾಗ ಸ್ವಾತಂತ್ರ್ಯ ಸಂಜೆ ಆರು ಗಂಟೆಯಾದ ಮೇಲೆ, ಆರುಗಂಟೆಯವರೆಗೆ ಶೌಚಾಲಯಕ್ಕೆ ಹೋಗತಕ್ಕಂಥ ಪರಿಸ್ಥಿತಿ ಇಲ್ಲ. ನಾವು ಗಾಡಿಯಲ್ಲಿ ಹೋಗುತ್ತಿದ್ದರೆ ಆ ಬೆಳಕಿಗೆ ತಕ್ಷಣ ಎದ್ದು ನಿಂತುಕೊಳ್ಳುತ್ತಾರೆ. ಈ ಅನಿಷ್ಟ ಪದ್ಧತಿ, ಈ ಪಾಪದ ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕೆ ಪ್ರತಿ ಕ್ಷೇತ್ರದಲ್ಲಿ ತಾವು ಸುಸಜ್ಜಿತವಾದಂಥ ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿಸುವುದಕ್ಕೆ ನಮಗೆ.......

ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ದನಗೌಡ : ಮಾನ್ಯ ಅಧ್ಯಕ್ಷರೆ, ಶೌಚಾಲಯದ ವಿಚಾರ ಬಂದಾಗ ನಾನು ಬಹಳ ದಿವಸಗಳಿಂದ ನೋಡುತ್ತಲೇ ಬಂದಿದ್ದೇನೆ. ಬರೀ ಮಹಿಳೆಯರನ್ನು ವಿಜೃಂಭಿಸತಕ್ಕಂಥದ್ದು ಬೇಡ, ದಯವಿಟ್ಟು. ನಾವು ನೋಡುತ್ತಿದ್ದೇವೆ. ನಾವಾದರೂ ಯಾರಾದರೂ ಬಂದರೆ ಎದ್ದು ನಿಂತುಕೊಳ್ಳುತ್ತೇವೆ. ಅಲ್ಲಿ ಹೋಗುತ್ತೇವೆ, ಇಲ್ಲಿ ಹೋಗುತ್ತೀರಿ ಎಂದು ಹೇಳುತ್ತೀರಿ. ಪುರುಷರು, ಎಂಡಿಆರ್, ಎಸ್‌ಹೆಚ್‌ಎನ್‌ಹೆಚ್‌ನಲ್ಲಿರುತ್ತಾರಲ್ಲಾ ಅದಕ್ಕೇನು ಹೇಳಬೇಕು ಹೇಳಿ? ದಯವಿಟ್ಟು ಶೌಚಾಲಯಗಳ ವಿಚಾರ ಬಂದ ತಕ್ಷಣ ಇದನ್ನು ವಿಜೃಂಭಿಸುತ್ತೀರಿ. ಇವತ್ತು ನಮ್ಮ ಮಹಿಳೆಯರಿಗೆ ಒಂದು ಮಂತ್ರಿಸ್ಥಾನ ಕೊಡಿ ಎಂದರೆ, ಅದು ಸಾಧ್ಯವಾಗುತ್ತಿಲ್ಲ. ಈ ವಿಚಾರಕ್ಕೆ ಯಾವಾಗಲೂ ಮಹಿಳೆಯರನ್ನು ವಿಜೃಂಭಿಸತಕ್ಕಂಥದ್ದು ಬೇಡ ಎಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಶೌಚಾಲಯದ ವಿಷಯದ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಆಮೇಲೆ, ಈಗ ಭಾಗ್ಯಲಕ್ಷ್ಮಿ ಬಾರಮ್ಮ ಎಂದು ತಾವು ಕೊಟ್ಟಿದ್ದೀರಿ. ತಾಳಿ ಭಾಗ್ಯ ಏನಾಯಿತು? ಇಲ್ಲಿ ಏನಾಗುತ್ತದೆ ಎಂದರೆ, ಜನರಿಗೆ ಆಕರ್ಷಣೆಯಾಗತಕ್ಕಂಥ ಪದಗಳು. ತಾಳಿ ಭಾಗ್ಯ, ಎಲ್ಲರಿಗೂ ಹಿಂದೆ ತಾಳಿ ಭಾಗ್ಯ, ನಾವು ಉಚಿತವಾಗಿ ಸರ್ಕಾರವೇ ತಾಳಿ ಕೊಡುತ್ತೇವೆಂದು ಹೇಳಿ. ಈಶ್ವರಪ್ಪನವರೇ, ಅದೆಲ್ಲಾ ಇತ್ತು, ಅದು ಎಲ್ಲಿ ಹೋಯಿತು? ತಾಳಿ ಭಾಗ್ಯದ್ದು? ಈಗ **"ಭಾಗ್ಯದ ಲಕ್ಷ್ಮಿ ಬಾರಮ್ಮ"** ಎಂದು ತಾವು ಬರೆದಿದ್ದೀರಿ. ಇದು ನೋಟಕ್ಕೆ ಆಗಬಾರದು. ತೋರಿಕೆಗೆ ಆಗಬಾರದು ಪ್ರಾಮಾಣಿಕವಾದಂಥ ಪ್ರಯತ್ನ ತಮ್ಮಲ್ಲಿ ಆಗಬೇಕೆಂದು ಈ ಕಾರ್ಯಕ್ರಮದ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಬಜೆಟ್ ಪುಸ್ತಕದಲ್ಲಿ ಎಲ್ಲಾ ವಚನಗಳನ್ನು ತಂದಿದ್ದೀರಿ. ಆದರೆ, ಪುರಂದರ ವಚನ ತಾವು ತರಲಿಲ್ಲ. ಪುರಂದರ ಕಡೆ ತಮಗೆ ಯಾರೂ ಸಿಗಲಿಲ್ಲವೆ? ಮತ್ತೆ ಶರಣೆ ಅಕ್ಕಮಹಾದೇವಿ ಬಗ್ಗೆ

ಹೇಳಿದ್ದೀರಿ. ಸಂತೋಷ. ಮತ್ತೆ ಕನ್ನಡ ಸಂಸ್ಕೃತಿ ಬಗ್ಗೆ ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಕೂಡ ಹೇಳಿದ್ದೀರಿ. ನಿಜವಾಗಿಯೂ ಕೂಡ ಸಂತೋಷ. ರಾಷ್ಟ್ರಕವಿ ಕುವೆಂಪುರವರು ಹೇಳಿರತಕ್ಕಂಥ

ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ : ಶಕ್ತಿ ಕಣಾ
ತಾಯಿ ಕಣಾ ದೇವಿ ಕಣಾ
ಬೆಂಕಿ ಕಣಾ ಸಿಡಿಲು ಕಣಾ

ಈ ರೀತಿಯಾಗಿ ನೀವು ಒಂದು ದಿವಸ ಹೇಳಿಬಿಟ್ಟಿದ್ದರೆ ನಾನು ಶರಣು ಶರಣಾರ್ಥಿ ಆಗುತ್ತಿದ್ದೆ. ನೀವು ಇವೆಲ್ಲವನ್ನೂ ಹುಡುಕಿ ಬಹಳ ಕಷ್ಟಪಟ್ಟು ಹಗಲು-ರಾತ್ರಿ ನಿದ್ದೆಗೆಟ್ಟು ಇವುಗಳನ್ನು ಯಾರ್ಯಾರಿಂದ ಮಾಡಿಸಿದಿರಿ. ತಾವು ರೇಷ್ಮೆ ಬಗ್ಗೆ ತೀವ್ರವಾದ ಗಮನ ಕೊಡಬೇಕು. ಕೋಲಾರ, ಮೈಸೂರು ಜಿಲ್ಲೆ, ಚಾಮರಾಜನಗರ ಮತ್ತು ಇತ್ತ ಕಡೆ ಇರತಕ್ಕಂಥ ತುಮಕೂರು ಜಿಲ್ಲೆಗಳಲ್ಲಿ ರೇಷ್ಮೆ ಸಂಪೂರ್ಣವಾಗಿ ನಾಶದ ಹಂಚಿನಲ್ಲಿದೆ. ನಾಶ ಆಗುತ್ತಿರುವ ರೇಷ್ಮೆ ಉದ್ಯಮವನ್ನು ಉಳಿಸುವುದಕ್ಕೆ ವಿಶೇಷವಾದಂಥ ಗಮನವನ್ನು ಪ್ರಾಮಾಣಿಕವಾಗಿ ಕೊಡಬೇಕು. ಇಲ್ಲಿ ರೇಷ್ಮೆ ಸಚಿವರು ಇದ್ದಾರೆ. ಆದ್ದರಿಂದ ಅವರಿಗೂ ಹೇಳುತ್ತಾ ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿಯೂ ಕೂಡ ಇದರ ಬಗ್ಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಹಿಂದೆ ಸರ್ಕಾರ ನಡೆಸುವಂಥ ಸಂದರ್ಭದಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರು ವಿರೋಧ ಪಕ್ಷದಲ್ಲಿದ್ದಾಗ ಡಿ.ವಿ.ಜಿ.ರವರ ಒಂದು ಪದ್ಯವನ್ನು ಹೇಳಿದ್ದರು. ಅದನ್ನು ಮತ್ತೆ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಹೊತ್ತಿನ ಧಣಿ ನಾಳೆ ಪರಾರಿ
ನಾಳೆಯ ಧಣಿ ಈ ಹೊತ್ತು ಭಿಕಾರಿ
ದೊಂಬಿಯ ರಾಜ್ಯ ದೊಂಬರ ಭೋಜ್ಯ
ಗಂಭೀರ ಕತ್ತೆಗೆ ದೊಣ್ಣೆಯೇ ಪೂಜ್ಯ
ರಂಪು ರಗಳೆ ಸಂಪಿನ ಪುಂಡಾಟ
ಗುಂಪು ಕಟ್ಟಿದರೆ ಮಂತ್ರಿಯ ಪೀಠ

ಇದನ್ನು ಮತ್ತೊಂದು ಸಾರಿ ತಮ್ಮ ಗಮನಕ್ಕೆ ತಂದಿದ್ದೇನೆ. ಇದರ ಜೊತೆಗೆ ತಮ್ಮ ಗಮನಕ್ಕೆ ತರತಕ್ಕಂಥದ್ದು ಏನೆಂದರೆ, ಇವತ್ತಿನ ದಿವಸ ಹಳ್ಳಿಗಳಲ್ಲಿ ಸ್ಮಶಾನಗಳ ಕೊರತೆ ಇದೆ. ನಮಗೆ ನೀವು ಆಹಾರ, ನೀರು ಮತ್ತು ವಿದ್ಯುಚ್ಛಕ್ತಿ ಕೊಡದೇ ಇದ್ದರೂ ಚಿಂತೆ ಇಲ್ಲ. ಆದರೆ, ಸತ್ತ ಹೆಣವನ್ನು ಹೂಳುವುದಕ್ಕೆ ತುರ್ತಾಗಿ ಪ್ರತಿ ಹಳ್ಳಿಗಳಲ್ಲಿ ಜಾಗ ಗುರುತು ಮಾಡಿ. ಇವತ್ತಿನ ದಿವಸ ಗುಂಡು ತೋಪುಗಳಿಲ್ಲ ಮತ್ತು ಸ್ಮಶಾನಗಳು ಇಲ್ಲ. ಹಿಂದೆ ನಾವು ಒಕ್ಕಣಿ ಮಾಡಬೇಕಾದರೆ ಒಂದು ಗುಂಡು ಹಳ್ಳಿಗಳಲ್ಲಿರುತ್ತಿತ್ತು. ಅದಕ್ಕೆ ಒಕ್ಕಣೆ ಗುಂಡು ಅನ್ನುತ್ತಿದ್ದು. ಇವತ್ತಿನ ದಿವಸ ಇದ್ಯಾವುದೂ ಇಲ್ಲ. ಒಕ್ಕಣಿ ಗುಂಡು ಇಲ್ಲ. ಗುಂಡು ತೋಪುಗಳು ಇಲ್ಲ. ಜಮೀನು ಇರತಕ್ಕಂಥವರು ಹೆಣಗಳನ್ನು ಅವರ ಜಮೀನಿನಲ್ಲಿ ಹೂಳಿಕೊಳ್ಳುತ್ತಾರೆ. ಜಮೀನು ಇಲ್ಲದೇ ಇರತಕ್ಕಂಥ ಬಡವರು ಹೆಣ ತೆಗೆದುಕೊಂಡು ಹೋಗಿ ಎರಡು-ಮೂರು ದಿವಸಗಳಾದರೂ ಹೆಣ ಹೂಳುವುದಕ್ಕೆ ಆಗಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೈಮುಗಿದು ಕೇಳುವುದೇನೆಂದರೆ, ನೀರು, ರಸ್ತೆ, ಅನ್ನ ಬೇಡ. ಸತ್ತ

ಹೆಣಕ್ಕಾದರೂ ಸಂಸ್ಕಾರ ಮಾಡುವುದಕ್ಕೆ ಸ್ಮಶಾನ ಬೇಕಾಗುತ್ತದೆ. ಆದ್ದರಿಂದ ನಿಮ್ಮ ಕಾಲದಲ್ಲಿ ಸ್ಮಶಾನಕ್ಕೆ ಜಾಗವನ್ನು ಹಳ್ಳಿ ಹಳ್ಳಿಯಲ್ಲಿ ಗುರುತಿಸತಕ್ಕಂಥ ಒಂದು ಸಾಮಾಜಿಕ ಕಾರ್ಯಕ್ರಮ ಆಗಬೇಕು. ಮತ್ತೆ ರೈತರಿಗೆ ಉಚಿತ ವಿದ್ಯುಚ್ಛಕ್ತಿ ಕೊಡತಕ್ಕಂಥದರ ಬಗ್ಗೆ ಹಿಂದೆ ಒಂದು ಸಾರಿ ತಾವು ಈ ಕಡೆ ನನ್ನ ಜೊತೆ ಗೌಪ್ಯವಾಗಿ ಮಾತನಾಡುವಾಗ ಹೇಳಿದ್ದೀರಿ. ಸೋರಿ ಹೋಗುತ್ತಿರುವ ವಿದ್ಯುತ್ ನಿಲ್ಲಿಸಿದರೆ, ತಕ್ಷಣ ರೈತರಿಗೆ ಉಚಿತವಾಗಿ ವಿದ್ಯುತ್ ಕೊಡಬಹುದೆಂಬ ಮಾತನ್ನು ತಾವು ಹೇಳಿದ್ದೀರಿ. ನಿಮಗೆ ಈ ಸಂಕಲ್ಪ ಈಗ ಇದ್ದರೆ ಪ್ರಾಮಾಣಿಕವಾಗಿ ಅದನ್ನು ಮಾಡಬೇಕು. ಇವತ್ತಿನ ದಿವಸ ಬೇರೆ ಬೇರೆ ರಾಜ್ಯಗಳಲ್ಲಿ ರೈತರಿಗೆ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಈ ಒಂದು ದಿಕ್ಕಿನಲ್ಲಿ ತಾವೂ ಕೂಡ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತೆ ವರ್ಗಾವರ್ಗಿ ಬಗ್ಗೆ ನಾನು ಪ್ರತಿ ಸಾರಿ ಪ್ರಸ್ತಾಪ ಮಾಡಿದ್ದೇನೆ. ಈಗ ನಿಮ್ಮದು ಹೊಸ ಸರ್ಕಾರ ಬಂದಿದೆ. ಈ ವರ್ಗಾವರ್ಗಿ ಬಗ್ಗೆ ಒಂದು ನೀತಿ ಮಾಡಿ. ನೀವು ರಾಜಕೀಯದ ವರ್ಗಾವರ್ಗಿಗಳನ್ನು ಮಾಡುವುದಕ್ಕೆ ಹೋಗಬೇಡಿ. ಇಲ್ಲಿ ಜನತಾದಳ (ಎಸ್)ನವರು ಮತ್ತು ಬಿಜೆಪಿನವರೂ ಸಹ ಇದ್ದೀರಿ. ಆದ್ದರಿಂದ ಈ ಶಾಸಕರು ಹೇಳಿರತಕ್ಕಂಥದ್ದು ಮಾಡಬೇಕು ಮತ್ತೆ ಕಾಂಗ್ರೆಸ್‌ನವರು ಹೇಳತಕ್ಕಂಥದ್ದನ್ನು ಮಾಡಬಾರದು ಎನ್ನತಕ್ಕಂಥದ್ದು ಬೇಡ. ಯಾರು ಹೇಳತಕ್ಕಂಥದ್ದನ್ನೂ ತಾವು ಮಾಡುವುದು ಬೇಡ. ಇದಕ್ಕೆ ಸಂಬಂಧಪಟ್ಟಂತೆ ಯಾವುದಾದರೊಂದು ನೀತಿಯನ್ನು ಮಾಡಿದರೆ ನಿಮಗೆ ಇದರಿಂದ ಒಳ್ಳೆಯ ಹೆಸರು ಬರುತ್ತದೆ. ಪ್ರತಿವರ್ಷ ವರ್ಗಾವರ್ಗಿ ಇಟ್ಟುಕೊಳ್ಳಬೇಡಿ. ಕನಿಷ್ಠ ಮೂರು ವರ್ಷಕ್ಕೊಂದು ಸಾರಿ ವರ್ಗಾವರ್ಗಿ ಮಾಡಿದರೆ ಅವರಿಗೆ ನಂಬಿಕೆ ಇರುತ್ತದೆ ಮತ್ತು ಅಧಿಕಾರಿಗಳಿಗೆ ನಾವು ಬಹಳ ದಿವಸ ಇರಬಹುದೆಂಬ ವಿಚಾರ ಕೂಡ ಇರುತ್ತದೆ. ಆದ್ದರಿಂದ ವರ್ಗಾವರ್ಗಿ ಬಗ್ಗೆ ನೀವು ಪ್ರಾಮಾಣಿಕವಾದಂಥ ಒಂದು ಚಿಂತನೆಯನ್ನು ಮಾಡಬೇಕೆಂದು ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ವರ್ಗಾವರ್ಗಿ ನೀತಿಯನ್ನು ತಾವು ಮಾಡಲೇಬೇಕು. ಇದರ ಬಗ್ಗೆ ಒಂದು ಪ್ರಕಟಣೆ ಮಾಡಿ. ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸೇರಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ಬೇಕಾದರೆ ನೀವು ಇಚ್ಛೆಪಟ್ಟರೆ ಮಾತ್ರ ನಮ್ಮನ್ನು ಕರೆಯಿರಿ. ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ವರ್ಗಾವರ್ಗಿ ನೀತಿ ಈಗಾಗಲೇ ಇದೆ. ಇದರಲ್ಲಿ ಬದಲಾವಣೆ ಮಾಡದೆ ಹೋದರೆ ಹೊಸದು ಬರುತ್ತದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆರ್ಡರ್ ಇದೆ. ಕಮಿಟಿ ಆಗಬೇಕು. ಆ ಕಮಿಟಿಯವರು ಮಾತ್ರ ವರ್ಗಾವಣೆ ಮಾಡಬೇಕು. ಮತ್ತೆ ಮೂರು ವರ್ಷಕ್ಕಿಂತ ಹೆಚ್ಚಿಗೆ ಇದ್ದಂಥ ಸಂದರ್ಭದಲ್ಲಿ ಮಾತ್ರ ವರ್ಗಾವಣೆ ಮಾಡಬೇಕೆಂದು ಹಾಗೂ ಅವಧಿ ಪೂರ್ವ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಅಂಥಹ ವರ್ಗಾವಣೆ ಮಾಡಬೇಕೆಂದು ಈಗಾಗಲೇ ಸರ್ಕಾರಿ ಆದೇಶದಲ್ಲಿದೆ. ಆದ್ದರಿಂದ, ಆ ಆರ್ಡರ್ ಬದಲಾವಣೆಯಾಗುವವರೆಗೂ ಆ ಕಮಿಟಿಗಳು ಹಾಗೆಯೇ ಇರುತ್ತವೆ ಮತ್ತು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅದಕ್ಕೆ ಛೇರ್ಮನ್ ಇರುತ್ತಾರೆ. ಈ ನೀತಿ ಈಗಾಗಲೇ ಇದೆ. ಆದ್ದರಿಂದ, ಬದಲಾವಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ರಾಜಕೀಯ ಬದಲಾವಣೆಯಾಗಬಾರದು. ಇನ್ನು ಆಸ್ಪತ್ರೆಗಳ ಸುಧಾರಣೆಯ ಬಗ್ಗೆ ಹೇಳುವುದಾದರೆ, ನೀವು ಆಸ್ಪತ್ರೆಗಳಿಗೆ ಹೋದಾಗ ಏನೇನು

ಇತ್ತೆಂಬುದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಆಸ್ಪತ್ರೆಗಳ ಸಮಗ್ರ ಸುಧಾರಣೆಗೆ ತಾವು ಪ್ರಯತ್ನ ಪಡಬೇಕು. ಇದರ ಜೊತೆಗೆ ನಾನು ಹೇಳುವುದೇನೆಂದರೆ ಬಡವರಿಗೆ ಕ್ಯಾನ್ಸರ್ ರೋಗ, ಕಿಡ್ನಿ ರೋಗ ಅಥವಾ ಹೃದಯಘಾತ ರೋಗ ಬಂದರೆ ಬಡತನ ರೇಖೆಗಿಂತ ಕೆಳಗೆ ಇರತಕ್ಕಂಥ ಬಡವರಿಗೆ ಅನುಕೂಲ ಮಾಡಿಕೊಡಬೇಕು. ಏಕೆಂದರೆ ಇವುಗಳು ಬಹಳ ದೊಡ್ಡ ದೊಡ್ಡ ರೋಗಗಳು. ಈ ರೋಗಗಳಿಗೆ ಒಂದೂವರೆ, ಎರಡು, ಮೂರು ಲಕ್ಷ ರೂ. ಖರ್ಚು ಮಾಡಬೇಕಾಗುತ್ತದೆ. ಬಡವರಿಗೆ ಇಷ್ಟೊಂದು ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರಿಗೆ ಸಾವು ನಿಶ್ಚಯ. ಆದ್ದರಿಂದ, ಇವತ್ತಿನ ದಿವಸ ನಾವು ಯಾವ್ಯಾವುದಕ್ಕೊ ಖರ್ಚು ಮಾಡುತ್ತಿದ್ದೇವೆ. ಬಡತನ ರೇಖೆಯನ್ನು ತಾವು ಗುರುತು ಮಾಡಿ. ಇಂಥ ವರ್ಗದ ಜನರಿಗೆ ಕಿಡ್ನಿ, ಹೃದಯ ರೋಗ ಮತ್ತು ಕ್ಯಾನ್ಸರ್ ರೋಗಕ್ಕೆ ಸಹಾಯ ಮಾಡುತ್ತೇವೆಂದು ತಾವು ಹೇಳಿದರೆ ತಮಗೆ ಒಳ್ಳೆಯದು ಆಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಹೃದಯಕ್ಕೆ ಸಂಬಂಧಪಟ್ಟಂಥ ಆಸ್ಪತ್ರೆಗಳು ಜಾಸ್ತಿಯಾಗಬೇಕು. ನಾನು ಈಗಾಗಲೇ ಟಿಪ್ಪುಸುಲ್ತಾನ್ ಪ್ರಶಸ್ತಿ ಬಗ್ಗೆ ಹೇಳಿದ್ದೇನೆ. ಅದೇ ರೀತಿಯಾಗಿ ಶಿಶುನಾಳ ಶರೀಫ್‌ನ ಬಗ್ಗೆ ಕೂಡ ತಾವು ಪ್ರಶಸ್ತಿ ಕೊಡಬೇಕು. ಮತ್ತೆ ಕನಕ ಪ್ರಶಸ್ತಿ, ಪುರಂದರ ಪ್ರಶಸ್ತಿ ಕೊಡಬೇಕು. ಇದನ್ನು ತಾವು ಮಾಡಿದರೆ ಅದಕ್ಕೊಂದು ಇತಿಹಾಸ ಬರುತ್ತದೆ. ತೀನಂ ಶ್ರೀಕಂಠಯ್ಯನವರ ಶತಾಬ್ಧಿ ಬಗ್ಗೆ ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ನಾನೂ ಕೂಡ ಅದರ ಬಗ್ಗೆ ಹೇಳುತ್ತೇನೆ. ಆದ್ದರಿಂದ ಇದರ ಬಗ್ಗೆ ತಾವು ಚರ್ಚೆ ಮಾಡಿ. ಮತ್ತೆ ಸುವರ್ಣ ಕರ್ನಾಟಕದ 50ನೇ ವರ್ಷದ ಇತಿಹಾಸಕ್ಕೆ ಬರುವಾಗ ಮಾನ್ಯ ನಿಜಲಿಂಗಪ್ಪನವರು, ಮಾನ್ಯ ದೇವರಾಜ ಅರಸುರವರು, ಮಾನ್ಯ ಕೆ.ಸಿ. ರೆಡ್ಡಿ, ಮಾನ್ಯ ಕೆಂಗಲ್ ಹನುಮಂತಯ್ಯನವರು, ಇವರೆಲ್ಲಾ ಇತಿಹಾಸದಲ್ಲಿ ಬರತಕ್ಕಂಥ ಜನರಾಗಿದ್ದಾರೆ. ಇವರ ಬಗ್ಗೆ ಕೂಡ ತಾವು ಚಿಂತನೆ ಮಾಡತಕ್ಕಂಥದ್ದು ತಮ್ಮ ಕರ್ತವ್ಯ. ಇವರ ಬಗ್ಗೆ ನೀವು ಯಾವ ರೀತಿಯಾಗಿ ಚಿಂತನೆ ಮಾಡುತ್ತೀರಿ ಎಂಬುದು ನಿಮಗೆ ಸೇರಿದ ವಿಷಯ. ಪಾನ ನಿರೋಧ ಮಾಡುವುದಕ್ಕೆ ನೀವು ಧೈರ್ಯ ಮಾಡಬೇಕು. ಪಾನ ನಿರೋಧವನ್ನು ಸಮಗ್ರವಾಗಿ ನಾವು ನಿಲ್ಲಿಸಿದ್ದೇವೆಂದು ತಾವು ಧೈರ್ಯ ಮಾಡುತ್ತೀರಾ? ಇದಕ್ಕೆ ತಾವೇ ಸಚಿವರಾಗಿದ್ದೀರಿ. ಗ್ರಾಮೀಣ ಪ್ರದೇಶದ ಜನರಿಗೆ ಸಾರಾಯಿ ಕೊಟ್ಟು ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆಂದು ವಿಷಪಾನ ಮಾಡಿಸುತ್ತಿದ್ದೇವೆ. ಸ್ಪಿರಿಟ್ ಮತ್ತು ನೀರು ಮಿಕ್ಸ್ ಮಾಡಿ ಕೊಡತಕ್ಕಂಥದ್ದೇ ಇವತ್ತಿನ ದಿವಸ ಸಾರಾಯಿ ಆಗಿದೆ. ಇದನ್ನು ಒಂದು ಚೀಲದಲ್ಲಿ ತುಂಬುವುದರಿಂದ ಇದನ್ನು ಎಷ್ಟು ಹೊತ್ತಿಗೆ ಬೇಕಾದರೂ ಹೇಗೆ ಬೇಕಾದರೂ ಕುಡಿಯುತ್ತಾರೆ. ಇದರಿಂದ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿ ಹೋಗಿದೆ. ಆದ್ದರಿಂದ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿ ಉದ್ಧಾರ ಆಗಬೇಕಾದರೆ ತಾವು ಇದನ್ನು ಮಾಡಬೇಕು. ತಾವು ಕೋಳಿ ಜ್ವರದ ಬಗ್ಗೆ ಎಲ್ಲಿಯೂ ಕೂಡ ಹೇಳಲಿಲ್ಲ. ಕೋಳಿ ಜ್ವರ ಬಂದು ಕೋಳಿ ವ್ಯಾಪಾರಸ್ಥರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಇದರ ಬಗ್ಗೆ ತಾವು ಎಲ್ಲಿಯಾದರೂ ಚಿಂತನೆ ಮಾಡಿ ನಮ್ಮ ರಾಜ್ಯದಲ್ಲಿ ಎಲ್ಲಿ ಎಷ್ಟು ಕೋಳಿಗಳು ನಾಶವಾಗಿವೆ ಎಂಬುದನ್ನು ಮತ್ತು ಇದಕ್ಕೆ ಪರಿಹಾರ ಏನು ಕೊಡಬೇಕೆಂಬುದರ ಬಗ್ಗೆ ತಾವು ಇವತ್ತಿನವರೆಗೂ ತಮ್ಮ ಹಣಕಾಸಿನ ಆಯವ್ಯಯದಲ್ಲಿ ಹೇಳಿಲ್ಲ. ಈಗ ನಾನು ತಮಗೆ ಸಲಹೆ ಕೊಡುವುದೇನೆಂದರೆ, ಈ ಬಗ್ಗೆ ತಾವು ಅತ್ಯಂತ ಕಾಳಜಿ ವಹಿಸಿ. ಕೋಳಿ ಜ್ವರದ ಬಗ್ಗೆ ನಿಮ್ಮ ಗಮನಕ್ಕೆ ತರುವುದೇನೆಂದರೆ, ಪತ್ರಿಕೆಯಲ್ಲಿ ಬಂದಿರತಕ್ಕಂಥ ಮಾಹಿತಿ ಪ್ರಕಾರ ಇಡೀ ದೇಶದಲ್ಲಿ ಇರತಕ್ಕಂಥ ಒಂದೊಂದು ರಾಜ್ಯದಿಂದ

ಸುಮಾರು 300 ರಿಂದ 400 ಕೋಟಿ ರೂಪಾಯಿ ಹಣ ನಷ್ಟವಾಗಿದೆ ಎನ್ನತಕ್ಕಂಥ ಮಾಹಿತಿ ಬಂದಿದೆ. ತಾವು ಇದರ ಬಗ್ಗೆ ಮಾಹಿತಿ ತರಿಸಿ. ಕೋಳಿ ಸಾಕಾಣಿಕೆ ಮಾಡತಕ್ಕಂಥ ಅನೇಕ ಜನ ಇವತ್ತಿನದಿವಸ ನೆಲಕಚ್ಚಿದ್ದಾರೆ. ಕೋಳಿ ಜ್ವರ ಬರುತ್ತದೆಂದು ಕೆಟ್ಟ ಪ್ರಚಾರ ಬಂದು ಇವತ್ತಿನ ದಿವಸ ಲಕ್ಷಾಂತರ, ಕೋಟ್ಯಾಂತರ ಕೋಳಿಗಳನ್ನು ತಾವೇ ಕೊಂದು ಹಾಕಿರತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ಮತ್ತೆ ಸುಮಾರು 40 ರಿಂದ 50 ವರ್ಷಗಳಿಂದ ಅನೇಕ ಇಲಾಖೆಗಳಲ್ಲಿ ಇವತ್ತಿನ ದಿವಸ ದಿನಗೂಲಿ ನೌಕರರು ಇದ್ದಾರೆ. ದಿನಗೂಲಿ ನೌಕರರನ್ನು ಮುಂದೆ ತೆಗೆದುಕೊಳ್ಳುವುದು ಬಿಡುವುದು ಬೇರೆ ವಿಚಾರ. ಇರತಕ್ಕಂಥವರನ್ನು ಸಮಗ್ರವಾಗಿ ಖಾಯಂ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ತಾವು ಇದನ್ನು ಖಂಡಿತ ಮಾಡಬೇಕಾಗುತ್ತದೆ. ಮತ್ತೆ ಅಧಿಕಾರಿಗಳು ಮತ್ತು ರಾಜಕಾರಣಿಗಳ ಬಗ್ಗೆ ನಾವು ಪ್ರಾಮಾಣಿಕವಾಗಿ ಹೇಳೋಣ. ಅಧಿಕಾರಿಗಳ ಬಗ್ಗೆ ನಾವೇನೂ ಮಾತನಾಡುತ್ತಿಲ್ಲ. ನಿಮ್ಮ ಕೈಯಲ್ಲಿ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. 25 ವರ್ಷದ ಅವಧಿಯಲ್ಲಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಎಂಬ ಬಗ್ಗೆ ಸಮಂಜಸವಾದ ಅಥವಾ ಸಮಗ್ರ ತನಿಖೆಯನ್ನು ತಾವೇ ಮಾಡಿಸಿ. ಸುಮ್ಮನೆ ಹಾದಿ ಬೀದಿಯಲ್ಲಿ ರಾಜಕಾರಣಿಗಳು, ಶಾಸಕರು, ಮಂತ್ರಿಗಳೆಂದರೆ ಅಪಕೀರ್ತಿ ಇದೆ. ಮಂತ್ರಿ ಆದತಕ್ಷಣ ಮತ್ತು ಶಾಸಕರು ಆದತಕ್ಷಣ ಅವರ ಮೇಲೆ ಈ ರೀತಿಯಾದ ಕೆಟ್ಟ ಭಾವನೆ ಇರುವುದರಿಂದ ತಾವು ಸುಮಾರು ಒಂದು ಹಂತ ನಿಗದಿ ಮಾಡಿ, ಅಂದರೆ 1972 ಅಥವಾ 1975 ರಿಂದ ಇಲ್ಲಿಯವರೆಗೆ ಶಾಸಕರು ಇರಬಹುದು, ಮಂತ್ರಿಗಳು ಮತ್ತು ಮಾಜಿ ಮಂತ್ರಿಗಳು ಇರಬಹುದು. ಹಾಗೆಯೇ ಅಧಿಕಾರಿಗಳ ಮಟ್ಟದಲ್ಲಿರತಕ್ಕಂಥ ಐಎಎಸ್, ಐಪಿಎಸ್ ಮತ್ತು ನಿವೃತ್ತರಾದಂಥ ಅಧಿಕಾರಿಗಳು ಒಳಗೊಂಡಂತೆ ಇವರ ಎಲ್ಲರ ಮೇಲೂ ಕೂಡ ಒಂದು ಸಮಗ್ರವಾದ ತನಿಖೆ ಆಗತಕ್ಕಂಥ ಒಂದು ವ್ಯವಸ್ಥೆ ಆಗಬೇಕು. ಈಗ ನಾವು ಲೋಕಾಯುಕ್ತವನ್ನು ನೋಡುತ್ತಿದ್ದೇವೆ. ಅವರು ಚೆನ್ನಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ಇಲ್ಲಿ ಟೀಕೆ ಮಾಡುವಂತಹ ಪ್ರಶ್ನೆಯಲ್ಲ. ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತ ಅವರೇ ಒಂದು ತರಹ ಬೀದಿಗೆ ಬಂದಿದ್ದಾರೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಯಾವುದೇ ಕೆಳ ದರ್ಜೆಯ ಅಧಿಕಾರಿಗಳು, ಎಲ್ಲೋ ಒಬ್ಬ ಗುಮಾಸ್ತನನ್ನು ಹಿಡಿಯುವುದಲ್ಲ. ಸರಿಯಾದ ಕುಳಗಳನ್ನು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳನ್ನು ಯಾರಾದರೂ ಒಬ್ಬರನ್ನು ಹಿಡಿದು, ಸರ್ಕಾರಕ್ಕೆ ತಿಳಿಸುವುದು ಮುಖ್ಯ. ಅವರು ನಿಮ್ಮ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳಲಿಕ್ಕೆ ಎಷ್ಟೆಷ್ಟು ಶಿಫಾರಸ್ಸು ಮಾಡಿದ್ದಾರೆ. ಒಬ್ಬರ ಬಗ್ಗೆಯೂ ಕ್ರಮವನ್ನು ಕೈಗೊಂಡಿರುವುದಿಲ್ಲ. ತಾವು ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಲೋಕಾಯುಕ್ತಕ್ಕೆ ನಾವು ಹೆಚ್ಚಿನ ಅಧಿಕಾರವನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಿಮ್ಮ ಈ ಭಾಷಣದಲ್ಲಿ ಆ ಅಧಿಕಾರವನ್ನು ಕೊಡತಕ್ಕಂತಹ ಭಾಷಣ ಇದರಲ್ಲಿ ಬರಲಿಲ್ಲ ಎನ್ನುವ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರೆ, ತಮಗೆ ಮಾನ್ಯ ಯಡಿಯೂರಪ್ಪನವರು ಮಾಡಿದಂತಹ ಭಾಷಣಕ್ಕೆ ನಾನು ನನ್ನದೇ ಆದಂತಹ ಒಂದು ಕವನವನ್ನು ರಚಿಸಿದ್ದೇನೆ. ತಾವು ಕೇಳಬೇಕು.

"ದುಡ್ಡೆ ದೊಡ್ಡಪ್ಪ ಯುಗದಲ್ಲಿ ಯಡ್ಡಿ ನೀಡಿದ ಆಯವ್ಯಯ ನಿಜವೋ
ಸುಳ್ಳೋ ನಿರ್ಧರಿಸಿ, ದುಡಿಯುವ ರೈತನಿಗೆ ಬಡ್ಡಿ ಇಳಿಸಿ ಹಸಿರಿನೊಂದಿಗೆ
ಕೇಸರಿಯನ್ನು ಬೆರೆಸಿ, ದೇವಾಲಯಗಳಿಗೆ ಸುಣ್ಣ ಬಳಸಿ, ಬೊಕ್ಕಸದಲ್ಲಿ

ಸ್ವಲ್ಪ ಹಣವನ್ನು ಉಳಿಸಿ, ಯಡ್ಡಿ ನೀಡಿದ ಆಯವ್ಯಯ ನಿಜವೋ ಸುಳ್ಳೋ ನಿರ್ಧರಿಸಿ".

("ಹಳೆಯ ಬೆಳಕು ಹೊಸದು ತಳಕು, ಶಾಲೆಯ ಬಾಲೆಯ
ಸೈಕಲ್ಲಿಗೆ ಇಲ್ಲ ಬ್ರೇಕು, ಅಂಕಿಯಿಂದ ಮಂಕು ಮಾಡಿ
ಕೊಂಕು ಮಾಡಿದ ದಿಗ್ಗದಿಂದ ಮಂಕುತಿಮ್ಮ ಬಸವ ವಚನದಿಂದ ಹಮ್ಮು
ಬಿಮ್ಮು ಬೀಗುತ್ತಾ, ಧಿರಸು ಮುಖ ನಗುವೇ ಇಲ್ಲ. ಗಜ
ಗರ್ಭದಿಂದ ಬಂದ ಶಿವಲಿಂಗದಂತೆ ವಿತ್ತ ಮಂತ್ರಿ ಚಿತ್ತದಿಂದ
ಹೊರಬಂದ ಆಯವ್ಯಯ ನಿಜವೋ ಸುಳ್ಳೋ ನಿರ್ಧರಿಸಿ".
"ಹೆಂಡದಿಂದ ಹೆಚ್ಚಿದೆ ಆದಾಯ, ಹೆಂಡದಿಂದ ಹೆಚ್ಚಿದೆ ಆದಾಯ
ಜನಾರೋಗ್ಯಕ್ಕೆ ಇದೇ ಅಪಾಯ ಗಾಂಧಿ ತತ್ವಕ್ಕೆ ನೀಡಿ ವಿದಾಯ;
ಒಟ್ಟಾರೆ ಬಜೆಟ್ ಒಂದು ಅಯೋಮಯ; ನಿಜವೋ
ಸುಳ್ಳೋ ನಿರ್ಧರಿಸಿ" ಇದು ನಿಮಗೆ ಹೇಳುವಂತಹದ್ದು. ಮತ್ತೊಂದು

ನಿಮ್ಮ ಸರ್ಕಾರದ ಬಗ್ಗೆ ಇನ್ನೊಂದು ಹೇಳುತ್ತೇನೆ.

"ಬೇವಿನ ಬೀಜವನ್ನು ಬಿತ್ತಿ, ನೀವು ಬದಲಾವಣೆ ಆಗುವುದಕ್ಕೆ ಸಾಧ್ಯವೇ ಇಲ್ಲ.
ಬೇವಿನ ಬೀಜದ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು
ಜೇನುತುಪ್ಪದ ಒಯ್ದೊಡೆ ಸಿಹಿಯಾಗಬಲ್ಲದೆ, ಕಹಿಯಾಗುವುದಲ್ಲವೇ."

ನನಗನಿಸುತ್ತದೆ. ನೀವು ಏನೇ ಆದರೂ ಬದಲಾವಣೆಯಾಗುವುದಿಲ್ಲ. ನಿಮ್ಮ ತತ್ವ ಸಿದ್ಧಾಂತ ಇಲ್ಲಿ ಹೇಳಿದ್ದು ಅದೇ ತತ್ವ ಸಿದ್ಧಾಂತ, ನಿಮ್ಮ ತತ್ವ ಸಿದ್ಧಾಂತಕ್ಕೆ ಮಾನ್ಯ ಕುಮಾರಸ್ವಾಮಿಯವರು ಗಂಭೀರವಾಗಿ ನಿಮ್ಮ ಜೊತೆಯಲ್ಲಿ ಸೇರಿದ್ದಾರೆ. ನೀವು ಅವರನ್ನೂ ನಿಮ್ಮ ಜೇಬಿಗೆ ಇಷ್ಟರಲ್ಲಿಯೇ ಹಾಕಿಕೊಳ್ಳುತ್ತೀರಿ ಎಂಬುದು ನನಗನ್ನಿಸುತ್ತದೆ. ಅದನ್ನು ಅವರು ಎಷ್ಟರಮಟ್ಟಿಗೆ ಧೈರ್ಯ ಮಾಡಿ ನಿಮ್ಮ ಜೇಬಿಗೆ ಬರುತ್ತಾರೋ ಕುಳಿತುಕೊಳ್ಳುತ್ತಾರೋ ಗೊತ್ತಿಲ್ಲ. ಅದು ಇರಲಿ ನೋಡೋಣ.

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು
ಮೇಟಿಯಂ ದಾಟಿ ನಡೆದುದಲ್ಲದೆ, ದೇಶ ದಾಟಿವೆ
ಕೆಡುಗಾ ಸರ್ವಜ್ಞ.
"ಅನ್ನವನ್ನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದೊಡೆ ಕೈಲಾಸ ಭಿನ್ನಾಣಕ್ಕೂ ಸರ್ವಜ್ಞ"

ಸಾರ್ ಕನಕದಾಸರು "ಜಪವ ಮಾಡಿದರೇನು, ತಪವ ಮಾಡಿದರೇನು
ವಿಪರೀತ ಕಪಟ ಗುಣ ಕಲುಶವಿದ್ದವರು
ಎಷ್ಟೋ ಏನು ಹೇಳಿದರೆ ಬಂತು, ಏನು ಮಾಡಿದರೆ ಬಂತು
ಏನು ಇರತಕ್ಕಂಥಹದ್ದು, ಮತ್ತೊಂದು ಪುರಂದರದಾಸರ ಬಗ್ಗೆಧ್ದ

ನಾನು ಹೇಳುತ್ತೇನೆ.

"ಗೂಟ ನಾಮವ ಹೊಡೆದು, ಗುಂಡು ತಂಬಿಗೆ ಹಿಡಿದು
ಗೋಸಂಚು, ಗೋತರವ ಮಡಿಯನ್ನು ಉಟ್ಟು, ದಾಮುಗಾಲು

ಇಡುತ್ತಾ, ನಾನು ಧರೆಯೊಳಗಡೆ ಬಂದರೆ ಎನ್ನ ಭೂಟಕ ತನವ
ನೋಡಿ ಭ್ರಮಿಸದಿರಿ ಜನರೆ, ದಾಸನೆಂತಾಗುವೆನು ಧರೆಯೊಳಗಡೆ
ನಾನು ದಾಸನೆಂತಾಗುವೆನು ಧರೆಯೊಳಗೆ ನಾನು ಇದು ಪುರಂದರದಾಸರದು.

ಕುವೆಂಪು ಸಾಹಿತ್ಯವನ್ನು ಹೇಳುತ್ತೇನೆ.

"ಸುಳ್ಳಿನ ಮಾಲೆ, ಮಳ್ಳಿನ ಮಾಲೆಯ ಕೊರಳಿಗೆ ಸೂಳಿ
ಕಳ್ಳನೊಬ್ಬನನ್ನು ಗುರುವು ಮಾಡಿ ಬಡವರ ಹೊನ್ನನ್ನು
ಕಾಣಿಕೆ ಮಾಡಿ ಧರ್ಮವ ಮೆರೆವ ನೋಡಯ್ಯಾ" ಇದನ್ನು

ರಾಷ್ಟ್ರಕವಿ ಕುವೆಂಪುರವರು ಹೇಳಿರತಕ್ಕಂತಹದ್ದು. ಕುವೆಂಪುರವರದು ಮತ್ತೊಂದು ಹೇಳುತ್ತೇನೆ.

"ನಮ್ಮ ದೇಶಕ್ಕೆ ಏನು ಬಂದರೇನಂತೆ ಕೊನೆಗೆ ಕಮ್ಯುನಿಸಂ
ಬಂದರೂ ಹಾಕು ಅದಕ್ಕೂ ಮೂರು ನಾಮ ಅದಕ್ಕೂ ಕಟ್ಟುವೆವು
ಲಿಂಗ ಕ್ರಾಸ್ ತಗುಲಿಸಿದರೂ ಆಶ್ಚರ್ಯವಿಲ್ಲ,

ಇನ್ನು ಡಿವಿಜಿಯವರದು ಹೇಳುತ್ತೇನೆ.

"ತನ್ನ ಶಿಲುಬೆಯನ್ನು ತಾನೇ ಹೊತ್ತನಲ್ಲಾ ಗುರು ಏಸು
ನಿನ್ನ ಕರ್ಮದ ಹೊರೆಯ ಬಿಡದೆ ನೀನೇ ಹೊರು
ಖಿನ್ನನಾಗದೆ ತುದಿಯ ಬೀಗದ ಶವಭಾರವನ್ನು ಬೆನ್ನಿನಲ್ಲಿ
ಹೊತ್ತು ನಡೆ ಮಂಕುತಿಮ್ಮ" ಇವೆಲ್ಲವನ್ನೂ ನಿಮಗೆ ಅರ್ಥ ಆಗತಕ್ಕಂಥಹದ್ದು.

"ರಾಮಾಯಣ ನಡೆಯಿತು, ಪಿತೃವಾಕ್ಯದ ಪರಿಪಾಲನೆಗಾಗಿ
ಕುಮಾರಸಂಭವ, ಆಯಿತು, ಪುತ್ರವಾತ್ಸಲ್ಯಕ್ಕಾಗಿ
ಭಾಜಪ, ದಳ ಮೈತ್ರಿ ಯಾವ ತತ್ವಕ್ಕಾಗಿ ಅಕಟಕಟ
ಮತದಾರ ಕಾದಿಹನು ಇವರಿಗೆ ಬುದ್ಧಿಕಲಿಸಲಿಕ್ಕಾಗಿ, ಇದು ಅಲ್ಲದೆ ಅಧ್ಯಕ್ಷರೆ,

ಮತ್ತೊಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

"ಗುಡಿ, ಚರ್ಚು, ಮಸೀದಿಗಳ ಬಿಟ್ಟು ಹೊರಗೆ ಬನ್ನಿ, ಇದನ್ನು ರಾಷ್ಟ್ರಕವಿ ಕುವೆಂಪುರವರು ಹೇಳಿರುವುದು,

ಬಡತನದ ಬುಡಮತ್ತಿ ಕೀಳಬನ್ನಿ ಮೌಢ್ಯತೆಯ ಮಾರಿಯನ್ನು
ಹೊರದೂಡಲೇ ಬನ್ನಿ ವಿಜ್ಞಾನದ ದೀವಿಗೆಯನ್ನು ಹಿಡಿದು ಬನ್ನಿ
ಓ ಬನ್ನಿ ಸೋದರರೆ, ಬೇಗ ಬನ್ನಿ" ಎಂತಹ ಮಾತನ್ನು ಅವರು ಹೇಳಿದರು.

3ನೇಯ ಮಹಡಿಯಲ್ಲಿ ಮಂತ್ರಿಗಳಾದರೂ ಕುರ್ಚಿಗೆ ಹೋಗಿ ನಮಸ್ಕಾರ; ಕುರ್ಚಿಗೆ ನಮಸ್ಕಾರ! ಅಯ್ಯೊ ಕರ್ಮವೇ, ಇನ್ನೊಬ್ಬರು ಮಂತ್ರಿ ಕುರ್ಚಿಗೆ ತಾಯಿಯನ್ನು ಕರೆದುಕೊಂಡು ಹೋಗಿ ಕುಳ್ಳಿರಿಸಿಕೊಳ್ಳುತ್ತಾರೆ. ಅಯ್ಯೊ ಕರ್ಮವೇ, ನಾವು ಎಲ್ಲಿದ್ದೇವೆ? ನಾವು ಎಲ್ಲಿಗೆ ತಲುಪುತ್ತಿದ್ದೇವೆ. ಇದು ಯಾವ ಯುಗ, ಏನು ರಾಕೆಟ್‌ಗಳ ಮೇಲೆ ರಾಕೆಟ್ ಹೋಗುತ್ತಿದೆ. ನಾವು ಚಂದ್ರಲೋಕಕ್ಕೆ ಹೋಗಿ ಬಂದಿದ್ದೇವೆ. ಸೂರ್ಯಲೋಕಕ್ಕೆ ಈಗ ಹೋಗುತ್ತಿದ್ದೇವೆ. ಆ ರೀತಿ ಮಾಡಿದಂತಹ ಸಚಿವರಿಗೆ ಕೊಟ್ಟಿರುವಂತಹ ಇಲಾಖೆ ಯಾವುದು? ಕೆಲಸಕ್ಕೆ ಬಾರದೆ ಇರುವಂತಹ ಲಾಟರಿ.

ನಮ್ಮ ಮಾನ್ಯ ರಾಮಚಂದ್ರಗೌಡರಿಗೆ, ಅವರಿಗೆ ಇನ್ನೂ ಜಾಸ್ತಿ ಕೊಟ್ಟು ಬಿಟ್ಟಿದ್ದರೆ ಅವರು ಕುರ್ಚಿಯನ್ನು ಸುತ್ತಿಬಿಡುತ್ತಿದ್ದರು. ಇನ್ನೂ ಮೂರು ಮೂರು ರೌಂಡ್ ಸುತ್ತುತ್ತಿದ್ದರು. ಅವರು ಸಣ್ಣದು ಮಂತ್ರಿ ಪದವಿ ಕೊಟ್ಟಿದ್ದಕ್ಕೆ ಅದು ಹೋಗಲಿ ಅವರು ಕದ್ದು ಆದರೂ ಮಾಡಿಕೊಂಡಿದ್ದಾರಾ? ಫೋಟೋಗ್ರಾಫರ್ ಮತ್ತು ಪತ್ರಿಕೆಯವರನ್ನು ಕರೆದುಕೊಂಡು ಅಲ್ಲಿಗೆ ಹೋಗಿ ನಿಂತುಕೊಂಡು ದೇಶಕ್ಕೆಲ್ಲಾ ತೋರಿಸುತ್ತಾರಲ್ಲಾ, ಏತಕ್ಕಾಗಿ ಇದು? ಈ ಮೌಢ್ಯತನ ಯಾರಿಗಾಗಿ? ಯಾರಿಗಾಗಿ? ಯಾರಿಗೆ ಈ ಮೌಢ್ಯತನ, ಈ 3ನೇ ಮಹಡಿ ನಮ್ಮ ತಾತನದೇ, ನಮ್ಮ ಅಪ್ಪನದೇ, ನಮ್ಮ ತಾಯಿಯದೇ, ನಮ್ಮ ತಂದೆಯದೇ, ಮಾನ್ಯ ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದಂತಹ ಆ ಮಹನೀಯ ಒಳಗಡೆ ಬರುವುದಕ್ಕಾಗಲಿಲ್ಲ. ಮಾವಿನಸೊಪ್ಪು ಹಾಗೂ ಬೇವಿನಸೊಪ್ಪು ಏನು? ಬಾಳೇ ಕಂಬಗಳು ಏನು, ಕುರಿ ಕಡಿಯಲಿಲ್ಲ, ಕೋಳಿ ತಲೆ ತೆಗೆಯಲಿಲ್ಲ, ಏನು ಹಣೇಬರಹ ಇದು. ನಾವು ಎಲ್ಲಿದ್ದೇವೆ, ಯಾವ ಜನ್ಮಕ್ಕೆ ಹೋಗುತ್ತಿದ್ದೇವೆ. ಆ ಕುಂಕುಮದ ರಾಶಿ, ಅರಶಿನದ ರಾಶಿ ಪುನಃ ಬೆಳಿಗ್ಗೆ ಅದು ಕಸದ ರಾಶಿ, ಕುರಿಯನ್ನು ಹೊಡೆಯುವುದಕ್ಕೆ ಆಗಲಿಲ್ಲ, ಕುಂಬಳಕಾಯಿಯನ್ನು ಹೊಡೆದುಬಿಟ್ಟರು. ನಾನು ಯೋಚನೆಯನ್ನು ಮಾಡಿದ್ದೆ. ನಾನು 4 ಕೋಳಿಗಳನ್ನು ತೆಗೆದುಕೊಂಡು ಹೋಗಿ ನಿಮ್ಮ ಪರವಾಗಿ ಹೊಡೆದು ಬಿಡೋಣ ಅಲ್ಲಿ ಎಂದುಕೊಂಡಿದ್ದೆ. ಎಲ್ಲೋ ಒಂದು ಮೌಢ್ಯತನ, ನಾವು ಯಾರು ಜವಾಬ್ದಾರಿ ಇರುವಂತಹವರು, ಇದನ್ನು ಬೀದಿಯಲ್ಲಿ ಹೋಗುವಂತಹ ಜನರು ಮಾಡಿದರೆ ನಾವು ತಕರಾರು ಮಾಡುವುದು ಬೇಡ. ನಾವು ಮಂತ್ರಿಗಳಾದವರು, ಮಂತ್ರಿಗಳ ಮಾತು ವೇದವಾಕ್ಯ, ಸರ್ಕಾರದ ಕೆಲಸ ದೇವರ ಕೆಲಸ, ಸರ್ಕಾರ ಎಂದರೆ ಯಾರು, ನೀವು, ನಾವು ಮಾಡುವಂತಹ ಕೆಲಸ ಯಾರಿಗೆ ತಲುಪುತ್ತದೆ? 5 ಕೋಟಿ ಕನ್ನಡಿಗರಿಗೆ ಹೋಗತಕ್ಕಂತಹ ಸಂದೇಶ. ಈ ಸಂದೇಶ ಏನು, ನಮ್ಮ ಮಂತ್ರಿ; ಕೈಮುಗಿದರು, ಒಬ್ಬರು ಪಾಪ ಅವರ ತಾಯಿಯ ಬಗ್ಗೆ ಗೌರವವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಅವರ ಮನೆಯಲ್ಲಿ ಒಳ್ಳೆಯ ಸುಪ್ಪತ್ತಿಗೆಯ ಛೇರನ್ನು ಮಾಡಿ ಕುಳ್ಳರಿಸಲಿ. ಇದ್ಯಾವುದು 3ನೇ ಮಹಡಿ ಕುರ್ಚಿಗೆ ತಾವು ಕುಳಿತುಕೊಳ್ಳಲಿ. ನಿಮ್ಮ ಆಶೀರ್ವಾದ ನಮಗೆ ಬೇಕು. ಇದು ಯಾಕೆ? ಏನು? ರಾಮಚಂದ್ರಗೌಡರು ನನ್ನ ಆತ್ಮೀಯ ಮಿತ್ರರು, ನಾನು ಮತ್ತು ಅವರು ಒಟ್ಟಿಗೆ ನಗರಸಭೆಯಲ್ಲಿ ಸುಮಾರು ಕಾಲ ಇದ್ದವರು. ಅವರು ಏತಕ್ಕಾಗಿ ಕುರ್ಚಿ ಕೆಳಗೆ ಬಿದ್ದರೋ ನನಗೆ ಅರ್ಥವಾಗಲಿಲ್ಲ. ಅವರು ಹಾಗೆಯೇ ಬಗ್ಗಿಬಿಟ್ಟರು. ಅವರು ಅಂತಹ ಆಸೆಯನ್ನು ಇಟ್ಟುಕೊಂಡವರೂ ಕೂಡ ಅಲ್ಲ. ಅಧಿಕಾರಕ್ಕೆ ಬಂದವರ ಪೈಕಿಯಲ್ಲಿ ಅವರಿಗೆ ಅರ್ಥವಾಗಿದೆ. ಅವರು ಆಸೆಯನ್ನು ಇಟ್ಟುಕೊಂಡು ಬಂದವರಲ್ಲ. ಏತಕ್ಕಾಗಿ ಈ ಕೆಲಸವನ್ನು ಮಾಡಿದರು. ನಾನು ತಮಗೆ ಈ ಮಾತನ್ನು ಹೇಳಬೇಕಾದಂತಹ ಪರಿಸ್ಥಿತಿ ಬಂದಿದೆ. ಇದು ನಿಜಕ್ಕೂ ನನಗನ್ನಿಸುತ್ತದೆ. ಇದು ಒಳ್ಳೆಯ ವಾತಾವರಣವಲ್ಲ. . ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆಗೆ ಹೋದರು. ಅವರು ಹೋಗಿರುವ ಒಂದು ಫೋಟೋ ಬಂತು. ಮುಖ್ಯಮಂತ್ರಿಗಳಿಗೆ ಪಾಪ ಜ್ಯೋತಿಷ್ಯದವರು ಇನ್ನು 5 ವರ್ಷಗಳ ಕಾಲ ನಿಮ್ಮ ಸರ್ಕಾರ ಇರುತ್ತದೆ ಎಂದು ಹೇಳಿದರು. ನಾನು ಅದನ್ನು ಪತ್ರಿಕೆಯಲ್ಲಿ ನೋಡಿದೆ. ಅವರೇ ಹೇಳಿಕೊಂಡಿದ್ದಾರೆ. ನಮಗೆ 20 ತಿಂಗಳು, ನಿಮಗೆ 20 ತಿಂಗಳು ಎಂದು. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೊಂಡು ಬಿಟ್ಟಿದ್ದಾರೆ. ಅವರು ಏನು ಹೇಳಿದರು, ಇನ್ನೂ ಸಂಪೂರ್ಣ ನೀವು 5 ವರ್ಷಗಳ ಕಾಲ ಅಧಿಕಾರದಲ್ಲಿರುತ್ತೀರಿ ಎಂದು ನಾನು ಪುನಃ ಬೆಳಿಗ್ಗೆ ಪೇಪರ್‌ನಲ್ಲಿ ನೋಡುತ್ತೇನೆ. ಈ ಪುರೋಹಿತರು ಧರ್ಮಸಿಂಗ್‌ರವರಿಗೆ

ಹೇಳಿದ್ದರು. ಇನ್ನೂ 5 ವರ್ಷಗಳ ಕಾಲ ಅಧಿಕಾರದಲ್ಲಿ ಇರುತ್ತೀರೆಂದು ಹೇಳಿದ್ದರು. ಏನು ಇದು? ದೇವೇಗೌಡರ ಬಗ್ಗೆ ಪೂರಾ ಹೇಳಿದ್ದಾರೆ. ಪಾಪ ಅವರ ಬಗ್ಗೆ ನಾನು ಚಕಾರವನ್ನು ಎತ್ತುವುದಕ್ಕೆ ಹೋಗುವುದಿಲ್ಲ. ಅವರು ಅದರ ಮೇಲೆ ನಂಬಿಕೆಯ ಮೇಲೆ ಪ್ರಧಾನಿಯಾಗಿದ್ದರು. ಅವರಿಗೆ ನಾನು ಹೇಳಿದ್ದೆ. ಪ್ರಧಾನಿಯಾಗಿದ್ದವರ ವಿರುದ್ಧ ಚುನಾವಣೆಗೆ ನಿಲ್ಲಬಾರದು ಎಂದು ನಾನು ಅನೇಕ ಕಡೆ ಹೇಳಿದ್ದೆ. ಯಡಿಯೂರಪ್ಪನವರು ಕೈಯಲ್ಲಿ ರುದ್ರಾಕ್ಷಿ ಕಟ್ಟಿದ್ದಾರೆ. ದಾರವನ್ನು ಕಟ್ಟಿದ್ದಾರೆ. ಮತ್ತು ಅವರು ಸದನಕ್ಕೆ ಬರುವಾಗ ವಿಭೂತಿ, ಕುಂಕುಮವನ್ನು ಹಚ್ಚಿಕೊಂಡು ಬಂದರು. ಇವರೆಲ್ಲಾ ನಮ್ಮ ಸುತ್ತ ಅಧಿಕಾರ ಬಂದ ತಕ್ಷಣ ಬಂದುಬಿಡುತ್ತಾರೆ. ಈಗ ನೋಡಿ ಧರಂಸಿಂಗ್ ಮನೆಯಲ್ಲಿ ಒಬ್ಬರೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಡಿಯೂರಪ್ಪನವರು ಹೇಳುವುದು ಏನೆಂದರೆ ವಾಟಾಳ್ ನಾಗರಾಜ್‌ರವರನ್ನೇ ನೋಡಿಕೊಂಡು ಅವನ್ನೆಲ್ಲಾ ಕಲಿತಿರುವುದು, ನಾನೇನು ಸ್ವಂತ ಮಾಡಲಿಕ್ಕೆ ಹೋಗಿಲ್ಲವೆಂದು.

ಶ್ರೀ ವಾಟಾಳ್ ನಾಗರಾಜ್ : ಆ ತರಹ ಅವರು ಸುಳ್ಳು ಹೇಳುವುದಿಲ್ಲ. ಈ ಮಾತನ್ನು ಖರ್ಗೆಯವರು ಹೇಳಬಹುದಷ್ಟೇ. ಯಡಿಯೂರಪ್ಪನವರು ಆ ರೀತಿ ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಸಹವಾಸವನ್ನು ಅವರು ಮಾಡಿರುವಷ್ಟು ನಾನು ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಷ್ಟು ಸಾರಿ ನಾವು, ನೀವು, ಛೇ, ಛೇ, ನಮ್ಮದು ನಿಮ್ಮದು, ರಮೇಶ್‌ಕುಮಾರ್‌ರವರದ್ದು ಒಸಿ ಸಹವಾಸವಿದೆಯೇ? ಅದನ್ನೆಲ್ಲಾ ಇಲ್ಲಿ ಹೇಳಬಾರದು ಬಿಡಿ. ಅಧ್ಯಕ್ಷರು ಎರಡೆರಡು ನಿಮಿಷಕ್ಕೂ ಗಡಿಯಾರ ನೋಡುತ್ತಿದ್ದಾರೆ. ಸರ್ ಬೇಗ ಮಾತನಾಡಿ ಮುಗಿಸಿಬಿಡ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಒಂದು ಗಂಟೆ ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ : ಉತ್ತರ ಕರ್ನಾಟಕದಲ್ಲಿ ಒಸಿ ಎಂದರೆ ಮಟ್ಕಾ ಎಂದು ಅರ್ಥ, ನಿಮ್ಮಾವ್ಯಾಗ ಒಸಿ ಆಡಲಿಕ್ಕೆ ಹೋದಿರಿ?

ಶ್ರೀ ವಾಟಾಳ್ ನಾಗರಾಜ್ : ಈಗ ಯಡಿಯೂರಪ್ಪನವರು ಬಹಳ ಪ್ರಯತ್ನವನ್ನು ಪಟ್ಟಿದ್ದಾರೆ. ಕುರಿಗೆ ಹುಲಿ ಚರ್ಮ ಹಾಕಿ, ಹುಲಿಯಂಥ ಆಯವ್ಯಯವನ್ನು ಮಾಡಬೇಕೆಂದು ಮಾಡಿದ್ದಾರೆ. ಹುಲಿ, ಹುಲಿ ಅಂದುಕೊಂಡರೆ ಅದರ ಚರ್ಮ ತೆಗೆದರೆ ಅದು ಕುರಿ. ಕತ್ತೆಗೆ ಕುದುರೆ ಚರ್ಮ ಹಾಕಿ, ಅದು ಕುದುರೆ, ಕುದುರೆ ಚರ್ಮ ತೆಗೆದರೆ ಅದು ಕುದುರೆಯಲ್ಲ. ಆಯವ್ಯಯ ಯಾವ ರೀತಿ, ಅದರಲ್ಲಿ ಯಡಿಯೂರಪ್ಪನವರು ಬಿಡಿ ಶಿಲ್ಪಿ, ಆ ವಿಚಾರದಲ್ಲಿ ಒಂದು ಭೂತವನ್ನು ಸೃಷ್ಟಿ ಮಾಡುವಂತಹವರು ಯಾರಾದರೂ ಕರ್ನಾಟಕ ರಾಜಕಾರಣದಲ್ಲಿದ್ದರೆ ಅದು ಯಡಿಯೂರಪ್ಪನವರು. ಇವತ್ತೇನಾದರೂ ರಾಷ್ಟ್ರಪ್ರಶಸ್ತಿಯನ್ನು ಕೊಡಿಸುವುದಾದರೆ ಅದು ಯಡಿಯೂರಪ್ಪನವರಿಗೆ ಕೊಡಿಸಬೇಕು. ಇಲ್ಲಿದ್ದಾಗಲೂ ಏನು ಸೃಷ್ಟಿ ಮಾಡಿಬಿಡುತ್ತಿದ್ದರೂ ವಾಟಾಳ್ ನಾಗರಾಜ್ ನೀವು ಸುಮ್ಮನಿರಿ ನಿನಗೆ ಗೊತ್ತಿಲ್ಲವೆನ್ನುತ್ತಿದ್ದರು. ಹಾಗೆ ಅಲ್ಲಿಯೂ ಒಂದು ಆಯವ್ಯಯವೆಂಬ ಭೂತವನ್ನು ಸೃಷ್ಟಿಮಾಡಿ ಈ ರಾಜ್ಯದ ಜನತೆಗೆ ಬಿಟ್ಟಿದ್ದಾರೆ. ಸರ್, ನನಗೆ ಅನ್ನಿಸುತ್ತಿದೆ ಅಂದು ಮಹಾಭಾರತ......

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಇಲ್ಲಿ ಹೇಳುತ್ತಿರುವ ಮಾತನ್ನು ರಸ್ತೆಯಲ್ಲಿ ಹೋಗಿ ಸಾರ್ವಜನಿಕವಾಗಿ ಹೇಳಿದರೆ ನಿಮ್ಮನ್ನು ಅವರು ಮನೆಗೆ ಹೋಗಲಿಕ್ಕೆ ಬಿಡುವುದಿಲ್ಲ. ಬಜೆಟ್ ಬಗ್ಗೆ ನೀವು ಇಲ್ಲಿ ಟೀಕೆ ಮಾಡಿದರೆ ನಡೆಯುತ್ತದೆ. ಸಾರ್ವಜನಿಕ ಸ್ಥಳದಲ್ಲಿ ನೀವು ಈ ರೀತಿ ಹೇಳಿದರೆ ಜನ ನಿಮ್ಮನ್ನು ಓಡಿಸಿಕೊಂಡು ಬಂದುಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಎಲ್ಲರೂ ಏನು ಹೇಳುತ್ತಾರೆಂದು ಹೇಳುತ್ತೇನೆ. ಏನು ಸ್ವಾಮಿ, ವಿರೋಧ ಪಕ್ಷದಲ್ಲಿದ್ದ ಯಡಿಯೂರಪ್ಪನವರೇ ಅಲ್ಲವೇ ಅಲ್ಲಿರುವುದು ಎಂದು, ಅದಕ್ಕೆ ಹೌದು ಅವರೇ ಕಣ್ರೀ ಎಂದೆ. ಅಲ್ಲಿ ಬೇರೆಯವರು ಬರಲಿಕ್ಕೆ ಸಾಧ್ಯವೇ, ಅದೇ ಯಡಿಯೂರಪ್ಪ, ಅದೇ ಈಶ್ವರಪ್ಪ, ಅದೇ ಜಗದೀಶ್ ಶೆಟ್ಟರ್, ಬೇರೆ ಯಾರೂ ಅಲ್ಲ, ಇಲ್ಲಿ ದಿನ ಓ ಎಂದು ಬಡಿದುಕೊಳ್ಳುತ್ತಿದ್ದರಲ್ಲಾ ಅವರೇ ಸ್ವಾಮಿ ಎಂದೆ. ಅದಕ್ಕೆ ಮತ್ತೆ ಬಜೆಟ್‌ನಲ್ಲಿ ಏನು ಇಲ್ಲವಲ್ಲಾ ಸ್ವಾಮಿ ಎಂದು ನನ್ನನ್ನು ಕೇಳಿದರು. ಅದಕ್ಕೆ ನಿಮ್ಮ ಹಣೆಬರಹಕ್ಕೆ ನಾನು ಏನು ಮಾಡಲಿಕ್ಕಾಗುತ್ತದೆ ಅಂದೆ. ನಾ ಮಾಡಿದ ಕರ್ಮ ಬಲವಂತವಾದರೇ ನೀ ಮಾಡುವುದು ಏನು ಹರಿಯೇ; ಇವರ ಹಣೆಬರಹ, ಇವರನ್ನು ನಂಬಿಕೊಂಡು ನಾವು ಕುಳಿತಿದ್ದೇವೆ. ಏನು ಮಾಡಲಿಕ್ಕಾಗುತ್ತದೆ? ನಮ್ಮ ಹಣೆಬರಹ ಹಾಗಿದ್ದರೆ ನಾವೇನು ಮಾಡಲಿಕ್ಕಾಗುತ್ತದೆ? ಸರ್, "ಅಂದು ಮಹಾಭಾರತ, ಇಂದು ಕುಮಾರಭಾರತ". ಮಹಾಭಾರತದಲ್ಲಿ ಅವತ್ತಿನ ಪ್ರತಿಯೊಂದು ಇತಿಹಾಸ ಮಹಾಭಾರತದ ದಶಾವತಾರ. ಅಂದು ಕೃಷ್ಣ, ಆ ಮಹಾಭಾರತದಲ್ಲಿ ತಮಗೆ ಹೇಳುತ್ತೇನೆ ಅಧ್ಯಕ್ಷರೇ, ಅಂದಿನ ಮಹಾಭಾರತದಲ್ಲಿ ಒಂದೇ ಒಂದು ಪ್ರಸಂಗ. ದ್ರೌಪದಿ ವಸ್ತ್ರಾಪಹರಣವನ್ನು ದುಶ್ಯಾಸನ ಮಾಡುವಾಗ ಕೃಷ್ಣ ಯಾವುದೇ ಭಯಭೀತಿ ಇಲ್ಲದೆ ಪಾಂಡವರು ತಲೆ ತಗ್ಗಿಸಿ ಕುಳಿತಿದ್ದರೂ ಕೃಷ್ಣ ಭರ್ ಎಂದು ಅಭಯ ಕೊಟ್ಟ. ಇಂದು ಕುಮಾರ ಭಾರತದಲ್ಲಿ ದ್ರೌಪದಿ ಧರಂಸಿಂಗ್. ಕುಮಾರ ಭಾರತದ ಕೃಷ್ಣ ಬೇರೆ, ಅದು ನನ್ನ ಅತ್ಯಂತ ಹಿರಿಯ ರಾಷ್ಟ್ರ ನಾಯಕರಾದ ದೇವೇಗೌಡರು. ಆ ಕಡೆಯಿಂದ ಧರ್ಮಸಿಂಗ್ ಅವರು ದ್ರೌಪದಿ, ಪಾಂಡವರು ಅಲ್ಲಿ ತಲೆ ತಗ್ಗಿಸಿ ಕುಳಿತಿದ್ದರು. ಇಲ್ಲಿ ಪಾಂಡವರು ಅಂದರೆ ಕಾಂಗ್ರೆಸ್‌ನವರು, ಇವರೂ ಶುರು ಮಾಡಿದರು. ಈ ದ್ರೌಪದಿಯ ಮಾನಭಂಗ ಪ್ರಸಂಗವಾಗಲಿ ಕಾಂಗ್ರೆಸ್‌ನವರೂ ಶುರು ಮಾಡಿದರು. ಅವರೂ ಶುರು ಮಾಡಿದರು. ಇಬ್ಬರೂ ಪಾಪ ಅನ್ಯಾಯ ಮಾಡಿದರು. ಅವರು ಒಬ್ಬ ಅಲ್ಪಸಂಖ್ಯಾತರು, ಒಕ್ಕಲಿಗರೋ ಲಿಂಗಾಯಿತರೋ ಆಗಿದ್ದರೆ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಆಗ ಅವರನ್ನು ಹೇಳುವವರು ಕೇಳುವವರು ಇರಲಿಲ್ಲ. ಆ ಪರಿಸ್ಥಿತಿ ಆಯಿತು. ಅವರ ಕಥೆ ಎಲ್ಲೋ ಒಂದು ಕಡೆ ಹೋಗಬೇಕಾದಂತಹ ಪರಿಸ್ಥಿತಿ ಬಂತು. ಬೇರೆ ಇನ್ನಾರಾಗಿದ್ದರೂ ಆ ರೀತಿ ಆಗುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ನಮಗೆ ಗೊಮ್ಮಟೇಶ್ವರನ ದರ್ಶನ.

ಅಧ್ಯಕ್ಷರು : ಆಯಿತು, ಬೇಗ ಮುಗಿಸಿ, ಒಂದು ಗಂಟೆಯಾಯಿತು.

ಶ್ರೀ ವಾಟಾಳ್ ನಾಗರಾಜ್ : ಮುಗಿಸುತ್ತೇನೆ. ಕೊನೆಗೆ ಬಂದುಬಿಟ್ಟಿದ್ದೇನೆ. ನಾನ್ಯಾಕೆ ಹೇಳುತ್ತೇನೆಂದರೆ ಯಾರೂ ಇವರ ರಕ್ಷಣೆಗೆ ಬರದೇ ಹೋದರಲ್ಲಾ. ಒಂದು ಕಡೆ ಕಾಂಗ್ರೆಸ್‌ನವರು ತಯಾರು ಅಂದರು ಮತ್ತೊಂದು ಕಡೆ ಇದು; ಏನಾಗುತ್ತದೆಂದರೆ ಕುಮಾರ ಭಾರತದಲ್ಲಿ ದ್ರೌಪದಿಯನ್ನು ರಕ್ಷಣೆ ಮಾಡಲಿಕ್ಕಾಗುವುದಿಲ್ಲ. ಕುಮಾರಭಾರತದಲ್ಲಿ ಕೃಷ್ಣ ದುರ್ಯೋಧನನಿಗೆ ದುಶ್ಯಾಸನನಿಗೆ ರಕ್ಷಣೆ ಕೊಟ್ಟನೇ ಹೊರತು ದ್ರೌಪದಿಗೆ ರಕ್ಷಣೆ ಕೊಡದೇ ಹೋದ. ಆ ಕೃಷ್ಣನೇ

ಬೇರೆ, ಈ ಕೃಷ್ಣನೇ ಬೇರೆ ಆದ್ದರಿಂದ ಕುಮಾರ ಭಾರತ ಈ ಯುಗದಲ್ಲಿ, ಆ ಯುಗದಲ್ಲಿ ಮಹಾಭಾರತ. ಇದು ಈ ಧರ್ಮಸಿಂಗ್ ಈ ಯುಗದ ದ್ರೌಪದಿ. ಆ ಯುಗದ ದ್ರೌಪದಿಯೇ ಬೇರೆ. ಆದುದರಿಂದ ಅವರು ಕೊನೆ ಘಳಿಗೆಯವರೆಗೆ ಇಲ್ಲಿ ಮತದಾನ ಆಗುತ್ತದೆ. ಬಹುಮತ ಬರುತ್ತದೆಂದು ಕಾದರು. ಕೊನೆಗಳಿಗೆಯವರಿಗೆ ಕೃಷ್ಣಪರಮಾತ್ಮನಾದ ದೇವೇಗೌಡರಿಂದ ನನಗೆ ಆಶೀರ್ವಾದ ಬರುತ್ತದೆಂದು ಕಾದರು. ದೇವರೇ ಕಾಪಾಡಿದರು. ಕೊನೆಗೆ ಮನೆಗೆ ಕಳುಹಿಸಿ ಬಿಟ್ಟರು. ಹೋಗೇ ಬಿಟ್ಟರು. ನಾನು ಆ ಕೃಷ್ಣ ಅಲ್ಲ, ಬೇರೆ ಕೃಷ್ಣ ಎಂದು. ನಿಮ್ಮ ಪಕ್ಕದಲ್ಲಿರುವವರಾದರು ಒಂದು ಟವೆಲ್ ಆದರೂ ಕೊಡಬೇಕಲ್ಲಾ. ಅದರಿಂದ ಅವರೂ ಮುಗಿಸಿಬಿಟ್ಟರು. ಇವರೂ ಮುಗಿಸಿಬಿಟ್ಟರು. ಆದುದರಿಂದ ಬೇರೆ ಪ್ರಶ್ನೆ ಇಲ್ಲ. ಅವರು ನಿರಪರಾಧಿ, ಒಬ್ಬ ನಿರಪರಾಧಿಯನ್ನು ಶಿಕ್ಷೆ ಮಾಡಿದರು. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಗಲ್ಲಿಗೇರಿಸಿದರು. ನೇಣುಗಂಭಕ್ಕೇರಿಸಿದರು. ಇದು ಬಹಳ.....

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ವಾಟಾಳ್‌ರವರೇ ಅದು ಹಾಗಲ್ಲ, ಜ್ಯೋತಿಷಿಯವರು ಹೇಳಿದ್ದರಂತೆ. ಮೂರು ಗಂಟೆ ದಾಟಲಿ, ನೀವು ಖಾಯಂ ಆಗ್ತೀರಿ ಎಂದು ಅದಕ್ಕಾಗಿ.....

ಶ್ರೀ ವಾಟಾಳ್ ನಾಗರಾಜ್ : ಅದು ನನಗೆ ಗೊತ್ತಿಲ್ಲ. ನಿಮ್ಮವರು ಅದೇನೇನು ಪಿತೂರಿ ಮಾಡಿದ್ದರೋ ನಮ್ಮ ಯಡಿಯೂರಪ್ಪನವರು ಏನೇನು ಪಿತೂರಿ ಮಾಡಿದ್ದರೋ ನಮಗೆ ಗೊತ್ತಾಗಲಿಲ್ಲ. ಹೆಚ್ಚು ಕಡಿಮೆ 8–10 ತಿಂಗಳುಗಳಿಂದ ಪಿತೂರಿ ನಡೆಯುತ್ತಿತ್ತು ಎಂದು ಕಾಣುತ್ತದೆ, ನನಗೆ ಗೊತ್ತಾಗಲಿಲ್ಲ. ಅಲ್ಲವೇ ಶೆಟ್ಟರ್? ಇದು ನಮಗೆ ಏನು ಆಯಿತು ಅನ್ನುವುದೇ ಗೊತ್ತಾಗಲೇ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲಿ ಇಬ್ಬರು ಶೆಟ್ಟರು ಇದ್ದಾರೆ ಯಾರು ಎಂದು ಗೊತ್ತಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಅನ್ನಿಸುತ್ತದೆ, ಈಗ ನಾನು ಕುಮಾರಸ್ವಾಮಿಯವರೇ ತಮಗೂ ಸಹ ಹೇಳುತ್ತೇನೆ. ತಮಗೆ ಈಗ ಅಧಿಕಾರ ಬಂದಿದೆ. ಸಂತೋಷ, ನಮಗೆ ಕೆಲವು ತಾತ್ವಿಕವಾದಂಥ ರಾಜಕಾರಣದಲ್ಲಿ ನಿಮ್ಮನ್ನು ವಿರೋಧ ಮಾಡುತ್ತೇವೆ. ಆದರೆ ವೈಯಕ್ತಿಕವಾಗಿ, ಪ್ರಾಮಾಣಿಕವಾಗಿ ನಿಮ್ಮ ಬಗ್ಗೆ ಯಾವುದೇ ವಿರೋಧವಿಲ್ಲ. ನಾವ್ಯಾಕೆ ನಿಮಗೆ ವಿರೋಧ ಮಾಡಬೇಕು? ನಿಮಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರವಿದೆ. ನಾವು ಎಲ್ಲೋ ಇದ್ದವರು ರೇಸ್‌ನಲ್ಲಿ ಎರಡು ರೂಪಾಯಿ ಕಟ್ಟಿದರೆ ಚಕ್ ಎಂದು ಜಾಕ್‌ಪಾಟ್ ಬಂದರೆ, ಯಾವ ಗಳಿಗೆಯಲ್ಲಿ ನಾವು ಏನಾಗುತ್ತೇವೆಂದು ಹೇಳಲಿಕ್ಕಾಗುವುದಿಲ್ಲ. ನಾಳೆ ಸರ್ ಎಂದು ಶ್ರೀಮಂತನಾಗಬಹುದು, ಪಕ್ಕದಲ್ಲಿ ಕುದುರೆ ಜೂಜಿನ ಮೈದಾನ, ಜಯಕುಮಾರ್‌ರವರೇ 10 ರೂಪಾಯಿಗಳನ್ನು ಕೊಟ್ಟರೆ ಚಕ್ ಎಂದು ಜಾಕ್‌ಪಾಟ್ ಬಂದರೆ ಏನೂ ಮಾಡಲಿಕ್ಕಾಗುವುದಿಲ್ಲ, ಇದೊಂದು ತರಹ ಜಾಕ್‌ಪಾಟ್. ಆದ್ದರಿಂದ ನಿಮಗೆ ಅವಕಾಶ ಸಿಕ್ಕಿದೆ. ಆದ್ದರಿಂದ ತಾವು ಇದನ್ನು ರಾಜಕೀಯ ಮಾಡದೆ, ದ್ವೇಷ ಮಾಡದೆ, ಅಸೂಯೆ ಮಾಡದೆ ನಿಮ್ಮ ಆಡಳಿತ ಎಲ್ಲೋ ಒಂದು ಕಡೆ ಪೂರ್ವಾಗ್ರಹವಾಗದೆ, ಪ್ರಾಮಾಣಿಕವಾಗಿ ಇರಬೇಕು. ಹೊಗಳುಭಟ್ಟರ ಸಂತೆ ಅಧಿಕಾರ ಇದ್ದ ಕಡೆ ಇರುತ್ತದೆ. ನಾನು ನೋಡುತ್ತಿದ್ದೆ, ಏನು ಕೃಷ್ಣರವರು ಇದ್ದಾಗ ಅವರ ಕಡೆ ಏನು ಜನ ಸಿಕ್ಕಾಪಟ್ಟೆ ಹೋಗುತ್ತಿದ್ದರು. ಪೂಜೆ ಪುನಸ್ಕಾರ ಮಾಡುವವರು, ಹೊಗಳುಭಟ್ಟರು, ಹಲಾಲಕೋರರು ಎಲ್ಲರೂ ಹೋಗುತ್ತಿದ್ದರು. ಆಮೇಲೆ ಕೃಷ್ಣ ಹೋದ ಮೇಲೆ ಪತ್ರಿಕೆಯ ಕೊನೆ ಪುಟಕ್ಕೂ ಒಂದೂ ಫೋಟೋ ಬರುವುದು ಕಡಿಮೆಯಾಗಿ

ಹೋಯಿತು. ಧರಂಸಿಂಗ್ ಅವರ ಪರಿಸ್ಥಿತಿ ನೋಡಿ. ಅವರ ಮನೆಯಲ್ಲಿ ಒಬ್ಬರೂ ಇಲ್ಲ. ಈಗ ನಿಮ್ಮ ಮನೆಯನ್ನು ಸೇರಿಕೊಂಡಿದ್ದಾರೆ. ನೀವು ಕರೆದ ತಕ್ಷಣ ನಿಮ್ಮ ಮನೆಗೆ ಬರುತ್ತಾರೆ. ಇಂಥವರ ಬಗ್ಗೆ ಎಚ್ಚರವಿರಲಿ. ಅದಾಗಲಿಲ್ಲವೆಂದರೆ ಈ ಜನ ಒಂದು ತರಹ ಜನ ಇವರೆಲ್ಲಾ ಕಡೆ ಇರತಕ್ಕಂಥ ಜನ; ಈಗ ಅದರ ಬಗ್ಗೆ ಒಂದು ತೀರ್ಮಾನವಾಗಿದೆ. ಅದೊಂದು ಕಾಲದಲ್ಲಿ 72–85 ರಿಂದಾಚೆಗೆ ದೇಶಪಾಂಡೆ ತತ್ವ ಸಿದ್ಧಾಂತಗಳು ಇವೆಲ್ಲಾ; ಈಗೇನಿದ್ದರೂ ಇದು ನಂಬರ್. ಎಷ್ಟು ಹಣ, ಎಷ್ಟು ಖರ್ಚು ಮಾಡುವುದು ಯಾವ ತರಹ ಮಾಡುವುದು, ಯಾರೂ ಬೇಕಾದರೂ ಪ್ರಧಾನಿಯಾಗಬಹುದು, ಮುಖ್ಯಮಂತ್ರಿಯಾಗಬಹುದು, ದೇಶದ ಅನೇಕ ಕಡೆ ಮುಖ್ಯಮಂತ್ರಿಯಾಗಿರುವಂಥವರೆಲ್ಲಾ ಏನು? ಹಣವೇ, ಇದೊಂದು ತರಹ ಹರಾಜು, ಇತ್ತೀಚಿನ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿ, ಮಂತ್ರಿಗಳ ಹರಾಜು, ಎಷ್ಟು ಏನು ಎಂಬ ತಳಹದಿಯ ಮೇಲೆ, ಹರಾಜು ಎಂದರೆ ಆ ವಿಧಾನವೇ ಬೇರೆ, ಆ ರೀತಿ ಹರಾಜು ಆಗುತ್ತದೆ, ತತ್ವ ಸಿದ್ಧಾಂತಗಳು ಹೇಳಿದಂತಹವರ ಫೋಟೋಗಳು ನಿಮ್ಮ ನಿಮ್ಮ ಮನೆಗಳಲ್ಲಿದ್ದರೆ ಅದನ್ನೆಲ್ಲಾ ಕಟ್ಟಿ ಒಂದು ಮೂಲೆಗೆ ಹಾಕಿ. ತತ್ವ ಸಿದ್ಧಾಂತದ ಪುಸ್ತಕಗಳನ್ನೆಲ್ಲಾ ಬೆಂಕಿಗೆ ಹಾಕಿ. ನಿಮ್ಮ ಪ್ರಣಾಳಿಕೆಗಳನ್ನೆಲ್ಲಾ ಕಸದ ತೊಟ್ಟಿಗೆ ಹಾಕಿ, ಹಣವನ್ನು ಇಟ್ಟುಕೊಂಡು ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ನೀವು ಹಣ ಖರ್ಚು ಮಾಡುತ್ತೀರಿ, ಎಷ್ಟೆಷ್ಟು ಸಾರಾಯಿ ಹೆಂಡ ಹಂಚಿ ಹಣ ಖರ್ಚು ಮಾಡಿ ಗೆದ್ದು ನಂಬರ್ ತೆಗೆದುಕೊಳ್ಳಿ, ಈಗ ಏನು 45 ಆದರೆ ಸಾಕು, 55 ಆದರೆ ಸಾಕು ಮುಖ್ಯಮಂತ್ರಿಯಾಗಲು, 60 ಆದರೆ ಸಾಕು ಮುಖ್ಯಮಂತ್ರಿಯಾಗಲು, ನಾನು ಎಷ್ಟೇ ಪ್ರಯತ್ನ ಮಾಡಿದರೂ ಆಗುವುದಕ್ಕೆ ಆಗುವುದಿಲ್ಲ. ನೋಡೋಣ ಆದರೆ ಒಂದು ಸಲ ಪ್ರಯತ್ನ ಪಡುತ್ತೇನೆ. ಆಗುತ್ತದೋ ಇಲ್ಲವೋ ನನಗಂತೂ ಗೊತ್ತಿಲ್ಲ. ಆ ರಾಜಕೀಯವೆಲ್ಲಾ ನನಗೆ ಗೊತ್ತಿಲ್ಲ. ತಮ್ಮ ಅಧಿಕಾರಾವಧಿಯಲ್ಲಿ ತಾವು ಮಾಡಬೇಕಾದ ಕರ್ತವ್ಯ ಇದು. ಆದರೆ ಮಾನ್ಯ ಯಡಿಯೂರಪ್ಪನವರು ಎಷ್ಟೇ ಸ್ನೇಹಿತರಾಗಿದ್ದರೂ ನೀವು ಅವರ ತತ್ವ ಸಿದ್ಧಾಂತಗಳ ಬಗ್ಗೆ ಎಲ್ಲೋ ಒಂದು ಕಡೆ ಆ ಸಮುದ್ರದಲ್ಲಿ ಮುಳುಗುತ್ತೀರಿ. ನಿಮಗೆ ಎಷ್ಟೇ ಈಜು ಹೊಡೆಯುವ ಬುದ್ಧಿವಂತಿಕೆಯಿದ್ದರೂ ನೀವು ಮುಳುಗುತ್ತೀರಿ. ನಾಳೆ ಒಂದು ದಿನ ಎಂತಹ ಹೆಂಡತಿಯನ್ನು ನಾನು ಕಟ್ಟಿಕೊಂಡೆ. ಈ ಗಯ್ಯಾಳಿ ಹೆಂಗಸಿನ ಹಣೆಬರಹದಲ್ಲಿ ನನ್ನ ಗತಿ ಏನು ಅಂತ ಹೇಳಿ ನಮ್ಮಗಳ ಹತ್ತಿರವೇ ಬಂದು ಹೇಳತಕ್ಕಂಥ ಕಾಲ ಬಂದರೂ ಬರಬಹುದು, ಅದನ್ನು ನಾನೇನೂ ತಳ್ಳಿ ಹಾಕುವಂತಹ ಮಟ್ಟದಲ್ಲಿ ಇಲ್ಲ. ನಿಮ್ಮ ಈ ಒಂದು ವ್ಯವಸ್ಥೆಯನ್ನು ನೋಡಿ ಅಲ್ಪಸಂಖ್ಯಾತರಿಗೆ ಮುಸಲ್ಮಾನರಿಗೆ ಒಂದು ರೀತಿಯಲ್ಲಿ ಭಯ ಬಂದುಬಿಟ್ಟಿದೆ. ಭಯಭೀತಿ, ಹೇಗಪ್ಪಾ ನಾವು ಬೀದಿಗೆ ಬರುವುದು? ಬರುತ್ತೇವೆಯೋ, ಹೋಗುತ್ತೇವೆಯೋ ಏನು ನಮ್ಮ ಹಣೆಬರಹ ಏನು ಎನ್ನತಕ್ಕಂಥ ಭಾವನೆ ಇಡೀ ರಾಜ್ಯದಲ್ಲಿ ನಿರ್ಮಾಣವಾಗಿದೆ. ಆದ್ದರಿಂದ ಈ ನಿರ್ಮಾಣ ಆಗಿರುವುದನ್ನು ಬದಲಾವಣೆ ಮಾಡಬೇಕಾದರೆ ನಿಮ್ಮಿಂದ ಹೊಸ ಒಂದು ಅಧ್ಯಾಯ ಪ್ರಾರಂಭವಾಗಬೇಕು. ಮತ್ತು ಮಹಿಳೆಯರ ಬಗ್ಗೆ ನಿಮಗೆ ಒಳ್ಳೆಯ ಅಭಿಪ್ರಾಯ ಇಲ್ಲ ಎನ್ನುವುದಕ್ಕೆ ಇಷ್ಟು ಹೊತ್ತಿಗೆ ಆಗಲೇ ಮಹಿಳಾ ಮಂತ್ರಿಯನ್ನು ಮಾಡಬೇಕಾಗಿತ್ತು ಎಲ್ಲಿ ಮಾಡಿದ್ದೀರಿ ನೀವು? ಏಕೆ ಮಾಡಲಿಲ್ಲ ನೀವು? ಮಹಿಳೆಯರ ಕೊರತೆ ಇದೆಯಾ ನಿಮಗೆ? ಏಕೆ ಮಾಡಲಿಲ್ಲ ಹೇಳಿ. ಮಹಿಳಾ ಮಂತ್ರಿ ಒಬ್ಬರನ್ನು ನೀವು ಸ್ಪಷ್ಟವಾಗಿ ಮಾಡಬೇಕಾಗಿತ್ತು. ಎಲ್ಲಿ ಮಾಡಿದಿರಿ ನೀವು? ಮಾಡಲೇ ಇಲ್ಲವೇ. ನೀವು ಏತಕ್ಕೋಸ್ಕರ ಮಾಡಲಿಲ್ಲ? ಯಾವ ಉದ್ದೇಶಕ್ಕಾಗಿ ನೀವು ಮಾಡಲಿಲ್ಲ ಕಾರಣವೇನು? ಮಾಡಬೇಕಾಗಿತ್ತು. ಈಗ ಅನೇಕರು

ನಾನು ಹೇಳುತ್ತೇನೆ ಇಲ್ಲಿ ಈ ಒಂದು ಮಹಾಭಾರತ ಕುಮಾರ ಭಾರತದಲ್ಲಿ ಪ್ರಕಾಶ್‌ರವರ ಹಣೆಬರಹವನ್ನು ದೇವರೇ ಕಾಪಾಡಬೇಕು. ಪಾಪ ಒಂದು ಶಕ್ತಿ ಮೇಲೆ ಹೋರಾಟ ಮಾಡಿ ಮಾನ್ಯ ಸಿದ್ದರಾಮಯ್ಯನವರು ಹೊರಗಡೆ ಬಂದರು. ಆ ಶಕ್ತಿ, ಆ ಒಂದು ಚೈತನ್ಯದ ಬಗ್ಗೆ ನನಗೆ ಬಹಳ ಪ್ರಾಮಾಣಿಕವಾದಂತಹ ನಂಬಿಕೆ ಇದೆ. ಆ ಶಕ್ತಿಯೇ ನಾಳೆ ದೊಡ್ಡ ಬೃಹದಾಕಾರವಾಗತಕ್ಕಂಥಾದ್ದು, ಮಹಾಶಕ್ತಿ, ಅದೇ ಮಹಾಶಕ್ತಿ ಮಾನ್ಯ ಪ್ರಕಾಶ್ ಹೊರಗಡೆ ಬಂದಿದ್ದರೆ ಧೃವತಾರೆ ಆಗಿರುತ್ತಿದ್ದರು. ನಾನು ಇವತ್ತು ಹೇಳುತ್ತೇನೆ. ಇವತ್ತು ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಪ್ರಕಾಶ್ ಬಗ್ಗೆ ನನಗೆ ಬಹಳ ಗೌರವವಿದೆ. ಏಕೆ ಇಷ್ಟು ಅವರ ಪರಿಸ್ಥಿತಿ ಇಷ್ಟೊಂದು ಹೀನಾಯವಾಗಿ, ಬಡತನಕ್ಕಿಂತಲೂ ಕೊನೆಯ ಪರಿಸ್ಥಿತಿ ನಿರ್ಮಾಣವಾಯಿತಲ್ಲಾ ಎನ್ನುವ ನೋವು ನನಗೆ ಎಲ್ಲೋ ಒಂದು ಕಡೆ ಇದೆ. ಮಾನ್ಯ ಮಂಜುನಾಥ್ ಪಾಪ 67ರ ವಯಸ್ಸಿನ ಅತ್ಯಂತ ಹಿರಿಯ ವ್ಯಕ್ತಿ. ಈ ಸದನದಲ್ಲಿ ಒಂದು ವರ್ಷ ಅಲ್ಲಿ ಕುಳಿತಿದ್ದಂತಹವರು. ಮಂಜುನಾಥ್‌ರವರ ಪರಿಸ್ಥಿತಿ, ಏನಾಯಿತು ಎಂಬುದು ನನಗೆ ಅರ್ಥವಾಗಲಿಲ್ಲ. ಆದ್ದರಿಂದ ಎಲ್ಲರೂ ಎಚ್ಚರ, ಈ ರಾಜ್ಯದ ಬಗ್ಗೆ ಎಚ್ಚರ. ಆದ್ದರಿಂದ ತಮಗೆ.....

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಫಸ್ಟ್ ಟೈಮ್ ನಮ್ಮ ಕನ್ನಡ ಚಳುವಳಿ ನಾಯಕರು ಈ ತರಹ ಮಾತನಾಡುತ್ತಿದ್ದಾರಲ್ಲಾ ಅಂತ ಎಲ್ಲರೂ ಆಶ್ಚರ್ಯಪಡುತ್ತಿದ್ದಾರೆ. ಫಸ್ಟ್ ಟೈಮ್ ನಮ್ಮ ನಾಯಕರು, ಕನ್ನಡ ಚಳುವಳಿ ನಾಯಕರು ಮಾನ್ಯ ವಾಟಾಳ್ ನಾಗರಾಜ್‌ರವರು ಫಸ್ಟ್ ಟೈಮ್ 1985 ರಿಂದ ಈ ರೀತಿ ಆಗಿದೆ ಅಂತ ಹೇಳಿ ಫಸ್ಟ್ ಟೈಮ್ ಈ ತರಹ ಮಾತನಾಡು-ತ್ತಿದ್ದಾರೆಂದು ಎಲ್ಲರಿಗೂ ಆಶ್ಚರ್ಯವಾಗುತ್ತಿದೆ. ಯಾವಾಗಲೂ ಕೂಡ ನಾಯಕರಾದವರಿಗೆ ನಿಮ್ಮ ಬೆಂಬಲ ಇರುತ್ತಿತ್ತು. ಫಸ್ಟ್ ಟೈಮ್ ಈ ತರಹ ಆಗಿದ್ದಾರೆ ಅಂತ ಎಲ್ಲರಿಗೂ ಆಶ್ಚರ್ಯವಾಗುತ್ತಿದೆ ಅಂತ ಹೇಳಿದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ಪ್ರತಿ ಸಲ ಸರ್ಕಾರದ ಪರವಾಗಿ ವಕಾಲತ್ತು ವಹಿಸುತ್ತಿದ್ದಿರಿ. ಆದರೆ ಈಗ ಸ್ವಲ್ಪ ಧ್ವನಿ ಚೇಂಜ್ ಆಗಿದೆ ಅಂತ ಹೇಳುತ್ತಿದ್ದಾರೆ.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಿ.ಟಿ. ದೇವೇಗೌಡರು, ನಮ್ಮ ವೆಂಕಟೇಶ್, ಮಹದೇವಪ್ರಸಾದ್ ಮತ್ತು ಡಿ.ಟಿ. ಜಯಕುಮಾರ್ ಇವರು ಎಲ್ಲರೂ ಬೆಳೆದಿದ್ದು ಸಿದ್ದರಾಮಯ್ಯನವರ ಆಲದ ಮರದ ಕೆಳಗೆ ಬೆಳೆದಿದ್ದು, ನೀವೆಲ್ಲಾ ಕೈ ಬಿಡುತ್ತೀರಿ ಅಂತ ನಮಗೇನು ಗೊತ್ತಿತ್ತು?

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಮಗೆ ಗೊತ್ತಿಲ್ಲ. ಮಾನ್ಯ ಸಿದ್ದರಾಮಯ್ಯನವರ ಆಲದ ಮರದ ಕೆಳಗೆ ನಾವು ಬೆಳೆದಿಲ್ಲ. ಸಿದ್ದರಾಮಯ್ಯನವರು ಹೇಗೆ ಬೆಳೆದಿದ್ದಾರೆಂಬುದು ನಿಮಗೇ ಗೊತ್ತಿಲ್ಲ. ನಿಮಗೆ ಗೊತ್ತಿಲ್ಲ ಅದು. ಅಲ್ಲಿ ನೀವು ಎಡವಿಬಿಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಹೌದಾ, ಛೇ, ಛೇ... ತಾವು ಸತ್ಯವನ್ನೇ ನುಡಿಯಬೇಕು..... ಸತ್ಯವನ್ನಲ್ಲದೆ ಬೇರೆ ಏನನ್ನೂ ಹೇಳಬಾರದು...

ಶ್ರೀ ಜಿ.ಟಿ. ದೇವೇಗೌಡ : ನಾನು ಸತ್ಯವನ್ನೇ ನುಡಿಯುವುದು. ಅವರನ್ನೇ ಕೇಳಿ ಅವರು ಹೇಗೆ ಬೆಳೆದಿದ್ದಾರೆ ಅಂತ. ಅವರು ಯಾವ ಆಲದ ಮರದ ಕೆಳಗೆ ಬೆಳೆದರು ಅಂತ ಹೇಳಲಿ. ಅವರು ದೇವೇಗೌಡರ ಆಲದ ಮರದ ಕೆಳಗೆ ಸಿದ್ದರಾಮಯ್ಯನವರು ಬೆಳೆದಿದ್ದು......

(ಗೊಂದಲ)

(ಒಟ್ಟಿಗೆ 4-5 ಜನ ಮಾನ್ಯ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಜಿ.ಟಿ. ದೇವೇಗೌಡ : ಶ್ರೀ ಹೆಚ್.ಡಿ. ದೇವೇಗೌಡರು ದೊಡ್ಡ ಆಲದ ಮರ. ಆ ಆಲದ ಮರದ ಕೆಳಗೆ ಸಿದ್ದರಾಮಯ್ಯನವರು ಇರಲಿ, ಬೇರೆ ಯಾರೇ ಇರಲಿ ಬೆಳೆದಿರತಕ್ಕಂಥಾದ್ದು; ಸಿದ್ದರಾಮಯ್ಯನವರ ಆಲದ ಮರವಲ್ಲ. ನಾವು ಅವರನ್ನು ಬೆಳೆಸಿರುವುದು. ಅವರೇ ಹೇಳಲಿ....

(ಗೊಂದಲ)

(4-5 ಜನ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಜಿ.ಟಿ. ದೇವೇಗೌಡ : ಅವರು ಹೇಳಲಿ.....

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ತಾವು ಮುಗಿಸುತ್ತೀರೋ ಇಲ್ಲವೋ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ಪ್ಲೀಸ್ ಒಂದು ನಿಮಿಷ.....

ಅಧ್ಯಕ್ಷರು : ತಾವು ಮುಗಿಸಿಬಿಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ಒಂದು ನಿಮಿಷ ಸ್ವಲ್ಪ ಅವಕಾಶ ಕೊಡಿ. ಇಲ್ಲಿ ಯಾರು ಯಾರ ಕಡೆಗೆ ಬೆಳೆದರು ಎನ್ನುವುದನ್ನು ಹೇಳಿದಿರಲ್ಲಾ, ಈಗ ಪಾಪ ನಮ್ಮ ಜಿ.ಟಿ.ದೇವೇಗೌಡ ಪದೇ ಪದೇ ಅನೇಕ ಸಲ ಹೇಳುತ್ತಿದ್ದಾರೆ. ಸಿದ್ದರಾಮಯ್ಯನವರನ್ನು ನಾನೇ ಕರೆದುಕೊಂಡು ಬಂದೇ ರಾಜಕೀಯಕ್ಕೆ ಎಂದು. ನಾನೇ ಬೆಳೆಸಿದೆ, ಅವರು ಇನ್ನೊಬ್ಬರ ಕೈ ಕೆಳಗಡೆ ಬೆಳೆದರು. ನನ್ನಿಂದ ಅವರಿಂದ ನಾನೇನೂ ಬೆಳೆದಿಲ್ಲ. ನಾನೇ ಅವತ್ತು ಅವರನ್ನು ಬೆಳೆಸಿದೆ ಅಂತ ಯಾವತ್ತೂ ಹೇಳಲಿಲ್ಲ ಯಾರಿಗೂ ನಾನು ಜಿ.ಟಿ ದೇವೇಗೌಡರನ್ನು ಬೆಳಸಿದೆ ಅಂತ ನಾನು ಯಾವಾಗಲೂ ಯಾರಿಗೂ ಹೇಳಿಲ್ಲ. ಈ ಜಿ.ಟಿ. ದೇವೇಗೌಡರೇ ಹೇಳುತ್ತಾರೆ ನಾನು ಸಿದ್ದರಾಮಯ್ಯನವರನ್ನು ಬೆಳೆಸಿದೆ ಅಂತ. ಇಡೀ ಮೈಸೂರು ನಗರದ ಜನರಿಗೆ ನಾನು ಹೇಗೆ ರಾಜಕೀಯವಾಗಿ ಬೆಳೆದಿದ್ದೇನೆ. ನೀವು ಹೇಗೆ ಬೆಳೆದಿದ್ದೀರಿ ಅಂತ ಗೊತ್ತಿದೆ. ನನ್ನನ್ನು ನೀನು ಬೆಳೆಸುವುದಕ್ಕೆ ಆಗುವುದಿಲ್ಲ. ಬೆಳೆಸಿಯೂ ಇಲ್ಲ. ನೀವು ಬೆಳೆಸಿದ್ದೀರಿ ಅಂತ ನಾನು ಎಲ್ಲೂ ಹೇಳೇ ಇಲ್ಲ. ನೀವೇ ನನ್ನನ್ನು ಬೆಳೆಸಿದ್ದೇನೆ ಅಂತ ಹೇಳಿದ್ದೀರಲ್ಲಾ.

ಶ್ರೀ ಜಿ.ಟಿ. ದೇವೇಗೌಡ : ನಾನು ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ : ಈಗ ಹೇಳಿದಿರಿ, ಅಲ್ರಿ, ಸಿದ್ದರಾಮಯ್ಯನವರನ್ನು ಹೋಗಿ ನಾನೇ ಕರೆದುಕೊಂಡು ಬಂದಿದ್ದು, ಅವರು ಎಲ್ಲೋ ಕುಳಿತಿದ್ದರು. ಅಂತ ಹೇಳಿದಿರಿ.

ಶ್ರೀ ಜಿ.ಟಿ. ದೇವೇಗೌಡ : ಅದನ್ನು ನಾನು ಮಾಡಿದ್ದೇನೆ. ಕೋರ್ಟಿನಿಂದ ಕರೆದುಕೊಂಡು ಬಂದು.....

ಶ್ರೀ ಸಿದ್ದರಾಮಯ್ಯ : ಕೂರ್ರಿ, ಸುಳ್ಳು ಹೇಳುವುದಕ್ಕೆ ಇತಿಮಿತಿ ಇರಬೇಕು. ನಾನು ರಾಜಕೀಯಕ್ಕೆ ಬಂದಾಗ ಈ ಜಿ.ಟಿ. ದೇವೇಗೌಡ ಎಲ್ಲಿದ್ದರೋ ಗೊತ್ತಿಲ್ಲ. ಇವರು ಯಾರಿಗೂ ಗೊತ್ತಿಲ್ಲ. He was unkown in Mysore District. ಆ ತರಹದ ಜಂಬದ ಮಾತುಗಳನ್ನು ನಾನು ಇವತ್ತಿನವರೆಗೆ ಸಾರ್ವಜನಿಕವಾಗಿ ಹೀಗೆ ಒಬ್ಬರನ್ನು ಕರೆದುಕೊಂಡು ಬೆಳೆಸಿದ್ದೇನೆಂದು ಹೇಳಿಲ್ಲ.

ಅಧ್ಯಕ್ಷರು : ಜನಕ್ಕೆ ಎಲ್ಲಾ ಗೊತ್ತಿದೆ ಇಲ್ಲಿ ಏಕೆ ಇವೆಲ್ಲಾ?

ಶ್ರೀ ಸಿದ್ದರಾಮಯ್ಯ : ಇಡೀ ಮೈಸೂರು ಜಿಲ್ಲಾ ಜನರಿಗೆ ಗೊತ್ತಿದೆ. ಜನರಿಗೆ ಬಿಡೋಣ.

ಶ್ರೀ ಜಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಣ್ಣನವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಮಾನ್ಯ ಹೆಚ್.ಡಿ. ದೇವೇಗೌಡರಿಂದ ಮಾನ್ಯ ಸಿದ್ದರಾಮಣ್ಣನವರು ಬೆಳೆದಿರುವುದು ಅಂತ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಜಿ.ಟಿ ದೇವೇಗೌಡ : 1989ರಲ್ಲಿ ನೀವು ಪಾರ್ಲಿಮೆಂಟ್ ಚುನಾವಣೆಗೆ ನಿಂತು 8 ಸಾವಿರ ಓಟು ತೆಗೆದುಕೊಂಡಿದ್ದು. ನಾವೂ ಎಲ್ಲಾ ಮಾಡಿದ್ದೇವೆ. ನಾವು ನಿಮಗೋಸ್ಕರ ದುಡಿದಿದ್ದೇವೆ. ಹೇಳಿ. ನೀವೇನು ಮಾಡಿದ್ದೀರಿ ನಾನು ಏನು ಮಾಡಿದ್ದೇನೆ ಅಂತ ಹೇಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಯಾರ್‍ಯಾರ ಯೋಗ್ಯತೆ ಎಷ್ಟೆಷ್ಟು ಎಂಬುದು ಜನರಿಗೆ ಗೊತ್ತಿದೆ. ನೀವು ಇಲ್ಲಿ ಮಾತನಾಡಿಬಿಟ್ಟರೆ ಗೊತ್ತಾಗುತ್ತಾ? ಆದ್ದರಿಂದ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಏಕೆ ಟೈಮ್ ವೇಸ್ಟ್ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೇ, ಮಾನ್ಯ ಜಿ.ಟಿ. ದೇವೇಗೌಡರೇ ತಾವುಗಳು ಕುಳಿತುಕೊಳ್ಳಿ.......

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೇ, ಹಿರಿಯ ಸದಸ್ಯರಾಗಿದ್ದೀರಿ, ದೇವೇಗೌಡರೇ, ಕುಳಿತುಕೊಳ್ಳಿ. ನಿಮ್ಮ ಮೇಲೆ ನೀವೇ ಕೆಸರನ್ನೇತಕ್ಕೆ ಎರಚಿಕೊಳ್ಳುತ್ತೀರಿ? ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಇದೇನು ರಣರಂಗವಾಯಿತಲ್ಲಪ್ಪ.

ಮಾನ್ಯ ಸದಸ್ಯರೊಬ್ಬರು : ಅಧ್ಯಕ್ಷರೆ, ಇವರಿಬ್ಬರನ್ನೂ ಹೊರಗಡೆಗೆ ಕುಳುಹಿಸಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಸದನವನ್ನು 5 ನಿಮಿಷಗಳ ಕಾಲ ಮುಂದೂಡಿ.

ಶ್ರೀ ಎನ್. ಧರ್ಮಸಿಂಗ್ : ಅಧ್ಯಕ್ಷರೆ, ಇಡೀ ಕರ್ನಾಟಕ ನೋಡುತ್ತಿದೆ......

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು 5 ನಿಮಿಷ ಸದನವನ್ನು ಮುಂದೂಡಿ..... ಅಧ್ಯಕ್ಷರೆ, 5 ನಿಮಿಷ ಮುಂದೂಡಿ ಎಂದು ಹೇಳುತ್ತಿದ್ದೇನೆ. 5 ನಿಮಿಷ ಮುಂದೂಡಿದರೆ ಗಂಟೇನೂ

ಹೋಗುತ್ತದೆ. ಇದೇನಿದು? ಏನು ಮುಖ್ಯಮಂತ್ರಿಗಳು ನೋಡಿಕೊಂಡು ಕುಳಿತಿದ್ದೀರಿ. ನೀವು ಅಪೀಲ್ ಮಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಈ ರಾಜಕೀಯ ಏತಕ್ಕೆ ಮಾಡಬೇಕು; ಬಜೆಟ್ ಮೇಲೆ ಭಾಷಣ ಮಾಡಬೇಕು, ಬರೀ ಅವರು ಬೆಳೆಸಿದರು, ಇವರು ಬೆಳೆಸಿದರೆಂಬುದನ್ನು ಇಲ್ಲಿ ಏತಕ್ಕೆ ಎತ್ತಬೇಕು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಬ್ಬರೂ ಸುಮ್ಮನೆ ಇರಿ ಎಂದು ಹೇಳಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ಏತಕ್ಕೆ ಹೇಳಬೇಕು?

ಅಧ್ಯಕ್ಷರು : ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವನ್ನು 4 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಸಂಜೆ ಪುನಃ 4 ಗಂಟೆ 52 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿದ್ದರು)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಒಂದು ಪರಿಸ್ಥಿತಿಯಲ್ಲಿ ನಾನು ಮಾತನಾಡುವ ಮಟ್ಟದಲ್ಲಿ ಇಲ್ಲ. ನನಗೆ ಏನೋ ಒಂದು ರೀತಿ ಇಲ್ಲಿ ಏನು ಮಾತನಾಡಬೇಕು ಎನ್ನುವುದು ಬಹಳ ಕಷ್ಟ ಆಗಿದೆ. ಪ್ರಾಮಾಣಿಕವಾಗಿ ಹೇಳುತ್ತೇನೆ.

ಅಧ್ಯಕ್ಷರು : ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾಳೆಗೆ ಸಭೆಯನ್ನು ಅಡ್ಜರ್ನ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಬಹಳ ಕಷ್ಟ ಆಗಿದೆ. ನಮಗೆ ರಕ್ಷಣೆ ಇಲ್ಲದ ಮೇಲೆ ಈ ಸದನದಲ್ಲಿ ಮಾತನಾಡಬಾರದು. ನಾವು ಶಾಸಕರಾಗಿ ಇರುವುದು ಸರಿಯಲ್ಲ. ನಮಗೆ ನೀವು ರಕ್ಷಣೆ ಕೊಡಲಿಲ್ಲವೆಂದರೆ ನಾವೇನು ಮಾಡುವುದಕ್ಕೆ ಆಗುತ್ತದೆ? ನನಗೇ ಒಬ್ಬರು ಎದ್ದು ಏನು ಎರಡು ಕೈ ಮೇಲೆ ಎತ್ತಿಕೊಂಡು ಇಲ್ಲಿ ಬರುತ್ತಿದ್ದರು. 1967ರಿಂದ ಈ ಸದನದಲ್ಲಿ ನಾನು ಇದ್ದೇನೆ. ಒಬ್ಬರೂ ಸಹ ಇದುವರೆಗೆ ನನ್ನ ಬಗ್ಗೆ ಈ ತರಹ ಮಾಡಿರಲಿಲ್ಲ. ನಾವೇನು ಮಾತನಾಡಿದ್ದೇವೆ? ಇಲ್ಲಿ ನಾವೇನು ಮಾತನಾಡಬಾರದೇ? ಏನು ಹುಡುಗಾಟ ಇದು? ಏನು ಸದನ ಇದು? ಯಾವುದಕ್ಕೋಸ್ಕರ ಇಂತಹ ನಮ್ಮ ಪರಿಸ್ಥಿತಿ? ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ನನ್ನಂಥವನಿಗೆ 1967ನೇ ಇಸವಿಯಿಂದ ಇಲ್ಲಿರತಕ್ಕ ಹಿರಿಯ ಸದಸ್ಯನಿಗೆ ಈ ಪರಿಸ್ಥಿತಿ ಆದರೆ ನಾವು ಏಕೆ ಇಲ್ಲಿ ಉಳಿಯಬೇಕು? ನಾವು ಸದನದಲ್ಲಿ ಏಕೆ ಇರಬೇಕು? ತಾವು ಹೇಳಿ. ನಿಮಗೆ ಎರಡು ಕೈ ಮುಗಿದು ಹೇಳುತ್ತೇನೆ. ಈ ಸದನಕ್ಕೆ ನಾನು ಕೈ ಮುಗಿಯುತ್ತೇನೆ. ನಮಗೆ ನೀವು ಸಹಕಾರ ಕೊಡದೇ ಇದ್ದರೆ ನಮಗೆ ರಕ್ಷಣೆ ಕೊಡದೇ ಇದ್ದ ಮೇಲೆ ನಾವ್ಯಾಕೆ ಇಲ್ಲಿರಬೇಕು? ಏನು ಮಾಡಬೇಕು ನಾವು ಇಲ್ಲಿ?

ಅಧ್ಯಕ್ಷರು : ಮಾನ್ಯ ನಾಗರಾಜ್ ಅವರೇ......

ಶ್ರೀ ವಾಟಾಳ್ ನಾಗರಾಜ್ : ನಾವು ಏನು ಮಾಡಬೇಕು ಇಲ್ಲಿ? ಯಾವುದಕ್ಕಾಗಿ ನಾವು ಇರಬೇಕಾಗಿದೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನಗೆ ಬಹಳ ನೋವಾಗುತ್ತಿದೆ. ನನ್ನ ಮೇಲೆ ಗುಂಡಾಗಿರಿ ಮಾಡುತ್ತಾರಾ?

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಐದು ನಿಮಿಷ ಸದನ ಮುಂದೂಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮೊದಲು ಕೈ ಎತ್ತಿ ಎದ್ದು ಬಂದರು....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ನಾವು ಯಾರಿಗೋ ಇಷ್ಟ ಬಂದ ರೀತಿಯಲ್ಲಿ ನಾವ್ಯಾರೂ ಮಾತನಾಡುವುದಕ್ಕೆ ಆಗುವುದಿಲ್ಲ. ನಾವು ಒಂದೊಂದು ಸಿದ್ಧಾಂತ, ತತ್ವವನ್ನು ಒಪ್ಪಿಕೊಂಡಿರತಕ್ಕವರು. ನಮ್ಮ ಅಭಿಪ್ರಾಯವನ್ನು ನಾವು ಹೇಳುತ್ತೇವೆ. ಅವರು ಇಷ್ಟ ಇದ್ದರೆ ಒಪ್ಪಿಕೊಳ್ಳಬಹುದು, ಇಲ್ಲದಿದ್ದರೆ ಬಿಡಬಹುದು. ನಾವು ಅದನ್ನೇನೂ ಅವರ ಮೇಲೆ ಹೇರುವುದಿಲ್ಲ. ಒಬ್ಬ ಸದಸ್ಯನಿಗೆ ಮಾತನಾಡುವ ಹಕ್ಕು ಇಲ್ಲ ಎಂದು ಹೇಳುವ ರೀತಿಯಲ್ಲಿ ಮಾತನಾಡಿಬಿಟ್ಟರೆ...

ಶ್ರೀ ವಾಟಾಳ್ ನಾಗರಾಜ್ : ಬೋಳಿ ಮಗ, ಸೂಳೆ ಮಗ ಎಂದು ಕರೆಯುವುದು ಏನು? ನಾನು ಬೋಳಿ ಮಗನಾ? ನಾನು ಸೂಳೆ ಮಗನೇ? ನಾನು ಯಾರ ಮಗ? ಯಾರ ಮಗ?

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ ತಾವು ಸದನವನ್ನು ಅಡ್ಜರ್ನ್ ಮಾಡಿದಿರಿ. ನಮ್ಮನ್ನು ಯಾರನ್ನು ಮಾತುಕತೆಗೆ ಕರೆಯಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಗೌರವದಿಂದ ಇದ್ದೇನೆ. ಒಂದು ದಿನ ಒಬ್ಬರ ಬಗ್ಗೆ ನಾನು ಮಾತನಾಡಿದವನಲ್ಲ. ಹಾಸ್ಯವಾಗಿ, ವಿಡಂಬನೆಯಲ್ಲಿ ಮಾತನಾಡಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನ್ನಿಂದ ನೀವು ಏನು ತೆಗೆದುಕೊಂಡು ಹೋಗಬೇಕು?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇನ್ನಾರನ್ನೋ ಬಯ್ದು, ಇನ್ನಾರನ್ನೋ ಮೆಚ್ಚಿಸಿಕೊಂಡು.....

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ದಯವಿಟ್ಟು ಈ ರೀತಿ ಸದನ ನಡೆಯುವುದಾದರೆ ನಾವು ನಾಳೆಯಿಂದ ಸದನಕ್ಕೆ ಬರುವುದಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರು ಮನೆಗೆ ಹೋಗಿ ಕಾಲು ಹಿಡಿದುಕೊಂಡು ಮಂತ್ರಿ ಆದರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನಂತೂ ನಾಳೆಯಿಂದ ಖಂಡಿತ ಈ ಸದನಕ್ಕೆ ಬರುವುದಿಲ್ಲ. ನಿಮಗೆ ಕೈ ಮುಗಿದು ಹೇಳುತ್ತೇನೆ. ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕೈ ಮುಗಿದು ಹೇಳುತ್ತೇನೆ. ಸ್ವಾಮಿ, ನಾನು ಯಾವತ್ತಾದರೂ ಹಾಸ್ಯವಾಗಿ

ಹೇಳಿದ್ದೇನೆಯೇ ಹೊರತು ಯಾವತ್ತಾದರೂ ಎರಡು ಕೈ ಎತ್ತಿಕೊಂಡು ಹೊಡೆಯುವ ರೀತಿ ಮಾತನಾಡಿದ್ದೇನೆಯೇ? ನಿಮ್ಮ ತಂದೆಯವರು ಇದ್ದಾಗಲೂ ಇದ್ದೇನೆ. ಮಾನ್ಯ ನಿಜಲಿಂಗಪ್ಪನವರು ಇದ್ದಾಗಲೂ ಇದ್ದೇನೆ. ಮಾನ್ಯ ಜತ್ತಿಯವರು ಇದ್ದಾಗಲೂ ಇದ್ದೇನೆ. ಏನಾಗಬೇಕು ಇವರಿಗೆ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ನಿಂತುಕೊಂಡು ಮಾತನಾಡುತ್ತಾರೆ. ಇನ್ನೂ ಒಂದು ಇಲ್ಲಿ ಛಾರ್ಮಿ ಅಟ್ಮಾಸ್‌ಫಿಯರ್ ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನ್ನ ತಾಯಿ, ನನ್ನ ಮನೆ, ನನ್ನ ಮಕ್ಕಳು ಎಲ್ಲರ ಹೆಸರು ಹೇಳಿ, ಹೇಳತಕ್ಕದ್ದು ಯಾರಿಗೆ ಬೇಕು ಇದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಸದನದ ಗೌರವಕ್ಕೆ, ಘನತೆಗೆ ಭಾರೀ ಹೊಡೆತ ಬಿದ್ದಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಭಾಷಣ ಯಾರಿಗೆ ಮಾಡಬೇಕು? ಸರ್ಕಾರದಿಂದ ನನಗೇನಾಗಬೇಕಾಗಿದೆ? ನಾನು ಹೋಗುತ್ತೇನೆ. ನಾನು ನಿಮಗೆ ಕೈಮುಗಿಯುತ್ತೇನೆ. ಮಾನ್ಯ ಕುಮಾರಸ್ವಾಮಿಯವರೇ, ನಿಮ್ಮ ಬಗ್ಗೆ ವೈಯಕ್ತಿಕವಾಗಿ ಏನೂ ಬೇರೆ ವಿಚಾರ ಇಲ್ಲ. ನನ್ನ ಮೆಂಬರ್‌ಶಿಫ್‌ಗೆ ರಾಜೀನಾಮೆ ಕೊಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನ್ನ ಮೇಲೆ ಈ ಸದನದಲ್ಲಿ ಈ ರೀತಿ ಆಗಿದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕರ್ನಾಟಕ ವಿಧಾನಸಭೆಗೆ ಇದು ಅವಮಾನ. ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲಿ ಇಂತಹ ಘಟನೆಗಳು ನಡೆದಿಲ್ಲ. ದಯವಿಟ್ಟು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಈ ಸದನಕ್ಕೆ ಬಹಳ ಭವ್ಯವಾದಂತಹ ಇತಿಹಾಸ ಇದೆ.

ಶ್ರೀ ವಾಟಾಳ್ ನಾಗರಾಜ್ (ತಮ್ಮ ಸ್ಥಾನ ಬಿಟ್ಟು ಹೊರಗಡೆಯಿಂದ ಮಾತನಾಡುತ್ತಿದ್ದರು) : ಮಾನ್ಯ ಕುಮಾರಸ್ವಾಮಿಯವರೇ, ಬಹಳ ನೋವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯವಿಟ್ಟು ತಾವು ಸುಮ್ಮನಿರಿ.

ಶ್ರೀ ವಾಟಾಳ್ ನಾಗರಾಜ್ : ಇದು ಒಳ್ಳೆಯದಲ್ಲ. ನಾನು ರಾಜೀನಾಮೆ ಕೊಡಲಾ? ನಾನು ರಾಜೀನಾಮೆ ಕೊಡಲಾ ಹೇಳಿ?

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ, ಸ್ವಲ್ಪ ಸಮಾಧಾನದಿಂದ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲ ಸಾರ್, ನೀವು ಸದಸ್ಯರಿಗೆ ರಕ್ಷಣೆ ಕೊಡಬೇಕು.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಎಲ್ಲರಿಗೂ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಬಹಳ ಸಾವಧಾನದಿಂದ ಹೇಳುತ್ತೀರಿ. ನನ್ನನ್ನು ಕ್ರಿಮಿನಲ್ ಎಂದು ಅವರು ಕರೆದರು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುತ್ತೀರಿ. ನಾವು ಕುಳಿತುಕೊಳ್ಳುತ್ತೇವೆ ಈ ಸದನವನ್ನು ಕಂಟ್ರೋಲ್ ಆದರೂ ಮಾಡಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಿಮ್ಮ ಈ ಯಜಮಾನಿಕೆಯಲ್ಲಿ ನಾವೇನು ಕಸ ಹೊತ್ತುಕೊಂಡು ಹೋಗಬೇಕೋ ಏನೋ ನನಗೆ ಗೊತ್ತಿಲ್ಲ.

Mr. SPEAKER : I cann't understand......

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಏನು ಕಸ ಹೊತ್ತುಕೊಂಡು ಹೋಗಬೇಕೋ ಏನೋ ಗೊತ್ತಿಲ್ಲ. It is a shame.

ಅಧ್ಯಕ್ಷರು : ಕೇಳಿ ಸ್ವಾಮಿ. ಈಗ ಎಲ್ಲರೂ ಸಹ ಜವಾಬ್ದಾರಿಯಿಂದ ವರ್ತಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾರ್, ಎಲ್ಲರನ್ನೂ ದಯವಿಟ್ಟು ಒಂದೇ ತಕ್ಕಡಿಯಲ್ಲಿ ಹಾಕಬೇಡಿ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಜವಾಬ್ದಾರಿಯಿಂದ ಮಾತನಾಡಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ಹಾಕಲು ಹೋಗಬೇಡಿ...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮುಂಜಾನೆ ಒಬ್ಬ ಆಫೀಸರ್ ಮೇಲೆ ಒಬ್ಬ ಎಂಎಲ್‌ಎ ಅಟ್ಯಾಕ್ ಮಾಡುವ ರೀತಿಯಲ್ಲಿ ಮಾತನಾಡುತ್ತಾರೆ. Are you running a Government? Are you running the House?..... Is it democracy?.......

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಾನು 24 ವರ್ಷದಿಂದ ಕೆಲಸ ಮಾಡಿದ್ದೇನೆ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ಕುಳಿತುಕೊಳ್ಳಿರಿ. ನನಗೂ ಜವಾಬ್ದಾರಿ ಗೊತ್ತಿದೆ. ಹಾಗೆ ಪ್ರತಿ ಒಬ್ಬರಿಗೂ ಸಹ ಅವರವರ ಜವಾಬ್ದಾರಿ ಇದೆ. ಎಲ್ಲರೂ ನಮ್ಮ ಜವಾಬ್ದಾರಿ ನಮ್ಮ ಜವಾಬ್ದಾರಿ ಎಂದು ಹೇಳುತ್ತೀರಿ. ಪ್ರತಿ ಒಬ್ಬರಿಗೂ ಸಹ ಜವಾಬ್ದಾರಿ ಇರಬೇಕು. ಏನು ಮಾತನಾಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು : ನಾನು ಪ್ರತಿ ಒಬ್ಬರಿಗೂ ಅವಕಾಶ ಕೊಡುತ್ತಿದ್ದೇನೆ. ಪ್ರತಿ ಒಬ್ಬರಿಗೂ ವಿವೇಕ ಹೇಳುತ್ತಿದ್ದೇನೆ. ಪ್ರತಿ ಒಬ್ಬರಿಗೂ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನಿಮಗೆ ಜವಾಬ್ದಾರಿ ಇಲ್ಲವಾ ಎಂದು ಹೇಳುತ್ತಿದ್ದೀರಿ. ನನ್ನ ಜವಾಬ್ದಾರಿಯನ್ನು ನಾನು ಸರಿಯಾಗಿ ನಿರ್ವಹಿಸುತ್ತಿದ್ದೇನೆ. ಯಾರ್‍ಯಾರಿಗೆ ಏನೇನು ಹೇಳಬೇಕು ಎಂಬ ಬಗ್ಗೆ ನಾನು ಸರಿಯಾಗಿಯೇ ನಿರ್ವಹಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕೂಡಿ. ನೀವು ಈ ಮನೆಯ ಸದಸ್ಯರುಗಳು ಸರಿಯಾಗಿ ನಡೆದುಕೊಳ್ಳದೇ ಇದ್ದರೆ, ಅವರಿಗೆ ವೈಯಕ್ತಿಕವಾಗಿ ಬುದ್ಧಿ ಮಾತು ಹೇಳದಿದ್ದರೆ ನಾನೇನು ಮಾಡುವುದಕ್ಕೆ ಆಗುತ್ತದೆ? ದಯಮಾಡಿ ಹಿರಿಯ ಸದಸ್ಯರು ನೀವು ಹೇಳಿ.

(ಗೊಂದಲ)

ಅಧ್ಯಕ್ಷರು : ಒಂದಲ್ಲ ಹತ್ತಾರು ಬಾರಿ ಹೇಳಿದ್ದೆ. ವಿವೇಕದಿಂದ ನಡೆದುಕೊಳ್ಳಿ. ವಿವೇಕದಿಂದ ನಡೆದುಕೊಳ್ಳಿ ಎಂದು ಹೇಳಿದ್ದೆ. ಯಾರೂ ವಿವೇಕದಿಂದ ನಡೆದುಕೊಳ್ಳದಿದ್ದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ? ನಾನು ಹೇಗೆ ಈ ಸಭೆಯನ್ನು ನಡೆಸುವುದು?

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ನಿನ್ನೆ ಸದನ ಪ್ರಾರಂಭ ಆಯಿತು. ಸದನ ಪ್ರಾರಂಭ ಆದ ಮೇಲೆ ಮಾನ್ಯ ರಮೇಶ್‌ಕುಮಾರ್ ಅವರು ಮಾತನಾಡುವಾಗ ಮಾನ್ಯ ಜಿ.ಟಿ. ದೇವೇಗೌಡರು ಯಾವ ಮಾತು ಹೇಳಿದರು? ಅದಕ್ಕೆ ವಿರೋಧ ವ್ಯಕ್ತಪಡಿಸುತ್ತೇನೆ. ಜಿ.ಟಿ. ದೇವೇಗೌಡರು ಮೊಟ್ಟ ಮೊದಲನೆಯದಾಗಿ ಹೇಳಿದ್ದು ಅಲ್ಲ. ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾಗಿ ಹಾಗೂ ಹಣಕಾಸಿನ ಮಂತ್ರಿಯಾಗಿ ಕೆಲಸ ಮಾಡಿರುವಂತಹ ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಅವರು ಕೆಲವು ಮಾತುಗಳನ್ನು ಹೇಳಿದರು. ಆ ಭಾಗದಲ್ಲಿರತಕ್ಕಂಥ ಕೆಲವು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ನಾನೂ ಹಾಗೂ ಮಾನ್ಯ ಖರ್ಗೆಯವರು 35 ವರ್ಷಗಳ ಕಾಲದಿಂದ ಈ ಸದನದಲ್ಲಿ ಇದ್ದೇವೆ. ಅಲ್ಲಿ ಮಾನ್ಯ ಗುಂಡೂರಾವ್ ಅವರು ಕುಳಿತಿದ್ದರು. ಮಾನ್ಯ ಜೆ.ಹೆಚ್. ಪಟೇಲ್ ಅವರು ಕುಳಿತಿದ್ದರು. ಒಳಗಡೆ ವೆಲ್‌ನಲ್ಲಿ ಬಂದು ಸಾಕಷ್ಟು ಜಟಾಪಟಿ ಆದಂತಹ ಘಟನೆಯನ್ನೂ ಕೂಡ ನಾವು ನೋಡಿದ್ದೇವೆ. ಆದರೆ ಮತ್ತೆ ಒಂದೇ ನಿಮಿಷದಲ್ಲಿ ಇಬ್ಬರೂ ಆಲಿಂಗನ ಮಾಡಿ ಮತ್ತೆ ಒಂದಾದೆವು. ತಾವೇನು ಮಾಡಿದಿರಿ ಗಲಾಟೆ ಆದ ಮೇಲೆ? ಒಂದು ಹತ್ತು ನಿಮಿಷ ಸಭೆಯನ್ನು ಅಡ್ಜರ್ನ್ ಮಾಡಿದಿರಿ. ನಮಗೆ ಒಳಗಡೆ ಕರೆಸಿದಿರಾ? ಮಾನ್ಯ ಸಿದ್ಧರಾಮಯ್ಯನವರನ್ನು ಕರೆಸಿದಿರಾ? ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿದಿರಾ? ಯಾರಿಗೆ ನೋವಾಗಿದೆ ಎಂದು ಹೇಳಿದ್ದಾರಲ್ಲಾ ಅವರನ್ನು ಕರೆಸಲಿಲ್ಲ. ಎರಡನೆಯದಾಗಿ ಮಾನ್ಯ ಬಳಿಗಾರ್ ಅವರು ಪ್ರಧಾನ ಕಾರ್ಯದರ್ಶಿಗಳು ಆಗಿದ್ದಾರೆ. ಯಾರೋ ಒಬ್ಬ ಎಂಎಲ್‌ಎ ಶ್ರೀ ರೇಣುಕಾಚಾರ್ಯ, ಇರಬಹುದು, ಅವರ ಬಗ್ಗೆ ನಾನು ಹೇಳುವುದಿಲ್ಲ. ಈಗಾಗಲೇ ಮಾನ್ಯ ರಮೇಶ್‌ಕುಮಾರ್ ಅವರು ಹೇಳಿದರು. ಇದು ಆವರಣ ಏನು ಬರುತ್ತದೆ ಅದು ನಿಮ್ಮ ಸುಪರ್ದಿಗೆ ಬರುತ್ತದೆ. ಅಲ್ಲಿ ಒಬ್ಬ ಅಧಿಕಾರಿಗಳಿಗೆ ಹೆಚ್ಚಿನ ಒಂದು ಏನು ಬಳಸಲಾರದ ಶಬ್ದ ಮಾತನಾಡಿದ್ದಾರೆ ಅದೂ ಕೂಡ ಘಟನೆ ನಡೆದಿದೆ. ಆ ಘಟನೆಯಾದ ನಂತರ ರೇಣುಕಾಚಾರ್ಯರು 'ಏನು ನೀವು ಹೊರಗೆ ಹೋಗಿ ಹೇಳಿದ್ದು' ಅಂತ ಇವೊತ್ತು ಬಸವರಾಜ ರಾಯರೆಡ್ಡಿಯವರ ಮೇಲೆ ಕೈ ಮಾಡಿದ್ದಾರೆ. ಮತ್ತೆ ಇವೊತ್ತು.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಆ ರೀತಿ ಹೇಳಿಲ್ಲ.

ಶ್ರೀ ಎನ್. ಧರ್ಮಸಿಂಗ್ : ಮಾತನಾಡಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಕೈ ಮಾಡಿಲ್ಲ. ನೀವು ದೊಡ್ಡವರಾಗಿ ಈ ರೀತಿ ಮಾತನಾಡಬಾರದು. ನೀವು ಏನು ಬೇಕಾದರೂ ಮಾತನಾಡಬಹುದೇ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸಭಾನಾಯಕರು ಅಥವಾ ವಿರೋಧ ಪಕ್ಷದ ನಾಯಕರು ಮಾತನಾಡಲು ನಿಂತಾಗ pin drop silence ನಿಂದ ಸಭೆ ಕೇಳಬೇಕು. ಆದರೆ, ಇದೇನು ನೀವು ಮಾಡುತ್ತಿದ್ದೀರಿ? ಇದನ್ನು ಕುಸ್ತಿ ಮನೆ ಎಂದು ತಿಳಿದುಕೊಂಡಿದ್ದೀರಾ? ನಾನೇನಾದರೂ ಒಂದೊಂದು ಸಲ ಕಾಮೆಂಟ್ ಮಾಡಿದರೆ ಹಾಗೆ ಹೀಗೆ ಎಂದು ಅಬ್ಜೆಕ್ಟ್ ಮಾಡುತ್ತಿದ್ದಿರಿ. ತಾವು ಹೀಗೇಕೆ ನಡವಳಿಕೆ ಮಾಡುತ್ತಿದ್ದೀರಿ? ಇದರಿಂದ ಈ ಸಭೆಯ ಗೌರವ ಹೆಚ್ಚಾಗುತ್ತದೆಯೇ? ನೀವೇ ಹೇಳಿ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಈಗ ಮತ್ತೊಂದು ಏನಾಗಿದೆಯೆಂದರೆ, ವಾಟಾಳ್ ನಾಗರಾಜ್‌ರವರು ನಮ್ಮೆಲ್ಲಾ ಸದಸ್ಯರ ಪೈಕಿ ಹಿರಿಯರಾಗಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್, ದಯವಿಟ್ಟು ಒಂದು ನಿಮಿಷ.

SRI N. DHARMASING : I have not yielded.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್, ಹಾಗಲ್ಲ. ರೇಣುಕಾಚಾರ್ಯರು ಅವರಿಗೆ ಹೊಡೆಯಲು ಬಂದಿಲ್ಲ. ದೊಡ್ಡವರಾದ ನೀವು ಸುಳ್ಳು ಹೇಳಬಾರದು. ರೇಣುಕಾಚಾರ್ಯರು ಹೊಡೆಯುವುದಕ್ಕೆ ಬಂದಿಲ್ಲ. ತಾವು ಆ ರೀತಿ ಮಾತನಾಡುವುದು ಒಳ್ಳೆಯದಲ್ಲ. ಹೊಡೆದುಬಿಟ್ಟಿದ್ದಾರೆಂದು ಹೇಳಿಬಿಟ್ಟರೆ....

ಶ್ರೀ ಎನ್. ಧರ್ಮಸಿಂಗ್ : ತಾವೇ ನೋಡಿದ್ದೀರಿ......

ಅಧ್ಯಕ್ಷರು : ಈಗ ಎಲ್ಲರೂ ಸಮಾಧಾನದಿಂದ ಕೇಳಿ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ತಮ್ಮ ಅಧ್ಯಕ್ಷತೆಯಲ್ಲಿ ಇದು ನಡೆಯುತ್ತಿದೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ಇವೊತ್ತು ಸದನದಲ್ಲಿದ್ದಾರೆ. ಇದು ನಮ್ಮ ಸದನಕ್ಕೆ ಗೌರವ ತರತಕ್ಕಂಥಾದ್ದಲ್ಲ. ಈ ಘಟನೆ ಆಗಬಾರದು. ನೀವು ಎಲ್ಲರನ್ನೂ ಒಳಗಡೆ ಕರೆಸುತ್ತೀರಿ ಮತ್ತು ಈ ತರಹದ ಘಟನೆ ನಡೆಯಬಾರದೆಂದು ಹೇಳುತ್ತೀರೆಂದು ನಾವು ತಿಳಿದಿದ್ದೆವು. ಆದರೆ, ತಾವು ಬೆಲ್ ಹೊಡೆದು ಬಂದು ಕುಳಿತಿರಿ. ಈಗಲೂ ಇಲ್ಲಿ ಅದೇ ತರಹದ ವಾತಾವರಣ ಜರುಗುತ್ತಿದೆ. ತಮಗೆ ಹೇಳುವುದಿಷ್ಟೆ ತಾವು ಯಾರಿಗೆ ಅವಕಾಶ ಕೊಡುತ್ತೀರಿ, ಇವೊತ್ತು ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಆವೇಶದಲ್ಲಿ ಹೇಳುವುದಕ್ಕೆ ಎಲ್ಲರಿಗೂ ಕೂಡ ಅವಕಾಶ ಇದೆ. ಆದರೆ, ಅದಕ್ಕೊಂದು ಗೌರವ ಕೂಡ ಇದೆ. ಆ ರೀತಿಯಾಗಿ ತಾವು ಸದನ ನಡೆಸಿದರೆ ತಮಗೂ ಗೌರವ ಬರುತ್ತದೆ. ಮತ್ತು ಸಭಾ ನಾಯಕರೂ ಕೂಡ ಈ ರಾಜ್ಯದ ಮುಖ್ಯಮಂತ್ರಿಗಳಾಗಿ, ತಮ್ಮೆದುರಿಗೇ ಈ ತರಹದ ಘಟನೆ ನಡೆದರೆ ತಮಗೂ ಇದು ಶೋಭೆ ತರುವುದಿಲ್ಲ. ಅದರ ಬಗ್ಗೆ ಕೂಡ ತಾವು ಕಾಳಜಿ ವಹಿಸಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ಬಜೆಟ್ ಮಂಡಿಸಿರುವ ಬಗ್ಗೆ ನಿನ್ನೆಯಿಂದಲೂ ಏನು ಚರ್ಚೆ ಪ್ರಾರಂಭವಾಗಿದೆ, ನಿನ್ನೆಯಿಂದಲೂ ನಾವು ಯಾವುದೇ ರೀತಿಯಲ್ಲೂ ಅಡಚಣೆಗೆ ಅವಕಾಶ ಕೊಡದೆ, ಬಜೆಟ್ ಮೇಲಿನ ಚರ್ಚೆ ಬಿಟ್ಟು ಬೇರೆ ವ್ಯಕ್ತಿಗಳ ಬಗ್ಗೆ ಮಾತ್ರ ಹೆಚ್ಚು ಚರ್ಚೆ ನಡೆಯುತ್ತಿದೆ. ಇವೊತ್ತು ನಾನು ಮನವಿ ಮಾಡುತ್ತೇನೆ.

ಒಂದು ಮಾತನ್ನು ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದರು. ಹೊಗಳುಭಟ್ಟರ ಬಗ್ಗೆ ಹುಷಾರಿಕೆಯಲ್ಲಿರಿ ಎಂದು ನನಗೆ ಒಂದು ಸಲಹೆ ಕೊಟ್ಟರು. ಆದರೆ, ನಿನ್ನೆಯಿಂದಲೂ ನಾನು ನೋಡುತ್ತಿದ್ದೇನೆ. ಆ ಭಾಗದಲ್ಲಿ ಮಾತನಾಡುವ ಸದಸ್ಯರುಗಳು ಸನ್ಮಾನ್ಯ ಸಿದ್ಧರಾಮಣ್ಣನವರನ್ನು ಹೊಗಳಿ ಮಾತನಾಡತಕ್ಕಂಥಾದ್ದಕ್ಕೆ ಮತ್ತು ಅವರ ಬಗ್ಗೆಯೇ ಹೆಚ್ಚಿಗೆ ಈ ಬಜೆಟ್ ಮೇಲಿನ ಚರ್ಚೆ ಸಂದರ್ಭದಲ್ಲಿ ಹೆಚ್ಚಿನ ಸಮಯವನ್ನು ಏನು ಮೀಸಲಿಟ್ಟಿದ್ದಾರೆ. ಆ ಹೊಗಳುಭಟ್ಟರ ಮಾತುಗಳ ಬಗ್ಗೆ ಯಾರ್‍ಯಾರು ಯಾರ್‍ಯಾರು.....

ಒಬ್ಬ ಮಾನ್ಯ ಸದಸ್ಯರು : ವಾಸ್ತವಾಂಶ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ವಾಸ್ತವಾಂಶಗಳ ಬಗ್ಗೆ ಅನಂತರ ಮಾತನಾಡೋಣ. ಉತ್ತರ ಕೊಡುವಾಗ ವಾಸ್ತವಾಂಶಗಳ ಬಗ್ಗೆ ನಾವೂ ಕೊಡುತ್ತೇವೆ. ಅದಕ್ಕೋಸ್ಕರ, ನಿನ್ನೆಯಿಂದಲೂ ಸದಸ್ಯರು ಮಾತನಾಡುವಾಗ ನಾನು ಎಲ್ಲಿಯೂ ಮಧ್ಯೆ ಎದ್ದು ನಿಂತು ಮಾತನಾಡಲಿಲ್ಲ. ಇವೊತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಜೆಟ್‌ನಲ್ಲಿನ ವಿಷಯಗಳನ್ನು ಬಿಟ್ಟು ನಾನು ನೋಡುತ್ತಿದ್ದೇನೆ. ಸುಮಾರು ಒಂದು ಗಂಟೆ ಕಾಲ ಅವರು ಬೇರೆ ವಿಷಯಗಳನ್ನೇ ಚರ್ಚೆ ಮಾಡಿಕೊಂಡು, ಇವೊತ್ತು ಮೈಸೂರು ಭಾಗದಲ್ಲಿರುವ ಶಾಸಕರುಗಳ ಬಗ್ಗೆ ಪ್ರಸ್ತಾಪಿಸುತ್ತಾ, 'ಆ ಭಾಗದಲ್ಲಿ ನೀವು ಯಾವುದೋ ನೆರಳಿನಲ್ಲಿ ಬೆಳೆದಿರಿ' ಎಂದರು. ಈ ವಿಷಯದ ಬಗ್ಗೆ ಹೇಳುವುದಾದರೆ, ಇಲ್ಲಿ ಈ ಸದನಕ್ಕೆ ಬರುವವರು ಯಾರು ಯಾರ್‍ಯಾರ ನೆರಳಿನಲ್ಲೂ ಬೆಳೆಯುವುದಕ್ಕಾಗುವುದಿಲ್ಲ. ಅವರು ಇಲ್ಲಿಗೆ ಆ ಕ್ಷೇತ್ರಗಳಿಂದ ಜನರ ಆಶೀರ್ವಾದದಲ್ಲೇ ಬರಬೇಕೇ ಹೊರತು, ಯಾರೊಬ್ಬರಿಂದಲೂ ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಇವೊತ್ತು ನೀವು ಅದನ್ನೇ ಪದೇ ಪದೇ ಹೇಳಿ ಹೊಸದಾಗಿ ಗೆದ್ದು ಬಂದಿರುವ ಶಾಸಕರುಗಳು ತಾಳ್ಮೆ ಕಳೆದುಕೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಯಾರೂ ಪ್ರೋತ್ಸಾಹ ಕೊಡುವುದು ಸೂಕ್ತವಲ್ಲ. ನಾನು ನಮ್ಮ ಭಾಗದ ಎಲ್ಲಾ ಸದಸ್ಯರುಗಳಿಗೆ ಮನವಿ ಮಾಡುತ್ತೇನೆ. ವಿರೋಧ ಪಕ್ಷದ ಸದಸ್ಯರುಗಳು ಮಾತನಾಡಬೇಕಾದರೆ, ಅವರು ಎಷ್ಟೇ ನಿಮ್ಮನ್ನು ಕೆರಳಿಸತಕ್ಕಂಥ, ನಿಮ್ಮ ತಾಳ್ಮೆಗೆಡಿಸತಕ್ಕಂಥ ರೀತಿಯಲ್ಲಿ ಮಾತನಾಡಿದರೂ ದಯವಿಟ್ಟು ಯಾವುದೇ ಕಾರಣಕ್ಕೂ ಎದ್ದು ನಿಂತು ಅವರಿಗೆ ಅಡಚಣೆ ಮಾಡುವುದು ಬೇಡ. ನೀವುಗಳು ಮಾತನಾಡುವ ಸಂದರ್ಭದಲ್ಲಿ ಅವರು ಹೇಳಿರುವ ಆ ಮಾತುಗಳಿಗೆ ನೀವು ಉತ್ತರವನ್ನು ಕೊಡಬೇಕು. ದಯವಿಟ್ಟು ಯಾರೇ ಸದಸ್ಯರುಗಳಿರಲಿ, ನಾನು ಎಲ್ಲರಿಗೂ ಮನವಿ ಮಾಡುತ್ತೇನೆ. ಇವೊತ್ತು ನಮ್ಮೆಲ್ಲರ ಜವಾಬ್ದಾರಿ ಏನಿದೆ, ಇವೊತ್ತು ಈ ಜವಾಬ್ದಾರಿ ನಿರ್ವಹಿಸುವ ಸಂದರ್ಭದಲ್ಲಿ, ಪ್ರತಿಯೊಬ್ಬ ಸದಸ್ಯರ ಜವಾಬ್ದಾರಿಗಳಿವೆ. ಆದ್ದರಿಂದ, ನಾನು ನಮ್ಮ ಸದಸ್ಯರುಗಳಲ್ಲಿ ಮನವಿ ಮಾಡುತ್ತೇನೆ. ಯಾವುದೇ ರೀತಿಯ ಕೆರಳತಕ್ಕಂಥ ಮಾತುಗಳು ಬಂದರೂ ಸಮಾಧಾನವಾಗಿರಬೇಕಾಗುತ್ತದೆ. ನಮ್ಮ ಸದಸ್ಯರುಗಳಿಗೆ ನಾನು ಹೇಳುತ್ತೇನೆ. ಬೇರೆಯವರಿಗೆ ನಾನು ಸಲಹೆಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇವೊತ್ತು ನಡೆದಿರತಕ್ಕಂಥ ಘಟನೆ......

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಭಾ ನಾಯಕರು ಎಲ್ಲರಿಗೂ ಸಲಹೆ ಕೊಡಬಹುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಅದಕ್ಕೋಸ್ಕರವೇ ನಾನು ಹೇಳುವುದು. ಇವೊತ್ತು ಬಜೆಟ್ ಬಗ್ಗೆ ಏನು ಚರ್ಚೆ ನಡೆಯುತ್ತಿದೆ. ಇವೊತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದಂಥ ವಿಷಯಗಳ ತರಹ ಇಲ್ಲಿ ಚರ್ಚೆಗಳೇನಾಗುತ್ತಿವೆ, ಅದನ್ನು ಸ್ವಲ್ಪ ಕಡಿಮೆ ಮಾಡುವುದು ಸೂಕ್ತವೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗ ಅವರು ಐದು ನಿಮಿಷ ಮಾತನಾಡಲಿ. ಅವರು ಮಾತುಗಳನ್ನು ಮುಗಿಸುವವರಿದ್ದರು. ಅವರು ಮಾತುಗಳನ್ನು ಮುಗಿಸಿದ ನಂತರ ವಿಧೇಯಕಗಳನ್ನು ಮಂಡಿಸುವ ಕಲಾಪ ತೆಗೆದುಕೊಳ್ಳೋಣ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ವಾಟಾಳ್‌ನಾಗರಾಜ್‌ರವರು ಸ್ವಲ್ಪ ನೊಂದಿದ್ದಾರೆ. ನಾಳೆ ಬೆಳಿಗ್ಗೆ ಮಾತನಾಡುತ್ತಾರೆ.

ಅಧ್ಯಕ್ಷರು : ಈಗ ವಿಧೇಯಕಗಳನ್ನು ಮಂಡಿಸುವ ಪ್ರಕ್ರಿಯೆ ಕೈಗೊಳ್ಳೋಣ.

9. ಶಾಸನ ರಚನೆ:

ವಿಧೇಯಕಗಳ ಮಂಡನೆ

(ಅ) ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ, ಬಂದರು ಮತ್ತು ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, "2005ನೇ ಸಾಲಿನ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "2005ನೇ ಸಾಲಿನ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ, ಬಂದರು ಮತ್ತು ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, "2005ನೇ ಸಾಲಿನ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–2).

ಆ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಹಾಗೂ ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2005ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಹಾಗೂ ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–3).

(ಇ) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕ, 2006

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2006ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ-4).

(ಈ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2006

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ".

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ-5).

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 24ನೇ ಮಾರ್ಚಿ ಮಾಹೆ 2006ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ-2
ಕರ್ನಾಟಕ ವಿಧಾನಸಭೆ
ಹನ್ನೆರಡನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ವಿಧೇಯಕ 2005
[2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 30]

ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ ಅಧಿನಿಯಮ, 1955ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ ಅಧಿನಿಯಮ, 1955ನ್ನು (1955ರ ಮೈಸೂರು ಅಧಿನಿಯಮ 18) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ .- (1) ಈ ಅಧಿನಿಯಮವನ್ನು ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 21ಬಿ ಹೊಸ ಪ್ರಕರಣದ ಸೇರ್ಪಡೆ .- ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ ಅಧಿನಿಯಮ, 1955ರ (1955ರ ಮೈಸೂರು ಅಧಿನಿಯಮ 18) 21ಎ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"21ಬಿ. ಪರಿಷ್ಕರಣೆ .- ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2005ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ 21ನೇ ಪ್ರಕರಣದ ಅಥವಾ 21ಎ ಪ್ರಕರಣದ ಅಡಿಯಲ್ಲಿ ಮೂಲ ವಾರ್ಷಿಕ ಮೊಬಲಗನ್ನು ವಿಭಾಗಾಧಿಕಾರಿಯು ನಿರ್ಧರಿಸಿದ ಮೇಲೆ ರಾಜ್ಯ ಸರ್ಕಾರವು, ತನ್ನ ಗಮನಕ್ಕೆ ಬಂದಂಥ ಯಾವುದೇ ಹೊಸ ವಿಷಯದ ಸಂಬಂಧದಲ್ಲಿ ಅಥವಾ ದಾಖಲೆಯಲ್ಲಿ ಎದ್ದು ಕಾಣುವ ಯಾವುದೋ ತಪ್ಪು ಅಥವಾ ದೋಷದ ಕಾರಣದಿಂದಾಗಿ ಅಥವಾ ಬಾಧಿತ ಪಕ್ಷಕಾರನು ಅರ್ಜಿ ಹಾಕಿಕೊಂಡ ಮೇಲೆ ಅಥವಾ ಯಾವುದೇ ಇತರ ಸಾಕಷ್ಟು ಕಾರಣಗಳಿಗಾಗಿ, ಯಾವುದೇ ಸಮಯದಲ್ಲಿ ಅಂಥ ಮೂಲ ವಾರ್ಷಿಕ ಮೊಬಲಗನ್ನು ಸರಿಯಾಗಿ ನಿರ್ಧರಿಸಿಲ್ಲವೆಂದು ಅಥವಾ ತಪ್ಪಾಗಿ ನಿರ್ಧರಿಸಿರುತ್ತಾರೆಂದು ಮತ್ತು ಅದನ್ನು ಪರಿಷ್ಕರಿಸುವುದು ಅಗತ್ಯವಿದೆಯೆಂದು ಸ್ವಪ್ರೇರಣೆಯಿಂದ ಅಥವಾ ಅನ್ಯಥಾ ಮನಗಂಡರೆ, ಅದು ಹಾಗೆ ನಿರ್ಧರಿಸಲಾದ ಮೂಲಭೂತ ವಾರ್ಷಿಕ ಮೊಬಲಗನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಮೂಲಕ ಅದನ್ನು ಪರಿಷ್ಕರಿಸಬಹುದು.

ಪರಂತು, ಈ ಪ್ರಕರಣದ ಅಡಿಯಲ್ಲಿ ಬಾಧಿತ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಿದ ಹೊರತು ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

ಮತ್ತು ಪರಂತು, ಯಾವುದೇ ಹೆಚ್ಚಿನ ಮೊಬಲಗನ್ನು ನೀಡಿದ್ದರೆ, ಅಂಥ ಹೆಚ್ಚುವರಿ ಮೊಬಲಗನ್ನು, ನೀಡಬೇಕಾದ ಮುಂಬರುವ ವಾರ್ಷಿಕ ಮೊಬಲಗಿನಲ್ಲಿ ಸರಿದೂಗಿಸತಕ್ಕದ್ದು ಮತ್ತು ಅಂಥ ಮೊಬಲಗನ್ನು ಹಾಗೆ ಸರಿದೂಗಿಸಲು ಆಗದೇ ಇರುವಂಥ ಸಂದರ್ಭದಲ್ಲಿ, ಅದನ್ನು ಭೂ ಕಂದಾಯದ ಬಾಕಿಗಳು ಎಂಬಂತೆ ವಸೂಲಿ ಮಾಡತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ ಇನಾಂಗಳ ರದ್ಧತಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2005ರ ಪ್ರಾರಂಭಕ್ಕೆ ಮೊದಲು 21ಎ ಪ್ರಕರಣದ ಅಡಿಯಲ್ಲಿ ವಿಭಾಗಾಧಿಕಾರಿಯು ನಿರ್ಧರಿಸಿದ ಮೂಲ ವಾರ್ಷಿಕ ಮೊಬಲಗಿನ (ತಸ್ದೀಕ್ ಹಣ) ಆದೇಶವನ್ನು ರಾಜ್ಯ ಸರ್ಕಾರವು ಪರಿಷ್ಕರಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಭಾಗಾಧಿಕಾರಿಯ ಆದೇಶವನ್ನು ಸರ್ಕಾರವು ಪರಿಷ್ಕರಿಸುವಾಗ ಬಾಧಿತ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಪ್ರಸ್ತಾವಿಸಲಾಗಿದೆ. ಯಾವುದೇ ಹೆಚ್ಚಿನ ಮೊಬಲಗನ್ನು ನೀಡಲಾಗಿದೆಯೆಂದು ವಿಚಾರಣೆಯಲ್ಲಿ ಕಂಡು ಬಂದರೆ ಅಂಥ ಮೊಬಲಗನ್ನು ಮುಂದೆ ನೀಡಬೇಕಾದ ತಸ್ದೀಕ್ ಹಣದಲ್ಲಿ ಸರಿಹೊಂದಿಸಲು ಮತ್ತು ಅಂಥ ಹೆಚ್ಚಿನ ಮೊಬಲಗನ್ನು ಸರಿದೂಗಿಸಲು ಆಗದಿದ್ದಲ್ಲಿ ಅದನ್ನು ಭೂ ಕಂದಾಯ ಬಾಕಿಯಂತೆ ವಸೂಲಿ ಮಾಡಲು ಸಹ ಉಪಬಂಧವನ್ನು ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಬಿ. ನಾಗರಾಜ ಶೆಟ್ಟಿ

ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು.

ಟಿ. ರಾಜಣ್ಣ, ಕಾರ್ಯದರ್ಶಿ

ಅನುಬಂಧ-3

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಎರಡನೇ ಅಧಿವೇಶನ

(ಮುಂದುವರೆದ ಉಪವೇಶನಗಳು)

ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005

[2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 31]

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ, 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ :-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ .- (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 69ಎ ಹೊಸ ಪ್ರಕರಣದ ಸೇರ್ಪಡೆ .- ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 69ನೇ ಪ್ರಕರಣದ ತರುವಾಯ ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"69ಎ. ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಗಳು ಅಥವಾ ಇತರ ಸ್ವತ್ತುಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೆಮಾಡುವುದು .- (1) ಅಧಿನಿಯಮದ 69ನೇ ಪ್ರಕರಣದಲ್ಲಿ ಏನೇ ಇದ್ದರೂ, ಈ ಸಂಬಂಧದಲ್ಲಿ ನಿಯಮಿಸಲಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯ ಸರ್ಕಾರ ಅಥವಾ ಪ್ರಾಧಿಕೃತ ಅಧಿಕಾರಿಯು 67ನೇ ಪ್ರಕರಣದ ಅಡಿಯಲ್ಲಿ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸೇರಿದ ಬೆಲೆಯುಳ್ಳ ಭೂಮಿ ಅಥವಾ ಇತರ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೆಮಾಡಬಹುದು.

(2) ಡೆಪ್ಯೂಟಿ ಕಮೀಷನರ್ ಅಥವಾ ಪ್ರಾಧಿಕೃತ ಅಧಿಕಾರಿಯು, (1)ನೇ ಉಪ ಪ್ರಕರಣದ ಅಡಿಯಲ್ಲಿನ ಸ್ಥಿರ ಸ್ವತ್ತಿನ ಮಾರಾಟದ ದಿನಾಂಕದಿಂದ ಮೂವತ್ತು ದಿನಗಳು ಕಳೆದ ತರುವಾಯ ಸದರಿ ಮಾರಾಟವನ್ನು ಆದೇಶದ ಮೂಲಕ ಸ್ಥಿರೀಕರಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ ಬೆಲೆಯುಳ್ಳ ಭೂಮಿ ಎಂದರೆ ಹರಾಜು ಮಾಡಿದಲ್ಲಿ ಸಾಮಾನ್ಯ ಬೆಲೆಗಿಂತಲೂ ಅತಿ ಹೆಚ್ಚಿನ ಬೆಲೆಯನ್ನು ತರುವಂಥ ಭೂಮಿಗಳು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 69ನೇ ಪ್ರಕರಣವು ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿ ಅಥವಾ ಇತರ ಸ್ವತ್ತಿನ ವಿಲೆಗೆ ಉಪಬಂಧವನ್ನು ಕಲ್ಪಿಸುತ್ತದೆ. ಭೂಮಿಯನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಿದ ಭೂಮಿಯ ಬಗ್ಗೆ ಸ್ಥಿರೀಕರಣಕ್ಕೆ ಯಾವ ಉಪಬಂಧವೂ ಇರುವುದಿಲ್ಲ. ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲು ಹಾಗೂ ಅಂಥ ಮಾರಾಟವನ್ನು ಸ್ಥಿರೀಕರಿಸಲು ಹೊಸ ಪ್ರಕರಣವನ್ನು ಸೇರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಜಗದೀಶ್ ಶೆಟ್ಟರ್

ಕಂದಾಯ ಹಾಗೂ ಸಕ್ಕರೆ ಸಚಿವರು

ಟಿ. ರಾಜಣ್ಣ, ಕಾರ್ಯದರ್ಶಿ

ಅನುಬಂಧ-4

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಮೂರನೇ ಅಧಿವೇಶನ

(ಮುಂದುವರೆದ ಉಪವೇಶನಗಳು)

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ವಿಧೇಯಕ, 2006

[2006ರ ವಿಧಾನಸಭೆಯ ವಿಧೇಯಕ ಸಂಖ್ಯೆ 1]

ಕರ್ನಾಟಕ ರಾಜ್ಯದಲ್ಲಿನ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಶುಲ್ಕವನ್ನು ನಿಗದಿಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಮತ್ತು ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ, ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಮೀಸಲಿಡುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

(2003) 6 ಎಸ್‌ಸಿಸಿ 697 ರಲ್ಲಿ ವರದಿಯಾಗಿರುವ **ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ ಮತ್ತು ಇತರರು-ವಿರುದ್ಧ-ಕರ್ನಾಟಕ ರಾಜ್ಯ,** ಈ ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತನ್ನ ತೀರ್ಪಿನಲ್ಲಿ, ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶವನ್ನು, ಸಂಸತ್ತು ಆ ಬಗ್ಗೆ ಸೂಕ್ತ ಕಾನೂನನ್ನು ಅಧಿನಿಯಮವಾಗಿ ತರುವವರೆಗೆ, ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಗಳ ಮೇಲ್ವಿಚಾರಣೆ ನಡೆಸಲು ಒಂದು ಸಮಿತಿ ಹಾಗೂ ಶುಲ್ಕ ವ್ಯವಸ್ಥೆಯನ್ನು ಅನುಮೋದಿಸಲು ಇನ್ನೊಂದು ಸಮಿತಿ, ಹೀಗೆ ಎರಡು ಸಮಿತಿಗಳ ಮೂಲಕ ನಿಯಂತ್ರಿಸಲು ಆದೇಶಿಸಿರುವುದರಿಂದ;

(2005) 6 ಎಸ್‌ಸಿಸಿ 537 ರಲ್ಲಿ ವರದಿಯಾದ, **ಪಿ.ಎ. ಇನಾಂದಾರ್ ಮತ್ತು ಇತರರು-ವಿರುದ್ಧ-ಮಹಾರಾಷ್ಟ್ರ ರಾಜ್ಯ,** ಈ ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ರಾಜ್ಯದಲ್ಲಿ ಯಾವುದೇ ಒಂದು ವ್ಯಾಸಂಗ ವಿಷಯದಲ್ಲಿ ಶಿಕ್ಷಣವನ್ನು ಅಲ್ಪಸಂಖ್ಯಾತ ಅಥವಾ ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳು ಅಥವಾ ಅಂತಹವೇ ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ನೀಡುತ್ತಿದ್ದಲ್ಲಿ, ಆಗ ಪಾರದರ್ಶಕತೆ ಮತ್ತು ಮೆರಿಟ್, ಈ ಎರಡೂ ಉದ್ದೇಶಗಳನ್ನು ಈಡೇರಿಸಬೇಕಾದರೆ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ತರುವಾಯ ಕೇಂದ್ರೀಯ ಕೌನ್ಸಲಿಂಗ್ ವ್ಯವಸ್ಥೆ ಮಾಡಬೇಕೆಂದು ಅಥವಾ ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರವೇಶಕ್ಕಾಗಿ ಏಕ ಗವಾಕ್ಷಿ ವ್ಯವಸ್ಥೆ ಅಗತ್ಯವಿದೆ ಎಂದು ತೀರ್ಪು ನೀಡಿದೆ. ಆದ್ದರಿಂದ ಒಂದೇ ಸ್ವರೂಪದ ಅಥವಾ ಸಮಾನ ಸ್ವರೂಪದ ಎಲ್ಲ ಸಂಸ್ಥೆಗಳು ಅವು ಅಲ್ಪಸಂಖ್ಯಾತರ ಸಂಸ್ಥೆಯಾಗಲಿ ಅಥವಾ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಾಗಿರಲಿ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ತರುವಾಯ ಕೇಂದ್ರೀಯ ಕೌನ್ಸಲಿಂಗ್ ವ್ಯವಸ್ಥೆ ಮೂಲಕ ತಮ್ಮಲ್ಲಿನ ಸೀಟು ಭರ್ತಿ ಮಾಡಿಕೊಳ್ಳಬೇಕಾಗಿರುವುದರಿಂದ;

ಅಲ್ಲದೇ ಸರ್ವೋಚ್ಚ ನ್ಯಾಯಾಲಯವು, ಅದೇ ತೀರ್ಪಿನಲ್ಲಿ ರಾಜ್ಯವು, ಪ್ರವೇಶಗಳು ನ್ಯಾಯಯುತವಾಗಿ ಮತ್ತು ಮೆರಿಟ್ ಆಧಾರದ ಮೇಲೆ ನಡೆಯುವಂತೆ ನೋಡಿಕೊಳ್ಳುವ ಸಲುವಾಗಿ ಹಾಗೂ ದುರಾಡಳಿತ ತಡೆಯುವ ಸಲುವಾಗಿ ಒಂದು ಕೇಂದ್ರೀಯ ಮತ್ತು ಏಕಗವಾಕ್ಷಿ ಕಾರ್ಯವಿಧಾನವನ್ನು ಏರ್ಪಡಿಸಿ ಪ್ರವೇಶವನ್ನು ನಿಯಂತ್ರಿಸಬಹುದೆಂದು, ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಸರಿಸುವ ಪ್ರವೇಶ ಪ್ರಕ್ರಿಯೆಯು, ನ್ಯಾಯಾಲಯವು ನಿಯಮಿಸಿದ ಮೂರು ಬಗೆಯ

ಪರೀಕ್ಷೆಗಳಲ್ಲಿ ಎಲ್ಲ ಅಥವಾ ಯಾವುದೊಂದನ್ನು ಯಶಸ್ವಿಗೊಳಿಸಲು ವಿಫಲವಾದರೆ, ಆಗ ರಾಜ್ಯವು ಪ್ರವೇಶ ಪ್ರಕ್ರಿಯೆಯನ್ನು ತಾನೇ ಕೈಗೆತ್ತಿಕೊಂಡು ತನ್ನದೇ ಆದ ಪ್ರಕ್ರಿಯೆಯನ್ನು ಅಳವಡಿಸಬಹುದೆಂದು ತೀರ್ಮಾನ ನೀಡಿರುವುದರಿಂದ,

ಮತ್ತು, ಸಂವಿಧಾನ (ತೊಂಬತ್ತೂರನೇ ತಿದ್ದುಪಡಿ) ಅಧಿನಿಯಮ, 2005ರಲ್ಲಿ 15(5)ನೇ ಅನುಚ್ಛೇದದ ಅಡಿಯಲ್ಲಿ ಈ ಮುಂದಿನಂತೆ ಒಂದು ಉಪಬಂಧವನ್ನು ಕಲ್ಪಿಸಿರುವುದರಿಂದ, ಎಂದರೆ:-

> "(5) ಈ ಅನುಚ್ಛೇದದಲ್ಲಿ ಅಥವಾ 19ನೇ ಅನುಚ್ಛೇದದ (1)ನೇ ಖಂಡದ (ಜಿ) ಉಪಖಂಡದಲ್ಲಿರುವುದಾವುದೂ, ರಾಜ್ಯವು ಯಾವುದೇ ಸಾಮಾಜಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗಾಗಿ ವಿಶೇಷ ಉಪಬಂಧಗಳನ್ನು ರಚಿಸುವುದನ್ನು, ಅಂಥ ವಿಶೇಷ ಉಪಬಂಧಗಳು, 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲದ ರಾಜ್ಯದಿಂದ ಅನುದಾನ ಪಡೆಯುವ ಅಥವಾ ಅನುದಾನ ಪಡೆಯದ, ಖಾಸಗಿ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಶಿಕ್ಷಣ ಸಂಸ್ಥೆಗಳಿಗೆ ಅವರಿಗೆ ಪ್ರವೇಶ ನೀಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ತಡೆಯತಕ್ಕದ್ದಲ್ಲ."

ಮೇಲ್ಕಂಡ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಮತ್ತು ಯುಕ್ತವೆಂದು ಪರಿಗಣಿಸಲಾಗಿದೆ.

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪ್ರವೇಶ" ಎಂದರೆ, ಪ್ರವೇಶ ಕೇಂದ್ರದಲ್ಲಿ ಒದಗಿಸಿದ ಪ್ರವೇಶ;

(ಬಿ) "ಪ್ರವೇಶ ಕೇಂದ್ರ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳ ಆಯ್ಕೆ ಮಾಡುವ ಮತ್ತು ಅವರಿಗೆ ಸೀಟು ಹಂಚಿಕೆ ಮಾಡುವ ಕೇಂದ್ರ;

(ಸಿ) "ಪ್ರವೇಶ ಮೇಲ್ವಿಚಾರಣಾ ಸಮಿತಿ" ಎಂದರೆ, ರಾಜ್ಯ ಸರ್ಕಾರವು, ಅನುದಾನ ಪಡೆಯದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವನ್ನು ನಿಯಂತ್ರಿಸುವುದಕ್ಕಾಗಿ 5ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಸಮಿತಿ;

(ಡಿ) "ಅನುದಾನಿತ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಆರ್ಥಿಕ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸುತ್ತಿರುವ ಒಂದು ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆ ಮತ್ತು ಇದರಲ್ಲಿ ಅಂಥ ಆರ್ಥಿಕ ನೆರವನ್ನು ಅಥವಾ ಅನುದಾನವನ್ನು ಸ್ವೀಕರಿಸುತ್ತಿರುವ ಅಲ್ಪಸಂಖ್ಯಾತ ಮತ್ತು ಅಲ್ಪಸಂಖ್ಯಾತವಲ್ಲದ ಶಿಕ್ಷಣ ಸಂಸ್ಥೆಗಳೂ ಒಳಗೊಳ್ಳುತ್ತವೆ;

(ಇ) "ಸಾಮಾನ್ಯ ಪ್ರವೇಶ ಪರೀಕ್ಷೆ" ಎಂದರೆ, ಏಕಗವಾಕ್ಷಿ ಪ್ರಕ್ರಿಯೆಯ ಮೂಲಕ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ ಅಭ್ಯರ್ಥಿಗಳ ಮೆರಿಟ್ ಅನ್ನು ನಿರ್ಧರಿಸುವುದಕ್ಕಾಗಿ ನಡೆಸಲಾಗುವ ಪರೀಕ್ಷೆ ಮತ್ತು ತರುವಾಯದ ಕೇಂದ್ರೀಯ ಕೌನ್ಸೆಲಿಂಗ್ ವ್ಯವಸ್ಥೆ;

(ಎಫ್) "ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ಒಂದು ಏಜನ್ಸಿ;

(ಜಿ) "ಶುಲ್ಕ ನಿಯಂತ್ರಣ ಸಮಿತಿ" ಎಂದರೆ, ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಶುಲ್ಕವನ್ನು ನಿಗದಿಪಡಿಸಲು ಮತ್ತು ನಿಯಂತ್ರಿಸಲು 6ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಸಮಿತಿ;

(ಎಚ್) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(ಐ) "ಸರ್ಕಾರಿ ಸೀಟುಗಳು" ಎಂದರೆ, ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಲ್ಲಿ ಇರುವ ಎಲ್ಲ ಸೀಟುಗಳು, ಅನುದಾನಿತ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಷ್ಟು ಸಂಖ್ಯೆಯ ಸೀಟುಗಳು ಮತ್ತು ಅನುದಾನಿತವಲ್ಲದ, ಅಲ್ಪಸಂಖ್ಯಾತ ಹಾಗೂ ಅಲ್ಪಸಂಖ್ಯಾತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ನಡುವೆ ಮೂಡಿಬಂದ ಸಮ್ಮತಾಭಿಪ್ರಾಯಕ್ಕನುಸಾರವಾಗಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಂಥ ಸೀಟುಗಳು;

(ಜೆ) "ಸಾಮಾನ್ಯ ಪ್ರವರ್ಗದ ಸೀಟುಗಳು" ಎಂದರೆ, ಮೀಸಲು ಸೀಟುಗಳನ್ನು ಬಿಟ್ಟು ಉಳಿದ ಸೀಟುಗಳು;

(ಕೆ) "ಮಂಜೂರಾದ ಸೀಟುಗಳು" ಎಂದರೆ, ಒಂದು ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಪ್ರತಿಯೊಂದು ವ್ಯಾಸಂಗ ಕ್ರಮಕ್ಕೆ, ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಸಕ್ಷಮ ಪ್ರಾಧಿಕಾರವು ಮಂಜೂರ್ಮಾಡಿದ ಒಟ್ಟು ಸೀಟುಗಳು ಎಂದು ಅರ್ಥ.

(ಎಲ್) "ಅಲ್ಪಸಂಖ್ಯಾತ" ಎಂದರೆ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ಎಂದರ್ಥ ಮತ್ತು ಅದು ಅವರುಗಳನ್ನು ಒಳಗೊಳ್ಳುತ್ತದೆ;

(ಎಮ್) "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ" ಎಂದರೆ, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ರಾಜ್ಯ ಸರ್ಕಾರವು ಹಾಗೆಂದು ಮಾನ್ಯತೆ ನೀಡಿದ ಅಥವಾ ಅಧಿಸೂಚಿಸಿದ ಶಿಕ್ಷಣ ಸಂಸ್ಥೆಗಳು.

(ಎನ್) "ಅನಿವಾಸಿ–ಭಾರತೀಯ" ಎಂದರೆ, ಭಾರತೀಯ ಮೂಲದ ತಂದೆ ಅಥವಾ ತಾಯಿಗೆ ಜನಿಸಿದ ಮತ್ತು ದೇಶದ ಹೊರಗೆ ವಾಸಿಸುತ್ತಿರುವ ಮತ್ತು ಸಮಾನ ಅರ್ಹತಾ ಪರೀಕ್ಷೆಯಲ್ಲಿ ಭಾರತದ ಹೊರಗೆ ಉತ್ತೀರ್ಣನಾದ ಒಬ್ಬ ವಿದ್ಯಾರ್ಥಿ;

(ಓ) "ಇತರ ಹಿಂದುಳಿದ ವರ್ಗಗಳು" ಎಂದರೆ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕ ವರ್ಗ ಅಥವಾ ವರ್ಗಗಳು;

(ಪಿ) "ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳು" ಎಂದರೆ,–

(I) ವೈದ್ಯಕೀಯ ಮತ್ತು ದಂತ ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ

(i) ಬ್ಯಾಚುಲರ್ ಆಫ್ ಮೆಡಿಸಿನ್ ಮತ್ತು ಬ್ಯಾಚುಲರ್ ಆಫ್ ಸರ್ಜರಿಯ ಮತ್ತು

(ii) ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿಯ

–ಪ್ರಥಮ ವರ್ಷ

(II) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಶಿಕ್ಷಣ ಸಂಸ್ಥೆಗಳಲ್ಲಿ.–

(i) ಬ್ಯಾಚುಲರ್ ಆಫ್ ಆಯುರ್ವೇದಿಕ್ ಮೆಡಿಸಿನ್ ಮತ್ತು ಸರ್ಜರಿ

(ii) ಬ್ಯಾಚುಲರ್ ಆಫ್ ಯುನಾನಿ ಮೆಡಿಸಿನ್ ಮತ್ತು ಸರ್ಜರಿ

(iii) ಬ್ಯಾಚುಲರ್ ಆಫ್ ನ್ಯಾಚುರೋಪತಿ ಮತ್ತು ಯೋಗ ಮತ್ತು

(iv) ಬ್ಯಾಚುಲರ್ ಆಫ್ ಹೋಮಿಯೋಪತಿ ಮೆಡಿಸಿನ್ ಮತ್ತು ಸರ್ಜರಿಯ

–ಪ್ರಥಮ ವರ್ಷ.

(III) ಇಂಜಿನಿಯರ್ ಸಂಸ್ಥೆಗಳಲ್ಲಿ,

(i) ಬ್ಯಾಚುಲರ್ ಆಫ್ ಇಂಜಿನಿಯರಿಂಗ್;

(ii) ಬ್ಯಾಚುಲರ್ ಆಫ್ ಟೆಕ್ನಾಲಜಿ ಮತ್ತು

(iii) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್‌ನಲ್ಲಿ,

–ಪೂರ್ಣಕಾಲಿಕ ಮತ್ತು ಅರೆಕಾಲಿಕ ವ್ಯಾಸಂಗ ಕ್ರಮಗಳೆರಡರಲ್ಲೂ, ಪ್ರಥಮ ವರ್ಷ– ಪ್ರಥಮ ಸೆಮಿಸ್ಟರ್ ಮತ್ತು ಡಿಪ್ಲೋಮಾದಾರರ ಸಂಬಂಧದಲ್ಲಿ ಎರಡನೇ ವರ್ಷ– ಮೂರನೇ ಸೆಮಿಸ್ಟರ್ (ಆರ್ಕಿಟೆಕ್ಚರ್ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರಥಮ ವರ್ಷ, ಪ್ರಥಮ ಸೆಮಿಸ್ಟರ್);

ಮತ್ತು ಇದರಲ್ಲಿ ಪದವಿ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ಯಾವುದೇ ಇತರ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳು ಮತ್ತು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ, ಬಹುವಿಶಿಷ್ಟ ಜ್ಞಾನ ವ್ಯಾಸಂಗ ಕ್ರಮಗಳು ಒಳಗೊಳ್ಳುತ್ತವೆ.

(ಕ್ಯೂ) "ವೃತ್ತಿ ಶಿಕ್ಷಣ ಸಂಸ್ಥೆ" ಎಂದರೆ, ಸಕ್ಷಮ ಶಾಸನಬದ್ಧ ನಿಕಾಯವು ಅನುಮೋದಿಸಿದ ಅಥವಾ ಮಾನ್ಯತೆ ನೀಡಿದ ಪದವಿಯನ್ನು, ಡಿಪ್ಲೋಮಾವನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಒಂದು ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಮಾಡಿಕೊಡುವಂಥ ವೃತ್ತಿ ಶಿಕ್ಷಣವನ್ನು ನೀಡುತ್ತಿರುವ

ಅಥವಾ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳನ್ನು ನಡೆಸುತ್ತಿರುವ ಮತ್ತು ಒಂದು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಯಾವುದೇ ಹೆಸರನ್ನುಳ್ಳ ಒಂದು ಕಾಲೇಜು ಅಥವಾ ಶಾಲೆ ಅಥವಾ ಒಂದು ಸಂಸ್ಥೆ;

(ಆರ್) "ಅರ್ಹತಾ ಪರೀಕ್ಷೆ" ಎಂದರೆ, ನಿಯಮಿಸಬಹುದಾದಂಥ ಒಂದು ಪರೀಕ್ಷೆ;

(ಎಸ್) "ಮೀಸಲಿಟ್ಟ ಸೀಟುಗಳು" ಎಂದರೆ, ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳ ಘಟಕ ಕಾಲೇಜುಗಳಲ್ಲಿ, ಖಾಸಗಿ ಅನುದಾನಿತ ಮತ್ತು ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಟ್ಟ ಸೀಟುಗಳು;

(ಟಿ) "ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ, ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ಮತ್ತು ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ ಪ್ರವೇಶ ನೀಡುವ ಸಮಿತಿ; ಮತ್ತು

(ಯು) "ಅನುದಾನಿತವಲ್ಲದ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸದ ಯಾವುದೇ ಖಾಸಗಿ ಆಡಳಿತವುಳ್ಳ ವೃತ್ತಿ ಶಿಕ್ಷಣ ಸಂಸ್ಥೆ.

(2) ಇದರಲ್ಲಿ ಬಳಸಲಾದ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984 ರಲ್ಲಿ (1984ರ ಕರ್ನಾಟಕ ಅಧಿನಿಯಮ 37) ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

3. ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ.– (1) ಈ ಮುಂದಿನವರನ್ನೊಳಗೊಂಡ ಒಂದು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ ಇರತಕ್ಕದ್ದು.

(ಎ)	ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ– ಇವೆರಡರಲ್ಲೊಂದರ ಕುಲಪತಿ.	ಅಧ್ಯಕ್ಷರು
(ಬಿ)	ವೈದ್ಯಕೀಯ ಶಿಕ್ಷಣದ ನಿರ್ದೇಶಕರು	ಸದಸ್ಯರು
(ಸಿ)	ತಾಂತ್ರಿಕ ಶಿಕ್ಷಣದ ನಿರ್ದೇಶಕರು	ಸದಸ್ಯರು
(ಡಿ)	ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕರು	ಸದಸ್ಯರು
(ಇ)	ಅನುದಾನಿತ ಅಥವಾ ಅನುದಾನಿತವಲ್ಲದ ಕಾಲೇಜುಗಳ ಪ್ರಾಂಶುಪಾಲರ ಪೈಕಿಯಿಂದ ಅಧ್ಯಕ್ಷರು ನಾಮನಿರ್ದೇಶಿಸುವ ಮೂವರು ವ್ಯಕ್ತಿಗಳು	ಸದಸ್ಯರು
	(i) ವೈದ್ಯಕೀಯ ಕಾಲೇಜುಗಳಿಂದ ಒಬ್ಬರು.	

	(ii) ದಂತ ವೈದ್ಯಕೀಯ ಕಾಲೇಜುಗಳಿಂದ ಒಬ್ಬರು	
	(iii) ಇಂಜಿನಿಯರಿಂಗ್ ಕಾಲೇಜುಗಳಿಂದ ಒಬ್ಬರು.	
(ಎಫ್)	ವಿಶೇಷ ಅಧಿಕಾರಿ, ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ	ಸದಸ್ಯ ಕಾರ್ಯದರ್ಶಿ

ಪರಂತು, ಎಲ್ಲಾ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು, ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗಾಗಿ ಮೀಸಲಿಟ್ಟ ಸೀಟುಗಳ ಹೊರತಾಗಿ, ತಮ್ಮ ಎಲ್ಲ ಸೀಟುಗಳನ್ನು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ಮೂಲಕ ಭರ್ತಿಮಾಡಲು ಒಪ್ಪಿಕೊಂಡರೆ ಮತ್ತು ಆಯ್ಕೆ ಮಾಡಿಕೊಂಡರೆ, ಆಗ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ವೈದ್ಯಕೀಯ, ದಂತವೈದ್ಯ, ಇಂಜಿನಿಯರಿಂಗ್ ಮತ್ತು ಇತರ ಫ್ಯಾಕಲ್ಟಿಗಳಲ್ಲಿ ಶಿಕ್ಷಣ ನೀಡುತ್ತಿರುವ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗದ ಪ್ರತಿನಿಧಿಗಳನ್ನು ಒಳಗೊಂಡಂತೆ, ತಾನು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಸದಸ್ಯರು ಇರುವ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯನ್ನು ಪುನರ್‌ರಚಿಸಬಹುದು.

(2) ಸಮಿತಿಯು, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸತಕ್ಕದ್ದು. ಪರೀಕ್ಷೆ ಸುಗಮವಾಗಿ ಆಗುವಂತೆ ನೋಡಿಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರವು, ಅಗತ್ಯವಾಗಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕಕ್ಕೆ ಒದಗಿಸತಕ್ಕದ್ದು.

(3) ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಸಮಿತಿಯು, ತಾನು ಸೂಕ್ತವೆಂದು ಭಾವಿಸುವಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(4) ಸಮಿತಿಯು, ನಿಯಮಿಸಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅಂಥ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸತಕ್ಕದ್ದು.

(5) ನಾಮನಿರ್ದೇಶಿಸಲು ಸಕ್ಷಮವಾಗಿರುವ ಪ್ರಾಧಿಕಾರದ ಇಚ್ಛೆಗೊಳಪಟ್ಟು ಸಮಿತಿಯ ನಾಮನಿರ್ದೇಶಿತ ಸದಸ್ಯರು ತಮ್ಮ ನಾಮನಿರ್ದೇಶನದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಧಿಕಾರ ಸ್ಥಾನದಲ್ಲಿರತಕ್ಕದ್ದು. ಯಾವುದೇ ಕಾರಣಕ್ಕಾಗಿ ಅದಕ್ಕೆ ಮೊದಲೇ ಯಾವುದೇ ಖಾಲಿ ಸ್ಥಾನ ಉಂಟಾದ ಸಂದರ್ಭದಲ್ಲಿ, ಅಂಥ ಖಾಲಿ ಸ್ಥಾನವನ್ನು ಉಳಿದ ಅವಧಿಗಾಗಿ ಮೇಲೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ತುಂಬತಕ್ಕದ್ದು. ಅಧಿಕಾರೇತರ ಸದಸ್ಯರು, ನಿಯಮಿಸಬಹುದಾದಂಥ ದರದಲ್ಲಿ ಉಪವೇಶನ ಶುಲ್ಕ ಮತ್ತು ಪ್ರಯಾಣ ಭತ್ಯಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.

(6) ಪ್ರತಿಯೊಂದು ಸರ್ಕಾರಿ ಸೀಟಿಗೆ ಪ್ರವೇಶವನ್ನು, ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಮೆರಿಟ್ ಆಧಾರದ ಮೇಲೆ ಹಾಗೂ ಆ ತರುವಾಯದ ಕೇಂದ್ರೀಯ ಕೌನ್ಸಿಲಿಂಗ್ ಮೂಲಕ ರಾಜ್ಯದ ಮೀಸಲಾತಿ ನೀತಿಗೊಳಪಟ್ಟು ಮಾಡತಕ್ಕದ್ದು.

4. ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶದ ವಿಧಾನ .– ಯಾವುದೇ ಒಂದು ವ್ಯಾಸಂಗ ವಿಷಯದಲ್ಲಿ ವೃತ್ತಿ ಶಿಕ್ಷಣವನ್ನು ನೀಡುತ್ತಿರುವಂಥ, ಎಲ್ಲಾ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು ಅವು ಅಲ್ಪಸಂಖ್ಯಾತ ಸಂಸ್ಥೆಯಾಗಿರಲಿ ಅಥವಾ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಾಗಿರಲಿ, ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯು, ಅಖಿಲ ಭಾರತ

ಆಧಾರದ ಮೇಲೆ ರಾಜ್ಯ ಮಟ್ಟದಲ್ಲಿ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ, ತರುವಾಯ ಕೇಂದ್ರೀಯ ಕೌನ್ಸಿಲಿಂಗ್ ಮೂಲಕವಾಗಿ, ಏಕಗವಾಕ್ಷಿ ವಿಧಾನವಾಗಿ 5ನೇ ಪ್ರಕರಣದ ಅಡಿಯಲ್ಲಿನ ಪ್ರವೇಶ ಮೇಲ್ವಿಚರಣಾ ಸಮಿತಿಯು ನಿರ್ಧರಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸಿ ತಮ್ಮ ಸಂಸ್ಥೆಗಳಿಗೆ ಪ್ರವೇಶವನ್ನು ನೀಡತಕ್ಕದ್ದು ಅಥವಾ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ಮೂಲಕ ಪ್ರವೇಶ ಪ್ರಕ್ರಿಯೆ ನಡೆಸಲು ಆಯ್ಕೆ ಮಾಡಿಕೊಂಡಲ್ಲಿ ಅದೇ ರೀತಿ ತಮ್ಮ ಸಂಸ್ಥೆಗಳಿಗೆ ಪ್ರವೇಶ ನೀಡಬಹುದು.

5. ಪ್ರವೇಶ ಮೇಲ್ವಿಚಾರಣಾ ಸಮಿತಿ :– (1) ಈ ಮುಂದಿನವರನ್ನು ಒಳಗೊಂಡ ಒಂದು ಪ್ರವೇಶ ಮೇಲ್ವಿಚಾರಣಾ ಸಮಿತಿಯು ಇರತಕ್ಕದ್ದು.–

(ಎ)	ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ನಾಮನಿರ್ದೇಶಿಸಿದ, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು	ಅಧ್ಯಕ್ಷರು
(ಬಿ)	ವ್ಯಾಸಂಗ ವಿಷಯಗಳನ್ನು ಅವಲಂಬಿಸಿ ಸಂದರ್ಭಾನುಸಾರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿ	ಸದಸ್ಯರು
(ಸಿ)	ಅಧ್ಯಕ್ಷರು, ನಾಮನಿರ್ದೇಶಿಸಿದ, ಸಂಬಂಧಪಟ್ಟ ಶಿಕ್ಷಣ ಕ್ಷೇತ್ರದಲ್ಲಿ ಪ್ರಸಿದ್ಧರಾದ ಒಬ್ಬ ವ್ಯಕ್ತಿ	ಸದಸ್ಯರು
(ಡಿ)	ಅಧ್ಯಕ್ಷರು ನಾಮನಿರ್ದೇಶಿಸಿದ, ಸಂದರ್ಭಾನುಸಾರ ಖ್ಯಾತ ವೈದ್ಯರಾಗಿರುವ ಅಥವಾ ಖ್ಯಾತ ಇಂಜಿನಿಯರ್ ಆಗಿರುವ ಒಬ್ಬ ವ್ಯಕ್ತಿ (ವ್ಯಾಸಂಗ ವಿಷಯ ಅವಲಂಬಿಸಿ)	ಸದಸ್ಯರು
(ಇ)	ವೈದ್ಯ ಶಿಕ್ಷಣ ಅಥವಾ ಸಂದರ್ಭಾನುಸಾರ ಉನ್ನತ ಶಿಕ್ಷಣದ ಪ್ರಭಾರ–ದಲ್ಲಿರುವ ಸರ್ಕಾರದ ಕಾರ್ಯದರ್ಶಿ (ವ್ಯಾಸಂಗ ವಿಷಯವನ್ನು ಅವಲಂಬಿಸಿ)	ಸದಸ್ಯ ಕಾರ್ಯದರ್ಶಿ

(2) ಯಾವುದೇ ಖಾಸಗಿಯಾದ ಅನುದಾನಿತ ಅಥವಾ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಯೊಡನೆ ಸಂಬಂಧ ಹೊಂದಿರುವ ಯಾವ ವ್ಯಕ್ತಿಯೂ, ಪ್ರವೇಶ ಮೇಲ್ವಿಚಾರಣಾ ಸಮಿತಿಯ ಸದಸ್ಯನಾಗಿರುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(3) ನಾಮನಿರ್ದೇಶಿಸಲು ಸಕ್ಷಮವಾಗಿರುವ ಪ್ರಾಧಿಕಾರದ ಇಚ್ಛೆಗೊಳಪಟ್ಟು ಸಮಿತಿಯ ನಾಮನಿರ್ದೇಶಿತ ಸದಸ್ಯರು ತಮ್ಮ ನಾಮನಿರ್ದೇಶನದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಧಿಕಾರ ಸ್ಥಾನದಲ್ಲಿರತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ ಅದಕ್ಕೆ ಮೊದಲೇ ಯಾವುದೇ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ, ಅಂಥ ಖಾಲಿಸ್ಥಾನವನ್ನು ಉಳಿದ ಅವಧಿಗಾಗಿ, ಮೇಲೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ತುಂಬತಕ್ಕದ್ದು. ಅಧಿಕಾರೇತರ ಸದಸ್ಯರು, ನಿಯಮಿಸಬಹುದಾದಂಥ ದರದಲ್ಲಿ ಉಪವೇಶನ ಶುಲ್ಕ ಮತ್ತು ಪ್ರಯಾಣ ಭತ್ಯೆಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.

(4) ಪ್ರವೇಶ ಮೇಲ್ವಿಚಾರಣಾ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನ ಉಂಟಾದ ಕಾರಣ ಮಾತ್ರದಿಂದಲೇ ಅಥವಾ ಅದರ ರಚನೆಯಲ್ಲಿಯ ಯಾವುದೇ ದೋಷದಿಂದಲೇ ಅಸಿಂಧುವಾಗುತ್ತದೆಂದು ಭಾವಿಸತಕ್ಕದ್ದಲ್ಲ.

(5) ಪ್ರವೇಶ ಮೇಲ್ವಿಚಾರಣಾ ಸಮಿತಿಯ ಒಬ್ಬ ಸದಸ್ಯನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅಂಥ ಸದಸ್ಯನಾದವನಿಗೆ ತಕ್ಕದಾಗಿರದಂಥ ಯಾವುದೇ ಕೃತ್ಯವನ್ನು ಮಾಡಿದರೆ ಅವನ ಸದಸ್ಯತ್ವ ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವೊಬ್ಬ ಸದಸ್ಯನಿಗೂ, ಆತನು ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟಹೊರತು ಆತನನ್ನು ತೆಗೆದುಹಾಕತಕ್ಕದ್ದಲ್ಲ.

(6) ಅಧ್ಯಕ್ಷರು, ಪ್ರವೇಶ ಮೇಲ್ವಿಚಾರಣಾ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಸಮಿತಿಯು, ತಾನು ಸೂಕ್ತವೆಂದು ಭಾವಿಸುವಂಥ ತನ್ನದೇ ಆದ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬಹುದು.

(7) ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಅನುಸರಿಸಬೇಕಾದ ಗುಣಮಟ್ಟವನ್ನು ಮತ್ತು ಕಾರ್ಯವಿಧಾನಗಳನ್ನು ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸತಕ್ಕದ್ದು ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯ ಅಧೀಕ್ಷಣೆ ಮತ್ತು ಮೇಲ್ವಿಚಾರಣೆಯನ್ನು ಮಾಡತಕ್ಕದ್ದು. ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ಕೇಂದ್ರೀಯ ಕೌನ್ಸಿಲಿಂಗ್ ಮತ್ತು ಪ್ರವೇಶಗಳನ್ನು ಮಾಡುವಾಗ ಅವನ್ನು ನ್ಯಾಯಯುತವಾಗಿ, ಪಾರದರ್ಶಕವಾಗಿ ಮತ್ತು ಶೋಷಣೆಯಾಗದಂಥ ರೀತಿಯಲ್ಲಿ ನಡೆಸುವಂತೆ ನೋಡಿಕೊಳ್ಳುವ ಉದ್ದೇಶದಿಂದ ಪ್ರವೇಶ ಮೇಲ್ವಿಚಾರಣಾ ಸಮಿತಿಯು ಅವುಗಳ ಅಧೀಕ್ಷಣೆ ಮತ್ತು ಮೇಲ್ವಿಚಾರಣೆಯನ್ನೂ ಮಾಡತಕ್ಕದ್ದು. ಇದು ಸುಗಮವಾಗಿ ಆಗುವಂತೆ ನೋಡಿಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರವು ಪ್ರವೇಶ ಮೇಲ್ವಿಚಾರಣಾ ಸಮಿತಿಗೆ ಅವಶ್ಯವಿರುವಷ್ಟು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ಮತ್ತು ನೌಕರರುಗಳನ್ನು ಒದಗಿಸತಕ್ಕದ್ದು.

(8) ಪ್ರವೇಶ ಮೇಲ್ವಿಚಾರಣಾ ಸಮಿತಿಯು ರೂಪಿಸಿದ ಕಾರ್ಯವಿಧಾನವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳ ಸಂಬಂಧದಲ್ಲಿ ಬಂದ ದೂರುಗಳ ವಿಚಾರಣೆಯನ್ನು ಸಹ ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಡೆಸಬಹುದು. ಪ್ರವೇಶ ಮೇಲ್ವಿಚಾರಣಾ ಸಮಿತಿಯು, ಸಂಬಂಧಪಟ್ಟ ಆಡಳಿತ ಮಂಡಳಿಯಿಂದ ಸಾಕ್ಷ್ಯವನ್ನು ಮತ್ತು ವಿವರಣೆಯನ್ನು ಪಡೆದುಕೊಂಡ ತರುವಾಯ, ಪ್ರವೇಶಕ್ಕಾಗಿ ನಿಯಮಿಸಲಾದ ಕಾರ್ಯವಿಧಾನವನ್ನು ಉಲ್ಲಂಘಿಸಲಾಗಿದೆ ಎಂಬ ಅಥವಾ ಅನುದಾನಿತವಲ್ಲದ ಕಾಲೇಜುಗಳಿಂದ ಲೋಪದೋಷಗಳಾಗಿವೆ ಎಂಬ ತೀರ್ಮಾನಕ್ಕೆ ಬಂದರೆ, ಅದು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡತಕ್ಕದ್ದು – ಮತ್ತು ರಾಜ್ಯ ಸರ್ಕಾರವು, ಪ್ರತಿಯೊಂದು ಉಲ್ಲಂಘನೆಯ ಸಂದರ್ಭದಲ್ಲಿ 10 ಲಕ್ಷ ರೂಪಾಯಿಗಳವರೆಗೆ ಜುಲ್ಮಾನೆಯನ್ನು ವಿಧಿಸಲು ಮತ್ತು ಸಂಗ್ರಹಿಸಲು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಯಾವುದೇ ಕ್ರಮವನ್ನು ಕೈಗೊಳ್ಳಲು ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸಬಹುದು. ಅಂಥ ಜುಲ್ಮಾನೆಯನ್ನು ವಿಧಿಸುವುದು ವಿಶ್ವವಿದ್ಯಾನಿಲಯಕ್ಕೆ ಕಾನೂನು ಬದ್ಧವಾಗಿರತಕ್ಕದ್ದು. ಪ್ರವೇಶ ಮೇಲ್ವಿಚಾರಣಾ ಸಮಿತಿಯು ಅಂಥ ಪ್ರವೇಶಗಳನ್ನು, ಮೆರಿಟ್ ಅನ್ನು ಕಡೆಗಣಿಸಿ ಮಾಡಲಾಗಿರುವುದರಿಂದ ಅಸಿಂಧುವೆಂದು ಸಹ ಘೋಷಿಸಬಹುದು ಮತ್ತು ಅಂಥ ಪ್ರಕರಣದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯವು, ಅಂಥ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡತಕ್ಕದ್ದಲ್ಲ. ವಿಶ್ವವಿದ್ಯಾನಿಲಯವು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಅಂಥ ಸಂಸ್ಥೆಗಳಿಗೆ ಮಾಡಲಾದ ಎಲ್ಲ ಅಥವಾ ಯಾವುದೇ ಪ್ರವೇಶಗಳನ್ನು ಅನುಮೋದಿಸತಕ್ಕದ್ದಲ್ಲ.

(9) ಪ್ರವೇಶ ಮೇಲ್ವಿಚಾರಣಾ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಉದ್ಭವಿಸಬಹುದಾದ ಎಲ್ಲಾ ವಿಷಯಗಳ ಬಗ್ಗೆ ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತದೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆ ಮಾಡುವ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯವು ದಾವೆಯ ಅಧಿವಿಚಾರಣೆಗೆ ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ :-

(ಎ) ಸಾಕ್ಷಿದಾರನಿಗೆ ಸಮನು ನೀಡುವುದು ಮತ್ತು ಹಾಜರಾತಿಗೆ ಒತ್ತಾಯಿಸುವುದು ಮತ್ತು ಪ್ರಮಾಣವಚನದ ಮೇಲೆ ಅವನ ವಿಚಾರಣೆ ನಡೆಸುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಮಾಡುವುದು ಮತ್ತು ಹಾಜರುಪಡಿಸುವುದು;

(ಸಿ) ಅಫೀದಾವಿತ್ತಿನ ಮೇಲೆ ಸಾಕ್ಷ್ಯಗಳನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರನ್ನು ವಿಚಾರಣೆ ಮಾಡುವುದಕ್ಕಾಗಿ ಯಾವುದೇ ಕಮೀಷನನ್ನು ಹೊರಡಿಸುವುದು.

(10) ಪ್ರವೇಶ ಮೇಲ್ವಿಚಾರಣಾ ಸಮಿತಿಯು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಯಾವುದೇ ಸಂಸ್ಥೆಯು ಉಲ್ಲಂಘಿಸಿದೆ ಎಂದು ಮನಗಂಡರೆ ಅದು ಯುಕ್ತ ವಿಶ್ವವಿದ್ಯಾನಿಲಯಕ್ಕೆ ಅಥವಾ ಶಾಸನಬದ್ಧ ನಿಕಾಯಕ್ಕೆ, ಅಂಥ ಸಂಸ್ಥೆಯ ಸಂಯೋಜನೆ ಅಥವಾ ಮನ್ನಣೆಯನ್ನು ಹಿಂತೆಗೆದುಕೊಳ್ಳಬೇಕೆಂದು ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಇತರೆ ಕ್ರಮವನ್ನು ಕೈಗೊಳ್ಳಲು ಶಿಫಾರಸ್ಸು ಮಾಡಬಹುದು.

(11) ಪ್ರವೇಶ ಮೇಲ್ವಿಚಾರಣಾ ಸಮಿತಿ ಅಥವಾ ಅದರಿಂದ ಅಧಿಕಾರ ಪಡೆದ ಯಾವೊಬ್ಬ ಅಧಿಕಾರಿಯು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ, ಸಂಘಗಳ ಮೂಲಕ ನಡೆಸಲಾಗುವ ಪ್ರವೇಶ ಪ್ರಕ್ರಿಯೆಗಳನ್ನು ಯಾವುದೇ ಹಂತದಲ್ಲಿ ಪರಿಶೀಲಿಸುವ ಅಧಿಕಾರದ ಹೊಂದಿರತಕ್ಕದ್ದು. ಅಂಥ ಪರಿಶೀಲನೆ ನಡೆಸಿದಾಗಲೆಲ್ಲಾ, ಪ್ರವೇಶಗಳ ಮೇಲ್ವಿಚಾರಣಾ ಸಮಿತಿಯು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಪ್ರವೇಶ ಪ್ರಕ್ರಿಯೆಯು ಅನ್ಯಾಯವಾದದ್ದು, ಪಾರದರ್ಶಕವಲ್ಲದ್ದು ಮತ್ತು ಶೋಷಕವಾದದ್ದು ಅಥವಾ ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸಿದ ಪ್ರಕಾರ್ಯದ ಉಲ್ಲಂಘನೆ ಮಾಡಿರುವಂಥದ್ದು ಎಂಬ ಅಭಿಪ್ರಾಯಕ್ಕೆ ಬಂದರೆ ಅದು, ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಅಂಥ ಕ್ರಮವು ಅನ್ಯಾಯವಾದದ್ದು ಅಥವಾ ಪಾರದರ್ಶಕವಲ್ಲದ್ದು ಅಥವಾ ಶೋಷಕವಾದದ್ದು ಹಾಗಾಗಿ ಅಸಿಂಧುವಾಗಿರುವುದಾಗಿ ಘೋಷಿಸಬಹುದು.

(12) (11)ನೇ ಉಪ-ಪ್ರಕರಣದ ಅಡಿಯಲ್ಲಿ ಅಂಥ ಘೋಷಣೆ ಮಾಡಿದ ಮೇಲೆ ಖಾಸಗಿ ಅನುದಾನಿತವಲ್ಲದ ಸಂಸ್ಥೆಗಳಿಗಾಗಿ ಪ್ರವೇಶ ಪ್ರಕ್ರಿಯೆಯನ್ನು ಅದೇ ಅರ್ಜಿದಾರರಿಗಾಗಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸತಕ್ಕದ್ದು. ಈ ಸಂಬಂಧದಲ್ಲಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ಭರಿಸಿದ ವೆಚ್ಚವನ್ನು ಕೌನ್ಸಿಲಿಂಗ್ ಮೂಲಕ ಸೀಟುಗಳ ಹಂಚಿಕೆ ಸಂದರ್ಭದಲ್ಲಿ ಆ ಸಂಘದಿಂದ ಅಥವಾ ಭೂ-ಕಂದಾಯದ ಬಾಕಿಗಳೆಂಬತೆ ವಸೂಲಿ ಮಾಡತಕ್ಕದ್ದು.

6. ಶುಲ್ಕ ನಿಯಂತ್ರಣ ಸಮಿತಿ .- (1) ಖಾಸಗಿ ಅನುದಾನರಹಿತ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಶುಲ್ಕ ನಿಗದಿಪಡಿಸುವುದಕ್ಕಾಗಿ 'ಶುಲ್ಕ ನಿಯಂತ್ರಣ ಸಮಿತಿ'

ಎಂದು ಕರೆಯಲಾಗುವ ಸಮಿತಿಯೊಂದು ಇರತಕ್ಕದ್ದು. ಅದು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು.-

(ಎ)	ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ ನಾಮನಿರ್ದೇಶಿತರಾದ ಕರ್ನಾಟಕ ಉಚ್ಚನ್ಯಾಯಾಲಯದ ಒಬ್ಬ ನಿವೃತ್ತ ನ್ಯಾಯಾಧೀಶರು	ಅಧ್ಯಕ್ಷರು
(ಬಿ)	ವ್ಯಾಸಂಗಕ್ರಮಕ್ಕನುಸಾರವಾಗಿ ಸಂದರ್ಭಾನುಸಾರ ಭಾರತದ ವೈದ್ಯಕೀಯ ಪರಿಷತ್ತಿನ ಅಥವಾ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಒಬ್ಬ ಪ್ರತಿನಿಧಿ	ಸದಸ್ಯ
(ಸಿ)	ಅಧ್ಯಕ್ಷರಿಂದ ನಾಮ ನಿರ್ದೇಶಿತನಾದ ಒಬ್ಬ ಖ್ಯಾತ ವ್ಯಕ್ತಿ	ಸದಸ್ಯ
(ಡಿ)	ಅಧ್ಯಕ್ಷರಿಂದ ನಾಮನಿರ್ದೇಶಿತನಾದ ಒಬ್ಬ ಖ್ಯಾತ ಚಾರ್ಟರ್ಡ್ ಅಕೌಂಟೆಂಟ್	ಸದಸ್ಯ
(ಇ)	ವ್ಯಾಸಂಗ ಕ್ರಮಕ್ಕನುಸಾರವಾಗಿ ಸಂದರ್ಭಾನುಸಾರ ವೈದ್ಯಕೀಯ ಶಿಕ್ಷಣ ಅಥವಾ ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ	ಸದಸ್ಯ ಕಾರ್ಯದರ್ಶಿ

(2) ಶುಲ್ಕ ನಿಯಂತ್ರಣ ಸಮಿತಿಯು,-

(i) ಶೈಕ್ಷಣಿಕ ವರ್ಷದ ಪ್ರಾರಂಭದ ಬಹುಮುಂಚಿತವಾಗಿಯೇ ಅಂದರೆ, ಹಿಂದಿನ ಶೈಕ್ಷಣಿಕ ವರ್ಷದ ಡಿಸೆಂಬರ್ 31ರೊಳಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು ಮತ್ತು ಲೆಕ್ಕಪತ್ರಗಳ ಪುಸ್ತಕಗಳೊಂದಿಗೆ, ಅಂಥ ಸಂಸ್ಥೆಯ ಪ್ರಸ್ತಾವಿತ ಶುಲ್ಕ ರಚನೆಯನ್ನು ಪರಿಶೋಧನೆಗಾಗಿ ಸಮಿತಿಯ ಮುಂದೆ ಇಡಲು ಪ್ರತಿಯೊಂದು ವೃತ್ತಿ ಶಿಕ್ಷಣ ಸಂಸ್ಥೆಯನ್ನು ಅಗತ್ಯಪಡಿಸುವ;

(ii) ಪ್ರತಿಯೊಂದು ಸಂಸ್ಥೆಯು ಪ್ರಸ್ತಾವ ಸಲ್ಲಿಸಿದ ಶುಲ್ಕವು ಸಮರ್ಥನೀಯವಾಗಿದೆ ಮತ್ತು ಅದರ ಅನುಷ್ಠಾನ ಲಾಭಕೋರತನ ಆಗುವುದಿಲ್ಲ ಅಥವಾ ಕ್ಯಾಪಿಟೇಷನ್ ಶುಲ್ಕವನ್ನು ವಿಧಿಸಿದಂತೆ ಆಗುವುದಿಲ್ಲ ಎಂಬುದನ್ನು ಪರಿಶೀಲಿಸಿ ನೋಡುವ;

(iii) ಶುಲ್ಕ ರಚನೆ ಅನುಮೋದಿಸುವುದಕ್ಕೆ ಅಥವಾ ಸಂಸ್ಥೆ ವಿಧಿಸಬಹುದಾದ ಬೇರೊಂದು ಶುಲ್ಕವನ್ನು ನಿರ್ಧರಿಸುವುದಕ್ಕೆ,

-ಅಧಿಕಾರ ಹೊಂದಿರತಕ್ಕದ್ದು.

(3) ಶುಲ್ಕ ನಿಯಂತ್ರಣ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಉದ್ಭವಿಸಬಹುದಾದ ಎಲ್ಲಾ ವಿಷಯಗಳ ಬಗ್ಗೆ ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸಿ-ಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ಅದು ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯವು ದಾವೆಯ ಅಧಿವಿಚಾರಣೆ ಮಾಡುವಾಗ ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿದಾರನಿಗೆ ಸಮನುನೀಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣ ವಚನದ ಮೇಲೆ ವಿಚಾರಣೆ ನಡೆಸುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕುವುದು ಮತ್ತು ಹಾಜರುಪಡಿಸುವುದು;

(ಸಿ) ಅಫೀದಾವಿತ್ತಿನ ಮೇಲೆ ಸಾಕ್ಷ್ಯಗಳನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರನ್ನು ವಿಚಾರಣೆ ಮಾಡುವುದಕ್ಕಾಗಿ ಯಾವುದೇ ಕಮೀಷನನ್ನು ಹೊರಡಿಸುವುದು.

(4) ಸಮಿತಿಯು ನಿರ್ಧರಿಸಿದ ಶುಲ್ಕಕ್ಕೆ ಮೂರುವರ್ಷಗಳ ಅವಧಿವರೆಗೆ ಆ ವೃತ್ತಿ ಶಿಕ್ಷಣ ಸಂಸ್ಥೆಯು ಬದ್ಧವಾಗಿರತಕ್ಕದ್ದು. ಸದರಿ ಅವಧಿಯ ಕೊನೆಯಲ್ಲಿ ಪರಿಷ್ಕರಣೆಗಾಗಿ ಅರ್ಜಿ ಸಲ್ಲಿಸಲು ಆ ಸಂಸ್ಥೆಗೆ ಮುಕ್ತ ಅವಕಾಶವಿದೆ. ಹಾಗೆ ನಿರ್ಧರಿಸಲಾದ ಶುಲ್ಕವು, ಆ ಶೈಕ್ಷಣಿಕ ವರ್ಷದಲ್ಲಿ ಒಂದು ಸಂಸ್ಥೆಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಕಾಲೇಜಿನಲ್ಲಿ ಅವನ ವ್ಯಾಸಂಗವು ಮುಕ್ತಾಯವಾಗುವವರೆಗೆ ಅದು ಪರಿಷ್ಕರಣೆಯಾಗತಕ್ಕದ್ದಲ್ಲ. ಯಾವ ವೃತ್ತಿ ಶಿಕ್ಷಣ ಸಂಸ್ಥೆಯೂ, ಅಭ್ಯರ್ಥಿಯಿಂದ ಒಂದು ವರ್ಷದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಗ್ರಹಿಸತಕ್ಕದ್ದಲ್ಲ. ಒಂದು ವರ್ಷದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಗ್ರಹಿಸಿದರೆ ಅದನ್ನು ಕ್ಯಾಪಿಟೇಷನ್ ಶುಲ್ಕವನ್ನು ಸಂಗ್ರಹಿಸಿದಂತೆ ಎಂಬುದಾಗಿ ಪರಿಗಣಿಸಲಾಗುವುದು ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕದ ನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ 37) ಅಡಿಯಲ್ಲಿ ದಂಡ ವಿಧಿಸುವಿಕೆಗೆ ಗುರಿಯಾಗತಕ್ಕದ್ದು.

(5) ಯಾವುದೇ ಖಾಸಗಿ ಅನುದಾನಿತ ಅಥವಾ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಯೊಂದಿಗೆ ಸಂಬಂಧವುಳ್ಳ ಯಾವ ವ್ಯಕ್ತಿಯೂ ಶುಲ್ಕ ನಿಯಂತ್ರಣ ಸಮಿತಿಯ ಸದಸ್ಯನಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(6) ನಾಮನಿರ್ದೇಶನ ಮಾಡಲು ಸಕ್ಷಮವಾದ ಪ್ರಾಧಿಕಾರದ ಇಷ್ಟಕ್ಕೆ ಒಳಪಟ್ಟು, ನಾಮನಿರ್ದೇಶಿತ ಸದಸ್ಯರ ಪದಾವಧಿಯು, ಅವರು, ನಾಮನಿರ್ದೇಶಿತರಾದ ದಿನಾಂಕದಿಂದ ಎರಡು ವರ್ಷಗಳಾಗಿರತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ, ಅದಕ್ಕಿಂತ ಮುಂಚೆಯೇ ಸ್ಥಾನವು ಖಾಲಿಯಾದ ಸಂದರ್ಭದಲ್ಲಿ ಅಂಥ ಖಾಲಿ ಸ್ಥಾನವನ್ನು ಉಳಿದ ಅವಧಿಗಾಗಿ ಭರ್ತಿ ಮಾಡತಕ್ಕದ್ದು. ಸರ್ಕಾರೇತರ ಸದಸ್ಯರು, ನಿಯಮಿಸಬಹುದಾದಂಥ ಉಪವೇಶನ ಶುಲ್ಕ ಮತ್ತು ಭತ್ಯಗಳನ್ನು ಪ್ರಯಾನ ಪಡೆಯಲು ಅರ್ಹರಾಗಿರತಕ್ಕದ್ದು.

(7) ಶುಲ್ಕ ನಿಯಂತ್ರಣ ಸಮಿತಿಯ ಒಬ್ಬ ಸದಸ್ಯನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅಂಥ ಸದಸ್ಯನಾದವನಿಗೆ ತಕ್ಕದ್ದಾಗಿರದಂಥ ಯಾವುದೇ ಕಾರ್ಯವನ್ನು ಮಾಡಿದ್ದರೆ ಆತನ ಸದಸ್ಯತ್ವವು ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವೊಬ್ಬ ಸದಸ್ಯನಿಗೂ ಆತನು, ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ಆತನನ್ನು ಸಮಿತಿಯಿಂದ ತೆಗೆದುಹಾಕತಕ್ಕದ್ದಲ್ಲ.

(9) ಅಧ್ಯಕ್ಷರು, ಶುಲ್ಕ ನಿಯಂತ್ರಣ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಸಮಿತಿಯು, ಅದು ತಾನು ಯುಕ್ತವೆಂದು ಭಾವಿಸಿದಂಥ ತನ್ನದೇ ಕ್ರಮಗಳನ್ನು ಅನುಸರಿಸಬಹುದು.

7. **ಶುಲ್ಕ ನಿಗದಿಗೆ ಪರಿಗಣನೆಯ ಅಂಶಗಳು** .– (1) ಶುಲ್ಕ ನಿಯಂತ್ರಣ ಸಮಿತಿಯು, ಈ ಮುಂದಿನ ಅಂಶಗಳನ್ನು ಪರಿಗಣಿಸಿ, ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಖಾಸಗಿ ಅನುದಾನಿತ ಅಥವಾ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು ವಿಧಿಸತಕ್ಕ ಶುಲ್ಕ ಅಥವಾ ಶುಲ್ಕಗಳನ್ನು ನಿಗದಿಪಡಿಸತಕ್ಕದ್ದು. ಎಂದರೆ,–

(ಎ) ವೃತ್ತಿ ಶಿಕ್ಷಣ ಸಂಸ್ಥೆಯು ಇರುವ ಸ್ಥಳ;

(ಬಿ) ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮದ ಸ್ವರೂಪ;

(ಸಿ) ದೊರೆಯಬಹುದಾದ ಮೂಲ ಸೌಕರ್ಯಗಳು;

(ಡಿ) ಆಡಳಿತದ ಮತ್ತು ನಿರ್ವಹಣೆಯ ವೆಚ್ಚ;

(ಇ) ಸಂಸ್ಥೆಯ ಬೆಳವಣಿಗೆಗೆ ಮತ್ತು ಅಭಿವೃದ್ಧಿಗಾಗಿ ಅಗತ್ಯವಿರುವ ಯುಕ್ತ ಹೆಚ್ಚುವರಿಗಳು;

(ಎಫ್) ಸಮಿತಿಯು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಇತರ ಅಂಶಗಳು.

(2) ಯಾವ ವೃತ್ತಿಶಿಕ್ಷಣ ಸಂಸ್ಥೆಯೂ, ವೃತ್ತಿಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಯಾವುದೇ ಹೆಸರಿನಿಂದ ಅಥವಾ ಯಾವುದೇ ರೂಪದಲ್ಲಿ ಯಾವುದೇ ಶುಲ್ಕವನ್ನು ಶುಲ್ಕ ನಿಯಂತ್ರಣ ಸಮಿತಿಯು ನಿಗದಿಪಡಿಸಿದ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯವು ನಿಯಮಿಸಿದ ಶುಲ್ಕಕ್ಕಿಂತಲೂ ಹೆಚ್ಚುವರಿಯಾಗಿ ಸಂಗ್ರಹಿಸತಕ್ಕದ್ದಲ್ಲ.

(3) ಶುಲ್ಕ ನಿಯಂತ್ರಣ ಸಮಿತಿಯು, ವಿವಿಧ ಸಂಸ್ಥೆಗಳಲ್ಲಿ ಒದಗಿಸುತ್ತಿರುವ ವಿವಿಧ ಬಗೆಯ ವೃತ್ತಿ ವ್ಯಾಸಂಗ ಕ್ರಮಗಳ ಸಂಬಂಧದಲ್ಲಿ ಅಲ್ಲಿ ಲಭ್ಯವಿರುವ ಸೌಲಭ್ಯಗಳ ಆಧಾರದ ಮೇಲೆ ಬೇರೆ ಬೇರೆ ಶುಲ್ಕವನ್ನು ನಿಗದಿಪಡಿಸಬಹುದು ಮತ್ತು ಈ ಉದ್ದೇಶಕ್ಕಾಗಿ ಅದು, ಸಮಾನ ಸ್ಥಿತಿಗತಿಯ ಸಂಸ್ಥೆಗಳನ್ನು ಸ್ಥೂಲ ಗುಂಪುಗಳಾಗಿ ಸೇರಿಸಬಹುದು:

ಪರಂತು, ಶುಲ್ಕ ನಿಯಂತ್ರಣ ಸಮಿತಿಯು, ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅನಿವಾಸಿ ಭಾರತೀಯರ ಪ್ರವೇಶಕ್ಕಾಗಿ, ಹೆಚ್ಚಿನ ಶುಲ್ಕವನ್ನು ಸಂಗ್ರಹಿಸಲು ಅವಕಾಶ ನೀಡಬಹುದಾಗಿದೆ. ರಾಜ್ಯ ಸರ್ಕಾರವು, ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಂದ ಸಂಗ್ರಹಿಸತಕ್ಕ ಕನಿಷ್ಠ ಶುಲ್ಕವನ್ನು ನಿಗದಿಪಡಿಸಬಹುದು ಮತ್ತು ಆ ಸಂಸ್ಥೆಯಲ್ಲಿ ಇತರೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಸಂಗ್ರಹಿಸಲಾದ ಶುಲ್ಕವನ್ನು, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲು ಬಳಸತಕ್ಕದ್ದು.

(4) ಯಾವುದೇ ಸಂಸ್ಥೆಯು, ಕ್ಯಾಪಿಟೇಷನ್ ಶುಲ್ಕವನ್ನು ಅಥವಾ ನಿಗದಿಪಡಿಸಲಾದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಗ್ರಹಿಸುತ್ತಿರುವುದಾಗಿ ಅಥವಾ ಲಾಭಕೋರತನದಿಂದ ಶುಲ್ಕವನ್ನು ಸಂಗ್ರಹಿಸುತ್ತಿರುವುದಾಗಿ ಯಾವುದೇ ದೂರು ಬಂದಲ್ಲಿ, ಶುಲ್ಕ ನಿಯಂತ್ರಣ ಸಮಿತಿಯು, ಸಾಕ್ಷ್ಯಗಳನ್ನು ಮತ್ತು ಸಂಬಂಧಪಟ್ಟ ಆಡಳಿತ ಮಂಡಳಿಯಿಂದ ವಿವರಣೆಗಳನ್ನು ಪಡೆದ ತರುವಾಯ, ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅವಶ್ಯಕ ಕ್ರಮ ಕೈಗೊಳ್ಳುವಂತೆ ಸೂಕ್ತ ಶಿಫಾರಸ್ಸು

ಕಳುಹಿಸತಕ್ಕದ್ದು. ಅಂಥ ಶಿಫಾರಸ್ಸಿನ ಮೇಲೆ, ರಾಜ್ಯ ಸರ್ಕಾರವು ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ, ಅಂಥ ವೃತ್ತಿಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಮೇಲೆ ಹತ್ತು ಲಕ್ಷ ರೂಪಾಯಿಗಳವರೆಗೆ ಜುಲ್ಮಾನೆಯನ್ನು ವಿಧಿಸುವಂತೆ ಮತ್ತು ವಸೂಲು ಮಾಡುವಂತೆ ನಿರ್ದೇಶಿಸಬಹುದು. ಮತ್ತು ಹಾಗೆ ವಿಶ್ವವಿದ್ಯಾನಿಲಯವು ಜುಲ್ಮಾನೆ ವಿಧಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು. ವಿಶ್ವವಿದ್ಯಾನಿಲಯವು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಅಂಥ ಸಂಸ್ಥೆಯು ನೀಡಿದ ಎಲ್ಲಾ ಅಥವಾ ಯಾವುದೇ ಪ್ರವೇಶಗಳನ್ನು ಅನುಮೋದಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರಕ್ಕೆ ತಿಳಿಸಿ ಅಂಥ ಸಂಸ್ಥೆಗಳಿಗೆ ನೀಡಿದ್ದ ಮನ್ನಣೆ ಅಥವಾ ಸಂಯೋಜನೆಯನ್ನು ಹಿಂದಕ್ಕೆ ಪಡೆಯಬಹುದು.

8. ಅರ್ಹತೆ .- ಯಾವ ವಿದ್ಯಾರ್ಥಿಗೂ ಆತನು ನಿಯಮಿಸಬಹುದಾದಂಥ ವಿದ್ಯಾರ್ಹತೆಯನ್ನು ಅಥವಾ ಅದಕ್ಕೆ ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದ ಹೊರತು ವೃತ್ತಿಶಿಕ್ಷಣ ಸಂಸ್ಥೆಗಳಿಗೆ, ಪ್ರವೇಶ ನೀಡತಕ್ಕದ್ದಲ್ಲ.

9. ಸೀಟುಗಳ ಹಂಚಿಕೆ ಮತ್ತು ಮೀಸಲಾತಿ .- ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು ಮಂಜೂರಾದ ಸೀಟುಗಳಲ್ಲಿ,

(i) (ಎ) ಅನುದಾನಿತ ಸಂಸ್ಥೆಗಳಲ್ಲಿ, ಎಲ್ಲಾ ಸರ್ಕಾರಿ ಸೀಟುಗಳನ್ನು, ರಾಜ್ಯ ಸರ್ಕಾರದ ಮೀಸಲಾತಿ ನೀತಿಗೆ ಒಳಪಟ್ಟು 3(6)ನೇ ಪ್ರಕರಣಕ್ಕೆ ಅನುಸಾರವಾಗಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು; ಮತ್ತು

(ಬಿ) ಉಳಿಕೆ ಸೀಟುಗಳು ಸಾಮಾನ್ಯ ಸೀಟುಗಳಾಗಿರತಕ್ಕದ್ದು.

(ii) (ಎ) ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದಂತೆ ಶೇ.50 ಐವತ್ತರಷ್ಟು ಸೀಟುಗಳನ್ನು ರಾಜ್ಯದ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು; ಮತ್ತು

(ಬಿ) ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರತಕ್ಕದ್ದು. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರಷ್ಟು ಸೀಟುಗಳನ್ನು ಅನಿವಾಸಿ ಭಾರತೀಯ ಕೋಟಾಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳಬಹುದಾಗಿದೆ:

ಪರಂತು, ವಿದ್ಯಾರ್ಥಿಗಳು ದೊರೆಯದ ಕಾರಣಗಳಿಂದಾಗಿ, ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗಾಗಿ ಮೀಸಲಿರಿಸಲಾದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅಥವಾ ಮೀಸಲು ಪ್ರವರ್ಗದ ವಿದ್ಯಾರ್ಥಿಗಳು ತಮ್ಮ ಸೀಟುಗಳ ಆಯ್ಕೆ ಮಾಡಿಕೊಂಡ ನಂತರ ಬಿಟ್ಟುಹೋಗಿದ್ದಲ್ಲಿ, ಆ ಸೀಟುಗಳಿಗೆ, ರಾಜ್ಯದ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಅರ್ಹತಾಪಟ್ಟಿಯಿಂದ ಅದೇ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು:

ಮತ್ತು ಪರಂತು, ತದನಂತರವೂ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ, ಅಂಥ ಉಳಿದ ಸೀಟುಗಳನ್ನು, ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(iii) (ಎ) ಅನುದಾನಿತವಲ್ಲದ ಅಲ್ಪಸಂಖ್ಯಾತ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ, ಶೇಕಡಾ ಅರವತ್ತಾರಕ್ಕೆ ಕಡಿಮೆ ಇಲ್ಲದ ಸೀಟುಗಳನ್ನು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೆರಿಟ್ ಪಟ್ಟಿಯಲ್ಲಿ ಪರಸ್ಪರ ಅರ್ಹತೆಯ ಆಧಾರದ ಮೇಲೆ, ಆ ಸಂಸ್ಥೆಯು ಯಾವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದೆಯೋ ಆ ರಾಜ್ಯದೊಳಗಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿಮಾಡಿ ಕೊಳ್ಳತಕ್ಕದ್ದು; ಮತ್ತು

(ಬಿ) ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರುತ್ತವೆ. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರವರೆಗೆ ಅನಿವಾಸಿ ಭಾರತೀಯರ ಕೋಟಾಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿಮಾಡಿ ಕೊಳ್ಳಬಹುದು:

ಪರಂತು, ಅನುದಾನಿತವಲ್ಲದ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತ ಪ್ರವರ್ಗಕ್ಕಾಗಿ ಮೀಸಲಿಟ್ಟ ಯಾವುದೇ ಸೀಟುಗಳು ಭರ್ತಿಯಾಗದೇ ಉಳಿದಿದ್ದಲ್ಲಿ ಅಥವಾ ಸೀಟುಗಳನ್ನು ಆಯ್ಕೆ ಮಾಡಿಕೊಂಡ ನಂತರ ವಿದ್ಯಾರ್ಥಿಗಳು ಬಿಟ್ಟುಹೋದಲ್ಲಿ, ಅವುಗಳಿಗೆ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೆರಿಟ್ ಪಟ್ಟಿಯಿಂದ ಅವೇ ಪ್ರವರ್ಗದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳತಕ್ಕದ್ದು:

ಮತ್ತು ಪರಂತು, ಅದಾದ ನಂತರವೂ ಅಂಥ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅವುಗಳನ್ನು, ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು.

(iv) ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಂದ ಭರ್ತಿಯಾಗಿರಬಹುದಾದ ಸೀಟುಗಳನ್ನು ಬಿಟ್ಟು ಮೀಸಲು ಅಥವಾ ಸಾಮಾನ್ಯ ಪ್ರವರ್ಗದ ಸೀಟುಗಳೂ ಸೇರಿದಂತೆ, ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸೀಟುಗಳಿಗೆ ಪ್ರವೇಶವನ್ನು, ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ ತರುವಾಯ ಕೇಂದ್ರೀಯ ಕೌನ್ಸಿಲಿಂಗ್ ವಿಧಾನ ಅನುಸರಿಸಿ ಮೆರಿಟ್ ಆಧಾರದ ಮೇಲೆ ನೀಡತಕ್ಕದ್ದು.

10. ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳನ್ನು ಅಸಿಂಧುಗೊಳಿಸುವುದು .- ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ಯಾವುದೇ ಪ್ರವೇಶವು ಅಸಿಂಧುವಾಗತಕ್ಕದ್ದು.

11. ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ ನಿಧಿ .– (1) ಸಮಿತಿಯ ನಿಧಿ ಎಂದು ಕರೆಯಲಾಗುವ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ (ಇದರಲ್ಲಿ ಇನ್ನು ಮುಂದೆ ಸಮಿತಿ ಎಂದು ಕರೆಯಲಾಗಿದೆ) ಒಂದು ನಿಧಿ ಇರತಕ್ಕದ್ದು.

(2) ಈ ಮುಂದಿನವುಗಳು ಆ ನಿಧಿಯ ಭಾಗವಾಗಿರತಕ್ಕದ್ದು ಅಥವಾ ಅದಕ್ಕೆ ಸಂದಾಯಮಾಡತಕ್ಕದ್ದು, ಎಂದರೆ:–

(i) ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವುದಕ್ಕಾಗಿ ಸಮಿತಿಯು ಸಂಗ್ರಹಿಸಿದ ಶುಲ್ಕ;

(ii) ರಾಜ್ಯ ಸರ್ಕಾರವು ನೀಡಿದ ಅನುದಾನಗಳು;

(iii) ಸಮಿತಿಯ ಸಾಲವಾಗಿ ಪಡೆದ ಮೊಬಲಗು;

(iv) ಯಾವುದೇ ಮೂಲದಿಂದ ಸಮಿತಿಯು ಸ್ವೀಕರಿಸಿದ ಅಥವಾ ಅದರ ಪರವಾಗಿ ಸ್ವೀಕರಿಸಲಾದ ಎಲ್ಲ ಇತರ ಮೊತ್ತಗಳು.

(3) ರಾಜ್ಯ ಸರ್ಕಾರವು ಅನ್ಯಥಾ, ನಿರ್ದೇಶಿಸಿದಂತೆ ಹೊರತು ನಿಧಿಗೆ ಜಮೆಯಾದ ಎಲ್ಲ ಮೊತ್ತವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ತೊಡಗಿಸತಕ್ಕದ್ದು.

12. ರಾಜ್ಯ ಸರ್ಕಾರದಿಂದ ಅನುದಾನಗಳು.– ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ಮೊತ್ತಕ್ಕೆ ಸಮನಾದ ಮೊಬಲಗನ್ನು ಅನುದಾನವಾಗಿ ಸಮಿತಿಗೆ ನೀಡಬಹುದು.

13. ಸಾಲ ಪಡೆಯಲು ಅಧಿಕಾರ.– (1) ಸಮಿತಿಯು ಕಾಲಕಾಲಕ್ಕೆ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಡನೆ ಮತ್ತು ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಕ್ಕೆ ಅಗತ್ಯವಾದ ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದು.

14. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.– (1) ಸಮಿತಿಯ ನಿಧಿಯ ವರಮಾನದ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಸಮಿತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(3) ಸಮಿತಿಯ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಲೆಕ್ಕಪರಿಶೋಧಕನು ಮಾಡತಕ್ಕದ್ದು.

(4) ಲೆಕ್ಕ ಪರಿಶೋಧಕನಿಗೆ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಸಮಿತಿಯ ಎಲ್ಲ ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(5) ಸಮಿತಿಯು, ಲೆಕ್ಕಪರಿಶೋಧನೆಗೆ ನಿಯಮಿಸಬಹುದಾದಂಥ ವೆಚ್ಚಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಸಮಿತಿಯು, ಲೆಕ್ಕಪರಿಶೋಧಕನಿಂದ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರದ ಒಂದು ಪ್ರತಿಯನ್ನು ಲೆಕ್ಕಪರಿಶೋಧಕನ

ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರವು ಪ್ರಕಟವಾಗುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕನ ವರದಿಯನ್ನು ಪರಿಶೀಲಿಸಿದ ತರುವಾಯ, ಸಮಿತಿಗೆ ತಾನು ಸೂಕ್ತವೆಂದು ಯೋಚಿಸುವಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಸಮಿತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

15. ಸಮಿತಿಯ ಆಯವ್ಯಯ ಪತ್ರ.– ಸಮಿತಿಯು, ಪ್ರತಿ ವರ್ಷ ಮುಂಬರುವ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ವರಮಾನ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಮತ್ತು ಅಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

16. ವರದಿ.– ಸಮಿತಿಯು, ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಅಂಥ ನಮೂನೆಯಲ್ಲಿ ಅಂಥ ಅಂತರದಲ್ಲಿ ರಾಜ್ಯ ಸರ್ಕಾರಕ್ಕೆ ನಿಯಮಿಸಲಾದ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಅಂಥ ವರದಿಯ ಪ್ರತಿಯನ್ನು ಮಂಡಿಸುವಂತೆ ಮಾಡತಕ್ಕದ್ದು.

17. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.– ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯದ ಬಗ್ಗೆ ಯಾವೊಬ್ಬ ಸರ್ಕಾರದ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್‌ನನ್ನು ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

18. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರಲ್ಲಿ ಇರುವ ಯಾವುದೇ ಉಪಬಂಧಗಳನ್ನು ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮಗಳು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ದೇಶನ ನೀಡುವುದು ಅವಶ್ಯವೆಂದು ಅಥವಾ ಉಚಿತವೆಂದು ಅಭಿಪ್ರಾಯಪಟ್ಟಲ್ಲಿ ಅದು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಸಂದರ್ಭಾನುಸಾರ ಅಂಥ ಸಂಸ್ಥೆಯ ಆಡಳಿತ ಪರಿಷತ್ತು ಅಥವಾ ಆಡಳಿತ ಮಂಡಳಿ ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

(2) ರಾಜ್ಯ ಸರ್ಕಾರವು, ತನ್ನ ನಿಯಂತ್ರಣದಲ್ಲಿರುವ ಅಧಿಕಾರಿಗಳಿಗೆ ಅಥವಾ ಪ್ರಾಧಿಕಾರಗಳಿಗೆ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ತನ್ನ ಅಭಿಪ್ರಾಯದಲ್ಲಿ ಅವಶ್ಯಕ ಅಥವಾ ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಸಹ ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಅಂಥ ಅಧಿಕಾರಿಯ ಅಥವಾ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

19. ದಂಡಗಳು.– (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ದಂಡನೆಯನ್ನು ಇತರೆ ಯಾವುದೇ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದಂಡನೆಗೆ ಬಾಧಕವಾಗದಂತೆ ವಿಧಿಸಬಹುದು.

20. ಪ್ರವೇಶಿಸುವ ಮತ್ತು ಪರಿಶೋಧಿಸುವ ಅಧಿಕಾರ.– ಈ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರದಿಂದ ಅಧಿಕೃತಗೊಂಡ 'ಬಿ' ಸಮೂಹದ ಅಧಿಕಾರಿ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಅಧಿನಿಯಮ, 1984ರ (1984ರ 37ನೇ ಅಧಿನಿಯಮ) ಅಡಿಯಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂಥವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತನಾದ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

21. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ.– ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

22. ತೊಂದರೆಗಳನ್ನು ನಿವಾರಿಸುವ ಅಧಿಕಾರ.– ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

23. ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಪೂರ್ವಪ್ರಕಟಣೆ ನೀಡಿದ ತರುವಾಯ ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ ನಿಯಮಗಳನ್ನು ರಚಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ನಿಯಮಗಳು, ಅವುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದರೆ ದಂಡನೆಯಾಗಿ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ವಿಧಿಸಲು ಸಹ ಉಪಬಂಧಿಸಬಹುದು. ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದಲ್ಲಿ ಅದು ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ

ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

24. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಹಾಗೂ ಯಾವ ವಿಷಯಗಳ ಪುರೋಭಿವೃದ್ಧಿಗಾಗಿ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆಯೋ ಅಥವಾ ಉಪಬಂಧ ಕಲ್ಪಿಸಲಾಗಿದೆಯೋ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ ಸಂಖ್ಯೆ 37) ಅಡಿಯಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ ಅಥವಾ ನೇಮಕಾತಿಗಳು ಅವು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯದಿಂದ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ಅಥವಾ ಯಾವುದೇ ನಿಯಮ, ಅಧಿಸೂಚನೆ ಅಥವಾ ನೇಮಕಾತಿಯಿಂದ ರದ್ದಾದ ಹೊರತು ಮತ್ತು ರದ್ದಾಗುವವರೆಗೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವ ಮಟ್ಟಿಗೆ, ಅವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ರಚಿಸಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಿಸಿದ್ದರೆ, ಹೇಗೋ ಹಾಗೆ ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಪರಿಣಾಮ ಕಾರಿಯಾಗಿರತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯದಲ್ಲಿನ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಶುಲ್ಕವನ್ನು ನಿಗದಿಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಮತ್ತು ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಮೀಸಲಿಡುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(2003) 6 ಎಸ್‌ಸಿಸಿ 697ರಲ್ಲಿ ವರದಿಯಾಗಿರುವ **ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ ಮತ್ತು ಇತರರು–ವಿರುದ್ಧ–ಕರ್ನಾಟಕ ರಾಜ್ಯ.** ಈ ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತನ್ನ ತೀರ್ಪಿನಲ್ಲಿ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶವನ್ನು, ಸಂಸತ್ತು ಆ ಬಗ್ಗೆ ಸೂಕ್ತ ಕಾನೂನನ್ನು ಅಧಿನಿಯಮವಾಗಿ ತರುವವರೆಗೆ, ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಗಳ ಮೇಲ್ವಿಚಾರಣೆ ನಡೆಸಲು ಒಂದು ಸಮಿತಿ ಹಾಗೂ ಶುಲ್ಕ ವ್ಯವಸ್ಥೆಯನ್ನು ಅನುಮೋದಿಸಲು ಇನ್ನೊಂದು ಸಮಿತಿ, ಹೀಗೆ ಎರಡು ಸಮಿತಿಗಳ ಮೂಲಕ ನಿಯಂತ್ರಿಸಲು ಆದೇಶಿಸಿದೆ.

(2005) 6 ಎಸ್‌ಸಿಸಿ 537 ರಲ್ಲಿ ವರದಿಯಾದ, **ಪಿ.ಎ. ಇನಾಂದಾರ್ ಮತ್ತು ಇತರರು –ವಿರುದ್ಧ– ಮಹಾರಾಷ್ಟ್ರ ರಾಜ್ಯ,** ಈ ಪ್ರಕರಣದಲ್ಲಿ, ಸರ್ವೋಚ್ಚನ್ಯಾಯಾಲಯವು, ರಾಜ್ಯದಲ್ಲಿ ಯಾವುದೇ ಒಂದು ವ್ಯಾಸಂಗ ವಿಷಯದಲ್ಲಿ ಶಿಕ್ಷಣವನ್ನು ಅಲ್ಪಸಂಖ್ಯಾತ ಅಥವಾ ಅಲ್ಪಸಂಖ್ಯಾತವಲ್ಲದ ಅಥವಾ ಅಂತಹವೇ ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ನೀಡುತ್ತಿದ್ದಲ್ಲಿ, ಆಗ ಪಾರದರ್ಶಕತೆ ಮತ್ತು ಮೆರಿಟ್, ಈ ಎರಡೂ ಉದ್ದೇಶಗಳನ್ನು ಈಡೇರಿಸಬೇಕಾದರೆ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ

ನಡೆಸಿ ತರುವಾಯ ಕೇಂದ್ರೀಯ ಕೌನ್ಸೆಲಿಂಗ್ ವ್ಯವಸ್ಥೆ ಮಾಡಬೇಕೆಂದು ಅಥವಾ ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರವೇಶಕ್ಕಾಗಿ ಏಕ ಗವಾಕ್ಷಿ ವ್ಯವಸ್ಥೆ ಅಗತ್ಯವಿದೆ ಎಂದು ತೀರ್ಮಾನ ನೀಡಿದೆ. ಆದ್ದರಿಂದ ಒಂದೇ ಸ್ವರೂಪದ ಅಥವಾ ಸಮಾನ ಸ್ವರೂಪದ ಎಲ್ಲ ಸಂಸ್ಥೆಗಳು ಅವು ಅಲ್ಪಸಂಖ್ಯಾತರ ಸಂಸ್ಥೆಯಾಗಿರಲಿ ಅಥವಾ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಾಗಿರಲಿ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ತರುವಾಯ ಕೇಂದ್ರೀಯ ಕೌನ್ಸಲಿಂಗ್ ವ್ಯವಸ್ಥೆ ಮೂಲಕ ತಮ್ಮಲ್ಲಿನ ಸೀಟು ಭರ್ತಿ ಮಾಡಿಕೊಳ್ಳಬೇಕೆಂದು ತೀರ್ಪು ನೀಡಿದೆ.

ಅಲ್ಲದೇ ಸರ್ವೋಚ್ಚ ನ್ಯಾಯಾಲಯವು, ಅದೇ ತೀರ್ಪಿನಲ್ಲಿ ರಾಜ್ಯವು, ಪ್ರವೇಶಗಳು ನ್ಯಾಯಯುತವಾಗಿ ಮತ್ತು ಮೆರಿಟ್ ಆಧಾರದ ಮೇಲೆ ನಡೆಯುವಂತೆ ನೋಡಿಕೊಳ್ಳುವ ಸಲುವಾಗಿ ಹಾಗೂ ದುರಾಡಳಿತ ತಡೆಯುವ ಸಲುವಾಗಿ ಒಂದು ಕೇಂದ್ರೀಯ ಮತ್ತು ಏಕಗವಾಕ್ಷಿ ಕಾರ್ಯವಿಧಾನವನ್ನು ಏರ್ಪಡಿಸಿ ಪ್ರವೇಶವನ್ನು ನಿಯಂತ್ರಿಸಬಹುದೆಂದು, ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಸರಿಸುವ ಪ್ರವೇಶ ಪ್ರಕ್ರಿಯೆಯು, ನ್ಯಾಯಾಲಯವು ನಿಯಮಿಸಿದ ಮೂರು ಬಗೆಯ ಪರೀಕ್ಷೆಗಳಲ್ಲಿ ಎಲ್ಲ ಅಥವಾ ಯಾವುದೊಂದನ್ನು ಯಶಸ್ವಿಗೊಳಿಸಲು ವಿಫಲವಾದರೆ, ಆಗ ರಾಜ್ಯವು ಪ್ರವೇಶ ಪ್ರಕ್ರಿಯೆಯನ್ನು ತಾನೇ ಕೈಗೆತ್ತಿಕೊಂಡು ತನ್ನದೇ ಆದ ಪ್ರಕ್ರಿಯೆಯನ್ನು ಅಳವಡಿಸಬಹುದೆಂದು ತೀರ್ಮಾನ ನೀಡಿದೆ. ಈ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರಲ್ಲದ ಸಮುದಾಯಗಳ ವಿದ್ಯಾರ್ಥಿಗಳ ಸಂಖ್ಯೆ "ಕನಿಷ್ಠ" ಪ್ರಮಾಣಕ್ಕಿಂತ ಹೆಚ್ಚಿದ್ದರೆ ಆಗ ಅಲ್ಪಸಂಖ್ಯಾತ ಸಂಸ್ಥೆಗಳು ತಮ್ಮ ಅಲ್ಪಸಂಖ್ಯಾತ ಸ್ವರೂಪವನ್ನು ಕಳೆದುಕೊಳ್ಳುತ್ತವೆ ಎಂದು ಸ್ಪಷ್ಟಪಡಿಸಲಾಗಿದೆ. ಸರ್ವೋಚ್ಚ ನ್ಯಾಯಾಲಯವೂ, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ರಾಜ್ಯದೊಳಗಿನವರೇ ಆಗಿರತಕ್ಕದ್ದೆಂದು ಸ್ಪಷ್ಟವಾಗಿ ತಿಳಿಸಿದೆ. ಇದನ್ನು ಪರಿಗಣಿಸಿ, ರಾಜ್ಯದೊಳಗಿರುವ ಆ ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳಿಗಾಗಿ ಅಲ್ಪಸಂಖ್ಯಾತರ ಸಂಸ್ಥೆಗಳಲ್ಲಿ ಶೇಕಡಾ ಅರವತ್ತಾರರಷ್ಟು ಮೀಸಲಾತಿಗೆ ಈ ವಿಧೇಯಕವು ಉಪಬಂಧ ಕಲ್ಪಿಸುತ್ತದೆ.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಜನ ಸಂಖ್ಯೆಯು ರಾಜ್ಯದಲ್ಲಿಯ ಒಟ್ಟು ಜನಸಂಖ್ಯೆಯ ಶೇಕಡಾ ಐವತ್ತನ್ನು ಮೀರಿದ್ದರೂ, ಸರ್ವೋಚ್ಚ ನ್ಯಾಯಾಲಯವು, ಎಐಆರ್ 1993 ಎಸ್.ಸಿ. 477ರಲ್ಲಿ ವರದಿಯಾದ, **ಇಂದಿರಾ ಸವ್ಹಾನಿ-ವಿರುದ್ಧ-ಭಾರತ ಸರ್ಕಾರ** ಮೊಕದ್ದಮೆಯಲ್ಲಿ ಎಲ್ಲ ಪ್ರವರ್ಗಗಳಿಗೆ ಮಾಡಲಾದ ಮೀಸಲಾತಿಯು, ಶೇಕಡಾ ಐವತ್ತನ್ನು ಮೀರತಕ್ಕದ್ದಲ್ಲ ಎಂದು ತೀರ್ಪು ನೀಡಿದೆ. ಇದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಶೇಕಡಾ ಐವತ್ತರವರೆಗೆ ಮೀಸಲಾತಿಯನ್ನು ಒದಗಿಸುವುದಕ್ಕಾಗಿ ಸಂವಿಧಾನದ 15(4)ನೇ ಅನುಚ್ಛೇದದ ಅಡಿಯಲ್ಲಿ ಆದೇಶಗಳನ್ನು ಹೊರಡಿಸಿದೆ.

ಸಂವಿಧಾನದ 15(5)ನೇ ಅನುಚ್ಛೇದದಲ್ಲಿ (ಸಂವಿಧಾನ (ತೊಂಬತ್ತೊಮ್ಮರನೇ ತಿದ್ದುಪಡಿ) ಅಧಿನಿಯಮ, 2005ರ ಮೂಲಕ ಸೇರಿಸಿದಂತೆ) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಹೊರತಾಗಿ ಅನುದಾನಿತವಾಗಿರುವ ಅಥವಾ ಅನುದಾನಿತವಾಗಿಲ್ಲದ, ಖಾಸಗಿ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ, ಪ್ರವೇಶಕ್ಕೆ ಸಂಬಂಧಪಟ್ಟಂತೆ ಸಂವಿಧಾನದ 15ನೇ ಅನುಚ್ಛೇದದಲ್ಲಿ ಮತ್ತು 19ನೇ ಅನುಚ್ಛೇದದ (ಜಿ) ಉಪಖಂಡದಲ್ಲಿ ಏನೇ ಇದ್ದರೂ ಯಾವುದೇ ಸಾಮಾಜಿಕವಾಗಿ ಅಥವಾ

ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕ ವರ್ಗಗಳ ಮರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗಾಗಿ ರಾಜ್ಯ ಸರ್ಕಾರವು ಕಾನೂನಿನ ಮೂಲಕ ವಿಶೇಷ ಉಪಬಂಧಗಳನ್ನು ರಚಿಸುವುದಕ್ಕೆ, ಉಪಬಂಧ ಕಲ್ಪಿಸಿದೆ.

ಮೇಲ್ಕಂಡ ಕಾರ್ಯನೀತಿಯ ಆಧಾರದ ಮೇಲೆ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಶೇಕಡಾ ಐವತ್ತರವರೆಗೆ ಸರ್ಕಾರಿ, ಅನುದಾನಿತ ಮತ್ತು ಅನುದಾನಿತವಲ್ಲದ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರವೇಶ ಮೇಲ್ವಿಚಾರಣಾ ಸಮಿತಿ ಮತ್ತು ಶುಲ್ಕ ನಿಯಂತ್ರಣ ಸಮಿತಿ ಎಂಬ ಹೆಸರಿನ ಎರಡು ಸಮಿತಿಗಳ ಸ್ಥಾಪನೆಯ ವೆಚ್ಚವನ್ನು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷೆ ಸಮಿತಿಯ ನಿಧಿಯಿಂದ ಭರಿಸಲಾಗುವುದು. ಆದ್ದರಿಂದ ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 2: 2ನೇ ಖಂಡದ (ಎಮ್) ಉಪ ಖಂಡವು ಯಾವ ನಿಬಂಧನೆಗಳಿಗೆ ಒಳಪಟ್ಟು ಶಿಕ್ಷಣ ಸಂಸ್ಥೆಗಳನ್ನು ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳೆಂದು ಮಾನ್ಯತೆ ನೀಡಬಹುದೋ ಅಥವಾ ಅಧಿಸೂಚಿಸಬಹುದೋ ಆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

2ನೇ ಖಂಡದ (ಆರ್) ಉಪಖಂಡವು ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶದ ಉದ್ದೇಶಕ್ಕಾಗಿ ಅರ್ಹತಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 3: 3ನೇ ಖಂಡದ (4)ನೇ ಉಪ ಖಂಡವು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷೆ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 5: 5ನೇ ಖಂಡದ (3)ನೇ ಉಪಖಂಡವು ಪ್ರವೇಶ ಮೇಲ್ವಿಚಾರಣಾ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಸಂದಾಯಿಸಬಹುದಾದ ಉಪವೇಶನ ಭತ್ಯೆ ಮತ್ತು ಋಣ ಭತ್ಯೆಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 6: 6ನೇ ಖಂಡದ (6)ನೇ ಉಪಖಂಡವು ಶುಲ್ಕ ನಿಯಂತ್ರಣ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಸಂದಾಯಿಸಬಹುದಾದ ಉಪವೇಶನ ಭತ್ಯೆ ಮತ್ತು ಋಣ ಭತ್ಯೆಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 8: 8ನೇ ಖಂಡವು ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕಾಗಿ ಶೈಕ್ಷಣಿಕ ಅಥವಾ ತತ್ಸಮಾನ ಅರ್ಹತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 13: 13ನೇ ಖಂಡವು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷೆ ಸಮಿತಿಯು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಡನೆ ಸಾಲವನ್ನು ಪಡೆಯುವ ಷರತ್ತುಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 14: 14ನೇ ಖಂಡದ (1)ನೇ ಉಪಖಂಡವು ಸಮಿತಿಯ ಆದಾಯ ಮತ್ತು ವೆಚ್ಚಗಳ ಲೆಕ್ಕಗಳನ್ನು ಇಡತಕ್ಕ ವಿಧಾನಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

14ನೇ ಖಂಡದ (2)ನೇ ಉಪ ಖಂಡವು ಸಮಿತಿಯ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರಗಳನ್ನು ಸಿದ್ಧಪಡಿಸುವ ನಮೂನೆಗಳಿಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

14ನೇ ಖಂಡದ (5)ನೇ ಉಪಖಂಡವು ಸಮಿತಿಯ ಲೆಕ್ಕ ಪರಿಶೋಧನೆಗೆ ಸಂದಾಯಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

14ನೇ ಖಂಡದ (6)ನೇ ಉಪಖಂಡವು ಸಮಿತಿಯ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರದ ಪ್ರಕಟಣೆಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 16: 16ನೇ ಖಂಡವು ರಾಜ್ಯ ಸರ್ಕಾರಕ್ಕೆ ಸಮಿತಿಯ ವರದಿಯನ್ನು ಸಲ್ಲಿಸತಕ್ಕ ನಮೂನೆ ಮತ್ತು ಅಂತರಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 23: 23ನೇ ಖಂಡವು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪೂರ್ವಾನ್ವಯ ಅಥವಾ ಉತ್ತರಾನ್ವಯವಾಗುವಂತೆ ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಲು ಮತ್ತು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

ಡಿ.ಹೆಚ್. ಶಂಕರಮೂರ್ತಿ

ಉನ್ನತ ಶಿಕ್ಷಣ ಸಚಿವರು

ಟಿ. ರಾಜಣ್ಣ, ಕಾರ್ಯದರ್ಶಿ

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಮೂರನೇ ಅಧಿವೇಶನ

(ಮುಂದುವರೆದ ಉಪವೇಶನಗಳು)

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2006

[2006ರ ವಿಧಾನಸಭೆಯ ವಿಧೇಯಕ ಸಂಖ್ಯೆ 3]

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ, 1994ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ, 1994ನ್ನು (1994ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2006 ರಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 43ಎ ಹೊಸ ಪ್ರಕರಣದ ಸೇರ್ಪಡೆ :- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 39) 43ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

"43ಎ. ಸ್ವಾಯತ್ತ ಕಾಲೇಜು :- (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿತವಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಏನೇ ಇದ್ದಾಗ್ಯೂ ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಪೂರ್ವ ಸಹಮತಿ ಪಡೆದು ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕಗಳನ್ನು ಯಾವುದೇ ವ್ಯಾಸಂಗ ಕ್ರಮಕ್ಕಾಗಿ ಈ ಬಗ್ಗೆ ರಚಿಸಲಾದ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಹೊಸ ಮತ್ತು ಸುಸಂಗತ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗಾಗಿ ಸ್ವಾಯತ್ತ ಕಾಲೇಜೆಂದು ನಾಮಾಂಕಿತಗೊಳಿಸಬಹುದು.

(2) ಈ ಬಗ್ಗೆ ರಚಿಸಿದ ಪರಿನಿಯಮಗಳಿಗೆ ಒಳಪಟ್ಟು, ಸ್ವಾಯತ್ತ ಕಾಲೇಜೆಂದು ನಾಮಾಂಕಿತಗೊಳಿಸಲಾದ ಕಾಲೇಜು ವಿಶ್ವವಿದ್ಯಾನಿಲಯವು ನೀಡಲಿರುವ ಅಥವಾ ಡಿಪ್ಲೋಮಾಗಳಿಗೆ ಸಂಬಂಧಿಸಿದಂತೆ ವ್ಯಾಸಂಗ ಕ್ರಮಗಳನ್ನು ರೂಪಿಸಲು, ಸೂಕ್ತ ಬೋಧನಾ ಕ್ರಮಗಳನ್ನು ವ್ಯವಸ್ಥೆಗೊಳಿಸಲು, ಮೌಲ್ಯಮಾಪನ, ಪರೀಕ್ಷೆ ಮತ್ತು ಉಪಪರೀಕ್ಷೆಗಳ ವಿಧಾನಗಳನ್ನು ರೂಪಿಸಲು ಹಕ್ಕುಳ್ಳದ್ದಾಗಿರತಕ್ಕದ್ದು;

(3) ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ನಿಯತಕಾಲಿಕ ಪುನರವಲೋಕನಕ್ಕೆ ಒಳಪಟ್ಟು ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಸಹಮತಿ ಪಡೆದು, ನಿರ್ದಿಷ್ಟಪಡಿಸಬಹುದಾದಂಥ

ಹೆಚ್ಚಿನ ಅವಧಿಯವರೆಗೆ ವಿಶ್ವವಿದ್ಯಾನಿಲಯವು ಸ್ವಾಯತ್ತ ಕಾಲೇಜೆಂಬ ನಾಮಾಂಕನವನ್ನು ಮುಂದುವರಿಸಬಹುದು ಅಥವಾ ಅಂಥ ನಾಮಾಂಕನವನ್ನು ರದ್ದುಗೊಳಿಸಬಹುದು.

(4) ಈ ಉದ್ದೇಶಕ್ಕಾಗಿ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಸೆನೆಟ್‌ನೊಂದಿಗೆ ಸಮಾಲೋಚಿಸಿ ರಚಿಸತಕ್ಕದು, ಮತ್ತು ಅವು,-

(ಎ) ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕವನ್ನು ಯಾವ ವಿಧಾನ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಸ್ವಾಯತ್ತ ಕಾಲೇಜು ಎಂದು ನಾಮಾಂಕಿತಗೊಳಿಸಬಹುದೋ ಅಥವಾ ಅಂಥ ಕಾಲೇಜಿನ ನಾಮಾಂಕನವನ್ನು ರದ್ದುಗೊಳಿಸಬಹುದೋ ಆ ವಿಧಾನ ಮತ್ತು ಷರತ್ತುಗಳು;

(ಬಿ) ಸ್ವಾಯತ್ತ ಕಾಲೇಜಿನ ಆಡಳಿತ ಮಂಡಳಿ, ವಿದ್ಯಾವಿಷಯಕ ಪರಿಷತ್ತು, ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಯ ರಚನೆ ಅಥವಾ ಪುನಾರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳೂ ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಆಡಳಿತಕ್ಕೆ ಪ್ರಾಸಂಗಿಕವಾದ ವಿಷಯಗಳು;

(ಸಿ) ಸ್ವಾಯತ್ತ ಕಾಲೇಜೆಂಬ ನಾಮಾಂಕನದ ಮುಂದುವರಿಕೆ ಅಥವಾ ರದ್ದುಪಡಿಸುವಿಕೆ ಕುರಿತು ನಿಯತಕಾಲಿಕ ಪುನರವಲೋಕನ;

(ಡಿ) (2)ನೇ ಉಪಪ್ರಕರಣದಲ್ಲಿ ನಮೂದಿಸಿದ ವಿಷಯಗಳೂ ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಕಾರ್ಯನಿರ್ವಹಣೆಗೆ ಸಂಬಂಧಪಡಬಹುದಾದಂಥ ಇತರ ವಿಷಯಗಳು;

– ಇವುಗಳ ಬಗ್ಗೆ ಉಪಬಂಧಕಲ್ಪಿಸತಕ್ಕದ್ದು.

(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸ್ವಾಯತ್ತ ಕಾಲೇಜುಗಳಿಗೆ ಪ್ರವೇಶವು ಹಾಗೂ ನೇಮಕಾತಿಯು ರಾಜ್ಯದ ಕಾರ್ಯನೀತಿಗೆ ಅನುಗುಣವಾಗಿರತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1994ರ ಅಕ್ಟೋಬರ್ 17ನೇ ದಿನಾಂಕದಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ 1994 ಜಾರಿಗೆ ಬರುವವರೆಗೆ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 1976ರ ಅಡಿಯಲ್ಲಿ ನಿಯಂತ್ರಿಸಲ್ಪಡುವತ್ತಿದ್ದವು. ಈ ಇಂಜಿನಿಯರಿಂಗ್ ಕಾಲೇಜುಗಳು, ಇಂಜಿನಿಯರಿಂಗ್, ತಂತ್ರಜ್ಞಾನ ಮತ್ತು ಸಂಬಂಧಪಟ್ಟ ವಿಜ್ಞಾನಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆಯ ವ್ಯಾಸಂಗ ಕ್ರಮಗಳನ್ನು ನಡೆಸುತ್ತಿವೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ, 2000 ದಲ್ಲಿ 64ನೇ ಪ್ರಕರಣಕ್ಕನು ಗುಣವಾಗಿ ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ಪೂರ್ವ ಸಹಮತಿ ಪಡೆದು ಒಂದು ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕವನ್ನು ಯಾವುದೇ ವ್ಯಾಸಂಗ ಕ್ರಮಕ್ಕಾಗಿ ಈ ಬಗ್ಗೆ ರಚಿಸಲಾದ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಹೊಸ ಮತ್ತು ಸುಸಂಗತ ವ್ಯಾಸಂಗ ಕ್ರಮವನ್ನು ಪ್ರಾರಂಭಿಸುವ ದೃಷ್ಟಿಯಿಂದ ನಿರ್ದಿಷ್ಟಪಡಿಸ-ಬಹುದಾದಂಥ ಅವಧಿಗೆ ಸ್ವಾಯತ್ತ ಕಾಲೇಜೆಂದು ನಾಮಾಂಕಿತಗೊಳಿಸಬಹುದು. ಆದರೆ ವಿಶ್ವೇಶ್ವರಯ್ಯ

ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳಿಗೆ ಸ್ವಾಯತ್ತ ಕಾಲೇಜಿನ ಸ್ಥಾನಮಾನ ನೀಡುವಂಥ ಯಾವುದೇ ಉಪಬಂಧ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮದಲ್ಲಿ ಇಲ್ಲ. ಆದುದರಿಂದ ಉತ್ತಮ ಕಾಲೇಜುಗಳು ತಮ್ಮದೇ ವ್ಯಾಸಂಗ ಕ್ರಮ ಹಾಗೂ ಪಠ್ಯ ವಿಧಾನ ರೂಪಿಸಿಕೊಂಡು ಅವುಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಿಕೊಳ್ಳಲು ಸ್ವಾತಂತ್ರ ಒದಗಿಸುವಂತೆ ಮಾಡುವುದಕ್ಕಾಗಿ ಇದೇ ಬಗೆಯ ಒಂದು ಉಪಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮದಲ್ಲಿ ಸೇರಿಸಿಕೊಳ್ಳಬೇಕಾದ ಅಗತ್ಯವಿದೆ. ವಿಶ್ವಬ್ಯಾಂಕ್ ಯೋಜನೆಗಳಿಗೆ ಆಯ್ಕೆಗೊಂಡ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡತಕ್ಕದ್ದೆಂದು ವಿಶ್ವಬ್ಯಾಂಕ್ ಸಹ ಒತ್ತಾಯಿಸುತ್ತಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಡಿ.ಹೆಚ್. ಶಂಕರಮೂರ್ತಿ

ಉನ್ನತ ಶಿಕ್ಷಣ ಸಚಿವರು

ಟಿ. ರಾಜಣ್ಣ, ಕಾರ್ಯದರ್ಶಿ

ಅನುಬಂಧ–II

77(163) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪೂರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪೂರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಿಲಯಗಳು ಯಾವುವು;

ಆ) ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿ ನಿಲಯ–ಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಗುವುದು;

ಈ) ವಿದ್ಯಾರ್ಥಿ ನಿಲಯಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು;

ಉ) ಈಗಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿ ಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖೆ: ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಬಿಜಾಪೂರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 3 ಬಾಲಕರ ಮತ್ತು ಎರಡು ಬಾಲಕಿಯರ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ 1 ಬಾಲಕರ ಮತ್ತು 1 ಬಾಲಕಿಯರ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದು, ಅವುಗಳ ವಿವರ ಈ ಕೆಳಕಂಡಂತಿದೆ:

ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು
1	2
1. ಬಾಲಕರ ವಿದ್ಯಾರ್ಥಿ ನಿಲಯ ಬಿಜಾಪೂರ	1. ಬಾಲಕರ ವಿದ್ಯಾರ್ಥಿ ನಿಲಯ ಬಿಜಾಪೂರ

1	2
2. ಬಾಲಕರ ವಿದ್ಯಾರ್ಥಿ ನಿಲಯ ಕಗ್ಗೋಡ	2. ಬಾಲಕಿಯರ ವಿದ್ಯಾರ್ಥಿ ನಿಲಯ ಬಿಜಾಪೂರ
3. ಬಾಲಕರ ವಿದ್ಯಾರ್ಥಿ ನಿಲಯ, ಶಿವಣಗಿ	
4. ಬಾಲಕಿಯರ ವಿದ್ಯಾರ್ಥಿ ನಿಲಯ, ವಿಜಾಪೂರ	
5. ಬಾಲಕಿಯರ ವಿದ್ಯಾರ್ಥಿ ನಿಲಯ ಹೊನ್ನುಟಗಿ	

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಬಿಜಾಪೂರ ಮತಕ್ಷೇತ್ರದ ವ್ಯಾಪ್ತಿಯಲ್ಲಿ 1 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ನಡೆಯುತ್ತಿದೆ.

1. ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಬಿಜಾಪೂರ ಸಿಟಿ

ಆ) ಹೌದು.

ಇ) ಮತ್ತು ಈ) ಹೊಸ ವಿದ್ಯಾರ್ಥಿ ನಿಲಯಗಳನ್ನು ಆದ್ಯತೆ, ಅವಶ್ಯಕತೆ ಮತ್ತು ಅನುದಾನದ ಲಭ್ಯತೆಗೆ ಅನುಗುಣವಾಗಿ ಪ್ರಾರಂಭಿಸಲು ಯೋಜಿಸಲಾಗುವುದು.

ಉ) ಮತ್ತು ಊ) ಸಮಾಜ ಕಲ್ಯಾಣ ಇಲಾಖೆವತಿಯಿಂದ ಕೊರತೆ ಇರುವ ಮೂಲಭೂತ ಸೌಕರ್ಯಗಳಾದ ಹಾಸಿಗೆ, ಹೊದಿಕೆ, ಪಾತ್ರೆಗಳು, ಕ್ರೀಡಾ ಸಾಮಗ್ರಿಗಳು, ಪೀಠೋಪಕರಣಗಳು, ಟಿ.ವಿ. ಇತ್ಯಾದಿಗಳನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಒದಗಿಸಲಾಗಿದೆ. ಜೊತೆಗೆ 4 ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಉಳಿದ 3 ವಿದ್ಯಾರ್ಥಿ ನಿಲಯಗಳಿಗೆ ನಿವೇಶನದ ಲಭ್ಯತೆಗೆ ಅನುಗುಣವಾಗಿ ಕಟ್ಟಡ ನಿರ್ಮಾಣ ಕೈಗೊಳ್ಳಲಾಗುವುದು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

164 ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪೂರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಿಲಯಗಳು ಯಾವುವು;

ಆ) ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿನಿಲಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಹೊಸದಾಗಿ ವಿದ್ಯಾರ್ಥಿನಿಲಯಗ್ಗಳನ್ನು ಯಾವಾಗ ಮಂಜೂರು ಮಾಡಲಾಗುವುದು;

ಈ) ಹಾಗಿದ್ದಲ್ಲಿ, ವಿದ್ಯಾರ್ಥಿನಿಲಯಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು;

ಉ) ಈಗಿರುವ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬಿಜಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 4 ಬಾಲಕರ 3 ಬಾಲಕಿಯರ ಒಟ್ಟು 7 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಹೆಸರು ಮತ್ತು ಸ್ಥಳ	ಮಂಜೂರಾತಿ ಸಂಖ್ಯೆ
1	2	3
1.	ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಬಿಜಾಪುರ	100
2.	ಮೆಟ್ರಿಕ್–ನಂತರದ ಬಾಲಕಿಯರ ವೃತ್ತಿಪರ ವಿದ್ಯಾರ್ಥಿ ನಿಲಯ, ಬಿಜಾಪೂರ	50
3.	ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಬಿಜಾಪುರ	50
4.	ಮೆಟ್ರಿಕ್–ಪೂರ್ವ ಬಾಲಕರ (ಡಿಟಿ) ವಿದ್ಯಾರ್ಥಿನಿಲಯ, ಬಿಜಾಪುರ	145
5.	ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಬಿಜಾಪುರ	50
6.	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಶಿವಣಗಿ	50
7.	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬುರುಣಾಪುರ	50
	ಒಟ್ಟು ವಿದ್ಯಾರ್ಥಿಗಳು	**495**

ಆ) ಹೌದು.

ಇ) ಆಯವ್ಯಯ ಲಭ್ಯತೆ ಆಧರಿಸಿ, ಹಂತ ಹಂತವಾಗಿ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲು ಕ್ರಮವಹಿಸಲಾಗುವುದು.

ಈ) ಬಿಜಾಪುರ ಮತಕ್ಷೇತ್ರದ ಕಗ್ಗೋಡ ಮತ್ತು ಜಮುನಾಳ ಗ್ರಾಮಗಳಿಗೆ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಮಂಜೂರು ಮಾಡುವ ಬಗ್ಗೆ ಬೇಡಿಕೆ ಇದ್ದು ಆಯವ್ಯಯದ ಲಭ್ಯತೆಯನ್ನು ಆಧರಿಸಿ ಮಂಜೂರು ಮಾಡಲು ಕ್ರಮವಹಿಸಲಾಗುವುದು.

ಉ) ಹೌದು. ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುತ್ತದೆ.

ಊ) ಆಯವ್ಯಯ ಲಭ್ಯತೆಯನ್ನು ಆಧರಿಸಿ, ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಾಣ ಮಾಡುವ ಮೂಲಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ವಿದ್ಯಾರ್ಥಿ ನಿಲಯ

ಸುಧಾರಣೆ ಕಾರ್ಯಕ್ರಮವಿದ್ದು ಈ ಬಾಬ್ತಿನಲ್ಲಿ ಲಭ್ಯವಿರುವ ಆಯವ್ಯಯದನ್ವಯ ವಿದ್ಯಾರ್ಥಿಗಳಿಗೆ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

79(52) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಹಿಂದುಳಿದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವತಿಯಿಂದ ಮಂಜೂರಾಗಿರುವ ವಸತಿ ಶಾಲೆಗಳಲ್ಲಿ ಸ್ವಂತ ನಿವೇಶನ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ನಿವೇಶನವನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಸಚಿವರು):

ಅ) ಸರ್ಕಾರದ ಆದೇಶ ಕ್ರ.ಸಂ. ಸಕಇ 30 ಅಲನಿ 2005 ದಿನಾಂಕ: 15-09-2005 ರಲ್ಲಿ ಚಾಮರಾಜನಗರ ಟೌನ್‌ನಲ್ಲಿ ಒಂದು ಅಲ್ಪಸಂಖ್ಯಾತರ ವಸತಿ ಶಾಲೆಯನ್ನು ಮಂಜೂರು ಮಾಡಿ ಆದೇಶಿಸಿದೆ.

ಶೈಕ್ಷಣಿಕ ವರ್ಷದ ಮಧ್ಯಂತರದಲ್ಲಿ ಈ ವಸತಿ ಶಾಲೆಯನ್ನು ಮಂಜೂರು ಮಾಡಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಿರುವುದಿಲ್ಲ.

2006-07ನೇ ಸಾಲಿನ ಶೈಕ್ಷಣಿಕ ವರ್ಷದ ಅಡಿಯಲ್ಲಿ ವಸತಿ ಶಾಲೆಯನ್ನು ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆರವರು ಈ ವಸತಿ ಶಾಲೆಗೆ ಕನಿಷ್ಠ 10 ಎಕರೆ ಜಮೀನು ಮಂಜೂರು ಮಾಡಲು ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಹಾಗೂ ಪ್ರಸ್ತಾವನೆ ಪರಿಶೀಲನೆಯ ಹಂತದಲ್ಲಿದೆ.

80(53) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಿಂದ ಮೊರಾರ್ಜಿ ವಸತಿ ಶಾಲೆಗಳನ್ನು ಜಿಲ್ಲಾ ಪಂಚಾಯ್ತಿಗಳಿಗೆ ವರ್ಗಾಯಿಸಲು ಕಾರಣವೇನು;

ಆ) ಈ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಲಿಕೆ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಹಾಗಿದ್ದಲ್ಲಿ, ತೆಗೆದುಕೊಂಡಿರುವ ಸುಧಾರಣೆ ಕ್ರಮಗಳೇನು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಸರ್ಕಾರದ ಆದೇಶ ಸಂಖ್ಯೆ ಗ್ರಾ.ಅ.ಪ. 209 ತಾಪಸ 2003 ದಿನಾಂಕ: 5-10-2004, ಆದೇಶ ಸಂಖ್ಯೆ ಗ್ರಾ.ಅ.ಪ. 146 ಯೋಉಮೌ 2004, ದಿನಾಂಕ: 14-10-2004 ಹಾಗೂ ಆದೇಶ ಸಂಖ್ಯೆ ಸಕಇ 461 ಪಕವಿ 2004 ದಿನಾಂಕ: 20-11-2004 ಗಳಲ್ಲಿ ಸೂಚಿಸಿರುವ ಕಾರಣಗಳ ಮೇರೆಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಜಿಲ್ಲಾ ಪಂಚಾಯಿತಿಗಳಿಗೆ ವರ್ಗಾಯಿಸಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

81 (17) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಆಸ್ಪತ್ರೆಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ಬೇಕಾಗಿರುವ ವೈದ್ಯರುಗಳು ಸಮರ್ಪಕವಾಗಿದ್ದಾರೆಯೇ;

ಆ) ಹಾಗಿಲ್ಲದಿದ್ದಲ್ಲಿ, ವೈದ್ಯರುಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ವಿಳಂಬಕ್ಕೆ ಕಾರಣಗಳೇನು; ಯಾವಾಗ ನೇಮಕ ಮಾಡಲಾಗುವುದು?

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಮತ್ತು ಪಶುಸಂಗೋಪನೆ ಸಚಿವರು):

ಅ) ರಾಜ್ಯದಲ್ಲಿ 294 ಪಶು ಆಸ್ಪತ್ರೆಗಳು ಹಾಗೂ 1598 ಪಶು ಚಿಕಿತ್ಸಾಲಯಗಳು 173 ಸಂಚಾರಿ ಪಶುಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಪಶು ಆಸ್ಪತ್ರೆಗಳು ಹಾಗೂ ಪಶು ಚಿಕಿತ್ಸಾಲಯಗಳಿಗೆ ಮಂಜೂರಾದ 295 ಸಹಾಯಕ ನಿರ್ದೇಶಕರ ಹಾಗೂ 1653 ಪಶುವೈದ್ಯಾಧಿಕಾರಿಗಳ ಹುದ್ದೆಗಳಲ್ಲಿ ಕ್ರಮವಾಗಿ 37 ಹಾಗೂ 983 ಹುದ್ದೆಗಳು ಖಾಲಿ ಇದ್ದು, ಒಟ್ಟಾರೆ ವೈದ್ಯರ ಕೊರತೆ ಇದೆ.

ಆ) ಪಶು ಆಸ್ಪತ್ರೆಗಳಿಗೆ ಮಂಜೂರಾದ 295 ಸಹಾಯಕ ನಿರ್ದೇಶಕರ ಹುದ್ದೆಗಳ ಪೈಕಿ 37 ಹುದ್ದೆಗಳು ಖಾಲಿ ಇವೆ ಹಾಗೂ ಪಶು ಚಿಕಿತ್ಸಾಲಯಗಳು ಹಾಗೂ ಸಂಚಾರಿ ಪಶು ಚಿಕಿತ್ಸಾಲಯಗಳಿಗೆ ಮಂಜೂರಾದ 1653 ಪಶುವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ 983 ಹುದ್ದೆಗಳು ಖಾಲಿ ಇರುತ್ತವೆ.

ಏಳು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

577 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮೋದನೆ ನೀಡಿದೆ. ಆಯ್ಕೆ ಮಾಡಲಾದ 250 ಪಶುವೈದ್ಯಾಧಿಕಾರಿಗಳ ಅಂತಿಮ ಪಟ್ಟಿಯನ್ನು ದಿನಾಂಕ: 10–3–2006 ರಂದು ಪ್ರಕಟಿಸಿದೆ.

ಉಳಿದ 327 ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇ) ಸರ್ಕಾರದ ಮಿತವ್ಯಯ ಆದೇಶ ಜಾರಿಯಲ್ಲಿದ್ದು, ನೇಮಕ ಮಾಡಲಾಗುವ ವಿವರಗಳನ್ನು (ಆ) ನಲ್ಲಿ ನೀಡಲಾಗಿದೆ.

82 (18) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಸರಕಾರ ಯೋಚಿಸಿದೆಯೇ;

ಆ) ಹಾಗಿಲ್ಲದಿದ್ದಲ್ಲಿ, ವಿಳಂಬವಾಗುತ್ತಿರಲು ಕಾರಣಗಳೇನು ಹಾಗೂ ಮೇಲ್ದರ್ಜೆಗೇರಿಸಲು ರೂಪುರೇಷೆಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಜನಸಂಖ್ಯೆ, ಹಾಸಿಗೆ ಸಾಮರ್ಥ್ಯ ಹಾಗೂ ಹೆಚ್ಚುವರಿ ಸೌಲಭ್ಯಗಳ ಅವಶ್ಯಕತೆಗಳ ಆಧಾರದ ಮೇಲೆ ಮೇಲ್ದರ್ಜೆಗೇರಿಸಲಾಗುವುದು.

83 (19) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಸರಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಪ್ರತಿ ತಾಲ್ಲೂಕಿಗೆ ಮೊರಾರ್ಜಿ ವಸತಿ ಶಾಲೆಯನ್ನು ನೀಡಲು ಕಾರ್ಯಕ್ರಮವಿದೆಯೇ;

ಇ) ರಾಜ್ಯದಲ್ಲಿ ಒಟ್ಟು ಎಷ್ಟು ಮೊರಾರ್ಜಿ ವಸತಿ ಶಾಲೆಗಳಿವೆ; ಅವು ಎಲ್ಲೆಲ್ಲಿವೆ;

ಈ) ಯಾವ ಆಧಾರದ ಮೇಲೆ ಮೊರಾರ್ಜಿ ವಸತಿ ಶಾಲೆಯನ್ನು ತೆರೆಯಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವಂತೆ ರಾಜ್ಯದಲ್ಲಿ ಒಟ್ಟು 14 ಪರಿಶಿಷ್ಟ ವರ್ಗದ ಮೊರಾರ್ಜಿ ವಸತಿ ಶಾಲೆಗಳು ಇರುತ್ತವೆ. ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.

ಈ) ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಡಾ: ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯಲು ಪರಿಶೀಲಿಸಲಾಗುವುದು.

ಅನುಬಂಧ-1

ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳ ವಿವರ.

1. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು.

2. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮ ಶಾಲೆಗಳು.

3. 1ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ವಿವಿಧ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿ ವೇತನಗಳು.

4. ಐ.ಐ.ಟಿ., ಐ.ಐ.ಎಂ., ಐ.ಐ.ಎಸ್.ಸಿ.ಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದ ಪೂರ್ಣ ಅವಧಿಗೆ ರೂ. 50,000/-ಗಳ ಸಹಾಯಧನ.

5. ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್., ಪಿ.ಹೆಚ್.ಡಿ. ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. 8,000/- ಮತ್ತು ರೂ. 10,000/-ಗಳ ಸಹಾಯಧನ.

6. ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸ ಮುಂದುವರಿಸುವಂತೆ ಉತ್ತೇಜಿಸಲು ವಿದ್ಯಾರ್ಥಿವೇತನದೊಂದಿಗೆ ರೂ. 500/-ಗಳ ಪ್ರೋತ್ಸಾಹ ಧನ.

7. ಮೂಲ ನಿವಾಸಿ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳ ಪೋಷಕರು ಅವರ ಮಕ್ಕಳನ್ನು ಶಾಲೆಗಳಿಗೆ ಸೇರಿಸುವಂತೆ ಉತ್ತೇಜನವನ್ನು ನೀಡಲು ವಾರ್ಷಿಕ ರೂ. 200/–ರ ಪ್ರೋತ್ಸಾಹಧನ.

8. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 5 ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. 5000/- ಮತ್ತು ರೂ. 10,000/–ಗಳ ಪ್ರೋತ್ಸಾಹಧನ.

9. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಬಹುಮಾನ ಹಣ.

10. ಪರಿಶಿಷ್ಟ ವರ್ಗದ ಕಾನೂನು ಪದವೀದರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 4 ವರ್ಷಗಳ ತರಬೇತಿಯನ್ನು ನೀಡಲಾಗುತ್ತಿದ್ದು ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ. 1000/–ರಂತೆ ಶಿಷ್ಯ ವೇತನ.

11. ನವಚೇತನ ಯೋಜನೆಯಡಿಯಲ್ಲಿ ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವ ಜನರು ಉದ್ಯೋಗ/ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಮಾಹಿತಿ ತಂತ್ರಜ್ಞಾನವೂ ಸೇರಿದಂತೆ ವಿವಿಧ ವೃತ್ತಿಪರ ಟ್ರೇಡ್‌ಗಳಲ್ಲಿ ತರಬೇತಿ.

12. ವಿದೇಶಿ ವಿಶ್ವ ವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದ ಅವಧಿಗೆ ಗರಿಷ್ಟ ರೂ. 10.00 ಲಕ್ಷಗಳ ಧನ ಸಹಾಯ.

13. ವೈದ್ಯಕೀಯ, ದಂತ ವೈದ್ಯಕೀಯ ತಾಂತ್ರಿಕ ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ.

ಗಿರಿಜನ ಉಪಯೋಜನೆಯಡಿ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ.

ಕ್ರ.ಸಂ.	ಕಾರ್ಯಕ್ರಮಗಳು
	ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು
1.	ಕೃಷಿ ಅಭಿವೃದ್ಧಿ – ಕೃಷಿ ಪರಿಕರಗಳು, ಆಧುನಿಕ ಕೃಷಿ ಉಪಕರಣಗಳು, ಪಂಪ್ ಸೆಟ್, ಸ್ಪ್ರಿಂಕ್ಲರ್ ಸೆಟ್, ಪವರ್ ಟಿಲ್ಲರ್, ಉಳುಮೆ ಎತ್ತುಗಳ ವಿತರಣೆ
2.	ತೋಟಗಾರಿಕೆ–ಪರಿಶಿಷ್ಟ ವರ್ಗದವರ ಜಮೀನುಗಳಲ್ಲಿ ಅರ್ಧ ಎಕರೆ ತೆಂಗಿನ ತೋಟ, ಒಂದು ಎಕರೆ ಹಣ್ಣಿನ ತೋಟ/ ಹೂವಿನ ತೋಟಗಳ ನಿರ್ಮಾಣ ಹಾಗೂ 2 ವರ್ಷಗಳವರೆಗೆ ತೋಟಗಳ ಪೋಷಣೆಗೆ ಸಹಾಯಧನ.
3.	ಪಶು ಸಂಗೋಪನೆ –ನಬಾರ್ಡ್ ದರದಲ್ಲಿ ಶೇ. 75ರ ಸಹಾಯಧನದಡಿ ಮಿಶ್ರತಳಿ ಹಸು ಘಟಕ, ಎಮ್ಮೆ ಘಟಕ, ಕುರಿ ಘಟಕ/ ಹಂದಿ ಘಟಕಗಳ ವಿತರಣೆ.
4.	ರೇಷ್ಮೆ –ಹಿಪ್ಪುನೇರಳೆ ಬೇಸಾಯಕ್ಕೆ ಸಹಾಯಧನ, ರೇಷ್ಮೆ ಹುಳು ಸಾಕಾಣಿಕೆಗೆ ಸಹಾಯಧನ, ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಸಹಾಯಧನ.
5.	ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು –ಪರಿಶಿಷ್ಟ ಪಂಗಡದ ಯುವಕ/ ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜೇನು ಸಾಕಾಣಿಕೆ, ಬಡಗಿತನ, ಬಿದಿರು ಮತ್ತು ಬೆತ್ತದ ವೃತ್ತಿಗಳಲ್ಲಿ ತರಬೇತಿ ಹಾಗೂ ಉಚಿತ ಸಲಕರಣೆಗಳ ವಿತರಣೆ.

ಕ್ರ.ಸಂ.	ಕಾರ್ಯಕ್ರಮಗಳು
6.	ಉದ್ಯೋಗ ಮತ್ತು ತರಬೇತಿ – ಪರಿಶಿಷ್ಟ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿ ಹಾಗೂ ಉಚಿತ ಹೊಲಿಗೆ ಯಂತ್ರಗಳ ಪೂರೈಕೆ
7.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ –ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆ, ನವಜೀವನ ಯೋಜನೆ, ಉದ್ಯೋಗಿನಿ ಯೋಜನೆಯಡಿ ಸಹಾಯಧನ ವಿತರಣೆ ಹಾಗೂ ಪರಿಶಿಷ್ಟ ವರ್ಗದ ಮಕ್ಕಳಿಗೆ ವಿಶೇಷ ಪೌಷ್ಟಿಕ ಆಹಾರ ವಿತರಣೆ.
8.	ಸಾರ್ವಜನಿಕ ಶಿಕ್ಷಣ ಇಲಾಖೆ–
	1. ವಿದ್ಯಾ ವಿಕಾಸ ಯೋಜನೆಯಡಿ 1 ರಿಂದ 7ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ.
	2. 1 ರಿಂದ 7ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕಿಯರಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸುವುದು.
	3. 1 ರಿಂದ 10ನೇ ತರಗತಿಯವರೆಗಿನ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿ.
	4. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರೇತರ ಶುಲ್ಕ ಮರು ಪಾವತಿ.
9.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ, ಉದ್ಯೋಗ ಮತ್ತು ಜೀವನ ಮಟ್ಟವನ್ನು ಸುಧಾರಿಸಲು ಕೆಳಕಂಡ ಕಾರ್ಯಕ್ರಮಗಳಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.
	1. ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ
	2. ಎಸ್.ಜಿ.ಆರ್.ವೈ.
	ಮೂಲಭೂತ ಸೌಲಭ್ಯ
1.	ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಕುಡಿಯುವ ನೀರಿನ ಸೌಲಭ್ಯ
2.	ಗ್ರಾಮೀಣ ನೈರ್ಮಲ್ಯ ಯೋಜನೆಯಡಿಯಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ.
3.	ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ವಿದ್ಯುದ್ದೀಕರಣ ಮತ್ತು ಭಾಗ್ಯಜ್ಯೋತಿ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸಂಪರ್ಕ

ಕೇಂದ್ರ ವಲಯ ಕಾರ್ಯಕ್ರಮಗಳು

ಕ್ರ.ಸಂ.	ಕಾರ್ಯಕ್ರಮಗಳು
1.	**ವಿಶೇಷ ಕೇಂದ್ರೀಯ ಸಹಾಯಧನ** :– ಪರಿಶಿಷ್ಟ ವರ್ಗದವರ ಜಮೀನು ಅಭಿವೃದ್ಧಿಗೆ ನೀರು ಸಂಗ್ರಹಣಾ ವ್ಯವಸ್ಥೆಗಳ ನಿರ್ಮಾಣ, ಸ್ಪ್ರಿಂಕ್ಲರ್ ಸೆಟ್, ಉಳುಮೆ, ಎತ್ತು, ಕೃಷಿ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಟಿಲ್ಲರ್ ವಿತರಣೆ, ತೋಟಗಾರಿಕೆ

ಕ್ರ.ಸಂ.	ಕಾರ್ಯಕ್ರಮಗಳು
	ಅಭಿವೃದ್ಧಿಗೆ ಸಹಾಯಧನ, ಪಶು ಸಂಗೋಪನೆ ಅಭಿವೃದ್ಧಿಯಡಿ ಹಸು ಘಟಕ, ಕುರಿ ಮತ್ತು ಹಂದಿ ಘಟಕಗಳ ವಿತರಣೆ, ಗ್ರಾಮೀಣ ಕೈಗಾರಿಕೆಗೆ ಸಹಾಯಧನ, ಸ್ವಯಂ ಉದ್ಯೋಗ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
2.	**ಭಾರತ ಸಂವಿಧಾನ ಅನುಚ್ಛೇದ 275(1)ರ ಅನುದಾನ** :– ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಕುಡಿಯುವ ನೀರು, ಸಂಪರ್ಕ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಸಮುದಾಯ ಭವನ ನಿರ್ಮಾಣ, ಜಮೀನು ಅಭಿವೃದ್ಧಿ, ನೀರಾವರಿ ಸೌಲಭ್ಯ, ಪರಿಶಿಷ್ಟ ವರ್ಗದವರ ಜಮೀನುಗಳಿಗೆ ಸೋಲಾರ್ ತಂತಿಬೇಲಿ ನಿರ್ಮಾಣ, ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
3.	**ಆದಿವಾಸಿ ಪಂಗಡದವರ ಅಭಿವೃದ್ಧಿ** :– ಆದಿವಾಸಿ ಜನಾಂಗಕ್ಕೆ ಸೇರಿದ ಕೊರಗ ಮತ್ತು ಜೇನುಕುರುಬ ಪಂಗಡದವರ ಅಭಿವೃದ್ಧಿಗೆ ವಿಶೇಷ ಆರ್ಥಿಕ ನೆರವು ಮತ್ತು ಜನಶ್ರೀ ವಿಮಾ ಯೋಜನೆಯಡಿ ಆದಿವಾಸಿ ಕುಟುಂಬಗಳಿಗೆ ಜೀವ ವಿಮಾ ಸೌಲಭ್ಯ.
4.	**ವೃತ್ತಿ ತರಬೇತಿ ಕಾರ್ಯಕ್ರಮ** :– ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ಒಂದು ವರ್ಷದ ತರಬೇತಿ.
5.	**ಪರಿಶಿಷ್ಟ ವರ್ಗದ ಆಶ್ರಮಶಾಲೆ/ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ** :– ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ವರ್ಗದ ಆಶ್ರಮಶಾಲೆ/ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಶೇ. 50ರಷ್ಟು ಅನುದಾನವನ್ನು ಮಂಜೂರು ಮಾಡುತ್ತದೆ.
6.	**ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ** :– ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.
7.	**ತರಬೇತಿ ಮತ್ತು ಸಂಬಂಧಿತ ಯೋಜನೆ** :– ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮ
8.	**ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆ** :– ಕೇಂದ್ರ ಪುರಸ್ಕೃತ ಯೋಜನೆಯಡಿ ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆಗೆ ಅನುದಾನ.

ಅನುಬಂಧ-2

ಪರಿಶಿಷ್ಟ ವರ್ಗದ ವಸತಿ ಶಾಲೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ವಸತಿ ಶಾಲೆಗಳ ಸ್ಥಳ ವಿವರ
1	2	3	4
1.	ದಾವಣಗೆರೆ	ದಾವಣಗೆರೆ	ದಾವಣಗೆರೆ
2.	ಚಿತ್ರದುರ್ಗ	ಚಳ್ಳಕೆರೆ	ಚಳ್ಳಕೆರೆ
3.	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು	ವಸತಿ ಶಾಲೆಗಳ ಸ್ಥಳ ವಿವರ
4.	ಮೈಸೂರು	ಹುಣಸೂರು	ಹುಣಸೂರು
5.	ಮೈಸೂರು	ಪಿರಿಯಾಪಟ್ಟಣ	ಪಿರಿಯಾಪಟ್ಟಣ
6.	ಚಿತ್ರದುರ್ಗ	ಮೊಳಕಾಲ್ಮೂರು	ಮೊಳಕಾಲ್ಮೂರು
7.		ಹೊಳಲ್ಕರೆ	ಹೊಳಲ್ಕರೆ
8.	ರಾಯಚೂರು	ಮಾನ್ವಿ	ಕವಿತಾಳೆ
9.		ಸಿಂಧನೂರು	ಸಿಂಧನೂರು
10.	ತುಮಕೂರು	ಕೊರಟಗೆರೆ	ಕೊರಟಗೆರೆ
11.	ಕೋಲಾರ	ಶಿಡ್ಲಘಟ್ಟ	ಶಿಡ್ಲಘಟ್ಟ
12.	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ದೇವನಹಳ್ಳಿ
13.	ಚಿಕ್ಕಮಗಳೂರು	ಕಡೂರು	ಬೀರೂರು (ಸಿಂದಿಗೆರೆ)
14.	ರಾಯಚೂರು	ರಾಯಚೂರು	ರಾಯಚೂರು

84 (194) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿದೆ;

ಆ) ಈ ಪೈಕಿ ಯಾವ ಯಾವ ಸ್ಥಳಗಳಲ್ಲಿ ಸ್ಥಾಪನೆಯ ಕೆಲಸಗಳು ಪ್ರಗತಿಯಲ್ಲಿವೆ;

ಇ) ಬೀದರ್‌ನಲ್ಲಿ ಸ್ಥಾಪಿಸಲಾಗುತ್ತಿರುವ ವೈದ್ಯಕೀಯ ಕಾಲೇಜಿನ ಕಟ್ಟಡದ ಕೆಲಸ, ವೈದ್ಯ ಸಿಬ್ಬಂದಿ, ನೇಮಕಾತಿಗಳು ಯಾವ ಹಂತದಲ್ಲಿದೆ;

ಈ) ಈ ನೇಮಕಾತಿ ಮಾಡಿಕೊಂಡಿರುವ ಸಿಬ್ಬಂದಿಯ ಆಯ್ಕೆಗೆ ಅನುಸರಿಸಿದ ಮಾನದಂಡಗಳೇನು; (ವಿವರ ಒದಗಿಸುವುದು)

ಉ) ಈ ವೈದ್ಯಕೀಯ ಕಾಲೇಜಿನ ಸ್ಥಾಪನೆಯ ಸಂಬಂಧವಾಗಿ ಸರ್ಕಾರದಿಂದ ಮಂಜೂರಾಗಿರುವ ಹಣದ ಮೊತ್ತವೆಷ್ಟು ಹಾಗೂ ಇಲ್ಲಿಯವರೆವಿಗೆ ವೆಚ್ಚವಾಗಿರುವ ಹಣದ ವಿವರಗಳೇನು;

ಊ) ಬರುವ ಶೈಕ್ಷಣಿಕ ಸಾಲಿನಿಂದ ಬೀದರ್ ವೈದ್ಯಕೀಯ ಕಾಲೇಜು ಪ್ರಾರಂಭ ವಾಗಲಿದೆಯೇ;

ಋ) ಇಲ್ಲದಿದ್ದಲ್ಲಿ ಕಾರಣಗಳೇನು?

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಬೀದರ್, ರಾಯಚೂರು, ಶಿವಮೊಗ್ಗ, ಬೆಳಗಾಂ, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಆರು ಹೊಸ ಕಾಲೇಜುಗಳನ್ನು ಸ್ಥಾಪನೆ ಮಾಡಲು ಸರ್ಕಾರದ ದಿನಾಂಕ: 22-01-2005 ಸಂಖ್ಯೆ: ಆಕುಕ 516 ಎಂಪಿಎಸ್ 05 ರಲ್ಲಿ ಮಂಜೂರಾತಿ ನೀಡಿದೆ.

ಆ) ಆರು ವೈದ್ಯಕೀಯ ಕಾಲೇಜುಗಳ ಸ್ಥಾಪನೆ ಕಟ್ಟಡ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿವೆ.

ಇ) ಬೀದರ್‌ನಲ್ಲಿ ಸ್ಥಾಪಿಸಲಾಗುತ್ತಿರುವ ವೈದ್ಯಕೀಯ ಕಾಲೇಜು ಕಟ್ಟಡದ ಬೇಸ್‌ಮೆಂಟ್ ಪ್ಲೋರಿಂಗ್ ಸ್ಲ್ಯಾಬ್ ಮತ್ತು ಕಾಲಂ ಕೆಲಸ ಪ್ರಗತಿಯಲ್ಲಿದೆ. ಉಪನ್ಯಾಸಕರು ಮತ್ತು ಇತರೆ ಸಿಬ್ಬಂದಿ ವರ್ಗದವರನ್ನು ವಾಕ್ ಇನ್ ಸಂದರ್ಶನವನ್ನು ಮಾಡಲಾಗಿದ್ದು, ಕೆಲವು ಬೋಧಕ ವರ್ಗದ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ.

ಈ) ವಾಕ್ ಇನ್ ಸಂದರ್ಶನದ ಮುಖಾಂತರ ಬೋಧಕ ಸಿಬ್ಬಂದಿಯ ಅರ್ಹತೆ ಮತ್ತು ಅನುಭವ ಪ್ರಕಾರ ಹಾಗೂ ಎಂ.ಸಿ.ಐ. ನಿಯಮಗಳ ಅನುಗುಣವಾಗಿ ನೇಮಕಾತಿ ಮಾಡಲಾಗಿದೆ.

ಉ) ಬೀದರ್ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡದ ನಿರ್ಮಾಣಕ್ಕೆ ಸರ್ಕಾರದಿಂದ ಐದು ಕೋಟಿ ಮಂಜೂರು ಮಾಡಲಾಗಿದ್ದು, ಅದರಲ್ಲಿ 4.60 ಕೋಟಿ ರೂ.ಗಳು ವೆಚ್ಚವಾಗಿರುತ್ತದೆ.

ಊ) MCI ರವರ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಋ) ದಿನಾಂಕ: 31-05-2006 ರೊಳಗಾಗಿ ಕಟ್ಟಡದ ಕಾಮಗಾರಿಯು ಪೂರ್ಣಗೊಳ್ಳಬೇಕಾಗಿದೆ. MCI ನಿಯಮಾವಳಿಯಂತೆ ಅರ್ಹ ಸಿಬ್ಬಂದಿಯ ಅಲಭ್ಯತೆಯೇ ಮುಖ್ಯ ಸಮಸ್ಯೆಯಾಗಿರುತ್ತದೆ.

85 (195) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿರುವ ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಆ) ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಲಾಗುವುದು;

ಇ) ಬಸವಕಲ್ಯಾಣದ ಬೇಡರವಾಡಿಯಲ್ಲಿ ಸ್ಥಾಪಿಸಲಾಗುತ್ತಿರುವ ಆಶ್ರಮ ಶಾಲೆಗೆ ಯಾವಾಗ ಮಂಜೂರಾತಿಯನ್ನು ನೀಡಲಾಯಿತು; ಹಾಗೂ ಇದಕ್ಕಾಗಿ ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; ಹಾಗೂ ಕಟ್ಟಡದ ನಿರ್ಮಾಣ ಕಾರ್ಯ ಯಾವ ಹಂತದಲ್ಲಿ ಇದೆ;

ಈ) ಸದರಿ ಆಶ್ರಮ ಶಾಲೆಯ ಕಟ್ಟಡವು ಇನ್ನೂ ನಿರ್ಮಾಣ ಹಂತದಲ್ಲಿರುವಾಗಲೇ ಶಿಥಿಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಯಾರಿಗೆ ವಹಿಸಿಕೊಡಲಾಗಿದೆ; ಹಾಗೂ ಇಂತಹ ಕಾಮಗಾರಿಯನ್ನು ಕೈಗೊಂಡವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗುವುದು;

ಊ) ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಶೀಘ್ರವಾಗಿ ಈ ಆಶ್ರಮ ಶಾಲೆಯನ್ನು ಪ್ರಾರಂಭಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಆಶ್ರಮ ಶಾಲೆಗಳನ್ನು ನಡೆಸುತ್ತಿರುವುದಿಲ್ಲ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಬೀದರ್ ಜಿಲ್ಲೆಯ ಬೀದರ್ ನಗರದಲ್ಲಿ 50 ಸಂಖ್ಯಾಬಲದ 1 ಆಶ್ರಮ ಶಾಲೆಯು ಸ್ವಂತ ಕಟ್ಟಡದಲ್ಲಿ

ಕಾರ್ಯನಿರ್ವಹಿಸುತ್ತಿದೆ. ಹಾಗೂ ಬೀದರ್ ಜಿಲ್ಲೆಯಲ್ಲಿರುವ ಬಸವಕಲ್ಯಾಣ ತಾಲ್ಲೂಕಿನ ಘೋಟಲವಾಡಿ ಗ್ರಾಮದಲ್ಲಿ ಒಂದು ಪರಿಶಿಷ್ಟ ವರ್ಗದ ಆಶ್ರಮ ಶಾಲೆ ಇರುತ್ತದೆ.

ಆ) ಹೊಸ ಆಶ್ರಮ ಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ. ಭಾಲ್ಕಿ ಮತ್ತು ಬೀದರ್ ಗ್ರಾಮಗಳಲ್ಲಿ ಪರಿಶಿಷ್ಟ ವರ್ಗದ ಜನಾಂಗಕ್ಕೆ ಆಶ್ರಮ ಶಾಲೆ ಸ್ಥಾಪಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸದರಿ ಆಶ್ರಮ ಶಾಲೆಯು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಬಸವಕಲ್ಯಾಣ ಘೋಟಲವಾಡಿ/ ಬೇಡರವಾಡಿಯಲ್ಲಿರುವ ಆಶ್ರಮ ಶಾಲೆಗೆ ದಿನಾಂಕ: 17–8–2001ರಂದು ಮಂಜೂರಾಗಿದೆ. ಸದರಿ ಕಾಮಗಾರಿಗೆ ದಿನಾಂಕ: 25–2–2004 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಅದುವರೆವಿಗೂ ರೂ. 71.51 ಲಕ್ಷಗಳು ಖರ್ಚಾಗಿರುತ್ತದೆ. ಸದರಿ ಕಟ್ಟಡಕ್ಕೆ ಕಿಟಕಿ, ಬಾಗಿಲು, ವಿದ್ಯುತ್ ಮತ್ತು ನೀರು ಸರಬರಾಜು ಕಾಮಗಾರಿ ಹಾಗೂ ಕಾಂಪೌಂಡ್ ಆಗಬೇಕಾಗಿದೆ.

ಈ) ಕಟ್ಟಡವು ಶಿಥಿಲ ವ್ಯವಸ್ಥೆಗೆ ಬಂದಿರುವುದು ಕಂಡು ಬರುವುದಿಲ್ಲ.

ಉ) ಮೆ: ಹಿಂದೂಸ್ಥಾನ್ ಸ್ಟೀಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಲಿಮಿಟೆಡ್, ಬೆಂಗಳೂರು ರವರಿಗೆ ವಹಿಸಲಾಗಿದೆ. ಕಟ್ಟಡದಲ್ಲಿ ನ್ಯೂನತೆ ಕಂಡು ಬಂದಿಲ್ಲವಾದ ಕಾರಣ ಸಂಸ್ಥೆಯ ವಿರುದ್ಧ ಕ್ರಮ ತೆಗೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

86 (196) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕುಗಳಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯರು ಹಾಗೂ ಇತರೆ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು;

ಆ) ಈ ಪೈಕಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಹಾಗೂ ಇತರ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು;

ಇ) ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯ ಹಾಗೂ ಇತರ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು;

ಈ) ಎಷ್ಟು ದಿನಗಳಿಂದ ಈ ಹುದ್ದೆಗಳು ಖಾಲಿ ಇವೆ;

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬೀದರ್ ಜಿಲ್ಲಾ ಆಸ್ಪತ್ರೆಗಳಲ್ಲಿ 23 ವೈದ್ಯರು/ 248 ಇತರೆ ಸಿಬ್ಬಂದಿಗಳ ಹುದ್ದೆ ಮಂಜೂರಾಗಿರುತ್ತವೆ. ತಾಲ್ಲೂಕು ಆಸ್ಪತ್ರೆಗಳಲ್ಲಿ 40 ವೈದ್ಯರು/ 286 ಇತರೆ ಸಿಬ್ಬಂದಿಗಳ ಹುದ್ದೆ ಮಂಜೂರಾಗಿರುತ್ತವೆ.

ಆ) ಜಿಲ್ಲಾ ಆಸ್ಪತ್ರೆಗಳಲ್ಲಿ 22 ವೈದ್ಯರು/ 172 ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಆಸ್ಪತ್ರೆಗಳಲ್ಲಿ 23 ವೈದ್ಯರು/ 175 ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಜಿಲ್ಲಾ ಆಸ್ಪತ್ರೆಯಲ್ಲಿ 1 ವೈದ್ಯರ /76 ಇತರೆ ಸಿಬ್ಬಂದಿಗಳ ಹುದ್ದೆ ಖಾಲಿ ಇರುತ್ತದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ 17 ವೈದ್ಯರ/ 111 ಇತರೆ ಸಿಬ್ಬಂದಿಗಳ ಹುದ್ದೆ ಖಾಲಿ ಇರುತ್ತದೆ.

ಈ) ಸುಮಾರು ಎರಡು ವರ್ಷಗಳಿಂದ ಖಾಲಿ ಇರುತ್ತವೆ.

ಉ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಹಾಗೂ ನೇರ ಸಂದರ್ಶನ ಮುಖಾಂತರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ವೈದ್ಯೇತರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

87 (197) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲಾ ಆಸ್ಪತ್ರೆ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತರುವ ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ತೀವ್ರವಾದ ಔಷಧಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮೇಲ್ಕಂಡ ಆಸ್ಪತ್ರೆಗಳಲ್ಲಿ ಔಷಧಗಳ ಸಲುವಾಗಿ ಕಳೆದ 3 ವರ್ಷಗಳಿಂದ ವೆಚ್ಚ ಮಾಡಿದ ಹಣವೆಷ್ಟು; (ಪೂರ್ಣ ಅಂಕಿ ಅಂಶಗಳ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಒದಗಿಸುವುದು)

ಇ) ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಸಾಕಷ್ಟು ಔಷಧಿಗಳ ದಾಸ್ತಾನಿದ್ದರೂ ಸಹ ವೈದ್ಯಕೀಯ ರೋಗಿಗಳಿಗೆ ಔಷಧಿಗಳನ್ನು ಹೊರಗಿನ ಖಾಸಗಿ ಅಂಗಡಿಗಳಿಂದ ಖರೀದಿಸುವಂತೆ ಸೂಚಿಸುತ್ತಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಔಷಧಗಳ ಕೊರತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಕೊರತೆ ನೀಗಿಸಲು ಸರ್ಕಾರ ನಿಗದಿಪಡಿಸಿರುವ ಮೊತ್ತದ ಔಷಧಗಳಲ್ಲದೇ, ಹೆಚ್ಚುವರಿ ಮೊತ್ತದ ಔಷಧಗಳನ್ನು ಸಹ ಸರಬರಾಜು ಮಾಡಲಾಗಿದೆ.

ಆ) ಪೂರ್ಣ ಅಂಕಿ ಅಂಶಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ಇಲಾಖೆಯ ಆರ್.ಸಿ. ಪಟ್ಟಿಯಲ್ಲಿ ಮತ್ತು ಗೋದಾಮಿನಲ್ಲಿ ಇಲ್ಲದ ಅತ್ಯವಾಶ್ಯಕವಾಗಿ ಬೇಕಾದ ಔಷಧಿಗಳನ್ನು ಮಾತ್ರ ಹೊರಗಿನಿಂದ ಖರೀದಿಸುವಂತೆ ವೈದ್ಯರು ರೋಗಿಗಳಿಗೆ ಸೂಚಿಸುತ್ತಿರುವುದು ಸರಿಯಾಗಿರುತ್ತದೆ.

ಈ) ಇನ್ನು ಮುಂದೆ ಔಷಧಗಳ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುವುದು.

2002-03

			Bidar Taluk		Aurad		Basavakalyana		Humana Bad		Bhalki	
Sl. No.	Name of the Institution	Fixed Budget	Total Institution	Total Budget	Total Institution	Total Budget	Total Institution	Total Budget	Total Institution	Total Budget	Total Institution	Total Budget
1	2	3	4	5	6	7	8	9	10	11	12	13
1.	District Hospital Bidar	2200000	1	2200000								
2.	General Hospital, Bidar	80000 120000			1	80000	1	120000	1	120000	1	80000
3.	C.H.C.	80000							1	80000		
4.	PHC	45000	8	360000	7	315000	10	450000	8	360000	8	360000
5.	PHU	30000	2	60000	3	90000	3	90000	2	60000	3	90000
6.	10 Beded Mat.	8000	5	40000								
7.	DTC	40000	1	40000								
8.	NLCC	30000	1	30000					1	30000		
9.	20 Beded Leproscy	20000	1	20000								
10.	Dental Unit	10000			1	10000	2	20000	2	20000	3	30000
11.	Sub-Centre	5000	36	180000	31	155000	46	230000	36	180000	37	185000

1	2	3	4	5	6	7	8	9	10	11	12	13
12.	S.E.T.	4000	20	80000								
13.	School Health	300	50	15000								
	TOTAL			**3025000**		**650000**		**910000**		**850000**		**745000**

TOTAL BUDGET : 6180000

2003-04

			Bidar Taluk		Aurad		Basavakalyana		Humana Bad		Bhalki	
Sl. No.	Name of the Institution	Fixed Budget	Total Institution	Total Budget	Total Institution	Total Budget	Total Institution	Total Budget	Total Institution	Total Budget	Total Institution	Total Budget
1	2	3	4	5	6	7	8	9	10	11	12	13
1.	District Hospital Bidar	40%2200000 60%3300000	 1	2200000 3300000								
2.	General Hospital, Bidar	80000 120000			1	80000	1	120000	1	120000	1	80000
3.	C.H.C.	80000							1	80000		
4.	PHC	45000	8	360000	7	315000	10	450000	8	360000	8	360000
5.	PHU	30000	2	60000	3	90000	3	90000	2	60000	3	90000
6.	10 Beded Mat.	8000	5	40000								
7.	DTC	40000	1	40000								

1	2	3	4	5	6	7	8	9	10	11	12	13
8.	NLCC	30000	1	30000					1	30000		
9.	20 Beded Leproscy	20000	1	20000								
10.	Dental Unit	10000			1	10000	2	20000	2	20000	3	30000
11.	Sub-Centre	5000	36	180000	31	155000	46	230000	36	180000	37	185000
12.	School Health	300	8	2400								
	TOTAL			**6232400**		**650000**		**910000**		**850000**		**745000**

TOTAL BUDGET : 9387400

2004-05

			Bidar Taluk		Aurad		Basavakalyana		Humana Bad		Bhalki	
Sl. No.	Name of the Institution	Fixed Budget	Total Institution	Total Budget	Total Institution	Total Budget	Total Institution	Total Budget	Total Institution	Total Budget	Total Institution	Total Budget
1	2	3	4	5	6	7	8	9	10	11	12	13
1.	District Hospital Bidar	80%3040000	1	3040000								
2.	General Hospital,	80000 120000			1	80000	1	120000	1	120000	1	80000
3.	C.H.C.	80000							1	80000		
4.	PHC	45000	8	360000	7	315000	10	450000	8	360000	8	360000

1	2	3	4	5	6	7	8	9	10	11	12	13
5.	PHU	30000			3	90000	2	60000	2	60000	3	90000
6.	10 Beded Mat.	8000	5	40000								
7.	DTC	40000	1	40000								
8.	NLCC	30000	1	30000					1	30000		
9.	20 Beded Leproscy	20000	1	20000								
10.	Dental Unit	10000			1	10000	2	20000	2	20000	3	30000
11.	Sub-Centre	5000	46	230000	40	200000	56	280000	45	225000	44	220000
12.	School Health											
13.	U.PHC	75000	1	75000								
	TOTAL			**3835000**		**695000**		**930000**		**895000**		**780000**

TOTAL BUDGET : 7135000

ಬೀದರ್ ಜಿಲ್ಲೆಯ ಜಿಲ್ಲಾ ಆಸ್ಪತ್ರೆ ಮತ್ತು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ಆರೋಗ್ಯ ಸಂಸ್ಥೆಗಳಿಗೆ ಸರ್ಕಾರಿ ಔಷಧ ಮಳಿಗೆಯ ಅನುದಾನ ಹಾಗೂ ಸಾಂಕ್ರಾಮಿಕ ರೋಗಗಳ ತಡೆಗಟ್ಟುವ ಸಲುವಾಗಿ ಕಳೆದ ಮೂರು ವರ್ಷಗಳಿಗೆ ಸರಬರಾಜು ಮಾಡಿರುವ ವಿವರ ಈ ಕೆಳಕಂಡಂತಿದೆ.

Sl. No.	Name of the Institution	Drugs supplied Budget	Supplied Amount
1	2	3	4
			2002-03
1.	DH&FWO, Bidar	Epidemic Indent	1821477
2.	DH&FWO, Bidar	GMS Budget	519039
3.	District Hospital, Bidar	Epidemic	534232
		TOTAL	**28,74,748/-**
			2003-04
1.	DH&FWO, Bidar	Epidemic Indent	2198009
2.	DH&FWO, Bidar	GMS Budget	307691
3.	District Hospital, Bidar	Epidemic	792956
4.	District Hospital, Bidar	GMS Budget	130620
		TOTAL	**34,29,276/-**
			2004-2005
1.	DH&FWO, Bidar	Epidemic Indent	202547
2.	DH&FWO, Bidar	GMS Budget	853887
3.	District Hospital, Bidar	GMS Budget	2505624
		TOTAL	**35,62,058**

88 (203) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಫಜಲ್‌ಪುರ ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಆ) ಉಡಚಾಣ ಆರೋಗ್ಯ ಘಟಕ ಪ್ರಾರಂಭವಾದ ನಂತರ ಖಾಯಂ ಆಗಿ ವೈದ್ಯಾಧಿಕಾರಿಗಳು ಎಷ್ಟು ತಿಂಗಳು ಕೆಲಸ ಮಾಡಿದ್ದಾರೆ;

ಇ) ಈ ಆರೋಗ್ಯ ಘಟಕಗಳಿಗೆ ವೈದ್ಯರು ಬಾರದಿರಲು ಕಾರಣವೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರು ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ. ಅಫಜಲಪುರ ಆಸ್ಪತ್ರೆಗಳಲ್ಲಿ 4 ವೈದ್ಯರ ಹುದ್ದೆಗಳು ಖಾಲಿ ಇರುವುದು, ಪ್ರಾಥಮಿಕ ಆರೋಗ್ಯ ಕೇಂದ್ರ ಮಣ್ಣೂರಿನಲ್ಲಿ 1 ಹುದ್ದೆ, ಪ್ರಾಥಮಿಕ ಆರೋಗ್ಯ ಕೇಂದ್ರ ಉಡಚಾಣದಲ್ಲಿ 1 ಹುದ್ದೆ ಖಾಲಿ ಇರುತ್ತದೆ.

33 ವಿವಿಧ ವೃಂದದ ಹುದ್ದೆಗಳು ಖಾಲಿ ಇರುತ್ತದೆ. (ಪಟ್ಟಿ ಲಗತ್ತಿಸಿದೆ).

ಆ) ಸುಮಾರು ಮೂರು ಬಾರಿ ನೇರ ನೇಮಕಾತಿಯಿಂದ ನೇಮಕ ಮಾಡಿದ್ದರು ಯಾವ ವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ.

ದಿನಾಂಕ: 13-03-2006ರಂದು ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಇ) ಆರೋಗ್ಯ ಘಟಕ ಉಡಚಾಣ ಅತೀ ಹಿಂದುಳಿದ ಗ್ರಾಮಾಂತರ ಪ್ರದೇಶ ವಾಗಿರುವುದರಿಂದ ವೈದ್ಯಾಧಿಕಾರಿಗಳು ಸೇವೆ ಸಲ್ಲಿಸಲು ಮುಂದೆ ಬರುತ್ತಿಲ್ಲ.

L.A. Question No. 203 Tabled by Sri Patil M.Y., M.L.A. Afzalpur

Sl. No.	Name of the Cadre	P.H.C. D.Gan	Mannur	Mashal	Gobbur	Atnoor	D.Kalur	Karajgi	Ravoor	P.H.U. G.H. Afzal pur	S.Ghan gapur	Udchan	T.H.O. Afzal pur
1	2	3	4	5	6	7	8	9	10	11	12	13	14
		S W V	S W V	S W V	S W V	S W V	S W V	S W V	S W V	S W V	S W V	S W V	S W V
1.	Pharmacist	1 1 -	1 1 -	1 1 -	1 1 -	1 1 -	1 1 -	1 1 -	1 1 -	1 1 -	1 1 -	- 1 -	- - -
2.	Lab. Techn.	1 1 -	1 1 -	1 1 -	1 1 -	1 1 -	1 1 -	1 1 -	1 1 -	1 1 -	- - -	- - -	- - -
3.	Opth. Asst.	- - -	1 - 1	- - -	1 1 -	- - -	- - -	- - -	- - -	- - -	- - -	- - -	- - -
4.	X-Ray Tech.	- - -	- - -	- - -	- - -	- - -	- - -	- - -	- - -	- - -	- - -	- - -	- - -
5.	F.D.A.	- - -	1 - 1	1 - 1	1 1 -	- - -	1 - 1	1 - 1	- - -	1 - 1	- - -	- - -	- - -
6.	S.D.A.	1 1 -	- - -	- - -	1 1 -	- - -	- - -	- - -	1 1 -	4 4 -	- - -	- - -	- - -
7.	B.H.E.O.	1 1 -	1 1 -	1 1 -	1 1 -	- - -	- - -	- - -	- - -	- - -	- - -	- - -	- - -
8.	Sr.H.A. (F)	1 1 -	1 1 -	1 - 1	1 1 -	1 1 -	1 1 -	1 - 1	- - -	- - -	- - -	- - -	- - -
9.	Jr.H.A. (F)	4 3 1	4 2 2	5 5 -	8 7 1	4 3 1	4 4 -	2 2 -	3 2 1	3 1 2	2 1 1	- 1 -	- - -
10.	Sr.H.A. (M)	1 1 -	1 - 1	1 - 1	1 1 -	- - -	- - -	- - -	- - -	- - -	- - -	- - -	- - -
11.	Jr..H.A. (M)	5 4 1	4 4 -	4 4 -	6 6 -	3 3 -	4 4 -	2 2 -	2 2 -	- - -	1 1 -	- - -	- - -
12.	Staff Nurse	1 1 -	1 - 1	1 1 -	- - -	- - -	- - -	- - -	- - -	7 5 2	- - -	- - -	- - -
13.	Driver	1 1 -	1 1 -	1 1 -	1 1 -	- - -	- - -	- - -	- - -	- - -	- - -	- - -	- - -
14.	Group 'D'	4 4 -	- 3 -	3 3 -	4 4 -	1 1 -	1 1 -	1 1 -	3 3 -	31 19 12	2 2 -	3 3 -	- - -

89 (14) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದಗ ತಾಲ್ಲೂಕು ಮುಳಗುಂದ ಪಟ್ಟಣದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಟ್ಟಡ ನಿರ್ಮಾಣಕ್ಕಾಗಿ ಜಾಗವನ್ನು ಕೊಡಲು ಜಮೀನು ಮಾಲೀಕರು ಒಪ್ಪಿದ್ದು ಅವರ ಒಪ್ಪಿಗೆಯಂತೆ ಜಮೀನನ್ನು ಖರೀದಿಸಲಾಗುವುದೆ;

ಆ) ಜಮೀನನ್ನು ಖರೀದಿಸಿ ಕಟ್ಟಡವನ್ನು ನಿರ್ಮಾಣ ಮಾಡಲಾಗುವುದೇ ಹಾಗೂ ಯಾವಾಗ ಈ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿಯು ಮುಳಗುಂದ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕಾಗಿ ಮುಳಗುಂದ ಗ್ರಾಮದ ಸರ್ವೆ ನಂ. 337/2 ಮತ್ತು 326/2 ರಲ್ಲಿ ಒಟ್ಟು 712 ಎಕರೆ ಜಮೀನನ್ನು ಸಂಬಂಧಪಟ್ಟ ಭೂ ಮಾಲೀಕರಿಂದ ಜಮೀನು ಖರೀದಿಸಲು ಶಿಫಾರಸ್ಸು ಮಾಡಿದೆ. ಭೂಮಾಲೀಕರಿಂದ ಜಮೀನು ಮಾರಾಟ ಮಾಡಲು ಒಪ್ಪಿಗೆ ಪತ್ರ ನೀಡುವಂತೆ ಪತ್ರ ಬರೆಯಲಾಗಿದೆ. ಒಪ್ಪಿಗೆ ಪತ್ರ ಬಂದ ನಂತರದ ಜಮೀನು ಖರೀದಿಸಲಾಗುವುದು.

ಆ) ಜಮೀನು ಖರೀದಿಯ ನಂತರ 2006-07ನೇ ಸಾಲಿನ ಆಯವ್ಯಯದ ಅನುದಾನದ ಲಭ್ಯತೆಯು ಮೇರೆಗೆ ಆದ್ಯತೆ ನೀಡಿ ಶಾಲಾ ಸಂಕೀರ್ಣ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

90 (16) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ. ಯಿಂದ ಹಂಚಿಕೆ ಆಗಿರುವ ನಿವೇಶನಕ್ಕೆ ಹೆಚ್ಚಿಸಿದ ಬೆಲೆಯನ್ನು ಪಾವತಿಸದೇ ನಿವೇಶನವನ್ನು ಹಸ್ತಾಂತರಿಸುವಂತೆ ಮಾನ್ಯ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 12-7-2005ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿದ್ದು ನಿಜವಲ್ಲವೇ;

ಆ) ಅದರಂತೆ ನಿವೇಶನವನ್ನು ಪಡೆದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಂಡಿರುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) ಮಾನ್ಯ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 12-7-2005ರಂದು ನಡೆದ ಸಭೆ ಹಾಗೂ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಬಗ್ಗೆ ಇಲಾಖೆಗೆ ತಿಳಿದಿರುವುದಿಲ್ಲ. ಆದ್ದರಿಂದ ಹೆಚ್ಚಿಸಿದ ಮೌಲ್ಯ ನೀಡದೆ ನಿವೇಶನವನ್ನು ಪಡೆಯುವ ಪ್ರಸ್ತಾಪನೆ ಇಲಾಖೆ ಮುಂದೆ ಇರುವುದಿಲ್ಲ.

ಆ) ಈಗಾಗಲೇ ಕೆ.ಐ.ಎ.ಡಿ.ಬಿ. ಯಿಂದ ಜಮೀನು ಖರೀದಿಸಲು 2004-05ನೇ ಸಾಲಿನಲ್ಲಿ ರೂ. 2,96,400/-ಗಳನ್ನು ಬಿಡುಗಡೆಗೊಳಿಸಲಾಗಿದ್ದು, 2005-06ನೇ ಸಾಲಿಗೆ ಬಾಕಿ ಬಡ್ಡಿ ಮೊತ್ತ ರೂ. 1,27,134/-ಗಳನ್ನು ಸಹ ಮಂಜೂರು ಮಾಡಿದ್ದು ನಿವೇಶನವನ್ನು ಸ್ವಾಧೀನ ಪಡಿಸಿಕೊಂಡ ನಂತರ ಪಿಡಬ್ಲ್ಯೂಡಿ ಯವರಿಂದ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಬಂದ ನಂತರ ಮತ್ತು ಅನುದಾನ ಲಭ್ಯತೆ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

91 (198) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ (ಕಾಲೇಜು) ವಿದ್ಯಾರ್ಥಿನಿ ನಿಲಯದ ಕಟ್ಟಡ ನಿರ್ಮಾಣವು ಅಪೂರ್ಣವಾಗಿದ್ದು ಅದನ್ನು ಯಾವಾಗ ಪೂರ್ಣಗೊಳಿಸಿ ಅನುಕೂಲ ಮಾಡಿಕೊಡಲಾಗುವುದು;

ಆ) ಪ್ರಸ್ತುತ ಇರುವ ವಿದ್ಯಾರ್ಥಿನಿ ಹಾಸ್ಟೆಲ್‌ನಲ್ಲಿ 50 ವಿದ್ಯಾರ್ಥಿನಿಯರಿಗೆ ಮಾತ್ರ ಸ್ಥಳಾವಕಾಶವಿದ್ದು, ಆದರೆ ಅದರಲ್ಲಿ 95 ವಿದ್ಯಾರ್ಥಿನಿಯರಿಗೆ ಅವಕಾಶ ಮಾಡಿಕೊಟ್ಟಿರುವುದು ನಿಜವೆ;

ಇ) ಹಾಗಿದ್ದಲ್ಲಿ, ಈ ವ್ಯವಸ್ಥೆಗೆ ಪರಿಹಾರಕ್ಕಾಗಿ ಅಪೂರ್ಣಗೊಂಡ ಕಟ್ಟಡವನ್ನು ಪೂರ್ಣಗೊಳಿಸಲು ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುವುದೆ?

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಈ ಕಟ್ಟಡ ಅಪೂರ್ಣವಾಗಿಲ್ಲ ಸದರಿ ವಿದ್ಯಾರ್ಥಿ ನಿಲಯಕ್ಕೆ ರೂ. 15.28 ಲಕ್ಷ ಅಂದಾಜು ವೆಚ್ಚದಲ್ಲಿ ದಕ್ಷಿಣ ಕನ್ನಡ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು ಇವರ ಮುಖಾಂತರ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ. ಕಟ್ಟಡವನ್ನು ಅಂದಾಜು ಪಟ್ಟಿಯ ಪ್ರಕಾರ ಪೂರ್ಣಗೊಳಿಸಲಾಗಿರುತ್ತದೆ. ಈ ಕಟ್ಟಡದಲ್ಲಿ ದಿನಾಂಕ: 03-10-2000 ದಿಂದ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ.

ಆ) ಹೌದು. ನಿಲಯದ ಮಂಜೂರಾತಿ ಸಂಖ್ಯಾಬಲ 95 ಇದ್ದು ಅದರಂತೆ ಪ್ರವೇಶ ಅವಕಾಶ ನೀಡಲಾಗಿದೆ.

ಇ) ಈ ನಿಲಯಕ್ಕೆ 10 ಕೊಠಡಿಗಳನ್ನು ಹೆಚ್ಚುವರಿಯಾಗಿ ನಿರ್ಮಿಸುವ ಉದ್ದೇಶವಿದ್ದು ಜಿಲ್ಲಾ ಪಂಚಾಯತ್ ಹಂತದಲ್ಲಿ ಪರಿಶೀಲನೆಯಲ್ಲಿದೆ.

92 (199) ಶ್ರೀ ಪ್ರಭಾಕರ್ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ನಂತರದ ಎಷ್ಟು ವಿದ್ಯಾರ್ಥಿನಿಯರ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ;

ಆ) ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವ ದಿಶೆಯಲ್ಲಿ ವಿದ್ಯಾರ್ಥಿನಿ ನಿಲಯಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಈ ಕುರಿತು ಸರ್ಕಾರದ ಕಾರ್ಯ ಯೋಜನೆಗಳೇನು;

ಈ) ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭಿಸಲಾಗುವ ಹಿಂದುಳಿದ ವರ್ಗಗಳ ವಿವಿಧ ವಿದ್ಯಾರ್ಥಿ ನಿಲಯಗಳ ತಾಲ್ಲೂಕುವಾರು ವಿವರಗಳೇನು?

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಇಲಾಖೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 09 ಮೆಟ್ರಿಕ್ ಪೂರ್ವ ಹಾಗೂ 07 ಮೆಟ್ರಿಕ್ ನಂತರದ ಒಳಗೆ ಒಟ್ಟು 16 ಬಾಲಕಿಯರ ನಿಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಆ) 2005-06ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರು ಮಾಡಿರುವುದಿಲ್ಲ.

ಇ) ಮುಂದಿನ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವಾಗ ಹೆಣ್ಣು ಮಕ್ಕಳ ನಿಲಯಗಳಿಗೆ ಅದರಂತೆ ನೀಡಲಾಗುವುದು.

ಈ) ದಕ್ಷಿಣ ಕನ್ನಡ ಜಿಲ್ಲೆಗೆ ಹೊಸ 27 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ 12 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಮಂಜೂರಾಗಿರುವ ಬೇಡಿಕೆ ಇರುತ್ತದೆ. 2006-07ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವ ಸಮಯದಲ್ಲಿ ಆಯವ್ಯಯದ ಲಭ್ಯತೆಯನ್ನು ಆಧರಿಸಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

93 (200) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ (ದ.ಕ) ಯಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಸಂಬಂಧವಾಗಿ ಸರ್ಕಾರದ ಕ್ರಮಗಳೇನು;

ಆ) ತಾಲ್ಲೂಕು ಮುಖ್ಯ ಕೇಂದ್ರದಲ್ಲಿರುವ ಈ ಸಮುದಾಯ ಆರೋಗ್ಯ ಕೇಂದ್ರವನ್ನು ಕೂಡಲೇ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಧರ್ಮಸ್ಥಳದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಸಂಬಂಧದ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಈ) ಈ ಸಂಬಂಧವಾಗಿ ತ್ವರಿತ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಮುಂದಾಗುವುದೇ;

ಉ) ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಹಳ ವರ್ಷಗಳಿಂದಲೂ ವೈದ್ಯಾಧಿಕಾರಿಗಳ ಹುದ್ದೆಯು ಖಾಲಿ ಇದ್ದು, ಗ್ರಾಮಾಂತರದ ಜನರಿಗೆ ವೈದ್ಯಕೀಯ ಸೇವೆಯಲ್ಲಿ ಆಗುತ್ತಿರುವ ಅನಾನುಕೂಲವನ್ನು ಸರಿಪಡಿಸುವುದಕ್ಕಾಗಿ ವೈದ್ಯರನ್ನು ನೇಮಕ ಮಾಡಲು ಸಕಾಲಿಕ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪರಿಶೀಲನೆಯಲ್ಲಿದೆ.

ಆ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಇ) ಪರಿಶೀಲನೆಯ ಹಂತದಲ್ಲಿದೆ.

ಈ) ಪರಿಶೀಲನೆಯ ಹಂತದಲ್ಲಿದೆ.

ಉ) ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಿನಾಂಕ: 17-2-06ರಂದು ವೈದ್ಯಾಧಿಕಾರಿಗಳು ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

94 (201) ಶ್ರೀ ಪ್ರಭಾಕರ್ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಮಾಲಾಡಿ ಎಂಬಲ್ಲಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸಿ ಎಷ್ಟು ವರ್ಷಗಳಾಗಿವೆ;

ಆ) ಇದಕ್ಕೆ ಸ್ವಂತ ಕಟ್ಟಡ ಇಲ್ಲದೇ ಪ್ರವಚನಗಳಿಗೆ ಅನಾನುಕೂಲ ಉಂಟಾಗಿರುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದರೂ ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣಗಳೇನು:

ಇ) ಐ.ಟಿ.ಐ. ಕೇಂದ್ರಕ್ಕೆ ಬೇಕಾಗುವ ಕಟ್ಟಡಕ್ಕೆ ಜಮೀನು ಇತ್ಯಾದಿಗಳನ್ನು ಒದಗಿಸಿ ಕೊಟ್ಟಿದ್ದರೂ ಕಟ್ಟಡ ನಿರ್ಮಾಣ ಪ್ರಾರಂಭಿಸಲು ವಿಳಂಬ ಮಾಡಲು ಕಾರಣಗಳೇನು;

ಈ) ಯಾವಾಗ ಕಟ್ಟಡ ನಿರ್ಮಾಣ ಪ್ರಾರಂಭಿಸಲಾಗುವುದು;

ಉ) ಸದರಿ ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡಿ ಸಕಾಲಿಕ ಕ್ರಮವನ್ನು ಕೈಗೊಳ್ಳಲು ಸರ್ಕಾರ ಮುಂದಾಗುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಅ) 8 ವರ್ಷಗಳು.

ಆ) ಮಾಲಾಡಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವರ ಅಂದಾಜು ಪಟ್ಟಿಗಳು ತಡವಾಗಿ ಲೋಕೋಪಯೋಗಿ ಇಲಾಖೆಯಿಂದ ಬಂದಿರುವುದರಿಂದ ಇಲಾಖೆಯ ವಾರ್ಷಿಕ ಯೋಜನೆಯಡಿಯಲ್ಲಿ ಸೇರಿಸಲು ಸಾಧ್ಯವಾಗಿರುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆಯವರಿಂದ ವಿವರ ಅಂದಾಜು ಪಟ್ಟಿಗಳು ಬರುವುದು ತಡವಾಗಿದ್ದು ಮುಂದಿನ ಔಪಚಾರಿಕ ಕ್ರಮಗಳನ್ನು ಅನುಸರಿಸುವಲ್ಲಿ ವಿಳಂಬವಾಗಿರುತ್ತದೆ.

ಈ) 2006–07ನೇ ಸಾಲಿನ ಇಲಾಖೆಯ ವಾರ್ಷಿಕ ಯೋಜನೆಯಲ್ಲಿ ಈ ಪ್ರಸ್ತಾವನೆಯನ್ನು ಸೇರಿಸಲಾಗಿದೆ. ಅನುದಾನದ ಲಭ್ಯತೆ ನಂತರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಉ) ಬೆಳ್ತಂಗಡಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ಆಯವ್ಯಯ ಹಂಚಿಕೆ ಮಾಡಿದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

95 (160) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ನಡೆಯುತ್ತಿರುವ ಒಟ್ಟು ವಸತಿ ಶಾಲೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಜಿಲ್ಲೆಯಲ್ಲಿ ಬೇರೆಡೆ ವಸತಿ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಇಂತಹ ಶಾಲೆಗಳನ್ನು ಯಾವ ಸ್ಥಳದಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೋಳಿ (ಸಮಾಜ ಕಲ್ಯಾಣ ಸಚಿವರು):

ಅ) ಕೋಲಾರ ಜಿಲ್ಲೆಯಲ್ಲಿ ಒಟ್ಟು 9 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಕೆಳಕಂಡಂತಿದೆ.

ತಾಲ್ಲೂಕು	ವರ್ಗ				
	ಪ.ಜಾ.	ಪ.ವರ್ಗ	ಹಿಂ.ವರ್ಗ	ಅಲ್ಪಸಂ.	ಸಾಮಾನ್ಯ
1	2	3	4	5	6
ಬಂಗಾರಪೇಟೆ	01				
ಚಿಂತಾಮಣಿ	01				

1	2	3	4	5	6
ಶ್ರೀನಿವಾಸಪುರ	01				
ಕೋಲಾರ				01	01
ಮುಳಬಾಗಿಲು			01		
ಮಾಲೂರು			01		
ಶಿಡ್ಲಘಟ್ಟ		01			
ಗೌರಿಬಿದನೂರು	01				

ಆ) ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

96 (161) ಶ್ರೀ ರಾಜೇಂದ್ರ ಎಸ್. (ಕೆ.ಜಿ.ಎಫ್.) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಜಿ.ಎಫ್. ನಲ್ಲಿನ ಸರ್ಕಾರಿ ಆಸ್ಪತ್ರೆಗಳು, ಆರೋಗ್ಯ ಘಟಕಗಳ ಹಾಗೂ ವೈದ್ಯಕೀಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರು, ತಂತ್ರಜ್ಞರು, ಶುಶ್ರೂಷಕರ ಸಂಖ್ಯೆ ಎಷ್ಟು; (ಸರ್ಕಾರಿ ಆಸ್ಪತ್ರೆ ಆರೋಗ್ಯ ಘಟಕಗಳು ಹಾಗೂ ಆರೋಗ್ಯ ಕೇಂದ್ರಗಳಲ್ಲಿನ ಖಾಲಿ ಹುದ್ದೆಗಳ ಮಾಹಿತಿ ಒದಗಿಸುವುದು)

ಆ) ಈ ಹುದ್ದೆಗಳು ಯಾವಾಗಿನಿಂದ ಖಾಲಿ ಇರುತ್ತವೆ;

ಇ) ಸದರಿ ಘಟಕಗಳಲ್ಲಿ ರೋಗಿಗಳಿಗೆ ಲಭ್ಯವಿರುವ ವೈದ್ಯಕೀಯ ಸೌಲಭ್ಯಗಳು ಯಾವುವು;

ಈ) ಸದರಿ ಖಾಲಿ ಹುದ್ದೆಗಳನ್ನು ತುಂಬಲು ಹಾಗೂ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ಪೂರೈಸುವ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕೆ.ಜಿ.ಎಫ್.ನ ಸರ್ಕಾರಿ ಆಸ್ಪತ್ರೆಯಲ್ಲಿನ ಖಾಲಿ ಹುದ್ದೆಗಳು ಈ ರೀತಿ ಇದೆ.

1) ವೈದ್ಯರು –2
2) ತಂತ್ರಜ್ಞರು –0
3) ಶುಶ್ರೂಷಕರು –3
4) ಶುಶ್ರೂಷಕ ಅಧೀಕ್ಷಕರು ದರ್ಜೆ–1 –1
5) ಶುಶ್ರೂಷಕ ಅಧೀಕ್ಷಕರು ದರ್ಜೆ–2 –1
6) ಹಿರಿಯ ಶುಶ್ರೂಷಕರು –1
7) ಹಿರಿಯ ಔಷಧ ವಿತರಕರು –1
8) ನೇತ್ರ ಸಹಾಯಕರು –1
9) ಕಛೇರಿ ಅಧೀಕ್ಷಕರು –1
10) ದ್ವಿದ. ಸಹಾಯಕರು –1
11) ಗ್ರೂಪ್–ಡಿ ನೌಕರರು –13

ಕೆ.ಜಿ.ಎಫ್. ನಗರ ವ್ಯಾಪ್ತಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಅಂಡರ್‌ಸನ್‌ಪೇಟೆ ಹಾಗೂ ಒಂದು ಪ್ರಾಆಘಟಕ ಉರಿಗಾಂವ್‌ಪೇಟೆ ಆರೋಗ್ಯ ಕೇಂದ್ರಗಳಿದ್ದು ಇವುಗಳಲ್ಲಿ ಯಾವುದೇ ಹುದ್ದೆ ಖಾಲಿ ಇರುವುದಿಲ್ಲ.

ಆ) ಈ ಹುದ್ದೆಗಳು ವಿವಿಧ ಕಾಲದಿಂದ ಖಾಲಿ ಇರುತ್ತವೆ.

ಇ) ಹೊರರೋಗಿಗಳ ವಿಭಾಗ, ಮೂಳೆ ಮತ್ತು ಕೀಲು ವಿಭಾಗ, ಮಕ್ಕಳ ವಿಭಾಗ, ಕಿವಿ ಮತ್ತು ಗಂಟಲು ವಿಭಾಗ, ವೈದ್ಯಕೀಯ ವಿಭಾಗ, ಶಸ್ತ್ರ ಚಿಕಿತ್ಸಕರ ವಿಭಾಗ, ನೇತ್ರ ವಿಭಾಗ, ಎಸ್.ಟಿ.ಡಿ. ಮತ್ತು ವಿಸಿಟಿಸಿ ಕೇಂದ್ರ, ದಂತ ವಿಭಾಗ, ಮೈನರ್ ಓಟಿ, ಮೇಜರ್ ಓಟಿ, ಪ್ರಯೋಗ ಶಾಲೆ, ಕ್ಷ-ಕಿರಣ ವಿಭಾಗ, ಇಜಿಸಿ ವಿಭಾಗ ಮಾತ್ರ ವಿತರಣಾ ಕೇಂದ್ರ, ತುರ್ತು ಚಿಕಿತ್ಸೆ ವಿಭಾಗ, ಶವಾಗಾರ, ತುರ್ತು ವಾಹನ ಸೌಲಭ್ಯಗಳಿವೆ.

ಈ) ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ ಇತರೆ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಲಭ್ಯವಿರುವ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ರೋಗಿಗಳಿಗೆ ಒದಗಿಸಲಾಗುತ್ತಿದೆ.

97 (205) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವನಬಾಗೇವಾಡಿ ತಾಲ್ಲೂಕಿನ ಕೋಲ್ಹಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳುಳ್ಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಹಾಗಿಲ್ಲದಿದ್ದಲ್ಲಿ, ಮೇಲ್ದರ್ಜೆಗೇರಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳುಳ್ಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಮೇಲ್ದರ್ಜೆಗೇರಿಸಲು ತೆಗೆದುಕೊಳ್ಳುವ ಕಾಲಮಿತಿ ಎಷ್ಟು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಹೌದು.

ಇ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಲಾಗುತ್ತಿದೆ.

ಈ) ಅವಶ್ಯಕತೆ ಮತ್ತು ಅನುದಾನಕ್ಕೆ ಅನುಗುಣವಾಗಿ ಮೇಲ್ದರ್ಜೆಗೇರಿಸಲಾಗುವುದು.

ಕರ್ನಾಟಕ ವಿಧಾನ ಸಭೆ
ಶುಕ್ರವಾರ 24ನೇ ಮಾರ್ಚ್ 2006ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 20.ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

1. ಪ್ರಕಟಣೆ

ವಿಧಾನಸಭೆಯಲ್ಲಿ ಸಭಾ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ದಿನಾಂಕ 20.03.2006ರಂದು ಪತ್ರವನ್ನು ಬರೆದು ಮಾನ್ಯ ಸದಸ್ಯರಾದ ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಶಾಸಕರು (ಬೇಲೂರು) ಅವರು ವಿಧಾನಸಭೆಯಲ್ಲಿ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಉಪ ನಾಯಕರಾಗಿರುತ್ತಾರೆಂದು ಹಾಗೂ ಮಾನ್ಯ ಶಾಸಕರಾದ ಡಾಃ ಕೆ. ಅನ್ನದಾನಿ, ಶಾಸಕರು (ಮಳವಳ್ಳಿ) ಅವರು ವಿಧಾನಸಭೆಯಲ್ಲಿ ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಸಚೇತಕರಾಗಿರುತ್ತಾರೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು: ಪ್ರಶ್ನೋತ್ತರ, ಮಾನ್ಯ ದಿನೇಶ್ ಗುಂಡೂರಾಯರು ತಮ್ಮ ಪ್ರಶ್ನೆ ಕೇಳಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಜನತಾದಳ (ಜಾತ್ಯಾತೀತ ಶಾಸಕಾಂಗ ಮಾನ್ಯ ಕುಮಾರಸ್ವಾಮಿಯವರನ್ನು ನಾಯಕರೆಂದು ಪರಿಗಣಿಸಿದೆ ಮಾನ್ಯ ಸಭಾಧ್ಯಕ್ಷರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸಲು ಕೋರಿಕೆಯ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್‌ಗೆ ನಾವು ವಿರುದ್ಧವಾಗಿ ಹೇಳುತ್ತಿಲ್ಲ. ನಿಮಗೆ ಅಧಿಕಾರ ಇದೆ. ರೂಲಿಂಗ್ ನಿಮ್ಮ ವಿವೇಚನೆಗೆ ಬಿಟ್ಟಿದ್ದು, ರೂಲಿಂಗ್ ಕೊಟ್ಟಿದ್ದೀರಿ. ಆದರೆ ಅವರ ಸಸ್ಪೆನ್ಷನ್ ರಿವೂಕೇಷನ್ ಆಗಿಲ್ಲವಲ್ಲಾ.

ಅಧ್ಯಕ್ಷರು : ಯಾವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಕುಮಾರಸ್ವಾಮಿಯವರದ್ದು,...

ಅಧ್ಯಕ್ಷರು: ಅದು ನೋಡಿ ಸ್ವಾಮಿ,...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನೀವು ಪತ್ರಿಕೆಯಲ್ಲಿ ನೋಡಿದ್ದೀರಿ.

ಅಧ್ಯಕ್ಷರು: ದಯಮಾಡಿ ಮಾನ್ಯ ಖರ್ಗೆಯವರೆ, ನಾನು ಹೇಳುತ್ತಿದ್ದೇನೆ, ಜನತಾದಳದ ಶಾಸಕಾಂಗದ ನಾಯಕರು ಎಂದು ಹೆಚ್.ಡಿ.ಕುಮಾರಸ್ವಾಮಿಯವರನ್ನು ನಾನು ಮಾನ್ಯ ಮಾಡಿದ್ದೇನೆ. ಅವರು ಪತ್ರ ಬರೆದು ತಿಳಿಸಿದ್ದಾರೆ. ನಾನು ಅದನ್ನು ಮಾನ್ಯ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಮಾನ್ಯ ಮಾಡಿದ್ದೀರಿ, ಅದನ್ನು ನಾವು ಇಲ್ಲವೆಂದು ಹೇಳುವುದಿಲ್ಲ. ನಿಮಗೆ ರೂಲಿಂಗ್ ಕೊಡುವುದಕ್ಕೆ ಅಧಿಕಾರ ಇದೆ ಮಾನ್ಯತೆ ಮಾಡುವುದಕ್ಕೆ ಅಧಿಕಾರ ಇದೆ. ಸರ್ವಾಧಿಕಾರ ಇದೆ ಅದನ್ನು ಇಲ್ಲಿ ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಅವರು ಯಾವ ಪಕ್ಷಕ್ಕೆ ಸೇರಿದ್ದಾರೋ ಅಥವಾ ಯಾವ ಪಕ್ಷದಿಂದ ಸದಸ್ಯತ್ವ ಹೊಂದಿದ್ದಾರೋ ಆ ಪಕ್ಷದ ರಾಷ್ಟ್ರೀಯ ನಾಯಕರು, ಇಲ್ಲೆ ರಾಜ್ಯದ ಅಧ್ಯಕ್ಷರಾದಂತಹ ಶ್ರೀಮಾನ್ ತಿಪ್ಪಣ ಅವರಿಗೂ ಸೇರಿ 39 ಜನರಿಗೆ ನಾನು ಸಸ್ಪೆಂಡ್ ಮಾಡಿದ್ದೇನೆ ಎಂದು ಈಗಾಗಲೇ ಹೇಳಿದ್ದಾರೆ, ಅದು ತಮಗೂ ಕೂಡ ಗೊತ್ತಿದೆ. ಇದು ಪತ್ರಿಕೆಯಲ್ಲೆಲ್ಲಾ ಬಂದು ಇಡೀ ದೇಶದ ತುಂಬಾ ಒಂದು ನ್ಯೂಸ್ ಆಯಿತು. ಆಗ ಇದು ಮಾಡಿದ್ದು ಸರಿ ಎಂದೇಳಿ ಆ ಪಕ್ಷದ ಉನ್ನತ ಮಟ್ಟದ ಪಾರ್ಲಿಮೆಂಟರಿ ಬೋರ್ಡ್ ಕೂಡ ಅಪ್ರೂವ್ ಮಾಡಿತು. ಪುನಃ ಅವರು ಯಾವುದೋ ಒಂದು ಸಂದರ್ಭದಲ್ಲಿ, ಇಲ್ಲ ನಾನು ಅದನ್ನು ಅವರಿಗೆ ಮಾನ್ಯತೆ ಮಾಡಿದ್ದೇನೆ, ಮಾನ್ಯ ಪ್ರಕಾಶ್‌ರವರೂ ಕೂಡ ಪಕ್ಷದ ಅಧ್ಯಕ್ಷರು ಎಂದು ಹೇಳಿದ ಮೇಲೆ ಅವರ ಪಕ್ಷದ ಪಾರ್ಲಿಮೆಂಟರಿ ಬೋರ್ಡ್‌ನವರು ರಿಯಾಕ್ಟ್ ಮಾಡಿದರು. ಅವರು ಇಲ್ಲಿ ಮಾಡಿದ್ದು ಸರಿಯಲ್ಲ, ನಮ್ಮನ್ನು ಯಾರೂ ಕೇಳಿ ಮಾಡಿಲ್ಲ ಎಂದ ತಕ್ಷಣವೇ ಮಾನ್ಯ ರಾಷ್ಟ್ರೀಯ ಪಕ್ಷದ ನಾಯಕರಾದ ದೇವೇಗೌಡರು ಏನು ಹೇಳಿದರು ಎಂದರೆ, ಇಲ್ಲ ಇಲ್ಲ ನಾನು ಇನ್ನು ರಿವೋಕ್ ಮಾಡಿಲ್ಲ, ಅವರು ಸಸ್ಪೆನ್‌ಷನಲ್ಲೆ ಇದ್ದಾರೆ ಎನ್ನತಕ್ಕ ಮಾತು ಹೇಳಿದ್ದಾರೆ. ತಮಗೆ ಯಾರು ಪತ್ರ ಬರೆದಿದ್ದರು ಅಂದರೆ ಮಾನ್ಯ ತಿಪ್ಪಣ್ಣನವರು, ರಾಷ್ಟ್ರೀಯ ನಾಯಕರಿಂದ ಸಸ್ಪೆಂಡ್ ಆದಂತಹ ಅಧ್ಯಕ್ಷರು ಮತ್ತು ಇಲ್ಲಿ ಏನು ಈ ಸದನದ ನಾಯಕರಾಗಿದ್ದಾರೆ ಅವರೂ ಸಸ್ಪೆಂಡ್ ಆದಂತಹ ಸದಸ್ಯರು. ಅದಕ್ಕೆ ನೀವು ಮಾನ್ಯತೆ ಮಾಡಬೇಕಾದರೆ ಮಾನ್ಯತೆ ಇರುವಂತಹ ಅಧ್ಯಕ್ಷರಿಂದ ಪತ್ರ ಬಂದರೆ, ಅವರು ಇಂತಹ ರೆಕಗ್ನೈಸ್ ಪಾರ್ಟಿ ಲೀಡರ್ ಎಂದು ಹೇಳುವುದಕ್ಕೆ ಹಕ್ಕಿದೆ, ಅದು ನಿಮಗೆ ಬಿಟ್ಟಂತಹ ಮಾತು. ಅದನ್ನು ನೀವು ಮಾನ್ಯತೆ ಮಾಡಿದ್ದೇನೆ ಎಂದಾಗ ಅನೇಕ ಸಾರಿ ರೂಲಿಂಗ್ ಕೂಡ ಇದೆ. ಯಾವುದೇ ಒಂದು ತಪ್ಪು ರೂಲಿಂಗ್ ಕೊಟ್ಟರೆ ಅದನ್ನು ಪುನರ್ ಪರಿಶೀಲನೆ ಮಾಡತಕ್ಕಂಥ ಹಕ್ಕು ತಮಗೆ ಇದೆ. ಅದಕ್ಕೆ ನಾನು ತಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಇದೆಲ್ಲಾ ಪ್ರಿಸಿಡೆಂಟ್ಸ್, ಬರುವಂತಹ ಯಾವುದೇ ಒಂದು ಸಂದರ್ಭ ಇರಬಹುದು, ಇಂತಹ ಸಂದರ್ಭಗಳು ಬಂದಾಗ ಇವೆಲ್ಲವನ್ನೂ ಕೂಡ ಜನ ಎಕ್ಸಾಂಪಲ್ ಆಗಿ ಕೋಟ್ ಮಾಡುತ್ತಾರೆ. ಆದುದರಿಂದ ದಯವಿಟ್ಟು ತಮ್ಮ ರೂಲಿಂಗ್ ಅನ್ನು ಪುನರ್ ಪರಿಶೀಲನೆ ಮಾಡಿ ಸಸ್ಪೆಂಡ್ ಆದಂತಹ ಒಬ್ಬ ವ್ಯಕ್ತಿಗೆ ಈ ಸದನದ ನಾಯಕರನ್ನಾಗಿ ಮಾಡುವುದು ಸರಿಯಲ್ಲ, ಸಸ್ಪೆಂಡ್ ಆದಂತಹ ಅಧ್ಯಕ್ಷರ ಪತ್ರದ ಮೇಲೆ ರೆಕಗ್ನೈಸ್ ಮಾಡುವುದು ಸರಿಯಲ್ಲ. ಈ ಹಿಂದೆ ಕೂಡ ಜೆಡಿಎಸ್ ನಾಯಕತ್ವ ಯಾರಿಗೆ ಎಂದು ತಮ್ಮ ನೇತೃತ್ವದಲ್ಲೆ ನಡೆದಂತಹ ಸಭೆಯಲ್ಲಿ ಮಾನ್ಯ ಪ್ರಕಾಶ್‌ರವರೇ ಹೇಳಿದ್ದಾರೆ. ಜೆಡಿಎಸ್ ಶಾಸಕಾಂಗದ ಪಕ್ಷದ ನಾಯಕ ನಾನೇ ಇದ್ದೇನೆ, ಎನ್ನುವಂತಾದ್ದು ಯಾವ ದಿವಸ ನಿಮಗೆ ಅಪ್ಲಿಕೇಷನ್ ಬಂದಿತ್ತು, ಆ ದಿವಸದ ಜಡ್ಜ್‌ಮೆಂಟ್ ಯಾವ ದಿವಸ ನಾವಿಲ್ಲಿ ತಕರಾರು ಹಾಕಿದ್ದೇವೆ. ಆ ತಕರಾರು ಹಾಕಿದ ದಿವಸದ ಸ್ಟೇಟಸ್ ಏನು? ಏನು ಪೊಸಿಷನ್ ಇತ್ತು? ಆ ಪೊಸಿಷನ್ ಮೇಲೆ ಇವತ್ತು ನಿಮ್ಮ ನಿರ್ಣಯ ಬರುತ್ತದೆಯೇ ಹೊರತು ಇವತ್ತಿನದಲ್ಲ.

ಅವತ್ತು ನಾನೇ ನಾಯಕ ಎಂದು ಅವರೇ ಹೇಳಿಕೊಂಡಾಗ ಇವತ್ತು ಯಾವ ಆಧಾರದ ಮೇಲೆ ತಾವು ರೆಕಗ್ನೈಸ್ ಮಾಡುತ್ತೀರಿ ಸ್ವಾಮಿ? ಅದಕ್ಕೆ ನಿಮ್ಮಲ್ಲಿ ನಾನು ಪುನಃ ಮನವಿ ಮಾಡಿಕೊಳ್ಳುತ್ತೇನೆ. ರಾಂಗ್ ಪ್ರಿಸಿಡೆಂಟ್ ಆಗಬಾರದು. ಮತ್ತೆ ತಪ್ಪು ಪ್ರಿಸಿಡೆಂಟ್ ಆದರೆ ಇಡೀ ದೇಶಕ್ಕೆ ತಮ್ಮ ರೂಲಿಂಗ್ಸ್ ಏನಿದೆ ಆ ಪುಸ್ತಕದಲ್ಲಿ ಒಂದು ಸಾರಿ ಹೋದರೆ ಪದೇ ಪದೇ ಅದೇ ಕೋಟ್ ಮಾಡುತ್ತಾರೆ. ಅದಕ್ಕೆ ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ದಯವಿಟ್ಟು ತಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ, ಸಸ್ಪೆಂಡ್ ಆಗಿರುವವರನ್ನು ನಾಯಕರನ್ನಾಗಿ ಮಾಡುವುದಕ್ಕೆ ಹೋಗಬೇಡಿ. ಈಗಾಗಲೇ ಈ ಸರ್ಕಾರಕ್ಕೆ ಮಾನ್ಯತೆ ಇಲ್ಲ. ಘನತೆ ಇಲ್ಲ, ಗೌರವ ಇಲ್ಲ ಜನ ಹೊರಗಡೆ ನೋಡಿ ನಗುತ್ತಿದ್ದಾರೆ. ಅಂತಹದ್ದರಲ್ಲಿ ತಾವು ಸ್ಪೀಕರ್ ಆಗಿ ಅದಕ್ಕೆ ಮಾನ್ಯತೆ ಕೊಟ್ಟರೆ ಖಂಡಿತವಾಗಿ ನಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಮತ್ತು ಸದನಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಪುನರ್ ಪರಿಶೀಲನೆ ಮಾಡತಕ್ಕಂಥ ಅನೇಕ ರೂಲಿಂಗ್‌ಗಳಿವೆ ಅದರ ಪ್ರಕಾರ ತಾವು ಪುನರ್ ಪರಿಶೀಲನೆ ಮಾಡಿ ಅದರ ಪ್ರಕಾರ ಪುನರ್ ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ಜರುಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ದಿನೇಶ್ ಗುಂಡುರಾಯರು...

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ನಾವು ನಿನ್ನೆ ಮೊನ್ನೆಯಿಂದ ನೋಡುತ್ತಿದ್ದೇವೆ. ಮಾಡಬೇಕಾಗಿರುವಂತಹ ಚರ್ಚೆಯ ವಿಚಾರ ಬಿಟ್ಟು ಬೇರೆ ವಿಚಾರಗಳಿಗೆ ಸದನ ಹೋಗುತ್ತಿರುವುದನ್ನು ನೋಡುತ್ತಿದ್ದೇವೆ. ನಾನು ತಮಗೆ ಮನವಿ ಮಾಡಿಕೊಳ್ಳುವುದಿಷ್ಟೆ, ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡಬಾರದೆಂದು ಗೊತ್ತಿದ್ದರೂ, ಇವತ್ತು ರೂಲಿಂಗ್ ತಪ್ಪು ಎಂದು ಪ್ರೆಸ್ ಮಾಡಿ ಹೇಳುತ್ತಿದ್ದಾರೆ. ರೂಲಿಂಗ್ ತಪ್ಪು ಎಂದು ಹೇಳುವುದು ಸರಿಯೇ ತಪ್ಪೇ ಎಂದು ದಯಮಾಡಿ ಮಾನ್ಯ ಹಿರಿಯ ಸದಸ್ಯರು ಯೋಚನೆ ಮಾಡಬೇಕು. ನಿಮ್ಮ ಜಡ್ಜ್‌ಮೆಂಡ್ ಪ್ರೆಸ್ ಮಾಡಲಿ. ನಿಮ್ಮ ಜಡ್ಜ್‌ಮೆಂಟ್ ಅನೌನ್ಸ್ ಮಾಡಿ ಎಂದು ಕೇಳಲಿ ಅದು ಬಿಟ್ಟು ಇವತ್ತು ಮಾನ್ಯ ತಿಪ್ಪಣ್ಣನವರು ಅಧ್ಯಕ್ಷರಾಗಿದ್ದನ್ನು ಸಸ್ಪೆಂಡ್ ಮಾಡಿದ್ದಾರೆ ನಮ್ಮ ರಾಷ್ಟ್ರ ನಾಯಕರು ಎಂದರೆ ಅಂದಿನ ದಿನ ಅವರು ಅಧ್ಯಕ್ಷರಾಗಿದ್ದರು ಎನ್ನುವುದನ್ನು ತಾವು ದಯಮಾಡಿ ಸದನದಲ್ಲೆ ಇರತಕ್ಕಂಥವರು ಹಿರಿಯರು ಅರ್ಥ ಮಾಡಿಕೊಳ್ಳಬೇಕು. ಅವರು ಅಧ್ಯಕ್ಷರಾಗಿದ್ದಾಗ ಅವರ ಅಧಿಕಾರವನ್ನು ಚಲಾಯಿಸಿದ್ದಾರೆ. ತಾವು ಅವತ್ತಿನ ಅಧ್ಯಕ್ಷರು ಕೊಟ್ಟಿರತಕ್ಕಂಥ ನಿರ್ಣಯವನ್ನು ಶಾಸಕಾಂಗ ಪಕ್ಷ ತೆಗೆದುಕೊಂಡಂತಹ ನಿರ್ಣಯದ ಮೇಲೆ ತಾವು ರೂಲಿಂಗ್ ಕೊಟ್ಟಿದ್ದೀರಿ. ಇದಾದಮೇಲೆ ನಡೆದಿರತಕ್ಕಂಥ ಪಕ್ಷದ ಆಂತರಿಕ ಬೆಳವಣಿಗೆಯನ್ನು ನಾವು ಹೊರಗಡೆ ಹೇಳಿಕೊಳ್ಳುತ್ತೇವೆ. ಅವರೂ ಸಹ ಜನರಿಗೆ ಹೇಳಿಕೊಳ್ಳಲಿ. ಜನ ತಿರ್ಮಾನ ಮಾಡುತ್ತಾರೆ. ಜಡ್ಜ್‌ಮೆಂಟ್ ಅನ್ನು ಪ್ರೆಸ್ ಮಾಡಲಿ, ಆದರೆ ಪದೇ ಪದೇ ತಾವು ಕೊಟ್ಟಿರತಕ್ಕಂಥ ರೂಲಿಂಗ್ ಅನ್ನು ರಿವ್ಯೂ ಮಾಡಿ ರಿವ್ಯೂ ಮಾಡಿ ಎಂದು ಹೇಳತಕ್ಕಂಥಾದ್ದು ಸೂಕ್ತವಲ್ಲ. ದಯಮಾಡಿ ಇದನ್ನು ಮತ್ತೆ ಮತ್ತೆ ಪ್ರೆಸ್ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ನಿನ್ನೆ ಆದಂತಹ ವಾತಾವರಣ ಏನಿದೆ, ಅದನ್ನು ಮತ್ತೆ ಗೊಂದಲ ಮಾಡತಕ್ಕಂಥಾದ್ದು ಬೇಡವೆಂದು ನಾನು ತಮ್ಮ ಮೂಲಕ ಸ್ಪಷ್ಟವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು

3. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಬೆಂಗಳೂರು ನಗರದಲ್ಲಿರುವ ಕಡುಬಡವರಿಗೆ ಬಿಪಿಎಲ್ ಕಾರ್ಡ್ ವಿತರಣೆ

46 (267) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು)ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಡುಬಡವರಿಗೆ ಬಿಪಿಎಲ್ ಕಾರ್ಡ್ ವಿತರಣೆಗೆ ಸರ್ಕಾರ ಕ್ರಮ ಕೈಗೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿರುವ ಬಿಪಿಎಲ್ ಕಾರ್ಡ್ ಹೊಂದಿರದ ಕಡುಬಡವರ ಸಮೀಕ್ಷೆಯನ್ನು ನಡೆಸಲಾಗಿದೆಯೇ;

ಇ) ಕೊಳಚೆ ಪ್ರದೇಶದ ಹೊರತಾದ ಪ್ರದೇಶಗಳಲ್ಲಿರುವ ಇಂತಹ ಬಡತನ ರೇಖೆಗಿಂತ ಕೆಳಗಿರುವ ಬಡವರಿಗೆ ಬಿಪಿಎಲ್ ಕಾರ್ಡುಗಳನ್ನು ಯಾವಾಗ ನೀಡಲಾಗುವುದು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು):

ಅ) ಹೌದು.

ಆ) 2002ನೇ ಸಾಲಿನಲ್ಲಿ ಮನೆ ಮನೆ ಸಮೀಕ್ಷೆಯನ್ನು ನಡೆಸಿ ಕಡುಬಡವರಿಗೆ ಗಣಕೀಕೃತ ಪಡಿತರ ಚೀಟಿ ನೀಡಲಾಗಿರುತ್ತದೆ.

ಇ) 2002ನೇ ಸಾಲಿನಲ್ಲಿ ಸಮೀಕ್ಷೆ ಮಾಡಿ ಗಣಕೀಕೃತ ಪಡಿತರ ಚೀಟಿಯನ್ನು ವಿತರಿಸಲಾಗಿದೆ. ಘೋಷಿತ ಮತ್ತು ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ಮನೆ ಮನೆ ಸಮೀಕ್ಷೆ ಮಾಡಿ, ಇದಲ್ಲದೆ ಇಂತಹ ಪ್ರದೇಶಗಳಿಂದ ಹೊರಗೆ ಇರುವ ಬಡ ಕುಟುಂಬಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ವಿತರಿಸಲಾಗಿರುತ್ತದೆ. 2005ನೇ ಸಾಲಿನಲ್ಲಿ ಮನೆ ಮನೆ ಸಮೀಕ್ಷೆ ಮಾಡಿರುವುದಿಲ್ಲ. ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ ಮತ್ತು ಬೆಂಗಳೂರಿನ 7 ನಗರ ಸಭೆಗಳಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವುದಕ್ಕೆ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 2002ನೇ ಇಸವಿನಲ್ಲಿ ಬೆಂಗಳೂರು ನಗರದಲ್ಲಿ ಪಡಿತರ ಚೀಟಿಯ ವಿತರಣೆ ಸಮೀಕ್ಷೆ ನಮ್ಮ ಕೊಳಚೆ ಪ್ರದೇಶದಲ್ಲಿ ಆಯಿತು. ಮತ್ತು ಆ ಸಂದರ್ಭದಲ್ಲಿ ಕೊಳಚೆ ಪ್ರದೇಶವನ್ನು ಬಿಟ್ಟು ಹೊರಗೆ ಇರುವಂತಹ ಪ್ರದೇಶದಲ್ಲಿ ಅನೇಕ ಬಡ ಜನರು ಕೂಡ ವಾಸವಾಗಿದ್ದಾರೆ. ಆದರೆ ಆ ಸಂದರ್ಭದಲ್ಲಿ ನಾವು ಸಮೀಕ್ಷೆ ಮಾಡಿದಂತಹ ಸಂದರ್ಭದಲ್ಲಿ ಅವರ ಒಂದು ಪಟ್ಟಿಯನ್ನು ಮಾಡುವುದಕ್ಕೆ ಆಗಲಿಲ್ಲ.

ಮತ್ತು ಕೋಳಚೆ ಪ್ರದೇಶದಲ್ಲಿ ಕೂಡ ಕೆಲವು ಮನೆಗಳು ಬಿಟ್ಟು ಹೋಗಿರುವಂತಹ ವಸ್ತು ಸ್ಥಿತಿ ಇದೆ. ಆ ದೃಷ್ಟಿಯಿಂದ ಅದರ ನಂತರ ಎಲ್ಲೆಲ್ಲಿ ಬಿಟ್ಟು ಹೋಗಿರತಕ್ಕಂಥಾದ್ದು ಇದೆ. ಅನೇಕ ಬಡಜನರಿಗೆ ಇವತ್ತು ಸರ್ಕಾರ ಮೂರು ರೂಪಾಯಿಗೆ ಒಂದು ಕೆಜಿ. ಅಕ್ಕಿಯನ್ನು ಕೊಡತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮ ಇದೆ, ಅದು ಅನೇಕ ಬಡ ಕುಟುಂಬಗಳಿಗೆ ಇವತ್ತು ಸಿಗುತ್ತಿಲ್ಲ. ಬೆಂಗಳೂರು ನಗರವನ್ನು ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಅಲ್ಲಿರತಕ್ಕಂಥ ಜನಸಂಖ್ಯೆಗೂ ಮತ್ತು ಹಳದಿ ಕಾರ್ಡ್ ಏನು ಕೊಟ್ಟಿದ್ದೇವೆ ಅದನ್ನು ಹೋಲಿಸಿದಾಗ ಸರಾಸರಿ 70 ಪರ್ಸೆಂಟ್ ಜನ ಅಲ್ಲಿ ಬಿಪಿಎಲ್ ಕಾರ್ಡ್ ಹೋಲ್ಡರ್ಸ್ ಆಗಿರುತ್ತಾರೆ. ಆ ಒಂದು ರೇಷಿಯೋ ಈ ರೀತಿಯಲ್ಲಿ ಇರುತ್ತದೆ. ಅದರಲ್ಲಿ ಬೇರೆ ಬೇರೆ ರೀತಿಯ ಅವ್ಯವಹಾರ ಕೂಡ ಇರಬಹುದು. ಆದರೆ ಬೆಂಗಳೂರು ನಗರದಲ್ಲಿ ಇವತ್ತು ನಾವು ಆ್ಯವರೇಜ್ ನೋಡಿದಾಗ ಕಡಿಮೆ ಇದೆ. ಇವತ್ತಿಗೂ ಕೂಡ 18 ರಿಂದ 19 ಪರ್ಸೆಂಟ್ ಪಾಪ್ಯುಲೇಷನ್‌ಗೆ ಮಾತ್ರ ಇಲ್ಲಿ ಬಡತನದ ರೇಖೆಗಿಂತ ಕಡಿಮೆ ಇರುವಂತಹ ಜನರಿಗೆ ಮಾತ್ರ ಕಾರ್ಡ್ ಸಿಕ್ಕಿದೆ. ಇನ್ನೂ ಹೆಚ್ಚು ಜನರಿಗೆ ಕೊಡಬೇಕಾಗಿರುವಂತಹ ಪರಿಸ್ಥಿತಿ ಇದೆ. ಏಕೆಂದರೆ ಇವತ್ತು ಇಲ್ಲಿ ಅನೇಕ ಕೂಲಿ ಕಾರ್ಮಿಕರು ಹಾಗೂ ಬಡ ಜನರು ನಮ್ಮ ಬೆಂಗಳೂರು ನಗರದಲ್ಲೆ ಇದ್ದಾರೆ. ಕೇವಲ ನಾವು ಐಟಿಬಿಟಿ ಎಂದು ಹೇಳಿಕೊಂಡು ಈ ಜನರನ್ನು ಮರೆಯಬಾರದು. ಈಗ ನನ್ನ ಪ್ರಶ್ನೆ ಏನೆಂದರೆ ಆಹಾರ ಇಲಾಖೆಯ ಮುಂದೆ ನನ್ನ ಕ್ಷೇತ್ರದ ಎರಡೂವರೆ ಸಾವಿರ ಅರ್ಜಿಗಳು ಅವರ ಮುಂದೆ ಪೆಂಡಿಂಗ್ ಇದೆ. ಹಳದಿ ಮತ್ತು ನೀಲಿ ಕಾರ್ಡಿಗಾಗಿ ಅಪ್ಲಿಕೇಷನ್ ಹಾಕಿದ್ದು ಅವುಗಳನ್ನು ಪೆಂಡಿಗ್ ಇಟ್ಟುಕೊಂಡಿದ್ದಾರೆ. ನಾವು ಕೊಟ್ಟು ನಾಲ್ಕು ತಿಂಗಳಾಯಿತು. ಅದನ್ನು ಬಂದು ವೆರಿಫಿಕೇಷನ್ ಮಾಡುವುದಕ್ಕೆ ಅಧಿಕಾರಿಗಳು ಕೇವಲ 10 ಪರ್ಸೆಂಟ್ ಮನೆಗಳಿಗೆ ಬಂದಿದ್ದಾರೆಯೇ ಹೊರತು 90 ಪರ್ಸೆಂಟ್ ಮನೆಗಳನ್ನು ಅವರು ಇನ್ನೂ ವೆರಿಫಿಕೇಷನ್ ಮಾಡಿಲ್ಲ. ಅರ್ಜಿಗಳು ನಿಮ್ಮ ಮುಂದೆ ಇದೆ. ಅಲ್ಲಿನ ಅರ್ಜಿಗಳನ್ನು ಕಲೆಕ್ಟ್ ಮಾಡಿ ನಿಮ್ಮ ಅಧಿಕಾರಿಗಳಿಗೆ ಕೊಟ್ಟಿದ್ದೇವೆ ಆದುದರಿಂದ ನಾನು ಸರ್ಕಾರವನ್ನು ಕೇಳುವುದೇನೆಂದರೆ ಕೊಡಲೇ ಮಾನ್ಯ ಸಚಿವರು ಡೈರೆಕ್ಷನ್ ಕೊಟ್ಟು ಯಾರ್‍ಯಾರು ಅರ್ಜಿಗಳನ್ನು ಕೊಟ್ಟಿದ್ದಾರೆ, ಅರ್ಜಿಗಳನ್ನು ತೆಗೆದುಕೊಂಡು ವೆರಿಫೀಕೇಷನ್ ಮಾಡಿ, ಯಾರು ಅರ್ಹ ಫಲಾನುಭವಿಗಳು ಇದ್ದಾರೆ, ಅರ್ಹ ಬಡಜನರು ಇರುವಂತಹವರಿಗೆ ಕೂಡಲೇ ಕಾರ್ಡನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡಿ. ಹೊಸದಾಗಿ ನೀವೇನೂ ಸಮೀಕ್ಷೆ ಮಾಡುವುದು ಬೇಕಾಗಿಲ್ಲ. ಈಗ ಇರುವಂತಹ ಅರ್ಜಿಗಳನ್ನು ವಿಲೇವಾರಿ ಮಾಡಿದರೆ ನಮ್ಮ ಕ್ಷೇತ್ರದ ಜನತೆಗೆ ಬಹಳ ಅನುಕೂಲವಾಗುತ್ತದೆ. ಮತ್ತೆ ಇಡೀ ಬೆಂಗಳೂರಿನಲ್ಲಿ ಕೂಡ ಮತ್ತೊಮ್ಮೆ ಇದಕ್ಕೆ ಪ್ರಚಾರ ಕೊಟ್ಟು ಮಾಡಬೇಕಾಗಿದೆ. ಏಕೆಂದರೆ ನೀವು ಹೊಸ ಕಾರ್ಡ್ ಇಶ್ಯೂ ಮಾಡುತ್ತಿಲ್ಲ. ಆದರೆ ನೀವು ಉತ್ತರದಲ್ಲಿ ಇಶ್ಯೂ ಮಾಡುತಿದ್ದೇವೆ ಎಂದು ಹೇಳಿದ್ದೀರಿ. ಆದರೆ ಇವತ್ತಿಗೂ ಇಶ್ಯೂ ಮಾಡುತ್ತಿಲ್ಲ. ಏಕೆಂದರೆ ಅಧಿಕಾರಿಗಳು ಹೇಳುತ್ತಾರೆ ನಮಗೆ ಇನ್ನೂ ಡೈರೆಕ್ಷನ್ ಬಂದಿಲ್ಲವೆಂದು. ಆದುದರಿಂದ ನಾನು ತಮ್ಮ ಮುಖಾಂತರ ಸರ್ಕಾರಲ್ಲಿ ಮನವಿ ಮಾಡಿಕೊಳ್ಳುವಂಥಾದ್ದು, ನನ್ನ ಕ್ಷೇತ್ರದ ಎರಡೂವರೆ ಸಾವಿರ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಿ, ಅವರಿಗೆ ಕಾರ್ಡ್‌ಗಳನ್ನು ಕೊಡಿ, ಮತ್ತೆ ಹೊಸದಾಗಿ ಬೆಂಗಳೂರು ನಗರದಲ್ಲಿ ಹಳದಿ ಕಾರ್ಡ್‌ಗಳನ್ನು ಕೊಡುವಂಥ ವಿಚಾರದಲ್ಲಿ ತತಕ್ಷಣವೇ ತಮ್ಮ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಕಾರ್ಡ್‌ಗಳನ್ನು ಕೊಡುವಂಥ ಕೆಲಸ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ದಿನೇಶ್ ಗುಂಡುರಾವ್‌ರವರು ಹೇಳಿರುವಂಥಾದ್ದು, ಬಡವರಿಗೆ ಪಡಿತರ ಚೀಟಿ ಸಿಕ್ಕಿಲ್ಲ ಮತ್ತೆ ಬೆಂಗಳೂರಿನಲ್ಲಿ ಇರತಕ್ಕಂಥ ಜನಸಂಖ್ಯೆಗೆ ಹೋಲಿಸಿದಾಗ ಬಹಳಷ್ಟು ಕಡಿಮೆ ಕಾರ್ಡ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವಂತಹ ಬಡವರನ್ನು ಮತ್ತು ಬೆಂಗಳೂರು ನಗರದಲ್ಲಿ ವಾಸವಾಗಿರುವಂತಹ ಜನರಿಗೆ ಹೋಲಿಸುವುದಕ್ಕೆ ಆಗುವುದಿಲ್ಲ. ನಿಜವಾಗಿಯೂ ಯಾರು ಬಡವರು ಇದ್ದಾರೆ, ಅಂತಹವರದ್ದು ಎರಡೂವರೆ ಸಾವಿರ ಅರ್ಜಿಗಳು ನಮ್ಮ ಇಲಾಖೆಯ ಮುಂದೆ ಇದೆಯೆಂದು ಹೇಳಿದ್ದಾರೆ. ಅದನ್ನು ಕೂಡಲೇ ಪರಿಶೀಲನೆ ಮಾಡಲು ಹೇಳುತ್ತೇನೆ. ಇದನ್ನು ಪರಿಶೀಲನೆ ಮಾಡಿ ಅದರಲ್ಲಿ ಅರ್ಹತೆ ಇರುವಂತಹವರು ಇದ್ದರೆ ಅವರಿಗೆ ಕೊಡಲು ಸೂಚನೆಯನ್ನು ನೀಡುತ್ತೇನೆ. ಎರಡನೆಯದಾಗಿ ವಿಶೇಷವಾದಂತಹ ಸಂದರ್ಭ ಏನೆಂದರೆ ಬೆಂಗಳೂರಿಗೆ ಬಹಳಷ್ಟು ಜನರು ಪ್ರತಿನಿತ್ಯ ಹೊರಗಡೆಯಿಂದ ಬರುತ್ತಿದ್ದಾರೆ. ಅವರು ಬೇರೆ ಬೇರೆ ರಾಜ್ಯಗಳಿಂದ, ಬೇರೆ ಬೇರೆ ದೇಶಗಳಿಂದ, ಬರುತ್ತಿದ್ದಾರೆ. ಅವರಿಗೆಲ್ಲರಿಗೂ ಪಡಿತರ ಚೀಟಿಯನ್ನು ಕೊಡುವುದಕ್ಕೆ ಕಠಿಣವಾಗುತ್ತದೆ. ಅದಕ್ಕಾಗಿ ಬೆಂಗಳೂರು ನಗರದ ಎಲ್ಲಾ ಮಾನ್ಯ ಶಾಸಕರುಗಳ ಸಭೆ ಕರೆದು ಚರ್ಚೆ ಮಾಡಿ ಯಾವ ಆಧಾರದ ಮೇಲೆ ಪಡಿತರ ಚೀಟಿ ಯಾವ ರೀತಿಯಲ್ಲಿ ಕೊಡಬೇಕೆಂಬ ಬಗ್ಗೆ ತಮ್ಮ ಸಲಹೆಯನ್ನು ತೆಗೆದುಕೊಂಡು ಕಾರ್ಡ್ ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಿ.ಎಸ್. ಗಡ್ಡದೇವರ ಮಠ: ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಅಲ್ಲಿ ಇರುವತಂಹವರು ಗುಳೆ ಹೋಗುವಂತಹ ಪ್ರಸಂಗ ಇದೆ,. ಇವರು ಬೇರೆ ಬೇರೆ ಕೆಲಸಗಳಿಗೆ ಹೋಗಿರುತ್ತಾರೆ. ಅಂತಹ ಒಂದು ಪ್ರಸಂಗದಲ್ಲೂ ಅವರನ್ನು ಸರ್ವೆ ಮಾಡುವಂತಹ ಕೆಲಸ ಆಗಬೇಕು. ಇನ್ನೊಂದು ನನ್ನ ಸಲಹೆ ಏನೆಂದರೆ, ಈ ಸರ್ವೆ ಮಾಡುವಂತಹ ಕೆಲಸವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ನಮಗೆ ಮಾಡಿದರೆ ನಮಗೆ ಆದರಲ್ಲಿ ವಿಶ್ವಾಸ ಇದೆ, ಆದರೆ ಅಲ್ಲಿ ಸರ್ವೆ ಮಾಡುವಂತಹವರು ಡಿಪಾರ್ಟ್‌ಮೆಂಟ್‌ನವರು ಯಾರು ಪಡಿತರ ಚೀಟಿಯನ್ನು ಕೊಡುತ್ತಾರೆ. ಅವರಿಗೆ ಸರ್ವೆ ಮಾಡುವ ಕೆಲಸವನ್ನು ಕೊಟ್ಟಿದ್ದಾರೆ. ಅವರು ಏನು ಮಾಡುತ್ತಾರೆಂದರೆ ಇರುವವರ, ಮತ್ತು ಇಲ್ಲದವರ ಹೆಸರುಗಳನ್ನು ಹಾಕಿ, ಆ ಕಾರ್ಡ್‌ಗಳನ್ನು ತಮ್ಮ ಹತ್ತಿರ ಇಟ್ಟುಕೊಂಡು, ಉಳಿದಂತಹ ಅಕ್ಕಿಯನ್ನು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ನಾವು ಗ್ರಾಮೀಣ ಪ್ರದೇಶದಲ್ಲಿ ಆಗುವಂಥಾದ್ದನ್ನು ಇವತ್ತು ನೋಡುತ್ತಿದ್ದೇವೆ. ಆದುದರಿಂದ ಈ ಸರ್ವೆ ಮಾಡುವಂತಹ ಕೆಲಸವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಮಾಡಿದರೆ ಬಹಳ ಸೂಕ್ತವೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಗಡ್ಡದೇವರ ಮಠರವರು ಏನು ಹೇಳಿದ್ದಾರೆಂದರೆ ರೆವಿನ್ಯೂ ಇಲಾಖೆಯಿಂದಲೇ ಸರ್ವೆ ಆಗಬೇಕೆಂಬ ಮಾತನ್ನು ಹೇಳಿದ್ದಾರೆ. ಎರಡನೆಯಾದಗಿ ಇದು ಗುಳೇ ಹೋಗುವಂಥವರಿಗೂ ಕಾರ್ಡ್ ಸಿಗುವಂಥಾದ್ದು ಆಗಬೇಕು. ಇಲ್ಲಿ ಯಾರು ಅರ್ಹ ವ್ಯಕ್ತಿಗಳಿದ್ದಾರೆ ಅತಂಹವರಿಗೆ ಸಿಕ್ಕಿರುವುದಿಲ್ಲ.

ಅಂಥವರಿಗೆ ಕಾರ್ಡ್ ಕೊಡುವಂಥಾದ್ದಕ್ಕೆ ಶಾಶ್ವತವಾದಂತಹ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾಡಲಾಗಿದೆ ಎಲ್ಲಾ ತಾಲ್ಲೂಕಿನ ತಹಶೀಲಾರ್ದರು ಅದರಲ್ಲಿ ಸದಸ್ಯರಾಗಿರುತ್ತಾರೆ, ಮತ್ತೆ ನಮ್ಮ ಆಹಾರ ಇಲಾಖೆಯ ಉಪ ನಿರ್ದೇಶಕರೂ ಸಹ ಅದರಲ್ಲಿ ಇರುತ್ತಾರೆ. ಈ ಸರ್ವೆ ಕೆಲಸವನ್ನು ಕೇವಲ ರೆವಿನ್ಯೂ ಇಲಾಖೆಯಿಂದ ಮಾತ್ರ ಮಾಡಿಸಬೇಕೆಂದರೆ ಆದು ಸಾಧ್ಯಾಗುವುದಿಲ್ಲ. ರೆವಿನ್ಯೂ ಇಲಾಖೆಯಲ್ಲಿ ಅಷ್ಟೊಂದು ಸಿಬ್ಬಂದಿ ಇರಲು ಸಾಧ್ಯವಿಲ್ಲ. ಅದಕ್ಕಾಗಿ ಸರ್ವೆ ಕೆಲಸಕ್ಕೆ ಗ್ರಾಮಪಂಚಾಯತ್‌ನ ಸೆಕ್ರೆಟರಿಗಳನ್ನು, ಮತ್ತು ಗ್ರಾಮ ಸೇವಕರನ್ನು ಮತ್ತು ಅಂಗನವಾಡಿ ಕಾರ್ಯಕರ್ತರನ್ನು, ಮತ್ತು ನಮ್ಮ ಇಲಾಖೆಯ ಆಹಾರ ನಿರೀಕ್ಷಕರನ್ನು ಎಲ್ಲರನ್ನೂ ಉಪಯೋಗಿಸಿಕೊಂಡು ಸರ್ವೆ ಕೆಲಸ ಮಾಡಿರುವಂಥಾದ್ದು ಇದೆ. ಇಲ್ಲಿ ಯಾರಾದರೂ ಗುಳೇ ಹೋಗಿರುವಂಥವರನ್ನು ಡೋರ್ ಲಾಕ್ ಎಂದು ಬರೆದುಕೊಂಡು ಬಂದಿರುತ್ತಾರೆ. ಈ ಡೋರ್ ಲಾಕ್ ಪ್ರಸಂಗಗಳು ಏನಾದರೂ ಇದ್ದರೆ, ಅಂತಹವರನ್ನು ಮತ್ತೊಮ್ಮೆ ತಹಶೀಲ್ದಾರರಿಗೆ ಅರ್ಜಿಯನ್ನು ಕೊಡಲು ತಿಳಿಸಿ, ಅವರೆಲ್ಲರನ್ನೂ ಇನ್‌ಕ್ಲೂಡ್ ಮಾಡುವುದಕ್ಕೆ ನಾನು ಇವತ್ತೇ ಆದೇಶವನ್ನು ಮಾಡುತ್ತೇನೆ.

ಬೀಜ ಮಸೂದೆಯ ಜಾರಿ

47 (278) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೀಜ ಮಸೂದೆಯ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು; ಪ್ರಸ್ತಾವಿತ ಬೀಜ ಮಸೂದೆಯು ರೈತರ ಹಿತರಕ್ಷಣೆಗೆ ಪೂರಕವಾಗಿದೆಯೇ?

ಆ. ಅತ್ಯಂತ ಕಡಿಮೆ ಬಂಡವಾಳ ಮತ್ತು ಪೂರಾತನ ಕೃಷಿ ತಂತ್ರಜ್ಞಾನದಿಂದ ಕೂಡಿದ ಕೃಷಿ ಪದ್ಧತಿಯನ್ನು ಸಂರಕ್ಷಿಸುವಲ್ಲಿ ಈ ಮಸೂದೆಯಲ್ಲಿ ಅಡಕವಾಗಿರುವ ಅಂಶಗಳೇನು;

ಇ. ಮಸೂದೆಯು ಜಾರಿಗೆ ಬರುವಲ್ಲಿ ರಾಜ್ಯ ಸರ್ಕಾರದ ಪಾತ್ರವೇನು;

ಈ. 1966 ಬೀಜ ಕಾಯಿದೆ ಅನ್ವಯ ಕೃಷಿಕರಿಗೆ ನೀಡಲಾಗಿದ್ದ ಬೀಜದ ಹಕ್ಕು ಸಮಗ್ರವಾಗಿ ಮುಂದುವರೆಯುವಂತೆ ನೋಡಿಕೊಳ್ಳಲು ಕೇಂದ್ರ ಸರ್ಕಾರವನ್ನು ಕೋರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು) :

ಅ. ಬೀಜ ಮಸೂದೆಯು ಕೇಂದ್ರ ಸರ್ಕಾರದ ವ್ಯಾಪ್ತಿಗೊಳಪಡುತ್ತದೆ. ಅಂತಿಮವಾಗಿ ಇದನ್ನು ಸಂಸತ್ತಿನಲ್ಲಿ ಅಂಗೀಕೃತವಾಗ ಬೇಕಾಗಿರುತ್ತದೆ. ಹಾಲಿ ಇದು ಕರಡು ರೂಪದಲ್ಲಿದ್ದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆದಿರುತ್ತದೆ.

ಆ. ಸದರೀ ಮಸೂದೆಯಲ್ಲಿ ಕ್ಯಾಪಿಟಲ್ ಕಾಸ್ಟ್ ಹಾಗು ಪುರಾತನ ಕೃಷಿ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲ ಪ್ರಸ್ತಾಪಿತ ಮಸೂದೆಯಲ್ಲಿ ಮಾರಾಟ ಮಾಡಲಾದ ಬೀಜದ ಬಗ್ಗೆ ಸಂಬಂಧಪಟ್ಟವರ ಜವಾಬ್ದಾರಿ; ತಳಿಗಳ ನೊಂದಾವಣಿಯ ಕಡ್ಡಾಯ ಹಾಗೂ ಕಠಿಣ ಶಿಕ್ಷೆಯನ್ನು ಒಳಗೊಂಡಿರುತ್ತದೆ.

ಈ. ಹೌದು.

ಶ್ರೀ ಜೆ.ಕೃಷ್ಣ ಪಾಲೇಮಾರ್ : ಮಾನ್ಯ ಅಧ್ಯಕ್ಷರೆ, ಬೀಜ ಮಸೂದೆಯ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆದಿರುತ್ತದೆಂದು ಉತ್ತರವನ್ನು ಕೊಟ್ಟಿದ್ದಾರೆ. ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಅದು ಕೇವಲ ಕಾರ್ಯದರ್ಶಿಗಳ ಮಟ್ಟದಲ್ಲೇ ಅಭಿಪ್ರಾಯವನ್ನು ಕೊಡಲಾಗಿದೆಯೇ? ಇದರ ಬಗ್ಗೆ ಸದನದಲ್ಲಿ ಏನಾದರೂ ಚರ್ಚೆ ಆಗಿದೆಯಾ? ಇದು ಗಂಭೀರವಾದ ವಿಚಾರವಾಗಿರುವುದರಿಂದ ಈ ವಿಷಯದಲ್ಲಿ ಸದನದಲ್ಲಿ ಚರ್ಚೆಯಾಗಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರವನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪುರ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ ಈಗಾಗಲೇ ಕೇಂದ್ರ ಸರ್ಕಾರ ಸೀಡ್ ಬಿಲ್ 2004 ಅನ್ನು ತರುತ್ತಾ ಇದೆ. ಈ ಬಿಲ್ ಅನ್ನು ಪೂರ್ತಿಯಾಗಿ ಕೇಂದ್ರ ಸರ್ಕಾರ ರೂಪಿಸುವಂಥಾದ್ದು. ಆದರೆ ನಮ್ಮ ರಾಜ್ಯಸರ್ಕಾರದ ಮುಖಾಂತರ ನಮ್ಮ ಸಲಹೆಗಳನ್ನು ಕೊಡಬೇಕಾಗುತ್ತದೆ. ಈಗಾಗಲೇ ಇದರ ಬಗ್ಗೆ ಬಹಳಷ್ಟು ಅಧಿಕಾರಿಗಳ ಮಟ್ಟದಲ್ಲಿ ಮತ್ತೆ ಸದನದಲ್ಲಿ ಚರ್ಚೆಯಾಗಿ ಕೆಲವೂ ಸಲಹೆಗಳನ್ನು ಸರ್ಕಾರದ ವತಿಯಿಂದ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೇಳಿದ ಹಾಗೆ ಕಂಪ್ಲೀಟ್ ಡೀಟೈಲ್ ತರಿಸಿ ಅವರಿಗೆ ಕೊಡುತ್ತೇನೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದು ಶೇಕಡ 70ರಷ್ಟು ರೈತರ ಬದುಕಿಗೆ ಸಬಂಧಪಟ್ಟಂತಹ ವಿಚಾರವಾಗಿದೆ. ಪುರಾತನ ಪರಂಪರಾಗತ ಕೃಷಿಯ ಬಗ್ಗೆ ಇದರಲ್ಲಿ ಏನೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಬೀಜ ಮಸೂದೆ ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ. ದೇಶದಲ್ಲಿ ಇವತ್ತು ವಿದೇಶದ ಕಂಪನಿಗಳು ಸಾಕಷ್ಟು ತಮ್ಮ ಪ್ರಭಾವವನ್ನು ಬೀರಿ ಈ ಮಸೂದೆಯನ್ನು ಪಾಸು ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಪ್ರಯತ್ನವನ್ನು ಮಾಡುತ್ತಿವೆ. ಇದರಿಂದ ನಮ್ಮ ರೈತರ ಸ್ವಾತಂತ್ರ್ಯವೇ ಹೊರಟು ಹೋಗುತ್ತದೆ.

ಅಧ್ಯಕ್ಷರು : ಈಗ ಒಂದು ಗಂಟೆಯೊಳಗೆ ಪ್ರಶ್ನೋತ್ತರ ಕಲಾಪ ಮುಗಿಯಬೇಕು. ಒಂದೊಂದು ಪ್ರಶ್ನೆಗೆ ಹತ್ತು ನಿಮಿಷಗಳನ್ನು ತೆಗೆದುಕೊಂಡರೆ ಕಷ್ಟವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ರೈತರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ವಿದೇಶಿ ಕಂಪೆನಿಗಳು ರೈತರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಈ ವಿಷಯದ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕು. ನಮ್ಮ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕೆಂಬ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಈ ವಿಷಯಕ್ಕ ಸಂಬಂಧಪಟ್ಟಂತೆ ಮಾನ್ಯ ಜೆ.ಕೆ. ಕೃಷ್ಣ ಪಾಲೇಮಾರ್‌ರವರು ಉಪ ಪ್ರಶ್ನೆಯನ್ನು ಕೇಳಬೇಕು. ಈ ರೀತಿ ಬೇರೆ ಬೇರೆ ಸದಸ್ಯರುಗಳು ಕೇಳಿದರೆ ನಾನು ಅವಕಾಶವನ್ನು ಮಾಡಿಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪುರ್ : ಮಾನ್ಯ ಅಧ್ಯಕ್ಷರೆ, ನಾವು ಈಗ ಕೇಂದ್ರ ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ತಮ್ಮ ಸಲಹೆಗಳು ಏನಾದರೂ ಇದ್ದರೆ ಅದನ್ನು ಇದರಲ್ಲಿ ಅಳವಡಿಸಿಕೊಂಡು ಸರ್ಕಾರ ರೆಕಮಂಡ್ ಮಾಡುತ್ತದೆನ್ನುವ ಎನ್ನು ವಿಚಾರವನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ರಾಜೇಂದ್ರವರ್ಮ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಾನು ಕೆಲವು ಪ್ರಮುಖ ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಅನೇಕ ನಾಲೆಗಳು ಬಹಳ ವರ್ಷಗಳಿಂದ ತುಂಬಿ ಹರಿದು ಮಣ್ಣು ಜಮಾಯಿಸಿದೆ. ಈ ಮಣ್ಣಿನಿಂದ ನೀರು ಹರಿಯುವಾಗ ನಾಲೆಯ ಹತ್ತಿರ ಇರುಂವತಹ ಜಮೀನು ಸುಮಾರು ಒಂದು ಸಾವಿರ ಎರಡು ಸಾವಿರ ಎಕರೆಗೆ ಯಾವಾಗಲೂ ನೀರು ಹರಿದು ಅಲ್ಲಿ ಬೆಳೆ ನಾಶವಾಗುತ್ತದೆ. ಆದುದರಿಂದ ದಯಮಾಡಿ ವಾಟರ್‌ಶೆಡ್ ಕಾರ್ಯಕ್ರಮದಡಿ ಹೂಳು ಎತ್ತುವಂತಹ ಕೆಲಸಮಾಡಿ ಆ ರೈತರ ಬೆಳೆಯನ್ನು ಉಳಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ನಾನು ಕೇಳಲಿಚ್ಛಿಸುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ ಸರ್ಕಾರ ಕೊಟ್ಟಿರುವ ಉತ್ತರಲ್ಲಿ ಕ್ಯಾಪಿಟಲ್ ಕಾಸ್ಟ್ ಹಾಗೂ ಪುರಾತನ ಕೃಷಿ ಬಗ್ಗೆ ಯಾವುದೇ ಪ್ರಸ್ತಾಪವಿರುವುದಿಲ್ಲವೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆಂದರೆ ನಮ್ಮ ರೈತರು ಪರಂಪರಾಗತವಾಗಿ ಇರುವ ಕೃಷಿಯ ಮೇಲೆಯೇ ಶೇಕಡ 80ರಷ್ಟು ಅವಲಂಬಿತವಾಗಿರುವಂಥಾದ್ದು ಇವತ್ತಿಗೂ ಇದೆ. ಇದು ಬಹಳ ಸರಳವೂ ಇದೆ. ಹೆಚ್ಚು ಕಾಸ್ಟ್ ಇಲ್ಲದೆ ಇರುವಂಥಾದ್ದು ಆಗಿದೆ. ಈ ಬೀಜ ಮಸೂದೆ ಬಂದನಂತರ ಪರಂಪರಾಗತವಾಗಿ ಬಂದಿರುವಂತಹ ಕೃಷಿಯ ಭವಿಷ್ಯದ ಗತಿ ಏನು? ಇದರ ಬಗ್ಗೆ ವಿವರವಾಗಿ ಉತ್ತರವನ್ನು ಕೊಟ್ಟಿಲ್ಲ. ಆದುದರಿಂದ ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯನ್ನು ಮಾಡಬೇಕು. ಇದು ರೈತರ ಬದುಕಿಗೆ ಸಂಬಂಧಪಟ್ಟಿದ್ದು, ಯಾರೋ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ಮಾಡಿ, ಒಂದು ಕರಡು ವರದಿಯನ್ನು ಕಳುಹಿಸಿಕೊಟ್ಟು, ಅದಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆಂದರೆ ನಾವೆಲ್ಲರೂ ಜನ ಪ್ರತಿನಿಧಿಗಳಾಗಿ ರೈತರ ಹಿತವನ್ನು ಕಾಪಾಡದೇ ಹೋದರೆ ನಾವು ರೈತರಿಗೆ ಅನ್ಯಾಯವನ್ನು ಮಾಡಿದಹಾಗೆ ಆಗುತ್ತದೆ. ದೇಶಕ್ಕೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವಂಥಾದ್ದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ ಈಗ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಸ್ತಾಪ ಮಾಡಿದಂತಹ ವಿಚಾರವನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. ಈ ಬೀಜ ಮಸೂದೆ ಏನು ಇದೆ ಇದು ರಾಜ್ಯ ಸರ್ಕಾರದ ಕೈಯಲ್ಲಿ ಇಲ್ಲ, ಕೇಂದ್ರ ಸರ್ಕಾರ ಮಾಡಿರುವಂಥಾದ್ದು. ಇದನ್ನು ಕೇಂದ್ರ ಸರ್ಕಾರ ಮಾಡಿರುವಂಹತ ಕಾನೂನಿನಿಂದಾಗಿ ಇಡೀ ರೈತರು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವಂತಹ ಸ್ಥಿತಿ ಬಂದಿದೆ. ಇದಕ್ಕೆ ಪರ್ಯಾಯವಾಗಿ ರಾಜ್ಯಸರ್ಕಾರ ಏನಾದರೂ ಮಾಡುವುದಕ್ಕೆ ಸಾಧ್ಯತೆ ಇದೆಯಾ ಎಂಬ ಬಗ್ಗೆ ಅಷ್ಟೆ ಆಲೋಚನೆ ಮಾಡಬೇಕೇ ಹೊರತು ಈ ಕಾನೂನನ್ನು

ತಿದ್ದುಪಡಿ ಮಾಡುವಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಈ ಬಹುರಾಷ್ಟ್ರೀಯ ಬೀಜ ಉತ್ಪಾದನೆಯ ಧಾಳಿ ಏನು ಇದೆ. ಇದರಿಂದ ರೈತರು ತಮ್ಮ ಪರಂಪರಾಗತವಾದಂತಹ ಅಸ್ತಿತ್ವವನ್ನೇ ಬೀಜ ಉತ್ಪಾದನೆಯ ವಿಧಾನವನ್ನೇ ಹಾಳು ಮಾಡಿಕೊಂಡು ಬಹುರಾಷ್ಟ್ರೀಯ ಕಂಪೆನಿಗಳ ಗುಲಾಮರಾಗುವಂತಹ ಸ್ಥಿತಿ ಈ ಕಾಯಿದೆಯಿಂದ ಏನು ನಿರ್ಮಾಣವಾಗಿದೆ, ಇದಕ್ಕೆ ಏನಾದರೂ ಪರ್ಯಾಯವಾಗಿ ರಾಜ್ಯಸರ್ಕಾರ ಮಾಡಬಹುದಾ ಎನ್ನುವುದನ್ನು ಆಲೋಚನೆಯನ್ನು ಮಾಡಬಹುದೇ ಹೊರತು ನೀವು ಈ ಕಾಯಿದೆಯನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಆ ರೀತಿ ಮಾಡುವುದೆಂದಾರೆ ನಮ್ಮ ರಾಜ್ಯ ವಿಧಾನಸಭೆಯಲ್ಲಿ ಒಂದು ನಿರ್ಣಯವನ್ನು ಅಂಗೀಕಾರ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬಹುದು. ಇದರಿಂದ ನಮಗೆ ತೊಂದರೆಯಾಗಿದೆ, ಈ ಕಾಯಿದೆಯನ್ನು ತಿದ್ದುಪಡಿ ಮಾಡಬಹುದೆಂದು ಅದನ್ನು ಬದಲಾವಣೆ ಮಾಡುವುದು ಬಿಡುವುದು ಅದು ಅವರಿಗೆ ಬಿಟ್ಟಂತಹ ವಿಚಾರವಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಕೊಡುವ ಪೂರ್ವದಲ್ಲಿ ನಮ್ಮ ಗವರವಾನ್ವಿತ ಹಿರಿಯ ಸದಸ್ಯರಾದ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಹೇಳಿರುವಂತಹ ಆ ವಿಚಾರದಲ್ಲಿ ಸದನದಲ್ಲಿ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಏಕೆಂದರೆ ಈ ಬೀಜದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಬೇಕಾದರೆ, ನಮ್ಮ ರಾಜ್ಯದಲ್ಲಿರುವಂತಹ ರೈತರ ಬಗ್ಗೆ ಅನೇಕ ಸಮಸ್ಯೆಗಳು ಇವೆ. ಇದರ ಬಗ್ಗೆ ಕಳಪೆ ಬೀಜದ ಬಗ್ಗೆ ಎಲ್ಲೂ ಚರ್ಚೆಯಾಗಿಲ್ಲ. ಯಾವ ಯಾವ ಸಂಸ್ಥೆಗಳು ಯಾವ ಯಾವ ಸಂದರ್ಭದಲ್ಲಿ ಕಳಪೆ ದರ್ಜೆಯ ಬೀಜಗಳನ್ನು ಯಾವ್ಯಾವ ಜಿಲ್ಲೆಗಳಲ್ಲಿ ಯಾವ್ಯಾವ ರೈತರಿಗೆ ಮುಟ್ಟಿದೆ, ಯಾವ್ಯಾವ ಸಹಕಾರ ಸಂಘಗಳಿಂದ ಮಾರಾಟ ಮಾಡಿದ್ದಾರೆ. ಖಾಸಗಿ ಕಂಪನಿಯಿಂದ ಎಷ್ಟು ಮಾರಾಟ ಆಗಿದೆ. ಅದರಿಂದ ರೈತರಿಗೆ ಎಷ್ಟು ಲುಕ್ಸಾನ್ ಆಗಿದೆ. ಈ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಆದುದರಿಂದ ದಯಮಾಡಿ ಇದಕ್ಕೆ ಅರ್ಧ ಗಂಟೆ ಚರ್ಚೆಗೆ, ಬೀಜ ಮಸೂದೆ ಮೇಲೆ ಅವಕಾಶವನ್ನು ಕೊಟ್ಟರೆ, ಒಳ್ಳೆಯದೆಂದು ನಾನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಸಚಿವರೆ, ಈ ವಿಷಯಕ್ಕೆ ನಾನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸುರೇಶ್ ಎಸ್. ಮಾರಿಯಾಳ ಸದಸ್ಯರು ಗೈರುಹಾಜರಿದ್ದಾರೆ. ಮಾನ್ಯ ಬಿ.ಆರ್. ಪಾಟೀಲ್ ರವರ ಪರವಾಗಿ ಮಾನ್ಯ ವೈಜನಾಥ್ ಪಾಟೀಲ್‌ರವರು ಪ್ರಶ್ನೆ ಕೇಳಿ. ಸದಸ್ಯರು ಗೈರು ಹಾಜರಿದ್ದಾರೆ. ಮಾನ್ಯ ಅಪ್ಪಾಸಾಹೇಬ್ (ಅಪ್ಪು) ಮಲಪ್ಪ ಪಟ್ಟಣಶೆಟ್ಟಿಯವರು.

ಬಿಜಾಪುರ ಜಿಲ್ಲಾ ರೈತ ತರಬೇತಿ ಕೇಂದ್ರ ಪ್ರಾರಂಭಿಸುವುದು

50 (169) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ) ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಜಿಲ್ಲಾ ಕೇಂದ್ರವಾದ ವಿಜಾಪುರ ನಗರದಲ್ಲಿ ಮುಖ್ಯವಾಗಿ ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿದ್ದರೂ ಇಲ್ಲಿ ಜಿಲ್ಲಾ ರೈತ ತರಬೇತಿ ಕೇಂದ್ರ ಇಲ್ಲದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇಲ್ಲಿ ಜಿಲ್ಲಾ ರೈತ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಅಥವಾ ಸಿಂಧಗಿ ತಾಲ್ಲೂಕಿನ ಆಲಮೇಳದಲ್ಲಿರುವ ಉಪ ರೈತ ತರಬೇತಿ ಕೇಂದ್ರವನ್ನು ವಿಜಾಪುರ ನಗರಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದಿದೆಯೇ;

ಇ. ಅಲಮೇಲದಲ್ಲಿರುವ ರೈತ ತರಬೇತಿ ಉಪ ಕೇಂದ್ರದಲ್ಲಿ ಮೂಲಬೂತ ಸೌಕರ್ಯ., ಸಿಬ್ಬಂಧಿ ಕೊರತೆ ಇತ್ಯಾದಿಗಳ ಕೊರತೆಗಳಿರುವುದರಿಂದ ಜಿಲ್ಲೆಯ ರೈತರು ಇದರ ಪ್ರಯೋಜನ ದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಬಿಜಾಪುರದಲ್ಲಿ ಜಿಲ್ಲಾ ರೈತ ತರಬೇತಿ ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು;

ಉ. ಅದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು):

ಅ. ಹೌದು

ಆ. ಹೌದು

ಇ. ಹೌದು

ಈ. 2006–07 ಸಾಲಿನಿಂದ ಪ್ರಾರಂಭಿಸಲು ಯೋಜಿಸಲಾಗಿದೆ.

ಉ. ತರಭೇತಿ ಕೇಂದ್ರದ ಕಟ್ಟಡ ನಿರ್ಮಾಣ ಮತ್ತು ಇತರ ಮೂಲಭೂತ ಸೌಕರ್ಯಗಳಿಗಾಗಿ ರೂ. 20.00 ಲಕ್ಷಗಳನ್ನು ಮೀಸಲಿರಿಸಲಾಗಿದೆ.

ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಿಜಾಪುರ ಅತ್ಯಂತ ಹಿಂದುಳಿದಂಥ ಜಿಲ್ಲೆಯಾಗಿದೆ. ಬಾಗಲಕೋಟೆ, ಬಿಜಾಪುರ ಬೇರ್ಪಟ್ಟಾಗ ರೈತ ತರಬೇತಿ ಕೇಂದ್ರ ಆ ಕಡೆಗೆ ಹೋಯಿತು. ಸಿಂಧಗಿ ತಾಲ್ಲೂಕಿನಲ್ಲಿ ಈಗ ಒಂದು ಉಪ ಕೇಂದ್ರವಿದೆ. ನಮ್ಮ ಜಿಲ್ಲೆಗೆ ಬಹಳ ಅವಶ್ಯಕವಾಗಿರುವ ಈ ರೈತ ತರಬೇತಿ ಕೇಂದ್ರವನ್ನು 2006–07ನೇ ಸಾಲಿನಿಂದ ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ, ಅದನ್ನು ಈ ವರ್ಷದಲ್ಲೇ ಪ್ರಾರಂಭ ಮಾಡಲು ಆದೇಶಿಸಬೇಕು. ಮತ್ತು ಈ ಬಗ್ಗೆ ತಕ್ಷಣದಲ್ಲೇ ಕ್ರಮ

ತೆಗೆದುಕೊಳ್ಳಬೇಕು. ಕಳೆದ ಬಾರಿ ಮಾನ್ಯ ಶ್ರೀನಿವಾಸಗೌಡರು ಕೃಷಿ ಸಚಿವರಾಗಿದ್ದಾಗಲೂ ನಾನು ಅವರಿಗೆ ಮನವಿ ಮಾಡಿದ್ದೆ, ಅವರ ಕಾಲದಲ್ಲೂ ಏಕೋ ವಿಳಂಬವಾಗಿದೆ. ತಾವು ವಿಳಂಬ ಮಾಡದೇ, ಕೂಡಲೇ ಇದನ್ನು ಪ್ರಾರಂಭ ಮಾಡಲು ಆದೇಶವನ್ನು ಮಾಡುವ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು ಎಂದು ತಮ್ಮ ಮುಖ್ಯಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ: ಮಾನ್ಯ ಅಧ್ಯಕ್ಷರೆ,ಗೌರವಾನ್ವಿತ ಸದಸ್ಯರು ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಟ್ರೈನಿಂಗ್ ಸೆಂಟರ್ ಬೇಕು ಎಂದು ಈಗಾಗಲೇ ಕೇಳಿದ್ದಾರೆ. ಸಿಂಧಗಿ ತಾಲ್ಲೂಕಿನ ಅಲಮೇಲದಲ್ಲಿ ಒಂದು ಉಪ ಕೇಂದ್ರವಿದೆ. ಅದನ್ನು ಬಿಜಾಪುರಕ್ಕೆ ಸ್ಥಳಾಂತರ ಮಾಡುವ ಪ್ರಸ್ತಾಪ ಈಗಾಗಲೇ ಸರ್ಕಾರದ ಮುಂದಿದೆ. ಇದನ್ನು ಸ್ಥಳಾಂತರ ಮಾಡುವ ಕಾರಣವೇನೆಂದರೆ, ಬಿಜಾಪುರದಲ್ಲಿ ಅಗ್ರಿಕಲ್ಚರ್ ಕಾಲೇಜು ಇದೆ. ಆ ಕಾರಣದಿಂದಲಿ ಅಲ್ಲಿ ಸೈಂಟಿಸ್ಟ್‌ಗಳೆಲ್ಲಾ ಇರುತ್ತಾರೆ ಎನ್ನುವ ಕಾರಣದಿಂದ ಇದು ಸ್ಥಳಾಂತರವಾಗುತ್ತದೆ. ಸ್ಥಳಾಂತರವನ್ನು ತಕ್ಷಣ ಆರು ತಿಂಗಳೊಳಗೆ ಮಾಡಬೇಕೆಂದಿದ್ದೇವೆ. ಅದಕ್ಕೆ ಈಗಾಗಲೇ 20 ಲಕ್ಷ ರೂಪಾಯಿಗಳ ಫಂಡ್‌ಅನ್ನು ಒದಗಿಸಿದ್ದೇವೆ. ಹಾಗಾಗಿ ಈ ಟ್ರೈನಿಂಗ್ ಸೆಂಟರನ್ನು ಆರೇಳು ತಿಂಗಳ ಒಳಗಾಗಿ ಸ್ಥಳಾಂತರ ಮಾಡಿ ಪ್ರಾರಂಭ ಮಾಡಲು ಪ್ರಯತ್ನ ಪಡುತ್ತೇವೆ ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ವಿಮೆ

51 (263) ಶ್ರೀ ಶಿವರಾಮು ಬಿ. (ಗಂಡಸಿ) ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2005–06ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ವಿಮೆಗಾಗಿ ರೈತರು ಕಟ್ಟಿರುವ ಒಟ್ಟು ಬೆಳೆ ಕಂತಿನ ಮೊತ್ತವೆಷ್ಟು;

ಆ) ಈವರೆಗೆ ಬೆಳೆ ವಿಮೆ ಮಂಜೂರಾತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳೆ ವಿಮಾ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ 2005ರ ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಗೆ ಒಟ್ಟು 53373 ರೈತರು ರೂ. 11.44 ಕೋಟಿಗಳನ್ನು ವಿಮಾ ಕಂತನ್ನು ಪಾವತಿಸಿ ಭಾಗವಹಿಸಿರುತ್ತಾರೆ.

ಆ) ಬಂದಿದೆ.

ಇ) ಹಾಸನ ಜಿಲ್ಲೆಯ 2005ರ ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಯ ಹೋಬಳಿವಾರು ಇಳುವರಿ ಮಾಹಿತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಅಗ್ರಿಕಲ್ಚರ್ ಇನ್ಸೂರೆನ್ಸ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ಈಗಾಗಲೇ ನೀಡಿದೆ. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕುತ್ತಿದೆ. ವಿಮಾ ಸಂಸ್ಥೆಯು ರಾಜ್ಯ ಸರ್ಕಾರದ ಪಾಲಿನ ಹಣವನ್ನು

ಬಿಡುಗಡೆ ಮಾಡಲು ಕೋರಿದ ತಕ್ಷಣ ಹಣವನ್ನು ಬಿಡುಗಡೆಮಾಡಿ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಗೆ ಒಟ್ಟು 53.373 ಜನ ರೈತರು, 11.44 ಕೋಟಿ ರೂಪಾಯಿಗಳ ವಿಮಾ ಕಂತನ್ನು ತುಂಬಿದ್ದಾರೆ. ಆದರೆ ಬೆಳೆ ವಿಮೆ ಈವರೆಗೆ ಮಂಜೂರಾತಿಯಾಗಿಲ್ಲ ಎನ್ನುವುದು ನನಗೂ ತಿಳಿದಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಎನ್ನುವುದು ನನ್ನ ಮೂಲಭೂತ ಪ್ರಶ್ನೆ. ಬೆಳೆಯನ್ನು ತೆಗೆದು 6–7 ತಿಂಗಳಾಯಿತು. ಬೆಳೆ ಇರುವಾಗಲೇ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಹಿತಿಯನ್ನು ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್ ಮೂಲಕ ಇನ್‌ಷೂರೆನ್ಸ್ ಕಾರ್ಪೋರೇಷನ್ ಕಂಪನಿಗೆ ಕಳುಹಿಸಲಾಗಿದೆ. ಬೆಳೆ ವಿಮೆಯನ್ನು ಕೊಡಲು ಎಷ್ಟು ದಿವಸ ಬೇಕು? ನಾನು ಇದನ್ನು ತಮಗೆ ಏಕೆ ಕೇಳುತ್ತಿದ್ದೇನೆಂದರೆ, ಇದಕ್ಕೆ ಏನಾದರೊಂದು ಟೈಂ ಬೌಂಡ್ ಪ್ರೋಗ್ರಾಂ, ಅಂದರೆ ಮಾಹಿತಿಯನ್ನು ಒದಗಿಸಿ ನಂತರ ಇಷ್ಟು ದಿವಸಗಳೊಳಗೆ ಕಂಪನಿಯವರು ನಷ್ಟವನ್ನು ಅಂದಾಜು ಮಾಡಿ, ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ತುಂಬಲಿಕ್ಕೆ ಕೋರಿಕೆಯನ್ನು ಮಾಡಬೇಕು ಮತ್ತು ಪರಿಹಾರವನ್ನು ಕೊಡಬೇಕೆಂದು ಕಾರ್ಯಕ್ರಮ ಮಾಡುವಿರಾ? ಹಿಂದಿನದನ್ನು ನಾನು ಈಗ ಹೇಳುತ್ತಿದ್ದೇನೆ, 2004–05ನೇ ಸಾಲಿನದ್ದು ಈಗ ಚೆಕ್ ಬಂದಿದೆ. ಅವರಿಗೆ ಏಕೆ ಇಷ್ಟು ಕಾಲಾವಕಾಶ ಬೇಕಾಗುತ್ತದೆ. ನನ್ನ ಬಳಿ ಇರುವ ಮಾಹಿತಿ ಪ್ರಕಾರ, ಹಾಸನ ಜಿಲ್ಲೆಯ ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್‌ನಿಂದ ಮಾಹಿತಿ ಹೋಗಿ ಆರು ತಿಂಗಳಾಗಿದೆ. ಆದರೂ, ಏಕೆ ವಿಳಂಬವಾಗುತ್ತಿದೆ? ಸರ್ಕಾರದ ವತಿಯಿಂದ ತಾವೇನಾದರೂ ಒಂದು ಟೈಂ ಬೌಂಡ್ ಪ್ರೋಗ್ರಾಂ ಅನ್ನು ಮಾಡುವಿರಾ? ಮಾಹಿತಿ ಕಳುಹಿಸಿದ ಇಷ್ಟು ದಿವಸಗಳೊಳಗೆ , ಅಂದಾಜಿನ ಮೊತ್ತ ಎಷ್ಟು ಎಂದು ಸರ್ಕಾರ ಕೇಳತಕ್ಕಂಥ ಟೈಂ ಬೌಂಡ್ ಪ್ರೋಗ್ರಾಂ ನೀತಿಯನ್ನು ಜಾರಿಗೆ ತರತಕ್ಕಂಥ ಕ್ರಮವನ್ನು ಕೈಗೊಳ್ಳುವಿರೇ?

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿರಿಯ ಸದಸ್ಯರು ಹೇಳಿದ ಹಾಗೆ ಹಣ ಬಿಡುಗಡೆಯಾಗುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಕೆಲವು ಡಿಸ್ಟ್ರಿಕ್ಟ್‌ಗಳಿಂದ ಮಾಹಿತಿ ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಿ ಅಲ್ಲಿಂದ ಇನ್‌ಷೂರೆನ್ಸ್ ಕಂಪನಿಗೆ ಕಳುಹಿಸಿ ಅಲ್ಲಿಂದ ರೈತರಿಗೆ ಹಣ ಬರುವಷ್ಟರಲ್ಲಿ ಬಹಳ ವಿಳಂಬವಾಗುತ್ತಿದೆ. ಆದರೆ ತಮ್ಮ ಹಾಸನ ಜಿಲ್ಲೆಯಿಂದ ಎಲ್ಲಾ ಮಾಹಿತಿ ಈಗಾಗಲೇ ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟನಿಂದ ಅಗ್ರಿಕಲ್ಚರಲ್, ಕಾರ್ಪೋರೇಷನ್ನಿಗೆ ಹೋಗಿದೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಏಪ್ರಿಲ್ ಎಂಡ್ ಅಥವಾ ಮೇ ಫಸ್ಟ್ ವೀಕ್‌ನಲ್ಲಿ ಹಣ ಬಿಡುಗಡೆ ಮಾಡುತ್ತಿದ್ದೇವೆ. ತಾವು ಹೇಳಿದ ಹಾಗೆ ಇದರ ಬಗ್ಗೆ ನಾವು ಚರ್ಚೆ ಮಾಡಿ ಸಂಬಂಧಪಟ್ಟ ಅಗ್ರಿಕಲ್ಚರಲ್ ಕಾರ್ಪೊರೇಷನ್ನಿನವರಿಗೆ ಹೇಳುತ್ತೇವೆ. ಇದು ಸೆಂಟ್ರಲ್ ಗವರ್ನಮೆಂಟ್‌ದ್ದು ಆಗಿರುವುದರಿಂದ ಅವರ ಜೊತೆ ಮಾತನಾಡಿ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಶಿವರಾಮು : ನಿಮಗೆ ಮಾತನಾಡಲು ಅವಕಾಶವಿದೆ. ಆದ್ದರಿಂದ, ಮಾತನಾಡಿ ಏನಾದರೊಂದು ನೀತಿಯನ್ನು ರೂಪಿಸತಕ್ಕಂಥ ವ್ಯವಸ್ಥೆಯಾಗಬೇಕು. 53.373 ರೈತ ಕುಟುಂಬದವರು ಈ ಹಣ ಬರುತ್ತದೆ, ಬರುತ್ತದೆ ಎನ್ನುವ ನಿರೀಕ್ಷೆಯಲ್ಲಿಯೇ ಇದ್ದಾರೆ. ಮತ್ತೆ ಈಗಾಗಲೇ ಆಲೂಗೆಡ್ಡೆ ಬಿತ್ತನೆ ಕಾಲ ಪ್ರಾರಂಭವಾಗಿದೆ. ಇನ್ನೂ ಅವರಿಗೆ ಹಣ ಸಿಗುವುದಿಲ್ಲವೆಂದರೆ ಹೇಗೆ? ನಮ್ಮ ಜಿಲ್ಲೆಯಿಂದ ಸುಮಾರು ಹನ್ನೊಂದೂವರೆ ಕೋಟಿ ರೂಪಾಯಿಗಳ ರೈತರ ಹಣ ಸರ್ಕಾರದಲ್ಲಿ ಇರುವಾಗ, ಅವರ ಆತಂಕವನ್ನು ನಾವು ಅರ್ಥಮಾಡಿಕೊಂಡು, ಅದಕ್ಕೆ ಸ್ಪಂದಿಸತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ ತಮ್ಮ ಕಾಲದಲ್ಲಾದರೂ ಒಂದು ಟೈಂ ಬೌಂಡ್ ಪ್ರೋಗ್ರಾಂಅನ್ನು ನಿಗದಿ ಮಾಡುವುದರ ಮುಖಾಂತರ ರೈತರ ಆತಂಕವನ್ನು ಬಗೆಹರಿಸಬೇಕು ಎಂದು ಅಧ್ಯಕ್ಷರ ಮೂಲಕ ತಮಗೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದುದ್ದರಲ್ಲಿ ಬಹಳ ಅರ್ಥವಿದೆ. ಆದರ ಬಗ್ಗೆ ಪರಿಶೀಲನೆಯನ್ನು ಮಾಡಿ ಮುಂದಿನ ದಿನಗಳಲ್ಲಿ ಕ್ರಮವನ್ನು ಕೈಗೊಳ್ಳುತ್ತೇವೆ.

ತುರುವೇಕೆರೆ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಗೋದಾಮುಗಳನ್ನು ನಿರ್ಮಿಸುವುದು

52 (37) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಕೃಷಿ ಮಾರುಕಟ್ಟೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮುಗಳು ಇಲ್ಲದೇ ರೈತರು ಬೆಳೆದ ಉತ್ಪನ್ನಗಳನ್ನು ಸಂರಕ್ಷಿಸಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮುಗಳನ್ನು ನಿರ್ಮಾಣ ಮಾಡಿ ರೈತರ ಉತ್ಪನ್ನಗಳನ್ನು ಸಂರಕ್ಷಿಸಲು ಅನುಕೂಲ ಮಾಡಿಕೊಡಲಾಗುವುದೇ;

ಇ. ಹಾಗಿದ್ದಲ್ಲಿ ಯಾವಾಗ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪೂರ (ಕೃಷಿ ಮಾರುಕಟ್ಟೆ ಸಚಿವರು):

ಅ. ಇಲ್ಲ.

ಆ. – ಪ್ರಶ್ನೆ ಉದ್ಭವಿಸುವಿದಿಲ್ಲ –

ಇ. – ಪ್ರಶ್ನೆ ಉದ್ಭವಿಸುವಿದಿಲ್ಲ –

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೋಕಿನಲ್ಲಿ ಒಂದು ಗೋದಾಮನ್ನು ನಿರ್ಮಾಣ ಮಾಡಬೇಕು ಎಂದು ಹಿಂದೆ ಬಹಳ ಸಾರಿ ನಾನು ಸರ್ಕಾರವನ್ನು ಒತ್ತಾಯ ಮಾಡಿದ್ದೇನೆ. ಅದಕ್ಕೆ ಪೂರಕವಾಗಿ ಜಮೀನು ಕೊಡಬೇಕು ಎಂದು ನಾವು ಆರ್.ಎಂ.ಸಿ.ಗೆ

ಕೇಳಿದ್ದೇವೆ. ಬಹಳ ಮುಖ್ಯವಾಗಿ, ನಮ್ಮಲ್ಲಿ ಬೆಳೆಯತಕ್ಕಂಥ ರಾಗಿ, ಭತ್ತ ಇತ್ಯಾದಿಗಳನ್ನು ಸ್ಟಾಕ್ ಇಡಲು ಬಹಳ ತೊಂದರೆಯಾಗಿದೆ. ಇವತ್ತಿನ ದಿವಸ ಅವುಗಳನ್ನು ಬೇರೆಬೇರೆ ಪ್ರೈವೇಟ್ ಗೋದಾಮಿನಲ್ಲಿಟ್ಟು, ಅದು ವೇಸ್ಟ್ ಆಗುತ್ತಿದೆ. ಅದಕ್ಕಾಗಿ, ತುರುವೇಕೆರೆಯಲ್ಲಿ ಒಂದು ಗೋದಾಮು ನಿರ್ಮಾಣ ಮಾಡುವುದರ ಮುಖಾಂತರ ಬೆಳೆಗಳನ್ನು ಸಂರಕ್ಷಣೆ ಮಾಡುವ ಅವಶ್ಯಕತೆಯಿದೆ. ಅದಕ್ಕೆ ಅಗತ್ಯವಾಗಿರುವ ಜಮೀನನ್ನು ಕೊಟ್ಟು, ಒಂದು ಗೋದಾಮನ್ನು ನಿರ್ಮಾಣ ಮಾಡಬೇಕು ಎನ್ನುವುದು ನನ್ನ ಬೇಡಿಕೆಯಾಗಿದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಅಧ್ಯಕ್ಷರೆ ತುರುವೇಕೆರೆ ತಾಲ್ಲೂಕಿನಲ್ಲಿ ರಾಗಿ, ಇತ್ಯಾದಿಗಳನ್ನು ಇಡಲು ಈಗಾಗಲೇ ಫುಡ್ ಅಂಡ್ ಸಿವಿಲ್ ಸಪ್ಲೈ ಡಿಪಾರ್ಟ್‌ಮೆಂಟ್‌ನವರಿಗೆ ಒಂದು ಗೋದಾಮು ಕೂಡ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಆರ್.ಎಂ.ಸಿ. ಮುಖಾಂತರ ಒಂದು ಗೋದಾಮಿಗೆ ಜಾಗ ಕೊಡಲು ಕೇಳಿದ್ದೇವೆ ಎಂದು ಹೇಳಿದರು. ಆ ಪ್ರಸ್ತಾವನೆ ನಮ್ಮ ಹತ್ತಿರ ಬಂದಿಲ್ಲ. ಆ ಪ್ರಸ್ತಾವನೆಯನ್ನು ಅಲ್ಲಿರತಕ್ಕಂಥ ಸಂಬಂಧಪಟ್ಟವರಿಗೆ ಕೊಡಲಿ. ಕೊಟ್ಟರೆ ವೇರ್‌ಹೌಸ್‌ಗೆ ಜಾಗ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲು ಬಯಸುತ್ತೇನೆ.

ಶ್ರೀ ಎಂ. ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ ಈಗಾಗಲೇ ನಾವು ಸುಮಾರು ಎರಡು ವರ್ಷಗಳಿಂದ ನಿರಂತರವಾಗಿ ಪತ್ರ ಬರೆದಿದ್ದೇವೆ. ಈ ಬಗ್ಗೆ ನಾನು ಸಂಬಂಧಪಟ್ಟ ನಿರ್ದೇಶಕರನ್ನೂ ಭೇಟಿಯಾಗಿದ್ದೇನೆ. ಈಗಾಗಲೇ ನಮ್ಮ ಆರ್,ಎಂ,ಸಿ, ಯಲ್ಲಿ ಒಂದು ಠರಾವನ್ನೂ ಸಹಾ ಮಾಡಿದ್ದಾರೆ. ಜಾಗವನ್ನು ಕೊಡಬೇಕು. ಜಾಗವನ್ನು ಪ್ರಿಸರ್ವ್ ಮಾಡಬೇಕೆಂದು ಠರಾವನ್ನು ಮಾಡಿದ್ದಾರೆ. ಆದರೆ ಸಂಬಂಧಪಟ್ಟ ಇಲಾಖೆಯ ವತಿಯಿಂದ ಸರ್ಕಾರೀ ಆದೇಶ ಹೊರಬಂದಿಲ್ಲ. ಒಂದು ಗೋದಾಮನ್ನು ಕೊಡಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವರು ಹೇಳುತ್ತಿದ್ದಾರೆ. ಅಲ್ಲಿ ನಮಗೆ ಯಾವುದೇ ಗೋದಾಮವನ್ನು ಕೊಟ್ಟಿಲ್ಲ. ಪ್ರೈವೇಟ್‌ನಲ್ಲಿ ಬಾಡಿಗೆಗೆ ತೆಗೆದುಕೊಂಡಿದ್ದಾರೆ. ಮತ್ತೊಂದು ವೈಶಿಷ್ಟ್ಯವೆಂದರೆ, ಟೀಚರ್ಸ್ ಕಟ್ಟಿರತಕ್ಕಂಥ ಒಂದು ಅಸೋಸಿಯೇಷನ್‌ನ್ನಿನಲ್ಲಿ ಬಿಲ್ಡಿಂಗನ್ನು ತೆಗೆದುಕೊಂಡಿದ್ದಾರೆ. ಆ ರೀತಿಯಾಗಬಾರದು. ಆರ್.ಎಂ.ಸಿ. ಯಾರ್ಡ್‌ನಲ್ಲಿ ಒಂದು ಸಪರೇಟ್ ಗೋದಾಮನ್ನು ಕಟ್ಟಿದರೆ ಅನುಕೂಲವಾಗುತ್ತದೆ. ಆಗ ರೈತರು ತಂದಂಥ ರಾಗಿ, ಭತ್ತವನ್ನು ಇಲ್ಲಿ ಇಡಲು ಅನುಕೂಲವಾಗುತ್ತದೆ. ಈಗ ಅದನ್ನು ಪ್ರೈಮರಿ ಸ್ಕೂಲ್ ಟೀಚರ್ಸ್ ಅಸೋಸೊಯೇಷನ್ನಿನ ಗುರುಭವನದಲ್ಲಿ ಸ್ಟಾಕ್ ಮಾಡುತ್ತಿದಾರೆ. ಇದು ಬಹಳ ವಿಪರ್ಯಾಸವಾಗಿದೆ. ಏಕೆಂದರೆ, ಅಲ್ಲಿ ಅದಕ್ಕೆ ಸೆಕ್ಯುರಿಟಿ ಇಲ್ಲ. ಆದ್ದರಿಂದ, ಅಲ್ಲಿ ಒಂದು ಉತ್ತಮವಾದ ಗೋದಾಮನ್ನು ನಿರ್ಮಾಣ ಮಾಡಿ ಅಲ್ಲಿ ಪ್ರಿಸರ್ವ್ ಮಾಡಲಿಕ್ಕೆ ಸರ್ಕಾರ ಮುಂದಾಗಬೇಕು ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ" : ಮಾನ್ಯ ಅಧ್ಯಕ್ಷರೆ, ತುರುವೇಕೆರೆಯಲ್ಲಿ ರೈತರು ಬೆಳೆಯತಕ್ಕಂಥ ದವಸಧಾನ್ಯಗಳಿಗೆ ಗೋದಾಮುಗಳ ಶಾರ್ಟೇಜ್ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದೂ ಕೂಡ ಅವರು ಹೇಳಿದ್ದಾರೆ. ನಮ್ಮ ವ್ಯಾಪ್ತಿಯಲ್ಲಿ ಏನು ಬರುತ್ತದೆ, ಅದನ್ನು ಆದಷ್ಟು ಬೇಗ ಇತ್ಯರ್ಥ ಮಾಡಿ ಅವರಿಗೆ ಅನುಕೂಲ ಮಾಡಿಕೊಡುವಂಥ ಕೆಲಸ ಮಾಡುತ್ತೇವೆ ಎಂದು ನಾನು ತಮ್ಮ ಮೂಲಕ ಅವರಿಗೆ ಹೇಳುತ್ತೇನೆ.

ಒಳನಾಡು ಮೀನುಗಾರರಿಗೆ ಆಗುತ್ತಿರುವ ತಾರತಮ್ಯ

53 (245) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಒಳನಾಡು ಮೀನುಗಾರರಿಗೆ ಸವಲತ್ತು ನೀಡುವಲ್ಲಿ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕರಾವಳಿ ಮೀನುಗಾರರಿಗಿಂತ ಮೂರು ಪಟ್ಟು ಜಾಸ್ತಿ ಇರುವ ಒಳನಾಡು ಮೀನುಗಾರರಿಗೆ ಕಳೆದ 3 ವರ್ಷಗಳಲ್ಲಿ ಸರ್ಕಾರ ಯಾವ ಯಾವ ರೀತಿಯ ಸೌಲಭ್ಯ ನೀಡಿದೆ (ಸಂಪೂರ್ಣ ವಿವರ ನೀಡುವುದು);

ಇ) ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) ಒಳನಾಡು ಮೀನುಗಾರರಿಗೆ ಸವಲತ್ತು ನೀಡುವಲ್ಲಿ ಯಾವುದೇ ತಾರತಮ್ಯವಾಗುತ್ತಿಲ್ಲ. ಒಳನಾಡು ಮೀನುಗಾರರ ಹಾಗೂ ಕರಾವಳಿ ಮೀನುಗಾರರ ಅಗತ್ಯತೆಗಳು ಬೇರೆ ಬೇರೆಯಾಗಿರುತ್ತವೆ. ಆದ್ದರಿಂದ ಒಳನಾಡು ಮೀನುಗಾರರ ಅಗತ್ಯತೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತದೆ.

ಆ) ಒಳನಾಡು ಮೀನುಗಾರರಿಗೆ 3 ವರ್ಷಗಳಿಂದ ಈ ಕೆಳಕಂಡ ಯೋಜನೆಗಳಡಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

1. ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು. ಗುತ್ತಿಗೆ ಪಡೆಯಲು ಬೇಡಿಕೆ ಇಲ್ಲದ ಜಲಸಂಪನ್ಮೂಲಗಳನ್ನು ಟೆಂಡರ್-ಕಂ- ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸುವುದು.

2. ಒಳನಾಡು ಮೀನುಗಾರಿಕೆ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ.

3. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ.

4. ಮೀನುಮರಿ ಉತ್ಪಾದನೆ ಪಾಲನೆ ಮತ್ತು ಹಂಚಿಕೆ

5. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆ ಅಭಿವ್ರದ್ಧಿ ಕಾರ್ಯಕ್ರಮ.

6. "ಮತ್ಸ್ಯಾಶ್ರಯ" ಯೋಜನೆಯಡಿ ವಸತಿ ಸೌಲಭ್ಯ.

7. ಮೀನು ಮಾರಾಟಕ್ಕಾಗಿ ಮತ್ತು ಮತ್ಸ್ಯವಾಹಿನಿಗೆ ಸಹಾಯ ಯೋಜನೆಯಡಿ ಸಹಾಯಧನ ಒದಗಿಸಲಾಗುತ್ತಿದೆ.

ಕಳೆದ 3 ವರ್ಷಗಳಲ್ಲಿ ಇ ಯೋಜನೆಯಡಿ ನೀಡಿರುವ ಅನುದಾನ ವೆಚ್ಚ ಮತ್ತು ಪ್ರಗತಿ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಒಳನಾಡು ಮೀನುಗಾರರಿಗೆ ನೀಡುವ ಸೌಲಭ್ಯದಲ್ಲಿ ಯಾವುದೇ ತಾರತಮ್ಯವಿಲ್ಲದಿದ್ದರೂ ಕೂಡ ಹೆಚ್ಚಿನ ಸೌಲಭ್ಯ ನೀಡುವ ನಿಟ್ಟಿನಲ್ಲಿ ಈ ಕೆಳಗಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಪರಿಶೀಲಿಸುತ್ತಿದೆ.

1. "ಮತ್ಸ್ಯ ಮಹಿಳಾ ಸ್ವಾವಲಂಬನ" ಯೋಜನೆಯಡಿ ಮೀನು ಮಾರಾಟದಲ್ಲಿರುವ ಮಹಿಳೆಯರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವಾಗಿ ತಲಾ ರೂ.10,000 ದುಡಿಯುವ ಬಂಡವಾಳ ನೀಡಲು ಯೋಜಿಸಲಾಗಿದೆ.

2. ಮೀನುಮರಿ ಉತ್ಪಾದನ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮೀನುಮರಿ ಸರಬರಾಜು ಮಾಡುವುದು.

3. ಒಳನಾಡು ಮೀನುಗಾರರಿಗೆ ಮೀನುಮರಿಗಳನ್ನು ರಿಯಾಯಿತಿ ದರದಲ್ಲಿ ನೀಡುವುದರ ಜೊತೆಗೆ ಉಚಿತವಾಗಿ ಸಾಗಾಣಿಕೆ ಮಾಡಿ ಒಳನಾಡು ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲು ಯೋಜಿಸಲಾಗಿದೆ.

4. ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಮಗ್ರವಾದ ಒಂದು ಹೊಸ ಮೀನುಗಾರಿಕೆ ನೀತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗಿದ್ದು ಈ ನೀತಿಯನ್ನು ಶೀಘ್ರ ಹೊರತರಲು ಯೋಜಿಸಲಾಗಿದೆ.

5. "ಮತ್ಸ್ಯಾಶ್ರಯ" ಯೋಜನೆಯಡಿ ಮೀನುಗಾರರಿಗೆ ಹೆಚ್ಚುವರಿ ಮನೆಗಳನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಧಾನ ಸಭಾ ಸದಸ್ಯರಿಂದ ಶ್ರೀ ಬಾಲರಾಜ್ ಎಸ್. ರವರ ಚುಕ್ಕೆ ಗುರುತಿನ ಪ್ರಶ್ನೆ

ಸಂಖ್ಯೆ 245ರ ಅನುಬಂಧ

ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಒಳನಾಡು ಮೀನುಗಾರಿಕೆಗೆ ಒದಗಿಸಿದ ಅನುದಾನ ವೆಚ್ಚ ಮತ್ತು ಪ್ರಗತಿಯ ಬಗ್ಗೆ.

(1) ಜಲಸಂಪನ್ಮೂಗಳ ವಿಲೆ

ಗುತ್ತಿಗೆ / ಟೆಂಡರ್	2002–03	2003–04	2004–05
ಕಂ ಹರಾಜುಗೆ ಸಂಖ್ಯೆ ನೀಡಿದ ಕರೆಗಳು	3781	2327	3483

(2) ಒಳನಾಡು ಈನುಗಾರಿಕೆ ಅಭಿವೃದ್ಧಿಗೆ ಸಹಾಯ

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ	ಭೌತಿಕ ಪ್ರಗತಿ
2002–03	55.25	41.59	260ಜನರಿಗೆ ಸಹಾಯಧನ ನೀಡಲಾಗಿದೆ 6.09 ಲಕ್ಷ ಗ್ರಾಸ್ ಕಾರ್ಪ್ ಫಿಂಗರ್‌ಲಿಂಗ್ಸ್ ಬಿತ್ತನೆ ಮಾಡಲಾಗಿದೆ. 286 ಲಕ್ಷ ಮೀನು ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಲಾಗಿದೆ.

2003-04	58.16	42.67	218 ಜನರಿಗೆ ಸಹಾಯಧನ ಒದಗಿಸಲಾಗಿದೆ. 9.91ಲಕ್ಷ ಗ್ರಾಸ್ ಕಾರ್ಪ್ ಫಿಂಗರ್‌ಲಿಂಗ್ಸ್ ಬಿತ್ತನೆ ಮಾಡಲಾಗಿದೆ. 4.22 ಲಕ್ಷ ಮೀನು ಮರಿಗಳನ್ನು ಉಚಿತವಾಗಿ ಸರಾಬರಾಜು ಮಾಡಲಾಗಿದೆ.
2004-05	52.25	54.79	221 ಜನರಿಗೆ ಸಹಾಯಧನ ನೀಡಲಾಗಿದೆ. 8.50ಲಕ್ಷ ಗ್ರಾಸ್ ಕಾರ್ಪ್ ಫಿಂಗರ್‌ಲಿಂಗ್ಸ್ ಬಿತ್ತನೆ ಮಾಡಲಾಗಿದೆ. 19.83 ಲಕ್ಷ ಮೀನು ಮರಿಗಳನ್ನು ಉಚಿತವಾಗಿ ಸರಾಬರಾಜು ಮಾಡಲಾಗಿದೆ.

(3) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ	ಭೌತಿಕ ಪ್ರಗತಿ
2002-03	25.00	25.00	ಹ್ಯಾಚರಿ ನಿರ್ಮಾಣವನ್ನುಪೂರ್ಣ
2003-04	75.00	75.00	ಗೊಳಿಸಲಾಗಿದೆ ಮತ್ತು 19
2004-05	43.97	43.97	ಕಿಯೋಸ್ಕಗಳನ್ನು ಪೂರ್ಣಗೊಳಿಸಲಾಗಿದೆ.

(3) ಮೀನು ಮರಿ ಉತ್ಪಾದನೆ, ಪಾಲನೆ ಮತ್ತು ಹಂಚಿಕೆ

(ರೂ.ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ	ಭೌತಿಕ ಪ್ರಗತಿ
2002-03	92.36	58.68	936.13 ಪ್ರೈ ಮೀನು ಮರಿ ಉತ್ಪಾದಿಸಲಾಗಿದೆ. 641.50 ಲಕ್ಷ ಬಿತ್ತನೆ ಮರಿ ದಾಸ್ತಾನು ಮಾಡಲಾಗಿದೆ.
2003-04	85.54	54.66	783.95 ಲಕ್ಷ ಪ್ರೈ ಮೀನು ಮರಿ ಉತ್ಪಾದಿಸಲಾಗಿದೆ. 475.86 ಲಕ್ಷ ಬಿತ್ತನೆ ಮರಿ ಧಾಸ್ತಾನು ಮಾಡಲಾಗಿದೆ.
2004-05	71.92	64.10	1038.30 ಲಕ್ಷ ಪ್ರೈ ಮೀನು ಮರಿ ಉತ್ಪಾದಿಸಲಾಗಿದೆ. 896.25 ಲಕ್ಷ ಮೀನು ಮರಿ ಬಿತ್ತನೆ ಮಾಡಲಾಗಿದೆ.

(4) ಮೀನು ಕೃಷಿಕರಿಗೆ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆ ಅಭಿವೃದ್ಧಿ

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ	ಭೌತಿಕ ಪ್ರಗತಿ
2002–03	192.61	145.99	28.50 ಲಕ್ಷ ಮೀನು ಮರಿ ಉತ್ಪಾದನೆ ಮಾಡಲಾಗಿದೆ 1637 ಕೆರೆಗಳಲ್ಲಿ 1991 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಲಾಗಿದೆ 740 ಕೃಷಿಕರಿಗೆ ತರಬೇತಿ ನೀಡಲಾಗಿದೆ 1842.96 ಹೆಕ್ಟೇರ್ ಜಲ ಪ್ರದೇಶವನ್ನು ಕೃಷಿಗೆ ಅಳವಡಿಸಲಾಗಿದೆ.
2003–04	185.96	151.96	18.00 ಲಕ್ಷ ಮೀನು ಮರಿ ಉತ್ಪಾದನೆ ಮಾಡಲಾಗಿದೆ 1448 ಕೆರೆಗಳಲ್ಲಿ 97.46 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಲಾಗಿದೆ 655 ಕೃಷಿಕರಿಗೆ ತರಬೇತಿ ನೀಡಲಾಗಿದೆ 2339.82 ಹೆಕ್ಟೇರ್ ಜಲ ಪ್ರದೇಶವನ್ನು ಕೃಷಿಗೆ ಅಳವಡಿಸಲಾಗಿದೆ.
2004–05	186.19	144.80	29.75 ಲಕ್ಷ ಮೀನು ಮರಿ ಉತ್ಪಾದನೆ ಮಾಡಲಾಗಿದೆ 2166 ಕೆರೆಗಳಲ್ಲಿ 16681 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಲಾಗಿದೆ 557 ಕೃಷಿಕರಿಗೆ ತರಬೇತಿ ನೀಡಲಾಗಿದೆ 2941.41 ಹೆಕ್ಟೇರ್ ಜಲ ಪ್ರದೇಶವನ್ನು ಕೃಷಿಗೆ ಅಳವಡಿಸಲಾಗಿದೆ.

(6) ಮತ್ಸ್ಯ ಆಶ್ರಯ ಯೋಜನೆಯಡಿ ವಸತಿ ಸೌಲಭ್ಯ

ಮತ್ಸ್ಯ ಆಶ್ರಯ 1 ಮತ್ತು 2ರಲ್ಲಿ ಒಟ್ಟು 10.000 ಮನೆಗಳು ಮಂಜೂರಾಗಿದ್ದು. ಈ ಪೈಕಿ ಒಳನಾಡು ಮೀನುಗಾರರಿಗೆ 6786 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ 2004–05ನೇ ಸಾಲಿನ ಅಂತ್ಯದವರೆಗೆ 4251 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಉಳಿದ 2535 ಮನೆಗಳು ನಿರ್ಮಾಣದ ವಿವಿಧ ಹಂತದಲ್ಲಿದೆ

ಮತ್ಸ್ಯ ಆಶ್ರಯ ಯೋಜನೆಯಡಿ ಒದಗಿಸಲಾದ ನೋಷನಲ್ ಅನುದಾನ ಮತ್ತು ವೆಚ್ಚದ ವಿವರ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	ವೆಚ್ಚ
2002–03	238.0	187.28
2003–04	272.00	255.93
2004–05	251.60	270.64

(5) ಮೀನು ಮಾರಾಟಕ್ಕಾಗಿ ಮತ್ತು ಮತ್ಸ್ಯವಾಹಿನಿಗೆ ಸಹಾಯ

(ರೂ. ಲಕ್ಷಗಳಲ್ಲಿ)

ವರ್ಷ	ಅನುದಾನ	(ವೆಚ್ಚ)	ಭೌತಿಕ ಪ್ರಗತಿ
2002–03	2.50	2.50	175 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.
2003–04	2.15	2.15	221 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.
2004–05	2.50	2.50	181 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಗೆ ನೀಡಿದ ಒಟ್ಟು ಯೋಜನಾ ಅನುದಾನ ಮತ್ತು ಅದರಲ್ಲಿ ಒಳನಾಡು ಮೀನುಗಾರಿಕೆ ನೀಡಿದ ಸೌಲಭ್ಯಗಳಿಗೆ ಒದಗಿಸಿದ ಅನುದಾನದ ವಿವಿರ ಕೆಳಕಂಡಂತೆ ನೀಡಲಾಗಿದೆ.

ವರ್ಷ	ಮೀನುಗಾರಿಕೆ ಇಲಾಖೆ ಯೋಜನೆಗಳಿಗೆ ಒಟ್ಟು ಅನುದಾನ	ಇದರಲ್ಲಿ ಒಳನಾಡು ಮೀನುಗಾರಿಕೆಗೆ ನೀಡಿದ ಅನುದಾನ
2002–03	1920.77	605.72
2003–04	1677.01	678.81
2004–05	2590.81	608.43

ಶ್ರೀ ಎಸ್. ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಳನಾಡು ಮೀನುಗಾರರಿಗೆ ಏನು ಸವಲತ್ತನ್ನು ನೀಡಿದ್ದೇವೆ ಎಂದು ನನಗೆ ಉತರವನ್ನು ಕೊಟ್ಟಿದ್ದಾರೆ. ಅದು 2004–05ಕ್ಕೆ ಅಂದರೆ ಕಳೆದ ಮಾರ್ಚ್‌ವರೆಗೆ ಸೀಮಿತವಾಗಿದೆ. ಅದಾದನಂತರ, ಈ ಸಾಲಿಗೆ ಅಂದರೆ 2005–06ಕ್ಕೆ, ಈಗಾಗಲೇ ಮಾರ್ಚ್ ಅಂತ್ಯಕ್ಕೆ ಬಂದಿದ್ದೇವೆ, ಈ ಸಾಲಿನಲ್ಲಿ ಏನು ಕೊಟ್ಟಿದ್ದೇವೆ ಎನ್ನುವ ವಿಷಯವನ್ನು ಅವರು ತಿಳಿಸಿಲ್ಲ. ನಾನು, ಕರಾವಳಿ ಮೀನುಗಾರರ ವಿರುದ್ಧವಾಗಿ ಮಾತನಾಡುತ್ತಿಲ್ಲ. ನಮ್ಮ ಒಳನಾಡು ಮೀನುಗಾರರ ಹಕ್ಕನ್ನು ನಾನು ಕೇಳುತ್ತಿದ್ದೇನೆ.

ಈಗ ಒಳನಾಡು ಮೀನುಗಾರರಲ್ಲಿ ಸುಮಾರು 5 ಲಕ್ಷ 13 ಸಾವಿರ ಜನ ಈ ಕೃಷಿಯನ್ನು ನಂಬಿದ್ದಾರೆ. ಕರಾವಳಿಯಲ್ಲಿ ಸುಮಾರು 2 ಲಕ್ಷ ಮೀನುಗಾರರಿದ್ದಾರೆ. ಸುಮಾರು ಮೂರು ಪಟ್ಟು ಇರತಕ್ಕಂಥ ನಮ್ಮ ಒಳನಾಡು ಮೀನುಗಾರರಿಗೆ ನೀವು ಕೊಟ್ಟಿರತಕ್ಕಂಥದ್ದರಲ್ಲಿ ಒಂದು comparison ಕೊಡಬೇಕಾಗಿತ್ತು. ಕನಿಷ್ಟ ಪಕ್ಷ ಕರಾವಳಿ ಮತ್ತು ಒಳನಾಡು ಮೀನುಗಾರರಿಗೆ ಏನೇನು ವ್ಯತ್ಯಾಸಗಳಿವೆ ಎಂಬ ಅಂಶವನ್ನು ತೋರಿಸಬೇಕಾಗಿತ್ತು. ಇಲ್ಲಿ ಮಹಿಳಾ ಮೀನುಗಾರರಿಗೆ "ಮತ್ಸ್ಯ ಮಹಿಳಾ ಸ್ವಾವಲಂಬನೆ" ಎನ್ನುವ ವಿಚಾರವನ್ನು ತಿಳಿಸಿದ್ದಾರೆ. ನಮ್ಮಲ್ಲಿ ಮೀನುಗಾರರ ಸಂಖ್ಯೆ ಬಹಳ ಕಡಿಮೆ ಇದೆ. ಏಕೆಂದರೆ, ಮಹಿಳೆಯರು ಈ ಕೃಷಿಯಲ್ಲಿ ತೊಡಗಿಸಿಕೊಳ್ಳತಕ್ಕಂಥದ್ದು ಬಹಳ ಕಡಿಮೆ ಇರುವುದರಿಂದ ಆ ಯೋಜನೆಯನ್ನು ಮಾಡಿ 10 ಸಾವಿರ ರೂಪಾಯಿಗಳನ್ನು ದುಡಿಯುವ ಬಂಡವಾಳವಾಗಿ ಕೊಡುತ್ತೇವೆಂದರೆ ಅದನ್ನು ತೆಗೆದುಕೊಳ್ಳಲಿಕ್ಕೆ ನಮ್ಮಲ್ಲಿ ದಿಕ್ಕಿಲ್ಲ. ನೀವು ಎಷ್ಟು ಜನರಿಗೆ ಕೊಟ್ಟಿದ್ದೀರಿ? ಎಷ್ಟು ಜನರಿಗೆ ಕೊಡುತ್ತೀರಿ? ಅದನ್ನು ಕೊಡುವ ಸಾಧ್ಯತೆ ಇದೆಯೇ? ಇಂಥ ಯೋಜನೆಗಳನ್ನು ರೂಪಿಸುವುದಕ್ಕಿಂಥ ಮುಂಚೆ ಒಳನಾಡು ಮೀನುಗಾರಿಕೆಯಲ್ಲಿ ಇರತಕ್ಕಂಥವರ ಬಗ್ಗೆ ಅಥವಾ ಆ ವಿಚಾರಗಳನ್ನು ಗೊತ್ತಿರುವವರ ಜೊತೆ ಚರ್ಚೆ ಮಾಡಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ, ಕಳೆದ ನಾಲ್ಕೈದು ವರ್ಷಗಳಿಂದ ಬರಗಾಲ ಪ್ರಾರಂಭವಾಯಿತು. ಮೂರು ವರ್ಷಗಳ ತರುವಾಯ ವಿಪರೀತ ಮಳೆ ಬಂತು. ಮೀನುಗಾರರು ಬರದಿಂದ ಸತ್ತುಹೋದರು. ಅನಂತರ ಮಳೆ ಬಂದು ತಮ್ಮ ಎಲ್ಲಾ ಮೀನುಗಳು ನೀರು ಹರಿಯುವ ಮುಖಾಂತರ ಮೀನು ಮರಿಗಳು ಹೋಯಿತು. ಅನೇಕ ಕೆರೆಕಟ್ಟೆಗಳು ಒಡೆದು ಹೋದವು. ಯಾವುದಕ್ಕೂ ಪರಿಹಾರವನ್ನು ಕೊಟ್ಟಿಲ್ಲ, ಮೀನುಗಾರರು ಸಹ ಕೃಷಿಕರು ಇಂಥ ಸಂದರ್ಭಗಳಲ್ಲಿ ಒಂದು ನೀತಿಯನ್ನು ರೂಪಿಸಿ, ಕೃಷಿಗೆ ಯಾವ ರೀತಿ ಯೋಜನೆಯನ್ನು ಕಲ್ಪಿಸಿಕೊಡಲಾಗುತ್ತದೋ ಅದೇ ರೀತಿ ಒಳನಾಡು ಮೀನುಗಾರರಿಗೆ ಕಲ್ಪಿಸುವುದರ ಅಗತ್ಯತೆ ಎಷ್ಟಿದೆ ಎನ್ನುವುದನ್ನು ಸರ್ಕಾರ ಮನಗಾಣಬೇಕು. ಅದರ ಬಗ್ಗೆ ಕೂಡ ತಾವು ಉತ್ತರ ಕೊಡಬೇಕು. ಅದಲ್ಲದೆ, ಈ ಸಾಲದ ಮರಿಯನ್ನು ತೆಗೆದುಕೊಂಡು ಅವರು ಯಾವ ರೀತಿ ಮಾಡುತ್ತಿದ್ದಾರೆ, ಅವರಿಗೆ ಕೊಡತಕ್ಕಂಥ ಪರಿಹಾರಗಳೇನು? ಇವತ್ತು ಸಹಕಾರ ಸಂಘಗಳು ದಿವಾಳಿ ಅಂಚಿಗೆ ಬಂದಿವೆ. ಈ ಮಾರ್ಚ್, ಏಪ್ರಿಲ್ ತಿಂಗಳು ಕಳೆಯುತ್ತಿದ್ದ ಹಾಗೆ ಆ ಸಂಘಗಳನ್ನು ಮುಚ್ಚುವಂಥ ಸ್ಥಿತಿಗೆ ಬರುತ್ತದೆ. ಹಾಗಾಗಿ ಬಡ ಮೀನುಗಾರರಿಗೆ ಏನು ನ್ಯಾಯ ದೊರಕಿಸಿಕೊಟ್ಟ ಹಾಗೆ ಆಗುತ್ತದೆ? ಇದೆ ಬಗ್ಗೆ ಕೂಡ ತಾವು ಉತ್ತರ ಕೊಡಬೇಕಾಗುತ್ತದೆ. ಇನ್ನೊಂದು ಬಹಳ ಪ್ರಮುಖವಾದ ವಿಚಾರವೇನೆಂದರೆ, ಕರಾವಳಿಯಂಥ ಜಾಗಗಳಲ್ಲಿ ಸಮುದ್ರ ದಂಡೆ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪ್ರತಿ ವರ್ಷದಲ್ಲಿ ಹಣವನ್ನು ಬಿಡುಗಡೆ ಮಾಡಿಕೊಂಡು ಬರುತ್ತಿದೆ. ಆದರೆ ಒಳನಾಡು ಮೀನುಗಾರಿಕೆ ನಂಬಿರುವ ಕೆರೆಗಳ ಅಂಚಿನಲಿರುವ್ವ ಯಾವುದೇ ರಸ್ತೆಗಳು ತಿರುಗಾಡಲಿಕ್ಕೂ ಯೋಗ್ಯವಾಗಿಲ್ಲದಿರತಕ್ಕಂಥ ರಸ್ತೆಗಳಿವೆ. ಇವತ್ತು ಜಿಲ್ಲಾ

ಪಂಚಾಯತ್‌ನ ರಸ್ತೆಗಳನ್ನು ತಾವು ನೋಡಬಹುದು ಜಿಲ್ಲಾ ಪಂಚಾಯತ್ ರಸ್ತೆಗಳು ಅದರ ಪರಿಸ್ಥಿತಿ ಹೇಳಲಿಕ್ಕೆ ಅಸಾಧ್ಯಾವಾದಂಥ ಸ್ಥಿತಿಯಲ್ಲಿ ಇರುವಾಗಲೂ ಈ ಕೆರೆಕಟ್ಟೆಗಳಿಗೆ ಹೋಗತಕ್ಕಂಥ ರಸ್ತೆಗಳಲ್ಲಿ ಒಂದು ವಾಹನ ಕೂಡ ಸಂಚಾರ ಮಾಡಲಿಕ್ಕೆ ಯೋಗ್ಯಾವಾಗಿಲ್ಲ ಮೀನನ್ನು ಹಿಡಿದ ತಕ್ಷಣ 3 ಗಂಟೆಯೊಳಗೆ ಮಾರುಕಟ್ಟೆಗೆ ಸಾಗಿಸಬೇಕು. ಅಥವಾ ಅದಕ್ಕೆ ಬೇಕಾದ ಪೂರಕ ವ್ಯವಸ್ಥೆ ನಾವು ಮಾಡಬೇಕು. ಇದಕ್ಕೆ ಸಾಧ್ಯವಿಲ್ಲದಿರುವಾಗ ನೀವು ಒಳನಾಡು ಮೀನುಗಾರರಿಗೆ ಯಾವ ನ್ಯಾಯವನ್ನು ಒದಗಿಸಿಕೊಟ್ಟು ರಸ್ತೆ ಮಾಡಿಕೊಟ್ಟಿದ್ದೀರಿ ಎನ್ನುವ ವಿಚಾರವನ್ನು ಸಹ ತಾವು ಪ್ರಸ್ತಾಪ ಮಾಡಬೇಕು. ಅದಲ್ಲದೆ, "ಮತ್ಸ್ಯಾಶ್ರಯ" ಯೋಜನೆಯಡಿ ಮನೆಯನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಸಮಾರು 10 ಸಾವಿರ ಮನೆಗಳಲ್ಲಿ 6 ಸಾವಿರದ......

ಅಧ್ಯಕ್ಷರು : ಮಾನ್ಯ ಬಾಲರಾಜುರವರೇ, ಪ್ರಶ್ನೆ ಕೇಳುತ್ತಿದ್ದೀರಾ ಅಥವಾ ಭಾಷಣ ಮಾಡುತ್ತಿದ್ದೀರಾ? ಏನಾಗಿದೆ ಎಂದರೆ, ಈ ಪ್ರಶ್ನೋತ್ತರ ಕಾಲದಲ್ಲಿ ಒಂದು ರೀತಿ ಪೀಠಿಕೆ ಹಾಕುವುದಕ್ಕಾಗಿಯೇ 10 ನಿಮಿಷ ತೆಗೆದುಕೊಳ್ಳುತ್ತೀರಿ. ಈ ತರಹ ಆದರೆ ಪ್ರಶ್ನೋತ್ತರ ನಡೆಸುವುದು ಕಷ್ಟವಾಗುತ್ತದೆ. ಇಷ್ಟೊಂದು ಉಪ ಪ್ರಶ್ನೆಗಳನ್ನು ಹೇಳುತ್ತಾ ಹೋದರೆ ಹೇಗೆ?

ಶ್ರೀ ಎಸ್. ಬಾಲರಾಜು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಒಟ್ಟಿಗೆ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಅವರು ಕೊಟಿರತಕ್ಕಂಥ ಉತ್ತರಕ್ಕೆ ಸಂಬಂಧಿಸಿದಂತೆ ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆಯೇ ಹೊರತು ಅತಿಯಾದ ಪ್ರಶ್ನೆಗಳನ್ನು ನಾನು ಕೇಳುತ್ತಿಲ್ಲ. ಇಷ್ಟು ದೊಡ್ಡ ಉತ್ತರವನ್ನು ಕೊಟ್ಟರೆ ನಾವು ಪ್ರಶ್ನೆಗಳನ್ನು ಕೇಳಿ clear ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸರ್ಕಾರ ಕೊಟ್ಟ ಉತ್ತರದಿಂದಾಗಿ ಇಷ್ಟು ಪ್ರಶ್ನೆಯನ್ನು ಕೇಳಲಿಕ್ಕೆ ಅವಕಾಶವಾಗಿದೆ.

ಅಧ್ಯಕ್ಷರು : ಆಯಿತು. ಉಪ ಪ್ರಶ್ನೆಗಳನ್ನು ಬೇಗ ಕೇಳಿ. ಆದಷ್ಟು brief ಆಗಿ ಕೇಳಿ.

ಶ್ರೀ ಎಸ್. ಬಾಲರಾಜು : ಮೂರೂವರೆ ವರ್ಷ ನಾಲ್ಕು ವರ್ಷಗಳಿಂದ ಮನೆಯನ್ನು ಕೊಟ್ಟಿದ್ದೀರಿ.10 ಸಾವಿರ ಮನೆಗಳಲ್ಲಿ 6 ಸಾವಿರದ 786 ಮನೆಗಳನ್ನು ಒಳನಾಡು ಮೀನುಗಾರರಿಗೆ ಕೊಟ್ಟಿದ್ದೀರಿ. ಅದರಲ್ಲಿ ಇನ್ನೂ 2535 ಮನೆಗಳು ಪೂರ್ಣವಾಗಬೇಕಾಗಿದೆ. ಮೂರೂವರೆ ವರ್ಷಗಳಲ್ಲಿ ಅದು ಪೂರ್ಣವಾಗುವುದಕ್ಕೆ ಸಾಧ್ಯವಾಗಿಲ್ಲ ಏಕೆ? ಅದಕ್ಕೆ ಕಾರಣಗಳೇನು? ಒಂದು ಮನೆಯನ್ನು ಕಟ್ಟಲಿಕ್ಕೆ ಎಷ್ಟು ವರ್ಷ ಬೇಕಾಗುತ್ತದೆ? ದಯಮಾಡಿ ಇನ್ನೆಷ್ಟು ವರ್ಷ ಬೇಕೆಂದು ಹೇಳಿದರೆ ಅದಕ್ಕೆ ನಾವು ಯೋಚನೆ ಮಾಡಬಹುದು. ಏಕೆಂದರೆ ಬಡ ಮೀನುಗಾರರಿಗೆ ಮನೆಗಳನ್ನು ಕಟ್ಟಿಕೊಡುವ ಸಂದರ್ಭದಲ್ಲಿ ನೀವು ಅನುಸರಿಸುವ ಮಾನದಂಡ ಏನು? ಎಂಬುದನ್ನು ಕೂಡ ನಮ್ಮ ಗಮನಕ್ಕೆ ಬರಬೇಕು. ಕೊನೆಯದಾಗಿ, ಸಹಕಾರ ಸಂಘಗಳಿಗೆ ಸಾಲದ ಮೇಲಿನ ಬಡ್ಡಿ ಕೂಡ ಮನ್ನಾ ಮಾಡಬೇಕು. ಜೂನ್ ಜುಲೈ ತಿಂಗಳುಗಳಲ್ಲಿ ಮೀನುಕೃಷಿ ಮಾಡಲಾಗುತ್ತದೆ ಮೀನನ್ನು ಹಿಡಿಯುವುದು ಫೆಬ್ರವರಿ, ಮಾರ್ಚ್, ಏಪ್ರಿಲ್, ತಿಂಗಳುಗಳಲ್ಲಿ ಈ ಮೂರು ತಿಂಗಳಲ್ಲಿ ಮೀನುಗಾರಿಕೆ ಕೃಷಿ ಮಾಡುತ್ತಾರೆ.

ಈಗ ನೀವು ಏಪ್ರಿಲ್ ತಿಂಗಳಲ್ಲಿಯೇ ಹಣ ಕಟ್ಟಬೇಕೆಂದು ಹೇಳಿದರೆ ಏಪ್ರಿಲ್ ತಿಂಗಳಲ್ಲಿ ಹಣ ಕಟ್ಟುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ? ತಾವು ದಯಮಾಡಿ ಜೂನ್ ತಿಂಗಳ ತನಕ ಅವರಿಗೆ ಅವಕಾಶ ಕಲ್ಪಿಸಿಕೊಡಬೇಕು. ಬಡ್ಡಿ ಮನ್ನಾ ಮಾಡಬೇಕು. ಜೂನ್ ತಿಂಗಳ ಒಳಗೆ ಕಟ್ಟಿದವರಿಗೆ ಸಂಪೂರ್ಣವಾದ ವಿನಾಯಿತಿಯನ್ನೂ ಕೂಡ ನೀಡುವ ಅವಶ್ಯಕತೆ ಇದೆ. ಅಂತಿಮವಾಗಿ ಮಾನ್ಯ ಸಚಿವರಿಗೆ ನಾನು ಮನವಿ ಮಾಡುವುದೇನೆಂದರೆ, ಇವತ್ತು 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೀನುಗಾರಿಕೆ ನಡೆಯುತ್ತಿದೆ. ಮೀನುಗಾರಿಕೆ ನಡೆಯುತ್ತಿರುವ 3 ಲಕ್ಷ ಹೆಕ್ಟೇರ್‌ಗೆ ಒಂದು 'ಜಲ ಪ್ರಾಧಿಕಾರವನ್ನು' ಸ್ಥಾಪನೆ ಮಾಡಿ ಜಲಾಶಯಗಳ ಸಮಗ್ರ ಅಭಿವೃದ್ಧಿ ಮಾಡಿದರೆ ಮಾತ್ರ ಆ ಮೀನುಗಾರರು ಮುಂದಿನ ದಿವಸಗಳಲ್ಲಿ ಉಳಿದುಕೊಳ್ಳುತ್ತಾರೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ ಎನ್ನುವ ವಿಚಾರವನ್ನು ತಿಳಿಸಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ನಾಗರಾಜ ಶೆಟ್ಟಿ : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಮಿತ್ರ ಸದಸ್ಯರು ಬಹಳಷ್ಟು ವಿಚಾರಗಳನ್ನು ಮುಂದಿಟ್ಟಿದ್ದಾರೆ. ಈಗಾಗಲೇ ಹೇಳಿದ ಹಾಗೆ ಕರಾವಳಿ ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಯಾವುದೇ ತಾರತಮ್ಯವಿಲ್ಲ ಸರ್ಕಾರ ಈಗಾಗಲೇ ಬೇಕಾದಂಥ ಅನೇಕ ಯೋಜನೆಗಳನ್ನು ಕೈಗೊಂಡಿದೆ. ಅನೇಕ ಸಲಹೆಗಳನ್ನು ಅವರು ಕೊಟ್ಟಿದ್ದಾರೆ. ಮುಂದಿನ ದಿವಸಗಳಲ್ಲಿ ಆ ಬಗ್ಗೆ ಕೂಡ ನಾನು ಕ್ರಮ ಕೈಗೊಳ್ಳುತ್ತೇನೆಂದು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ. ಒಂದ್ನಿಮಿಷ ಮಾತನಾಡುತ್ತೇನೆ. ಮೀನುಗಾರಿಕೆ ಬಹಳ ಪ್ರಮುಖವಾದಂಥದ್ದು.

ಅಧ್ಯಕ್ಷರು: ಆಗುವುದಿಲ್ಲ ಎಲ್ಲವೂ ಪ್ರಮುಖವಾದ ಪ್ರಶ್ನೆಗಳೇ ಆಗಿವೆ. ಆದರೆ ನಾವು ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಯಲ್ಲಿ ಮುಗಿಸಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರ ಸಮಸ್ಯೆ ಪರಿಹಾರ ಮಾಡಲಿಕ್ಕೆ ಒಂದು ಉಪ ಪ್ರಶ್ನೆಯನ್ನು ಕೇಳಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಮಾನ್ಯ ಬಾಲರಾಜುರವರು Lake Authority ಮಾಡಿ ಎಂದು ಕೇಳಿದ್ದಾರೆ. ಈಗಾಗಲೇ ಒಂದು Lake Authority ಇದೆ. Lake Authority Forest Department ನಲ್ಲಿದೆ ಮೀನುಗಾರರಿಗೆ ಬೆಂಗಳೂರು ಸುತ್ತಮುತ್ತ ಇರುವ ಕೆರೆಗಳಲ್ಲಿ ಮೀನು ಹಿಡಿಯುವುದಕ್ಕೆ ಅರಣ್ಯ ಇಲಾಖೆಯವರು ಬಿಡುತ್ತಿಲ್ಲ. ಯಾವ ಕೆರೆಗಳನ್ನು ಮೀನುಗಾರರಿಗೆ Lease ನಲ್ಲಿ ಕೊಟ್ಟಿದ್ದಾರೆ, ಅದರಲ್ಲಿ ಇವರು weeds ಅನ್ನು ತೆಗೆಯುವುದಿಲ್ಲ Weeds ತೆಗೆದು ಇವರು ಮೀನುಮರಿಯನ್ನು ಬಿಟ್ಟಿದ್ದ ಆ ಮೀನನ್ನು ಹಿಡಿಯಲಿಕ್ಕೆ ಅವರು ಬಿಡುತಿಲ್ಲ ಅದಕ್ಕೋಸ್ಕರ ಆ Lake Authority ಯಿಂದ fisheries right ಅನ್ನು ವಾಪಸ್ಸು ಮೀನುಗಾರಿಕೆ ಇಲಾಖೆಯಲ್ಲಿ ಇಟ್ಟುಕೊಳ್ಳಬೇಕೆಂದು ತಮ್ಮ ಮುಖೇನ ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಡಾ: ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೆ, ಮೀನುಗಾರರ ವಿಚಾರವಾಗಿ ಸ್ನೇಹಿತರಾದ ಮಾನ್ಯ ಬಾಲರಾಜುರವರು ಒಳ್ಳೆಯ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದಾರೆ. ಬಹಳ ಸಂತೋಷ. ಆದರೆ ಈ ರಾಜ್ಯದಲ್ಲಿ ಮೀನುಗಾರರ ಬದುಕು, ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವರಿಗೆ

ವಾಸ ಮಾಡಲಿಕ್ಕೆ ಮನೆ ಇಲ್ಲದಿರುವ ಪರಿಸ್ಥಿತಿ ಇದೆ. ಅಂಥ ಪರಿಸ್ಥಿಯನ್ನು ಹೋಗಲಾಡಿಸಲು ದಯಮಾಡಿ ಸರ್ಕಾರದ ವತಿಯಿಂದ ಏನಾದರೂ ಒಳ್ಳೆಯ ಮನೆಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಅವರು ಬದುಕಲಿಕ್ಕೆ, ವಾಸ ಮಾಡಲಿಕ್ಕೆ ನಿವೇಶನಗಳು ಕೂಡ ಇಲ್ಲದಿರುವ ಬಹಳಷ್ಟು ಮಂದಿ ಇದ್ದಾರೆ. ಕೂಲಿ ಮಾಡತಕ್ಕಂಥವರು ಇದ್ದಾರೆ. ಅವರಿಗೆ ಒಳ್ಳೆಯ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ನಾಗರಾಜಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಮಾನ್ಯ ಹೆಗ್ಡೆಯವರು ಹೇಳಿದ ಪ್ರಶ್ನೆಗೆ ಸಂಬಂದಪಟ್ಟಂತೆ ಹೇಳುವುದಾದರೆ, Lake Authority ಯವರು ನಮ್ಮ ಅನೇಕ ಕೆರೆಗಳನ್ನು ತೆಗೆದುಕೊಂಡು ಆ Authority under ನಲ್ಲಿ ಅದನ್ನು Clean ಮಾಡುತ್ತಿದ್ದಾರೆ. ನಮ್ಮ ಮೀನುಗಾರರು, ಮೀನುಗಾರಿಕೆ ಮಾಡಲು ಈಗ ಅವರಿಗೆ ಅಡಚಣೆ ಬರುತ್ತಿದೆ. ಅದರ ಬಗ್ಗೆ ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಹಾಗೆಯೇ, ನಮ್ಮ ಇನ್ನೊಬ್ಬ ಆತ್ಮೀಯರು ಹೇಳಿದ ಹಾಗೆ ಸಂಬಂಧಪಟ್ಟ ಎಲ್ಲಾ ಒಳನಾಡಿನ ಸದಸ್ಯರನ್ನು ಕರೆಸಿ ಈ ಒಳನಾಡು ಮೀನುಗಾರಿಕೆ ಬಗ್ಗೆ ಸಂಪೂರ್ಣ ವ್ಯವಸ್ಥಿತ ರೀತಿಯ ಒಂದು ಕಾರ್ಯಕ್ರಮವನ್ನು ನಿರೂಪಣೆ ಮಾಡುತ್ತೇನೆ.

ರಾಜ್ಯದ ವಿವಿಧ ಜಿಲ್ಲೆಯ ರೈತರಿಗೆ ಬೆಳೆ ವಿಮೆ ಹಣವನ್ನು ಪಾವತಿಸುವಲ್ಲಿ ವಿಳಂಬ

54 (273) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) (ಕೃಷಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಜಿಲ್ಲೆಯ ರೈತರಿಗೆ ಬೆಳೆ ವಿಮೆ ಯೋಜನೆಯಡಿಯಲ್ಲಿ ಕಳೆದ ವರ್ಷದಿಂದ ಇಲ್ಲಿಯವರಿವೆಗೆ ಪಾವತಿ ಮಾಡಲಾದ ಹಣದ ಮೊತ್ತವೆಷ್ಟು (ಜಿಲ್ಲಾವಾರು ಅಂಕಿ ಅವಕಾಶಗಳನ್ನು ಒದಗಿಸುವುದು);

ಆ) ಬೆಳೆ ವಿಮೆ ಪಾವತಿಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು):

ಅ) ಬೆಳೆ ವಿಮೆ ಯೊಜನೆಯಡಿ ಕಳೆದ ವರ್ಷದಿಂದ ಇಲ್ಲಿಯವರೆಗೆ 505.20 ಲಕ್ಷ ರೂ ಬೆಳೆವಿಮಾ ನಷ್ಟ ಪರಿಹಾರ ಪಾವತಿಸಿದ್ದು ಜಿಲ್ಲಾವಾರು ವಿವಿರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು, 2004–05ನೇ ಸಾಲಿನ ಬೆಳೆವಿಮಾ ನಷ್ಟ ಪರಿಹಾರ ವಿತರಿಸುವಲ್ಲಿ ಬೆಳೆ ಇಳುವರಿ ಮಾಹಿತಿಯನ್ನ ಸಂಗ್ರಹಿಸಿ ಬೇಳೆ ಇಳುವರಿ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸಿ ಬೆಳೆ ವಿಮಾ ಸಂಸ್ಥೆಗೆ ಒದಗಿಸುವಲ್ಲಿ ವಿಳಂಭವಾಗಿರುತ್ತದೆ.

ಇ) ಇನ್ನು ಮುಂದೆ ಇಳುವರಿ ಮಾಹಿತಿಯನ್ನು ನಿಗಧಿತ ಸಮಯದೊಳಗೆ ವಿಮಾ ಕಂಪನಿಗೆ ನೀಡಲು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ಸೂಕ್ತ ಸೂಚನೆ ನೀಡಲಾಗಿದೆ.

ಅನುಬಂಧ-1

ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ 2003-04ನೇ ಸಾಲಿನ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸಿರುವ ವಿವರಗಳು

[illegible]

[illegible]	[illegible]	[illegible]				[illegible]				[illegible]				[illegible]			
		[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
1	[illegible]	704	1.44	130	1.74	31	0.01	0	0.00	0	0.00	0.00	0.00	793	1.43	130	1.74
2	[illegible]	44617	146.29	19520	704.97	110220	112.62	103982	2336.84	278	1.12	154.00	2.73	155114	220.03	123636	3366.54
3	[illegible]	5746	43.19	816	33.91	6785	9.49	2549	42.73	298	1.97	14.00	0.79	13829	33.63	3379	117.45
4	[illegible]	79946	87.82	13789	212.17	4955	4.22	693	4.87	0	0.00	0.00	0.00	84981	92.04	14082	317.04
5	[illegible]	7927	37.10	1967	48.02	283385	293.62	200177	3678.43	100	0.37	41.00	0.94	201822	333.00	202189	3727.41
6	[illegible]	10822	37.37	13311	315.00	10000	7.11	8924	48.32	2	0.01	2.00	0.06	34912	44.49	22227	383.44
7	[illegible]	11700	30.20	8161	471.58	23844	29.46	21640	397.72	36	0.18	14.00	0.08	35704	87.84	29415	889.38
8	[illegible]	536	0.87	0	0.00	17	0.04	0	0.00	8	0.07	0.00	0.00	331	0.93	0	0.00
9	[illegible]	83039	379.13	82200	11122.32	109980	188.70	109303	3333.04	0	0.00	0.00	0.00	195027	767.85	191503	14473.34
10	[illegible]	86837	337.51	49834	3202.48	90667	103.12	34497	512.30	26	0.10	0.00	0.00	173530	440.73	86531	3714.89
11	[illegible]	26696	107.21	23466	951.19	67743	37.34	62317	1077.35	0	0.09	0.00	0.00	94433	144.55	85983	3028.74
12	[illegible]	12882	48.05	1788	47.29	93	0.97	31	0.00	0	0.00	0.00	0.00	12977	49.02	1839	47.34
13	[illegible]	147	0.35	97	1.44	12494	3.07	12649	104.46	449	0.53	253.80	3.01	13390	3.85	12999	189.11
14	[illegible]	12540	30.25	4801	64.47	35437	18.42	35437	172.92	1	0.01	0.00	0.00	48178	48.60	40438	257.39
15	[illegible]	22089	159.39	7222	433.42	72372	82.74	36437	448.21	485	2.45	133.00	8.16	95346	244.98	43792	1081.79
16	[illegible]	323117	209.14	9035	220.49	0	0.00	0	0.09	239	0.47	1.00	0.05	32334	209.81	9054	220.74
17	[illegible]	30221	394.18	17913	1937.44	0	0.00	0	0.08	22	0.06	1.00	0.05	20341	184.23	17916	1937.48
18	[illegible]	38411	148.73	12609	380.77	0	0.00	0	0.00	0	0.00	0.00	0.00	38411	149.73	12609	380.77
19	[illegible]	11648	48.58	0	0.00	0	0.00	0	0.00	0	0.00	0.00	0.00	11648	48.58	0	0.00
20	[illegible]	9933	32.32	1201	45.23	34308	44.05	24839	1913.90	1595	10.18	746.00	21.53	43806	104.75	26786	1130.48
21	[illegible]	21234	36.80	19230	578.13	8037	4.19	5343	34.98	0	0.00	0.00	0.00	29271	40.38	24473	614.13
22	[illegible]	25646	134.96	16278	970.08	3015	3.06	1048	21.32	2456	13.10	17.00	0.35	33117	143.13	17343	991.73
23	[illegible]	3719	15.61	1365	96.89	110382	131.32	88898	2073.78	113	0.42	32.00	2.15	114216	147.35	98315	2972.82
24	[illegible]	10260	99.43	13693	1003.11	110497	201.90	77330	2599.89	518	2.06	300.00	49.74	130273	304.19	90331	5714.83
25	[illegible]	94431	434.94	63461	5217.77	47202	49.44	29219	848.98	1247	7.08	334.00	13.06	132883	506.48	93414	4079.41
26	[illegible]	702	1.34	0	0.00	21	0.03	0	0.00	3	0.01	0.00	0.00	716	1.56	0	0.00
	[illegible]	794400	3042.31	381189	28305.41	1152206	1330.12	858841	22031.96	7891	43.13	2362	102.72	3864577	4400.86	1242331	50030.10

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಬೆಳೆ ವಿಮೆ ಕೊಡುವುದರಲ್ಲಿ ವಿಳಂಬವಾಗಿದೆ ಎಂದು ಸರ್ಕಾರದಿಂದ ಉತ್ತರ ಕೊಟ್ಟಿದ್ದಾರೆ. ಹೀಗೆ ವಿಳಂಬವಾಗುತ್ತಾ ಹೋದರೆ ಈ ರೈತರಿಗೆ ಬಹಳ ತೊಂದರೆಯಾಗುತ್ತದೆ. ಮೊನ್ನೆ ತಾವೂ ಕೂಡ ನೋಡಿದ್ದೀರಿ. Agriculture minister ಬಂದಿದ್ದರು. ಭಯಂಕರ ಗಾಳಿ ಬೀಸಿ ಆ ಊರಿನ ಪರಿಸ್ಥಿತಿಯೇ ಸುನಾಮಿ ಆದ ಹಾಗೆ ಆಗಿದೆ. ಅದಕ್ಕೇನಾದರೂ ಬೆಳೆವಿಮೆಯನ್ನು ತಾವು ಅಂದಾಜು ಮಾಡಿದ್ದೀರಾ? ಅಂದಾಜು ಮಾಡುವುದಕ್ಕೆ ಏನಾದಾರೂ ಪಟ್ಟಿ ಮಾಡಿಸಿ ತಯಾರು ಮಾಡಿಸಿದ್ದೀರಾ? ಅದರ ಬಗ್ಗೆ ಹೇಳಬೇಕು. ಎರಡನೆಯದು, ವಾಹನಗಳು ಏನಾದರೂ ಅಪಘಾತವಾದರೆ ತಕ್ಷಣ ವಿಮೆ ಸಿಗುತ್ತದೆ. ಬೆಳೆವಿಮೆ ಮಾತ್ರ ವರ್ಷ ಕಳೆದರೂ ಸಿಗುವುದಿಲ್ಲ. ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ತೆಗೆದುಕೊಂಡು ಕಠಿಣವಾದ ಒಂದು ನಿರ್ಣಯವನ್ನು ಮಾಡಬೇಕು. ಇದಕ್ಕೊಂದು ಕಾನೂನು ಬದ್ಧವಾಗಿ ಕ್ರಮ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಕೂಡ ಮಾಡುತ್ತೀರಾ? ಮೂರನೆಯದಾಗಿ, Threshold yiled ಮೇಲೆ ಬೆಳೆವಿಮೆ ನಿಗದಿಯಾಗುತ್ತದೆ. ಈ ಪದ್ಧತಿಯನ್ನು ಬಿಟ್ಟು ಸರಿಪಡಿಸತಕ್ಕಂಥ ಬೇರೆ ವ್ಯವಸ್ಥೆಯನ್ನು ಮಾಡುತೀರಾ? ಬಹಳ ದಿವಸದಿಂದ ಬಂದಂಥ threshold yield ಪದ್ಧತಿಯಿಂದ ಯಾರಿಗೂ ಸರಿಯಾದ ವ್ಯವಸ್ಥೆ ಅಗುತ್ತಿಲ್ಲ. ಅನುಕೂಲವಾಗುತ್ತಿಲ್ಲ. ಈ ಪದ್ಧತಿಯನ್ನು ಕೈಬಿಟ್ಟು ಬೇರೆ ಪದ್ಧತಿಯನ್ನು ಅನುಸರಿಸುತ್ತೀರಾ? ನಾಲ್ಕನೆಯದಾಗಿ, ಸರ್ಕಾರ ಬೆಳೆವಿಮೆ ಮೇಲೆ ಕಟ್ಟಬೇಕಾದ ಹಣಕ್ಕೆ ಕಂತನ್ನು fix ಮಾಡುತ್ತದೆ. ಅವರು ವಾಪಸ್ಸು ಕಟ್ಟತಕ್ಕಂಥದ್ದನ್ನು ಬೇಗ ಕಟ್ಟುತ್ತಿಲ್ಲ./ ಜನರು ಕಟ್ಟುವುದಕ್ಕೆ ವಿಮೆ ಕಂತನ್ನು ಜಾಸ್ತಿ ಮಾಡಿದ್ದೀರಿ. ರೈತರು ಕಟ್ಟತಕ್ಕಂಥದ್ದಕ್ಕೆ ಅಷ್ಟೊಂದು ಹಣ ಅವರ ಹತ್ತಿರ ಇಲ್ಲ, ಈಗ 4 ರೂಪಾಯಿಗಳ ಬಡ್ಡಿ ವ್ಯವಸ್ಥೆ ಮಾಡಿದ್ದೀರಿ. ಅದೇ ಪ್ರಕಾರ ಸರ್ಕಾರವೇ ಆ ಕಂತನ್ನು ಕಟ್ಟುವುದಕ್ಕೆ ತಯಾರಿದೆಯೇ? ಅದರ ಬಗ್ಗೆ ಸರ್ಕಾದ ಏನಾದರೂ ಯೋಚನೆ, ಯೋಜನೆ ಮಾಡುತ್ತೀರಾ? ಅದರ ಬಗ್ಗೆ ಸಹ ತಾವು ಸ್ವಲ್ಪ ಹೇಳಬೇಕು. ಇನ್ನೊಂದು ಮಹತ್ವದ್ದು ಏನೆಂದರೆ, ಬೆಳೆವಿಮೆ ವ್ಯಾಪ್ತಿಯಲ್ಲಿ ಯಾವ್ಯವ ಬೆಳೆಗಳು ಬರುತ್ತವೆ? ಎಲ್ಲಾ ಬೆಳೆಗಳು ಇದರ ವ್ಯಾಪ್ತಿಯಲ್ಲಿ ಬಂದಿಲ್ಲ. ತೋಟಗಾರಿಕೆ ಬೆಳೆಗಳು ಬಹಳ ಬೆಳೆಗಳಲ್ಲಿ ಇದರ ವ್ಯಾಪ್ತಿಯಲ್ಲಿ ಬಂದಿಲ್ಲ. ಇದರಿಂದ ಬಹಳ ಲುಕ್ಸಾನು ಆಗುತ್ತಿದೆ. ಆದರ ಬಗ್ಗೆಯೂ ತಾವು ಎಲ್ಲಾ ಬೆಳೆಗಳನ್ನು ಸೇರಿಸುವ ವ್ಯವಸ್ಥೆಯನ್ನು ಏನಾದರೂ ಮಾಡುತ್ತೀರಾ? ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನೊಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ : ಇಬ್ಬರು–ಮೂವರ ಪ್ರಶ್ನೆಗಳಿಗೆ ಅವರು ಒಂದೇ ಸಲ ಉತ್ತರ ಹೇಳಲಿ.

ಎಸ್. ಎಸ್. ಪಾಟೀಲ್ : ಮಾನ್ಯ ಅದ್ಯಕ್ಷರೆ, ತಾವು ಸ್ವಲ್ಪ ಉತ್ತರವನ್ನು ನೋಡಿ (ಅ) ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಇದು ಅಧಿಕಾರಿಗಳ ದೋಷ. ಆಂದರೆ, ಮಾಹಿತಿ ಸಂಗ್ರಹ ಮಾಡಿ ಕಳುಹಿಸಿದರೆ ವೇಳೆಗೆ ಸರಿಯಾಗಿ ಬಂದು ಬಿಡುತ್ತಿತ್ತು. ಅಂದರೆ, ಇದರಲ್ಲಿ ನಿಮ್ಮ ಅಧಿಕಾರಿಗಳದ್ದೇ ತಪ್ಪು. ಅಲ್ಲಿ ಯಾರೂ ಮಾಡುವುದೇ ಇಲ್ಲ. ಹೊಲಕ್ಕೆ ಹೋಗುವುದಿಲ್ಲ, ಕಂಟಿಗ್

ಮಾಡಿರುವುದಿಲ್ಲ, ಇಲ್ಲೇ ಕುಳಿತುಕೊಂಡು ಬರೆಯುತ್ತಾರೆ. ಹಿಂದೊಮ್ಮೆ ನಮ್ಮ ಜಿಲ್ಲಾ ಪಂಚಾಯತ್ ಕಡೆಗೆ ಕಮಿಟಿ ಮಾಡಿ ಕಳುಹಿಸಿಬಿಟ್ಟೆವು. ಅಲ್ಲಿ ಹೆಸರು ಇತರೆ ಬೆಳೆ ಗುತ್ತಿಗೆಯಾಗಿ ಅದನ್ನೆಲ್ಲಾ ಕಿತ್ತುಕೊಂಡು ಹೋಗಿದ್ದರು. ಇವರು ಇನ್ನು ಬೆಳೆ ಕಟಿಂಗ್ ಮಾಡಿದ್ದಿಲ್ಲ ಎಂದು ಇಲ್ಲಿ ಕುಳಿತುಕೊಂಡು ಅಜಮಾಸು ಬರೆಯುತ್ತಾರೆ. ಇದರಿಂದಲೂ ಕೂಡ ರೈತರಿಗೆ ಅನ್ಯಾಯ ವಾಗುತ್ತದೆ.ಆಮೇಲೆ, ನೀವು ಇನ್ನೊಂದು ಹೇಳಬೇಕು. ಈ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಯಾವ್ಯಾವ ಅಧಿಕಾರಿಗಳು ತಡವಾಗಲಿಕ್ಕೆ ಕಾರಣರು, ಇದರಲ್ಲಿ ತಪ್ಪಿತಸ್ಥರು ಯಾರು? ಏಕೆಂದರೆ, ಇದು ಹೋದ ವರ್ಷದ್ದು ಮಾರ್ಚ್ ಎಂಡ್‌ಗೆ ಸಂಬಂಧಿಸಿದ್ದು, ಆ ರೈತರು ಬಡ್ಡಿ ಕಟ್ಟಿರುವುದನ್ನು ನೋಡಿ. ಇದುವರೆಗೆ ಇವರು ಕಟ್ಟಿರುವುದು 505 ಲಕ್ಷ ರೂಪಾಯಿ. ರೈತರು 44 ಕೋಟಿ ರೂಪಾಯಿ ಕಟ್ಟಿದ್ದಾರೆ ಈಗ 505 ಲಕ್ಷ ರೂಗಳು 44ಕೋಟಿ ರೂಪಾಯಿಗಳಿಗೆ ಬಡ್ಡಿಯಾಗುತ್ತದೆ ಇಂಥ ಸ್ಥಿತಿ ಇದೆ. ಅದಕ್ಕೆ ನೀವು ವೇಳೆಗೆ ಸರಿಯಾಗಿ ಕಟ್ಟಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರೆಂಬುದನ್ನು ಹೇಳಬೇಕು ಆಮೇಲೆ, ಈ ತಪಿತ್ವಸ್ಥ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನೂ ಕೂಡ ಹೇಳಬೇಕು.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ನಾಗಮಾರಪಲ್ಲಿಯವರು ಈ ಬೆಳೆ ನಷ್ಟ ಪರಿಹಾರ ಕಂಡುಹಿಡಿಯತಕ್ಕಂಥ ವಿಧಿ–ವಿಧಾನಗಳೇನಿವೆ ಅವೈಜ್ಞಾನಿಕವಾಗಿದೆ ಎಂಬುವ ಭಾವನೆ ವ್ಯಕ್ತಮಾಡಿದರು. ಇಂತಹ ಭಾವನೆ ಬಹಳಷ್ಟು ರೈತರಲ್ಲಿದೆ. ಕ್ರಾಪ್ ಕಟಿಂಗ್ ಸಿಸ್ಟಂ ಏನಿದೆ. ಥ್ರೆಷೋಲ್ಡ್ ಯೀಲ್ಡ್‌ಸಿಸ್ಟಂ ಏನಿದೆ ಆದರಲ್ಲಿ ಒಂದು ಹೋಬಳಿಯಲ್ಲಿ 12 ಪಾಯಿಂಟ್ ಸೆಲೆಕ್ಟ್ ಮಾಡುತ್ತಾರೆ. ಅದು ಯಾವ ಹೊಲದಲ್ಲಿ ಬರುತ್ತವೆ. ಒಳ್ಳೆಯ ಬೆಳೆ ಹಾಕಿರತಕ್ಕಂಥ ರೈತನ ಹೊಲದಲ್ಲಿ ಬಂದರೂ ಕ್ರಾಪ್ ಕಟಿಂಗ್ ಮಾಡಬಹುದು. ಮಧ್ಯದಲ್ಲಿರತಕ್ಕಂಥ ಹೊಲದಲ್ಲಿಯೂ ಬರಬಹುದು. ಯಾವ ಹೊಲದಲ್ಲಿ ರೈತರು ನಷ್ಟವಾಗಿರುತ್ತದೆ ಆ ಹೊಲದಲ್ಲಿ ಒಂದೊಂದು ಸಂದರ್ಭದಲ್ಲಿ ಬರುವ ಹಾಗೆ ಇಲ್ಲ. ಅಂಥ ಸಂದರ್ಭದಲ್ಲೇನಾಯಿತೆಂದು ಉದಾಹರಣೆ ಕೊಡುವುದಾದರೆ, ಹೊರಬಾಳು ಹೋಬಳಿ ಸರ್ಕಲ್‌ನಲ್ಲಿ ಮಧ್ಯದಲ್ಲಿರತಕ್ಕಂಥ ಗ್ರಾಮದಲ್ಲಿ ಸುಮಾರು 80 ಲಕ್ಷ ರೈತರಿಗೆ ಬೆಳೆ ವಿಮೆ ಸಿಕ್ಕಿದೆ. ಟೇಲ್–ಎಂಡ್‌ನಲ್ಲಿ ಎಷ್ಟು ರೈತರು ಇದ್ದಾರೆ ಅದರಲ್ಲಿ ಸೆಂಟ್ ಪರ್ಸೆಂಟ್ ಲಾಸ್ ಆಗಿದೆ. ಅವರಿಗೆ ಒಂದು ಪೈಸೆಯೂ ಸಿಕ್ಕಿಲ್ಲ. ಈ ತರಹ ತಾರತಮ್ಯಗಳಾಗಿರುವುದರಿಂದ, ನಷ್ಟಕ್ಕೆ ಪರಿಹಾರ ಕಂಡುಹಿಡಿಯತಕ್ಕಂಥ ವಿಧಿ–ವಿಧಾನಗಳೇನಿವೆ ಅದರಲ್ಲೇನಾದರೂ ತಿದ್ದುಪಡಿಗಳನ್ನು ಮಾಡಿ ಯಾವ ರೈತರ ಬೆಳೆ ನಷ್ಟವಾಗಿರುತ್ತದೆ. ರೈತನ ಹೊಲದಲ್ಲೇ ಕ್ರಾಪ್ ಕಟಿಂಗ್ ಸಿಸ್ಟಂ ಅನ್ನು ಮೊದಲು ಪ್ರಾರಂಭ ಮಾಡಬೇಕು. ಅಲ್ಲಿಂದ ಮೇಲ್ಭಾಗಕೆ ಬನ್ನಿ. ಆ ತರಹ ಏನಾದರೂ ಬದಲಾವಣೆ ಮಾಡತಕ್ಕಂಥ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕಂಥ ವಿಚಾರ ಸರ್ಕಾರದ ಗಮನದಲ್ಲಿದೆಯೇ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ಈಗ ಮಾನ್ಯ ಸಚಿವರು ಉತ್ತರ ಕೊಡಿ. ಎಲ್ಲರೂ ಎದ್ದು ನಿಂತರೆ ಆಗುವುದಿಲ್ಲ. ದಯಮಾಡಿ, ಉತ್ತರ ಕೊಡಿ. ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಿ. ಎಷ್ಟು ಉಪ ಪ್ರಶ್ನೆಗಳಿಗೆ ನಾವು ಅವಕಾಶ ಕೊಡುವುದು?

ಶ್ರೀ ರಾಜೇಂದ್ರ ವರ್ಮ: ಬೀದರ್ ಜಿಲ್ಲೆಯವರು ಮಂತ್ರಿಯಾಗಿರುವುದರಿಂದ ನಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಈ ತರಹ ಎಲ್ಲಾ ನೀವು ಮಾಡಿದರೆ ಇದೇನೂ ಪ್ರಶ್ನೋತ್ತರವಾಗುವುದಿಲ್ಲ.

ಶ್ರೀ ರಾಜೇಂದ್ರ ವರ್ಮ: ಬೀದರ್ ಜಿಲ್ಲೆಯೊಳಗೆ...

ಅಧ್ಯಕ್ಷರು: ಬೀದರ್ ಜಿಲ್ಲೆಯಾಗಲಿ, ಇನ್ನೊಂದು ಜಿಲ್ಲೆಯಾಗಲಿ. ಎಷ್ಟು ಜನ ಉಪ ಪ್ರಶ್ನೆ ಕೇಳುವುದು?

ಶ್ರೀ ರಾಜೇಂದ್ರ ವರ್ಮ: ಪ್ರತಿ ವರ್ಷ ಬರಗಾಲ ಬಂದು ರೈತರು ತೊಂದರೆಗೀಡಾಗಿದ್ದಾರೆ. ಮಳೆ ಬಂದಿರಬಹುದು, ಮಳೆ ಬಾರದೇ ಇರಬಹುದು. ಈ ಸಲ ನಮ್ಮಲ್ಲಿ ಆಲಿಕಲ್ಲು ಮಳೆ ಬಂದು ಎಲ್ಲಾ ರೈತರ ಬೆಳೆ ಸರ್ವನಾಶವಾಗಿ, ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಅದಕ್ಕಾಗಿ ನಮ್ಮ ಮಾನ್ಯ ಸಚಿವರು ಆ ರೈತರನ್ನು ಉಳಿಸಿಕೊಳ್ಳಬೇಕು. ಅವರ ಕಷ್ಟದಲ್ಲಿ ಭಾಗಿಯಾಗಬೇಕು. ತುರ್ತಾಗಿ ಆ ರೈತರ ಬೆಳೆ ನಾಶಕ್ಕೆ ಪರಿಹಾರ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮನವಿ ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ: ಗೌರವಾನ್ವಿತ ಹಿರಿಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಕೇಳಿದ ಬಹಳ ವಿಚಾರಗಳಿಗೆ,

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದು ಬಹಳ ವಿಚಾರದ ಪ್ರಶ್ನೆಯಲ್ಲ ಎಲ್ಲದಕ್ಕೂ ಸಂಬಂಧಪಟ್ಟಿದ್ದಿದೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದಿದೆ. ಇನ್‌ಶೂರೆನ್ಸ್ ಬಹಳ ಮಹತ್ವದ್ದಿದೆ ಇದು ರೈತರ ಸಮಸ್ಯೆ ಇದಕ್ಕೆ ಅರ್ಧ ಗಂಟೆ ಕಾಲ ಚರ್ಚೆಗೆ ಎಲ್ಲರಿಗೂ ಅವಕಾಶ ಕೊಟ್ಟರೆ, ಅನುಕೂಲವಾಗುತ್ತದೆಂದು ತಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತಿದ್ದೇನೆ. ಎಲ್ಲರ ಆಶಯ ಇದೆ. ಏಕೆಂದರೆ ಇದು ಅತ್ಯಂತ ಜರೂರಿ ಇದೆ.

ಅಧ್ಯಕ್ಷರು: ಈಗ ದಯಮಾಡಿ ಒಂದು ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದರ ಬಗ್ಗೆ ಬಹಳ ಜನ ಮಾತನಾಡಬೇಕಾಗಿದೆ.

ಅಧ್ಯಕ್ಷರು: ಈಗ ಅರ್ಧ ಗಂಟೆ ಕಾಲ ಚರ್ಚೆಗೆ ನಿಗದಿ ಆಗಿರುವುದು ಯಾವುದೂ ಬೋರ್ಡ್‌ಗೇ ಬರಲಿಲ್ಲ. ಯಾವುದೂ ಚರ್ಚೆಯೇ ಆಗುತ್ತಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇಲ್ಲ ಸಾರ್, ಪರಿಸ್ಥಿತಿ ಬಹಳ ಗಂಭೀರವಾಗಿದೆ. ಏಕೆಂದರೆ ಇದು....

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ ದಯವಿಟ್ಟು ತೆಗೆದುಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಎಲ್ಲರಿಗೂ ಹೇಳಿ ಅರ್ಧ ಗಂಟೆ ಮೇಲೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು: ಅರ್ಥವಾಯಿತು. ಆದರೆ ಏನಾಗಿದೆ ಎಂದರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೇನು ಕನ್‌ವರ್ಟ್ ಮಾಡಲಾಗಿದೆಯೆಲ್ಲಾ ಅವು ಆಗುತ್ತಲೇ ಇಲ್ಲ. ಬರುತ್ತಲೇ ಇಲ್ಲ. ಉದ್ದೇಶ ಸಫಲವಾಗುತ್ತಿಲ್ಲ. ಅದಕ್ಕೋಸ್ಕರ ನಾನು ಹೇಳುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾಡುವ ಪ್ರಯತ್ನ ಮಾಡಿ ಇಲ್ಲದಿದ್ದರೆ ಇದು ತೊಂದರೆಯಾಗುತ್ತದೆ. ಬಹಳ ಮಹತ್ವದ ವಿಷಯವಿದೆ. ಇಡೀ ರಾಜ್ಯಕ್ಕೆ ಸಂಬಂದಪಟ್ಟಿದ್ದಿದೆ. ರೈತರಿಗೆ

ಸಂಬಂಧಪಟ್ಟಿದ್ದಿದೆ. ಇದರಲ್ಲಿ ಕೆಲವು ಥ್ರೆಷೋಲ್ಡ್ ಬಹಳ ವಿಶೇಷ ಇದೆ. ಏಕೆಂದರೆ, ಮಳೆ ಮೊದಲಿದ್ದ ಹಾಗಿಲ್ಲ. ಒಂದು ಹೊಲದ ಮೇಲೆ ಬಿದ್ದರೆ ಇನ್ನೊಂದು ಹೊಲದ ಮೇಲೆ ಬೀಳುವುದಿಲ್ಲ. ಒಂದೊಂದು ಊರ ಮೇಲೆ ಬಿದ್ದರೆ ಮತ್ತೊಂದು ಊರಿಗೆ ಬಿಳುವುದಿಲ್ಲ, ಈ ಹೊಲದ ಮೇಲೆ ಬಿದ್ದರೆ ಇನ್ನೊಂದು ಹೊಲದ ಮೇಲೆ ಮಳೆ ಇಲ್ಲ. ಇವರು ಬೆಳೆ ತಾರತಮ್ಯ ನೋಡಿದರೆ ಯಾರಿಗೆ ಉಪಯೋಗವಾಗುತ್ತದೆ?

ಅಧ್ಯಕ್ಷರು: ಮಾನ್ಯ ಗುರುಪಾದಪ್ಪನವರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡೋಣ. ಆದರೆ, ಏನೆಂದರೆ, ಅವು ಬರುತ್ತಲೇ ಇಲ್ಲವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವು ಬರುವ ಹಾಗೆ ತಾವು ಏನಾದರೂ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು: ಆ ಪರಿಸ್ಥಿತಿಯಾಗಿದೆ. ಆಯಿತು ಒಂದು ಅವಕಾಶ ಮಾಡಿಕೊಡೋಣ.ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ.

ಅಫಜಲ್‌ಪೂರ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ

55(246) ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ) (ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಅಫಜಲಪುರ ತಾಲೂಕಿನ ಕರಜಗಿ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಕುಡಿಯುವ ಶುದ್ಧ ನೀರಿನ ವ್ಯವಸ್ಥೆಗಳಿಗೆ ಜಲ ನಿರ್ಮಲ ಯೋಜನೆ ಮಂಜೂರಾಗಿರುವುದು ನಿಜವೇ;

ಆ) ಇದೇ ಯೋಜನೆಯಲ್ಲಿ ಉಡಚಾಣ ಮತ್ತು ಮಾಶ್ಯಾಳ ಪಂಚಾಯತಿ ಪ್ರದೇಶವನ್ನು ಗುಂಪು ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ ಸೇರಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಉಡಚಾಣ ಮತ್ತು ಮಾಶ್ಯಾಳ ಪಂಚಾಯತಿಯ ತಮ್ಮ ಪಾಲಿನ ವಂತಿಗೆ ಕಟ್ಟಲು ಮುಂದೆ ಬಂದಿರುವುದು ನಿಜವೇ

ಈ) ಈ ಯೋಜನೆ ಕಡಿಮೆ ವೆಚ್ಚದಲ್ಲಿ ಪೂರ್ತಿಗೊಳ್ಳುವುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಗೋವಿಂದ ಎಂ (ಕಾರ್ಜೋಳ): (ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಗ್ರಾಮೀಣ ಅಭಿವೃದ್ಧಿ ಇಂಜಿನಿಯರಿಂಗ್ ಸಚಿವರು):

ಅ) ಹೌದು ಜಲ ನಿರ್ಮಲ ಯೋಜನೆಯ 3ನೇ ತಂಡದಲ್ಲಿ ತೆಗೆದುಕೊಳ್ಳಲು ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮ ಪಂಚಾಯತಿ ಆಯ್ಕೆಯಾಗಿರುತ್ತದೆ. ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎರಡು ಗ್ರಾಮಗಳು ಬರುತ್ತವೆ.

ಆ) ಬೇಡಿಕೆ ಇದೆ. ಗುರಿ ಮೀರಿರುವ ಕಾರಣ ಯೋಜನೆಯಲ್ಲಿ ಸೇರಿಸಲು ಸಾಧ್ಯವಾಗುವುದಿಲ್ಲ.

ಇ) ಹೌದು

ಈ) ಹೌದು ಹೆಚ್ಚುವರಿ ಜಲಮೂಲ ಮತ್ತು ನೀರು ಸಂಗ್ರಹಣೆ ಕಾರ್ಯಗಳನ್ನು ಕಾರ್ಯಗತಗೊಳಿಸುವ ಮೂಲಕ ಹಾಲಿ ಇರುವ ನೀರು ಸರಬರಾಜು ಯೋಜನೆಯನ್ನು ಕಡಿಮೆ ವೆಚ್ಚದಲ್ಲಿ ಪುನಃಶ್ಚೇತನಗೊಳಿಸಲು ಹೆಚ್ಚು ಒತ್ತು ನಿಡಲಾಗುವುದು.

ಶ್ರೀ ಎಂ. ವೈ ಪಾಟೀಲ್: ನಾನು ಕೇಳಿದ (ಅ) ಪ್ರಶ್ನೆಗೆ ಉತ್ತರಿಸಿದ್ದಾರೆ. ಇದಕ್ಕೆ ಜಲ ಮೂಲ ಯಾವುದೆಂದರೆ, ಭೀಮಾ ನದಿಯಿಂದ ಈ ಕುಡಿಯುವ ನೀರಿನ ಯೋಜನೆ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಆಯ್ಕೆ ಮಾಡಿದ್ದಾರೆ. ಇದು ನಮಗೆ ಸಂತೋಷ ತಂದಿದೆ. ಆದರೆ ನಾಲ್ಕು ಕಿಲೋಮೀಟರ್ ದೂರದಲ್ಲಿ ಇನ್ನೂ ಎರಡು ಪಂಚಾಯಿತಿಗಳು ಬರುತ್ತವೆ. ಉಡಚಾಣ ಮತ್ತು ಮಾಶ್ಯಾಳ. ಮಾಶ್ಯಾಳ ಸುಮಾರು 10 ಸಾವಿರ ಜನಸಂಖ್ಯೆಯುಳ್ಳ ಗ್ರಾಮವಿದೆ. ಅಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆದರೂ ನೀರು ಬರುತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಒಂದು ಯೋಜನೆ ತೆಗೆದುಕೊಳ್ಳಬೇಕಾಗುತ್ತದೆ. ಆದರಂತೆ, ಉಡಚಾಣ ಗ್ರಾಮ ಪಂಚಾಯತಿಗೆ ಕೂಡ 6–7 ಸಾವಿರ ಜನಸಂಖ್ಯೆಯುಳ್ಳ ಗ್ರಾಮವಿರುವುದರಿಂದ ಅಲ್ಲಿಯೂ ಕುಡಿಯುವ ನೀರಿನ ತೊಂದರೆ ಇದೆ. ಅಲ್ಲಿ ಎಷ್ಟು ಬೋರ್‌ವೆಲ್ ಹಾಕಿದರೂ ನೀರು ಸಿಕ್ಕುತ್ತಿಲ್ಲ. ಈ ಎಲ್ಲಾ ಜಲಮೂಲ ಭೀಮಾ ನದಿಗೆ ಆಳವಡಿಸಬೇಕಾಗುತ್ತದೆ. ಆದ್ದರಿಂದ ಈ ಕರಜಗಿಯದು ಏನು ಯೋಜನೆ ಇದೆ ಅಕ್ಕ ಪಕ್ಕದಲ್ಲೇ ನಾಲ್ಕು ಕಿಲೋಮೀಟರ್ ದೂರದಲ್ಲಿ ಇವೆರಡೂ ಪಂಚಾಯಿತಿಗಳು ಬರುತ್ತವೆ. ಇದನ್ನು ಜೋಡಿಸಿದರೆ ವೆಚ್ಚವೇನಿದೆ ಬಹಳ ಕಡಿಮೆಯದರದಲ್ಲಿ ಆಗುತ್ತದೆ. ಪ್ರತ್ಯೇಕವಾಗಿ ಎರಡೂ ಯೋಜನೆಗಳನ್ನು ತೆಗೆದುಕೊಂಡರೆ ಹೆಚ್ಚಿನ ಹಣ ಖರ್ಚಾಗುತ್ತದೆ. ಹೀಗೇನು ನಮ್ಮ ಕರಜಗಿ ಪಂಚಾಯಿತಿಯನ್ನು ಜಲ ನಿರ್ಮಲ ಯೋಜನೆಯಲ್ಲಿ ತೆಗೆದುಕೊಂಡರೆ, ಅದಕ್ಕೆ ಜೋಡಿಸಿದರೆ ಒಳ್ಳೆಯದಾಗುತ್ತದೆ. ಆದಕ್ಕೆ ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ ಜಲ ನಿರ್ಮಲ ಕಾರ್ಯಕ್ರಮ 2002ರ ಏಪ್ರಿಲ್‌ನಲ್ಲಿ ಪ್ರಾರಂಭವಾದಂಥದ್ದು. ಈ ಜಲ ನಿರ್ಮಲ ಕಾರ್ಯಕ್ರಮಕ್ಕೆ ಉತ್ತರ ಕರ್ನಾಟಕದ 11 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ 740 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿದ್ದೇವೆ. 929 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದು. ಇದು ಬೇಡಿಕೆಯಾಧಾರದ ಮೇಲೆ ಇರತಕ್ಕಂಥ ಪ್ರಾಜೆಕ್ಟ್. ಆದರೆ ಈಗಾಗಲೇ ಗುರಿ ಮುಟ್ಟಿದ್ದರಿಂದ ಈ ಹೆಚ್ಚಿನ ಹಳ್ಳಿಗಳನ್ನು ಸೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರೇನು ಹೇಳುತ್ತಾರೆ. ಕರಜಗಿಗೆ ಮಾಡಿದಂಥ ಯೋಜನೆಯೊಳಗೆ ಇವನ್ನೂ ಕೂಡ ಸೇರಿಸಬಹುದೆಂದು ಹೇಳುತ್ತಾರೆ. ಹಾಗಾಗುವುದಿಲ್ಲ. ಜನಸಂಖ್ಯೆಯಾಧಾರದ ಮೇಲೆ ಪ್ಲಾನ್ಸ್, ಎಸ್ಟಿಮೇಟ್ ಮಾಡಿ, ಡಿಸೈನ್ ಮಾಡಿ ಈಗಾಗಲೇ ಮಾಡಿರುತ್ತಾರೆ. ಮತ್ತೆ ಹೆಚ್ಚಿನ ಒತ್ತಡವನ್ನು ಇನ್ನೂ 20 ಸಾವಿರ, 15 ಸಾವಿರ ಜನಸಂಖ್ಯೆ ಇರತಕ್ಕಂಥದ್ದನ್ನು ಅದಕ್ಕೆ ಸೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಮಾನ್ಯ ಸದಸ್ಯರಿಗೆ ನಾನೊಂದು ಸಲಹೆ ಕೊಡುತ್ತೇನೆ. ಕುಡಿಯುವ ನೀರಿಗಾಗಿ ಬೇಕಾದಷ್ಟು ಯೋಜನೆಗಳಿವೆ. ಬೇರೆ ಯೋಜನೆಗಳಲ್ಲಿ ಇದನ್ನು ಕೈಗೊಳ್ಳಲಿಕ್ಕೆ ಸರ್ಕಾರದ ಸಿದ್ಧವಿದೆ. ಆ ರೀತಿ ಅವರು ಪ್ರಪೋಸಲ್ ಕೊಡಲಿ ಎಂದು ಹೇಳಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ವೈ. ಪಾಟೀಲ್: ಮಾನ್ಯ ಅಧ್ಯಕ್ಷರೆ ಈಗಾಗಲೇ ಮಾಶ್ಯಾಳ ಪಂಚಾಯಿತಿ ಮತ್ತು ಉಡಚಾಣ ಪಂಚಾಯಿತಿಗಳಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ. ಆದ್ದರಿಂದ ಎಷ್ಟು ದಿವಸಗಳಲ್ಲಿ ಬೇರೆ ಯೋಜನೆ ಹಾಕಿ ಇದನ್ನು ಮಂಜೂರು ಮಾಡಿಸುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸದಸ್ಯರು ಒಪ್ಪಿದರೆ, 2006–07ನೇ ಸಾಲಿನಲ್ಲಿ ಬೇರೆ ಯೋಜನೆಯಲ್ಲಿ ಇದನ್ನು ಮಂಜೂರು ಮಾಡಿಕೊಡಲಿಕ್ಕೆ ಸರ್ಕಾರ ಸಿದ್ಧವಿದೆ.

ಮುಂಡರಗಿ ತಾಲ್ಲೂಕಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರನ್ನು ಪೂರೈಸುವುದು.

56 (25) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಆಹಾರ ಸಚಿವರು ಮತ್ತು ನಾಗರಿಕ ಸರಬಾರಾಜು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಮುಂಡರಗಿ ತಾಲ್ಲೂಕು ಹಿರೇವಡ್ಡಟ್ಟಿ ಹಾಗೂ ಇತರೆ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ಯೋಜನೆ ಮಂಜೂರಾಗಿ ಎಷ್ಟು ವರ್ಷಗಳು ಗಳಿಸಿವೆ;

ಆ. ಇಲ್ಲಿಯವರೆಗೆ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪ್ರಾರಭ ಮಾಡದಿರಲು ಕಾರಣಗಳೇನು;

ಇ. ಒಂದು ವೇಳೆ ಶೇ.10ರಷ್ಟು ಹಣ ತುಂಬಿದ್ದರೆ ಆ ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಏನು ವ್ಯವಸ್ಥೆ ಮಾಡಲಾಗುವುದು?

ಶ್ರೀ ಗೋವಿಂದ ಎಂ. ಕಾರ್ಜೋಳ (ಆಹಾರ ಸಚಿವರು ಮತ್ತು ನಾಗರಿಕ ಸರಬಾರಾಜು):

ಅ. 4 ವರ್ಷಗಳಾಗಿವೆ.

ಆ. ಸಬ್–ಮಿಷನ್ ಯೋಜನೆ ನೀತಿಯನ್ವಯ ರೂ.238.57 ಲಕ್ಷ ಯೋಜನಾ ಅಂದಾಜಿನ ಮೇಲೆ ಶೇ.10ರಷ್ಟು ಸಮುದಾಯ ವಂತಿಗೆ ಸಂಗ್ರಹವಾಗದಿರುವ ಕಾರಣ ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲ.

ಇ. ನೀರಿನ ಗುಣಮಟ್ಟದ ಸಮಸ್ಯೆಯಿರುವ ಗ್ರಾಮಗಳಿಗೆ ವಿಶೇಷವಾಗಿ ಈ ಯೋಜನೆಯನ್ನು ಮಂಜೂರು ಮಾಡಲಾಗಿದೆ. ಇಂತಹ ಪ್ರಕರಣಗಳಲ್ಲೆಲ್ಲಾ ಕನಿಷ್ಠ ಸಮುದಾಯ ವಂತಿಗೆ ತುಂಬದೆ ಯೋಜನೆ ಅನುಷ್ಠಾನಗೊಳಿಸುವುದು ಕಷ್ಟ ಮೊದಲ ಹಂತದಲ್ಲಿ ಕನಿಷ್ಠ 50% ಸಮುದಾಯ ವಂತಿಗೆ ಪಾವತಿಸಿದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿಶೇಷವಾಗಿ ಪರಿಗಣಿಸಲಾಗುವುದು. ಈಗಾಗಲೇ ಪರ್ಯಾಯವಾಗಿ ಹಿರೇವಡ್ಡಟ್ಟಿಯಲ್ಲಿ ಒಂದು ಡೀಫ್ಲೋರಿಡೇಷನ್ ಘಟಕವನ್ನು ಸ್ಥಾಪಿಸಿದ್ದು, 625ಗೃಹೋಪಯೋಗೆ DF ಫಿಲ್ಟರ್‌ಗಳನ್ನು ಸಹ ಅಸುಪಾಸಿನ ಸಂಸ್ಯಾತ್ಮಕ ಗ್ರಾಮಗಳ ಕುಟುಂಬಗಳಿಗೆ ಸರಬರಾಜು ಮಾಡಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ನಾನು 5 ವರ್ಷಗಳಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ. ಅದಕ್ಕೆ ಪರಿಹಾರವೇ ಸಿಕ್ಕಿಲ್ಲ. ಉತ್ತರ ಅದೇ ಬರುತ್ತದೆ. ಆದರೆ, ಕೊನೆಯಾಗಿ ಒಂದು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರೆ ತಾವು ಹಳ್ಳಿಯಿಂದ ಬಂದವರು.

ಅದು 10 ಸಾವಿರ ಜನಸಂಖ್ಯೆ ಇದ್ದಂಥ ಊರು. ಅಲ್ಲೇನಾಗಿದೆ ಎಂದರೆ. 10 ಪಸೆಂಟ್ ಜನರಿಂದ ಹಣ ತುಂಬಬೇಕಾಗುತ್ತದೆ. ಬರಗಾಲ ಏರಿಯಾ ಇರುವುದರಿಂದ ಹಣ ತುಂಬಲಿಕ್ಕೆ ಆಗುವುದಿಲ್ಲ. 2 ಕೋಟಿ 38 ಲಕ್ಷ ರೂಪಾಯಿ ಸರ್ಕಾರದ ಯೋಜನೆಗೆ ಜನರು 25 ಲಕ್ಷ ರೂಪಾಯಿ ತುಂಬಬೇಕಾಗುತ್ತದೆ. ಸರ್ಕಾರ ಈ ಐದು ವರ್ಷಗಳಲ್ಲಿ ಆ ಊರಿಗೆ ಎಷ್ಟು ಹಣ ಖರ್ಚು ಮಾಡಿದೆ ಎಂದರೆ ಕೋಟಿ ಗಟ್ಟಲೆ ಖರ್ಚು ಮಾಡಿದೆ. ಅದರೂ ನೀರು ಇಲ್ಲ. ಅವರು ಹೇಳುತ್ತಾರೆ. ಮತ್ತೆ ಬೋರ್ ಹೊಡೆದರೂ ಅರ್ಧ ಇಂಚು ನೀರು ಬೀಳುತ್ತದೆ ಮತ್ತೆ ಮೂರು ತಿಂಗಳೊಳಗೆ ಒಣಗಿ ಹೋಗಿಬಿಡುತ್ತದೆ. ಕೊನೆಯ ಪ್ರಶ್ನೆ ಹಾಗಾದರೆ ಅವರು 10 ಪರ್ಸೆಂಟ್ ಹಣ ತುಂಬದಿದ್ದರೆ ಅವರಿಗೆ ನೀರು ಕೊಡುವ ವ್ಯವಸ್ಥೆ ಏನು ಮಾಡುತ್ತೀರಿ ಅಂದರೆ ಅದಕ್ಕೆ ಉತ್ತರವಿಲ್ಲ. ಅದಕ್ಕೆ ಏನು ಹೇಳಿದ್ದಾರೆಂದರೆ ಡೀಫ್ಲೋರೀಡೇಷನ್ ಘಟಕ ಹಾಕಿದ್ದೇವೆ. ಎಂದು ಹೇಳುತ್ತಾರೆ. ನೀರು ಇಲ್ಲ ಅಂದರೆ ಡೀಫ್ಲೋರಿಡೇಷನ್ ಃಟಕ ತೆಗೆದುಕೊಂಡು ಏನು ಮಾಡಬೇಕು? ಆ ಘಟಕದಿಂದ ಏನಾದರೂ ನೀರಿ ಬರುತ್ತದೆಯೇ? ಜನರು ಹತ್ತು ಪರ್ಸೆಂಟ್ ತುಂಬಲಿಕ್ಕೆ ಆಗುವುದಿಲ್ಲ. ಹಾಗಾದರೆ ಆ ಊರಿಗೆ ನೀವು ನೀರು ಕೊಡುವುದಿಲ್ಲವೇ ಅಥವಾ ಕೊಡುತ್ತೀರಾ? ಹಿಂದಿನ ಮಂತ್ರಿಗಳು ನಾವು ಯಾವುದೆ ಪರಿಸ್ಥಿತಿಯಲ್ಲಿ ನೀರು ಕೊಡುತ್ತೇವೆಂದು ಹಿಂದೆ ಉತ್ತರಿಸಿದ್ದರು. ಇವತ್ತಿಗೂ ಅದು ಆಗಿಲ್ಲ. ಉತ್ತರ ಕೊಟ್ಟು ನಾಲ್ಕು ವರ್ಷವಾಯಿತು. ಮಾನ್ಯ ಮಂತ್ರಿಗಳೇ ನಾಲ್ಕು ವರ್ಷವಾಯಿತು ಎಂದು ಹೇಳುತ್ತಾರೆ. ಹಿರೆವಡ್ಡಟ್ಟಿ ಹಾಗೂ ಇತರೇ ಗ್ರಾಮಗಳಿಗೆ ಯೋಜನೆ ಮಂಜೂರಾಗಿ ನಾಲ್ಕು ವರ್ಷವಾಯಿತು. ಇವತ್ತಿಗೂ ಚಾಲೂ ಆಗಿಲ್ಲ. ಕುಡಿಯುವುದಕ್ಕೆ ನೀರು ಇಲ್ಲ, ಅಲ್ಲಿ ಹತ್ತು ಸಾವಿರ ಜನಸಂಖ್ಯೆ ಇದೆ ನಾವು ಆ ಊರಿಗೆ ಹೋಗುವ ಹಾಗಿಲ್ಲ. ಇಂಥ ಪರಿಸ್ಥಿತಿ ಇದೆ ಅಲ್ಲಿ ಇಷ್ಟಾದರೂ ಕೂಡ ಇವತ್ತಿಗೂ ಅಲ್ಲಿ ನೀರು ಕೊಡುತ್ತಿಲ್ಲ. ಅಲ್ಲಿನ ಜನರು ಹತ್ತು ಪರ್ಸೆಂಟ್ ತುಂಬುವುದಕ್ಕೆ ಆಗುವುದಿಲ್ಲ ಅದಕ್ಕೆ ಏನು ಮಾಡುತ್ತಿರೀ? ಬೇರೆ ಯಾವ ಮೂಲದಿಂದ ನೀರು ಕೊಡುತ್ತೀರೋ ಇಲ್ಲವೋ ಅಥವಾ ಯೋಜನೆ ಹಾಕುತೀರಾ? ಮತ್ತು ಯಾವಾಗ ನೀರು ಕೊಡುತ್ತೀರಿ ಅನ್ನುವುದನ್ನು ಕೂಡ ತಾವು ತಮಗೆ ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ್: ಮಾನ್ಯ ಅಧ್ಯಕ್ಷರೇ ಈ ಹಿರೇವಡ್ಡಟ್ಟಿ ಗ್ರಾಮಕ್ಕೆ ಯೋಜನೆ ಮಂಜೂರಾದರೂ ಕೂಡ ಏಕೆ ಯೋಜನೆಯನ್ನು ಪ್ರಾರಂಭ ಮಾಡಲಿಲ್ಲವೆಂದರೆ, ಸಮುದಾಯದ ವಂತಿಗೆ ಕಟ್ಟಲಾರದ್ದಕ್ಕಾಗಿ ಪ್ರಾರಂಭವಾಗಿಲ್ಲ. ಮಾನ್ಯ ಎಸ್. ಎಸ್. ಪಾಟೀಲ್‌ರವರು ಕೂಡ ಹಿಂದೆ ಸಚಿವರಾಗಿ ಕೆಲಸ ಮಾಡಿದಂಥವರು. ಅವರಿಗೆ ನಿಯಾಮಾವಳಿಗಳು ಗೊತ್ತಿದೆ. ಇದೊಂದು ಸಮುದಾಯದ ವಂತಿಗೆ ಇರುವುದರಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅವರು 10 ಪರ್ಸೆಂಟ್ ವಂತಿಗೆ ಕಟ್ಟಿಲ್ಲ. ಅದಕ್ಕೆ ನಾನು ಅವರಲ್ಲಿ ಒಂದು ವಿನಂತಿ ಮಾಡುತ್ತೇನೆ, ತಾವು ಪ್ರಭಾವಿ ಗೌಡರು ಇದ್ದೀರಿ, ಎಷ್ಟು ಪರ್ಸೆಂಟ್ ಕಟ್ಟುತ್ತೀರಿ ಅದನ್ನಾದರೂ ಹೇಳಬಿಡಿ 5 ಪರ್ಸೆಂಟ್, 6 ಪರ್ಸೆಂಟ್, 4 ಪರ್ಸೆಂಟ್, ಎಷ್ಟು ಪರ್ಸೆಂಟ್ ಕಟ್ಟುತ್ತೀರಿ ಹೇಳಿಬಿಡಿ ನಾನು ಇವತ್ತೇ ತಮಗೆ ಭರವಸೆ ಕೊಡುತ್ತೇನೆ.

ಶ್ರೀ ಎಸ್, ಎಸ್, ಪಾಟೀಲ್: ನಾನು ಹೇಳುವುದು ಅದನ್ನೇ ನೀವು ಹೇಳುವುದು ಅದನ್ನೇ ನೀವು ಏನು ಹೇಳಿದಿರಿ, ಇವರ ಮಂತ್ರಿಗಳಾಗಿದ್ದರು ಇವರಿಗೆ ಅನುಭವ ಇತ್ತು. ಇವರು ಏನು ಮಾಡಿದರು ಎಂದು ಹೇಳಿದಿರಿ, ನಮ್ಮ ಕಾಲಕ್ಕೆ ಈ ಯೋಜನೆ ಇದ್ದಿಲ್ಲ. ಬಿದರಳ್ಳಿ ಯೋಜನೆ 6 ಕೋಟಿ ರೂಪಾಯಿ ಯೋಜನೆಯನ್ನು ಸರ್ಕಾರ ಹಾಕಿಕೊಂಡು ಸಂಪೂರ್ಣವಾಗಿ ಚಾಲೂ ಮಾಡಿದೆ ಅದೂ ಕೂಡ ಎಂಟು ವರ್ಷ ಹೋದರೂ ಇವತ್ತಿಗೂ ಮುಗಿದಿಲ್ಲ. ಮೊದಲು ಸರ್ಕಾರದ ವತಿಯಿಂದ ಮಾಡುತ್ತಿದ್ದರು. ಇದು ನಡುವೆ ಬಂದಿದೆ. ಅದಕ್ಕೆ ನೀವು ಇದನ್ನು ವೇವ್ ಮಾಡಲಿಕ್ಕೆ ಸಾಧ್ಯ ಇದೆಯೇ? ಇಲ್ಲದಿದ್ದರೆ ಕಟ್ಟಲಿಕ್ಕೆ ಆಗುವುದಿಲ್ಲ. ನೀವು ಇನ್ನು ಹತ್ತು ವರ್ಷ ಬಿಡಿ, ಸರ್ಕಾರ ಅದಕ್ಕೆ ವರ್ಷಕ್ಕೆ ಹತ್ತಿಪ್ಪತ್ತು ಲಕ್ಷರೂ ಖರ್ಚು ಮಾಡಿಕೊಂಡು ಹೋಗುತ್ತಿರುತ್ತದೆ ಆ ಊರಿಗೆ ಇದು ಪರಿಸ್ಥಿತಿ. ಆ ಕಾರಣದಿಂದ ದಯಮಾಡಿ ಯಾವುದಾದರೂ ಮೂಲದಿಂದ ಹಣ ತಂದು, ಈ ಹತ್ತು ಪರ್ಸೆಂಟ್ ಏನು ಇದೆ ಅದನ್ನು ಎಲ್ಲಾ ಊರುಗಳಿಗೂ ತೆಗೆದುಬಿಡಿ. ನನಗೆ ತಿಳಿದ ಮಟ್ಟಿಗೆ ಬರಗಾಲದ ಏರಿಯಾದಲ್ಲಿ ಆಗುವುದೇ ಇಲ್ಲ. ನೀವು ನೀರು ಕೊಡುವುದಿಲ್ಲ, ಕುಡಿಯುವುದಕ್ಕೆ ನೀರೆ ಇಲ್ಲದಂಥ ಪರಿಸ್ಥಿತಿ ಇಂಥ ಸ್ಥಿತಿಯೊಳಗೆ ಅಲ್ಲಿ ಬೊಬ್ಬಾಟ ಆದಮೇಲೆ ಮತ್ತೆ ಶರುಮಾಡುತ್ತೀರಿ ಟ್ರಕ್‌ನಲ್ಲಿ ನೀರು ಎಂದು ರೊಕ್ಕ ಖಚು ಮಾಡುವುದು ಸರ್ಕಾರಕ್ಕೆ ತಪ್ಪಿದ್ದಲ್ಲ. ಆ ಕಾರಣಕ್ಕಾಗಿ ಯಾವುದೇ ಮೂಲದಿಂದ ನಮಗೆ ಒಂದು ಪರ್ಸೆಂಟ್ ಕಟ್ಟುವುದಕ್ಕೆ ಆಗುವುದಿಲ್ಲ. ಇದು ನಿಶ್ಚಿತವಾದ ಮಾತು. ನಮ್ಮದು ಬರಗಾಲ ಏರಿಯಾ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ ತಿನ್ನುವುದಕ್ಕೆ ಕೂಳು ಇಲ್ಲ. ಏನು ಮಾಡುವುದು ಹೇಗೆ ಕಟ್ಟುವುದು? ಜನ ಊರು ಬಿಟ್ಟು ಹೊಗಿ ಬಿಟ್ಟಿದ್ದಾರೆ, ನೀವು ಬೇಕಾದರೆ ಮಂದಿಯನ್ನು ಹುಡುಕಿಸಿ 10 ಸಾವಿರ ಜನಸಂಖ್ಯೆದೊಳಗೆ ಮೂರು ಸಾವಿರ ಜನರು ಊರು ಬಿಟ್ಟು ಹೋಗಿದ್ದಾರೆ, ಗೋವಾ ಆ ಕಡೆಗೆ ಈ ಕಡೆಗೆ ಹೋಗಿದ್ದಾರೆ. ಹಾಗಾದರೆ ಏನು ಮಾಡೋಣ ನೀವು ಹೇಳ್ರಿ?

ಶ್ರೀ ಹಂಪನಗೌಡ ಬಾದರ್ಲಿ: ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ಹತ್ತು ಪರ್ಸೆಂಟ್ ಐದು ಪರ್ಸೆಂಟ್ ಂದು ಕುಡಿಯುವ ನೀರಿಗೆ ಜಲನಿರ್ಮಲ, ಸ್ವಜಲಧಾರೆ, ಇನ್ನಿತರ ಬೇರೆ ಬೇರೆ ಸ್ಕೀಮ್‌ಗಳಲ್ಲಿ ಇಂಟ್ರಡ್ಯೂಸ್ ಮಾಡಿದ್ದೀರಿ. ಇದರಿಂದ ಪರಿಣಾಮ ಏನಾಯಿತು ಎಂದರೆ ಕೇಂದ್ರ ಸರ್ಕಾರ ಕೊಟ್ಟಿರತಕ್ಕಂಥ ಅನುದಾನವನ್ನು ಖರ್ಚು ಮಾಡಲಾರದಂಥ ಅನೇಕ ಉದಾಹರಣೆಗಳನ್ನು ನಾವು ಕೊಡಬಹುದು. ಏಕೆಂದರೆ ಪಬ್ಲಿಕ್ ಕಾಂಟ್ರಿಬ್ಯೂಷನ್ ಕುಡಿಯುವ ನೀರಿಗೆ ಕೇಳುವುದಕ್ಕೆ ಹೋದರೆ ಹಳ್ಳಿಗಳಲ್ಲಿ ದುಡ್ಡು ಕೊಡುವಂಥ ಪರಿಸ್ಥಿತಿಯಲ್ಲಿ ಆ ಬಡ ಜನತೆ ಇಲ್ಲ. ನೀವು ಕಾಂಟ್ರಿಬ್ಯೂಷನ್ ಕೊಡಲಿಲ್ಲವೆಂದರೆ ಸ್ಕೀಂಗಳನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಆಗುವುದಿಲ್ಲ ಇಂಥ ಪರಿಸ್ಥಿತಿ ಕರ್ನಾಟಕ ರಾಜ್ಯದ ಅನೇಕ ಹಳ್ಳಿಗಳಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಫ್ಲೋರೈಡ್, ಕೆಮಿಕಲ್ ಕಂಟೆಂಟ್ಸ್ ಇರತಕ್ಕಂಥ ಹಳ್ಳಿಗಳೇನಿವೆ ಅವುಗಳಿಗೆ ರಿಯಾಯಿತಿ ಕೊಡುವ ವಿಚಾರದಲ್ಲಿ ಸರ್ಕಾರ ಗಮನಹರಿಸಬೇಕು, ಆ ವಿಚಾರದಲ್ಲಿ ಜಲ ನಿರ್ಮಲ ಸ್ವಜಲ ಧಾರ ಕೇಂದ್ರ ಸರ್ಕಾರದ ಇನ್ನು ಅನೇಕ ಕುಡಿಯುವ ನೀರಿನ ಯೋಜನೆಗೆ ನೀವೇನು ಪಬ್ಲಿಕ್ ಕಾಂಟ್ರಿಬ್ಯೂಷನ್ ಕೊಡಬೇಕೆನ್ನುವ ವಿಚಾರ ಇದೆ. ಅದನ್ನು ದಯವಿಟ್ಟು ಎಲ್ಲೆಲ್ಲಿ ಫೋರೈಡ್ ಕಂಟೆಂಟ್ ಕೆಮಿಕಲ್ ಕಂಟೆಂಟ್ ಇರತಕ್ಕಂಥ ಹಳ್ಳಿಗಳಿಗೆ ರಿಯಾಯಿತಿ ಕೊಟ್ಟು ಯೋಜನೆಗಳನ್ನು

ಪ್ರಾರಂಭ ಮಾಡುವ ಕೆಲಸ ಸರ್ಕಾರ ಮಾಡುತ್ತಿದೆಯೇ ಎಂಬುದು ನನ್ನ ಪ್ರಶ್ನೆ, ದಯವಿಟ್ಟು ಇದಕ್ಕೆ ಸನ್ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಗೋವಿಂದ ಎಂ. ಕಾರಜೋಳ್: ಮಾನ್ಯ ಸದಸ್ಯರು ತಾವೇನು ಕೇಳಿದಿರಿ..

ಶ್ರೀ ಶಿವಾನಂದ ಎಸ್.ಪಾಟೀಲ್: ಏಕೆಂದರೆ ಆ ಸ್ಕೀಂಗಳು 2007 ರೊಳಗೆ ಮುಗಿಯಬೇಕು ಅಲ್ಲವೇ? ಟರ್ಮೇ ಕ್ಲೋಸ್ ಆಗುತ್ತದೆ ಸರ್ಕಾರದ ನಿಲುವು ಏನು ಎಂದು ಗೊತ್ತಾಗಬೇಕು ಅಲ್ಲವೇ?

ಶ್ರೀ ಹಂಪನಗೌಡ ಬಾದರ್ಲಿ: ಏಕೆಂದರೆ ಜಲನಿರ್ಮಲ 2006ಕ್ಕೆ ಕಂಪ್ಲೀಟ್ ಮಾಡಬೇಕು. ಸುಮಾರು ಸಾವಿರ ಕೋಟಿರೂಗಳಲ್ಲಿ ಎರಡು ನೂರು ಕೋಟಿರೂ ಮಾತ್ರ ಖರ್ಚು ಆಗಿದೆ. ಇಲ್ಲಿಯವರೆಗೆ ಅದನ್ನು ಖರ್ಚು ಮಾಡಬೇಕಾದರೆ ಅನೇಕ ಸಮಸ್ಯೆಗಳು ಇವೆ. ದಯವಿಟ್ಟು ನಿಮ್ಮ ಕಛೇರಿಯಲ್ಲಿ ಒಂದು ಸಭೆ ಮಾಡಿ. ಆ ಸಂಬಂಧಪಟ್ಟ ಕಾರ್ಯದರ್ಶಿಗಳನ್ನು ಕರೆಸಿರಿ, ಎಲ್ಲೆಲ್ಲಿ ಯಾವ್ಯಾವ ಜಿಲ್ಲೆಗಳಲ್ಲಿ ಏನೇನು ಸಮಸ್ಯೆ ಇದೆ ಎಂದು ಕೇಳಿ. ಇಲ್ಲಿ ಎಲ್ಲವೂ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಅಲ್ಲಿರತಕ್ಕ ನ್ಯೂನ್ಯತೆಗಳನ್ನು ಸರಿಪಡಿಸತಕ್ಕಂಥ ಕೆಲಸ ಆದಾಗ ಮಾತ್ರ ಆ ಯೋಜನೆಗಳಿಗೆ ನಿಗದಿಪಡಿಸಿದಂಥ ಹಣ ಖರ್ಚು ಮಾಡುವುದಕ್ಕೆ ಆಗುತ್ತದೆ. ದಯವಿಟ್ಟು ನಿಮ್ಮ ಕಛೇರಿಯಲ್ಲಿ ಜಿಲ್ಲಾವಾರು ಆದರೂ ಕರೆಯಿರಿ, ಇಲ್ಲಾಂದ್ರೆ ಡಿವಿಜನ್ ವೈಸ್ ಆದರೂ ಕರೆಯಿರಿ, ಕರೆದು ಕುಳಿತುಕೊಂಡು ಯವ್ಯಾವ ಜಿಲ್ಲೆಯಲ್ಲಿ ಏನೇನು ಸಮಸ್ಯೆಗಳು ಇವೆ, ಆ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವಂಥ ಪ್ರಯತ್ನ ಆದಾಗ ಮಾತ್ರ ಈ ಯೋಜನೆಗಳು ಕಾರ್ಯಗತವಾಗುತ್ತವೇ. ಏಕೆಂದರೆ ಇವೆಲ್ಲಾ ಸಾಲ ಪಡೆದಿರುವಂಥ ಯೋಜನೆಗಳು. ಸಾವಿರ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಸಾಲ ಪಡೆದಿದ್ದೀರಿ. ಆದು ಖರ್ಚು ಆಗಬೇಕು, ಯೋಜನೆಗಳು ಪೂರ್ಣ ಆಗಬೇಕು. ದಯವಿಟ್ಟು ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಗಮನಹರಿಸಬೇಕು.

ಅಧ್ಯಕ್ಷರು: ಸಚಿವರು ಉತ್ತರ ಕೊಡುವುದಕ್ಕೆ ಬಿಡಿ ಸ್ವಾಮಿ, ಸಲಹೆಗಳನ್ನು ಕೊಡುತ್ತಿದ್ದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲ್‌ರವರು ಒಂದು ಪರ್ಸೆಂಟ್ ಕಟ್ಟಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ಅದಕ್ಕೆ ನಾನು ರಾಜೀವಗಾಂಧಿ ಸಬ್‌ಮಿಷನ್‌ನಲ್ಲಿ ಇರತಕ್ಕಂಥದ್ದು, ಹಣ ಖರ್ಚಾಗಿಲ್ಲ ಅಂತಲ್ಲ ಇದು 1994–95ನೇ ಸಾಲಿನಲ್ಲಿ ಪ್ರಾರಂಭವಾಗಿರುವಂಥದ್ದು, 46 ಯೋಜನೆಗಳನ್ನು ತೆಗೆದುಕೊಂಡಿರುವುದು. ಈಗಾಗಲೇ 29 ಯೋಜನೆಗಳು ಕಂಪ್ಲೀಟ್ ಆಗಿವೆ 121 ಕೋಟಿ ರೂ ಇದ್ದಲ್ಲಿ 130 ಕೋಟಿ ರೂ ಈಗಾಗಲೇ ಖರ್ಚಾಗಿದೆ. ಎಸ್ಕಲೇಷನ್ ಆಗಿ ಖರ್ಚಾಗಿದೆ ಅದಕ್ಕೆ ಖರ್ಚು ಆಗಿಲ್ಲ ಎನ್ನತಕ್ಕಂಥದ್ದು ಸರಿಯಲ್ಲ. ಅದಕ್ಕೆ ಮಾನ್ಯ ಸದಸ್ಯರಿಗೆ ಸರ್ಕಾರದ ವತಿಯಿಂದ ಈ ಸದನಕ್ಕೆ ನಾನು ಒಂದು ಭರವಸೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಕುಡಿಯುವ ನೀರಿಗಾಗಿ ಯಾವುದೇ ರೀತಿಯ ತೊಂದರೆಯನ್ನು ಅನುಭವಿಸದ ಹಾಗೆ ಸರ್ಕಾರದ ವತಿಯಿಂದ ನೋಡಿಕೊಳ್ಳುವುದಕ್ಕೆ ಬದ್ಧರಿದ್ದೇವೆ. ಮತ್ತು ಮಾನ್ಯ ಎಸ್.ಎಸ್. ಪಾಟೀಲ್‌ರು, ರಾಜೀವಗಾಂಧಿ ಸಬ್‌ಮಿಷನ್ ನಲ್ಲಿ ಹಿರೇವಡ್ಡಟ್ಟಿ ಕುಡಿಯುವ ನೀರು ಯೋಜನೆ ಏನು ಇದೆ. ಕೂಡಲೇ ಅದನ್ನು ಮಾಡಬೇಕೆಂದು ಹೇಳುತ್ತಾರೆ ಆ ಯೋಜನ ಹೊರತುಪಡಿಸಿ ಇನ್ನುಳಿದ ಯೋಜನೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಹಂಪನಗೌಡ ಬಾದರ್ಲಿ : ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರನೇ ಕೊಡಲಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ :ಹೇಳಿದ್ದೇನಲ್ಲಾ

ಶ್ರೀ ಹಂಪನಗೌಡ ಬಾದರ್ಲಿ : ನಾನು ಕೇಳಿರತಕ್ಕಂಥ ಬಹಳಷ್ಟು ಪ್ರಶ್ನೆಗಳು

ಅಧ್ಯಕ್ಷರು: ಆಯಿತು ಆಯಿತು ಮಾನ್ಯ ಹೊನ್ನಾಳ್ಳಿ ಜಬ್ಬರ್‌ಖಾನ್ ಹಯತ್‌ಖಾನ್ ರವರು ಸದಸ್ಯರು ಗೈರು ಹಾಜರಿದ್ದಾರೆ ಮಾನ್ಯ ವಾಟಾಳ್ ನಾಗರಾಜ್‌ರವರು

ರಾಜ್ಯದಲಿ ಅನೇಕ ಕೃಷಿ ಬೆಳೆಗಳಿಗೆ ತಗಲುತ್ತಿರುವ ಮಾರಕ ರೋಗ

58 (258) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) (ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಅನೇಕ ಬೆಳೆಗಳಿಗೆ ಮಾರಕ ರೋಗ ತಗಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ. ಕಬ್ಬಿನ ಬೆಳೆಗೆ ಹೇನು ರೋಗ ಬಂದಿರುವುದು ನಿಜವೇ

ಆ. ಹಾಗಿದ್ದಲ್ಲಿ ರೋಗ ತಡೆಗಟ್ಟಲು ಸರ್ಕಾರದ ಕ್ರಮವೇನು?

ಶ್ರೀ ಬಂಡಪ್ಪ ಕಾಶಂಪೂರ (ಕೃಷಿ ಸಚಿವರು):

ಅ. ಹೌದು

ಆ. ಹೌದು

ಆ. ಈ ಕೀಟದ ಹತೋಟಿಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಇಲಾಖೆ ಮತ್ತು ಕೃಷಿ ವಿಶ್ವ ವಿದ್ಯಾಲಯದ ತಜ್ಞರ ತಂಡಗಳನ್ನೊಳಗೊಂಡ ಪೀಡೆ ಸಮೀಕ್ಷಣಾ ತಂಡಗಳನ್ನು ರಚಿಸಲಾಗಿದ್ದು ತಂಡದ ಶಿಫಾರಸ್ಸಿನಂತೆ ನಿಯಂತ್ರಣ ಕೈಗೊಳ್ಳಲಾಗಿದೆ.

2) ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉನ್ನತ ಸಮಿತಿಯನ್ನು ರಚಿಸಿ ನಿಯಂತ್ರಣ ಕಾರ್ಯತಂತ್ರ ರೂಪಿಸಲಾಗಿದೆ.

3) ಈ ಕೀಟವು ಮಹಾರಷ್ಟ್ರ ಗಡಿಯಿಂದ ಬಂದಿರುವುದರಿಂದ ಅಲ್ಲಿಯ ಕೃ.ವಿ.ವಿ ತಜ್ಞರುಗಳೊಂದಿಗೆ ಚರ್ಚಿಸಿ ಸಮಗ್ರ ಕೀಟ ನಿಯಂತ್ರಣ ಕಾರ್ಯಕ್ರಮ ರೂಪಿಸಲಾಗಿದೆ.

4) ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಮತ್ತು ಸಸ್ಯ ಸಂರಕ್ಷಣೆ ಉಪಕರಣಗಳ ವಿತರಣೆ.

5) ಕೀಟ ನಿಯಂತ್ರಣ ಬಗ್ಗೆ ವ್ಯಾಪಕ ಪ್ರಚಾರ ಮಾಡಲಾಗಿದೆ. ಕಾರ್ಯ ಅಳವಡಿಸಲಾಗಿದೆ.

6) ರಾಜ್ಯದ ಎರಡೂ ಕೃ.ವಿ.ವಿ.ಗಳಿಗೆ ಸಂಶೋಧನೆಗೆ ಮತ್ತು ಕೀಟ ನಿರೋಧಕ ತಳಿಗಳನ್ನು ಅಭಿವೃದ್ಧಿಪಡಿಸಲು ರೂ. 137.28 ಲಕ್ಷ ಅನುದಾನ ನೀಡಲಾಗಿದೆ.

7) ಈ ಕೀಟ ಹತೋಟಿಗಾಗಿ ಕಳೆದ 4 ವರ್ಷಗಳಲ್ಲಿ 137 ಲಕ್ಷರೂಗಳ ಕೀಟನಾಶಕ ಹಾಗೂ ಸಸ್ಯಸಂರಕ್ಷಣಾ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಹಂಚಿಕೆಮಾಡಲಾಗಿರುತ್ತದೆ.

ಶ್ರೀ ವಾಟಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ರೋಗ ತಡೆಗಟ್ಟುವ ಬಗ್ಗೆ ಅನೇಕ ಶಿಫಾರಸ್ಸುಗಳನ್ನು ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಸಾವಿರಾರು ಎಕರೆ ಪ್ರದೇಶದಲಿ ಕಬ್ಬಿನ ರೋಗ ಇದು ಯಾವಾಗಲೂ ಬಂದಿರಲಿಲ್ಲ, ಕಬ್ಬಿಗೆ ರೋಗಾನೆ ಬರುವದಿಲ್ಲವೆಂದು ಹೇಳುವ ಕಾಲ ಇತ್ತು ತಮ್ಮ ಗಮನಕ್ಕೆ ತರುವುದು ಅಧ್ಯಕ್ಷರೆ, ಕಬ್ಬಿಗೆ ರೋಗವೇ ಬರುವುದಿಲ್ಲವೆಂದು ಹೇಳುವ ಕಾಲವೊಂದಿತ್ತು. ನಿನ್ನೆ ರಾತ್ರಿ ಮಂಡ್ಯದ್ದು ಇಡೀ ಕಬ್ಬಿನ ಗದ್ದೆಯ ಬಗ್ಗೆ ಟಿ.ವಿ.ಯಲ್ಲಿ ಬರುತ್ತಿತ್ತು ತಾವು ನೋಡಿದಿರೋ ಇಲ್ಲವೋ ಗೊತ್ತಿಲ್ಲ. ಇಡೀ ಮಂಡ್ಯ ಜಿಲ್ಲೆಯಲ್ಲಿ ಬೇರೆ ಜಿಲ್ಲೆಯಲ್ಲಿ ಕಬ್ಬಿಗೆ ರೋಗ ತಗುಲಿದೆ ಅದನ್ನು ಪರಿಹಾರ ಮಾಡತಕ್ಕಂಥ ವ್ಯವಸ್ಥೆ ಪ್ರಾಮಾಣೀಕವಾಗಿಲ್ಲ ನಿಯಂತ್ರಣ ಮಾಡತಕ್ಕಂಥ ವ್ಯವಸ್ಥೆ ಪ್ರಾಮಾಣಿಕವಾಗಿಲ್ಲ. ಆದುದರಿಂದ ಈ ರೋಗ ನಿಯಂತ್ರಣಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆ ಮೈಸೂರು ಜಿಲ್ಲೆ, ಇಲ್ಲಿ ಅತಿ ಹೆಚ್ಚಿನ ಕಬ್ಬು ಬೆಳೆಯತಕ್ಕಂಥ ಜಿಲ್ಲೆಗಳು. ಈ ಜಿಲ್ಲೆಗಳ ಜೊತೆಗೆ ಉತ್ತರ ಕರ್ನಾಟಕದ ಕೆಲವು ಭಾಗ ಈ ಜಿಲ್ಲೆಗಳಲ್ಲಿ ಈಗ ಉಳಿದಿರತಕ್ಕಂಥದ್ದು ಕಬ್ಬು ಇದೊಂದೇ. ಸಾರ್ ತೆಂಗಿಗೆ ರೋಗ ಬಂತು, ಆದರಿಂದಾಗಿ ರೈತನಿಗೆ ತೊಂದರೆಯಾಯಿತು, ರೇಷ್ಮೆಗೆ ರೋಗ ಬಂತು, ಅದನ್ನು ಸರಿಪಡಿಸಲಿಕ್ಕೆ ಆಗಲಿಲ್ಲ. ಭತ್ತಕ್ಕೆ ರೋಗ ಬಂದಿದೆ. ತೆಂಗಿಗೆ ಬಂದಿದೆ, ರೇಷ್ಮೆಗೆ ಬಂದಿದೆ, ಈ ಪ್ರಕಾರ ಇಲಾಖೆಯವರು ಸುಮ್ಮನೆ ನಾವು ಸಮಿತಿಗಳನ್ನು ಮಾಡುತ್ತೇವೆ. ಇದನ್ನು ವಿಶ್ವವಿದ್ಯಾನಿಲಯಗಳಿಗೆ ಕಳುಹಿಸುತ್ತಿದ್ದೇವೆ, ಅವರು ಪರೀಕ್ಷೆ ಮಾಡುತ್ತಾರೆಂದರೆ ಇದರಿಂದ ಏನೂ ಆಗುವುದಿಲ್ಲ. ಇದರ ಬಗ್ಗೆ ಪರಿಣಾಮಕಾರಿಯಾಗಿ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು

ಶ್ರೀ ಬಂಡೆಪ್ಪ ಕಾಂಶ್ಪೂರ್ : (ಕೃಷಿ ಸಚಿವರು) : ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಬಹಳ ಸೂಕ್ತವಾದ ಪ್ರಶ್ನೆ ಕೇಳಿದ್ದಾರೆ. 2002ನೇ ಇಸ್ವಿಯಲ್ಲಿ ಇದು ಮೊದಲನೇ ಬಾರಿ ಈ ರೋಗ ನಮ್ಮ ರ್ನಾಟಕದಲ್ಲಿ ಬಂದಿದೆ. ಅದು ಫಸ್ಟ್ ಮಹಾರಾಷ್ಟ್ರದಲ್ಲಿ ಶುರುವಾಗಿ ನಮ್ಮ ಬೆಳಗಾಂ ಏರಿಯಾದಲ್ಲಿ ಈ ರೋಗ ಹಬ್ಬಿ, ಇಲ್ಲಿ ಬೀದರ್ ಜಿಲ್ಲೆಗೂ ಬಂದು ಅಲ್ಲಿ ಎಲ್ಲಾ ನಾವು ಕಷ್ಟ ಅನುಭವಿಸಿದೆವು. ನಮ್ಮ ಉತ್ತರ ಕರ್ನಾಟಕದ ಜನ ಕಷ್ಟ ಅನುಭವಿಸಿದ್ದೇವೆ. ಈಗ ಈ ಕಡೆ ಈ ರೋಗ ಹರಡುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಧಾರವಾಡ ಮತ್ತು ಬೆಂಗಳೂರು ಎರಡು ವಿಶ್ವವಿದ್ಯಾನಿಲಯಗಳು, ಒಂದು ಕೋಟಿ ಮೂವತ್ತೇಳು ಲಕ್ಷ ರೂ ಅನುದಾನ ನೀಡಿ ಇದರ ಬಗ್ಗೆ ಬಹಳಷ್ಟು ಸಂಶೋಧನೆಯಾಗಿದೆ. ನಾನು ಮೊನ್ನೆ ಧಾರವಾಡಕ್ಕೆ ಹೋದಾಗಲೂ ಇದರ ಬಗ್ಗೆ ಮೈಕ್ರೋಮಸ್ ಹುಳುಗಳು ಏನು ಇವೆ, ಅದು ಬಿಟ್ಟರೆ ಆ ಬಿಳಿ ಹೇನು ತಿನ್ನುತ್ತದೆ. ಆಗ ತನ್ನಿಂದತಾನೆ ಈ ರೋಗ ಕಡಿಮೆಯಾಗುತ್ತದೆ. ನಮ್ಮ ಕಡೆಗೆ ಬಹಳಷ್ಟು ಸಕ್ಸಸ್‌ಫುಲ್ ಆಗಿದೆ. ಏಕೆಂದರೆ ನಾವೆಲ್ಲಾ ಕಬ್ಬು ಬೆಳೆಯುವವರು ಈ ಕಡೆ ಪೆಸ್ಟಿಸೈಡ್ಸ್ ಹಾಕಿದರೆ ಅದು 20 ದಿವಸದಲ್ಲಿ ಮತ್ತೆ ರೋಗ ಶುರುವಾಗುತ್ತದೆ. ಪರ್ಮ ನಮ್ಮ ಭಾಗದಲ್ಲಿ ರೋ ಸಿಸ್ಟಂ ಅಂದರೆ ವೈಡ್ ರೋ ಸಿಸ್ಟಂ ಮಾಡುತ್ತಿದ್ದೇವೆ. ಕಬ್ಬು ನಾಟಿ ಮಾಡುವ ಸಾಲನ್ನು ಮೊದಲು ಚಿಕ್ಕಚಿಕ್ಕದಾಗಿ ಮಾಡುತ್ತಿದ್ದು ಈಗ ಅದನ್ನು ಸ್ವಲ್ಪ ದೂರ ಹಾಕಿ ಮಾಡುತ್ತಿದ್ದೇವೆ. ಇದರಿಂದಾಗಿ ಏನು ಬಿಸಿಲು ಬೀಳುತ್ತೆ ಅದರಿಂದ ಸ್ವಲ್ಪ ಬಿಳಿಹೇನು ದೂರ ಹಾಕಿ ಮಾಡುತ್ತಿದ್ದೇವೆ. ಇದರಿಂದಾಗಿ ಏನು ಬಿಸಿಲಿ ಬೀಳುತ್ತೇ ಅದರಿಂದ ಸ್ವಲ್ಪ ಬಿಳಿಹೇನು ಏನು ಇದೆ ಅದು ಕಡಿಮೆಯಾಗುತ್ತದೆ. ಅದಕ್ಕೆ ಇಂಥ ಒಂದು ಸಿಸ್ಟಂನಲ್ಲಿ ಮುಂದೆ

ಕಬ್ಬು ಬೆಳೆಯುವರು ಇದನ್ನು ಅಡಾಪ್ಟ್ ಮಾಡಿದರೆ ಸ್ವಲ್ಪ ರೋಗ ಕಡಿಮೆಯಾಗುತ್ತದೆ ಆದರೂ ಇವತ್ತಿನ ಕಾಲದಲ್ಲಿ ಸನ್ಮಾನ್ಯ ಸದಸ್ಯರೇ ಮೈಕ್ರೋಮಸ್ ಬಯೋ ಕಂಟ್ರೋಲ್ ಏಜೆನ್ಸಿ ಇದೆ ಅದರ ಮುಖಾಂತರ ಆ ಭಾಗದಲ್ಲಿ ಎಲ್ಲಾ ಕಡೆಗೂ ಸರ್ಕಾರದ ವತಿಯಿಂದ ಮಾಡುತ್ತಿದ್ದೇವೆ ಅದರಿಂದ ಈ ರೋಗ ಕಂಟ್ರೋಲ್ ಆಗುತ್ತಿದೆ. ಬಹಳಷ್ಟು ಕಂಟ್ರೋಲ್ ಆಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಖಂಡಿತ ಕಡಿಮೆ ಆಗಿಲ್ಲ. ತಾವು ದಯವಿಟ್ಟು ಮಂಡ್ಯ ಜಿಲ್ಲೆಗೆ ಹೋಗಿ ನೋಡಿಕೊಂಡು ಬನ್ನಿ. ಮತ್ತೆ ಚಾಮರಾಜನಗರ ಜಿಲ್ಲೆಗೂ ಹೋಗಿ ನೋಡಿಕೊಂಡು ಬರಬೇಕು. ನಿಮ್ಮ ಭಾಗದಲ್ಲಿ ಈ ರೋಗ ಕಡಿಮೆಯಾಗಿದೆ ಎಂದು ತಾವು ಹೇಳುತ್ತಿದ್ದಿರಿ. ನಮ್ಮ ಕಡೆ ಮಾತ್ರ ಖಂಡಿತ ಕಡಿಮೆ ಆಗಿಲ್ಲ. ಆದ್ದರಿಂದ ಇದಕ್ಕೆ ಪರಿಹಾರ ಕೊಡುತ್ತೀರಾ? ಈಗಾಗಲೇ ರೇಷ್ಮೆ ಮತ್ತು ತೆಂಗು ಯಾವ ರೀತಿಯಾಗಿ ನಾಶವಾಯಿತೋ ಆದೇರೀತಿಯಾಗಿ ಇನ್ನು ಎರಡು ವರ್ಷದಲ್ಲಿ ಕಬ್ಬು ಕೂಡ ನಾಶ ಆಗತಕ್ಕಂಥ ಸ್ಥಿತಿ ಬರುತ್ತದೆ. ಒಂದು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದೇವೆಂದು ತಾವು ಹೇಳುತ್ತಿದ್ದೀರಿ. ಇಷ್ಟರಿಂದ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ತಡೆಗಟ್ಟುವಂಥ ಕೆಲಸ ಸಮರೋಪಾದಿಯಲ್ಲಿ ಮಾಡಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದ್ದನ್ನು ಕರೆಕ್ಟ್ ಆಗಿ ನೇರವಾಗಿ ಹೇಳಿ. ಸಚಿವರ ಬಗ್ಗೆ ತಕರಾರು ತೆಗೆಯಬೇಕೆಂಬ ಮತ್ತು ವಿರೋಧ ಮಾಡಬೇಕೆಂಬ ಉದ್ದೇಶ ನನಗೆ ಇಲ್ಲ. ಇವತ್ತು ನಿಜಕ್ಕೂ ಕೂಡ ತೊಂದರೆ ಇದೆ. ಆದ್ದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ದಯವಿಟ್ಟು ಸರ್ಕಾರ ಹೇಳಬೇಕು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಕಬ್ಬು ಮತ್ತು ತೆಂಗಿಗೆ ಬಂದಿರತಕ್ಕಂಥ ರೋಗಗಳಿಗೆ ಅವತ್ತಿನಿಂದಲೂ ಕೂಡ ಔಷಧಿಗಳನ್ನು ಹೊಡೆಯುತ್ತಾ ಬಂದಿದ್ದೇವೆ. ಹಾಗೆಯೇ ಇದಕ್ಕೆ ಬೇಕಾಗಿರತಕ್ಕಂಥ ಗೊಬ್ಬರವನ್ನೂ ಕೂಡ ಹಾಕುತ್ತಾ ಬರುತ್ತಿದ್ದೇವೆ. ಆದರೆ, ಈ ಒಂದು ರೋಗವನ್ನು ಸಮತೋಲನವಾಗಿ ಕಂಟ್ರೋಲ್‌ಮಾಡತಕ್ಕಂಥದ್ದು ಪ್ರಕೃತಿಯೇ ಹೊರತು, ನಾವು ಔಷಧಿ ಹೊಡೆಯುವುದರಿಂದ ಯಾವುದೇ ರೀತಿಯ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ನಾವು ಮುಖ್ಯವಾಗಿ ಔಷದಿ ಹೊಡೆಯತಕ್ಕಂಥ ಕೆಲಸವನ್ನು ಮಾಡುತ್ತಾ ಬರುತ್ತಿದ್ದೇವೆ. ಮೊದಲನೆಯದಾಗಿ ಹೇಳಬೇಕೆಂದರೆ ನಮಗೆ ಒಳ್ಳೆಯ ಗುಣಮಟ್ಟದ ಔಷಧಿ ಕೊಡತಕ್ಕಂಥದ್ದೂ ಕೂಡ ಕಡಿಮೆ ಇದೆ. ನಮ್ಮ ವೆಟರ್ನರಿ ಕೃಷಿ ಮತ್ತು ನಮ್ಮ ಸರ್ಕಾರಿ ಆಸ್ಪತ್ರೆಗಳಿಗೆ ಬರತಕ್ಕಂಥ ಔಷಧಿಗಳ ಗುಣಮಟ್ಟ ಕಡಿಮೆ ಇದೆ. ನುಸಿ ರೋಗ ಹೇಗೆ ಕಂಟ್ರೋಲ್ ಆಯಿತೆಂದರೆ, ಈ ವರ್ಷ ಮಳೆ ಸರಿಯಾಗಿ ಬಂದಿದ್ದರಿಂದ ನುಸಿ ರೋಗ ಕಂಟ್ರೋಲ್ ಆಗಿದೆಯೇ ಹೊರತು ನಮ್ಮ ಔಷಧಿಗಳಿಂದ ಅಲ್ಲ. ನಾವು ಪ್ರತಿ ಸಾರಿಯೂ ಕೂಡ ತೆಂಗಿನ ಮರಕ್ಕೆ ಚುಚ್ಚಿ ಚುಚ್ಚಿ ಔಷದಿ ಹೊಡೆದಿದ್ದೇವೆಂದು ಹೇಳಬಹುದು. ಆದರೆ ಯಾವುದೇ ತೆಂಗಿನ ಮರಕ್ಕೆ ಬಂದಿದ್ದಂಥ ನುಸಿ ರೋಗವನ್ನು ಕಂಟ್ರೋಲ್ ಮಾಡಿಲ್ಲ. ಬೇಸಿಕ್ ಆಗಿ ಹೇಳುವುದಾದರೆ, ಹೆಚ್ಚು ಬೆಳೆ ಬಂದಿದ್ದರಿಂದ ಪ್ರಕೃತಿಯಿಂದಲೇ ಈ ಒಂದು ರೊಗ ಕಡಿಮೆ ಆಗಿದೆ. ಇವತ್ತಿನ ದಿವಸ ಕಬ್ಬು ಅಥವಾ ಭತಕ್ಕೆ ಬರತಕ್ಕಂಥ ರೋಗಕ್ಕೆ ಒಂದು ಕಡೆಯಿಂದ ಔಷಧಿ ಹೊಡೆದುಕೊಂಡು ಹೋಗುತ್ತಿದ್ದರೆ ಮತ್ತೆ ಮತ್ತೆ ಆ ಕಡೆಯಿಂದ ರೋಗ ಪ್ರಾರಂಭ ಆಗುತ್ತಾ ಬರುತ್ತದೆ. ಮತ್ತೆ ನಾವು ಕೊಟರತಕ್ಕಂಥ ವಿಚಾರದಲ್ಲಿ

ಒಳ್ಳೆಯ ಪರಿಣಾಮ ಕೂಡ ಆಗುವುದಿಲ್ಲ. ಆದ್ದರಿಂದ ಔಷಧಿ ಸಿಂಪಡಿಸಿ ನಾವು ಕೃಷಿ ಮಾಡುತ್ತೇವೆಂಬ ಬೇಸಿಕ್ ಥಿಂಕಿಂಗ್ ಏನಿದೆ ಇದನ್ನು ಬದಲಾವಣೆ ಮಾಡಿಕೊಂಡರೆ ಮಾತ್ರ ಇವುಗಳನ್ನು ಕಂಟ್ರೋಲ್ ಮಾಡಬಹುದೇ ಹೊರತು ಔಷಧಿಯಿಂದ ಖಂಡಿತ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ : ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಮಾತನಾಡಬೇಕಾಗಿದೆ.

ಅಧ್ಯಕ್ಷರು: ಎಲ್ಲರೂ ಒಂದೊಂದು ಉಪ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಹೇಗೆ?

ಶ್ರೀ ಶಶಿಕಾಂತ್ ಅಕಪ್ಪ ನಾಯಕ್ : ಮಾನ್ಯ ಅಧ್ಯಕ್ಷರೆ ಇದರ ಬಗ್ಗೆ ಸಮಗ್ರವಾದಂಥ ಒಂದು ವಿಚಾರವನ್ನು ಮಾಡಬೇಕಾಗಿದೆ. ರೈತರು ಕೇಳಿದ ಕಡೆ ರೋಗ ಕಂಟ್ರೋಲ್ ಮಾಡತಕ್ಕಂಥ ಹುಳುಗಳನ್ನು ತೆಗೆದುಕೊಂಡು ಬಿಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಸರ್ಕಾರದವರೇ ಎಲ್ಲಾ ಕಡೆ ಒಂದೇ ಸಾರಿ ಹುಳುಗಳನ್ನು ತೆಗೆದುಕೊಂಡು ಹೋಗಿ ಬಿಟ್ಟರೆ ಕಂಟ್ರೋಲ್ ಮಾಡಬಹುದಾಗಿದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ರೈತರು ಈ ರೋಗದ ಬಗ್ಗೆ ಸಾಕಷ್ಟು ಕಷ್ಟ ಅನುಭವಿಸಿದ್ದಾರೆ. ನಮ್ಮಲ್ಲಿ ಸಂಪೂರ್ಣವಾಗಿ ಕಬ್ಬು ನಾಶವಾಗಿದೆ. ಮತ್ತೆ ಬೀಜಕ್ಕೆ ಸಹಿತ ಇಲ್ಲದಂಥ ಪರಿಸ್ಥಿತಿ ಕೆಲವೊಂದು ವರ್ಷ ಇತ್ತು. ಈ ವರ್ಷ ಮಳೆಯಾಗಿದ್ದರಿಂದ ರೈತರು ಔಷಧಿ ಹೊಡೆದು ಇದನ್ನು ಕಂಟ್ರೋಲ್ ಮಾಡಿದ್ದಾರೆ. ಆದರೆ, ಔಷಧಿ ಹೊಡೆಯುವುದರಿಂದ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ ನಿಜವಾಗಿಯೂ ಕೂಡ ಹುಳುಗಳನ್ನು ಬಿಟ್ಟು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಮಾಡಿದರೆ ಆಗುವುದಿಲ್ಲ. ಎಲ್ಲಾ ಕಡೆ ಒಂದೇ ಸಮಯದಲ್ಲಿ ಈ ಹುಳುಗಳನ್ನು ಬಿಟ್ಟು ಕಂಟ್ರೋಲ್ ಮಾಡಬೇಕು. ಮತ್ತೆ ಇದನ್ನು ಸರ್ಕಾರವೇ ಮಾಡಬೇಕು. ಏಕೆಂದರೆ ಇದನ್ನು ರೈತರು ಮಾಡಿದರೆ ಖಂಡಿತ ಆಗಲಾರದ ಸ್ಥಿತಿ ಇದೆ. ಏಕೆಂದರೆ ಕಬ್ಬು ಜಾಸ್ತಿ ಎತ್ತರ ಬೆಳೆದ ನಂತರ ಈ ಕೆಲಸ ಮಾಡುವುದಕ್ಕೆ ರೈತರಿಂದ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ದಯಮಾಡಿ ಬಹಳಷ್ಟು ಗಮನಹರಿಸಬೇಕು.

ಶ್ರೀ ಬಂಡೆಪ್ಪಾ ಕಾಶೆಂಪೂರ್ : ಸನ್ಮಾನ್ಯ ಅಧ್ಯಕ್ಷರೆ,ಮಾನ್ಯ ಸದಸ್ಯರು ಹೇಳಿರತಕ್ಕಂಥದ್ದು ನಿಜ ಏಕೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ 80 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಇದ್ದಂಥ ಬೆಳೆ ಬೇರೆ ಬೇರೆ ಲೆವಲ್‌ನಲ್ಲಿ ಎಫೆಕ್ಟ್ ಆಗಿದೆ. ಇದು ಒಂದು ಕಡೆ ಜಾಸ್ತಿಯಾಗಿದ್ದರೆ ಇನ್ನೊಂದು ಕಡೆ ಸ್ವಲ್ಪ ಕಡಿಮೆಯಾಗಿದೆ. ಆದರೆ, ನಮ್ಮ ವಿಜ್ಞಾನಿಗಳು ಮತ್ತು ವಿಶ್ವವಿದ್ಯಾಲಯಗಳ ಲೆವಲ್‌ನಲ್ಲಿ ಸ್ಟಡಿ ಮಾಡಿ ಮೈಕ್ರೋಮಾಸ್ ಎಂಬ ಹುಳುಗಳನ್ನು ಬಿಟ್ಟಿದ್ದರೆ ಈ ರೋಗವನ್ನು ಕಂಟ್ರೋಲ್ ಮಾಡಬಹುದಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಮೈಕ್ರೋಮಾಸ್ ಹುಳುಗಳನ್ನು ಬಿಟ್ಟರೆ ರೋಗ ಕಡಿಮೆ ಆಗುತ್ತದೆ. ನಾನು ಮೊನ್ನೆ ಧಾರವಾಡಕ್ಕೆ ಹೋದಾಗ ಇದನ್ನು ವಿತರಣೆ ಮಾಡಿ ಬಂದಿದ್ದೇನೆ. ಮುಂದಿನ ದಿನಗಳಲ್ಲಿ ರೈತರಿಗೆ ಬಹಳಷ್ಟು ಮೈಕ್ರೋಮಾಸ್ ಹುಳುಗಳನ್ನು ಸರ್ಕಾರದ ವತಿಯಿಂದ ಪೂರೈಸಿಕೊಡುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಮಂಡ್ಯ ಮತ್ತು ಇನ್ನೂ ಇತರ ಪ್ರದೇಶಗಳಲ್ಲಿರತಕ್ಕಂಥ ರೋಗದ ಬಗ್ಗೆ ತಕ್ಷಣವೇ ರಿಪೋರ್ಟ್ ತರಿಸಿಕೊಂಡು ಅದನ್ನು ಪರಿಶೀಲನೆ ಮಾಡಿ ಅದಷ್ಟು ಬೇಗನೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆ ಕೇಳುತ್ತೇನೆ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯತಕ್ಕಂಥ ರೈತರುಗಳನ್ನು ತಕ್ಷಣವೇ ಕರೆದು ಏನಾಗಬೇಕೆಂದು ತಾವು ಈಗ ಹೇಳಿರತಕ್ಕಂಥದ್ದನ್ನು ಅವರಿಗೆ ಹೇಳಿ ಭರವಸೆ ಕೊಡಬೇಕೆಂದು ತಮಗೆ ಹೇಳುತ್ತೇನೆ.

ಶ್ರೀ ಬಂಡಪ್ಪಾ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಈ ಸದನದ ಮುಗಿದ ಮೇಲೆ ಮಾಡುತ್ತೇನೆ. ಆದರೆ, ಈ ಕಲಾಪಗಳು ಇನ್ನು ಎಷ್ಟು ದಿವಸ ನಡೆಯುತ್ತದೆಂಬುದು ಗೊತ್ತಿಲ್ಲ. ಸದನ ಮುಗಿದ ಮೇಲೆ ನಾನು ಸ್ವತಃ ಮಂಡ್ಯಜಿಲ್ಲೆಗೆ ಭೇಟಿ ನೀಡಿ ಸಂಬಂಧಪಟ್ಟಂಥ ಅಧಿಕಾರಿಗಳನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿ ಅದರ ಬಗ್ಗೆ ಪರಿಶೀಲನೆಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಗೌರವಾನ್ವಿತ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್: ಸರ್ಕಾರದ ವತಿಯಿಂದ ಮೈಕ್ರೋಮಾಸ್ ಎಂಬ ಹುಳುಗಳನ್ನು ಕೊಟ್ಟರೆ ಮಾತ್ರ ಅನುಕೂಲವಾಗುತ್ತದೆ.

ಶ್ರೀ ಬಂಡಪ್ಪಾ ಕಾಶೆಂಪೂರ್: ಎಷ್ಟು ಅಗತ್ಯತೆ ಇದೆಯೋ ಅಷ್ಟನ್ನೂ ಸಹ ಸರ್ಕಾರದ ವತಿಯಿಂದ ಒದಗಿಸಿಕೊಡುವಂಥ ಕೆಲಸವನ್ನು ನಾವು ಮಾಡುತ್ತೇವೆ.

ರಾಜ್ಯದಲ್ಲಿ (ಸಮಗ್ರ) ಕೃಷಿ ನೀತಿ ಜಾರಿ

59 (256) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) (ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಸಮಗ್ರ ಕೃಷಿ ನೀತಿಯನ್ನು ರಚಿಸಲಾಗಿದೆಯೇ

ಆ. ಸಮಗ್ರ ಕೃಷಿ ನೀತಿಯಲ್ಲಿ ಉತ್ತೇಜನ ಕಾರಿಯಾಗಿರುವ ವಿಷಯಗಳು ಯಾವುವು

ಇ. ಸಮಗ್ರ ಕೃಷಿ ನೀತಿಯನ್ನು ಜಾರಿಗೆ ತರಲಾಗಿದೆಯೇ

ಸಮಗ್ರ ಕೃಷಿ ನೀತಿ ಉತ್ತರ ಕರ್ನಾಟಕಕ್ಕೆ ಆಗುವಂತಹ ಲಾಭಗಳೇನು?

ಶ್ರೀ ಬಂಡಪ್ಪಾ ಕಾಶೆಂಪೂರ್ (ಕೃಷಿ ಸಚಿವರು):

ರಾಜ್ಯದಲ್ಲಿ ಪ್ರಥಮ ಬಾರಿಗೆ 1995ರಲ್ಲಿ ಕೃಷಿ ನೀತಿಯನ್ನು ಜಾರಿಗೆ ತರಲಾಗಿತ್ತು. ಈ ಮಧ್ಯೆ ಕೇಂದ್ರ ಸರ್ಕಾರವು ಹೆಸರಾಂತ ಕೃಷಿ ತಜ್ಞರಾದ ಡಾ: ಎಂ.ಎಸ್. ಸ್ವಾಮಿನಾಥ್‌ರವರ ಅಧ್ಯಕ್ಷತೆಯಲ್ಲಿ ರೈತರ ರಾಷ್ಟ್ರೀಯ ಕೃಷಿ ಆಯೋಗ ಒಂದನ್ನು ರಚಿಸಿದ್ದು ಈ ಆಯೋಗವು ರಾಷ್ಟ್ರದಲ್ಲಿ ಸಮಗ್ರ ಕೃಷಿ ನೀತಿಯನ್ನು ರಚಿಸುವ ಸಲುವಾಗಿ ಎಲ್ಲಾ ರಾಜ್ಯಗಳ ಜೊತೆಗೆ ಕರ್ನಾಟಕಕ್ಕೂ ಸಹ ಬೇಟಿ ನೀಡಿ ಕೃಷಿ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದೆ. ಈ ಮಧ್ಯೆ ರಾಜ್ಯ ಸರ್ಕಾರ 2006–07ನೇ ಸಾಲಿನ 07ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ತಜ್ಞರ ಸಮಿತಿಯೊಂದನ್ನು ರಚಿಸಲು ಪ್ರಸ್ತಾಪಿಸಿದ್ದು ಈ ಸಮಿತಿಯು ರಾಜ್ಯ ಸರ್ಕಾರವು ಘೋಷಿಸಿರುವ ಪಂಚಸೂತ್ರಗಳ ಆಧಾರದ ಮೇಲೆ ಕೃಷಿಯಸಮಗ್ರ ಬೆಳವಣಿಗೆ ಬಗ್ಗೆ ಅಧ್ಯಯನ ನಡೆಸಿ ತನ್ನ ಶಿಫಾಸ್ಸುಗಳನ್ನು ನೀಡಲಿದೆ. ರಾಷ್ಟ್ರೀಯ ರೈತರ ಆಯೋಗದ ವರದಿ ಹಾಗೂ ರಾಜ್ಯ ಸರ್ಕಾರವು ರಚಿಸಲು ಉದ್ದೇಶಿಸಿರುವ ತಜ್ಞರ ಸಮಿತಿಯ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ರಾಜ್ಯದಲ್ಲಿ ಪ್ರತೇಕ ಕೃಷಿ ನೀತಿಯನ್ನು ರಚಿಸಲು ಅವಶ್ಯಕತೆಯನ್ನು ಪರಿಶೀಲಿಸಲಾಗುವುದು.

ಶ್ರೀ ಶಿವಾನಂದ ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ರಾಜ್ಯಕ್ಕೆ ಹೊಸ ಸಮಗ್ರ ಕೃಷಿ ನೀತಿಯನ್ನು ತರುತ್ತೇವೆಂದು ಫೆಬ್ರವರಿ ತಿಂಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ ಈ ಸಂದರ್ಭದಲ್ಲಿ ಸನ್ಮಾನ್ಯ ಕೃಷಿ ಸಚಿವರಲ್ಲಿ ಕೇಳುವುದಕ್ಕೆ ಇಚ್ಛಿಪಡುವುದೇನೆಂದರೆ ಅನೇಕ ಕೃಷಿ ನೀತಿಗಳನ್ನು ಹಿಂದಿನ ಕೃಷಿ ಸಚಿವರು ಕೊಟ್ಟಿದ್ದಾರೆ. ಇದನ್ನು ತಾವು ನೀಡಿರತಕ್ಕಂಥ ಉತ್ತರದಲ್ಲಿ ಸಹ ಕೊಟಿದ್ದೀರಿ. ಇದರಲ್ಲಿ ಯಾವುದಾದರೊಂದು ಈಗ ಜಾರಿಯಲ್ಲಿ ಇದೆಯೇ ಅಥವಾ ರಾಷ್ಟ್ರಮಟ್ಟದಲ್ಲಿ ಇರತಕ್ಕಂಥ ಕೃಷಿ ನೀತಿಯನ್ನು ಜಾರಿಗೆ ತಂದರೆ, ರಾಜ್ಯದಲ್ಲಿರತಕ್ಕಂಥ ವಿವಿಧ ಹವಾಮಾನಕ್ಕೆ ಅನುಗುಣವಾಗಿ ಆ ಕೃಷಿನೀತಿ ಜಾರಿಗೆ ಬರುವುದಕ್ಕೆ ಸಾಧ್ಯವಿದೆಯೆ ಎನ್ನತಕ್ಕಂಥ ದೃಷ್ಟಿ ಕೋನ ಮತ್ತು ವಿಚಾರ ತಮ್ಮಲ್ಲಿ ಏನಾದರೂ ಇದ್ದರೆ ಸ್ವಲ್ಪ ಸಭೆಗೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಂಡೆಪ್ಪಾ ಕಾಶೆಂಪೂರ್ : ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮೊಟಮೊದಲಬಾರಿಗೆ 1995ರಲ್ಲಿ ಈ ಒಂದು ಕೃಷಿ ನೀತಿಯನ್ನು ಮಾಡಿದರು.

ಮಾನ್ಯ ಬೈರೇಗೌಡರು 1995ರಲ್ಲಿ ಒಂದು ಸಮಗ್ರವಾದ ಕೃಷಿ ನೀತಿಯನ್ನು ಪ್ರಕಟಣೆ ಮಾಡಿದ್ದರು. ಹೊಸ ಸರ್ಕಾರ ಈಗ ಬಂದಮೇಲೆ ಹೊಸದಾಗಿ ಕೃಷಿ ನಿತಿಯನ್ನು ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ತಮಗೆ ಹೇಳಬೇಕೆಂದರೆ, ನ್ಯಾಷನಲ್ ಕಮಿಷನ್ ಫಾರ್ ಅಗ್ರಿಕಲ್ಚರ್‌ನ ಡಾ: ಸ್ವಾಮಿನಾಥನ್‌ರವರು ಇಲ್ಲಿಗೆ ಬಂದು ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿ ಜೊತೆ ಬಹಳಷ್ಟು ಚರ್ಚೆ ಮಾಡಿದ್ದಾರೆ. ಮತ್ತೆ ನ್ಯಾಷನಲ್ ಕಮಿಷನ್ ಫಾರ್ ಅಗ್ರಿಕಲ್ಚರವರು ರೆಕೆಮೆಂಡ್ ಮಾಡಿರತಕ್ಕಂಥ ಪಂಚಸೂತ್ರಗಳನ್ನು ಸನ್ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಅಳವಡಿಸಿರತಕ್ಕಂಥದನ್ನು ಹೇಳಿದ್ದಾರೆ. ಇವೆಲ್ಲವನ್ನು ಸೇರಿಸಿಕೊಳ್ಳುವುದರ ಜೊತೆಗೆ ಕಳೆದ 10 ವರ್ಷಗಳಲ್ಲಿ ಬಹಳಷ್ಟು ಬದಲಾವಣೆ ಕೂಡ ಆಗಿದೆ. ಅದ್ಯಾವುದೆಂದರೆ ಕ್ರೆಡಿಟ್ ಫೆಸಿಲಿಟಿಯಲ್ಲಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೂ ಕೂಡ ಈಗ ಸಾಕಷ್ಟು ಸವಲತ್ತುಗಳು ಸಿಕ್ಕಿವೆ. ಇದರಿಂದ ಇವತ್ತಿನ ದಿವಸ ಬಹಳಷ್ಟು ಏರಿಯಾದಲ್ಲಿ ತೋಟಗಾರಿಕೆ ಕ್ರಾಪ್ ಅಭಿವೃದ್ಧಿಯಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ತಾಲ್ಲೂಕುವಾರು ಕ್ರಾಪ್ಸ್ ಬಗ್ಗೆ ಸ್ಟಡಿ ಮಾಡಿ ಅದಕ್ಕೆ ಅನುಗುಣವಾಗುವಂತೆ ಸನ್ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಫುಡ್ ಪ್ರೋಸೆಸಿಂಗ್‌ಗೆ ಕೆಲವು ಅಲೋಕೇಶನ್ ಮಾಡಿದ್ದಾರೆ. 1995ರಲ್ಲಿ ಜಾರಿಗೆ ತಂದಿರತಕ್ಕಂಥ ಕೃಷಿ ನೀತಿ ಮತ್ತು ಈ ರೀತಿಯಾದ ಒಳ್ಳೆಯ ಶಿಫಾರಸ್ಸುಗಳೆಲ್ಲವನ್ನೂ ಸೇರಿಸಿಕೊಂಡು ಒಂದು ಹೊಸ ಕೃಷಿ ನೀತಿಕೊಡುವ ವಿಚಾರದ ನಿಟ್ಟಿನಲ್ಲಿ ಸರ್ಕಾರ ಇದೆ. ಮುಂದಿನ ದಿನಗಳಲ್ಲಿ ಇದನ್ನು ತಮಗೆ ತಿಳಿಸುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ರಾಜಣ್ಣನವರದು.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಉಪ ಪ್ರಶ್ನೆ ಕೇಳಬೇಕಾಗಿದೆ.

ಅಧ್ಯಕ್ಷರು: ಇನ್ನು ಎಷ್ಟು ಉಪ ಪ್ರಶ್ನೆ ಕೇಳುತ್ತೀರಿ?

ಶ್ರೀ ಶಿವಾನಂದ ಎಸ್.ಪಾಟೀಲ್ : ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡದಿದ್ದರೆ

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ರಾಜಣ್ಣನವರದು.

ಶ್ರೀ ಶಿವಾನಂ ಎಸ್.ಪಾಟೀಲ್: ಮಾನ್ಯ ಅಧಯಕ್ಷರೆ, ನಾನ ಉಪ ಪ್ರಸ್ನೆ ಕೇಳಬೇಕಾಗಿದೆ.

ಅಧ್ಯಕ್ಷರು : ಇನ್ನು ಎಷ್ಟು ಉಪ ಪ್ರಶ್ನೆ ಕೇಳುತ್ತೀರಿ?

ಶ್ರೀ ಶಿವಾನಂ ಎಸ್.ಪಾಟೀಲ್ : ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡದಿದ್ದರೆ ನಾವೇಕೆ ಪ್ರಶ್ನೆ ಕೇಳಬೇಕು? ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಡಾಃ ಸ್ವಾಮಿನಾಥನ್‌ರವರು ಬಂದು ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿದ್ದಾರೆಂದು ತಾವು ಹೇಳಿರತಕ್ಕಂಥದ್ದು ನಿಜ. ಆದರೆ ಹಾಲಿ ಯಾವ ಕೃಷಿ ನೀತಿ ನಿಮ್ಮಲ್ಲಿ ಜಾರಿಯಲ್ಲಿದೆ ಎಂಬುದನ್ನು ಹೇಳಿ? ಏಕೆಂದರೆ ಬಜೆಟ್‌ನಲ್ಲಿ ಎರಡು ಫುಡ್ ಪ್ರೋಸೆಸಿಂಗ್ ಯುನಿಟ್ ಕೊಟ್ಟರೆ ಅದ ಕೃಷಿ ನೀತಿಯಾಗುವುದಿಲ್ಲ. ಮತ್ತೆ ಡ್ರಿಪ್ ಇರಿಗೇಷನ್‌ಗೆ ಇಡೀ ರಾಜ್ಯಕ್ಕೆ ಸಬ್ಸಿಡಿ ಕೊಟ್ಟರೆ ಅದು ಕೃಷಿ ನೀತಿಯಾಗುವುದಿಲ್ಲ. ಮತ್ತು ಬೇರೆ ಬೇರೆ ವಿಚಾರಗಳನ್ನು ಬಜೆಟ್‌ನಲ್ಲಿ ಸ್ವಲ್ಪ ಘೋಷಣೆ ಮಾಡಿದ್ದೀರಿ. ಆದರೆ ಕೃಷಿ ನೀತಿಗೆ ಏನು ಸಂಬಂಧಪಟ್ಟಿರತಕ್ಕಂಥ ದೃಷ್ಟಿಕೋನ ಆ ನಿಮ್ಮ ಬಜೆಟ್‌ನಲ್ಲಿ ಇಲ್ಲ. ಆದರೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಇದರ ಬಗ್ಗೆ ನಿಮಗೆ ಗೊತ್ತಿದೆ. ಕಲ್ಟಿವೇಷನ್‌ನಿಂದ ಹಿಡಿದುಕೊಂಡು ಹಾರ್ವೆಸ್ಟಿಂಗ್, ಪ್ರೋಸೆಸಿಂಗ್ ಮತ್ತು ಮಾರ್ಕೆಟಿಂಗ್‌ವರೆಗೆ ಏನಾದರೂ ನೀವು ಒಂದು ಕೃಷಿ ನೀತಿಯನ್ನು ಜಾರಿಗೆ ಮಾಡಿದರೆ ನಿಮ್ಮದು ಒಂದು ದೃಷ್ಟಿಕೋನ ಇಲ್ಲ. ಉದಾಹರಣೆಗೆ ಆಗಲೇ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕೇಳಿದರು. ನೀವು ಬಯೋಲಾಜಿಕಲ್ ಕಂಟ್ರೋಲ್ ಮೇಲೆ ಮಾಡುತ್ತೇವೆನ್ನುವಂತಹದ್ದನ್ನು ಹೇಳಿದ್ದೀರಿ. ಇದು ಬಂದು ಮೂರು ವರ್ಷಗಳಾಯಿತು. ಇದನ್ನು ಇದುವರೆವಿಗೂ ಯಾರೂ ಕಂಟ್ರೋಲ್ ಮಾಡಲಿಲ್ಲ. ಮಾನ್ಯ ಸದಸ್ಯರಾದ ಕುಮಾರಬಂಗಾರಪ್ಪನವರು ಹೇಳಿದಹಾಗೆ ಸೃಷ್ಟಿಯೇ ಅದಕ್ಕೊಂದು ರೆಮಿಡಿ ಇದಕ್ಕೆ ಮತ್ಯಾರ ಇಲ್ಲ. ಇದುವರೆವಿಗೂ ಇದರ ಬಗ್ಗೆ ಯಾವ ದೃಷ್ಟಿ ಕೋನವನ್ನು ಚೆಲ್ಲಲಿಲ್ಲ ಎನ್ನುವಂತಹ ಮಾತು ಬಹಳ ಸ್ಪಷ್ಟವಾಗಿದೆ. ಇದೇ ಬಜೆಟ್‌ನಲ್ಲಿ ಕೃಷಿ ನೀತಿಯನ್ನು ಪ್ರಕಟಣೆ ಮಾಡುತ್ತೇವೆನ್ನುವಂತಹ ಮಾತನ್ನು ಆಡಿದ್ದೀರಿ. ಅದು ಎಲ್ಲಿಯೂ ಕಾಣುತ್ತಿಲ್ಲ. ಕೃಷಿ ನೀತಿಯನ್ನು ಘೋಷಣೆ ಮಾಡುವ ಬಗ್ಗೆ ನಿರ್ದಿಷ್ಟವಾದ ದಿನಾಂಕವನ್ನು ಹೇಳಿ. ಹಿಂದೆ ಮಾನ್ಯ ಭೈರೇಗೌಡರು ಮಾಡಿದಂತಹ ಈ ಕೃಷಿ ನೀತಿಗೆ ನೀವು ಏನು ಒತ್ತನ್ನು ಕೊಟ್ಟಿದ್ದೀರಿ ಎನ್ನುವಂತಹ ಮಾತು ಮತ್ತು ವಿಚಾರ ನಿಮ್ಮ ಮನಸ್ಸಿನಲ್ಲಿ ಇದ್ದರೆ ಅದನ್ನು ಸಭೆಗೆ ತಿಳಿಸಬೇಕು. ಇದರ ಜೊತೆಗೆ ಇನ್ನೊಂದು ವಿಷಯವನ್ನು ಹೇಳುತ್ತೇನೆ. ಜಿಲ್ಲಾವಾರು ಕೃಷಿ ನೀತಿಯನ್ನು ಮಾಡಿ ಎಂದು ಎರಡು ವಿಶ್ವವಿದ್ಯಾನಿಲಯಗಳಿಗೆ ಆದೇಶವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ನಿಮ್ಮ ಹತ್ತಿರ ಏನಾದರೂ ಮಾಹಿತಿ ಇದೆಯೇ? ಉತ್ತರ ಮತ್ತು ದಕ್ಷಿಣದಲ್ಲಿರತಕ್ಕಂಥಹ ಎರಡು ಅಗ್ರಿಲಕ್ಚರ್ ಯೂನಿವರ್ಸಿಟಿಗೆ ಕೃಷಿ ನೀತಿಯನ್ನು ಜಿಲ್ಲಾವಾರು ಮಾಡಿ ಎಂದು ಹೇಳಿದ್ದೀರಿ. ಹಾಗಾದರೆ ಯಾವುದು ಜಾರಿಯಲ್ಲಿದೆ? ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಹೇಳಿದರು 1995ರಲ್ಲಿ ಮಾನ್ಯ ಭೈರೇಗೌಡರು ಏನು ಕೃಷಿ ನೀತಿಯನ್ನು ಮಾಡಿದ್ದಾರೆ, ಆದರಲ್ಲಿ ಸ್ವಲ್ಪ ಮಟ್ಟಿಗೆ ಈ ಪ್ರೆಸೆಂಟ್ ಸಿಚುಯೇಷನ್‌ನಲ್ಲಿ ಕೆಲವನ್ನು ಅಳವಡಿಸಿಕೊಂಡಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಆದರಲ್ಲಿ ಒಂದು ಪೈಸೆಯುಷ್ಟೂ ಇಂಪ್ಲಿಮೆಂಟಾಗಲಿಲ್ಲ. ಇದನ್ನು ನೀವು ಕೋಲ್ಡ್ ಸ್ಟೋರೇಜಲಿಟ್ಟು ನಿಮುದ್ದೇ ಆದಂತಹ ಕೃಷಿ ನೀತಿಯನ್ನು ತರುವುದಿದ್ದರೆ ಅದನ್ನಾದರೂ ತಾವು ಹೇಳಬೇಕು. ಅಥವಾ ನೀವು ಜಿಲ್ಲಾವಾರು ಎರಡು

ಯೂನಿವರ್ಸಿಟಿಗೆ ಒಂದು ಡೈರೆಕ್ಷನ್‌ನ್ನೂ ಕೊಟ್ಟಿದ್ದೀರಿ, ಅವರೂ ಸಹ ಎಲ್ಲಾ ಜಲ್ಲೆಯಲ್ಲಿ ಒಂದು ಕೃಷಿ ನೀತಿಯನ್ನು ಮಾಡಿಟ್ಟಿದ್ದಾರೆ. ಅದನ್ನು ಜಾರಿಗೆ ತರುತ್ತೀರೀ, ಮಾನ್ಯ ಬೈರೇಗೌಡರು ಹೇಳಿರುವುದನ್ನು ಜಾರಿಗೆ ತರುತ್ತಿರೋ, ನಿಮ್ಮದೇ ಆದಂತಹ ಕೃಷಿ ನೀತಿ ಜಾರಿಗೆ ಬರುತ್ತದೋ ಯಾವುದಾದರೂ ಸ್ಪಷ್ಟವಾದ ನಿರ್ದಿಷ್ಟವಾದ ಉತ್ತರವನ್ನು ನಾನು ನಿಮ್ಮಿಂದ ಬಯಸುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಆನ್ಯ ಸದಸ್ಯರು ಕೇಳಿದಂತಹ ಕೊಶ್ಚನ್ ಕರೆಕ್ಟ್ ಇದೆ. ಪಂಚ ಸೂತ್ರ ಇದು ನ್ಯಾಷನಲ್‌ನವರ ರೆಕಮೆಂಡೇಷನ್ ಆಗಿದೆ. ಇದು 1995ರ ರೆಕಮೆಂಡೇಷನ್ ಆಗಿದೆ. ಪ್ರಸೆಂಟ್ ಸಿಚುಯೇಷನ್‌ನಲ್ಲಿ ಫಾರ್ಮ ಕ್ರೆಡಿಟ್ ಯಾವ ರೀತಿ ಸಿಗುತ್ತದೆ. ಇಂಡಸ್ಟ್ರೀಯಲ್ ಪಾಲಿಸಿ ಯಾವ ರೀತಿಯಾಗಿದೆ. ಇವೆಲ್ಲವನ್ನೂ ಅಳವಡಿಸಿಕೊಂಡು ಹೊಸ ಕೃಷಿ ನೀತಿಯನ್ನು ತಯಾರು ಮಾಡುತ್ತೇವೆಂದು ಹೇಳುತ್ತೇನೆ. ಆದರ ಬಗ್ಗೆ ಇತ್ತೀಚೆಗೆ ಕೆಲಸ ನಡೆಯುತ್ತಿದೆ

ಅಪೂರ್ಣಗೊಂಡಿರುವ ಟಾಸ್ಕ್ ಫೋರ್ಸಸ್ ಕಾಮಗಾರಿಗಳು

60 (39) ಶ್ರೀ ಕ್ಯಾತಸಂದ್ರ ಎಸ್. ರಾಜಣ್ಣ (ಬೆಳ್ಗಾವಿ) (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ದಿನಾಂಕ 30.09.2005ರಂದು ಅಂತ್ಯಗೊಂಡ ಶಾಸಕರ ಅಧ್ಯಕ್ಷತೆಯ ಟಾಸ್ಕ್‌ಫೋರ್ಸ್ ಅವಧಿಯಲ್ಲಿ ತೆಗೆದುಕೊಂಡು ಕುಡಿಯುವ ನೀರಿನ ಕಾಮಗಾರಿಗಳು ಪೂರ್ಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಪೂರೈಸಲು ಸರ್ಕಾರ ಕಾಲಮಿತಿಯನ್ನೇನಾದರೂ ನಿಗದಿ ಪಡಿಸಿದೆಯೇ;

ಇ. ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು;

ಈ. ಈ ಕಾಮಗಾರಿಗಳು ಸಕಾಲದಲ್ಲಿ ಪೂರ್ಣ ಗೊಳ್ಳದಿರುವುದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ಹೊರೆ ಎಷ್ಟು (ವಿವರ ಕಾಮಗಾರಿವಾರು ನೀಡುವುದು)?

ಶ್ರೀ ಗೋವಿಂದ ಎಂ. ಕಾರ್ಜೋಳ: (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ. ಹೌದು

ಆ. ಅಗತ್ಯತೆಯನುಸಾರ ಮತ್ತು ಅನುದಾನ ಲಭ್ಯತೆ ಆಧರಿಸಿ ಮಂಜೂರಾದ ಕಾಮಗಾರಿಗಳನ್ನು ಸಾಮಾನ್ಯ ಕುಡಿಯುವ ನೀರಿನ ಪೂರೈಕ್ಕೆ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಿ ಪೂರ್ಣಗೊಳಿಸುಲು ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ದಿ: 26.9.05ರಲ್ಲಿ ಆದೇಶ ನೀಡಲಾಗಿದೆ..

ಇ. ಜೂನ್ 2006ರೊಳಗೆ ಪೂರ್ಣಗೊಳಿಸಲು ಪಂಚಾಯಿತಿಗಳಿಗೆ ಸೂಚನೆ ನೀಡಲಾಗುವುದು.

ಈ. ಅನುದಾನ ಲಭ್ಯಕ್ಕಿಂತ ಹೆಚ್ಚಿನ ಕಾಮಗಾರಿಗಳನ್ನು ಮಂಜೂರು ಮಾಡಿದ್ದರಿಂದ ಆಗಸ್ಟ್ 2005ಕ್ಕೆ ಸುಮಾರು ರೂ.72.15 ಕೋಟಿಗಿಂತಲೂ ಹೆಚ್ಚಿನ ಬಿಲ್ಲುಗಳು ಬಾಕಿ ಇದ್ದವು. ಜಿಲ್ಲಾವಾರು ವಿವರ ಅನುಬಂಧ –1ರಲ್ಲಿ ನೀಡಲಾಗಿದೆ.

ಅನುಬಂಧ -1 / Annexure -1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 39ರ ಲಗತ್ತು

ಕ್ರ.ಸಂ	ಜಿಲ್ಲೆ	ಟಾಸ್ಕ್‌ಫೋರ್ಸ್‌ನಡಿ ಅನುಷ್ಠಾನಗೊಳಿಸಿರುವ ಹೆಚ್ಚುವರಿ ಕಾಮಗಾರಿಗಳ ಬಾಕಿ ಬಿಲ್ ಪಾವತಿ ಸಂಬಂಧ ಆಗಸ್ಟ್ 2005ಕ್ಕೆ ಜಿಲ್ಲಾ ಪಂಚಾಯತಿಗಳಿಂದ ಅನುದಾನ ಬಿಡುಗಡೆಗಾಗಿ ಬಂದಿದ್ದ ಬೇಡಿಕೆ. (ರೂ.ಲಕ್ಷಗಳಲ್ಲಿ)
1	ಬೆಂಗಳೂರು(ಗ್ರಾ)	333.00
2	ಬೆಂಗಳೂರು(ನ)	123.00
3	ಕೋಲಾರ	758.70
4	ತುಮಕೂರು	1031.61
5	ಚಿತ್ರದುರ್ಗ	344.00
6	ದಾವಣಗೆರೆ	668.10
7	ಶಿವಮೊಗ್ಗ	308.00
8	ಮೈಸೂರು	174.20
9	ಮಂಡ್ಯ	429.13
10	ಚಾಮರಾಜನಗರ	552.44
11	ಹಾಸನ	38.15
12	ದ.ಕನ್ನಡ	25.00
13	ಉಡುಪಿ	58.58
14	ಕೊಡಗು	50.00
15	ಚಿಕ್ಕಮಗಳೂರು	110.00
16	ಬೆಳಗಾವಿ	232.00
17	ಧಾರವಾಡ	106.04
18	ಹಾವೇರಿ	283.00
19	ಗದಗ್	233.52
20	ಉ.ಕನ್ನಡ	255.00
21	ಬಿಜಾಪುರ	200.00
22	ಬಾಗಲಕೋಟೆ	150.00

23	ಗುಲ್ಬರ್ಗಾ	100.00
24	ಬೀದರ್	204.30
25	ರಾಯಚೂರು	100.00
26	ಕೊಪ್ಪಳ	247.00
27	ಬಳ್ಳಾರಿ	100.00
	ಒಟ್ಟು	**7214.77**

ಶ್ರೀ ಕ್ಯಾತಸಂದ್ರ, ಎನ್, ರಾಜಣ್ಣ: ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಈ ಟಾಸ್ಕ್‌ಫೋರ್ಸ್ ಅವಧಿಯಲ್ಲಿ ತೆಗೆದುಕೊಂಡತಂಹ ಕಾಮಗಾರಿಗಳು ಪೂರ್ಣ ಆಗದೆ ಇರುವುಧು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಪೂರ್ಣ ಆಗದೇ ಇರುವುದಕ್ಕೆ ಏನು ಕಾರಣಗಳು ಇವೆ ಎನ್ನುವುದು ನನ್ನ ಮೊದಲನೆಯ ಉಪಪ್ರಶ್ನೆಯಾಗಿದೆ. ಹಾಗೆಯೇ ಇದನ್ನು ಯಾವಾಗ ಪೂರ್ಣಮಾಡುತ್ತೀರಿ, ಎಂದು ಕೇಳಿದರೆ ನಾವು ದಿನಾಂಕ 26–9–2005ರಲ್ಲಿ ಪೂರ್ಣ ಮಾಡುವ ಬಗ್ಗೆ ಆದೇಶವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಯಾವಾಗ ಪೂರ್ಣವಾಗಿ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಪೂರ್ಣ ಆಗದೆ ಇರುವುದಕ್ಕೆ ಕಾರಣಗಳೇನು? ಇದನ್ನು ಯಾವಾಗ ಪೂರ್ಣ ಮಾಡುತ್ತೀರಿ. ಇನ್ನು ಮೂರನೆಯದಾಗಿ ಏನು ಆಗಸ್ಟ್ 2005ಕ್ಕೆ 72 ಕೋಟಿ ರೂಪಾಯಿಗಳದ್ದು ಹೊರೆ ಇದೆ. ಎಂದು ಜಿಲ್ಲಾವಾರು ವಿವರಗಳನ್ನು ಕೊಟ್ಟು ಹೇಳುತ್ತಾರೆ. ಆದರೆ ಆಗಸ್ಟ್ 2005 ಎಂದು ಹೇಳಿದರೆ ಟಾಸ್ಕ್‌ಫೋರ್ಸ್ ಮುಗಿದಿರುವುದು 30–9–2005ಕೆ ಆಗಸ್ಟ್ ತಿಂಗಳಿನ ಮಾಹಿತಿಯನ್ನು ಇಟ್ಟುಕೊಂಡಿರುವ ಇವರು ಟಾಸ್ಕ್‌ಫೋರ್ಸ್ ಮುಗಿದ ಅವಧಿಗೆ ಎಷ್ಟು ಹಣ ಇಟ್ಟಿದ್ದಾರೆಂಬುದಕ್ಕೆ ಮಹಿತಿ ಇಲ್ಲವೆಂದರೆ ಇವರು ಯಾವರೀತಿಯಾಗಿ ಅದಕ್ಕೆ ಹಣವನ್ನು ಒದಗಿಸಿಕೊಡುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಇದರ ಜೊತೆಗೆ ಮುಖ್ಯವಾಗಿ ಬಹಳಷ್ಟು ಗ್ರಾಮಗಳಲ್ಲಿ ಈಗಾಗಲೇ ಕುಡಿಯುವ ನೀರಿಗಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಟಾಸ್ಕ್‌ಫೋರ್ಸ್‌ನ್ನು ಮುಂದುವರಿಸುತ್ತೇವೆಂಬುದರ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆ ಬಂದಿತ್ತು. ಈಗ ಸ್ಪಷ್ಟವಾಗಿ ಆ ಟಾಸ್ಕ್‌ಫೋರ್ಸ್‌ನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮುಂದುವರಿಸುತ್ತೀರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಸ್ಪಷ್ಟ ಮಾಡಬೇಕೆಂದು ನಾನು ನಿಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ರಾಜಣ್ಣನವರು ಕೇಳಿದಂತಹ ಪ್ರಶ್ನೆಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಕಳೆದ ವರ್ಷ ಸರ್ಕಾರ ಏನು ಟಾಸ್ಕ್‌ಫೋರ್ಸ್‌ಗಳನ್ನು ಮಾಡಿತು, ಕಳೆದ 3–4 ವರ್ಷಗಳ ಕಾಲ ಮಳೆ ಇಲ್ಲದೆಯೇ ರಾಜ್ಯದಲ್ಲಿ ನೀರಿನ ತೊಂದರೆ ಇತ್ತು ಅದನ್ನು ಮನಗಂಡ ಸರ್ಕಾರ ಟಾಸ್ಕ್‌ಫೋರ್ಸ್‌ಗಳನ್ನು ಶಾಸಕರ

ಅಧ್ಯಕ್ಷತೆಯಲ್ಲಿ ಮಾಡಿತು. ಇದನ್ನು ಮಾಡಿದಂತಹ ಸಂದರ್ಭದಲ್ಲಿ 72 ಕೋಟಿ ರೂಗಳಷ್ಟು ಹೆಚ್ಚಿಗೆ ಹಣವನ್ನು ಸರ್ಕಾರ ಭರಿಸಿದೆ. ಆದರಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಹಾಗೂ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಸುಮಾರು 10 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಆ ಟಾಸ್ಕ್‌ಫೋರ್ಸ್‌ನಲ್ಲಿ ಖರ್ಚುಮಾಡಿದ್ದೇವೆ. ಎರಡನೆಯ ನಂಬರ್ ಕೋಲಾರದವರು ಖರ್ಚು ಮಾಡಿದ್ದಾರೆ. ತುಮಕೂರಿಗೆ 2005–06ನೇ ಸಾಲಿಗೆ ಸುಮಾರು 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದು ಅಲ್ಲದೆಯೇ ಇವತ್ತು ನಾನು 4 ದಿನಗಳಲ್ಲಿ 20 ರಿಂದ 23ನೇ ತಾರೀಖಿನವರೆಗೆ 2 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದ್ದೇವೆ. ಈಗ ಹಣದ ಕೊರತೆ ಏನು ಇಲ್ಲ. ಮತ್ತೆ ತಾವು ಏನು ಹೇಳುತ್ತಿದ್ದೀರಿ, ಇದನ್ನು ಯಾವಾಗ ಕಂಪ್ಲೀಟ್ ಮಾಡುತ್ತೀರಿ ಎಂದು ಕೇಳಿದ್ದೀರಿ ಸಾಧ್ಯವಾದಷ್ಟು ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಮಾಡಿದ್ದಾರೆ. ಜನರಲ್ ವಾಟರ್ ಸಪ್ಲೈ ಸ್ಕೀಂ ಏನಿದೆ ಅದರೊಳಗಡೆ ಇದನ್ನು ತೆಗೆದುಕೊಂಡು ಕಂಪ್ಲೀಟ್ ಮಾಡಿದ್ದಾರೆ. ಎಲ್ಲಿಯಾದರೂ ರಾಜ್ಯದಲ್ಲಿ 4–5 ಪರ್ಸೆಂಟ್ ಉಳಿದಿದ್ದರೂ ಕೂಡ ಸರ್ಕಾರ ಈ ವರ್ಷದಲ್ಲಿ ಅದನ್ನು ಒಂಪ್ಲೀಟ್ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಬಹುಶಃ 100ಕ್ಕೆ 75 ರಷ್ಟು ಶಾಸಕರು ನನ್ನನ್ನು ಒತ್ತಾಯ ಮಾಡಿದ್ದಾರೆ. ಕೆಲವರು ಪತ್ರಗಳನ್ನು ಬರೆದುಕೊಟ್ಟಿದ್ದಾರೆ. ಈಗಾಗಲೇ ನಾನು ಟಿಪ್ಪಣಿಯನ್ನು ಅನುಮೋದನೆಮಾಡಿ ಕಳುಹಿಸಿಕೊಟ್ಟಿದ್ದೇನೆ. ಟಾಸ್ಕ್ ಫೋರ್ಸ್‌ನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮುಂದುವರಿಸುತ್ತೇವೆನ್ನುವಂತಹದ್ದನ್ನು ಈ ಸದನದ ಮುಖಾಂತರ ಹೇಳುತ್ತಿದ್ದೇನೆ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ : ಮಾನ್ಯ ಸಚಿವರಿಗೆ ಅಬಿನಂದನೆಗಳು ನನಗೆ 21ನೇ ತಾರೀಖು ಒಂದು ಉತ್ತರ ಇಲ್ಲಿ ಬಂದಿದೆ. 21ನೇ ತಾರೀಖು ಇಲ್ಲಿ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಹಿ ಇರತಕ್ಕಂಥಹ ಲಿಖಿತ ಉತ್ತರವನ್ನು ನನಗೆ ಕೊಟ್ಟಿದ್ದಾರೆ. ಇದರ ಪ್ರಕಾರವೇ ಇನ್ನು 397 ಕಾಮಗಾರಿಗಳು ಪೂರ್ಣ ಆಗದೆ ಇರುವಂತಹದ್ದು ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನಗೆ ಇವರನ್ನು ನಾನು ಕೇಳಿದೆ, ಯಾವ ಕಾರಣದಿಂದ ಈ ಕಾಮಗಾರಿಗಳು ಪೂರ್ಣವಾಗಿಲ್ಲವೆಂದರೆ. ಅದಕ್ಕೆ ಕಾರಣಗಳನ್ನು ಹೇಳಲಿಲ್ಲ. ನಾನು ತಿಳಿದಹಾಗೆ ವಿದ್ಯುದ್ದೀಕರಣವೇ ಬಹಳ ಪ್ರಮುಖವಾದಂತಹದ್ದು. ಈ ವಿದ್ಯುದ್ದೀಕರಣಕ್ಕೆ ಸನ್ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಒಂದು ಆದೇಶ ಇದೆ. ಈ ಬೆಸ್ಕಾಂನಿಂದ 10ನೇ ಜನವರಿಯಲ್ಲಿ ಬರೆದಿರುವಂತಹದ್ದು. ನೀವು ಏನು ಪೈಪ್ಡ್ ವಾಟರ್ ಸಪ್ಲೈಗೆ 1 ಲಕ್ಷ ರೂಪಾಯಿಗಳು, ಮಿನಿವಾಟರ್ ಸಪ್ಲೈಗಳಿಗೆ 50 ಸಾವಿರ ರೂಪಾಯಿಗಳು ಠೇವಣಿಯನ್ನು ಕಟ್ಟಬೇಕೆಂದು ಇದೆ. ಅದು ಟಾಸ್ಕ್‌ಫೋರ್ಸ್‌ನಲ್ಲಿ ಬರತಕ್ಕಂತಹದ್ದಕ್ಕೆ ವಿನಾಯಿತಿ ಇತ್ತು. ಈಗ ವಿನಾಯಿತಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎನ್ನತಕ್ಕಂಥಹ ಅರ್ಥದಲ್ಲಿ ಒಂದು ಆದೇಶ ಬೆಸ್ಕಾಂನಿಂದ ಸಂಬಂಧಪಟ್ಟಂತಹ ಜಿಲ್ಲೆಯಲ್ಲಿರುವವರಿಗೆ ಹೋಗಿದೆ. ಈ ಹಿನ್ನೆಲೆಯಲ್ಲಿ ಅದು ತಡವಾಗುತ್ತಿದೆ. ಆದ್ದರಿಂದ ಆ ಕಾರಣವನ್ನು ಅವರು ತಿಳಿಸಲಿಲ್ಲ. ಬೆಸ್ಕಾಂನವರೂ ಕೂಡ ಸೂಕ್ತವಾದಂತಹ ನಿರ್ದೇಶನವನ್ನು ಕೊಡಬೇಕು. ಟಾಸ್ಕ್‌ಫೋರ್ಸ್‌ನಲ್ಲಿ ಯಾವ್ಯಾವುದಕ್ಕೆ ತೀರ್ಮಾನಗಳು ಆಗಿವೆ, ಅದಕ್ಕೆ ಯಾವ ರೀತಿ ಯಾವುದೇ ಹಣದ ಠೇವಣಿಯನ್ನು ಒತ್ತಾಯ ಮಾಡದೆಯೇ ಆ ಒಂದು ಕೆಲಸವನ್ನು ತೆಗದುಕೊಳ್ಳುತ್ತಿದ್ದರು. ಆ ರೀತಿಯಾಗಿ ಮಾಡಬೇಕು, ಅದನ್ನು ಮಾಡಿದರೆ

ಆಗ ಸಂಪೂರ್ಣವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಮಾನ್ಯ ಸಚಿವರಿಗೆ ನಿಮ್ಮ ಮೂಲಕ ತರುವುದಕ್ಕೆ ಬಯಸುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ : ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣ ನೀರಾವರಿ ಸಚಿವರು ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್‌ನ್ನು ಶಾಸಕರ ಅಧ್ಯಕ್ಷತೆಯೊಳಗಡೆ ಎಲ್ಲಾ ಕಡೆಗಳಲ್ಲಿ ನೇಮಕ ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಆ ಟಾಸ್ಕ್‌ಫೋರ್ಸ್‌ನಲ್ಲಿ ಯಾವ ಯೋಜನೆಗಳು ಒಳಪಡುತ್ತೇವೆ, ಈಗಾಗಲೇ ತಾವು ಗ್ರಾಮ ಪಂಚಾಯಿತಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಆ ಹಿನ್ನೆಲೆಯೊಳಗಡೆ ಜೊತೆಜೊತೆಗೆ ನಮ್ಮ ಮಾನ್ಯ ಸದಸ್ಯರಾದ ರಾಜಣ್ಣನವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದು ಬಹಳ ಸರಿಯಾದಂತಹ ಪ್ರಶ್ನೆಯಾಗಿದೆ. ಇವತ್ತು ಗ್ರಾಮಪಂಚಾಯತಿಗಳಿಗೆ ಹಣವನ್ನು ಬಿಡುಗಡೆ ಮಾಡಿ ಎನ್‌ಆರ್‌ಡಬ್ಲ್ಯೂಎಸ್‌ಗೆ 1 ಲಕ್ಷ ರೂಪಾಯಿಗಳನ್ನು ಡೆಫಾಸಿಟ್ ಮಾಡಬೇಕು. ಮಿನಿವಾಟರ್ ಸ್ಕೀಮ್‌ಗೆ 50 ಸಾವಿರ ರೂಪಾಯಿಗಳನ್ನು ಡೆಫಾಸಿಟ್ ಮಾಡಬೇಕು. ಇವತ್ತು ನನ್ನ ಕ್ಷೇತ್ರದೊಳಗಡೆ ಹೊಂಬಳಘಟ್ಟ ಎನ್ನುವಂತಹ ಗ್ರಾಮಪಂಚಾಯಿತಿ ಒಂದು ಲಕ್ಷ ರೂಪಾಯಿಗಳನ್ನು ಗ್ರಾಮಪಂಚಾಯಿತಿಯವರ ಕಡೆಯಿಂದ ಡೆಫಾಸಿಟ್ ಮಾಡುವುದಕ್ಕಾಗದಯೇ ಸುಮಾರು 6 ತಿಂಗಳಿಂದ ಕಂಪ್ಲೀಟಾಗಿರುವಂತಹ ಸ್ಕೀಂಗೆ ಕರೆಂಟಿನ ಸಂಪರ್ಕವನ್ನು ಕೊಡುವುದಕ್ಕಾಗುತ್ತಿಲ್ಲ. ಆದರ ಬಗ್ಗೆ ಮಾಹಿತಿಯನ್ನು ತಾವು ಕೊಡಬೇಕು. ಈ ಟಾಸ್ಕ್‌ಫೋರ್ಸ್ ಒಳಗಡೆ ಯಾವ ಯಾವ ಯೋಜನೆಗಳು ಸೇರುತ್ತವೆ ಎನ್ನುವುದರ ಬಗ್ಗೆಯೂ ತಾವು ಸ್ಪಷ್ಟೀಕರಣವನ್ನು ನೀಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಸದಸ್ಯರಾದ ರಾಜಣ್ಣನವರು ಕೇಳಿದಂತಹ ಪ್ರಶ್ನೆ ವಿದ್ಯುದ್ದೀಕರಣ ಪ್ರಕರಣಗಳು ಬಾಕಿ ಇದ್ದಾವೆಂದು ಹೇಳಿದ್ದಾರೆ. ಈಗ ಇಂಧನ ಇಲಾಖೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಕೆಪಿಟಿಸಿಎಲ್ ಅಧಿಕಾರಿಗಳ ಜೊತೆಯಲ್ಲಿ ಮತ್ತು ನನ್ನ ಇಲಾಖೆಯು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇನೆಂದು ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಇನ್ನೊರ್ವ ಸದಸ್ಯರು ಕೇಳಿದಂತಹ ಪ್ರಶ್ನೆ ಯಾವ ಯಾವ ಯೋಜನೆಗಳನ್ನು ಕಾರ್ಯಗತ ಮಾಡುವ ಬಗ್ಗೆ ನಮಗೆ ಅಧಿಕಾರವನ್ನು ಕೊಡುತ್ತೀರಿ ಎಂದರು ಜನರಲ್ ವಾಟರ್ ಸಪ್ಲೈ ಸ್ಕೀಂಗಳನ್ನು ಕಾರ್ಯಗತ ಮಾಡುವದಕ್ಕೆ ನಿಮಗೆ ಆಗುವುದಿಲ್ಲ. ಪೈಪ್ಡ್ ವಾಟರ್ ಸಪ್ಲೈ ಸ್ಕೀಂ ಆಗಿರಬಹುದು. ಕ್ರಿಯಾ ಯೋಜನೆಯೊಳಗಡೆ ಏನು ಸೇರಿ ಬರುತ್ತವೆ ಅದನ್ನು ತಾವು ಜಿಲ್ಲಾ ಪಂಚಾಯತಿ ಇಂಜನಿಯರಿಂಗ್ ವಿಭಾಗದ ಮುಖಾಂತರವೇ ಕೆಲಸವನ್ನು ಮಾಡಬೇಕಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ ಬೇಸಿಗೆ ಕಾಲದಲ್ಲಿ ಬರುತ್ತದೆ. ಇವತ್ತು ಯಾವುದೋ ಹಳ್ಳಿಯವರು ಬೋರ್‌ವೆಲ್ ಹಾಕಿಕೊಡಿ. ಪಂಪ್‌ಸೆಟ್ ಕೆಟ್ಟಿದೆ ಅದನ್ನು ಸರಿ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಅಂತಹ ವಿಶೇಷ ಸಂದರ್ಭದಲ್ಲಿ ಶಾಸಕರು ಅಧ್ಯಕ್ಷರಾಗಿ ಪರಿಹಾರ ಮಾಡಲಿಕ್ಕೆ ತಮಗೆ ಅಧಿಕಾರವನ್ನು ಕೊಡುತ್ತೇವೆ. ತಾವು ಆದೇಶವನ್ನು ಕೊಡಬಹುದು,

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ನಾಲ್ಕನೇ ಪಟ್ಟಿ.

ಆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ನಾಲ್ಕನೇ ಪಟ್ಟಿ

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಮಾನ್ಯ ಅಧ್ಯಕ್ಷರೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ನಾಲ್ಕನೇ ಪಟ್ಟಿಯಲ್ಲಿ ಇರತಕ್ಕಂಥ 31 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಈ ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂದಧ -1)

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಲಿಖಿತ ಮೂಲಕ ನೀಡಿರುವ ಉತ್ತರಗಳ ಪಟ್ಟಿಯೇ ನಮಗೆ ಬಂದಿಲ್ಲ.

ಅಧ್ಯಕ್ಷರು: ಉತ್ತರವನ್ನು ಸರ್‌ಕ್ಯುಲೇಟ್ ಮಾಡಿಲ್ಲವೇ? ಈಗ ಸರ್‌ಕ್ಯುಲೇಟ್ ಮಾಡುತ್ತಾರೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ. ಕೊಪ್ಪಳ ಜಿಲ್ಲೆಯಲ್ಲಿ ಬಸಪ್ಪ ಎಂಬಾತ ರೈತ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಡಿದ್ದರ ಬಗ್ಗೆ.

ಶ್ರೀ ಎನ್. **ಧರಂಸಿಂಗ್ (ವಿರೋಧ ಪಕ್ಷದ ನಾಯಕರು) :** ಮಾನ್ಯ ಸಭಾಧ್ಯಕ್ಷರೆ ಈಗ ರೆವಿನ್ಯೂ ಮಿನಿಸ್ಟರ್ ಸಹ ಸಭೆಯಲ್ಲಿ ಹಾಜರಿಲ್ಲ. ಕೊಪ್ಪಳ ಜಿಲ್ಲೆಯಲ್ಲಿ ಅಂಬೇಡ್ಕರ್ ಜಯಂತಿ ಆಚರಿಸುವ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿಗಳ ಎದುರುಗಡೆ ಮತ್ತು ಅಲ್ಲಿರತಕ್ಕಂತಹ ಪೋಲೀಸ್ ಅಧಿಕಾರಿಗಳು ಕೂಡ ಸಭೆಯಲ್ಲಿ ಉಪಸ್ಥಿತರಿದ್ದರು. ಬಸಪ್ಪ ಎಂಬ ಒಬ್ಬ ರೈತ, ಆತನ ವಯಸ್ಸು 45, ಎಲ್ಲಾ ಅಧಿಕಾರಿಗಳ ಎದುರು ವಿಷ ಸೇವಿಸಿ ಮೃತಪಟ್ಟಿದ್ದಾನೆ. ಏಕೆಂದರೆ ಆತನ ಭೂವಿವಾದಲ್ಲಿ ಬಹಳಷ್ಟು ವಿಳಂಬವಾಗಿದೆ, ಅವನಿಗೆ ನ್ಯಾಯ ಸಿಕ್ಕಿಲ್ಲ ರಾಜ್ಯದಲ್ಲಿ ಬೇರೆ ಬೇರೆ ಕಡೆಗೆ ಆತ್ಮಹತ್ಯೆ ನಡೆಯುತ್ತಿವೆ ಇದೇ ಪ್ರಪ್ರಥಮವೇನಲ್ಲ, ನಾವೆಲ್ಲರೂ ಕೂಡ ಅದನ್ನು ಬಗೆಹರಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಇದು ವಿಶೇಷವಾದ ಘಟನೆ ಕೊಪ್ಪಳ ಜಿಲ್ಲಾಧಿಕಾರಿಗಳ ಹಾಗೂ ಅಧಿಕಾರಿಗಳ ಎದುರಿಗೆ ಬಸಪ್ಪನೆಂಬ ಅಮಾಯಕ ವಿಷಯವನ್ನು ತೆಗೆದುಕೊಂಡು ಸಾಯುತ್ತಾನೆಂದರೆ, ಅವನ ಹೆಂಡತಿಯು ಕೂಡ ನಮ್ಮ ಭೂಮಿಯ ಇತ್ಯರ್ಥದ ವಿಷಯದಲ್ಲಿ ಅನ್ಯಾಯವಾದ ಕಾರಣ ನನ್ನ ಗಂಡ ವಿಷ ಸೇವಿಸಿ ಸತ್ತಿದ್ದಾನೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾಳೆ.. ಇದು ಬೇರೆ ಬೇರೆ ರೀತಿಯಲ್ಲಾಗುತ್ತದೆ. ರಾಜ್ಯದಲ್ಲಿ ಆಡಳಿತವನ್ನು ಮಾಡತಕ್ಕಂಥ ರೀತಿಯಲ್ಲಿ ನಮ್ಮ ದೇಶದಲ್ಲಿ ಏನು ವ್ಯವಸ್ಥೆಯಿದೆ. ಅದೂ ನಿಮಗೆ ನೇರವಾಗಿ ನಾನು ಆಪಾದನೆ ಮಾಡುತ್ತಿಲ್ಲ. ಇದು ವಿಶೇಷವಾದ ಘಟನೆಯಾಗಿದೆ, ಏಕೆಂದರೆ ಜಿಲ್ಲಾಧಿಕಾರಿಗಳ ಹಾಗೂ ಆಡಳಿತಾಧಿಕಾರಿಗಳ ಎದುರಿಗೆ ಒಬ್ಬ ವಿಷ ಸೇವಿಸಿ ಸತ್ತರೆ, ಅವನಿಗೆ ರಕ್ಷಣೆ ಎಲ್ಲಿದೆ, ಈ ರೀತಿ ಏಕಾಗುತ್ತದೆ, ಆಡಳಿತ ಈ ರಾಜ್ಯದಲ್ಲಿ ಏನು ಮಾಡುತ್ತದೆ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಇವತ್ತು ರೆವಿನ್ಯೂ ಮಂತ್ರಿಗಳು ಇದ್ದಾರೆ. ಅದಕ್ಕೆ ನಾನು ಈಗಲೇ ಉತ್ತರವನ್ನು ಬಯಸುತ್ತಿಲ್ಲ. ಇವತ್ತು ನಾನು ಏನಿಲ್ಲಿ ಹೇಳಿದ್ದೇನೆ ಅದರ ಬಗ್ಗೆ ತನಿಖೆ ಮಾಡಿ ಮತ್ತು ರೆವಿನ್ಯೂ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಅಧಿಕಾರಿಗಳು ಈ ಘಟನೆ ಏತಕ್ಕೆ ನಡೆಯಿತು ಎಂಬ ಬಗ್ಗೆ ಹೇಳಬೇಕು. ಇದರ ಬಗ್ಗೆ ಮತ್ತೊಮ್ಮೆ ಈ ಸದನದಲ್ಲಿ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಇದಕ್ಕೆ ಯಾರು ಕಾರಣಕರ್ತರು ಸಂಬಂಧಪಟ್ಟವರನ್ನು ಇದುವರೆಗೂ ನೀವು ಬಂಧಿಸಿರುವಿರಾ? ಆತ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿಗೆ ಹೋಗಬೇಕಾದರೆ ಎಷ್ಟು ನೊಂದಿರಬೇಕು, ಎಷ್ಟು ತೊಂದರೆಯನ್ನು ಅನುಭವಿಸಿರಬೇಕು. ಇವರಿಗೆ ತೊಂದರೆ ಕೊಟ್ಟಿರತಕ್ಕಂಥ ಅಧಿಕಾರಿಗಳು ಯಾರು? ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಂಡು ಬಂಧಿಸಬೇಕಾಗಿತ್ತು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಹೇಳಿ, ಮತ್ತೆ ಅದಕ್ಕೆ ಪರಿಹಾರ ಏನು ನೀಡಿದ್ದೀರಿ, ಅವರ ಜೀವನದ ಭದ್ರತೆಯ ಬಗ್ಗೆ ಏನು ಮಾಡಿದ್ದೀರಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ ನನ್ನ ಪರ್ಮಿಷನ್ ಇಲ್ಲದೇ ಎದ್ದು ನಿಂತು ಹೀಗೆ ಮಾತಾಡಿದರೆ ಹೇಗೆ? ಇನ್ನು ಮೇಲೆ ಇದನ್ನು ನಾನು ಸಹಿಸುವುದಿಲ್ಲ. ವಿರೋಧ ಪಕ್ಷದ ನಾಯಕರು ಎದ್ದು ನಿಂತರು ಎಂದು ಮಾತನಾಡಲಿಕ್ಕೆ ಅನುಮತಿ ಕೊಟ್ಟರೆ, ಎಲ್ಲರೂ ಪಟಕ್ಕನೆ ಎದ್ದು ನಿಂತು ಅಕ್ಯೂಸ್ ಮಾಡುತ್ತೀರಿ. I won't tolerate all these things ಇನ್ನು ಮುಂದೆ ಯಾವುದೇ ಸದಸ್ಯರು ನನ್ನ ಅನುಮತಿಯಿಲ್ಲದೆ ಮಾತನಾಡಬಾರದು. ದಯಮಾಡಿ ಕೊನೆಗೆ ಎಲ್ಲಾ ನನ್ನನ್ನೇ ಬಯ್ಯುವುದು. ನಿಮಗೆ ನಿಯಂತ್ರಣ ಮಾಡಲಿಕ್ಕಾಗುವುದಿಲ್ಲ ಎನ್ನುವುದು. ಆಯಿತು, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ನೀವು ಹೊಡೆಯಲಿಕ್ಕೆ ಬರಬೇಡಿ ಸರ್, ಭಯ ಆಗುತ್ತದೆ, ಹೊಡೆಯಬೇಡಿ. ಒಂದು ನಿಮಿಷ ಸರ್, ದಯಮಾಡಿ ತಮ್ಮನ್ನೇ ಕೇಳುತ್ತೇನೆ. ಆ ಉದ್ದೇಶ ನಮಗಿಲ್ಲ.

ಅಧ್ಯಕ್ಷರು : ಎಲ್ಲರೂ ತಮ್ಮ ಇಷ್ಟ ಬಂದ ಹಾಗೆ ಮಾತನಾಡುವುದು ಒಂದು ಅಭ್ಯಾಸ ಆಗಿಹೋಗಿದೆ, ನಿಮ್ಮ ಅಭ್ಯಾಸವನ್ನು ಬದಲಾಯಿಸಿಕೊಳ್ಳಬೇಕು. ನೀವು ನಮ್ಮ ಅನುಮತಿ ಪಡೆದು ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ದಯವಿಟ್ಟು ತಾವು ಕೋಪಿಸಿಕೊಳ್ಳಬೇಡಿ. ತಮಗೆ ಯಾರ ಮೇಲೋ ಕೋಪ ಇದ್ದರೆ ನನ್ನ ಮೇಲೆ ಸಿಟ್ಟು ಮಾಡಿಕೊಳ್ಳಬೇಡಿ. ನಾನು ಆ ರೀತಿ ಇಲ್ಲವೇ ಇಲ್ಲ.

ಅಧ್ಯಕ್ಷರು : ಇಲ್ಲ. ನಿಮ್ಮ ಮೇಲೆ ನನಗೆ ಕೋಪ, ಏಕೆಂದರೆ ನೀವು ಎದ್ದು ನಿಲ್ಲುವ ಮುಂಚೆ ನನ್ನ ಪರ್ಮಿಷನ್ ಕೇಳಿದೀರಾ? ದಯಮಾಡಿ, ಈಗ ನೀವು ಅನುಮತಿ ಕೇಳಿದ್ದರೆ ಕೊಡುತ್ತಿದ್ದೆನೋ,, ಬಿಡುತ್ತಿದ್ದೆನೋ ಆ ಪ್ರಶ್ನೆ ಬೇರೆ, ಅದನ್ನು ಬಿಟ್ಟು ತಕ್ಷಣ ಎದ್ದು ನಿಂತು ಮಾತನಾಡಲಿಕ್ಕೆ ಆರಂಭಸಿದರೆ ಎಲ್ಲರೂ ಅದೇರೀತಿ ಮಾಡಿದರೆ ಹೇಗೆ ಸದನವನ್ನು ನಿಯಂತ್ರಿಸುವುದು ಹೇಳಿ?

ಶ್ರೀ ವಾಟಾಳ್ ನಾಗರಾಜ್: ಆಯಿತು, ನಾನು ಆ ರೀತಿ ಮಾಡಿದ್ದು ತಪ್ಪಾಯಿತು, ಕ್ಷಮಿಸಿ, ಆಗಬಹುದೇ ಸ್ವಾಮಿ? ತಪ್ಪಾಯಿತು ಕ್ಷಮಿಸಿ, ತಪ್ಪಾಯಿತು ಕ್ಷಮಿಸಿ, ತಪ್ಪಾಯಿತು ಕ್ಷಮಿಸಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಅವರಿಗೆ ನಾನು ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಜಯಕುಮಾರ್‌ರವರು ದಯವಿಟ್ಟು ಕೈಯನ್ನು ತೋರಿಸಲಿಕ್ಕೆ ಹೋಗಬೇಡಿ. ಗಂಭೀರವಾಗಿ ಕುಳಿತುಕೊಳ್ಳಿ; ಗೊತ್ತಿದೆ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಅನುಮತಿಯನ್ನು ಅವರಿಗೆ ಕೊಟ್ಟಿದ್ದೇನೆ, ನೀವು ಕುಳಿತುಕೊಳ್ಳಿ. ಮಾನ್ಯ ಮಹದೇವ್ ಕುಳಿತುಕೊಳ್ಳಿ, ನಿಮ್ಮದು ಅತಿಯಾರಿತು, ಎದ್ದು ಹೊರಗಡೆ ಹೋಗುವಂತಹದ್ದು. This is too much ನೀವು ಸದನಕ್ಕೆ ಬಂದಿದ್ದೀರಿ, ಸದನದ ನಿಯಮಾವಳಿಯ ಪ್ರಕಾರ ನಡೆದುಕೊಳ್ಳಬೇಕು. ಮಾನ್ಯ ವಾಟಾಳ್‌ರವರೇ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ತಮಗೆ ಅಗೌರವವನ್ನು ಮಾಡಬೇಕೆಂಬ ಉದ್ದೇಶ ನನಗೆ ಇಲ್ಲ.

ಅಧ್ಯಕ್ಷರು : ದಯಮಾಡಿ, ಈಗ ನಾವು ಗಮನಿಸಿದ್ದೀರಿ, ಬೆಳಗಿನಿಂದ ನಾನು ಗಮನಿಸುತ್ತಿದ್ದೇನೆ. ಈಗ ಒಬ್ಬರು ಪ್ರಶ್ನೆಯನ್ನು ಕೇಳಿರುತ್ತಾರೆ, ಪ್ರಶ್ನೋತ್ತರವಾದ ಮೇಲೆ ಅವರು ಉಪ ಪ್ರಶ್ನೆಯನ್ನು ಕೇಳುವುದು. ಎಲ್ಲಾ ನಿಂತುಕೊಂಡು ಅವರವರೇ ಕೇಳುತ್ತಿರುವುದು. ಹೀಗಾದರೆ ಸದನವನ್ನು ನಿಯಂತ್ರಿಸುವುದು ಹೇಗೆ? ಈ ರೀತಿಯ ಪ್ರೈಮರಿ ನಿಯಮಗಳನ್ನು ಯಾರೂ ಫಾಲೋ ಮಾಡುವುದಿಲ್ಲವೆಂದರೆ ನಾನು ಸದನವನ್ನು ಹೇಗೆ ನಿಯಂತ್ರಿಸಬೇಕು? ಯಾವಾಗ ಗಲಾಟೆಯಾದರೆ ನಮ್ಮನ್ನು ಬಯ್ಯುವುದು, ಆಯಿತು, ದಯಮಾಡಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಏನಾಯಿತೆಂದರೆ, ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು.

ಅಧ್ಯಕ್ಷರು: ಆಯಿತು, ಈಗ ಕೇಳಿ ಅದನ್ನು ಮುಂದುವರೆಸುವುದು ಏಕೆ?

ಶ್ರೀ ವಾಟಾಳ್‌ನಾಗರಾಜ್: ಆಯಿತು, ಸ್ವಾಮಿ ಕೇಳಿದ್ದೇನೆ, ಈಗ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಮಹತ್ವವಾದ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಇವತ್ತು ರೈತನೊಬ್ಬ ಜಿಲ್ಲಾಧಿಕಾರಿಗಳ ಮುಂದೆಯೇ ಆತ್ಮಹತ್ಯೆಗೆ ಪ್ರಯತ್ನಿಸಿದ ಘಟನೆ ಬಹಳ ಒಂದು ದುರ್ದೈವದ ಸಂಗತಿ, ಯಾವ ಕಾರಣದ ಮೇಲೆ ಆತ ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪಯತ್ನ ಮಾಡಿದ ಎನ್ನುವಂತಾದ್ದು ಮತ್ತು ಆ ಭೂಮಿಯ ಒಂದು ವ್ಯವಹಾರದ ಬಗ್ಗೆ ಆತನಿಗೆ ಪರಿಹಾರ ಸಿಕ್ಕಿಲ್ಲವೆನ್ನುವ ಕಾರಣ ಇವತ್ತು ವರದಿಯಾಗಿದೆ. ಈಗಾಗಲೇ ಈ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ತಕ್ಷಣವೇ ಅದರ ಬಗ್ಗೆ ಎಲ್ಲ ವರದಿಯನ್ನು ತರಿಸಬೇಕು ಮತ್ತು ಇದರಲ್ಲಿ ಯಾರಾದರೂ ಅಧಿಕಾರಿಗಳ ತಪ್ಪು ಇದ್ದರೆ ಅವರ ಮೇಲೆ ಕ್ರಮವನ್ನು ಕೈಗೊಳ್ಳುವಂತಹ ಕೆಲಸವನ್ನೂ ನಾವು ಮಾಡುತ್ತೇವೆ. ಮತ್ತು ಆ ರೈತನ ಕುಟುಂಬಕ್ಕೆ ಏನು ಅನ್ಯಾಯವಾಗಿದೆ, ಅವನ ಭೂಮಿ ವ್ಯವಹಾರದಲ್ಲಿ ಏನು ತೊಂದರೆಯಾಗಿದೆ, ಅದನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಒಂದು ಸೂಚನೆಯನ್ನು ನಮ್ಮ ಎಲ್ಲಾ ಅಧಿಕಾರಿಗಳಿಗೆ ಕೊಡುತ್ತಿದ್ದೇನೆ. ಅದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬಂದ ಮೇಲೆ ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೇ ಹಿಂದೆ ಒಂದು ಬಾರಿ ನನ್ನ ಕ್ಷೇತ್ರದಲ್ಲಿ ಒಬ್ಬ ಹೆಣ್ಣುಮಗಳು ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್‌ಗೆ ಒಂದು ಅರ್ಜಿಯನ್ನು ಕೊಟ್ಟರು. ಆದರೆ ಅದನ್ನು ಅವರು ನೋಡದೇನೆ ಅರ್ಜಿಯನ್ನು ತಿರುಗಿಸಿ, ತಿರುಗಿಸಿ ಏನೂ ಮಾಡಲಿಲ್ಲ. ಕೊನೆ ಘಳಿಗೆಯಲ್ಲಿ ಆ ದೂರನ್ನು ಕೊಟ್ಟಿದ್ದ ಹೆಣ್ಣು ಮಗಳು ಅಲ್ಲೆ ವಿಷ ಸೇವಿಸಿ ಸತ್ತುಹೋದಳು. ಅದೇ ತರಹದ ಘಟನೆಯಾಗಿದೆ, ಸರ್ಕಾರದಲ್ಲಿ ಅಧಿಕಾರಿಗಳ ಮೇಲೆ ನಿಯಂತ್ರಣವಿಲ್ಲ. ಅಧಿಕಾರಿಗಳು ಅವರವರ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಅವರಿಗೆ ಸರಿಯಾದ ರೀತಿ ಉತ್ತರ ಕೊಟ್ಟರೆ ಈ ರೀತಿ ಘಟನೆಗಳು ನಡೆಯುವುದಿಲ್ಲ. ಆದ್ದರಿಂದ ತಾವು ಹೊಸದಾಗಿ ಬಂದಿದ್ದೀರಿ, ದಯಮಾಡಿ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡು ಕೆಲಸ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಇದರಲ್ಲಿ ಅಧಿಕಾರಿಗಳದ್ದು ಏನಾದರೂ ತಪ್ಪಾಗಿದ್ದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಹಾಗೂ ಆ ರೈತ ಕುಟುಂಬಕ್ಕೆ ಇವತ್ತೇನು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಘಟನೆಗಳು ಹಲವಾರು ವರ್ಷಗಳಿಂದ ನಡೆಯುತ್ತಿದೆ. ಈ ರೀತಿಯ ಆತ್ಮಹತ್ಯೆ ತಪ್ಪಿ ರೈತ ಒಳ್ಳೆಯ ಜೀವನ ನಡೆಸಬೇಕು ಎನ್ನುವ ಉದ್ದೇಶ ಸರ್ಕಾರಕ್ಕಿದೆ. ಆ ರೈತ ಕುಟುಂಬಕ್ಕೆ ಏನು ಅನ್ಯಾಯವಾಗಿದೆ ಅದಕ್ಕೆ ಸರಿಯಾದ ರೀತಿಯಲ್ಲಿ ಎಲ್ಲಾ ಪರಿಹಾರವನ್ನು ಸರ್ಕಾರ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತದೆಂದು ನಾನು ತಿಳಿಸಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಘಟನೆಗೆ ಕಾರಣಕರ್ತರಾದವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು.

ಅಧ್ಯಕ್ಷರು: ಅದನ್ನೇ ಅವರು ಹೇಳಿದ್ದಾರೆ. ಈಗ ಅಧಿಕಾರಿಗಳಿಂದ ತಪ್ಪಾಗಿದ್ದರೆ ಅವರ ಎನ್‌ಕ್ವೈರಿಯಿಂದ ತಪ್ಪಾಗಿದ್ದರೆ ಸಿವಿಯರ್ ಆಗಿ ಡೀಲ್ ಮಾಡದಿದ್ದರೆ ಆಗುವುದಿಲ್ಲ. ಈಗ ಇಲ್ಲಿಯವರೆಗೆ ಎಷ್ಟು ಘಟನೆಗಳು ನಡೆದಿವೆ, ಎಷ್ಟು ಜನ ಅಧಿಕಾರಿಗಳ ಮೇಲೆ ಯಾವರೀತಿಯಾದ ಕ್ರಮವನ್ನು ತಗೆದುಕೊಂಡಿದ್ದೀರಿ? ಯಾವ ಸರ್ಕಾರವೇ ಇರಲಿ, ಆ ಕಾರಣದಿಂದ ಇವತ್ತೇನು ಆಗಿದೆ ಬೇಲಿಯೇ ಎದ್ದು ಹೊಲವನ್ನು ಮೇಯುವ ಪರಿಸ್ಥಿತಿ ಬಂದಿದೆ. ಜನಸಾಮಾನ್ಯರು ಅಮಾಯಕರಾಗಿ ಬಿಟ್ಟಿದ್ದಾರೆ. ಏನೂ ನಡೆಯುವುದಿಲ್ಲ ಎನ್ನುವಂಥ ನಿಲುವು ಅವರಲ್ಲಿದೆ. ನೀವೆಲ್ಲಾ ಜನಪ್ರತಿನಿಧಿಗಳು ಇಲ್ಲಿದ್ದೀರಿ, ದಯಮಾಡಿ ನೀವೆಲ್ಲಾ ಕೇಳಿ. ಜನ ನಮ್ಮ ಮಾತು ನಂಬುವುದಿಲ್ಲ. ಏನಾದರೂ ಒಂದು ಖಾತೆ ಮಾಡಿಕೊಳ್ಳಬೇಕು ಇನ್ನೊಂದು ಮಾಡಿಕೊಳ್ಳಬೇಕು ಅಂದರೆ ಜನ ನಮ್ಮನ್ನು ನಂಬುವುದಿಲ್ಲ. ಅಧಿಕಾರಿಗಳು ಅವರ ಹತ್ತಿರವೇ ಮಾಡಿಸಿಕೋ ಹೋಗಯ್ಯ ಅಂತ ಅಂದುಬಿಡುತ್ತಾರೆ. ಆ ಕಾರಣದಿಂದ ಅವರಿಗೆ ದೂಪ, ದೀಪ ಹಾಕಿದ್ದರೆ ನಮ್ಮ ಕೆಲಸ ಆಗುವುದಿಲ್ಲ ಎನ್ನುವ ಒಂದು ಭಾವನೆ ಇದೆ. ಜನ ಪ್ರತಿನಿಧಿಗಳ ಮೇಲೆ ನಂಬಿಕೆ ಹೋಗಿದೆ ಜನರಿಗೆ. ಆ ಘಟ್ಟ ಮುಟ್ಟಿಬಿಟ್ಟಿದೆ. ಆದ್ದರಿಂದ ಸ್ವಲ್ಪ ಎಲ್ಲಾ ಜನ ಪ್ರತಿನಿಧಿಗಳು ಮತ್ತು ಸರ್ಕಾರ ಬಹಳ ಗಂಭೀರವಾಗಿ ಈ ಬಗ್ಗೆ ಯೋಜನೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತಕ್ಕಂಥಾದ್ದು ಮತ್ತು ಒಳ್ಳೆಯ ವಾತಾವರಣ ಕ್ರಿಯೇಟ್ ಮಾಡುವಂತಹ ಅಗತ್ಯ ಇದೆ.

(ಆ) ಪ್ರಿವಿಲೇಜ್ ನೋಟೀಸ್‌ಗೆ ಸಬಂಧಪಟ್ಟಂತೆ ನಿಯಮ 191ಕ್ಕೆ ರೂಲಿಂಗ್ ನೀಡುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ನಿಯಮ 191ರ ಪ್ರಿವಿಲೇಜ್ ಮೇಲೆ ತಾವು ಒಂದು ರೂಲಿಂಗ್ ಕೊಡುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು : ಕೊಡುತ್ತೇನೆ, ಕೊಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಯಾವಾಗ ?

ಅಧ್ಯಕ್ಷರು : ಇವತ್ತು ಸಾಯಂಕಾಲದ ಒಳಗೆ ಕೊಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಎರಡನೆಯದು ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಹೋದ ಸಲವೂ ಹಾಕಿಕೊಂಡಿದ್ದೆ, ಈ ಸಲವೂ ಹಾಕಿ ಕೊಂಡಿದ್ದೆ

ಅಧ್ಯಕ್ಷರು : ಇಲ್ಲವೇ ನಿಮ್ಮ ಗಮನ ಸೆಳೆಯುವ ಸೂಚನೆ ನೋಟೀಸ್ ಬಂದಿಲ್ಲ. ಇಲ್ಲ ಸ್ವಾಮಿ ನಿಮ್ಮದು ಬಂದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದು ಏನು ನನ್ನ ಬಗ್ಗೆ ಗಮನವೇ ಇಲ್ಲ.

ಅಧ್ಯಕ್ಷರು : ಗಮನ ಇಲ್ಲ ಅಂತ ಅಲ್ಲ. ನಮ್ಮ ಹತ್ತಿರ ಬಂದಿದ್ದರೆ ತಾನೇ...

ಶ್ರೀ ಡಿ.ಕೆ. ಶಿವಕುಮಾರ್: ನಾವು ತಂದು ಕೊಟ್ಟಿದ್ದೇವೆ. ಅದನ್ನು ಲಿಸ್ಟ್ ಮಾಡಿಲ್ಲ ಅಷ್ಟೇ.

ಅಧ್ಯಕ್ಷರು : ನೋಡುತ್ತೇನೆ, ನೋಡುತ್ತೇನೆ ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

5. ಗಮನ ಸೆಳೆಯುವ ಸೂಚನೆಗಳು:

ಏಪ್ರಿಲ್ 15ರವರೆಗೆ ತುಂಗಭದ್ರಾ ಎಡದಂಡೆ ನಾಲೆಗೆ ನೀರು ಸರಬರಾಜು ಮಾಡದಿರುವುದರಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ.
(ಸಿಂಧನೂರು)

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಎಡದಂಡೆ ನಾಲೆಗೆ ಏಪ್ರಿಲ್ 15ರವರೆಗೂ ನೀರು ಸರಬರಾಜು ಮಾಡತಕ್ಕಂಥ ವಿಚಾರದಲ್ಲಿ, ನೀರು ಸರಬರಾಜು ಮಾಡದೇ ಇದ್ದಂತಹ ಸಂದರ್ಭದಲ್ಲಿ ಸುಮಾರು 4 ಲಕ್ಷ ಎಕರೆ ಪ್ರದೇಶದಲ್ಲಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರತಕ್ಕಂಥ ಎಡದಂಡೆ ನಾಲೆಯ ರೈತರು ಸುಮಾರು ಒಂದು ಲಕ್ಷ ಹೆಚ್ಚು ಕಡಿಮೆ ರೈತರುಗಳು ಇದರಲ್ಲಿ ಭಾಗಿಗಳಾಗಿದ್ದಾರೆ. 4 ಲಕ್ಷ ಎಕರೆ ನೀರಾವರಿ ಪ್ರದೇಶ ಇದೆ. ಏಪ್ರಿಲ್ 15ರವರೆಗೂ ನೀರು ಸರಬರಾಜು ಮಾಡದಿದ್ದರೆ ಸುಮಾರು 200 ರಿಂದ 300 ಕೋಟಿ ರೂಪಾಯಿಗಳಷ್ಟು ರೈತರು ಹಾಕಿರತಕ್ಕಂಥ ಬೆಳೆ ನಷ್ಟವಾಗತಕ್ಕಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಆ ಭಾಗದ ರೈತರು ಇರುವುದರಿಂದ ತಮ್ಮ ಮೂಲಕ ಮಾನ್ಯ ಭಾರೀ ನೀರಾವರಿ ಸಚಿವರಲ್ಲಿ ಈ ವರ್ಷ ಅಣೆಕಟ್ಟಿನ ನೀರಿನ ಸಂಗ್ರಹಣೆ ಬಗ್ಗೆ ಮತ್ತು ಈ ತುಂಗಭದ್ರಾ ಬೋರ್ಡಿನ ಲೆಕ್ಕಚಾರಗಳು ಏನಿವೆ ಅವು ಅವೈಜ್ಞಾನಿಕವಾಗಿ ಏನು ತುಂಗಭದ್ರಾ ಬೋರ್ಡಿನವರು ಲೆಕ್ಕಾಚಾರವನ್ನು ಕೊಟ್ಟಿದ್ದಾರೆ ಅವುಗಳನ್ನು ಸರಿಪಡಿಸತಕ್ಕಂಥ ರೀತಿಯಲ್ಲಿ ಏನು ಕ್ರಮ ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತಿದೆ ಮತ್ತು

ಎಷ್ಟು ಪ್ರಮಾಣದಲ್ಲಿ ಈ ತುಂಗಭದ್ರಾ ಎಡದಂಡೆ ನಾಲೆಗೆ ಏಪ್ರಿಲ್ 15ರವರೆಗೂ ನೀರು ಸರಬರಾಜು ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್, ಈಶ್ವರಪ್ಪ: (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು)

ಮಾನ್ಯ ಅಧ್ಯಕ್ಷರೆ,

ವಿಷಯ: ತುಂಗಭದ್ರಾ ಎಡದಂಡೆ ನಾಲೆಗೆ ಏಪ್ರಿಲ್ 15ರವರೆಗೆ ನೀರು ಸರಬರಾಜು ಮಾಡದ ಪ್ರಯುಕ್ತ ನೀರಿನ ಕೊರತೆಯಿಂದಾಗಿ ರೈತರು ಬೆಳೆಸಿರುವ ನೂರಾರು ಕೋಟಿ ರೂಪಾಯಿಗಳ ಬೆಳೆಗಳು ನಷ್ಟವಾಗುವ ವಿಚಾರದ ಬಗ್ಗೆ.

ತುಂಗಭದ್ರಾ ಯೋಜನೆಯ 80ನೇ ನೀರವಾರಿ ಸಲಹಾ ಸಮಿತಿಯ ಸಭೆಯಲ್ಲಿ 2005–06 ನೇ ಸಾಲಿನ ಹಿಂಗಾರು ಹಂಗಾಮಿಗೆ ತುಂಭದ್ರಾ ಎಡದಂಡೆ ಕಾಲುವೆಗೆ ನಿಗದಿಗೊಳಿಸಲಾಗಿದ್ದ ನೀರಿನ ಪ್ರಮಾಣ ಹಾಗೂ ಲಭ್ಯತೆಗೆ ಅನುಗುಣವಾಗಿ ದಿನಾಂಕ: 31–03–2006 ರವರೆಗೆ ನೀರಾವರಿ ಬೆಳೆಗಳಿಗೆ ನೀರನ್ನು ವಿತರಿಸ ಬೇಕಾಗಿರುತ್ತದೆ. ಆದರೆ ಈಗ ಲಭ್ಯವಿರುವ ನಿರಿನ ಪ್ರಮಾಣದ ಅನುಸಾರ ತುಂಗಭದ್ರಾ ಎಡದಂಡೆ ಕಾಲುವೆಗೆ ದಿನಾಂಕ:05–04–2006ರವರೆಗೆ ನೀರನ್ನು ಪೂರೈಸಬಹುದಾಗಿರುತ್ತದೆಂದು ಯೊಜನಾಧಿಕಾರಿಗಳು ವರದಿಸಿರುತ್ತಾರೆ.

ದಿನಾಂಕ 15.03.06ರಂದು ನಡೆದ ತುಂಗಭದ್ರಾ ಯೋಜನೆಯ 81ನೇ ನೀರವಾರಿ ಸಲಹಾ ಸಮಿತಿಯ ಸಭೆಯಲ್ಲಿ ಈಗ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದು ನಿಂತಿರುವ ಬೆಳೆಗಳನ್ನು ಸಂರಕ್ಷಿಸಲು ದಿನಾಂಕ : 15–04–2006ರವರೆಗೆ ನೀರು ಪೂರೈಸಬೇಕೆಂದು ಅಚ್ಚುಕಟ್ಟು ಪ್ರದೇಶದ ರೈತ ಮುಖಂಡರುಗಳು, ಮಾನ್ಯ ಸಂಸದರು ಮಾನ್ಯ ಶಾಸಕರುಗಳ ಒತ್ತಾಯದ ಮೇರೆಗೆ ನೀರವಾರಿ ಸಲಹಾ ಸಮಿತಿಯು ಈ ಕೆಳಗಿನಂತೆ ಸರ್ವ ಸಮ್ಮತ ನಿರ್ಣಯ ಕೈಗೊಂಡಿರುತ್ತದೆ.

"ತುಂಗಭದ್ರಾ ಎಡದಂಡೆ ಕಾಲುವೆ ಮತ್ತು ಬಲದಂಡೆ ಕೆಳಮಟ್ಟದ ಕಾಲುವೆಗಳಡಿ ಬೆಳೆದ ನಿಂತಿರುವ ಬೆಳೆಗಳನ್ನು ಸಂರಕ್ಷಿಸಲು ದಿನಾಂಕ 15–04–2006 ರ ವರೆಗೆ ನೀರನ್ನು ವಿತರಿಸಲು ಭದ್ರಾ ಜಲಾಶಯದಿಂದ ತುಂಗಭದ್ರಾ ಜಲಾಶಯಕ್ಕೆ ಸುಮಾರು 5 ಟಿ.ಎಂ.ಸಿ ನೀರನ್ನು ಪೂರೈಸಲು ಹಾಗೂ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿಗಾಗಿ ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಗೆ ಅಗತ್ಯವಿರುವ 2 ಟಿ.ಎಂ.ಸಿ ನೀರನ್ನು ಭದ್ರಾ ಜಲಾಶಯದಿಂದ ಪಡೆದು ಪೂರೈಸಲು ಸರ್ವ ಸರ್ಮತ ನಿರ್ಣಯ ಕೈಗೊಂಡಿತು."

ತುಂಗಭದ್ರಾ ಎಡದಂಡೆ ಮತ್ತು ಬಲದಂಡೆ ಕೆಳಮಟ್ಟದ ಕಾಲುವೆಗಳ ಅಚ್ಚುಕಟ್ಟು ಪ್ರದೇಶದ ಬೆಳೆದು ನಿಂತ ಬೆಳೆಗಳ ಸಂರಕ್ಷಣೆಗಾಗಿ ಮತ್ತು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕುಡಿಯುವ ನೀರಿನ ಸಲುವಾಗಿ ಭದ್ರಾ ಜಲಾಶಯದಿಂದ ದೊರೆಯಬಹುದಾದ ನೀರನ್ನು ಬಿಡುಗಡೆ ಮಾಡುವ ವಿಷಯ ಕುರಿತಂತೆ ಸರ್ಕಾರವು ಅತಿ ಗಂಭೀರವಾಗಿ ಪರಿಶೀಲಿಸುತ್ತಿದೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ 2 ಟಿ.ಎಂ.ಸಿ, ನೀರು ಕೊಡುತ್ತೇವೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಈ 2 ಟಿ.ಎಂ.ಸಿ. ನೀರಿನಿಂದ ಏಪ್ರಿಲ್ 15 ನೇ ತಾರೀಖಿನವರೆಗೂ ನೀರು ಕೊಡಲು ಸಾಧ್ಯವಾಗುವುದಿಲ್ಲ. ಕನಿಷ್ಟ 5–6

ಟಿ.ಎಂ.ಸಿ. ನೀರು ಬಿಡಿಸಿದರೆ 50 ಪರ್ಸೆಂಟ್‌ಷ್ಟು ನೀರು ತುಂಗಭದ್ರಾ ರಿಜರ್ವ್ ವಾಯರ್ ಬಂದು ಸೇರತಕ್ಕಂಥ ಒಂದು ವಾತಾವರಣವಿದೆ. ಇವತ್ತು 2 ಟಿ.ಎಂ.ಸಿ. ನೀರು ಬಿಟ್ಟರೆ ಅಲ್ಲಲ್ಲಿ ಮಧ್ಯದಲ್ಲಿ ಬೇಸಿಗೆ ಇರುವುದರಿಂದ ಹಳ್ಳಗಳು ತುಂಬಿಕೊಂಡು ನೀರೆಲ್ಲಾ ಅಲ್ಲಿಯೇ ಹೋಗುತ್ತವೆ. ನಮ್ಮ ಬೆಳೆ ನಷ್ಟವಾಗುವುದು ನಿಸ್ಸಂದೇಹ, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಕನಿಷ್ಟ 5–6 ಟಿ.ಎಂ.ಸಿ. ನೀರನ್ನು ಬಿಡಿಸತಕ್ಕಂಥ ಕೆಲಸ ಆಗಬೇಕು. ಇಲ್ಲವೆಂದರೆ 200 300 ಕೋಟಿ ರೂ ನಷ್ಟವಾಗುತ್ತದೆ. ಮತ್ತೆ ಕುಡಿಯುವ ನೀರಿಗೆ ಬೇಸಿಗೆಯಲ್ಲಿ ಅಣೆಕಟ್ಟೆಗೆ ಕನಿಷ್ಟ 1–2 ಟಿ.ಎಂ.ಸಿ. ನೀರು ಬೇಕು. ಇಂತಹ ಸಂದರ್ಭದಲ್ಲಿ ನಿರ್ಣಯ ತೆಗೆದುಕೊಂಡು 2 ಟಿ.ಎಂ.ಸಿ. ನೀರು ಬಿಡಿಸುತ್ತೇನೆ ಅಂದರೆ 2 ಟಿ.ಎಂ.ಸಿ ನೀರು ಬರಲಿಕ್ಕೆ ಕನಿಷ್ಟ ಒಂದು ವಾರ ಬೇಕು. ಆಮೇಲೆ ನೀವು ಬಿಟ್ಟಿರತಕ್ಕಂಥ ನೀರು 4–5 ದಿವಸಗಳ ಒಳಗಾಗಿ ನಮ್ಮ ತುಂಗಭದ್ರಾ ಜಲಾಶಯಕ್ಕೆ ಆ ನೀರು ಸಂಗ್ರಹವಾಗದಿದ್ದರೆ ಬಹಳ ತೊಂದರೆಯಾಗುತ್ತದೆ ಏಕೆಂದರೆ ಆದರ ಹೆಡ್‌ಸ್ಲೂಯಿಸ್ ಹದಿನೈದು ನೂರ ಎಂಬತ್ತರ ಮೇಲ್ಪಟ್ಟು ಇರುವುದರಿಂದ ಕೆಳಭಾಗದ ರೈತರಿಗೆ ಅನುಕೂಲವಾಗುತ್ತದೆಯೇ ಹೊರತಾಗಿ ನಮ್ಮ ಎಡದಂಡೆ ನಾಲೆಯ ರೈತರಿಗೆ ಅನುಕೂಲವಾಗುವುದಿಲ್ಲ. ಹೆಚ್ಚಿನ ಪ್ರಮಾಣದಲ್ಲಿ ಪ್ರತಿನಿತ್ಯ 5 ರಿಂದ 10 ಸಾವಿರ ಕ್ಯುಸೆಕ್ಸ್ ನೀರು ಬಿಡಿಸತಕ್ಕಂಥ ಕೆಲಸ ಆಗಬೇಕು, 5 ರಿಂದ 6 ಟಿ.ಎಂ.ಸಿ ನೀರು ಬಿಡಿಸತಕ್ಕಂಥ ಕೆಲಸ ಆಗಬೇಕು. ಇದು ಒಂದನೆಯ ವಿಚಾರ ಎರಡನೆಯದು ಬೋರ್ಡಿನವರು ನಮಗೆ ಲೆಕ್ಕಪತ್ರಗಳನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಬೋರ್ಡ್ ಯಾವ ಪರಿಸ್ಥಿತಿ ಆಗಿದೆ ಅಂದರೆ ಕೇಂದ್ರ ಸರ್ಕಾರದ ಹತೋಟಿಯಲ್ಲಿರತಕ್ಕಂಥ ಒಂದು ಬೋರ್ಡ್. ಎರಡೂ ರಾಜ್ಯಗಳ ಮಧ್ಯದಲ್ಲಿ ಡಿಸ್‌ಪ್ಯೂಟ್ ಉಂಟಾಗಿರತಕ್ಕಂಥ ಸಂರ್ಭದಲ್ಲಿ ಬೋರ್ಡ್‌ನವರು ನಿರ್ಣಯ ತೆಗೆದುಕೊಂಡು ನೀರನ್ನು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡತಕ್ಕಂಥ ವಿಚಾರದಲ್ಲಿ ಬೋರ್ಡ್ ಇವತ್ತು ರಚನೆಯಾಗಿದೆ. ಆ ಬೋರ್ಡ್‌ನವರು ಕೊಟ್ಟಿರತಕ್ಕಂಥ ಲೆಕ್ಕ ಈ ವರ್ಷ ಮೊದಲನೇ ಸಭೆ ಕರೆದಾಗ 144 ಟಿ. ಎಂ ಸಿ ಅಂತ ಕೊಟ್ಟಿದ್ದರು ಎರಡನೇ ಸಭೆ ಕರೆದಾಗ 15 ಟಿ. ಎಂ.ಸಿ ಆದರೆ ಆ ಬೋರ್ಡ್‌ನವರಿಗೆ ಇಲಾಖೆಯ ಒಂದು ಎಸ್.ಇ ನೀರಾವರಿ ಯವರು ಕೊಟ್ಟಿರತಕ್ಕಂಥಾದ್ದು 155 ಟಿ ಎಂ ಸಿ, ಇವತ್ತು ನಮ್ಮ ನೀರು ನಮ್ಮ ಕೋಟಾ 66 ಟಿ ಎಂ ಸಿ. ತುಂಗಭದ್ರಾ ಎಡದಂಡೆ ನಾಲೆಗೆ ಹರಿದು ಬರತಕ್ಕಂಥಾದ್ದು 158 ಟಿ.ಎಂ.ಸಿ. ತಪ್ಪು ಅಂಕಿ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದು ಮೋಸ ಆಗುತ್ತಿದೆ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ರಾಜ್ಯ ಸರ್ಕಾರದವರು ಮಾಡತ್ಕಂಥ ಒಂದು ವಿಚಾರದಲ್ಲಿದ್ದೀರಾ? ಏಕೆಂದರೆ ಕಾರ್ಯದರ್ಶಿಗಳು ಒಬ್ಬ ಸದಸ್ಯರು. ನಾಲ್ಕು ಜನ ಬೋರ್ಡ್ ಸದಸ್ಯರು ಇರುವುದರಿಂದ ನಮ್ಮ ಕರ್ನಾಟಕದ ನೀರವಾರಿ ಕಾರ್ಯದರ್ಶಿಗಳು, ಆಂಧ್ರಪ್ರದೇಶ ನೀರಾವ ಕಾರ್ಯದರ್ಶಿಗಳು, ಇವರಿಬ್ಬರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಏನು ಮಾಡುತ್ತಾರೆ ಎನ್ನುವುದು ನಮಗೆ ಅಲ್ಲಿ ಅರ್ಥವಾಗುವುದೇ ಇಲ್ಲ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಇರುವುದರಿಂದ ಮಾನ್ಯ ಭಾರೀ ನೀರವಾರಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಸಾಧ್ಯವಾದರೆ ಒಂದು ಸಭೆಯನ್ನು ಕರೆಯಿರಿ. ಈ ಬೋರ್ಡ್‌ನ ಬಗ್ಗೆ ಕೆಲವೊಂದು, ಹತ್ತಾರು

ವಿಷಯಗಳನ್ನು ಅಲ್ಲಿ ಚರ್ಚೆ ಮಾಡತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಕಾರ್ಯದರ್ಶಿಗಳನ್ನು ಕರಸಿ, ವಿಶೇಷ ಆಹ್ವಾನಿರಾಗಿ ಆ ಬೋರ್ಡಿನ ಕಾರ್ಯದಸಿಗಳು ಏನಿದ್ದಾರೆ ಆ ಕಾರ್ಯದರ್ಶಿಗಳನ್ನು ಕರೆಸಿ, ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವಂತಹ ಪ್ರಯತ್ನ ತಮ್ಮಿಂದ ಆಗಬೇಕು ಎನ್ನುವಂತಹ ಒತ್ತಾಯವನ್ನು ನಾನು ಮಾನ್ಯ ಸಚಿವರಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ ಬೋರ್ಡಿನ ಬಗ್ಗೆ ಗಮನ ಸೆಳೆಯುವ ಸೂಚನೆ ತಂದಿರಲಿಲ್ಲ ಹಾಗಾಗಿ ತಾವು ಹೇಳಿದಂತಹ ಸಲಹೆ ಪ್ರಕಾರ ಖಂಡಿತ ಬೋರ್ಡಿನ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ, ಸಾಧ್ಯವಾದರೆ ನಿಮ್ಮನ್ನೂ ಕರೆದುಕೊಂಡು ಸಭೆ ಮಾಡುತ್ತೇನೆ. ತಮ್ಮ ಗಮನ ಸೆಳೆಯುವ ಸೂಚನೆಯಲ್ಲಿ ಆ ಬೋರ್ಡಿನ ಬಗ್ಗೆ ಮೆನ್‌ಷನ್ ಮಾಡಿಲ್ಲ. ಹಾಗಾಗಿ ಅದಕ್ಕೆ ನಾನು ಉತ್ತರ ಕೊಟ್ಟಿಲ್ಲ. ಸಭೆಯನ್ನು ನಾನು ಖಂಡಿತ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಯಾವತ್ತು ನಾನು ನೀರಾವರಿ ಸಚಿವನಾದೆನೋ ಅಂದಿನಿಂದ ಕೆಲಸ ಆರಂಭ ಮಾಡಿದ್ದು ನಿಮ್ಮ ಭಾಗದಲ್ಲೆ ಹೀಗಾಗಿ ಕೊಪ್ಪಳ, ಬಳ್ಳಾರಿ, ರಾಯಚೂರು ಭಾಗದ ಎಲ್ಲಾ ರೈತರೂ ಕೂಡ ನೀರು ಬೇಕು ಎನ್ನುವ ಸಮಸ್ಯೆಯನ್ನು ನನಗೆ ಆ ಸಂದರ್ಭದಲ್ಲಿಯೇ ನನ್ನ ಗಮನಕ್ಕೆ ತೆಗೆದುಕೊಂಡು ಬಂದಿದ್ದರು ತಾವೂ ಸಹ ನನಗೆ ತಿಳಿಸಿದ್ದೀರಿ. ನಿನ್ನೆಯ ದಿನ ನಮ್ಮ ಮಾನ್ಯ ಸಚಿವರಾದ ಮಾನ್ಯ ಆಲ್ಕೋಡ್ ಹನುಮಂತಪ್ಪನವರು, ಶ್ರೀರಾಮುಲು ರವರು ಇಕ್ಬಾಲ್ ಅನ್ಸಾರಿಯವರು, ಕರುಣಾಕರ ರೆಡ್ಡಿಯವರು ಎಲ್ಲಾ ಶಾಸಕರುಗಳು ಮತ್ತು ಕೆಲವು ರೈತರುಗಳೂ ಕೂಡ ನಿನ್ನೆ ಬಂದಿದ್ದರು. ಅದೇ ಪ್ರಕಾರವಾಗಿ ಈ ಒಂದು ಭದ್ರಾ ಭಾಗದ ಶಾಸಕರುಗಳು , ಸಂಸತ್ ಸದಸ್ಯರು ಮಾನ್ಯ ಸಿದ್ದೇಶ್‌ರವರು ಎಲ್ಲರೂ ಕೂಡ ಬಂದಿದ್ದರು. ಎಲ್ಲರ ಜೊತೆ ಕುಳಿತು ಚರ್ಚೆ ಮಾಡಿಕೊಂಡು ಆ ಭಾಗದ ರೈತರಿಗೆ ಯಾವುದೇ ಕಾರಣಕ್ಕೂ ನೀರಿನ ತೊಂದರೆಯಾಗಬಾರದು ಎಂಬುದು ನಮ್ಮ ಉದ್ದೇಶ . 10ನೇ ತಾರೀಖಿನವರೆಗೂ ಸಾಕು ಎನ್ನುವಂತಹ ಅಂಶ ಮುನಿರಾಬಾದ್‌ನಲ್ಲಿ ಮತ್ತು ಎಲ್ಲಾ ರೈತರು ಮತ್ತಿತ್ತರ ಜೊತೆಯಲ್ಲಿ ಕುಳಿತುಕೊಂಡಾಗ ಚರ್ಚೆಯಾಗಿತ್ತು. ಕೆಲವರು 15ನೇ ತಾರೀಖುನವರೆಗೂ ಬೇಕು ಅಂತ ಹೇಳಿದರು, ನಿನ್ನೆಯ ದಿವಸ ಕುಳಿತು ತುಂಬಾ ಸಂತೋಷದಿಂದ ಹೇಳುತ್ತೇನೆ. 12-4-2006ರವರೆಗೆ ನಿಮಗೆ ಯಾವುದೇ ತೊಂದರೆ ಇಲ್ಲದಷ್ಟು ನೀರು ನಾವು ಕೊಡುತ್ತೇವೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ ನಮ್ಮದು ಇಲ್ಲಿರತಕ್ಕಂಥ ಸಮಸ್ಯೆ ಪ್ರತಿನಿತ್ಯ ಮೂರೂವರೆ ಸಾವಿರ ಕ್ಯೂಸೆಕ್ಸ್ ನೀರು ಎಡದಂಡೆ ನಾಲೆಗೆ ಸರಬರಾಜು ಮಾಡಿದರೆ ನೀರು ನಮಗೆ ಬರುತ್ತದೆ, ಏಕೆಂದರೆ 241 ಕಿಲೋಮೀಟರ್ ಉದ್ದದ ಕಾಲುವೆ. ಸುಮಾರು 6 ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಬೆಳೆ ಹಾಕಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿ ಇರುವುದರಿಂದ ಮೂರೂವರೆ ಸಾವಿರ ಕ್ಯೂಸೆಕ್ಸ್ ನೀರು ಪ್ರತಿ ನಿಮಿಷಕ್ಕೆ ನೀವು ಕೊಟ್ಟರೆ ಕನಿಷ್ಠ ಇನ್ನು 8 ರಿಂದ 9 ಟಿ.ಎಂ.ಸಿ. ನಮಗೆ ಬೇಕಾಗುತ್ತದೆ. ಇವತ್ತು ನಮ್ಮಲ್ಲಿ ಇರುವುದು ಕೇವಲ 6 ಟಿ.ಎಂ.ಸಿ ನೀರು 3 ರಿಂದ 4 ಟಿ.ಎಂ.ಸಿ ನೀರಿನ ಕೊರತೆ ಇದೆ. ನೀವು ಬಿಡತಕ್ಕಂಥಾದ್ದು 2 ಟಿ ಎಂ.ಸಿ ನೀರು. ಆ ನೀರು ನಮ್ಮ ತುಂಗಭದ್ರಾ ಜಲಾಶಯಕ್ಕೆ ಹರಿದು ಬರಬೇಕಾದರೆ ಕನಿಷ್ಟ ಒಂದು ವಾರ ಬೇಕು ನಮ್ಮ ಮುಖ್ಯ

ಅಭಿಯಂತರರು ನೀರಾವರಿ ಕಾರ್ಯದರ್ಶಿಗೆ ಬೇಡಿಕೆ ಇಟ್ಟಿರತಕ್ಕಂಥಾದ್ದು 5ರಿಂದ 6 ಟಿ ಎಂ ಸಿ ನೀರು ಕೊಡಬೇಕೆಂದು ನಮ್ಮದು ಐ ಸಿ ಸಿ ಸಭೆಯಲ್ಲಿ ನಮ್ಮ ವಾದ ಏನೆಂದರೆ ನಮ್ಮ ನೀರೇ ಸಾಕಷ್ಟು ಪ್ರಮಾಣದಲ್ಲಿದ್ದಾಗ ಭದ್ರಾ ನೀರು ತೆಗೆದುಕೊಂಡು ಕೊಡತಕ್ಕಂಥಾದ್ದು ಎರಡನೇ ವಿಚಾರ. ನಮ್ಮ ನೀರು ಎಲ್ಲಿಗೆ ಹೋಯಿತು, ಅದನ್ನು ಯಾರು ಕಳ್ಳತನ ಮಾಡಿದರು, ಆ ನೀರನ್ನು ಯಾವ ರಾಜ್ಯಕ್ಕೆ ಕೊಟ್ಟರು, ಇದೆಲ್ಲಾ ಹೊರಗೆ ಬರಬೇಕಲ್ಲಾ, ಇದನ್ನು ಹೇಳುವವರು ಯಾರು? ಐಸಿಸಿ ಸಭೆಯಲ್ಲಿ ಚರ್ಚೆ ಮಾಡಿದರೆ, ಸರಿಯಾದ ಸಮರ್ಪಕವಾದ ಉತ್ತರ ಕೊಡುವುದಿಲ್ಲ, ಕಾಗದಪತ್ರ ಬರೆದರೆ ಕಾರ್ಯದರ್ಶಿಯವರು ಉತ್ತರ ಬರೆಯುವಂತಿಲ್ಲ, ಸದನದಲ್ಲೂ ಕೂಡ ಚರ್ಚೆ ಮಾಡಿದರೆ ಈ ವಿಷಯದ ಬಗ್ಗೆ ಮಂತ್ರಿಗಳಿಂದ ಸರ್ಮಪಕವಾಗಿ ಉತ್ತರ ಬರಲಿಲ್ಲವೆಂದರೆ, ನಾವು ರೈತರಿಗೆ ಏನು ಹೇಳಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸದಸ್ಯರೇನು ಹೇಳುತ್ತಿದ್ದಾರೆ ಅದು ಸತ್ಯ, ಅದರಲ್ಲೇನೂ ಅನುಮಾನವಿಲ್ಲ, ಹಿಂದೆ ಎಷ್ಟರಮಟ್ಟಿಗೆ ಬೋರ್ಡ್ ಮೀಟಿಂಗ್‌ಗಳಲ್ಲಿ ನಿಮ್ಮನ್ನು ಕರೆದರೋ ಎಷ್ಟರಮಟ್ಟಿಗೆ ಐಸಿಸಿ ಸಭೆಯಲ್ಲಿ ಮಾತನಾಡಲು ನಿಮಗೆ ಅವಕಾಶ ಕೊಡುತ್ತಿದ್ದರೋ ಬಿಟ್ಟರೋ ಅದು ನನಗೆ ಗೊತ್ತಿಲ್ಲ, ನನಗೆ ಹಿಂದಿನ ಸರ್ಕಾರದ್ದು ಸಂಬಂಧವಿಲ್ಲ ಈಗ ರೈತರಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದ ರೀತಿಯಲ್ಲಿ ಈ ಸರ್ಕಾರ ನೋಡಬೇಕೆಂದು ತೀರ್ಮಾನ ಮಾಡಿ ಆ ಭಾಗದ ರೈತರ ಜೊತೆಗೆ, ಆ ಭಾಗದ ಸಂಸತ್ ಸದಸ್ಯರ ಜೊತೆಗೆ, ಆ ಭಾಗದ ಮಂತ್ರಿಗಳ ಜೊತೆಗೆ, ಚರ್ಚೆ ಮಾಡಿ, ಅಧಿಕಾರಿಗಳೊಡನೆ ಚರ್ಚೆಮಾಡಿಕೊಂಡು, ಜೊತೆ ಜೊತೆಗೆ ಈ ಭಾಗದ ರೈತರೊಡನೆ ಚರ್ಚೆ ಮಾಡಿ, ಇಲ್ಲಿಯ ಸಂಸತ್ ಸದಸ್ಯರು, ಈ ಭಾಗದ ಶಾಸಕರುಗಳನ್ನು ಕೂರಿಸಿ ಅವರನ್ನೂ ಒಪ್ಪಿಸಿ, ಇವತ್ತು 2 ಟಿಎಂಸಿ ನೀರನ್ನು ಬಿಡುತ್ತೇವೆಂದು ನಾವು ಎಲ್ಲಿಯೂ ಉತ್ತರವನ್ನು ಕೊಟ್ಟಿಲ್ಲ, ಅದು ನಿಮ್ಮ ನಿರ್ಣಯ, ತಾವು ಓದಿ, ನಿಮ್ಮ ನಿರ್ಣಯವೆಂದು ಹೇಳಿರುವುದು, ಐದು ಟಿಎಂಸಿ ನೀರಿಗೆ ಎರಡು ಟಿಎಂಸಿ ನೀರು ಕುಡಿಯುವುದಕ್ಕೆ ಬೇಕೆಂದು ಕೇಳಿದ್ದೀರಿ ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ, ನನಗೂ ನಿಮ್ಮಷ್ಟೇ ಕಳಕಳಿ ಇದೆ. ಯಾವುದೇ ಕಾರಣಕ್ಕೂ ರಾಜ್ಯದ ರೈತರಿಗೆ ಅನ್ಯಯವಾಗುವುದಕ್ಕೆ ಈ ಸರ್ಕಾರ ಬಿಡುವುದಿಲ್ಲ 12–4–06ರ ತನಕ ಕೂಡ ಅವರಿಗೆ ಬೇಕಾದಷ್ಟು ನೀರು ಇಲ್ಲಿಂದ ಇರಬಹುದು, ಮುನಿರಬಾದ್‌ನಿಂದ ಇರಬಹುದು ಎಲ್ಲಿಂದಲೊ ಒಟ್ಟು ನೀರು ತಂದು ಕೊಡುವ ಪ್ರಯತ್ನವನ್ನು ಮಾಡುತ್ತೇವೆ. ತಾವೇನು, ನಮ್ಮ ನೀರು ಎಲ್ಲಿ ಹೋಯಿತೆಂದು ಕೇಳುತ್ತಿದ್ದೀರಿ, ನಿಮ್ಮ ನೀರು ಎಲ್ಲಿ ಹೋಯಿತೆಂಬುದನ್ನು ಬೋರ್ಡ್ ಮೀಟಿಂಗ್ ಕರೆಯುತ್ತೇನೆ ತಾವೂ ಬನ್ನಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸುತ್ತೇನೆ ಐ.ಸಿ.ಸಿ. ಸಭೆಯಲ್ಲಿ ನಾನೇ ಕುಳಿತು ನಿಮಗೆ ತೃಪ್ತಿಯಾಗುವಂತಹ ಪ್ರಯತ್ನ ನಡೆಸುತ್ತೇನೆ, ನೀರು ಎಲ್ಲಿ ಹೋಯಿತೆಂದು ನಾವು ನೀವು ಸೇರಿ ಹುಡುಕಿ ತೆಗೆಯೋಣ.

ಆ. ವಿಷಯ : ಶಿರಹಟ್ಟಿ ಮತಕ್ಷೇತ್ರದ ರೈತ ಕುಟುಂಬಗಳು ಹೊಲದ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಹಣಪಾವತಿಸಿದ್ದರೂ ಕ್ರಮಕೈಗೊಳ್ಳದಿರುವ ಬಗ್ಗೆ.

ಶ್ರೀ ಜಿ.ಎಸ್. ಗಡ್ಡದೇವರ ಮಠ(ಶಿರಹಟ್ಟಿ) : ಮಾನ್ಯ ಅಧ್ಯಕ್ಷರೆ, ಶಿರಹಟ್ಟಿ ಮತಕ್ಷೇತ್ರದ ರೈತ ಕುಟುಂಬಗಳು ಹೊಲದ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಹಣಪಾವತಿಸಿದ್ದರೂ ಕ್ರಮಕೈಗೊಳ್ಳದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿವರ ಗಮನಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಗಡ್ಡದೇವರ ಮಠ ಏನು ಶಿರಹಟ್ಟಿ ಮತಕ್ಷೇತ್ರದ 320 ರೈತ ಕುಟುಂಬದ ಹೊಲದ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಬಗ್ಗೆ ಏನು ಗಮನ ಸೆಳೆದಿದ್ದಾರೆ. ಅದಕ್ಕೆ ಉತ್ತರವನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

ದಿನಾಂಕ 1-12-2004 ರಿಂದ 31-9-2005 ರವರೆಗೆ ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಕ್ರಮ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣ ಕಾರ್ಯಕ್ರಮದಡಿಯಲ್ಲಿ ಒಟ್ಟು 336 ಅನಧಿಕೃತ ನೀರವಾರಿ ಪಂಪುಸೆಟ್ಟು ಬಳಕೆದಾರರಿಂದ ಹಣ ತುಂಬಿಸಿಕೊಂಡಿದ್ದು, ಅವರ ಅನಧಿಕೃತ ನೀರಾವರಿಪಂಪುಸೆಟ್ಟುಗಳನ್ನು ಸಕ್ರಮಗೊಳಿಸಿ, ಆರ್.ಆರ್.ನಂಬರ್ ಗಳನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ನೀಡಿರುತ್ತದೆ. ಈಗ ಈ 336 ಪಂಪುಸೆಟ್ಟುಗಳು ಅಧಿಕೃತಗೊಂಡಿದ್ದು, ಈ ಹಿಂದೆ ವಿದ್ಯುತ್ ಬಳಸಿದಂತೆ ಈಗಲೂ ವಿದ್ಯುತ್ ಬಳಸುತ್ತಿವೆ.

ಸಕ್ರಮೀಕರಣಗೊಂಡ 336 ನೀರಾವರಿ ಪಂಪು ಸೆಟ್ಟುಗಳ ಪೈಕಿ, ಇದುವರೆಗೂ 40 ನೀರಾವರಿ ಪಂಪುಸೆಟ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಅಂದರೆ ಕಂಬ, ಲೈನು ಮತ್ತು ಅಗತ್ಯವಿರುವ ಕಡೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸಿಕೊಡಲಾಗಿದೆ. ಬಾಕಿ ಉಳಿದಿರುವ 296 ನೀರಾವರಿ ಪಂಪುಸೆಟ್ಟುಗಳಿಗೆ ಕಂಬ, ಲೈನು ಮತ್ತು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಟರ್ನ್ ಕೀ ಆಧಾರದ ಮೇಲೆ ಟೆಂಡರ್‌ನ್ನು 14-12-2005 ರಲ್ಲಿ ಕರೆದಿರುತ್ತದೆ. ಟೆಂಡರ್‌ಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಇತ್ಯರ್ಥಪಡಿಸಿ ಕಾಮಗಾರಿಗಳನ್ನು ಮುಂದಿನ 3 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ನಿರ್ದೇಶನವನ್ನು ಕೊಡಲಾಗಿದೆ.

ಶ್ರೀ ಜಿ.ಎಸ್ : ಗಡ್ಡದೇವರ ಮಠ: ಮಾನ್ಯ ಅಧ್ಯಕ್ಷರೆ, ಈ ಭಾಗದ ರೈತರ ಪರವಾಗಿ ಮಾತನಾಡುವುದಕ್ಕೆ ಸರ್ಕಾರದ ಗಮನ ಸೆಳೆಯುವುದಕ್ಕೆ ನನಗೆ ಅನುಕೂಲ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತು ಅಲ್ಲಿ ಬಹಳ ಗಂಭೀರವಾದ ಪ್ರಶ್ನೆ ರೈತರದಾಗಿದೆ, ಸನ್ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಮಾನ್ಯ ರೇವಣ್ಣರವರು ಈಗ ಇಲ್ಲ. ಮೊಟ್ಟಮೊದಲನೆಯದಾಗಿ ನಾವು ಅವರಿಗೆ ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಬಹಳ ಕಠಿಣವಾದ ಇಂತಹ ಸಮಸ್ಯೆಯನ್ನು ಆದಷ್ಟು ತೀವ್ರವಾಗಿ, ಟೆಂಡರ್ ಕರೆದು ಕೆಲಸ ಪೂರೈಸುವುದಕ್ಕೆ ಅವರು ಆದೇಶ ಮಾಡಿಟ್ಟಿರು. ಆ ಪ್ರಕಾರ ನಾವು ಈಗಾಗಲೇ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸುವಂತಹ ಪ್ರಕ್ರಿಯೆ ಈಗಾಗಲೇ ಮುಗಿದಿದೆ. ಆದರೆ ಅಲ್ಲಿ ಏತಕ್ಕೆ ವಿಳಂಬವಾಯಿತು, ಇಷ್ಟು ದಿವಸ ಅಲ್ಲಿಯ ರೈತರಿಗೆ ಹೇಳುವುದು ಬಹಳ ಸರಳವಾಗಿತ್ತು. ಈಗಾಗಲೇ ಟೆಂಡರ್ ಕರೆಯುತ್ತಾರೆ, ಟೆಂಡರ್ ಕರೆದು ಕೆಲಸ ಪೂರೈಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಂದು ಹೇಳುತ್ತಿದ್ದೇವೆ.

ಆದರೆ ಈಗ ಟೆಂಡರ್ ವ್ಯವಸ್ಥೆಯೂ ಪೂರ್ತಿ ಮುಗಿದಿದೆ ಅದಕ್ಕೆ ವರ್ಕ್ ಆರ್ಡರ್ ಕೊಡಿರೆಂದರೆ ಅಧಿಕಾರಿಗಳೇನು ಹೇಳುತ್ತಾರೆಂದರೆ, ಹುಬ್ಬಳ್ಳಿಯಲ್ಲಿ ಎಂಡಿಯವರಿಲ್ಲ ನಿವೃತ್ತರಾಗಿದ್ದಾರೆ, ಅವರ ಚಾರ್ಜ್ ಮಂಗಳೂರಿನಲ್ಲಿದೆ ಅದಕ್ಕೆ ಅದನ್ನು ಕೊಡಲಾಗದೆಂದು ಒಬ್ಬರು ಹೇಳುತ್ತಾರೆ, ಆ ಎಂಡಿಯವರಿಲ್ಲವೆಂದರೆ ಬೇರೆಯವರು ಕಡೆಯಿಂದ ಕೊಡಲಾಗುವುದಿಲ್ಲವೇ ಎಂದು ಕೇಳಿದರು ಇಲ್ಲ ಡೈರೆಕ್ಟರ್ ಟೆಕ್ನಿಕಲ್ ಕೊಟ್ಟರೆ ನಡೆಯುತ್ತದೆಂದು ಹೇಳುತ್ತಾರೆ, ಅವರೂ ಕೂಡ ಸಧ್ಯಕ್ಕೆ ನಿವೃತ್ತರಾಗಿದ್ದಾರಂತೆ. ಅದಕ್ಕೆ ಇದನ್ನು 3 ತಿಂಗಳಲ್ಲಿ ಮುಗಿಸುತ್ತೇವೆಂದು ಹೇಳುತ್ತೀರಿ, ಅಲ್ಲಿ ನಮಗೇನು ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ನಮಗೆ ಹಳ್ಳಿಯೊಳಗೆ ಅಡ್ಡಾಡಲಾಗದಂತಹ ಪರಿಸ್ಥಿತಿ ಅಲ್ಲಿಯ ರೈತರು ನಿರ್ಮಾಣ ಮಾಡಿದ್ದಾರೆ ಬಹತೇಕ ನನ್ನ ಸಮಸ್ಯೆಯಲ್ಲ, ಬಹತೇಕ ರಾಜ್ಯದ ತುಂಬಾ ಈ ಸಮಸ್ಯೆ ಇದೆ ಬೇರೆ ಸದಸ್ಯರೂ ಕೂಡ ಇದಕ್ಕೆ ಸ್ಪಂದಿಸುತ್ತಾರೆಂದು ಈ ಸಂದರ್ಭದಲ್ಲಿ ನಾನು ಭಾವಿಸಿಕೊಂಡಿದ್ದೇನೆ. ಆದಕ್ಕೆ ಆದಷ್ಟು ತೀವ್ರವಾಗಿ ಇದಕ್ಕೆ ಮೂರು ತಿಂಗಳ ಕಾಲಾವಧಿ ಕೊಡುವುದು ನನಗೆ ಸರಿ ಎನಿಸುವುದಿಲ್ಲ. ವರ್ಕ್ ಆರ್ಡರ್ ಕೊಟ್ಟರೆ, ವರ್ಕ್ ಆರ್ಡರ್ ಕೊಟ್ಟಿದ್ದಾರಪ್ಪ ಇನ್ನೊಂದು ಎರಡು ದಿವಸಗಳಲ್ಲಿ ಮುಗಿಸುತ್ತಾರೆಂದು ಹೇಳುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಶೆಟ್ಟರ್ ಸಾಹೇಬರು ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಂಡು ಇವತ್ತೇ ಅಲ್ಲಿಯ ಗುತ್ತಿಗೆದಾರರಿಗೆ ವರ್ಕ್ ಆರ್ಡರ್ ಕೊಡುವಂತೆ ಮಾಡಿ ಆದಷ್ಟು ತೀವ್ರವಾಗಿ ಈ ಕೆಲಸ ಪೂರೈಸುವಂಥ ವ್ಯವಸ್ಥೆ ಮಾಡಿದರೆ ರೈತರಿಗೆ ನಾವು ನೆಮ್ಮದಿಯಿಂದ ಉತ್ತರ ಹೇಳಲು ಸಾಧ್ಯವಾಗುತ್ತದೆ. ರೈತರ ಪರವಾಗಿ ಸರ್ಕಾರವಿದೆ ಎಂದು ಈಗೇನು ವಿಶೇಷವಾಗಿ ಹೇಳುತ್ತಿದ್ದೀರಿ, ಆದನ್ನು ಉಳಿಸಿಕೊಂಡಂತಾಗುತ್ತದೆಂದು ಈ ಮೂಲಕ ತಮಗೆ ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸನ್ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಇಲ್ಲಿ ನಾವು ಮೂರು ತಿಂಗಳ ಅವಧಿಯನ್ನು ಕೊಟ್ಟಿದ್ದೇವೆ, ಅಷ್ಟರೊಳಗೆ ಮಾಡುತ್ತೇವೆಂಬುದು ಸರ್ಕಾರದ ತೀರ್ಮಾನ. ಅಲ್ಲಿ ಇವತ್ತು ಎಂಡಿ ಹುದ್ದೆ ಖಾಲಿ ಇದೆ, ಟೆಕ್ನಿಕಲ್ ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆ ಖಾಲಿ ಇದೆ ಎಂಬುದು ವಸ್ತುಸ್ಥಿತಿ. ಆದಷ್ಟು ಬೇಗ ಆ ಹುದ್ದೆಗಳನ್ನು ತುಂಬುವಂತಹ ಪ್ರಕ್ರಿಯೆಯನ್ನು ಸರ್ಕಾರದವರು ಮಾಡುತ್ತಿದ್ದೇವೆ, ಆದಷ್ಟು ಬೇಗ ಅಲ್ಲಿ ಎಂಡಿಯವರು ನೇಮಕವಾಗುತ್ತದೆ. ಈ ಎಲ್ಲ ಹಿನ್ನೆಲೆಯಲ್ಲಿ ಇದು ನಿಧಾನವಾಗುತ್ತದೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಅದ್ಯಾವಯದಕ್ಕೂ ನಾವು ಕಾಯದೇ, ಇವತ್ತೇನು ಸರ್ಕಾರ ತನ್ನ ವಚನವನ್ನು ಸದನದಲ್ಲಿ ಕೊಟ್ಟಿದೆ, ಆ ವಚನವನ್ನು ಪಾಲಿಸುತ್ತದೆ, ಮತ್ತೆ ಮೂರು ತಿಂಗಳ ಗಡುವನ್ನು ಹಾಕಿಕೊಂಡಿದ್ದೇವೆ. ಆದಷ್ಟು ಬೇಗ ಅದನ್ನು ಎಲ್ಲಾ ರೀತಿಯಿಂದ ಪ್ರೊಸೆಸ್ ಮಾಡುವುದಕ್ಕೆ ಸರ್ಕಾರ ತಯಾರಿದೆ ಆದಷ್ಟು ಬೇಗನೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆಂದು ನಾನು ಸಂದರ್ಭದಲ್ಲಿ ಸ್ಪಷ್ಟೀಕರಣಮಾಡುತ್ತೇನೆ.

ಶ್ರೀ. ಜಿ. ಎಸ್. ಗಡ್ಡದೇವರ ಮಠ : ಎಂಡಿಯವರಿಲ್ಲ, ಟಿಸಿಯವರಿಲ್ಲ ಎನ್ನುವ ಕಾರಣಕ್ಕೆ ನಮಗೆ ತೊಂದರೆಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಅದ್ಯಾವುದೂ ಸಮಸ್ಯೆಯಾಗದಂತೆ ಇದನ್ನು ಮುಗಿಸುತ್ತೇವೆ.

ಶ್ರೀ ಜಿ. ಎಸ್ ಗಡ್ಡದೇವರಮಠ : ಆದಷ್ಟು ಬೇಗ ಇವತ್ತೇ ಮಾಡುತ್ತೇವೆಂದು ಹೇಳಿ: ವರ್ಕ್ ಆರ್ಡರ್ ಇವತ್ತೇ ಇಷ್ಯೂ ಮಾಡುತ್ತೇವೆಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಾವು ಮೂರು ತಿಂಗಳ ಗಡುವನ್ನು ನಿಗಧಿ ಮಾಡಿಕೊಂಡಿದ್ದೇವೆ, ಆದಷ್ಟು ಬೇಗನೆ ಮುಗಿಸುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಇದರ ಮೇಲೊಂದು ಕೇಳಿದ್ದೇನೆ, ಅದು ನಾಳೆ ಬರಬಹುದು, ಅದು ಮುಗಿದು ಹೋಗಿಬಿಡುತ್ತದೆ, ಅದೇ ಪ್ರಶ್ನೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಬಂದಾಗ ಕೇಳಿ.

ಇ. ವಿಷಯ ಪಾವಗಡ ತಾಲ್ಲೂಕಿನಲ್ಲಿ ಇಲ್ಲಿ ಡೆಂಗ್ಯೂ ಇತ್ಯಾದಿ ಜ್ವರಗಳಿಗೆ ವಿಶೇಷ ವೈದ್ಯಕೀಯ ಸೇವೆ ನೀಡುವುದರ ಬಗ್ಗೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನಲ್ಲಿ ಇಲಿ ಹಾಗೂ ಡೆಂಗ್ಯೂ ಜ್ವರ ಅಲ್ಲಿ ಕಾಣಿಸಿಕೊಂಡಿದೆ, ಈ ಸಂಬಂಧವಾಗಿ ಇಲಾಖೆಯು ಅನೇಕ ರೀತಿಯ ಔಷಧಗಳನ್ನು ಸರಬರಾಜು ಮಾಡಿದ್ದರೂ ಸಹ ಆ ಭಾಗದಲ್ಲಿ ನಮ್ಮ ಸಚಿವರು ಬಂದಾಗ 39 ಹಳ್ಳಿಗಳಲ್ಲಿ ಈ ಜ್ವರ ಹರಡಿತ್ತು. ಈಗ ಯಥೇಚ್ಚವಾಗಿ ಸುಮಾರು ತಾಲ್ಲೂಕಿನಲ್ಲಿ 68 ಹಳ್ಳಿಗಳಲ್ಲಿ ಈ ಕಾಯಿಲೆ ಹರಡಿದ್ದು ಪ್ರತಿಯೊಂದು ಆರೋಗ್ಯ ಕೇಂದ್ರಗಳಲ್ಲಿ ಕೂಡ ಪ್ರತಿದಿನ ನೂರಾರು ರೋಗ ಪೀಡಿತರು ಹೋಗಿ ಅಲ್ಲಿ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅಲ್ಲಿ ಸಿಬ್ಬಂದಿಯ ಕೊರತೆ ಇದೆ, ನಮ್ಮ ಸಚಿವರು ಬಂದು ಅಲ್ಲಿ ಖಾಲಿ ಇರುವ ಜಾಗಗಳನ್ನು ತುಂಬಿದರೂ ಸಹ ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆ ಇದೆ. ಇಡೀ ತಾಲ್ಲೂಕನ್ನು ಆ ಜ್ವರ ಹರಡುವ ಮುನ್ಸೂಚನೆ ಇರುವುದರಿಂದ, ಇದುವರೆವಿಗೆ ಯಾವುದೇ ಕಾರಣಕ್ಕೂ ಇಷ್ಟೆಲ್ಲಾ ಕ್ರಮಗಳನ್ನು ಕೈಗೊಂಡರೂ ಕೂಡ ಆ ಜ್ವರ ನಿಯಂತ್ರಣಕ್ಕೆ ಬಂದಿಲ್ಲ. ಎಲ್ಲಾ ಹಳ್ಳಿಗಳು ಕವರ್ ಆಗುವ ಸಂಧರ್ಬದಲ್ಲಿ ಇಲಾಖೆಯವರಿಂದ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿ ಏನು ಕಿರಿಯ ಮಹಿಳಾ ಉಪಕೇಂದ್ರಗಳಿವೆ, ಅಲ್ಲಿ ಚಿಕಿತ್ಸೆ ಕೊಡಿಸುವಂತಹ ವ್ಯವಸ್ಥೆಯನ್ನೂ ಸಹ ಮಾಡಿಸಬೇಕು. ಮಾನ್ಯ ಸಚಿವರು ಆ ಭಾಗಕ್ಕೆ ಈ ಜ್ವರ ಬರಲಿಕ್ಕೆ ಹಂದಿ ಮತ್ತು ಸೊಳ್ಳೆಗಳು ಕಾರಣವೆಂದು ಹೇಳಿ, ಹಂದಿಗಳನ್ನು ಕೊಲ್ಲಲಿಕ್ಕೆ ಆದೇಶ ಕೊಟ್ಟುಬಂದರು. ಈಗ ಆ ಭಾಗದಲ್ಲಿ ಹಂದಿ ಸಾಕಾಣಿಕೆಯ ಉಪ ಕಸುಬು ಮಾಡತಕ್ಕಂತಹ ಜನ ಇವತ್ತು ಅಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಅವರ ಜೀವನೋಪಾಯಕ್ಕೆ ಹಂದಿ ಸಾಕಾಣಿಕೆ ಕಸುಬನ್ನು ಅವಲಂಬಿಸಿರುವುದರಿಂದ ಹಂದಿ ಸಾಕಾಣಿಕೆ ಮಾಡಲಿಕ್ಕೆ ಪ್ರತ್ಯೇಕ ಜಾಗವನ್ನೂ ಸರ್ಕಾರ ಗುರುತಿಸಿ ಅವರ ಜೀವನೋಪಾಯಕ್ಕೆ ಹಂದಿಗಳ ಸಂರಕ್ಷಣೆ ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅದೂ ಅಲ್ಲದೆ ಆರೋಗ್ಯ ಇಲಾಖೆ ಕ್ರಿಮಿನಾಶಕ ಔಷಧಿಗಳನ್ನು ಸಿಂಪಡಿಸಲು ಕ್ರಮ ಕೈಗೊಂಡಿದೆ. ಎಲ್ಲಾ ಹಳ್ಳಿಗಳಲ್ಲೂ ಈವೊಂದು ಕಾಯಿಲೆ ಹರಡುತ್ತಿರುವುದರಿಂದ ಕೇವಲ ನಾಲ್ಕು ಧೂಮೀಕರಣಗಳು ಕೆಲಸ ಮಾಡುತ್ತಿರುವುದರಿಂದ ಏನೂ ಕೆಲಸವಾಗುತ್ತಿಲ್ಲ.

ಪ್ರತಿಯೊಂದು ಗ್ರಾಮಗಳಿಗೂ ಕೀಟನಾಶಕ ಧೂಮೀಕರಣ ಯಂತ್ರಗಳನ್ನು ಸರ್ಕಾರದಿಂದ ಸರಬರಾಜು ಮಾಡಿ, ಆವೊಂದು ಭಾಗದಲ್ಲಿ ನಿಯಂತ್ರಣಕ್ಕೆ ಬಾರದಿರುವ ಈ ಜ್ವರವನ್ನು ತಡೆಗಟ್ಟಲು ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಆರ್ ಅಶೋಕ್ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಮಾನ್ಯ ಅಧ್ಯಕ್ಷರೆ, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜ್ವರ ಪ್ರಕರಣಗಳು ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇವುಗಳಲ್ಲಿ ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆಯು ಸಹ ಸೇರಿರುತ್ತದೆ.

ಇಲಿಜ್ವರ ರೋಗವು , ಇಲಿಗಳ ಮೂತ್ರದಲ್ಲಿ ಹೊರಬಿದ್ದ 'ಸ್ಪೈರೋಕೀಟ್" ಗಳೆಂಬ ಪರಿಮಾಣು ಕ್ರಿಮಿಗಳು ಮನುಷ್ಯನ ದೇಹದ ಒಳಗೆ ಯಾವುದೇ ರೀತಿಯಲ್ಲಿ ಸೇರಿದಾಗ ಹರಡುವ ರೋಗವಾಗಿರುತ್ತದೆ. ಇಲಿಜ್ವರ ಪ್ರಕರಣಗಳು ಹರಡದಂತೆ ನಿಯಂತ್ರಿಸಲು – ಸೋಂಕು ತಗುಲಿದ ಇಲಿ, ಹೆಗ್ಗಣ ಹಾಗೂ ಇತರ ಸಾಕು ಪ್ರಾಣಿಗಳ ಮೂತ್ರವು ನೀರಿನಲ್ಲಿ ಬೆರೆತು ಕಲುಷಿತವಾಗದಂತೆ ಹಾಗೂ ಇಂತಹ ನೀರಿದ್ದಲ್ಲಿ, ಜನರಿಗೆ ಇದರ ಸಂಪರ್ಕವಾದಂತೆ ನೋಡಿಕೊಳ್ಳುವುದು, ಬರಿಗಾಲಿನಲ್ಲಿ ಓಡಾಡದೇ ಇರುವುದು ಹಾಗೂ ಇಲಿ ಮತ್ತು ಹೆಗ್ಗಣಗಳ ನಿಯಂತ್ರಣ ಮಾಡುವುದು ಅತಿ ಮುಖ್ಯವಾಗಿರುತ್ತದೆ.

ಈ ಬಗ್ಗೆ ಡಿಸೆಂಬರ್ 05 ಮತ್ತು ಜನವರಿ 06 ರಿಂದ ಪೂರ್ವಭಾವಿಯಾಗಿ ರೋಗಗಳ ಸಮೀಕ್ಷಾ ಕಾರ್ಯವನ್ನು ನಡೆಸಲಾಗುತ್ತಿದ್ದು, ಪಾವಗಡ ತಾಲ್ಲೂಕಿನ 39 ಗ್ರಾಮಗಳಲ್ಲಿ ಜ್ವರ ಪ್ರಕರಣಗಳು ವರದಿಯಾಗಿದ್ದು ಒಟ್ಟು 3660 ರಕ್ತಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗಿ, ಇವುಗಳಲ್ಲಿ ಮಲೇರಿಯ ಪ್ರಕರಣಗಳು ಕಂಡುಬಂದಿರುವುದಿಲ್ಲ ಪರೀಕ್ಷಿಸಲಾದ 79 ರಕ್ತದ ಮಾದರಿಗಳಲ್ಲಿ 28 ಇಲಿಜ್ವರ ಹಾಗೂ 73 ರಕ್ತದ ಮಾದರಿಗಳಲ್ಲಿ 8 ಡೆಂಗಿ ಜ್ವರ ಪ್ರಕರಣಗಳು ಕಂಡುಬಂದಿರುತ್ತದೆ.

ನಾನು ಖುದ್ದಾಗಿ ಇಲಾಖೆಯ ನಿರ್ದೇಶಕರೊಡನೆ ಪಾವಗಡಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿರುತ್ತೇನೆ. ತುರ್ತು ಚಿಕಿತ್ಸೆಗಾಗಿ ಪಾವಗಡ ಸಾರ್ವಜನಿಕ ಆಸ್ಪತ್ರೆ ಮತ್ತು ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಜೀವರಕ್ಷಕ ಔಷಧಿಗಳ ದಾಸ್ತಾನು ಇರಿಸಲಾಗಿದೆ. ಹಾಗೂ ವೈದ್ಯಕೀಯ ವ್ಯವಸ್ಥೆಗಾಗಿ 6 ವೈದ್ಯರುಗಳನ್ನು ನಿಯೋಜಿಸಲಾಗಿದೆ. ಅವಶ್ಯಕ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವ ಸಲುವಾಗಿ ಹೆಚ್ಚುವರಿ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಿದ್ದು, 2 ಹೆಚ್ಚುವರಿ ವಾಹನ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

ಸೊಳ್ಳೆಗಳ ನಾಶಕ್ಕಾಗಿ ಕೀಟನಾಶಕ ಧೂಮೀಕರಣ ಕೈಗೊಂಡಿದ್ದು. 7 ಧೂಮೀಕರಣ ಯಂತ್ರಗಳನ್ನು ಪಾವಗಡ ತಾಲ್ಲೂಕಿಗೆ ಒದಗಿಸಲಾಗಿದೆ, ಹಾಗೂ ಶಾಶ್ವತ ನೀರಿನ ತಾಣಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಸೊಳ್ಳೆಗಳ ಉತ್ಪತ್ತಿ ತಡೆಯಲು ಬಿಡಲಾಗಿದೆ. ಈ ಎಲ್ಲಾ ಕಾರ್ಯಗಳನ್ನೆಲ್ಲಾ ಮಲೇರಿಯ ಅಧಿಕಾರಿ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪಾವಗಡದಲ್ಲಿಯೇ ವಾಸ್ತವ್ಯ ಹೂಡಿದ್ದು ಖುದ್ದಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ : ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಇಷ್ಟೆಲ್ಲ ಸತ್ಯ ಇದ್ದರೂ ಸಹ ಈಗ ನಾನು ಪ್ರಸ್ತಾಪ ಮಾಡತಕ್ಕಂತಹ ವಿಚಾರ ಅಲ್ಲಿ ಹಂದಿಗಳನ್ನು ಕೊಲ್ಲಲು ಏನು ಆದೇಶ ನೀಡಲಾಗಿದೆ. ಆ ಭಾಗದಲ್ಲಿ ಹಂದಿ ಸಾಕಾಣಿಕೆಯಿಂದ ಜೀವನ ನಡೆಸುವ ಕಸಬುದಾರರಿಗೆ ಅನುಕೂಲ ಮಾಡಿಕೊಡಬೇಕು ಅಂತ ಕೋರುತ್ತೇನೆ. ಮತ್ತು ಇನ್ನೂ ಹೆಚ್ಚು ಕೀಟನಾಶಕ ಧೂಮೀಕರಣ ಘಟಕಗಳನ್ನು ಅಳವಡಿಸಬೇಕು ಎಂದು ತಮ್ಮನ್ನೂ ಕೋರುತ್ತಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ 8ರಿಂದ ವೆಂಕಟಾಪುಗ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈ ರೋಗ ಪತ್ತೆಯಾಯಿತು ಅಲ್ಲಿಗೆ ಸರಬರಾಜು ಆಗಬೇಕಾಗಿರತಕ್ಕ ಅಗತ್ಯವಾದ ಎಲ್ಲಾ ಔಷಧಿಗಳನ್ನೂ ನಾವು ಈಗಾಗಲೇ ಪಾವಗಡಕ್ಕೆ ತಲುಪಿಸಿದ್ದೇವೆ. ಅದರ ಜೊತೆಗೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಜಿಲ್ಲಾ ಸರ್ಜನ್‌ಗಳಿಗೆ ತಲಾ ಎರಡು ಲಕ್ಷ ರೂಪಾಯಿ ತಾಲ್ಲೂಕು ಆರೋಗ್ಯ ಅಧಿಕಾರಿಗೆ ಒಂದು ಲಕ್ಷ ರೂ ಒಟ್ಟು ತುಮಕೂರು ಜಿಲ್ಲೆಗೆ 14.5 ಲಕ್ಷರೂಗಳನ್ನು ಹೆಚ್ಚುವರಿಯಾಗಿ, ನಿಮ್ಮಲ್ಲಿ ಏನಾದರೂ ಔಷಧಿಯ ಕೊರತೆ ಕಂಡುಬಂದರೆ ಬೇರೆ ಕಡೆಯಿಂದ ಖರೀದಿಸಬೇಕಾದರೆ ಈ ಹಣ ಬಳಸಿಕೊಳ್ಳಿ ಎಂದು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅಲ್ಲಿ ವೈದ್ಯರ ಕೊರತೆಯೂ ಇಲ್ಲ. ಜಿಲ್ಲಾ ಮಲೇರಿಯಾಧಿಕಾರಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಅಲ್ಲೇ ಮೊಕ್ಕಾಂ ಹೂಡಿ ಅಲ್ಲಿ ನಿಗಾವಹಿಸುತ್ತಿದ್ದಾರೆ. ಈಗಾಗಲೇ 3 ಮೊಬೈಲ್ ಯೂನಿಟ್ ಕೊಟ್ಟಿದ್ದು, ಒಂದೊಂದು ಯೂನಿಟ್‌ಗೂ ಒಬ್ಬ ವೈದ್ಯ, ಒಬ್ಬ ನರ್ಸ್ ಒಬ್ಬ ಸಹಾಯಕರನ್ನು ನಿಯೋಜನೆ ಮಾಡಲಾಗಿದೆ. ಬೆಂಗಳೂರು ಕೆಸಿ ಜನರಲ್ ಆಸ್ಪತ್ರೆಯ ಪರಿಣತ ವೈದ್ಯರ ಎರಡು ತಂಡಗಳನ್ನು ಇದರ ಬಗ್ಗೆ ಉಸ್ತುವಾರಿ ವಹಿಸಲು ಕಳಿಸಿಕೊಡಲಾಗಿದೆ. ನಾನು ಅಲ್ಲಿಗೆ ಭೇಟಿ ನೀಡಿದ ಮೇಲೆ ಮೊದಲಿದ್ದ ಒಂದು ಫಾಗಿಂಗ್ ಮೆಶಿನ್ ಜೊತೆಗೆ 7 ಮೆಶಿನ್‌ಗಳನ್ನು ಒದಗಿಸಿ ಪ್ರತಿದಿನ ಅಲ್ಲಿ ಧೂಮ ಹರಡಿಸಬೇಕು ಅಂತ ಹೇಳಿದ್ದೇನೆ. ಇದರ ಜೊತೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನೂ ರಚನೆ ಮಾಡಿ ಪ್ರತಿ ದಿವಸ ಮಾಹಿತಿ ಕೊಡಬೇಕು ಅಂತ ನಾನು ಹೇಳಿದ್ದೇನೆ. ನಾನು ಸ್ಥಳಕ್ಕೆ ಭೇಟಿಯಿತ್ತಾಗ ಅಲ್ಲಿನ ಸಾರ್ವಜನಿಕರೆಲ್ಲಾ ಬಂದು ಹೇಳಿದರು ಹಂದಿಗಳು ಜಾಸ್ತಿ ಇವೆ, ಹಂದಿಗಳಿಂದಲೇ ಕಶ್ಮಲವುಂಟಾಗಿ, ಈ ಜ್ವರ ಹರಡುತ್ತಿದೆಯೆಂದು ಹೇಳಿದರು. ಅದಕ್ಕಾಗಿ ಕೂಡಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಎಲ್ಲಾ ಹಂದಿಗಳನ್ನು ಹೊಡೆದು ಹಾಕಲು ಆದೇಶ ಮಾಡಿದ್ದೇನೆ. ಮಾನ್ಯ ಶಾಸಕರು ಹಾಗೆ ಮಾಡಬೇಡಿ ಎಂದು ಮನವಿ ಸಲ್ಲಿಸುತ್ತಿರುವಂತಿದೆ? ಆದರೆ ಈ ರೋಗ ಬಹಳ ಇರುವಾಗ ಆ ಕಾರ್ಯ ಮಾಡಬೇಕಾಗುತ್ತದೆ ಅಥವಾ ಆ ಹಂದಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಲು ಸೂಕ್ತ ಸ್ಥಳ ನಿಗದಿಗೆ ಮಾನ್ಯ ರೆವಿನ್ಯೂ ಸಚಿವರ ಜೊತೆ ಮಾತನಾಡಿ ಬೇರೆ ಸ್ಥಳ ಒದಗಿಸಲು ಯೋಚನೆ ಮಾಡುತ್ತೇನೆ. ಇದುವರೆಗೂ ಈ ಎಲ್ಲಾ ಕ್ರಮ ಕೈಗೊಂಡಿದ್ದರಿಂದಲಿ ಅಲ್ಲಿ ಕಡಿಮೆಯಾಗುತ್ತಿದೆ ಅಂತ ನನಗೆ ವರದಿ ಬಂದಿದೆ. ಎಲ್ಲ ಎಚ್ಚರಿಕೆಯನ್ನು ಆರೋಗ್ಯ ಇಲಾಖೆ ವಹಿಸುತ್ತಿದೆ.

ಶ್ರೀ ಎಂ. ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರ ಅಫ್ಜಲ್‌ಪುರದಲ್ಲೂ ಸಹ ಇಲಿ ಜ್ವರ ವ್ಯಾಪಕವಾಗಿ ಹರಡಿದೆ, ಆ ಇಲಿ ಜ್ವರ ದಲ್ಲಿ ಒಂದು ಮಗು ಮೃತಪಟ್ಟಿದೆ. ಬಹಳ ಪ್ರಾಮುಖ್ಯವಾದ ಸಮಸ್ಯೆ ಇದೆ.

ಅಧ್ಯಕ್ಷರು : ನೀವು ಸಿಗ್ನೇಟರಿ ಅಲ್ಲ, ನಿಯಮಾವಳಿ ಪ್ರಕಾರ ನೀವು ಭಾಗವಹಿಸುವಂತಿಲ್ಲ. ನಿಮ್ಮ ವಿಷಯವನ್ನೇ ಬರೆದು ಕಳಿಸಿ ನಾಳೆ ಅವಕಾಶ ಕೊಡುತ್ತೇನೆ. ಈಗ ವಿತ್ತೀಯ ಕಾರ್ಯಕ್ರಮ ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿನ್ನೆಯ ನಿಮ್ಮ ಭಾಷಣ, ಈಗ ಎರಡು ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಿಬಿಡಿ.

6. ವಿತ್ತೀಯ ಕಾರ್ಯಕಲಾಪ

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಅನೇಕ ಸಾರಿ ಮಾಜಿ ಶಾಸಕರು ಸಚಿವರು ನಿಧನರಾದಾಗ ಇಲ್ಲಿ ಸಂತಾಪ ಸೂಚನೆ ಮಾಡುವಾಗ ಹಣಕಾಸಿನ ಸಹಾಯ ಮಾಡಬೇಕು ಅವರ ಕುಟುಂಬವರ್ಗದವರಿಗೆ ಎಂದು ಹೇಳಿದ್ದೇನೆ. ಶಾಸಕರು ನಿಧನರಾದರೆ ಅವರ ಮನೆಯವರಿಗೆ ಯಾರೂ ಸಹಕಾರ ಮಾಡುತ್ತಾ ಇಲ್ಲ, ಬರೀ ಶಾಸನಸಭೆಯಲ್ಲಿ ಸಂತಾಪ ಸೂಚನೆ ಮಾಡುವುದನ್ನು ಬಿಟ್ಟರೆ ಯಾವ ಹಣಕಾಸು ಸಹಾಯ ಸೌಲಭ್ಯ ಮಾಡುತ್ತಾ ಇಲ್ಲ. ಆದ್ದರಿಂದ ಅದಕ್ಕೆ ವಿಶೇಷವಾಗಿ ಆಯವ್ಯಯದಲ್ಲಿ ಎಷ್ಟು ಕೊಡಬೇಕು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮಾಜಿ ಶಾಸಕರು ಅಥವಾ ಸಚಿವರು ನಿಧನರಾದಾಗ ಅವರ ಸಂಸಾರದ ವ್ಯವಸ್ಥೆ ಹದಗೆಟ್ಟು ಬಹಳ ತೊಂದರೆಯಲ್ಲಿರುತ್ತಾರೆ. ಅವರಿಗೆ ಏನಾದರೂ ಕನಿಷ್ಠ ನಮ್ಮ ಸಹಾಯ ಸಹಕಾರ ಮಾಡಬೇಕಾಗುತ್ತದೆ. ಆಯವ್ಯಯದಲ್ಲೇ ಇದಕ್ಕೆ ಹಣ ಒದಗಿಸಿ ಒಂದು ಸಂಸಾರಕ್ಕೆ ಕನಿಷ್ಠ 5 ಲಕ್ಷ ರೂ ಸರ್ಕಾರ ಕೊಡುವ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಕೇಳುತ್ತಿದ್ದೇನೆ. ಇದರ ಜೊತೆಗೆ ಇಲ್ಲೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಶಾನನಸಭೆಯಲ್ಲಿ ಅತ್ಯಂತ ಕೆಲಸ ಮಾಡಿದಂಥ ಪ್ರೋ: ನಂಜುಂಡಸ್ವಾಮಿಯವರು ಮತ್ತು ರೈತ ಸಂಘವನ್ನು ಕಟ್ಟಿದಂಥವರು, ರೈತ ಸಂಘದಲ್ಲಿ ಬೆಳೆದಂಥವರು , ಅವರು ಸ್ವಲ್ಪ ಹೆಚ್ಚು ಕಡಿಮೆ ನಾನು ಇದನ್ನು ಮಾನ್ಯ ರೆವಿನ್ಯೂ ಮಂತ್ರಿಗಳಾದ ಶೆಟ್ಟರ್‌ರವರ ಗಮನಕ್ಕೆ ತರುತ್ತಿದ್ದೇನೆ. ನಂಜುಂಡಸ್ವಾಮಿಯವರ ವೈದ್ಯಕೀಯ ವೆಚ್ಚವನ್ನು ಅವರ ಮನೆಯವರು ಕೊಟ್ಟು ಒಂದೂವರೆ ವರ್ಷವಾಗಿದ್ದರೂ ಬರೀ 1 ಲಕ್ಷದ 34 ಸಾವಿರ ರೂಪಾಯಿ ನೇರವಾಗಿ ಕೊಡಬೇಕಾದುದ್ದಕ್ಕೆ ಅವರ ಮಕ್ಕಳು ಇದಕ್ಕಾಗಿ ಒಂದೂವರೆ ವರ್ಷದಿಂದ ಅಲೆಯುತ್ತಿದ್ದಾರೆ. ಇವತ್ತಿನವರೆಗೂ ಅವರಿಗೆ ಕೊಟ್ಟಿಲ್ಲವೆಂದರೆ ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಪತ್ರವನ್ನು ಬರೆದಿದ್ದೇನೆ. ತಮ್ಮ ಮೂಲಕ ಇದನ್ನು ನಾನು ಕಂದಾಯ ಸಚಿವರಿಗೆ ಕಳುಹಿಸುತ್ತೇನೆ. ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಅವರ ಮಕ್ಕಳ ಹೆಸರಿಗೆ ತಾವು ಕಳುಹಿಸಿಕೊಡಬೇಕೆಂದು ಹೇಳಿ ಅವರು ಕರ್ನಾಟಕ್ಕೆ ಬಹಳ ದುಡಿದಂಥ ವ್ಯಕ್ತಿ ಕರ್ನಾಟಕಕ್ಕೆ ತ್ಯಾಗ ಮಾಡಿದಂಥವರು. ರೈತರ ಬಗ್ಗೆ ಅಪಾರವಾದ ಕೆಲಸ ಮಾಡಿದಂಥ ವ್ಯಕ್ತಿ, ಅವರ ಬಗ್ಗೆ ನಾವು ಇಷ್ಟು ಲಘುವಾಗಿ ತೆಗೆದುಕೊಂಡು ಅವರ ಮಕ್ಕಳು ಇಲ್ಲಿ ಓಡಾಡತಕ್ಕಂಥದ್ದು ನಮಗ್ಯಾರಿಗೂ ಗೌರವ ಬರತಕ್ಕದ್ದಲ್ಲ. ಆದ್ದರಿಂದ ತಮ್ಮೂಲಕ ಇದನ್ನು ಗಮನಕ್ಕೂ ಕೂಡ ತರುತ್ತಿದ್ದೇನೆ.

ಅಧ್ಯಕ್ಷರು : ಈಗ ನಿಯಮಾವಳಿಗಳಲ್ಲಿ ಏನಾಗಿದೆ ಎಂದರೆ ಒಂದು ವರ್ಷದವರೆಗೆ ಆ ಬಿಲ್‌ಗಳು ಅವನ್ನೆಲ್ಲಾ ಸಬ್‌ಮಿಟ್ ಮಾಡಿದರೆ ನನಗೆ ಕೊಡುವುದಕ್ಕೆ ಅವಕಾಶ ಇದೆ. ಬಹಳ ದಿನವಾದ ಮೇಲೆ ತಂದುಕೊಟ್ಟರೆ ನನಗೆ ಪವರ್ಸ್ ಇರುವುದಿಲ್ಲ ಅದಕ್ಕೆ ನೋಡೋಣ. ಸ್ಪೆಷಲ್ ಬೋರ್ಡ್‌ಗೆ ತೆಗೆದುಕೊಂಡು ಹೋಗಿ ಮಾಡೋಣ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ನಂಜುಂಡಸ್ವಾಮಿಯರ ಮನೆಯವರೂ ತೀರಿಹೋದರು. ನಂಜುಂಡಸ್ವಾಮಿಯವರಾದ ಮೇಲೆ ಓಡಾಡಿ ಅವರ ಮನೆಯವರೂ ತೀರಿಕೊಂಡರು. ತುಂಬಾ ತೊಂದರೆಯಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಬಹಳ ನೋವಿನಲ್ಲಿದ್ದಾರೆ. ಕಂದಾಯ ಸಚಿವರಿಗೆ ಹೇಳುತ್ತಿದ್ದೇವೆ, ಅವರೊಬ್ಬರೇ ಇರತಕ್ಕಂಥವರು. ಅವರು ಹಿರಿಯ ಸಚಿವರಿದ್ದಾರೆ. ನಾನು ತಮ್ಮ ಗಮನಕ್ಕೂ ತರುತ್ತಿದ್ದೇನೆ, ಇದು ಬಹಳ ಪ್ರಾಮುಖ್ಯ. ಮಾನ್ಯ ಶಂಕರಮೂರ್ತಿಯವರೂ ಇದ್ದಾರೆ. ಪ್ರೊಫೆಸರ್ ನಂಜುಂಡಸ್ವಾಮಿಯವರ ಹೆಂಡತಿ ತೀರಿಕೊಂಡರು. ನಂಜುಂಡಸ್ವಾಮಿಯವರೂ ತೀರಿಹೋದರು. ಅವರ ಆರೋಗ್ಯದ ಬಗ್ಗೆ ಒಂದೂವರೆ ವರ್ಷದಿಂದ ಆ ಬಿಲ್‌ನ್ನು ಕೊಡಿ ಎಂದು ಕೇಳಿದರೆ ಇದುವರೆಗೂ ಕೊಟ್ಟಿಲ್ಲ. ನನ್ನ ಹತ್ತಿರ ಬಂದಿದೆ ನೋಡಿ. ಈ ಕ್ಷಣದವರೆಗೆ ಕೊಟ್ಟಿಲ್ಲ. ಅವರ ಮಕ್ಕಳು ಒಂದೂವರೆ ವರ್ಷದಿಂದ ಅಲೆಯುತ್ತಿದ್ದಾರೆ. ಆದ್ದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಾವು ಯಾರಿಗಾದರೂ ಬೇಕಾದರೆ ಕಳುಹಿಸಿಕೊಡಿ ಇದನ್ನು ನಾನು ತಮ್ಮೂಲಕ ಕಳುಹಿಸುತ್ತಿದ್ದೇನೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಮಾಜಿ ಶಾಸಕರು ಲಕ್ಷ್ಮಣ್ ಎಂದು ಇದ್ದರು. ಬಹುಶಃ ಅವರು 72ನೇ ಇಸವಿಯಲ್ಲಿ ಎಂಎಲ್‌ಎ ಆಗಿದ್ದರು. ಈಗ ಅವರು ತೀರಿಹೋದಮೇಲೆ ಅವರ ಮನೆಯವರು ಎಲ್ಲೆಲ್ಲೋ ಮನೆಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ ಯಾವ ಒಂದು ಉದ್ಯೋಗವೂ ಇಲ್ಲದೆ ಅವರು ಬಹಳ ಕಷ್ಟದಲ್ಲಿದ್ದರು. ಮನೆ ಕೆಲಸ ಮಾಡಿಕೊಂಡಿದ್ದರು. ಇವತ್ತು ನಾವು ನಮ್ಮ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸವನ್ನು ಅವರಿಗೆ ಕೊಟ್ಟಿದ್ದೇವೆ. ಏಕೆಂದರೆ ಆ ಒಂದು ಪರಿಸ್ಥಿತಿ ಅವರಿಗೆ ಬಂದಿತ್ತು. ಅವರು ಮಾಜಿ ಶಾಸಕರು ಮತ್ತು ಯಾವುದೋ ಬೋರ್ಡ್‌ಗೆ ಛೇರ್ಮನ್ ಕೂಡ ಆಗಿದ್ದರು. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿರುವ ಸಲಹೆಗೆ ಖಂಡಿತಾ ಸರ್ಕಾರ ಸ್ಪಂದಿಸಬೇಕು. ಕೇವಲ ಭಾಷಣ ಮಾಡಿ ಬಜೆಟ್ ಬಂದಾಗ ಅದಕ್ಕೆ ಒಂದು ರೀತಿ ಸಹಕಾರವನ್ನು ನೀಡದೆ ಹೋದರೆ ಕೇವಲ ಮಾತಿನಲ್ಲಿ ಉಳಿಯುತ್ತದೆ. ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸರ್ಕಾರ ಅದರ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕೆಂದು ಅವರ ಮಾತಿಗೆ ನಾನು ಧ್ವನಿಗೂಡಿಸುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ ನನ್ನದು ಒಂದೇ ಒಂದು ಮನವಿ. ಈ Office of the profit ವಿಷಯದಲ್ಲಿ ಈ ಸಭೆಯಲ್ಲಿ ಒಂದು ಅರ್ಧ ಗಂಟೆ ಚರ್ಚೆ ಆಗಬೇಕು. ನಾವು ಅನೇಕ ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅದು ಬೇರೆ, ಆದ್ದರಿಂದ ಇದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಸರ್ಕಾರದ ಗಮನಕ್ಕೂ ತಂದಿದ್ದೇನೆ. ಅದನ್ನು ಕೊಡುತ್ತೇನೆ. ತಕ್ಷಣ ಇವತ್ತೇ ಕಳುಹಿಸುವ ಹಾಗೆ ಮಾಡಿ ಮತ್ತೆ ಒಂದು ಪ್ರಾಮುಖ್ಯವಾಗಿ ಮಾನ್ಯ ಯಡಿಯೂರಪ್ಪನವರು ತಮ್ಮ ಆಯವ್ಯಯದಲ್ಲಿ ತೆರಿಗೆಯನ್ನು ಕಡಿಮೆ ಮಾಡಿರುವುದು ಯಾವುದಕ್ಕೆ ಹೇಳಿದರೆ ಎತ್ತಿನ ಲಾಳ.

ಅಧ್ಯಕ್ಷರು : ಎರಡು ನಿಮಿಷದಲ್ಲಿ ಕ್ಲೋಸ್ ಮಾಡಿ ಎಂದು ಹೇಳಿದೆ. ಮಾನ್ಯ ನಾಗರಾಜ್‌ರವರೇ, ತಾವು ಒಂದು ಗಂಟೆ ಮೂವತ್ತು ನಿಮಿಷ ಮಾತಾನಾಡಿದ್ದೀರಿ. ಇನ್ನು ಬಹಳ ಜನರು ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇನ್ನು ಎರಡು–ಎರಡೂವರೆ ನಿಮಿಷದಲ್ಲಿ ಮುಗಿಸುತ್ತೇನೆ. ಎತ್ತಿನ ಲಾಳ ಮತ್ತು ಒಣಮೆಣಸಿನಕಾಯಿ ಚೂರು. ಒಣಮೆಣಸಿನಕಾಯಿ ಅಲ್ಲ. ಒಣಮೆಣಸಿನಕಾಯಿ ಚೂರು. ಅಂದರೆ ಏನು ಪರಿಸ್ಥಿತಿ. ಇದು ನನಗೆ ಅರ್ಥವಾಗಲಿಲ್ಲ. ಇದು ಒಂದು ಎರಡನೆಯದಾಗಿ ನಾನು ಪೊಲೀಸರ ಬಗ್ಗೆ ಅನೇಕ ಬಾರಿ ಹೇಳಿದ್ದೇನೆ. ಪೊಲೀಸರ ಬಗ್ಗೆ ಇವರು ಬಹಳ ಪ್ರಾಮಾಣಿಕವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪೊಲೀಸರನ್ನು ನಾವು ಕಡೆಗಾಣಿಸತಕ್ಕದ್ದಲ್ಲ. ಅವರನ್ನು ಅನೇಕ ಸಾರಿ ಟೀಕೆ ಮಾಡಿದ್ದೇವೆ. ಅದರ ಜೊತೆಗೆ ಅವರಿಗೆ ಅನುಕೂಲಗಳನ್ನು ಮಾಡಬೇಕಲ್ಲಾ. ಅವರು 24 ಗಂಟೆ ದುಡಿಯತಕ್ಕಂಥವರು. ಅವರು ಸರ್ಕಾರಿ ನೌಕರರು.

ಅಧ್ಯಕ್ಷರು : ಪೊಲೀಸ್‌ನವರು ಎಂದರೆ ಯಾರು? ಈ ಲೋಕಾಯುಕ್ತದವರು ಹಿಡಿದರಲ್ಲಾ ಆ ಪೊಲೀಸ್‌ನವರಾ. ಅಥವಾ ಯಾವ ಪೊಲೀಸರ ಬಗ್ಗೆ ಮಾತನಾಡುತ್ತಿದ್ದೀರಿ? ಪೊಲೀಸ್‌ನವರು ಎಂದರೆ ಯಾರು ಸ್ವಾಮಿ? ಅದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಸಾಮಾನ್ಯ ಕಾನ್‌ಸ್ಟೇಬಲ್‌ಗಳು ಏನು ಇದ್ದಾರೆ. ಅವರಿಗೇನೊ ಇತ್ತೀಚೆಗೆ ಹೊಸ ಹೆಸರನ್ನು ಕನ್ನಡದಲ್ಲಿ ಕೊಟ್ಟಿದ್ದಾರೆ. ಆ ಹೆಸರು ಹೇಳುವುದಕ್ಕೆ ನಮಗೂ ಸ್ವಲ್ಪ ಕಷ್ಟ. ಪೊಲೀಸು ಎನ್ನವುದಕ್ಕೆ ಆರಕ್ಷಕ. ಅದು ಅರ್ಥವಿಲ್ಲದ್ದು. ಇದು ಸಂಸ್ಕೃತ ಭಾಷೆ. ಈ ಆರಕ್ಷಕ ಎನ್ನುವ ಪದಕ್ಕಿಂತ ಪೊಲೀಸ್ ಎಂದು ಇರಬೇಕು ಸಾರ್. ಅದು ಇದ್ದರೆ ಅದಕ್ಕೊಂದು ಗತ್ತು ಗಮ್ಮತ್ತು ಶಕ್ತಿ ಆರಕ್ಷಕ ಆಮೇಲೆವೃತ್ತ ನಿರೀಕ್ಷಕ ಆಮೇಲೆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ವೃತ್ತ ನಿರೀಕ್ಷಕ ಎಂದು. ಅದರ ಮೇಲಿನವರಿಗೆ ನಮಗೇ ಹೇಳುವುದಕ್ಕೆ ಬರುವುದಿಲ್ಲ ಕನ್ನಡ, ಆದ್ದರಿಂದ ಈ ಕನ್ನಡ ಪದ ತರ್ಜುಮೆ ಇದೆಯಲ್ಲಾ ಈ ತರ್ಜುಮೆ ಮಾಡುವುದರಲ್ಲಿ ಪೊಲೀಸರ ಶಕ್ತಿಯನ್ನು ಕಡಿಮೆ ಮಾಡಿದ್ದಾರೆ. ಆದ್ದರಿಂದ ಕನ್ನಡ ಪದ ಇರತಕ್ಕ ಬದಲಿಗೆ ಪೊಲೀಸ್ ಎನ್ನುವ ಪದವೇ ಇರಲಿ. ಆ ಪದವನ್ನೇ ಬಳಸಬೇಕೆಂಬುದು ನನ್ನ ಒತ್ತಾಯ. ನಾನು ಈಗ ಸಬ್ ಇನ್ಸ್‌ಪೆಕ್ಟರ್ ಕೆಳಗಡೆಇರತಕ್ಕ ದರ್ಜೆ ಏನು ಇದೆ. ತಾವು ನೋಡಿರಬೇಕು. ಇಲ್ಲಿ ನಮ್ಮ ಸುತ್ತ ಇರತಕ್ಕ ಈ ಬಿಳಿ ಉಡುಪಿನಲ್ಲಿರುವವರೂ ಪೊಲೀಸ್‌ನವರೇ, ಅವರಿಗೆ ಹೊರಗಡೆ ಇರತಕ್ಕ ಆ ದರ್ಜೆಯ ಪೊಲೀಸ್‌ನವರಿಗೂ 35 ರೂಪಾಯಿಯ ಊಟಕ್ಕೆ ಒಬ್ಬರಿಗೆ ಗುತ್ತಿಗೆ ಕೊಟ್ಟಿದಾರೆ. ನೀವು ಅದನ್ನು ನೋಡಬೇಕು. ಐದು

ರೂಪಾಯಿಯನ್ನೂ ಅದಕ್ಕೆ ಕೊಡುವುದಕ್ಕಾಗುವುದಿಲ್ಲ ಅದನ್ನು ನಾಯಿ ನರಿಗಳು ತಿನ್ನುವುದಕ್ಕೆ ಲಾಯಕ್ ಇಲ್ಲ ಅಂಥ ಊಟವನ್ನು ಅವರಿಗೆ ಕೊಡುತ್ತಿದ್ದಾರೆ. ಮತ್ತು ಸಂಚಾರಿ ಪೋಲೀಸ್‌ನವರು ನಾನು ಹಿಂದೆಯೂ ತಮ್ಮ ಗಮನಕ್ಕೆ ತಂದಿದ್ದೆ. ಅವರು 24 ಗಂಟೆಯೂ ನಿಂತಿರಬೇಕು. ಅವರ ಸೊಂಟದ ಗತಿಯೇನಾಯಿತು ಸ್ವಾಮಿ? ಅವರ ಕಿವಿ, ಆ ಶಬ್ದ ನಾನು ಅದಕ್ಕೆ ಕೇಳಿದ್ದೆ ಈ ಮೂರರ ಬಗ್ಗೆಯೂ ಚಿಂತನೆಯನ್ನು ಮಾಡಬೇಕು. ಮತ್ತು ಅವರು ಬೇಗ ನಿವೃತ್ತಿಯಾದರೆ ಒಂದು ತರಹ ಹುಚ್ಚರಾದಹಾಗೆ ಆಗಿಬಿಡುತ್ತಾರೆ. ಕಿವಿಯಲ್ಲಿ ಆ ಹಾರ್ನ್ ಶಬ್ದಗಳನ್ನು ಕೇಳಿ ಕೇಳಿ ಮತ್ತು ನಿಂತೂ ನಿಂತು ಸೊಂಟ ಬಿದ್ದುಹೋಗಿರುತ್ತೆ. ಕಿವಿ ಹೋಗಿರುತ್ತೆ. ಕಣ್ಣು ಹೋಗಿರುತ್ತೆ. ಧೂಳನ್ನು ಕುಡಿದು ಹೃದಯ ಕೆಟ್ಟಿರುತ್ತೆ. ಅವರು ನಿಂತಿರತಕ್ಕ ಕೆಲಸಕ್ಕೆ ಬಂದ ತಕ್ಷಣ 40 ವರ್ಷದಲ್ಲಿ ಅವರಿಗೆ ಎಲ್ಲಾ ರೀತಿಯು ರೋಗಗಳೂ ಬರುತ್ತವೆ. ಆದ್ದರಿಂದ ಕನಿಷ್ಟ ಒಂದು ಹೆಸರು ಇಟ್ಟು, ಇಲ್ಲಾ ಸೊಂಟ ಭತ್ಯೆ ಎಂದಾದರೂ ಕೊಡಿ. ಕಣ್ಣಿನ ಭತ್ಯೆ ಎಂತಲಾದರೂ ಕೊಡಿ. ಮೂಗಿನ ಭತ್ಯೆ ಎಂತಲಾದರೂ ಕೊಡಿ. ಕಿವಿ ಭತ್ಯೆ ಎಂದಾದರೂ ಕೊಡಿ. ಒಟ್ಟಿನಲ್ಲಿ ಇದನ್ನು ಅವರಿಗೆ ಕೊಡಲೇಬೇಕು. ಕೊಡಲಿಲ್ಲವೆಂದು ಹೇಳಿದರೆ ನಾವು ನಿಜಕ್ಕೂ ಅಪರಾಧ ಮಾಡಿದಂತಾಗುತ್ತದೆ. ಇದರ ಜೊತೆಗೆ ಕಂಟ್ರೋಲ್ ರೂಮ್‌ನಲ್ಲಿರುತ್ತಾರಲ್ಲಾ, ಅವರ ಗತಿಯೇನು? 24 ಗಂಟೆಯೂ ಫೋನನ್ನು ಇಟ್ಟುಕೊಂಡಿರಬೇಕು. ಯಾರದು ಬರುತ್ತದೆ ಎಂದು ಕೇಳಿ ಕೇಳಿ ಮನೆಗೆ ಹೋದರೂ ಹೆಂಡತಿ ಹತ್ತಿರ ಅದೇ ಮಾತನಾಡುತ್ತಾರೆ. ಮಕ್ಕಳ ಹತ್ತಿರವೂ ಅದೇ ಮಾತನಾಡುತ್ತಾರೆ. ಅವರಿಗೆ ಒಂದು ರೀತಿ ಹುಚ್ಚು ಹಿಡಿದಂತಾಗಿಬಿಟ್ಟಿದೆ. ಕಿವಿಯಲ್ಲಿ ಪ್ರತಿ ದಿನ 24 ಗಂಟೆ ಆ ಕಂಟ್ರೋಲ್ ರೂಮು 24 ಗಂಟೆ ಓ ಯಾರು ಬಂದರೋ, ದೊಡ್ಡ ಆಫೀಸರ್, ಮಂತ್ರಿಗಳು ಇದೇ ಅವರ ತಲೆಯಲ್ಲಿ. ರಾತ್ರಿ ಕನಸಿನಲ್ಲೂ ಅಧಿಕಾರಿಗಳು, ಕನಸಿನಲ್ಲೂ ಸ್ಪೀಕರ್.

ಶ್ರೀ ಗೋವಿಂದಪ್ಪ ಕಾರಜೋಳ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೆ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಸಲಹೆಯನ್ನು ಕೊಟ್ಟಿದ್ದಾರೆ ಬಹಳಷ್ಟು ಭತ್ಯೆಗಳನ್ನು ಕೊಡಬೇಕೆಂದು ಹೇಳಿ, ಅದರಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಎಲ್ಲೋ ಇಲ್ಲ. ಎಲ್ಲೋ ಹೋಗಿದ್ದಾರೆ. ಅವರು ಇಲ್ಲ. ಮಾನ್ಯ ಶ್ರೀರಾಮರೆಡ್ಡಿಯವರ ಸಲಹೆಯನ್ನು ಪಡೆದು ಸೊಂಟದ ಭತ್ಯೆಯನ್ನು ಕೊಡುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯ.

ಶ್ರೀ ಕೆ. ಶ್ರೀನಿವಾಸಗೌಡ : ಇವರು ಹೇಳುವುದರಲ್ಲಿ ಸ್ವಲ್ಪ ನಿಜಾಂಶವೂ ಇದೆ. ಒಬ್ಬರು ಕಾನ್‌ಸ್ಟೇಬಲ್ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದರು. ಒಂದು ಸಾರಿ ಅವರನ್ನು ನೋಡುವುದಕ್ಕೆ ಹೋದೆ. ಅವರ ಕೈಯಲ್ಲಿ ಒಂದು ಸಾರಿ ಹಾಗೆ ಒಂದು ಸಾರಿ ಹೀಗೆ ಅಂದುಕೊಳ್ಳುವರು. ಡಾಕ್ಟರು ಅವರ ಮೇಲೆ ಎಲ್ಲಾ ಪ್ರಯೋಗಗಳನ್ನೂ ಮಾಡಿದರೂ ಕೂಡ ವಾಸಿಯಾಗಲಿಲ್ಲ. ನನ್ನ ಜೊತೆಗೆ ಬಂದವರು ಏನು ಮಾಡಿದರು ಕೈಯನ್ನು ಹೀಗೆ ಅಂದಾಗ ನಾಲ್ಕಣೆ ಇಟ್ಟರು. ಹಾಗೆ ಇಟ್ಟುಕೊಂಡುಬಿಟ್ಟರು. ಅವರ habits ಗಳು ಹೇಗೆ ಇರುತ್ತವೆ ಎಂದು ಹೇಳುವುದಕ್ಕೆ ಇದೂ ಒಂದೂ ಉದಾಹರಣೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಅಭ್ಯಾಸಬಲ.

ಶ್ರೀ ವಾಟಾಳ್ ನಾಗರಾಜ್ : ತಮ್ಮೂಲಕ ಹೇಳುತ್ತೇನೆ. ಪೊಲೀಸ್‌ನವರು ಎಲ್ಲರಿಗೂ ಬೇಕು. ನಮಗೆ ಬೇಕು. ನಿಮಗೆ ಬೇಕು. ಸಾರ್ವಜನಿಕರಿಗೆ ಎಲ್ಲರಿಗೂ ಬೇಕಾಗಿದೆ. ಎಲ್ಲರಿಗೂ ಬೇಕಾಗಿದೆ. ಎಲ್ಲರಿಗೂ ಬೇಕಾದ ವ್ಯಕ್ತಿ ಆ ಇಲಾಖೆ ಬೇಕು. ಆ ಇಲಾಖೆ ಬಗ್ಗೆ ನಾವು ಮಾತನಾಡುವುದಿಲ್ಲ. ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ಅವರಿಗೆ ಭತ್ಯೆಯನ್ನು ಕೊಡಬೇಕಾಗುತ್ತದೆ. ಕಂಟ್ರೋಲ್ ರೂಮ್‌ನಲ್ಲಿರುವವರಿಗೂ ಕೊಡಬೇಕಾಗುತ್ತದೆ. ಅದರ ಜೊತೆಗೆ ವ್ಯಾನ್‌ನಲ್ಲಿ ಕೂತಿರುತ್ತಾರೆ. ನೋಡಿ ಮೊಸಲು ಪಡೆ ಎಂದು. ಅವರದು ನರಕ. ಅವರಿಗೆ ಭಗವಂತ ಬರದೇ ಇಟ್ಟಿದ್ದಾನೆ. ನೀನು ಮಂತ್ರಿಯಾಗಬೇಕು, ನೀನು ಸ್ಪೀಕರ್ ಆಗಬೇಕು. ನೀನು ಶಾಸಕನಾಗಬೇಕು, ನೀನು ಪೊಲೀಸ್ ಆಗಬೇಕು. ಎಲ್ಲೋ ಅವರಿಗೆ, ಬರೆದು ಇಟ್ಟಿರಬಹುದು. ಪೊಲೀಸ್ ಅದು ನರಕ. ಅವರು 24 ಗಂಟೆಯೂ ಒಳಗಡೆ ಕೂತಿರಬೇಕು. ಅವರು ಕೊನೆಗೆ ಅಂತಿಮಾವಾಗಿ ಏನು ಮಾಡುತ್ತಾರೆ ಇದು ಹಾಸ್ಯವಲ್ಲ, ಅವರು ಎಲ್ಲಾದರೂ ಒಂದು ಕಡೆ ಲಾಠಿಛಾರ್ಜ್ ಎಂದರೆ ಸಿಕ್ಕ ಸಿಕ್ಕಿದವರಿಗೆ ಹೊಡೆಯುತ್ತಾರೆ. 24 ಗಂಟೆಯೂ ಒಳಗಡೆ ಕೂತಿರುತ್ತಾರೆ. ಅವರಿಗೆ ಯಾರ ಬಗ್ಗೆಯೂ ಏನೂ ಇಲ್ಲ. ಆದ್ದರಿಂದ ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ, ಈ ಪೊಲೀಸ್ ವ್ಯವಸ್ಥೆ ಆದರ್ಶವಾಗಬೇಕು. ವ್ಯವಸ್ಥೆ ಬದಲಾವಣೆಯಾಗಬೇಕು, ಅವರಿಗೂ ಸಮಾಜದಲ್ಲಿ ನಾವು ಸಮಾಜಕ್ಕೆ ಶತೃಗಳು ಎನ್ನುವ ರೀತಿಯಲ್ಲಿ ಆಗಬಾರದು. ಆ ರೀತಿಯಾಗಿ ಬೆಳವಣಿಗೆಯಾಗಲು ಅವಕಾಶ ಕೊಡಬಾರದು. ಅವರನ್ನು ಸಮಾನವಾಗಿ ನಾಗರೀಕರಂತೆ ನಾವು ಕಾಣಬೇಕು. ಇದರ ಜೊತೆಗೆ ಅವರಿಗೆ ವಿಶೇಷವಾದಂತಹ ಭತ್ಯೆ, ಅವರು 24 ಗಂಟೆಗಳ ಕಾಲ ಕೆಲಸವನ್ನು ಮಾಡಬೇಕಾದರೆ ಅವರಿಗೆ ವಿಶೇಷವಾದಂತಹ ಭತ್ಯೆಯನ್ನು ಕೊಡಬೇಕು. ಧರ್ಮವೀರ ವರದಿಯನ್ನು ಕೊಟ್ಟು ಹತ್ತಾರು ವರ್ಷಗಳಾಯಿತು. ಅದನ್ನು ಇವತ್ತಿನವರೆವಿಗೂ ಜಾರಿಗೆ ತಂದಿರುವುದಿಲ್ಲ. ಆ ಪೊಲೀಸ್‌ನವರ ಮನೆಗಳಿಗೆ ತಾವು ಒಂದು ಸಾರಿ ಹೋಗಿ ನೋಡಬೇಕು. ಆ ಮನೆಗಳಿಗೆ ಹತ್ತಾರು ವರ್ಷಗಳಿಂದ ರಿಪೇರಿ ಮಾಡಿರುವುದಿಲ್ಲ. ಅಲ್ಲಿ ಮಳೆ ನೀರು ಮನೆಯಲ್ಲಿರುತ್ತದೆ, ಅಂತಹ ಅವ್ಯವಸ್ಥೆ ಇದೆ. ಇಡೀ ಪೊಲೀಸ್ ಸಿಬ್ಬಂದಿ ಸಬ್‌ಇನ್ಸ್‌ಪೆಕ್ಟರ್ ಕೆಳಗಿರತಕ್ಕಂತಹವರು ನರಕದಲ್ಲಿದ್ದಾರೆ. ದಯಮಾಡಿ ಅವರಿಗೆ ಭತ್ಯೆಯನ್ನು ಕೊಡಿಸಬೇಕು.

ಅಧ್ಯಕ್ಷರು: ಕೆಳಮಟ್ಟದಲ್ಲಿರುವಂತಹ ಏನು ಕಾನ್ಸ್‌ಟೇಬಲ್‌ಗಳು ಇದ್ದಾರೆ, ಅವರಿಗೆ ಸರ್ಕಾರ ವಿಶೇಷವಾದ ಮುತುವರ್ಜಿ ವಹಿಸಿ ಸವಲತ್ತು ಕೊಡಬೇಕೆಂದು ಏನು ಪ್ರಸ್ತಾಪ ಮಾಡುತಿದ್ದೀರಲ್ಲಾ ಅದಕ್ಕೆ ನನ್ನ ಸಹಮತ ಇದೆ.

ಶ್ರೀ ವಾಟಾಳ್ ನಾಗರಾಜ್ : ಸರಿ, ನಿಮಗೆ ಅತ್ಯಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಅನೇಕ ಕಡೆಗಳಲ್ಲಿ ಒಬ್ಬೊಬ್ಬರು ಪೊಲೀಸರು ನಗೆಪಾಟಲಿಗೆ ಈಡಾಗಿದ್ದಾರೆ. ವಿಧಾನಸೌಧದ ಒಳಗಡೆ ಬರುವವರನ್ನು ತಡೆಯುವ ಹಾಗಿಲ್ಲ. ಸಾರ್ವಜನಿಕರು ಮಂತ್ರಿಗಳನ್ನು ಕೆಲವರನ್ನು ನೋಡಬೇಕು ಅಂದರೆ ಸ್ವಾಮಿ ನೀವು ಮಂತ್ರಿಗಳಾಗಿರಲಿ, ಯಾರೇ ಇರಲಿ ನೀವು ಒಬ್ಬರೇ ಹೋಗಬೇಕು ಎಂದು ಪೊಲೀಸರು ಹೇಳಿದರೆ, ಅವರು ನೀನು ಏನು ಎಂದು ತಿಳಿದುಕೊಂಡಿದ್ದೀಯಾ ನಾನು ಮಂತ್ರಿ ಎಂದು ಅವರ ಮೇಲೆ ರೇಗಿಕೊಂಡು ಹೋಗುವುದು. ಅವರಿಗೆ ಹೆದರಿಸುವುದು, ಇವೆಲ್ಲಾ ಬೇಡ .

ಅಧ್ಯಕ್ಷರು : ಪ್ರಜಾಪ್ರಭುತ್ವ ಇದೆಯಲ್ಲಾ, ಅಂದರೆ ವೈಶಿಷ್ಟ ಅದು.

ಶ್ರೀ ವಾಟಾಳ್ ನಾಗರಾಜ್ : ಸರಿ, ಆ ಪರಿಸ್ಥಿತಿಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಆ ರೀತಿಗೆ ಬರುತ್ತಿದೆ. ಪ್ರಜಾತಂತ್ರ ವ್ಯವಸ್ಥೆ ಆ ಮಟ್ಟಕ್ಕೆ ಇಳಿಯುತ್ತಿದೆ. ಆದ್ದರಿಂದ ಇದರ ಬಗ್ಗೆ ಚಿಂತನೆಯಾಗಬೇಕಾಗಿದೆ. ಒಟ್ಟಾರೆ ಪೊಲೀಸ್ ಇಲಾಖೆಯಲ್ಲಿ ಉತ್ತಮವಾಗಿರತಕ್ಕಂತಹವನ್ನು ಒಳ್ಳೆಯ ಸ್ಟೇಷನ್‌ಗೆ ಹಾಕಿರುವುದು, ಯಾರು ಕೆಲಸಕ್ಕೆ ಬಾರದವನು ಇದ್ದಾರೆ ತೆಗೆದುಕೊಂಡು ಎಲ್ಲೋ ಹಾಕುವುದು. ಸಿ.ಒಡಿಗೆ ಹಾಕು ಎಂದು ಹೇಳುವುದು. ಇನ್ನೊಂದು ಕಡೆ ಹಾಕು ಎಂದು ಹೇಳುವುದು. ಇಡೀ ಜೀವನಪರ್ಯಂತ ಅಲ್ಲಿಯೇ ಇರುವುದು. ಕೆಲವರು ಒಂದೇ ಕಡೆ ಇರುವುದು. ಇದು ಒಳ್ಳೆಯ ಸೂಚನೆಯಲ್ಲ. ಅವರಿಗೂ ಹೇಳಬೇಕು, ಪೊಲೀಸ್ ಸ್ಟೇಷನ್‌ನ ಲಾಕಪ್‌ನಲ್ಲಿ ಯಾರಾದರೂ ಸತ್ತರೇ ಪೊಲೀಸ್‌ನವರ ಮೇಲೆ ಕ್ರಮವನ್ನು ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್‌ನವರು ಹದ್ದುಮೀರಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪೊಲೀಸ್‌ನವರನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡುತ್ತೇವೆಂದಲ್ಲ, ಅವರ ವ್ಯವಸ್ಥೆ ಬಗ್ಗೆ ಸಮಗ್ರವಾಗಿ ಪ್ರಾಮಾಣಿಕವಾದಂತಹ ಒಂದು ಚಿಂತನೆಯು ನಡೆಯಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ನನಗೆ ಮಾತನಾಡಲು ಇಷ್ಟು ಅವಕಾಶವನ್ನು ಕೊಟ್ಟಿದಕ್ಕಾಗಿ ನನ್ನ ಮಾತನ್ನು ಮುಗಿಸಿ ತಮಗೆ ವಂದನೆಯನ್ನು ಸಲ್ಲಿಸಿ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಯೋಗೀಶ್‌ಭಟ್‌ರವರೆ, ತಾವು ಮಾತನಾಡಿ

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಶ್ರೀನಿವಾಸ್‌ಗೌಡರ ಕಥೆಯನ್ನು ಹೇಳೋಣ. ಸ್ವಲ್ಪ ಸದನದಲ್ಲಿ ನಗೆಯಾಗಬೇಕು.

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೇ ನೀವು ವಚನದಲ್ಲಿ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ನನಗೂ ಕೂಡ ಒಂದು ನೆನಪು ಆಗುತ್ತದೆ. ನಮ್ಮಲ್ಲಿ ಒಬ್ಬರು ಸಹಕಾರಿ ಕ್ಷೇತ್ರದಲ್ಲಿ ದುಡಿದಂತಹವರು ಇದ್ದರು. ಅವರು ಬಹಳ ವರ್ಷದಿಂದ ಸೊಸೈಟಿಯ ಛೇ.ರ್ಮನ್ ಆಗಿದ್ದರು.ಕೊನೆಗೆ ಏನಾಯಿತು ಎಂದರೆ, ಅವರು ಮರಣ ಹೊಂದುವಾಗ ಕೊನೆಗೆ ಅವರು ಸಾಯುವಾಗಲೂ ಕೂಡ ಸಹಕಾರಿ ಸಂಸ್ಥೆಯ ಬೀಗದ ಕೀಲಿಯನ್ನು ಹಿಡಿದುಕೊಂಡೇ ಸತ್ತಿದ್ದರು. ಅವರು ಸತ್ತರೂ ಕೂಡ ಆಫೀಸಿನ ಕೀಲಿ ಕೈಯಲ್ಲಿತ್ತು. ಇದೂ ಕೂಡ ನಮ್ಮ ಸಹಕಾರವನ್ನು ಕ್ಷೇತ್ರದ ಬಗ್ಗೆ ಉದಹರಣೆ ಇದೆ.

ಶ್ರೀ ಕೆ. ಶೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಆ ವಿಷಯದ ಬಗ್ಗೆ ಹೇಳಬೇಕಾದರೆ, ನಿಮ್ಮ ಕ್ಷೇತ್ರದ ಲಿಂಗಪ್ಪನವರನ್ನು ತೆಗೆದುಕೊಳ್ಳಿ. ಅವರನ್ನು ಸುಟ್ಟಿದ್ದು ಕೂಡ ಸೊಸೈಟಿಯಲ್ಲಿಯೇ. ನಮಗೆಲ್ಲಾ ಉದಾಹರಣೆಗಳನ್ನು ಕೊಡುವುದಕ್ಕೆ ಬರುತ್ತದೆ. ಕೆಲಸ ಮಾಡಿದವರಿಗೆ ಆ ಅಟ್ಯಾಚ್‌ಮೆಂಟ್ ಬರುತ್ತದೆ. ನಿಮ್ಮ ಕ್ಷೇತ್ರ ದಲ್ಲಿ ಲಿಂಗಪ್ಪನವರು ನನ್ನ ಜೊತೆಯಲ್ಲಿ ಕೆಲಸವನ್ನು ಮಾಡಿದ್ದರು. ಅವರನ್ನು ಸುಡುವ ದಿವಸ ನಾನು ಕೂಡ ಬಂದಿದ್ದೆ. ಸೊಸೈಟಿಯಲ್ಲಿ ಊರ ಮಧ್ಯೆದಲ್ಲಿ ಸುಟ್ಟರು. ಅಂದರೆ ಅವರ ಮೇಲೆ ಜನಗಳು ಇಟು ಕೊಂಡಿರುವಂತಹ ಗೌರವ ನಿಜವಾಗಿಯೂ ಅದನ್ನು ನಾವು ಪ್ರಶಂಸೆ ಮಾಡಬೇಕಾಗುತ್ತದೆ. ಅದಕ್ಕೂ ಬೇರೆಯದಕ್ಕೂ ವ್ಯತ್ಯಾಸ ಮಾಡುವುದು ಬೇಡ ನಾನು ಮಾಡಿದವರಿಗೆ ಆಫೀಸ್ ಅಫ್ ದಿ ಪ್ರಾಫಿಟ್ ವಿಷಯದಲ್ಲಿ ಒಂದು ವಿಷಯವನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು : This is not the time

ಶ್ರೀ ಕೆ. ಶ್ರೀನಿವಾಸಗೌಡ: ನಾನು ಈಗ ಮಾತನಾಡುವುದಿಲ್ಲ. ನಮಗೆ ನಾಳೇ ದಿವಸ ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು: ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಸೋಮವಾರನೋ ಅಥವಾ ಮಂಗಳವಾರನೋ ಯಾವತ್ತಾದರೂ ಕೂಡ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಶ್ರೀ ಮಾನ್ಯ ಶ್ರೀನಿವಾಸಗೌಡರೇ, ತಾವು ಕೇಳಿ ಬಜೆಟ್ 28ನೇ ತಾರೀಖು ಪಾಸ್ ಆಗಬೇಕು. 29ಕ್ಕೆ ಆ ಮನೆಗೆ ಹೋಗಬೇಕು. 29ನೇ ತಾರೀಖು ಈ ಮನೆ ಸಮಾವೇಶದಲ್ಲಿರುತ್ತದೆಯಲ್ಲಾ ಅವತ್ತು ಇದನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಶ್ರೀನಿವಾಸಗೌಡ : ನಾನೂ ಕೂಡ ಬಜೆಟ್‌ನ ಮೇಲೆ ಮಾತನಾಡಬೇಕು.

ಅಧ್ಯಕ್ಷರು : 28ನೇ ತಾರೀಖು ಇದರ ಬಗ್ಗೆ ಚರ್ಚೆ ಮುಗಿಯಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. 29ನೇ ತಾರೀಖು ಎಂದು ತಾವು ಹೇಳುತ್ತಿದೀರಲ್ಲಾ 29ನೇ ತಾರೀಖು ಇದನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಶ್ರೀನಿವಾಸಗೌಡ : ಒಕೆ.

ಅಧ್ಯಕ್ಷರು : ಮಾನ್ಯ ಯೋಗೀಶಭಟ್‌ರವರೇ, ತಾವು ಮಾತನಾಡಿ.

ಶ್ರೀ ಎನ್.ಯೋಗೀಶ್‌ಭಟ್(ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, 2006–07ನೇ ಆಯವ್ಯಯದ ಬಗ್ಗೆ ಚರ್ಚಿಸಲು ನನ್ನ ಅನಿಸಿಕೆಗಳನ್ನು ದಾಖಲಿಸಲು ಅವಕಾಶ ಮಾಡಿಕೊಟ್ಟು ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಸನ್ಮಾನ್ಯ ರಾಷ್ಟ್ರಪತಿಗಳು ತಮ್ಮ ಭಾಷಣವನ್ನು ಎಲ್ಲಿ ಮುಕ್ತಾಯಗೊಳಿಸಿದ್ದಾರೆ. ಅಲ್ಲಿಂದ ಆರಂಭ ಮಾಡುವುದಕ್ಕೆ ಇಚ್ಛಿಸುತ್ತಿದ್ದೇನೆ. ನೀವು ಪ್ರಮುಖವಾದ ಕಾರಣ ಅಸಾಧಾರಣ ಯೋಜನೆ ಇಂತಹ ಕಡೆಗಳಿಂದ ಸ್ಫೂರ್ತಿಗೊಂಡಾಗ ನಿಮ್ಮ ಎಲ್ಲಾ ಆಲೋಚನೆಗಳು ಅಡೆತಡೆಗಳನ್ನು ಮುರಿದು ಮುನ್ನುಗ್ಗುತ್ತವೆ, ನಿಮ್ಮ ಚಿಂತನೆ ತನ್ನ ಪರಿಧಿ ಮೀರಿ ಪರಿವರ್ತನೆಯಾಗುತ್ತದೆ. ಅಂತಃ ಪ್ರಜ್ಞೆ ಎಲ್ಲಾ ಕೋನಗಳಲ್ಲಿ ಪ್ರವರಿಸುತ್ತದೆ. ನಿಮ್ಮ ಅಮೂಲ್ಯವಾದ ಆಶ್ಚರ್ಯಕರವಾದ ಸ್ಥಿತಿಯಲ್ಲಿ ಜಗತ್ತಿನಲ್ಲಿ ಗುರುತಿಸಿಕೊಳ್ಳುತ್ತೀರಿ, ನಿಮ್ಮ ಸುಪ್ತ ಶಕ್ತಿ ಸಹಜ ಸಾಮರ್ಥ್ಯ ಪ್ರತಿಭೆಗಳಿಗೆ ಜೀವ ಬರುತ್ತದೆ. ನಿಮ್ಮನ್ನು ನೀವು ಊಹೆಗೂ ನಿಲುಕದ ಅತ್ಯುನ್ನತ ವ್ಯಕ್ತಿಯೆಂದು ಅನ್ವೇಶಿಸುತ್ತೀರಿ ಎನ್ನುವಂತಹ ಮಾತುಗಳಿಂದ ಆರಂಭ ಮಾಡುವುದಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ರಾಷ್ಟ್ರಪತಿಗಳು, ಬಹುಶಃ ತಮ್ಮ ಜೀವನದಲ್ಲಿ ಒಬ್ಬ ಸಾಮಾನ್ಯ ಪತ್ರಿಕೆ ಮಾರಾಟ ಮಾಡುವಂತಹ ಬಾಲಕನ ಆ ಒಂದು ಸ್ಥಿತಿಯಿಂದ ದೇಶದ ಅತ್ಯುನ್ನತ ಸ್ಥಾನವನ್ನು ಹೇಗೆ ಪಡೆದರು ಆದರ ಸೂತ್ರ ಏನೆಂದು ಹೇಳಿದರೆ ಬಹುಶ: ಇದರಲ್ಲಿ ಇದೆ. ಮಹರ್ಷಿ ಪತಂಜಲಿಗಳು ಎರಡೂವರೆ ಸಾವಿರ

ವರ್ಷಗಳ ಹಿಂದೆ ಹೇಳಿರುವಂಥಹದ್ದು, ಆ ಲೈಟ್ ಕಣಬದ ಕೆಳಗಡೆ ವಿದ್ಯಾಭ್ಯಾಸವನ್ನು ಆರಂಭ ಮಾಡಿ ದೇಶದ ಅತ್ಯಂತ ಉನ್ನತವಾಗಿರುವಂತಹ ವಿಜ್ಞಾನ ವಿಕಸನಗೊಂಡಿರುವಂತಹ ಒಬ್ಬ ವ್ಯಕ್ತಿಯ ಚಿತ್ರಣದಲ್ಲಿ ಅದರಲ್ಲಿ ಬಿಂಬಿತವಾಗಿದೆ. ಮಾನವವ್ಯಕ್ತಿತ್ವದ ಸಂಪೂರ್ಣ ವಿಕಾಸದ ಪ್ರಜ್ಞೆ ಅತ್ಯಂತ ಎತ್ತರಕ್ಕೆ ಏರಬಲ್ಲ, ಅಸಾಧಾರಣ ಸಂಗತಿಗಳನ್ನು ಸಾಧಿಸಬಲ್ಲ ಜೀವನ ಕಲೆಯ ಸುಂದರವಾಗಿರುವಂತಹ ಸರಳ ಸೂತ್ರಗಳನ್ನು ಮಹರ್ಷಿಪತಂಜಲಿಯವರು ಎರಡೂವರೆ ಸಾವಿರ ವರ್ಷಗಳ ಹಿಂದೆ ಹೇಳಿರುವಂಥದ್ದನ್ನು ಅಕ್ಷರಶಃ ತಮ್ಮ ಜೀವನದ ಮೂಲಕ ಅದನ್ನು ಸಾಧಿಸಿ ತೋರಿಸಿರುವಂತಹದ್ದು ಬಹುಶಃ ನಮಗೆಲ್ಲರಿಗೂ ಒಂದು ಸ್ಫೂರ್ತಿದಾಯವಾಗಿರುವಂತಹ ಸಂಗತಿಯಾಗಿದೆ. ಬಹುಶಃ ನಮ್ಮ ಶಾಸಕರೆಲ್ಲರಿಗೂ ಒಂದು ಆದರ್ಶ ಪ್ರಾಯಾವಾಗಿರುವಂತಹ ಒಂದು ಸೂತ್ರ ಎಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಸನ್ಮಾನ್ಯ ಯಡಿಯೂರಪ್ಪನವರ ಕುರಿತುತಾಗಿ ಯೋಚನೆ ಮಾಡಿದಾಗಲೂ ಕೂಡ ಜನಸಂಘದ ಕಾಲದಿಂದ ಭಾರತೀಯ ಜನತಾ ಪಾರ್ಟಿಯ ತನಕ ಬಹುಶಃ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಹೋರಾಟಮಯ ಜೀವನ ನಡೆಸಿದ ಅದೂ ಕುಡ ರೈತ ಕೃಷಿಕಾರ್ಮಿಕರ ಕಲ್ಯಾಣಕ್ಕೋಸ್ಕರ ಇಷ್ಟೆಲ್ಲಾ ಹೋರಾಟ ನಡೆಸಿರುವಂತಹ ಹಾಗೂ ಅನೇಕ ದುಃಖ ದುಮ್ಮಾನಗಳನ್ನು ಅನುಭವಿಸಿರುವಂತಹ ನೈಜ ಸಂಗತಿಗಳನ್ನು ಗಮನಿಸಿರುವಂತಹ ಈ ಒಂದು ಚಿತ್ರಣ ಯಾವುದು ಇದೆ. ಆದರಿಂದ ಸ್ಫೂರ್ತಿ ಪಡೆದು ಬಹುಶಃ 2006–07ನೇ ಬಜೆಟ್ ಅಧಿವೇಶನದಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿರುವಂತಹ ತಮ್ಮ ಪ್ರಯತ್ನಗಳನ್ನು ಮಾಡಿದ್ದಾರೆನ್ನುವಂತಹದ್ದು ನನ್ನ ಅನಿಸಿಕೆಯಾಗಿದೆ. ಬಹುಶಃ ಈ ಸೂತ್ರ ಅವರ ಜೀವನದಲ್ಲಿ ಕೂಡ ಅನ್ವಯವಾಗುತ್ತದೆ. ಎನ್ನುವುದು ನನ್ನ ಮಾತು. 2006–07ರಲ್ಲಿ ಒಬ್ಬ ವ್ಯಕ್ತಿಯಿಂದ ಹಿಡಿದು, ಒಂದು ರಾಜ್ಯದ ಆಡಳಿತ ವ್ಯವಸ್ಥೆಯ ತನಕ ಸಮಗ್ರವಾಗಿ ಅದನ್ನು ಸುಧಾರಣೆ ತರಬೇಕೆನ್ನುವಂತಹ ನಿಟಿನಲ್ಲಿ ವ್ಯಕ್ತಿಯ ಆರ್ಥಿಕ ಜೀವನದಿಂದ ಹಿಡಿದು ಸಾಮಾಜಿಕ ಜೀವನದಿಂದ ಹಿಡಿದು ರಾಜ್ಯದ ಆಡಳಿತ ಸೂತ್ರ, ಆಡಳಿತ ವ್ಯವಸ್ಥೆ ಕೂಡ ಸುಧಾರಣೆಗೊಳ್ಳಬೇಕೆನ್ನುವಂತಹ ಅನೇಕ ಚಿಂತನೆಗಳೂ ಕೂಡ ಈ ಬಜೆಟ್‌ನಲ್ಲಿ ವ್ಯಕ್ತವಾಗಿರುವಂಥದ್ದನ್ನು ನಾವು ಕಾಣಬಹುದು. ದೇಶದ ಇತಿಹಾಸದಲ್ಲಿ ಇಷ್ಟು ಕಡಿಮೆ ಪ್ರಮಾಣದಲ್ಲಿ 4 ಪರ್ಸೆಂಟ್ ಬಡ್ಡಿಗೆ ಸಾಲವನ್ನು ಕೊಡುವಂತಹ ಅದೂ ಕೂಡ ಕೃಷಿ ಕಾರ್ಮಿಕರಿಗೆ ನೇಕಾರರಿಗೆ, ಮೀನುಗಾರರಿಗೆ ಕೊಟ್ಟಿರುವಂತಹ ಒಂದು ಚರಿತ್ರ ಇತಿಹಾಸದಲ್ಲಿ ಇಲ್ಲ. ಇಂತಹದ್ದರ ಬಗ್ಗೆ ಬೇರೆ ರಾಜ್ಯಗಳು ಯಾವುದೂ ಕೊಟ್ಟಿರುವುದಿಲ್ಲ. ಇಂತಹ ಒಂದು ಸಾಧನೆಯನ್ನು ಮಾಡಿರುವುದಕ್ಕೆ ಈ ಸೌಲಭ್ಯವನ್ನು ಒದಗಿಸಿಕೊಟ್ಟಿರುವುದಕ್ಕೆ ಮಾನು ವಿತ್ತ ಸಚಿವರಾದ ಉಪಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಾ ನಾನು ಕೆಲವು ಅಂಶಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ರಾಷ್ಟ್ರಪತಿಗಳು ಹೇಳಿರುವಂತಹ ಸೂತ್ರಗಳಲ್ಲಿ ಜವಳಿ ಕ್ಷೇತ್ರದಲ್ಲಿ ಒಂದು ಶತಕೋಟಿ ಡಾಲರ್ ಮೌಲ್ಯದ ಉತ್ಪನ್ನ ಹಾಗೂ 8 ಲಕ್ಷದ ನೇರ ಉದ್ಯೋಗವನ್ನು ಕೊಡುವಂತಹ ಸೂತ್ರ. ಜೈವಿಕ ಇಂಧನ ಕ್ಷೇತ್ರದಲ್ಲಿ ಜೆತ್ರೋಪದಂತಹ ಬೆಳೆ ಮೂಲಕ 35 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಸುಮಾರು 875 ಕೋಟಿ ಜೆತ್ರೋಪ ಬೆಳೆಯನ್ನು ಆರಂಭಿಸಿ, ಸುಮಾರು875 ಕೋಟಿ ರೂಪಾಯಿ ರಾಜಸ್ವವನ್ನು ಪಡೆಯಬಹುದು. 14 ಲಕ್ಷ ಯುವಕರಿಗೆ ಉದ್ಯೋಗವನ್ನು ಕೊಡುವಂತಹ ಸೂತ್ರ. ತೋಟಗಾರಿಕಾ ಕ್ಷೇತ್ರದಲ್ಲಿ 10 ಸಹಸ್ರ ಕೋಟಿಯ ತನಕ ರಾಜಸ್ವ ಹಲವು ಲಕ್ಷ ಉದ್ಯೋಗವನ್ನು ಕೊಡುವಂತಹ

ಸೂತ್ರ. ಕೃಷಿ ಸಂಸ್ಕರಣ ಉದ್ಯಮ ಐದು ಸಹಸ್ರ ಕೋಟಿಗಳು, 50 ಸಾವಿರ ಕೋಟಿ ರೂಪಾಯಿಗಳ ರಷ್ಟು ವರಮಾನ, ಹೆಚ್ಚಿನ ಉದ್ಯೋಗಾವಕಾಶ. ಅರೆ ವೈದ್ಯಕೀಯ ಸಿಬ್ಬಂದಿ ಮತ್ತು ತಂತ್ರಜ್ಞಾನ ಸಿದ್ಧಪಡಿಸುವ ಮೂಲಕ ಸುಮಾರು ಐದು ಸಾವಿರ ದಾದಿಯರು, ಐದು ಸಾವಿರ ಅರೆ ವೈದ್ಯಕೀಯ ಸಿಬ್ಬಂದಿಗಳಿಗೆ ಉದ್ಯೋಗವನ್ನು ಒದಗಿಸುವ ಸೂತ್ರ. ಪ್ರವಾಸೋದ್ಯಮ ಕ್ಷೇತ್ರ ದಲ್ಲಿ ಕೂಡ ಸುಮಾರು180 ದಶ ಲಕ್ಷ ಡಾಲರ್ ವಿದೇಶಿ ವಿನಿಮ ಹಾಗೂ 10 ಲಕ್ಷ ಹೆಚ್ಚುವರಿ ಉದ್ಯೋಗವನ್ನು ಕೊಡುವಂತಹ ಸೂತ್ರ ಹಾಗೂ ಜ್ಞಾನಾಧಾರಿತ ಉತ್ಪನ್ನಗಳಿಗೆ ಐದು ಲಕ್ಷ ಜ್ಞಾನಾಧಾರಿತ ಉದ್ಯೋಗಗಳನ್ನು ಕೊಡುವಂತಹ ಸೂತ್ರಗಳಂತಹ ಅನೇಕ ಯೋಜನೆಗಳನ್ನೂ ಕೂಡ ಅವರು ಸೂತ್ರಗಳ ಮೂಲಕ ಕೊಟ್ಟಿದ್ದಾರೆ. ಇದು ಬಜೆಟ್ ಹೇಗೆ ವ್ಯಕ್ತವಾಗಿದೆ ಎನ್ನುವುದರ ಬಗ್ಗೆ ಇವೊತ್ತು ಚಿಂತನೆ ಮಾಡಬೇಕಾಗಿದೆ. ಇಷ್ಟು ಸೂತ್ರಗಳು ಅಲ್ಲದೆ, ಬಹಶಃ, ಅವರು ಬೆಂಗಳೂರಿನಲ್ಲಿ ಜರುಗಿದ ಶ್ರೀ ಶ್ರೀ ರವಿಶಂಕರ್‌ರವರ ಕಾರ್ಯಕ್ರಮದ ಸಂದರ್ಭದಲ್ಲಿ ದೇಶ–ವಿದೇಶಗಳಿಂದ ಬಂದಂಥ ಸುಮಾರು ಹತ್ತು ಲಕ್ಷದಷ್ಟು ಜನಸ್ತೋಮದ ಎದುರು ಅವರು ಕೊಟ್ಟಿರುವಂಥ ಇನ್ನೂಮೂರು ಸೂತ್ರಗಳ ಬಗ್ಗೆ ನಾನು ಪ್ರಸ್ತಾಪಿಸುವದಕ್ಕೆ ಇಚ್ಛಿಸುತ್ತಿದ್ದೇನೆ. ಅದರಲ್ಲಿ ವಿಶೇಷವಾಗಿ ಮೌಲ್ಯಾಧಾರಿತ ಶಿಕ್ಷಣ, ಉನ್ನತ ಗುಣಗಳು, ಸೇವಾ ಮೌಲ್ಯಗಳು, ಸ್ವಾಭಿಮಾನ ಹಾಗೂ ಸ್ವಾವಲಂಬಿ ಜೀವನ ಕಲಿಸುವ ಜೀವನ ಕಲೆ ಬಗ್ಗೆ ಕೂಡ ಅವರು ಅಲ್ಲಿ ಒತ್ತಿ ಹೇಳಿದ್ದಾರೆ. ಇದರ ಜೊತೆಗೆ, ಎಲ್ಲಾ ಧರ್ಮಗಳ ಒಳಗಿರುವ ಆಧ್ಯಾತ್ಮಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸುವ ಬಗ್ಗೆ ಅಧ್ಯಯನ ನಡೆಸಿ, ಅನುಕರಣೆ ಮಾಡುವ ನಿಟ್ಟಿನಲ್ಲಿ ಯಾವ ರೀತಿ ನಾವು ಅನುಷ್ಠಾನಕ್ಕೆ ತರಬಹುದು ಎಂದು ಹೇಳುವಂಥ ಒಂದು ಚಿಂತನೆ ಮೂಡಿಸಿದ್ದಾರೆ. ಅಲ್ಲದೆ, ಆರ್ಥಿಕ ಸಮೃದ್ಧಿ ಮತ್ತು ಸ್ವಾತಂತ್ರ್ಯ ಪಡೆಯುವ ಸಂಕಲ್ಪವನ್ನೂ ಕೂಡ ವ್ಯಕ್ತಪಡಿಸಿದ್ದಾರೆ. ಇಂತಹ ಅನೇಕ ಸೂತ್ರಗಳನ್ನು ಈ ಬಜೆಟ್‌ನಲ್ಲಿ ತರುವಂಥ ಒಂದು ಪ್ರಯತ್ನ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ, ಎಲ್ಲಿ ಕೊರತೆಯಾಗಿದೆ ಎಂಬ ಬಗ್ಗೆ ಸನ್ಮಾನ್ಯ ಸದಸ್ಯರುಗಳು ಸಾಕಷ್ಟು ಚರ್ಚೆ ಮಾಡಿ ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇಲ್ಲಿ ಕರ್ನಾಟಕ ವಿತ್ತೀಯ ಸುಧಾರಣೆ ಎಂದು ಹೇಳುವಂಥ ಅಂಶದಲ್ಲಿ ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್‌ನಲ್ಲಾಗಿರುವ ರಿಫಾರ್ಮ್ಸ್ ಬಗ್ಗೆ ಸುಮಾರು ರು.35.875.08 ಕೋಟಿ ಅಂದಾಜು ಆದಾಯ ಮತ್ತು ರೂ 34,350,54 ಅಂದಾಜು ವೆಚ್ಚ ಇರುವ ಬಜೆಟ್ ಅನ್ನು ಮಂಡಿಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ನೀವು ರಾಷ್ಟ್ರಪತಿಯವರ ಭಾಷಣವನ್ನು ಪ್ರಸ್ತಾಪ ಮಾಡಿ ಅಲ್ಲಿಗೇ ನಿಲ್ಲಿಸಿದಿರಿ.ಅದನ್ನು ಬಜೆಟ್‌ನಲ್ಲಿ ಎಷ್ಟರಮಟ್ಟಿಗೆ ಅಳವಡಿಸಿಕೊಂಡಿದ್ದಾರೆಂಬುದನ್ನು ತಾವು ಹೇಳಬೇಕಾಗುತ್ತದೆ. ಮೊದಲು ಅದನ್ನು ಹೇಳಿ ಮುಂದೆ ಹೋಗಿ ತಾವು ಹೇಳುತ್ತಿರುವ ಟ್ಯಾಕ್ಸ್ ಕಲೆಕ್ಷನ್ ಆಗಿರುವ ಬಗ್ಗೆ ನಮಗೆ ಲೆಕ್ಕ ಸಿಗುತ್ತದೆ. ಆದರೆ, ಇವೊತ್ತು ನೀವು ಆಡಳಿತ ಪಕ್ಷದ ಪರವಾಗಿ ಹೇಳಬೇಕಾಗಿರುವುದು, ನಾವು ಈ ರೀತಿಯಾಗಿ ಮಾಡಿಕೊಂಡಿದ್ದೇವೆ ಮತ್ತು ಡಾ॥ ಡಿ.ಎಂ ನಂಜುಂಡಪ್ಪನವರ ವರದಿಯನ್ನು ಈ ರೀತಿಯಾಗಿ ನಾವು ಇಷ್ಟು ವರ್ಷದಲ್ಲಿ ಅನುಷ್ಠಾನಗೊಳಿಸಿ ಪೂರ್ತಿಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂಬುದನ್ನು ದಯವಿಟ್ಟು ಹೇಳಿ. ಆಯವ್ಯಯದಲ್ಲಿ ಏನೇನು ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಹೇಳಿ. ನಾವು ಇಲ್ಲಿ ಟೀಕೆ ಮಾಡುವುದು ಇದ್ದೇ ಇರುತ್ತದೆ. ಆದರೆ ತಾವು ರಾಷ್ಟ್ರಪತಿಯವರ ಭಾಷಣವನ್ನಷ್ಟೇ ಹೇಳಿ ಕೈಬಿಟ್ಟು ಬಿಟ್ಟಿರಿ. ಮೊದಲು ಇದರ ಬಗ್ಗೆ ಹೇಳಿ.

ಶ್ರೀ ಎನ್. ಯೋಗೀಶ್‌ಭಟ್ : ಇಲ್ಲಿ ವಿಶೇಷವಾಗಿ ವಿತ್ತೀಯ ಸುಧಾರಣೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಸಂಪನ್ಮೂಲ ಸಂಗ್ರಹಣೆಯಲ್ಲಿ ಹೆಚ್ಚಳ, ತೆರಿಗೆ ಸೋರಿಕೆಗೆ ತಡೆ, ಐದು ಪರ್ಸೆಂಟ್ ಯೋಜನೇತರ ವೆಚ್ಚದಲ್ಲಿ ಕಡಿತ. ಬಹುಶಃ, ನಿಟ್ಟಿನಲ್ಲಿ ವಿತ್ತೀಯ ಸುಧಾರಣೆ ಹೇಗೆ ಆಗಬೇಕೆಂದು ಹೇಳುವುದು ಬಜೆಟ್ ಮಂಡನೆಯಾದ ತಕ್ಷಣ ಗೊತ್ತಾಗುವುದಿಲ್ಲ. ಅದರ ಬಗ್ಗೆ ನನ್ನ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ ವಿಶೇಷವಾಗಿ, ತೆರಿಗೆ ಸೋರಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಇವೊತ್ತು ತೆರಿಗೆ ಸೋರಿಕೆಯನ್ನು ಸಮಗ್ರವಾಗಿ ತಡೆಗಟ್ಟುವುದಕ್ಕೆ ಸಾಧ್ಯದಲ್ಲಿ, ಬಹುಶಃ ನಮಗೆ ಬರುವಂಥ ಆದಾಯ ಇನ್ನು ಖಂಡಿತವಾಗಿಯೂ ಹೆಚ್ಚಳವಾಗುತ್ತದೆ. ಒಂದು ಚಿಕ್ಕ ಉದಾಹರಣೆ ನಾನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಅಡಿಕೆಗೆ ಸಂಬಂಧಿಸಿದಂತೆ, ಬಹಶಃ ಹೊಸ ಸರ್ಕಾರ ಬಂದ ನಂತರ ನೇರವಾಗಿ ಸಂಬಂಧಪಟ್ಟ ನಮ್ಮ ಸೇಲ್ಸ್ ಟ್ಯಾಕ್ಸ್ ಕೇಡರ್‌ನ ಹಿರಿಯ ಅಧಿಕಾರಿಗಳಿಗೆ ಹೇಳಬೇಕಾಗಿದೆ ಬಂತು, ರೈಲ್ವೆ ಮೂಲಕ ಯಾವ ರೀತಿ ಅಲ್ಲಿ ತೆರಿಗೆರಹಿತವಾಗಿ ಹೇಗೆ ಹೋಗುತ್ತಿದೆ. ಅದೇ ರೀತಿ ರೈಲ್ವೆಗೆ ಸಂಬಂಧಿಸಿದ ವ್ಯವಸ್ಥೆಗಳ ಮೂಲಕ ಬೇರೆ ಬೇರೆ ರೀತಿಯಲ್ಲಿ ಹೇಗೆ ಸೋರಿಕೆ ಆಗುತ್ತಿದೆ ಎಂದು ಹೇಳುವುದರ ಮೂಲಕ ದಿವಸಕ್ಕೆ ಕನಿಷ್ಠ ಐದು ಲಕ್ಷದಷ್ಟು ತೆರಿಗೆ ವಂಚನೆಯಾಗುವಂಥಾದ್ದನ್ನು ತಡೆಗಟ್ಟುವುದಕ್ಕೆ ಸಜ್ಜಾಗಿದೆ. ಆದರೆ, ಈ ನಿಟ್ಟಿನಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ನಾವು ಯಾವ ರೀತಿ ಯೋಜನೆಗಳನ್ನು ಮಾಡಬಹುದು, ಯಾವ ರೀತಿ ತಡೆಗಟ್ಟಬೇಕೆಂಬ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ, ಅದನ್ನು ಅನುಷ್ಠಾನ ತರುವಂಥ ಒಂದು ಪ್ರಯತ್ನ ಆಗಬೇಕಾಗಿದೆ. ಸಂಪನ್ಮೂಲಗಳ ಹೆಚ್ಚಳದ ಬಗ್ಗೆ ಯೋಜನೆ ಮಾಡುವಂಥ ಸಂದರ್ಭದಲ್ಲಿ ಸಾಕಷ್ಟು ಅಧ್ಯಯನ ವರದಿಗಳಿದ್ದರೂ, ನನ್ನ ಒಂದು ವಿನಂತಿ ಏನೆಂದರೆ, ವಿಶೇಷವಾಗಿ ಹೆಚ್ಚು ಬಡ್ಡಿಯಿಂದ ನಾವು ಪಡೆದುಕೊಂಡಿರುವ ಸಾಲ ಯಾವುದಿದೆ, ಬಹಶಃ ಎಡಿಬಿ ಸಾಲ ಇರಬಹುದು ಅಥವಾ ಇನ್ನಿತರ ಸಾಲಗಳನ್ನು ಇತ್ತೀಚೆಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಪಡೆದುಕೊಂಡಿರುವ ಸಾಲಗಳನ್ನು ರೀಪ್ಲೇಸ್ ಮಾಡುವುದಕ್ಕೆ ಅದನ್ನು ಬದಲಾಯಿಸುವ ನಿಟ್ಟಿನಲ್ಲಿ ಯಾವ ಯೋಜನೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಮತ್ತು ಒಂದೆರಡು ಪರ್ಸೆಂಟ್‌ನಲ್ಲಿ ನಾವು ಸಾಲಗಳನ್ನು ಪಡೆಯುವುದಕ್ಕೆ ಸಾಧ್ಯವಿರುವಂಥ ಸಂಸರ್ಭದಲ್ಲಿ 10–11–12–13 ಪರ್ಸೆಂಟ್‌ನಲ್ಲಿ ಇವೊತ್ತು ಎಡಿಬಿ ಸಾಲ ಮಹಾನಗರ ಪಾಲಿಕೆ. ನಗರ ಪಾಲಿಕೆಗಳಿಗೆ ಲಭ್ಯವಾಗಿರುವಂಥಾದ್ದನ್ನು ಹೇಗೆ ನಾವು ಮಿನಿಮೈಸ್ ಮಾಡಬಹುದು, ಹೇಗೆ ಬದಲಾಯಿಸಬಹುದೆಂದು ಹೇಳುವುದರ ಮೂಲಕ ಯೋಚನೆ ಮಾಡಬೇಕಾಗಿದೆ. ಐದು ಪರ್ಸೆಂಟ್ ಯೋಜನೇತರ ವೆಚ್ಚದ ಕಡಿತದ ಬಗ್ಗೆ ಯಾವ್ಯಾವ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ ಎನ್ನುವುದರ ಬಗ್ಗೆ ಸ್ವಲ್ಪ ಹೆಚ್ಚಿನ ವಿವರಣೆಯನ್ನು ನಾನು ಅಪೇಕ್ಷಿಸುತ್ತಿದ್ದೇನೆ. ನಂತರ, ಆಯವ್ಯಯ ನಿಯಂತ್ರಣ ಪದ್ಧತಿಯನ್ನು ಈ ಆರ್ಥಿಕ ವರ್ಷದಿಂದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಸ್ಥಳೀಯ ಮಟ್ಟದಲ್ಲಿ ಅದನ್ನು ಅನುಷ್ಠಾನಕ್ಕೆ ತರುವಂಥ ಪ್ರಯತ್ನಗಳನ್ನು ಪ್ರಾರಂಭ ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಎಸ್.ಎಸ್. ಪಾಟೀಲ್‌ರವರು ವಿಶೇಷವಾಗಿ Annual Auit Accounts Reports ನಂತರ Enquiry Commision Report ವ್ಯಾಪ್ತಿಗೆ ಬರುವಂಥ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯಲ್ಲಿ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಸಮಿತಿಯ ಮಾನ್ಯ ಸದಸ್ಯರುಗಳು ಇಲ್ಲಿದ್ದಾರೆ. ನಮಗೆ ತುಂಬಾ ಆಶ್ಚರ್ಯ

ತಂದಿರುವಂಥಾದ್ದು ಏನೆಂದರೆ, ಅನೇಕ ಸ್ಥಳೀಯ ಆಡಳಿತ ಸಂಸ್ಥೆಗಳು 7–8 ವರ್ಷಗಳಿಂದ ಆಡಿಟ್ ಮಾಡದೇ ಇರುವುದು ನಮ್ಮ ಗಮನಕ್ಕೆ ಬಂದಿದೆ 7–8 ವರ್ಷಗಳಿಂದ ಆಡಿಟ್ ಆಗಿಲ್ಲ ಅನೇಕ ಕಡೆಗಳಲ್ಲಿ proper accounts, annual reports submit ಮಾಡುತ್ತಿಲ್ಲ. ಇಂತಹ ದುಸ್ಥಿತಿಗಳು ಇರುವಂಥ ಸನ್ನಿವೇಶದಲ್ಲಿ ಅನೇಕ ಸಂದರ್ಭಗಳಲ್ಲಿ ಕಾನೂನು ತೊಡಕುಗಳೆಂದು ಹೇಳಿಕೊಂಡು ಹೇಗೆ ಜಾರಿಕೊಳ್ಳುತ್ತಿದ್ದಾರೆ. ನಾವು ಗಮನಿಸಬಹುದು. ಇದನ್ನು ನಾವು ಹೇಗೆ ಕಾರ್ಯರೂಪಕ್ಕೆ ತರಬಹುದು ಎಂಬುದರ ಬಗ್ಗೆ ನಾವು ಇವೊತ್ತು ಯೋಚನೆ ಮಾಡಬೇಕಾಗಿದೆ. ಅದನ್ನು ಅಕ್ಷರಶಃ mandatoryಯಾಗಿ ಅದನ್ನು ಕ್ಲುಪ್ತ ಸಮಯಕ್ಕೆ annual reports, audit reports ಕೊಡಲೇಬೇಕೆಂದು ಕಡ್ಡಾಯವಾಗಿ ಮಾಡಬೇಕಾಗಿದೆ. ಇವೊತ್ತು ಅನೇಕ ಕಡೆಗಳಲ್ಲಿ Chartared Accountants ಎಂದು ಏನು ನಾವು ಹೇಳುತ್ತೇವೆ. ಕೆಪಿಎಸ್‌ಸಿಗೆ ಸಂಬಂಧಪಟ್ಟಂತೆ ಇರಬಹುದು ಅಥವಾ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಇರಬಹುದು ಇನ್ನಿತರ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ Chartered Accountans ಎಂದು ಹೇಳುವ ನಿಟ್ಟಿನಲ್ಲಿ ಅದು Autonomous Body ಎಂದು ಈ ನಮ್ಮ ಸದನಕ್ಕೆ Lay ಆಗುತ್ತಿಲ್ಲ. ಅದು Lay ಆಗುವಂಥ ನಿಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳಬಹುದು ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ಸಮಗ್ರ ಆಡಳಿತ ವ್ಯವಸ್ಥೆಯನ್ನು ಗಣಕೀಕರಗಣ ಗೊಳಿಸುವ ಮೂಲಕ ಎಲ್ಲವೂ ಪಾರದರ್ಶಕವಾಗಿ ಇರುವಂಥ ಕಾರ್ಯ ಪದ್ಧತಿಯನ್ನು ಜಾರಿಗೊಳಿಸಲು ಬಹುಶಃ ನಾವು ಟಾರ್ಗೆಟ್ ಇಟ್ಟುಕೊಂಡು ಮೂರು ತಿಂಗಳಿನಲ್ಲಿ ಕನಿಷ್ಠ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಜಿಲ್ಲಾ ಪಂಚಾಯತ್, ಇರಬುಹುದು, ನಗರಪಾಲಿಕೆ ಮಹಾನಗರಪಾಲಿಕೆ, ಟೌನ್ ಪಂಚಾಯತ್ ಇರಬಹುದು, ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಕನಿಷ್ಠ ಮೂರು ತಿಂಗಳಲ್ಲಿ ಆದರೂ ಇದನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಬಹಶಃ ಅನೇಕ ಕಡೆಗಳಲ್ಲಿ ಅಕೌಂಟ್ಸ್‌ನಲ್ಲಿ Single Entry Systeme ಮಾತ್ರ ಇದೆ. Double Entry System ಜಾರಿಗೆ ತಂದು ಕಡ್ಡಾಯವಾಗಿ ಗಣಕೀಕರಣಗೊಳಿಸುವಂಥ ಒಂದು ಪದ್ಧತಿಯನ್ನು ಜಾರಿಗೊಳಸಬೇಕು ಅದರ ಜೊತಗೆ, ಅನೇಕ ಕಡೆಗಳಲ್ಲಿ ಇಷ್ಟರತನಕವೂ ನಾವು ಯಾವುದೇ ರೀತಿಯಲ್ಲೂ Engineering Audit ಮಾಡುತ್ತಿಲ್ಲ., ಸರಿಯಾಗಿ Engineering Audit ಕೂಡ ಮಾಡಿ ಯಾವ ರೀತಿ ವ್ಯವಸ್ಥೆ ಸುಧಾರಿಸಬೇಕೆಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಯಾವುದೇ ಒಂದು ಕಾಮಗಾರಿಗೆ ಸಂಬಂಧಪಟ್ಟಂತೆ ಆರಂಭದ ಹಂತದಿಂದ ಪೇಮೆಂಟ್ ಆಗುವ ಹಂತದ ತನಕ ಟೆಂಡರ್ ಪ್ರೋಸೆಸ್ ಇರಬಹುದು, ಅದಕ್ಕೆ ಸಂಬಂಧಪಟ್ಟ ಬೇರೆ ಬೇರೆ ಪ್ರೋಸೆಸ್‌ಗಳಿರಬಹುದು, ಎಲ್ಲವೂ ಪಾರದರ್ಶಕವಾಗಿ ಒಂದು ವೆಬ್ ಸೈಟ್‌ನಲ್ಲಿ ವೆಬ್ ಆಗುವಂಥ ಪದ್ಧತಿಯನ್ನು ನಾವು ಜಾರಿಗೆ ತರುವಂಥ ಅವಶ್ಯಕತೆ ಇದೆ. ಅದೇ ರೀತಿ ಎಷ್ಟು beneficiaries ಅದರ ಉಪಯೋಗ ಮಾಡಿಕೊಂಡಿದ್ದಾರೆಂಬ ಬಗ್ಗೆ social audit ಎನ್ನುವಂಥಾದ್ದು ಕಡ್ಡಾಯವಾಗಿ ತರುವ ಅವಶ್ಯಕತೆ ಇದೆ. ಅನೇಕ ಸರ್ಕಾರಿ ಯೋಜನೆಗಳನ್ನು ನಾವು ಇವೊತ್ತು ಘೋಷಿಸುತ್ತೇವೆ. ಆದರೆ, ಅಂತಿಮವಾಗಿ ಆ ಯೋಜನೆಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಅದರ ಲಾಭ ಸಿಕ್ಕಿದೆ ಎನ್ನುವುದರ ಬಗ್ಗೆ ಇವೊತ್ತು ಚಿಂತನೆ ಮಾಡುವ ಅವಶ್ಯಕ ಇದೆ. Social Audit ಕೂಡ ನಾವು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವ ಅವಶ್ಯಕತೆ ಇದೆ. ಅದೇ ರೀತಿ

E-Procurement ಬಗ್ಗೆ ಲಿಂಗಾಧಾರಿತ (genderbased) ಆಯವ್ಯಯದ ಬಗ್ಗೆ ಮೊನ್ನೆ ಉಪ ಉಪ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಹೆಚ್ಚು ಮಾಹಿತಿಯನ್ನು ನಾನೂ ಕೂಡ ಅಪೇಕ್ಷಿಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭಗಳಲ್ಲಿ ನಾವು ಬೆಂಗಳೂರು ನಮ್ಮ ರಾಜ್ಯದ ರಾಜಧಾನಿ ಮಾತ್ರವಲ್ಲ ಎಲ್ಲಾ ರೀತಿಯಲ್ಲೂ ಆರ್ಥಿಕವಾಗಿ ಪ್ರಗತಿ ಹೊಂದುತ್ತಿರುವ ಒಂದು ನಗರವೆಂದು ಗುರ್ತಿಸುತ್ತಿದ್ದೇವೆ. ಬಹುಶಃ, ತಮಗೆ ಗೊತ್ತಿರಬಹುದು. ಬೆಂಗಳೂರಿನಂತಹ ಅಥವಾ ಬೆಂಗಳೂರನ್ನು ಮೀರಿಸುವ ನಿಟ್ಟಿನಲ್ಲಿ ಇವೊತ್ತು ಮಂಗಳೂರು ನಗರ ಬೆಳೆಯುತ್ತಿದೆ. Special Economic Zone ಎಂದು ಹೇಳುವಂಥ ವಿಶೇಷ ಆರ್ಥಿಕ ವಲಯವೆಂದು ಯಾವುದು ಇವೊತು ಬರುತ್ತಿದೆ, ಇದರ ಮೂಲಕ ONGC, MRPL ಮೂಲಕ ಸಹ ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆ ಆಗುತ್ತಿದೆ. ಇಷ್ಟು ಬಂಡವಾಳ ಹೂಡಿಕೆಗೆ SEZ system ಮೂಲಕ ಬರುವಂಥಾದ್ದು ಇದ್ದರೆ, ಇನ್ನೊಂದು ಕಡೆ ಅದಕ್ಕೆ ancillary unitಗಳಾಗಿ ಅಷ್ಟೇ ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆ ಆಗುವ ಸಾಧ್ಯತೆಗಳನ್ನು ಕಾಣುತ್ತಿದೆ. ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುವಂಥ ಎಲ್ಲಾ ಸಾಧ್ಯತೆಗಳೂ ಕಂಡಬರುತ್ತಿದೆ. ಇಂತಹ ಒಂದು ಬೃಹತ್ ಆಗಿರುವ ಯೋಜನೆ ಬಗ್ಗೆ ಕೂಡ ಬಜೆಟ್‌ನಲ್ಲಿ ವಿಶೇಷವಾಗಿ ಪ್ರಸ್ತಾವನೆ ಮಾಡುವಂಥ ಅವಶ್ಯಕತೆ ಇತ್ತು. ಆದರೆ ಇಲ್ಲಿ ಇದರ ಕ್ಕೊರತೆಯನ್ನು ನಾನು ಗಮನಿಸಿದ್ದೇನೆ. ಇದನ್ನು ಪ್ರಸ್ತಾಪ ಮಾಡಬೇಕಾಗಿತ್ತು ಇದಕ್ಕೆ ಪ್ರಾವಿಷನ್ ಏನು ಮಾಡಿದ್ದಾರೆ, ಯಾವರೀತಿಯಾಗಿ ಅದನ್ನು ವ್ಯವಸ್ಥೆ ಮಾಡಿದ್ದಾರೆಂದು ಯೋಚನೆ ಕೂಡ ಮಾಡಬೇಕಾಗಿದೆ. ಬಹುಶಃ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚಿಸುತ್ತಿರುವಂಥಾದ್ದು ಈ ಬಜೆಟ್‌ಗೆ ಸಂಭಂದ ಪಟ್ಟಿರತಕ್ಕದ್ದ Econmic Zone ಮತ್ತು ಇದಕ್ಕೆ ಸಂಭಂದಿಸಿದಂತೆ ಇಷ್ಟೆಲ್ಲಾ ಯೋಜನೆಗಳು ಬರುವ ಸಂದರ್ಭದಲ್ಲಿ water management ಅನ್ನು ನಾವು ಹೇಗೆ ನಿಭಾಯಿಸುತ್ತೀರಿ ಎಂದು ಹೇಳುವುದರ ಬಗ್ಗೆ ಸುಮಾರು 1 ಲಕ್ಷ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆ ಬರುವ ಸಂದರ್ಭದಲ್ಲಿ water management ಅನ್ನು ಟ್ಯಾಕಲ್ ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದೇವೆ? ಈಗಾಗಲೇ ಆ ಜಿಲ್ಲೆಯಲ್ಲಿರುವ ಅನೇಕ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿಂದಾಗಿ ಜನರು ತತ್ತರಿಸುತ್ತಿದ್ದಾರೆ. ಜನರು ಈ ರೀತಿಯಾಗಿ ತತ್ತರಿಸುತ್ತಿರುವಂಥ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆಯಾಗಿ ನಾವು ಏನು ಯೋಜನೆ ಹಮ್ಮಿಕೊಂಡಿದ್ದೇವೆ? ಯಾವ ರೀತಿ ಅನುಷ್ಠಾನಕ್ಕೆ ತರುತ್ತಿದ್ದೇವೆ, ಇದರ ಬಗ್ಗೆ ಸಮಗ್ರವಾಗಿ ಯೊಚನೆ ಮಾಡುವ ಅವಶ್ಯಕತೆ ಇದೆ. ಬಹುಶಃ ಈ ಹಿನ್ನೆಲೆಯಲ್ಲಿ ವೆಂಟೆಡ್ ಡ್ಯಾಂಗಳನ್ನು ತಕ್ಷಣ ಅನುಷ್ಠಾನಕ್ಕೆ ತರಬೇಕು, ಅದನ್ನು ಅಳವಡಿಸಬೇಕೆಂದು ಹೇಳುವ ನಿಟ್ಟಿನಲ್ಲಿ ಯಾವುದೇ ಕಾರಣ ಕೊಟ್ಟು ವಿಳಂಬ ಮಾಡದೆ ತಕ್ಷಣ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಅಷ್ಟು ಮಾತ್ರವಲ್ಲ, ಕೃಷ್ಣ ನದಿಯಲ್ಲಿ ಸುಮಾರು 800 ಟಿ.ಎಂ.ಸಿ. ಯಷ್ಟು ನೀರು ಹರಿಯುತ್ತಿದೆ. ಕಾವೇರಿ ನದಿಯಲ್ಲಿ ಸುಮಾರು 1200 ಟಿ.ಎಂ.ಸಿ. ಯಷ್ಟು ನೀರು ಹರಿಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆ ಉತ್ತರ ಕನ್ನಡ ಜಿಲ್ಲೆಯ ಸುಮಾರು 13 ನದಿಗಳಲ್ಲಿ ಸುಮಾರು 2000 ಟಿ.ಎಂ.ಸಿ. ಯಷ್ಟು ನೀರು ಇವತ್ತು ಸಮುದ್ರವನ್ನು ಸೇರುತ್ತಿದೆ. ಕನಿಷ್ಟ 2 ರಿಂದ 3 ಪರ್‌ಸೆಂಟ್ ನೀರನ್ನು ಸದ್ವಿನಿಯೋಗ ಮಾಡಿಕೊಳ್ಳಲು

ನಾವು ವಿಫಲರಾಗಿದ್ದೇವೆ. ಅದಕ್ಕೆ ಪರ್ಯಾಯವಾಗಿ ನಾವು ಬೇರೆ ಎಲ್ಲಾ ನೀರಾವರಿ ಯೋಜನೆಗಳನ್ನು ಯೋಚನೆ ಮಾಡುತ್ತಿದ್ದೇವೆ. ಇಲ್ಲಿ ಶಾಶ್ವತವಾಗಿರತಕ್ಕ ಒಂದು ನೀರಾವಾರಿ ಯೋಜನೆಯ ಬಗ್ಗೆ ಯೋಚನೆ ಮಾಡುವ ಅವಶ್ಯಕತೆ ಇದೆ. 80 ಮೀಟರ್ ಎತ್ತರದಲ್ಲಿ ಪಶ್ಚಿಮ ಘಟ್ಟಗಳ ಉದ್ದಕ್ಕೂ ಸುಮಾರು ಐವತ್ತು ಫೀಟ್ ಆಳದಲ್ಲಿರುವಂಥ ನೀರಿಗೆ ಕಾಲುವೆಯನ್ನು ತೋಡಿ ಸಮಗ್ರವಾಗಿ ನೀರು ಹರಿಯುವಂಥ ವ್ಯವಸ್ಥೆಯನ್ನು ಮಾಡಿ ಹತ್ತತ್ತು ಕಿಲೊಮೀಟರ್ ಅಂತರದಲ್ಲಿ ಗೇಟುಗಳನ್ನು ಹಾಕಿ ವ್ಯವಸ್ಥೆಯನ್ನು ಮಾಡಲು ಸಾಧ್ಯವಾದಲ್ಲಿ ಕೇವಲ ದಕ್ಷಿಣ ಕನ್ನಡ ಉತ್ತರ ಕನ್ನಡ ಮಾತ್ರವಲ್ಲ ನೀರಿನ ಕೊರತೆ ಇರುವಂಥ ಅನೇಕ ಜಿಲ್ಲೆಗಳಿಗೆ ಕೂಡ ನೀರನ್ನು ಒದಗಿಸಲು ಸಾಧ್ಯವಾಗಬಹುದು. ಅಷ್ಟು ಮಾತ್ರವಲ್ಲ ನೀರಾವರಿಗೂ ಅನುಕೂಲವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆಗು ಅನುಕೂಲವಾಗುತ್ತದೆ. ಅದೇ ರೀತಿ ಪ್ರವಾಸೋಧ್ಯಮ ಕ್ಷೇತಕ್ಕೂ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇನ್ ಲ್ಯಾಂಡ್ ಫೀಶರೀಸ್‌ಗೆ ಸಂಬಂಧಪಟ್ಟಂತೆ ಸಹ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಂಥ ಅನೇಕ ಯೋಜನೆಗಳನ್ನು ಅನುಷ್ಟಾನಕ್ಕೆ ತರುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ. ಮೀನುಗಾರಿಕಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯೋಜನೆ ಹೇಗೆ ಅನುಷ್ಟಾನಕ್ಕೆ ಬರುತ್ತಿದೆ ಎಂಬುದನ್ನು ಸಂತೋಷದಿಂದ ಹೇಳುತ್ತಿದ್ದೇನೆ. ಅನೇಕ ಯೋಜನೆಗಳನ್ನು ತಂದಿದ್ದಾರೆ. ಐವತ್ತು ಸಾವಿರ ಕಿಲೋಲೀಟರ್‌ನಿಂದ ಎಪ್ಪತ್ತು ಸಾವಿರ ಕಿಲೋಲೀಟರ್‌ತನಕ ಮಾಡಿದ್ದಾರೆ. ಬಹಶಃ ಹಿಂದಿನ ಸರ್ಕಾರಗಳು ಹೇಗೆ ಮಾಡುತ್ತಿತ್ತು ಎಂಬ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕು. ಐವತ್ತು ಸಾವಿರ ಕಿಲೋಲೀಟರ್ ಇದ್ದದನ್ನು ಐವತ್ತೈದು ಸಾವಿರ ಮಾಡಬೇಕು ಎಂದರೆ ಮೀನಗಾರರ ನಿಯೋಗ, ನಾಯಕರುಗಳೆಲ್ಲಾ ಇಲ್ಲಿಗೆ ಬಂದು ಮನವಿ ಕೊಟ್ಟು ಅನಂತರ ಮನವಿಯ ಮೇಲೆ ಮನವಿ ಮಾಡಿ, ನಿಮಗೆ ನಾವು ಏನೋ ಭಿಕ್ಷೆ ಕೊಟ್ಟಿದ್ದೇವೆ, ನಿಮಗೆ ಏನೋ ನಾವು ಕೊಟ್ಟಿದ್ದೇವೆ ಎಂಬ ಇಂಪ್ರೆಷನ್ ಕ್ರಿಯೇಟ್ ಮಾಡುವುದಿತ್ತು. ಆದರೆ ಈ ಸರ್ಕಾರ ಆ ರೀತಿ ಮಾಡಿಲ್ಲ. ಮೀನುಗಾರರು ಇಲ್ಲಿಗೆ ಬರುವುದಕ್ಕೆ ಸಹ ಅವಕಾಶ ಮಾಡದೆಯೇ ನೇರವಾಗಿ 50 ರಿಂದ 70 ಸಾವಿರ ಕಿಲೋಲೀಟರ್ ಕೊಟ್ಟಿರುವಂಥದ್ದು. ಅಷ್ಟು ಮಾತ್ರವಲ್ಲ, ಸಮಾರು ಒಂದು ಲಕ್ಷ ಇರುವಂಥ ಬಡ ಮೀನುಗಾರ ಮಹಿಳೆಯರಿಗೆ, ಅವರಿಗೆ ಬೇಕಾಗಿರುವಂಥ ನಿಟ್ಟಿನಲ್ಲಿ ಹತ್ತು ಸಹಸ್ರ ಸಹಾಯಧನ ಕೊಡುವಂಥ ಯೋಜನೆ ಇರಬಹುದು, ಆಪತ್‌ಧನವನ್ನು ಅಪಾಯಕರ ಸನ್ನಿವೇಶನದಲ್ಲಿ ಪರಿಹಾರ ಕೊಡುವ 25 ಸಾವಿರ ರೂ ಇದ್ದದ್ದನ್ನು 50 ಸಾವಿರ ರೂಗೆ ಏರಿಸುವಂಥದ್ದು ಇರಬಹದು. ಮತ್ಸಾಶ್ರಮ ಮೂಲಕ ಯೋಜನೆಯ ಸುಮಾರು ಹತ್ತು ಸಾವಿರ ಮನೆಗಳನ್ನು ಕೊಡುವಂಥ ಯೋಜನೆಯನ್ನು ಯಾವರೀತಿ ಅಳವಡಿಸುತ್ತಾರೆಂದು ಹೇಳುವ ಜೊತೆಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಇಡೀ ನಮ್ಮ ಕಾರವಳಿ ಪ್ರದೇಶದಲ್ಲಿರುವಂಥ ಪ್ರಮುಖ ಬಂದರು ಪ್ರದೇಶವನ್ನು, ಅದು ಮಂಗಳೂರು ಇರಬಹೂದು, ಬೇರೆ ಬೇರೆ ಪ್ರದೇಶಗಳನ್ನು ಸರ್ವಋತು ಮೀನುಗಾರಿಕಾ ಬಂದರುಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಇವತ್ತು ತಾವು ಕಾರ್ಯವನ್ನು ಕೈಗೊಳ್ಳಬೇಕಾಗಿದೆ ಎಂದು ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತಿದ್ದೇನೆ. ಹಲವು ವರ್ಷಗಳಿಂದ ಡ್ರೆಜಿಂಗ್ ಆಗದೇ ಇರುವಂಥ ಸನ್ನಿವೇಶ .ಅನೇಕ ಕಡೆಗಳಲ್ಲಿ ಕಡಲ ಕೊರೆತಕ್ಕೆ ಸಂಬಧಪಟ್ಟಂತೆ ತಡೆಗೋಡೆಯನ್ನು ನಿರ್ಮಾಣ ಮಾಡಿ ಶಾಶ್ವತ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ತಾತ್ಕಲಿಕ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ಸಮಗ್ರವಾದ

ವ್ಯವಸ್ಥೆಯನ್ನು ಮಾಡಬೇಕಾಗಿದೆ. ವಿಶೇಷವಾಗಿ ಕೇಂದ್ರ ಸರ್ಕಾರದ ನೆರವಿನಿಂದ ಜಾರಿಗೆ ತರುವ ನೆಹರು ರಾಷ್ಟ್ರೀಯ ನಗರ ಪುನರುಜ್ಜೀವನ ಮಿಷನ್ ಯಾವುದಿದೆ, ಸುಮಾರು 730 ಕೋಟಿ ರೂಪಾಯಿಗಳಷ್ಟು ಕೇವಲ ಬೆಂಗಳೂರು ಮತ್ತು ಮೈಸೂರು ಎರಡು ನಗರಗಳಿಗೆ ಅನ್ವಯ ಮಾಡಿರುವುದು ಸರಿಯಲ್ಲ. ಮಂಗಳೂರಿನಂಥ ಪ್ರಮುಖವಾಗಿ ಬೆಳೆಯುತ್ತಿರುವಂಥ ನಗರಕ್ಕೂ ಇದನ್ನು ಅನ್ವಯಿಸಬೇಕೆಂದು ಹೇಳಬಯಸುತ್ತೇನೆ. ವಿಶೇಷವಾಗಿ ರಾಜ್ಯ ವಲಯದ ಆಸ್ಪತ್ರೆಗಳಿಗೆ ಹಿಂದಿಗಿಂತ 16 ಕೋಟಿಯನ್ನು ಕೊಟ್ಟಿದ್ದಾರೆ. ಇವತ್ತು ಸಮಗ್ರವಾಗಿ ಅಧ್ಯಯನ ನಡೆಸಬೇಕಾಗಿದೆ. ಮಾನ್ಯ ಆರೋಗ್ಯ ಸಚಿವರು ಇಲ್ಲಿದ್ದಾರೆ. ಇವತ್ತು ಕೊಟ್ಟಿರುವಂಥ ಕೋಟ್ಯಾಂತರ ರೂಪಾಯಿಯ ವೈದ್ಯಕೀಯ ಉಪಕರಣಗಳು ಎಷ್ಟು ಆಸ್ಪತ್ರೆಗಳಲ್ಲಿ ಉಪಯೋಗವಾಗುತ್ತಿದೆ ಎಂಬ ಬಗ್ಗೆ ವಿಶ್ಲೇಷಣೆ ಮಾಡಿದರೆ ತಮಗೆ ಆಶ್ಚರ್ಯವಾಗುತ್ತದೆ. ರಾಜ್ಯದ ಕೆಲವೇ ಕೆಲವು ಆಸ್ಪತ್ರೆಗಳಲ್ಲಿ ಇದರ ಸದುಪಯೋಗವಾಗುತ್ತಿದೆಯೇ ವಿನಹ ಹೆಚ್ಚಿನ ಆಸ್ಪತ್ರೆಗಳಲ್ಲಿ ಇದು ಉಪಯೋಗವಾಗುತ್ತಿಲ್ಲ. ಡ್ರಗ್ ಪರ್ಚೇಸ್‌ಗೆ ಸಂಬಂಧಪಟ್ಟಂತೆ ಪಾಲಿಸಿಯನ್ನು ಸಮಗ್ರವಾಗಿ ಪುನರ್‌ವಿಮರ್ಶೆ ಮಾಡಬೇಕಾಗಿದೆ. ಆಸ್ಪತ್ರೆಯಿಂದ ಕೊಟ್ಟಿರುವಂಥ ಆರ್ಡರ್ ಬಂದಿರುತ್ತದೆ, ಸಪ್ಲೈ ಆಗಿರುವಂಥ ವ್ಯವಸ್ಥೆಗಳು ಬೇರೆ ಇರುತ್ತದೆ. ಈ ನಿಟ್ಟಿನಲ್ಲಿ ಇದನ್ನು ಸಮಗ್ರವಾಗಿ ಬದಲಾಯಿಸಬೇಕು. ಜನೋಪಯೋಗವಾಗುವಂಥ ನಿಟ್ಟಿನಲ್ಲಿ ಬಡ ರೋಗಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆಸ್ಪತ್ರೆಗಳಿಗೆ ಸುಧಾರಣೆ ಮಾಡುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಮಾನ್ಯ ಸಚಿವರು ತರಬೇಕಾಗಿದೆ ಎಂಬುದನ್ನು ಒತ್ತಿ ಹೇಳುತ್ತಿದ್ದೇನೆ. ವಿಶೇಷವಾಗಿ ಪ್ರತಿಭಾವಂತರಿಗೆ ಸೂಕ್ತ ಉಚಿತ ಯೋಜನೆಯನ್ನು ಘೋಷಣೆ ಮಾಡಿದ್ದರೂ ಸಹ ಇವತ್ತಿನವರೆಗೆ ಸಿ.ಇ.ಟಿ. ಗೆ ಸಂಬಂಧಪಟ್ಟಿರುವ ಗೊಂದಲವನ್ನು ಸಂಪೂರ್ಣವಾಗಿ ಪರಿಹಾರ ಮಾಡಿ ಮುಂದಿನ ದಿವಸಗಳಲ್ಲಿ ವಿದ್ಯಾರ್ಥಿಗಳು ನೆಮ್ಮದಿಯಿಂದ ಶಿಕ್ಷಣವನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ಬೇಕಾಗಿರುವ ಯೋಜನೆಯನ್ನು ಅನುಷ್ಠಾನವನ್ನು ಮಾಡಬೇಕಾಗಿದೆ. ಭಾಗ್ಯದ ಲಕ್ಷ್ಮಿ ಯೋಜನೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಬಿ.ಪಿ.ಎಲ್ ರೇಖೆಗಿಂತ ಕಡಿಮೆ ವ್ಯಾಪ್ತಿಯಲ್ಲಿರುವವರಿಗೆ ಹತ್ತು ಸಾವಿರ ರೂಪಾಯಿ ಕೊಡುವ ವಿಶೇಷ ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಇದರಲ್ಲಿ ಸ್ವಲ್ಪ ತಿದ್ದುಪಡಿಯನ್ನು ತಂದು ಅವರಿಗೆ ಕೇವಲ 18 ವರ್ಗಗಳವರೆಗೆ ಮಾತ್ರ ಸಿಗುವಂಥದಲ್ಲ ಅವರಿಗೆ ಜೀವನದುದ್ದಕ್ಕೂ ಮೆಡಿಕ್ಲೇಮ್ ಅಂಥ ಫೆಸಿಲಿಟಿಗಳು ಸಿಗುವ ನಿಟ್ಟಿನಲ್ಲಿ ಯಾವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎಂಬ ನಿಟ್ಟಿನಲ್ಲಿ ಬೇರೆ ಬೇರೆ ಇನ್‌ಶ್ಯುರೆನ್ಸ್ ಕಂಪನಿಗಳ ಜೊತೆ, ಬ್ಯಾಂಕುಗಳ ಜೊತೆ ಮಾತನಾಡಿ ಇದನ್ನು ಸದುಪಯೋಗ ಮಾಡುವ ನಿಟ್ಟಿನಲ್ಲಿ ಅವರ ದೈನಂದಿನ ಜೀವನಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಏನು ಯೋಜನೆಗಳನ್ನು ಮಾಡಬಹುದು ಎಂಬ ಬಗ್ಗೆ ಕೂಡ ಚಿಂತನೆಯನ್ನು ಮಾಡಬೇಕಾಗಿದೆ. ವಿಮಾನ ನಿಲ್ದಾಣ ಯೋಜನೆಗೆ ಸಂಬಂಧಪಟ್ಟಂತೆ ಈಗಾಗಲೇ 212.37 ಕೋಟಿರೂಯಷ್ಟು ಹಣವನ್ನು ಒದಗಿಸಿಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಪಬ್ಲಿಕ್ಃ ಪ್ರೈವೇಟ್ ಪಾರ್ಟಿಸಿಪೇಷನ್ ಆಧಾರದಲ್ಲಿ ವಿಶೇಷವಾಗಿ ಎನ್. ಆರ್.ಐ ಅನಿವಾಸಿ ಭಾರತೀಯರ ಸಹಕಾರದಿಂದ ಯಾವರೀತಿ ಇಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥ ನಿಟ್ಟಿನಲ್ಲಿ ಏನು ಕ್ರಿಯಾ ಯೋಜನೆಯನ್ನು ಹಾಕಿಕೊಳ್ಳುವುದರ ಬಗ್ಗೆ ಸರ್ಕಾರ ಯೋಚನೆ ಮಾಡಿದ್ದಲ್ಲಿ ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆ. ಕೈಗಾರಿಕಾ ವಲಯಗಳಲ್ಲಿ ಸಮಗ್ರವಾಗಿರತಕ್ಕ ಕೈಗಾರಿಕಾ

ನೀತಿಯನ್ನು ತರುವಂಥ ಸಂದರ್ಭದಲ್ಲಿ ನಾನು ಅಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇವತ್ತು ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಿಗೂ ಈ ಒಂದು exit policy ಪಾಲಿಸಿ ಬರುವ ನಿಟ್ಟಿನಲ್ಲಿ, ಕೈಗಾರಿಕೆಗಳಿಗೆ ಯಾವ ರೀತಿಯಾಗಿ ಸೌಲಭ್ಯಗಳನ್ನು ಕೊಡುವಂಥ ಪಾಲಿಸಿ ಏನಿದೆ ಅದೇ ರೀತಿ ಇದಕ್ಕೂ ಸಹ ಕೊಡುವ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಸಂಬಂಧಪಟ್ಟಂತೆ ಯೋಚನೆ ಮಾಡುವ ಸಂದರ್ಭದಲ್ಲಿ ಸಮಗ್ರವಾದ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶೇಷವಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ. Marketing Assistance to small Industries ಎಂದು ಹೇಳುವಂಥ ನಿಟ್ಟಿನಲ್ಲಿ ಹತ್ತು ಹಲವು ಯೋಜನೆಗಳನ್ನು ನಾವು ಜೋಡಿಸಬೇಕಾಗಿದೆ. 300 ಕೋಟಿಯಷ್ಟು ಸಬ್ಸಿಡಿಯನ್ನು ಕೊಡುವಂಥ ನಿಟ್ಟಿನಲ್ಲಿ ಕೂಡ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಸ್ಟ್ಯಾಂಪ್ ಡ್ಯೂಟಿಯ ವಿನಾಯಿತಿಯನ್ನು ವಿಸ್ತರಿಸಬೇಕು. ಟ್ರಾನ್ಸ್‌ಫರೆನ್ಸಿ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದು ಸಣ್ಣ ಸಣ್ಣ ಘಟಕಗಳು ಮಾಡಿದಂಥ ಉತ್ಪನ್ನಗಳನ್ನೂ ಕೂಡ ಖರೀದಿ ಮಾಡುವಂಥ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ತೆಗೆದುಕೊಳ್ಳುವಂಥ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಸ್ವಲ್ಪ ಬದಲಾವಣೆಯನ್ನು ತರಬೇಕಾಗಿದೆ. Trade licence ಮತ್ತು local authorities ಸಂಬಂಧಪಟ್ಟಂತೆ 28 ಲೈಸೆನ್ಸ್‌ಗಳಿಗೆ ಅರ್ಜಿ ಹಾಕುವುದರ ಬದಲು ಒಂದು ಕಡೆ Directorate of industries and commerce ನಲ್ಲಿ registration ಮಾಡುವ ಮೂಲಕ ಒಂದೇ ಕಡೆ ಮಾಡಿದಾಗ ಈ ಎಲ್ಲಾ ಅನ್ವಯವಾಗುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. Captive Power Policy ನಲ್ಲಿ ಕೂಡ ಯಾವ ರೀತಿಯಾಗಿ ವಿನಾಯಿತಿಯನ್ನು ಕೊಡಬೇಕು. ಬೇರೆ ಬೇರೆ ರೀತಿಯಲ್ಲಿ ಇಲ್ಲಿರುವಂಥ ವ್ಯವಸ್ಥೆಗಳನ್ನು ಸಣ್ಣ ಕೈಗಾರಿಕೆಗಳಿಗೆ ಜೀವದಾನವನ್ನು ಕೊಟ್ಟು ವಿಶೇಷವಾಗಿ ಯುವಕ ಯುವತಿಯರಿಗೆ ಉದ್ಯೋಗಾವಕಾಶ ಹೆಚ್ಚು ಸಿಗುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಇವತ್ತು ತೆಗೆದುಕೊಳ್ಳಬೇಕಾಗಿದೆ. ಯುವಕನ ಸೇವೆಗೆ ಸಂಬಂಧಪಟ್ಟಂತೆ ಗ್ರಾಮೀಣ ಕ್ರೀಡೆಗೆ ಸಂಬಂಧಪಟ್ಟಂತೆ ಪ್ರತಿಭಾವಂಥ ವಿದ್ಯಾರ್ಥಿಗಳಿಗೆ ಗ್ರಾಮೀಣ ಕ್ರೀಡಾಕೂಟಕ್ಕೆ ಐದು ಕೋಟಿ ರೂ ಇಟ್ಟರೂ ಕೂಡ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿರುವುದು, ಸ್ಥಳೀಯ ಸಂಸ್ಥೆಗಳ ಆದಾಯದಲ್ಲಿ ಕನಿಷ್ಟ ಎರಡು ಪರ್‌ಸೆಂಟ್ ಕಡ್ಡಾಯವಾಗಿ ಕ್ರೀಡೆಗೋಸ್ಕರ ವಿನಿಯೋಗ ಮಾಡುವ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತರಬೇಕಾಗಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಪಬ್ಲಿಕ್ ಪ್ರೈವೇಟ್ ಪಾರ್ಟಿಸಿಪೇಷನ್ ಬೇಸ್‌ನಲ್ಲಿ ಅನೇಕ ಅಭಿವೃದ್ಧಿ ಚಟುವಟಿಕೆಗಳನ್ನು ತೆಗೆದುಕೊಳ್ಳಬೇಕಾಗಿದೆ. ಪಕ್ಕದ ಕೇರಳ ರಾಜ್ಯದಲ್ಲಿ ಗೋವಾದಲ್ಲಿ ನೂರು ಕೋಟಿರೂಗಿಂತ ಹೆಚ್ಚಿನ ಬಜೆಟ್‌ನ್ನು ಪ್ರವಾಸೋದ್ಯಮಕ್ಕೆ ಇಟ್ಟು ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ನಮ್ಮಲ್ಲಿ 40 ಕೋಟಿ ರೂ ಇಟ್ಟಿದ್ದಾರೆ. ಅದನ್ನು ವಿಸ್ತರಿಸಿ ನಾವು ಯಾವ ರೀತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂಬುದರ ಬಗ್ಗೆ ಕೂಡ ಯೋಚನೆ ಮಾಡಬೇಕಾಗಿದೆ. ಗೋಡಂಬಿಗೆ ಸಂಬಂಧಪಟ್ಟಂತೆ, ನಮ್ಮ ಕರಾವಳಿ ಪ್ರದೇಶಗಳಲ್ಲಿ ಅಥವಾ ಮಲೆನಾಡು ಪ್ರದೇಶಗಳಲ್ಲಿ ಗೋಡಂಬಿ ಪರಿಷ್ಕರಣೆಗೆ ಸಂಬಂಧಪಟ್ಟ ಉದ್ಯಮದಲ್ಲಿ ಸಹಸ್ರಾರು ಮಹಿಳೆಯರು ದುಡಿಯುತ್ತಿದ್ದಾರೆ. ಇವರ ಜೀವನಕ್ಕೂ ಕೂಡ ಶಕ್ತಿಯನ್ನು ಕೊಡುವಂಥ ನಿಟ್ಟಿನಲ್ಲಿ ಈ ಒಂದು ಕೈಗಾರಿಕೆಗೆ ಕಾಯಕಲ್ಪವನ್ನು

ಕೊಡಬೇಕಾಗಿದೆ. 8 ಪರ್‌ಸೆಂಟ್ ಇರುವುದನ್ನು 4 ಪರ್‌ಸೆಂಟ್‌ಗೆ ಇಳಿಸಬೇಕಾಗಿದೆ ಎಂದು ಹೇಳಬಯಸುತ್ತೇನೆ ಅದೇ ರೀತಿ ಥ್ರೆಡ್ ರಬ್ಬರ್ ಇರಬಹುದು, ಆಟೋಮೊಬೈಲ್ ಸ್ಪ್ರಿಂಗ್ ಇರಬಹುದು. ಪಕ್ಕದ ಕೇರಳಾದಲ್ಲಿ ಅದಕ್ಕೆ 4 ಪರ್‌ಸೆಂಟ್ ಇದ್ದರೆ ನಮ್ಮಲ್ಲಿ 8 ಪರ್‌ಸೆಂಟ್ ಇದೆ. ಅದನ್ನೂ ಸಹ ಕಡಿಮೆಗೊಳಿಸಿದಲ್ಲಿ ಹೆಚ್ಚಿನ ಲಾಭವಾಗುತ್ತದೆ, ಮತ್ತೆ ವಿಶೇಷವಾಗಿ ನಕ್ಸಲ್ ಯೋಜನೆಗೆ ಸಂಬಂಧ ಪಟ್ಟ ಹಾಗೆ ಅನೇಕ ಪ್ಯಾಕೇಜುಗಳನ್ನು ಕೊಟ್ಟರೂ ಕೂಡ ಅಕ್ಷರಶಃ ಅದನ್ನು ಕಾರ್ಯರೂಪಕ್ಕೆ ತರುವಂತಹ ವ್ಯವಸ್ಥೆಯನ್ನು ಮಾಡಬೇಕು. ನಿವೃತ್ತಿಯ ಅಂಚಿನಲ್ಲಿರುವಂತಹ ಪೋಲೀಸ್ ಅಧಿಕಾರಿಗಳನ್ನು ಅಲ್ಲಿಗೆ ಹಾಕುವಂತದ್ದಲ್ಲ. ಹಂತ ಹಂತವಾಗಿ ಆರು ತಿಂಗಳಿಗೆ ಒಂದೊಂದು ಬ್ಯಾಚ್ ಅನ್ನು ಕಳುಹಿಸುವಂತಹ ನಿಟ್ಟಿನಲ್ಲಿ ಯಾವ ರೀತಿ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು ಎಂದು ಯೋಚಿಸಬೇಕು. ಹೈದಾರಾಬಾದ್‌ನಲ್ಲಿರುವ ಹೈಗ್ರೌಂಡ್ಸ್ ಎಂಬ ವಿಶೇಷವಾದಂತಹ ತರಬೇತಿ ಕ್ಷೇತ್ರದಲ್ಲಿ ಹೇಗೆ ಅವರನ್ನು ತರಬೇತಿಗೊಳಿಸಬಹುದೆಂದು ಎಂದು ಯೋಜನೆಯನ್ನು ಮಾಡಬೇಕು. ಪೋಲೀಸ್ ವ್ಯವಸ್ಥೆಯಲ್ಲಿ ಗುಪ್ತಾಚಾರ ಇಲಾಖೆಯಿಂದ ಸಮಗ್ರವಾಗಿರುವಂತಹ ವ್ಯವಸ್ಥೆಯನ್ನು ಸುಧಾರಿಸುವಂತಹ ನಿಟ್ಟಿನಲ್ಲಿ ಬಹುಶಃ ಕೇವಲ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರುವಂಥಾದ್ದು ಮಾತ್ರವಲ್ಲ ಇದರಲ್ಲಿ ಅನೇಕ ಸೂಕ್ಷ್ಮ ಪ್ರದೇಶಗಳಲ್ಲಿ ಮುಂಚಿತವಾಗಿ ಆಗುವಂತಹ ಯಾವುದೇ ಅನಾಹುತಗಳನ್ನು ಅಂದಾಜಿಸಿಕೊಂಡು ಅದನ್ನು ಪರಿಹರಿಸುವಂತಹ ನಿಟ್ಟಿನಲ್ಲಿ ಅದನ್ನು ಹೇಗೆ ಪರಿಹರಿಸಬೇಕು ಎಂದು ಹೇಳುವಂತಹ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತಂದಲ್ಲಿ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಂತಹ ಹತ್ತು ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂತಹ ಮೂಲಕ ನಮ್ಮ ರಾಜ್ಯ ಸರ್ಕಾರ ಇವತ್ತು ನಿಜವಾದ ಅರ್ಥದಲ್ಲಿ ಬಡವರ ಪರ ಮತ್ತು ಜನಪರವಾಗಿರುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಹ ಪ್ರಾಮಾಣಿಕವಾಗಿರುವಂತಹ ಪ್ರಯತ್ನ ಮಾಡಿದೆ. ಬಹುಶಃ ಮುಂದಿನ ದಿವಸಗಳಲ್ಲಿ ಖಂಡಿತ ಕರ್ನಾಟಕ ರಾಜ್ಯದ ಜನತೆಗೆ, ಈ ಸುವರ್ಣ ಕರ್ನಾಟಕದ ಈ ವರ್ಷದಲ್ಲಿ ನಿಜವಾದ ಅರ್ಥದಲ್ಲಿ ಅವರ ಜೀವನ ಬಂಗಾರವಾಗುವಂತಹ ನಿಟ್ಟಿನಲ್ಲಿ ಎಲ್ಲಾ ರೀತಿಯಲ್ಲಿ ಜೀವನವನ್ನು ಸುಂದರವಾಗಿಡುವಂತಹ, ಜೀವನ ರೂಪಿಸುವಂತಹ ನಿಟ್ಟಿನಲ್ಲಿ ಇವತ್ತು ಶಕ್ತಿಯನ್ನು ಕೊಡುವಂತಹ ಒಂದು ಪ್ರಾಮಾಣಿಕ ಪ್ರಯತ್ನ ಆಗಿದೆ. ಬಹುಶಃ ಭಗವಂತನ ದಯೆಯಿಂದ ಅದು ಕಾರ್ಯರೂಪಕ್ಕೆ ಬರಲಿ ಎಂದು ಹಾರೈಸುತ್ತಾ, ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ, ಮಾನ್ಯ ಯಡಿಯೂರಪ್ಪನವರು ಬಹುತೇಕ ಬಹಳಷ್ಟು ಅದೃಷ್ಟವಂತರು. ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳಷ್ಟು ಉತ್ತಮವಾಗಿದ್ದಾಗ ಅಧಿಕಾರ ಹಿಡಿಯುವಂತಹ ಅವಕಾಶ ಅವರಿಗೆ ಸಿಕ್ಕಿದೆ. ಸುಮಾರು 4 ಸಾವಿರ ಕೋಟಿ ರೂಪಾಯಿಗಳ cash ಇಟ್ಟು ನಾವು ಅವರಿಗೆ ಅಧಿಕಾರ ಬಿಟ್ಟು ಕೊಟ್ಟಿದ್ದೇವೆ. ಹಾಗಾಗಿ ಬಹಳಷ್ಟು ಜನಗಳಿಗೆ ಅನುಕೂಲ ಮಾಡುವಂತಹ ಒಂದು ಅವಕಾಶ ಸಿಕ್ಕಿತು. ಆ ಅವಕಾಶವನ್ನು ಅವರು ಉಪಯೋಗ ಮಾಡಿಕೊಂಡಿದ್ದಾರೆ. ಈ ಕಡೆ ಮಾನ್ಯ ಯಡಿಯೂರಪ್ಪನವರು

ಇದ್ದಾಗ ಕೃಷಿಕರ ಬಗ್ಗೆ, ಕೃಷಿಕರ ಸಮಸ್ಯೆಗಳ ಬಗ್ಗೆ ಅವರಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಬಹಳ ಮಾತನಾಡುತ್ತಿದ್ದರು. ಅವಕಾಶ ಸಿಕ್ಕಾಗ ಆ ಮಾತನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸಲೇಬೇಕು . ರೈತನಿಗೆ ಅವನ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಮುಖ್ಯವಾಗಿ ನಾಲ್ಕು ಬೇಕು. ಅವನ ಮಣ್ಣಿನ ಫಲವತ್ತತೆಯನ್ನು ಉಳಿಸಿಕೊಳ್ಳುವಂತಹ ವ್ಯವಸ್ಥೆಯಾಗಬೇಕು, ಬಿತ್ತನೆ ಬೀಜ ಸರಿಯಾಗಿ ಸಿಗುವಂತಾದ್ದು ಆಗಬೇಕು, ಮಳೆ ನೀರಿನ ಸಂರಕ್ಷಣೆ ಮಾಡುವಂತಹ ಕೆಲಸವಾಗಬೇಕು. ಅವನು ಬೆಳೆ ಬೆಳೆದ ಮೇಲೆ ಅವನಿಗೆ ಒಳ್ಳೆಯ ಮಾರುಕಟ್ಟೆ ವ್ಯವಸ್ಥೆ ಇರಬೇಕು. ಇಷ್ಟು ಇದ್ದು ಬಿಟ್ಟರೆ, ಬಹುತೇಕ ಯಾವುವೂ ಸಬ್ಸಿಡಿ, ಗಿಬ್ಸಿಡಿ ಬೇಕು ಎಂದು ನಾವೇನೂ ಅಪೇಕ್ಷೆ ಪಡುವುದಿಲ್ಲ. ಆದರೆ ಈ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಮಾತ್ರ ಮೊದಲಿನಿಂದಲೂ ನಾವೆಲ್ಲರು ಎಡವುತ್ತಿದ್ದೇವೆ. 1960–70ರ ದಶಕದೊಳಗೆ ನಮ್ಮಲ್ಲಿ ಆಹಾರೋತ್ಪಾದನೆ ಕಡಿಮೆ ಇತ್ತು ಎಂದು, Green Revolution ಅನಿವಾರ್ಯವಾದಂತಹ ಪರಿಸ್ಥಿತಿಯಿಂದ ತರಬೇಕಾಯಿತು. ಆಗ ಪಾಶ್ಚಾತ್ಯ ರಾಷ್ಟ್ರಗಳು ಮತ್ತು ಅಲ್ಲಿಯ ವಿಜ್ಞಾನಿಗಳು ಉತ್ಪಾದನೆಯನ್ನು ಹೆಚ್ಚು ಮಾಡಬೇಕಾದರೆ ಕೆಮಿಕಲ್ ಫರ್ಟಿಲೈಸರ್ಸ್, ಪೆಸ್ಟಿಸೈಡ್, ಇದನ್ನು ಉಪಯೋಗ ಮಾಡಿಕೊಂಡೇ ಮಾಡಬೇಕು ಎನ್ನುವಂತಹ ಟೆಕ್ನಾಲಜಿಯನ್ನೇನು ನಮಗೆ ಕೊಟ್ಟರೋ, ಅದನ್ನು ಅನಿವಾರ್ಯವಾಗಿ ನಾವು ಉಪಯೋಗಿಸುವಂತಹ ಪ್ರಸಂಗ ಬಂದಿದ್ದರಿಂದ ಅದನ್ನು ಮಾಡಿದೆವು, ಪರವಾಗಿಲ್ಲ, ಆಗ ಕೃಷಿ ಇಲಾಖೆಯವರು, extension ನವರು ಮತ್ತು ಯೂನಿವರ್ಸಿಟಿಯವರು ಅದನ್ನೇ ಕಲಿಸಿದರು,ಆಯಿತು ಕಳೆದ 30–35 ವರ್ಷಗಳು ಆ ತಂತ್ರಜ್ಞಾನವನ್ನು ಉಪಯೋಗ ಮಾಡಿದ್ದರಿಂದ ಏನೇನು ಪರಿಣಾಮವಾಗಿದೆ ಎಂಬುದು ಎಲ್ಲರ ಅನುಭವಕ್ಕೆ ಬಂದಿದೆ. ನಾವೆಲ್ಲರೂ ರೈತರು ಎಂದು ಹೇಳುತ್ತೇವೆ. ನಮ್ಮ ಭೂಮಿ ಕೆಟ್ಟಿತು, ನಮ್ಮ ನೀರು ಕೆಟ್ಟಿತು, ನಮ್ಮ ಹವಾ ಕೆಟ್ಟಿತು ಎಂದು ಮಾತನಾಡುತ್ತೇವೆ. ಮಣ್ಣಿನ ಫಲವತ್ತತೆಯನ್ನು ಕೆಡಿಸಿಕೊಂಡು ನಾವು ರೈತರನ್ನು ಹೇಗೆ ಉದ್ಧಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಕಡೆಗೆ ಲಕ್ಷ್ಯವನ್ನು ಈಗ ಅನಿವಾರ್ಯವಾಗಿ ನಾವೆಲ್ಲರೂ ವಹಿಸುವಂತಹ ಪ್ರಸಂಗ ಬಂದಿದೆ. ನಾವು ಸಾವಯವ ಕೃಷಿಗೆ, ನೈಸರ್ಗಿಕ ಕೃಷಿಗೆ ಹೋಗಬೇಕು ಎಂದು ಯೂನಿವರ್ಸಿಟಿ ಪ್ರೊಫೆಸರ್ ಸೇರಿದಂತೆ ಈಗ ಎಲ್ಲರೂ ಹೇಳುತ್ತಾರೆ. ಮಣ್ಣಿನ ಫಲವತ್ತತೆಯನ್ನು ಉತ್ತಮಪಡಿಸಿಕೊಳ್ಳಬೇಕು, ಅದಕ್ಕೆ ಕೆಮಿಕಲ್ ಫರ್ಟಿಲೈಸರ್ಸ್ ಅನ್ನುಮತ್ತು ಪೆಸ್ಟಿಸೈಡ್ಸ್ ಅನ್ನು ಬಿಡಬೇಕು ಎಂದು ಹೇಳುತ್ತಾರೆ. ಆದರೆ ಇವತ್ತಿಗೂ extension activityಯೊಳಗೆ, ಮಾನ್ಯ ಶಂಕರಮೂರ್ತಿಯವರೇ, ಪ್ಯಾಕೇಜ್ ಆಫ್ ಪ್ರಾಕ್ಟೀಸ ಹೇಳುವ ಮುನ್ನ ಇವುಗಳನ್ನು ಇಟ್ಟುಕೊಂಡೇ ಹೇಳುತ್ತಾರೆ. ಇದು ನಿಲ್ಲಬೇಕು, ಇವತ್ತು ನಮ್ಮ ಮಣ್ಣು ಕೆಟ್ಟಿತು ಎಂದು ನಾವೇನು ತಿಳಿದುಕೊಂಡಿದ್ದೇವೂ,ಅದನ್ನು ನಿಲ್ಲಿಸುವ ಕ್ರಮ ಸರ್ಕಾರದಿಂದ ಆಗುತ್ತಿಲ್ಲ. ಅದನ್ನು ದಯವಿಟ್ಟು ನಿಲ್ಲಿಸುವಂತಹ ಕ್ರಮ ಆಗಬೇಕು. ಹೆಚ್ಚು ಸಾವಯವ ಕೃಷಿ, ನೈಸರ್ಗಿಕ ಕೃಷಿಯನ್ನು ಪ್ರಚಾರ ಮಾಡುವಂತಹ, ಅದಕ್ಕೆ ಹೆಚ್ಚು ಸವಲತ್ತುಗಳನ್ನು ಕೊಡುವಂತಹ, ಅದಕ್ಕೆ ಅನುಕೂಲ ಆಗುವಂತಹ ಹಣಕಾಸಿನ ರೂಢಿಯನ್ನು ರೂಢಿಸಿಕೊಳ್ಳುವಂತಹ ಕೆಲಸವಾಗಬೇಕು. ಇದು ಆಗುತ್ತಿಲ್ಲ ತಾವು

ಶಿವಮೊಗ್ಗ ಜಿಲ್ಲೆಯಿಂದ ಬಂದವರು. ಅಲ್ಲಿ ಅನೇಕ ಯಶಸ್ವಿ ಪ್ರಯೋಗಗಳು ಇದರ ಬಗ್ಗೆ ನಡೆಯುತ್ತಿವೆ. ಆ ಸ್ನೇಹಿತರ ಜೊತೆಗೆ ತಾವು ಚರ್ಚೆ ಮಾಡಿ. ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬೇಕಾದರೆ ನಾವು ಹಿಡಿಯಬೇಕಾದಂತಹ ದಾರಿ ಯಾವುದು? ಅದಕ್ಕೆ ಏನು ಮಾಡಬೇಕು? ಮಾನ್ಯ ಕೃಷಿ ಸಚಿವರಾದ ಬಂಡೆಪ್ಪ ಕಾಶಂಪುರ್‌ರವರು ಇಲ್ಲ, ಸುಭಾಷ್ ಪಾಲೇಕಾರ್‌ರವರು ....

ಶ್ರೀ ಡಿ ಡಿ.ಹೆಚ್. ಶಂಕರಮೂರ್ತಿವ : ಅದಕ್ಕೆ ಏನುಮಾಡಬೇಕು ಎಂದು suggest ಮಾಡಿದರೆ,ಅದನ್ನು ನಾವು ಗಮನಿಸುವುದಕ್ಕೆ ಸುಲಭವಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಅದನ್ನು ಹೇಳುತ್ತೇನೆ, ಮೊನ್ನೆ ಮೊನ್ನೆ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯವರಾದ ಸುಭಾಷ್ ಪಾಲೇಕರ್‌ರವರನ್ನು ಕರೆಸಿ ಕೃಷಿ ಅಧಿಕಾರಿಗಳ ಜೊತೆಗೆ, ಕೃಷಿ ಮಂತ್ರಿಗಳ ಜೊತೆಗೆ ನಾವು ಚರ್ಚೆ ಮಾಡಿಸಿದೆವು. ಅವರು ಒಪ್ಪಿಕೊಳ್ಳುತ್ತಾರೆ. ಬಹಳಷ್ಟು ಅವರ ಪ್ರಯೋಗಗಳನ್ನು ನಡೆಸತಕ್ಕಂಥ ರೈತರ ಹೊಲಗಳಿಗೂ ಹೋಗಿ ನಾನು ನೋಡಿ ಬಂದಿದ್ದೇನೆ. ಎಲ್ಲಿ ನೀರಾವರಿ ಇದೆ, ಅಲ್ಲಂತೂ ಬಹಳಷ್ಟು ಯಶಸ್ವಿಯಾಗಿ ಮಾನ್ಯ ಆರಗ ಜ್ಞಾನೇಂದ್ರರವರೆ, ಅದನ್ನು ನೀವೂ ನೋಡಬೇಕು. ಸಾವಯವ ಕೃಷಿಗೂ ಮತ್ತು ಇದಕ್ಕೂ ಸ್ವಲ್ಪ difference ಇದೆ ಎರೆಹುಳ ಕೃಷಿ ಎಂದು ನಾವೇನು ಮಾಡುತ್ತೇವೋ ಅದನ್ನು ಅವರು ವಿರೋಧ ಮಾಡುತ್ತಾರೆ. ನೀವು ಹೊರಗಿನಿಂದ ಏನೂ ತರಬೇಡಿ. ದಯವಿಟ್ಟು ಎಲ್ಲಾ farm based solutions ಇರಲಿ, ಯಾರಾದರೂ commercial ಆಗಿ centralise ಆಗಿ produce ಮಾಡಿ ಅದನ್ನು ಮಾರಾಟಕ್ಕೆ ಇಟ್ಟು, ಅದನ್ನು ಖರೀದಿ ಮಾಡುವಂತಹ ಒಂದು ವ್ಯವಸ್ಥೆಯನ್ನು ದಯವಿಟ್ಟು ರೈತರಿಗೆ ತಂದು ಕೊಡಬೇಡಿ. ರೈತ ತನ್ನ ಹೊಲದಲ್ಲೇ ತನಗೆ ಬೇಕಾಗಿರುವಂತಹ ಗೊಬ್ಬರ, ಕ್ರಿಮಿ ನಾಶಕಗಳನ್ನು ತಯಾರು ಮಾಡಿಕೊಳ್ಳುವಂತಹ ತಂತ್ರಜ್ಞಾನವನ್ನು ನಾವು ರೈತರಿಗೆ ಕೊಡಬೇಕು. ಅವನು ಉತ್ಪಾದನೆ ಮಾಡಿ ಮಾರಾಟ ಮಾಡಿದ್ದರೊಳಗೆ ಅವನಿಗೆ ಸ್ವಲ್ಪ surplus generate ಆಗುತ್ತಿದೆ. ಅವನ ಕುಟುಂಬದ ನಿರ್ವಹಣೆ ಮಾಡಲಿಕ್ಕೆ ಅವನ ಮಕ್ಕಳ, ಮೊಮ್ಮಕ್ಕಳ ಶಿಕ್ಷಣ, ಆರೋಗ್ಯಗಳ ಬಗ್ಗೆ ಲಕ್ಷ್ಯ ಕೊಡಲಿಕ್ಕೆ ಅವನಿಗೂ ಉಳಿತಾಯವಾಗಬೇಕು. ಈ ರೀತಿ ಆಗಬೇಕೆಂದರೆ input costs ಕಡಿಮೆ ಆಗುವಂತಹ solutions ನಮಗೆ ಬೇಕು. Input costs ಕಡಿಮೆಯಾಗುವಂತಹ solution ತಂದರೆ ಸಾವಯವ ಕೃಷಿ ಮತ್ತು ಸುಭಾಷ್ ಪಾಲೇಕಾರ್‌ರವರು ಹೇಳುವಂತಹ ನೈಸರ್ಗಿಕ ಕೃಷಿ ಸಾಧ್ಯವಾಗುತ್ತದೆ. ಸುಭಾಷ್ ಪಾಲೇಕಾರ್‌ರವರು ಹೇಳುವಂತಹ ನೈಸರ್ಗಿಕ ಕೃಷಿ ನೀರು ಸಿಗುವಂತಹ ಜಮೀನಿನಲ್ಲಿ ಅದು ನೀರಾವರಿಯೇ ಇರಲಿ, ನಿಮ್ಮ ಮಲೆನಾಡಿನಂತಹ ಏರಿಯಾದೊಳಗೆ ಮಳೆ ಆಶ್ರಯಿತ ಕೃಷಿಯೇ ಇರಲಿ, ಅದು ಬಹಳಷ್ಟು ಯಶಸ್ವಿಯಾಗುತ್ತದೆ ಎಂದು ನಮಗನ್ನಿಸಿದೆ. ದಯವಿಟ್ಟು ಇಂತಹ ಟೆಕ್ನಾಲಜಿಗೆ ಹೆಚ್ಚು ಒತ್ತು ಕೊಡುವಂತಹ ಕೆಲಸ ಸರ್ಕಾರದಿಂದ ಆಗುವ ಹಾಗೆ ತಾವು ಮಾಡಬೇಕು.ಯಾವುದು ಕೆಟ್ಟದದೆಂದು ನಾವು ಹೇಳುತ್ತೇವೋ ಅದನ್ನು ನಿಲ್ಲಿಸುವಂತಹ ಕೆಲಸವಾಗಬೇಕು. ಅದನ್ನು ಮುಂದುವರೆಸುವ ಕೆಲಸ ಯಾವಾಗಲೂ ಇರಬಾರದು. ಏಕೆಂದರೆ ಗೊಬ್ಬರ ಉತ್ಪಾದನೆ ಮಾಡುವವರೇ ಇರಲಿ, ಬೀಜ ಬೆಳೆಯುವರೇ ಇರಲಿ, ಕ್ರಿಮಿನಾಶಕಗಳನ್ನು ಉತ್ಪಾದನೆ ಮಾಡುವವರೇ ಇರಲಿ, ಅದರ aggressive marketing strategyಯೊಳಗೆ

ನಮ್ಮೆಲ್ಲಾ ವ್ಯವಸ್ಥೆ ಅದಕ್ಕೇ ಕಾರ್ಯೋನ್ಮುಖವಾಗುವಂತಹ ಒಂದು ಪರಿಸ್ಥಿತಿ ಆಗುತ್ತದೆ. ಅದು ನಿಲ್ಲಬೇಕು. ಇವತ್ತು ನಮ್ಮ ಮಾನ್ಯ ಶ್ರೀನಿವಾಸಗೌಡರು ಇದ್ದಾರೆ, ಅವರು ಗೊಬ್ಬರ ಕಾರ್ಖಾನೆ ಅಧ್ಯಕ್ಷರು ...

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಪಾಟೀಲರೆ, ದಯವಿಟ್ಟು ಒಂದು ನಿಮಿಷ ಈಲ್ಡ್ ಆಗುತ್ತೀರಾ?

ಶ್ರೀ ಡಿ. ಆರ್. ಪಾಟೀಲ್ : ಆಯಿತು ಹೇಳಿ ಈಲ್ಡ್ ಆಗುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪಾಟೀಲರು ಹೇಳಿದ್ದರ ಕಡೆಗೆ ನಾನು ಮಂತ್ರಿಯಾಗಿದ್ದಾಗ ಅದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದೆ ಒಂದು ಕಡೆ 106 ಕೋಟಿ ಜನಸಂಖ್ಯೆ ಈ ದೇಶದಲ್ಲಿ ಇದೆ. ಇನ್ನೊಂದು ಕಡೆ ಸಾವಯವ ಗೊಬ್ಬರ ಬಳಸಿ ಎಂದು ಹೇಳುತ್ತೇವೆ. ನನ್ನ ಕುಟುಂಬವೊಂದರ ಬಗ್ಗೆ ನಾನು ಹೇಳುತ್ತೇನೆ. ನಾನು 10 ವರ್ಷದ ಹುಡುಗನಾಗಿದ್ದಾಗ ನಮ್ಮ ಮನೆಯಲ್ಲಿ ಆರು ಜನರಿದ್ದೆವು, ಇವತ್ತು 39 ಜನರಿದ್ದೇವೆ. ಅದೇ ಜಮೀನು ಇದೆ, ಎಲ್ಲಾ ಅದೇ ಇದೆ. ನಾವು ಬೆಳೆಯುವಂತಹ ಬೆಳೆಗಳನ್ನು ಸಾವಯವ ಗೊಬ್ಬರಗಳಲ್ಲಿ ಬೆಳೆಯುವುದು ಒಳ್ಳೆಯದು. ಅದಕ್ಕೆ ನನ್ನ ವಿರೋಧ ಇಲ್ಲ. ಆದರೆ ಕೆಮಿಕಲ್ ಫರ್ಟಿಲೈಸರ್ಸ್ ಇಲ್ಲದೆ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ, ಅಲ್ಲಿ ಯೀಲ್ಡ್‌ಗೆ ಖೋತಾ ಬೀಳುತ್ತದೆ. ನಾನು ಒಂದು ಸಾರಿ ಇಸ್ಕಾನ್ ಟೆಂಪಲ್‌ಗೆ ಹೋಗಿದ್ದೆ. ಅಲ್ಲಿ ಆಲೂಗಡ್ಡೆ ಇಟ್ಟಿದ್ದರು. ನಾವೆಲ್ಲಾ ಆಲೂಗಡ್ಡೆ ಬೆಳೆಯುವಂತಹ ರೈತರು. ನಮ್ಮಲ್ಲಿ ಆಲೂಗೆಡ್ಡೆ ಬೆಳೆದರೆ ಬಹಳ ಒಳ್ಳೆಯ size ಇರುತ್ತದೆ. ಎಲ್ಲಾ ವಿಧವಾದಂತಹ fertilizers ಹಾಕುತ್ತೇವೆ,ನಾವು ದನದ ಕೊಟ್ಟಿಗೆ ಗೊಬ್ಬರ ಹಾಕುತ್ತೇವೆ, ಸಾವಯುವ ಗೊಬ್ಬರಗಳೆಲ್ಲವನ್ನೂ ಕೂಡ ಹಾಕಿ. ಕೆಮಿಕಲ್ fertilizers ಕೂಡ ಹಾಕುತ್ತೇವೆ. ಆಗ ಒಳ್ಳೆಯ ಯೀಲ್ಡ್ ಬರುತ್ತದೆ. ಅಲ್ಲಿ ನೋಡಿದರೆ ಒಂದೊಂದು ಗಡ್ಡೆ ಇಷ್ಟಿಷ್ಟು ದಪ್ಪ. ಇದ್ದವು 105 ಕೋಟಿ ಜನಸಂಖ್ಯೆ ಇರುವಂತಹ ಈ ದೇಶಕ್ಕೆ ಸಾವಯವ ಗೊಬ್ಬರಗಳಿಂದಲೇ ನಾವು ಅವರಿಗೆ ಆಹಾರ ಧಾನ್ಯಗಳನ್ನು ಕೊಡಲಿಕ್ಕೆ ಸಾಧ್ಯವೇ? ಇದು ಇವತ್ತು ಇರುವಂತಹ ತಳಮಳ. ಎಲ್ಲಿಯವರೆಗೂ ನಾವು ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದಿಲ್ಲವೋ, ಅಲ್ಲಿಯವರೆಗೂ ಸಾವಯವ ಗೊಬ್ಬರಗಳ ಬಗ್ಗೆ ನಾವು ಹೆಚ್ಚಿಗೆ ಪ್ರಚಾರ ಮಾಡಿದರೂ ಕೂಡ, ಎಲ್ಲೋ ಒಂದು ಕಡೆ ನಾವು ಏಟು ತಿನ್ನುತ್ತೇವೆ. ಇದೂ ಕೂಡ ನಾವು ಚಿಂತನೆ ಮಾಡಬೇಕಾದ ಬಹಳ ಪ್ರಮುಖವಾದ ಅಂಶ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಬಹಳಷ್ಟು ತಪ್ಪು ಅಭಿಪ್ರಾಯಗಳು ಈ ರೀತಿ ಬರುತ್ತವೆ. ಸಾವಯವ ಕೃಷಿಯಲ್ಲಿಯೇ ಬೆಳೆದಂತಹ ಕ್ರಾಪನ್ನು ತಾವು ನೋಡಲಿಲ್ಲವೆಂದು ಕಾಣಿಸುತ್ತದೆ. ಇಲ್ಲಿ ಇಸ್ಕಾನ್‌ನಲ್ಲಿ ಇಟ್ಟಿದ್ದ ಯಾವುದೋ ಪ್ರಯೋಗದ ವಸ್ತು ನೋಡಿ ಹೇಳಬೇಡಿ. ಮಾನ್ಯ ಡಿ. ಆರ್. ಪಾಟೀಲರು ಏಕೆ ಮಾತನಾಡುತ್ತಿದ್ದಾರೆಂದರೆ, ಒಂದು ದೊಡ್ಡ ಜಾಲವೇ ಇದೆ. ಇದನ್ನೆಲ್ಲಾ ಇತ್ತೀಚೆಗೆ ಪ್ರಯೋಗ ಮಾಡುತ್ತಿದ್ದಾರೆ. ಬಹಳ ಒಳ್ಳೆಯ ಯೀಲ್ಡ್ ಬರುತ್ತಿದೆ. ಜನಸಂಖ್ಯೆಗೆ ಬೇಕಾದಂತಹ ಆಹಾರ ಎಲ್ಲಿ ಕಡಿಮೆ ಆಗುತ್ತದೋ ಎನ್ನುವ ಆಂತಕ ಖಂಡಿತ ಬೇಡ. ಆ ವಿಷಯುಕ್ತವಾದ ಆಹಾರ ಕೊಡುವ ಬದಲು, ಒಳ್ಳೆಯ ಇಳುವರಿ ಬರುವಂತಹ ತೆಂಗಿನ ತೋಟಗಳನ್ನು

ತೋರಿಸುತ್ತೇನೆ, ಪೇರಲೆ ಹಣ್ಣಿನ ತೋಟ ತೋರಿಸುತ್ತೇನೆ, ಸಾವಯವ ಕೃಷಿಯಲ್ಲಿ ಜಮೀನಿನಲ್ಲಿ ಭತ್ತ ಬೆಳೆದಿರತಕ್ಕಂಥದ್ದನ್ನು ತೋರಿಸುತ್ತೇವೆ, ಅಡಿಕೆಗೆ ನಾವು ಕೆಮಿಕಲ್ ಫರ್ಟಿಲೈಸರ್ ಹಾಕದೆ ಎಷ್ಟೆಷ್ಟು ಯೀಲ್ಡ್ ತೆಗೆಯುತ್ತಿದ್ದೇವೆ ಎಂಬುದನ್ನು ಬಂದು ನೋಡಿ. ಹಾಗಾಗಿ ಇದು ತಪ್ಪು ಖಂಡಿತ ಬೇಡ. ನಮ್ಮ ಅನೇಕ ಕೃಷಿತಂತ್ರಜ್ಞರು, ಈ ರೀತಿ ಆಲೋಚನೆ ಮಾಡತಕ್ಕಂತಹವರು ಎಲ್ಲರನ್ನೂ ಕೂರಿಸಿ ಒಂದು ಚಿಂತನೆ ಕೊಡುವ ಅವಶ್ಯಕತೆ ಇದೆ. ಇಲ್ಲದಿದ್ದರೆ ನಾವು ತಿನ್ನುವ ಆಹಾರವೆಲ್ಲಾ ವಿಷ ಆಗಿ ಹೋಗಿದೆ. ಜಮೀನಿನ ಫಲವತ್ತತೆಯನ್ನು ಹಾಳು ಮಾಡಿಕೊಂಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ನಾನು ಸುಮಾರು 11 ವರ್ಷಗಳಿಂದ ಸಾವಯವ ಕೃಷಿ ಅವಲಂಬನೆಯಲ್ಲಿದ್ದೇನೆ. ತಾವು ಹೇಳಿದ ಹಾಗೆ ಪ್ರಾರಂಭದಲ್ಲಿ ಆದ ತೊಂದರೆ, ಬಹಳಷ್ಟು ಯೀಲ್ಡ್ ಕಡಿಮೆ ಬಂದಿತು. ಬರ ಬರುತ್ತಾ ಸಾವಯವ ಕೃಷಿಯಲ್ಲಿ 58 ಟನ್ ಕಬ್ಬನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ನನ್ನದು ಇದೆ. ಮೊದಲು 25 ಟನ್ ಕಬ್ಬು ತೆಗೆಯುತ್ತಿದ್ದ ವ್ಯಕ್ತಿ ಇವತ್ತು 58 ಟನ್ ಕಬ್ಬನ್ನು ಸಾವಯವ ಕೃಷಿಯಲ್ಲಿ ಬೆಳೆಯುತ್ತಿದ್ದಾನೆ. ಪ್ರತಿಯೊಂದು ಬೆಳೆಯಲ್ಲಿಯೂ ಹೆಚ್ಚಿನ ಉತ್ಪಾದನೆಯನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಸ್ವಲ್ಪ ತಾಳ್ಮೆ ಬೇಕು. ಸರ್ಕಾರ ಅದಕ್ಕೆ ಬಹಳಷ್ಟು ಒತ್ತು ಕೊಟ್ಟು ಕೆಲಸ ಮಾಡಬೇಕಾಗಿದೆ.

ಶ್ರೀ ಡಿ.ಆರ್. ಪಾಟೀಲ್ : ನೀರಾವರಿ ಇರುವವರಿಗೆ ತಾಳ್ಮೆ ಅವಶ್ಯಕತೆ ಇಲ್ಲ. ಸುಭಾಸ್ ಪಾಳೇಕರ್ ಪದ್ಧತಿಯನ್ನು ನಾವು ಒಪ್ಪಿಕೊಂಡೆವು ಎಂದರೆ, ಮೊದಲನೇ ಪೀಕಿನಲ್ಲೇ ನೀವು ಬದಲಾವಣೆಗಳನ್ನು ಕಾಣಬಹುದು. ಗೌಡರು ಹೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಅವರು ಇಫ್ಕೋ ಸಂಸ್ಥೆ ಅಧ್ಯಕ್ಷರಾಗಿದ್ದವರು. ಈಗ ಇನ್ನೂ ಡೈರೆಕ್ಟರ್ ಆಗಿ ಮುಂದುವರೆಯುವವರು. ಅವರಿಗೆ ಆ ರೀತಿ ಇನ್‌ಪುಟ್ ಬರುತ್ತಿರುತ್ತವೆ. ಗೌಡರೇ, ನೀವು ನಮಗೆ ಒಂದು ಹೇಳಿ, ನೀವು ಮೊದಲು ರೈತರು, ಆ ಮೇಲೆ ಇಫ್ಕೋ ಫ್ಯಾಕ್ಟರಿ ಅಧ್ಯಕ್ಷರು. ರೈತ ತಾನು ಮಾಡುವಂತಹ ಕೃಷಿಯಲ್ಲಿ ಸರ್‌ಪ್ಲಸ್ ಜನರೇಟ್ ಮಾಡಬೇಕೆಂದು ಹೇಳುತ್ತಿರೋ ಇಲ್ಲವೋ ಸರ್‌ಪ್ಲಸ್ ಜನರೇಟ್ ಮಾಡಬೇಕೆಂದರೆ ಇನ್‌ಪುಟ್ ಕಾಸ್ಟ್ ಬೆಸ್ಟ್ ಟೆಕ್ನಾಲಜಿ ಏನಿದೆ, ಇವನ್ನೆಲ್ಲಾ ನಾವು ಕೈ ಬಿಡಲಿಲ್ಲ ಎಂದರೆ, ನಮಗೆ ಗತಿ ಇಲ್ಲ. ನಾವು ಮೊದಲು ನಮ್ಮ ಹಿಂದಿನ ಜನಾಂಗದವರೇ, ನಮ್ಮ ತಂದೆ, ನಮ್ಮ ತಾತ, ಅವರೆಲ್ಲಾ ಇದ್ದಾಗ ಅವರು ಕೃಷಿ ಮಾಡುವಾಗ, 60ರ ಪೂರ್ವದಲ್ಲಿ ಏನೂ ಕೆಮಿಕಲ್ ಫರ್ಟಿಲೈಸರ್ ಇರಲಿಲ್ಲ, ಆಗ ಇದ್ದುದ್ದು ನಾನು ಒಪ್ಪುತ್ತೇನೆ. ಆಗ ಇನ್ನೂ ಗ್ಲೋಬಲೈಸೇಷನ್ ಆಗಿರಲಿಲ್ಲ, ಆಗ ನಮ್ಮ ಟ್ರೇಡ್ ಬ್ಯಾರಿಯರ್ಸ್ ಇರುತ್ತಿದ್ದವು,ಏನಾದರೂ ಒಂದು ಕೆಟ್ಟ ಪ್ರಸಂಗ ಬಂದರೆ ನಮಗೆ ಆಗ ಫುಡ್‌ಗ್ರೈನ್ಸ್ ತರಲಿಕ್ಕೆ ತೊಂದರೆಯಾಗುತ್ತಿತ್ತೋ ಎನ್ನುವಂತಹ ಪರಿಸ್ಥಿತಿ ಇತ್ತು. ಇವತ್ತು ಹಾಗೆ ಇಲ್ಲ. ನೀವು ಬೇಕೆಂದರೆ ಫುಡ್‌ಗ್ರೈನ್ಸ್ ಇಂಪೋರ್ಟ್ ಮಾಡಿಕೊಳ್ಳಬಹುದು. ಈ ಪರಿಸ್ಥಿತಿಯೊಳಗೂ ನಾವು ಬದಲಾವಣೆ ಮಾಡಿಕೊಳ್ಳುವುದಕ್ಕೆ ಮನಸ್ಸು ಮಾಡಲಿಲ್ಲವೆಂದರೆ, ನಾವೆಲ್ಲರೂ.ಕೂಡಿ ರೈತರನ್ನು ಯಾವಾಗಲೂ ಪರಾವಲಂಬಿ ಆಗಿ ಮಾಡುವುದಕ್ಕೆ ಇಚ್ಛೆ ಪಡುತ್ತೇವೆ ಎಂದು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 28 ವರ್ಷಗಳಿಂದ ಮೂರು ತರಹದ ರಾಗಿ ಬೆಳೆಯುತ್ತಿದ್ದಾರೆ. ಒಂದು

ಗೊಬ್ಬರ ಹಾಕದೆ, ಒಂದು ಕೆಮಿಕಲ್ ಫರ್ಟಿಲೈಸರ್ ಹಾಕಿ, ಮತ್ತು ಒಂದು ಕೆಮಿಕಲ್ ಫರ್ಟಿಲೈಸರ್ ಮತ್ತು ಕೊಟ್ಟಿಗೆ ಗೊಬ್ಬರ ಹಾಕಿ ಬೆಳೆಯುತ್ತಿದ್ದಾರೆ. 28 ವರ್ಷಗಳಲ್ಲಿ ಅವರು ಆವರೇಜ್ ಯೀಲ್ಡ್‌ನ್ನು ಕೊಡುತ್ತಾರೆ. ನಾನು ಮೊನ್ನೆ ಕೂಡ ಹೋಗಿದ್ದೆ. ಕೊಟ್ಟಿಗೆ ಗೊಬ್ಬರ ಹಾಕಿರುವುದು ಹೈಯಸ್ಟ್ ಯೀಲ್ಡ್ ಇತ್ತು. ವಾಸ್ತಾವಾಂಶವನ್ನು ನಾವು ಯೋಚನೆ ಮಾಡಬೇಕೆನ್ನುವುದು ನಿಜ. ಮಣ್ಣನ್ನು ಹಾಳು ಮಾಡುತ್ತೇವೆ, ಹೊಲವನ್ನು ಹಾಳು ಮಾಡುತ್ತೇವೆ ಬರೀ ಕೆಮಿಕಲ್ ಫರ್ಟಿಲೈಸರ್ ಉಪಯೋಗಿಸಿ ಎಂದರೆ ಅದರ ಜೊತೆಗೆ ಸಾವಯವ ಗೊಬ್ಬರ ಮತ್ತು ಕೆಮಿಕಲ್ ಫರ್ಟಿಲೈಸರ್ ಸೇರಿಸಿ ನಮ್ಮ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ 28 ವರ್ಷಗಳಿಂದ ರಾಗಿ ಮೇಲೆ ಪ್ರಯೋಗ ಮಾಡುತ್ತಿದ್ದೇವೆ. ಮಾನ್ಯ ಡಿ.ಆರ್.ಪಾಟೀಲ್ ಹೋಗಿ ನೋಡಿಕೊಂಡು ಬನ್ನಿ. ಆ ಮೇಲೆ ಅದರ ಮೇಲೆ ನಿಮ್ಮ ಬೆಳಕನ್ನು ಚೆಲ್ಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮಾಜಿ ಕೃಷಿ ಸಚಿವರೇ, ನಮ್ಮ ಊರಿನಲ್ಲಿ ಒಬ್ಬರು, ಅವರು ಯಾವ ಸರ್ಕಾರಿ ಗೊಬ್ಬರನ್ನೂ ಉಪಯೋಗಿಸುವುದಿಲ್ಲ, ಎಣ್ಣೆ ಹೊಡೆಯುತ್ತಿಲ್ಲ, ಬರೀ ನಾವು ಏನು ಹಿಂದೆ 50–60 ಚಕ್ಕಡಿ ಗೊಬ್ಬರ ಹಾಕುತ್ತಿದ್ದೆವು ಅದನ್ನೇ ಹಾಕಿಕೊಂಡು ಬೆಳದುಕೊಂಡು ಬಂದಿದ್ದಾರೆ. ಅವರ ಯೀಲ್ಡ್ ಸರಿಯಾಗಿಯೇ ಇದೆ. ನಾವೇನು ಇಲ್ಲಿ ಫರ್ಟಿಲೈಸರ್ ಏನೇನೋ ಹಾಕಿ ಆ ಭೂಮಿ ಫಲವತ್ತೆಯನ್ನು ಹಾಳು ಮಾಡಿ, ಇವತ್ತಿನ ದಿವಸ ನಮಗೆ ರೋಗವೇ ಹೆಚ್ಚಾಗುತ್ತಿದೆ. ಅವರ ಹೊಲಕ್ಕೆ ರೋಗ ಕಡಿಮೆ ಇದೆ. ಇಂತಹ ಪರಿಸ್ಥಿತಿ ಇದೆ ಇವತ್ತು. ತಪ್ಪು ಮಾಡಿದವರು ನಾವೇ, ಸ್ವಲ್ಪ ಒಂದು 10 ವರ್ಷ ನಾವು ಪ್ರಯತ್ನ ಮಾಡಿದರೆ ಮೊದಲಿನ ಸ್ಥಿತಿಗೆ ನಾವು ಬರುತ್ತೇವೆ.

ಶ್ರೀ ಎಸ್.ಆರ್. ಪಾಟೀಲ್ : ಮಾನ್ಯ ಶ್ರೀನಿವಾಸ ಗೌಡರೇ, ನಿಮಗೆ ಇನ್‌ಪುಟ್ ಹಾಗೆಯೇ ಬರುತ್ತದೆ. ನಾವು ನಿಮ್ಮ ಅಭಿಪ್ರಾಯ ತಪ್ಪು ಎಂದು ಹೇಳುವುದಿಲ್ಲ. ಆದರೆ ನಿಮ್ಮ ಅನುಭವ, ಅದೇ ಇತ್ತು ಎಂದರೆ ತಪ್ಪು. ನಾವು ನಮ್ಮ ಸಮಿತಿಯವರೂ ಅಲ್ಲಿಗೆ ಹೋಗಿದ್ದೆವು. ಸಾವಯವ ಕೃಷಿಯನ್ನನ್ನು ಈ ಕೆಮಿಕಲ್ ಫರ್ಟಿಲೈಸರ್ಸ್ ಬಿಟ್ಟು ಏನು ಮಾಡುತ್ತಿದ್ದಾರೆ. ಅದು ಮೊದಲು ಒಂದು ಮೂರ್‍ನಾಲ್ಕು ವರ್ಷ ಪ್ರೊಡಕ್ಷನ್ ಕಡಿಮೆ ಆಯಿತು. ಮುಂದೆ ಹೆಚ್ಚಿಗೆ ಆಗುತ್ತಾ ಹೋಗಿದೆ. ನಿಮ್ಮದು ಕೆಮಿಕಲ್ ಫರ್ಟಿಲೈಸರ್ ಮತ್ತು ಸಾವಯವ ಕೃಷಿ ಸೇರಿಸಿ ಏನು ಮಾಡುತ್ತಿದ್ದೀರಿ, ಅದು ಒಂದು ಲೆವಲ್‌ಗೆ ಸ್ಟಾಗ್ನೆಟ್ ಆಗಿದೆ. ಈ ಕೆಮಿಕಲ್ ಫರ್ಟಿಲೈಸರ್ಸ್ ಮತ್ತು ಪೆಸ್ಟಿಸೈಡ್ಸ್ ಅಷ್ಟೇ ಉಪಯೋಗ ಮಾಡುವುದು ಏನಿದೆ ಅದು ಡಿಕ್ರೀಸ್ ಆಗುತ್ತಾ ಹೋಗಿದೆ. ನಮ್ಮ ಗೌಡರು ಇದ್ದಾರೆ, ನಮಗೆಲ್ಲಾ ಹಿಂದೆ ವರಲಕ್ಷ್ಮಿ ಹತ್ತಿ ಬೀಜ ಬಂದಾಗ ಡಿಸಿಹೆಚ್‌ನಿಂದ ಒಂದು ಎಕರೆಗೆ 18 ರಿಂದ 24 ಕ್ವಿಂಟಾಲ್ ಮಟ್ಟದವರೆಗೆ ತೆಗೆದರು. ಈಗ ಎರಡು ಕ್ವಿಂಟಾಲ್ . ನಿಮ್ಮ ಪ್ಯಾಕೇಜ್ ಆಫ್ ಪ್ರಾಕ್ಟಿಸಸ್ ಉಪಯೋಗ ಮಾಡಿಕೊಂಡು ಎರಡು ಕ್ವಿಂಟಾಲ್ ಮತ್ತು ಮೂರು ಕ್ವಿಂಟಾಲ್‌ಗೆ ಬಂದು ನಿಂತಿದೆ. ನಾವೆಲ್ಲರೂ ಕೂಡಿ ರೈತರನ್ನು ಹಾಳು ಮಾಡುವಂತಹ ಒಂದು ವ್ಯವಸ್ಥೆಯನ್ನು ರೂಪಿಸಿದ್ದೇವೆಯೋ ಇಲ್ಲ. ತಪ್ಪು ಯಾರದೇ ಇರಲಿ, ನಾವೆಲ್ಲರೂ ಕೂಡಿ ಇದನ್ನು ಒಪ್ಪಿಕೊಳ್ಳಲೇಬೇಕು.

ಶ್ರೀ ಎಸ್.ಎಸ್. ಪಾಟೀಲ್: ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರೇ ಇದನ್ನು ಪ್ರಚಾರ ಮಾಡಿದರು. ಪ್ರಚಾರ ಮಾಡಿ ಗೊಬ್ಬರ ಕೊಟ್ಟು, ಸ್ಯಾಂಪಲ್ ಕೊಟ್ಟು, ಉತ್ಪಾದನೆ ಮಾಡುವುದಕ್ಕೆ ಹಚ್ಚಿದರು. ಈಗ ಅವರೇ ಬೇಡವೆಂದು ಹೇಳುತ್ತಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಆಗ ಕಾಲದ ಅವಶ್ಯಕತೆ ಇತ್ತು.

ಶ್ರೀ ಶಾಮನೂರು ಶಿವಶಂಕರಪ್ಪ : ಮಾನ್ಯ ಉಪಾಧ್ಯಕ್ಷರೆ, ಸಾವಯವ ಗೊಬ್ಬರ ತಯಾರಕರಲ್ಲಿ ನಾನೂ ಒಬ್ಬ. ಅದರ ಅನುಭವ ನನಗೆ ಚೆನ್ನಾಗಿ ಇದೆ. ಇವತ್ತಿನ ದಿವಸ ಸಾವಯವ ಗೊಬ್ಬರ ಹಾಕಿದರೆ 50 ಟನ್ ಬರತಕ್ಕಂತಹ ಕಬ್ಬು ಇವತ್ತು 100 ಟನ್‌ವರೆಗೆ ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಬರುತ್ತಿದೆ. ತೆಂಗಿನ ಕಾಯಿಗೆ ಒಳಗಡೆ ಕೊಬ್ಬರಿ ತುಂಬಾ ದಪ್ಪವಾಗಿರುತ್ತದೆ. ದೊಡ್ಡ ದೊಡ್ಡ ಸಪೋಟ ಹಣ್ಣು ಬರುತ್ತವೆ. ಈ ರೀತಿ ಸಾವಯವ ಗೊಬ್ಬರ ಹಾಕಿದರೆ ಈ ಅನುಕೂಲ ಒಂದೇ ಅಲ್ಲದೆ, ಹೊರದೇಶಗಳಿಗೆ ನೀವು ಏನಾದರೂ ಮಾಲನ್ನು ರಫ್ತು ಮಾಡಬೇಕೆಂದರೆ, ಒಂದಕ್ಕೆ ನಾಲ್ಕರಷ್ಟು ರೇಟ್ ಕೊಟ್ಟು ಅವರು ಖರೀದಿ ಮಾಡುತ್ತಾರೆ. ಏಕೆಂದರೆ ಫರ್ಟಿಲೈಸರ್ ಮುಟ್ಟ ಕೂಡದು. ಅಂತಹ ರೀತಿಯಲ್ಲಿ ನಾವು ತಯಾರು ಮಾಡಿ ಬೆಳೆದರೆ ನಾಲ್ಕು ಪಟ್ಟು ಹಣ ಜಾಸ್ತಿ ಕೊಟ್ಟು ಆ ಮಾಲನ್ನು ಖರೀದಿ ಮಾಡಿಕೊಂಡು ಹೋಗಿ ಬಿಕರಿ ಮಾಡತಕ್ಕಂಹ ವ್ಯವಸ್ಥೆ ಇವತ್ತು ಹೊರ ದೇಶಗಳಲ್ಲಿ ಕೂಡ ಇದೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲರೆ ಸ್ವಲ್ಪ ಈ ಕಡೆ ನೋಡಿಕೊಂಡು ಮಾತನಾಡಿ. ಏಕೆಂದರೆ ಆ ಕಡೆ ನೋಡಿದಷ್ಟು ಸಮಸ್ಯೆಗಳು ಜಾಸ್ತಿಯಾಗುತ್ತವೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಇಂಟರ್ ಆಕ್ಷನ್ ಆದರೆ ನಮಗೆ ಒಳ್ಳೆಯದು. ಏಕೆಂದರೆ, ನಮಗೆಲ್ಲರಿಗೂ ಗೊತ್ತಿದೆ, ನಾವು ಹೋಗುವ ದಾರಿ ತಪ್ಪು ಇದೆ ಎಂದು ನಮಗೆಲ್ಲರಿಗೂ ಅನ್ನಿಸಿದೆ. ಆದರೆ ಆ ದಾರಿ ಬಿಟ್ಟು ಸರಿಯುವುದಕ್ಕೆ ನಾವು ವ್ಯವಸ್ಥೆ ಮಾಡುತ್ತಿಲ್ಲ. ನಮ್ಮ ಆಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿರುವಂತಹ ಕೆಲವು ನಮ್ಮ ಸ್ನೇಹಿತರ ಜೊತೆಗೆ ನಾನು ಚರ್ಚೆ ಮಾಡಿದೆ. ಅವರು ಹೇಳುತ್ತಾರೆ, ಕೃಷಿಯಲ್ಲಿ ಸರ್‌ಪ್ಲಸ್ ಜನರೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತಾರೆ. ಅಂದರೆ, ಅವರನ್ನು ಇಟ್ಟುಕೊಂಡು ನಾವು ಏನು ಮಾಡುವುದು? ಕೃಷಿ ವಿಶ್ವವಿದ್ಯಾಲಯ ಏಕೆ ಬೇಕು ನಮಗೆ, ಈ ಪ್ರೊಫೆಸರ್ಸ್ ಏಕೆ ಬೇಕು? ಆರ್. ಅಂಡ್.ಡಿ. ಏಕೆ ಬೇಕು ನೀವು ನಮ್ಮ ಸಮಸ್ಯೆಗೆ ಸಲ್ಯೂಷನ್ ಹುಡುಗುವುದಿಲ್ಲ ಎಂದರೆ ನೀವು ಏಕೇ ಬೇಕು ಇದಕ್ಕೆ ಅವರು ನಿರುತ್ತರಿಗಳಾದರು. ಏಕೆಂದರೆ ಅವರೂ ಕಲಿತದ್ದು ಅದನ್ನೇ. ಕಲಿತದ್ದನ್ನು ಹೇಳುವವರು ಅವರು. ಅನುಭವಿಸಿ, ತಮ್ಮ ಮನೆಯೊಳಗೆ ಕೃಷಿ ಮಾಡಿ, ಅದನ್ನು ನಮಗೇನೂ ಹೇಳುವುದಿಲ್ಲ ಅವರು ಅದಕ್ಕೆ ಒಂದು ಮಾನ್ಯ ಶಂಕರಮೂರ್ತಿಯವರೇ, ನೀವು ಬರೀ ಕೃಷಿ ವಿಶ್ವವಿದ್ಯಾನಿಲಯ ಏನು ನಮಗೆ ಮಾಹಿತಿ ಕೊಡುತ್ತದೆ, ಆದರ ಮೇಲೆ ಮಾತ್ರ ನಿಮ್ಮ ಕೃಷಿ ನೀತಿಯನ್ನು ಮಾಡಬೇಡಿ. ಇಲ್ಲಿ ಸಾವಯವ ಕೃಷಿಯನ್ನು, ಸುಭಾಷ್ ಪಾಳೇಕರ್‌ರವರ ಕೃಷಿಯನ್ನು ಉಪಯೋಗ ಮಾಡಿ ಅವು ಬಹಳ ಯಶಸ್ವಿ ಪ್ರಯೋಗ ನಡೆಸಿದಂತಹ ನೂರಾರು ರೈತರು ಈ ರಾಜ್ಯದೊಳಗೂ ಇದ್ದಾರೆ. ಇದಕ್ಕಿಂತ ಹೆಚ್ಚು ರೈತರು ಮಹರಾಷ್ಟ್ರದಲ್ಲಿಯೂ ಇದ್ದಾರೆ. ಆ ಪ್ರಯೋಗಗಳನ್ನು ನೀವು ಅದರ ಫೀಡ್ ಬ್ಯಾಕ್ ತೆಗೆದುಕೊಳ್ಳಿ, ಅದನ್ನು ಪೂರ್ತಿ ಸ್ಟಡಿ ಮಾಡಲಿಕ್ಕೆ, ನಿಮ್ಮ ಯೂನಿವರ್ಸಿಟಿ

ಅಧಿಕಾರಿಗಳಿಗೆ ಹೇಳಿ, ನಿಮ್ಮ ಇಲಾಖೆಯ ಅಧಿಕಾರಿಗಳಿಗೂ ಹೇಳಿ, ಆ ಫೀಡ್ ಬ್ಯಾಕ್ ಮೇಲೆ ನಮ್ಮ ಕೃಷಿ ನೀತಿ ರೂಪಿತಗೊಳ್ಳಬೇಕು. ನಾವು ಆ ವ್ಯವಸ್ಥೆಯಿಂದ ದೂರ ಸರಿಯಿಲಿಲ್ಲ ಎಂದರೆ, ನಮ್ಮ ರೈತರನ್ನು ಈ ಆತ್ಮಹತ್ಯೆ ಪ್ರಯತ್ನದಿಂದ ದೂರ ಇಡಲಿಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಇದರ ಬಗ್ಗೆ ಸರ್ಕಾರ ಒಂದು ಧೈರ್ಯದ ನಿಲುವನ್ನು ತೆಗೆದುಕೊಳ್ಳುವಂತಹ ಪ್ರಸಂಗ ಇವತ್ತು ಇದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಸಾವಯವ ಕೃಷಿ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಮುಂಚೆ ಏನು ಮಾಡುತ್ತಿದ್ದೆವೆಂದರೆ ಸೊಪ್ಪಿನ ಬಟಕ್‌ನಲ್ಲಿ ನಿಂತು ಉಪಯೋಗ ಮಾಡುತ್ತಿದ್ದೆವು. ಅಡಿಕೆ ಬೆಳೆಗೆ ಹೀಗೆ ಮಾಡುತ್ತಿದ್ದೆವು. ಮತ್ತೆ ಕೆರೆಯ ಹೂಳು ತೆಗೆದು ನಾವು ಮಾಡುತ್ತಿದ್ದೆವೆ. ಈಗ ಕೆರೆಯ ಹೂಳನ್ನು ಬಿಟ್ಟೆವು, ಸೊಪ್ಪಿನದನ್ನೂ ಬಿಟ್ಟೆವು. ಆದರೆ ಮುಂದೆ ಯಾವ ಗೊಬ್ಬರವನ್ನೂ ಉಪಯೋಗಿಸದೆ ಹೆಚ್ಚುಕಡಿಮೆ ಅಡಿಕೆ ತೋಟಗಳು ಇದ್ದವು. ಹಿಮದೆ ಯಾವ ಯಾವ ಗೊಬ್ಬರವೂ ಇರಲಿಲ್ಲ. ಈಗ ಎಲ್ಲಾ ಕಡೆ ಡ್ರಿಪ್ ಇರಿಗೇಶನ್‌ನಲ್ಲಿ, ಡ್ರಿಪ್ ಮೂಲಕವೇ ಈಗ ಕೆಮಿಕಲ್ ಫರ್ಟಿಲೈಸರ್ಸ್‌ನ್ನು ಯೂಸ್ ಮಾಡುವ ಲೆವಲ್‌ಗೆ ಹೋಗಿದ್ದೇವೆ. ಆದರೆ ಮುಂದೆ ಬರೇ ಸೊಪ್ಪು ಹಾಕಿಯೇ ನಾವು ಅಡಿಕೆ ಗಿಡಗಳನ್ನು ಬೆಳಸುತ್ತಿದ್ದೆವೂ. ಹಾಗೇಯೇ ಕೆರೆಯ ಹೂಳನ್ನು ಹಾಕಿಯೇ ಮಾಡುತ್ತಿದ್ದೆವು. ಈಗ ಗೌಡರು ಹೇಳಿದ ಹಾಗೆ ಈ ಕೆಮಿಕಲ್ ಫರ್ಟಿಲೈಸರ್ಸ್ ಬಗ್ಗೆ ಹೇಳಿದರಲ್ಲಾ, ಇದರ ಪ್ರಮಾಣವನ್ನು ನಾವು ಕಡಿಮೆ ಮಾಡುತ್ತಾ ಹೋಗಲಿಲ್ಲವೆಂದರೆ ನಮಗೆ ದಿನನಿತ್ಯದ ಸಮಸ್ಯೆಗಳು ಇದರಿಂದಲೇ ಜಾಸ್ತಿಯಾಗುತ್ತವೆ. ಪ್ಲಾಸ್ಟಿಕ್ ಸಮಸ್ಯೆಯನ್ನು ಹೇಗೆ ಈಗ ನಾವು ಹಚ್ಚಿಕೊಂಡು ಕೂತಿದ್ದೇವೋ , ಹಾಗೇಯೇ ಕೆಮಿಕಲ್ ಫರ್ಟಿಲೈಸರ್ಸ್ ಬಗ್ಗೆ ಕೂಡ ಆಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಕೆಲವು ಸ್ನೇಹಿತರು ಕೆಮಿಕಲ್ ಫರ್ಟಿಲೈಸರ್ಸ್‌ನ್ನೂ ಉಪಯೋಗ ಮಾಡಬೇಕು, ಮತ್ತು ಸಾವಯವ ಕೃಷಿಯನ್ನೂ ಮಾಡಬೇಕೆನ್ನುವುದನ್ನು ಹೇಳಿ ತಪ್ಪು ಕಲ್ಪನೆಯೊಳಗೆ ಇದ್ದಾರೆ. ನಾವು ಈ ಕೆಮಿಕಲ್ ಫರ್ಟಿಲೈಸರ್ ಉಪಯೋಗ ಮಾಡಿದರೆ ಆ microbial ಆಕ್ಟಿವಿಟಿ ಎಲ್ಲಾ ಕಡಿಮೆಯಾಗುತ್ತದೆ. microbes ಕಡಿಮೆಯಾಗುತ್ತವೆ. ಈ microbes ಹೆಚ್ಚಾಗುವಂಥ ಪ್ರಯತ್ನ ನಮ್ಮದು ಇರಬೇಕೇ ಹೊರತಾಗಿ ಮಣ್ಣಿನ ಫಲವತ್ತತೆಯನ್ನು ನಾವು ಕಾಪಾಡಿಕೊಳ್ಳಬೇಕಾದರೆ ಇದು ಇರಬಾರದು. ಇದರ ಬಗ್ಗೆ ನೀವು ನೋಡಿ, ದಯವಿಟ್ಟು ನಿಮ್ಮ ಕೃಷಿ ಇಲಾಖೆಯ ಎಲ್ಲಾ ಸ್ನೇಹಿತರುಗಳಿಗೂ ನೀವು ಹೇಳಬೇಕು, ನಮ್ಮ ಕೃಷಿ ಫಾರ್ಮ್ಸ್‌ಗಳು ಏನು ಇವೆ, ನಮ್ಮ ತೋಟಗಾರಿಕೆ ಫಾರ್ಮ್ಸ್ ಏನು ಇವೆ, ಅದರೊಳಗೆ ಈ ಎಲ್ಲಾ ಪ್ರಯೋಗಗಳನ್ನು ಸೈಡ್ ಬೈ ಸೈಡ್ ಮಾಡಿ ಎಂದು ನೀವು ಹೇಳಿ. ಅವರಿಗೂ ಅನುಭವಕ್ಕೆ ಬರಬೇಕು. ಅವರು ನಮ್ಮ ವಿರುದ್ಧ ಹೇಳುತ್ತಾರೆಎಂದು ನನಗೆ ಏನೂ ಭಾವನೆ ಇಲ್ಲ. ಅವರೂ ನಮ್ಮ ಸಹೋದರೇ ಅವರ ಅನುಭವಕ್ಕೆ ಅದು ಬರಬೇಕು. ಇದು ಯೋಗ್ಯ, ಇದರಿಂದ ಸರ್‌ಪ್ಲಸ್ ಜನರೇಟ್ ಆಗುತ್ತದೆ ಎನ್ನುವ ತಿಳುವಳಿಕೆ ಬಂತೆಂದರೆ ಅವರು ಈ ಪ್ರಯೋಗವನ್ನು ಯಶಸ್ವಿಯಾಗಿ ಹರಡಲಿಕ್ಕೆ ಸಾಧ್ಯ. ಏಕೆಂದರೆ ಮುಂದೆ ಹರಡುವ ಎಕ್ಸ್‌ಟೆನ್‌ಶನ್ ಆಕ್ಟಿವಿಟಿ ಅವರ ಮುಖಾಂತರವೇ ಆಗಬೇಕಾಗುತ್ತದೆ. ಎಲ್ಲೋ ನೂರಾರು, ಸಾವಿರಾರು ರೈತರು ಇದನ್ನು ಮಾಡಿದರೆ ಅಷ್ಟು ಉಪಯೋಗವಾಗುವುದಿಲ್ಲ. ಇಡೀ ಗ್ರಾಮ ಬದಲಾಗಬೇಕು. ಇಡೀ ಗ್ರಾಮ ಬದಲಾಗಬೇಕಾದರೆ ಪ್ರತಿ ಗ್ರಾಮದೊಳಗೆ ನಾಲ್ಕೈದು ಪ್ರಯೋಗಗಳನ್ನು ನಾವು ರೈತರಿಗೆ ತಿಳುವಳಿಕೆ ಕೊಟ್ಟು ಡೆಮಾನ್‌ಸ್ಟ್ರೇಷನ್ ಯುನಿಟ್ ಎಂದು

ಮಾಡಿ ಇದನ್ನು ಮಾಡುವಂಥ ವ್ಯವಸ್ಥೆ ನಮ್ಮಲ್ಲಿ ರೂಪಿತಗೊಳ್ಳಬೇಕು. ಈಗ ಸುಭಾಷ್ ಪಾಳೇಕಾರ್‌ರವರು ಹೇಳುವುದು ನಾಲ್ಕು. ಒಂದು ನಿಮ್ಮ ಮಣ್ಣಿನ ಫಲವತ್ತೆಯನ್ನು ನೀವು ಕಾಪಾಡಿಕೊಳ್ಳಬೇಕು. ಅದನ್ನು ಕಾಪಾಡಿಕೊಳ್ಳಬೇಕಾದರೆ ಈ microbial activity ಜಾಸ್ತಿ ಮಾಡಿ. microbial activity ಜಾಸ್ತಿ ಮಾಡಬೇಕೆಂದರೆ ಈ ಫರ್ಟಿಲೈಸರ್ಸ್‌ನ್ನು ಬಿಡಿ. ಹೀಗೆ ಅವರೇ ತಮ್ಮ ಪ್ರಯೋಗಗಳಲ್ಲಿ ಕಂಡುಕೊಂಡಂಥ ಸಲೂಶನ್ಸ್ ಇವೆ. ಅವರು ಗೋ ಮೂತ್ರ, ಸಗಣಿ ಸುಣ್ಣ ಮಣ್ಣು ಹೀಗೆ ಇವುಗಳನ್ನೆಲ್ಲಾ ಉಪಯೋಗ ಮಾಡಿಕೊಂಡು ಜೀವಾಮೃತ ಎಂದು ತಯಾರು ಮಾಡುತ್ತಾರೆ. ಇದನ್ನು ತಯಾರು ಮಾಡುವುದಕ್ಕೆ ಆಳುಗಳು ಬಹಳ ಬೇಕಾಗಿಲ್ಲ. ನಮ್ಮ ಸಾವಯ ಕೃಷಿಯೊಳಗೆ ಮ್ಯಾನ್ ಪವರ್ ಬಹಳ ಬೇಕಾಗುತ್ತದೆ. ಈ ಸುಭಾಷ್ ಪಾಳೇಕಾರ್ ಕೃಷಿಯೊಳಗೆ ಮ್ಯಾನ್ಯ ಪವರ್ ಅಷ್ಟು ಬೇಕಾಗುವುದಿಲ್ಲ.. ಒಂದು ಆಕಳು, ಒಂದು ಎತ್ತು ಇತ್ತೆಂದರೆ 30 ಎಕರೆಯಲ್ಲಿ ಕೃಷಿಯನ್ನು ಅದರಿಂದ ಬರುವಂಥ ಸಗಣಿ ಹಾಗೂ ಗಂಜಲದಿಂದ ನಾವು ಮಾಡಬಹುದು. ಬಹುತೇಕ ಒಂದು ಜೊತೆ ಎತ್ತು ಎಲ್ಲಾ ರೈತರ ಹತ್ತಿರ ಇದ್ದೇ ಇರುತ್ತದೆ. ಆದುದರಿಂದ ಇದನ್ನು ಮಾಡುವುದಕ್ಕೆ ಬಹಳಷ್ಟು ತೊಂದರೆ ಏನೂ ಇಲ್ಲ. ದಯವಿಟ್ಟು ಇಂಥ ಹೊಸ ಪ್ರಯೋಗಗಳನ್ನು ಬಹಳಷ್ಟು ಪ್ರಚಾರಗೊಳಿಸಿ, ಅವುಗಳಿಗೆ ನಿಮ್ಮ ಸಹಾಯಧನ ನಿಮ್ಮ ಸಹಾಯ ಹರಿದು ಬರಬೇಕು. ಆ ಕೆಲಸ ಆಗುವ ಹಾಗೆ ತಾವು ಮಾಡಬೇಕು. ಇದರ ಜೊತೆಗೆ ಮಲಿಂಗ್ ಹೆಚ್ಚು ಒತ್ತನ್ನು ಅವರು ಕೊಡುತ್ತಾರೆ. ಅಂದರೆ mulching aebvity Microbial activity ಹೆಚ್ಚಾದಾಗ ಅವಕ್ಕೆ ಸಾವಯವ ಪದಾರ್ಥ ಬೇಕಾಗುತ್ತದೆ. ಅದು ಅವಕ್ಕೆ ಫುಡ್.. ಸಾವಯವ ಪದಾರ್ಥ ತೆಗೆದುಕೊಂಡು ಅವು ಬೆಳೆದು ಅವು ಏನು ಸಾಯುತ್ತವಲ್ಲಾ ಅದು ನಮ್ಮ ಪ್ಲಾಂಟ್‌ಗೆ ಗೊಬ್ಬರವಾಗುತ್ತದೆ. ಆದರಿಂದ ಉತ್ತಮವಾದಂಥ ಉತ್ಪಾದನೆ ಬರುತ್ತದೆ ಎನ್ನುವುದನ್ನು ಯಜಮಾನರು ಹೇಳಿದ್ದಾರೆ. ನಾವು ಎಲ್ಲರೂ ನೋಡಿದ್ದೇವೆ. ಬಹಳಷ್ಟು ರೈತರಿಗೆ ಅನುಕೂಲವೆಂದು ನಮ್ಮ ಸ್ನೇಹಿತರೂ ಒಪ್ಪಿಕೊಂಡರು. ನಿಮ್ಮ ಜಿಲ್ಲೆಯೊಳಗಂತೂ ಬಹಳ ಯಶಸ್ವಿ ಪ್ರಯೋಗಗಳು ಅವು ನಡೆದಿವೆ. ತಾವು ಈ ಬದಲಾವಣೆಯನ್ನು ಇಲಾಖೆಯಲ್ಲಿ ತರುವ ಹಾಗೆ ತಾವು ವಿಶೇಷ ಮುತುವರ್ಜಿಯನ್ನು ವಹಿಸಬೇಕೆಂದು ನಾನು ಹೇಳುತ್ತೇನೆ. ಇವು ಆದಮೇಲೆ ಮಣ್ಣು ಫಲವತ್ತತೆಯನ್ನು ರೈತರು ಹೆಚ್ಚು ಮಾಡಿಕೊಳ್ಳುತ್ತಾ ಹೋದರೆಂದರೆ ನಮಗೆ ನೀರಿನ ಅವಶ್ಯಕತೆ ಇರುತ್ತದೆ. ಎಲ್ಲೆಲ್ಲಿ ನೀರಾವರಿ ಇದೆ, ಅವರಂತೂ ನಮಗಿಂತ ಪುಣ್ಯವಂತರು. ಮಳೆಯಾದಾರಿತ ಬೇಸಾಯ ಮಾಡುವ ರೈತರಿಗಿಂತ ನೀರಾವರಿ ಸೌಲಭ್ಯ ಪಡೆದಂಥ ರೈತರು ಪುಣ್ಯವಂತರು. ನಾನು ಮಳೆಯಾಶ್ರಿತ ಪ್ರದೇಶದಿಂದ ಬಂದವನು. ಈ ಮಳೆ ನೀರನ್ನು ತಡೆಗಟ್ಟುವಂಥ ಕೆಲಸವನ್ನು ಮಾಡುವುದಕ್ಕೆ ಬಹಳಷ್ಟು ದುಡ್ಡು ಏನೂ ಬೇಕಾಗುವುದಿಲ್ಲ. ಸಾಯಲ್ ಅಂಡ್ ವಾಟರ್ ಕನ್ಸರೇಶನ್ ಆಕ್ಟಿವಿಟೀಸ್‌ಗೆ ಒಂದು ಹೆಕ್ಟೇರ್ ಜಮೀನಿಗೆ ಸುಮಾರು 5 ಸಾವಿರ ರೂ ಈಗ ಕೊಡುತ್ತಾರೆ. ಕಡಿಮೆ ಆಗುತ್ತದೆ ಎನ್ನುತ್ತಾರೆ. 8 ಸಾವಿರ ರೂಪಾಯಿಗಳನ್ನು ಒಂದು ಹೆಕ್ಟೇರ್ ಜಮೀನಿಗೆ ನಾವು ಖರ್ಚು ಮಾಡಲು ತಯಾರಿದ್ದೇವೆಂದರೆ ನೆಲದ ಮೇಲೆ ಬಿದ್ದಂಥ ಮಳೆ ನೀರನ್ನೆಲ್ಲಾ ನಾವು ನಮ್ಮ ಜಮೀನಿನಲ್ಲಿ ಹಿಡಿದಿಟ್ಟುಕೊಳ್ಳುವುದಕ್ಕೆ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಕ್ಕೆ ಹೆಚ್ಚಾದ ನೀರನ್ನು ಕೆರೆ ಕುಂಟೆಗಳಲ್ಲಿ ಹಳ್ಳಗಳ ಮುಖಾಂತರ ಹರಿಸುವುದಕ್ಕೆ ಮುಂದೆ ನಿಮ್ಮ ಡ್ಯಾಂಸೈಟ್. ಅವು, ಇವು, ಹೀಗೆ ಎಲ್ಲದರ ಮೂಲಕ ಚೆಕ್ ಡ್ಯಾಂ ಹೀಗೆ ಎಲ್ಲದರ ಮೂಲಕ ಉಪಯೋಗ ಮಾಡಿಕೊಳ್ಳುವುದಕ್ಕೆ

ಬಹಳಷ್ಟು ಅನುಕೂಲವಾಗುತ್ತದೆ. ಇದಕ್ಕೆ ದುಡ್ಡು ಎಷ್ಟು ಬೇಕಾಗುತ್ತದೆ. ನಮಗೆ? ಸುಮಾರು 120 ಲಕ್ಷ ಹೆಕ್ಟೇರ್ ಜಮೀನನ್ನು ಕೃಷಿಯೋಳಗೆ ಆಳವಡಿಸುವುದಕ್ಕೆ ಬರುತ್ತದೆ. ಈಗ 30 ಲಕ್ಷ ಹೆಕ್ಟೇರ್‌ನಲ್ಲಿ ನೀರಾವರಿ ಇದೆ. ಎಲ್ಲಾ ರೀತಿಯಲ್ಲೂ ಸಿಗುವಂಥ ನೀರನ್ನು ನಾವು ಉಪಯೋಗ ಮಾಡಿಕೊಂಡೆವೆಂದರೆ ಅಂತರ್ಜಲವನ್ನು ಟ್ಯಾಪ್ ಮಾಡಿದ್ದೂ, ಹಿಡಿದು ಸುಮಾರು 55 ಲಕ್ಷ ಹೆಕ್ಟೇರ್ ಜಮೀನು ನೀರಾವರಿಯಾಗುತ್ತದೆ. ಉಳಿದದ್ದೆಲ್ಲಾ ಮಳೆಯಾಶ್ರಿತ ಕೃಷಿಯೇ. 65 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಕೃಷಿಭೂಮಿಯಾಗುತ್ತದೆ. ಈಗ ಪ್ರತಿ ವರ್ಷ, ಈಗ ನೀವೇ ಹೇಳಿದ್ದಿರಿ, 2900 ಕೋಟಿರೂಗಿಂತಲೂ ಹೆಚ್ಚು ಹಣವನ್ನು ನೀರಾವರಿ ಯೋಜನೆಗಳಿಗೆ ಇಟ್ಟಿದ್ದೇವೆಂದು ಹೇಳಿದಿರಿ. ಪ್ರತಿ ವರ್ಷ 2000, 2500, 3000 ಕೋಟಿ ರೂಪಾಯಿಗಳನ್ನು ಕಳೆದ ಹತ್ತು ವರ್ಷದಿಂದ ನಾವು ಖರ್ಚು ಮಾಡುತ್ತಿದ್ದೇವೆ. ನಮಗೆ ಒಂದು ವರ್ಷ 3 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟುಬಿಟ್ಟರೆಂದರೆ ಮಳೆಯಾಶ್ರಿತ ಕೃಷಿ ಜಮೀನಿನಲ್ಲೆಲ್ಲಾ ಪೂರ್ತಿ ನಾವು ನೀರನ್ನು, ಮಣ್ಣನ್ನು ತಡೆಗಟ್ಟುವಂತೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ನೀರಾವರಿಯ ಒಂದು ವರ್ಷದ ಬಜೆಟ್‌ನ್ನು ನೀವು ಮಳೆಯಾಶ್ರಿತ ಕೃಷಿಗೆ ವಿನಿಯೋಗ ಮಾಡಲು ಮನಸ್ಸು ಮಾಡಿದರೆ, ನೀರಾವರಿಗಿಂತ ಎರಡು ಪಟ್ಟು ಮಳೆಯಾಶ್ರಿತ ಕೃಷಿ ಜಮೀನಿನಲ್ಲಿ ನಾವು ನೀರನ್ನು ನಿಲ್ಲಿಸುವಂಥ ಕೆಲಸವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ನಿಮ್ಮ ಮಂತ್ರಿಮಂಡಲದೊಳಗೆ ಇದರ ಬಗ್ಗೆ ವಿಶೇಷ ಲಕ್ಷ್ಯವಹಿಸಿ ಮುಂದಿನ ಮುರ್ನಾಲ್ಕು ವರ್ಷದೊಳಗೆ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀವು ಈ ಮಳೆಯಾಶಿತ ಕೃಷಿಯಲ್ಲಿ ನೀರನ್ನು, ಮಣ್ಣನ್ನು ಉಳಿಸಿಕೊಳ್ಳುವುದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಮೀಸಲಿಡುವಂಥ ಒಂದು ನಿಯಮವನ್ನು, ನೀತಿಯನ್ನು ನೀವು ಒಪ್ಪುವ ಹಾಗೆ ಒತ್ತಾಯ ಮಾಡಬೇಕು. ಈಗ ಮಣ್ಣು ಮತ್ತು ನೀರಿನ ವ್ಯವಸ್ಥೆ ಆಯಿತೆಂದರೆ ನಮಗೆ ಸಕಾಲಿಕವಾಗಿ ಬೇಕಾಗುವಂಥ ಹಣಕಾಸಿನ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ನೀವು ಈಗೇನು ಸಹಕಾರಿ ಸಂಸ್ಥೆಗಳ ಮೂಲಕ ಸಾಲವನ್ನು ಏನು ತೆಗೆದುಕೊಳ್ಳುತ್ತಾರೆ ಅವರಿಗೆ 4 ಪರ್ಸೆಂಟ್ ಬಡ್ಡಿ ಎಂದು ಮಾಡಿದ್ದೀರಿ. ಇದು ಸ್ವಾಗತಾರ್ಹವಾದಂಥ ಕೆಲಸ. ಹಿಂದೆ ಸರ್ಕಾರ 6 ಪರ್ಸೆಂಟ್ ಮಾಡಿತ್ತು. 6 ಪರ್ಸೆಂಟ್ ಮಾಡಿದ್ದಾಗ ಅವರು 51/12 ಪರ್ಸೆಂಟ್ ಆ ಇಂಟರೆಸ್ಟ್ ಡಿಫರೆನ್ಸ್‌ನ್ನು ತುಂಬಬೇಕಾಗುತ್ತಿತ್ತು. ನೀವು ಈಗ ಕೇಂದ್ರ ಸರ್ಕಾರದವರು 7 ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಡುವುದರಿಂದ ನೀವು 3 ಪರ್ಸೆಂಟ್ ತುಂಬಬೇಕಾಗುತ್ತದೆ. ನೀವು ನಿಮ್ಮ ಸಿ.ಎಂ.ಪಿ ಯೊಳಗೆ ಒಂದು ಪಾಯಿಂಟ್ ಹಾಕಿದ್ದೀರಿ, ಸಹಕಾರಿ ಸಾಲ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ತೆಗೆದುಕೊಂಡಂಥ ಕೃಷಿ ಸಾಲಕ್ಕೂ ಕೂಡ ನಾವು ಕಡಿಮೆ ಬಡ್ಡಿ ದರದೊಳಗೆ ಸಾಲ ಸಿಗುವ ಹಾಗೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಾವು ತಮ್ಮ ಸಿ.ಎಂ.ಪಿ ಯೋಳಗೆ ಹೇಳಿದ್ದೀರಿ. ಆದರೆ ಏಕೋ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಳ್ಳುವಂಥ ರೈತನನ್ನು ಕೈಬಿಟ್ಟುಬಿಟ್ಟಿದ್ದೀರಿ. ನಮ್ಮ ಕ್ರೆಡಿಟ್ ರೈತರಿಗೆ ಸಿಗುವಂಥ ಸುಮಾರು 70 ಲಕ್ಷಕ್ಕಿಂತ ಹೆಚ್ಚು ಹಿಡುವಳಿದಾರರು ಈ ರಾಜ್ಯದೊಳಗೆ ಇದ್ದಾರೆ. ಇದರೊಳಗೆ ಈ ಸಹಕಾರಿ ಚಳುವಳಿ ಮುಖಾಂತರ ಕ್ರೆಡಿಟ್ ಸಿಗುವುದು ಕೇವಲ 7 ರಿಂದ 8 ಲಕ್ಷ ರೈತರಿಗೆ ಮಾತ್ರ. ಒಮ್ಮೆ ಹೆಚ್ಚಾದಾಗ 9 ಲಕ್ಷಕ್ಕೆ ಮುಟ್ಟಿದ್ದರು. ಒಂದು ಶತಮಾನ ಆಯಿತು ಈ ಸಹಕಾರಿ ಚಳುವಳಿ ಪ್ರಾರಂಭವಾಗಿ ಒಂದು ಶತಮಾನ ಆದರೂ ಸಹಿತ ನಾವು ರೀಚ್ ಆಗಿದ್ದು

ಒಂದ್ ಹದಿನಾಲ್ಕೋ, ಹದಿನೈದೋ ಪರ್ಸೆಂಟ್ ರೈತರನ್ನು ಮಾತ್ರ. ಏಕೆ ಎಂದು ವಿಚಾರ ಮಾಡಬೇಕು. ಈ ಎಲ್ಲಾ ಸಹಕಾರಿ ಸಂಸ್ಥೆಗಳ ಏನಿವೆ ಅವೂಗಳು ನಮ್ಮಂತಹವರ ಕೈಯಲ್ಲೆ ಇದೆ. ಊರಿನೊಳಗೆ ಗಣ್ಯರು ಎನ್ನುವವರ ಕೈಯಲ್ಲಿ ಈ ಸಹಕಾರಿ ಸಂಸ್ಥೆಗಳು ಇರುವುದು. ನಾವು ಸಂಸ್ಥೆಗಳನ್ನು ಖಾಯಂ ಆಗಿ ನಮ್ಮ ಕೈಯಲ್ಲಿ ಇಟ್ಟುಕೊಳ್ಳುವುದಕ್ಕೋಸ್ಕರ ಬಹಳ ಮಂದಿ ಸದಸ್ಯರನ್ನು ಮಾಡುವುದಿಲ್ಲ. ನಮ್ಮ ಮಾತನ್ನು ಯಾರು ಕೇಳುತ್ತಾರೆ ಅವರನ್ನು ಮಾತ್ರ ಸದಸ್ಯರನ್ನಾಗಿ ಮಾಡಿಕೊಳ್ಳುತ್ತೇವೆ. ನಮ್ಮ ಮಾತಿಗೆ ವಿರೋಧ ಇರುವವರನ್ನು ದೂರ ಇಟ್ಟಿರುತ್ತೇವೆ. ಈ ಸದಸ್ಯರನ್ನು ಜಾಸ್ತಿ ಮಾಡಬೇಕೆಂದರೆ ಎರಡು ಕೆಲಸವಾಗಬೇಕು. ಒಂದು ನೀವು ಕಂಪಲ್ಸರಿ ಮಾಡಿ, ಯಾರ್‍ಯಾರು ಹಿಡುವಳಿದಾರರು ಇದ್ದಾರೆ ಅವರೆಲ್ಲರೂ ಸಹಕಾರಿ ಸಂಘಗಳ ಚುಣಾವಣೆಯುಲ್ಲಿ ಭಾಗವಹಿಸುವಂತಹ ಮತದಾರರಾಗುವಂತೆ ನೀವು ಮಾಡಿದಿರಿ ಎಂದರೆ ಸ್ಟ್ರೆಂಗ್ತ್ ತಾನಾಗಿ ಜಾಸ್ತಿಯಾಗುತ್ತದೆ. ಇಲ್ಲದೇ ಇದ್ದರೆ ಆಡಳಿತ ಮಂಡಳಿಯೊಳಗೆ ಮೀಸಲಾತಿಯನ್ನಾದರೂ ತೆಗೆದುಕೊಂಡು ಬನ್ನಿ. ಮೀಸಲಾತಿ ತಂದು ಎಲ್ಲಾ ಜನರಿಗೆ ಅಲ್ಲಿ ಅವಕಾಶ ಸಿಗುವಂತಹ ವ್ಯವಸ್ಥೆಯನ್ನು, ನಾವು ಪಂಚಾಯತ್ ರಾಜ್ಯದೊಳಗೆ ಹೇಗೆ ಮಾಡಿದ್ದದೇವೆ ಅದೇ ರೀತಿ ಸಹಕಾರಿ ರಂಗದಲ್ಲಿ ಕೂಡ ನಾವು ತಂದೆವು ಎಂದರೆ ಆಗಲೂ ಕೂಡ ಸ್ಟ್ರೆಂತ್ ಹೆಚ್ಚಾಗುತ್ತದೆ. ಈಗ ನೂರು ವರ್ಷಗಳ ಕಾಲ ಇದ್ದಂತಹ ಈ ಸಂಸ್ಥೆಗಳಲ್ಲಿ ಕೇವಲ ಮಾಗ್ಸಿಮಂ 15 ಪರ್ಸೆಂಟ್ ಮಾತ್ರ ಏನು ರೀಚ್ ಆಗಿದ್ದೇವೆ, ನೀವು ಈ ಬದಲಾವಣೆಯನ್ನು ತಂದೆವು ಎಂದರೆ ಮುಂದಿನ ಒಂದು ದಶಕದಲ್ಲಿ 60 ರಿಂದ 70 ಪರ್ಸೆಂಟ್ ನಾವು ರೀಚ್ ಆಗುತ್ತೇವೆ. ಈ ಒಂದು ಮಹತ್ತರವಾದಂತಹ ಬದಲಾವಣೆ ಇವತ್ತು ಆ ಸಂಸ್ಥೆಯಲ್ಲಿ ಬರಬೇಕು.

ಉಪಾಧ್ಯಕ್ಷರು : ತಾವು ಬೇಗ ಮುಗಿಸಬೇಕು. ಈಗಾಗಲೆ ಅರ್ಧ ಗಂಟೆ ಆಯಿತು.

ಶ್ರೀ ಡಿ.ಆರ್. ಪಾಟೀಲ್ : ತಾವು ಬೇಡವೆಂದರೆ ಬಿಟ್ಟುಬಿಡುತ್ತೇನೆ.

ಉಪಾಧ್ಯಕ್ಷರು : ಆ ತರಹ ಅಲ್ಲ, ಈಗ ಏನು ಮಾಡಬೇಕು ಹೇಳಿ. ಎಲ್ಲರಿಗೂ ಅರ್ಧ ಗಂಟೆ ಸಮಯ ಕೊಟ್ಟಿರುವುದು. ಅದನ್ನು ಸಿಮೀತವಾಗಿ ಇಟ್ಟಿದ್ದೇವೆ. ಈಗ ನೀವು ಯಾವುದಕ್ಕೋ ಸಮಯವನ್ನು ಉಪಯೋಗಿಸಿಕೊಂಡು ಅರ್ಧ ಗಂಟೆ ವೇಸ್ಟ್ ಮಾಡಿಕೊಂಡರೆ, ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ; ದಯವಿಟ್ಟು ಬೇಗ ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಡಿ.ಆರ್. ಪಟೀಲ್ : ಮುಗಿಸುತ್ತೇನೆ, ನಾನು ಯಾವಾಗಲೂ ಹೆಚ್ಚು ಸಮಯ ಕೇಳುವುದಿಲ್ಲ,. ನಾನು ಪ್ರೆಸಿಡೆಂಟ್ ಸ್ಪೀಚ್ ಮೇಲೆ ಮಾತನಾಡಲಿಲ್ಲ. ಗೌರ್ನರ್ ಸ್ಪೀಚ್ ಮೇಲೆ ಮಾತನಾಡಲಿಲ್ಲ.

ಉಪಾಧ್ಯಕ್ಷರು : ತಾವು ಅಗ್ರಿ ಕಲ್ಚರ್ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಅದಕ್ಕೆ ಬೇಕಾದರೆ ಅರ್ಧ ಗಂಟೆ ಚರ್ಚೆಗೆ ಕೇಳಿಕೊಳ್ಳೋಣ. ಆದಷ್ಟು ಬೇಗ ಮುಗಿಸಿಬಿಡಿ. ಬಹಳ ಸುಂದರವಾಗಿ, ತಾವು ಮಾತನಾಡತಕ್ಕಂಥ ವಿಷಯ ಬಹಳ ಚೆನ್ನಾಗಿ ಇದೆ. ಬೇಗ ಐದು ನಿಮಿಷದಲ್ಲೆ ಮುಗಿಸಿಬಿಡಿ. ಮತ್ತೆ ಅಡ್ಜರ್ನ್‌ಮಾಡಿ ಸೇರೋಣ.

ಉಪಾಧ್ಯಕ್ಷರು : ಬೇಡ ಮುಗಿಸಿಬಿಡಿ ಐದು ನಿಮಿಷದಲ್ಲೆ ...

ಶ್ರೀ ಡಿ.ಆರ್. ಪಾಟೀಲ್ : ಐದು ನಿಮಿಷದಲ್ಲೆ ಮುಗಿಸುವುದಕ್ಕೆ ಆಗುವುದಿಲ್ಲ. ನನಗೆ ಇನ್ನೂ 15 ನಿಮಿಷ ಸಮಯ ಕೊಡಿ.

ಉಪಾಧ್ಯಕ್ಷರು: ಅಷ್ಟರಲ್ಲೆ ಮುಗಿಸಿಬಿಡಿ.

ಶ್ರೀ ಅಂಜನಾಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ಸದನ ಬಹಳ ನಿಶ್ಯಬ್ಧವಾಗಿದೆ ಮಾತನಾಡಲಿ ಬಿಡಿ.

ಉಪಾಧ್ಯಕ್ಷರು : ಇಲ್ಲ, ಮಾತನಾಡುವವರು ಬಹಳ ಜನ ಇದ್ದಾರೆ. ನಿಶ್ಯಬ್ಧ ಆಗಿರುವುದರಿಂದಲೇ ಯಾವುದೂ ಬೇಡ ಎಂದು ಹೇಳುವುದು. ಈಗ ಲಂಚ್‌ಗೆ ಬ್ರೇಕ್ ಕೊಡೋಣ.

ಶ್ರೀ ಡಿ.ಆರ್. ಪಾಟೀಲ್ : ಲಂಚ್ ಬ್ರೇಕ್ ಆದಮೇಲೆ ಮತ್ತೆ ನಮಗೆ ಅವಕಾಶ ಕೊಟ್ಟರೆ

ಉಪಾಧ್ಯಕ್ಷರು: ಇನ್ನೊಂದು ಹತ್ತು ನಿಮಿಷದಲ್ಲೆ ಮುಗಿಸಿಬಿಡಿ. ಈಗ ಮಾನ್ಯ ಖರ್ಗೆಯವರು ಬರುತ್ತಾರೆ, ಅವರು ಮಾತನಾಡಬೇಕಾಗಿದೆ. ಇಲ್ಲವೆಂದರೆ ತಮಗೆ ಸೋಮವಾರದ ದಿವಸ ಬೇಕಾದರೆ ನೋಡೋಣ ಬಿಡಿ. ಇನ್ನೊಂದು ಸಲ ಅವಕಾಸ ಮಾಡಿಕೊಡೋಣ.

ಶ್ರೀ ಡಿ.ಆರ್. ಪಾಟೀಲ್ : ತಾವು ಈಗ ಮಾನ್ಯ ಖರ್ಗೆಯವರು ಬಂದಮೇಲೆ ಕೊಡುತ್ತೇನೆ ಎಂದರೆ ಈಗ ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಇಲ್ಲ ಸೋಮವಾರ ಮಾತನಾಡುವಿರಂತೆ.

ಶ್ರೀ ಡಿ.ಆರ್. ಪಾಟೀಲ್: ಸೋಮವಾರ ಅವಕಾಶವಾಗುವುದಿಲ್ಲ. ಈಗ ಮಾನ್ಯ ಖರ್ಗೆಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ತಮಗೆ ಸೋಮವಾರಕ್ಕೆ ಅವಕಾಶ ಮಾಡುತ್ತೇವೆ. ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಡಿ.ಆರ್. ಪಾಟೀಲ್ : ಈಗ ಹತ್ತು ನಿಮಿಷ ಅವಕಾಶ ಕೊಡಿ, ಮತ್ತೆ ಸೋಮವಾರ ಅವಕಾಶ ಕೊಡುವಿರಂತೆ

ಉಪಾಧ್ಯಕ್ಷರು : ಇದು ಬಹಳ ಚೌಕಾಸಿ ಆಯಿತು. ಆಯಿತು ಮುಗಿಸಿಬಿಡಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಇವರು ಹೇಗೆ ಹೇಳುತ್ತಾರೆ ನೋಡಿ. ಬಹಳ ನಿಶ್ಯಬ್ಧವಾಗಿದೆ. ಕಾಂಗ್ರಸ್‌ನವರು ಮಾತನಾಡುವ ಸಮಯದಲ್ಲಿ ಯಾರೂ ಇರುವುದಿಲ್ಲ., ಅದರಿಂದ ಅವರನ್ನು ಬಿಡಿ ಎಂದು ಹೇಳುವ ತರಹ ಇದೆ.

ಉಪಾಧ್ಯಕ್ಷರು : ಮಧ್ಯೆ ಯಾರೂ ಪ್ರವೇಶ ಮಾಡಬೇಡಿ. ಅವರು ಮುಗಿಸುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಪ್ರತಿಶತ 20 ರಷ್ಟು ರೈತರಿಗೆ ಹೊಸದಾಗಿ ಸಾಲ ಸಿಗುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಆ ಪ್ರತಿಶತ 20 ಟೋಟಲ್ ಹಿಡುವಳಿದಾರರು ಏನು ಇದ್ದರು, ಮತ್ತೆ 20 ಪರ್ಸೆಂಟ್ ಹೆಚ್ಚಿಗೆ ಮಾಡುವುದು. ನೀವು ಟೋಟಲ್ ಹಿಡುವಳಿದಾರರೊಳಗೆ 20 ಪರ್ಸೆಂಟ್ ರೈತರು ಮೆಂಬರ್ ಆಗುವಂತಹ ವ್ಯವಸ್ಥೆ ಮಾಡುತ್ತೇವೆ. ಅವರಿಗೆ ಹೊಸ ಸಾಲ ಸಿಗುವಂತೆ ವ್ಯವಸ್ಥೆ ಮಾಡುತ್ತೇವೆ ಎಂದರೆ ಅಡ್ಡಿ ಇಲ್ಲ. ಐದು ವರ್ಷದೊಳಗೆ ನಿಮ್ಮ ನೀತಿ ಪ್ರಕಾರ ಅದೆಲ್ಲಾ ಪೂರ್ತಿಯಾಗುತ್ತದೆ. ಅದು ಆಗುವ ಹಾಗೆ ಕ್ರಮವನ್ನು ಕೈಗೊಳ್ಳಿ. ಅದು ಮೂರು ಕೆಲಸ ಇದೆ. ಕಂಪಲ್ಸರಿ ಮೆಂಬರ್‌ಶಿಫ್ ಆಗುವ ಹಾಗೆ ಮಾಡಿ ಒಂದು, ಇಲ್ಲ ಎಲ್ಲಾ ಹಿಡುವಳಿದಾರರನ್ನು ಮತದಾರರನ್ನಾಗಿ ಮಾಡಿ,

ಇಲ್ಲವೆಂದರೆ ಮೀಸಲಾತಿ ತೆಗೆದುಕೊಂಡು ಬನ್ನಿ ಈ ಮೂರು ದಾರಿಯೊಳಗೆ ಯಾವ ದಾರಿ ನಿಮಗೆ ಅನುಕೂಲ ಆಗುತ್ತದೆ ಅದನ್ನು ನೀವು ತೆಗೆದುಕೊಳ್ಳಬಹುದು. ಅದನ್ನು ಮಾಡಿ ಸಹಕಾರಿ ಸಾಲ ಪ್ರತಿಯೊಬ್ಬರಿಗೂ ಸಿಗುವ ಹಾಗೆ ತಾವು ಮಾಡಬೇಕು. ನಾವು ರಾಷ್ಟ್ರೀಕೃತ ಬ್ಯಾಂಕಿಗೆ ಹೋಗಿ ಸಾಲ ತರುವುದು ಅಷ್ಟು ಸರಳವಾಗಿದೆ ಎಂದು ತಿಳಿದುಕೊಳ್ಳಬೇಡಿ. ಅಲ್ಲಿ ವ್ಯವಹಾರ ಬಹಳ ಇರುತ್ತವೆ. ಈ ಸಹಕಾರಿ ಸಂಸ್ಥೆಯಾದರೆ ಅದರ ಮಾಲೀಕರು ಇವರೇ ಇರುತ್ತಾರೆ. ಇವರಿಗೆ ಅಂದುತ್ತಾರೆ ಅವರು. ಆಡಳಿತದಲ್ಲಿರುವವರು ಇವರಿಗೆ ಅಂಜುತ್ತಾರೆ. ಏಕೆಂದರೆ ಇವರ ಓಟಿನ ಮುಖಾಂತರ ಅವರು ಅಧಿಕಾರ ಸ್ಥಾನಕ್ಕೆ ಬರಬೇಕು. ಹಾಗಾಗಿ ಅಲ್ಲಿ ಅಷ್ಟು ತೊಂದರೆಯಾಗುವುದಿಲ್ಲ. ತಾಪತ್ರಯ ಹಾಗೂ ಶೋಷಣೆಯಾಗುವುದಿಲ್ಲ. ಸರಳವಾಗಿ ನಾನು ಇದ್ದಂತಹ ಗ್ರಾಮದಲ್ಲೇ ನನಗೆ ಹಣಕಾಸಿನ ಸೌಲಭ್ಯ ಸಿಗುವಂತಾಗುತ್ತದೆ. ಇದು ಬೇಗ ಸಿಗುವಂತಹ ವ್ಯವಸ್ಥೆ ಬಹಳಷ್ಟು ಜನರಿಗೆ ಸಿಗುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ. ಇನ್ನು ಉತ್ಪಾದನೆ ಮಾಡುವುದಕ್ಕೆ ಮಣ್ಣು ನನ್ನದು, ನೀರಿನದ್ದು ನೀವು ಸಹಾಯ ಮಾಡಿ ಎಂದು ಹೇಳಿದ್ದೇವೆ. ಮತ್ತು ಹಣಕಾಸಿನ ವ್ಯವಸ್ಥೆ ತಾವು ಮಾಡಿ. ಬೆಳೆ ಬಂದಮೇಲೆ ಅದನ್ನು ಮಾರಾಟ ಮಾಡುವಲ್ಲಿ ನಮ್ಮ ಮಾನ್ಯ ದರ್ಶನಾಪುರ್ ಅವರ ಜವಾಬ್ದಾರಿ ಬಹಳಷ್ಟು ಇದೆ. ನಾವು ರೈತರಿಗೆ ಬಹಳಷ್ಟು ಅನುಕೂಲ ಮಾಡಿದ್ದೇವೆ ಎಂದು ನಾವು ನಮ್ಮ ಭುಜ ಚಪ್ಪರಿಸಿಕೊಂಡೆವು, ನೀವೂ ಭುಜ ಚಪ್ಪರಿಸಿಕೊಳ್ಳುವುದಕ್ಕೆ ಹತ್ತೀರಿ. ಆರು ಪರ್ಸೆಂಟ್ ಬಡ್ಡಿ ಹಾಗೆ ನಾವು ಕೊಟ್ಟೆವು ನಾಲ್ಕು ಪರ್ಸೆಂಟ್ ದರದಲ್ಲಿ ನೀವು ಮಾಡಿದ್ದಿರಿ ಎಂದು ನಾಲ್ಕು ಪರ್ಸೆಂಟ್ ನೀವು ಮಾಡಿದರೂ ಕೂಡ ಅದು ನೂರು ಕೋಟಿ ರೂಪಾಯಿ ಕೆಳಗಡೆ ಸಬ್ಸಿಡಿ ಕೊಡುವುದು. ನಾವು ಆರು ಪರ್ಸೆಂಟ್ ಮಾಡಿದಾಗಲೂ 80 ಕೋಟಿ ರೂಪಾಯಿವರೆಗೆ ಇಟ್ಟಿದ್ದೇವೆ. ಇಷ್ಟೇ ಒಂದು ನೂರು ಕೋಟಿ ರೂಪಾಯೊಳಗೆ ಕೊಟ್ಟು ನಾವು ರೈತರಿಗೆ ಬಾರೀ ಉಪಕಾರ ಮಾಡಿದ್ದೇವೆ ಎಂಬುದು ನಮ್ಮೆಲ್ಲರ ಕಲ್ಪನೆ ಆದರೆ ಮಾರುಕಟ್ಟೆ ವ್ಯವಸ್ಥೆಯೊಳಗೆ ಪ್ರತಿವರ್ಷ ರೈತರು 500 ರಿಂದ 600 ಕೋಟಿ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ. ಅದು ಕಾನೂನು ಬಾಹಿರವಾಗಿ, ನಮ್ಮ ಎಪಿಎಂಸಿ ಕಾನೂನಿನೊಳಗೆ ರೈತರಿಂದ ದಲ್ಲಾಳಿ ತೆಗೆದುಕೊಳ್ಳಬಾರದು ಎಂದು ಇದೆ. ಬಹುತೇಕ ಎಲ್ಲಾ ಮಾರ್ಕೆಟ್ ಕಮಿಟಿಯೊಳಗೆ ನೀವು ಹೋಗಿ ಕೇಳಿ ನಾವೆಲ್ಲರೂ ರೈತರು ಎಲ್ಲರೂ ಮಾರಾಟ ಮಾಡಿದ್ದೇವೆ, ನಾವೆಲ್ಲರೂ ದಲ್ಲಾಲಿ ಕೊಟ್ಟು ಬರುತ್ತೇವೆ. ಮೆಣಸಿನಕಾಯಿ ಮಾರಾಟ ಆಗುವ ಮುಂದೆ ಕೊಡುವುದಿಲ್ಲ? ನಾವು ಕೊಡುತ್ತೇವೆ. ದಲ್ಲಾಲಿ, ಏಕೆಂದರೆ ಮಾನ್ಯ ಶಂಕರಮೂರ್ತಿಯವರೆ, ನಮಗೆ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ನಮಗೆ ಸಾಲ ಸಿಗುವುದಿಲ್ಲ. ನಮ್ಮ ಸಹಕಾರಿ ಸಂಸ್ಥೆಯಲ್ಲಿ ನಮಗೆ ಬೇಕಗಿರುವಷ್ಟು ಸಾಲ ಸಿಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮರ್ಯಾದೆ ಸಿಗುವುದಿಲ್ಲ. ಇಲ್ಲಿ ದಲ್ಲಾಲರು ನಮಗೆ ಬೇಕಾದ ಹಾಗೆ ದುಡ್ಡು ಕೊಡುತ್ತಾರೆ. ಅದಕ್ಕೆ ತಿಂಗಳಿಗೆ ಮೂರು ಪರ್ಸೆಂಟ್ ಬಡ್ಡಿ ಹಾಕುತ್ತಾರೆ. ಎಂದರೆ 36 ಪರ್ಸೆಂಟ್ ಬಡ್ಡಿಯನ್ನು ಅವರಿಗೆ ಕೊಡುತ್ತೇವೆ. ಆದರೆ ನಮಗೆ ಬೇಕಾದಂತಹ ಸಮಯದಲ್ಲಿ ದುಡ್ಡು ಸಿಗುತ್ತದೆ. ಅವ ನಮಗೆ ಸಾಲ ಕೊಟ್ಟ ಅಂತೇಳಿ ನಾವು ಯಾವಾಗಲೂ ಕೃತಜ್ಞತಾ ಭಾವದಿಂದ ಬದುಕುವಂತಹ ಜನ ಕೃಷಿಕರು. ನಮಗೆ ಯಾರು ಉಪಕಾರ ಮಾಡಿರುತ್ತಾರೆ ಅವರಿಗೆ ನಾವು ಅಪಕಾರ ಮಾಡಬಾರದು ಎಂದು ಇದ್ದೇವೆ ಮತ್ತೆ ನಮ್ಮ ಮಾಲು ತೆಗೆದುಕೊಂಡು ಹೋಗಿ ಅವನ ಅಂಗಡಿಗೆ ಹಾಕುತ್ತೇವೆ.

ಆಗ ಕಾನೂನು ಬಾಹಿರವಾಗಿ ಅವನು ಈ ದಲ್ಲಾಲಿ ಮುರಿದುಕೊಳ್ಳುತ್ತಾನೆ. ಮಾನ್ಯ ಜಾಲಪ್ಪನವರು ಈ ಕಾನೂನನ್ನು ತಂದಾಗ ಬಹಳ ಕಟ್ಟುನಿಟ್ಟಿನಿಂದ ಜಾರಿಗೆ ಗದಗ್‌ನಲ್ಲಿ ತಂದಿದ್ದೆವು. ಮುಂದೆ ಅಡ್ಮಿನಿಸ್ಟ್ರೇಟರ್ ಬಂದಮೇಲೆ ಮತ್ತೆ ಅದು ಹಳೇ ಪದ್ಧತಿ ಪ್ರಾರಂಭ ಆಗಿಬಿಡ್ತು. ಸುಮಾರು 16 ವರ್ಷ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಿದರು. ಹಾಗಾಗಿ ಹಳೇ ಪದ್ಧತಿ ಬಂತು. ಈಗ ಅದನ್ನು ರೂಢಿ ಮಾಡಿಕೊಂಡು ಬಿಟ್ಟಿದಾರೆ. ಈಗ ರೂಢಿಯಾಗಿರುವುದರಿಂದ ಏನಾಗಿದೆ ಎಂದರೆ ಈ ದಲ್ಲಾಲರು ರೈತರಿಂದ ಗೈರು ಕಾನೂನು ಹಣ ವಸೂಲಿ ಮಾಡುತ್ತಾರೆ ಎಂದೇಳಿ ವ್ಯಾಪಾರಸ್ಥರು ದಲ್ಲಾಳರಿಗೆ ಕೊಡುವ ಹಣ ಏನಿರುತ್ತದೆ ಅದನ್ನು ಕಾನೂನು ಪ್ರಕಾರ ಒಂದು ವಾರದಲ್ಲಿ ಕೊಡಲೇಬೇಕು ಎಂದು ಇದೆ. ಒಂದು ವಾರದೊಳಗೆ ಕಾನೂನು ಪ್ರಕಾರ ಕೊಟ್ಟರೆ 2 ಪರ್ಸೆಂಟ್ ಡಿಸ್ಕೌಂಟ್ ಮಾಡಿಸಿಕೊಳ್ಳುತ್ತಾರೆ. ಏಕೆಂದರೆ ರೈತರಿಂದ ನೀವು ಸುಲಿದೇ ಸುಲಿಯುತ್ತೀರಲ್ಲಾ ನನ್ನದು ಪಾಲಿರಲ್ ಅದರಲ್ಲೆ ಎಂದು ಎರಡು ಪರ್ಸೆಂಟ್ ಡಿಸ್ಕೌಂಟ್ ಮಾಡುತ್ತಾರೆ. ಇದನ್ನು ಪೂರ್ತಿಯಾಗಿ ನಿಲ್ಲಿಸಬೇಕೆಂದು ಹೇಳಿ ಮಾನ್ಯ ಜೆ.ಹೆಚ್. ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಕಾನೂನನ್ನು ತಂದೆವು. ಆಗ ಮಾನ್ಯ ಎಸ್.ಎಸ್. ಪಾಟೀಲರು ಮಂತ್ರಿಗಳಾಗಿದ್ದರು. ಈಗ ದಲ್ಲಾಲ ರೈತರಿಗೆ ಪೇಮೆಂಟ್‌ಮಾಡುವುದಕ್ಕೆ ಬಿಲ್ ಮಾಡುತ್ತಾನೆ, ಆ ಹಣವನ್ನು ರೈತನ ಕೈಲಿ ಕೊಡಬಾರದು. ಅದು ಡಿ. ಆರ್. ಪಾಟೀಲ್‌ಗೆ ಕೊಡುವಂತಹ ದುಡ್ಡನ್ನು ಅವರ ಕೈಯಲ್ಲಿ ಕೊಡುವ ಬದಲು ಎಪಿಎಂಸಿಗೆ ಕೊಡಲಿ ಎಂದು ನಾವು ಹೇಳಿದ್ದೆವು. ಎಪಿಎಂಸಿ ಡಿ.ಆರ್. ಪಾಟೀಲ್‌ಗೆ ಕೊಡಲೆ ಎಂದು ಮಾಡಿತ್ತು. ಏಕೆಂದರೆ ದಲ್ಲಾಲಿ ಏನು ಮಾಡುತ್ತಾನೆ ಎಂದರೆ ನನ್ನ ಕಡೆಯಿಂದ ನೂರು ರೂಪಾಯಿಗೆ ಸಹಿ ಮಾಡಿಸಿಕೊಳ್ಳುತ್ತಾನೆ ನೂರು ರೂಪಾಯಿ ಮುಟ್ಟಿದವು ಎಂದು. ಆದರೆ ನನಗೆ ಕೊಡುವುದು 96 ಅಥವಾ 97 ಅಥವಾ 98 ರೂಪಾಯಿ ಕೊಡುತ್ತಾನೆ. ಎರಡು ಪರ್ಸೆಂಟ್ ಮಿನಿಮಂ ಮುರಿದು ಕೊಳ್ಳುತ್ತಾನೆ. 2 ಪರ್ಸೆಂಟ್‌ನಿಂದ ಹಿಡಿದು 14–15 ಪರ್ಸೆಂಟ್‌ವರೆಗೆ ಮುರಿದುಕೊಳ್ಳುತ್ತಾನೆ. ರಾಣಿಬೆನ್ನೂರು ಮಾರ್ಕೆಟ್‌ನಲ್ಲಿ ನಾನು ಒಮ್ಮೆ ಹೋಗಿ ನೋಡಿದ್ದೆ, ನಾನು ಶಾಸಕನಾಗಿ ಒಂದು ಸಮಿತಿ ವತಿಯಿಂದ ಹೋಗಿ ನೋಡಿದಾಗ ಹತ್ತಿ ಪಟ್ಟೆ ಮಾಡುವ ಮುಂದೆ 20 ಪರ್ಸೆಂಟ್ ಮುರಿದುಕೊಂಡರು. ಅದು ಅವತ್ತೇ ದುಡ್ಡು ಬೇಕೆಂದರೆ.

(ಗೊಂದಲ)

ಶ್ರೀ ಹಂಪನ ಗೌಡ ಬಾದರ್ಲಿ: ಇವರು ಮಾತನಾಡುವ ಹಾಗೆ ಇಲ್ಲ, ಮಾತನಾಡುವವರಿಗೂ ಬಿಡುವುದಿಲ್ಲ ಎಂದರೆ ಅರ್ಥವೇನು? ಅವರು ಒಳ್ಳೆಯದನ್ನು ಹೇಳುತ್ತಿದ್ದಾರೆ, ಅವರಿಗೆ ಮಾತನಾಡುವುದಕ್ಕೆ ಅಲೋ ಮಾಡಿ.

ಶ್ರೀ ಜಿ. ಶಿವಣ್ಣ: ಅವರು 20, 22 ಪರ್ಸೆಂಟ್ ಎಂದು ಹೇಳಿದರಲ್ಲಾ, ಎಲ್ಲಿದೆ? ಅವರು ಯಾವಾಗಿನದೋ ಹೇಳುತ್ತಾರೆ

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಶಿವಣ್ಣನವರು ಹೇಳಿದ್ದು, ನೀವು ಅಧಿಕಾರದಲ್ಲಿ ಇದ್ದಾಗ ನಿಲ್ಲಿಸಬಹುದಾಗಿತ್ತು, ನೀವು ಹಳೆಯ ಕತೆಯನ್ನು ಹೇಳುತ್ತಿದ್ದೀರೆಂದು ಹೇಳುತ್ತಿದ್ದಾರೆ. ನಿಮ್ಮ ಅಧಿಕಾರದಲ್ಲಿ ಇದ್ದಾಗ ನಿಲ್ಲಿಸಬಹುದಾಗಿತ್ತು, ಆಗ ನಿಲ್ಲಿಸದೇ ಈಗ ಹಳೆಯ ಕತೆಯನ್ನು ಹೇಳುತ್ತಿದ್ದೀರೆಂದು ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಶಿವಣ್ಣನವರೇ, ನೀವು ಹೇಳಿ, ನಿಮ್ಮಲ್ಲಿ ದಲ್ಲಾಲರು ರೈತರಿಂದ ದಲ್ಲಾಲಿಯನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ?

ಶ್ರೀ ಶಿವಣ್ಣ: ರಾಣೆಬೆನ್ನೂರಿನಲ್ಲಿ ಮಾತ್ರ ಅಲ್ಲ, ಇದು ಒಂದು ಮಾರುಕಟ್ಟೆ ಅಲ್ಲ, ಎಲ್ಲಾ ಮಾರುಕಟ್ಟೆಯಲ್ಲೂ ತೆಗೆದುಕೊಳ್ಳುತ್ತಾರೆ, ಇದಕ್ಕೆ ತಾವು ಏನು ಹೇಳುತ್ತೀರಿ? ಹೌದು, ನಾನು ಇಲ್ಲವೆಂದು ಹೇಳುವುದಿಲ್ಲ, ಹಾಗಾದರೆ ನಿಮ್ಮ ಮಾರುಕಟ್ಟೆಯನ್ನು ಮೊದಲು ಬಂದ್ ಮಾಡಿ, ಆಮೇಲೆ ನಮ್ಮ ಮಾರುಕಟ್ಟೆಯನ್ನು ಬಂದ್ ಮಾಡಿಸೋಣ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಶಿವಣ್ಣನವರೇ, ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ನಾನು ಅದನ್ನೇ ಹೇಳುತ್ತೇನೆ. ನಮ್ಮ ಮಾರುಕಟ್ಟೆತಲ್ಲಿ ಬಂದ್ ಮಾಡುವುದಕ್ಕೆ ಹೋದರೆ ನಮ್ಮ ದಲ್ಲಾಲರು ಮತ್ತು ವ್ಯಾಪಾರಸ್ಥರು ಕೂಡಿ ರೈತರಿಂದ ವಸೂಲಾದದ್ದನ್ನು ಏನು ಹಂಚಿಕೊಳ್ಳುತ್ತಾರಲ್ಲಾ ಅವರ ಟ್ರೇಡ್ ಶಿಫ್ಟ್ ಮಾಡುತ್ತಾರೆ. ವ್ಯಾಪಾರಸ್ಥರು ನಮ್ಮ ಮಾರುಕಟ್ಟೆಗೆ ಖರೀದಿಗೆ ಬರುವುದಿಲ್ಲ; ಇಲ್ಲಿ ಮಗ್ಗುಲ ಮಾರುಕಟ್ಟೆ ಇರುತ್ತದಲ್ಲಾ; ಅದಕ್ಕೆ ಇಡೀ ರಾಜ್ಯದಾದ್ಯಂತ ಈ ವ್ಯವಸ್ಥೆ ಬರಬೇಕು. ನಾವು ಏನೂ ಕೇಳುವುದಿಲ್ಲ, ಇದು ಕಾನೂನಿನಲ್ಲಿ ನೀವು ಏನು ಪ್ರವಿಜನ್ ಮಾಡಿದ್ದೀರಿ, ಕಾನೂನನ್ನು ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿಸಿ, ಕಾನೂನಿನಲ್ಲಿ ಏನು ಇದೆಯೆಂದರೆ ರೈತ ಮಾರಾಟ ಮಾಡಿದಂತಹ ಸಮಯದಿಂದ 24 ಗಂಟೆಯೊಳಗೆ ರೈತರಿಗೆ ದಲಾಲರು ಪಟ್ಟಿಯನ್ನು ಕೊಡಬೇಕೆಂದು ಇದೆ. ದಲ್ಲಲರಿಗೆ ವ್ಯಾಪಾರಸ್ತರು 7 ದಿವಸದೊಳಗೆ ಪಟ್ಟಿ ಕೊಡಬೇಕೆಂದು ಕಾನೂನು ಇದೆ. ಈ ಕಾನೂನನ್ನು ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿ. ಆದರೆ ಈ ವ್ಯವಸ್ಥೆಯಂತೆ ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡುತ್ತಿಲ್ಲ. ನಾನು ಕಳೆದ 8 ವರ್ಷಗಳಿಂದ ಇದನ್ನು ಬದಲಾವಣೆ ಮಾಡುವಂಥಾದ್ದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ಆ ಪ್ರಯತ್ನಕ್ಕೆ ಫಲ ನನಗೆ ಸಿಕ್ಕಿಲ್ಲ. ನಾನು ವಿಷಯ ಸಮಿತಿಯ ಅಧ್ಯಕ್ಷನಾಗಿ ಈ ಬದಲಾವಣೆಯನ್ನು ಕಾನೂನಿನಲ್ಲಿ ತರಬೇಕಂದು ಹೇಳಿ., ಒತ್ತಾಯವನ್ನು ಮಾಡಿದ್ದೇನೆ. ಇದಕ್ಕೆ ಮುಂದೆ ಕಾನೂನು ಬಂತು ಈ ಕಾನೂನು ಬಂದು 7ನೇ ವರ್ಷದಲ್ಲಿ ಇದೆ. ಹಿಂದೆ ಮಾನ್ಯ ಜೆ.ಹೆಚ್ ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ದಿವಂಗತ ನಾಗಪ್ಪನವರು ಮಂತ್ರಿಗಳಾಗಿ ಇದ್ದಾಗ, ಈ ಕಾನೂನು ಪಾಸ್ ಆಯಿತು.

ಡಾ: ಎಂ.ಸಿ. ಸುಧಾಕರರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ಡಿ.ಆರ್. ಪಾಟೀಲ್‌ರವರು ಹೇಳಿದಹಾಗೆ, ಮತ್ತೆ ಮತ್ತೊಬ್ಬ ಸದಸ್ಯರು ನೀವ್ಯಾಕೆ ಮಾಡಿಲ್ಲವೆಂದು ಹೇಳಿದರು. ಈ ರೀತಿಯಾದಂತಹ ವ್ಯವಸ್ಥೆ ಬಹಳಷ್ಟು ವರ್ಷಗಳಿಂದ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ನಡೆದುಕೊಂಡು ಬರುತ್ತಿದೆ. ಉದಾಹರಣೆಗೆ ಹೇಳುವುದಾದರೆ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಬಗ್ಗೆ ಹೇಳಬೇಕೆಂದರೆ ಟೊಮೋಟೊ ಒಂದೊಂದು ದಿವಸ ಸುಮಾರು 250, 300 ಲೋಡ್‌ಗಳು ಬರುವಂಥ ಪರಿಸ್ಥಿತಿ ಇದೆ. ರೈತರು ಹಣವನ್ನು ಏನು ಎಜೆಂಟರ ಹತ್ತಿರ ಪಡೆದಿರುತ್ತಾರೆ, ಆ ಟೊಮೋಟೊ ಹಣ್ಣನ್ನು ಬೆಳೆಯುವುದಕ್ಕೆ, ಪ್ರತಿಯೊಬ್ಬ ರೈತರು ಹಣ್ಣನ್ನು ತಂದಾಗ ಅದು 400, 500 ಬಾಕ್ಸ್‌ಗಳನ್ನು ತಂದಾಗ, ಅವರು ಅದರಲ್ಲಿ ಒಂದು ಸ್ಯಾಂಪಲ್‌ಗೆ ಎಂದು ತೆಗೆದು ಇಟ್ಟುಕೊಳ್ಳುತ್ತಾರೆ ಒಬ್ಬೊಬ್ಬ ಏಜೆಂಟ್‌ಗಳು ಒಂದೊಂದು ದಿವಸ ಸುಮಾರು 300, 400 ಬಾಕ್ಸ್‌ಗಳನ್ನು

ತೆಗೆದು ಇಟ್ಟುಕೊಳ್ಳುವಂತಹ ಸಂದರ್ಭಗಳು ಇವೆ. ಒಂದೊಂದು ದಿವಸ ಅಲ್ಲಿ ಒಂದೊಂದು ಬಾಕ್ಸ್‌ಗೆ 150, 200ರೂಪಾಯಿಗಳು ಎಂದು ಟೊಮೋಟೊ ಬೆಲೆ ಬಂದಾಗ ಅಲ್ಲಿ ಎಷ್ಟು ಹಣ ಆ ದಳ್ಳಾಳಿಗಳು ಪಡೆಯುತ್ತಾರೆಂಬುದನ್ನು ತಾವು ಊಹಿಸಬಹುದು. ಇಲ್ಲಿ ಒಂದು ದೊಡ್ಡ ಜಾಲವೇ ಇದೆ, ಇಲ್ಲಿ ಅಧಿಕಾರಿಗಳು ಹೆದರುತ್ತಾರೆ, ಕಾನೂನನ್ನು ಪಾಲನೆ ಮಾಡಲು ಇವರು ಹೆದರುತ್ತಾರೆ. ಅಲ್ಲಿ ಹಮಾಲಿಗರ ಸಂಘ ಇದೆ, ಅವರು ಅಲ್ಲಿ ಒತ್ತಡವನ್ನು ತರುತ್ತಾರೆ. ಈ ರೀತಿಯಾಗಿ ಅಲ್ಲಿ ವ್ಯವಸ್ಥೆ ಬಹಳ ಕೆಟ್ಟು ಹೋಗಿದೆ ಆದುದರಿಂದ ದಯವಿಟ್ಟು ಸನ್ಮಾನ್ಯ ಸಚಿವರು ಇದನ್ನು ನಿಗ್ರಹಿಸಬೇಕು, ಇದನ್ನು ಸರಿಯಾದ ದಾರಿಯಲ್ಲಿ ತರಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾರುಕಟ್ಟೆಯಲ್ಲಿ ನಾವು ವಿಪುಲ ಪ್ರಯತ್ನಗಳನ್ನು ಮಾಡಿದ್ದೇವೆ. ಟ್ರೇಡ್ ಶಿಫ್ಟ್ ಆಗುತ್ತದೆಂಬ ಲಕ್ಷಣ ಕಂಡಾಗ ನಾವು ಕೈ ಚೆಲ್ಲಿ ಕುಳಿತೆವು. ನಾವು ಕೈ ಚೆಲ್ಲಿ ಕುಳಿತಮೇಲೆ ಈ ಕಾನೂನನ್ನು ಬದಲಾವಣೆ ತರುವ ಪ್ರಯತ್ನನ್ನು ಮಾಡಿದೆವು. ಮಾನ್ಯ ಎಸ್.ಎಸ್. ಪಾಟೀಲ್‌ರವರು ಆ ದಿವಸ ಹಾಜರು ಇದ್ದರು, ಎಂದು ಕಾಣಿಸುತ್ತದೆ, ಇದು ಮೊದಲನೆಯ ದಿವಸ ಇಂಟ್ರಡ್ಯೂಸ್ ಆಗುವಾಗ ಅಜೆಂಡಾದಲ್ಲಿ ಬಂದಿತ್ತು. ನಾವು ಮಾನ್ಯ ನಾಗಪ್ಪನವರಿಗೂ ಹೇಳಿದೆವು, ಆಗ ನಾವು ವಿರೋಧಪಕ್ಷದಲ್ಲಿ ಇದ್ದೆವು.

without discussion, we accept this. ನೀವು ಮಾಡಿ ಎಂದು ಹೇಳಿದರು. ಇದನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಅವಕಾಶವನ್ನು ಕೊಡಲಿಲ್ಲ. ಆಗ ರೂಲಿಂಗ್ ಪಾರ್ಟಿಯವರೇ ವಿರೋಧ ಮಾಡಿದರು. ಆಗ ಮಾನ್ಯ ಜೆ.ಹೆಚ್. ಪಟೇಲ್‌ರವರು ದೆಹಲಿಗೋ ಬಾಂಬೆಗೋ ಹೋಗಿದ್ದರು. ಅವರು ಬಂದ ಕೂಡಲೇ ಮತ್ತೆ ನಾವು ಈ ವಿಷಯವನ್ನು ಅವರ ಬಳಿ ತೆಗೆದುಕೊಂಡು ಹೋದೆವು. ಆಗ ಅವರು ಇದು ಯೋಗ್ಯವಿದೆಯಲ್ಲಾ ಮುಂದಿನ ಸದನದಲ್ಲಿ ಇದನ್ನು ಇಂಟ್ರಡ್ಯೂಸ್ ಮಾಡಿಸೋಣವೆಂದು ಹೇಳಿದರು. ಮುಂದಿನ ಸದನದಲ್ಲಿ ಕಾನೂನು ಮಾಡಲಾಯಿತು. ಇದು ಕಾನೂನಾಗಿ ಇವತ್ತಿಗೆ ಏಳು ವರ್ಷಗಳು ಆಯಿತು. ಆದು ನಾನು ಪ್ರತಿ ಸದನದಲ್ಲೂ ಈ ಬಗ್ಗೆ ಪ್ರಶ್ನೆಯನ್ನು ಕೇಳುತ್ತಾ ಇದ್ದೆ. ಪ್ರತಿ ಸಾರಿಯೂ ಇದನ್ನು ಇನ್ನು 6 ತಿಂಗಳೊಳಗೆ ಇಂಪ್ಲಿಮೆಂಟ್ ಮಾಡಿ ಎಂದು ಕೇಳುತ್ತಿದ್ದೆ. ಇದು ಇಂಪ್ಲಿಮೆಂಟ್ ಆಗಬೇಕಾದರೆ ಸ್ವಲ್ಪ ಟೈಮ್ ಬೇಕಾಗುತ್ತದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವು ವ್ಯವಸ್ಥೆಯನ್ನು ಅದಕ್ಕೆ ಸಿದ್ಧಗೊಳಿಸಬೇಕಾಗುತ್ತದೆ. ಅದಕ್ಕೆ 6 ತಿಂಗಳು ಟೈಮ್ ಬೇಕಾಗುತ್ತದೆ. ಅದಕ್ಕೆ ಡೇಟನ್ನು ನೋಟಿಫೈ ಮಾಡಿ. ಈಗ ನಾವು ಮಾರ್ಚ್ ತಿಂಗಳಲ್ಲಿ ಇದ್ದೇವೆ, ಸೆಪ್ಟೆಂಬರ್ 30ನೇ ತಾರೀಖು ಇಲ್ಲವೆಂದರೆ ನವೆಂಬರ್ 1ನೇ ತಾರೀಖು ಎಂದು ಮಾಡಿ. ನಾವು ಸುವರ್ಣ ಕರ್ನಾಟಕದ ಆಚರಣೆಯನ್ನು ತರುವವರಿದ್ದೇವೆ. ಈ ಕಾನೂನನ್ನು ನವೆಂಬರ್ 1ನೇ ತಾರೀಖಿನಿಂದ ಜಾರಿಗೊಳಿಸುತ್ತೇವೆಂದು ಮಾಡಿದರೆ, ದಲ್ಲಾಲರು ಏನು ರೈತರಿಂದ ಕಾನೂನು ಬಾಹಿರವಾಗಿ ದುಡ್ಡನ್ನು ತೆಗೆದುಕೊಳ್ಳುತ್ತಿದ್ದಾರೆ ಅದು ನಿಲ್ಲುತ್ತದೆ. ದಲ್ಲಾಲರಿಂದ ವ್ಯಾಪಾರಸ್ಥರು ಏನು ದುಡ್ಡನ್ನು ತೆಗೆದುಕೊಳ್ಳುತ್ತಿದ್ದಾರೆ. ಅದು ನಿಲ್ಲುತ್ತದೆ. ಕಾನೂನು ಬದ್ಧವಾಗಿ ಈ ಎಲ್ಲಾ ವ್ಯವಸ್ಥೆಗಳು ನಡೆಯುತ್ತವೆ. ಪ್ರತಿವರ್ಷ ಸುಮಾರು 500 ರಿಂದ 600 ಕೋಟಿ ರೂಪಾಯಿಗಳ ನಾವು ರೈತರಿಗೆ

ಉಳಿತಾಯವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ. ನಾವು 60 ಕೋಟಿ 80 ಕೋಟಿ ರೂಪಾಯಿಗಳನ್ನು ಸಾಲದ ಸಬ್ಸಿಡಿಯನ್ನು ಕೊಟ್ಟವೆಂದರೆ ನಾವು ಬಾರಿ ದೊಡ್ಡ ಸಾಧನೆಯನ್ನು ಮಾಡಿದ್ದವೆ. ರೈತರ ಹಿತರಕ್ಷಣೆಯನ್ನು ಮಾಡಿದ್ದೇವೆಂದು ನಾವು ಹೇಳಿಕೊಳ್ಳುತ್ತೇವೆ. ಇವರಿಗೆ ನಾವು ಪ್ರತಿವರ್ಷ 500 ರಿಂದ 600ಕೋಟಿ ರೂಪಾಯಿಗಳನ್ನು ಉಳಿಸಿಕೊಟ್ಟರೆ, ಎಷ್ಟು ಅನುಕೂಲವಾಗುತ್ತದೆಂಬುದನ್ನು ತಾವು ಗಮನದಲ್ಲಿಇಟ್ಟುಕೊಂಡು ತಾವು ದಯವಿಟ್ಟು ಈ ಕೆಲಸವನ್ನು ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಈ ಕಾನೂನು ಜಾರಿಯಲ್ಲಿ ಇದೆ, ರೈತರಿಂದ ಹಣವನ್ನು ತೆಗೆದುಕೊಳ್ಳಬಾರದೆಂದು ಕಾನೂನು ಇದೆ. ಅದನ್ನು ಎ.ಪಿ.ಎಂ.ಸಿ.ಯವರು ಜಾರಿಗೆ ತರಬೇಕು. ಅದನ್ನು ನೀವು ಜಾರಿಗೆ ತರುತ್ತಾ ಇಲ್ಲ. ಇದು ಬರೀ ಸರ್ಕಾರಕ್ಕೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಡಿ.ಆರ್. ಪಾಟೀಲ್ : ಇದನ್ನು ಒಂದೇ ಎಪಿಎಂಸಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಹೇಳುವುದು ಎಲ್ಲಾ ಎಪಿಎಂಸಿಯವರು ಮಾಡಬೇಕು, ಎಪಿಎಂಸಿ ಚೇರ್ಮನ್ ಎಲ್ಲರೂ ಕೂಡಿ ಮಾಡಬೇಕು.

ಶ್ರೀ ಡಿ.ಆರ್.ಪಾಟೀಲ್ : ಎಲ್ಲಾ ಎಪಿಎಂಸಿಯಲ್ಲಿ ಏಕ ಕಾಲಕ್ಕೆ ಇದು ಆಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಆಗಬೇಕು, ಇದು ಜಾರಿಯಲ್ಲಿ ಇದೆ.

ಶ್ರೀ ಡಿ.ಆರ್. ಪಾಟೀಲ್ : ಇಲ್ಲಿಯವರೆಗೂ ನಿಮ್ಮ ಡೈರೆಕ್ಟರ್‌ಗಳು, ನಿಮ್ಮ ಇಲಾಖೆಯ ಅಧಿಕಾರಿಗಳು ನಾವು ಪ್ರಶ್ನೆಯನ್ನು ಕೇಳಿದಾಗಲೆಲ್ಲಾ, ಉತ್ತರ ಏನು ಕೊಡುತ್ತಿದ್ದರೆಂದರೆ. ಕಾನೂನು ಬಾಹಿರವಾಗಿ ಯಾವ ಚಟುವಟಿಕೆಗಳು ಮಾರುಕಟ್ಟೆಯಲ್ಲಿ ನಡೆಯುತ್ತಿಲ್ಲವೆಂದು ನಿಮ್ಮ ಕಡೆಯಿಂದ ಉತ್ತರವನ್ನು ಕೊಡಿಸುತ್ತಿದ್ದರು. ಅದಕ್ಕೆ ನಾವು ಭರವಸೆಯ ಸಮಿತಿಯಿಂದ ನಾಲ್ಕು ಡಿವಿಜನ್‌ಗಳಲ್ಲಿ ಮೀಟಿಂಗ್ ಅನ್ನು ನಿಮ್ಮ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಮಾಡಿದ್ದೇವೆ. ಅಲ್ಲಿ ಎಲ್ಲಾ ದಲ್ಲಾಲ ಬಾಂಧವರು, ವ್ಯಾಪಾರಸ್ಥರು ನಾವು ಕಾನೂನು ಬಾಹಿರವಾಗಿ ಹಣವನ್ನು ತೆಗೆದುಕೊಳ್ಳುತ್ತಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಇದೆಲ್ಲಾ ವಿಡಿಯೋದಲ್ಲಿ ಕ್ಯಾಪ್ಚರ್ ಆಗಿದೆ. ಇನ್ನು ಮೇಲೆ ನಾವು ಪ್ರಶ್ನೆಯನ್ನು ಕೇಳಿದರೆ, ಸುಳ್ಳು ಉತ್ತರವನ್ನು ಕೊಡುವುದಕ್ಕೆ ಇಲಾಖೆಯವರಿಗೆ ಆಗುವುದಿಲ್ಲ. ನಿಮ್ಮ ಇಲಾಖೆಯವರು ಸರಿಯಾದಂತಹ ಉತ್ತರವನ್ನು ಕೊಡಬೇಕಾಗುತ್ತದೆ. ಇಲ್ಲಿಯವರೆಗೂ ಅವರು ನಮ್ಮನ್ನು ನಂಬುತ್ತಿದ್ದರೋ ಇಲ್ಲವೊ ಗೊತ್ತಿಲ್ಲ. ಅವರು ಸ್ವತಃ ನಿಮ್ಮ ಡೈರೆಕ್ಟರ್ ನಿಮ್ಮ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಬಂದಾಗ, ಓಪನ್ ಮೀಟಿಂಗ್‌ನಲ್ಲಿ ನಮ್ಮ ಭರವಸೆ ಸಮಿತಿಯ ಸಭೆಯ ಮುಂದೆ ಎಲ್ಲಾ ದಲ್ಲಾಲ ಬಾಂಧವರು ಒಪ್ಪಿಕೊಂಡಿದ್ದಾರೆ. ನಾವು ರೈತರಿಂದ ಗೈರು ಕಾನೂನು ನಾವು ತೆಗೆದುಕೊಳ್ಳುತ್ತೇವೆ, ನೀವು ವ್ಯಾಪರಸ್ಥರಿಂದ 7ದಿವಸದೊಳಗೆ ಪೇಮೆಂಟ್ ಅನ್ನು ಕಾನೂನು ಪ್ರಕಾರ ಏನು ಇದೆಯೋ ಅದನ್ನು ಕೊಡಿಸಿ, ಎಂದು ಎಪಿಎಂಸಿಯವರು ಆ ಜವಾಬ್ದಾರಿಯನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಾವು ರೈತರಿಂದ ವಸೂಲಿ ಮಡುವುದಿಲ್ಲವೆಂದು ಅವರು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ. ಅದಕ್ಕೆ ದಯವಿಟ್ಟು ಇದು ಆಗಬೇಕಾದರೆ ಈ ಕಾನೂನು ಇಂಪ್ಲಿಮೆಂಟ್ ಆಗಬೇಕು. ಕಾನೂನನ್ನು ಇಂಪ್ಲಿಮೆಂಟ್

ಮಾಡುತ್ತೇವೆಂದು ನೀವು ನೋಟಿಫೈ ಮಾಡಿ, ಅವರೇ ಬರುತ್ತಾರೆ,ನಾವೇ ಮುಂದೆ ಬಂದು ಕಾನೂನು ಪ್ರಕಾರ ನಡೆಸುಕೊಳ್ಳುತ್ತೇವೆಂದು ಹೇಳುತ್ತಾರೆ. ಆಗ ನಾವು ಕೆಲಸವನ್ನು ಸರಿಯಾಗಿ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ತಾವು ವಿಶೇಷವಾಗಿ ಇದಕ್ಕೆ ಮುತುವರ್ಜಿಯನ್ನು ವಹಿಸಬೇಕು. ನೀವು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದೀರಿ, ಕೂಡಲೇ ಎಲ್ಲಾ ಚೇರ್ಮನ್‌ಗಳು, ಉಪಾಧ್ಯಕ್ಷರು, ಕಾರ್ಯದರ್ಶಿಗಳ ಸಭೆಯನ್ನು ರಾಜ್ಯ ಮಟ್ಟದಲ್ಲಿ ತಾವು ಮಾಡಿ ನಾವು ನೀವು ಈ ಸಮಸ್ಯೆಯನ್ನು ಇಲಾಖೆಯ ಅಧಿಖಾರಿಗಳೇ ಅಧಿಕಾರಿಗಳು ಕುಳಿತುಕೊಂಡು ಹೇಗೆ ಬಗೆಹರಿಸಬೇಕೆಂಬ ಬಗ್ಗೆ ಒಂದು ಸೂಕ್ತವಾದಂತಹ ನಿರ್ಣಯಕ್ಕೆ ಬರೋಣ. ಇದರಿಂದ ಬಹಳಷ್ಟು ಅನುಕೂಲವಾಗುತ್ತದೆಂಬ ಮಾತನ್ನು ನಾನು ತಮಗೆ ಹೇಳಬಯಸುತ್ತೇನೆ. ನನಗೆ ಒಂದು ಸಂತೋಷ ಏನೆಂದರೆ, ಬಿಜೆಪಿಯವರಿಗೆ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಗ್ರಾಮ ಪಂಚಾಯತ್ ಒಳಗೆ ಅಷ್ಟು ಯಶಸ್ವಿಯಾಗಲಿಲ್ಲ. ನಾವು ಒಂದಿಷ್ಟು ಜಿಲ್ಲೆಯಲ್ಲಿ ಚೆನ್ನಾಗಿ ಆರಿಸಿ ಬಂದಿದ್ದೇವೆ. ಒಂದಿಷ್ಟು ಜಿಲ್ಲೆಯೊಳಗೆ ಜೆಡಿಎಸ್‌ನವರು ಆರಿಸಿ ಬಂದಿದ್ದಾರೆ, ಬಿಜೆಪಿಯವರು ಒಂದು ಜಿಲ್ಲೆಯಲ್ಲಿ ಬಂದಿರಬಹುದು. ಗ್ರಾಮ ಪಂಚಾಯತ್ ಮಟ್ಟದಲ್ಲಿ ನಿಮ್ಮ ಪರ್ಫಾರ್ಮೆನ್ಸ್ ಬಹಳ ಜಡವಿದೆ. ಹೀಗಾಗಿ ನೀವು ಸಂಸ್ಥೆಗೆ ಬಿಡುಗಡೆ ಮಾಡುವಂತಹ ಅನುದಾನದಲ್ಲಿ ಮೊಟಕು ಮಾಡುತ್ತೀರೋ ಎಂಬ ಹೆದರಿಕೆ ಇತ್ತು.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮಾನ್ಯ ಉಪಾಧ್ಯಕ್ಷರೆ, 2004ರಲ್ಲಿ ಎಷ್ಟು ಜಿಲ್ಲಾ ಪಂಚಾಯತ್ ಸದಸ್ಯರು ಇದ್ದರು, 1999ರಲ್ಲಿ ಎಷ್ಟು, ಜಿಲ್ಲಾ ಪಂಚಾಯತ್ ಸದಸ್ಯರು ಇದ್ದರು, ತಾಲ್ಲೂಕು ಪಂಚಾಯತ್ ಸದಸ್ಯರು ಎಷ್ಟು ಇದ್ದರು, ಆಗಿನ ಅಂಕಿ ಎಷ್ಟು ಇತ್ತು, ಈಗಿನ ಅಂಕಿ ಎಷ್ಟು ಇದೆಯೆಂದನ್ನು ತಾವು ದಯಮಾಡಿ ಹೇಳಬೇಕು.

ಉಪಾಧ್ಯಕ್ಷರು: ಮಾನ್ಯ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡರು ಮೊದಲು ಇಲ್ಲಿ ಇದ್ದರು, ಬಹಳ ಹತ್ತಿರದಲ್ಲಿ ಇದ್ದರು, ಅವರ ಮಾತುಗಳು ಬಹಳ ಚೆನ್ನಾಗಿ ಕೇಳಿಸುತ್ತಾ ಇತ್ತು. ಈಗ ಅವರು ಬಹಳ ದೂರ ಆಗಿಬಿಟ್ಟರು.

ಶ್ರೀ ಡಿ.ಆರ್. ಪಾಟೀಲ್ : ಈಗ ಹಿಂದಿನ ಜಿಲ್ಲಾಪಂಚಾಯತ್ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ನೀವು ಹೇಳಿದರೆ ನಿಮ್ಮ ಪರ್ಫಾರ್ಮೆನ್ಸ್ ಇಂಪ್ರೂವ್ ಆಗಿದೆ. ಆದರೆ ಮೊನ್ನೆ ಅಸೆಂಬ್ಲಿ ಚುನಾವಣೆಯಲ್ಲಿ ನೀವು ಏನು ಬಹಳಷ್ಟು ಸೀಟುಗಳನ್ನು ಗೆದ್ದುಕೊಂಡು ಬಂದಿರಲ್ಲಾ, ಆ ಅಸೆಂಬ್ಲಿ ಸೆಗ್‌ಮೆಂಟ್‌ನಲ್ಲಿ ನಿಮ್ಮ ಪರ್ಫಾರ್ಮೆನ್ಸ್ ನೋಡಿದರೆ ಸರಿಯಾಗಿಲ್ಲ, ಅದು ಡಿಸಪಾಯಿಂಟ್‌ಂಗ್ ಇದೆ. ಅದಕ್ಕೆ ನಮಗೆ ಒಂದು ಹೆದರಿಕೆ ಇತ್ತು, ಆದರೆ ಆ ಬಜೆಟ್ ಅನ್ನು ನೋಡಿದಾಗ ಮಾತ್ರ ನಮಗೆ ಬಹಳ ಸಂತೋಷವಾಯಿತು. ನೀವು ಅದನ್ನು ಏನು ಮೊಟಕುಗೊಳಿಸಿಲ್ಲ ಅಷ್ಟೇ ಅಲ್ಲ, ಪ್ಲಾನ್ ಫಂಡ್ ಅನ್ನು ಸುಮಾರು 561ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಡಿ.ಆರ್. ಪಾಟೀಲ್‌ರೇ ಒಂದು ನಿಮಿಷ. ರಾಜ್ಯದಲ್ಲಿ ಭಾರತೀಯ ಜನತ ಪಕ್ಷಕ್ಕೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಸರಿಯಾಗಿ ಆಗಿಲ್ಲ ಎಂದು ಹೇಳಿದಿರಿ; ಹೋದ ಸಲ ಗದಗ್ ಜಿಲ್ಲೆಯಲ್ಲಿ, ಕಾಂಗ್ರೆಸ್ಸಿನ ಜಿಲ್ಲಾ ಪಂಚಾಯತ್ ಸದಸ್ಯರು ಎಷ್ಟು ಇದ್ದರು, ಈ ಸಲ ಎಷ್ಟು ಇದ್ದಾರೆ ಎಂದು ನೀವು ಲೆಕ್ಕ ಮಾಡಿದರೆ ಅದರಲ್ಲೇ ಗೊತ್ತಾಗುತ್ತದೆ.

ಉಪಾಧ್ಯಕ್ಷರು: ಈಗ ಆ ಸಬ್ಜೆಕ್ಟ್‌ಗೆ ಹೋಗುವುದು ಬೇಡ. ನೀವು ಬೇಗ ಮಾತನಾಡಿ ಮುಗಿಸಿ ಬಿಡಿ. ಈಗ ನೀವು ಅವರಿಗೆ ಉತ್ತರ ಕೊಡುವುದೇನೂ ಬೇಡ. ನೀವು ಮಾತನಾಡಿ ಐದು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಡಿ.ಆರ್. ಪಾಟೀಲ್ : ನಾನು ಊಟವಾದ ಮೇಲೆ ಮಾತನಾಡುತ್ತೇನೆ.

ಉಪಾಧ್ಯಕ್ಷರು: ದಯವಿಟ್ಟು ಬೇಡ, ಈಗ ಮುಗಿಸಿಬಿಡಿ, ನಾನು ಆಗಲೇ ಹೇಳಿದ್ದೇನೆ, ನೀವು ಲೆಟರ್ ಕಳುಹಿಸಿ, ಬೇಕಾದರೆ ಸೋಮವಾರ ದಿವಸ ಅರ್ಧಗಂಟೆ ನಿಮಗೋಸ್ಕರ ಕೊಡುತ್ತೇವೆ. ಮತ್ತೆ ಟೈಂ ಸ್ಪೇರ್ ಮಾಡುತ್ತೇವೆ. ಇದೇ ಸಬ್ಜೆಕ್ಟ್ ಮೇಲೇ ಮಾತನಾಡಿ. ಈಗ ಹೆಚ್ಚು ಬೇಡ. ಈಗ ಮುಗಿಸಿಬಿಡಿ.

ಶ್ರೀ ಡಿ.ಆರ್. ಪಾಟೀಲ್ : ಜಿಲ್ಲಾ ಪಂಚಾಯತಿಗೆ ಸುಮಾರು 73 ಕೋಟಿ ರೂಪಾಯಿ,ತಾಲ್ಲೂಕು ಪಂಚಾಯಿತಿಗೆ 212 ಕೋಟಿ ರೂಪಾಯಿ, ಮತ್ತು ಗ್ರಾಮ ಪಂಚಾಯಿತಿಗಳಿಗೆ 265 ಕೋಟಿ ರೂಪಾಯಿ ಹೆಚ್ಚಿನ ಅನುದಾನವನ್ನು ಪ್ಲಾನ್ ಫಂಡ್ಸ್‌ನಲ್ಲಿ ನೀವು ಇಟ್ಟಿದ್ದೀರಿ. ಇದು ಒಳ್ಳೆಯದು. ನಿಜವಾಗಿಯೂ ನಿಮಗೂ ಸಹ ಈ ಡೀಸೆಂಟ್ರಲೈಸೇಷನ್‌ನಲ್ಲಿ ಕಮಿಟ್‌ಮೆಂಟ್ ಇದೆ ಎನ್ನುವುದನ್ನು ಎಗ್ಸಿಬಿಟ್ ಮಾಡಿದ್ದೀರಿ. ಆದರೆ ಏನೋ ಕೆಲವು ಹುನ್ನಾರಗಳು ನಡೆಯುತ್ತಿವೆ ಎಂದು ನಮ್ಮ ಕಿವಿಗೆ ಕೇಳಿ ಬರುತ್ತಿವೆ.ಗ್ರಾಮ ಪಂಚಾಯಿತಿಗೆ ಈಗ ಇರುವ ಅಧಿಕಾರವನ್ನು ಮೊಟಕುಗೊಳಿಸ ಬೇಕು. ಮೊಟಕುಗೊಳಿಸಿ, ಅದನ್ನು ಶಾಸಕರುಗಳಿಗೆ ಕೊಡಬೇಕು ಎಂದು ಕೆಲವು ಹುನ್ನಾರ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ದಯವಿಟ್ಟು ಆ ಕೆಲಸ ಮಾಡಲು ಹೋಗಬೇಡಿ. ಶಾಸಕರ ಕೈಯ್ಯಲ್ಲಿ ಅಧಿಕಾರವನ್ನು ಕೇಂದ್ರೀಕೃತ ಮಾಡುವುದರಿಂದ ಮುಂದೆ ಚುನಾವಣೆಯಲ್ಲಿ ಅನುಕೂಲವಾಗುತ್ತದೆ ಎಂದೇನಾದರೂ ನೀವು ತಿಳಿದುಕೊಂಡಿದ್ದರೆ ಬಹಳ ಹುಚ್ಚುತನ ಅದು. ಹಾಗೆ ಮಾಡಬೇಡಿ. ಏಕೆಂದರೆ ನಾವ್ಯಾರೂ ಗ್ರಾಮೀಣ ಪ್ರದೇಶದ ಜನರನ್ನು ಸಮಾಧಾನ ಪಡಿಸಲಿಕ್ಕೆ ಸಾಧ್ಯವಾಗುವುದೇ ಇಲ್ಲ. ಅವರ ಆಸೆ ಆಕಾಂಕ್ಷೆಗಳು ಬಹಳಷ್ಟು ಇರುತ್ತವೆ, ಅವುಗಳನ್ನು ಅವರ ತಲೆಯ ಮೇಲೆಯೇ ಕಟ್ಟಿ, ನಿಮಗೇ ಅಧಿಕಾರ ಕೊಟ್ಟಿದ್ದೇವೆ, ನೀವು ಮಾಡ್ರಪ್ಪಾ ಎಂದು ಕೈತೊಡಿಸಿ ಕೊಳ್ಳುವುದು ಬಹಳ ಹಗುರವಾದ ಕೆಲಸ, ಈಗ ನಾವು ಹೋದಕೂಡಲೇ ನಮಗೆ ಬೋರ್‌ವೆಲ್ ಹಾಕಿಸಿ , ಅದನ್ನು ಮಾಡಿಸಿ, ಇದನ್ನು ಮಾಡಿಸಿ ಎಂದರೆ, ಅದನ್ನು ನಾವು ಸಂಬಂಧಿಸಿದ ಅಧಿಕಾರಿಗಳಿಗೆ ಹೇಳಿದ್ದೇವೆ ಎಂದರೆ, ಸಂಬಂಧಿಸಿದ ಜನಪ್ರತಿನಿಧಿಗಳಿಗೆ ಹೇಳಿದ್ದೇವೆ ಎಂದರೆ ಅವರು ನಮ್ಮ ಮಾತಿಗೆ ಗೌರವ ಕೊಟ್ಟೇ ಕೊಡುತ್ತಾರೆ, ಕೊಡುವುದಿಲ್ಲ ಎಂದೇನೂ ಇಲ್ಲ. ಅದಕ್ಕಾಗಿ, ದಯವಿಟ್ಟು ಆ ಅಧಿಕಾರವನ್ನು ಕಿತ್ತುಕೊಳ್ಳುವಂಥ ಕೆಲಸವನ್ನು ತಾವು ಮಾಡಬೇಡಿ. ಕಿತ್ತುಕೊಂಡಿರಿ ಅಂದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡುವಂಥ ಸದಸ್ಯರಿಗೆ, ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡುವಂಥ ಸದಸ್ಯರಿಗೆ ರಾಂಗ್ ಸಿಗ್ನಲ್ ಕೊಟ್ಟಹಾಗೆ ಆಗುತ್ತದೆ. ಬಹಳಷ್ಟು ಮಂದಿಗಳ ವಿರೋಧವನ್ನು ನೀವು ತಳಮಟ್ಟದಲಿ ಕಟ್ಟಿಕೊಂಡ ಹಾಗೆ ಆಗುತ್ತದೆ. ಆ ಧೈರ್ಯವನು ತಾವು ಮಾಡಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಮಹದೇವ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್ ಸಾಹೇಬರೇ, ತಮ್ಮ ಅಭಿಪ್ರಾಯವನ್ನು ತಾವು ಹೇಳಿದಿರಿ. ನಾವೆಲ್ಲರೂ ಕೂಡ ಅದೇ ದಿಕ್ಕಿನಲ್ಲಿ, ಹಳ್ಳಿಗಳಿಗೆ, ಪಂಚಾಯಿತಿಗಳಿಗೆ ಅಧಿಕಾರ ವಿಕೇಂದ್ರಿಕರಣ ಮಾಡೋಣ ಎಂದು ಒಪ್ಪಿಕೊಂಡು, ನಾವೆಲ್ಲರೂ ವಿಜಿಲೆನ್ಸ್ ಕಮಿಟಿಯ ಜವಾಬ್ದಾರಿಯನ್ನು ಮಾತ್ರ ಹೊತ್ತು, ಉಳಿದೆಲ್ಲಾ ಅಧಿಕಾರವನ್ನು ಪಂಚಾಯಿತಿಗಳಿಗೆ ಕೊಟ್ಟೆವು. ಈಗ 40– 40 ಮನೆಗಳನ್ನು ಒಂದು ಪಂಚಾಯಿತಿಗೆ ಕೊಟಿದ್ದಾರೆ. ಈಗ ಇಲ್ಲಿ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನ ಆಫೀಸರ್ಸ್‌ಗಳು ಇದ್ದಾರೋ, ಇಲ್ಲವೋ ಗೊತ್ತಿಲ್ಲ. ಪಕ್ಷಬೇಧಗಳನ್ನು ಬಿಟ್ಟು, ಪ್ರಾಯಶಃ ಎಲ್ಲಾ ಶಾಸಕರ ಅನುಭವವೇನೆಂದರೆ, ನಾವು ಪಟ್ಟಿ ಕ್ಲಿಯರ್ ಮಾಡುವುದಕ್ಕೆ ಆಗುತ್ತಿಲ್ಲ. ಎಲ್ಲಾ ಕಡೆ ಕೋಟಾ ಸಿಸ್ಟಂ ಮಾಡಿಕೊಂಡಿದ್ದಾರೆ. ಪಂಚಾಯಿತಿಗೆ 40 ಮನೆ ಎಂದು ಇದ್ದರೆ, ಅಲ್ಲಿ 10 ಪಂಚಾಯತ್ ಮೆಂಬರ್‌ಗಳಿದ್ದರೆ, ಅವರೆಲ್ಲರೂ ಅದನ್ನು ಹಂಚಿಕೊಂಡಿದ್ದಾರೆ. ಯಾವ ಬಿಪಿಎಲ್ ಪಟ್ಟಿಯೂ ಲೆಕ್ಕಕ್ಕೆ ಬಂದಿಲ್ಲ. ಇದರಿಂದ ಕಷ್ಟವಾಗುತ್ತದೆ, ಏಕೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರೀಕರಣಕ್ಕೆ ನಮ್ಮ ಬದ್ಧತೆ ಏನಿದೆ, ಅದು ಇವತ್ತಿಗೂ ಕೂಡ ಇದೆ. ಆದರೆ ಪಂಚಾಯಿತಿಗಳಿಗೆ ಇತ್ತೀಚೆಗೆ ಮನೆಗಳ ಹಂಚಿಕೆ ವಿಚಾರದಲ್ಲಿ ಇಡೀ ರಾಜ್ಯದಲ್ಲಿ ಆಕ್ಷೇಪಣೆ ಇದೆ. ಜೊತೆಗೆ, ಪಂಚಾಯಿತಿಯ ಮೆಂಬರುಗಳು ಮಾತನಾಡುವಾಗ ಒಂದು ಮಾತು ಹೇಳುತ್ತಾರಂತೆ, ಎಂ ಎಲ್ ಎ ಗಳಿಗೆ ಏಕೆ ಮನೆಯನ್ನು ಕೊಡಬೇಕು, ಎಂದು ಹೇಳುತ್ತಾರಂತೆ. ಎಂ. ಎಲ್ ಎ ಗೆ ಒಂದು ಮನೆ ಕೊಡಿ ಎಂದು ನಾವು ಕೇಳುವುದಿಲ್ಲ. ನಾವು, ಬಡವರು ಬಗ್ಗರಿಗೆ ಕೊಡ್ರಪ್ಪ ಎಂದು ಹೇಳಿದ್ದೇವೆ. ಮನೆಗಳನ್ನು ತೆಗೆದುಕೊಳ್ಳಲು ಈಗ ಕೇವಲ ಬಿ ಪಿ ಎಲ್ ಪಟ್ಟಿಯಲ್ಲಿ ಇದ್ದರೆ ಮಾತ್ರ ಸಾಲದು. ಎಲ್ಲರೂ ಬಿ ಪಿ ಎಲ್ ಪಟ್ಟಿಯಲ್ಲಿ ಇರುತ್ತಾರೆ. ಆದರೆ ಬಿ.ಪಿ.ಎಲ್ ಪಟ್ಟಿಯಲ್ಲಿ ಮೊದಲು ಇರುವಂಥವನು, ಗುಡಿಸಿಲಿನಲ್ಲಿ ವಾಸ ಮಾಡುವವನು, ಬೇರೆಯವರ ಜಗಲಿಯಲ್ಲಿ ವಾಸ ಮಾಡುತ್ತಿರುವವನು, ಮೂರು ಜನ ಅಣ್ಣತಮ್ಮಂದಿರು ಭಾಗವಾಗಿ ಒಂದೇ ಮನೆಯಲ್ಲಿ ಮೂರು ಅಡಿಗೆ ಮನೆಗಳನ್ನು ಮಾಡಿಕೊಂಡಿರುವಂಥ ಮನೆಗಳಿವೆ. ಇಂಥವುಗಳ ಆಧಾರದ ಮೇಲೆ ಕೊಡಿ ಎಂದರೂ ಕೂಡ ಅವರು ಕೊಡುತ್ತಿಲ್ಲ. ಬಿ ಪಿ ಎಲ್ ಪಟ್ಟಿಯಲ್ಲಿ ಹಲವಾರು ಜನರು ಇರುತ್ತಾರೆ. ಶ್ರೀಮಂತರು, ಕೆಲವರು ಆರ್ಥಿಕವಾಗಿ ಚೆನ್ನಾಗಿರುವವರೂ ಕೂಡ ಬಿ ಪಿ ಎಲ್ ಪಟ್ಟಿಯಲ್ಲಿ ಸೇರಿದ್ದಾರೆ. ಅಂಥವರಿಗೆ ಮನೆ ಸಿಗುತ್ತಿದೆ. ಅದನ್ನು ತಾವು ಗಮನಿಸಬೇಕು ಎಂದು ಮಾನ್ಯ ಡಿ.ಆರ್. ಪಾಟೀಲರಿಗೆ ನಾನು ಹೇಳುತ್ತೇನೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಪಂಚಾಯತ್‌ರಾಜ್ ಮತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಮಗೆಲ್ಲರಿಗೂ ಕೂಡ ಬದ್ಧತೆ ಇದೆ. ಅಧಿಕಾರ ವಿಕೇಂದ್ರೀಕರಣವಾಗಬೇಕು ಎನ್ನುವ ದೃಷ್ಟಿಯಿಂದಲೇ ಇವತ್ತು ಗ್ರಾಮ ಪಂಚಾಯಿತಿಗಳ ಮೂಲಕ ಫಲಾನುಭವಿಗಳ ಆಯ್ಕೆಯಾಗಬೇಕು ಎನ್ನುವುದು ಎಲ್ಲರ ಬಯಕೆ. ಆದರೆ, ನಾವು ನೋಡಿದಂತೆ, ಆಯ್ಕೆಯಲ್ಲಿ ಏನಾಗಿದೆ ಎಂದರೆ ಯಾವ ಪಂಚಾಯಿತಿಯಲ್ಲೂ ಕೂಡ ಬಡವರಿಗೆ, ಹುಲ್ಲು ಗುಡಿಸಿಲಿನಲ್ಲಿ ವಾಸ ಮಾಡುತ್ತಿರುವವರಿಗೆ ಮನಗಳು ಸಿಗುತ್ತಿಲ್ಲ. ಒಂದು ಪಂಚಾಯಿತಿಗೆ 40 ಮನೆಗಳು ಎಂದು ಇದ್ದರೆ,

ಆ ಪಂಚಾಯಿತಿಯಲ್ಲಿ 20 ಜನ ಸದಸ್ಯರಿದ್ದರೆ, ಅವರೆಲ್ಲರೂ ಎರಡೆರಡು ಮನೆಗಳನ್ನು ಹಂಚಿಕೊಂಡು ಬಿಟ್ಟಿದ್ದಾರೆ. ನಾವು ಹೋಗಿ ಇನ್ನೊಂದು ಸಲ ಗ್ರಾಮಸಭೆಯನ್ನು ಮಾಡುವುದಕ್ಕೆ ಹೋದರೆ, ನನ್ನ ಹತ್ತಿರ ಅದನ್ನು ತೆಗೆದುಕೊಂಡಿದ್ದರು, ಅಷ್ಟು ತೆಗೆದುಕೊಂಡಿದ್ದರು, ಇಷ್ಟು ತೆಗೆದುಕೊಂಡಿದ್ದರು ಎಂದು ಹೇಳಿ ಹೊಡೆದಾಟಕ್ಕೇ ನಿಂತುಕೊಂಡು ಬಿಡುತ್ತಾರೆ. ಆದ್ದರಿಂದ, ಅಲ್ಲಿ ಭ್ರಷ್ಟಾಚಾರವಾಗುತ್ತಿದೆ. ಮೊದಲಿದ್ದಂತೆ, ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲೇ ಆಶ್ರಯ ಸಮಿತಿ ಇರಬೇಕು. ನಾವು ಅದೇ ಗ್ರಾಮಕ್ಕೆ ಹೋಗಿ, ಗ್ರಾಮಸಭೆಯನ್ನು ಮಾಡಿಯೇ ಫಲಾನುಭವಿಗಳನ್ನು ಆಯ್ಕೆ ಮಾಡೋಣ. ಗ್ರಾಮ ಪಂಚಾಯಿತಿ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಮಾಡೋಣ. ಗ್ರಾಮ ಪಂಚಾಯಿತಿಯ ಸದಸ್ಯರನ್ನು ದೂರವಿಡಬೇಕು ಎನ್ನುವುದು ನಮ್ಮ ಉದ್ದೇಶವಲ್ಲ. ಗ್ರಾಮ ಪಂಚಾಯಿತಿಯ ಸದಸ್ಯರನ್ನೂ ಇಟ್ಟುಕೊಂಡು, ಹಿಂದೆ ಇದ್ದಂತೆ, ಶಾಸಕರ ಅಧ್ಯಕ್ಷತೆಯಲ್ಲಿಯೇ ಆಶ್ರಯ ಸಮಿತಿಗಳ ರಚನೆಯಾಗಬೇಕು. ಆ ಮೂಲಕ ಫಲಾನುಭವಿಗಳು ಆಯ್ಕೆಯಾದರೆ ನಿಜಕ್ಕೂ ಕೂಡ ಪಾರದರ್ಶಕವಾಗಿ ಆಯ್ಕೆಯಾಗಲು ಸಾಧ್ಯವಾಗುತ್ತದೆ. ದಯಮಾಡಿ ಪಾಟೀಲ್ ಸಾಹೇಬರು ಇದ್ದಕ್ಕೆ ಒಪ್ಪಿಕೊಳ್ಳಬೇಕು ಎಂಬುದು ನನ್ನ ವಿನಂತಿ.

ಶ್ರೀ ಡಿ.ಆರ್. ಪಾಟೀಲ್ : ಇಲ್ಲ ...

ಶ್ರೀ ಕೆ.ಆರ್.ರಮೇಶ್ ಕುಮಾರ್ : ಅವರು ಒಬ್ಬರೇ ಏನೂ ಅಲ್ಲ, ಅವರ ಜೊತೆಗೆ ನಾವೂ ಇದ್ದೇವೆ. ನಮ್ಮ ಗೆಳೆಯರಾದ ಆಂಜನೇಯರವರಿಗೆ ಹೇಳುತ್ತೇನೆ, ಒಂದು ಪಂಚಾಯಿತಿಗೆ ಹಂಚಿಕೆಗೆ 40 ಮನೆಗಳನ್ನು ಕೊಟ್ಟರೆ, ಅವರು ಹಂಚಿದರೂ ಕಂಪ್ಲೇಂಟ್ ಬರುತ್ತದೆ, ಇವರು ಹಂಚಿದರೂ ಕಂಪ್ಲೆಂಟ್ ಬರುತ್ತದೆ. ನಾವು ಸಮಸ್ಯೆಯನ್ನು ಯಾವ ದಿಕ್ಕಿನಿಂದ ನೋಡುತ್ತೇವೆ? ಒಂದು ಪಂಚಾಯಿತಿಗೆ ಆವರೇಜ್ 15 ಗ್ರಾಮಗಳು ಇರುತ್ತವೆ. ಒಂದೊಂದು ಗ್ರಾಮದಲ್ಲಿ ಕನಿಷ್ಟ 20ರಿಂದ 30 ಅರ್ಹ ಫಲಾನುಭವಿಗಳು ಇರುತ್ತಾರೆ ಎಂದರೂ ಕೂಡ ಒಟ್ಟು ಎಷ್ಟು ಜನರಾಗುತ್ತಾರೆಂದು ಲೆಕ್ಕಹಾಕಿ. ಬೇರೆ ಕೆಲವು ಕಾಯಕ್ರಮಗಳನ್ನು ಕೈಬಿಟ್ಟು,ಇಷ್ಟು ವರ್ಷದೊಳಗಾಗಿ ಹೌಸಿಂಗ್ ಪ್ರೋಗ್ರಾಂಅನ್ನು ಈ ರಾಜ್ಯದಲ್ಲಿ ನಾವು ಟ್ಯಾಕಲ್ ಮಾಡುತ್ತೇವೆ ಎಂದು ಹೇಳಿ, ನೀವು ಕೊಡತಕ್ಕಂಥ ಅಲಾಟ್‌ಮೆಂಟ್ ಇನ್‌ಕ್ರೀಸ್ ಮಾಡಿ, ಒಂದೊಂದು ಪಂಚಾಯಿತಿಗೆ 300 ಅಥವಾ 400 ಮನೆಗಳನ್ನುಕೊಡಿ; ಎಲ್ಲರೂ ಭಾಗವಹಿಸಿ ಗ್ರಾಮಸಭೆಗಳನ್ನು ಮಾಡಿ. ಒಂದು ಊರಿನಲ್ಲಿ 10 ಜನಗಳು ಫಲಾನುಭವಿಗಳು ಇರುತ್ತಾರೆ ಎಂದಿಟ್ಟುಕೊಳ್ಳಿ. ಆ ಹತ್ತೂ ಜನರಿಗೆ ನೀವು ಮನೆ ಕೊಡಿ, ಹೀಗೆ ಕೊಡುವಾಗ ಪಾರ್ಟಿ ನೋಡಬೇಡಿ. ಪಂಗಡ ನೋಡಬೇಡಿ, ಎಂ ಎಲ್ ಎ ನೋಡಬೇಡಿ, ಪಂಚಾಯಿತಿ ಛೇರ್‌ಮನ್ ನೋಡಬೇಡಿ. ಡಿಸರ್ವಿಂಗ್ ಬೆನಿಫಿಷರೀಸ್ ಆದ ಹತ್ತು ಜನರಿಗೆ ನೀವು ರಿಕ್ವೈರ್‌ಮೆಂಟ್ ಫುಲ್‌ಫಿಲ್ ಮಾಡಿದ ಮೇಲೆ, 11ನೇ ಮನೆಯನ್ನು ಅವನೇನು ಮಹಡಿಯ ಮೇಲೆ ಕಟ್ಟಿಕೊಳ್ಳುತ್ತಾನೆಯೇ? ನಾವು ಅವರ ದಾರಿದ್ರ್ಯವನ್ನು ನಿವಾರಣೆ ಮಾಡತಕ್ಕಂಥ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡದೇ, ಅವರು ಸದಾಕಾಲ ಅರ್ಜಿ ಹಿಡಿದುಕೊಂಡು ,ನಮ್ಮ ಮುಂದೆ ಬೆನ್ನು

ಬಗ್ಗಿಸಿಕೊಂಡು ನಿಂತುಕೊಳ್ಳುತಕ್ಕಂಥ ಸ್ಥಿತಿಯಲ್ಲಿ ಅವರನ್ನು ಇಟ್ಟು, ಕಾರ್ಯಕ್ರಮಗಳ ಹೆಸರಿನಲ್ಲಿ ಅವರಿಗೆ ಮನೆ ಕೊಡುತ್ತಿದ್ದೇವೆ. ಹಣ ಇನ್‌ಕ್ರೀಸ್ ಮಾಡಿದ್ದೇವೆ ಎಂದು ಹೇಳಿ, ಅವರು ನಮ್ಮ ಹಿಂದೆ ಸುತ್ತಾಡುವ ಹಾಗೆ ಮಾಡಿದ್ದೇವೆ. ನಮ್ಮಲ್ಲಿ ಪ್ರಾಮಾಣಿಕತೆ ಇರಬೇಕು. Iet us resolve in this House. ನೀವು ಹೌಸಿಂಗಿಗೆ 3 ಲಕ್ಷರೂ, 6 ಲಕ್ಷರೂ ಎಂದು ಹೇಳುವುದಕ್ಕೆ ಹೋಗಬೇಡಿ. ಸರ್ವೆ ಆಗಿರತಕ್ಕಂಥ ಟೋಟಲ್ ಬೆನಿಫಿಷಯಿರಿಗಳ ಲಿಸ್ಟ್ ನಿಮ್ಮ ಹತ್ತಿರ ಇದೆ. ಇಷ್ಟು ಬೆನಿಫಿಷಯಿರೀಸ್ ಇರತಕ್ಕಂಥಾದ್ದನ್ನು ಒಂದು ವರ್ಷದಲ್ಲಿ ಅಥವಾ ಎರಡು ವರ್ಷಗಳಲ್ಲಿ ಅಥವಾ ಮೂರು ವರ್ಷಗಳಲ್ಲಿ ನಾವು ಪೂರ್ಣವಾಗಿ ಹೌಸಿಂಗ್ ಪ್ರೋಗ್ರಾಂಅನ್ನು ಟ್ಯಾಕಲ್ ಮಾಡುತ್ತೇವೆ ಎಂದು ತೀರ್ಮಾನ ಮಾಡಿ. ಆಗ ನಾವು ಪುನಃಪುನಃ ಹೌಸಿಂಗಿಗಾಗಿ ಹಣ ಖರ್ಚು ಮಾಡಬೇಕಾದುದಿಲ್ಲ. ಹಣವನ್ನು ಹುಡ್ಕೋದಿಂದ ತೆಗೆದುಕೊಂಡು ಬನ್ನಿ, ಬೇರೆ ಕಡೆಯಿಂದ ತೆಗೆದುಕೊಂಡು ಬನ್ನಿ. ನಂತರ, ಫಲಾನುಭವಿಗಳಿಂದ ಸ್ಟ್ರಿಕ್ಟ್ ಆಗಿ ವಸೂಲು ಮಾಡತಕ್ಕಂಥ ವ್ಯವಸ್ಥೆ ಮಾಡಿ. ಇವತ್ತು ಆ ರೀತಿ ಕೇರಳದಲ್ಲಿ ಮಾಡಿಲ್ಲವೇ? ಅಲ್ಲಿ ಇವತ್ತು, ಪಿಗ್ಮಿ ವಸೂಲಿ ಮಾಡಿದಂತೆ ಒಂದು ದಿವಸಕ್ಕೆ ರೂಪಾಯಿಯನ್ನೋ ಒಂದೂವರೆ ರೂಪಾಯಿಯನ್ನೋ ವಸೂಲು ಮಾಡುತ್ತಾರೆ. ಯಾವ ಫಲಾನುಭವಿ ಒಂದು ರೂಪಾಯಿ, ಒಂದೂವರೆ ರೂಪಾಯಿಯನ್ನು ಕೊಡುವುದಿಲ್ಲ ಎಂದು ಹೇಳುತ್ತಾನೆ? ಇವರ ಆಡಳಿತ ವ್ಯವಸ್ಥೆಯಲ್ಲಿ, ವಸೂಲಿ ಮಾಡತಕ್ಕಂಥಾದ್ದರಲ್ಲಿ ಸಂಪೂರ್ಣ ವಿಫಲರಾಗುತ್ತಾರೆ. ಮನೆಗಳನ್ನು ಕೊಡುವಾಗಲೇ, ಒಂದು ರೀತಿ ಭಕ್ಷೀಸು ಕೊಟ್ಟಹಾಗೆ ಕೊಡಲು ಟ್ರೈ ಮಾಡುತ್ತಾರೆ. ಅದರ ಮೇಲೆ, ನಾನು ಕೊಟ್ಟೆ, ನೀನು ಕೊಟ್ಟೆ ಎನ್ನುವ ದೊಡ್ಡಸ್ತಿಕೆ ಬೇರೆ. ನಾವು ಜನಪ್ರತಿನಿಧಿಗಳು, ಅವರ ಕೃಪೆಯಿಂದ ಆರಿಸಿ ಬಂದವರು. ಆದರೆ ಈಗ ನಮಗೆ ಏನು ಭಾವನೆ ಬರುತ್ತದೆಂದರೆ, ನಾವೆಲ್ಲ ಮಹಾರಾಜರಾಗಿ ಬಿಟ್ಟಿದ್ದೇವೆ, ಅವರೆಲ್ಲಾ ಬಿಕ್ಷುಕರು, ನಾವು ಅವರಿಗೆ ದಾನ ಕೊಡುತ್ತಿದ್ದೇವೆ ಎನ್ನತಕ್ಕಂಥ ಮನೋಭಾವದಿಂದ ನಾವು ಕೆಲಸ ಮಾಡುತ್ತೇವೆ. This problem has to be tackled from a diterent angle ನಮ್ಮ ಮನೋಭಾವ ಚೇಂಜ್ ಆಗಬೇಕು. ಇದಕ್ಕೆ ಆಶ್ರಯ ಕಮಿಟಿ ಅ ಅಲ್ಲ ಮದ್ದು.

ಶ್ರೀ ಹೆಚ್. ನಿಂಗಪ್ಪ : ಮಾನ್ಯ ಅಧ್ಯಕ್ಷರೆ ಒಂದು ನಿಮಿಷ,

ಉಪಾಧ್ಯಕ್ಷರು: ಮಾನ್ಯ ನಿಂಗಪ್ಪನವರೇ, ಬೇಡ ಅವರು ಮುಗಿಸಿಬಿಡಲಿ. ಲೇಟ್ ಆಯಿತು. ಊಟಕ್ಕೆ ಟೈಂ ಆಗುತ್ತದೆ.

ಶ್ರೀ ಡಿ.ಆರ್‌ಪಾಟೀಲ್ : ಈಗ ನೀವು ಅಡ್ಜರ್ನ್ ಮಾಡಿ ಸರ್, ನಾನು ನಂತರ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಇಲ್ಲ, ಖಂಡಿತವಾಗಿಯೂ ಆಗುವುದಿಲ್ಲ. ನೀವು ಬೇಗ ಮುಗಿಸಬೇಕು, ಈಗಾಗಲೇ ಎರಡು ಗಂಟೆಯಾಗುತ್ತಿದೆ, ಇಲ್ಲವೆಂದರೆ ನಾನು ಅಡ್ಜರ್ನ್ ಮಾಡಿಬಿಡುತ್ತೇನೆ.

ಶ್ರೀ ಡಿ.ಆರ್ ಪಾಟೀಲ್ : ಮಾನ್ಯ ಆಂಜನೇಯರವರಿಂದ ನಾನು ಈ ಪ್ರತಿಕ್ರಿಯೆಯನ್ನು ಅಪೇಕ್ಷೆ ಮಾಡಿರಲಿಲ್ಲ. ದೊಡ್ಡವರು ಮಾಡಲಿ. ಗ್ರಾಮ ಪಂಚಾಯಿತಿಯಲ್ಲಿ ಒಬ್ಬ ದಲಿತ ಅಧ್ಯಕ್ಷನಾಗಿ, ಈ ಎಲ್ಲಾ ಸೌಲಭ್ಯಗಳನ್ನು ತನಗೆ ಬೇಕಾದಂಥವರಿಗೆ ಮುಟ್ಟಿಸುವಂಥ ಒಂದು ಜವಾಬ್ದಾರಿ ಸ್ಥಾನದಲ್ಲಿರುತ್ತಾನೆ. ಇಲ್ಲಿ ನಿಮಗೆ ಆ ಜವಾಬ್ದಾರಿ ಇರುವುದಿಲ್ಲ. ನೀವು ಇದನ್ನು ಒಪ್ಪಬೇಕಾಗಿತ್ತು.

ಎಲ್ಲಿ ಮೀಸಲಾತಿ ಬಂದು, ಸಮಾಜದ ಎಲ್ಲಾ ವರ್ಗದ ಜನರಿಗೆ ಅಧಿಕಾರ ಸಿಕ್ಕಿ, ಅವಕಾಶ ವಂಚಿತರಿಗೆ ಸೇವೆ ಮಾಡುವಂಥ ಅವಕಾಶ ಸಿಗುವಂಥ ಈ ವ್ಯವಸ್ಥೆಯನ್ನು ಸಬಲೀಕರಣ ಮಾಡುವುದರ ಬದಲಿಗೆ, ಆದರಲ್ಲಿದ್ದುದ್ದನ್ನೇ ಕೀಳುವುದು ನಿಜವಾಗಿ ಯೋಗ್ಯವಲ್ಲ, ಇದನ್ನು ಮಾನ್ಯ ಕಾರಜೋಳರವರೂ ಒಪ್ಪಬಾರದು. ನೀವು ಬೇಕಾದರೆ ಒಪ್ಪಿಕೊಳ್ಳಿ, ಅದಕ್ಕೆ ನನ್ನ ಸಹಮತವಿದೆ. ಆದರೆ ನೀವು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಚುನಾವಣೆಗಳಿಗೆ ಹೋಗುವ ಮುನ್ನ ಇದನ್ನು ನೀವು ಹೇಳಬೇಕಾಗಿತ್ತು. ನಿಮಗೆ ಕೊಟ್ಟಂಥ ಈ ಅಧಿಕಾರವನ್ನು ನಾವು ಕಿತ್ತುಕೊಳ್ಳುತ್ತೇವೆ, ಮೊಟಕುಗೊಳಿಸುತ್ತೇವೆ ಎನ್ನುವುದನ್ನು ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿ ನಂತರ ಮಾಡಿ, ನಾನು ಬೇಡವೆನ್ನುವುದಿಲ್ಲ. ಆ manifesto ದಲ್ಲಿ ಆ ಗ್ರಾಮ ಪಂಚಾಯಿತಿ ವ್ಯವಸ್ಥೆಯನ್ನು ಇನ್ನಷ್ಟು ಸಬಲೀಕರಣ ಮಾಡುತ್ತೇವೆ, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನಷ್ಟು ಧೃಢೀಕರಿಸುತ್ತೇವೆಂದು ಹೇಳುವುದು, ಈಗ ಮತ್ತೆ ಅಧಿಕಾರಕ್ಕೆ ಬಂದ ಕೂಡಲೇ ಇದನ್ನು ಬದಲಾವಣೆ ಮಾಡುವುದೆಂದರೆ ಮೋಸ ಮಾಡಿದಹಾಗೆ ಆಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಹಿಂದಿನ ವಿಧಾನಸಭೆಯಲ್ಲಿ ಬೇಲೂರು ಘೋಷಣೆಗೆ ಮತವನ್ನು ಹಾಕಿ ಬಿಲ್ ಅನ್ನು ಪಾಸ್ ಮಾಡಲಿಕ್ಕೆ ನಾನೂ ಒಬ್ಬ ಮತದಾರನಾಗಿದ್ದೆ ಆದರೆ, ಈಗ ಕೊಟ್ಟಿದ್ದು ಸರಿ. ಸರ್ಕಾರ ಇವತ್ತು Scheduled caste ನವರಿಗೆ ಮನೆಯನ್ನು ಕೊಡುತ್ತೇವೆ, ಎಂದು ಹೇಳುತ್ತಾರೆ ಮೊದಲು ಅವರಿಗೆ RTC ಯ ಅಗತ್ಯವಿರಲಿಲ್ಲ. ಇಂದಿರಾ ಆವಾಸ್‌ನಲ್ಲೂ ಅಗತ್ಯವಿರಲಿಲ್ಲ. ಅಂಬೇಡ್ಕರ್ ಯೋಜನೆಯಲ್ಲೂ ಅಗತ್ಯವಿರಲಿಲ್ಲ. ಇವತ್ತು ಇಂದಿರಾ ಆವಾಸ್‌ಗೆ ಏನು RTC ಯನ್ನು ಕೇಳುತ್ತಾರೆ, ಅಂದರೆ ಮನೆಯನ್ನು ಕೊಟಿದ್ದೇವೆ. ಆದರೆ ನಿಮಗೆ ಅದನ್ನು ತೆಗೆದುಕೊಳ್ಳಲಿಕ್ಕೆ ಆಗಬಾರದು, ಅಂಬೇಡ್ಕರ್‌ನಲ್ಲೂ ಅಷ್ಟೆ. ಸರ್ಕಾರದವರು ಮನೆ ಕೊಡುತ್ತಿದ್ದಾರೆ, ನೀವು ತೆಗೆದುಕೊಳ್ಳಲಿಕ್ಕೆ ಆಗಬಾರದು ಆ ಪರಿಸ್ಥಿತಿ ಇದೆ. ಹಿಂದೆ registration ಇದ್ದದ್ದು ಕೇವಲ 2 ರೂಪಾಯಿ. ಇವತ್ತು ಆದನ್ನು 250 ರೂಪಾಯಿ ಎಂದು ಮಾಡಿದ್ದಾರೆ. ಯಾರೂ ಕೂಡ registration ಮಾಡಿಸುವುದಕ್ಕೆ ಆಗದಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಅದನ್ನು ಸ್ವಲ್ಪ simplify ಮಾಡಬೇಕು. 2 ರೂಪಾಯಿಯಲ್ಲಿ registration ಗೆ ಏನು ಅವಕಾಶವಿತ್ತು ಅದನ್ನು ಪುನಃ ತನ್ನಿ

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇದು once again basic structure of administrative law. We are not finding fault with the law. The process of decision making. ಈ ತರಹದ ಆಡಳಿತ ವ್ಯವಸ್ಥೆ ಎಂದು ಹೇಳುತ್ತಾರಲ್ಲಾ ಅದನ್ನೇ ಹೇಳಿದ್ದು ಆಡಳಿತ ವ್ಯವಸ್ಥೆಯೊಳಗೆ ಉದ್ಭವವಾಗತಕ್ಕಂಥ ಸಮಸ್ಯೆಗಳನ್ನು ನಾವು ಶ್ರದ್ಧೆ ಮತ್ತು ನಿಷ್ಠೆಯಿಂದ ಬಗೆಹರಿಸಿಕೊಳ್ಳಬೇಕೇ ಹೊರತು ಮೂಲಭೂತವಾಗಿ ಮಾಡಿರತಕ್ಕಂಥದ್ದನ್ನು ಅಲ್ಲಗೆಳೆಯತಕ್ಕಂಥದ್ದಲ್ಲ. Yes, I agree with you, Such rectification can always be made.

ಶ್ರೀ ಡಿ.ಆರ್. ಪಾಟೀಲ್ : ಅದರೊಳಗೆ ಏನಾದರೂ ತಪ್ಪಾಗಿದ್ದರೆ ಅದನ್ನು ನೋಡಲಿಕ್ಕೆ ನೀವು ಈಗ Vigilance Committee ಎಂದು ಮಾಡಿಕೊಂಡಿದ್ದೀರಿ. If there are any complaints...

ಶ್ರೀ ಜಯಪ್ರಕಾಶ್‌ಹೆಗ್ಡೆ : ಈಗ ಸರ್ಕಾರದ ತೀರ್ಮಾನಗಳನ್ನು Vigilance Committee ಯವರು ಹೇಗೆ ಸರಿಪಡಿಸುವುದಕ್ಕಾಗುತ್ತದೆ? ಈಗ ಸರ್ಕಾರ ತಂದಿರುವ registration ಗೇ 250 ರೂಪಾಯಿ fees ಕೊಡಬೇಕೆಂದಿರುವುದು, RTC ಬೇಕೆಂದು ಹೇಳಿರುವುದು, ಸರ್ಕಾರ ಬಿಟ್ಟರೆ ಅದನ್ನು Vigilance Committee ಯವರು ಪರಿಹಾರ ಮಾಡಲಿಕ್ಕಾಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನಾನು ಇನ್ನೂ ಸಹ ಮಾನ್ಯ ಆಂಜನೇಯರವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಿದ್ದೆ.

ಉಪಾಧ್ಯಕ್ಷರು: ಈಗಾಗಲೇ ಸಮಯವಾಗಿದೆ. ಈಗಾಗಲೇ ಅವರಿಗೆ ಒಂದು ಗಂಟೆಯಷ್ಟು ಸಮಯ ಕೊಟ್ಟಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್: ನೀವು Adjourn ಮಾಡಿ ಸರ್ ಊಟ ಮಾಡಿಕೊಂಡು ಬಂದನಂತರ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಮಧ್ಯಾಹ್ನದ ನಂತರ ಬೇರೆಯವರು ಮಾತನಾಡುವವರು ಇದ್ದು ಅವರಿಗೆ ಅವಕಾಶ ಕೊಡಬೇಕಾಗಿದೆ. ಬೇರೆಯವರು ಮಾತನಾಡಬೇಕಾದರೂ ಕೂಡ ಆ subject ಅದರಲ್ಲಿ involve ಮಾಡಿಕೊಳ್ಳಬಹುದಲ್ಲವೇ? ಬೇರೆಯವರು ಭಾಷಣಗಾರರು ಇದ್ದಾರಲ್ಲವೇ? ಆ ಭಾಷಣ ಮಾಡುವ ಸಮಯದಲ್ಲಿ ಈ subjet ಅನ್ನೂ ಸಹ ತೆಗೆದುಕೊಳ್ಳಿ. ಒಬ್ಬರ ಕಡೆಯಿಂದಲೇ ಆಗಬೇಕೆಂದೇನೂ ಇಲ್ಲವಲ್ಲಾ. ಬೇಗ ಮಾತನಾಡಿ ಮುಗಿಸಿ. ಆ subjet ಅನ್ನು ಬೇರೆ ವಿಷಯದ ಮೇಲೆ ಭಾಷಣ ಮಾಡುವಾಗ ಬೇಕಾದರೆ continue ಮಾಡಿಕೊಳ್ಳಿ

ಶ್ರೀ.ಕೆ.ಆರ್. ರಮೇಶ್ ಕುಮಾರ್ : ಪರ ವಿರೋಧ ಸಮಸ್ಯೆ ಇದ್ದೇ ಇರುತ್ತದೆ.

ಶ್ರೀ ಡಿ.ಆರ್. ಪಾಟೀಲ್ ಆ benificiary selection ಒಳಗೇನಾದರೂ ತಪ್ಪಾಗಿದ್ದರೆ ಅದನ್ನು ಚೆಕ್ ಮಾಡಲಿಕ್ಕೆ ನಿಮ್ಮ vigilance committee ಇದೆ. ದಯವಿಟ್ಟು ನೀವು ವಿಚಾರ ಮಾಡಿ. ಇನ್ನೂ ನಿಮ್ಮಲ್ಲಿ ಅದು ವಿಚಾರದ ಹಂತದೊಳಗೇ ಇದೆ. ಅದನ್ನು ಬದಲಾವಣೆ ಮಾಡುವಂಥ ಪ್ರಯತ್ನ ಮಾಡಬೇಡಿ. ಪ್ರಯತ್ನ ಮಾಡುವುದರಿಂದ ನಿಮಗೆ ಅದರಿಂದ ಲಾಭ ಮುಂದೆ ಸಿಗುವುದಿಲ್ಲ ಲುಕ್ಸಾನು ಬಹಳ ಆಗುತ್ತದೆ ಊಗ ತಾತ್ಕಾಲಿಕವಾಗಿ ಲಾಭ ಆಗುತ್ತದೆ. ಮುಂದೆ ಜನರ ಮುಂದೆ ಹೋಗುವಾಗ ಆವಾಗ ನಿಮಗೆ ಲುಕ್ಸಾನು ಆಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನೀವು ನಿಮಗೆ ಸೂಕ್ತವೆನಿಸಿದ ನಿರ್ಣಯವನ್ನು ತೆಗೆದುಕೊಳ್ಳಬಹುದು. ನಾವೇನೂ ಬೇಡವೆಂದು ಹೇಳುವುದಿಲ್ಲ ಅದು ಸಮಾಜಕ್ಕೆ ಗೊತ್ತಾಗುತ್ತದೆ. ನಿಮಗೆ ಈ ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಎಷ್ಟು commitment ಇದೆ? ಈ ಮೀಸಲಾತಿ ಬಂದು ಸಮಾಜದ ಎಲ್ಲಾ ವರ್ಗದ ಜನ ಅಧಿಕಾರವನ್ನು ಹಂಚಿಕೊಳ್ಳುವಂಥ ಈ ವ್ಯವಸ್ಥೆಯೊಳಗೆ ನಿಮ್ಮದೆಷ್ಟು commitment ಇದೆಯೆನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಅವಕಾಶ ಬಂದಾಗ ಅವರು ತೀರ್ಮಾನ ಮಾಡಿಕೊಳ್ಳುತ್ತಾರೆ. ಅದರ ಬಗ್ಗೆ ನಾನು ಬಹಳಷ್ಟು ತಲೆಕೆಸಿಕೊಳ್ಳುವುದಕ್ಕೆ ಹೋಗುವುದಿಲ್ಲ ಮಾನ್ಯ ದರ್ಶನಪುರ್‌ರವರೇ, ...

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷರೆ, ಈ Vigilance committee ಅನ್ನು ನಾವೇನು ಮಾಡಿದ್ದೇವಲ್ಲಾ ಇದರ ಸಮಸ್ಯೆಗಳೆಲ್ಲಾ ತಮಗೆಲ್ಲಾ ಗೊತ್ತಾಗಿದೆ. ಗ್ರಾಮಸಭೆಗಳನ್ನು ಮಾಡದೆ, ಅಥವಾ ಇನ್ನೂ ಕೂಡ ಪಟ್ಟಿಗಳು ಬರೆದ ಏನು ಆಗಿದೆ ಎಂಬುದು

ತಮಗೆಲ್ಲಾ ಗೊತ್ತಾಗಿದೆ. ಇನ್ನೊಂದು ಏನಾಗಿದೆ ಎಂದರೆ ಈ ತಿಂಗಳ 21ನೇ ತಾರೀಖಿಗೆ ಎಲ್ಲಾ ಕೂಡ ಬರಬೇಕೆಂದು ಇದೆ In case ಇದರಲ್ಲಿ ಏನಾದರೂತಪ್ಪುಗಳು ಆಗಿವೆ ಎನ್ನುವುದಾದರೆ Nodal Officers ಅನ್ನು ನೀವು ಮಾಡಿಬಿಟ್ಟು ಗ್ರಾಮಸಭೆಗಳನ್ನು ಮಾಡಿ ಬರಬೇಕೆನ್ನುವುದೂ ಕೂಡ ಇದೆ. ಈಗ ಇದನ್ನು ಮಾಡಬೇಕೆಂದರೆ ನಾವು ಇದನ್ನು time extension ಮಾಡಬೇಕೆಂದು ಮೊನ್ನೆ ಕೂಡ ಮಾನ್ಯ RDPR ಸಚಿವರಿಗೆ ನಾವು ಕೇಳಿಕೊಂಡಿದ್ದೇವೆ. time extension ಬಗ್ಗೆ ಯೋಚನೆ ಮಾಡುತ್ತಿದ್ದೇವೆಂದು ಆವತ್ತು ಹೇಳಿದ್ದರು. ಈಗ ಅದನ್ನು ಮಾಡಲಿಲ್ಲವೆಂದರೆ, ನಾವು ಇಲ್ಲಿ ಈಗ ಸದನ ನಡೆಸುತ್ತಿದ್ದೇವೆ. ಅಲ್ಲಿ ಮೀಟಿಂಗ್ ಮಾಡಬೇಕು, ಪಟ್ಟಿ ತರಬೇಕೆಂದಡಿಜ ಸೂಕ್ತವಾದ ಫಲಾನುಭವಿಗಳಿಗೆ ಕೊಡವುದಕ್ಕಾಗುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್: ನೀವು ಯೋಚನೆ ಮಾಡಿ. ಗಂಭೀರವಾದ ವಿಷಯವಿದು. vigilance committee ಯಲ್ಲಿ ನಾವೆಲ್ಲಾ member ಇದ್ದೇವೆ. ತಾಲ್ಲೂಕಿನಲ್ಲಿರುವವರು Charirman ನಾವು D.C. ಹತ್ತಿರ ಹೋಗಿ ಈ ತರಹ ತಪ್ಪು ಮಾಡಿದ್ದಾರೆಂದು ಹೇಳಿದರೆ, ಯಾರು value ಕೊಟ್ಟಿದ್ದಾರೆ ಯಾರು action ತೆಗೆದುಕೊಂಡಿದ್ದಾರೆ? ಹೆಸರಿಗೆ ಮಾತ್ರ vigilance Committee What is the reason? ಕ್ರಮ ತೆಗೆದುಕೊಳ್ಳುವುದಿಲ್ಲ. Municipal Commissioner ಅವರೂ ಕೂಡ ಒಪ್ಪಿಕೊಳ್ಳುವುದಿಲ್ಲ ಅದರ ಮೇಲೆ ನಾವು D.C., ಪುನಃ ಮಂತ್ರಿ ಹತ್ತಿರ ಬರಬೇಕು. ಅದಕ್ಕೆ ಏಕೆ vigilance committee? You kindly explain

ಶ್ರೀ ಡಿ.ಆರ್. ಪಾಟೀಲ್: ಆವರ್ತ ನಿಧಿಯನ್ನು ಮಾರುಕಟ್ಟೆಯ ಮುಖಾಂತರ ಕಲೆಕ್ಟ್ ಮಾಡುತ್ತಿದ್ದೇವೆ. ಬಜೆಟ್ ಭಾಷಣದಲ್ಲಿ ಈಗ ಇದ್ದಂಥ 200 ಕೋಟಿಯಿಂದ 240 ಕೋಟಿ ರೂಪಾಯಿಗಳಿಗೆ ಏರಿಸುತ್ತೇವೆಂದು ಹೇಳಿದರು. ಈಗ 211 ಕೋಟಿರೂ ಇದೆ. ಆದರೆ ಆ ಆವರ್ತ ನಿಧಿ collect ಮಾಡಲಿಕ್ಕೆಂದೇ ರೈತರಿಂದ 0.5 ಪರ್ಸೆಂಟ್ Cess ಅನ್ನು ಹೆಚ್ಚಿಗೆ ಕಲೆಕ್ಟ್ ಮಾಡುತ್ತಿದ್ದೇವೆಂದು ಅದನ್ನೇನೂ ವ್ಯಾಪಕಸ್ಥರಿಂದ ಕಲೆಕ್ಟ್ ಮಾಡುತ್ತಿದ್ದೇವೆಂದು ತಿಳಿದುಕೊಳ್ಳಬೇಡಿ ವ್ಯಾಪರಸ್ಥರ ಎಲ್ಲಾ ರೈತರಿಗೂ transfer ಮಾಡುತ್ತಾರೆ. ನಾವು ರೈತರಿಂದ 05. ಪರ್ಸೆಂಟ್ Cess ಕಲೆಕ್ಟ್ ಮಾಡುತ್ತೇವೆ. 105. ಪರ್ಸೆಂಟ್ ಅಂದರೆ ಪ್ರತಿ ವರ್ಷ ಸುಮಾರು 50 ರಿಂದ 60 ಕೋಟಿ ರೂಪಾಯಿ ಅದಕ್ಕೆ add ಆಗುತ್ತದೆ. ಅದರಲ್ಲಿ ಮತ್ತೆ ನಿಮ್ಮದೇನು contribution ಇದೆ? ಸರ್ಕಾರ 200 ಕೋಟಿ ರೂಪಾಯಿಗಳಿಂದ 240 ಕೋಟಿ ರೂಪಾಯಿಗಳಿಗೆ ಅದನ್ನು ನೀವು ಮಾಡುವುದಿಲ್ಲ. ರೈತರೇ ಮಾಡುತಿರುತ್ತಾರೆ. ನಿಮ್ಮದೇನಾದರೂ contribution 40 ಕೋಟಿ ರೂಪಾಯಿಗಳನ್ನು add ಮಾಡಿ. ಹಿಂದಿನ ಸರ್ಕಾರ 25 ಪರ್ಸೆಂಟ್ ಕೊಟ್ಟಿತು. ರೈತರು 75 ಪರ್ಸೆಂಟ್ ಕೊಟ್ಟರು. ನೀವು 25 ಪರ್ಸೆಂಟ್ ಇದ್ದುದನ್ನು 50 ಪರ್ಸೆಂಟ್ ಮಾಡಿದರೆ, ಹೌದಪ್ಪಾ ಈ ಸರ್ಕಾರ ನಮಗಿಂತ ಹೆಚ್ಚು ರೈತರ ಮೇಲೆ ಕಳಕಳಿಯಿಂದ ಕೆಲಸ ಮಾಡಿದೆ ಎಂದು ಹೇಳಬಹುದು. ಇಲ್ಲವೆಂದರೆ,ನೀವು ರೈತರ ಹಣವನ್ನೇ ಉಪಯೋಗ ಮಾಡಿಕೊಂಡು ನಾವು ಮಾಡಿದ್ದು ಎಂದು ಹೇಳುವುದಲ್ಲ. ಕಾನೂನಿನೊಳಗೆ ಆ ವ್ಯವಸ್ಥೆ ಈಗ ಇದೆ. ದಯವಿಟ್ಟು ಆ ಆವರ್ತ ನಿಧಿಗೆ 40 ಕೋಟಿ ರೂಪಾಯಿಗಳನ್ನೇನು ಹೆಚ್ಚು ಮಾಡುತ್ತೇವೆಂದು ಹೇಳಿದ್ದೀರಿ, ಆ 40 ಕೋಟಿ ರೂಪಾಯಿಗಳ

ಅನುದಾನ ಸಿಗುವ ಹಾಗೆ ನೀವು Finance Minister ಜೊತೆಗೆ ಜಗಳವಾದರೂ ಆಡಿ ನಿಮ್ಮ ಇಲಾಖೆಗೆ ದುಡ್ಡು ಪಡೆದುಕೊಳ್ಳಬೇಕೆನ್ನುವಂಥ ಮಾತನ್ನು ನಾನು ತಮಗೆ ಹೇಳುತ್ತೇನೆ. ಇನ್ನು ನೇಕಾರರ ಸಲುವಾಗಿ ಮಾನ್ಯ ಕಾರಜೋಳರವರಿಗೆ handloom weavers ಬಗ್ಗೆಯೂ ಮತ್ತು power loom weavers ಬಗ್ಗೆಯೂ ಗೊತ್ತಿದೆ. Hnadloom weavers ನ ಪರಿಸ್ಥಿತಿ ಈಗ ಸುಧಾರಿಸಿದೆ. ಈಗ ನಿತ್ಯ ಅವರಿಗೆ ನೂಲು ಸಿಗುತ್ತದೆ. ಉದ್ಯೋಗ ಸಿಗುತ್ತದೆ. ಈ ಪರಿಸ್ಥಿತಿ ಎರಡು ವರ್ಷಗಳ ಹಿಂದೆ ಇರಲಿಲ್ಲ. ಇದು ನಿಮಗೆ ಗೊತ್ತಿದೆ. ಈಗ ವಿದ್ಯಾವಿಕಾಸ ಯೋಜನೆಯೊಳಗೆ ನಾವೇನು uniform ಕೊಡುತ್ತೇವೆ ಮತ್ತು ನಿಮ್ಮ ಪೊಲೀಸ್ ಇಲಾಖೆಯಲ್ಲಿ ಏನು uniform ಕೊಡುತ್ತೀರಿ ಹಾಗೂ health department ಮುಖಾಂತರ ಏನೇನು ಖರೀದಿ ಮಾಡುತ್ತೀರಿ ಈ ಎಲ್ಲಾ ಖರೀದಿ ಮಾಡುವುದನ್ನು handloom sector ನಿಂದ ಅಲ್ಲಿ ನಮಗೆ ಸಾಲಲಿಲ್ಲವೆಂದರೆ Khadi Sector ನಿಂದ ತೆಗೆದುಕೊಂಡು ಈ ಎರಡೂ ಕಡೆ ಸಾಲಲಿಲ್ಲವೆಂದರೆ ನೀವು powerlomm sector ಗೆ ಹೋಗಿ. ಬೇಡವೆನ್ನುವುದಿಲ್ಲ. powerlom sector ಗೂ ನಿಮ್ಮದು ಇರಲಿ. ಅದರೆ ನಿಮ್ಮ ಮೊದಲ ಆದ್ಯತೆ Khadi Sectorಗೆ ಇರಬೇಕು. ಎರಡನೆಯ ಆದ್ಯತೆ Handloom sector ಗೆ ಇರಬೇಕು. ಮೂರನೆಯ ಆದ್ಯತೆ powerloom sector ಗೆ ಇರಬೇಕು ಸರ್ಕಾರ ಖರೀದಿ ಮಾಡುವಂಥ ಬಟ್ಟೆ, bedsheet, towel, bandage cloth ಏನಿದೆ, ಇವೆಲ್ಲವುಗಳನ್ನೂ ಈ ವ್ಯವಸ್ಥೆಯಿಂದಲೇ ಖರೀದಿ ಮಾಡುವಂಥ ಒಂದು ಕೆಲಸವನ್ನು ಮಾನ್ಯ ಕಾರಜೋಳರವರು, ಮಾನ್ಯ ದರ್ಶನಾಪುರರವರು, ನಮ್ಮ ಮಾನ್ಯ ಶಂಕರಮೂರ್ತಿಯವರು ಕೂಡಿ ಸರ್ಕಾರದಿಂದ ನೀವು ಮಾಡಿಸಿದರೆ ಈ ಜನಾಂಗಕ್ಕೆ ನೀವು ದೊಡ್ಡ ಉಪಕಾರ ಮಾಡಿದ ಹಾಗೆ ಆಗುತ್ತದೆ. ಇದನ್ನು ದಯವಿಟ್ಟು ನೀವು ಮಾಡಿಸಬೇಕು. ಈ Powerdloom weavers ಗೆ ಏನು ಹಿಂದಿನ ಸರ್ಕಾರ 10 ಹೆಚ್‌ಪಿ ವರೆಗೆ ಸಹಾಯಧನ ಕೊಡುತ್ತೇನೆಂದು ಹೇಳಿ energy consumption ನಲ್ಲಿ declare ಮಾಡಿತ್ತು ಈಗ ಅದನ್ನು ನೀವು 20 ಹೆಚ್.ಪಿ.ಗೆ ಏರಿಸಿದ್ದೀರಿ.ನಮ್ಮ ಮಾನ್ಯ ಬೈಯ್ಯಾಪೂರ್‌ರವರು textile minister ಇದ್ದಾಗ ಅದನ್ನು ನಾವು 67 ಹೆಚ್.ಪಿ. ವರೆಗೆ ಕೊಡುತ್ತೇವೆಂದು ಹೇಳಿದ್ದರು. ಮಾನ್ಯ ಬೈಯ್ಯಾಪೂರ್‌ರವರು ಈಗ ನಿಮ್ಮ ಪಕ್ಷದೊಳಗೆ ಇರುವವರೇ. ನಿಮ್ಮ coalition government ಸದಸ್ಯರೇ ಅವರು. ದಯವಿಟ್ಟು ಇದರೊಳಗೆ discrimination ಮಾಡಬೇಡಿ. ಮಾನ್ಯ ಕಾರಜೋಳರವರೇ, ಇಲ್ಲವೆಂದರೆ ಇದರಲ್ಲಿ ಏನಾಗುತ್ತದೆ? ನೀವು ಕೊಡುವ 20 ಹೆಚ್.ಪಿ. ಗೆ ಒಂದೊಂದು ಅಡ್ಡಗೋಡೆ ನಾವು ಕಟ್ಟುತ್ತೇವಷ್ಟೆ ಒಂದು partition wall ಬರುತ್ತದೆ. ಏನೂ ಆಗುವುದಿಲ್ಲ, ನೀವು ಅದನ್ನು free ಬಿಟ್ಟರಿ ಎಂದರೆ, ಈ ನಡುವೆ ಈ partition wall ಹಾಕಿದಾಗ ಸಂಬಂಧಿಸಿದ ಅಧಿಕಾರಿಗಳಿಗೆ ಸ್ವಲ್ಪ ಮಾಮೂಲು ಕೊಡಬೇಕಾಗುತ್ತದೆ. ಈ ಮಾಮೂಲು ತಪ್ಪಿಸಬೇಕಷ್ಟೆ. ಸರ್ಕಾರದಿಂದ ಹೋಗುವುದೇನೂ ನಿಲುವುದಿಲ್ಲ. ಈ ಮಾಮೂಲು ತಪ್ಪಿಸಬೇಕೆಂದರೆ ನೀವು powerloom ಗೆಲ್ಲಾ energy concession ಕೊಡುವುದೇನಿದೆ without any restriction, we extend , ಎಂದು ಹೇಳಿ ನೀವು ನಿರ್ಣಯ ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ. ನಮ್ಮ ಹಣಕಾಸು ಸಚಿವರು ಗದಗ್‌ಗೆ ಬಂದಾಗ ನಾನು ಹೇಳಿದ್ದೆ. ಅವರು ಒಪ್ಪಿದ್ದರು. ಯಾಕೋ ಮತ್ತೆ ಅದನ್ನು 20 ಹೆಚ್.ಪಿ.ಗೆ ನಿಲ್ಲಿಸಿದ್ದಾರೆ. ಆ

restriction ಹಾಕಲಾರದ ಹಾಗೆ ತಾವು ದಯವಿಟ್ಟು ಅವರ ಮನವೊಲಿಸಿ ಅವರ ಭಾಷಣದೊಳಗೆ ಅದರ ಬಗ್ಗೆ ಭರವಸೆ ನೀಡುವ ಹಾಗೆ ತಾವು ಮಾಡಬೇಕು. ನೀವು ರೈಲ್ವೆ ಬಜೆಟ್‌ಗೆ ಏನೇನು ಕೊಡುತ್ತೇನೆಂದು ಹೇಳಿದ್ದಿರಿ. ಬೆಂಗಳೂರು–ರಾಮನಗರ ಕೊಡುತ್ತೇನೆಂದಿರಿ. ಬೆಂಗಳೂರಿನಲ್ಲಿ ಪ್ಲಾಟ್‌ಫಾರಂನೊಳಗೆ ಅನುಕೂಲ ಮಾಡುವುದಕ್ಕೆ 10ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆಂದು ಹೇಳಿದ್ದೀರಿ. ಮಾಡಿ. ನಾವು ಬೇಡವೆಂದು ಹೇಳುವುದಿಲ್ಲ. ಬೇರೆ ಕಡೆಗೆ ಖರ್ಚು ಮಾಡುವುದಕ್ಕೆ ನಾವೇನೂ ಬೇಡವೆನ್ನುವುದಿಲ್ಲ. ಆದರೆ ನಮ್ಮ ಗದಗ್–ಬಿಜಾಪೂರ ಲೈನ್, ಏಕೋ ನಿಮ್ಮ ಕಣ್ಣು ತಪ್ಪಿಹೋಗಿಬಿಟ್ಟಿದೆ. ಹುಬ್ಬಳ್ಳಿ–ಅಂಕೋಲಾ ಲೈನ್ ಏಕೋ ನಿಮ್ಮ ಕಣ್ಣು ತಪ್ಪಿ ಹೋಗಿದೆ ಇವೆರಡೂ ಲೈನ್ಸ್‌ಗೆ ದುಡ್ಡು ಕೊಡಲಿಕ್ಕೆ ಈ ಕೆ–ರೈಡ್ ಬಂದಿದ್ದು ದಯವಿಟ್ಟು, ವಿಶೇಷವಾಗಿ ನೀವು ಕೊಡುವ ಆದೇಶ ಮಾಡಬೇಕು. ಹೋದ ಸಾರಿ ಗದಗ್–ಸೊಲ್ಲಾಪುರ ಲೈನ್‌ಗೆ...

ಉಪಾಧ್ಯಕ್ಷರು: ನೀವು 3 ಗಂಟೆವರೆಗೂ ಮಾತನಾಡುತ್ತೀರಾ?

ಶ್ರೀ ಡಿ.ಆರ್. ಪಾಟೀಲ್: ಸುಮಾರು 35 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಸರ್ಕಾರದವರು ಕೊಟ್ಟರು. ನಮ್ಮ ಪಾಲಿನ ದೇವರು ಇದೆ, ನಮ್ಮ ಪಾಲಿನ ಹಣವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡುವ ಹಾಗೆ ಮಾಡಿ. ನೀವು ಮಾಡಿದರೆ, ಬಾಗಲಕೋಟೆ, ಗದಗ, ಬಿಜಾಪುರ ಮೂರೂ ಜಿಲ್ಲಾ ಕೇಂದ್ರಗಳ ಬೆಳವಣಿಗೆ ಬಹಳ ಅದ್ಭುತವಾಗುತ್ತದೆ. ಬಾಂಬೆ ಮತ್ತು ಉತ್ತರ ಭಾರತದ ಎಲ್ಲಾ ಏರಿಯಾಕ್ಕೂ ನಾವು ಲಿಂಕ್ ಆಗುತ್ತೇ. ಆವಾಗ ಅಲ್ಲಿಂದ ಗೂಡ್ಸ್ ಇಲ್ಲಿಗೆ ಬರುವುದು ಹೀಗೆ ಟ್ರೇಡ್ ಸಾಕಷ್ಟು ಬೆಳೆದು, ಎಲ್ಲಾ ನಗರ ಪ್ರದೇಶಗಳಿಗೆ ಬೆಳವಣಿಗೆ ಸಾಕಷ್ಟಾಗುತ್ತದೆ. ನೀವು ಉತ್ತರ ಕರ್ನಾಟಕದಿಂದ ಬಂದವರು. ನೀವು ವಿಶೇಷವಾಗಿ ಅದರ ಬಗ್ಗೆ ಕಾಳಜಿ ಮಾಡಬೇಕೆನ್ನುವ ಮಾತನ್ನು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬರೀ ಇಲ್ಲಿದ್ದಾಗ ನೀವು ಹೈಕೋರ್ಟ್ ಪೀಠದ ಬಗ್ಗೆ ಹಲವಾರು ಬಾರಿ ಎತ್ತಿದ್ದಿರಿ ಈಗ ಹೈಕೋರ್ಟ್ ಪೀಠದ ಬಗ್ಗೆ ಮರೆತೇಬಿಟ್ಟಿರಿ. ಏನೂ ರೆಫರೇನ್ಸ ಇಲ್ಲ. ಎರಡೂ ಆ ಕಡೆ ಎಂದರೆ ಇವೆ ಎಂದೇ? ಬೇಕಾದರೆ ನೀವು ಹುಬ್ಬಳ್ಳಿ–ಧಾರವಾಡಕ್ಕೆ ಮಾಡಬೇಕೆಂದೇನು ಮಾಡಿದ್ದೀರಲ್ಲಾ, ಆದನ್ನು ಕಿತ್ತುಕೊಂಡು ಶಿವಮೊಗ್ಗಕ್ಕೆ ಮಾಡಿದರೂ ನಮ್ಮದೇನೂ ಅಭ್ಯಂತರವಿಲ್ಲ. ಮಾಡಿ. ದುಡ್ಡು ಕೊಡಲಿಲ್ಲ ನೋಡಿ ಅವರು, ಅವು ಏನು ಬಿಟ್ಟ ಹಾಗೆ ಅಲ್ಲವೆ ಮತ್ತೆ? ಅದಕ್ಕೆ ದಯವಿಟ್ಟು, ಯಡಿಯೂರಪ್ಪನವರು ಇಲ್ಲಿಲ್ಲ. ಇದ್ದರೆ ಹೇಳುತ್ತಿದ್ದೆ. ನಮ್ಮ ಕಡೆ ಅವರು ಬೀಗತನ ಮಾಡಿದ್ದಾರೆ. ನೀವು ಮರೆಯಬೇಡಿ, ಕಾಳಜಿ ಮಾಡಿ ಎಂದು ಹೇಳುತ್ತಿದ್ದೆ. ಈ ಹೈಕೋರ್ಟ್ ಪೀಠ ಗುಲಬರ್ಗಾಕ್ಕೆ ಮತ್ತು ಇಲ್ಲಿ ಸರ್ಕಿಟ್ ಬೆಂಚ್ ಇಮ್ಮೀಡಿಯೆಟ್ ಸ್ಟಾರ್ಟ್ ಆಗಲಿ. ಮುಂದೆ ಹುಬ್ಬಳ್ಳಿ–ಧಾರವಾಡದೊಳಗೆ ಶಾಶ್ವತವಾದಂಥ ಹೈಕೋರ್ಟ್ ಪೀಠ ಬರಲಿಕ್ಕೇನೇನು ಕ್ರಮ ಕೈಗೊಳ್ಳಬೇಕು, ಆ ಎಲ್ಲಾ ಕ್ರಮಗಳನ್ನು ತಾವು ಕೈಗೊಳ್ಳಬೇಕೆನ್ನುವಂಥ ಮಾತನ್ನು ಹೇಳುತ್ತಾ....

ಉಪಾಧ್ಯಕ್ಷರು : ಈಗ ಪಾಟೀಲರೆ, ನೀವು ಬಹಳ ಕಡಿಮೆ ಮಾತನಾಡುತ್ತೀರೆಂದು ಬಹಳ ಜನ ಇದ್ದರು. 5–10 ನಿಮಿಷಗಳಲ್ಲೇ ಮಾತು ಮುಗಿಸಿಬಿಡುತ್ತಾರೆಂದು ನಿಮಗೆ ಅವಕಾಶ ಕೊಟ್ಟು ನಿಲ್ಲಿಸಿದರೆ, ಒಂದೂಕಾಲು ಗಂಟೆ ಮಾತನಾಡಿಬಿಟ್ಟಿರಲ್ಲಾ. ನೀವು ಮಾತನಾಡುತ್ತಿರುವುದು ನಿಜವಾಗಲೂ ಒಳ್ಳೆಯ ಸಬ್ಜೆಕ್ಟೇ. ಸಬ್ಜೆಕ್ಟ್ ಮೇಲೆ ಒಳ್ಳೆಯ ಕಮ್ಯಾಂಡ್ ಇದೆ, ಆದರೆ, ಅದನ್ನು ಈ ಸಂದರ್ಭದಲ್ಲಿ ಮಾತನಾಡಬಾರದಾಗಿತ್ತು.

ಶ್ರೀ ಡಿ.ಆರ್.ಪಾಟೀಲ್ : ಮತ್ತೆ ಯಾವ ಸಂದರ್ಭದಲ್ಲಿ ಮಾತನಾಡುವುದು?

ಉಪಾಧ್ಯಕ್ಷರು : ಅದಕ್ಕೆ ಬೇರೆ ಅವಕಾಶಗಳಿದ್ದವು. ನೀವು ಕೇಳಿದ್ದರೆ, ನಾವು ಹೇಳುತ್ತಿದ್ದೆವು.

ಶ್ರೀ ಡಿ.ಆರ್.ಪಾಟೀಲ್: ಬೇರೆ ಅವಕಾಶಗಳೇ ಸಿಗುವುದಿಲ್ಲವಲ್ಲಾ.

ಶ್ರೀ ಉಪಾಧ್ಯಕ್ಷರು : ಈಗ ನೀವು ಮುಗಿಸಿ. ಆಮೇಲೆ, ನಾನು ಏನು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಕಾರಜೋಳರವರೆ, ಮತ್ತೆ ಮಧ್ಯದಲ್ಲೇಕೆ? ನೀವು ಉತ್ತರ ಕೊಡುವ ಸಮಯದಲ್ಲಿ ಬೇಕಾದರೆ ಹೇಳಿ. ಅವರು ಮುಗಿಸಲಿ. ನೀವು ಕನ್‌ಕ್ಲೂಡ್ ಮಾಡಿ. ಆಮೇಲೆ, ಅವರು ಉತ್ತರ ಕೊಡಲಿ.

ಶ್ರೀ ಡಿ.ಆರ್.ಪಾಟೀಲ್ : ಆ ವೀವರ್ಸ್, ರೈಲ್ವೆ ಲೈನ್ ಬಗ್ಗೆ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):- ವೀವರ್ಸ್ ಬಗ್ಗೆ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಪರ್ಟಿಕ್ಯುಲರ್‌ಲಿ, ಬಿಜಾಪುರ್-ಗದಗ್, ಬ್ರಾಡ್‌ಗೇಜ್ ಗೇಜ್ ಕನ್‌ವರ್ಷನ್‌ದ್ದು ಇದೇ ತಿಂಗಳು 20.36 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ರೈಲ್ವೆ ಇಲಾಖೆಗೂ ಮತ್ತು ನಮಗೂ ಒಪ್ಪಂದದ (ಕರ್ನಾಟಕ ಸರ್ಕಾರಕ್ಕೂ ಮತ್ತು ರೈಲ್ವೆ ಇಲಾಖೆಗೂ) ಪ್ರಕಾರ ನಾವು ಕೊಡಬೇಕಾದಂಥದ್ದು 20.36 ಕೋಟಿ ರೂಪಾಯಿ. ಅದಕ್ಕಾಗಿ ನಾವು ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ರೈಲ್ವೆ ಇಲಾಖೆಯವರು ಎಸ್ಕಲೇಷನ್ ಕೇಳುತ್ತಿದ್ದಾರೆ. ಎಸ್ಕಲೇಷನ್ ಕೇಳುವುದನ್ನು ಅವರು ನಿರ್ದಿಷ್ಟ ಎಷ್ಟೆಂದು ಅವರು ಹೇಳಿಲ್ಲ. ಎಸ್ಕಲೇಷನ್ ಅನ್ನು ನಾವು ಎಷ್ಟರಮಟ್ಟಿಗೆ ಒಪ್ಪಿಕೊಳ್ಳಬೇಕು? ನಾವು ಎಷ್ಟರಮಟ್ಟಿಗೆ ಕಾರಣೀಭೂತರಾಗಲಿಕ್ಕೆ ಎನ್ನುವುದನ್ನು ಚರ್ಚೆ ಮಾಡಿ ಫೈನಲ್ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ನಾನು ಆ ಝೋನಲ್ ಆಫೀಸರ್ ಜೊತೆ ಚರ್ಚೆ ಮಾಡಿ ಬಂದಿದ್ದೇನೆ. ಅವರು ಈ ಸಾರಿ ನಾವು ಬಾಗಲಕೋಟೆಯವರೆಗೆ ಪೂರ್ತಿ ಮಾಡುತ್ತೇವೆ, ಬಾಗಲಕೋಟೆಯಿಂದ ಗದಗ್‌ವರೆಗೆ ಮಾಡಬೇಕೆಂದರೆ ನೀವು ಮತ್ತೆ ದುಡ್ಡು ಕೊಡಬೇಕು, ನಿಮ್ಮ ಷೇರ್ ಕೊಡಬೇಕೆಂದು ಹೇಳಿದ್ದಾರೆ. ಈ ರೀತಿ ರಾಜ್ಯ ಸರ್ಕಾರದ ಮಟ್ಟದಲ್ಲಿ ಒಪ್ಪಂದವಾಗಿದೆ ಎಂದೂ ಹೇಳಿದ್ದಾರೆ. ದಯವಿಟ್ಟು, ತಾವು: ಕಾರಜೋಳರವರು, ಬಾಗಲಕೋಟೆಗೇ ಮಾತ್ರ ಸೀಮಿತವಾಗಬಾರದು. ನೀವು ಮೊದಲು ಶಾಸಕರಾದಾಗ ಆ ಜಿಲ್ಲೆಗೆ ಮಾತ್ರ ಸೀಮಿತರಾಗಿದ್ದಿರಿ. ಈಗ ಮಂತ್ರಿಗಳಾಗಿದ್ದೀರಿ. ಇಡೀ ರಾಜ್ಯಕ್ಕೆ ನೀವು ಸೀಮಿತರಾಗಿರುವವರು. ಗದಗ್‌ವರೆಗೆ ಆ ಲೈನ್ ಬರುವ ಹಾಗೆ ನೀವು ಮಾಡಬೇಕು. ಅದಕ್ಕೆ ಬೇಕಾದಂಥ ಹಣಕಾಸನ್ನು ಬಿಡುಗಡೆ ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಮಾಡಲಿಲ್ಲವೆಂದರೆ ಬಹಳಷ್ಟು ತೊಂದರೆಯಾಗುತ್ತದೆ. ಒಂದು ನಿಮ್ಮಿಂದ ನಾನು ಆಪೇಕ್ಷೆ ಮಾಡಿದ್ದೆ. ನೀವೂ ನನ್ನ ಜೊತೆಗೆ ವಿವರ್ಸ್‌ಗೆ ನಿತ್ಯ ಉದ್ಯೋಗ ಸಿಗುವ ಹಾಗೆ ಪ್ರಯತ್ನ ಮಾಡಲಿಕ್ಕೆ ಯಾವಾಗಲೂ ಕೈಗೂಡಿಸುತ್ತಿದ್ದಿರಿ. ಈವಾಗ ನೀವು ಅಧಿಕಾರದೊಳಗೇ ಇದ್ದೀರಿ. ಈಗ ನಿಮ್ಮಿಂದ ನಾನು ಅಪೇಕ್ಷೆ ಮಾಡಿದ್ದೆ ನಾನು ತಾವು ಸರ್ಕಾರದಿಂದ ಖರೀದಿ ಮಾಡುವಂಥ ಬಟ್ಟೆ, ಬೇರೆ ಬೇರೆ ಇಲಾಖೆ ಮುಖಾಂತರ, ಬೇರೆ ಬೇರೆ ಸಂಘ-ಸಂಸ್ಥೆಗಳ ಮುಖಾಂತರ ಖರೀದಿ ಮಾಡುವಂಥ ಬಟ್ಟೆ, ನಾವು ಹ್ಯಾಂಡ್‌ಲೂಮ್ಸ್, ಖಾದಿ ಮತ್ತು ಪವರ್‌ಲೂಮ್ ಸೆಕ್ಟಾರ್‌ನಿಂದಲೇ ಮಾಡುತ್ತೇವೆಂಬ ಭರವಸೆ ನಿಮ್ಮಿಂದ ಬರುತ್ತದೆಂದು ನಾನು ತಿಳಿದಿದ್ದೆ, ಬರಲಿಲ್ಲ ಏಕೆ. ಸುಮ್ಮನೆ

ಕುಳಿತಿರಿ ನೀವು? ಅದನ್ನು ಮಾಡಿ. ಕೆಲಸ ದಯವಿಟ್ಟು ಅದನ್ನು ಮಾಡಿ. ನೀವು ಮುಧೋಳ ತಾಲ್ಲೂಕಿನಿಂದ ಬಂದವರು. ಖಾದಿ ಸೆಕ್ಟಾರ್‌ನಲ್ಲಿ ಸ್ವಲ್ಪ ಕೆಲಸ ಮಾಡಿದ್ದೀರಿ. ಖಾದಿ ರಿಬೇಟ್ ಕೊಡುವುದಿದೆಯೆಲ್ಲಾ ಬಹಳವಿಲ್ಲ, 8 ಕೋಟಿ ರೂಪಾಯಿ ರಿಬೇಟ್ ಇರುತ್ತದೆ. ಈ ರಿಬೇಟ್ ಕೊಡುವುದನ್ನು ತೆಗೆದುಕೊಳ್ಳುವುದಕ್ಕೆ ಆ ಖಾದಿ ಸೆಕ್ಟಾರ್‌ನವರು ಎಷ್ಟು ಪರಿತಾಪ ಪಡುತ್ತಾರೆನ್ನುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ನೀವು ದಯವಿಟ್ಟು ಪ್ರತಿ ಕ್ವಾರ್ಟರ್‌ನಲ್ಲಿ ಅವರಿಗೆ ಇರುವಂಥ ರಿಬೇಟ್ ರೆಗ್ಯುಲರ್ ಆಗಿ ರಿಲೀಸ್ ಆಗುವ ಹಾಗೆಮಾಡಿ. ನಿಮ್ಮ ರಿಬೇಟ್ ಕೇಳುವುದಕ್ಕೆ ಅವರು ಬೆಂಗಳೂರಿಗೆ ಬರಬಾರದು. ಆ ರೀತಿಯ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಕೊನೆಯದಾಗಿ, ಈಗ ನಾವು ಹಿಂದುಳಿದ ವರ್ಗ ಎಸ್‌ಸಿ:ಎಸ್‌ಟಿ ಅಲ್ಪಸಂಖ್ಯಾತರ ಸಲುವಾಗಿ ಶಿಕ್ಷಣದಲ್ಲಿ ನಾವು ಹಾಸ್ಟೆಲ್ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈ ಹಾಸ್ಟೆಲ್‌ನೊಳಗೆ ಪೋಸ್ಟ್–ಮೆಟ್ರಿಕ್‌ನವರಿಗೆ 450 ರೂಪಾಯಿ ಕೊಡುತ್ತೇವೆ. ಈಗ ಮತ್ತೆ 500 ರೂಪಾಯಿಗಳಾಗಿದೆ. ಪ್ರಿ–ಮೆಟ್ರಿಕನ್‌ವರಿಗೆ 400 ರಿಂದ 450 ರೂಪಾಯಿಗಳಾಗಿದೆ. ನಾವು ಅವರ ಸಿಬ್ಬಂದಿ ವರ್ಗದ ಸಂಬಳ ಕೊಡುತ್ತೇವೆ. ಗ್ಯಾಸ್ ಚಾರ್ಜ ಕೊಡುತ್ತೇವೆ. ಇದು ಬರೇ ಫುಡ್‌ಗ್ರೇನ್ ವೆಜಿಟೇಬಲ್ಸ್ ಇದನ್ನು ಖರೀದಿ ಮಾಡಲಿಕಷ್ಟೆ. ನಾನು ನನ್ನ ಕ್ಷೇತ್ರದೊಳಗೆ ಒಂದು ಎಸ್‌ಸಿ:ಎಸ್‌ಟಿ ಹಾಸ್ಟೆಲ್ ಜವಾಬ್ದಾರಿಯನ್ನು ಒಂದು ಗ್ರಾಮದವರಿಗೆ ಕೊಟ್ಟಿದ್ದೆ. ಇವರಿಗೆ ನೀವು ಚೆನ್ನಾಗಿ ಊಟ ಕೊಡಬೇಕು. ಕೈಯಿಂದ ಬಿದ್ದರೆ ನಾವೆಲ್ಲರೂ ಕೂಡಿ ಪಟ್ಟಿ ಹಾಕಿಕೊಳ್ಳೋಣ ಎಂಬ ಉದ್ದೇಶದಿಂದ ಮಾಡಿದೆವು. ದಯವಿಟ್ಟು ನೀವು ಇದನ್ನು ರನ್ ಮಾಡಿ ಎಂದು ಹೇಳಿದೆ. ಅವರು ಒಂದು ವರ್ಷ ರನ್ ಮಾಡಿದರು. ಅವರು ನನಗೆ ಸರ್ಕಾರವೇನು ಅನುದಾನ ಕೊಡುತ್ತದೆ. ಅದರೊಳಗೆ ನಾವು ನಾವು ಒಂದು ಜಿಲ್ಲೆಗೆ ನಮ್ಮ ಕೈಯಿಂದ ಖರ್ಚು ಮಾಡಿಲ್ಲ. ಅದರೊಳಗೇ ಇಷ್ಟು ಉತ್ತಮವಾದಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆಂದು ರಿಪೋರ್ಟ್ ಮಾಡಿದರು. ನಾವು ಹೋಗಿ ಹುಡುಗರ ಜೊತೆ ಚರ್ಚೆ ಮಾಡಿದ್ದೆವು. ಇದು ನಮಗೆ ಬಹಳ ಆರಾಮವಾಗಿದೆ, ಬಹಳ ಚಲೋ ಆಗಿದೆ ಎಂದರು. ಅದು ಪೋಸ್ಟ್ –ಮೆಟ್ರಿಕ್. ನಾನು ಹಾಗಾದರೆ ಡಿವೈಡಿಂಗ್ ಸಿಸ್ಟಂ ತರುತ್ತೇವೆ. ಇದನ್ನು ನೀವೇ ಜವಾನಬ್ದಾರಿ ಹೊರಿ ಎಂದೆ ಎಕೋ ಅವರು ಒಲ್ಲೆ ಅಂದರು ನಿಮಗೆ ಸರ್ಕಾರ ಕೊಡುವಂಥ ಅನುದಾನದೊಳಗೆ ಉತ್ತಮ ಗುಣಮಟ್ಟದ ಊಟವನ್ನು ನಾವು ಅವರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಇದು ಸಾಧ್ಯವಾಗಬೇಕೆಂದರೆ, ನೀವು ಆ ಪೋಸ್ಟ್–ಮೆಟ್ಟಿಕ್‌ನೊಳಗಾದರೂ ಇದನ್ನು ಪ್ರಯೋಗಾತ್ಮಕವಾಗಿ ನೀವು ಡಿವೈಡಿಂಗ್ ಸಿಸ್ಟಂ ಅನ್ನು ತನ್ನಿ. ಆ ಹುಡುಗರಿಗೆ ಆ ಜವಾಬ್ದಾರಿಯನ್ನು ಕೊಡಿ. ರೇಷನ್ ಖರೀದಿ ಮಾಡುವುದು, ನಮ್ಮ ಗೌಡರು ಹೇಳಿದಹಾಗೆ, ಪಂಚಾಯಿತಿಗೆ ಕೊಟ್ಟರೂ ಅಡ್ಡಿ ಇಲ್ಲ. ಅವರು ಕಾಳಜಿ ಮಾಡುತ್ತಾರೆ. ಏಕೆಂದರೆ ಅವರಿಗೆ ಬೇಕಾದ ಹುಡುಗರು ಊಟ ಮಾಡುತ್ತಿರುತ್ತಾರೆ. ಇಲ್ಲವೆಂದರೆ, ಅವರು ಹೋಗಿ ಜಗಳ ಮಾಡುತ್ತಾರೆ. ಈಗಿದ್ದಂಥ ಒಂದು ವ್ಯವಸ್ಥೆಯೊಳಗೆ ಸಾಕಷ್ಟು ಸೋಲಾಗುತ್ತದೆ. ಈ ವಿದ್ಯಾರ್ಥಿಗಳಿಗೆ ಸರಿಯಾಗಿ ಊಟದ ವ್ಯವಸ್ಥೆಯಾಗುತ್ತಿಲ್ಲ. ಅದಕ್ಕೆ ದಯವಿಟ್ಟು ಈ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುವುದರಲ್ಲಿ ತಾವು ಕಾಳಜಿ ವಹಿಸಬೇಕು. ಏಕೆಂದರೆ ತಾವು ಆ ವರ್ಗದಿಂದ ಬಂದವರು. ನೀವು ಆ ಯುವಕರ ಹಿತರಕ್ಷಣೆಯನ್ನು ಮಾಡಬೇಕೆಂದು ಹೇಳಿ. ಇನ್ನೂ ಮಾತನಾಡುವುದಕ್ಕೆ 10ನಿಮಿಷ ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು

ಉಪಾಧ್ಯಕ್ಷರು : ಇಲ್ಲ, ಮುಗಿಸಿ

ಶ್ರೀ ಡಿ.ಆರ್.ಪಾಟೀಲ್: ನನಗೆ ಅವಕಾಶ ಕೊಟ್ಟಿದ್ದಕ್ಕೆ ನಿಮಗೆ ಕೃತಜ್ಞತೆಗಳನ್ನು ಹೇಳಲಿಕ್ಕಾದರೂ ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷರು: ನಾವು ಅರ್ಧ ಗಂಟೆ ಆಮೇಲೆ ಹೊರಗಡೆ ಮಾತನಾಡಿಕೊಳ್ಳೋಣ. ಈಗ ಸದ್ಯಕ್ಕೆ ನಮ್ಮನ್ನು ಬಿಟ್ಟುಬಿಡಿ.

ಶ್ರೀ ಡಿ.ಆರ್.ಪಾಟೀಲ್ : ಈ ಬದಲಾಣೆಗಳನ್ನು ತಾವೆಲ್ಲರೂ ತರಬೇಕೆಂದು ಒತ್ತಾಯ ಮಾಡಿ ಈ ಪೇಸ್ ಲಿಫ್ಟ್ ಮಾಡುವಂಥ ಬಡ್ಜೆಟ್ ಏನಿದೆ ಇದನ್ನು ವಿರೋಧ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮೂರೂಕಾಲು ಗಂಟೆಗೆ ಸೇರುವಂತೆ ಮುರೂಕಾಲು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು 3 ಗಂಟೆ 37 ನಿಮಿಷಕ್ಕೆ ಸಮಾವೇಶ ಗೊಂಡಿತು)

(ಮಾನ್ಯ ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಡಿಸಿಎಂರವರು ಎಲ್ಲಿದ್ದಾರೆ ನೋಡಿ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಆಪೀಷಿಯಲ್ ಗ್ಯಾಲರಿಯಲ್ಲಿ ಯಾರೂ ಅಧಿಕಾರಿಗಳು ಇಲ್ಲ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಉಪ ಮುಖ್ಯಮಂತ್ರಿಗಳು ಮಂತ್ರಿಗಳು ಮತ್ತು ಅಧಿಕಾರಿಗಳ ಗ್ಯಾಲರಿಯಲ್ಲಿ ಇಲ್ಲದಿರುವ ಬಗ್ಗೆ

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಯಕ್ಷರೆ, ದಯವಿಟ್ಟು ನಾನು ತಮಗೆ ಹಿಂದೆಯೇ ಹೇಳಿದ್ದೆ, ಇವತ್ತು ಯಾರ್ಯಾರು ಮಂತ್ರಿಗಳು ಇಲ್ಲಿ ಇರಬೇಕೆಂದು ತಾವು ಅಲಾಟ್ ಮಾಡಿತರಕ್ಕಂಥಃ ಲಿಸ್ಟ್‌ನ್ ತೆಗೆದುಕೊಳ್ಳಬೇಕು. ಮತ್ತೆ ಇವತ್ತು ಯಾವ ಯಾವ ಆಫೀಸರ್‌ಗಳು ಬರಬೇಕೆಂದು ಹೇಳಿರತಕ್ಕಂಥಃ ಲಿಸ್ಟ್‌ನ್ನು ತೆಗೆದುಕೊಳ್ಳಿ. ಸದನಕ್ಕೆ ಗೌರವ ಕೊಡುವುದಿಲ್ಲವೆಂದು ಈ ಹಿಂದೆ ತಾವು ಸಿಟ್ಟಿಗೆ ಎದ್ದಿದ್ದೀರಿ. ಈಗ ಹೊರಗಡೆ ಹೋದರೆ ಎಲ್ಲರೂ ಅಲ್ಲಿಯೇ ಇರುತ್ತಾರೆ. ನಾವು ಹಳ್ಳಿಯಿಂದ ಬಂದಿದ್ದೇವೆಂದು ಅವರು ತಿಳಿದುಕೊಂಡಿದ್ದಾರೆ.

ಅಧ್ಯಕ್ಷರು: ಚೀಫ್ ವಿಪ್ ಎಲ್ಲಿಗೆ ಹೋಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಮಂತ್ರಿಗಳು ಎಲ್ಲಿಗಾದರೂ ಹೋಗಿರುತ್ತಾರೆ. ಆದರೆ ಸಂಬಂಧಪಟ್ಟಂತಹ ಆಫೀಸರ್ಸ್‌ಗಳು ಗ್ಯಾಲರಿಯಲ್ಲಿ ಇರಬೇಕಲ್ಲವೇ?

ಅಧ್ಯಕ್ಷರು: ಇನ್ನೇನು ಕರೆಯುವುದು ಬಿಲ್ ಹಾಕಿದ ಮೇಲೆ ಅವರೇ ಬರಬೇಕಲ್ಲವೇ? ಮಾನ್ಯ ಚಲುವರಾಯಸ್ವಾಮಿಯವರೆ, ಇದು ನಿಮ್ಮ ಸರ್ಕಾರಕ್ಕೆ ಗೌರವ ತರತಕ್ಕಂತಹ ವಿಚಾರವಲ್ಲ. ಇಲ್ಲಿ ಮಂತ್ರಿಗಳು ಇಲ್ಲ, ಶಾಸಕರೂ ಕೂಡ ಇಲ್ಲ. ನೀವು ಬಜೆಟ್‌ನ್ನು ಪಾಸು ಮಾಡಿಸೊಕೊಳ್ಳಬೇಕು. ಬೇರೆ ಬೇರೆ ಬಿಲ್‌ಗಳನ್ನು ಇಂಟ್ರಡ್ಯೂಸ್ ಮಾಡಿಸಿ ಪಾಸ್ ಮಾಡಿಸಿಕೊಳ್ಳಬೇಕು. ಇದಕ್ಕೆಲ್ಲಾ ನಿಮ್ಮ ಶಾಸಕರು, ಮಂತ್ರಿಗಳು ಇರಬೇಕಲ್ಲವೇ? ಈ ರೀತಿಯಾದರೆ ಹೇಗೆ? ಹಾಗೆಯೇ ಅಧಿಕಾರಿಗಳೂ ಸಹ ಇರಬೇಕಾಗುತ್ತದೆ. ಅದರೆ ಅವರೆಲ್ಲರೂ ಬಾಯ್‌ಕಾಟ್ ಮಾಡಿದ ರೀತಿಯಲ್ಲಿ ಹೋಗಿದಾರೆ. ಇದು ನಿಜವಾಗಿಯೂ ಯಾರಿಗೂ ಗೌರವ ತರಕ್ಕಂಥಹದ್ದು ಅಲ್ಲ. ಅನೇಕ ಸಾರಿ ವಿರೋಧ ಪಕ್ಷದವರು ಈ ವಿಷಯವನ್ನು ಪ್ರಸ್ತಾವನೆ ಮಾಡುತ್ತಿದ್ದು ಅವರು ಒಂದು ಸಾರಿ ಎರಡು ಸಾರಿ ಎತ್ತಿದ ಮೇಲೆ ಇದರ ಬಗ್ಗೆ ನೀವು ಎಚ್ಚತ್ತು ಕೊಲ್ಲದಿಂದರೆ ಮಾನು ಏನು ಹೇಳಬೇಕೆಂಬುದು ಅರ್ಥವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೆ, ನೀವು ಛೀಮಾರಿ ಹಾಕಿದರೂ ಅವರು ಬರುವುದಿಲ್ಲವೆಂದರೆ ಹೇಗೆ If we are shameful of they are shameful I cannot understand. ಬಜೆಟ್ ಸೆಷನ್ ಇದ್ದಾಗಲೂ ಕೂಡ ಆಫೀಸರ್ ಗ್ಯಾಲರಿಯಲ್ಲಿ ಇರತಕ್ಕಂಥಹ ಆಫೀಸರ್ಸ್‌ಗಳಿಗೂ ಹೆದರಿಕೆ ಇಲ್ಲ. ಮತ್ತೆ ಫ್ರಂಟ್ ಲೈನ್‌ನಲ್ಲಿ ಬಜೆಟ್ ಮಂಡಿಸಿರುವಂತಹವರು ಹಾಗೂ ಮುಖ್ಯಮಂತ್ರಿಗಳು ಇರುವುದಿಲ್ಲ. ಈ ರೀತಿಯಾದರೇ ಹೇಗೆ ಯಾರೋ ಮಾತನಾಡುತ್ತಾರೆ. ಅದಕ್ಕೆ ನಮಗೆ ಸಂಬಂಧವಿಲ್ಲ ಎನ್ನುವುದಾದರೆ ಒಪ್ಪಿಕೊಳ್ಳುತ್ತೇನೆ ಇದರ ಬಗ್ಗೆ ಎಷ್ಟು ಸಾರಿ ಹೇಳುವುದು, 10 ಸಲ ಹೇಳಿದ್ದೇವೆ, ಪದೇಪದೇ ಇದೇ ರೀತಿ ಹೇಳುತ್ತಿದ್ದೇವೆ. If we are very bad and it canies very poor massage to the people about the Assembly.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಸಲಹೆ ಕೊಡಲಿ, ಆದರೆ ಛೀಮಾರಿ ಎನ್ನುವಂತಹ ಪದವನ್ನು ಕಡತದಿಂದ ದಯಮಾಡಿ ತೆಗೆಸಿ. ನೀವು ಈ ಕಡೆ ಕುಳಿತು ಈಗ ಆ ಕಡೆಗೆ ಹೋಗಿ ಕುಳಿತುಕೊಂಡಿದ್ದೀರಿ. ನೀವು ಮೊದಲು ಹೇಳುತ್ತಿದ್ದ ಹಾಗೆ ಇಲ್ಲಿ ಕುಳಿತು ಏನು ಅನುಭವ ಇಲ್ಲದೇ ಇದ್ದರೆ ತಾವು ಹೇಳಿದಹಾಗೆ ನಾನು ಒಪ್ಪಿಕೊಳ್ಳುತ್ತಿದ್ದೆ. ನೀವು ಆಡಳಿತ ಪಕ್ಷದಲ್ಲಿದ್ದಾಗ ನಾನು ಅತ್ತ ಕಡೆ ಸುಮಾರು ನಾಲ್ಕೂವರೆ ವರ್ಷಗಳವರೆಗೆ ಕುಳಿತು ನಾನೂ ಸಹ ಇಲ್ಲಿ ಹೇಗಿತ್ತು ಎಂಬುದನ್ನು ನೋಡಿದ್ದೇನೆ. ನೀವು ಈಗ ಹೇಳಿರುವುದೆಲ್ಲವನ್ನೂ ನಾನು ತೆಗೆದು ಹಾಕುತ್ತಿಲ್ಲ. ಈಗ ನಾಲ್ಕು ಜನ ಸಚಿವರು ಇಲ್ಲಿ ಇದ್ದೇವೆ. ಉಪ ಮುಖ್ಯಮಂತ್ರಿಗಳು ಬರುವುದಕ್ಕೆ ಹೇಳಿದ್ದು, ಇನ್ನು 5 ನಿಮಿಷದಲ್ಲಿ ಅವರು ಬರುತ್ತಾರೆ. ಅಧಿಕಾರಿಗಳು ಬಂದಿಲ್ಲ ಎನ್ನುವುದು ತಪ್ಪು ಇದೆ, ತಕ್ಷಣ ಅವರಿಗೆ ಏನು ಇನ್‌ಸ್ಟ್ರಕ್ಷನ್ ಕೊಡಬೇಕೋ ಅದನ್ನು ಕೊಡುತ್ತೇವೆ. ಮತ್ತೆ ಇನ್ನೊಂದು ಸಾರಿ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಟೈಮ್ ಕೊಟ್ಟ ಮೇಲೆ ಬಜೆಟ್ ಪ್ರೆಸೆಂಟ್ ಮಾಡಿದವರು ಇಲ್ಲಿ ಇರಲೇಬೇಕು. what is this? ನಾವು ಖಾಲಿ ಕುರ್ಚಿಗೆ ಮಾತನಾಡುವುದಕ್ಕೆ ಬಂದಿದ್ದೀವಾ?

ಶ್ರೀ ಎನ್. ಚಲುವರಾಯಸ್ವಾಮಿ: ಅಧ್ಯಕ್ಷರೆ, ಬಜೆಟ್ ಮಾಡಿದವರು ಇಲ್ಲದೇ ಇದ್ದಾಗ ಪಕ್ಕದವರು ಜವಾಬ್ದಾರಿಯನ್ನು ತೆಗೆದುಕೊಂಡು ಉತ್ತರ ಕೊಟ್ಟಿರುವುದನ್ನು ನಾವು ನೋಡಿಲ್ಲವೇ? ತಾವು ಈ ಸದನದಲ್ಲಿ 35 ವರ್ಷದಿಂದ ಇರುವವರು; ನಮಗೇ ಹೇಳುತ್ತಿದ್ದೀರಲ್ಲಾ.

ಶ್ರೀ ಆರಗ ಜ್ಞಾನೇಂದ್ರ : ನಿಮ್ಮ ಸರ್ಕಾರವಿದ್ದಾಗ ಕೊನೆಯ ಎರಡು ಅಧಿವೇಶನದ ಪರಿಸ್ಥಿತಿ ಇತ್ತಲ್ಲಾ, ಅದೇ ರೀತಿ ನಮಗೆ ಆಗಿದೆ, ಇದರಿಂದ ನಮಗೇನೂ ತೃಪ್ತಿ ತಂದಿಲ್ಲ. ನಮಗೆ ತೃಪ್ತಿ ತಂದಿದೆಯೆಂದು ನಾವೇನೂ ಹೇಳುವುದಿಲ್ಲ, ನಮ್ಮದು ಆರಂಭದಲ್ಲೇ ಹೀಗಾಗಿರುವುದರಿಂದ ಖಂಡಿತವಾಗಿ ಮುಂದೆ ತಿಳಿದುಕೊಳ್ಳುತ್ತೇವೆ.

ಶ್ರೀ ಎ. ಶ್ರೀ ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಆರಗ ಜ್ಞಾನೇಂದ್ರರವರು ಹೇಳಿದ ಹಾಗೆ ಇದೇ ಕೊನೆ ಅದಕ್ಕಾಗಿ ನಾವು ಈ ರೀತಿ ನಡೆ ನುಡಿ ತೋರಿಸುತ್ತಿದ್ದೇವೆ ಅಂದರೆ ನಮ್ಮದೇನೂ ಅಭ್ಯಂತರವಿಲ್ಲ. ಇಲ್ಲವೆಂದರೆ ಇವರ callous attitude ಏನಿದೆ, ಇದಕ್ಕೆ ನೀವು ದಿಕ್ಕಾರ ಹಾಕಿ ಸ್ವಲ್ಪ ಕಾಲ ಅಡ್ಜರ್ನ್ ಮಾಡಿ.

ಶ್ರೀ ಸಿದ್ಧರಾಮಯ್ಯ : ಮಂತ್ರಿಗಳು ಇಲದಲದೇ ಹೋದರೆ ಹೋಗಲಿ, ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳು ಯಾರಾದರೂ ಒಬ್ಬರು ಇದ್ದಾರೆಯೇ? ಪ್ಲಾನಿಂಗ್ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರೂ ಯಾರಾದರೂ ಇದ್ದಾರೆಯೇ? ಇದೇನು ಸರ್ಕಾರವೇ ಇದು. ಇದನ್ನು ಸರ್ಕಾರವೆಂದು ಕರೆಯುತ್ತಾರೆಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದ್ದ ಎಂಟು ದಿವಸಗಳಲ್ಲಿ ಮಂತ್ರಿಗಳೂ ಇಲ್ಲ, ಅಧಿಕಾರಿಗಳು ಇಲ್ಲ.

ಶ್ರೀ ಸಿದ್ಧರಾಮಯ್ಯ : ಸರ್ಕಾರಕ್ಕೆ ಈ ಅಧಿಕಾರಿಗಳ ಮೇಲೆ ನಿಯಂತ್ರಣವಿಲ್ಲ. ಏಕೆಮದರೆ ಈಗ ಸಮ್ಮಿಶ್ರ ಸರ್ಕಾರವಿದೆಯೆಲ್ಲಾ ಹಾಗಾಗಿ ಈ ಸಮ್ಮಿಶ್ರ ಸರ್ಕಾರದಲ್ಲಿ ಯಾರ **ಮಾತು** ಕೇಳಬೇಕು ಎಂಬ ಬಗ್ಗೆ ಗೊಂದಲ ಆಗಿ ಒಬ್ಬರೂ ಇಲ್ಲಿಗೆ ಬಂದಿಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ: ಈಗ ನಿಮಗೆ ಈ ರೀತಿ ಮಾತನಾಡಲಿಕ್ಕೆ ಒಳ್ಳೆಯ ಸಂದರ್ಭವಿದೆ. ಅದನ್ನು ಉಪಯೋಗಿಸಿಕೊಳ್ಳುತ್ತಿದ್ದೀರಿ. ಮಾತನಾಡಿ.

ಶ್ರೀ ಸಿದ್ಧರಾಮಯ್ಯ: ನಾನು ಹಣಕಾಸಿನ ಮಂತ್ರಿಯಾಗಿದ್ದಾಗ ಆ ಜಾಗ ಬಿಟ್ಟುಎಲ್ಲಿಯೂ ಹೋಗುತ್ತಿರಲಿಲ್ಲ. ಚರ್ಚೆ ನಡೆಯುವಾಗ ಅಲ್ಲೇ ಯಾವಾಗಲು ಕುಳಿತಿರುತ್ತದ್ದೆ. ಈ ಕಡೆ ಈಶ್ವರಪ್ಪನವರು ಇದ್ದಾಗ ಎದ್ದ ತಕ್ಷಣ ಬಹಳ ದೊಡ್ಡ ಗಂಟಲು ಮಾಡುತ್ತಿದ್ದರು. ನಿಮ್ಮ ನಿಮ್ಮ ಅಧಿಕಾರಿಗಳ ಮೇಲೆ ಕಂಟ್ರೋಲ್ ಮಾಡುವುದಿಲ್ಲ. ಇದೇನು ಸರ್ಕಾರವೇ? ಸರ್ಕಾರಕ್ಕೆ ಸ್ವಲ್ಪ ಛೀಮಾರಿ ಹಾಕಿ **ಅಧ್ಯಕ್ಷರೆ**, ಛೀಮಾರಿ ಹಾಕಿ.

ಅಧ್ಯಕ್ಷರು: ಈಗ ಮಾನ್ಯ ಯಡಿಯೂರಪ್ಪನವರು ಎಲ್ಲಿದ್ದಾರೆ?

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಬಜೆಟ್ ಸೆಷನ್ ಎಂಬುದು ಗೊತ್ತು. ವಿಷಯು ಚರ್ಚೆಗೆ ಬರುತ್ತದೆಂದು ಗೊತ್ತು, ಅವರುಗಳೇ ಆ ಸಮುಯುದಲ್ಲಿ ಇರುವುದಿಲ್ಲವೆಮದರೆ ಅವರಿಗೆ ಎಷ್ಟರಮಟ್ಟಿಗೆ ಆಡಳಿತದಲ್ಲಿ ವಿಶ್ವಾಸವಿದೆ ಮತ್ತು ಎಷ್ಟರಮಟ್ಟಿಗೆ ಅಸೆಂಬ್ಲಿ ಬಗ್ಗೆ ಕಾಳಜಿ ಇದೆ ಎನ್ನತಕ್ಕಂಥದ್ದನ್ನೂ ತೋರಿಸುತ್ತದೆ. ಈಗ ಕೇಳಿ ಬೇಕಾದರೆ ಅವರೇ ಇದ್ದಾರೆ, ನಾನು ವಿರೋಧಪಕ್ಷದಲ್ಲಿದ್ದಾಗ ಕೂಡ ಇಲ್ಲಿ ಅಸೆಂಬ್ಲಿ ಪ್ರಾರಂಭವಾದಾಗಿನಿಂದ ಹಿಡಿದು ಅಡ್ಜನ ಆಗುವವರೆಗೆ ಕೂರುತ್ತಿದ್ದೆ. ಈ ಬಗಗೆ ಯಾರನ್ನಾದರೂ ಕೇಳಿ, ಸರ್ಕಾರದಲ್ಲಿದ್ದಾಗಲೂ ಕೂಡ ಅಲ್ಲಿ ನನಗೆ ಅಲಾಟ್ ಆದರೆ ಅಲ್ಲಿರುತ್ತಿದ್ದೆ, ಇಲ್ಲಿ ಅಲಾಟ್ ಆದರೆ ಇಲ್ಲರುತ್ತಿದ್ದೆ. ಏನಿದು? ನಮಗೇನೂ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಖರ್ಗೆಯವರೇ, ಈಗ ನೀವು ಚರ್ಚೆ ಆರಂಭ ಮಾಡಿ ಬರುತ್ತಾರೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೆ ನೀವು ಪಾರಂಭ ಮಾಡಿ ಎಂದು ಹೇಳಿದರೆ ನಾವು ಚರ್ಚೆ ಪಾರಂಭಿಸಬಹುದು, ಆದರೆ ಒಂದೇನೇಂದರೆ, ಕೆಲವು ಮುಖ್ಯವಾದ ವಿಷಯಗಳನ್ನು ಹೇಳಬೇಕು. ನಾನು ಬಹಳ ಹೊತ್ತು ಮಾತನಾಡುವುದಿಲ್ಲ. ನಿಮಗೆ ಕೇಳಿಕೊಂಡೆ ಆಗಲೇ ಹೋದೆ, ಇಲ್ಲವಾದರೆ ನಾನು ಆಗಲೇ ಮಾತನಾಡುತ್ತಿದೆ. ಕೆಲವೊಂದು ಮುಖ್ಯವಾದ ಸಲಹೆಗಳನ್ನು ಕೊಡುತ್ತೇವೆ. ಮತ್ತೆ ಬಜೆಟ್‌ನಲ್ಲಿರುವಂಥ ವ್ಯವಸ್ಥೆಯೇನಿದೆ ಅದಕ್ಕೆ ಉತ್ತರವನ್ನು

ಕೊಡಬೇಕಾದರೆ ಬಜೆಟ್ ಅನ್ನು ಮಂಡಿಸಿದವರೇ ಕೊಡಬೇಕೇ ಹೊರತಾಗಿ ಬೇರೆಯವರು ಬರೆದುಕೊಂಡು ಕೊಡುವುದಕ್ಕೆ ಅವರಿಗೆ ಕಷ್ಟವಾಗುತ್ತದೆ, ಅದಕ್ಕೋಸ್ಕರ ನನ್ನ ಪ್ರಶ್ನೆಗೆ ಅವರೇ ಉತ್ತರಿಸಬೇಕಾಗುತ್ತದೆ. ಬೇರೆ ಪ್ರಶ್ನೋತ್ತರ. ಸ್ಟೇಟ್‌ಮೆಂಟ್, ಕಾಲಿಂಗ್ ಅಟೆನ್‌ಷನ್ ಇದ್ದಾಗ ಅವರ ಪರವಾಗಿ ಮತ್ತೊಬ್ಬರು ಓದಿದರೆ ಆಲ್‌ರೈಟ್ ಎಂದು ನಾನು ಹೇಳಬಹುದು.ಆದರೆ ಕೆಲವೊಂದು ಪ್ರಮುಖವಾದ ವಿಷಯಗಳನ್ನು ನಾನು ಅವರ ಮುಂದೆ ಪ್ರಸ್ತಾಪ ಮಾಡುವಾಗ ಅದರ ಪರಿಣಾಮ ಏನಾಗುತ್ತದೆ ಮತ್ತು ಅದರ ಪ್ರತಿ ಉತ್ತರ ಮುಂದೆ ಸಿಗುತ್ತದೆ...

ಅಧ್ಯಕ್ಷರು : ಈಗ ಡಿ.ಸಿ.ಎಂ. ಅವರನ್ನು ಕರೆಸಿ,ನಂತರ ಅವರು ಮಾತನಾಡುತ್ತಾರೆ. ಈಗ ಬೇರೆಯವರಿಗೆ ಅವಕಾಶ. ಮಾಡಿಕೊಡೋಣ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಡಿ.ಸಿ.ಎಂ.ರವರು ಬರುತ್ತಿರುವುದಾಗಿ ಮೆಸೇಜ್ ಕೊಟ್ಟಿದ್ದಾರೆ. ಅಧಿಕಾರಿಗಳಿಲ್ಲ ಒಪ್ಪುತ್ತೇವೆ. ಆದರೆ ಸಚಿವರು ಇದ್ದಾರೆ, ಹಣಕಾಸಿನ ಸಚಿವರು ಒಂದು ಹತ್ತು ನಿಮಿಷ ಇಲ್ಲಿ ಇಲ್ಲದೇ ಹೋದರೆ ಸಾಧ್ಯವೇ ಇಲ್ಲವೆಂದರೆ ಹೇಗೆ? ನಾನು ಕಳೆದ ನಾಲ್ಕೂವರೆ ವರ್ಷಗಳಿಂದ ನೋಡಿದ್ದೇನೆ. ಕೆಲವು ಬಾರಿ ಹಣಕಾಸಿನ ಸಚಿವರು ಇಲ್ಲಿರುತಲೇ ಇರಲಿಲ್ಲ. ಮಾನ್ಯ ಎಸ್.ಎಂ.ಕೃಷ್ಣರವರು ಫೈನಾನ್ಸ್ ಮಿನಿಸ್ಟರ್ ಆಗಿದ್ದಾಗ ಎಷ್ಟೋ ಬಾರಿ ಅವರಿಲ್ಲದೇ ಸದನ ನಡೆಯುತ್ತಿತ್ತು. ಅದನ್ನು ನಾನು ನೋಡಿದ್ದೆ, ಅವರು ಉತ್ತರಿಸಲಿಕ್ಕೆ ಇರಲೇಬೇಕೆಂದೇನೂ ಇಲ್ಲ. ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಈಗಲೇ ಅವರಿಗೆ ಕೋಟ್ ಮಾಡಿಕೊಂಡು ಮಾತನಾಡುತ್ತೀರಾ? ಅವರು ಸ್ಪೀಕರ್ ಆಗಿದ್ದರು, ಐದಾರು ವರ್ಷ ಮುಖ್ಯಮಂತ್ರಿಗಳಾಗಿದ್ದರು, ನೀವಿನ್ನೂ ಕಣ್ಣು ತೆರೆದಿಲ್ಲ, ಅವರಿಗೆ ನಿಮ್ಮನ್ನು ಕೋಟ್ ಮಾಡಿಕೊಂಡರೆ ಹೇಗೆ? ನೀವಿನ್ನೂ ಹುಟ್ಟಿ ಹೆಚ್ಚು ದಿವಸ ಆಗಿಲ್ಲ ಎಸ್.ಎಂ. ಕೃಷ್ಣ ರವರಿಗೆ ಸರಿಗಟ್ಟಿ ಮಾತನಾಡಿದರೆ ಹೇಗೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಹಣಕಾಸಿನ ಸಚಿವರು ಬರುತ್ತಾರೆಂದು ಹೇಳುತ್ತಿದ್ದೇವೆ.

ಶ್ರೀ ಮಹದೇವ: ಅಧಿಕಾರಿಗಳಾದರೂ ಇರಬೇಕು, ಇದೊಂದು ವಿತಂಡವಾದ, ಒಪ್ಪುವ ವಾದವಲ್ಲವಿದು. ಸಚಿವರು ಏನೋ ಬಿಜಿಯಾಗಿರಬಹುದು, ಎಲ್ಲೋ ಹೊರಗಡೆ ಹೋಗಿರಬೇಕು ಒಪ್ಪಿಕೊಳ್ಳೋಣ, ಫೈನಾನ್ಸ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ನೋಟ್‌ಡೌನ್ ಮಾಡಿಕೊಳ್ಳಲು ಅಧಿಕಾರಿಗಲೇ ಇಲ್ಲವಲ್ಲಾ? ಎಲ್ಲಿ ಹೋದರು, ನೋಡಿ ದಯಮಾಡಿ ಸದನವನ್ನು ಅಡ್ಜರ್ನ್ ಮಾಡಬೇಕು.

ಅಧ್ಯಕ್ಷರು : ಆಯಿತು, ಈಗ ಇದನ್ನು ಬೇರೆ ರೀತಿಯಲ್ಲಿ ವರ್ಣಿಸಿಕೊಂಡು ಹೋಗುವುದು ಬೇಡ ವಾದ ಬೇಡ. ಈಗ ಮಾನ್ಯ ಖರ್ಗೆಯವರೇ, ಡಿ.ಸಿ.ಎಂ. ಬರುತ್ತಿದ್ದಾರಂತೆ, ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ನಮ್ಮದಿರಲಿ, ನಾವು ಕಾಯೋದು ಬಿಡಿ, ನೀವು ಅವರಿಗೊಸ್ಕರ ಕಾಯಬೇಕಲ್ಲಾ? ಅಧ್ಯಕ್ಷರು ಬಂದು ಕುಳಿತು ಅವರು ಬರಲಿ, ಬರಲಿ ಎಂದು ಕಾಯಬೇಕೆಂದರೆ ಏನರ್ಥ?

ಅಧ್ಯಕ್ಷರು : ಮಾನ್ಯ ಖರ್ಗೆಯವರೇ, ನಾವಿಲ್ಲಿ ಕುಳಿತಿರಬೇಕು ಬಿಡಿ, ನೀವು ಹೇಳುವುದನ್ನು ನಾನು ಒಪ್ಪುತ್ತೇನೆ, ಚರ್ಚೆಯ ಸಮಯದಲ್ಲಿ ಅವರು ಇಲ್ಲಿರಬೇಕು. ಅವರೇನೋ ಹೊರಟಿದ್ದಾರೆ ಎಂದು ಹೇಳುತ್ತಿದ್ದಾರೆ ಒಂದೆರಡು ನಿಮಿಷ ಚರ್ಚೆ ಪ್ರಾರಂಭ ಮಾಡಿ ಬರುತ್ತಾರೆ. ಚೀಫ್ ವಿಪ್‌ರವರೇ, ನಿಮ್ಮ ಡಿ.ಸಿ.ಎಂ ಬರುತ್ತಿದ್ದಾರೆಯೇ? ಈಗ ಯಾರಾದರೂ ಮಾತನಾಡುತ್ತೀರಾ, ಮಾನ್ಯ ಹೆಗ್ಡೆಯವರನ್ನು ಕರೆದಿದ್ದೇನೆ. ಅವರು ಮಾತನಾಡಲಿ. ಪ್ರಾಥಮಿಕ ಶಿಕ್ಷಣ ಸಚಿವರೇ ಇಲ್ಲಿ ಬನ್ನಿ, ಯಾರು ಅಧಿಕಾರಿಗಳನ್ನು ಅಲಾಟ್ ಮಾಡಿದ್ದಾರೆ. ನೋಡಿ; ಏನಿದು? ಇದನ್ನೆಲ್ಲಾ ಸಹಿಸಿಕೊಳ್ಳಲಿಕ್ಕೆ ಆಗುವುದಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಹಣಕಾಸಿನ ಇಲಾಖೆಗೆ ಹೋಗಿ ಕೇಳಿದರೆ, ಅಧಿಕಾರಿಗಳು ಅಸೆಂಬ್ಲಿಯಲ್ಲಿದ್ದಾರೆದು ಹೇಳುತ್ತಾರೆ. ಇಲ್ಲಿ ನೋಡಿದರೆ ಅವರು ಇಲ್ಲ. ಎಲ್ಲಿಗೆ ಹೋಗಿದ್ದಾರೆ. ಅವರು? ಗಾಲ್ಫ್ ಗ್ರೌಂಡ್ಸ್‌ಗೇನಾದರೂ ಹೊಗಿದ್ದಾರೆಯೇ?

ಅಧ್ಯಕ್ಷರು: ಆಯಿತು, ಮಾನ್ಯ ನರೇಂದ್ರಬಾಬುರವರೇ, ಹೇಳಿ ತಾವು ಅವರಿಗೆ ಹೇಳಿ ಕಳುಹಿಸಿದ್ದೇನೆ. ನೋಡಿ ಆ ಅಧಿಕಾರಿಗಳನ್ನೆಲ್ಲಾ ಕರೆಸಿ, ಏಕೆ ಪ್ರತಿ ದಿನ ಅವರಿಂದ ಹೇಳಿಸಿಕೊಳ್ಳಬೇಕೇ. ಇದು ಗೌರವ ತರತಕ್ಕಂಥದ್ದಲ್ಲ.

8. ವಿತ್ತೀಯ ಕಾರ್ಯಕಲಾಪ

2006-7ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಳೆ ಮುಂದುವರೆದ ಚರ್ಚೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ ಈ ಬಜೆಟ್ಟಿನ ಮೇಲೆ ಚರ್ಚೆಯನ್ನು ಮಾಡುವಾಗ ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಿದ ಬಗ್ಗೆ ಚರ್ಚೆ ಆಯಿತು. ನಾನು ಈ ಆಯವ್ಯಯದ ಒಂದೆರಡು ಶಬ್ದಗಳನ್ನು ಓದುತ್ತೇನೆ.

ಪ್ಯಾರಾ 11 ರಲ್ಲಿ "ಕರ್ನಾಟಕವು ವಿತ್ತೀಯ ಸುಧಾರಣೆಗಳ ಮೂಲಕ ರಾಜಸ್ವ ಉಳಿಕೆ ಸಾಧಿಸಿದೆ, ಅಷ್ಟೆ ಅಲ್ಲ, ಅದನ್ನು ಆಸ್ತಿ ನಿರ್ಮಾಣದಲ್ಲಿ ಹೂಡಿಕೆ ಮಾಡಿ ರಾಜ್ಯದ ವೃದ್ಧಿದರಕ್ಕೆ ಕೊಡುಗೆ ನೀಡುತ್ತಿದೆ. ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದು ಆರ್ಥಿಕ ಸುಸ್ಥಿರತೆಯನ್ನೂ ಸಾಧಿಸಿದೆ"

ಪ್ಯಾರ 13 ರಲ್ಲಿ " ನಮ್ಮ ಇತ್ತೀಚಿನ ವರ್ಷಗಳ ವಿತ್ತೀಯ ಸುಧಾರಣೆಗಳು ಕರ್ನಾಟಕದಲ್ಲಿ ಆರ್ಥಿಕ ಸ್ಥಿರತೆಯನ್ನು ತಂದಿವೆ," ಎಂದು ಹೇಳುತ್ತಾರೆ.

ಪ್ಯಾರ 14 ರಲ್ಲಿ " ಈ ವಿತ್ತಿಯ ಗುರಿಸಾಧನೆಗೆ ಹನ್ನೊಂದನೆ ಹಣಕಾಸು ಆಯೋಗದ 65 ಕೋಟಿ ರೂ.ಗಳ ಪ್ರೋತ್ಸಾಹಧನ ರಾಜ್ಯಕ್ಕೆ ದೊರೆತಿದೆ." ಎಂದಿದೆ.

ಪ್ಯಾರ 16 ರಲ್ಲಿ " ಬಂಡವಾಳ ಹೂಡಿಕೆದಾರರಿಗೆ ಮಾಹಿತಿ ನೀಡುವ ರಾಷ್ಟ್ರಮಟ್ಟದ ಶ್ರೇಣಿ ನೀಡಿಕೆ ಏಜೆನ್ಸಿಯಾದ 'ಇಕ್ರಾ' ರಾಜ್ಯಕ್ಕೆ 'ಅತ್ಯುತ್ತಮ' (AAA) ಶ್ರೇಣಿ ನೀಡಿದೆ ಎಂದು ಹೇಳುತ್ತಾರೆ. ಈ ಶ್ರೇಣಿ ಇದುವರೆಗೂ ಯಾವ ರಾಜ್ಯಕ್ಕೂ ಲಭಿಸಿರುವುದಿಲ್ಲ.

ಪ್ಯಾರ 17 ರಲ್ಲಿ " ವಿತ್ತೀಯ ಸುಧಾರಣೆಯ ಹಾದಿಯಲ್ಲಿ ರಾಜ್ಯವು ಕಳೆದ ಐದು ವರ್ಷಗಳಲ್ಲಿ ಹಲವಾರು ತೆರಿಗೆ ಮತ್ತು ವೆಚ್ಚಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದಿದೆ. ಆದ್ದರಿಂದ ನಾನು ವಿತ್ತೀಯ ಸುಧಾರಣೆಯ ಹಾದಿಯಲ್ಲಿ ಮುನ್ನಡೆಯುವುದನ್ನು ಪ್ರಸ್ತಾಪಿಸುತ್ತಿದ್ದೇನೆ." ಎಂದು ಹಣಕಾಸು ಸಚಿವರು ಹೇಳಿದ್ದು ನಾನಲ್ಲ. ಮತ್ತೆ ಇದರ ಬಗ್ಗೆ ವಿರೋಧ ಪಕ್ಷದವರು ಹೇಳಿದ್ದಲ್ಲ. ಸರ್ಕಾರವೇ ಸರ್ಕಾರ ಮಂಡಿಸಿದ ಆಯವ್ಯಯದಲ್ಲಿ ಹಿಂದಿನ ಐದು ವರ್ಷಗಳು ಎಂದು ಹೇಳಿದೆ. ಮಾನ್ಯ ಶ್ರೀ ಕೃಷ್ಣರವರು ಬಂದರು. ಸಿದ್ದರಾಮಯ್ಯನವರು ಬಂದರು, ಕೆಲವು ಸಮಯ ಸಿಂಧ್ಯಾರವರು ಬಂದರು. ಸಿಂಧ್ಯಾರವರು ಹಿಂದೆ ಮಾಡಿದ ದುಡ್ಡನ್ನು ಖರ್ಚು ಮಾಡದೆ ಇಟ್ಟಿದ್ದರು. ಅವರು ಖರ್ಚು ಮಾಡಲಿಕ್ಕೆ ಹೋಗಲಿಲ್ಲ. ಆದ್ದರಿಂದ ಈ ವ್ಯವಸ್ಥೆ ಏನಿದೆ. ಕಳೆದ ಐದು ವರ್ಷಗಳಿಂದ ಬಿಟ್ಟರೆ ಕಳೆದ ಒಂದು ತಿಂಗಳಿಂದ ಆದುದ್ದಲ್ಲವೆಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆಯಿರಲಿಲ್ಲ. ಮಾನ್ಯ ಸಿದ್ಧರಾಮಯ್ಯನವರು ನಾವು ಹೊಗಳಿದ್ದಲ್ಲ. ಸರ್ಕಾರವೇ ಹೊಗಳಿದ್ದು, ಸರ್ಕಾರದ ಶಬ್ದಗಳನ್ನೇ ನಾನು ಸದನದಲ್ಲಿ ಓದಿದ್ದು, ಸತ್ಯವನ್ನೇ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಬಜೆಟ್ ಎಸ್ಟಿಮೇಟ್‌ನಲ್ಲಿ ಟೋಟಲ್ ರೆವಿನ್ಯೂನಲ್ಲಿ ಒಟ್ಟು 41,850 ಕೋಟಿ ರೂಪಾಯಿಗಳು. ರೆವಿನ್ಯೂ ಎಕ್ಸಪೆಂಡಿಚರ್ 36,340 ಕೋಟಿ ರೂಪಾಯಿಗಳು. ಅದರರ್ಥ ಉಳಿದ ಹಣವನ್ನೆಲ್ಲಾ ಖರ್ಚು ಮಾಡಿ ನಿಮ್ಮ ರಾಜಸ್ವಕ್ಕೆ ಸಿಕ್ಕಿರುವುದು 6,000 ಅಂಡ್ ಆಡ್.. ಈ ಎಕ್ಸ್‌ಪೆಂಡಿಚರ್ ಅನ್ನು ಕಡಿಮೆ ಮಾಡಲಿಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆಯೆನ್ನುವುದು ಬೇಕಾಗುತ್ತದೆ. ಏಕೆಂದರೆ ಕೇವಲ ಸಾಲವನ್ನು ಪಡೆದು ನಾವು ಅಭಿವೃದ್ಧಿಯನ್ನು ಮಾಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಅದನ್ನು ಬಿಟ್ಟು ಸಾಲವನ್ನು ಹೊರತುಪಡಿಸಿ ನಮ್ಮ ರೆವಿನ್ಯೂ ರಸೀಪ್ಟ್ಸ್ ನಲ್ಲಿ ಎಕ್ಸ್‌ಪೆಂಡಿಚರ್ ಅನ್ನು ಕಡಿಮೆ ಮಾಡಲಿಕ್ಕೆ ಸರ್ಕಾರ ಏನು ಮಾಡಿದೆ?

ಸ್ವಲ್ಪ ಹಿಂದೆ ಮಾಡಿದ ಕಾರ್ಯಕ್ರಮಗಳಿಗೆ ಹೊಸ ಹೆಸರನ್ನು ಇಟ್ಟಿದ್ದು ಒಂದು ಕಡೆಯಲ್ಲಿ ಆದರೆ, ಹಿಂದೆ ಕೊಟ್ಟಂತಹ ಕಾರ್ಯಕ್ರಮಗಳ ಅನುದಾನವನ್ನು ಈಗ ಎ.ಪಿ.ಎಂ.ಸಿ ಗೆ ರಿವಾಲ್ವಿಂಗ್ ಫಂಡ್‌ಗೆ 200 ಕೋಟಿರೂ ಯಿಂದ 240 ಕೋಟಿರೂ ಯನ್ನು ಕೊಟ್ಟಿದ್ದೀರಿ ಇದನ್ನು ಒಪ್ಪುತ್ತೇನೆ. ಇದು ಒಳ್ಳೆಯ ಕೆಲಸವಾಗಿದೆ. ಇನ್ನೂ ಹೆಚ್ಚಿಗೆ ಅಗ್ರಿಕಲ್ಚರ್ ಸೆಕ್ಟಾರ್‌ನಲ್ಲಿ ತಾವೇನು 4 ಪರ್ಸೆಂಟ್‌ಗೆ ತಂದಿದ್ದೀರಿ, ಇದರಿಂದ ರೈತರಿಗೆ ಬಹಳ ಸಹಾಯವಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರದವರು ಶೇಕಡ 7ರ ಬಡ್ಡಿ ಸಾಲವನ್ನು ಕೊಡುವಂಥಹ ತೀರ್ಮಾನ ಮಾಡಿದಾಗ, ರಾಜ್ಯ ಸರ್ಕಾರದವರು ಶೇಕಡ 4 ರಂತೆ ಕೊಟ್ಟರೆ ಶೇಕಡ 7 ಪರ್ಸೆಂಟ್‌ಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಯಾರೂ ಹೋಗುವುದಿಲ್ಲ. ಅದಕ್ಕಿಂತ ತಾವು ಇನ್ನೊಂದು ಮಾಡಬಹುದಿತ್ತು. ರಾಷ್ಟ್ರೀಕ್ರತ ಬ್ಯಾಂಕ್‌ನಲ್ಲಿ ಶೇಕಡ 7 ರಂತೆ ತೆಗೆದುಕೊಂಡವರಿಗೆ ರಾಜ್ಯ ಸರ್ಕಾರ ಶೇಕಡ 3 ರಷ್ಟು ಸಬ್ಸಿಡಿಯನ್ನು ಕೊಟ್ಟಿದ್ದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸಾಲ ತೆಗೆದುಕೊಳ್ಳಲು ರೈತರು ಹೋಗುತ್ತಿದ್ದರು. ಆದರೆ ಈಗ ಏನಾಗುತ್ತದೆ ಅಂದರೆ ಕೇವಲ ಸೊಸೈಟಿಗಳ ಮೇಲೆ ಈ ಹೊರೆ ಬರುತ್ತದೆ. ಹಿಂದಿನ ಸರ್ಕಾರ ಶೇಕಡ 12 ರಿಂದ 6ಕ್ಕೆ ತಂದಿದ್ದರು, ಈಗ ನೀವು 6 ಪರ್ಸೆಂಟ್‌ನಿಂದ 4 ಪರ್ಸೆಂಟಿಗೆ ತಂದಿದ್ದೀರಿ. ಮಾನ್ಯ ಸಿದ್ದರಾಮಯ್ಯನವರು ಆಗ 450ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರು. ಇದನ್ನು ಭರಿಸಲಿಕ್ಕೆ ನಿಮ್ಮ ಆಯವ್ಯಯದಲ್ಲಿ ಪ್ರಾವಿಜನ್ ಅನ್ನು ಮಾಡಿಲ್ಲ. ಇದಕ್ಕೆ ಏನಾದರೂ ಮಾಡಬೇಕು. ಏಕೆಂದರೆ ನೀವು ಸರ್‌ಪ್ಲಸ್ ಬಜೆಟ್‌ನ್ನು

ಕೊಟ್ಟಿದ್ದೀರಿ. ಈ ಹಣಕ್ಕೆ ಏನು ವ್ಯವಸ್ಥೆಯನ್ನು ಮಾಡಿದ್ದೀರ ಅಂತ ಹೇಳಲಿಲ್ಲ. ಇನ್ನೊಂದು ನಮ್ಮ ರಾಜ್ಯ ಸರ್ಕಾರರ ಬಗ್ಗೆ ಅವರಿಗೆ ಸ್ಯಾಲರಿ ರಿವಿಜನ್ ಬಗ್ಗೆ ಹೇಳಿದ್ದೀರಿ. ನಾನು ನಿನ್ನೆ ಪತ್ರಿಕೆಗಳಲ್ಲಿ ಓದಿದೆ. ಈ ಬಗ್ಗೆ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಇದಲ್ಲೆ 500 ಕೋಟಿ ರೂಪಾಯಿ ಬರುತ್ತದೆ. ಅಂತ. ಆ 500 ಕೋಟಿ ರೂಪಾಯಿಗಳ ಬಗ್ಗೆ ಈ ಬಜೆಟ್‌ನಲ್ಲಿ ಚರ್ಚೆ ಆಗಿ ಪಾಸ್ ಆದ ಮೇಲೆ ಕೊಟ್ಟರೂ ಸಹ ನಿಮ್ಮ 50 ಕೋಟಿ ರೂ ಅದು ಸರ್‌ಪ್ಲಸ್ ಬಜೆಟ್ ಅದಕ್ಕೂ, ಸಾಲದ ಮೇಲಿನ ಬಡ್ಡಿಗೆ ಮತ್ತೇ ಈ 500 ಕೋಟಿ ರೂ ಎಷ್ಟು ಬರುತ್ತದೆ, ಎಷ್ಟು ಸರ್‌ಪ್ಲಸ್ ಬರುತ್ತದೆ ಅಥವಾ ಡಿಫಿಸಿಟ್ ಬಜೆಟ್ ಅಗುತ್ತದೆಯೇ ಎನ್ನುವುದನ್ನು ತಾವು ತಿಳಿಸಬೇಕಾಗುತ್ತದೆ. ಇದು ಸ್ವಲ್ಪ ಟಿಂಕರಿಂಗ್ ಅಂಟ್ ಪೇಂಟಿಂಗ್ ಆಗಿದೆ. ಅದನ್ನು ಸರಿ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಈಗ ಲೋಕೋಪಯೋಗಿ ರಸ್ತೆಗಳದ್ದು ಒಂದು ಕಡೆ ಲೋಕೋಪಯೋಗಿಗೆ ಜಾಸ್ತಿ ಮಾಡಿದ್ದೇವೆಂದು ಹೇಳುತ್ತೀರಿ ಇನ್ನೊಂದು ಕಡೆಯಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಲೋಕೋಪಯೋಗಿ ರಸ್ತೆಗೆಂದು ಹೇಳುತ್ತೀರಿ. ದಯವಿಟ್ಟು ಒಂದು ಕೆಲಸವನ್ನು ಮಾಡಿ ಶಾಸಕರ ನಿಧಿಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಲೋಕೋಪಯೋಗಿ ರಸ್ತೆಗೆಂದು ಏನು 50 ಲಕ್ಷ ರೂಪಾಯಿ ಕೊಟ್ಟಿದ್ದೀರ ಅದನ್ನು ತೆಗೆಯಿರಿ, ಕ್ಷೇತ್ರದಲ್ಲಿ ಯಾವುದೇ ರಸ್ತೆಗಳಿಗೆ ಅಭಿವೃದ್ಧಿಯನ್ನು ಮಾಡಿಕೊಳ್ಳಬೇಕಾದರೆ ಶಾಸಕರಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡಿ. ಶಾಸಕರ ನಿಧಿಗೆ...

ಅಧ್ಯಕ್ಷರು: ನನ್ನ ಪರ್ಮಿಶನ್ ಇಲ್ಲದೆ ಅಧಿಕಾರಿಗಳ ಹತ್ತಿರ ಮಾತನಾಡಬಾರದು ಅಂತ ನಾನು ಹೇಳಿರಲಿಲ್ಲವೇ? ಏನು ನೀವು ಶಾಸಕರೋ ಯಾರು? ಹೇಳಿದರೂ ಅದರಂತೆ ನಡೆದುಕೊಳ್ಳುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಶಾಸಕರ ನಿಧಿಗೆ 50 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿ ಮಾಡಿ, ಈಗ 50 ಲಕ್ಷ ರೂಪಾಯಿಗಳನ್ನು ಅದಕ್ಕೆ ಸೇರಿಸಿ ಕೊಡಿ. ಜಿಲ್ಲಾ ಪಂಚಾಯತಿ ರಸ್ತೆಗಳ ದುರಸ್ಥಿಗೆ ಹಣವನ್ನು ಇಟ್ಟಿಲ್ಲ. ಅದನ್ನು ದುರಸ್ಥಿ ಮಾಡಿಕೊಳ್ಳುವುದಕ್ಕೆ ನಾವು ಈ ಹಣವನ್ನು ಉಪಯೋಗ ಮಾಡಿಕೊಳ್ಳುತ್ತೇವೆ. ಇನ್ನು ಕುಟೀರ ಜ್ಯೋತಿಗೆ 82 ಕೋಟಿ ರೂಪಾಯಿ ಮನ್ನಾ ಮಾಡಿದ್ದು ಒಳ್ಳೆಯ ಕೆಲಸ ಆಗಿದೆ. ಮತ್ತು ಈ ಕೆರೆ ಒತ್ತುವರಿಯನ್ನು ತೆರವು ಗೊಳಿಸುವಂಥಾದ್ದು, ಎಲ್ಲಿ ಮಾಡುತ್ತೀರಿ ಅಂತ ನನಗೆ ಗೊತ್ತಾಗುವುದಿಲ್ಲ. ಈ ಕೆರೆಗಳನ್ನು ಒತ್ತುವರಿ ಮಾಡಿ ಕಟ್ಟಡಗಳು ಬಂದು ಆಗಿದೆ ಅಲ್ಲಿ, ಆದರೆ ಅದನ್ನು ತೆರವು ಮಾಡಲು, ಬೆಂಗಳೂರು ಸುತ್ತುಮುತ್ತಲೂ ಎಷ್ಟು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅದರ ಬಗ್ಗೆ ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆ ಸಮಿತಿಯಲ್ಲಿ ಪ್ರಾಯಶಃ ಆ ಕಡೆ ಈ ಕಡೆ ಇದ್ದವರು ಈ ರಿಯಲ್ ಎಸ್ಟೇಟ್‌ನಲ್ಲಿದ್ದವರೂ ಸಹ ಸ್ವಲ್ಪ ಅವರನ್ನು ಸಮಿತಿಯಲ್ಲಿ ಹಾಕಿಬಿಡಿ ದಯವಿಟ್ಟು ಇನ್ನು ಮೆಟ್ರೋ ರೈಲು ಬಗ್ಗೆ ಅದಕ್ಕೆ ಹಣವನ್ನೇ ಇಟ್ಟಿಲ್ಲ. ಮೆಟ್ರೋ ರೈಲು ಮಾಡುತ್ತೇವೆ ಅಂತ ಹೇಳುವುದನ್ನು ಬಿಟ್ಟರೆ ಮೆಟ್ರೋ ರೈಲ್‌ಗೆ ಏನನ್ನೂ ಮಾಡಿಲ್ಲ. ಇನ್ನು ಬಿ ಪಿ ಎಲ್ ಕೆಳಗೆ ಇದ್ದವರ ಬಗ್ಗೆ ಮಾನ್ಯ ದೇಶಪಾಂಡೆಯವರು ಮಾತನಾಡುತ್ತಾ ಒಂದು ಒಳ್ಳೆಯ ಮಾತನ್ನು ಹೇಳಿದರು. ಈ ಬಿ ಪಿ ಎಲ್ ಕೆಳಗೆ ಇದ್ದ, ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳಿಗೆ 10 ಸಾವಿರ ರೂಪಾಯಿ ಹಣವನ್ನು ಬ್ಯಾಂಕ್‌ನಲ್ಲಿ ಇಡುವಂತಹದ್ದು, ಆ ಬಗ್ಗೆ ದಯವಿಟ್ಟು ಮಾನ್ಯ ದೇಶಪಾಂಡೆಯವರು ಸಲಹೆ ಕೊಟ್ಟ ಹಾಗೆ

ಇನ್‌ಶೂರೆನ್ಸ್ ಕಂಪನಿ ಜೊತೆಯಲ್ಲಿ ಟೈ ಆಫ್ ಮಾಡಿಕೊಳ್ಳಿ, ಆ ಇನ್‌ಶೂರೆನ್ಸ್ ಕಂಪನಿ ಜೊತೆಯಲ್ಲಿ ಟೈ ಆಫ್ ಮಾಡಿಕೊಂಡಾಗ ಇವತ್ತು ನೀವು ಏನು 300 ರೂಪಾಯಿ, 400 ರೂಪಾಯಿ ಪ್ರೀಮಿಯಂ ಅನ್ನು ಕಟ್ಟುತ್ತೀರಿ ಆ ಹಣ 18 ವರ್ಷಗಳ ನಂತರ ಆ ಮಗುವಿಗೆ ಸಿಗುವಂತಾದ್ದು, ಅದೂ ಮೆಡಿ ಕ್ಲೈಮ್ ಸಮೇತ, ಅದರಲ್ಲಿ ಸಿಗುವಂತಹ ವ್ಯವಸ್ಥೆ ಆಗಬೇಕಾಗುತ್ತದೆ. ಆದ್ದರಿಂದ ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ಇನ್ನು ಈ ಪ್ರೌಢಶಾಲೆ ಮತ್ತು ಕಾಲೇಜುಗಳನ್ನು ಕೊಡುವಲ್ಲಿ ನಮ್ಮ ಭಾಗಕ್ಕೆ ಇನ್ನೂ ಹೆಚ್ಚು ಬೇಕಾಗುತ್ತದೆ. ಗ್ರಾಮೀಣ ಪ್ರದೇಶಕ್ಕೆ ಹೆಚ್ಚು ಕೊಡಿ ಅದಕ್ಕೆ ಪಾಲಿಟೆಕ್ನಿಕಲ್ ಕೊಟ್ಟರೆ ಸಾಕು. ಕಾಲೇಜುಗಳು ಕೊಡುವಂತಾದ್ದು ಬೇಡ ಅಂತ ಅಲ್ಲ. ಬೇಸಿಕ್ ಎಜ್ಯುಕೇಷನ್‌ನಿಂದ ಫಸ್ಟ್ ಗ್ರೇಡ್ ಕಾಲೇಜ್‌ವರೆಗೂ ಬೇಕಾಗುತ್ತದೆ. ನಾಳೆ ಫಸ್ಟ್ ಗ್ರೇಡ್ ಕಾಲೇಜುಗಳನ್ನು ತೆಗೆದಾಗ ಈಗ ಎಂ.ಎ, ಎಂ.ಎಸ್ಸಿ ಮಾಡಬೇಕೆಂದು ಇದ್ದವರಿಗೆ ಟೀಚಿಂಗ್ ಲೈನ್‌ಗೆ ಹೋಗಬೇಕೆಂದು ಇದ್ದವರಿಗೆ ಅದು ಬೇಕಾಗುತ್ತದೆ. ಅದನ್ನು ಬದಲಾವಣೆ ಮಾಡುವುದಕ್ಕೆ ಹೋಗಬೇಡಿ. ಹೆಚ್ಚು ಪಾಲಿಟೆಕ್ನಿಕ್‌ಗಳನ್ನು ಕೊಡಿ. ಹೆಚ್ಚು ಐ ಟಿ ಐ ಗಳನ್ನು ಕೊಡಿ. ಮತ್ತೆ ಫಸ್ಟ್ ಗ್ರೇಡ್ ಕಾಲೇಜುಗಳನ್ನು ಗ್ರಾಮೀಣ ಪ್ರದೇಶದಲ್ಲಿ ತೆರೆಯುವಂತಹ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಮಾನ್ಯ ಕ್ರೀಡಾ ಸಚಿವರು ಇಲ್ಲ. ಈ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತಿಗಳಲ್ಲಿ ಶೇಕಡ 2 ಅನ್ನು ಕ್ರೀಡಾ ನಿಧಿಗೆ ಕೊಡಬೇಕೆನ್ನುವುದನ್ನು ಏನು ಮಾಡಿದಿರಿ? ಎಲ್ಲೂ ಕೊಡುತ್ತಿಲ್ಲ. ಕ್ರೀಡೆಗೆ ರಾಜ್ಯದ ಅನುದಾನದಲ್ಲಿ ಕೊಡುವಂತದ್ದು ಮತ್ತೆ ಏನು ಅಲ್ಲಿ ಜಿಲ್ಲಾ ಪಂಚಾಯತಿ ತಾಲ್ಲೂಕು, ಮತ್ತು ಪಂಚಾಯತಿ, ಗ್ರಾಮ ಪಂಚಾಯತಿಗಳಲ್ಲಿ ಏನು ಶೇಕಡ 2 ಕೊಡಬೇಕು ಅಂತ ಏನು ತೀರ್ಮಾನ ಆಗಿತ್ತು. ಅದೂ ಸಿಗುತ್ತಿಲ್ಲ. ದಯವಿಟ್ಟು ಅದರ ಬಗ್ಗೆ ಸ್ವಲ್ಪ ಹೆಚ್ಚು ಗಮನವನ್ನು ಹರಿಸಬೇಕು ಅಂತ ನಾನು ಹೇಳುತ್ತಾ, ಇನ್ನೂ ಮೀನುಗಾರರ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಮಾನ್ಯ ಸಿದ್ದರಾಮಯ್ಯನವರೇ ಹಿಂದೆ ಹಣಕಾಸಿನ ಸಚಿವರಾಗಿದ್ದಾಗ ನಾನು ಮೀನುಗಾರಿಕೆ ಸಚಿವನಾಗಿದ್ದೆ, ಆಗ 35 ಸಾವಿರ ಕಿಲೋ ಲೀಟರ್‌ನ್ನು ಕೊಟ್ಟರು. ನಂತರ ಕಾಂಗ್ರೆಸ್ ಸರ್ಕಾರ ಬಂದಾಗ ಅದನ್ನು 50 ಕಿಲೋ ಲೀಟರ್ ಮಾಡಿದ್ದರು. ಮತ್ತೆ ಆ ನಂತರ ಅದನ್ನು 55 ಸಾವಿರ ಕಿಲೋ ಲೀಟರ್ ಮಾಡಿದರು. ಈಗ ನೀವು 70ಸಾವಿರ ಕಿಲೋ ಲೀಟರ್ ಮಾಡಿದ್ದೀರಿ. ಆದರೆ ಈ ಬಾರಿ 48 ಸಾವಿರ ಕಿಲೋ ಲೀಟರ್‌ಗಿಂತ ಜಾಸ್ತಿ ಖರ್ಚಾಗಿಲ್ಲ. ಆದ್ದರಿಂದ ಅವರು ಅದನ್ನು ಮಿಸ್ ಯೂಸ್ ಮಾಡುತ್ತಾರೆ ಎನ್ನುವುದು ಹೋಯಿತು. ಆ ಒಂದು ಅಪಾಧನೆ ಅವರ ಮೇಲೆ ಇತ್ತು. ಅವರು ಮಿಸ್ ಯೂಸ್‌ನ್ನು ಮಾಡುವುದಿಲ್ಲ. ಆದರೆ ಒಳ್ಳೆಯ ಮೀನುಗಾರಿಕೆ ಆದಾಗ 70 ಸಾವಿರ ಕಿಲೋ ಲೀಟರ್ ಅವರಿಗೆ ಬೇಕಾಗುತ್ತದೆ. ಅದು ಒಳ್ಳೆಯ ಕೆಲಸ ಆಗಿದೆ. ಮತ್ತೆ ನೀವು ಕೆರೋಸಿನ್ ಏನು ಕೊಟ್ಟಿದ್ದೀರಿ 200 ಲೀಟರ್‌ನಿಂದ 400 ಲೀಟರ್ ಮಾಡಿರುವಂಥದ್ದು ನಿಜವಾಗಿಯೂ ಇದು ನಾಡ ದೋಣಿಯವರಿಗೆ ಅವಶ್ಯಕತೆ ಇದೆ. ಅದೇ ಮತ್ಸಾಶ್ರಯ ಯೋಜನೆ ಕಳೆದ 5 ವರ್ಷಗಳಿಂದ ಏನೂ ಕೊಟ್ಟಿಲ್ಲ. ಅದೂ ಸಹ ಒಳ್ಳೆಯ ಕಾರ್ಯಕ್ರಮ. ಇಡೀ ರಾಜ್ಯದ ಮೀನುಗಾರರ ಪರವಾಗಿ ಮಾನ್ಯ ಮೀನುಗಾರಿಕಾ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ಇನ್ನೊಂದು ಸ್ಕೀಮ್ ಇದೆ 10 ಸಾವಿರ ರೂಪಾಯಿಗಳನ್ನು ಮೀನುಗಾರ ಮಹಿಳೆಯರಿಗೆ ಕೊಡುತ್ತೇವೆಂದು ಹೇಳಿದ್ದೀರಿ, ಮೀನುಗಾರರ ಮಹಿಳೆಯರು ಗುಂಪಿನಲ್ಲಿ ವ್ಯಾಪಾರ ಮಾಡುವುದಿಲ್ಲ. ಅವರೆಲ್ಲಾ ಇಂಡಿವಿಜಿಯಲ್ ಬಿಸಿನೆಸ್. ಅವರು ಫಿಶರಿ

ಹಾರ್ಬರ್‌ನಿಂದ ತೆಗೆದುಕೊಂಡು ಹೋಗಿ ಅವರೇ ಸ್ವತಃ ವ್ಯಾಪಾರವನ್ನು ಮಾಡುವುದನ್ನು ಬಿಟ್ಟರೆ ಬೇರೆ ಮಾಡುವುದಿಲ್ಲ. ಅದನ್ನು ಇಂಡಿವಿಜಿಯಲ್ ಮೀನುಗಾರ ಮಹಿಳೆಯರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ದಯವಿಟ್ಟು ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಒಳನಾಡು ಮೀನುಗಾರರು ಇವತ್ತು ಬೆಳಿಗ್ಗೆ ಮಾನ್ಯ ಬಾಲರಾಜುರವರು ಹೇಳಿದರು, ಅವರು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಮನೆ ಇಲ್ಲಾ ಅವರಿಗೆ ಈಗ ಲೇಕ್ ಆಥಾರಿಟಿ ಅಂತ ಮಾಡಿ ಅವರಿಗೆ ಈ ಜವಾಬ್ದಾರಿಯನ್ನು ಕೊಟ್ಟು ಸೊಸೈಟಿಗೆ ಮೀನುಗಾರಿಕೆಗೆ ಅವಕಾಶ ಇಲ್ಲದಂತೆ ಮಾಡಿರುವಂಥಾದ್ದು ಇವೆಲ್ಲವನ್ನೂ ತೆಗೆದು ಫಿಶರಿ ರೈಟ್ಸ್ ಸಣ್ಣ ನೀರಾವರಿ ಇಲಾಖೆಯಲ್ಲಿ ಇರಲಿ, ಅಥವಾ ಲೇಕ್ ಅಥಾರಿಟಿ ಇರಲಿ ಅವರಿಗೆ ಅಭಿವೃದ್ಧಿ ಮಾಡಲಿಕ್ಕೆ ಗೊತ್ತಿಲ್ಲ. ಮೀನುಗಾರಿಕೆ ಮಾಡುವುದಕ್ಕೆ ಬಿಡುತ್ತಿಲ್ಲ. ದಯವಿಟ್ಟು ಇದನ್ನು ಬದಲಾವಣೆ ಮಾಡಬೇಕಾಗುತ್ತದೆ ಅಂತ ಹೇಳುತ್ತಾ, ಮತ್ತೆ ತಾವೇನು ಸಂಕಷ್ಟ ಪರಿಹಾರ ನಿಧಿ, ಆಪತ್ತು ಧನ ಅಂತ ಹೇಳಿದಿರಿ 25 ಸಾವಿರ ರೂಪಾಯಿಗಳಿಂದ 50 ಸಾವಿರ ರೂಪಾಯಿ ಇದು ಒಳ್ಳೆಯ ಕೆಲಸ ಆದರೆ ಇದರಲ್ಲಿ ಸಂಪೂರ್ಣ ಸರ್ಕಾರದ ಅನುದಾನ ಇಲ್ಲ. ಸರ್ಕಾರ ಒಂದು ಪೋರ್ಷನ್ ಹಣ ಕೊಡುತ್ತದೆ, ಉಳಿದಿದ್ದನ್ನು ಡಿಪಾರ್ಟ್‌ಮೆಂಟ್‌ನವರು ಅವರು ಸ್ವಲ್ಪ ಫಂಡ್ ರೈಸ್ ಮಾಡಿ ಕೊಡುವಂಥಾದ್ದು, ಅದನ್ನು ನೋಡಬೇಕು ಮತ್ತೆ ಇದನ್ನು ಸಹಕಾರಿ ಬ್ಯಾಂಕ್‌ಗಳಿಗೆ ಎಕ್ಸ್‌ಟೆಂಡ್ ಮಾಡಿರುವಂಥಾದ್ದು, ಯಾವುದು 4 ಪರ್ಸೆಂಟ್ ಬಡ್ಡಿಯಲ್ಲಿ ಇದನ್ನು ಚಾಲೂ ಮಾಡುವಂಥಾದ್ದು , ಇದನ್ನು ಸಹ ಅಲ್ಲಿ ಶೇಕಡ 7 ರಂತೆ ರಾಷ್ಟ್ರೀಕೃತ ಬ್ಯಾಂಕ್‌ನವರು ಏನು ಹಣ ಕೊಡುತ್ತಿದ್ದಾರೆ. ಅಲ್ಲಿ ತೆಗೆದುಕೊಂಡು ಸರ್ಕಾರ 3 ಪರ್ಸೆಂಟ್ ಸಬ್ಸಿಡಿಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಆಮೇಲೆ ಒತ್ತುವರಿ ಅರಣ್ಯ ಭೂಮಿ ಮತ್ತು ಗೋಮಾಳವನ್ನು ಹೊರತುಪಡಿಸಿ ಕೃಷಿ ಉದ್ದೇಶಕ್ಕೆ ಒತ್ತುವರಿ ಮಾಡಿಕೊಂಡಿರುವ ಎರಡು ಹೆಕ್ಟೇರ್‌ನ್ನು ಈಗಲೂ ಕೊಡುತ್ತಿದ್ದಾರೆ. ಎರಡು ಹೆಕ್ಟೇರ್‌ನ್ನು ಈಗಲೂ ಕೊಡುತ್ತಿದ್ದಾರೆ. ಇದು ಯಾವುದನ್ನು ಬದಲಾವಣೆ ಮಾಡಿದ್ದೀರಿ ಎನ್ನುವುದು ನೀವು ಎಕ್ಸ್‌ಪ್ಲೇನ್ ಮಾಡಲಿಲ್ಲ. ಈಗ ಅಕ್ರಮ ಸಕ್ರಮ ಸಮಿತಿಯಲ್ಲಿ ಒಬ್ಬ ವ್ಯಕ್ತಿಗೆ 4 ಎಕರೆ 94 ಸೆಂಟ್ಸ್ ಕೊಡುವಂತಹ ವ್ಯವಸ್ಥೆ ಇದೆ. ಅದನ್ನು ಹೊರತಾಗಿ ಇದೇನು ಹೊಸ ಕಾರ್ಯಕ್ರಮವೇ ಎನ್ನುವುದನ್ನು ತಿಳಿಸಬೇಕು. ಏಕೆಂದರೆ ಇದು ಇದ್ದುದ್ದನ್ನು ಪುನಃ ಅನೌನ್ಸ್ ಮಾಡುವಂತಾದ್ದು ಆಗಬಾರದು. ಆಮೇಲೆ 94(ಸಿ)ಯಲ್ಲಿ ಏನು ಸರ್ಕಾರಿ ಭೂಮಿಯಲ್ಲಿ ಬಡವರು ಕುಳಿತವರು ಮನೆಯನ್ನು ಕಟ್ಟಿಕೊಂಡು ವಾಸವಾಗಿದಾರೆ, ಅದನ್ನು ರೆಗ್ಯುಲರೈಸ್ ಮಾಡುವುದು ಅಂತ ಹಿಂದೆ ಮಾನ್ಯ ಸೋಮಶೇಖರ್‌ರವರು ಕಂದಾಯ ಸಚಿವರಾಗಿದ್ದಾಗ ಒಂದು ತೀರ್ಮಾನವನ್ನು ತೆಗೆದುಕೊಂಡರು. ಇವತ್ತಿಗೂ ಅದನ್ನು ಸರಿಯಾಗಿ ಡೀ ನೋಟಿಸ್ ಕೊಡುವಂತಹ ವ್ಯವಸ್ಥೆ ಆಗಿಲ್ಲ, ಏಕೆಂದರೆ ಅಧಿಕಾರಿಗಳ ತಪ್ಪಿನಿಂದಾಗಿ ಒಂದು 30–40 ಫ್ರೀ ಕೊಡುವುದು ಅಂತ ತೀರ್ಮಾನವನ್ನು ನಮ್ಮ ಮಾನ್ಯ ಎಂ.ಪಿ. ಪ್ರಕಾಶ್‌ರವರು ತೆಗೆದುಕೊಂಡರು. ನಂತರ ಷೆಡ್ಯೂಲ್‌ನಲ್ಲಿ ಇದ್ದಂತೆ ಕೊಡಬೇಕೆಂದು ಹೇಳಿದ್ದನ್ನು ನಂತರ ಷೆಡ್ಯೂಲ್‌ನಲ್ಲಿ ಇದ್ದ 30–40 ಅನ್ನು ಹೊರತುಪಡಿಸಿ 60–90ಗೆ ಹೋಗಿ ಒಂದು ರೂಪಾಯಿಯನ್ನು ಚಾರ್ಜ್ ಮಾಡುವುದನ್ನು ಬಿಟ್ಟು 1 ರೂಪಾಯಿ 90 ಪೈಸೆಯನ್ನು ಮಾಡಿದರೆ ಅವರು ಮಾರ್ಕೆಟ್ ರೇಟನ್ನು ಕೊಟ್ಟು ತೆಗೆದುಕೊಂಡಂತೆ ಆಗುತ್ತದೆ. ದಯವಿಟ್ಟು ಅವರು ಬಡವರು,. ಈಗ ದೊಡ್ಡ ಉದ್ದಿಮೆಯವರಿಗೆ ನೀವು ಎದುರುಗಡೆ

ಕುಳಿತುಕೊಂಡು ಚಹಾ ಕೊಟ್ಟು ಒಂದು ಸಾವಿರ ಎಕರೆಯನ್ನು ಕೊಡುತ್ತೇವೆಂದು ಹೇಳುತ್ತೀರಿ. ಅದರೆ ಮನೆ ಇಲ್ಲದೇ ಇರುವವನು ಎಲ್ಲಿ ಸರ್ಕಾರಿ ಭೂಮಿಯಲ್ಲಿ ಒಕ್ಕಲು ಎಬ್ಬಿಸಿದವನು ಹೋಗಿ ಕುಳಿತುಕೊಳ್ಳುತ್ತಾನೆ ಅಂಥವನಿಗೆ ದಯವಿಟ್ಟು ಒಂದು ರೂಪಾಯಿ ಯಲ್ಲಿ ಕೊಡುವಂತಹ ಒಂದು ಆದೇಶವನ್ನು ತಾವು ಹೊರಡಿಸಬೇಕು. ನಾನು ಕಂದಾಯ ಇಲಾಖೆಯಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇನೆ. ದಯವಿಟ್ಟು ಇದರ ಬಗ್ಗೆ ತಾವು ಗಮನವನ್ನು ಹರಿಸಬೇಕು. ಮತ್ತೆ ಪ್ರಾಕೃತಿಕ ವಿಕೋಪದಲ್ಲಿ ಹಣವನ್ನು ಹೆಚ್ಚು ಮಾಡುತ್ತೇನೆಂದು ಹೇಳಿದ್ದೀರಿ. ಅದು ಕೇಂದ್ರದ ಕಾರ್ಯಕ್ರಮವೋ ಅಥವಾ ರಾಜ್ಯ ಸರ್ಕಾರದ ಕಾರ್ಯಕ್ರಮವೋ. ಏಕೆಂದರೆ ಪಾಕೃತಿಕ ವಿಕೋಪದಲ್ಲಿ ಬೆಳೆ ಹಾನಿಗೆ ಹಣವನ್ನು ಕೊಡುವಂಥಾದ್ದು ಕೇಂದ್ರ ಸರ್ಕಾರದ ಹಣ. ಅದನ್ನು ರಾಜ್ಯ ಸರ್ಕಾರದ ಮುಖೇನ ಕೊಡುತ್ತೀದ್ದೀರಾ ಅಥವಾ ಕೇಂಧ್ರ ಸರ್ಕಾರದ ಮುಖೇನ ಕೊಡುತ್ತಿದ್ದೀರಾ ಎನ್ನುವ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕು. ಇದರ ಜೊತೆಗೆ ಯಾರೂ ಚರ್ಚೆ ಮಾಡದ ವಿಷಯ ಮೈನರ್ ಪೋರ್ಟ್ಸ್ ಫಿಷರಿ ಹಾರ್ಬರ್ ಖಾತೆಗಳು ಮುಖ್ಯಮಂತ್ರಿಗಳ ಹತ್ತಿರವಿದೆ. ಅದನ್ನು ಅಭಿವೃದ್ಧಿ ಮಾಡಬೇಕು. ಏಕೆಂದರೆ ಎಲ್ಲಾ ರಾಜ್ಯಗಳಲ್ಲೂ ಪೋರ್ಟ್ಸ್ ಡೆವಲಪ್ ಮಾಡಿಯಾಯಿತು. ಗುಜರಾತ್, ಆಂಧ್ರಪ್ರದೇಶ ತೆಗೆದುಕೊಳ್ಳಿ ಬೇರೆ ರಾಜ್ಯಗಳಲ್ಲಿ ಮೈನರ್ ಪೋರ್ಟ್ಸ್ ಡೆವಲಪ್ ಮಾಡಿ ಅಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ಪ್ರಾರಂಭ ಮಾಡಿಯಾಯಿತು. ಅದರೆ ನಮ್ಮ ರಾಜ್ಯದಲ್ಲಿ ಇನ್ನೂ ಆರಂಭವಾಗಿಲ್ಲ. ನಮ್ಮ ಸರ್ಕಾರವಿದ್ದಾಗ ಒಂದು ಸಾರಿ ಕಂಟೈನರ್ ಹ್ಯಾಂಡ್ಲಿಂಗೆ ಕೊಟ್ಟಿದ್ದು ಅವರಿಗೆ ಲ್ಯಾಂಡ್ ಹ್ಯಾಂಡ್ ಓವರ್ ಮಾಡಿ, ಕನ್ಸೆಷನ್ ಅನ್ನು ಅವರಿಗೆ ಕೊಡುತ್ತೇವೆಂದು ಅಂದು ನಮ್ಮ ಸರ್ಕಾರ ಒಪ್ಪಿತ್ತು, ಇವತ್ತು ಹಣಕಾಸು ಇಲಾಖೆಯವರು ಒಪ್ಪುತ್ತಿಲ್ಲ; ಸರ್ಕಾರದ ತಪ್ಪಿನಿಂದಾಗಿ ಯಾರಿಗೆ ನಾವು ಕಂಟೈನ್‌ರ್ ಹ್ಯಾಂಡ್ಲಿಂಗ್ ಅವಕಾಶವನ್ನು ಕೊಟ್ಟಿದ್ದೇವೆ, ಅವರಿಗೆ ನಾವು ಅನ್ಯಾಯವನ್ನು ಮಾಡುತ್ತಿದ್ದೇವೆ. ಆರು ವರ್ಷಗಳ ನಂತರವೂ ಸಹ ಮಾನ್ಯ ಹಣಕಾಸಿನ ಸಚಿವರು ಆ ಕಡತವನ್ನು ತರಿಸಿ ಅವರು ಇದಕ್ಕೆ ಸಂಬಂಧಪಟ್ಟ ಟ್ಯಾಂಕರ್ ಪರ್ಚೇಸ್ ಮಾಡದೆ ಇದ್ದರೆ ಕಂಟೈನರ್ ಹ್ಯಾಂಡ್ಲಿಂಗ್ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಕನೆಷನ್ ಕೊಡಲು ಸೇಲ್ಸ್ ಟ್ಯಾಕ್ಸ್ ಎಕ್ಸರ್ಮ್‌ಷನ್ ಇದೆ ಅದನ್ನು ಕೊಡುತ್ತಿಲ್ಲ. ದಯವಿಟ್ಟು ಆ ಕಡತವನ್ನು ತರಿಸಿ ತಾವು ನೋಡಿ ಏಕೆಂದರೆ cheaoest mode of transportation is water way ಇನ್‌ಲ್ಯಾಂಡ್ ವಾಟರ್ ಟ್ರಾನ್ಸ್‌ಪೋರ್ಟ್ ಅನ್ನು ಅಭಿವೃದ್ಧಿ ಮಾಡಬೇಕಾಗುತ್ತದೆ. ಕಂಟೈನರ್ ಹ್ಯಾಂಡ್ಲಿಂಗ್ ಮಾಡಿದಾಗ ಮಾತ್ರ ರಾಜ್ಯದ ಅಭಿವೃದ್ಧಿಗೆ ಸಹಾಯವಾಗುತ್ತದೆ. ಪ್ರಾಯಶಃ ಮಾರುಕಟ್ಟೆಯ ಓಪನಿಂಗ್ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಇನ್ನೊಂದು ಪವರ್ ಸೆಕ್ಟಾರ್, ತಾವು ರಾಜ್ಯಪಾಲರ ಭಾಷಣದಲ್ಲಿ ಹೇಳಿದಿರಿ, ನಾಗಾರ್ಜುನ ಪವರ್ ಕಾರ್ಪೋರೇಷನ್ ನಂದಿಕೂರಿನಲ್ಲಿ ಬರುತ್ತದೆಂದು ಹೇಳಿದ್ದಿರಿ. ಅದನ್ನು ನಿಮ್ಮ ಆಯವ್ಯಯದಲ್ಲಿ ಹೇಳಿಲ್ಲ. ನಿಮ್ಮ ಸ್ಥಳೀಯ ಲೋಕಸಭಾ ಸದಸ್ಯರು, ಸ್ಥಳೀಯ ಶಾಸಕರು ಅದಕ್ಕೆ ವಿರೋಧವನ್ನು ಮಾಡುತ್ತಿದ್ದಾರೆ. ಈಗ ಸರ್ಕಾರದ ನಿಲುವೇನು? ನಿಮ್ಮ ಶಾಸಕರು ಹಾಗೂ ಲೋಕಸಭಾ ಸದಸ್ಯರು ಅದನ್ನು ವಿರೋಧ ಮಾಡುವುದಕ್ಕೆ ಏನು ಕಾರಣ. ಒಂದು ವೇಳೆ ಅದ ಬರುವುದಿಲ್ಲವೆಂದಾದರೆ, ಅದು ಬರುವುದಿಲ್ಲವೆಂದು ನೇರವಾಗಿ ಹೇಳಿ . ಬರುವುದಾದರೆ ನಿಮ್ಮ ಶಾಸಕರು, ಹಾಗೂ ಲೋಕಸಭಾ ಸದಸ್ಯರ ಹತ್ತಿರ ಜನರನ್ನು ಕರೆದುಕೊಂಡು

ಹೋಗಿ ಅದನ್ನು ವಿರೋಧ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಸರ್ಕಾರದ ನಿಲುವೊಂದು, ನಿಮ್ಮ ಜನಪ್ರತಿನಿಧಿಗಳ ನಿಲುವೊಂದಾಗಬಾರದು. ಏಕೆಂದರೆ ಬೇರೆ ಹೊಸ ಪ್ರಾಜೆಕ್ಟ್ ಮಾಡಲು ಹೊರಟಾಗ ಪರಿಸರವಾದಿಗಳ ವಿರೋಧ ಆರಂಭವಾಗುತ್ತದೆ. ಒಂದು ಯುನಿಟ್ ಆಫ್ ಪವರ್ ಅನ್ನು ಹೆಚ್ಚು ಉತ್ಪಾದನೆ ಮಾಡಿ ನಿಮ್ಮ ಗ್ರಿಡ್‌ಗೆ ಇನ್‌ಕ್ಲೂಡ್ ಮಾಡುವ ಬಗ್ಗೆ ಪವರ್ ಪ್ರಾಜೆಕ್ಟ್ ಬಗ್ಗೆ ಇದರಲ್ಲಿ ಬಂದೇ ಇಲ್ಲ. ಅದೇ ರೀತಿಯಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ 2004–05 ರಲ್ಲಿ 31,00 ಕೋಟಿ ರೂ ಇನ್‌ವೆಸ್ಟ್‌ಮೆಂಟ್ ಬರುತ್ತದೆಂದು ಹೇಳಿದರು. ಆದರೆ ಈ ಬಜೆಟ್‌ನಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಒಂದು ಶಬ್ಧವನ್ನು ಹೇಳಿಲ್ಲ. ಎಷ್ಟು ಹೊಸ ಪ್ರಾಜೆಕ್ಟ್ ಬರುತ್ತವೆಂದು ಹೇಳಿಲ್ಲ. ಏಕೆಂದರೆ ನಮಗೆ ಕೇವಲ ಪಾಪ್ಯುಲಿಸ್ಟ್ ಪ್ರೋಗ್ರಾಂನಲ್ಲಿ ಸಣ್ಣ ಸಣ್ಣ, ಎರಡು, ಮೂರು ಕೋಟಿರೂ ಅನುದಾನವನ್ನು ಇಟ್ಟು ಹೊಸ ಹೊಸ ಕಾರ್ಯಕ್ರಮಗಳನ್ನು ಮಾಡಿದ ಕೂಡಲೇ ನಾವು ಶಾಶ್ವತ ಪರಿಹಾರವನ್ನು ಕಂಡುಹಿಡಿಯುತ್ತಿಲ್ಲ; These are all populist programmes. ಆದರೆ ನಾವು ಎಂಪ್ಲಾಯ್‌ಮೆಂಟ್ ಜನರೇಟ್ ಮಾಡುವ ಕಾರ್ಯಕ್ರಮಗಳಿಗೆ, ಮತ್ತು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಈ ಎರಡಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಅದರ ಬಗ್ಗೆ ಸ್ವಲ್ಪ ಹೆಚ್ಚು ಗಮನಹರಿಸಬೇಕೆಂದು ಹೇಳುತ್ತೇನೆ. ಇಲ್ಲಿ ಮಾನ್ಯ ಹೊರಟ್ಟಿಯವರಿದ್ದಾರೆ. ನಾನು ಅವರ ಇಲಾಖೆಯ ಬಗ್ಗೆ ಹೆಚ್ಚು ಚರ್ಚೆ ಮಾಡುವುದಿಲ್ಲ. ನಮ್ಮನ್ನು ಅವರ ಹಿಂದೆ ಕರೆದುಕೊಂಡು ಅನೇಕ ಕಡೆ ರ‍್ಯಾಲಿಯನ್ನು ಮಾಡಿದ್ದಾರೆ. ಸಭೆಗಳನ್ನು ಮಾಡಿದ್ದಾರೆ. ಶಾಲೆಗಳ ಬಗ್ಗೆ ಶಿಕ್ಷಕರ ಬಗ್ಗೆ ಪ್ರೈವೇಟ್ ಮ್ಯಾನೇಜ್‌ಮೆಂಟ್ ಬಗ್ಗೆ ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಯಾರಿಗೆ ಹೇಳುತ್ತಿದ್ದೀರಿ

ಶ್ರೀ ಜಯಪ್ರಕಾಶ ಹೆಗ್ಡೆ: ಮಾನ್ಯ ಹೊರಟ್ಟಿಯವರಿಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಲೇ ಇಲ್ಲ

ಶ್ರೀ ಜಯಪ್ರಕಾಶ ಹೆಗ್ಡೆ : ನಾವು ಅವರು ನಮ್ಮ ಲೀಡರ್ ಎಂದು ಇಟ್ಟುಕೊಂಡು ಹೋಗಿದ್ದೇವೆ, ಆದರೆ ಇವತ್ತು ಕೇಳುವುದು, ಅವರೇನು ಬೇಡಿಕೆಗಳನ್ನು ಇಟ್ಟುಕೊಂಡು ನಮ್ಮನ್ನೆಲ್ಲಾ ಒಟ್ಟಿಗೆ ಎಳೆದುಕೊಂಡು ಹೋಗಿದ್ದರೋ ಅವನ್ನು ಈಡೇರಿಸಿದರೆ ಅದಕ್ಕಿಂತ ಹೆಚ್ಚು ಚರ್ಚೆಯನ್ನು ನಾನು ಇದರ ಮೇಲೆ ಮಾಡುವುದಿಲ್ಲ. ನೀವು ಮ್ಯಾನೇಜ್‌ಮೆಂಟ್ ಗ್ರಾಂಟ್ ಏನಿದೆ ಅದನ್ನು ಕೊಡುವುದು,, ಏಕೆಂದರೆ ಮೆಂಟೇನೆನ್ಸ್ ಗ್ರಾಂಟ್ ತೆಗೆದುಬಿಟ್ಟಿದ್ದೀರಿ. ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಶಾಲೆಗಳ ಮಕ್ಕಳ ಶಿಕ್ಷಕರ ಅನುಪಾತವೇನಿದೆ ಅದನ್ನು ಸರಿಪಡಿಸುವುದು. ಎಲ್ಲ ಸರ್ಕಾರಿ ಶಾಲೆಗಳಿಗೆ ಸಿಗುವಂತಹ ಸೌಲಭ್ಯಗಳನ್ನು ಖಾಸಗಿ ಶಾಲೆಗಳಿಗೆ ದೊರೆಯುವುದು. ಏನೇನನ್ನೂ ನೀವು ಹೇಳಿದ್ದೀರೊ ಅದಕ್ಕೆ ನಾವು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದು ಅದನ್ನು ತಾವು ಪೂರೈಸಬೇಕೆಂದು ಹೇಳುತ್ತೇನೆ. ಸಕ್ಕರೆ ಕಾರ್ಖಾನೆಗಳ ಬಗ್ಗೆ ಒಂದೇ ಒಂದು ಶಬ್ಧವನ್ನು ಹೇಳಿಲ್ಲ. ಇವತ್ತು ಸಹಕಾರ ಸಕ್ಕರೆ ಕಾರ್ಖಾನೆಗಳು ಮುಚ್ಚಿ ಹೋಗುತ್ತಿವೆ. ಅದರಲ್ಲೂ ನಮ್ಮ ಬ್ರಹ್ಮಾವರ ಶುಗರ್ ಫ್ಯಾಕ್ಟರಿ ಮುಚ್ಚಾಗಿದೆ. ಆದರೆ ಬ್ರಹ್ಮಾವರ ಶುಗರ್ ಫ್ಯಾಕ್ಟರಿ ಬಗ್ಗೆ ಎರಡು ಪಾರ್ಟ್‌ನರ್ ಏನು ಇದ್ದೀರಿ ಪುನಶ್ಚೇತನಕ್ಕೆ ಸರ್ಕಾರದಿಂದ ಹಣವನ್ನು ಕೊಡಿಸುತ್ತೇವೆಂದು ಹೇಳಿಯಾಗಿದೆ. ಆದರೆ ಸರ್ಕಾರದ ಇಲಾಖೆ ಈಗಾಗಲೇ ಏಪ್ರಿಲ್ 16ನೇ ತಾರೀಖಿನಿಂದ ಸಕ್ಕರೆ ಕಾರ್ಖಾನೆಯನ್ನು

ಬಂದ್ ಮಾಡಬೇಕೆಂದು ಆದೇಶ ಹೊರಡಿಸಲಾಗಿದೆ. ನೀವು ಸರ್ಕಾರದವರೇನಾದರೂ ತೀರ್ಮಾನವನ್ನು ತೆಗೆದುಕೊಂಡು ಆ ಕಾರ್ಖಾನೆಯನ್ನು ಉಳಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೀರೋ ಅಥವಾ ಮುಚ್ಚುವ ಕೆಲಸವನ್ನು ಮಾಡುತ್ತೀರೋ? ಅದರ ಜೊತೆಗೆ ರೈತರ ಹಳೆಯ ಬಾಕಿಯನ್ನು ಕೊಡುವುದು. ಕಾರ್ಮಿಕರ ಸಂಬಳ ಬಾಕಿಯನ್ನು ಕೊಡುವುದು ಮತ್ತು ಸರ್ಕಾರಿ ಸಂಸ್ಥೆಗಳಿಂದ ಸಕ್ಕರೆ ಕಾರ್ಖಾನೆಗಳೇನು ಹಣವನ್ನು ತೆಗೆದುಕೊಳ್ಳಲಾಯಿತು, ಅದನ್ನು ಕಟ್ಟದೇ ಇದ್ದರೆ ಎಲ್ಲ ಸಕ್ಕರೆ ಕಾರ್ಖಾನೆಗಳು, ಸಹಕಾರಿ ಸಂಸ್ಥೆಗಳು ಮುಚ್ಚುವಂತಹ ಪರಿಸ್ಥಿತಿ ಬರುತ್ತದೆ. ಇನ್ನು PURA ಬಗ್ಗೆ ಚರ್ಚೆ ಮಾಡುತ್ತೀರಿ, ಮಾನ್ಯ ಘನತೆವೆತ್ತ ರಾಜ್ಯಪಾಲರು PURA ಬಗ್ಗೆ ಭಾಷಣವನ್ನು ಮಾಡಿದರು Providing Urban Amenities in Rural area. ಮಾನ್ಯ ವಾಟಾಳ್‌ನಾಗರಾಜ್‌ರವರು ವಿರೋಧ ಮಾಡುತ್ತಾರೆಂಬುದು ನನಗೆ ಗೊತ್ತಿದೆ, ಪ್ರಥಮ ಆದ್ಯತೆಯನ್ನು ಮಕ್ಕಳ ತಂದೆತಾಯಂದಿರು ಏನು ಕೇಳುತ್ತಿದ್ದಾರೆಂದರೆ, ಕನ್ನಡ ಶಾಲೆಯಲ್ಲಿ ಒಂದು ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಪ್ರಾರಂಭ ಮಾಡಿ ಎನ್ನುವುದು. ಇಲ್ಲದಿದ್ದರೆ. ಕೆಲವೇ ಸಮಯದಲ್ಲಿ ನಿಮ್ಮ ಎಲ್ಲಾ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ಬಂದ್ ಆಗುತ್ತವೆ. ನಮ್ಮಲ್ಲೆಲ್ಲಾ ಬ್ರಹ್ಮಾವರ ಒಂದು ಪೇಟೆಯಲ್ಲಿ 5 ಇಂಗ್ಲೀಷ್ ಮಿಡಿಯಂ ಶಾಲೆಗಳು ಪ್ರಾರಂಭವಾಗಿವೆ ಎಲ್ಲಾ ಶಾಲೆಯವರ ಹತ್ತಿರ ಬಸ್‌ಗಳಿವೆ, ಹಳ್ಳಿ ಹಳ್ಳಿಗೆ ಹೋಗಿ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾರೆ ನಿಮ್ಮ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಶಾಲೆಗಳಲ್ಲಿ ಮಕ್ಕಳಿರುವುದಿಲ್ಲ. ಏಕೆಂದರೆ. it is a competitive world. ನೀವು ಸರ್ಕಾರ ಉದ್ಯೋಗವನ್ನು ಕೊಡುವುದಿಲ್ಲ. ಮಲ್ಟಿ ನ್ಯಾಷನಲ್ ಕಂಪನಿಗಳೇನು ಬರುತ್ತಾರೆ, ಅವರು ಇಂಗ್ಲೀಷ್ ಬರದಿದ್ದರೆ ಉದ್ಯೋಗವನ್ನು ಕೊಡುವುದಿಲ್ಲ. ನಮ್ಮ ಮಕ್ಕಳು ಪಟ್ಟಣಪ್ರದೇಶದಲ್ಲಿ ಕಲಿತ ಮಕ್ಕಳೊಂದಿಗೆ ಸ್ಪರ್ದೆ ಮಾಡಬೇಕಾದರೆ ಅವರಿಗೆ ಅದೇ ರೀತಿ ಭಾಷೆಯನ್ನು ಕಲಿಸುವುದಂತಹವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಆ ಬಗ್ಗೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆ ನಿರ್ಧಾರವನ್ನು ತೆಗೆದುಕೊಳ್ಳಬಾರದು, ಇಂಗ್ಲೀಷ್‌ನಿಂದೇನೂ ಉದ್ಧಾರವಾಗುವುದಿಲ್ಲ ಕನ್ನಡದಲ್ಲೇ ಇರಬೇಕೆಂಬುದು, ಇಂಗ್ಲಿಷ್ ಬಗ್ಗೆ ನನ್ನ ಸಂಪೂರ್ಣವಾದ ವಿರೋಧವಂತೂ ಇದ್ದೇ ಇದೆ.

ಶ್ರೀ ಜಯಪ್ರಕಾಶ ಹೆಗ್ಡೆ : ಆಯಿತು ನೀವು ಎಲ್ಲಾ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ನೀವು ಎಲ್ಲ ಸದಸ್ಯರ ತೀರ್ಮಾನ ಮಾಡಿ.

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ ಏನಾಗಿದೆ ಎಂದರೆ ಯಾರು ಸರ್ಕಾರಕ್ಕೆ ಮುಚ್ಚಳಿಕೆಯನ್ನು ಕೊಟ್ಟು 1-5 ತರಗತಿಯವರೆಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುತ್ತೇವೆಂದು ಹೇಳಿದ್ದಾರೆ,ಅವರು ಅದನ್ನು ಕಲಿಸುತ್ತಿಲ್ಲ. ಎಲ್ಲಾ ಇಂಗ್ಲೀಷ್ ಕಲಿಸುವುದಕ್ಕೆ ಪ್ರಾರಂಭಮಾಡಿದ್ದಾರೆ,ಇದನ್ನು ಮೊದಲು ಸರಿ ಮಾಡಬೇಕಾಗಿದೆ. ಆಮೇಲೆ ತಮ್ಮ ವಿಚಾರಕ್ಕೆ ಬರಬೇಕಾಗಿದೆ. ಮೊದಲು ಇವರು ಕನ್ನಡವನ್ನು ಕಲಿಸಿದರೆ ಅಲ್ಲೆ 1ನೇ ತರಗತಿಯಿಂದ ಒಂದು ಪಿರಿಯಡ್ ಕಲಿಸಬಹುದು ಮೊದಲು ಇದನ್ನು ಸರಿಪಡಿಸುವುವರೆಗೆ ಇದ್ದಾಗುವುದಿಲ್ಲ. ಅದಕ್ಕೆ ಇದನ್ನು ಸರಿಪಡಿಸುವಂತಹ ಕಾರ್ಯಕ್ರಮ ಮಾಡುತ್ತೇವೆ. ಸರಿಪಡಿಸಿದ ನಂತರ ತಮ್ಮಂಥವರನ್ನೆಲ್ಲಾ ಕರೆದು ವಿಚಾರ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ, ತಮಗೆ ಹೇಳುತ್ತಿದ್ದೇನೆ. ಕನ್ನಡ ಭಾಷೆಯ ಬಗ್ಗೆ ಮೊದಲು ಶಾಸಕರಿಗೆ ಅಭಿಮಾನ ಬರಬೇಕು. ಮಂತ್ರಿಗಳಿಗೆ ಅಭಿಮಾನ ಬರಬೇಕು. ಅಧಿಕಾರಿಗಳಿಗೆ ಅಭಿಮಾನ ಬರಬೇಕು. ಇವೆಲ್ಲರಿಗೂ ಬೇಕಾಗಿಲ್ಲ. ಬರೀ ಮಾತನಾಡುತ್ತಾರೆ. ಘೋಷಣೆ ಹೇಳುತ್ತಾರೆ. ಕನ್ನಡ ಶಾಲೆಗಳು ದನದ ದೊಡ್ಡಿ ಇದ್ದಂತಿವೆ. ಅದನ್ನು ಸರಿಪಡಿಸಬೇಕು. ಬೆಳವಣಿಗೆ ಮಾಡಬೇಕು ಅನುಕೂಲ ಮಾಡಬೇಕು. ಹಳ್ಳಿಗಳ ಗ್ರಾಮೀಣ ಪ್ರದೇಶದ ಮಕ್ಕಳು ಶಾಲೆಗೆ ಹೋಗಬೇಕಾದರೆ ಆ ವಾತಾವರಣ ವ್ಯವಸ್ಥೆ ಸರಿ ಇರಬೇಕು. ಬರೀ ಮಾತೆತ್ತಿದ್ದರೆ. ಇಂಗ್ಲೀಷ್‌ನಿಂದ ಉದ್ಧಾರವಾಗುತ್ತೇವೆಂದು ಹೇಳುವ ಭ್ರಮೆ ಇದೆಯಲ್ಲಾ, ಇದು ಮೊದಲು ಹೋಗಬೇಕು. ಆ ಭ್ರಮೆ ಹೋಗಲಿಲ್ಲವೆಂದರೆ ಅಪಾಯವಿದೆ. ಅದಕ್ಕೆ ಒಳ್ಳೆಯ ಸೂಚನೆಯಲ್ಲ, ತಾವು ಉಪಾಧ್ಯಯರಾಗಿದ್ದವರು ತಮಗೆ ಗೊತ್ತಿದೆ. ದಯಮಾಡಿ ಹೇಳುತ್ತೇನೆ. ಯಾವುದೇ ಕಾರಣಕ್ಕೂ ಮೊದಲನೇ ಪ್ರಾಥಮಿಕ ಹಂತದಿಂದ ಇಂಗ್ಲೀಷ್ ಕಲಿಸುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎಂಬುದನ್ನು ಮಾನ್ಯ ಸಚಿವರಿಗೆ ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಜಯಪ್ರಕಾಶ ಹೆಗ್ಡೆಯವರು ಮಾತನಾಡುತ್ತಿದ್ದಾರೆ, ನೀವೇ ಮಾತನಾಡುವುದಕ್ಕೆ ನಿಂತುಕೊಂಡು ಬಿಟ್ಟಿದ್ದೀರಿ.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಮಾನ್ಯ ಹೊರಟ್ಟಿಯವರೆ, ಧೈರ್ಯದಿಂದ ತೀರ್ಮಾನ ತೆಗೆದುಕೊಳ್ಳಿ ನಾವೆಲ್ಲಾ ನಿಮ್ಮೊಟ್ಟಿಗೆ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಹೊರಟ್ಟಿಯವರು ಅಷ್ಟು ಸುಲಭವಾಗಿ ಧೈರ್ಯದಿಂದ ತೀರ್ಮಾನ ತೆಗೆದುಕೊಳ್ಳಲಾಗುವುದಿಲ್ಲ ಅವರದ್ದು ಕನ್ನಡ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ನಾವು ಕನ್ನಡದಲ್ಲೇ ಕಲಿತದ್ದು, ನೀವು ನಿಮ್ಮ ಮಕ್ಕಳು ಓದಿ ನಿಮ್ಮ ಮೊಮ್ಮಕ್ಕಳಿಗೆ ಇಂಗ್ಲೀಷ್ ಮಿಡಿಯಂ ಬಿಡಿ. ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ವಾಟಾಳ್ ನಾಗರಾಜ್ : ನನ್ನ ಮಗನಿಗೆ ಮಕ್ಕಳೇ ಇಲ್ಲ ಯಾರ ಮಕ್ಕಳನ್ನು ನಾನು ಮೊಮ್ಮಕ್ಕಳು ಅನ್ನಲಿ ಏನಿದರ ಅರ್ಥ? ಮಗಳು ಅಳಿಯ ನನ್ನನ್ನು ಕಟ್ಟಿಕೊಳ್ಳಲಾಗುತ್ತದೆಯೇ? ಅದಕ್ಕೂ ನನಗೂ ಸಂಬಂಧವಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ನಿಮ್ಮ ಮಗಳು ಅಳಿಯನಿಗೆ ಹೇಳುವುದಕ್ಕಾಗದಿದ್ದರೆ ಬೇರೆಯವರು ತೀರ್ಮಾನ ತೆಗೆದುಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಪ್ರಾಮಾಣಿಕತೆಯಿಂದ ನನ್ನ ಮಕ್ಕಳು ನನಗೆ ಯಾರು ಕೈ ತೋರಿಸಬಾರದೆಂದು ನಾನೇ ನಿಂತು ಕನ್ನಡದ ಅಭ್ಯಾಸ ಮಾಡಿಸಿದ್ದೇನೆ, ಬೇರೆ ಮಾತು ಇಲ್ಲವೇ ಇಲ್ಲ, ನನ್ನ ಮಗನಿಗೆ ಮಕ್ಕಳಾದರೆ, ನಾನು ಈಗಲೇ ಹೇಳಿರುತ್ತೇನೆ. ಮಕ್ಕಳಾಗುವುದಕ್ಕಿಂತ ಮುಂಚೆ ನಿನಗೆ ಮಕ್ಕಳಾದರೆ ಕನ್ನಡದಲ್ಲೇ ಕಲಿಸು ಎಂದು ಹೇಳಿದ್ದೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ ನನ್ನ ಮಕ್ಕಳಿಗೆ ನನ್ನ ಮೊಮ್ಮಕ್ಕಳಿಗೆ ಇಂತಹದ್ದನ್ನೇ ಮಾಡು ಎಂದು ಹೇಳುವ ಅಧಿಕಾರವಿಲ್ಲದಿದ್ದಾಗ ಬೇರೆ ಮಕ್ಕಳಿಗೆ ಇಂತಹದ್ದೇ ಮಾಡು ಎಂದು ಹೇಳುವ ಅಧಿಕಾರ ನನಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ತನ್ನ ಮಕ್ಕಳೇ ತಂದೆಯ ಮಾತನ್ನು ಕೇಳದಿರುವಾಗ, ಈ ಪರಿಸ್ಥಿತಿಯಲ್ಲ, ನನಗೆಲ್ಲಾ ಅಧಿಕಾರಿವಿದೆ. ನನ್ನ ಕನ್ನಡದ ಪ್ರಶ್ನೆಯನ್ನು ನನ್ನ ಮಿತ್ರರಾದ ಜಯಪ್ರಕಾಶ ಹೆಗ್ಡೆಯವರು ಪ್ರಶ್ನೆ ಮಾಡಬೇಕಾಗಿಲ್ಲ. ನಾನು ಎಲ್ಲಾದರೂ ನನ್ನ ಜೀವನದಲ್ಲಿ ಆ ರೀತಿ ಆಗಿದ್ದರೆ, ನನ್ನ ಇಡೀ ಜಿವನವೇ ನನ್ನ ಉಸಿರೇ ಕನ್ನಡ.

ಶ್ರೀ ಎಸ್, ರಾಜೇಂದ್ರನ್ : ಹಳ್ಳಿ ಕಡೆ ಇರೋರಿಗೆಲ್ಲಾ ಕನ್ನಡ ಇಂಪ್ಲಿಮೆಂಟ್ ಮಾಡಬೇಕು ಸಿಟಿಯಲ್ಲೂ ಕನ್ನಡ ಕನ್ನಡ ಅಂತ ಹೇಳುತ್ತೀರಿ, ಈಗ ಬಿಪಿಎಲ್ ರೇಖೆ ಕೆಳಗಡೆ ಇರುವವರಿಗೆಲ್ಲ ಈಗ ಬಿಪಿಎಲ್ ಏನು ಕೊಡ್ತೀರಿ, ಸೈಕಲ್. ಸೈಕಲ್ ಎನ್ನುವ ಆ ಪದ ಯಾವ ಭಾಷೆ?

ಶ್ರೀ ಬಸವರಾಜ ಎಸ್ ಹೊರಟ್ಟಿ : ಬಸ್ ಪೋಲೀಸ್, ಆ ತರಹ ಪದಗಳನ್ನು ಉಪಯೋಗಿಸಬಹುದು.

ಶ್ರೀ ವಾಟಾಳ್ ನಾಗರಾಜ್ : ಕನ್ನಡದ ಕವಿಗಳು ಸಾಹಿತಿಗಳು ತರ್ಜುಮೆಗಾರರು ಒಳ್ಳೆಯ ಪದವನ್ನು ಕೊಡಬೇಕು, ಆದ್ದರಿಂದ ಕೆಲವು ಕನ್ನಡಕ್ಕೆ ಆಡುಬಾಷೆಯಾಗಿ ಇಂಗ್ಲೀಷ್ ಉಳಿದಿರುವುದನ್ನು ಏನೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಈಗ ಒಬ್ಬಟ್ಟು ಅನ್ನುವುದಕ್ಕೆ ಏನು ಹೇಳೋಣ ನಾವು?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕುವೆಂಪು ಏನು ಹೇಳಿದ್ದಾರೆ ಅಂದರೆ ಇಂಗ್ಲೀಷಿನ ಪದಗಳಿಗೆ ಕನ್ನಡ ಅನುವಾದಪದ ಸಿಗದೇ ಹೋದರೆ ಯಾವ ಇಂಗ್ಲೀಷ್ ಪದ ಜನಬಳಕೆಯಲ್ಲಿದೆ. ಅದು ಜನರ ಭಾಷಯಾಗಿಬಿಟ್ಟಿರುತ್ತದೆ ಅದಕ್ಕೋಸ್ಕರ ಅಂತಹ ಇಂಗ್ಲೀಷ್ ಪದಗಳಿಗೆ 'ಉ' ಕಾರ ಸೇರಿಸಿ, ಕಾರ್ –ಕಾರು, ಮೋಟಾರ್– ಮೋಟಾರು, ಸೈಕಲ್–ಸೈಕಲ್ಲು, ಪೆನ್– ಪೆನ್ನು ಆ ಉಕಾರ ಸೇರಿಸಿದ್ದರೆ ಅದು ಕನ್ನಡದ ಪದವಾಗುತ್ತದೆ ಎಂದು ಕುವೆಂಪುರವರು ಬಹಳ ಹಿಂದೇನೇ ಇದನ್ನು ಹೇಳಿದ್ದಾರೆ. ಆದ್ದರಿಂದ ಅದರ ಬಗ್ಗೆ ವಿಜ್ಞಾನ ಮಾಡವುದು ಬೇಡ. ಇಂಗ್ಲೀಷ್ ಪದ ಯಾಕೆ ಕನ್ನಡಕ್ಕೆ, ಅಷ್ಟೊಂದು ಮಡಿವಂತಿಕೆ ಮಾಡಬೇಕು ಅಂತ ಯಾರೂ ಹೇಳಿಲ್ಲ. ಉತ್ತರ ಕರ್ನಾಟಕ್ಕೆ ಹೋದರೆ ಮಾನ್ಯ ಖರ್ಗೆಯವರ ಭಾಗದಲ್ಲಿ ಅನೇಕ ಉರ್ದು ಪದಗಳು ಸೇರಿಕೊಂಡುಬಿಟ್ಟಿವೆ. ಅದರಿಂದ ಕನ್ನಡ ಮೈಲಿಗೆಯಾಗಿ ಹೋಯಿತು ಅಂತ ಹೇಳುವುದಕ್ಕೆ ಆಗುವುದಿಲ್ಲ. ನಾವು ಮಡಿವಂತಿಕೆ ಇಟ್ಟುಕೊಳ್ಳಬೆಂಕೆಬುದು ಆಗುವುದಿಲ್ಲ. ಕನ್ನಡವೂ ಸಮೃದ್ಧಿಯಾಗುತ್ತದೆ. ಆ ಕಾರಣದಿಂದ ಅನೇಕ ಇಂಗ್ಲೀಷ್ ಪದಗಳಿಗೆ 'ಉ' ಕಾರ ಸೇರಿ ಅವೆಲ್ಲಾ ಕನ್ನಡ ಪದಗಳೇ ಆಗಿವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಭ್ಯಾಸ ಆಗುತ್ತದೆ. ಇವತ್ತಿನ ಸ್ಪರ್ಧಾತ್ಮಿಕ ವಾದ ಜಗತ್ತಿನಲ್ಲಿ ಭಾಷೆ ಕಲಿಯುವುದು ಬಹಳ ಅಗತ್ಯವಿದೆ ಎಂಬುದು ನಮ್ಮ ಬೇಡಿಕೆ. ಕನ್ನಡದಲ್ಲಿ ಶಾಲೆಯಲ್ಲಿ ಪಾಠ ಹೇಳಿ. ಒಂದು ವಿಷಯವಾಗಿ ಇಂಗ್ಲೀಷ್ ಕಲಿಸಿ ಅನ್ನುತ್ತೇವೆ. ಇಡೀ ಇಂಗ್ಲೀಷ್ ಮೀಡಿಯಂ ಶಾಲೆ ತೆರೆಯಿರಿ ಅಂತ ಹೇಳುತ್ತಾ ಇಲ್ಲ. ನೀವಿದನ್ನು ಈಗ ಮಾಡದೇ ಹೋದರೆ ನಿಮ್ಮ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬರುತ್ತದೆ. ಅದಕೋಸ್ಕರ ಈ ಒಂದು ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದೇನೆ. ಮತ್ತೆ ಪ್ರವಾಸಸೋದ್ಯಮ. ನಮ್ಮ ಕರಾವಳಿ ಜಿಲ್ಲೆ ಪ್ರವಾಸೋದ್ಯಮಕ್ಕೆ ಪೂರಕವಾದದ್ದು. ನಮ್ಮಲ್ಲಿಗೆ ಅನೇಕ ಸರ್ಕಾರಗಳ ಅನೇಕ ಮಂತ್ರಿಗಳು ಪ್ರವಾಸ ಬಂದರು. ಪ್ರವಾಸ ಮಾಡಿದ್ದು ಬಿಟ್ಟರೆ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲೇ ಇಲ್ಲ. ಎಲ್ಲೂ ಪ್ರವಾಸೋದ್ಯಮ ಅಭಿವೃದ್ಧಿ ಆಗಲಿಲ್ಲ.

ಎಷ್ಟು ಅವಕಾಶವಿತ್ತು ಗೋವಾದಿಂದ ದಿವಂಗತ ಜೆ.ಹೆಚ್. ಪಟೇಲರ ಜೊತೆ ನಾವು ಒಮ್ಮೆ ಹೆಲಿಕ್ಯಾಪ್ಟರ್‌ನಲ್ಲಿ ಬರುವಾಗ ನೋಡಿದ್ದೆವು. ,ಕಾರವಾರದವರೆಗೆ ಬರುವಾಗ ಟೂರಿಸಂನಲ್ಲಿ ಇಡೀ ಕರಾವಳಿ ಅಭಿವೃದ್ಧಿಯಾಗಿತ್ತು. ಅಲ್ಲಿಂದ ಮಂಗಳೂರಿಗೆ ಬರುವಾಗ ಏನೂ ಇರಲಿಲ್ಲ. ಕೆಲವು ದೇಶಗಳು ಬ್ಯಾಂಕಾಕ್, ಹಾಂಕಾಂಗ್ ಇವೆಲ್ಲಾ ಕೇವಲ ಪ್ರವಸೋದ್ಯಮವನ್ನೇ ನಂಬಿಕೊಂಡಿವೆ. ಅದಕ್ಕೋಸ್ಕರ ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡಬೇಕು. ನಮ್ಮ ಕರಾವಳಿ ರಸ್ತೆಗಳೂ ಹಾಳಾಗಿವೆ. ಅದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. 50 ಲಕ್ಷ ರೂ ಶಾಸಕರ ನಿಧಿ, ಇನ್ನೊಂದ್ಯೆವತ್ತು ಪಿಡಬ್ಲ್ಯುಡಿಗೆ ಅಂತ ಕೊಡುತ್ತೇವೆ ಅಂದಿದ್ದೀರಿ. ಬದಲಿಗೆ ಶಾಸಕರ ನಿಧಿಯನ್ನೇ ಒಂದು ಕೋಟಿ ರೂ ಮಾಡಿ ನಮ್ಮ ರಸ್ತೆಗಳು ಸಂಪೂರ್ಣ ಹಾಳಾಗಿದೆ ಅವನ್ನು ಅಭಿವೃದ್ಧಿಪಡಿಸಲು ಉಪಯೋಗಿಸುತ್ತೇವೆ. ಅನ್ನುವ ಮಾತು ಕೊಡುತ್ತೇನೆ. ಏಕೆಂದರೆ ನಮ್ಮ ಉಸ್ತುವಾ ಸಚಿವರಾಗಿದ್ದ ಜಯಕುಮಾರ್‌ರವರು ಹೇಳಿದ ಒಂದು ಮಾತು ತಮಗೆ ಓದಿ ಹೇಳುತ್ತೇನೆ. ಆಮೇಲೆ ನೀವು ರಸ್ತೆಗೆ ಹಣ ಕೊಡಬೇಕೋ ಬೇಡವೋ ಅಂತ ಆಲೋಚನೆ ಮಾಡುತ್ತೀರಿ. ಇಲ್ಲಿನ ರಸ್ತೆ ದುಸ್ಥಿತಿ ನಮ್ಮ ಕಡೆ ಆಗಿದ್ದರೆ ಈ ಕ್ಷೇತ್ರದ ಶಾಸಕರಿಗೆ ಜನರು ಎಕ್ಕಡದಲ್ಲಿ ಹೊಡೆಯುತ್ತಿದ್ದರು. ಇದ ನನ್ನ ಕ್ಷೇತ್ರದಲ್ಲಿ ಬಂದು ಹೇಳಿದ್ದು. ಅದಕ್ಕೆ ಉತ್ತರವಾಗಿ ಅದು ಅವರ ಸಂಸ್ಕೃತಿ ತೋರಿಸುತ್ತದೆ, ಅಷ್ಟು ಮಾತ್ರ ಹೇಳಿ, ಬೇರೆ ಮತ್ತೇನೂ ಹೇಳಲಿಕ್ಕೆ ಹೋಗಲಿಲ್ಲ. ಆಮೇಲೆ ಇನ್ನೊಂದು ಹೇಳಿದ್ದಾರೆ, ಉಪ ಮುಖ್ಯಮಂತ್ರಿಗಳು ಇದನ್ನು ಕೇಳಿಸಿ ಕೊಳ್ಳಬೇಕು. ಬಡವರ ಮತ ಪಡೆದು ಶ್ರೀಮಂತರ ಕಾಲಡಿಯಲ್ಲಿ ಮಾರಾಟ ಮಾಡುವ ಕಾಂಗ್ರೆಸ್ ತತ್ವ, ಅದರ ಸಮಸ್ಯೆ ಬಹೆರಿಸುವ ಬದಲು ಸಮಸ್ಯೆಯನ್ನು ಮತ್ತಷ್ಟು ಸೃಷ್ಟಿಸುವುದು ಹಾಗೂ ಬೆಳೆಸುವುದು ಬಿಜೆಪಿಯ ತತ್ವ, ಇವರು ಕಾಂಗ್ರೆಸ್‌ನವರ ಜೊತೆಗೂ ಇದ್ದರು, ಬಿಜೆಪಿಯವರ ಜೊತೆಗೂ ಇದ್ದಾರೆ, ಅಂದರೆ ನಾಲಿಗೆಗೆ ಹಿಡಿತವಿಲ್ಲ ಎಂಬುದಕ್ಕೆ ಇದನ್ನು ತೋರಿಸುತ್ತಿದ್ದೇನೆ. ದಯವಿಟ್ಟು ನಿಮ್ಮ ಮಂತ್ರಿಗಳಿಗ ಬೇರೆ ಶಾಸಕರ ಬಗ್ಗೆ ಏನಾದರೂ ಹೇಳಿಕೆ ಕೊಡುವಾಗ ಸ್ವಲ್ಪ ಸೌಜನ್ಯ ಅವರಲ್ಲಿರಬೇಕು ಅಂತ ಕೇಳಿಕೊಳ್ಳುತ್ತೇನೆ. ಇದನ್ನು ಅವರು ಮನೆಯಲ್ಲಿ ಕೂತು ಮತನಾಡಲೇಬೇಕಾದರೆ; ಆದರೆ ಪಬ್ಲಿಕ್ ಸಮಾರಂಭದಲ್ಲಿ ಮಾತನಾಡುವಾಗ ಸ್ವಲ್ಪ ಹಿಡಿತ ಇಟ್ಟುಕೊಳ್ಳಬೇಕು ಅಂತ ಅವರಿಗೆ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ಈ ಸಲ ಆಯವ್ಯಯದಲ್ಲಿ ಗರಿಷ್ಠ ಹಣ ನಾವು ತೆಗೆದಿಟ್ಟಿದ್ದೇವೆ. ಈ ಸರ್ಕಾರ ಪ್ರಾವಾಸೋದ್ಯಮದ ಬಗ್ಗೆ ಹೆಚ್ಚಿನ ಒತ್ತು ಕೊಡಲು ನಾವು ಸಿದ್ಧ ಇದ್ದೇವೆ, ಇದುವರೆಗೂ ಬೇರೆ ಬೇರೆ ಕಾರಣಕ್ಕೆ ಅದು ನಿರ್ಲಕ್ಷ್ಯವಾಗಿತ್ತು. ಕರಾವಳಿ ಇರಬಹುದು, ರಾಜ್ಯದ ಬಹುತೇಕ ಭಾಗಗಳಲ್ಲಿ ಬಹುತೇಕ ಭಾಗಗಳಲ್ಲಿ ಬಹಶಃ ಇಡೀ ದೇಶದಲ್ಲೆ ಪ್ರವಾಸೋದ್ಯಮಕ್ಕೆ ಹೆಚ್ಚು ಅನುಕೂಲ ಇದೆ. ಪ್ರವಾಸಿಗರನ್ನು ಆಕರ್ಷಿಸಲು ಅನುಕೂಲವಾಗಿರುವ ಅನೇಕ ಪ್ರಮುಖವಾದ ಸ್ಥಳಗಳಿವೆ ಈಗ 40 ಕೋಟಿ ರೂ ಗಳನ್ನು ತೆಗೆದಿಟ್ಟಿದ್ದೇವೆ. ಇನ್ನೂ ಹೆಚ್ಚು ಹಣ ಕೊಡಲು ನಾವು ಸಿದ್ಧ. ಬಹಶಃ ಬರುವಂತಹ ವರ್ಷಗಳಲ್ಲಿ ಇದಕ್ಕೆ ಆದ್ಯತೆ ಮೇಲೆ ಕಾರ್ಯಕ್ರಮ ರೂಪಿಸುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸರಿ, ಮಾನ್ಯ ಜಯಕುಮಾರ್ ಹೇಳಿರುವುದು, ಬಡವರ ಮತ ಪಡೆದು ಶ್ರೀಮಂತರ ಕಾಲಡಿಯಲ್ಲಿ ಮಾರಾಟ ಮಾಡುವುದು ಕಾಂಗ್ರೆಸ್ ತತ್ವವಾದರೆ ಸಮಸ್ಯೆಯನ್ನು ಮತ್ತಷ್ಟು ಸೃಷ್ಟಿಸುವುದು ಬಿಜೆಪಿಯ ತತ್ವ, ನನ್ನ ಬಗ್ಗೆ ಅವರು ಇನ್ನೊಂದು ಮಾತು

ಹೇಳಿರುವುದನ್ನು ನೀವು ಕೇಳಿಸಿಕೊಂಡಿರಬೇಕು. ಅವರು ಹೇಳಿದರು, ಇಲ್ಲಿನ ರಸ್ತೆಗಳ ದುಸ್ಥಿತಿ ನಮ್ಮ ಕಡೆ ಇದ್ದಿದ್ದರೆ ಈ ಕ್ಷೇತ್ರದ ಶಾಸಕರಿಗೆ ಜನರು ಎಕ್ಕಡದಲ್ಲಿ ಹೊಡೆಯುತ್ತಿದ್ದರು ಅಂತ ಅದಕ್ಕೆ ನಾನು ಕೇಳುವುದು, ಒಂದು ಸಲ ಅವರ ಕ್ಷೇತ್ರದ ಜನರನ್ನು ನನ್ನ ಕ್ಷೇತ್ರಕ್ಕೆ ಕರೆತನ್ನಿ. ನನ್ನ ಕ್ಷೇತ್ರದ ಜನ ಜಯಕುಮಾರರ ಕ್ಷೇತ್ರಕ್ಕೆ ಹೋಗಲಿ, ಯಾವ ಕ್ಷೇತ್ರ ಅಭಿವೃದ್ಧಿಯಾಗಿದೆ ಅಂತ ಇಬ್ಬರೂ ನೋಡಲಿ.

ಶ್ರೀ ಆರ್.ಧ್ರುವನಾರಾಯಣ : ನಂಜನಗೂಡು ತಾಲ್ಲೂಕಿಗೆ ನನ್ನದೊಂದು ಹೋಬಳಿ ಸೇರುತ್ತದೆ. ದಯಮಾಡಿ ತಾವು ಅಲ್ಲಿಗೆ ಬಂದು ಆ ರಸ್ತೆ ನೋಡಬೇಕು. ಆ ರಸ್ತೆ ನಿಮ್ಮ ರಸ್ತೆ ನೋಡಿಬಿಟ್ಟರೆ ಅವರಿಗೆ ನಿಜವಾಗಲೂ ಅರ್ಥವಾಗುತ್ತದೆ. ಅಷ್ಟು ವರ್ಸ್ಟ್ ಇದೆ ನಂಜನಗೂಡು ರಸ್ತೆ ಅಂತ ನಾನು ಹೇಳಿದ್ದು.

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಒಂದು ಕೆಲಸ ಮಾಡಬೇಕು ಅವರು ಹೇಳಿದ ಮಾತಿಗಾದರೂ ಸ್ವಲ್ಪ ಹೆಚ್ಚು ಅನುದಾನ ಕೊಡಿ, ಬೇರೇನೂ ಬೇಕಿಲ್ಲ ನನಗೆ, ರಸ್ತೆಗಳ ಅಭಿವೃದ್ಧಿಗೆ. ನಾನು ಎಕ್ಕಡದಲ್ಲಿ ಪೆಟ್ಟು ತಿನ್ನುವುದು ಬೇಡ ಅಂತ. ನಂಜನಗೂಡು ಹೇಗಿದೆ ಅನ್ನುವುದನ್ನು ನಾನೂ ನೋಡಿದ್ದೇನೆ. ಇನ್ನು ಸಣ್ಣ ನೀರಾವರಿಗೆ ಮೇಜರ್ ಇರಿಗೇಶನ್‌ಗೆ ಏನು ಹಣ ಕೊಡುತ್ತಿದ್ದೀರಿ ಅದಕ್ಕಿಂತ ಹೆಚ್ಚಿಗೆ ಭೂಮಿಗೆ ನೀರುಣಿಸುವುದು ಸಣ್ಣ ನೀರಾವರಿ. ಅದಕ್ಕೆ ಹೆಚ್ಚಿನ ಹಣ ಕೊಡಬೇಕಾಗುತ್ತದೆ. ನಮ್ಮಲ್ಲಿ ಉಪ್ಪುನೀರು ತಡೆ ಅಣೆಕಟ್ಟುಗಳನ್ನು ಕಟ್ಟಿದರೆ ಯಾವ ಮೇಜರ್ ಇರಿಗೇಷನ್ನೂ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಚೆಕ್‌ಡ್ಯಾಮ್ಸ್. ದಯವಿಟ್ಟು 200 ಕೋಟಿ ರೂಗಳನ್ನು ಇಡೀ ಕರಾವಳಿಗೆ ಕುಡಿಯುವ ನೀರಿಗಾಗಿ ರೈತರಿಗೆ ಕೃಷಿಗೆ ಸಹಾಯ ಮಾಡಿದರೆ ಜನರ ಮಟ್ಟ ಮೇಲಕ್ಕೆ ತರಲು ಸಾಧ್ಯವಾಗುತ್ತದೆ. ಅದಕ್ಕೋಸ್ಕರ ಸಣ್ಣ ನೀರಾವರಿಗೆ ಹೆಚ್ಚು ಒತ್ತು ಕೊಡಿ ಅಂತ ತಮ್ಮ ಹತ್ತಿರ ಕೇಳಿಕೊಳ್ಳುತ್ತಾ ಇನ್ನು ಐಟಿಐ ಕಾಲೇಜ್‌ಗಳಿಗೆಲ್ಲಾ ಕಟ್ಟಡಕ್ಕೆಂದು ಹಂ ಕೊಡುವ ವ್ಯವಸ್ಥೆ. ಲಾಯರ್ಸ್‌ಗೆ ಒಂದು ವರ್ಷ ತಿಂಗಳಿಗೆ ಒಂದು ಸಾವಿರರೂ ನಂತೆ ಕೊಡುತ್ತೇವೆ ಅಂತ ಹೇಳಿದ್ದೀರಿ, ಲಾಯರ್ಸ್ ಅಂದರೆ ಸೀನಿಯರ್ ಒಟ್ಟಿಗೆ ಪ್ರಾಕ್ಟೀಸ್ ಮಾಡುವವರು ಅಂತ ಹೇಳಿದ್ದೀರಿ, ಇಲ್ಲ, ಅದು ಮಾತ್ರ ಸಾಕಾಗುವುದಿಲ್ಲ. ನೀವು ಅಸರ್ಟೇನ್ ಮಾಡಬೇಕು. ಅವರು ವಕಾಲುತ್ತು ಹಾಕಿದ್ದಾರಾ ಪ್ರಾಕ್ಟೀಸ್ ಮಾಡುತ್ತಿದ್ದಾರಾ ಇದನ್ನೆಲ್ಲಾ ನೋಡಿ ಅವರಿಗೆ ಕೊಡಬೇಕು. ಏಕೆಂದರೆ ನಾವೂ ಸಹ ಎಲ್‌ಎಲ್‌ಬಿ ಮಾಡಿ ಆಫೀಸಿಗೆ ಹೋಗುವುದುಂಟು ಈಗ ನಾನೂ ಸಹ I am on the roll. ಆದರೆ ನಾನು ಪ್ರಾಕ್ಟೀಸ್ ಮಾಡುತ್ತಿಲ್ಲ. ಅಂಥ ಲಾಯರುಗಳಿಗೆ ಕೊಡಬೇಡಿ. ರೆಗ್ಯುಲರ್ ಆಗಿ ಕೋರ್ಟಿಗೆ ಹೋಗುವಂಥದ್ದು ಮತ್ತು ಅವರನ್ನು ಸರ್ಕಾರಿ ಕೆಲಸಗಳಿಗೆ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ನೀವೇನು ಸರ್ಕಾರದಿಂದ ಒಂದು ಸಾವಿರ ರೂಪಾಯಿ ಹಣವನ್ನು ಕೊಡುತ್ತೀರಿ ಅದಕ್ಕಾಗಿ ಸರ್ಕಾರದ ಕೆಲಸಕ್ಕೂ ಅವರನ್ನು ಉಪಯೋಗ ಮಾಡಿಕೊಳ್ಳುವ ಕೆಲಸವೂ ಸಹಾ ಆಗಬೇಕಾಗುತ್ತದೆ. ಮಾನ್ಯ ಶೆಟ್ಟರ್‌ರವರು, ಆಗ ತಾವು ಇರಲಿಲ್ಲ, ಈ ಇಂದಿರಾ ಅವಾಸ್ ಮತ್ತು ಆಶ್ರಯ ಮನೆಗಳ ಬಗ್ಗೆ ಬಹಳಷ್ಟು ಚರ್ಚೆಯನ್ನು ಮಾಡಿದೆವು. ಈಗ ವಸತಿ ಸಚಿವರು ಇಲ್ಲ. ತಾವು ಸ್ವಲ್ಪ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಒಂದು ರಿಜಿಸ್ಟ್ರೇಷನ್‌ಗೆ ಹಿಂದೆ ಮೊದಲು

ಎರಡೂ ರೂಪಾಯಿಯಲ್ಲಿ ಮಾಡುತ್ತಿದ್ದರು. ಹಿಂದೆ ಸರ್ಕಾರ ಇದ್ದಾಗ. ಕೇವಲ ಎರಡು ರೂಪಾಯಿ. ಇವತ್ತು 250 ರೂಪಾಯಿ. ಅದನ್ನು ತೆಗೆದು ರಿಜಿಸ್ಟ್ರೇಷನ್‌ಗೆ ಪನಃ ಎರಡು ರೂಪಾಯಿಗೆ ತರಬೇಕಾಗುತ್ತದೆ ಮತ್ತು ಅದಕ್ಕೆ ಮೀನುಗಾರರಿಗೆ ಯಾವ ರೀತಿಯಲ್ಲಿ ಹಂಡ್ರೆಡ್ ಪರ್‌ಸೆಂಟ್ ಸಬ್ಸಿಡೈಸ್ಡ್ ಮನೆಯನ್ನು ಕಟ್ಟುವ ವ್ಯವಸ್ಥೆಯನ್ನುಮಾಡುತ್ತಿದ್ದೇವೆ. ಅದಕ್ಕೆ ಇಂಟರೆಸ್ಟ್ ಇಲ್ಲ. ರೀಪೇಮೆಂಟೂ ಇಲ್ಲ. ಇವರಿಗೆ ರೀಪೇಮೆಂಟ್ ಇದೆ. ಪ್ಲಸ್ 11 ಪರ್‌ಸೆಂಟ್ ರೇಟ್ ಆಫ್ ಇಂಟರೆಸ್ಟ್ ಹತ್ತು ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟು ಅವನು ವಾಪಸ್ ಕೊಡುವಾಗ 22 ಸಾವಿರ ರೂಪಾಯಿಗಳನ್ನು ಕಟ್ಟುತ್ತಾನೆ. ಅದಕ್ಕೋಸ್ಕರ ಅದನ್ನೂ ಸಹಾ ಸಬ್ಸಿಡೈಸ್ಡ್ ಮಾಡಿ ಮೀನುಗಾರರಿಗೆ, ಆಶ್ರಯ ಮನೆಗಳಿಗೂ ಅದೇ ತರಹ ಮಾಡಿ. ಅದೇ ರೀತಿಯಲ್ಲಿ ಅದನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಕೊನೆಯ ಪಕ್ಷ ಜೀರೋ ಪರ್‌ಸೆಂಟ್ ರೇಟ್ ಆಫ್ ಇಂಟರೆಸ್ಟ್ ತಂದಾಗ ಅವನು ಬದುಕಲಿಕ್ಕಾಗುತ್ತದೆ. ಏಕೆಂದರೆ ಇದೊಂದು ಸಹಾಯವನ್ನು ಮಾಡಬೇಕಾಗುತ್ತದೆ. ಅನೇಕ ವರ್ಷಗಳಿಂದ ಹಣವನ್ನು ತೆಗೆದುಕೊಂಡು ಅದು ಫ್ರೀ ಎಂದು ಹೇಳಿ ಎಣಿಸಿ ಕಟ್ಟದೇ ಇದ್ದವರ ಪರಿಸ್ಥಿತಿ ಏನಾಗಿದೆ ಎಂದರೆ ಅದರ ನಾಲ್ಕು ಪಟ್ಟು ಜಾಸ್ತಿ ಯಾಗಿ ಹೋಗಿದೆ. ಅವನಿಗೆ ಕಟ್ಟುವುದಕ್ಕಾಗುವುದಿಲ್ಲ. ಒನ್ ಟೈಮ್ ಸೆಟ್ಲ್‌ಮೆಂಟ್ ಮನ್ನಾ ಮಾಡುವಂಥದ್ದು ಕೇವಲ ಅಸಲನ್ನು ತೆಗೆದುಕೊಂಡು ಅಥವಾ ಮನ್ನಾ ಮಾಡುವಂಥದ್ದು ಏನಾದರೂ ಮಾಡದಿದ್ದರೆ ಯಾರಿಗೂ ವಾಪಸ್ ಕಟ್ಟುವುದಕ್ಕಾಗುತ್ತಿಲ್ಲ. ಕಣ್ಣೀರು ಹಾಕುತ್ತಿದ್ದಾರೆ. ದಯವಿಟ್ಟು ಇದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಬೇಕೆಂದು ಹೇಳುತ್ತಾ ಈ ಆರ್‌ಟಿಸಿ ಬಗ್ಗೆ, ಆರ್‌ಟಿಸಿ ಇಲ್ಲದಿದ್ದರೆ ಅವರಿಗೆ ಅಂಬೇಡ್ಕರ್ ಮನೆಯನ್ನು ಕೊಡುವುದಿಲ್ಲ. ಇಂದಿರಾ ಆವಾಸ್ ಮೆನಯನ್ನು ಕೊಡಲಿಕ್ಕೆ ಪ್ರಾರಂಭವನ್ನು ಮಾಡಿದೇ ಯಾರಿಗೆ ಸ್ವಂತ ಸ್ಥಳ ಇಲ್ಲಾ ಅವರಿಗೆ ಕೊಡಬೇಕೆಂದು ಹೇಳಿ ಇಂದಿರಾ ಅವಾಸ್ ಮನೆಯನ್ನು ಕೊಡುವುದಕ್ಕೆ ಶುರುಮಾಡಿದ್ದು. ಈಗ ಪನಃ ಅವರ ಹತ್ತಿರ ಆರ್‌ಟಿಸಿ ಯನ್ನು ಕೇಳಿದರೆ ಅವರು ಆರ್‌ಟಿಸಿ ಯನ್ನು ಎಲ್ಲಿಂದ ತರುವುದು? ಇಲ್ಲದಿದ್ದರೆ ಇದು ಬೇರೆ ಬೇರೆ ಕಾರ್ಯಕ್ರಮವಾಗುತ್ತೆ ಅಂಬೇಡ್ಕರ್ ಮನೆಯನ್ನು ಆರ್‌ಟಿಸಿ ಇಲ್ಲದೇ ಕೊಡುತ್ತಾರೆ. ಅದನ್ನು ಎಸ್.ಸಿ ಎಸ್‌ಟಿ ಯವರಿಗೆ ಸ್ವಂತ ಜಾಗ ಇರುವುದಿಲ್ಲ. ಅವರಿಗೆ ಆರ್‌ಟಿಸಿ ಯನ್ನು ಕೇಳಬಾರದು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದು. ಇವೆಲ್ಲವನ್ನೂ ಬದಲಾವಣೆ ಮಾಡಿ ನೀವು ಅಧಿಕಾರಿಗಳನ್ನು ನೀವು ಮತ್ತೆ ವಸತಿ ಸಚಿವರು ಕರೆದು ಕೂರಿಸಿ ಚರ್ಚೆಯನ್ನು ವಾಡಿ ಪುನಃ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರ ಮನೆಯನ್ನು ಕೊಟ್ಟಹಾಗೆ ಮಾಡುವಂಥದ್ದು. ಅವರಿಗೆ ಸಿಕ್ಕದೇ ಇರುವಂಥದ್ದು. ಇ ಪರಿಸ್ಥಿತಿ ನಿರ್ಮಾಣವಾಗುತ್ತದೆ ದಯವಿಟ್ಟು ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು. ಇನ್ನು ಯಶಸ್ವಿನಿ ಬಗ್ಗೆ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಎಲ್ಲಾ ಮೆಂಬರ್ಸ್‌ಗೆ ಅಟೋಮ್ಯಾಟಿಕ್ ಆಗಿ ಯಶಸ್ವಿನಿಯ ಒಂದು ಪ್ರಯೋಜನ ಪಡೆಯುವುದಕ್ಕೆ, ಆದರೆ ನೀವು ಅದನ್ನು ಹೇಳುತ್ತೀರಿ. ನೀವು ಕಾರ್ಡನ್ನು ಕೊಡದಿದ್ದರೆ ಆಸ್ಪತ್ರೆಯಲ್ಲಿ ಹೋಗಿ ಮಲಗಿ ಸರ್ಜರಿ ಅರ್ಜೆಂಟ್ ಇದ್ದರೂ ಸಹಾ ಸರ್ಜರಿಯನ್ನು ಮಾಡುತ್ತಿಲ್ಲ. ಯಶಸ್ವಿನಿ ಟ್ರಸ್ಟ್‌ನಿಮದ ನಮಗೆ ಮಾಹಿತಿ ಬರದೆ ನಾವು ಸರ್ಜರಿಯನ್ನು ಮಾಡುವುದಿಲ್ಲವೆಂದು ಅವರು ಹೇಳುತ್ತಾರೆ. ಒಂದು ಆಗಬೇಕು. ನೀವು ಆಟೋಮ್ಯಾಟಿಕ್ ಆಗಿ ಯಾರು ಸೊಸೈಟಿಯಲ್ಲಿ ಮೆಂಬರ್ ಇದಾರೆ, ಅಲ್ಲೇ ಕಾರ್ಡ್‌ನ್ನು

ಇಶ್ಯೂ ಮಾಡುವಂಥ ವ್ಯವಸ್ಥೆಯಾಗಲಿ, ಕ್ರೆಡಿಟ್ ಕಾರ್ಡ್ ಅನ್ನು ತೋರಿಸಿದ ಕೂಡಲೇ ಆಸ್ಪತ್ರೆಗಳಲ್ಲಿ ಸರ್ಜರಿ ಮಾಡುವಂತೆ ವ್ಯವಸ್ಥೆಯಾಗಲಿ ಕ್ರಿಡಿಟ್‌ಕಾರ್ಡ್ ಇದ್ದಹಾಗೆ. ಇದ್ದಹಾಗೆ. ಆಸ್ಪತ್ರೆಯವರು ಬೇಕಾದರೆ ನಂತರ ಸರ್ಕಾರದಿಂದ ಹಣವನ್ನು ಪಡೆಯಲಿ. ಆದರೆ ಇಮ್ಮಿಡಿಯೇಟ್ಲಿ ಅವರಿಗೆ ಚಿಕಿತ್ಸೆಯಾಗುವ ಹಾಗೆ ವ್ಯವಸ್ಥೆಯನ್ನು ತಾವು ಮಾಡಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ತಾವು ಸರ್ಕಾರದಿಂದ ಯಶಸ್ವಿನಿ ಎನ್ನುವ ಯೋಜನೆಯನ್ನು ಮಾಡಿದ್ದೇವೆ, ನಾವು ಇಲ್ಲಿ ಕುಳಿತುಕೊಂಡು ಅದನ್ನು ಹೊಗಳುವಂಥದ್ದು ಏನು ಪ್ರಯೋಜನವಾಗುವುದಿಲ್ಲ. ದಯವಿಟ್ಟು ಇದನ್ನು ಬದಲಾವಣೆ ಮಾಡಿ. ತೋಟಗಾರಿಕೆ ಬಗ್ಗೆ ಒಂದು ಕೇವಲ ಮಿಷನ್ ಬಗ್ಗೆ ಹೇಳಿದ್ದೀರಿ. ಇದು 85 ಕೋಟಿ ರೂಪಾಯಿ ಕೊಟ್ಟಿದ್ದು ಕೇಂದ್ರ ಸರ್ಕಾರದವರೇ. ಇದರಲ್ಲಿ ರಾಜ್ಯ ಸರ್ಕಾರದವರದೂ ಏನೂ ಇಲ್ಲ. ಆದರೆ ಯಾವ ಯಾವ ಜಿಲ್ಲೆಗಳನ್ನು ಗುರುತುಪಡಿಸಿದ್ದೀರಿ, ಅಲ್ಲಿ ಕಾರ್ಯಕ್ರಮ ಇನ್ನೂ ಜಾರಿಗೆ ಬಂದೇ ಇಲ್ಲ. ಆ ರೀತಿ ಗುರಿತಿಸಿದ್ದರಲ್ಲಿ ಉಡುಪಿ ಕೂಡ ಒಂದು ಇಷ್ಟರವರೆಗೆ ಏನೂ ಕಾರ್ಯಕ್ರಮವೇ ಆಗಿಲ್ಲ. ಇನ್ನೂ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಏಕೆಂದರೆ ಕರ್ನಾಟಕ ಕೇಡರ್‌ನವರೇ ಅಲ್ಲಿದ್ದಾರೆ. ಹೆಚ್ಚು ಹಣವನ್ನು ತರುವಂಥ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತಾ, ಡ್ರಿಪ್ ಇರಿಗೇಷನ್ ಬಗ್ಗೆ ನಿನ್ನೆ ಚರ್ಚೆಯಾಯಿತು. ಡ್ರಿಪ್ ಇರಿಗೇಷನ್‌ಗೆ ಇನ್ನೂ ಜಾಸ್ತಿ ಕೊಡಬೇಕಾಗುತ್ತದೆ ಏಕೆಂದರೆ ರೈತರಿಗೆ ಈಗ ನೀರಿನ ಕೊರತೆ ಇದೆ. ಅದಕ್ಕೆ ಹೆಚ್ಚು ಸಬ್ಸಿಡಿಗಿಂತ ನಿನ್ನೆ ನಮ್ಮ ಸದಸ್ಯರೊಬ್ಬರು ಸಲಹೆಯನ್ನು ಕೊಟ್ಟರು. ಪವರ್ ಟಿಲ್ಲರ್, ಟ್ರಾಕ್ಟರ್ಸ್ ಅಂಡ್ ಡ್ರಿಪ್ ಇರಿಗೇಷನ್ ಎಲ್ಲಾ ಸಬ್ಸಿಡಿಯ ಬದಲಿಗೆ ಟ್ಯಾಕ್ಸ್ ಎಕ್ಸಂಪ್ಷನ್‌ನ್ನು ಕೊಟ್ಟು ಎಲ್ಲಾ ರೈತ ಕುಟುಂಬಕ್ಕೆ ಸಿಕ್ಕುವ ಹಾಗೆ ಮಾಡಬೇಕು. ಏಕೆಂದರೆ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಟ್ಟು ಬಡ ರೈತರೇನೂ ತೆಗೆದುಕೊಳ್ಳುವುದಿಲ್ಲ. ಶ್ರೀಮಂತ ರೈತ ಮಾತ್ರ ಅದನ್ನು ತೆಗೆದುಕೊಳ್ಳುವಂಥದ್ದು. ಅದಕ್ಕೋಸ್ಕರ ದಯವಿಟ್ಟು ಅದನ್ನು ಎಲ್ಲಾ ರೈತ ಕುಟುಂಬಕ್ಕೆ ಸಿಕ್ಕುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ತಾವು ಗ್ರಾಮಪಂಚಾಯಿತಿಗಳಿಗೆ ಸಂಪೂರ್ಣ ಎಲೆಕ್ಟ್ರಿಸಿಟಿ ಬಿಲ್ಲನ್ನು ಕಟ್ಟಿದರೆ ನೀವು ಇನ್‌ಸೆಂಟೀವ್‌ನ್ನು ಕೊಟ್ಟಿದ್ದೀರಿ. ಅವರಿಗೆ ಕಟ್ಟುವ ಶಕ್ತಿಯೇ ಇಲ್ಲ. ನೀವು ಇನ್‌ಸೆಂಟೀವ್ ಕೊಟ್ಟರೆ ಅವರಿಗೆ ತೆಗೆದುಕೊಳ್ಳುವುದಕ್ಕೆ ಏನಾಗುತ್ತದೆ? ಅವರಿಗೆ ರಿಯಾಯಿತಿಯನ್ನು ಕೊಟ್ಟು ಇಂತಿಷ್ಟೇ ಕಟ್ಟಿ 50 ಪರ್‌ಸೆಂಟ್ ಕಟ್ಟಿ ಎಂದು ಮಾಡಿ. ಅಥವಾ ಒನ್ ಟೈಮ್ ಹಂಡ್ರೆಡ್ ಪರ್‌ಸೆಂಟ್ ಅವರಿಗೆ ವೇವ್ ಮಾಡಿ. ನಂತರ ಮುಂದೆ ರೆಗ್ಯುಲರ್ ಕಟ್ಟುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಕೇವಲ ಇವತ್ತು ಅವರಿಗೆ ಇನ್‌ಸೆಂಟೀವ್ಸ್‌ನ್ನು ಕೊಟ್ಟರೆ ಯಾವ ಪಂಚಾಯಿತಿಗಳಿಗೂ ದನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತಾ ಸಣ್ಣ ನೀರಾವರಿ ಬಗ್ಗೆ ಮಾತನಾಡುವಾಗ ಹೇಳಿದ ಸಾಲ್ಟ್ ವಾಟರ್ ಎಕ್ಸ್‌ಕೂಸೀವ್ ಡ್ಯಾಮ್ಸ್ ಎಂದು. ಸಾಲ್ಟ್ ವಾಟರ್ ಎಕ್ಸ್‌ಕ್ಲುಸಿವ್ ಡ್ಯಾಮ್ಸ್ ಗಿಂತ ಒಳ್ಳೆಯ ಕಾರ್ಯಕ್ರಮ ಬೇರೆ ಯಾವುದು ಇಲ್ಲ. ಕೊನೆಯದಾಗಿ ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ. ಮಾಸಿಕ ಭತ್ಯೆಯಲ್ಲಿ 100 ರೂ. ಧನವನ್ನು ಜಾಸ್ತಿ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಮತ್ತೆ ಸಹಾಯಕರಿಗೆ ಗೌರವಧನ 50 ರೂಪಾಯಿಯನ್ನು ಕೊಡುತ್ತೇವೆ ಎಂದಿದ್ದೀರಿ ಏಕೆಂದರೆ ಇದು ರಿಪಿಟಿಷನ್ ಆಗುತ್ತಿದೆಯೋ ಏನೂ ಗೊತ್ತಿಲ್ಲ, ಏಕೆಂದರೆ ಮೊನ್ನೆ ಮಾನ್ಯ ಚಿದಂಬರಂ ಅವರು ಬಜೆಟ್‌ನ್ನು ಮಂಡಿಸಿದಾಗ ಏನೇನು ಕಾರ್ಯಕ್ರಮಗಳನ್ನು ಹೇಳಿದ್ದಾರೆ. ಕೆಲವುಗಳೆಲ್ಲಾ ಇಲ್ಲಿಯೂ ಸೇರಿದೆ. ಅದೇ ಇಲ್ಲಿ ರಿಪೀಟ್ ಆಗಿದೆಯೇ ಅಥವಾ ಇದು ಹೊಸ ಕಾರ್ಯಕ್ರಮವಾ? ರೀಮಿಕ್ಸ್ ಆಗುತ್ತಿದೆಯಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಏನಾಗಿದೆ ಅಂದರೆ old wine new bottle; ಎಂದ ಹಾಗೆ ಲೇಬಲ್ ಬೇರೆ. ಒಳಗೇ ಇರುವುದೆಲ್ಲಾ ಆದೇ. ತೋಟಗಾರಿಕೆ ಬಗ್ಗೆ ಹೇಳಲಿಲ್ಲ. ಓಲ್ಡ್ ಏಜ್ ಪೆನ್ಷನ್, ಹೌಸಿಂಗ್ ಅನೇಕ ಸ್ಕೀಮುಗಳು ಇವೆಲ್ಲಾ ಹೀಗೆ.

ಶ್ರೀ ಕೆ. ಜಯಪ್ರಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ ಇನ್ನೊಂದು ಗೋವು. ದೇಸೀಯ ತಳಿಗಳೂ ಅವುಗಳ ಸಂರಕ್ಷಣೆ. ನಾವು ಹೆಚ್ಚು ಇಳುವರಿ ಕೊಡತಕ್ಕ ದನವನ್ನು ಸಾಕಬೇಕೆನ್ನುವ ತೀರ್ಮಾನವನ್ನು ಮಾಡುತ್ತಿದ್ದೇವೆ. ನೀವು ಹಳೆಯ ದೇಸಿಯ ತಳಿಗಳು ಆಗುವುದಿಲ್ಲ ಸಾಕಲಿಕ್ಕೆ ಕಷ್ಟ ಇದೆ ಹಿಂದೆ ಏನಾಗುತ್ತಿತ್ತು ಎಂದರೆ ನಮ್ಮಲ್ಲಿ ಗೋಮಾಳ ಇತ್ತು. ಹುಲ್ಲು ಬೇಕಾದಷ್ಟು ಮೇಯಲಿಕ್ಕೆ ಇತ್ತು. ಹಳ್ಳಿಗಳಲ್ಲಿ ದನಗಳನ್ನು ಬಿಟ್ಟು ಮೇಯಿಸುತ್ತಿದ್ದರು. ಅದು ಮೇಯ್ದುಕೊಂಡು ಹಟ್ಟಿಗೆ ಬರುತ್ತಿತ್ತು. ಈಗ ಈ ಒಂದು ಕ್ಯಾಟಲ್ ಫೀಡ್ ರೇಟ್‌ನಲ್ಲಿ ಅದನ್ನು ಸಾಕಲಿಕ್ಕೆ ಬಹಳ ಕಷ್ಟವಾಗುತ್ತದೆ. ನೀವು ಕಡಿಮೆ ರೇಟ್‌ನ ಆ ಹೈಬ್ರಿಡ್‌ನ್ನು ಕೊಡಿ. ದೇಸಿಯ ತಳಿಗಳನ್ನು ಪನಃ ಅಭಿವೃದ್ಧಿ ಮಾಡುವುದಕ್ಕೆ ಹೋದಾಗ ಅದು ಆಗುದಿಲ್ಲ. ದಯವಿಟ್ಟು ಈ ಒಂದು ಕೆಲವು ತೀರ್ಮಾನಗಳೇನು ಪಾಪ್ಯುಲಿಸ್ಟ್ ಸ್ಕೀಮುಗಳು ಇವೆ, ಅದನ್ನು ಬಿಟ್ಟು ಏನು ಐದು ಕೋಟಿ,,ಎರಡು ಕೋಟಿ, ಹತ್ತು ಕೋಟಿರೂಯನ್ನು ಕೊಟ್ಟಿದ್ದೀರಿ. ಆ ಕಾರ್ಯ ಕ್ರಮಗಳನ್ನು ಕೈಬಿಡಿ. ದೊಡ್ಡ ದೊಡ್ಡ ಕೆಲವೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ : ಹೈಬ್ರಿಡ್ ತಳಿ ಬಗ್ಗೆ ಹೇಳಿದಿರಿ. ಹೈಬ್ರಿಡ್ ತಳಿಯನ್ನು ಸಾಕಿದಂಥವರಿಗೆ ಅದು ಗೊತ್ತಿದೆ. ಪರಿಸ್ಥಿತಿ ಏನು ಎಂದು ಹೇಳಿ. ನಾವೆಲ್ಲಾ ಸಾಕಿದ್ದೇವೆ. ಅದರ ಖಾಯಿಲೆಗೆ ಅದರ ಖರ್ಚು ಅದರ ವೆಚ್ಚಕ್ಕೆ ಸರಿಯಾಗುತ್ತದೆ. ಆದರೆ ಸ್ಥಳೀಯ ತಳಿಗಳು ಇದ್ದಾವಲ್ಲಾ ಉದಾಃಗೆ ನಿಮ್ಮ ದಕ್ಷಿಣ ಕನ್ನಡದಲ್ಲಿ ಇದ್ದಾವೆ, ನಮ್ಮಲ್ಲಿ ಮಲೆನಾಡು ಗಿಡ್ಡಗಳು ಇದ್ದಾವೆ, ನಮ್ಮಲ್ಲಿ ಇವುಗಳನ್ನು ಅಭಿವೃದ್ಧಿ ಮಾಡಿದರೆ ಹೆಚ್ಚು ಕಡಿಮೆ ಅದರ ಅರ್ಧದಷ್ಟು ಹಾಲನ್ನು ಕೊಡುತ್ತದೆ. ಮತ್ತು ಎಲ್ಲಾ ಚಳಿ, ಮಳೆ ಗಾಳಿಯನ್ನು ಮೀರಿ ಅದು ಬೆಳೆಯುತ್ತದೆ. ಅದು ನಿರೋಗಿ. ಅದನ್ನು ಆ ರೀತಿಯಲ್ಲಿ ಸರ್ಕಾರದ ಕಾರ್ಯಕ್ರಮವೆಂದು ನಾನು ಭಾವಿಸಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಯೀಲ್ಡ್ ಎಷ್ಟಿದೆ?

ಶ್ರೀ ಆರಗ ಜ್ಞಾನೇಂದ್ರ : ಇದು ನೀರು ಮತ್ತು ಅದು ಒಂದೇನೇ ಎಸ್‌ಎನ್‌ಎಫ್ 3.5 ಮೇಲೆ ಬರುವುದಿಲ್ಲ. 2.5. ಎಲ್ಲೋ ರುತ್ತದೆ. ದೇಸಿಯದು ಜಾಸ್ತಿ ಬರುತ್ತದೆ. ಐದು–ಐದೂವರೆ ಬರುತ್ತದೆ. ನಾನು ನೋಡಿದ್ದೇನೆ ಸಾರ್. ನಾನು ಡೈರಿ ಪ್ರೆಸಿಡೆಂಟ್ ಕೂಡ ಆಗಿದ್ದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ದೇಸಿಯ ತಳಿ ಅಂತಹ ಮಹಾ ದೊಡ್ಡ ಡಿಫರೆನ್ಸ್ ಏನೂ ಮಾಡುವುದಿಲ್ಲ. ಮತ್ತು ಅದು ಅನ್ ಎಕಾನಾಮಿಕಲ್. ಅದನ್ನು ಯಾರು ಸಾಕುವುದಕ್ಕಾಗುತ್ತದೆ?

ಶ್ರೀ ಡಿ.ಹೆಚ್. ಶಂಕರಮೂರ್ತಿ : ದೇಸಿಯ ತಳಿ ಅಭಿವೃದ್ಧಿ ಎಂದರೆ ಈ ಹೈಬ್ರಿಡ್‌ನ್ನು ಪಕ್ಕಕ್ಕೆ ಇಟ್ಟು ದೇಸಿಯ ತಳಿ ಎನ್‌ಕರೇಜ್ ಮಾಡಬೇಕೆಂದು ಇಲ್ಲ. ಅದನ್ನೂ ಮಾಡಬೇಕು. ಇದನ್ನು ಮಾಡಬೇಕು. ದೇಸೀ ತಳಿಯದು ಒಂದು ವಿಷಯವನ್ನು ತಮಗೆ ಹೇಳುತ್ತೇನೆ. ಬಹುಶಃ ಮಾನ್ಯ

ರಮೇಶ್‌ಕುಮಾರ್‌ರವರಿಗೆ ಗೊತ್ತಿರಬಹುದು. ತಾವು ನಾರದ ಸಂಹಿತೆ ಓದಿದ್ದೀರಿ ಎಂದುಕೊಂಡಿದ್ದೇನೆ. ನಾರದ ಸಂಹಿತೆಯಲ್ಲಿ ಏನು ಹೇಳುತ್ತಾರೆ, ನಮ್ಮ ಹಸು, ಅದು ಕಪ್ಪಾಗಿರುವಂಥದ್ದು, ಕೋಡು ಇರತಕ್ಕ ಹಸುವಿನ ಗೋಮೂತ್ರದಿಂದ ಇಂಥ ಇಂಥ ಖಾಯಿಲೆಗಳು ವಾಸಿಯಾಗುತ್ತದೆಂದು ಹೇಳುತ್ತಾರೆ. ಇದು ನಮ್ಮಲ್ಲಿ ಇದ್ದಂಥ ಬಹಳ ದೊಡ್ಡ ಸಂಗತಿ. ನನ್ನ ಸ್ನೇಹಿತ ಒಬ್ಬ ಇತ್ತೀಚೆಗೆ ನಡೆದಂಥ ಒಂದು ಘಟನೆ. ಅವನು ಗೋಮೂತ್ರ ಚಿಕಿತ್ಸೆಯಿಂದ ಹೋದಂಥ ಕಣ್ಣು ವಾಪಸ್ ಬಂದಿದೆ. ನಾನು ಮಿಂಟೋ ಹಾಸ್ಪಿಟಲ್‌ನಲ್ಲಿ ದಾಖಲೆ ಮಾಡಿಸಿದ್ದೇನೆ. ಹೈಬ್ರಿಡ್‌ಗೆ ಖಂಡಿತ ಬರುವುದಿಲ್ಲ. ಇದು ದೇಸೀಯ ತಳಿಯ ಹಿನ್ನೆಲೆಯಲ್ಲಿ ಅಂದರೆ ಬರೇ ಹಾಲು ಒಂದೇ ಅಲ್ಲ. ಬೇರೆ ಗೋಮೂತ್ರ ಸಂಗ್ರಹಣೆ ಮಾಡಿ ಇವತ್ತು ರಾಮಚಂದ್ರಾಪುರ ಮಠದ ಸ್ವಾಮಿಗಳು ಬಹಳ ದೊಡ್ಡ ಕ್ರಾಂತಿಯನ್ನು ಮಾಡುತ್ತಿದ್ದಾರೆ. ಈ ರೀತಿಯ ಸಂಗತಿಗಳ ಹಿನ್ನೆಲೆಯಲ್ಲಿ ಹೈಬ್ರಿಡ್ ಹಸುವನ್ನು ಎಲ್ಲಾ ಮನೆಗಳಿಂದ ಹೊರಗೆ ಹಾಕಿ ದೇಸೀತಳಿ ಮಾಡಬೇಕು. ಎಂದಲ್ಲ ದೇಶಿತಳಿಯನ್ನು ಅಭಿವೃದ್ಧಿ ಮಾಡಬೇಕು ಹೈಬ್ರಿಡ್ ಅನ್ನೂ ಅಭಿವೃದ್ಧಿ ಮಡಬೇಕು. ತಾವು ಹೇಳಿದ ಹಾಗೆ ಎಮ್ಮೆ ಹಾಲು, ಅದೂ ತುಂಬಾ ಫ್ಯಾಟ್ ಕಂಟೆಂಟ್ ಇರತಕ್ಕದ್ದು. ಅದನ್ನೂ ಅಭಿವೃದ್ಧಿ ಮಾಡಬೇಕು. ಹಾಗಾಗಿ ಒಂದು ಮಾಡುವುದಕ್ಕೆ ಹೋಗಿ ಇನ್ನೊಂದನ್ನು ಮೂಲೆ ತಳ್ಳುವುದು ಅಲ್ಲ. ದೇಸಿಯ ತಳಿ ರಕ್ಷಣೆಗಾಗಿ, ಸಂರಕ್ಷಣೆಗಾಗಿ ಅಭಿವೃದ್ಧಿಗಾಗಿ ತೀರ ಅವಶ್ಯಕತೆ ಇದೆ. ಅದು ಎಲ್ಲಾ ರಂಗದಲ್ಲಿ. ಬರೇ ಹಾಲು ಮಾತ್ರವಲ್ಲ ಅದು ಮೆಡಿಸಿನಲ್ ಪಾಯಿಂಟ್ ಆಫ್ ವ್ಯೂನಲ್ಲಿಯೂ ಆದರಿಂದ ಲಾಭ ಇದೆ. ಹಾಗಾಗಿ ಅದರ ಬಗ್ಗೆ ಸರ್ಕಾರದ ಒಂದು ಬೆಂಬಲ ಘೋಷಣೆ ಮಾಡಿದರೆ, ಅದನ್ನು ತಾವು ಸ್ವಾಗತ ಮಾಡುತ್ತೀರಿ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದು...... ತಾವು ಹೇಳುತ್ತೀರಾ ಹೇಳಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ಅನಿಮಲ್ ಹಸ್ಬೆಂಡರಿ ಮಿನಿಸ್ಟರ್ ಆಗಿದ್ದಿರಿ. ಸ್ವಲ್ಪ ದಿವಸ ನಾನೂ ಎರಡು ವರ್ಷ ಮಂತ್ರಿ ಆಗಿದ್ದೆ. ದೇಸೀಯ ತಳಿಯ ಅಭಿವೃದ್ಧಿ ಮಾಡತಕ್ಕದ್ದು ಇವರೇನು ಹೊಸದಾಗಿ ಹೇಳಿದ್ದಾರಲ್ಲಾ, ಹೊಸ ಕಾರ್ಯಕ್ರಮವ ಏನಲ್ಲ ಈಗಾಗಲೇ ಆ ಕಾರ್ಯಕ್ರಮ ಇದೆ. ಈಗ ಹೊಸದಾಗಿ ಎಲ್ಲಿ ದುಡ್ಡು ಕೊಟ್ಟಿದ್ದೀರಿ. ಕೊಡಲೇಬೇಕು. ನೀವು ಅಲ್ಲಿಗೆ. ಈಗಾಗಲೇ ಹಳ್ಳಿಕಾರ್ ತಳಿ ಅಮೃತ್ ಮಹಲ್ ತಳಿ, ಕಿಲ್ಲೇ ತಳಿ ದೇವಳಿ ತಳಿ, ಕೃಷ್ಣಾ ತಳಿ ಇವೆಲ್ಲಾ ಸ್ಥಳೀಯವೆ, ಕರ್ನಾಟಕದಲ್ಲಿ ಇರುವಂತಹವು. ಇವುಗಳ ಅಭಿವೃದ್ಧಿಗೆ ಫಾರಂಗಳೆಲ್ಲಾ ಇದ್ದಾವೆ. ಅಮೃತ ಮಹಲ್ ಕಾವಲ್, ಹಳ್ಳಿಕರ್ ಕಾವಲ್, ಅಲ್ಲಿ ದೇವಳಿ ಬೀದರ್ ಗುಲ್ಬರ್ಗಾ ಭಾಗದಲ್ಲಿ, ಬಿಜಾಪುರ ಬಾಗಲಕೋಟೆಯಲ್ಲಿ ಕೃಷ್ಣಾ ತಳಿ ಅಭಿವೃದ್ಧಿ ಮಾಡಲಿಕ್ಕೆ ಇದೆ. ಈಗ ಹೊಸದಾಗಿ ಏನು ಮಾಡುತ್ತೀದ್ದೀರಿ, ದೇಸಿಯ ತಳಿ ಎಂದು ಏನಾಗಿ ಬಿಟ್ಟಿದೆ ಎಂದರೆ ಬಿಜೆಪಿಯವರ ಸ್ಲೋಗನ್ ಇದೆಯಲ್ಲಾ ಆದಕ್ಕೋಸ್ಕರ ಈ ದೇಸೀಯ ತಳಿ ಎಂದು ಬಿಟ್ಟರೆ ಏನೋ ಒಂದು ಕ್ಯಾಚ್ ಆಗುತ್ತದೆ ಎಂದು ಹೇಳಿ ಬಿಟ್ಟಿದಾರೆಯೇ ಹೊರತು, there is nothing new in this This programme is already there in Animal Husbandry Department. ಆದರಿಂದ ಇಲ್ಲಿ ಬರೆದು ಹೇಳಬೇಕಾದಂತಹ ಅಗತ್ಯ ಇಲ್ಲ.

ಶ್ರೀ ಸಿ.ಟಿ. ರವಿ : ನೀವು ಇಂಪ್ಲಿಮೆಂಟ್ ಮಾಡಿದ್ದನ್ನೇ ನಾವು ಅಚರಣೆಗೆ ತರುತ್ತೇವೆ ಎಂದರೆ ಈಗ ವಿರೋಧ ಏಕೆ? ನೀವು ಹೇಳಿದ್ದನ್ನೇ ಈ ಕಡೆಯವರು ಏಕೆ ಸರಿಯಿಲ್ಲ, ಸರಿಯಿಲ್ಲ ಎಂದು ಹೇಳುತ್ತಾರೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಸದಸ್ಯರೆ –What I am telling is that this is not a new programme.. This programme is already there.ಆದರಿಂದ. this need not be mentioned in the Budget speech.

ಶ್ರೀ ಆರಗ ಜ್ಞಾನೇಂದ್ರ : ಅದನ್ನೇ ಮುಂದುವರಿಸೋಣ ಎಂದು.

(ಗೊಂದಲ)

ಶ್ರೀ ಸಿ.ಟಿ. ರವಿ: ಒಳ್ಳೆಯ ಕಾರ್ಯಕ್ರಮವಾದರೆ ಈ ಕಡೆಯವರು ಏಕೆ ವಿರೋಧ ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ಖರ್ಗೆಯವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಬೇರೆ ಏನೂ ಹೇಳುವುದಿಲ್ಲ. ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಹೇಳಿದರು. ಇದು ಕಿಲೇ ತಳಿ, ದೇವಳಿ ತಳಿ ಹಳ್ಳಿಕಾರ್ ತಳಿ, ಅಮೃತ್ ಮಹಲ್ ತಳಿ ಇವೆಲ್ಲಾ ಇರುವುದು ಬಯಲು ಸೀಮೆಯಲ್ಲೇ. ಇಂತಹ ತಳಿ ಮಲೆನಾಡಿನಲ್ಲಿ ಇಲ್ಲ. ಮಲೆನಾಡಿನಲ್ಲಿ ಇರತಕ್ಕಂಥ ಎತ್ತುಗಳನ್ನೇ ತೆಗೆದುಕೊಳ್ಳಿ, ಆಕಳುಗಳನ್ನೇ ತೆಗೆದುಕೊಳ್ಳಿ. ಅವು ಹಾಲೂ ಕಡಿಮೆ ಕೊಡುತ್ತವೆ. ಅವು ಬಡಕಲು, ಒಂದೂ ಸರಿಯಾಗಿ ಹಾಲು ಕೊಡುವುದಿಲ್ಲ. ಆದರೆ ಒಂದೇ ಒಂದು ಒಳ್ಳೆಯ ತಳಿ ಏನು ಎಂದರೆ ಅಲ್ಲಿರತಕ್ಕಂಥ ಎಲ್ಲಾ ವ್ಯಕ್ತಿಗಳೂ ಒಳ್ಳೆಯ ಮಾತನಾಡುವ ತಳಿಗಳು.

ಶ್ರೀ ಜಯಪ್ರಕಾಶ್ ಹೆಗ್ಡೆ : ಸರ್ಕಾರ ಮಾತ್ರ ಈ ತಳಿಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಖಾಸಗಿಯವರಿಗೆ ನೀವು ರೈತರ ಹತ್ತಿರ ಹೇಳಿದರೆ ಹೈನುಗಾರರ ಹತ್ತಿರ ನೀವು ಸಾಕಿ ಎಂದರೆ ಹೇಳಿದರೆ ಅವರೇನು ಸಾಕಲಿಕ್ಕೆ ಖರ್ಚು ಮಾಡುತ್ತಾರೆ ಅದು ಪ್ರಯೋಜನ ಆಗುವುದಿಲ್ಲ.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಹೆಗ್ಡೆಯವರೇ, ಮಾನ್ಯ ಖರ್ಗೆಯವರು ಹೇಳಿದ ಹಾಗೆ ಫಸ್ಟ್ ದೇಸೀಯ ತಳಿಗಳು ಎಂದರೆ ಎತ್ತುಗಳ ಸಲುವಾಗಿ ಬಹಳ ಪ್ರಾಮುಖ್ಯತೆ ಕೊಡುವ ಸಲುವಾಗಿ ದೇಸೀಯ ತಳಿ ಎಂದು ಹೇಳುತ್ತಾರೆ. ನಮ್ಮ ಕಡೆ ಇರುವುದೇ ಅವೇ. ಮಾನ್ಯ ಖರ್ಗೆಯವರು ಏನು ಹೇಳಿದರು ಬಯಲು ಸೀಮೇಯದೇ.

ಶ್ರೀ ಜಯಪ್ರಕಾಶ್ ಹೆಗ್ಡೆ : ಭಾಗ್ಯಲಕ್ಷ್ಮಿ ದೇಸೀತಳಿ ಎಲ್ಲಾ ಹಳೆಯ ಕಾರ್ಯಕ್ರಮಕ್ಕೆ ಹೊಸ ಹೆಸರು ಇಟ್ಟಿದ್ದು.

ಶ್ರೀ ವಾಟಾಳ್ ನಾಗರಾಜ್ : ನಾವು ಹೊಸ ಹೆಸರು ಇಡೋಣ. ಬಿಜೆಪಿ ತಳಿ, ಜನತಾ ದಳ (ಎಸ್) ತಳಿ, ಕಾಂಗ್ರೆಸ್ ತಳಿ ಎಂದು ಹೊಸದಾಗಿ ಹೆಸರು ಇಡೋಣ. ಆವಾಗ ಒಂದು ಹೊಸ ತಳಿಗಳು ಬರುತ್ತವೆ. ಹೊಸ ಹೊಸ ಹೆಸರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಾಟಾಳ್ ನಾಗರಾಜ್ ಎಂದರೆ ನೂರು ಎಮ್ಮೆಯಲ್ಲಿ ಒಂದು ಕೋಣ ಇದ್ದ ಹಾಗೆ.

(ನಗು)

ಶ್ರೀ ಆರ್. ಅಶೋಕ್ : ಮಾನ್ಯ ಜಯಪ್ರಕಾಶ್ ಅವರೇ, ನಮ್ಮ ಕ್ಷೇತ್ರದಲ್ಲಿ ಒಂದು ಗೋಶಾಲೆ ಮಾಡಿದ್ದಾರೆ. ಗೋಶಾಲೆ ಎಂದು ಹೇಳಿದರೆ ಸುತ್ತಮುತ್ತಲ 10–20 ಹಳ್ಳಿಗಳ ರೈತರಿಗೆ ಅವರೇ ಹಸು ಕೊಡುತ್ತಾರೆ. ತಳಿ ಇದೆಯಲ್ಲಾ ಅವರೇ ಕೊಂಡು ಕೊಡುತ್ತಾರೆ. ಪ್ರತಿ ತಿಂಗಳೂ ಒಂದು ಸಾವಿರ ರೂಪಾಯಿ ಆ ಹಸುವನ್ನು ಸಾಕಲು ಕೊಡುತ್ತಾರೆ. ಯಾರು ರೈತ ಇರುತ್ತಾನೆ. ಆತನೇ ಹಾಲು ಕರೆದುಕೊಳ್ಳಬಹುದು. ಆದರೆ ಗೋಮೂತ್ರ ಮಾತ್ರ ಕೊಡಬೇಕಷ್ಟೆ ಸನುವನ್ನು ಇವರೆ ತೆಗೆದುಕೊತ್ತಾರೆ. ಪ್ರತಿ ತಿಂಗಳು ಒಂದು ಸಾವಿರ ರೂಪಾಯಿ ಮೆಂಟೇನ್ ಮಾಡಲು ಕೊಡುತ್ತಾರೆ. ಅದರಲ್ಲಿ ಬರುವಂತಹ ಹಾಲನ್ನು ರೈತನೇ ತೆಗೆದುಕೊಳ್ಳಬಹುದು. ಆದರೆ ಗೋಮೂತ್ರ ಕೊಡಬೇಕೆಂದು ಇದೆ. ಇದು ಲಾಭದಾಯಕ. ರೈತನಿಗೂ ಇದರಿಂದ ಲಾಭದಾಯಕ ಆಗುತ್ತದೆ.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಖರ್ಗೆಯವರೇ ಹೇಳಿದ್ದು ಯಾರೂ ಕೇಳಲಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಉತ್ತರ ಹೇಳಿದರೆ ಚಲೋ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಕೇಳಿಸಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಾಟಾಳ್ ನಾಗರಾಜ್ ಅವರೇ, ತಾವು ಏನು ಎಂದರೆ ನೂರು ಎಮ್ಮೆಯಲ್ಲಿ ಒಂದು ಕೋಣ ಇದ್ದ ಹಾಗೆ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಇದು ಅತ್ಯಂತ ಅಪಾಯಕಾರಿ ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ ತಾವು ಕೇಳಲಿಲ್ಲ ಎಂದು ಕಾಣುತ್ತದೆ. ಮತ್ತೊಂದು ಸಾರಿ ಅವರ ಬಾಯಿಂದ ಹೇಳಿಸಿ, ತಾವು ಕೇಳಬೇಕು. ನನ್ನ ಬಾಯಲ್ಲಿ ಅದನ್ನು ಹೇಳಬಾರದು. ಖಂಡಿತ ಹೇಳಬಾರದು. ಆದ್ಯಕ್ಷರು ತಾವು ದಯವಿಟ್ಟು ಕೇಳಲೇಬೇಕು. ಈಗ ಭಾಷಣ ಆದೇ ಇದ್ದರೂ ಚಿಂತೆ ಇಲ್ಲ. ತಾವು ಅವರ ಬಾಯಲ್ಲೇ ಕೇಳಬೇಕು. ಒಂದು ಸಾರಿ ಅವರು ಹೇಳಬೇಕು. ಎಲ್ಲಾದರೂ ಉಂಟೇ.

ಅಧ್ಯಕ್ಷರು: ಮಾನ್ಯ ಹೆಗ್ಡೆ ಅವರೇ, ದಯಮಾಡಿ ಮುಗಿಸಿ.

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ : ಎಕ್ಸೈಜ್ ವಿಚಾರ. ಪಾನೀಯ ನಿಗಮವನ್ನು ಮಾಡಿದಂತಹ ಮಾನ್ಯ ಎಸ್.ಎಂ. ಕೃಷ್ಣ ಅವರು ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾಗ ಮಾಡಿದ್ದು That was a good move. ಪಾನೀಯ ನಿಗಮ ಆದಮೇಲೆ ಆ ವರ್ಷದ ಎಕ್ಸೈಜ್ ಬಾಬ್ತು ಆ ವರ್ಷ 1600 ಕೋಟಿ ರೂಪಾಯಿ ಏನೂ ಜಾಸ್ತಿ ಆಯಿತು ಅದು ಬಹಳ ಒಳ್ಳೆಯ ಕಾರ್ಯಕ್ರಮ. ಅದರ ನಂತರ ಮಾನ್ಯ ಸಿದ್ಧರಾಮಯ್ಯನವರು ಎಕ್ಸೈಜ್‌ನಲ್ಲಿ ಸ್ವಲ್ಪ ಹಿಡಿತವನ್ನು ತಂದರು. ಬದಲಾವಣೆಯನ್ನು ತರಲಿಕ್ಕೆ ಪ್ರಯತ್ನವನ್ನು ಮಾಡಿದ್ದರು. ಈಗ ನೀವು ಹೋಲ್‌ಸೇಲ್ ಅನ್ನು ಏನು ತೆಗೆದಿದ್ದೀರಿ. ಒಂದು ರೀತಿಯಲ್ಲಿ ಸರ್ಕಾರದ ಆದಾಯ ಹೆಚ್ಚಾಗಲಿಕ್ಕೆ ಆದಾಯ ಒಳ್ಳೆಯಾದಾಗುತ್ತದೆ. ಆದಾಯ ಜಾಸ್ತಿ ಆಗುತ್ತದೆ. That ia a good decision. ಅಲ್ಲಿ ಇನ್ನೊಂದು ಸಹಾಯವನ್ನು

ಮಾಡಬೇಕಾಗುತ್ತದೆ. ಈ ಹೋಲ್‌ಸೇಲ್ ಡೀಲರ್ಸ್ ಏನು ಇದ್ದಾರೆ ಅವರೊಟ್ಟಿಗೆ ಅನೇಕ ಮಂದಿ ಯುವಕರು ಉದ್ಯೋಗದಲ್ಲಿದ್ದರು. ಅವರು ನಿರುದ್ಯೋಗಿಗಳಾಗಿದ್ದಾರೆ. ಈ ಪಾನೀಯ ನಿಗಮದಲ್ಲಿ ಅವರನ್ನು ತಾವು ತೆಗೆದುಕೊಂಡು ಪುನಃ ಅವರಿಗೆ ರೆಪ್ರೆಸೆಂಟಿಟೀವ್ಸ್ ಆಗಿ ವರ್ಕ್ ಮಾಡಲಿಕ್ಕೆ ಆಗುತ್ತದಾ ಎಂದು ನೋಡಬೇಕಾಗುತ್ತದೆ. ಏಕೆಂದರೆ ಬೇರೆ ಬೇರೆ ಕಡೆಯಲ್ಲಿ ಸುಮಾರು ಲೈಸೆನ್ಸ್‌ನ್ನು ಕೊಟ್ಟಿದ್ದರು. ಅವರೆಲ್ಲಿ ದುಡ್ಡು ಮಾಡಿಕೊಂಡು ಆಗಿದೆ. Taht is a different aspect. ಆದರೆ ಅವರೊಟ್ಟಿಗೆ ಉದ್ಯೋಗಕ್ಕೆ ಇದ್ದಂತಹ ಯುವಕರ ಪರಿಸ್ಥಿತಿ ಬಹಳ ಚಿಂತಾಜನಕ ಆಗಿದೆ. ಅದರ ಬಗ್ಗೆ ಸ್ವಲ್ಪ ಸರ್ಕಾರ ಗಮನ ಹರಿಸಬೇಕು ಎಂದು ಹೇಳುತ್ತೇನೆ. ಇಷ್ಟಾದರೂ ಸಹಿತ ಆ ಸೆಕೆಂಡ್ಸನ್ನು ನಿಲ್ಲಿಸಲಿಕ್ಕೆ ಆಯಿತು ಬಿಟ್ಟರೆ, ಥರ್ಡ್ ಎನ್ನುವುದನ್ನು ಇನ್ನೂ ನಿಲ್ಲಿಸಲಿಕ್ಕೆ ಆಗಿಲ್ಲ. ಥರ್ಡ್ಸ್ ಎಂದರೆ ಡೂಪ್ಲಿಕೇಟ್. ಸೆಕೆಂಡ್ಸ್ ಆದರೂ ಬೆಟರ್. ಡ್ಯೂಟಿ ಕಟ್ಟದೇ ಬಂದಂತಹುದು.

ಶ್ರೀ ಎಸ್.ಎಸ್. ಪಾಟೀಲ್ : ಫಸ್ಟ್ಸ್, ಸೆಕೆಂಡ್ಸ್ ಎಂದು ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಗೊತ್ತಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಕರೆಕ್ಟ್ ಗೊತ್ತಿದೆ. ಅವರ ಏರಿಯಾದಲ್ಲಿಯೇ ಬಂದು ಬಿಟ್ಟಿದೆ, ಕಮರಿ ಪೇಟೆಯಲ್ಲಿ ಬಂದಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಬಹಳ ಗೊತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ : ಸುಮ್ಮನೇ ಕಮರಿ ಪೇಟೆ ಎಂದು ಹೇಳಿದರೆ ಹೇಗೇ? ಈಗ ಕಮರಿ ಪೇಟೆಯಲ್ಲಿ ಏನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಲ್ಲ. ಅವರ ಬ್ರಾಂಡ್ ತಮ್ಮ ಕಡೆಗೆ ಬಂದು ಬಿಟ್ಟಿದೆ.

ಅಧ್ಯಕ್ಷರು: ಮಾನ್ಯ ಹೆಗ್ಡೆಯವರೇ, ನೀವು ಮುಗಿಸುವುದಿಲ್ಲಾವಲ್ಲಾ. ಸುಮ್ಮನೆ ಎಲ್ಲರಿಗೂ ಹೇಳುತ್ತೀರಿ. ಎಲ್ಲಾ ಮಾತನಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರ್ ಅವರೇ ಕಮರಿಪೇಟೆಯಲ್ಲಿ ಏಕೆ ಏನೂ ಉಳಿದಿಲ್ಲವೆಂದರೆ ಅಲ್ಲಿ ಇಬ್ಬರು ಮೂವರನ್ನು ಬೂಟ್ ಲೆಗರ್ಸ್ ಆಕ್ಟ್‌ನಲ್ಲಿ ಜೈಲಿಗೆ ಕಳಿಸಿದ ಮೇಲೆ ಕಡಿಮೆ ಆಗಿರಬೇಕಲ್ಲಾ. ಮೊದಲೇ ಕಡಿಮೆ ಆಗಿರಲಿಲ್ಲ. ಬೂಟ್ ಲೆಗರ್ಸ್ ಆಕ್ಟ್‌ನಲ್ಲಿ ಕಳೆದ ವರ್ಷ ಇಬ್ಬರನ್ನು ಜೈಲಿಗೆ ಕಳುಹಿಸಿದ ಮೇಲೆ ಅದೂ ಗುಲ್ಬರ್ಗಾ ಜೈಲಿಗೆ ಕಳುಹಿಸಿದ ಮೇಲೆ ಈ ಕಮರಿಪೇಟೆಯೊಳಗೆ ಎಕ್ಸೈಜ್ ಡಿಪಾರ್ಟ್‌ಮೆಂಟ್ ನವರು, ಪೊಲೀಸ್‌ನವರು ಒಳಗೆ ಹೋಗುತ್ತಿದ್ದಾರೆ. ಪಾಪ, ಇವರು ಹೇಳಿದರೂ ಪೊಲೀಸ್‌ನವರು ಒಳಗೆ ಅಷ್ಟು ಸಲೀಸಲಾಗಿ ಹೋಗುವುದಕ್ಕೆ ಆಗುತ್ತಿರಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬೂಟ್ ಲೆಗರ್ಸ್ ಆಕ್ಟ್‌ನಲ್ಲಿ ಎಲ್ಲಿ ಕಮರಿಪೇಟೆಯಲ್ಲಿ ಒಳಗೆ ಹಾಕಿದಿರಿ. ಎಲ್ಲಾ ಭಾಗದಲ್ಲೂ ಹಾಕಿ. ನಮ್ಮ ಭಾಗದಲ್ಲೂ ಈಗ ಶುರುವಾಗಿದೆ. ಒಂದು ಸಣ್ಣ ಮಿಷನ್ ಇಟ್ಟುಕೊಂಡು ಅಲ್ಲಿ ಮನೆ, ಮನೆಗಳಲ್ಲಿ ಮಾಡುತ್ತಿದ್ದಾರೆ. ಅದು ಕಾಟೇಜ್ ಇಂಡಸ್ಟ್ರೀ ತರಹ ಆಗಿದೆ. ದಯವಿಟ್ಟು ಬೂಟ್ ಲೆಗರ್ಸ್ ಆಕ್ಟ್ ಏನು ಮಾಡಿದ್ದೀರಿ ಅದರಲ್ಲಿ ಇವರನ್ನೆಲ್ಲಾ ಒಳಗೆ ಹಾಕಿ. ಆದರೆ ಇದು ನಿಮ್ಮ ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ಪೊಲೀಸ್ ಡಿಪಾಟ್‌ಮೆಂಟಿಗೆ ಗೊತ್ತಿಲ್ಲದೇ

ಆಗುತ್ತಿಲ್ಲ. ಯಾವ ರೀತಿ ನಿಮ್ಮ ಮುಟ್ಕಾ ಓಸಿ ಬಿಸಿನೆಸ್ ಪೋಲೀಸ್‌ನವರಿಗೆ ಗೊತ್ತಿದೆ ಆಗುತ್ತಿದೆ ಅದೇರಿಯಲ್ಲಿ ಇವೂ ಸಹ . ಇದು ಎಕ್ಸೈಜ್‌ನವರಿಗೂ ಗೊತ್ತಿದೆ. ಮೇಲ್ಮನೆಯಲ್ಲಿ ನಿನ್ನೆ ಹೇಳಿದ್ದೀರಿ. ಇನ್ನೊಂದು ಖೋಟಾ ನೋಟು ಬಗ್ಗೆ ಹೇಳಿದ್ದೀತಿ. ಯಾವ್ಯಾವವುದು ಎಷ್ಟು ಕೇಸ್‌ಗಳು ಇದೆ.. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಯಾವ್ಯಾವುದು ಎಷ್ಟು ಕೇಸ್‌ಗಳು ಇದೆ. ರಾಜ್ಯದಲ್ಲಿ ಹಿಡಿದಂತಹದ್ದು ಇದೆ. ಅದರ ಒಂದು ಪಟ್ಟಿಯನ್ನೇಲ್ಲಾ ನಮ್ಮ ಸದನಕ್ಕೆ ಕೊಡಲಿ. ಈ ಖೋಟಾ ನೋಡು, ಓಸಿ, ಎಕ್ಸ್‌ಜ್ ಕೇಸ್‌ನ ಬಗ್ಗೆ ಕೊಡಲಿ. ಯಾರ್ಯಾರು ಇದ್ದಾರೆ ಎಂಬುದು ಗೊತ್ತಾಗುತ್ತದೆ. ಇದು ಸಣ್ಣ ಸಣ್ಣವರಿಂದ ಆಗಲಿಲ್ಲ. ದೊಡ್ಡ ದೊಡ್ಡ ವ್ಯಕ್ತಿಗಳು ಹಿಂದೆ ಇದ್ದುದರಿಂದಲೇ ಈ ವ್ಯವಹಾರವೆಲ್ಲಾ ನಡೆಯುತ್ತಿದೆ. ಇದನ್ನು ನಿಲ್ಲಿಸಲಿಕ್ಕೆ ಸರ್ಕಾರ ಏನು ಪ್ರಯತ್ನ ಮಾಡುತ್ತಿದೆ ಎಂಬುದನ್ನು ಹೇಳಬೇಕು ಎಂದು ಹೇಳುತ್ತಾ ಈಪಿಟಿಷನ್ ಅನ್ನು ತೆಗೆದು ಸ್ವಲ್ಪ ಸರಿ ಮಾಡಿ ಮಾನ್ಯ ಯಡಿಯೂರಪ್ಪನವರಿಗೆ ಓದಲಿಕ್ಕೆ ಬಹಳ ಸುಸ್ತಾಯಿತು. ಇಷ್ಟುದಪ್ಪ ಓದುವ ಅಗತ್ಯ ಇರಲಿಲ್ಲ. ನಿಮ್ಮ ಸ್ಪೀಚನ್ನು ಕಡಿಮೆ ಮಾಡಬಹುದಿತ್ತು ಆಮೇಲೆ ರಿಪಿಟಿಷನ್ ಒಲ್ಡ್ ಪ್ರೋಗ್ರಾಮ್ ಕಂಟಿನ್ಯುಯೇಷನ್, ಅದನ್ನೇ ರಿಪೀಟ್ ಮಾಡುವುದಕ್ಕಿಂತ ಹೊಸ ಹೊಸ ಕಾರ್ಯಕ್ರಮಗಳು ಸಣ್ಣದು ಇದ್ದರೂ ಸಹಿತ ಒಂದೇ ಕಾರ್ಯಕ್ರಮಕ್ಕೆ ಹೆಚ್ಚು ಅನುದಾನವನ್ನು ಕೊಟ್ಟು ರಾಜ್ಯಕ್ಕೆ ಎಲ್ಲಾ ಕೃಷಿಗೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್) : ಸನ್ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ same repeated ಭಾಷಣ ಮಾಡಿಕೊಂಡೇ ಬರಬೇಕು. ಇವರು ಹೇಳಿದ್ದನ್ನೇ ನಾನು ಹೇಳಬೇಕು, ಅವರು ಹೇಳಿದ್ದನ್ನೇ ಇವರೂ ಹೇಳಬೇಕು. some changes will be there ಅಷ್ಟೇ. ಇದರಲ್ಲಿ ಬೇರೆ ಇನ್ನೇನಿದೆ? ಬಜೆಟ್ ಪುಸ್ತಕ ಬಹಳ ದಪ್ಪವಾಗಿದೆ, ಓದುವುದಕ್ಕೂ ಆಗುವುದಿಲ್ಲ. ತಮ್ಮ ಮಾತಿಗೆ ಬೆಲೆ ಕೊಟ್ಟು ಮೂರು ಇಲ್ಲವೆ ಐದು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಿಜವಾಗಿಯೂ, ಇದೊಂದು ಒಳ್ಳೆಯ ಬಜೆಟ್ ಆಗಿದೆ. I apreciate this budget. This is a very good budget, no doubt. ಈ ಕಡೆ ಕುಳಿತ ಸಮಯದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ರೈತರ ಬಗ್ಗೆ, agriculture, Horticulture, cooperation ಬಗ್ಗೆ ಪ್ರಸ್ತಾಪಿಸಿ ಹಾಗೆ ಮಾಡಬೇಕು ಹೀಗೆ ಮಾಡಬೇಕು ಎಂದೆಲ್ಲಾ ಮಾತನಾಡುತ್ತಿದ್ದರು. ಆ ಚಿಂತನೆಗಳೆಲ್ಲವನ್ನೂ ತಮ್ಮ ಚಿಂತನೆಯಲ್ಲಿಟ್ಟುಕೊಂಡು ಇವೊತ್ತು ರೈತರಿಗಾಗಿ ಒಳ್ಳೆಯ ಕಾರ್‍ಯಕ್ರಮಗಳನ್ನು ಹಮ್ಮಿಕೊಂಡಿದಾರೆ. ಆದರೆ, ಇದನ್ನು implement ಮಾಡಬೇಕಲ್ಲಾ ಯಾವ ತರಹ implement ಮಾಡುತ್ತೀರಿ? How you are going to implement? ನೀವು ಕೊಟ್ಟಿರುವುದೆಲ್ಲವನ್ನೂ ನೋಡಿದರೆ, ಬಜೆಟ್ ಪುಸ್ತಕದಲ್ಲಿ ಅಲ್ಲಾವುದ್ದೀನ್ ಲ್ಯಾಂಪ್‌ನ symbol ಹಾಕಿರಬೇಕಿತ್ತು. Yes, ಈ ತಕ್ಷಣ ನನಗೊಂದು ವಿಧಾನಸೌಧದ ತರಹ ಮನೆ ಬೇಕೆಂದು ಕೇಳಿದರೆ ಆ ಲ್ಯಾಂಪ್‌ನೊಳಗಿಂದ ಸರ್‍ರನೆ ಬರುತ್ತದೆ. ನನಗೊಂದು ಪ್ಯಾಲೆಸ್ ಬೇಕೆಂದರೆ, ಕ್ಷಣ ಮಾತ್ರದಲ್ಲಿ ಬರುತ್ತದೆ. ಅದೇ ತರಹ ಒಬ್ಬಳು ಸುಂದರ ಹುಡುಗಿ ಬೇಕೆಂದರೂ ತಕ್ಷಣ ಬರುತ್ತದೆ. ಈ ತರಹವಾಗಿ ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಕೆಲವು subject ತೆಗೆದುಕೊಂಡು improvement ಮಾಡಿರಬೇಕು,

next budgetನಲ್ಲಿ ಇನ್ನೂ ಸ್ವಲ್ಪ ಸೇರಿರಬೇಕು. ಆದರೆ. ಪೂರ್ತಿಯಾಗಿ at a time ನೀವು ಮಾಡಿರುವುದನ್ನು ನೋಡಿದರೆ, ಎಲ್ಲಿ ಯಾವಾಗ emergency ಚುನಾವಣೆ ಬರುತ್ತದೆಯೋ ಎಂಬ ಬಗ್ಗೆ ನಮಗೊಂದು ಐಡಿಯಾ ಬರುತ್ತದೆ. ಚುನಾವಣಾ ಬರುವ ಸಮಯದಲ್ಲೇ ಈ ರೀತಿ ಬಜೆಟ್ ಕೊಡುವುದು! ಇವೊತ್ತು ತಮಿಳುನಾಡಿನಲ್ಲಿ ನೊಡಿ ಯಾವುದನ್ನೇ ಕೇಳಿದರೂ Yes, Yes, Yes ಮೂರು ತಿಂಗಳ ಮುಂಚೆ ಎಲ್ಲವನ್ನೂ ಹೇಳಿದರು. ಮುಖ್ಯಮಂತ್ರಿಗಳು ಹೀಗೆ ಮಾಡುತ್ತಾರೆ, ಹಾಗೆ ಮಾಡುತ್ತಾರೆಂದು ಜನರು ಮಾತನಾಡಿಕೊಂಡರು. Next month ಚುನಾವಣೆ ಶುರುವಾಯಿತು. ಆ ತರಹ ನೀವೇನಾದರೂ ಚುನಾವಣೆಗೆ ಬಜೆಟ್ ಮೂಲಕ ಪ್ರಯತ್ನ ಮಾಡಿದ್ದೀರೋ, ಏನೋ ಗೊತ್ತಿಲ್ಲ. ಇದನ್ನು ಮಾಡುತ್ತೇವೆ, ಅದನ್ನು ಮಾಡುತ್ತೇವೆಂದು ಪೂರ್ತಿಯಾಗಿ ಕೊಟಿದ್ದಾರೆ. ಬಜೆಟ್‌ನ ಪ್ಯಾರ ಸಂಖ್ಯೆ 71 you have annocunced Government will perform "Panchalinga Darshan" in Talakadu in November 2006ರಲ್ಲಿ ಎಲ್ಲಿದೆ? ಯಾರಿಗೆ ಗೊತ್ತು? ಯಾವಾಗ ಮಾಡುತ್ತೀರ? ಅದಕ್ಕೆ ಬಜೆಟ್ ಎಲ್ಲಿ? ತಾವು ಪುಸ್ತಕ ತೆಗೆದುಕೊಂಡು ನೋಡಿ, ತಲಕಾಡಿನಲ್ಲಿ 2006ಕ್ಕೆ ಪಂಚಲಿಂಗ ದರ್ಶನವಾಗುತ್ತದೆ. ಅದು 12 ವರ್ಷಗಳಿಗೊಮ್ಮೆ ಬರುತ್ತದೆ, ಇದು ಎಷ್ಟು ಜನರಿಗೆ ಗೊತ್ತಿದೆ? ಅದಕ್ಕೆ ಎಷ್ಟು ಹಣ ಮೀಸಲಿಟ್ಟಿದ್ದೀರಿ? ಅದು ಯಾವ ದೇವರು? ಇದು ಸಾಮಾನ್ಯ ಜನರಿಗೆ ಗೊತ್ತಾಗುವುದಿಲ್ಲ. ಆದರೆ, ದೇವರ ಮೇಲೆ ಅಪಾರ ಶ್ರದ್ಧೆ, ಭಕ್ತಿ ಪ್ರೀತಿ ಇಟ್ಟುಕೊಂಡು 'ರಾಮ ರಾಮ, ಓಂ ಓಂ' ಎಂದು ಹೇಳುತ್ತಿರುವವರಿಗೆ ಮಾತ್ರ ಗೊತ್ತು ಹಣ ಎಲ್ಲಿ ಕೊಟ್ಟಿದ್ದೀರಿ? ಇದಕ್ಕೆ ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಿದ್ದೀರಿ? ಸುಮ್ಮನೆ ಬಾಯಿಯಲ್ಲಿ 2006ರ ನವೆಂಬರ್‌ನಲ್ಲಿ ಮಾಡುತ್ತೇವೆಂದು ಹೇಳಿದರೆ ಹೇಗೆ? ಮಾಡಿ, ಯಾರು ಬೇಡವೆಂದು ಹೇಳಿದರು? ಆದರೆ, ಹಣ ಎಲ್ಲಿದೆ? ಅದಕ್ಕೋಸ್ಕರ, ನಾನು ಹೇಳಿದ್ದು: ಅಲ್ಲಾವುದ್ದೀನ್ ಲ್ಯಾಂಪ್‌ನ ಒಂದು ಸಿಂಬಲ್ ಹಾಕಿಬಿಟ್ಟರೆ, ಅಲ್ಲಿ ನೋಡಿ ಅಲ್ಲಾವುದ್ದೀನ್ ಲ್ಯಾಂಪ್ ಇದೆ, 'ಜೀಬೂಂಟಾ ಎಂದರೆ ದುಡ್ಡು ಬರುತ್ತದೆಂದು ನೀವು ನೇರವಾಗಿ ಹೇಳಬಹುದು. ಆ ತರಹ ಇದು ಇದೆ. ಅದೇ ರೀತಿ ಪ್ಯಾರಾ ಸಂಖ್ಯೆ 73ರಲ್ಲಿ you have announced creation of "Karnataka Samskruti Samrakshana Pradhikara" to protect ancient and historic temples. ಇದಕ್ಕೊಂದು ಕಮಿಟಿ ಮಾಡಿದ್ದೀರಿ. ಇದು ಹೊಸ ಕಮಿಟಿ. you have already Hampi Development Authority, Koodala Sangama Development Authority, ಈಗ ಹೊಸ Authority ಮಾಡಿದ್ದೀರಿ, ಏನು ನಿಮಗೆ ಇವೆರಡರ ಮೇಲೆ faith ಇಲ್ಲವೇ? ಅದನ್ನು ತೆಗೆಯಬೇಕೇ? ಇಲ್ಲವೇ ಅವುಗಳು ಬಹಳ overload ಆಗಿದೆಯೆಂದು ಅರ್ಥವೇ? ಇದಕ್ಕೆ ಖರ್ಚು ಇಲ್ಲವೇ? Is it not an extra expenditure? ಏತಕ್ಕೆ ಅದನ್ನು ಮಾಡಿದ್ದೀರಿ? ಯಾವ ಕಾರಣಕ್ಕೋಸ್ಕರ ಮಾಡಿದ್ದೀರಿ? We have already two Development Authorities for the temples. ಈಗ ಹೊಸದಾಗಿ ಮತ್ತೊಂದು ಅಥಾರಿಟಿ. ಅದಕ್ಕೆ ಏನು ಕಾರಣವೋ? ಒಂದು ಕಡೆ surplus budget ಎಂದು ಹೇಳುತ್ತೀರಿ, ಎಷ್ಟು unwanted ಹಣ ಖರ್ಚು ಮಾಡುತ್ತೀರೆಂದು ಇದರಿಂದ ಗೊತ್ತಾಗುತ್ತದೆ. Development Authorityಗೆ ಒಂದು ಬೋರ್ಡ್, ಅದಕ್ಕೊಬ್ಬರು ಚೇರ್ಮನ್, ಅವರಿಗೆ ಕಾರು, ಬಂಗಲೆ, ಎ.ಸಿ. ರೂಮ್, ಸಿಕ್ಕಾಪಟ್ಟೆ ಮೀಟಿಂಗ್,

ವಾರಕ್ಕೊಂದು ಮೀಟಿಂಗ್, ಮೂರು ತಿಂಗಳಿಗೊಮ್ಮೆ ಮೀಟಿಂಗ್. ಮೀಟಿಂಗ್ ಎಲ್ಲೆಂದರೆ, Five Star Hotelನಲ್ಲಿ ಹಂಪಿಗೆ ಹೋಗಿ ಒಂದು ಮೀಟಿಂಗ್ ಮಾಡುವುದು, ಧರ್ಮಸ್ಥಳಕ್ಕೆ ಹೋಗಿ ಒಂದು ಮೀಟಿಂಗ್ ಮಾಡುವುದು, ಇವೆಲ್ಲಾ ಖರ್ಚು ಅಲ್ಲವೇ? ಪ್ಯಾರ ಸಂಖ್ಯೆ 77ರಲ್ಲಿ, you have earmarked Rs.25 lakhs to those who undertake Manasa Sarovara pilgrimage. We have already pilgrimages like Dharmastala, Mysore, Nanjangud, M,M, hills, Kukke, Kollur, Tirupathi etc. ಈ ಎಲ್ಲಾ ಕ್ಷೇತ್ರಗಳಿಗೂ ನೀವು concession ಕೊಡುವ ಮೂಲಕ middle calss & poor class ಜನರನ್ನು ಕರೆದುಕೊಂಡು ಹೋಗುತ್ತೇವೆಂದು ಹೇಳಬೇಕು. ಧರ್ಮಸ್ಥಳ, ನಂಜನಗೂಡು, ಕುಕ್ಕೆ ಸುಬ್ರಹ್ಮಣ್ಯ, ಕೋಲೂರು ಮುಂತಾದ ಧಾರ್ಮಿಕ ಸ್ಥಳಗಳಿಗೆ ಕೆಎಸ್‌ಆರ್‌ಟಿಸಿ ಪ್ರಯಾಣದಲ್ಲಿ ಅವರಿಗೆ concession ಕೊಟ್ಟರೆ ಬಿಜೆಪಿಯವರಿಗೆ ಎಷ್ಟು ಒಳ್ಳೆಯ ಹೆಸರು ಬರುತ್ತದಲ್ಲವೇ? 'ನಮಗೆ ಯಡಿಯೂರಪ್ಪನವರು 75 ಪರ್ಸೆಂಟ್ concession ಕೊಟ್ಟಿದ್ದಾರೆ, ಬರೀ 25 ರೂಪಾಯಿ ಕೊಟ್ಟರೆ ನಾವು ತಿರುಪತಿಗೆ ಹೋಗಬಹುದು' ಎಂದು ಜನರೆಲ್ಲರೂ ಮಾತನಾಡಿಕೊಳ್ಳುತ್ತಾರೆ.ಆಗ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ನಾಳೆ ಮೆಟ್ರೋ ಟ್ರೇನ್, ಮಾನೊ ಟ್ರೇನ್ ಬಂದರೂ ಅದಕ್ಕೂ free concession ಕೊಡಬೇಕು. ಅದನ್ನು ನೀವು ಮಾಡಬಹುದು, ಅಲ್ಲವೇ? ಗೊತ್ತಿರುವ ದೇವಸ್ಥಾನಗಳಿಗೆ concession ಇಲ್ಲ, Manasa Sarovara pilgrimage ಎಂಬ ಹೆಸರು ಬಾಯಿಗೇ ಬರುವುದಿಲ್ಲ. ಅದು ಎಲ್ಲಿದೆ ಸರ್? ಮೈಸೂರು, ನಂಜನಗೂಡು, ಎಂ.ಎಂ.ಹಿಲ್ಸ್ ಕುಕ್ಕೆ ಸುಬ್ರಹ್ಮಣ್ಯ, ಕೊಲ್ಲೂರು, ಧರ್ಮಸ್ಥಳ ಇವೆಲ್ಲವೂ ಗೊತ್ತಿರುವ ಸ್ಥಳಗಳಲ್ಲವೇ? ಎಲ್ಲೋ ಒಂದು ಸ್ಥಳ ಹುಡುಕಿ, ಅದು ಯಾರಿಗೂ ಗೊತ್ತಿಲ್ಲವೆಂಬ ಮಾತನ್ನು ಹೇಳುತ್ತಾರೆ. ಅದೆಲ್ಲಿದೆ? ಸ್ವರ್ಗದಲ್ಲಿದೆಯೋ? ನರಕದಲ್ಲಿದೆಯೋ? ಯಾರಿಗೆ ಗೊತ್ತಿದೆ? ಮಾನಸ ಸರೋವರ ಎಲ್ಲಿದೆ ಎಂದು ಬಜೆಟ್ ಪುಸ್ತಕದಲ್ಲಿ ತಿಳಿಸಿದ್ದರೆ ಸರಿಹೋಗುತ್ತಿತ್ತು. ಆದರೆ, ತಿಳಿಸಿಲ್ಲ. ಅದೆಲ್ಲಿದೆಯೆಂದು ನನಗೆ ಗೊತ್ತಿಲ್ಲ, ನಾನು ಗೂಬೆ. ಗೊತ್ತಿರುವವರು ಹೇಳಿರಬೇಕಿತ್ತಲ್ಲವೇ? ಇದಕ್ಕೆ ಎಷ್ಟು ಬಜೆಟ್ ಆಗುತ್ತದೆ? ಎಷ್ಟು concession– ಯಾವ ರೀತಿಯಲ್ಲಿ concession?

ಶ್ರೀ ಡಿ.ಹೆಚ್. ಶಂಕರಮೂರ್ತಿ : ಮಾನ್ಯ ಸಿದ್ದರಾಮಯ್ಯನವರು Finance Minister ಆಗಿದ್ದಾಗ ಅವರ ಹತ್ತಿರ ಮಾತನಾಡಿದ್ದೇನೆ. ಇದು ಶಂಕರಮೂರ್ತಿಯವರ ಕಾರ್ಯಕ್ರಮವೆಂದು ಅವರು ಹೇಳಿದರು. ಅದು ಶಂಕರಮೂರ್ತಿಯವರ ಕಾರ್ಯಕ್ರಮವಲ್ಲ. ಮಾನಸ ಸರೋವರಕ್ಕೆ ನಮ್ಮ ದೇಶದಿಂದ ಬಹಳಷ್ಟು ಜನರು ಯಾತ್ರೆ ಮಾಡುತ್ತಾರೆ. ಅದು ಹಿಮಾಲಯದಲ್ಲಿದೆ, ಚೀನಾ ದೇಶ ದಾಟಿಕೊಂಡು ಹೋಗಬೇಕು, ಚೀನಾ ದೇಶದವರಿಂದ ಪರ್ಮಿಶನ್ ತೆಗೆದುಕೊಂಡು ಮಾನಸ ಸರೋವರಕ್ಕೆ ಹೋಗಬೇಕಾಗುತ್ತದೆ. ಅಲ್ಲಿಗೆ ತುಂಬಾ ಜನರು ಹೋಗುತ್ತಾರೆ. ನಮ್ಮ ದೇಶಾದ್ಯಂತ ಅದರ ಬಗ್ಗೆ ತುಂಬಾ ಶ್ರದ್ಧೆ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನನಗೆ ಗೊತ್ತಿಲ್ಲವೆಂದು ಅದನ್ನೇ ಅವರು ಹೇಳಿದ್ದು ರಾಜೇಂದ್ರನ್‌ರವರು ಯಾವ ವರ್ಗವನ್ನು ಪ್ರತಿನಿಧಿಸುತ್ತಾರೋ, ಯಾರ ಧ್ವನಿಯಾಗಿ ಮಾತನಾಡುತ್ತಾರೋ, ಅವರಿಗೆ ಅದು ಅಪರಿಚಿತ, ಸಂಬಂಧವಿಲ್ಲವೆಂದು ಅವರು ಹೇಳಿದರು.

ಶ್ರೀ ಡಿ.ಹೆಚ್. ಶಂಕರಮೂರ್ತಿ : ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ನಾನು ಮಾತನಾಡುವುದು ಬೇಡವೇ? ಮಾತನಾಡುವುದು ಬೇಡವೆಂದರೆ ಕುಳಿತುಕೊಳ್ಳುತ್ತೇನೆ. ನೀವು ದೊಡ್ಡವರು, ಮಾತನಾಡಿ. ನಾನು ಮಾತನಾಡಬೇಡವೆಂದರೆ ಕುಳಿತುಬಿಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾತನಾಡಿ

ಶ್ರೀ ಹಚ್. ಶಂಕರಮೂರ್ತಿ : ನಮ್ಮ ದೇಶದ ಬಹಳಷ್ಟು ರಾಜ್ಯಗಳಿಂದ ಅದು ದೆಹಲಿಯಿಂದ ಇರಬಹುದು, ಉತ್ತರ ಪ್ರದೇಶದಿಂದಿರಬಹುದು, ಬಿಹಾರದಿಂದ ಇರಬಹದು, ಬೇರೆ ಬೇರೆ ಬಹಳಷ್ಟು ರಾಜ್ಯಗಳಿಂದ ಮಾನಸ ಸರೋವರಕ್ಕೆ ಯಾತ್ರೆ ತೆರಳುತ್ತಾರೆ. ಮಾನಸ ಸರೋವರ ಯಾತ್ರೆಗೆ ನಾನು, ವಾಟಾಳ್ ನಾಗರಾಜ್‌ರವರು ಹೋಗುವುದಕ್ಕಾಗುವುದಿಲ್ಲ. ಅದಕ್ಕೆ ಡಾಕ್ಟರ್ ಪರ್ಮಿಶನ್ ಕೊಡುವುದಿಲ್ಲ, ಡಾಕ್ಟರ್ ಸರ್ಟಿಫಿಕೇಟ್ ತೆಗೆದುಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ವಯಸ್ಸು ಇರಬೇಕಾಗುತ್ತದೆ, ಹೃದಯ ಗಟ್ಟಿಯಾಗಿರಬೇಕಾಗುತ್ತದೆ, ಅದೊಂದು ರೀತಿ ಟ್ರೆಕ್ಕಿಂಗ್ ಇದ್ದಂತೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಹೃದಯ ಗಟ್ಟಿಯಾಗಿದೆ. ನಿಮ್ಮದು ಹೇಗಿದೆಯೋ, ನನಗೆ ಗೊತ್ತಿಲ್ಲ. ನನ್ನ ಹೃದಯ ಭದ್ರವಾಗಿದೆ, ನನ್ನಲ್ಲಿಗೆ ಇದುವರೆಗೂ ಯಾವುದೇ ಡಾಕ್ಟರ್ ಬಂದು ನನ್ನ ಹೃದಯ ತಪಾಸಣೆ ನಡೆಸಿಲ್ಲ. ನನ್ನ ಹೃದಯ ಭಾರೀ ಭದ್ರವಾಗಿರುವುದರಿಂದ ನಾನು ಚಂದ್ರಲೋಕಕ್ಕೆ ಹೋಗುವುದಕ್ಕೆ ಬೇಕಾದರೂ ತಯಾರಿದ್ದೇನೆ. ನೀವು ಹೋಗುತ್ತೀರೋ ಬಿಡುತ್ತೀರೋ, ನನಗೆ ಗೊತ್ತಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಸಾರಿ ನನಗೆ ಮಾತನಾಡಲು ಬಿಡುತ್ತೀರೋ ಇಲ್ಲವೋ? ನಿಮ್ಮ ಮಾತನ್ನು ನಾನು ಬೆಳಗ್ಗೆ ಪೂರ್ತಿಯಾಗಿ ಕೇಳಿದೆ. ಎರಡು ನಿಮಿಷ ಮಾತನಾಡುವುದಕ್ಕೂ ನೀವು ಅವಕಾಶ ಕೊಡುವುದಿಲ್ಲವೆಂದರೆ......

ಶ್ರೀ ವಾಟಾಳ್ ನಾಗರಾಜ್ : ಮಾನಸ ಸರೋವರದ ಬಗ್ಗೆ ನಮ್ಮ ಸ್ನೇಹಿತರಾದ ರಾಜೇಂದ್ರನ್‌ರವರು ಹೇಳುವಾಗ ನನಗೆ ಗಾಬರಿಯಾಯಿತು.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಆಯಿತು, ತಪ್ಪಾಯಿತು ಅಂದೆನ್ನಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ತಪ್ಪೇನಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಅಲ್ಲಿಗೆ ಹೋಗುವುದಕ್ಕೆ ತುಂಬಾ ಹಣ ಖರ್ಚಾಗುತ್ತದೆ. ಎಲ್ಲಾ ರಾಜ್ಯಗಳಲ್ಲೂ ಆ ತರಹದ ಯಾತ್ರೆಗೆ ಹಣ ಒದಗಿಸಿಕೊಡುತ್ತಾರೆ. ಬೇರೆ ಬೇರೆ ಯಾತ್ರೆಗಳಿಗೆ ಈ ರೀತಿ ಹಣ ಕಲ್ಪಿಸಿಕೊಡುವ ಪದ್ದತಿ ನಮ್ಮ ದೇಶದಲ್ಲಿದೆ. ನಮ್ಮ ರಾಜ್ಯದಲ್ಲೂ ಹಜ್ ಯಾತ್ರಿಕರಿಗೆ ಸ್ವಲ್ಪ ಹಣ ಒಗಿಸಿಕೊಡುವ ಪದ್ಧತಿ ಉಂಟು. ಅದೇ ರೀತಿ ಮಾನಸ ಸರೋವರ ಯಾತ್ರೆ ಕೈಗೊಳ್ಳಲು ಯಾತ್ರಿಕರಿಗೆ ಸೌಲಭ್ಯ ಕಲ್ಪಿಸಿಕೊಡಲು ನಾವು ಇಟ್ಟಿರುವುದು ಎಷ್ಟೆಂದರೆ, 25 ಲಕ್ಷ ರೂಪಾಯಿಗಳು. ಈ ಹಣದಲ್ಲಿ ಎಷ್ಟು ಜನರು ಯಾತ್ರೆಗೆ ಹೋಗಬಹುದು? 100 ಜನ ಹೋದರೂ, ಒಬ್ಬೊಬ್ಬರಿಗೂ 25 ಸಾವಿರ ರೂ ಸಿಗುತ್ತದೆ. ಬೇರೆ ರಾಜ್ಯಗಳಲ್ಲಿ ಹೋಗುವವರಿಗೆ 20 ಸಾವಿರ ರೂ, 30 ಸಾವಿರ ರೂಪಾಯಿಗಳಷ್ಟು ಸಬ್ಸಿಡಿ ಕೊಡುತ್ತಾರೆಯೇ ವಿನಾ ಹಣ ಕೊಡುವುದಿಲ್ಲ. ಮಾನಸ ಸರೋವರ ಯಾತ್ರೆಗೆ ತೆರಳುವವರಿಗೆ equipments ಬೇಕಾಗುತ್ತದೆ, ಹಾಕಿಕೊಳ್ಳಲು ಬಟ್ಟೆ ಷೂ, ಮುಂತಾದವುಗಳಿಗೆ ಹಣ ಒದಗಿಸಿಕೊಡಬೇಕಾಗುತ್ತದೆ. ಮಾನಸ ಸರೋವರ ಚೀನಾ

ದೇಶದಲ್ಲಿರುವುದರಿಂದ ವೀಸಾ ಸೌಲಭ್ಯಕ್ಕಾಗಿ ಚೀನಾ ದೇಶಕ್ಕೆ ದುಡ್ಡು ಕೊಡಬೇಕು. ಅಲ್ಲಿಗೆ ಕರ್ನಾಟಕದಿಂದ ತುಂಬಾ ಜನರು ಹೋಗಿ ಬಂದಿದ್ದಾರೆ. ಕೆಲವು ಐಎಎಸ್ ಅಧಿಕಾರಿಗಳು ಹೋಗಿ ಬಂದಿರುವುದು ನನಗೆ ಗೊತ್ತಿದೆ. ತುಂಬಾ ಜನರು ಅಲ್ಲಿಗೆ ಹೋಗಿ ಬರುತ್ತಾರೆ. ಮಾನಸ ಸರೋವರ ಯಾತ್ರಿಗಳ ಒಂದು ಸಂಘಟನೆಯೇ ಇದೆ. ಅದು ಬೇರೆ ರಾಜ್ಯಗಳಲ್ಲೂ ಇದೆ. ನಮಗೂ ಈ ತರಹದ ಸೌಲಭ್ಯ ಕಲ್ಪಿಸಿಕೊಟ್ಟರೆ, ಯಾತ್ರಿಕರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆಂದು ಬಹಳ ವರ್ಷಗಳಿಂದಲೂ ಕೇಳುತ್ತಿದ್ದರು. ಅದಕ್ಕೋಸ್ಕರ, ಸಿದ್ದರಾಮಯ್ಯನವರು Finance Minister ಆಗಿದ್ದಾಗ ಹೆಚ್ಚು-ಕಡಿಮೆ ಇದಕ್ಕೆ ಒಪ್ಪಿದ್ದರು. ಮತ್ತು ಈ ವರ್ಷದ ಬಜೆಟ್‌ನಲ್ಲಿ ಹಣ ಕಲ್ಪಿಸಿಕೊಡುತ್ತೇವೆಂತಲೂ ನನಗೆ ಹೇಳಿದ್ದರು. ಆದರೆ, ಯಾವುದೋ ಕಾರಣಕ್ಕೆ ಅವರು ಹೇಳಿದ ವರ್ಷದಲ್ಲಿ ಅವರಿಂದ ಬಜೆಟ್ ಮಂಡಿಸುವುದಕ್ಕಾಗಲಿಲ್ಲ. ಹಾಗಾಗಿ, ಅವರು ಈ ಸಂಬಂಧವಾಗಿ ನನ್ನ ಹೆಸರು ಉಲ್ಲೇಖಿಸಿದ್ದಕ್ಕೆ ನಾನು ಎದ್ದು ನಿಲ್ಲಬೇಕಾಯಿತು. ನಾನು ಅದನ್ನು ಕ್ಲಿಯರ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಯಿತು.

ಶ್ರೀ ಎಸ್.ಎಸ್.ಪಾಟೀಲ್ : ಮಾನಸ ಸರೋವರಕ್ಕೆ ಹೋಗಲು ಬಿಪಿಎಲ್ ಕಾರ್ಡ್‌ನವರಿಗೆ ಹಣದ ಸೌಲಭ್ಯ ಒದಗಿಸಿಕೊಡುತ್ತೀರಾ ಅಥವಾ ಶ್ರೀಮಂತರಿಗೆ ಒದಗಿಸಿಕೊಡುತ್ತೀರಾ? ಅಲ್ಲಿಗೆ ಬಡವರು ಯಾರೂ ಹೋಗುವುದಿಲ್ಲ.

ಶ್ರೀ ಸಿ.ಟಿ. ರವಿ :ಹಜ್ ಯಾತ್ರೆಗೆ ಹೋಗುವವರಿಗೆ ಬಿಪಿಎಲ್ ಕಾರ್ಡ್ ಇರುವವರಿಗೆ ಕೊಡುತ್ತೀರಾ?

ಶ್ರೀ ಎಸ್.ಎಸ್. ಪಾಟೀಲ್: ಬಡವರಿಗೆ ಕೊಡುವಂತೆ ಮಾಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಯಾರ್‍ಯಾರು ಯಾತ್ರೆ ಮಾಡುತ್ತಾರೋ ಅವರಿಗೆ ಇಟ್ಟಿರುವುದು ಇಪ್ಪತ್ತೈದು ಲಕ್ಷ.ರೂ ಯಾರ್‍ಯಾರು ಹೋಗುತ್ತಾರೋ ಎಲ್ಲರಿಗೂ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಯಾರೂ ಬಿ.ಪಿ.ಎಲ್. ಕಾರ್ಡ್‌ನವರು ಅಲ್ಲಿಗೆ ಹೋಗುವುದಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಹೋಗುತ್ತಾರೆ. ಹೋಗುವುದಿಲ್ಲವೆಂದು ಯಾರು ಹೇಳಿದರು?

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ಆ ಬಿ.ಪಿ.ಎಲ್. ಕಾರ್ಡ್‌ನವರಿಗೆ ಕೊಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಅವರಿಗೆ ಮಾತ್ರವಲ್ಲ. ಹೋಗುವವರಿಗೆಲ್ಲಾ ಕೊಡುತ್ತೇವೆ.

ಅಧ್ಯಕ್ಷರು: ಮಾನ್ಯ ಪಾಟೀಲರೆ, ರಾಜೇಂದ್ರನ್‌ರವರು ಮಾತನಾಡಲಿ. ಸುಮ್ಮನೆ ಅದು ಇದು ಮಾತನಾಡಿ ಅವರ ಮಾತನ್ನು ಏಕೆ ಮೊಟಕು ಮಾಡುತ್ತೀರಿ? ಮಾನ್ಯ ರಾಜೇಂದ್ರನ್‌ರವರೇ, ಬೇಗ ಮುಗಿಸಿ. ನೀವು ಕುಳಿತುಕೊಳ್ಳುತ್ತೀರಿ ಅವರೆಲ್ಲಾ ಎದ್ದು ನಿಂತುಕೊಳ್ಳುತ್ತಾರೆ.

ಶ್ರೀ ರಾಜೇಂದ್ರನ್ : ತಾವು ಆ ರೀತಿ ಹೇಳಿದ ಮೇಲೆ ನಮಗೆ ನೋವೇ ಇಲ್ಲ Because you are an elderly person, what you are saying is correct. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದನ್ನು ತಾವು ಅರ್ಥ ಮಾಡಿಕೊಂಡಿರಬಹುದು. My question is only this.25 ಲಕ್ಷ ರೂ ಯಾರಾದರೂ ಹೋಗಲಿ, any body can go ನೀವು ಏನು

ಹೇಳಿದಿರಿ, ಅಲ್ಲಿ ಹೋಗುವುದಕ್ಕೂ ಮೆಡಿಕಲ್ ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಹೋಗಬೇಕು. ಈಗ ಸಾಮಾನ್ಯ ಮನುಷ್ಯನಿಗೆ ಆಸ್ಪತ್ರೆಯಲ್ಲಿ ಮೆಡಿಸನ್ ಇಲ್ಲ, ಟ್ಯಾಬ್ಲೇಟ್ಸ್ ಇಲ್ಲ, ಬೀದಿಯಲ್ಲಿ ಕಾಯುತ್ತಿದ್ದಾನೆಂದರೆ ಇವನು ಹೋಗಿ ನೂರು ರೂಪಾಯಿ ಕೊಟ್ಟು ಮೆಡಿಕಲ್ ಸರ್ಟಿಫಿಕೇಟ್ ತೆಗೆದುಕೊಂಡು ಸ್ವಾಮಿ ಮಾನಸ ಸರೋವರಕ್ಕೆ ಹೋಗುತ್ತೇನೆಂದು ಹೇಳುತ್ತಾನೆಯೆ? ಎಂಥ ಮಾತುಗಳು ಸರ್ಕಾರದಿಂದ. ನಾವೇ ನಮ್ಮ ಆಸ್ಪತ್ರೆಯಲ್ಲಿ ಹೋಗಿ ಡಾಕ್ಟರ್ ಹತ್ತಿರ ಹೇಗಾದರೂ ಆಗಲಿ ಒಂದು ಹತ್ತು ಟ್ಯಾಬ್ಲೇಟ್ಸ್‌ನ್ನು ಸೇರಿಸಿಕೊಡಿ, ಪಾಪ ಬಹಳ ಬಡವರು ಅವರು ಎಂದರೆ.

ಡಾಃ ಕೆ. ಅನ್ನದಾನಿ : ಮಾನ್ಯ ರಾಜೇಂದ್ರನ್‌ರವರೆ, ಆಯವ್ಯಯದಲ್ಲಿ ಬಂದಿರುವ ದೇವಸ್ಥಾನದ ವಿಚಾರವನ್ನು ಇಲ್ಲಿ ಮಂಡಿಸುತ್ತಿದ್ದೀರಿ. ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಅದರಲ್ಲೂ ದೇವಸ್ಥಾನಗಳ ಬಗ್ಗೆ ಮಾತನಾಡುತ್ತಿದ್ದೀರಿ. ನೀವು ಆಸ್ತಿಕರೋ ಅಥವಾ ನಾಸ್ತಿಕರೋ ಮೊದಲು ಹೇಳಿ.

ಶ್ರೀ ಎಸ್. ರಾಜೇಂದ್ರನ್ : ತಾವು ಡಾಕ್ಟರ್.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎಂ.ಬಿ.ಬಿ.ಎಸ್. ಡಾಕ್ಟರ್ ಅಲ್ಲ.

ಶ್ರೀ ಎಸ್. ರಾಜೇಂದ್ರನ್ : ಓದಿರುವ ಡಾಕ್ಟರ್. ಪಿ.ಹೆಚ್.ಡಿ. ಡಾಕ್ಟರ್. ತಾವು ಕೇಳಿರುವ ಪ್ರಶ್ನೆಗೆ ಉತ್ತರ ಹೇಗೆ ಬರುತ್ತದೆಂದರೆ, ಶಿವನು ಅರ್ಧನಾರೀಶ್ವರ, ಅಂದರೆ ಅರ್ಧ ಹೆಣ್ಣು ಅರ್ಧ ಗಂಡು. ನಾನು ನಾಸ್ತಿಕನೂ ಅಲ್ಲ ಆಸ್ತಿಕನೂ ಅಲ್ಲ ದೇವರು ಇರಬಹುದು ಇಲ್ಲದೆಯೂ ಇರಬಹುದು. ಈವಾಗ ಅರ್ಧರ್ಧ. ಆಸಿಕ್ತನಾಗಿದ್ದರೆ ಏನು ಮಾತನಾಡಬೇಕು. ನಾಸ್ತಿಕನಾಗಿದ್ದರೇನು ಮಾತನಾಡಬೇಕೆಂದು ಇಲ್ಲ. ಹಿಮಾಲಯಕ್ಕೆ ಹೋಗಬೇಕು. ಯಾವಾಗ ಹೋಗಬೇಕೆಂದರೆ ಸಾಯುವ ಟೈಮ್‌ನಲ್ಲಿ ರಾಮೇಶ್ವರಕ್ಕೆ ಕೊನೆಗೆ ಹೋಗಿ ಮಹಾಭಾರತದಲ್ಲಿ ಹಾಗೆಯೇ ಹಿಮಾಲಯದ ಹತ್ತಿರ ಎಲ್ಲಾ ಮುಗಿದ ತಕ್ಷಣ ಪಾಂಡವರು ಗುಂಪುಗಳಾಗಿ ಹೋಗಿದ್ದರು. ಅಂಥವರನ್ನು ಕಳುಹಿಸುತ್ತೀರ? ಅಂಥವರಿಗೆ ಸರ್ಟಿಫಿಕೇಟ್ ಇಲ್ಲವೆಂದು ಹೇಳಿಬಿಟ್ಟರೆ, younstersನ್ನು ಅಷ್ಟು ಬೇಗ ಕಳಿಸಿಬಿಡಬೇಕೆಂಬ ideaನಾ? ಇಲ್ಲದಿದ್ದರೆ ಅಲ್ಲಿಂದ ಚೈನಾ ಕಡೆಗೆ ಹೋಗಬೇಕು, ಪಾಸ್‌ಪೋರ್ಟ್ ಅದನ್ನು ಸ್ವಲ್ಪ ಸೇರಿಸಿ ಕೊಡಿ ಎಂದರೆ ಕೊಡುತ್ತೀರಾ. This is only for the rich people; ಪಕ್ಕದಲ್ಲಿರುವ ತಿರುಪತಿಗೆ ಹೋಗಲು ತಿಂಗಳಿಗೆ ಹತ್ತು ಹತ್ತು ರೂಪಾಯಿಯ ಚೀಟಿ ಹಾಕಿ ಒಂದು ವರ್ಷ ಆದಮೇಲೆ ಇಪ್ಪತ್ತು ಜನ ಸೇರಿಕೊಂಡು ಒಂದು ಬಸ್ಸನ್ನು ತೆಗೆದುಕೊಂಡು ಹೋಗುತ್ತಾರೆ. ಬಡವರು ಸ್ವಾಮಿ, ನಾವು ಹಿಮಾಲಯಕ್ಕೆ ಹೋಗುತ್ತೇವೆ, ನಮಗೆ ಸೂಟು ಕೋಟುಗಳು ಕೊಡಿ ಎಂದು ಕೇಳುತ್ತಾನಾ? This is a criminal waste. It is only for the rich ತಾವು ಹೇಗಾದರೂ ತೆಗೆದುಕೊಳ್ಳಿ ಅಪ್ರೀಷಿಯೇಟ್‌ನ್ನೂ ಮಾಡಿದ್ದೇನೆ ಆದರೆ ಅದರ defectನ್ನು ಹೇಳಿದ್ದೇನೆ. ಹಾಗಾದರೆ ನಮ್ಮ ಕಮಿಟಿಗಳಿಗೆಲ್ಲಾ 25 ಲಕ್ಷರೂ ಕೊಟ್ಟುಬಿಡಿ. ಹೋಗಲಿ ಮಾನಸ ಸರೋವರಕ್ಕೆ. ಸೈಕ್ಲೋನ್ ಅಲ್ಲೇ ಮೊದಲು ಬರುವುದು. ಸುನಾಮಿ ಅಲ್ಲೇ ಬರುವುದು. ಹೋಗಬಾರದು ಎಂದು ನಾವು ಡಿಸೈಡ್ ಮಾಡಿದ್ದೇವೆ. ನಿಮಗೆ ಯಾರ್‍ಯಾರ ಮೇಲೆ ಪ್ರೀತಿ ಇಲ್ಲ ಅವರದನ್ನೆಲ್ಲಾ ಪಟ್ಟಿ ಮಾಡಿ ಖಂಡಿತವಾಗಿ ಹೋಗಬೇಕೆಂದು ಕೊಟ್ಟುಬಿಡಿ. ನಿಜವಾಗಿಯೂ ವಾಪಸ್ ಬರುವುದೇ ಇಲ್ಲ. ಈ ಸೀಟು ನಿಮಗೆ ಪರ್ಮನೆಂಟ್ ಆಗುತ್ತದೆ. ನೀವು ಸೆಲೆಕ್ಟ್ ಮಾಡುವವರೆಲ್ಲಾ ಈ ಕಡೆಯವರು ಅಲ್ಲಿ

ಸ್ವರ್ಗದಲ್ಲೇ ನಿಮಗೆ ಬೇಗ ಬಂದುಬಿಡಿ ಎಂದು ಆಶೀರ್ವಾದ ಮಾಡುತ್ತೇವೆ. ನಾವು ಹೋಗಬೇಕೋ ಬೇಡವೋ ಎಂದು ಡಿಸೈಡ್ ಮಾಡಿಕೊಂಡು ಬರುತ್ತೇವೆ. ನಮ್ಮ ಕ್ಯಾಪ್ಟನ್ ರಮೇಶ್ ಕುಮಾರ್‌ರವರು...

ಶ್ರೀ ವಾಟಾಳ್‌ನಾಗರಾಜ್ : ಅವರು ಏನೇ ಚೀಟಿ ಕಳುಹಿಸಿದರೂ ಹೋಗುವುದಿಲ್ಲ

ಶ್ರೀ ಎಸ್.ರಾಜೇಂದ್ರನ್ : ಅದು ನಿಜ. ಯಾವಾಗಲೂ ಮನೆಯಲ್ಲಿ ಹೆಣ್ಣುಮಕ್ಕಳು ಹೋಗಬಾರದು ಎಂದರೆ ಕೆಲವು ಟೈಮ್‌ನಲ್ಲಿ ನಾವು ಹೋಗಿಯೇ ಹೋಗುತ್ತೇವೆಂದು ಹೇಳುತ್ತಾರೆ. ಆ ರೀತಿ ನೀವು ಹೋಗಬಾರದಪ್ಪಾ ಬಿಜೆಪಿಯವರ ಜೊತೆ ಜನತಾದಳದವರಿಗೆ ಮಾನ್ಯ ಧರ್ಮಸಿಂಗ್‌ರವರು ಎಷ್ಟೋ ಹೇಳಿದರು. ಹೋಗಬಾರದೆಂದು ಹೇಳಿದಷ್ಟು ಅವರು ಹೋದರು! ಆ ರೀತಿ ಯಾವಾಗ ಹೋಗಬಾರದೆಂದು ಹೇಳುತ್ತಾರೋ ಆಗ ಹೋಗುತ್ತಾರೆ. ಈಗ 4 perent agricultural loan ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಬಹಳ ಸಂತೋಷ. ನಿಜವಾಗಿಯೂ he is a farmer ಅದು correct ಆಗಿ implement ಮಾಡಬೇಕು. The difference is 3% ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಬಹಳ ಚೆನ್ನಾಗಿ ಹೇಳಿದರು. ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ 7 ಪರ್‌ಸೆಂಟ್ ಎಂದು. ಅದರ ಜೊತೆಗೆ schedule caste and schedule tribes ಜನಾಂಗದವರಿಗೆ 4 percent ನಲ್ಲಿ ಸಾಲ ಕೊಡುತ್ತೇವೆ. ಎಲ್ಲಿ ಕೊಡುತ್ತೇವೆ? ಕೆ.ಎಸ್.ಎಫ್.ಸಿ. ನಲ್ಲಿ ಕೆ.ಎಸ್‌ಎಫ್.ಸಿ ಗತಿ ಏನು ಗೊತ್ತೇ? Any moment it is supposed to be closed down. It is not a profit making corporation.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದನ್ನು ಇನ್ನು ಏನಾದರೂ ಮುಳುಗಿಸಬೇಕೆಂದಿದ್ದರೆ ಅದರ ಮೂಲಕವೇ ಕೊಟ್ಟುಬಿಡಿ. ಏನೂ ತೊಂದರೆ ಇಲ್ಲ?

ಶ್ರೀ ಎಸ್.ರಾಜೇಂದ್ರನ್: ಇವರ ಐಡಿಯಾ ಏನೆಂದರೆ,ಮನೆಗೆ ಬಂದರೆ ಊಟ ಹಾಕುತ್ತೇವೆ ಎಂದು ಹೇಳುತ್ತೇವೆ. ನೀವು ಹೇಳಿದ ಮಾತಿಗೆ ಅಲ್ಲಿ ನೂರು ಜನ ಬಂದಿದ್ದಾರೆ. ಈಗ ತಿಂದುಬಿಟ್ಟು ಹೋದ ನಿಮ್ಮ ಮುಂದಿರುವವನು ಎಂದು ಹೇಳುವುದು. ನಿಮ್ಮ ಮುಂದೆ ಹತ್ತು ಜನ ಬಂದರು, ಇದ್ದದ್ದು ಹತ್ತು ಇಡ್ಲಿ.ನಿವು ಕರೆದಿದ್ದು ಎಷ್ಟು ಜನ? ನೂರು ಜನ. ಆ ರೀತಿ ಸುಳ್ಳು ಮಾಹಿತಿ ಹೇಳಿ Sehedule caste ರವರಿಗೆ ಅನ್ಯಾಯ ಮಾಡಲು ತಾನೇ ಇದನ್ನು mention ಮಾಡಿದ್ದೀರಿ? If you are really honest, why can't you provide at 4% from Nationalised Banks? What is wrong in that?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ನ್ಯಾಷನಲೈಸ್ಡ್ ಬ್ಯಾಂಕ್‌ನ ಮೂಲಕ ಕೇಂದ್ರ ಸರ್ಕಾರದವರು ಅದನ್ನು ಕೊಡಬೇಕು. ನಮ್ಮ ಕೋ-ಅಪರೇಟೀವ್ ಸೆಕ್ಟಾರ್‌ನಲ್ಲಿ ಡಿ.ಸಿಸಿ. ಬ್ಯಾಂಕ್‌ನಲ್ಲಿ ಪಿ.ಎಲ್.ಡಿ ಬ್ಯಾಂಕ್‌ನಲ್ಲಿ ಇವತ್ತು ಸೊಸೈಟಿಯಲ್ಲಿ 6 ಪರ್‌ಸೆಂಟ್‌ಗೆ ಕಳೆದ ಬಾರಿ ನಮ್ಮ ಧರ್ಮಸಿಂಗ್‌ರವರ ನಾಯಕತ್ವದಲ್ಲಿ ಕೊಟ್ಟೆವೂ ಅದನ್ನು ಇವತ್ತು 4 ಪರ್‌ಸೆಂಟ್‌ಗೆ ಇಳಿಸಿದ್ದೇವೆಂದು ಹೇಳುತ್ತಿರುವುದು. ನ್ಯಾಷನಲೈಸ್ಡ್ ಬ್ಯಾಂಕ್‌ಗಳಿಗೆ ಕೇಂದ್ರ ಸರ್ಕಾರ ಕೊಡಲಿ, ನಾವು ಕೇಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದನ್ನು ನಾನು ನಿಮಗೆ ಓದಿ ಹೇಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ಯಮಶೀಲರಿಗೆ ಶೇಕಡ 4ರ ದರದಲ್ಲಿ ಕೆ.ಎಸ್.ಎಫ್.ಸಿ.

ಸಂಸ್ಥೆ ಸಾಲ ನೀಡಲಿದೆ ಎಂದು ಹೇಳಿದ್ದೀರಿ. ಕೆ.ಎಸ್.ಎಫ್.ಸಿ.ಗೆ ನೀವು ಕೊಡಬೇಕು. ಕೊಡಬಾರದು ಎಂದು ನಾನು ಹೇಳುವುದಿಲ್ಲ.

ಶ್ರೀ ಎನ್.ಚೆಲುವರಾಯ ಸ್ವಾಮಿ : ಎಸ್.ಸಿ., ಎಸ್.ಟಿ ಸಂಸ್ಥೆಗಳು ಉದ್ಯೋಗದ ದೃಷ್ಟಿಯಿಂದ ಮಾಡಿದಾಗ ಅದಕ್ಕೆ ಕೊಡುತ್ತೇವೆಂದು ಇರುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಅದನ್ನು mention ಮಾಡಿಲ್ಲ ಕೇವಲ ಕೆ.ಎಸ್.ಎಫ್.ಸಿ ಎಂದು ಮಾತ್ರ ಇದೆ.

ಶ್ರೀ ಎಸ್. ರಾಜೇಂದ್ರನ್ : ಏನು ಮಾಡಿದ್ದೀರಿ ಎಂದು ನೀವೇ ಓದಿ ಉದ್ಯೋಗ ಅಂದರೆ ಅವನು ಕಸ ಕ್ಲೀನ್ ಮಾಡುತ್ತಾನೊ, ಲಾಂಡ್ರಿ ಮಾಡುತ್ತಾನೊ; ಇಂಡಸ್ಟ್ರಿಯಲ್ ಎಂದರೆ, ಐರನ್, ಬಾಕ್ಸ್ ಮಾಡುವವನು ನನಗೆ ಒಂದು ಶೆಡ್ ಬೇಕೆಂದರೆ ಅದು ಇಂಡಸ್ಟ್ರಿಯಲ್ ಎಂದು ಕೊಡುವುದಿಲ್ಲವೆಂದು ಹೇಳುತ್ತಾರಾ? You have mentioned that very clearly. But it is a wrong message to the Scheduled Castes and Scheduled Tries. ಅವರ ಮೇಲೆ ಪ್ರೀತಿ ಇಲ್ಲ. ಪ್ರೀತಿ ಇದ್ದರೆ definitely you would have arranged through a sound Corporation. ಎಸ್.ಸಿ; ಎಸ್.ಟಿ. ಯವರಿಗೆ ನ್ಯಾಷನಲೈಸ್ಡ್ ಬ್ಯಾಂಕ್‌ನಿಂದ ಕೊಡಬಾರದೆಂದು ಹೇಳಿದ್ದಾರೆಯೆ? ಮಾನ್ಯ ಗೋವಿಂದ ಕಾರಜೋಳರವರೇ ಈ ಕಡೆ ಕುಳಿತುಕೊಂಡು ತಾವು ಎಷ್ಟು ಸಲ ಪರಿಶಿಷ್ಟ ಜಾತಿಯವರ ಬಗ್ಗೆ ಹೇಳಿದ್ದೀರಿ? wrong direction ಕೊಡಬಾರದು He is a fighter for the cause of scheduled caste people. ಈಗ ತಾವು ಆ ಕಡೆ ಕುಳಿತುಕೊಂಡಿದ್ದೀರಿ. ಇದು ಯಾವ ರೀತಿ ಎಂದರೆ ಒಂದೇ ಬಾಯಿಯಲ್ಲಿ ಎರಡು ಕೆಲಸ ಮಾಡಬಾರದು. ಫಾರಿನರ್ಸ್ ಒಬ್ಬರು ಸನ್ಯಾಸಿಯ ಹತ್ತಿರ ಬಂದಿದ್ದರಂತೆ, ಇಂಡಿಯಾಕ್ಕೆ ಹೋದರೆ ಬಹಳ ಸಂಸ್ಕೃತ, ಶಾಸ್ತ್ರವೆಲ್ಲಾ ಗೊತ್ತಾಗುತ್ತದೆ ಎಂದು ಬಂದಿದ್ದರು. ಅವರು ಒಂದು ಆಶ್ರಮಕ್ಕೆ ಹೋಗಿ ಕುಳಿತುಕೊಂಡಿದ್ದಾರೆ. ಹಿಮಾಲಯದ ರೀತಿ ಬಹಳ ಕೋಲ್ಡ್ ಇರುವ ಜಾಗಕ್ಕೆ ಬಂದಿದ್ದಾರೆ ಈ ದೇಶದಲ್ಲಿ ದೇವರ ಬಗ್ಗೆ ಅಪಾರ ವಿಶ್ವಾಸವಿದೆ, ನಾವು ಹೇಗಾದರೂ ಕೇಳಿಕೊಂಡು ನಮ್ಮ ದೇಶಕ್ಕೆ ಹೋಗೋಣವೆಂದು ಬಂದಿದ್ದಾರೆ. ಬಹಳ ಚಳಿಯಾಗಿದೆ. ಆವತ್ತು ಸ್ವಾಮೀಜಿಯ ಪಿ.ಎ ಕುಳಿತುಕೊಂಡಿದ್ದ, ಅವನು ಕೈಯನ್ನು ಒಟ್ಟಿಗೆ ಇಟ್ಟುಕೊಂಡು ಚಳಿ ಚಳಿ ಎಂದು ಉಜ್ಜಿಕೊಳ್ಳುತ್ತಿದ್ದ. ಈ ಫಾರಿನರ್ಸ್ ಆ ಸ್ವಾಮೀಜಿಯ ಪಿ.ಎ. ಗೆ ಏನು ಸಾರ್ ಮಾಡುತ್ತಿದ್ದೀರಿ ಎಂದು ಕೇಳಿದ? ಅದಕ್ಕೆ ಆ ಪಿ.ಎ. ಬಹಳ ಚಳಿಯಾಗುತ್ತಿದೆ ಹೀಟ್ ಮಾಡುತ್ತಿದ್ದೆ ಎಂದು ಮತ್ತೆ ಎರಡು ಕೈಯನ್ನು ಜೋಡಿಸಿ ಉಜ್ಜುತ್ತಿದ್ದ. ಇದಾದ ಹದಿನೈದು ಇಪ್ಪತ್ತು ನಿಮಿಷದ ನಂತರ ಸ್ವಾಮೀಜಿ ಕಡೆಯಿಂದ ಟೀ ಬಂತು. ಟೀ ಬಂದ ತಕ್ಷಣ ಇವನು ಪುನಃ ಮತ್ತೆ ಟೀ ಯನ್ನು ಉಗಿದ ಫಾರಿನರ್ಸ್ ಈಗ ಏನು ಮಾಡಿದಿರಿ ಎಂದು ಕೇಳಿದ. ಅದಕ್ಕೆ ಅವನು ಬಹಳ ಬಿಸಿಯಾಗಿದೆ ಅದಕ್ಕೋಸ್ಕರ ಹಾಗೆ ಮಾಡಿದೆ ಎಂದು. ಫಾರಿನರ್ಸ್‌ಗೆ ಭಯವಾಗಿ ಬಿಟ್ಟಿತ್ತು. ಅಯ್ಯೋ ಒಂದೇ ಬಾಯಿಯಲ್ಲಿ ಹೀಟನ್ನೂ ಮಾಡುತ್ತಾನೆ ಕೋಲ್ಡನ್ನೂ ಮಾಡುತ್ತಾನೆ ಎಂಥವರು ನೀವು ಎಂದು ಹೇಳುತ್ತಾನೆ.

(ನಗು)

ಈ ದೇಶದಲ್ಲಿ ಇಂಥದನ್ನೇನಾದರೂ ನಾನು ಕಲಿತುಕೊಂಡರೆ ನಮ್ಮ ಗತಿ ಇಷ್ಟೇ ಎಂದು ಹಾಗೆಯೇ ವಾಪಸ್ ಹೋದ. ಆ ರೀತಿ ತಾವು ಈ ಕಡೆ ಒಂದು ಆ ಕಡೆ ಒಂದು ಒಂದೇ ಬಾಯಿಯಲ್ಲಿ ಮಾತನಾಡಿದರೆ ಜನರಿಗೆ ಹೇಗೆ ಅನುಕೂಲವಾಗುತ್ತದೆ? ತಾವೇ ಹೇಳಿ?
So, my respectful Hon'ble Speaker Sir, ನಮಗೆ ಸರ್ಕಾರದ ಮೇಲೆ ಗೌರವ ಇದೆ. No doubt. ನನಗೂ ಗೌರವ ಇದೆ, ಮಾನ್ಯ ಹೆಗ್ಡೆಯವರಿಗೆ ಇದೆ. ಶ್ರೀಮಾನ್ ವಾಟಾಳ್ ನಾಗರಾಜ್, ಮಾನ್ಯ ರಮೇಶ್ ಕುಮಾರ್‌ರವರು, ಮಾನ್ಯ ಖರ್ಗೆ ಸಾಹೇಬರು, forme rChief Minister ಧರ್ಮಸಿಂಗ್‌ರವರು, ಇವರೆಲ್ಲರಿಗೂ ನಿಮ್ಮ ಮೇಲೆ ಪ್ರೀತಿ ಇದೆ. ಇದೇ ಮಾತನ್ನು ಮಾನ್ಯ Deputy speaker ರವರಿಗೆ ಹೇಳುವುದಕ್ಕಾಗುವುದಿಲ್ಲ, ಅವರು common man. ಎಲ್ಲರಿಗೂ ನಿಮ್ಮ ಮೇಲೆ ಪ್ರೀತಿ ಇದೆ, ನೀವು ಸರ್ಕಾರ ನಡೆಸಿ. ನಾವೆಲ್ಲಾ ಭಾಷಣ ಮಾಡುವಾಗ ಅದನ್ನು ಹೇಳುವುದಿಲ್ಲವೇ? ನಿಮ್ಮ ಮೇಲೆ ನಮಗೇನೂ ಕೋಪ ಇಲ್ಲ. ನಿಮ್ಮ administration ಮೇಲೆ ಕೋಪ ಇಲ್ಲ but ನೀವು ನಡೆದುಕೊಂಡಿರುವ ರೀತಿ ಏನಿದೆಯೋ, ಅದು ಸರಿಯಿಲ್ಲ. It is against the Constitution and Seccularism. ಈಗ ನಮಗೆ ನಿಮ್ಮ ಮೇಲಿರುವ ಕೋಪವೆಲ್ಲಾ ಹೋಗಿದೆ. ತಾವೆಲ್ಲಾ ಈಗ ಮಂತ್ರಿಗಳಾಗಿದ್ದೀರಿ. ನಾವು ಎಂ.ಎಲ್.ಎ.ಗಳಾಗಿಯೇ ಇದ್ದೇವೆ. ಸರಿ ಅದು ಇರಲಿ. Our Hon'ble Deputy CM has special interest in developing Shimoga and Shikaripura. ರಾಮನಗರವನ್ನೂ ಇಟ್ಟುಕೊಳ್ಳಿ. ಜೇವರ್ಗಿ ಬಗ್ಗೆ ಆಮೇಲೆ ಮಾತನಾಡೋಣ, ಈಗ ಬೇಡ ಇನ್ನೂ subjects ಇವೆ. ನಮ್ಮ ಸ್ಪೀಕರ್‌ರವರು ನಮಗೆ ಇನ್ನೂ 2–3 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಆಗಿನಿಂದ ಮೂರು ನಿಮಿಷದಲ್ಲಿ ಮುಗಿಸುತ್ತೇನೆ ಎಂದು ಹೇಳಿ, ಆಗಲೇ ಮೂವತ್ತು ನಿಮಿಷವಾಯಿತು.

ಶ್ರೀ ಎಸ್. ರಾಜೇಂದ್ರನ್ : ಈಗ ಸರ್ಕಾರದವರು ಬಜೆಟ್‌ನಲ್ಲಿ ಹೇಳಿದ್ದೆಲ್ಲವನ್ನೂ ಈಗಲೇ ಕೊಟ್ಟು ಬಿಡುತ್ತಾರಾ? ಬಜೆಟ್ ಮುಗಿದ ತಕ್ಷಣ ನಾಳೆಯೇ ಅದರ ಜಾರಿಗೆ ಶುರು ಮಾಡಿ ಬಿಡುತ್ತೀರಾ? ಬಜೆಟ್‌ನಲ್ಲಿ ಅನೌನ್ಸ್ ಮಾಡಿರುವಂತೆ ಸೈಕಲ್ ಅನ್ನು ಯಾವಾಗ ನೀವು ಕೊಡುತ್ತೀರಿ? ಅದನ್ನು ನೀವು next week ನಲ್ಲೇ ಕೊಟ್ಟುಬಿಡುತ್ತೀರಾ? ಇದರ ಬಗ್ಗೆ ನೀವು ಏನು ಹೇಳುತ್ತೀರಿ? ಹೆಣ್ಣು ಮಕ್ಕಳಿಗೆ ಬೈಸಿಕಲ್ ಕೊಡಿಸುವುದರ ಬಗ್ಗೆ ನಾವು ಕೇಳಿದರೆ, 'ಅದಕ್ಕೆ ಇನ್ನೂ order ಕೊಡಬೇಕು ಇರಪ್ಪ, ನಂತರ ಅದು ಬರಬೇಕು ಇರಪ್ಪ Estimate ಪಟ್ಟಿ ಮಾಡಬೇಕು, concerned Secretary out of station ಇದ್ದಾರೆ, ...' ಇತ್ಯಾದಿಯಾಗಿ ನೀವು ಹೇಳುತ್ತೀರಿ. ಇದೆಲ್ಲಾ ಮುಗಿಯುವುದಕ್ಕೆ ಆರು ತಿಂಗಳು ಆಗುತ್ತದೆ. ಆ ತರಹವೇ, ಇಲ್ಲಿ ಮೂರು ನಿಮಿಷ ಎಂದರೆ ಮೂವತ್ತು ನಿಮಿಷ, ಐದು ನಿಮಿಷ ಎಂದರೆ ಐವತ್ತು ನಿಮಿಷವಾಗುತ್ತದೆ. ಈ ಜಾಗವನ್ನೆಲ್ಲಾ develop ಮಾಡಬೇಕು ಎಂದು ನೀವು ಬಜೆಟ್‌ನಲ್ಲಿ ಕೊಟ್ಟಿದ್ದೀರಿ. Just deeply think. Developing is different, developed is different, not developing is different and destroying is different. KGF City is a destroying city. What interest

you have shown to develop that City? ತಮಗೆ ಗೊತ್ತಿದೆ. ಸುಮಾರು ಐದು ವರ್ಷ more than five thousand employees have been removed. The BGML Company has been closed. The City is destroying. ನಾನು ಇದರ ಬಗ್ಗೆ ಸುಮಾರು ಸಲ ಮಾತನಾಡಿದ್ದೇನೆ. It is a reserved Constituency area, more than one and half lakhs, thickest Scheduled Caste population area. Have you taken any interest to develop that City? ಅದನ್ನು ನಾನು develop ಮಾಡಬೇಕೆಂದರೆ, ನಾನು ಏನಾದರೂ ಗಲಾಟೆ ಮಾಡಿ ನಿಮ್ಮ ಜೊತೆಗೆ ಬಂದು ಸೇರಿಕೊಂಡು, ನೀವು ನನಗೆ ಉಪ ಮುಖ್ಯಮಂತ್ರಿ ಹುದ್ದೆ ಕೊಟ್ಟರೆ ಮಾತ್ರ ಅದನ್ನು develop ಮಾಡಬೇಕೇ? ನಾನು ಮಂತ್ರಿಯಾದ ಮೇಲೆ ಅದನ್ನು develop ಮಾಡುವುದೇ? That means, you have no broader mind. Which are the areas not developed, which are the areas destroying, Where we have to implement? Where we have to give the upliftment? ಆ ideaನೇ ಇಲ್ಲವೇ? ಹಾಗಾದರೆ you are not the Minister for a particular area. ನಾನು ಹೇಗೆ ಈ ರಾಜ್ಯದ ಮಂತ್ರಿಗಳಿಗೆ ಹೇಳುವುದು, ಕ್ಯಾಬಿನೆಟ್ ಮಂತ್ರಿಗಳಿಗೆ ಹೇಳುವುದು? you think over it. ಮಾನ್ಯ ಈಶ್ವರಪ್ಪನವರೆ, ತಾವು ಎಷ್ಟು ಸಲ ನಮಗೆ support ಮಾಡಿದ್ದೀರಿ? KGF ಬಗ್ಗೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರೂ ನಮಗೆ support ಮಾಡಿದ್ದಾರೆ. ತಾವು ನಮ್ಮದನ್ನೂ ಬಜೆಟಿನಲ್ಲಿ ಸೇರಿಸಬೇಕಿತ್ತಲ್ಲವೇ? KGFಗೆ ಒಂದು industry ಕೊಡಬೇಕು, ಅಲ್ಲಿ ಜನರೆಲ್ಲಾ ಸಾಯುತ್ತಿದ್ದಾರೆ, ಅಲ್ಲಿ ತುಂಬಾ ಜನರಿಗೆ ಕೆಲಸವಿಲ್ಲ, ಸುಮಾರು 10 ಸಾವಿರ ಜನ at 6O' Clock in the morning leave KGF for Bangalore at 9 O' clock. ನಿಮ್ಮ ಅಧಿಕಾರಿಗಳಿಗೆ ಕೇಳಿದರೆ, What can we do? ನಿಮ್ಮ ಸಿಟಿಯಲ್ಲಿ Infarcture is very very fine ಎಂದು style ಆಗಿ ಹೇಳುತ್ತಾರೆ. ಅವರು ಅಲ್ಲಿಗೆ ಬರುತ್ತಾರೆ. inspection ಮಾಡುತ್ತಾರೆ, very fine City, ಇಂತಹ City ಸಿಗುವುದೇ ಇಲ್ಲ. But What we should do? It is in central Government, ಅನ್ನುತ್ತಾರೆ. ಹೇಗೆ? Whether it is Central Government or State Government? you are the ಅಧಿಕಾರಿ of this Government. You should give suggestion ಎಂದರೆ, ನೀವು suggestion ಎಲ್ಲಾ ನಿಮ್ಮ areaಗೆ ತೆಗೆದುಕೊಂಡು ಹೋದರೆ, ನಮ್ಮಗಳ ಗತಿ ಏನಾಗಬೇಕು? Why you have not given importance to KGF? What is the reason? ಹಾಗಾದರೆ, Scheduled Caste ಜನರ ಮೇಲೆ ನಿಮಗೆ ಪ್ರೀತಿ ಇಲ್ಲವೆಂದು ಅರ್ಥವೇ? ಅವರು ಮೇಲೆ ಬರಬಾರದು ಎಂಬ idea ನಿಮ್ಮದೇ? ಪರಿಶಿಷ್ಟ ಜಾತಿಃ ಪರಿಶಿಷ್ಟ ಪಂಗಡದವರಿಗೆ ನಾವು development ಮಾಡುತ್ತೇವೆ, ಸಾಲಗಳನ್ನು ಕೊಡುತ್ತೇವೆ, ಎಂದು ಬರೇ ಭಾಷಣಗಳಲ್ಲಿ ಮಾತ್ರ ನೀವು ಅವರ ಬಗ್ಗೆ ಹೇಳುತ್ತೀರಾ? ಬರೀ 10 ಸಾವಿರ ರೂಪಾಯಿಗಳ loan ಒಂದು ಕುಟುಂಬಕ್ಕೆ ಕೊಟ್ಟು ಬಿಟ್ಟರೆ, ಅವನು ಮೇಲೆ ಬಂದು ಬಿಡುತ್ತಾನಾ? ಈಗಿನ ಕಾಲದಲ್ಲಿ ಅವನಿಗೆ 25 ಸಾವಿರ ರೂಪಾಯಿಗಳನ್ನು ಕೊಟ್ಟರೆ, ಒಂದು Cinema Theatre ನಲ್ಲಿ Cinema ಮಾಡಿಬಿಟ್ಟು, ಬಂದ ದುಡ್ಡು ಖರ್ಚಾಗಿ ಬಿಡುತ್ತದೆ. ಎಲ್ಲಿ ಅವನು develop

ಮಾಡಲಿಕ್ಕಾಗುತ್ತದೆ? What interest your Government has taken for the development of Kolar Gold Filed? You must tell while answering to the budget. KGFಗೆ ನಾವು industry ಕೊಡುತ್ತೇವೆ, Iron and Steel Industries ಕೊಡುತ್ತೇವೆ, Iron and sponge ಕೊಡುತ್ತೇವೆ ಎಂದು ಸುಮಾರು ಸಲ Industries Ministerಗಳು ಹೇಳಿದರು. ಮಾನ್ಯ ಚೆಲುವರಾಯಸ್ವಾಮಿಗಳೇ, ಆಗ ತಾವೂ ಇದ್ದಿರಿ. ನಿಮ್ಮ ಸರ್ಕಾರದ ಮೇಲೆ ನಾವು ಎಷ್ಟು ಗೌರವವಾಗಿ ಮಾತನಾಡುತ್ತಿದ್ದೇನೆ. ನಾನು ಆ ರೀತಿ ಮಾತನಾಡುತ್ತಿದ್ದೇನೆ. ತಾನೇ? ಯಾವುದರಲ್ಲಾದರೂ ಸೇರಿಸಿ ಸಾರ್, ನಾವು ಆಶ್ವಾಸನೆ ಕೊಟ್ಟಿದ್ದೇವೆ, ಅವತ್ತೂ ನಾನು ಮಂತ್ರಿಯಾಗಿದ್ದೆ ಇವತ್ತೂ ನಾನು ಮಂತ್ರಿಯಯಾಗಿದ್ದೇನೆ KGF ಬಗ್ಗೆ ಏನಾದರೂ ಒಂದು ಮಾಡೋಣ ಎಂದು ನೀವು ಹೇಳಿರಬೇಕಿತ್ತಲ್ಲವೇ? ಸುಮಾರು ಸಲ ಆಶ್ವಾಸನೆ ಕೊಟ್ಟರು. ಎಲ್ಲಾ ಬಾಯಿಯಲ್ಲಿ ಹೇಳುವುದಷ್ಟೆ. ಆ ರೀತಿ ಹೇಳಿದರೆ ಎಲ್ಲಾ sweet ಆಗಿ ಬಿಡುತ್ತದೆಯೇ? ಇದೊಳ್ಳೆ ಕಥೆಯಾಯಿತು. ನಾವು ಅಲ್ಲಾವುದ್ದೀನ್ ಅಲ್ಲ. ನಾವು ನಿಜವಾಗಲೂ ಸಮ್ಮಿಶ್ರ ಸರ್ಕಾರವಾಗಿದ್ದೇವೆ,ಖಂಡಿತವಾಗಿ ನಾವು ಮಾಡುತ್ತೇವೆ, What is there ಎಂದು ನೀವು ಹೇಳಬೇಕಾಗಿತ್ತು. ಹಿಂದೆ ಇದರ ಬಗ್ಗೆ ಶ್ರೀಮಾನ್ ಸಿಂಧ್ಯಾರವರೂ ಹೇಳಿದರು. "I assure, I promise, I will provide an Industry to the Kolar Gold Field. Not only that, I will give some textiles" ಎಂದು ಅವರು style ಆಗಿ ಹೇಳಿದ್ದರು. ಆದರೆ ಈ ಗ ಅಲ್ಲಿ ಏನಾಗಿದೆ? ಈ ಮಾನ್ಯ ಸಿಂಧ್ಯಾರವರು ಎಲ್ಲಿದ್ದಾರೋ ನಮಗೆ ಗೊತ್ತಿಲ್ಲ. ಅವರು ಎಲ್ಲಿಯಾದರೂ ಇರಲಿ. ಪಾಪ! ಅವರು ಒಳ್ಳೆಯ ಮನುಷ್ಯ. ಅವರು ನಮಗೋಸ್ಕರ atleast, he came to Delhi, met the Central Ministers and the central Ministers have also assured to do something for KGF in consultation with the State Government. ಈಗ ಶ್ರೀಮಾನ್ ಯಡಿಯುರಪ್ಪನವರು, Deputy Chief Minister cum Finance, ನಮಗೆ ಆಶ್ವಾಸನೆ ಕೊಡಬೇಕು. ತಾವು ನಿಜವಾಗಿಯೂ ನಮಗೆ ಹೇಳಬೇಕು, time limit ಕೊಡಬೇಕು, ನಮ್ಮ ಜನಕ್ಕೆ ತಾವು you must help us. ನೀವು ನಮಗೆ help ಮಾಡಿದರೆ, Yes ನಿಮಗೇನಾದರೂ ರಾಜ್ಯಸಭೆಗೆ ಓಟು–ಗೀಟು ಏನಾದರು ಬೇಕೆಂದರೆ ಈಗಲೇ ಹೇಳಿ ಬಿಡಿ, ನಮ್ಮ ಊರಿಗೆ ಏನು ಕೊಡುತ್ತೀರಿ ಎಂದು. ಏನಾದರೂ ಒಂದು ಇರಬೇಕು. ಆ ತರಹ ಏನೋ ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು. ಖಂಡಿತವಾಗಿಯೂ, ನಿಜವಾಗಿಯೂ ತಾವು ಸರ್ಕಾರದ ಪರವಾಗಿ ನಮ್ಮ KGFಗೆ ಏನಾದರೂ ಮಾಡಲೇಬೇಕು. BGML close ಮಾಡಿದ ಮೇಲೆ ಸುಮಾರು 160 open toilets have been closed. All the women, including men are standing outside. Social Welfare Minister ಜೊತೆಗೂ ನಾನು ಅದರ ಬಗ್ಗೆ ಮಾತನಾಡಿದ್ದೇನೆ. ಅವರು development ಮಾಡೋಣ ಎಂದು ಹೇಳಿದ್ದಾರೆ. ಅವರಿಗೆ ಐಡಿಯಾ ಬರುತ್ತದೆ. ಅವರ ಅಧಿಕಾರಿಗಳು ಏನು ಮಾಡುತ್ತಾರೆ. ಎಂದರೆ, ಅವರೇ ಯಾವುದಾದರು ಒಂದು ಲಾ ಬುಕ್ ಅನ್ನು ಹುಡುಕಿ ತೆಗೆದುಕೊಂಡು ಬರುತ್ತಾರೆ, Sri, this is not permitted to come up there. ಅವರಿಗೇನಾದರೂ ಬೇಕೇ. ಎಂದು ಕೇಳಿ ನೋಡಿ This is eligible ಎಂದು ಹೇಳುತ್ತಾರೆ. You must countrol the

Bureaucrats. Whatever they say, you should not listen. you are the Government. You are going to implement. Wrongfully or illegallyor malafidely, we are not doing it. We are doing for the people. ಆ ಗಟ್ಸ್ ಮಿನಿಸ್ಟರ್‌ಗೆ ಇರಬೇಕು. ಅದಿಲ್ಲವೆಂದರೆ, Secretary ಗಳು ಅಥವಾ Directros ಅನ್ನು ಕರೆದು, ಏನೋ ಪಾಪ! ರಾಜೇಂದ್ರನ್ ಕೇಳಿದ್ದಾರೆ, ಅದೇನಾದರೂ ಒಂದಿಷ್ಟು ಮಾಡ್ರಿ, ಆಗ ಅವರು ಸಾರ್, ಅದು ಕಾನೂನು ಪ್ರಕಾರ ನಮಗೆ ಬರುವುದಿಲ್ಲ ಇದು ಯಾರಿಗೆ ಬರುತ್ತದೆ?. ಎಂದರೆ ಅದು ಬೇರೆ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ ಅನ್ನುತ್ತಾರೆ ಹೋದರೆ, ಸಾರ್ ಅಲ್ಲಿಗೆ ಪರ್ಚೇಸ್‌ಗೇ ಅಲಾಟ್‌ಮೆಂಟೇ ಇಲ್ಲ. ನಾವು ಅದಕ್ಕೆ ಎಲ್ಲಿಗೆ ಹೋಗಬೇಕು ಎಂದರೆ, ಸಾರ್ ಅದು Planning Commissionನಲ್ಲಿ approve ಆಗಿ ಆಗಬೇಕು. ಅನ್ನುತ್ತಾರೆ ಕೊನೆಗೆ ಮಿನಿಸ್ಟರ್ ಏನು ಹೇಳುತ್ತಾರೆಂದರೆ , ರಾಜೇಂದ್ರನ್ we will see next time ಎಂದು ಹೇಳುತ್ತಾರೆ. ಮಂತ್ರಿಗಳು ಅಂದರೆ ಹೀಗೆಯೇ? You should call them by finger tips and tell them, Why not? tell them to do it you should tell that I am the Minister, I am the signing authority. ಅಂತ Yes ಒಂದು example ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ double road ವೊಂದನ್ನು ಮಾಡುವಂತಹ ಸಂದರ್ಭದಲ್ಲಿ compound ಅನ್ನು ತೆಗೆಯಬೇಕು ಎಂದು PWD SR rate Rs. 92 lakhs ಎಂದು ಕೊಟ್ಟಿದ್ದಾರೆ. ಅಷ್ಟು ಹಣ ನಮ್ಮ ಸರ್ಕಾರ ಕೊಡುವುದಿಲ್ಲ ಸಾರ್. ಮುನಿಸಿಪಾಲಿಟಿಗೆ ಕೇಳಿದ್ದೇವೆ. ಅವರು 85 ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ ಅಂದರೆ ಯಾವ ಕಾಲದಲ್ಲಿ ಇವರು ದುಡ್ಡು ಕೊಡುವುದು? ಯಾವಾಗ ರೋಡ್ ಆಗುವುದು? Double Road cost ಎಷ್ಟು? 50 lakhs. Compound ತೆಗೆದು foot path ಹಾಕುವುದಕ್ಕೆ ಇಷ್ಟು ಅಮೌಂಟ್ ಹೇಳುತ್ತಿದ್ದಾರೆ. ಆರು ತಿಂಗಳು ಆಯಿತು. ಕೊನೆಗೆ ನಾನು DC ಹತ್ತಿರ ಹೋಗಿ ಮಾತನಾಡಿ MLA fund ನಲ್ಲಿ Rs. 12 lakhs ವೆಚ್ಚದಲ್ಲಿ ನಾನು ಮಾಡಿಸುತ್ತೇನೆ, ತಾವು ಅದನ್ನು approve ಮಾಡಿಕೊಡಿ piece work ಆದರೂ ಕೊಡಿ ಎಂದೆ. Yes, Yes, that is fine,ಎಂದು ಹೇಳಿ ಅವರು sign ಮಾಡಿದರು, ಈಗ ಅದು approve ಆಗಿ ಬಂದಿದೆ. 12 ಲಕ್ಷ ರೂಪಾಯಿಗಳಲ್ಲಿ ಆ ಕಾಂಪೌಂಡ್ ಅನ್ನು ಮಾಡಿಸಿದ್ದೇನೆ. Decision ನಾನೇ ತೆಗೆದುಕೊಂಡಿರುವುದು, ಸರ್ಕಾರದ ದುಡ್ಡು ನಮಗೆ ಕೊಟ್ಟಿದ್ದಾರೆ, ಜನರಿಗೋಸ್ಕರ ನಾನು Rs 12 lakhs ನಲ್ಲಿ ಮಾಡಿದೆ. ಇವರ ಮಾತನ್ನು ನಾನು ಕೇಳಿಕೊಂಡು ಮಿನಿಸ್ಟರ್‌ಗಳ ಹತ್ತಿರ ಬಂದಿದ್ದರೆ,ನನ್ನ ಗತಿ ಏನಾಗುತ್ತಿತ್ತು?. ಇನ್ನೊಂದು ಚುನಾವಣೆಯಾಗಿ, again ಶ್ರೀಮಾನ್ ಖರ್ಗೆಯವರೋ, ಮಾನ್ಯ ಧರ್ಮಸಿಂಗ್‌ರವರೋ Chief Minnister ಆದ ಮೇಲೆ double road ಆಗುತ್ತಿತ್ತು. KGF ಇವತ್ತು ಅಂತಹ ಪರಿಸ್ಥಿತಿಯಲ್ಲಿದೆ.

ಶ್ರೀ ಎನ್.ಚೆಲುವರಾಯ ಸ್ವಾಮಿ : ಮತ್ತೆ ಅವರೇ ಬರುತ್ತಾರೆ ಎಂದು ನೀವು ಹೇಗೆ ಹೇಳುತ್ತೀರಿ?

ಶ್ರೀ ಎಸ್. ರಾಜೇಂದ್ರನ್ : ಈಗಲ್ಲ, ಇನ್ನೂ ಮೂರು ವರ್ಷಗಳಾದ ನಂತರ ನಡೆಯುವ ಚುನಾವಣೆ ಬಗ್ಗೆ ನಾನು ಹೇಳಿದೆ. ಆಯಿತು. ಮತ್ತೆ ನೀವೇ ಅಧಿಕಾರಕ್ಕೆ ಬರುತ್ತೀರಿ ಎಂದಿಟ್ಟುಕೊಳ್ಳಿ. ನೀವೆ next Chief Minister ಆಗಬಹುದು. Yes, you are eligible. Why not? ನೀವು

ಎರಡನೇ ಸಲ ಮಂತ್ರಿಗಳಾಗಿ ಬಂದಿದ್ದೀರಿ, Chief Minister ಆಗಿ ಬನ್ನಿ. But, ಯಡಿಯೂರಪ್ಪನವರು ನಿಮಗೆ ಬಿಡಬೇಕಲ್ಲವೇ? 20 ತಿಂಗಳ ಮೇಲೆ ಅವರು ನಿಮಗೆ ಬಿಡುವುದಿಲ್ಲವಲ್ಲಾ? ಅವರು ಈಗಾಗಲೇ ತಯಾರಾಗಿದ್ದಾರೆ. ಮಾನ್ಯ ಈಶ್ವರಪ್ಪನವರು ಬಿಡುತ್ತಾರೋ ಎಂದು ಕೇಳಿ ನೋಡಿ. ಇಲ್ಲಪ್ಪ, ಇವರೇ ಕಂಟಿನ್ಯೂ ಆಗಲಿ ಎಂದು ಹೌಸ್‌ನಲ್ಲಿ ಮಾನ್ಯ ಈಶ್ವರಪ್ಪನವರು ಹೇಳುತ್ತಾರೆಯೇ? ....

ಶ್ರೀ ಕೆ.ಎಸ್. ಈಶ್ವರಪ್ಪ : ಖಂಡಿತವಾಗಿಯೂ ನಾನು ಹಿರಿಯರಿಗೋಸ್ಕರ ಬಿಡುತ್ತೇನೆ, ನಾನು ಯಾವ ಕಾರಣಕ್ಕೂ ಮುಖ್ಯಮಂತ್ರಿಯಾಗುವುದಿಲ್ಲ. ನನಗಿಂತ ದೊಡ್ಡವರಿದ್ದಾರೆ, ದೊಡ್ಡವರು ಮುಖ್ಯಮಂತ್ರಿ ಆಗುತ್ತಾರೆ.

ಶ್ರೀ ಎಸ್. ರಾಜೇಂದ್ರನ್ : 20 ತಿಂಗಳಾದ ಮೇಲೆ ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆಗಲೂ ಅದೇ.

ಶ್ರೀ ಎಸ್. ರಾಜೇಂದ್ರನ್: ನಾನು ಹೇಳಿದ್ದು, ಎಂದರೆ ....

ಶ್ರೀ ಕೆ.ಎಸ್. ಈಶ್ವರಪ್ಪ : ಸುಮ್ಮ ಸುಮ್ಮನೆ ಕೆಟ್ಟದ್ದನ್ನೆ ಏಕೆ ಯೋಚನೆ ಮಾಡುತ್ತೀರಿ? ಒಳ್ಳೆಯ ಯೋಚನೆ ಮಾಡಿ.

ಶ್ರೀ ಎಸ್. ರಾಜೇಂದ್ರನ್: ಏನು ಕೆಟ್ಟದ್ದನ್ನು ನಾನು ಯೋಚನೆ ಮಾಡಿದೆ? ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವುದು ಕೆಟ್ಟದ್ದಾ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಬಿಟ್ಟ ಕೊಡದಿದ್ದರೆ ಹೇಗೆ ಎನ್ನುವಂತಿಲ್ಲ. It is a gentlemen's agreement.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವುದು ಕೆಟ್ಟದ್ದಾ?

ಶ್ರೀ ಕೆ.ಎಸ್. ಈಶ್ವರಪ್ಪ : ಬಿಟ್ಟು ಕೊಡದಿದ್ದರೆ ಹೇಗೆ ಎಂಬ ಪ್ರಶ್ನೆ ಬಂತಲ್ಲಾ, ಅದಕ್ಕೆ ನಾನು ಆ ರೀತಿ ಹೇಳಿದೆ. ನೀವು ಈ ರೀತಿ ದಾರಿ ತಪ್ಪಿಸಿ ಮಾತನಾಡುವುದಕ್ಕೆ ಹೋಗಬೇಡಿ. ನೀವು ಹೇಳುವುದು ಕೇಳುವುದಕ್ಕೆ ಚೆನ್ನಾಗಿದೆ.

ಶ್ರೀ ಎನ್. ಚೆಲುವಾರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಸದಸ್ಯರು ಹೇಳಿದ್ದು ಮುಂದೆ 40 ತಿಂಗಳುಗಳಾದ ಮೇಲೆ ಎಲೆಕ್ಷನ್ ಬಂದಾಗ ಸಾಹೇಬರು ಆಗುತ್ತಾರೆಂದು ಹೇಳಿದರು. ಎಲೆಕ್ಷನ್ ಆದಮೇಲೆ ಡಿಸ್‌ಛಾರ್ಜ್ ಮಾಡಿ ಬಿಟ್ಟಿರಾ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : 40 ತಿಂಗಳ ಕಾಲ ಇರುತ್ತೇವೆಂದು ಆತ್ಮ ಶಕ್ತಿ ಇದೆಯಾ?

ಶ್ರೀ ಎನ್. ಚೆಲುವರಾಯಸ್ವಾಮಿ: ಖಂಡಿತ ಆತ್ಮ ಶಕ್ತಿ ಇದೆ. ನಾನವು ನೀವೂ ಎಲ್ಲಾ ಇಲ್ಲಿಯೇ ಇರುತ್ತೇವೆ. ಆಗ ನೋಡೋಣ. ಇದೇ ಅ ಧ್ಯಕ್ಷರು ಇರುತ್ತಾರೆ. ನಾವೆಲ್ಲಾ ಇರುತ್ತೇವೆ, ನೋಡೋಣ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರೇ, ಆತ್ಮ ಶಕ್ತಿ ಎಷ್ಟರ ಮಟ್ಟಿಗೆ ಇದೆ ಎನ್ನುವುದನ್ನು 40 ತಿಂಗಳು ಅದೇ ಜಾಗದಲ್ಲಿ ಕುಳಿತು ನೀವೇ ನೋಡುತ್ತಿರುತ್ತೀರಿ. ಬರೀ 40 ತಿಂಗಳು ಅಲ್ಲ, 40 ತಿಂಗಳು ಆದ ಮೇಲೆ ಕೂಡ ನೀವು ಅಲ್ಲಿಯೇ ಕೂತಿರುತ್ತೀರಿ ನಾವು

ಇಲ್ಲಿ ಕೂತಿರುತ್ತೀರಿ ನಾವು ಇಲ್ಲಿ ಕೂತಿರುತ್ತೇವೆ ನೋಡುತ್ತಿರಿ. ಅಲ್ಲಿ ಇಲ್ಲಿ ಎನ್ನೂ ಇಲ್ಲ ಪಕ್ಕ ಇಲ್ಲಿಯೇ ನಾವು. ಅದರಲ್ಲಿ ಏನೂ ಅನುಮಾನ ಇಲ್ಲ. ಆತ್ಮ ಶಕ್ತಿ ಎಷ್ಟು ಇದೆ ಎಂದು ಕೇಳಿದಿರಲ್ಲಾ, ಅದಕ್ಕೆ ನಾನು ವಾಟಾಳ್ ನಾಗರಾಜ್ ಖಂಡಿತ ಆಗುವುದಿಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಆರು ತಿಂಗಳು ಇರಬಹುದು ಮಾನ್ಯ ಅಧ್ಯಕ್ಷರೆ 12 ಜನ ಜ್ಯೋತಿಷ್ಯರು ಈಗಾಗಲೇ ಹೇಳಿದ್ದಾರೆ, ಇವರು ಆರೆ, ತಿಂಗಳು ಇರುವುದು ಎಂದು ಹೇಳಿದ್ದು ನಮಗೆ ಎಷ್ಟು ಆತ್ಮ ಶಕ್ತಿ ಇದೆ. ಎಂದು.

ಅಧ್ಯಕ್ಷರು : ನೀವು ಅಡ್ಡ ಮಾತನಾಡಬೇಡಿ. ಈ ಅಡ್ಡ ಮಾತುಗಳಾಗಿ ನೆನ್ನೆ ಎಲ್ಲಾ ಆಯಿತು. ಆದ್ದರಿಂದ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ನಾನು ತಮಾಷೆಗೆ ಹೇಳಿದ್ದು. ನಮಗೇನಿಲ್ಲ, ನೀವು ಅಲ್ಲಿಯೇ ಕುಳಿತುಕೊಂಡಿರಬೇಕು. ನಾವು ಇಲ್ಲೇ ಓಡಾಡಿಕೊಂಡಿರುವುದು ಎಂದು ಹೇಳಿದರೆ ಏನಾಗುತದೆ ಗೊತ್ತಾ, ಫುಟ್ ಬಾಲ್ ತರಹ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ರಾಜೇಂದ್ರನ್‌ರವರೇ, ಹಿರಿಯ ಸದಸ್ಯರು ಆತ್ಮ ವಿಶ್ವಾಸ ನಿಮಗೆ ಇದೆಯಾ ಎನ್ನುವ ಮಾತನ್ನು ಹೇಳಿದರು. ಅದಕ್ಕೋಸ್ಕರ ಹೇಳಿದೆ, ಅಷ್ಟೇ ಗಟ್ಟಿಯಾಗಿ ಆತ್ಮ ವಿಶ್ವಾಸದಿಂದ ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ನಾವು ಇಲ್ಲಿಯೇ ಇರುತ್ತೇವೆ. ಬೇರೆ ಪ್ರಶ್ನೆ ಏನೂ ಇಲ್ಲ.

ಡಾಃ ಎಂ.ಸಿ. ಸುಧಾಕರ : ಆದರೆ ಜನ ನಿಮಗೆ ಬೆಂಬಲ ಕೊಡುವುದಿಲ್ಲ. ಜನ ನಿಮ್ಮ ಜೊತೆ ಖಂಡಿತ ಬರುವುದಿಲ್ಲ ನೋಡುತ್ತಿರಿ.

ಅಧ್ಯಕ್ಷರು: ಯಾರ್ಯಾರಿಗೆ ಏನೇನು, ಯಾವ ಆತ್ಮ ಶಕ್ತಿ ಇದೆ ಎಂದು ಜನ ನೋಡುತ್ತಾರೆ. ಇಲ್ಲಿ ಮಾತನಾಡುವುದಕ್ಕೆ ಬಿಡಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಫುಟ್‌ಬಾಲ್ ಆಡುವ ಟೈಮ್‌ನಲ್ಲಿ ಇಲ್ಲಿ ಅಲ್ಲಿ ಹೋಗುವವರು ಪ್ಲೇಯರ್. ಒಂದೇ ಜಾಗದಲ್ಲಿ ನಿಂತುಕೊಂಡಿರುವವರು ಗೋಲ್ ಕೀಪರ್. ನಾವು ಗೋಲ್ ಕೀಪರ್ ತರಹ. ನಿಮಗೆ ಬೇಡವೆಂದರೆ ಬಾಲ್ ಒಳಗಡೆ ಬಿಟ್ಟು ಬಿಡುವುದು, ಸೋತುಬಿಡುತ್ತಾರೆ. ಏನೂ ತಪ್ಪಿಲ್ಲ. ಬೇಕಾದರೆ ಇಟ್ಟುಕೊಳ್ಳಿ, ಗೋಲ್ ಕೀಪರ್ ತರಹ. ಅದನ್ನೇ ಅವರು ಹೇಳಿದ್ದು. ನೀವು ಅಲ್ಲಿಯೇ ಇರಬೇಕೆಂದು. ನೀವು ಇಲ್ಲಿರುವುದಕ್ಕೋಸ್ಕರ ಇವತ್ತು ಅವರುಗಳೆಲ್ಲಾ ಮಂತ್ರಿಗಳಾಗಿದ್ದರೆ. yes becouse go are seniar mast man ನೀವು ಇವರ ಪರ ಆದರೂ ಮಾತನಾಡಿ ಅವರ ಪರವಾದರೂ ಮಾತನಾಡಿ, ಸತ್ಯನೂ ಮಾತನಾಡುತ್ತೀರಿ, ಅಸತ್ಯನೂ ಮಾತನಾಡುತ್ತೀರಿ. .....

ಶ್ರೀ ವಾಟಾಳ್ ನಾಗರಾಜ್ : ಬಹಳ ಅಪಾಯಕಾರಿಯಾದ ಮಾತನ್ನು ಹೇಳಿದ್ದಾರೆ, ದಯಮಾಡಿ ಅದು ಎಂದೆಂದಿಗೂ ನಾವು ಅಸತ್ಯ ಮಾತನಾಡತಕ್ಕಂತಹ ಪ್ರಶ್ನೆ ಇಲ್ಲವೇ ಇಲ್ಲ, ಬಹುಶಃ ಅಸತ್ಯ ಮಾತನಾಡುತ್ತಾರೆ ಎಂದು ಇವರು ಹೇಳಿದರೆ, ಅವರು ಅಸತ್ಯದಲ್ಲಿ ಬಹಳ ಪ್ರವೀಣರು ಎಂದು ಇವರು ನಾನು ಹೇಳಬೇಕಾಗುತ್ತದೆ. ಖಂಡಿತ ಆ ರೀತಿ ಹೇಳಬಾರದು. ನಮ್ಮ ರಾಜೇಂದ್ರನ್‌ರವರ ಬಗ್ಗೆ ನನಗೆ ಬಹಳ ಪ್ರೀತಿ ಇದೆ. ಅವರು ಮಾತನಾಡುವ ಧಾಟಿಯಲ್ಲಿ ಸತ್ಯನೂ ಹೇಳುತ್ತೀರಿ, ಅಸತ್ಯನೂ ಹೇಳುತ್ತೀರಿ ಎನ್ನತಕ್ಕಂತಹ ಮಾತು ಏನಿದೆ. ಅದು ಪಾಪ ಅವರಿಗೆ ಅರ್ಥ ಗೊತ್ತಿಲ್ಲದೆ, ಹೇಳಿರುವ ಮಾತು. ಪ್ರಾಮಾಣಿಕವಾಗಿ ನನ್ನ ಪಕ್ಕದಲ್ಲಿ ಕುಳಿತು, ಅವರು ಯಾವತ್ತೂ ಇಂಗ್ಲೀಷ್‌ನಲ್ಲಿ ಮಾತನಾಡತಕ್ಕಂತಹವರು, ಕನ್ನಡದ ಬಗ್ಗೆ ಇಷ್ಟು ಅಭಿವೃದ್ಧಿಯಾಗಿ ಮಾತನಾಡುತ್ತಿದ್ದಾರೆ, ಮಾತನಾಡುವ

ಧಾಟಿಯಲ್ಲಿ ಯಾವ ಅರ್ಥ ಏನು ಎಂದು ಅವರಿಗೆ ಗೊತ್ತಿಲ್ಲ. ಅಷ್ಟೇ ಹೊರತು ನೂರಕ್ಕೆ ನೂರು ಸತ್ಯವಂತ ಎನ್ನುವುದನ್ನು ಅವರು ತಿಳಿದುಕೊಂಡಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ನಿಜ ಏತಕ್ಕೆಂದರೆ, ಅದು ಸುಳ್ಳು ಎನ್ನುವ ಪದ ನನಗೆ ಗೊತ್ತಿಲ್ಲ. ಮಾನ್ಯ ಸಿದ್ದರಾಮಯ್ಯನವರು ನನಗೆ ಜ್ಞಾಪಕ ಬಂದರು.ಕವಿಗಳು ಹೇಳುತ್ತಾರೆ 'ಬಸ್' ಗೆ ಬಸ್ಸು ಎಂದು ಒಂದೊಂದು ಪದ ಇಂಗ್ಲೀಷ್‌ನಲ್ಲಿ ಹೇಳಿದರೆ ಅದು ಕನ್ನಡದಲ್ಲಿಯೂ ಇರುತ್ತದೆ. ಆ ತರಹ ಸತ್ಯ ಎಂದು ಹೇಳಿದರೆ ಇಮ್ಮೀಡಿಯಾಟ್ಟಾಗಿ ಅಸತ್ಯ ಎಂದು ಬರುತ್ತದೆ. ಆ ಪದ ಪಾಪ ಅವರು ನಿಜ ಹೇಳುತ್ತಾರೆ, ಸುಳ್ಳು ಹೇಳುವುದಿಲ್ಲ ಅಸತ್ಯ ಎಂದರೆ ಸುಳ್ಳಾ ಸರ್.....

ಶ್ರೀ ವಾಟಾಳ್ ನಾಗರಾಜ್ : ಅದು ಅವರಿಗೆ ಅರ್ಥವಾಗುತ್ತಿಲ್ಲ. ಪ್ರಾಮಾಣಿಕವಾಗಿ ಇದು ಹಾಸ್ಯದ ರೂಪವಲ್ಲ ಖಂಡಿತ ರಾಜೇಂದ್ರನ್‌ಗೆ ಪಾಪ ಅವರಿಗೆ ಅರ್ಥವಾಗುತ್ತಿಲ್ಲ. ಚೆನ್ನಾಗಿ ಮಾತನಾಡುತ್ತಾರೆ, ಅದೂ ಕನ್ನಡವನ್ನು ಇಷ್ಟು ಚೆನ್ನಾಗಿ ಮಾತನಾಡಿ ನಮ್ಮೆಲ್ಲರನ್ನೂ ರಂಜಿಸಿ ಹಾಸ್ಯವಾಗಿ ಮಾತನಾಡುವುದನ್ನು ನಾನು ಸಂತೋಷ ಪಡುತ್ತೇನೆ. ಮಾತಿನ ಧಾಟಿಯಲ್ಲಿ ಆ ಮಾತನ್ನು ಆಡಿದ್ದಾರೆ. ಅಷ್ಟೇ ಹೊರತು, ಅವರು ಎಂದೂ ನನ್ನ ಬಗ್ಗೆ ಯಾಗಲಿ, ಯಾರ ಬಗ್ಗೆಯಾಗಲಿ ಅವರು ಮನಸ್ಸು ನೋಯಿಸುವುದಕ್ಕೆ ಹೋಗುವುದಿಲ್ಲ. ಭಾಷೆ ವ್ಯತ್ಯಾಸ ಅಷ್ಟೆ.

ಶ್ರೀ ಎಸ್. ರಾಜೇಂದ್ರನ್ : ನಾನು ಈಗ ಹೆಗಡೆಯವರಿಗೆ ಕೇಳಿದೆ, ಆ ತರಹ ಇದ್ದರೆ I will take it back. – ಆ ತರಹ ನಿಮಗೆ ಹೇಳಬಾರದು ನಾವು. Because, for both sides you are speaking good always.

ಶ್ರೀ ವಾಟಾಳ್ ನಾಗರಾಜ್ : ಅವರು ಭಾಷಣದ ಬಗ್ಗೆ ನಾವು ಪ್ರಾಮಾಣಿಕವಾಗಿ ಹೇಳೋಣ. ಅವರು ಭಾಷೆ ಉಪಯೋಗಿಸುವಾಗ ಒಂದೊಂದು ಸಾರಿ ತಪ್ಪಾಗುತ್ತದೆ. ಪದ ತಪ್ಪಾಗುತ್ತದೆ, ನಾವೇ ಬೇರೆ ಭಾಷೆ ಅರ್ಧಂಬರ್ಧ ಕಲಿತಾಗ ಏನೋ ಮಾತನಾಡುವುದಕ್ಕೆ ಹೋಗಿ ಎಲ್ಲಿಯೂ ತಲುಪುತ್ತೇವೆ. ವ್ಯಾಕರಣ ಗೊತ್ತಿರುವುದಿಲ್ಲ, ಕಾಗುಣಿತ ಗೊತ್ತಿರುವುದಿಲ್ಲ, ಆದ್ದರಿಂದ ಇಷ್ಟು ಸ್ಪಷ್ಟವಾಗಿ ಕನ್ನಡ ಮಾತನಾಡುತ್ತಾರೆಂದು ನಾವು ಸಂತೋಷ ಪಡೋಣ. ಅವರು ಮಾತನಾಡುವ ಸಮಯದಲ್ಲಿ ಯಾವತ್ತೂ ಎಂದೂ ಅವರು ನನ್ನ ಬಗ್ಗೆ ಅಂತೂ ಮಾತನಾಡುವುಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಸ್. ರಾಜೇಂದ್ರನ್ : ಅದು ಸರಿ No doubt. ನಾವು ಯಾವಾಗಲೂ ಮಾತನಾಡುವುದಿಲ್ಲ. ನಿಜವಾಗಿಯೂ ತಾವು ನಮ್ಮ ಗುರುಗಳ ತರಹ you have enhanced old Age Pension to Rs. 200/-. 150 ರೂಪಾಯಿ ಇದ್ದುದ್ದು 200 ರೂಪಾಯಿ ಮಾಡಿದ್ದೀರಿ. ಅದನ್ನು 500 ರೂಪಾಯಿ ಮಾಡಿದ್ದರೆ ಸಂತೋಷವಾಗುತ್ತಿತ್ತು. ಏಕೆಂದರೆ 200 ರೂಪಾಯಿ ಇಟ್ಟುಕೊಂಡು ಏನು ಮಾಡುತ್ತಾರೆ ತಾವೇ ಹೇಳಿ. 200 ರೂಪಾಯಿಗಳಲ್ಲಿ ಅವರು ಏನು ಮಾಡುವುದಕ್ಕೆ ಆಗುತ್ತದೆ? ಈಗ ಬಹಳ ಕಷ್ಟ ಕಾಲ ಇದೆ. 100 ರೂಪಾಯಿ ಇದ್ದುದ್ದು ಸರಿ ಇಲ್ಲ, 200 ರೂಪಾಯಿ ಕೊಟ್ಟಿದ್ದೀರಿ ಸಂತೋಷ ಎಂದು ಹೇಳಿದ್ದೇನೆ. 100 ರೂಪಾಯಿಯಲ್ಲಿ ಏನು ಮಾಡುತ್ತಿದ್ದರು ಎಂದರೆ ನಿದ್ದೆ ಮಾಡಿಕೊಂಡಿದ್ದರು. 200 ರೂಪಾಯಿ ಯಲ್ಲಿ ಏನು ಎದ್ದು ನಿಂತುಕೊಳ್ಳಬೇಕಾ? ನೀವೇ ಮಹಾರಾಜರು, ನೀವು ಮಾಡಿದ್ದೇ ಸರಿ ನಮಸ್ಕಾರ ಹೇಳಿಕೊಂಡು ಕೂರಲಾ? ಧನ್ಯವಾದ ಹೇಳಿದ್ದೇನೆ. 200 ರೂಪಾಯಿ ಮಾಡಿದ್ದೀರಿ, ಅದನ್ನು 500 ರೂಪಾಯಿ ಮಾಡಿ ಎಂದು ಹೇಳಿದೆ. ಅದು ಒಳ್ಳೆಯದು.

ಈಗ ಏನಾಗಿದೆ ಅಂದರೆ ಪೋಸ್ಟ್ ಆಫೀಸ್ ಬ್ಯಾಂಕ್‌ಗಳಿಗೆ ಮೂರು ತಿಂಗಳುಗಳ ನಂತರ ಹೋಗಿ ಚೆಕ್ ತೆಗೆದು ಕೊಳ್ಳಬೇಕು. Once in three months.ಅಲ್ಲಿಯವರೆಗೆ ಅವರು ಏನು ಮಾಡಿಕೊಂಡಿರಬೇಕು? ಶಾಸಕರೆಲ್ಲಾ ಆರು ತಿಳಗಳಿಗೊಂದು ಸಾರಿ ಹೋಗಿ ಸಂಬಳ ತೆಗೆದುಕೊಳ್ಳ ಬೇಕೆಂದು ಬಜೆಟ್‌ನಲ್ಲಿ ಸೇರಿಸಿ ಬಿಡಿ. ಬಡವರು ಮೂರು ತಿಂಗಳಿಗೊಂದು ಸಾರಿ ದುಡ್ಡು ತೆಗೆದುಕೊಳ್ಳಿ ಎಂದು ಹೇಳುವವರು, ಶಾಸಕರು, ಮಂತ್ರಿಗಳು ಒಂದು ವರ್ಷಕ್ಕೊಮ್ಮೆ ಹೋಗಿ ಸಂಬಳ ತೆಗೆದುಕೊಳ್ಳಬೇಕೆಂದು ಬರೆದು ಬಿಡಿ. ನಮಗೇ ಸಾಧ್ಯವಾಗುವುದಿಲ್ಲ ಎಂದರೆ, ಆ ಬಡವರು ಏನು ಮಾಡುವುದು? ಕೊನೇ ಪಕ್ಷ ಕೆರೊಸಿನ್ ಎಂಟು ಲೀಟರೋ, 10 ಲೀಟರೋ ಕೊಡುತ್ತಾರೆ. ಅದನ್ನು ಪರ್ಚೇಸ್ ಮಾಡುವುದಕ್ಕೆ ಅವನಿಗೆ 100 ರೂಪಾಯಿ ಇರಬೇಕು. ಉಳಿದ್ದಿದ್ದರಲ್ಲಿ ರವೆ, ಗೋಧಿ ಏನಾದರೂ ಪರ್ಚೇಸ್ ಮಾಡಿ, ಬಟ್ಟೆ ಇಲ್ಲದಿದ್ದರೂ ಅವರು ತಿಂದುಕೊಂಡು ಮನೆಯಲ್ಲಿ ಇರಬಹುದು. ಮೂರು ತಿಂಗಳಿಗೊಂದು ಸಾರಿ ದುಡ್ಡು ತೆಗೆದುಕೊಳ್ಳುವುದು ಎಂಧರೆ ಅವನು ಹೇಗೆ ಮೇಲೆ ಬರುವುದು? ಏತಕ್ಕೆ ಅದನ್ನು ಮಾಡಿದಿರಿ, What is the reason for not giving every month? what is wrong in that?

ತಾವು ಸ್ವಲ್ಪ ಚಿಂತನೆ ಮಾಡಿ ಸಾಕು. ನಾವು ಭಾಷಣ ಮಾಡುವುದು ವಿರೋಧವಾಗಿ ಅಥವಾ ಪರವಾಗಿ ಮಾಡುವುದಿಲ್ಲ. It is a common thinking. ಅದು ಯಾವ ರೀತಿಯಲ್ಲಿ ನೀವು ಥಿಂಕ್ ಮಾಡಿದಿರಿ ನನಗೆ ಅರ್ಥವಾಗಿಲ್ಲ. ಆದರೆ ನನ್ನ ಥಿಂಕಿಂಗ್ ಏನಿದೆ, ನೀವು ಸ್ವಲ್ಪ ಅಡಿಷನಲ್ಲಾಗಿ ಸೇರಿಸಿಕೊಂಡು ಯಾವ ರೀತಿಯಲ್ಲಿ ಅವರಿಗೆ ಸಹಾಯ ಮಾಡಬಹುದು ಎಂದು ಹೇಳಿ. ಬಿಪಿಎಲ್ ಫ್ಯಾಮಿಲಿ ಹೆಣ್ಣು ಮಕ್ಕಳಿಗೆ 10 ಸಾವಿರ ಕೊಡುತ್ತೇವೆ. ಎಂದು ಹೇಳಿದ್ದೀರಿ. ಹುಟ್ಟಿದ ತಕ್ಷಣ ಕೊಡುತ್ತೀರಾ? 18 ವರ್ಷಗಳಾದ ಮೇಲೆ ಅವರು ಅದನ್ನು ತೆಗೆದುಕೊಳ್ಳಬೇಕಾ? ನಾಲ್ಕು ವರ್ಷದಲ್ಲಿ ಸತ್ತು ಹೋದರೆ ಅದನ್ನು ಏನು ಮಾಡಬೇಕು? ಇಷ್ಟು ಎಂದು ಡಿವೈಡ್ ಮಾಡಿ ಕೊಡುತ್ತೀರಾ ನೀವು ಅದರ ಬಗ್ಗೆ ಏನೂ ಹೇಳಲಿಲ್ಲ. 16 ವರ್ಷಗಳಲ್ಲಿ ಸತ್ತು ಹೋಗುತ್ತಾರೆ. ...

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ರಾಜೇಂದ್ರನ್‌ಜಿ. ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿದೆ, ಗಂಡು ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ ಎನ್ನುವುದಕ್ಕೆ ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಡತಕ್ಕಂತಹ ಒಂದು ಯೋಜನೆ ಎಂದು ಹೇಳಿ; ಬಿಪಿಎಲ್ ಕಾರ್ಡ್ ಹೊಂದಿರುವಂತಹ ಕುಟುಂಬಗಳಲ್ಲಿ ಹುಟ್ಟುವಂತಹ ಹೆಣ್ಣು ಮಗಳಿಗೆ 10, 00 ರೂಪಾಯಿ ಡೆಪಾಸಿಟ್ ಕೊಡುತ್ತಾರೆ. 4 ವರ್ಷ 5 ವರ್ಷಅಲ್ಲ, 18ವರ್ಷದವರೆಗೆ ಡಿಪಾಸಿಟ್ 18ವರ್ಷಗಳು ಆದಮೇಲೆ ತೆಗೆದುಕೊಳ್ಳಬಹುದು, ಹೆಣ್ಣು ಮಕ್ಕಳ ಒಟ್ಟು ಸಂಖ್ಯೆ ಕಡಿಮೆ ಆಗಿದೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ನ್ಯಾಷನಲ್ ಲೆವಲ್‌ನಲ್ಲಿ ತಾವು ನೋಡಿದರೆ ಗೊತ್ತಾಗುತ್ತದೆ. ಸಾವಿರ ಗಂಡು ಮಕ್ಕಳಿಗೆ 966 ಹೆಣ್ಣು ಮಕ್ಕಳಿದ್ದಾರೆ. ಭ್ರೂಣ ಹತ್ಯೆ ಆಗುತ್ತಿದೆ. ಹಾಗಾಗಿ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಕೊಡಲಿಕ್ಕಾಗಿ ಈ ಯೋಜನೆ ಮಾಡಿದ್ದೇನೆ, ಇದೊಂದು ಪ್ರೋತ್ಸಾಹದಾಯಕ ಯೋಜನೆಯೇ ಹೊರತು ಬೇರೇನೂ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ರಾಜೇಂದ್ರನ್‌ರವರೇ, ನೀವು ಒಳ್ಳೆಯ ಪ್ರಶ್ನೆ ಕೇಳಿದಿರಿ, ಅವರು ಒಳ್ಳೆಯ ಪ್ರಶ್ನೆ ಕೇಳಿದರೂ ಅದು ಮಾತಿನಲ್ಲಿ ಹೋಗಿ ಬಿಡುತ್ತದೆ. ಏನೆಂದರೆ, 18 ವರ್ಷದವರೆಗೆ ಬಂತ್ಸವ ಹಾಗೆ ಇಟ್ಟಿರುತ್ತೀರಿ, ಮಧ್ಯದಲ್ಲಿಯೇ ಸತ್ತು ಹೋದರೆ ಆ ದುಡ್ಡು ಏನು ಮಾಡುವುದಕ್ಕೆ ಹೇಳಿದ್ದೀರಿ. ಅವರ ಫ್ಯಾಮಿಲಿಗೆ ಕೊಡಬಹುದು ಎಂದು ಕ್ಲೀಯರಾಗಿ ಹೇಳಬೇಕಾಗುತ್ತದೆ. ಇಲ್ಲ ಸರ್ಕಾರಕ್ಕೆ ಜಮಾ ಆಗಬೇಕೆಂದು ಹೇಳಬೇಕು. ಏನೂ ಹೇಳದಿದ್ದರೆ ನಾಳೆ ಅದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ನಾನು ಹೇಳುತ್ತೇನೆ. It is a point to be considered, ಇದು ಒಂದು ಹೊಸ ಯೋಜನೆ, ಒಳ್ಳೆಯ ಯೋಜನೆ ಇದೆ. ಇದರೊಳಗೆ ಏನಿದೆ ಇದು ಒಳ್ಳೆಯ ವಿಷಯ ಎಂದು ಹೇಳಿದ್ದೀರಿ. It is definitely a point to be considered.

ಶ್ರೀ ಹೆಚ್. ನಿಂಗಪ್ಪ : ಅವರು ಸತ್ತು ಹೋದರೆ ಅವರ ವಾರಸುದರರಿಗೆ ಸೇರುವಂತಹ ವ್ಯವಸ್ಥೆ ಏನಾದರೂ ಮಾಡುತ್ತೀರಾ ಅಂತ.

ಶ್ರೀ ರಾಮಚಂದ್ರಗೌಡ : ಪ್ರೈಮರಿಯಾಗಿ ನಾವು ಏನು ಅಲಾಟ್ ಮಾಡುತ್ತೇವೆ ಅದೇ ಪ್ರಮುಖ ವಿನಃ ಮಧ್ಯದಲ್ಲಿ ಯಾರು ತೀರಿ ಹೋಗುತ್ತಾರೆ, ಸರ್ಕಾರಕ್ಕೆ ಜಮ ಆಗಬೇಕು, ಅಥವಾ ಮನೆಯವರಿಗೆ ಹೋಗಬೇಕು ಎಷ್ಟು ವರ್ಷದಮೇಲೆ ಹೋಗಬೇಕು, ಬೇರೆ ಇನ್ಯಾರಾದರೂ ಹೆಣ್ಣು ಮಕ್ಕಳಿದ್ದರೆ ಅವರಿಗೆ ಕೊಡಬೇಕು ಎನ್ನುವುದು ರೂಲ್ಸ್‌ರೆಗ್ಯುಲೇಷನ್ ಮಾಡುವಾಗ ಮಾಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್‌ಹೆಗ್ಡೆ : ನಾನು ಹೇಳುವುದೇನೆಂದರೆ ನೀವು ಡೆಪಾಸಿಟ್ ಮಾಡುವುದಕ್ಕಿಂತ ಇನ್‌ಶ್ಯೂರ್ ಮಾಡಿಬಿಟ್ಟರೆ ಅಷ್ಟು ವರ್ಷಗಳವರೆಗೆ ಒಂದೇ ಬಾರಿ 10 ಸಾವಿರ ಡೆಪಾಸಿಟ್ ಮಾಡುವ ಪ್ರಶ್ನೆ ಬರುವುದಿಲ್ಲ, ಪ್ರೀಮಿಯಂ ಕಟ್ಟುತ್ತಾ ಹೋದರೆ ಸಾಕು. ಮೆಡಿಕ್ಲೈಮ್ ಕೂಡ ಅವರಿಗೆ ಸಿಗುತ್ತದೆ. ಮುಂದೆ ಎಜ್ಯುಕೇಶನ್‌ಗೂ ಕೂಡ ವ್ಯವಸ್ಥೆಯಾಗುತ್ತದೆ.

ಶ್ರೀ ಬಿ.ಎಸ್. ಹೊರಟ್ಟಿ: ಪ್ರೀಮಿಯಂ ತುಂಬುವುದನ್ನು ಮುಂದೆ ಬಿಟ್ಟುಬಿಟ್ಟರೆ ಏನು ಮಾಡುವುದು?

ಶ್ರೀ ಜಯಪ್ರಕಾಶ್ ಹೆಗ್ಡೆ : ಒಂದು ವೇಳೆ ಈ ಪ್ರೋಗ್ರಾಂನ್ನು ಮುಂದೆ ಇನ್ನೊಂದು ಸರ್ಕಾರ ಬಂದಾಗ ಸ್ಟಾಪ್ ಮಾಡಿಬಿಟ್ಟರೆ?

ಶ್ರೀ ಬಿ.ಎಸ್. ಹೊರಟ್ಟಿ: ಅದು ಬೇರೆ ವಿಷಯ.

ಶ್ರೀ ಜಯಪ್ರಕಾಶ್ ಹೆಗ್ಡೆ : ಹಾಗೆ ಆಗುತ್ತದೆ ಅಲ್ಲವೇ ಅದಕ್ಕೇ ನಾನು ಹೇಳಿದ್ದು ಇನ್‌ಶೂರೆನ್ಸ್ ಮಾಡಿ ಎಂದು.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಹಿಂದೆ ನಾನೇ 1996-97ರಲ್ಲಿ ಬಜೆಟ್ ಮಂಡಿಸಿದಾಗ ನಮ್ಮ ಮಗಳು ನಮ್ಮ ಶಕ್ತಿ ಎಂದು ಅದಕ್ಕೆ ಹೆಸರಿತ್ತು. ಆ ಕಾರ್ಯಕ್ರಮದ ಹೆಸರು ನಮ್ಮ ಮಗಳು ನಮ್ಮ ಶಕ್ತಿ ಎಂದು ಹೆಸರಿತ್ತು. ಈಗ ಹೊಸದಾಗಿ ಭಾಗ್ಯದ ಲಕ್ಷೀ ಬಾರಮ್ಮ ಎಂದು ಹೆಸರಿಟ್ಟಿದ್ದಾರೆ.ಅವರಿಗೆ ಖುಷಿಯೋ, ಅಳುವೋ ಗೊತ್ತಿಲ್ಲ. ಹೆಸರಿಟ್ಟಿರುವುದು ಈ ರೀತಿ. ಈಗ ಭಾಗ್ಯದ ಲಕ್ಷ್ಮೀ ಬಾರಮ್ಮ ಎಂದು ಇದೆ. ಹಿಂದೆ ನಾನು ಇದ್ದಾಗ ಆ ಕಾರ್ಯಕ್ರಮ ಇತ್ತು. ಮುಂದಿನ

ಸರ್ಕಾರ ಬಂದಮೇಲೆ ಆ ಕಾರ್ಯಕ್ರಮವನ್ನು ನಿಲಿಸಿಬಿಟ್ಟರು. ಆ ರೀತಿ ಆಗಿದೆ. ಆದ್ದರಿಂದ ಇದು ಹೊಸ ಕಾರ್ಯಕ್ರಮವೇನಲ್ಲ. ಆದರೆ ಅದು ಒಳ್ಳೆಯ ಕಾರ್ಯಕ್ರಮ. ಬಡತನದ ರೇಖೆಗಿಂತ ಕೆಳಗಡೆಯಲ್ಲಿ ಇರುವ ಕುಟುಂಬದ ಹೆಣ್ಣು ಮಕ್ಕಳಿಗೆ ಏಕೆ ಕೊಡಬೇಕೆಂದರೆ ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿಯಾಗಲಿ ಎಂದಲ್ಲ. ಇವೊತ್ತು ಡೌರಿ ಸಿಸ್ಟಂನಿಂದ ಬಹಳ ಕಷ್ಟ ಬಡವರಿಗಾಗಿದೆ. ಬಡವರ ಮನೆಗಳಲ್ಲೂ ಕೂಡ ಡೌರಿ ಕೇಳುವುದು, ಕೊಡುವುದು ಈಗ ಶುರುವಾಗಿಬಿಟ್ಟಿದೆ. ಹೀಗಾಗಿ ಒಬ್ಬ ಹೆಣ್ಣುಮಗಳು 18 ವರ್ಷಕ್ಕೆ ಬಂದು ಮದುವೆಯಾಗುವ ಹಂತಕ್ಕೆ ಬಂದಾಗ ಅವಳ ಕೈಯಲ್ಲಿ ಒಂದಷ್ಟು ಹಣ ಇದ್ದರೆ ಅವಳೂ ಸ್ವಾವಲಂಬಿಯಾಗುತ್ತಾಳೆ. ಎನ್ನುವ ಕಾರಣಕ್ಕೋಸ್ಕರವಾಗಿ ಈ ಕಾರ್ಯಕ್ರಮವನ್ನು ಮಾಡಿದ್ದು. ಅದನ್ನು ಬಿಟ್ಟು ಗಂಡಸರ ಸಂಖ್ಯೆ 1000 ಇದ್ದರೆ, ಹೆಣ್ಣುಮಕ್ಕಳ ಸಂಖ್ಯೆ 967 ಎಂದಲ್ಲ. ಹೆಣ್ಣುಮಕ್ಕಳು ಹುಟ್ಟುವ ಮೊದಲೇ ಭ್ರೂಣಹತ್ಯೆಯಾಗಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದಲ್ಲ. ಇವರು ಹೇಳುವ ಪ್ರಕಾರ 100 ಮಕ್ಕಳ ಸಂಖ್ಯೆ ಇದ್ದರೆ 967 ಹೆಣ್ಣುಮಕ್ಕಳು ಮಾತ್ರ ಇರುವುದರಿಂದ, ಈ ಯೋಜನೆಯಲ್ಲಿ ಡೆಪಾಸಿಟ್ ಮಾಡುವುದರಿಂದ ಹೆಣ್ಣು ಮಕ್ಕಳು ಜಾಸ್ತಿಯಾಗುತ್ತಾರೆ ಎನ್ನತಕ್ಕಂಥ ಉದ್ದೇಶ ಒಂದು ಇವರದ್ದು ಇದೆ. ನಾನು ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಅದೂ ಒಂದು ಉದ್ದೇಶ ಇರಬಹುದು. ಆದರೆ ನಾವು ಅವೊತ್ತು ಯೋಚನೆ ಮಾಡಿದ್ದೇನೆಂದರೆ ಹೆಣ್ಣುಮಗಳು ಪ್ರಾಯಕ್ಕೆ ಬಂದು ಮದುವೆ ವಯಸ್ಸಿಗೆ ಬಂದಾಗ ಈ ಹಣ ಬಡವರ ಹತ್ತಿರ ಇದ್ದರೆ ಅವರಿಗೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಇದನ್ನು ಮಾಡಿರತಕ್ಕಂಥದ್ದು. ಆದರೆ ಮುಂದುವರಿಸಬೇಕು. ಮಧ್ಯದಲ್ಲಿ ನಿಲ್ಲಿಸಿಬಿಟ್ಟರೆ ಕಷ್ಟವಾಗುತ್ತದೆ. ಮುಂದುವರಿಸತಕ್ಕಂಥ ಕೆಲಸವನ್ನು ಮಾಡಬೇಕು. ಅದನ್ನೇ ಅವರು ಹೇಳುತ್ತಿರುವುದು. ಮಧ್ಯದಲ್ಲೆ ನಿಲ್ಲಿಸತಕ್ಕಂಥ ಕೆಲಸವಾಗಬಾರದು.

ಶ್ರೀ ನೆ.ಲ. ನರೇಂದ್ರಬಾಬು(ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳ ಹಿಂದೆ ಹೆಣ್ಣುಮಕ್ಕಳಿಗಾಗಿಯೇ ಕೇಂದ್ರ ಸರ್ಕಾರದಿಂದ ಒಂದು ಕಾರ್ಯಕ್ರಮ ಲಾಂಚ್ ಆಗಿತ್ತು. ಆದರೆ ಅದು ಬೆಂಗಳೂರು ನಗರಕ್ಕೆ ಅನ್ವಯವಾಗಿರಲಿಲ್ಲ. ಅದರ ಬಗ್ಗೆ ನಾವೂ ಹೋರಾಟ ಮಾಡಿದ್ದೆವು. ಕೇಂದ್ರ ಸರ್ಕಾರೆ ಈ ಯೋಜನೆಯಲ್ಲಿ ಹತ್ತತ್ತು ಸಾವಿರ ಕೊಡುವುದಿತ್ತು. ಬಹುಶಃ ಮಾನ್ಯ ರಾಮಚಂದ್ರ ಗೌಡರಿಗೂ ಚೆನ್ನಾಗಿಗೊತ್ತು. ಬಹಳಷ್ಟು ಕಡೆ ಈ ಯೋಜನೆ ಇತ್ತು. ಅದೇನೂ ಈಗ ಸತ್ತುಹೋಯಿತೇ? ವಿಧವೆಯರಿಗೆ ರಾಷ್ಟ್ರೀಯ ನೆರವು ಹತ್ತು ಸಾವಿರ ರೂಪಾಯಿಗಳನ್ನು ಆರು ತಿಂಗಳೊಳಗೆ ಆ ಬಗ್ಗೆ ತಿಳಿಸಿದರೆ ಕೊಡತಕ್ಕಂಥ ಯೊಜನೆ ಇತ್ತು. ಮೂರು ವರ್ಷಗಳಿಂದ ಆ ಯೋಜನೆಯೇ ಜೀವಂತವಿಲ್ಲ. ಒಂದು ಕಡೆ ಹೊಸ ಯೋಜನೆಗಳನ್ನು ಶುರು ಮಾಡುತ್ತೇವೆ, ಇನ್ನೊಂದು ಕಡೆ ಹಳೆಯ ಯೋಜನೆಗಳನ್ನು ಮರೆತುಹೋಗುತ್ತೇವೆ. ಸತ್ತುಹೋಗುತ್ತವೆ, ಈ ಯೋಜನೆಗಳ ಕಡೆಗೆ ಏಕೆ ಗಮನ ಹರಿಸುತ್ತಿಲ್ಲ?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಮಾತನಾಡಿ ಹಿಂದೆ ಮಾಡಿದ್ದೆವು ಈ ಯೋಜನೆ ಎಂದು ಹೇಳಿದ್ದಾರೆ. ಅವರು ಇದ್ದಾಗ ಮಾಡಿದ್ದನ್ನು ಕಳೆದ ಸರ್ಕಾರ ತೆಗೆದುಹಾಕಿತ್ತು. ಈಗ ಮತ್ತೆ ಮಾಡಿದೆವು. ಅದು ನಮ್ಮ ಕಾರ್ಯಕ್ರಮ. ಹಿಂದೆ ಅವರು ಇದ್ದಾಗ ಮಾಡಿದ್ದರು ಒಪ್ಪಿಕೊಂಡೆವು. ಈಗ ಮಧ್ಯದಲ್ಲಿ ಇದ್ದ

ಸರ್ಕಾರಗಳು ಮಾಡಿರಲಿಲ್ಲವಲ್ಲಾ. ನಾವು ಮತ್ತೆ ಮಾಡಿದ್ದೇವೆ. ಭ್ರೂಣಹತ್ಯೆ ವಿಷಯವೂ ಇದರಲ್ಲಿ ಬರುತ್ತದೆ. ಹೆಣ್ಣು ಮಕ್ಕಳನ್ನು ಹುಟ್ಟಿದ ತಕ್ಷಣ ಸಾಕತಕ್ಕಂಥದ್ದು ಕಷ್ಟ, ಮದುವೆ ಮಾಡತಕ್ಕಂಥದ್ದು ಕಷ್ಟ ಎಂದು ಭ್ರಮೆ ಬಂದೇ ಇವೊತ್ತು ಹೆಣ್ಣು ಮಕ್ಕಳು ಬೇಡ ಎನ್ನತಕ್ಕಂಥ ಕಲ್ಪನೆ ಏನಿದೆ ಅದರಿಂದ ಇವೊತ್ತು ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಎನ್ನುವುದು ಇದೆ. ಆದ್ದರಿಂದ ಹೆಣ್ಣುಮಕ್ಕಳು ಹುಟ್ಟುವುದು ಬೇಡ ಎನ್ನುವ ಕಲ್ಪನೆ ಬರಬಾರದು, ಅವರಿಗೆ ಪ್ರೋತ್ಸಾಹವನ್ನು ಕೊಡಬೇಕು. ಎನ್ನುವ ಉದ್ದೇಶವನ್ನು ಇಟ್ಟುಕೊಂಡೇ ಅವರಿಗೆ 18 ವರ್ಷಕ್ಕೆ ಬರುವಾಗ ಅಥವಾ ಅವರಿಗೆ ಓದುವುದಕ್ಕೆ ಅನೂಕೂಲವಾಗಲಿ ಮುಂದೆ ಅಥವಾ ಮದುವೆ ಮಾಡುವುದಕ್ಕಾದರೂ ಆಗಲಿ ಒಟ್ಟಿನಲ್ಲಿ ಅವರಿಗೆ ಅನುಕೂಲವಾಗಲಿ ಎಂದೇ ಪ್ರೋತ್ಸಾಹ ಧನವನ್ನು ಇಡಬೇಕು ಎಂದು ಸರ್ಕಾರ ಒಂದು ಹೊಸ ಯೋಜನೆಯನ್ನು ಮಾಡಲಾಗಿದೆ. ಅದನ್ನು ನಾವು ಇರುವವರೆಗೂ ಮುಂದುವರೆಸಿಕೊಂಡು ಹೋಗುತ್ತೇವೆ. ನಾವು ಬಹುಶಃ ಎಲ್ಲರೂ ಆಶೀರ್ವಾದ ಮಾಡಿದರೆ ಇನ್ನೂ 20 ವರ್ಷದವರೆಗೂ ಮುಂದುವರೆಸಿಕೊಂಡು ಹೋಗಬಹುದು.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೇ ಬೇಗ ಮುಗಿಸಿ. ಬೇರೆಯವರು ಮಧ್ಯೆ ಮಾತನಾಡಲು ಅವಕಾಶ ಆಗುವಂತೆ ನೀವು ಮಾತನಾಡಬೇಡಿ. ನೀವು ಕುಳಿತುಕೊಂಡರೆ ಅವರು ಎದ್ದುನಿಂತು ಮಾತನಾಡುತ್ತಾರೆ. ಬೇಗ ಮುಗಿಸಿ ಈಗಾಗಲೇ ಬಹಳ ಸಮಯ ತೆಗೆದುಕೊಂಡಿದ್ದೀರಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಹೆಣ್ಣು ಮಕ್ಕಳಿಗೆ ಬೈಸಿಕಲ್‌ನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಹೆಣ್ಣುಮಕ್ಕಳಿಗೆ ಇದರಿಂದ ಬಹಳ ಸಂತೋಷ ನಿಜವಾಗಿಯೂ ಆಗುತ್ತದೆ. ಈ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಬೈಸಿಕಲ್‌ನಲ್ಲಿ ಹೆಣ್ಣುಮಕ್ಕಳು ಹೋಗುವಾಗ ಕ್ರಾಸ್ ರೋಡ್‌ಗಳಲ್ಲಿ, ಶಾರ್ಟ್‌ಕಟ್ ರೂಟ್‌ಗಳಲ್ಲಿ ಸ್ಕೂಲಿಗೆ ಹೋಗುತ್ತಾರೆ. ಸೈಕಲ್ ಕೊಟ್ಟಮೇಲೆ ಅವರು ಒಂದು ರೌಂಡ್ ಮಾಡಿಕೊಂಡು ಬರಬೇಕು. ನೀವು ಸೈಕಲ್‌ನ್ನು ಬಡವರಿಗೆ ತಾನೇ ಕೊಡುವುದು, ಅವನಿಗೆ ಬೆಳಿಗ್ಗೆ ಊಟ ಇರುತ್ತದೋ, ಇಲ್ಲವೋ, ಏನೂ ಒಂದು ವ್ಯವಸ್ಥೆಯಲ್ಲಿ ಓದಿಕೊಂಡು ಇರುತ್ತಾರೆ ಸೈಕಲ್ ಮಧ್ಯದಲ್ಲಿ ಪಂಕ್ಚರ್ ಆಗಿಬಿಟ್ಟರೆ ಅವಳು ಅದನ್ನು ಹಾಗೆಯೇ ತಳ್ಳಿಕೊಂಡು ಬಂದು ಮನೆಯಲ್ಲಿ ಇಡುತ್ತಾಳೆ ಅವಳ ತಾಯಿ, ತಂದೆ ನೀನು ಸುಮ್ಮನಿರು ಮುಂದಿನವಾರ ಪಂಕ್ಚರ್ ಸರಿಮಾಡಿಸಲು ದುಡ್ಡು ಕೊಡುತ್ತೇನೆ ಎಂದುಬಿಡುತ್ತಾರೆ. ಆದರೆ ಅವನು ಸ್ಕೂಲಿಗೆ ಹೋದರೆ ಬೇರೆ ಸ್ಟೂಡೆಂಟ್ಸ್‌ಗಳು ಏನಾಯಿತು ನಿನ್ನ ಸೈಕಲ್, ನಿಮ್ಮಪ್ಪ ಏನಾದರೂ ಅಂಗಡಿಯಲ್ಲಿ ಸೇಲ್ ಮಾಡಿಬಿಟ್ಟರೆ, ಈ ರೀತಿಯಲ್ಲಿ ಅವಳನ್ನು ಕೇಳಿಬಿಟ್ಟರೆ, ಕೆಲವೊಮ್ಮೆ ಸೂಸೈಡ್ ಮಾಡಿಕೊಂಡುಬಿಡುತ್ತಾರೆ. ಮೊನ್ನೆ ನಡೆದಿರುವುದು, ಬಟ್ಟೆ ಸರಿಯಾಗಿ ಹಾಕಿಕೊಂಡು ಬಂದಿಲ್ಲ ಎಂದು ಟೀಕೆ ಮಾಡಿದ್ದಕ್ಕೆ ಅಂಬೇಡ್ಕರ್ ಹೈಸ್ಕೂಲ್‌ನಲ್ಲಿ ಒಂದು ಹೆಣ್ಣುಮಗಳು just four days back. ಮನೆಗೆ ಬಂದು ಕೆರೋಸಿನ್ ಹಾಕಿಕೊಂಡು ಸುಟ್ಟುಕೊಂಡಿದ್ದಾಳೆ. ಟೀಕೆ ಮಾಡುವುದು, ಅವಮಾನ ಮಾಡುವುದು ಮಾಡಬಾರದು. ಆದುದರಿಂದ ಅಂಥ ಸ್ಥಿತಿ ಏನಾದರೂ ಆದರೆ ಏನು ಮಾಡುತ್ತೀರಿ? ಅದಕ್ಕಾಗಿ ಸೈಕಲ್ ರಿಪೇರಿಗೆಂದು ಒಂದೈವತ್ತು ರೂಪಾಯಿಗಳನ್ನು ಪಂಕ್ಚರ್‌ಗೆ, ರಿಪೇರಿಗಾಗಿ ಕೊಟ್ಟರೆ, ಅಂದರೆ ಮೇನ್‌ಟೆನ್ಸ್‌ಗಾಗಿ ಕೊಟ್ಟರೆ ನಿಮಗೆ ಇನ್ನೂ ಅಪಾರವಾದ ಗೌರವ ಬಂದುಬಿಡುತ್ತದೆ: ನಮ್ಮ ಉಪ ಮುಖ್ಯಮಂತ್ರಿಗಳು ಸೈಕಲ್ ಜೊತೆಗೆ 50 ರೂಪಾಯಿಗಳನ್ನೂ

ಕೊಡುತ್ತಾರೆ ಎಂದು ಯಾರ್ಯಾರು ಶಾಲೆಗೆ ಹೋಗುತ್ತಿರುವುದಿಲ್ಲವೋ ಅವರೆಲ್ಲಾ ನಾಳೆಯಿಂದ ನಾನು ಹೋಗುತ್ತೇನೆ. ಸ್ಕೂಲಿಗೆ ಎಂದು ಶುರುಮಾಡಿಕೊಳ್ಳುತ್ತಾರೆ. ಶಾಲೆಗೆ ಹೋದರೆ ಒಂದು ಬೈಸಿಕಲ್ ಸಿಗುವುದರಿಂದ ನಾವೇಕೆ ಮನೆಯಲ್ಲಿರಬೇಕು ಎಂದು ಹೆಣ್ಣು ಮಕ್ಕಳೆಲ್ಲರೂ ಶಾಲೆಗೆ ಬರಲು ಇದೊಂದು ಎನ್‌ಕರೇಜ್‌ಮೆಂಟ್ ಆಗುತ್ತದೆ, ಆದುದರಿಂದ ಇದರ ಬಗ್ಗೆ ಸ್ವಲ್ಪ ಚಿಂತನೆಯನ್ನು ಮಾಡಿ ಸಾರ್. ನೀವೂ ಸಂತೋಷದಿಂದ 50 ರೂಪಾಯಿಗಿಂತ 100 ರೂಪಾಯಿಯನ್ನೇ ಕೊಟ್ಟರೆ ಇನ್ನೂ ಸಂತೋಷ. ಇನ್ನು ವೈದ್ಯಕೀಯ ಶಿಕ್ಷಣ ಸಚಿವರು ಹೇಳಿದ್ದಾರೆ. 80 ಪರ್ಸೆಂಟ್ ಇದ್ದರೆ ಮೆಡಿಕಲ್ ಎಜ್ಯುಕೇಶನ್‌ಗೆ ಹೋಗಲು ಅನುಕೂಲ ಮಾಡಿಕೊಡುವ ಬಗ್ಗೆ ಹೇಳಿದ್ದಾರೆ. ಆದರೆ ಹಳ್ಳಿ ಕಡೆ ಇರುವವರು ಓದಲು ಟೆಬಲ್ ಇರುವುದಿಲ್ಲ. ಬೇಡ್‌ಲೈಟ್ ಇರುವುದಿಲ್ಲ, ಲ್ಯಾಂಪ್ ಇರುವುದಿಲ್ಲ, ಕೆಲವು ಸಮಯದಲ್ಲಿ ಕೆರೋಸಿನ್ ಸಿಕ್ಕುವುದಿಲ್ಲ, ಅವರಿಗೆ ಕಂಪ್ಯೂಟರ್ ಸೌಲಭ್ಯವಾಗಲಿ ಲ್ಯಾಪ್‌ಟ್ಯಾಪ್ ಸೌಲಭ್ಯವಾಗಲಿ ಇರುವುದಿಲ್ಲ, ಈಗ ಸಾಹುಕಾರರುಗಳು, ಐ.ಪಿ.ಎಸ್, ಐ.ಎ.ಎಸ್. ಅಧಿಕಾರಿಗಳು, ಮಂತ್ರಿಗಳ ಮಕ್ಕಳಿಗೆಲ್ಲಾರಿಗೂ ಸ್ವಲ್ಪ ಅವರಿಗೆ ದೇವರು ಆಶೀರ್ವಾದ ಮಾಡುವುದರಿಂದ ಇಂಥವರ ಮಕ್ಕಳಿಗೆಲ್ಲರಿಗೂ ಇವುಗಳು ಕೈಗೆ ಸಿಗುತ್ತವೆ. ಆದರೆ ಕೂಲಿ ಕೆಲಸ ಮಾಡುವ ಮಕ್ಕಳಿಗೆ ಇವು ಸಿಕ್ಕುವುದಿಲ್ಲ, ವೈದ್ಯಕೀಯ ಶಿಕ್ಷಣ ಸಚಿವರ, ಅಂಥವರ ಬಗ್ಗೆ ಕೂಡ ಅನುಕೂಲ ಮಾಡಲು ಪರಿಶೀಲನೆ ಮಾಡಿ Education Minister ರವರೇ. why can't you bring it down to 60% for them? – –

ನೀವು ಟ್ರೈ ಮಾಡಿ. ಅಂಥವರಿಗೂ ಒಂದು ಅವಕಾಶವನ್ನು ಕೊಟ್ಟರೆ, 60 ಪರ್ಸೆಂಟ್ ಪಡೆದಿರುವ ಹಳ್ಳಿ ಕಡೆಯಲ್ಲಿರುವವರಿಗೆಲ್ಲಾ ನಾವು ಅವಕಾಶ ಮಾಡಿಕೊಡುತ್ತೇವೆಂದರೆ definitely. all the rural people will come. -

ನಾಳೆ ಅವನು ಡಾಕ್ಟರ್ ಆದರೆ ನಾನು ನನ್ನ ವಿಲೇಜ್‌ಗೇ ಹೊಗುತ್ತೇನಪ್ಪಾ, ನಾನು ಡಾಕ್ಟರ್ ಆಗಿದ್ದೇನೆ ಎಂದು ಹೇಳುತ್ತಾನೆ. ನೀವು ಇದರ ಬಗ್ಗೆ ಚಿಂತನೆಯನ್ನು ಮಾಡಿ. ಇದೊಂದು ಮಾಡಿ. ಇದರ ಜೊತೆಗೆ ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಈ ಮೆಟ್ರೋ ಟ್ರೈನ್‌ಗಾಗಿ ಹಣವನ್ನು ಒದಗಿಸಿದ್ದರು. ಸುಮಾರು Rs. 109 crores budget provision was made. – ಮೆಟ್ರೋ ಬಗ್ಗೆ ಆಪೋಸ್ ಇದ್ದರೂ ಕೂಡ ಇಂಥ ಮೊತ್ತವನ್ನು ಇಡುವ ಬಗ್ಗೆ ಹೇಳಿದ್ದರು. ಈಗ ಅದರ ಬಗ್ಗೆ ಏನೂ ಹೇಳಿಲ್ಲವಲ್ಲಾ. ಏನು ಕಾರಣ? ಈ ವರ್ಷ ಸ್ಟಾರ್ಟ್ ಆಗುವುದಿಲ್ಲವೆ? ಅಥವಾ ನೆಕ್ಸ್ಟ್ ಈಯರ್ ಆಗುತ್ತದೆಯೇ? you have not mentioned anything in this. why? – – –

ಏನು ಕಾರಣ? ಬಿ.ಎಂ.ಐ.ಸಿ. ptoject is very important project for Bangalore. ಅದರ ಬಗ್ಗೆ ಏನೂ ಹೇಳಿಲ್ಲ, ಬರೇ ಐದು ಲಕ್ಷ. ಎರಡು ಲಕ್ಷದ್ದು ನಾವು ಟೆಂಡರ್ ಹಾಕಬೇಕೆಂದರೆ ಅಧಿಕಾರಿಗಳು ಬ್ಯೂರೋಕ್ರಾಟ್, Transperancy Act, we cannot give more than five lakhs. ಎನ್ನುತ್ತಾರೆ Crystral clear ಆಗಿ ನೀವೇ ಹೇಳಿದ್ದೀರಲ್ಲವೇ ನಾವು ಮಾಡೇ ಮಾಡುತ್ತೇವೆಂದು; Why you have not given any provision for that? ಏತಕ್ಕೆ ಕೊಟ್ಟಿಲ್ಲ? ಏನು ಅದರ ಉದ್ದೇಶ Suppress the fact. ಏನು ಕಾರಣ? ಇಲ್ಲಿ ಏನೂ ಮೆನ್‌ಶನ್

ಮಾಡಿಲ್ಲವೆ? That is very important development in this Bangalore city. – – ಏತಕ್ಕೆ ಸ್ವಾಮಿ, ಏನು ಕಾರಣ? ಯಾರ ಮೇಲಾದರೂ ನಿಮಗೆ ಕೋಪವಾ ಅಥವಾ ಅದು ಶುರುವಾಗುವುದೇ ಇಲ್ಲವೇ? ಇಲ್ಲದಿದ್ದರೆ ಯಾವ ವರ್ಷ ಶುರುವಾಗುತ್ತದೆ? ಇದೇನನ್ನೂ ಹೇಳಿಲ್ಲ. ಬಜೆಟ್‌ನಲ್ಲಿ ಆ ಇಂಪಾರ್ಟೆಂಟ್ ಸಬ್ಜೆಕ್ಟೇ ಇಲ್ಲ. ಬರೇ ಭಾಗ್ಯದ ಲಕ್ಷ್ಮಿ ಭಾರಮ್ಮ, ಎಲ್ಲಮ್ಮಾ ಏನಮ್ಮಾ ಎಂದಿದೆ. ಆದರೆ These are all very important projects of the furture for the city you have not mentioned, why? – – –

ಇದರ ಜೊತೆಗೆ ಶ್ರೀಮಾನ್ ಸಿದ್ಧರಾಮಯ್ಯನವರು,,,, ನಾನು ಅವರ ಪರ ಇಲ್ಲ I like him because he is a very democratic man, simple and a gentleman Most gentleman.

ಅದಕ್ಕೂ ಮೇಲೆ ಮೋಸ್ಟ್, ಮೋಸ್ಟ್ ಮೋಸ್ಟ್ ಮೊಸ್ಟ್ ಎಂದು ಮಾಡಿಕೊಂಡು ಹೋಗುವುದಿಲ್ಲ, ಅಷ್ಟೇ. He is a gentleman. ಗೌರವ ಇದೆ. ಅವರು straight away he said; I will stop the single lottery.

ಬಜೆಟ್ ಟೈಂನಲ್ಲಿ ಹೇಳಿದ್ದರು. ಎಷ್ಟೋ families are happy about that –ಅಬ್ಬಾ ಸೇವ್ ಆದೆವು, ಈಗ ಯಜಮಾನ ಕೂಲಿ ಮಾಡಿದ ಮೇಲೆ ಬಂದ ನೂರು ರೂಪಾಯಿಯನ್ನು ತೆಗೆದುಕೊಂಡು ಬಂದು ನನಗೆ ನನ್ನ ಯಜಮಾನ ಕೊಡುತ್ತಾನೆ. ಮಕ್ಕಳಿಗೆಲ್ಲಾ ಊಟ ಆಗುತ್ತದೆ ಎಂದು ಆಕೆಗೆ ಸಂತೋಷವಾಯಿತು. ಈ ಹಿಂದೆ ಹೊರಟ್ಟಿಯವರೂ ಸುಮಾರು ಬಾರಿ ಪ್ರೆಸ್ ನೋಟ್ ಕೊಟ್ಟರು. 2006–07 onwards, all types of lotteries will be banned.– ಈ ಪ್ರೆಸ್ ನೊಟ್ ಪೇಪರ್‌ನಲ್ಲೆಲ್ಲಾ ಬಂದಿದೆ ಮಾನ್ಯ ಹೊರಟ್ಟಿಯವರೇ ಏಕೆ ಅದನ್ನು ಸ್ಟಾಪ್ ಮಾಡಲಿಲ್ಲ? ಈ ಬಜೆಟ್‌ನಲ್ಲಿ ಏಕೆ ಅದನ್ನು ನಿಲ್ಲಿಸಲಿಲ್ಲ? ಏನು ಕಾರಣ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಆಗ ಅವರು ಲಾಟರಿ ಹೊಡೆಯುತ್ತಿದ್ದರು. ಈಗ ಸೆಟ್ಲ್ ಆಗಿದ್ದಾರೆ, ಅದಕ್ಕೋಸ್ಕರ ಬಿಟ್ಟಿದ್ದಾರೆ.

ಶ್ರೀ ಎಸ್.ರಾಜೇಂದ್ರನ್ : ಹೇಗಿದೆ ಅಂದರೆ ಈ ಕಡೆ ಕುಳಿತುಕೊಂಡರೆ ಅವರ ಕಾಲು ಹಿಸುಕಬೇಕು, ಆ ಕಡೆ ಕುಳಿತುಕೊಂಡರೆ ಅದನ್ನು ಹಾಗೆ ಇಂಪ್ಲಿಮೆಂಟ್ ಮಾಡಬೇಕು ಎಂದರೆ ಹೇಗೆ? some change should be there. – – ಮಿನಿಸ್ಟರ್ ಆದರೆ ಕೇವಲ ಖುರ್ಚಿ ಚೇಂಜ್ ಆಗುವುದಲ್ಲ, ಅವರಿಗೆ ಮಾನಸಿಕವಾಗಿ ಹೃದಯ ಚೇಂಜ್ ಆಗಬೇಕು. ಅದರಲ್ಲಿ ಕೊಲೆಸ್ಟರಾಲ್ ಆ ಕಡೆ ಹೋದರೆ ಹಂಡ್ರೆಡ್ ಈ ಕಡೆ ಹೋದರೆ ಹಂಡ್ರೆಡ್ ಹೀಗಿದ್ದರೆ ಏನು ಪ್ರಯೋಜನ? ಈ ಕಡೆ ಬಂದರೆ 20 ಇರಬೇಕು, ಆ ಕಡೆ ಹೋದರೆ 10 ಆದರೂ ಇರಬೇಕು. same cholesterol should go for by pass surgery. No use ಏತಕ್ಕೆ ಲಾಟರಿ ಸ್ಟಾಪ್ ಮಾಡಲಿಲ್ಲ? ನೀವು ಮಾಡುವುದಕ್ಕೆ ಸಾಧ್ಯವೇಇಲ್ಲ. ತಾವು ಪ್ರೆಸ್ ನೋಟ್ ಏನು ಕೊಟ್ಟಿದ್ದೀರಿ, ಕೇರಳದಲ್ಲಿ ಬ್ಯಾನ್ ಮಾಡಿದ್ದಾರೆ, ತಮಿಳುನಾಡಿನಲ್ಲಿ ಬ್ಯಾನ್ ಮಾಡಿದ್ದಾರೆ ಆದರೆ ಕರ್ನಾಟಕದಲ್ಲಿ ಎಲ್ಲಿ ಬ್ಯಾನ್ ಮಾಡಿದ್ದೀರಿ? ಇದು ಹೇಗೆ ಸಾಧ್ಯವಾಗುತ್ತದೆ? ನೀವೇ ಸರ್ಕಾರದವರು ಎಂಎಸ್‌ಐಎಲ್ ಮುಖಾಂತರ ಲಾಟರಿ ಟಿಕೇಟ್ ನಡೆಸುತ್ತಿದ್ದೀರಿ. ನೀವು ಹೇಗೆ ಬ್ಯಾನ್ ಮಾಡುತ್ತೀರಿ? ಸುಮ್ಮನೆ ಜನರಿಗೆ, Next, 2006-07 onwards, we will stop ಅಂತ ಹೇಳಿದ್ದೀರಿ ಎಲ್ಲಿ ಸ್ವಾಮಿ ಸ್ಟಾಪ್ ಮಾಡಿದಿರಿ?

ಶ್ರೀ ಬಸವರಾಜ್ ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ ನಾವು ಅವರು ಸೇರಿ ಒಂದು ತೀರ್ಮಾನಕ್ಕೆ ಬಂದಿದ್ದೆವು. ಬರುವಂತಹ ಬಜೆಟ್‌ನಲ್ಲಿ ಒಂದಂಕಿ, ಎರಡಂಕಿ ಲಾಟರಿಗಳನ್ನು ನಿಲ್ಲಿಸಬೇಕು. ಟ್ರೇಡಿಷನಲ್ ಲಾಟರಿ ಮಾತ್ರ ನಡೆಸಬೇಕು ಎಂದು ತೀರ್ಮಾನಕ್ಕೆ ಬಂದಿದ್ದೆವು. ಆದರೆ ಈಗ ಸಿಂಗಲ್ ಡಿಜಿಟ್ ಲಾಟರಿ ಬಹಳ ಕಡಿಮೆಯಾಗಿದೆ. ಮಾನ್ಯ ಸಿದ್ಧರಾಮಯ್ಯನವರು ಹೇಳಬೇಕು ಆ ರೀತಿ ಮಾಡಬೇಕೆಂದು ಇದ್ದೆವು. ಆದರೆ ಸರ್ಕಾರ ಬದಲಾವಣೆ ಆದಮೇಲೆ ಬೇರೆಯವರು ಫೈನಾನ್ಸ್ ಮಿನಿಸ್ಟರ್ ಬಂದನಂತರ ಆ ನಿರ್ಧಾರ ಎಲ್ಲೆಲ್ಲಿಗೆ ಹೋಯಿತೋ ಗೊತ್ತಿಲ್ಲ. ನಮ್ಮ ಕಾಲದಲ್ಲಿ ನಾವು ಎಷ್ಟು ಕಡಿಮೆ ಮಾಡಿದ್ದೇವೆ ಎಂದು ತಾವು ಅಂಕಿ ಸಂಖ್ಯೆ ಮೂಲಕ ನೋಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಬೇರೆಯವರದಲ್ಲ, ನಿಮ್ಮದೇ ಇದೆ ಸರ್ಕಾರ.

ಒಬ್ಬ ಮಾನ್ಯ ಸದಸ್ಯರು: ನಿಮ್ಮದೇ ಇದೆ ಕಾಲ, ಬೇರೆಯವರದು ಇದೆಯಾ ಕಾಲಾ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸ್ವಾಮಿ you are also part of the Governmenr.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಫೈನಾನ್ಸ್ ಮಿನಿಸ್ಟರ್ ಬೇರೆ ಎಂದು ಹೇಳಿದ್ದಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಬೇರೆಯವರು ಎಂದರೆ ಬೇರೆ ಪಕ್ಷದಿಂದ ಮಿನಿಷ್ಟರ್ ಆಗಿಬಿಟ್ಟರೆ ಬೇರೆಯವರು ಆಗಿಬಿಟ್ಟರೆ ಅವರು? ಈಗಲೇ ಮಾನ್ಯ ಹೊರಟ್ಟಿ ಸಾಹೇಬರು ಬಿಜೆಪಿಯವರನ್ನು ಬೇರೆಯವರನ್ನಾಗಿ ಮಾಡಿಬಿಟ್ಟರು.

ಶ್ರೀ ನೆ.ಲ. ನರೇಂದ್ರ ಬಾಬು: ಬಹಳಷ್ಟು ಜನರ ಮನೆಗಳು ಹಾಳಾಗಿ ದಿಕ್ಕು ದೆಸೆ ಇಲ್ಲದೆ ಹೋಗಿದ್ದಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಬೇರೆ ಎಂದರೆ ನಿಮ್ಮ ಸರ್ಕಾರವೇ **you are part of the same Government**

ಒಬ್ಬರು ಮಾನ್ಯ ಸದಸ್ಯರು: ಈ ಬೇರೆ ಬೇರೆ ಎನ್ನವುದು ಪ್ರಾರಂಭವಾಗಿದೆ ಎಂದು ಕಾಣುತ್ತದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅಂದರೆ That means, you are not a part of the Government. – ಬಿಜೆಪಿಯ ಮಾನ್ಯ ಯಡಿಯೂರಪ್ಪನವರು ಆಗಿರಬಹುದು. ಆದರೆ ನೀವು ಗೌವರ್ನ್‌ಮೆಂಟ್‌ನ ಬಾಗ ಸಾರ್.

ಶ್ರೀ ನೆ.ಲ. ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ ಶಾಲೆಯಲ್ಲಿ ನಾವು ಒಂದು ಪಾಠವನ್ನು ಕಲಿತಿದ್ದೆವು, ಅದು ಭೋಜರಾಜನ ಸಿಂಹಾಸನ ಎಂದು. ಆ ದಿಬ್ಬದ ಮೇಲೆ ಬಂದರೆ ಒಂದು ತರಹ ಮಾತು, ಈ ಕಡೆ ಬಂದರೆ ಒಂದು ತರಹ ಮಾತು.....

ಶ್ರೀ ಬಸವರಾಜ್ ಎಸ್ ಹೊರಟ್ಟಿ : ಅದಕ್ಕೆ ಈಗಾಗಲೇ ಕಮಿಟಿ ಮಾಡಿ ಅಧಿಕಾರಿಗಳನ್ನು ರಾಜ್ಯಕ್ಕೆ ಕಳುಹಿಸಿದ್ದೇವೆ. ರಿಪೋರ್ಟ್ ಅವರು ಕೊಟ್ಟ ನಂತರ ಮಾಡಬೇಕೆಂದು ಇದ್ದೇವೆ, ಅವರು ಇನ್ನೂ ರಿಪೋರ್ಟ್ ಕೊಟ್ಟಿಲ್ಲ ರಿಪೋಟ್ ಕೊಟ್ಟನಂತರ.....

ಶ್ರೀ ಎಂ.ಕೆ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಮೊನ್ನೆ ಮಾನ್ಯ ರಾಮಚಂದ್ರಗೌಡರು ಮೈಸೂರಿನಲ್ಲಿ ನನಗೆ ಲಾಟರಿ ಮಾರುವುದಕ್ಕೋಸ್ಕರ ಮಂತ್ರಿ ಮಾಡಿದ್ದಾರೆ, ಅದನ್ನು ಹೇಗೆ ತೆಗೆಯುವುದಕ್ಕೆ ಆಗುತ್ತದೆ? ಅದನ್ನು ಮುಂದವರೆಸಿಕೊಂಡು ಹೋಗುತ್ತೇವೆ. ಲಾಟರಿ ಇಲ್ಲದೇ ಇದ್ದರೆ ನನ್ನನ್ನು ಯಾರು ಮಂತ್ರಿ ಮಾಡುತ್ತಿದ್ದರು? ಮಂತ್ರಿಯನ್ನಾಗಿ ಮಾಡಿರುವುದೇ ಲಾಟರಿ ಮಾಡುವುದಕ್ಕೆ ಅದನ್ನೇ ಮುಂದುವರಿಸಿಕೊಂಡು ಹೋಗುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅದ್ಯಕ್ಷರೆ, ತಾವು ಅದರ ಬಗ್ಗೆ ಚಿಂತನೆ ಮಾಡಿ. Because you have assured to the press as well as to everybody. Therefore please that it should be banned.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹೊರಟ್ಟಿಯವರು ಏನು ಹೇಳಿದರು, ಮಾನ್ಯ ಸಿದ್ಧರಮಯ್ಯನವರು ಇದ್ದರು, ನಾನಿದ್ದೆ, ಅವರು ಹೇಳಿದ್ದು ನಿಜ ಆದರೆ situation was different. ಈಗ ಬೇರೆ ವಾತಾವರಣ ಇದೆ ಅಥವಾ ಕಾಲ ಇದೆ ಎನ್ನುವ ರೀತಿಯಲ್ಲಿ ಮಾತನಾಡಿದರು. He is a Minister ನಮ್ಮ ipurviwr ಗೆ ಸಾಮಾನ್ಯ ಜನರ ಕನ್‌ಸಂಪ್ಷನ್‌ಗೆ Government is one. chief Minister/ is first amongst the equals. ಇವೆರೆಲ್ಲರೂ ಸೇರಿ ಸರ್ಕಾರ. ಇವರಿಗೆ ವ್ಯಕ್ತಿಗತವಾಗಿ ಯಾರ್ಯಾರಿಗೆ ಏನೇನು ಅಭಿಪ್ರಾಯಗಳಿರುತ್ತವೆ ಎನ್ನುವುದು ಪ್ರಶ್ನೆ ಅಲ್ಲ. Government should speak, pronounce, proclaim, behave and act in one voice. They cannot have diverse views. If they are diverse views– ಅದನ್ನು ಸಂಪುಟದ ಸಭೆಯೊಳಗೆ ಚರ್ಚೆ ಮಾಡಬೇಕೇ ಹೊರತು when the come out, they should be one.ಇಲ್ಲದೇ ಹೋದರೆ, it freflects on the very cabinet system.– ಈಗ ತಾವೇನು ಹೇಳಿದ ಪ್ರಕಾರ ಕಡತದಿಂದ ತೆಗದು ತೋರಿಸಿ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ನೀವೇ ಹೇಳಿದ ಮಾತುಗಳನ್ನು ತರಿಸಿಕೊಂಡು ನೋಡಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಫೈನಾನ್ಸ್ ಮಿನಿಸ್ಟರ್ ಆದಾಗ ನಾವೆಲ್ಲಾ ಚರ್ಚೆ ಮಾಡಿ ಬರುವುಂತಹ ಬಜೆಟ್‌ಗೆ ಇದನ್ನು ನಿಲ್ಲಿಸಬೇಕು ಎಂದು ಎಲ್ಲಾ ರೀತಿಯಿಂದ ಸಿದ್ಧತೆಗಳನ್ನು ಮಾಡಿದ್ದೆವು. ತದನಂತರ ಏನಾಯಿತು ಎಂದರೆ ಸಿದ್ದರಾಮಯ್ಯನವರ ನಂತರ ಮಾನ್ಯ ಸಿಂಧ್ಯಾ ರವರು ಬಂದರು. ಸಿಂಧ್ಯಾರವರು ಬಂದಮೇಲೆ ಚರ್ಚೆ ಮಾಡಿ, ನಮತರ ಚುನಾವಣೆಗಳು ಬಂದವು. ಆಮೇಲೆ ನಾನು ಅಧಿಕಾರದಲ್ಲಿದ್ದಾಗ ಅದಕ್ಕೆ ಒಂದು ಕಮಿಟಿ ಮಾಡಿ ಕಮಿಟಿಯನ್ನು ಕಳುಹಿಸಿದೆವು. ಕೇರಳ ಹಾಗೂ ತಮಿಳುನಾಡಿಗೆ ಕಮಿಟಿಗೆ ಹೋಗಿ ರಿಪೋರ್ಟ್ ಕೊಡುವಂತಹ ಸಂದಭದಲ್ಲಿ ಸರ್ಕಾರ ಬದಲಾವಣೆಯಾಗಿದೆಯೆನ್ನುವಂತಹ ಮಾತನ್ನು ನಾನು ಹೇಳಿದೆ.

ಡಾಃ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ ಬೇರೆಯವರು ಎಂದರು ಬೇರೆಯವರು ಎಂದರೆ ಯಾರು? ಬಿಜೆಪಿಯವರು ಆಗಿದ್ದಾರೆ ಎಂದು ಬೇರೆಯವರು ಎಂದಿರಾ ಹೇಗೇ?

ಒಬ್ಬರು ಮಾನ್ಯ ಸದಸ್ಯರು : ಇಲ್ಲ, ಇಲ್ಲ, ಆ ತರಹ ಹೇಳಲಿಲ್ಲ ಅವರು.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು : ಕಡತ ತೆಗೆಸಿ ನೋಡಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಮ್ಮ ಗೆಳೆಯ ಸೋಮಶೇಖರ್ ಹೇಳಿದ ಹಾಗೆ ಮಾನ್ಯ ರಾಮಚಂದ್ರಗೌಡರು, ನಾನು ಮಂತ್ರಿಯಾಗಿರುವುದೆ ಲಾಟರಿ ನಡುಸುವುದಕ್ಕೆ ನಿಲ್ಲಸುವುದು ನನ್ನ ಕೆಲಸವೇನ್ರಿ ಎಂದು ಹೇಳುತ್ತಾರೆ ಎಂದರು. ಆದರೆ ಮಾನ್ಯ ರಾಜೇಂದ್ರನ್ ಕಾಂಪ್ಲಿಮೆಂಟ್ ಮಾಡುತ್ತಿದ್ದಾರೆ. ಇವರು ಲಾಟರಿ ಸ್ಟಾಪ್ ಮಾಡಿದರು, ಬಡ ಕುಟುಂಬಗಳು ಇವರಿಗೆ ಧನ್ಯವಾದಗಳನ್ನು ಹೇಳಿತು, ಬದುಕಿಕೊಂಡೆವು ಎಂದು ನಿಟ್ಟುಸಿರು ಬಿಟ್ಟರು ಎಂದು. ಆ ದಿಸೆಯಲ್ಲೆ ಕೆಲಸ ಮಾಡಿದೆ ಎಂದು ಇವರು ಹೇಳುತ್ತಾರೆ ಒಬ್ಬರು ನಡೆಸುವವರು, ಒಬ್ಬರು ನಿಷೇಧ ಮಾಡುವವರು, ಒಬ್ಬರಿಗೆ ಅದರಲ್ಲೆಲ್ಲ ನಂಬಿಕೆ, ಒಬ್ಬರಿಗೆ ಇದರಲ್ಲಿ ನಂಬಿಕೆ ಇದ್ದರೆ ಸರ್ಕಾರದ ನೀತಿ ಏನು ಎಂದು ಜನ ಹೊರಗಡೆ ತಿಳಿದೊಕೊಳ್ಳಬೇಕು. ಸರ್ಕಾರದ ನೀತಿ ಲಾಟರಿ ನಡೆಸುವುದು ಅಂತನಾ ನಿಷೇಧಿಸುವುದು ಅಂತನಾ ಎನೆಂದು ಜನ ಭಾವಿಸಿಕೊಳ್ಳಬೇಕು? I am not talking as a Legislator – – ನಾನು ಸಾಮಾನ್ಯ ಮನುಷ್ಯ. By chance as their representative, I am here. It is just a co-incidence, what is the policy of the Government? Is it to promote lotteries or to ban lotteries.?

ಶ್ರೀ ಸಿದ್ಧರಾಮಯ್ಯ : ಮಾನ್ಯ ಹೊರಟ್ಟಿಯವರು, ಲಾಟರಿ ಮಂತ್ರಿಯಾಗಿದ್ದಾಗ ಅವರು ನನ್ನ ಹತ್ತಿರ ಬಂದು ಬಹಳ ಸಾರಿ ಚರ್ಚೆಯನ್ನು ಮಾಡಿದರು. ಲಾಟರಿ ನಿಲ್ಲಿಸಬೇಕು ದೊಡ್ಡ ದಂಧೆ ಶುರುವಾಗಿಬಿಟ್ಟಿದೆ, ಪೊಲೀಸ್‌ನವರು ಕೋ–ಆಪರೇಟ್ ಮಾಡುವುದಿಲ್ಲ, ನಮ್ಮ ಅಧಿಕಾರಿಗಳೂ ಕೂಡ ಅದರ ಬಗ್ಗೆ ಗಮನ ಕೊಡುವುದಿಲ್ಲ. ಸಾಮಾನ್ಯವಾಗಿ ಲಾಟರಿ ಆಡುವವರೆಲ್ಲಾ ಬಡವರು. ಶ್ರೀಮಂತರು ಯಾರೂ ಆಡುವುದಕ್ಕೆ ಹೋಗುವುದಿಲ್ಲ. ಒಂದುವೇಳೆ ಶ್ರೀಮಂತರು ಇದ್ದರೆ ಕುದುರೆ ಜೂಜು ಆಡಬಹುದು ಅಥವಾ ಇನ್ನೇನಾದರೂ ಆಡುವುದಕ್ಕೆ ಹೋಗಬಹುದು. ಕುದುರೆ ಜೂಜು ಆಡುವುದಕ್ಕೆ ಹೋಗುವವರೂ ಜಾಸ್ತಿ ಬಡವರೇ. ಈ ಲಾಟರಿ ಆಡುವವರು ಪರ್ಟಿಕ್ಯುಲರ್ ಬಡವರು, ಆಸೆಗೋಸ್ಕರ ಆಡುತ್ತಾರೆ. ನನ್ನ ಹತ್ತಿರ ಬಂದು ಅನೇಕ ಸಾರಿ ಕಂಪ್ಲೇಂಟ್ ಮಾಡಿರು. ಪೊಲೀಸ್‌ನವರು ಕೋ–ಅಪರೇಟ್ ಮಾಡುತ್ತಿಲ್ಲ, ನಾನು ಮೀಟಿಂಗ್ ಮಾಡಿದ್ದೇನೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ, ಎಂದು ನಾನು ಹೇಳಿದೆ ಇದಕ್ಕೆ ದಾರಿ ಒಂದೇ ನಾವು ಒಂದಂಕಿ ಲಾಟರಿ ಆಡಿಸುತ್ತೇನೆ, ಎರಡು ಅಂಕಿ ಲಾಟರಿ ಆಡಿಸುತ್ತೇವೆ ಇವೆಲ್ಲಾ ಆಗುವುದಿಲ್ಲ. ನಾವು ಟೋಟಲ್ ಆಗಿ ಈ ರಾಜ್ಯವನ್ನು ಲಾಟರಿ ಫ್ರೀಜೋನ್ ಮಾಡಿದರೆ ಇದು ಆಗುವುದು ಅಂತ ಈಗ ಏನಾಗುತ್ತದೆ ನಾವು ಆನ್ ಲೈನ್ ಲಾಟರಿ ಹಾಗೂ ಇಂಟರ್‌ನೆಟ್ ಲಾಟರಿ ನಿಲ್ಲಿಸಿದೆವು. ಮತ್ತೆ ಅವೆಲ್ಲಾ ವಾಪಸ್ಸು ಹಿಂಬಾಗಿಲಿನಿಂದ ಬಂದಿದೆ. ನಾನು ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಬಹಳ ಜನರು ಬಂದು ನನಗೆ ಹೇಳಿದರು, ಬೆಂಗಳೂರು ಮೈಸೂರು, ದೊಡ್ಡ ದೊಡ್ಡ ನಗರಗಳಲ್ಲೆಲ್ಲಾ ಆನ್‌ಲೈನ್ ಲಾಟರಿ, ಇಂಟರ್‌ನೆಟ್ ಲಾಟರಿ ಬೇರೆ ಬೇರೆ ರೂಪ ತಾಳಿಕೊಂಡು ನಡೆಯುತ್ತಿವೆ. ನಮ್ಮ ಟ್ರೆಡಿಷನಲ್

ಲಾಟರಿ ಹೆಸರಿನಲ್ಲೆ ಇವೆಲ್ಲಾ ನಡೆಯುತ್ತಿವೆಯೆಂದು ಹೇಳಿದ್ದಾರೆ. ಈಗ ಲಾಟರಿಯಿಂದ ನಮಗೆ ಬರತಕ್ಕಂಥಾದ್ದು ನೂರು ಚಿಲ್ಲರೆ ಕೋಟಿ ರೂಪಾಯಿ ಒಂದು ವರ್ಷಕ್ಕೆ ಆದಾಯ ಬರುತ್ತದೆ. ಆ ಕಡೆ ಈ ಕಡೆ ಅರೌಂಡ್ ಹಂಡ್ರೆಡ್ ಕೋಟಿ ರೂಪಾಯಿ ಬರುತ್ತದೆ. ಅದು ದೊಡ್ಡ ಆದಾಯವೇನಲ್ಲ. ಒಂದು ಲಾಟರಿ ಏಜೆಂಟ್‌ಅದನ್ನು ನಡೆಸುವವರು ಏನು ಹೇಳುತ್ತಾರೆ ಎಂದರೆ ನಮಗೆ ಕೆಲಸ ಹೊರಟು ಹೋಗುತ್ತದೆ. ನಾವು ಬಹಳ ಜನ ಇದೇ ಕೆಲಸದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಇರಬಹುದು, ಆದರೆ ಸಮಾಜಕ್ಕೆ ಒಳ್ಳೆಯದು ಮಾಡುವಾಗ ಇನ್ನೊಂದು ಕಡೆ ಕೆಲವರಿಗೆ ತೊಂದರೆ ಆಗೇ ಆಗುತ್ತದೆ. ಆದರೆ ಯಾವುದು ಸಮಾಜಕ್ಕೆ ಹೆಚ್ಚು ಉಪಯೋಗ ಎನ್ನುವುದು ಬಹಳ ಮುಖ್ಯವಾಗುತ್ತದೆ. ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾವು ಆನ್‌ಲೈನ್ ಲಾಟರಿ ಇವನ್ನೆಲ್ಲಾ ನಿಲ್ಲಿಸಿದ್ದೇವೆ. ಇದಕ್ಕೆ ಪೊಲಿಟಿಕಲ್ ವಿಲ್ ಬೇಕು. ಈ ವರದಿಗಳು ಅಂದರೆ ನೂರೆಂಟು ವರದಿಗಳು ಇವೆ. ಕೇರಳ ತಮಿಳುನಾಡಿಗೆ ಕಳುಹಿಸಿದ್ದೇವೆ. ಎನ್ನುವುದೆಲ್ಲಾ ನೆಪ. ನಾನು ಇದನ್ನು ಸರ್ಕಾರದಲ್ಲಿ ಇನ್‌ಫ್ಲೂಯೆನ್ಸ್ ಮಾಡಿ ಮಾಡಿಸುವುದಕ್ಕಾಗಿಲ್ಲ ಎಂದು ಹೊರಟ್ಟಿಯವರೇ ಒಪ್ಪಿಕೊಳ್ಳಿ. ಸುಮ್ಮನೆ ಇದೆಲ್ಲಾ ಏಕೆ ಹೇಳುತ್ತೀರಿ? ಈಗ ನಾನು ಲಾಟರಿ ಮಂತ್ರಿ ಅಲ್ಲ, ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್, ಆದ್ದರಿಂದ ನನಗೂ ಅದಕ್ಕೂ ಸಂಬಂಧ ಇಲ್ಲ, ಆಗ ಅದು ಇದ್ದಾಗ ಹೇಳಿದ್ದೆ ಎಂದು ಹೇಳಿ. ನೀವು ಕನಿಷ್ಟ ಕಾರ್ಯಕ್ರಮ ಮಾಡುವಾಗ ಮಾಡಿ ಕನಿಷ್ಟ ಕಾರ್ಯಕ್ರಮ ಮಾಡಿ ನಾವು ಕಾಂಗ್ರೆಸ್‌ನವರು ಅದನ್ನು ಸೇರಿಸಿದ್ದೆವು. ಆನ್‌ಲೈನ್ ಲಾಟರಿ ಹಾಗೂ ಇಂಟರ್‌ನೆಂಟ್ ಲಾಟರಿಯಿಂದ ಅದು ಎಷ್ಟಾದರೂ ಬರಲಿ, ಅದನ್ನು ರದ್ದು ಮಾಡುತ್ತೇವೆ ಎಂದು. 280 ಕೋಟಿ ರೂಪಾಯಿ ವರ್ಷಕ್ಕೆ ಬರುತ್ತಿತ್ತು. ಹೋಯಿತು, ಹೋಗಲಿ ಆದರೆ ಅನೇಕ ಜನರ ಬದುಕು ಉಳಿದುಕೊಂಡಿತು. ಜನಜೀವ ಉಳಿದುಕೊಂಡಿತು. ಈಗಲೂ ಕೂಡ ನೀವು ಲಾಟರಿ ಜೋನ್ ಮಾಡಿ, ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತೆಗೆದುಕೊಡು ಬನ್ನಿ. ಬೇರೆ ರಾಜ್ಯದವರು ಇಲ್ಲಿಗೆ ಒಂದು ಲಾಟರಿ ಮಾರಬಾರದು ಹಾಗೆ ಮಾಡಿ. ಅದಕ್ಕೆ ಒಂದು ಕಾನೂನು ಮಾಡಿ. ಕಾನ್ಸಿಟಿಟ್ಯೂಷನ್‌ಗೆ ತಿದ್ದುಪಡಿ ತರಬೇಕಾದರೆ ಮಾಡಿ. ಇದನ್ನು ಮಾಡದೇ ಹೋದರೇ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಸುಮ್ಮನೆ ನಾವು ಅಲ್ಲಿಗೆ ಒಂದು ಟೀಮ್ ಕಳುಹಿಸಿದ್ದೇವೆ ಇಲ್ಲಿಗೆ ಒಂದು ಟೀಮ್ ಕಳುಹಿಸಿದ್ದೇವೆ ಎಂದು ಹೇಳುವುದು, ಇದು ಸುಮ್ಮನೆ ಕಾಲ ಕಳೆಯುವುದಕ್ಕೆ. ಈ ಬಜೆಟ್ ಆಯಿತು. ಮತ್ತೆ ಇನ್ನೊಂದು ಬಜೆಟ್ ಎಂದು ಹೇಳುತ್ತಾರೆ. ಅದು ಸಾಧ್ಯವಿಲ್ಲ. ಮಾಡುವುದಾದರೆ ಇದಕ್ಕೆ ಪೊಲಿಟಿಕಲ್ ವಿಲ್ ಬೇಕು. ಅದಕ್ಕೆ ಪೊಲಿಟಿಕಲ್ ವಿಲ್ ಬೇಕೇ ಹೊರತು ಬೇರೆ ಏನೂ ಬೇಕಾಗಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಟೋಟಲ್ ಬ್ಯಾನ್ ತರಬೇಕಾಗುತ್ತದೆ. ನಾವು ಇದನ್ನು ಮಾಡುತ್ತೇವೆ, ಅದನ್ನು ಮಾಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಟೋಟಲ್ ಬ್ಯಾನ್ ತಂದರೆ ಅದರ ಜೊತೆ O.C. ಇನ್‌ಕ್ರೀಸ್ ಮಟ್ಕಾ ಜಾಸ್ತಿಯಾಗುತ್ತದೆ, ಅದನ್ನು ಕಂಟ್ರೋಲ್ ಮಾಡಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ನಾನು ಏಕೆ ಆ ಮಾತನ್ನು ಹೇಳಿದೆನೆಂದರೆ, ಮಾನ್ಯ ಹೊರಟ್ಟಿಯವರು ಮಂತ್ರಿಗಳೆಂಬುದು ನನಗೆ ಗೊತ್ತು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ವಿರೋಧಪಕ್ಷದ ಕಡೆಯಲ್ಲಿ ಕುಳಿತಿದ್ದ ಟೈಮ್‌ನಲ್ಲಿ ಲಾಟರಿಗಳ

ಬಗ್ಗೆ ಎಷ್ಟು ಮಾತನಾಡಿದ್ದರು. ಈ ಲಾಟರಿಯನ್ನು ನಡೆಸಲು ಬಿಡಬಾರದು, ಇದರಿಂದ ಎಷ್ಟು ಕುಟುಂಬಗಳು ಹಾಳಾಗುತ್ತದೆ ಹೀಗೆ ಹಾಗೆ ಎಂದು ಹೇಳಿದ್ದರು. ಆದರೆ ಈ ಬಜೆಟ್ ಅನ್ನು ಮಾಡುವಾಗ ಲಾಟರಿಯ ಬಗ್ಗೆ ಏಕೆ ಆ ಚಿಂತನೆಯನ್ನು ಇಟ್ಟುಕೊಂಡಿಲ್ಲ.? ತಾವು ಇದನ್ನು ಯೋಚನೆ ಮಾಡಿ. ಮಾನ್ಯ ಈಶ್ವರಪ್ಪನವರು ಕೋಪದಲ್ಲಿ ನೋಡುತ್ತಿದ್ದಾರೆ, ಇದು ನಿಜ ತಾನೇ? ಮಾನ್ಯ ಯಡಿಯೂರಪ್ಪನವರು ಕೂಗಾಡಿದರು. ಇಲ್ಲ, ಇದು ಇರಬಾರದು ಅನ್ಯಾಯವಾಗುತ್ತದೆಂದು ಇಷ್ಟೆಲ್ಲಾ ಹೇಳಿ ಈಗ ನೀವೇ ಈ ರೀತ ಅನ್ಯಾಯ ಮಾಡುತ್ತಿರೆಂದರೆ ಹೇಗೆ? How we can believe. How you are going to give good service to the people?- ನೀವು ಯೋಚನೆ ಮಾಡು. ಅದು ಏನಾದರೂ ಆಗಲಿ, neighbouring states ಅವರು ಎಲ್ಲಾ ಬ್ಯಾನ್ ಮಾಡಿದ್ದಾರೆ. ಆ ಸ್ಟೇಟ್‌ಗಳಿಗೆಲ್ಲಾ ಬ್ಲಾಕ್ ಲಾಟರಿ ಟಿಕೇಟ್, ಬೋಗಸ್ ಲಾಟರಿ ಟಿಕೇಟ್, ಎಲ್ಲಿಂದ ಹೋಗುತ್ತದೆಂದರೆ ಹೊಸೂರು ಬಾರ್ಡರ್, ಮುಳಬಾಗಿಲು ಬಾರ್ಡರ್ ಇದು ನಮ್ಮ ಕಡೆಯಿಂದಲೇ, ಆದುದರಿಂದ, you must take immediate action. ತಾವು ಲೋಕಾಯುಕ್ತದವರಿಗೆ ಹೆಚ್ಚು ಪವರ್ಸ್ ಕೊಡಬೇಕೆಂದು ಹೇಳಿದ್ದೀರಿ, ಅವರು ಕೇಳಿದ್ದಾರೆ, ನೀವು ಒಪ್ಪಿಕೊಂಡಿದ್ದಿರೋ ಏನೋ ನಮಗೆ ಗೊತ್ತಿಲ್ಲ. ನೀವು ಒಪ್ಪಿಕೊಂಡಿದ್ದೀರೆಂದು ಕಾಣುತ್ತಿದೆ, ಈ ಸಲ ಲೋಕಾಯುಕ್ತದವರಿಗೂ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಇವರಿಗೆ ಕೊಡಲು ಎಷ್ಟು ಹಣವನ್ನು ಇಟ್ಟಿದ್ದೀರಿ ಎಂಬ ಬಗ್ಗೆ ಏನು ಬಜೆಟ್‌ನಲ್ಲಿ ಕೊಟ್ಟಿಲ್ಲ. ಅವರಿಗೂ ಸಹ ಪೋಲೀಸ್‌ನವರಿಗೆ ಕೊಟ್ಟಂತೆ ಟಿಪ್ಪುಸುಲ್ತಾನ್ ಗಾಡಿಗಳನ್ನು ಕೊಟ್ಟು, ಲೋಕಾಯುಕ್ತದವರನ್ನು ಬೇಗ ಬನ್ನಿ ಎಂದರೆ, ಅವರು ಈ ಗಾಡಿಗಳನ್ನು ತಳ್ಳಿಕೊಂಡು ಹೋಗುವುದಕ್ಕೆ ಸಾಧ್ಯವೇ? ಇದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಮಾನ್ಯ ಹೊರಟ್ಟಿಯವರು Parliamentary Affairs Minister ಆಗಿದ್ದೀರಿ. ನಿಮ್ಮ ಮೇಲೆ ನಮಗೆಲ್ಲರಿಗೂ ಗೌರವ ಇದೆ ನಾವು ಮನುಷ್ಯ ತೀರಿಕೊಂಡ ಮೇಲೆ, ಸತ್ತ ಮನುಷ್ಯ ಸ್ವರ್ಗದಲ್ಲಿ ಇರಬೇಕು. ನಮಗೆ ಎಲ್ಲರ ಮೇಲೆ ಗೌರವ ಇದೆ ನಾವು ಗೌರವ ಇಲ್ಲವೆಂದರೆ ಇಲ್ಲಿ ಏಕೆ ಮಾತನಾಡಬೇಕು? ಇದೆ But, while implementing any law, you must put an end to that. ಇಲ್ಲವೆಂದರೆ ಕಷ್ಟವಾಗುತ್ತದೆ. you must take into task. ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಪೊಲಿಟಿಕಲ್ ವಿಲ್ ಇರಬೇಕೆಂದು ಹೇಳಿದರು. ಎಷ್ಟೋ ಜನರು even seniormost officers ಆಗಿರುವವರೂ politics total ಇನ್ನೂ ಅವರು ಲರ್ನ್ ಮಾಡಿಲ್ಲ. ಅವರು ಇನ್ನೂ ಕಲಿತುಕೊಂಡಿಲ್ಲ, ಅವರೇ ಕಲಿತುಕೊಂಡಿಲ್ಲವೆಂದರೆ, ನಾನು ಹೇಗೆ ಕಲಿಸಿಕೊಳ್ಳುವುದಕ್ಕೆ ಆಗುತ್ತದೆ? ಆ ರೀತಿಯಲ್ಲಿ ಪೊಲಿಟಿಕಲ್ ಏನು ಎಂದರೆ, ಒಬ್ಬ ಮಗ ತಂದೆಯ ಹತ್ತಿರ ಕೇಳುತ್ತಾರೆ. ಅಪ್ಪಾ, ನನಗೆ ರಾಜಕೀಯವನ್ನು ಹೇಳಿಕೊಡಿ ಎಂದು ಕೇಳುತ್ತಾನೆ. ಅದಕ್ಕೆ ಅವರ ತಂದೆ ಬೇಡ ಹೋಗಪ್ಪ, ನಿನಗೆ ಅದೆಲ್ಲ ಸರಿಯಿಲ್ಲ ಎಂದು ಹೇಳಿದರು. ಆದರೂ ಅವರ ಮಗ ಬಿಡಲಿಲ್ಲ, ಇಲ್ಲ, ನೀವು ನನಗೆ ರಾಜಕೀಯವನ್ನು ಹೇಳಿ ಕೊಡಲೇಬೇಕೆಂದು ಕೇಳಿದನು.

ಕೊನೆಗೆ ಅವರ ತಂದೆ, ಆಯಿತು, ಮಗನೇ, ನೀನು ಸುಮಾರು ಸಲ ನನ್ನನ್ನು ಕೇಳುತ್ತಿದ್ದೀಯಾ, ಆಯಿತು ನಾಳೆ ನಿನಗೆ ಹೇಳಿಕೊಡುತ್ತೇನೆಂದು ಹೇಳಿದರು ಮಾರನೆ ದಿವಸ ಏಣಿಯನ್ನು ತೆಗೆದುಕೊಂಡು ಬಾ ಎಂದು ಹೇಳಿ, ಅದನ್ನು ಸೆಂಟ್ರಲ್ ವಾಲ್‌ನಲ್ಲಿ ಇಟ್ಟು ಈ ಫೋಟೋವನ್ನು ಏಣಿಯ ಮೇಲೆ ಹತ್ತಿ ಅಂಟಿಸಿ ಬನ್ನಿಯೆಂದು ಹೇಳಿದನು. ಆದೇ ರೀತಿಯಲ್ಲಿ ಮಗನು ಸಂತೋಷದಿಂದ ಆಯಿತು ಅಪ್ಪ ನನಗೆ ರಾಜಕೀಯ ಹೇಳಿಕೊಡುತ್ತಾರೆಂದು ಮಗ ಏಣಿಯ ಮೇಲೆ ಹತ್ತಿ ಫೋಟೋವನ್ನು ಅಂಟಿಸುವ ಸಮಯದಲ್ಲಿ, ಡ್ಯಾಡಿ ಏಣಿಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ, ಎಂದು ಹೇಳಿದಾಗ ಅದಕ್ಕೆ ತಂದೆ ಆಯಿತು. ಮಗನೇ ಎಂದು ಹೇಳಿ, ಮಗನು ಫೋಟೋ ಅಂಟಿಸುವ ಸಮಯಕ್ಕೆ ಅಪ್ಪ ಹಿಡಿದ ಏಣಿಯನ್ನು ಬಿಟ್ಟರು ಮಗನು ಮೇಲಿಂದ ಕೆಳಗಡೆ ಬಿದ್ದು ಹೋಗುತ್ತಾನೆ, ಆಗ ಮಗನು ತಂದೆಯನ್ನು ಏನಪ್ಪ ನಾನು ನಿಮ್ಮ ಮೇಲೆ ಪ್ರೀತಿ ಇಟ್ಟುಕೊಂಡು ಮೇಲೆ, ಹೋಗಿ ಫೋಟೋ ಅಂಟಿಸುವ ಸಮಯದಲ್ಲಿ ನೀವು ಕೈ ಬಿಟ್ಟಿದ್ದೀರಿ. ನಾನು ಬಿದ್ದು ಕಾಲು, ಕೈಯೆಲ್ಲಾ ಮುರಿದಿದೆ, ನೋವು ಆಗಿದೆ, ನೀವು ತಂದೆಯಾಗಿ ಮಗನಿಗೆ ಇಂಥ ಕೆಲಸ ಮಾಡುವುದು ಎಂದು ಕೇಳಿದನು. ಅದಕ್ಕೆ ತಂದೆ ನೀನೆ ತಾನೆ ನನಗೆ ಪಾಲಿಟಿಕ್ಸ್ ಅನ್ನು ಹೇಳಿಕೊಡು ಎಂದು ಕೇಳಿದೆ, ಅದಕ್ಕೆ ನಾನು ಹೇಳಿಕೊಟ್ಟಿದ್ದೇನೆ. ಇದೇ ಪಾಲಿಟಿಕ್ಸ್‌ನಲ್ಲಿ ಮೊದಲ ಪಾಠ ಎಂದು ಹೇಳಿದನು. ಇಲ್ಲಿ ತಂದೆ ಇದ್ದರೂ ಪಾಲಿಟಿಕ್ಸ್ ಮಗನನ್ನು ನಂಬಬಾರದು. ಅವನು ಕರೆಕ್ಟ್ ಆಗಿ ಹೇಳಿದ್ದಾನೆ. ನಾನು ತಂದೆ ಹೇಳಿದರೂ ಕೂಡ ಪಾಲಿಟಿಕ್ಸ್ ಅನ್ನು ನಂಬಬಾರದು ಅದನ್ನು ನಂಬಿದ್ದಕ್ಕೋಸ್ಕರನೇ ನಾನು ನಿನ್ನನ್ನು ಕೈಬಿಟ್ಟಿದ್ದು. ಆ ರೀತಿ ನಂಬಿಕೆ ಇಲ್ಲವೆಂದರೆ, ಮೇಲೆ ಏನಾದರೂ ಒಂದು ಆ್ಯಂಗಲ್ ಅನ್ನು ಹಿಡಿದುಕೊಂಡು ಇರಬೇಕಾಗಿತ್ತಲ್ಲವೇ? ತಂದೆ ಇದ್ದರೂ ಪಾಲಿಟಿಕ್ಸ್ ಅನ್ನು ನಂಬಬಾರದೆಂದು ಹೇಳಿದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನೀವು ಇದನ್ನು ಈಗ ಯಾರಿಗೆ ಹೇಳಿದ್ದೀರಿ?

ಶ್ರೀ ಎಸ್. ರಾಜೇಂದ್ರನ್ : ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ನಿನ್ನೆ ಮಾನ್ಯ ಧರ್ಮಸಿಂಗ್‌ರವರ ಮೇಲೆ ಬಹಳ ಗಂಭೀರವಾದ ಮಾತಿನಲ್ಲಿ ಹೇಳಿದರು. ಅವರು ಮುಂದೆ ಒಂದು 6 ತಿಂಗಳು ನಮ್ಮ ಎಲ್ಲರ ಮೇಲೆ ಪ್ರೀತಿ ಇಟ್ಟುಕೊಂಡು ಕೆಲಸವನ್ನು ಮಾಡದಿದ್ದರೆ,, ಯಾರ್‍ಯಾರು ಮೋಸವನ್ನು ಮಾಡುವುದಕ್ಕೆ ಪ್ಲಾನ್ ಮಾಡಿದ್ದರೊ, ಅವರ ಮೇಲೆಲ್ಲಾ ಪ್ರೀತಿಯನ್ನು ಇಟ್ಟುಕೊಂಡದ್ದಕ್ಕೋಸ್ಕರವೇ, ಅವರು ಮಾತ್ರ ಈ ಸಂದರ್ಭದಲ್ಲಿ ಚೆಸ್ ಬೋರ್ಡ್ ಕಾಯಿನ್‌ಗಳನ್ನು ಮನೆಯಲ್ಲಿ ಕುಳಿತುಕೊಂಡು, ಇಲ್ಲವೆಂದರೆ ಆಫೀಸ್‌ನಲ್ಲಿ ಕುಳಿತುಕೊಂಡು ಮೂವ್ ಮಾಡುವುದನ್ನು ಮಾತ್ರ, ಅವರು ಕಲಿತುಕೊಂಡಿದ್ದರೆ ಈಗ ಅವರು ಎಷ್ಟೋ ಕಾಯಿನ್‌ಗಳು ರಾಜಗಳನ್ನು, ರಾಣಿಗಳನ್ನು ಹೊಡೆದುಬಿಡುತ್ತಿದ್ದರು. ಸಿಪಾಯಿಗಳನ್ನು ಹೊಡೆಯಬಹುದಿತ್ತು. He believe But inspite ಅದೇ ಪಾಲಿಟಿಕ್ಸ್, ಆ ರೀತಿ ತಾವು ಸಿದ್ದರಾಮಯ್ಯನವರು ಏನು ಹೇಳಿದ್ದಾರೋ ಅದರ ಬಗ್ಗೆ ಚಿಂತನೆಯನ್ನು ಮಾಡಿ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಹೊರಟ್ಟಿ : ಈ ಕಾಯಿನ್‌ಗಳಿಗಿಂತ ಆ ಕಾಯಿನ್‌ಗಳು ಜಾಸ್ತಿ ಆಗಿವೆ.

ಶ್ರೀ ಎಸ್. ರಾಜೇಂದ್ರನ್ : ನಮಗೆ ಎಲ್ಲಿ ಜಾಸ್ತಿ ಇದೆ, ಎಲ್ಲಿ ಕಡಿಮೆ ಇದೆಯೆಂಬುದು ಬೇಡ.

ಅಧ್ಯಕ್ಷರು: ಮಾನ್ಯ ರಾಜೇಂದ್ರನ್‌ರವರೆ, ಏಕೆ ರಾಜಕೀಯವನ್ನು ಮಾತನಾಡುತ್ತೀರಿ? ಬಜೆಟ್ ಮೇಲೆ ಮಾತನಾಡಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ನಾನು ರಾಜಕೀಯವನ್ನು ಮಾತನಾಡಲಿಲ್ಲ ನಾನು ಪಾಲಿಟಿಕ್ಸ್ ಹೇಗೆ ಇದೆಯೆಂಬುದನ್ನು ಹೇಳಿದೆ.

ಅಧ್ಯಕ್ಷರು : ತಾವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಎಸ್. ರಾಜೇಂದ್ರನ್ : ಸುಮ್ಮನೆ, ಒಂದು ಕತೆ ಏಕೆಂದರೆ, ಹೀಗೆ ಇರಬೇಕು ಪಾಲಿಟಿಕ್ಸ್ ಹುಷಾರಾಗಿ ಇರಬೇಕು. ಕೆಲವು ಅಧಿಕಾರಿಗಳು ಹಾಗೆ ಹೇಳುವುದು, ಮೂವ್ ಮಾಡೋಣ ಎಂದು ಹೇಳುತ್ತಾರೆ, ಕೊನೆಗೆ ಅದನ್ನು ಬಿಡುತ್ತಾರೆ. ಈಗ ದೆಹಲಿಗೆ ಕಳುಹಿಸಿದ್ದೇವೆಂದು ಹೇಳಲಿಲ್ಲವೇ? ಅಂದರೆ ಇನ್ನೂ ಅಧಿಕಾರಿಗಳು ಏನು ಫಾಲೋ ಮಾಡುತ್ತಿದ್ದಾರೆ? ನೀವು ಅದನ್ನು ಈ ರೀತಿಯಲ್ಲಿ ತೆಗೆದುಕೊಂಡರೆ, ನಾನು ಏನು ಮಾಡುವುದಕ್ಕೆ ಆಗುತ್ತದೆ? ಇನ್ನು ಕೊನೆಯದಾಗಿ ನಾನು ಬಜೆಟ್ ಬಗ್ಗೆ ಮೊದಲೇ ಹೇಳಿದ್ದೆ ಬಹಳ ಒಳ್ಳೆಯ ಬಜೆಟ್ ನೊ ಡೌಟ್ ಎಂದು. ಚೆನ್ನಾಗಿ ಕೊಟ್ಟಿದ್ದೀರಿ, ಎಸ್.ಸಿ. ಎಸ್.ಟಿ. ಯವರಿಗೆ ಬೇಕಾದಷ್ಟು ಕೊಟ್ಟಿದ್ದೀರಿ. ಅದಕ್ಕೆ ಎಷ್ಟು ಬಜೆಟ್ ಎಂದು ಒದಗಿಸಿಲ್ಲ. you have not given how much is proved by the State Govt? ಎಷ್ಟು ಹಣ ಎಂದು ಪರ್‌ಪೆಟ್ ಆಗಿ ಒದಗಿಸಿಲ್ಲ. you must interest. ಆವತ್ತು ಮಾನ್ಯ ಯಡಿಯೂರಪ್ಪನವರ ಮೇಲೆ ಏನು ಬಂದಿದೆ? ಷೆಡ್ಯೂಲ್ ಕಾಸ್ಟ್‌ನವರಿಗೆಲ್ಲಾ ನೋವು ಆಗುವ ರೀತಿಯಲ್ಲಿ ಡಾ: ಬಿ.ಆರ್. ಅಂಬೇಡ್ಕರ್‌ರವರು ಫೋಟೋವನ್ನು ತೆಗೆದರು? ಎಂದು ಬಂತು. ಅವರು ಭಾಷಣವನ್ನು ಮಾಡಿದರು. ಅದು ನಿಜನೋ ಸುಳ್ಳೋ ತಾವು ಏನೂ ಇಲ್ಲವೆಂದು ಹೇಳಿದ ಮೇಲೆ ಅದನ್ನು ದೊಡ್ಡದಾಗಿ ಮಾತನಾಡುವ ಅವಶ್ಯಕತೆ ಇಲ್ಲ ಷೆಡ್ಯೂಲ್ ಕಾಸ್ಟ್ ಪಲ್ಸ್ ಅನ್ನು ಟೆಸ್ಟ್ ಮಾಡಿದ್ದೀರಾ, ಅವರು ಹೇಗೆ ಹೋರಾಟವನ್ನು ಶುರು ಮಾಡಿದರು. ಆ ಹೋರಾಟ ಬರಬಾರದು,ಈಗ ಪಲ್ಸ್ ಟೆಸ್ಟ್ ಮಾಡಿ, ಷೆಡ್ಯೂಲ್ ಕಾಸ್ಟ್‌ನವರಿಗೆ ಇದೆಲ್ಲವನ್ನೂ ಕೊಟ್ಟಿದ್ದೇವೆ, ಇಂಪ್ಲಿಮೆಂಟ್ ಮಾಡುತ್ತೇವೆ. immediately, it is reaching to the people. ಆ ರೀತಿಯಲ್ಲಿ ನೀವು ಏನಾದರೂ ಮಾಡಿದರೆ, ನಮ್ಮ ಷೆಡ್ಯೂಲ್ ಕಾಸ್ಟ್‌ನವರಿಗೆಲ್ಲಾ ಒಂದು ಒಳ್ಳೆಯ ಅಭಿಪ್ರಾಯ ಬರುತ್ತದೆ. ಆ ರೀತಿಯಲ್ಲಿ ತಾವು ಖಂಡಿತವಾಗಿ ಮಾಡಬೇಕು. ಕೋಟ್ಯಾಂತರ ರೂಪಾಯಿಗಳು ಲ್ಯಾಪ್ಸ್ ಎಂದು ಹೋಗುತ್ತದೆ. You should monitor that, whoever, the District officer, State officer or commissioner you must take them to task if they are not implementing in time. ಹಾಗೆ ಷೆಡ್ಯೂಲ್ ಕಾಸ್ಟ್‌ನವರಿಗೆ ಮಾಡಲೇ ಬೇಕು. Because we are only economically weak. For remaining things, we are nothing to control anybody. Nobody can just control this. Only in all aspects. If We get

financially sound. we need not demand all these things But. ಚುನಾವಣೆ ಬಂದರೆ, we are the vote banks. Every bodya want to untilize. Everyone wants to put Baba Saheb Ambedkar's photo and display. ಯಾವ ಚುನಾವಣೆಯಲ್ಲಿ ನಾನು ಡಾ: ಬಿ.ಆರ್. ಅಂಬೇಡ್ಕರ್‌ರವರ ಫೋಟೋ ಹಾಕುವುದಿಲ್ಲ, ನನಗೆ ಓಟು ಸಿಗುತ್ತದೆಂದು ಹೇಳುವವರು ಯಾರು ಇದ್ದಾರೆ? ಎಲ್ಲರೂ ಉಪಯೋಗ ಮಾಡಿಕೊಳ್ಳುತ್ತೀರಿ. ಆದುದರಿಂದ Every department should give 18% amount. It should be pooled and untilise for the development of Schedule Castes & Schedule Tribes ಎಂದು ಹೇಳಿ, ನನಗೆ ಭಾಷಣ ಮಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮಸ್ಕಾರ.

9. ಸಭಾಧ್ಯಕ್ಷರ ತೀರ್ಪು

ಅಧ್ಯಕ್ಷರು :

ವಿಧಾನಸಭಾ ಸದಸ್ಯರುಗಳಾದ ಶ್ರೀ ಡಿ.ಕೆ. ಶಿವಕುಮಾರ್, ಶ್ರೀ ಬಸವರಾಜ ರಾಯರೆಡ್ಡಿ, ಶ್ರೀ ದಿನೇಶ್ ಗುಂಡೂರಾವ್ ಹಾಗೂ ಶ್ರೀ ಸಿ.ಎಸ್. ನಾಡಗೌಡ ಅವರು ದಿನಾಂಕ 17.3.2006 ರಂದು ನೀಡಿರುವ ಪತ್ರದಲ್ಲಿ ವಿಧಾನ ಸಭೆ ಅಧಿವೇಶನ ಆರಂಭವಾಗುವ ದಿನಕ್ಕೆ ಕೇವಲ ಒಂದು ದಿನ ಮೊದಲು ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯ ಮಂತ್ರಿಗಳು ಜಂಟಿಯಾಗಿ ಪತ್ರಿಕಾಗೋಷ್ಠಿ ನಡೆಸಿ **"ಕರ್ನಾಟಕ ಅಭಿವೃದ್ಧಿ ರಂಗ"** ಎಂಬ ಹೆಸರಿನಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಪ್ರಕಟಣೆ ಮಾಡಿರುತ್ತಾರೆಂದು, ಜೊತೆಯಲ್ಲಿಯೇ ಸರ್ಕಾರದ ಮುಂಬರುವ ಧೋರಣೆ ಹಾಗೂ ನೀತಿಯ ಬಗ್ಗೆ ಮುನ್ಸೂಚನೆಯನ್ನು ನೀಡಿರುತ್ತಾರೆಂದು ಹಾಗೂ ಅಧಿವೇಶನ ನಡೆಯುವ ಸಂದರ್ಭದಲ್ಲಿ ಈ ರೀತಿಯಲ್ಲಿ ಸರ್ಕಾರದ ನೀತಿ ನಿರೂಪಣೆ ನಿರ್ಧಾರಗಳನ್ನು ಪ್ರಕಟಿಸುವುದು ಸೂಕ್ತವಲ್ಲವೆಂದು, ಸರ್ಕಾರದ ಈ ಕೃತ್ಯದಿಂದ ಸದನಕ್ಕೆ ಅಪಮಾನ ಮಾಡಿದಂತೆ ಆಗಿದೆ ಎಂದು ತಿಳಿಸಿರುತ್ತಾರೆ. ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಜಂಟಿಯಾಗಿ ಸದನಕ್ಕೆ ಅಪಚಾರ ಮತ್ತು ಅಗೌರವ ಎಸಗಿರುವುದರಿಂದ ಇವರ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡಲು ಅನುಮತಿಯನ್ನು ಕೋರಿ ದಿನಾಂಕ 17.03.2006 ರಂದು ಸದನದಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಸಂದರ್ಭದಲ್ಲಿ ನಾನು ಈ ವಿಷಯವು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿದ್ದರೂ ಸಹ ನನ್ನ ತೀರ್ಪನ್ನು ಕಾಯ್ದಿರಿಸಿದ್ದೆನು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ **ನಿಯಮ 192ರ** ಪ್ರಕಾರ ಹಕ್ಕು ಬಾಧ್ಯತೆ ವಿಷಯವನ್ನು ಚರ್ಚಿಸಲು ಅಪೇಕ್ಷಿಸುವ ಸದಸ್ಯರು ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಪತ್ರವನ್ನು ಕೊಡಬೇಕಾಗುತ್ತದೆ ಹಾಗೂ ಯಾವುದೇ ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ ಸೂಚನಾ ಪತ್ರದೊಂದಿಗೆ ಸಂಬಧಪಟ್ಟ ದಸ್ತಾವೇಜಿನ ಪ್ರತಿಯನ್ನು ನೀಡಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರುಗಳು ತಮ್ಮ ಪತ್ರದ ಜೊತೆ ಯಾವುದೇ ದಸ್ತಾವೇಜನ್ನು ಲಗತ್ತಿಸಿರುವುದಿಲ್ಲ.

ಕರ್ನಾಟಕ ವಿಧಾನ ಸಭೆಯಲ್ಲಿ 1968 ಸೆಪ್ಟೆಂಬರ್, 17 ರಂದು ಹಾಗೂ ದಿನಾಂಕ 1ನೇ ಮಾರ್ಚ್, 1993 ರಂದು ಅಂದಿನ ಮಾನ್ಯ ಸಭಾಧ್ಯಕ್ಷರವರು ನೀಡಿರುವ ತೀರ್ಮಾನಗಳನ್ನು ಗಮನಿಸಿದ್ದೇನೆ. ಸದನ ನಡೆಯುವಾಗ ಸದನದ ಹೊರಗಡೆ ನೀತಿ ಹೇಳಿಕೆಗಳನ್ನು ನೀಡುವುದರಿಂದ ಹಕ್ಕುಚ್ಯುತಿಯಾಗುವುದಿಲ್ಲವೆಂದು, ಆದರೆ ಇಂತಹ ಹೇಳಿಕೆಗಳು ಸೌಜನ್ಯದ ಉಲ್ಲಂಘನೆಯೆಂದು (Breach of courtesy) ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರುಗಳು ನೀಡಿರುವ ಹಕ್ಕುಚ್ಯುತಿ ಸೂಚನೆಯನ್ನು ತಿರಸ್ಕರಿಸಿ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ.

ಈಗ ಸದನವನ್ನು ಸೋಮವಾರ ಬೆಳಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 51 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 27ನೇ ಮಾರ್ಚ್ 2006ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಅನುಬಂಧ

98 (18) ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) (ಕೃಷಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯು ಕೃಷಿ ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದರಲ್ಲಿ ಮುಂಚೂಣಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಿಜಾಪುರದಲ್ಲಿ ಕೃಷಿ ಮತ್ತು ತೋಟಗಾರಿಕಾ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಸರ್ಕಾರ ಹೊಂದಿದೆಯೇ?

ಇ) ಹಾಗಿದ್ದಲ್ಲಿ ಅಂತಹ ಯಾವ ಯಾವ ಕೈಗಾರಿಕೆಗಳನ್ನು ಪ್ರಾರಂಭಿಸಲಾಗುವುದು?

ಈ) ಜಾಪುರದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರ ಮನಗಂಡಿದೆಯೇ;

ಉ) ಹಾಗಿದ್ದಲ್ಲಿ ಮೂಲಭೂತ ಸೌಕರ್ಯಗಳನ್ನು ಯಾವಾಗ ಒದಗಿಸಲಾಗುವುದು;

ಊ) ಬಿಜಾಪುರದಲ್ಲಿ ಕೈಗಾರಿಕೆಗಳ ಸ್ಥಾಪನೆ, ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದೆ?

ಶ್ರೀ ಬಂಡೆಪ್ಪಾ ಕಾಶಂಪೂರ್ (ಮಾನ್ಯ ಕೃಷಿ ಸಚಿವರು):

ಅ) ಹೌದು. Yes

ಆ ಹೌದು. Yes

ಇ) ಕೃಷಿ ಮತ್ತು ತೋಟಗಾರಿಕೆ ಆಧಾರಿತ ಕೈಗಾರಿಕೆಗಳಾದ ಶೀತಲಗೃಹ, ಒಣದ್ರಾಕ್ಷಿ ಉತ್ಪಾದನೆ, ಗ್ರೇಪ್ ವೈನ್, ಆಹಾರ ಧಾನ್ಯಗಳ ಸಂಸ್ಕರಣೆ, ಎಣ್ಣೆಮಿಲ್, ಕೃಷಿ ಸಲಕರಣೆ ತಯಾರಿಕೆ,

ಟ್ರಾಕ್ಟರ್ ಟ್ರೈಲರ್‌ಗಳ ತಯಾರಿಕೆ ಇತ್ಯಾದಿ ಘಟಕಗಳನ್ನು ಆರಂಭಿಸುವ ಉದ್ದೇಶ ಹೊಂದಲಾಗಿದೆ. ಬೀಜಾಪುರದಲ್ಲಿ ಕೈಗಾರಿಕಾ ಪ್ರದೇಶದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು, ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಕ್ರಮಕೈಗೊಳುವುದು.

99 (40) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾಂಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಚಾಮರಾಜನಗರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಟಾಸ್ಕ್‌ಫೋರ್ಸ್ ವತಿಯಿಂದ ಮಂಜೂರಾಗಿರುವ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು;

ಆ. ಅನುದಾನದ ಕೊರತೆ ಏನಾದರೂ ಇದೆಯೇ;

ಇ. ಹಾಗಿಲ್ಲದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಗೋವಿಂದ. ಎಂ. ಕಾರಜೋಳ್ (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) :

ಟಾಸ್ಕ್‌ಫೋರ್ಸ್ ಶೀರ್ಷಿಕೆಯಡಿಯೇ 2005–06 ಸಾಲಿಗೆ ಯಾವುದೇ ಪ್ರತ್ಯೇಕ ಅನುದಾನ ಹಂಚಿಕೆ ಇಲ್ಲದಿರುವುದರಿಂದ ಜುಲೈ 2005ರ ಅಂತ್ಯಕ್ಕೆ ಅನುಷ್ಠಾನಗೊಳಿಸಿರುವ ಅನುಮೋದಿತ ಕಾಮಗಾರಿಗಳ ಕಾಮಗಾರಿಗಳ ಬಾಬ್ತು ಬಿಲ್ ಪಾವತಿಗಾಗಿ ರೂ.552,44 ಲಕ್ಷದ ಬೇಡಿಕೆ ಚಾಮರಾಜನಗರ ಜಿಲ್ಲಾ ಪಂಚಾಯತಿಯಿಂದ ಬಂದಿತ್ತು. ಆದುದರಿಂದ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಕುಡಿಯುವ ನೀರಿನ ಬಾಬ್ತಿಗಾಗಿ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ರೂ. 966.00 ಲಕ್ಷ ಅನುದಾನದ ವತಿಯಿಂದ ಸದರಿ ಬಿಲ್ ಪಾವತಿ ಮಾಡಲು ಅನುಮತಿ ನೀಡಲಾಗಿದೆ. ರಾಜ್ಯ ಮತ್ತು ಕೇಂದ್ರ ವಲಯಗಳಡಿ ಬಿಡುಗಡೆಯಾಗಿರುವ ಅನುದಾನದ ಪೈಕಿ ಅನುಮೋದನೆಯಾಗಿ ಸಮರ್ಪಕವಾಗಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಪಾವತಿಸಲು ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳು ನಿಯಮಾನುಸಾರ ಕ್ರಮಕೈಗೊಳಗೊಳ್ಳುತ್ತವೆ. ಇದಕ್ಕೆ ಬೇಕಾಗುವು ಅನುದಾನ ನೀಡಲು ಸರಕಾರ ಬದ್ಧವಾಗಿದೆ.

100 (44) ಶ್ರೀ ಧ್ರವನಾರಾಯಣ ಆರ್. (ಸಂತೇಮರಳ್ಳಿ) (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ದೊಡ್ಡ ಕೌಲಂದೆ ಹೋಬಳಿಗಳಿಗೆ ಸೇರಿದ ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಕುಡಿಯುವ ನೀರಿನ ಯೋಜನೆಗೆ ಶಾಸ್ವತ ಪರಿಹಾರಕ್ಕಾಗಿ ಕಬಿನಿ ನದಿಯಿಂದ ನೀರನ್ನು ಪೂರೈಸುವ ಸರ್ಕಾರದ ಯೋಜನೆ ಈಗ ಯಾವ ಹಂತದಲ್ಲಿದೆ'

ಇ. ಈ ಯೋಜನೆಯ ತ್ವರಿತ ಜಾರಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಗೋವಿಂದ. ಎಂ. ಕಾರಜೋಳ್ (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು):

ಅ. ಬಂದಿದೆ.

ಆ. ದೊಡ್ಡ ಕೌಲಂದೆ ಹಾಗೂ ಇತರೆ 53 ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಸಿದ್ಧಪಡಿಸಿರುವ ರೂ. 14.60 ಕೋಟಿ ಅಂದಾಜಿನ ಯೋಜನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

101 (266) Sri Dinesh Gundurao(Gandi Nagar): (Sri Nagaaj Shetty Minister for fisheries, Muzrai and Horticulture. Please Answer this Question

a) Whether it has come to this notice of the Government that the Archaks to temples coming under the purview if Muzrai Department are being paid very less monthly salary (less than Rs. 100/-);

b) If so, what is the minimum and maximum monthly salary which is being given to Arachaks;

c) Whether it has come to the notice of Government that even the Court has observed that it would not be possible to lead the life with such a meagre salery;

d) If so, What is the action taken by Government to enhance to salaries of the Archaks of Muzrai temples?

Sri B. Nagaraj shetty (Sri Minister for fisheries, Muzrai and Horticulture):

a) Yes.

b) Minimum pay -1/-rupee per month Maximum pay -Rs. 4,510/ -per month

c). No.

d) Salary/ Remuneration of the Archaks is being paid put of the fund and the income derivied by the respective temples. There is provision in the Act to pay the salaries of the Archaks from the consoldated Fund of the State

However the basic annual income of the majority of Muzrai tempels is by way of Tasdiq, The matter of increasing the Tasdiq amount of Rs. 6,000/- p.a. respect of the temples where the annual Tasdiq amount is less that Rs. 6000/- p.a is being considered during the year 2006-07

102 (274) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕಳೆದ ಒಂದು ವರ್ಷದ ಅವಧಿಯಲ್ಲಿ ಕೃಷಿ ಮಾರುಕಟ್ಟೆ ಇಲಾಖೆಯ ವತಿಯಿಂದ ನಬಾರ್ಡ್ ಅನುದಾನದಲ್ಲಿ ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮಗಳ ವಿವರಗಳೇನು ಮತ್ತು ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ. ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ನಬಾರ್ಡ್ ಅನುದಾನದಿಂದ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು ಮತ್ತು ಇದರ ಅಂದಾಜು ವೆಚ್ಚವೆಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)?

ಶ್ರೀ ಶರಣಬಸಪ್ಪ ದರ್ಶನಾಪುರ (ಮಾನ್ಯ ಕೃಷಿ ಮಾರುಕಟ್ಟೆ ಸಚಿವರು):

ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಒಟ್ಟು 5 ಜಿಲ್ಲೆಗಳಿದ್ದು ನಬಾರ್ಡ್ ಸಂಸ್ಥೆಯ ಆರ್. ಐ.ಡಿ.ಎಫ್. IXರ ಯೋಜನೆಯಡಿಯಲ್ಲಿ ಒಟ್ಟು ಮೊತ್ತ ರೂ. 654.84 ಲಕ್ಷಗಳಲ್ಲಿ 55 ಗ್ರಾಮೀಣ ಸಂತೆಗಳ ಅಭಿವೃದ್ಧಿ ಕಾರ್ಯವನ್ನು 2004-05ನೇ ಸಾಲಿನಿಂದ ಕೈಗೊಂಡಿದ್ದು, ಇಲ್ಲಿಯವರೆವಿಗೂ ರೂ.454.51 ಲಕ್ಷಗಳು ವೆಚ್ಚವಾಗಿದೆ. ಜಿಲ್ಲಾವಾರು ವಿವಿರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಆ. ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ನಬಾರ್ಡ್ ಸಂಸ್ಥೆಯ ಆರ್‌ಐಡಿಎಫ್ XIರ ಯೋಜನೆ ಯಡಿಯಲ್ಲಿ ಒಟ್ಟು ರೂ. 31.75 ಲಕ್ಷ ಮೊತ್ತದಲ್ಲಿ 3 ಗ್ರಾಮೀಣ ಸಂತೆಗಳ ಅಭಿವೃದ್ಧಿ ಕಾರ್ಯವನ್ನು 2005-06ನೇ ಸಾಲಿನಿಂದ ಕೈಗೊಳ್ಳಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವಿವಗಳನ್ನು ಅನುಬಂಧ-2ರಲ್ಲಿ ನೀಡಿದೆ.

ಅನುಬಂಧ-1

ಹೈದರಾಬಾದ್ - ಕರ್ನಾಟಕ ವ್ಯಾಪ್ತಿಯಲ್ಲಿನ ಜಿಲ್ಲೆಗಳಲ್ಲಿ ನಬಾರ್ಡ್ ಸಂಸ್ಥೆಯ ಆರ್.ಐ.ಡಿ.ಎಫ್. IX ಯೋಜನೆಯಡಿಯಲ್ಲಿ ಕೈಗೊಂಡಿರುವ ಗ್ರಾಮೀಣ ಸಂತೆ ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ಗ್ರಾಮೀಣ ಸಂತೆ ಹೆಸರು	ಜಿಲ್ಲೆ	ಸಮಿತಿಯ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಆರ್ಥಿಕ ವೆಚ್ಚ ರೂ.ಲಕ್ಷಗಳಲ್ಲಿ	ಕೆಲಸದ ಹಂತ
1	ದೇವಸಮುದ್ರ	ಬಳ್ಳಾರಿ	ಹೊಸಪೇಟೆ	11.42	11.00	ಕೆಲಸ ಪೂರ್ಣಗೊಂಡಿದೆ
2	ಬಿ. ನಾಗೇನಹಳ್ಳಿ	ಬಳ್ಳಾರಿ	ಬಳ್ಳಾರಿ	11.10	12.34	ಕೆಲಸ ಪೂರ್ಣಗೊಂಡಿದೆ
3	ರಾಮನಾಗರ	ಬಳ್ಳಾರಿ	ಹೊಸಪೇಟೆ	10.90	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
4	ಚಿಲಕನಹಟ್ಟಿ	ಬಳ್ಳಾರಿ	ಹೊಸಪೇಟೆ	11.40	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
5	ಉಪ್ಪಾರಹೊಸಳ್ಳಿ	ಬಳ್ಳಾರಿ	ಸಿರುಗುಪ್ಪ	11.00	12.54	ಕೆಲಸ ಪೂರ್ಣಗೊಂಡಿದೆ
6	ರಾವಿಹಾಳಿ	ಬಳ್ಳಾರಿ	ಸಿರುಗುಪ್ಪ	11.50	12.92	ಕೆಲಸ ಪೂರ್ಣಗೊಂಡಿದೆ
7	ಹಂಪನಾಗರ	ಬಳ್ಳಾರಿ	ಹೆಚ್.ಬಿ.ಹಳ್ಳಿ	11.15	12.00	ಕೆಲಸ ಪೂರ್ಣಗೊಂಡಿದೆ
8	ಹೊಲಗುಂದ	ಬಳ್ಳಾರಿ	ಹಡಗಲಿ	11.25	12.84	ಕೆಲಸ ಪೂರ್ಣಗೊಂಡಿದೆ
9	ಕೊರ್ಲಗುಂದಿ	ಬಳ್ಳಾರಿ	ಬಳ್ಳಾರಿ	12.00	12.90	ಕೆಲಸ ಪೂರ್ಣಗೊಂಡಿದೆ
10	ಹುರಳಿಹಾಳ್	ಬಳ್ಳಾರಿ	ಕೊಟ್ಟೂರು	11.25	12.89	ಕೆಲಸ ಪ್ರಗತಿಯಲ್ಲಿದೆ
11	ಚೋರನೂರು	ಬಳ್ಳಾರಿ	ಬಳ್ಳಾರಿ	11.25	–	ಕೆಲಸ ಪ್ರಾರಂಭಿಸಬೇಕು
12	ಗುಡಿಕೋಟೆ	ಬಳ್ಳಾರಿ	ಕೊಟ್ಟೂರು	11.25	12.20	ಕೆಲಸ ಪೂರ್ಣಗೊಂಡಿದೆ.
13	ಚಂದರಕಿ	ಗುಲ್ಬರ್ಗಾ	ಯಾದಗಿರಿ	11.40	–	ನಿವೇಶನ ತಕರಾರಿನಿಂದ ಕೆಲಸ ಪ್ರಾರಂಭಿಸಿಲ್ಲ
14	ಗಾಜರಿಕೋಟೆ	ಗುಲ್ಬರ್ಗಾ	ಯಾದಗಿರಿ	11.40	–	ಕೆಲಸ ಪ್ರಗತಿಯಲ್ಲಿದೆ.
15	ಮಡಿವಾಳ	ಗುಲ್ಬರ್ಗಾ	ಗುಲ್ಬರ್ಗಾ	11.40	9.50	ಕೆಲಸ ಪ್ರಗತಿಯಲ್ಲಿದೆ.

16	ಕಡಗಂಚಿ	ಗುಲ್ಬರ್ಗಾ	ಗುಲ್ಬರ್ಗಾ	11.45	12.19	ಕೆಲಸ ಪ್ರಗತಿಯಲ್ಲಿದೆ.
17	ಸೊಂತ	ಗುಲ್ಬರ್ಗಾ	ಗುಲ್ಬರ್ಗಾ	11.40	12.63	ಕೆಲಸ ಪ್ರಗತಿಯಲ್ಲಿದೆ.
18	ನಿಂಬರಗ	ಗುಲ್ಬರ್ಗಾ	ಗುಲ್ಬರ್ಗಾ	11.45	10.50	ಕೆಲಸ ಪ್ರಗತಿಯಲ್ಲಿದೆ.
19	ಮುನ್ನೊಳ್ಳಿ	ಗುಲ್ಬರ್ಗಾ	ಗುಲ್ಬರ್ಗಾ	11.40	11.28	ಕೆಲಸ ಪ್ರಗತಿಯಲ್ಲಿದೆ.
20	ನೆಲ್ಲೋಗಿ	ಗುಲ್ಬರ್ಗಾ	ಗುಲ್ಬರ್ಗಾ	11.40	11.60	ಕೆಲಸ ಪ್ರಗತಿಯಲ್ಲಿದೆ.
21	ಕುಡಿ	ಗುಲ್ಬರ್ಗಾ	ಗುಲ್ಬರ್ಗಾ	11.40	10.38	ಕೆಲಸ ಪ್ರಗತಿಯಲ್ಲಿದೆ.
22	ಅಂದೋಲ	ಗುಲ್ಬರ್ಗಾ	ಗುಲ್ಬರ್ಗಾ	11.40	10.17	ಕೆಲಸ ಪ್ರಗತಿಯಲ್ಲಿದೆ.
23	ಇಜೆರೀ	ಗುಲ್ಬರ್ಗಾ	ಗುಲ್ಬರ್ಗಾ	11.40	4.81	ಕೆಲಸ ಪ್ರಗತಿಯಲ್ಲಿದೆ.
24	ಅಂಕಲಗ	ಗುಲ್ಬರ್ಗಾ	ಗುಲ್ಬರ್ಗಾ	11.80	10.52	ಕೆಲಸ ಪ್ರಗತಿಯಲ್ಲಿದೆ.
24	ನಾಗರಹಳ್ಳಿ	ಗುಲ್ಬರ್ಗಾ	ಗುಲ್ಬರ್ಗಾ	11.40	5.00	ಕೆಲಸ ಪ್ರಗತಿಯಲ್ಲಿದೆ.
26	ಪಟ್ಟಣ	ಗುಲ್ಬರ್ಗಾ	ಗುಲ್ಬರ್ಗಾ	11.80	9.82	ಕೆಲಸ ಪ್ರಗತಿಯಲ್ಲಿದೆ.
27	ಕಲ್ಲಂಗರಗ	ಗುಲ್ಬರ್ಗಾ	ಗುಲ್ಬರ್ಗಾ	11.40	10.20	ಕೆಲಸ ಪ್ರಗತಿಯಲ್ಲಿದೆ.
28	ಫಿರೋಜಾಬಾದ್	ಗುಲ್ಬರ್ಗಾ	ಗುಲ್ಬರ್ಗಾ	11.45	4.89	ಕೆಲಸ ಪ್ರಗತಿಯಲ್ಲಿದೆ.
29	ಕರಜ್ಗ	ಗುಲ್ಬರ್ಗಾ	ಗುಲ್ಬರ್ಗಾ	11.40	7.02	ಕೆಲಸ ಪ್ರಗತಿಯಲ್ಲಿದೆ.
30	ಮಶಾಳ	ಗುಲ್ಬರ್ಗಾ	ಗುಲ್ಬರ್ಗಾ	11.30	11.63	ಕೆಲಸ ಪ್ರಗತಿಯಲ್ಲಿದೆ.
31	ಚೌಡಾಪುರ	ಗುಲ್ಬರ್ಗಾ	ಗುಲ್ಬರ್ಗಾ	11.40	4.87	ಕೆಲಸ ಪ್ರಗತಿಯಲ್ಲಿದೆ.
32	ದೂರನಹಳ್ಳಿ	ಗುಲ್ಬರ್ಗಾ	ಶಹಾಪುರ	12.30	9.37	ಕೆಲಸ ಪ್ರಗತಿಯಲ್ಲಿದೆ.
33	ಕಾಳಗಿ	ಗುಲ್ಬರ್ಗಾ	ಚಿತ್ತಾಪುರ	11.40	8.00	ಕೆಲಸ ಪ್ರಗತಿಯಲ್ಲಿದೆ.
34	ಕೂಡ್ಲ	ಗುಲ್ಬರ್ಗಾ	ಸೇಡಂ	11.40	9.76	ಕೆಲಸ ಪ್ರಗತಿಯಲ್ಲಿದೆ.
35	ಬಂಗಾಳಿಕ್ಯಾಂಪ್II	ರಾಯಚೂರು	ಸಿಂಧನೂರು	13.20	15.39	ಕೆಲಸ ಪೂರ್ಣಗೊಂಡಿದೆ
36	ಸಾಲುಗುಂದ	ರಾಯಚೂರು	ಸಿಂಧನೂರು	13.35	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

37	ಮುದ್ದಪುರಕ್ರಾಸ್	ರಾಯಚೂರು	ಸಿಂಧನೂರು	12.90	11.84	ಕೆಲಸ ಪೂರ್ಣಗೊಂಡಿದೆ
38	ಭೂದಿಹಾಳ	ರಾಯಚೂರು	ಸಿಂಧನೂರು	12.50	11.70	ಕೆಲಸ ಪೂರ್ಣಗೊಂಡಿದೆ
39	ಉಮಲೋಟಿ	ರಾಯಚೂರು	ಸಿಂಧನೂರು	13.00	11.20	ಕೆಲಸ ಪೂರ್ಣಗೊಂಡಿದೆ
40	ರಾಗಲಪರರ್ವಿ	ರಾಯಚೂರು	ಸಿಂಧನೂರು	13.35	15.71	ಕೆಲಸ ಪೂರ್ಣಗೊಂಡಿದೆ
41	ಅಂಕಲಿಮಠ	ರಾಯಚೂರು	ಲಿಂಗಸುಗೂರು	13.35	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
42	ಸಂತೆಕಲ್ಲೂರು	ರಾಯಚೂರು	ಲಿಂಗಸುಗೂರು	12.70	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
43	ಕುರಡಿ	ರಾಯಚೂರು	ಮಾನ್ವಿ	12.20	12.43	ಕೆಲಸಪೂರ್ಣಗೊಂಡಿದೆ
44	ಮಾಡಿಗೆರೆ	ರಾಯಚೂರು	ಮಾನ್ವಿ	11.85	11.85	ಕೆಲಸ ಪೂರ್ಣಗೊಂಡಿದೆ.
45	ಪಾಮನಕಲ್ಲೂರು	ರಾಯಚೂರು	ಮಾನ್ವಿ	11.85	13.70	ಕೆಲಸ ಪೂರ್ಣಗೊಂಡಿದೆ
46	ಮಟಮಾರಿ	ರಾಯಚೂರು	ರಾಯಚೂರು	15.00	12.00	ಕೆಲಸ ಪೂರ್ಣಗೊಂಡಿದೆ
47	ಗಬ್ಬೂರು	ರಾಯಚೂರು	ರಾಯಚೂರು	15.00	14.00	ಕೆಲಸ ಪೂರ್ಣಗೊಂಡಿದೆ
48	ಅರಕೇರ	ರಾಯಚೂರು	ರಾಯಚೂರು	13.80	13.00	ಕೆಲಸ ಪೂರ್ಣಗೊಂಡಿದೆ
49	ಮಂಟಾಳ	ಬೀದರ್	ಬಸವಕಲ್ಯಾಣ	11.40	–	ಸ್ಥಳದ ಸಮಸ್ಯೆಯಿಂದ ಕಾಮಗಾರಿ ಪ್ರಾರಂಬಿಸಿರುವುದಿಲ್ಲ.
50	ಕಟಕ್ ಚಿಂಚೋಳಿ	ಬೀದರ್	ಭಾಲ್ಕಿ	11.40	–	ಸ್ಥಳದ ಸಮಸ್ಯೆಯಿಂದ ಕಾಮಗಾರಿ ಪ್ರಾರಂಭಿಸಿರುವುದಿಲ್ಲ.
51	ರಾಜೇಶ್ವರ್	ಬೀದರ್	ಬಸವಕಲ್ಯಾಣ	11.405	5.02	ಕೆಲಸ ಪ್ರಗತಿಯಲ್ಲಿದೆ.
52	ಕೊಹಿನೂರ್	ಬೀದರ್	ಬಸವಕಲ್ಯಾಣ	11.25	8.00	ಕೆಲಸ ಪ್ರಗತಿಯಲ್ಲಿದೆ.
53	ಚಿಂತಕಿ	ಬೀದರ್	ಔರಾದ್	11.40	290	ಕೆಲಸ ಪ್ರಗತಿಯಲ್ಲಿದೆ.
54	ಕೆಸರಟ್ಟಿ	ಕೊಪ್ಪಳ	ಗಂಗಾವತಿ	13.25	–	ಕೆಲಸ ಪ್ರಗತಿಯಲ್ಲಿದೆ.
55	ಕಿನ್ನಾಳ್	ಕೊಪ್ಪಳ	12.15	12.15	–	ಕೆಲಸ ಪ್ರಗತಿಯಲ್ಲಿದೆ.
	ಒಟ್ಟು		***654.82***	***454.51***		

ಅನುಬಂಧ-2

ಪ್ರಸ್ತುಕ ಸಾಲಿನಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ನಬಾರ್ಡ್ ಆರ್.ಐ.ಡಿ.ಎಫ್. XI ಯೋಜನೆಯಡಿಯಲ್ಲಿ ಕೈಗೊಂಡಿರುವ ಗ್ರಾಮೀಣ ಸಂತೆ ಕಾಮಗಾರಿಗಳ ವಿವರಗಳು

ಕ್ರಮ ಸಖ್ಯೆ	ಗ್ರಾಮೀಣ ಸಂತೆ ಹೆಸರು	ವಿಧಾನಸಭಾ ಕ್ಷೇತ್ರದ ಹೆಸರು	ಜಿಲ್ಲೆ	ಸಮಿತಿಯ ಹೆಸರು	ಅಂದಾಜು ಮೊತ್ತ ರೂಲಕ್ಷಗಳಲ್ಲಿ	ಆರ್ಥಿಕ ವೆಚ್ಚ ರೂ ಲಕ್ಷಗಳಲ್ಲಿ	ಕೆಲಸದ ಹಂತ
1	ಶಾಂತಪುರ	ಔರಾದ್	ಬೀದರ್	ಔರಾದ್	10.50	–	ಟೆಂಡರ್ ಪ್ರಕ್ರಿಯೆ ಪ್ರತಿಯಲ್ಲಿದೆ
2	ಖಾನಾಪುರ	ಭಾಲ್ಕಿ	ಬೀದರ್	ಬಾಲ್ಕಿ	10.50	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲಿದೆ
3	ನೀರ್ನಾ	ಹುಮನಾಬಾದ್	ಬೀದರ್	ಹುಮನಾಬಾದ್	10.75	–	ಟೆಂಡರ್ ಪ್ರಕ್ರಿಯೆಪ್ರಗತಿಯಲ್ಲಿದ
				ಒಟ್ಟು	31.75		

103 (275) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)((ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಪತ್ತೆ ಹಚ್ಚಲಾದ ನಕಲಿ ಪಡಿತರ ಚೀಟಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವಿರ ಒದಗಿಸುವುದು):

ಆ. ರಾಜ್ಯದಲ್ಲಿ ಇದೇ ಅವಧಿಯಲ್ಲಿ ವಿತರಿಸಲಾದ ಬಿಪಿಎಲ್ ಕಾರ್ಡುಗಳ ಸಂಖ್ಯೆ ಎಷ್ಟು(ಜಿಲ್ಲಾವಾರು ವಿವಿರ ಒದಗಿಸುವುದು):

ಇ. ಪ್ರಸಕ್ತ ಸಾಲಿನಲ್ಲಿ ಬಿಪಿಎಲ್ ಕಾರ್ಡುಗಳನ್ನು ವಿತರಿಸುವ ಗುರಿಯನ್ನು ಹೊಂದಾಲಾಗಿದೆ ಹಾಗೂ ಇದಕ್ಕಾಗಿ ರಾಜ್ಯಾದ್ಯಂತ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗಿದೆಯೇ;

ಈ. ಕೈಗೊಂಡಿದ್ದಲ್ಲಿ, ಈ ಕಾರ್ಯವು ಯಾವ ಹಂತದಲ್ಲಿ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)?

ಗೋವಿಂದ. ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು)

ಅ. ರಾಜ್ಯದಲ್ಲಿ 2005–06ನೇ ಸಾಲಿನಲ್ಲಿ ಪತ್ತೆ ಹಚ್ಚಲಾದ ನಕಲಿ ಪಡಿತರ ಚೀಟಿಗಳ ಸಂಖ್ಯೆ 13,355 ಜಿಲ್ಲಾವಾರು ವಿವರ ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.
ರಾಜ್ಯದಲ್ಲಿ ಈ ಅವಧಿಯಲ್ಲಿ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯ ನಡೆಸಲಾಗಿರುವುದರಿಂದ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಿಲಾಗುವುದಿಲ್ಲ.

ಆ. ರಾಜ್ಯದಲ್ಲಿ ಈ ಅವಧಿಯಲ್ಲಿ ಮನೆ ಮನೆಯ ಪುನರ್ ಸಮೀಕ್ಷಾ ಕಾರ್ಯ ನಡೆಸಲಾಗಿರುವುದರಿಂದ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿರುವುದಿಲ್ಲ.

ಇ. ಕಳೆದ ಸಾಲಿನಲ್ಲಿ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯಕೈಗೊಂಡು ಅರ್ಹ ಫಲಾನುಭವಗಳನ್ನು ಗುರುತಿಸಲಾಗಿದ್ದು. ಈ ಫಲಾನುಭವಗಳಿಗೆ ಗಣಕೀಕೃತ ಪಡಿತರ ಚೀಟಿಗಳನ್ನು ಪ್ರಸಕ್ತ ಸಾಲಿನಲ್ಲಿ ವಿತರಿಸಲಾಗುವುದು. ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರುವ ಬಿಪಿಎಲ್ ಫಲಾನುಭವಿಗಳ ಸಂಖ್ಯೆ 52,46,705 ಮತ್ತು ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳ ಸಂಖ್ಯೆ 11,99,700.

ಈ. ಮನೆ ಮನೆ ಪುನರ್ ಸಮೀಕ್ಷೆ ಸೆಪ್ಟಂಬರ್ 2005 ರ ಮಾಹೆಯಲ್ಲಿ ಮುಕ್ತಾಯಗೊಂಡಿರುತ್ತದೆ. ಜಿಲ್ಲಾವಾರು ವಿವಿರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಅನುಬಂಧ -1

ಏಪ್ರಿಲ್ 2005 ರಿಂದ ಫೆಬ್ರವರಿ 2006 ರವರೆಗೆ ರದ್ದುಪಡಿದಲಾದ ಹಳದಿ ಪಡಿತರ ಚೀಟಿಗಳ ವಿವರ

ಕ್ರಮ.ಸಂ	ಜಿಲ್ಲೆಯ ಹೆಸರು	ರದ್ದುಪಡಿಸಲಾದ ಪಡಿತರ ಚೀಟಿಗಳ ವಿವರ
1	ಬಾಗಲಕೋಟೆ	0
2	ಬೆಂಗಳೂರು ಅಪ	82
3	ಬೆಂಗಳೂರು ಗ್ರಾಮಾಂತರ	22
4	ಬೆಂಗಳೂರು ನಗರ	4340
5	ಬೆಳಗಾಂ	0
6	ಬಳ್ಳಾರಿ	0
7	ಬೀದರ್	0
8	ಬಿಜಾಪುರ	0
9	ಚಾಮರಾಜನಗರ	0
10	ಚಿಕ್ಕಮಗಳೂರು	0
11	ಚಿತ್ರದುರ್ಗ	0
12	ದಕ್ಷಿಣ ಕನ್ನಡ	337
13	ದಾವಣಗೆರೆ	493
14	ಧಾರವಾಡ	0
15	ಗದಗ್	13
16	ಗುಲ್ಬರ್ಗ	0
17	ಹಾಸನ	75
18	ಹಾವೇರಿ	25
19	ಕೊಡಗು	0
20	ಕೋಲಾರ	0
21	ಕೊಪ್ಪಳ	0
22	ಮಂಡ್ಯ	727
23	ಮೈಸೂರು	0
24	ರಾಯಚೂರು	0
25	ಶಿವಮೊಗ್ಗ	694
26	ತುಮಕೂರು	6547
27	ಉಡುಪಿ	0
28	ಉತ್ತರ ಕನ್ನಡ	0
	ಒಟ್ಟು	**13355**

ANNEXURE

Sl.No	Name of the District	Number of families as per 2001 Census	Number of families as per house numbering	Percentage of increase/decrease	Number of households surveyed	Number of families identified: Annapurna	AAY	BPL	APL	Total	Percentage of BPL families identified against surveyed families: Including AAY	Excluding AAY	Percentage of existing BPL cards against 2001 Census families as per Column No (3): Including AAY	Excluding AAY
1	2	3	4	5	6	7	8	9	10	11	12	13	14	15
1	[illegible]	203648	382344	20	379441	1339	47060	160840	163117	376448	57	44	77	64
2	[illegible]	1080018	1000018	0	1080018	1	18769	200961	760156	979886	10	19	20	19
3	[illegible]	380709	482297	24	476402	3164	35720	238623	107698	476402	58	50	85	78
4	[illegible]	380679	387278	2	356[illegible]	661	16098	[illegible]506	201776	356041	43	30	66	65
5	[illegible]	780104	990144	26	987085	2106	90077	448407	420005	987885	57	40	74	64
6	[illegible]	373034	446561	20	418[illegible]	0	66486	170184	211878	448508	53	38	75	61
7	[illegible]	252250	333719	32	319[illegible]	2104	45176	137097	135312	319586	58	43	66	71
8	[illegible]	341378	383809	21	385[illegible]	656	60558	165161	162089	385204	58	43	76	63
9	[illegible]	203430	242308	19	242[illegible]	1624	39075	135762	68817	243308	72	56	77	63
10	[illegible]	248170	270534	13	270[illegible]	22	23537	134067	118200	270669	57	48	75	68
11	[illegible]	298718	387854	24	380[illegible]	0	47278	180544	132870	380792	60	50	91	69
12	[illegible]	362218	380781	5	338[illegible]	851	15001	[illegible]324	216543	368589	41	37	36	31
13	[illegible]	337484	423120	25	423120	0	53633	170309	192878	423120	54	42	76	63
14	[illegible]	291484	370303	27	374[illegible]	1452	32609	165464	171374	371119	53	44	70	61
15	[illegible]	181500	217328	20	215044	37	31737	80063	96107	215044	45	41	75	61
16	[illegible]	520056	722829	35	711[illegible]	2099	104930	296210	268083	701331	57	42	84	68
17	[illegible]	364606	434084	19	434523	0	25098	270115	139310	434523	67	54	76	73
18	[illegible]	260203	298149	15	298146	1894	50536	117266	128450	298148	57	39	85	69
19	[illegible]	130170	144309	11	144309	485	6128	70474	70784	145871	58	54	61	57
20	[illegible]	504185	616424	22	616434	4373	65016	300269	245046	616434	60	40	78	68
21	[illegible]	210868	254154	21	254154	210	42082	92597	119285	254154	53	38	75	69
22	[illegible]	373672	456608	22	456600	333	37209	238907	179160	456608	60	52	80	72
23	[illegible]	545741	696670	28	690385	2782	51104	320791	305688	680305	56	40	68	61
24	[illegible]	287775	363873	22	353073	2343	60279	127551	173600	363873	52	35	66	49
25	[illegible]	341224	402419	18	335337	1033	41480	158260	182650	385330	53	41	66	56
26	[illegible]	550473	641877	17	57217[illegible]	2007	58007	317768	208122	579104	64	55	74	67
27	[illegible]	211454	224759	6	220781	450	17872	87867	114583	220791	46	40	42	35
28	[illegible]	273422	307063	13	300162	644	16085	151509	131134	300162	62	55	70	65
	Total	10401913	12344711	19	12199642	38144	1169700	5244156	5635911	12116452	53.39	43.10	68.66	59.10

104 (270) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಹೊಸ ಮೀನುಗಾರಿಕೆ ಬಂದರುಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ:

ಆ) ಇದ್ದಲ್ಲಿ, ಇದಕ್ಕಾಗಿ ಮಿಸಲಿಟ್ಟ ಅನುದಾನ ಎಷ್ಟು?

ಶ್ರೀ ಬಿ, ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) ಹೌದು, ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತ ಹಾಗು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮೀನುಗಾರಿಕೆ ಬಂದಿರಿನ 2ನೇ ಹಂತದ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಮೇಲ್ಕಾಣಿಸಿದ ಯೋಜನೆಗಳ ಪೂರ್ವಭಾವಿ ಅಧ್ಯಯನ ಕೈಗೊಂಡು ಸಾಮಾಜಿಕ-ಆರ್ಥಿಕಾ ಸಮೀಕ್ಷೆ ನಡೆಸಿ, ವಿವರವಾದ ಯೋಜನಾ ವರದಿ ತಯಾರಿಸಿ, ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಂಜೂರಾತಿ ಪಡೆದನಂತರ ಅಗತ್ಯತೆಗೆ ಅನುಗುಣವಾಗಿ ಅನುದಾನವನ್ನು ಒದಗಿಸಲು ಕ್ರಮ ವಹಿಸಲಾಗುವುದು.

105. (271) ಶ್ರೀ ಬಿ. ನಾಗಾಜಶೆಟ್ಟಿ. (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ) 2004 ರಿಂದ ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ಹಂಚಿಕೆಯಾಗಿರುವ ಮನೆಗಳು ಎಷ್ಟು:

(ವಿಧಾನಸಭಾ ಕ್ಷೇತ್ರಗಾರ ವಿವರ ನೀಡುವುದು):

ಆ) ಸದರಿ ಯೋಜನೆಗಾಗಿ ಮೀಸಲಿಟ್ಟ ಅನುದಾನ ಎಷ್ಟು ಹಾಗೂ ಬಿಡುಗಡೆಯಾದ ಹಣ ಎಷ್ಟು;

ಇ) ಬ್ರಹ್ಮಾವರ ಕ್ಷೇತ್ರದಲ್ಲಿ ಹೊಸದಾಗಿ ಎಷ್ಟು ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ?

ಶ್ರೀ ಬಿ. ನಾಗರಾಜ ಶೆಟ್ಟಿ ((ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) 2004-05ನೇ ಸಾಲಿನಿಂದ ಹೊಸದಾಗಿ ಯಾವುದೇ ಮನೆಗಳು ಸರ್ಕಾರದಿಂದ ಮಂಜೂರಾಗಿರುವುದಿಲ್ಲ. ಆದರೆ 2003-04ನೇ ಸಾಲಿನವರೆಗೆ ಮಂಜೂರಾದ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದು 2004-05 ರಿಂದ ಇಲ್ಲಿಯವರೆಗೆ (ಫೆಬ್ರವರಿ 2006ರವರೆಗೆ) ನಿರ್ಮಾಣವಾದ ಮನೆಗಳ ಕ್ಷೇತ್ರವಾರು ವಿವರ ಈ ಕೆಳಗಿನಂತಿರುತ್ತದೆ. ನಿರ್ಮಾಣ ಪೂರ್ಣವಾಗಿರುವ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

ಕ್ಷೇತ್ರವಾರು ವಿವರ	ಮತ್ಸ್ಯಾಶ್ರಯ 1ನೇ ಹಂತ	ಮತ್ಸ್ಯಾಶ್ರಯ 2ನೇ ಹಂತ
ದಕ್ಷಿಣ ಕನ್ನಡ ಜಿಲ್ಲೆ		
ಉಲ್ಲಾಳ	2	52
ಮಂಗಳೂರು	2	11
ಸುರತ್ಕಲ್	–	24
ಮುಲ್ಕಿ ಮೂಡುಬಿದರೆ	1	28
ಉಡುಪಿ ಜಿಲ್ಲೆ		
ಕಾಪು	1	105
ಉಡುಪಿ	5	60
ಬ್ರಹ್ಮಾವರ	5	66
ಕುಂದಾಪುರ	4	81
ಬೈದೂರು	8	93
ಕಾರ್ಕಳ	–	33
ಉತ್ತರ ಕನ್ನಡ ಜಿಲ್ಲೆ		
ಕಾರವಾರ	2	104
ಅಂಕೋಲ	–	24
ಕುಮಟ	–	31
ಹೊನ್ನಾವರ	–	57
ಭಟ್ಕಳ	2	05

ಆ) ಸದರಿ ಯೋಜನೆಯನ್ನು ಹುಡ್ಕೋ ಸಾಲದ ನೆರವಿನೊಂದಿಗೆ ಕೈಗೆತ್ತಿಕೊಂಡಿದ್ದು. 1ನೇ ಹಂತದ ಯೋಜನೆಯ ಅನುಷ್ಠಾನಕ್ಕಾಗಿ ರೂ. 15.00 ಕೋಟಿ ಪೂರ್ಣ ಹಣವನ್ನು ರಾಜ್ಯದ ಎಲ್ಲಾ ಅನುಷ್ಠಾನಕ್ಕಾಗಿ ರೂ.15.00 ಕೋಟಿ ಪೂರ್ಣ ಹಣವನ್ನು ರಾಜ್ಯದ ಎಲ್ಲಾ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಇನೇ ಹಂತದ ಯೋಜನೆಯನ್ನು ರೂ 15.00 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು. ಇದುವರೆವಿಗೂ ರೂ. 13.00 ಕೋಟಿಗಳನ್ನು ರಾಜ್ಯದಲ್ಲಿ ಎಲ್ಲಾ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಇ) 2004–05ನೇ ಸಾಲಿನಿಂದ ಯಾವುದೇ ಮನೆಗಳು ಸರ್ಕಾರದಿಂದ ಮಂಜೂರಾಗದೇ ಇರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

106 (272) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರು) (ಆಹಾರ ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕುಡಿಯುವ ನೀರಿನ ಟಾಸ್ಕಾಫೋರ್ಸ್‌ನಲ್ಲಿ ಬೇಸಿಗೆಯಲಲಿ ಕೈಗೊಂಡ ಕಾಮಾಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆಯೇ;

ಆ. ಉಡುಪಿ ತಾಲ್ಲೂಕಿನಲ್ಲಿ ಕೈಗೊಂಡ ಕಾಮಾಗಾರಿಗಳು ಯಾವುವು ಹಾಗೂ ಬಿಡುಗಡೆಯಾದ ಅನುದಾನ ಎಷ್ಟು

(ಕ್ಷೇತ್ರವಾರು ವಿವಿರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ನಾಗರಿಕ ಸರಬರಾಜು, ಗ್ರಾಹಕರವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು)

ಅ. ಕುಡಿಯುವ ನೀರಿಗಾಗಿ ಕಾರ್ಯಪಡೆ ಅನುಮೀದನೆಯೊಂದಿಗೆ ಗ್ರಾಮೀಣ ಪ್ರದೇಶಗಳ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ಬಿಲ್ ಪಾವತಿ ಸಲುವಾಗಿ ರಾಜ್ಯ ಮತ್ತು ಕೇಂದ್ರ ವಲುಗಳಡಿ ಪ್ರಸಕ್ತ ಸಾಲಿನಲ್ಲಿ ಬಿಡುಗೆರಯಾರುವ ಅನುದಾನ ಉಪಯೋಗಿಸಲು ಸೂಚನೆ ನೀಡಿದೆ.

ಆ. ಉಡುಪಿ ತಾಲ್ಲೂಕಿನಲ್ಲಿ ಒಟ್ಟು 43 ಕುಡಿಯುವ ನೀರಿನ ಕಾಮಗಾರಿಗಳು ಮಂಜೂರಾಗಿರುತ್ತವೆ, ಈ ಸಲುವಾಗಿ ರೂ. 22.95 ಲಕ್ಷ ಬಿಡುಗಡೆಯಾಗಿದ್ದು ಸದರಿ ಅನುದಾನ ಕೆಳಕಂಡತೆ ಕ್ಷೇತ್ರವಾರು ವೆಚ್ಚವಾಗಿದೆ. (ರೂ.ಲಕ್ಷಗಳಲ್ಲಿ)

ಕ್ಷೇತ್ರದ ಹೆಸರು	ಕಾಮಗಾರಿಗಳಸಂಖ್ಯೆ	ಬಿಡುಗಡೆಯಾದ	ಒಟ್ಟು ಖರ್ಚು
ಉಡುಪಿ	17	6.15	6.15
ಕಾಪು	13	5.58	5.58
ಬ್ರಹ್ಮಾವರ	13	11.22	11.22
ಒಟ್ಟು	**43**	**22.95**	**2.95**

107 (277) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರು) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಗಳ ಕರಾವಳಿ ಜಿಲ್ಲೆಗಳಲ್ಲಿರುವ ಮೀನುಗಾರಿಕೆ ಬಂದರು/ಜೆಟ್ಟಿಗಳ ಹೂಳು ತೆಗೆಯುವಿಕೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ:

ಆ) ಇದಕ್ಕಾಗಿ ಅನುದಾನ ಮೀಸಲಿಡಲಾಗಿದೆಯೇ (ಪ್ರಗತಿಯ ವಿವರ ನೀಡುವುದು)?

ಆ. ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ. ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿರುವ ಮೀನುಗಾರಿಕಾ ಬಂದರು ಮತ್ತು ಜಟ್ಟಿಗಳ ನಿರ್ಮಾಣದ ಅವಧಿಯಲ್ಲಿ ಅಗತ್ಯವಿರುವಲ್ಲಿ ಹೂಳೆತ್ತುವ ಕಾಮಗಾರಿ ಕೈಗೊಳ್ಳಲಾಗಿದೆ ನಂತರದಲ್ಲಿ ಹೂಳಿನ ಸಮಸ್ಯೆ ಉಂಟಾಗಿರುವ ಬಂದರು ಮತ್ತು ಇಳಿದಾಣಗಳಲ್ಲಿ ಹೂಳೆತ್ತುವ ಬಗ್ಗೆ ಪೂರ್ವಭಾವಿ ಕ್ರಮವನ್ನು ಕೈಗೊಳ್ಳಲಾಗಿದೆ.

ಆ. ಇದಕ್ಕಾಗಿ ಸಾಂಕೇತಿಕ ಅನುದಾನವನ್ನು ಒದಗಿಸಲಾಗಿದೆ. ಪ್ರಸ್ತುತ ನಿರ್ಮಾಣವಾಗುತ್ತಿರುವ ಗಂಗೊಳ್ಳಿ ಮಿನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕಾಮಾಗಾರಿಯನ್ನು ಪ್ರಾರಂಭಿಸಲಾಗಿದೆ ಹೊನ್ನಾವರ ಮೀನುಗಾರಿಕೆ ಬಂದರು ಹಾಗೂ ಹಜಮಾಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಹೂಳಿನ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಅಧ್ಯಯನ ನಡೆಸಲು ಪುಣೆಯಲ್ಲಿರುವ ಸಿ.ಡಬ್ಲ್ಯೂ.ಪಿ. ಆರ್.ಎಸ್. ಸಂಸ್ಥೆಯನ್ನು ಕೋರಲಾಗಿದೆ. ತದಡಿ ಮೀನುಗಾರಿಕೆ ಬಂದರು ಹಾಗೂ ತೆಂಗಿನಗುಂಡಿ ಇಳಿದಾಣ ಕೇಂದ್ರದಲ್ಲಿ ಹೂಳೆತ್ತುವ ಕಾಮಗಾರಿಕಗೆ ಅಸೈಡ್ (ASIDE) ಯೋಜನೆಯಡಿ ಧನಸಹಾಯ ಪಡೆಯಲು ಕ್ರಮವಹಿಸಲಾಗಿದೆ.

108 (168) ಶ್ರೀ ಸಿ.ಬಿ. ಕೃಷ್ಣಬೈರೆಗೌಡ (ವೇಮಗಲ್) (ತೋಟಗಾರಿಕೆ ಸಚಿವರು)

ಅ. ಭಾರತದಿಂದ ಮಾವಿನ ಹಣ್ಣನ್ನು ಇತ್ತಿಚೇಗೆ ಆಮದು ಮಾಡಿ ಕೊಳ್ಳಲು ಅಮೇರಿಕಾ ದೇಶ ಒಪ್ಪಿರುವುದುನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ?

ಆ. ಇದರಿಂದ ರೈತರಿಗೆ ವರದಾನವಾಗಬಹುದಾದಂತಹ ಈ ಅವಕಾಶವನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರ ಅಥವಾ ಸಂಸ್ಥೆಗಳು ಏನು ಕ್ರಮ ಕೈಗೊಂಡಿವೆ?

ಶ್ರೀ ಬಂಡೆಪ್ಪಾ ಕಾಶಂಪೂರ್ (ತೋಟಗಾರಿಕೆ ಸಚಿವರು) :

ಹೌದು

ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿವೆ;

1) ಮಾವಿನಲ್ಲಿ ಕೀಟ/ರೋಗಗಳನ್ನು ನಿಯಂತ್ರಿಸಿ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಉತ್ಪಾದಸಲು ರೈತರಿಗೆ ಸಸ್ಯ ಸಂರಕ್ಷಣ ಔಷಧಿಗಳು ಮತ್ತು ಸಿಂಪರಣಾ ಉಪಕರಣಗಳನ್ನು ಖರೀದಿಸಲು ಸಹಾಯಧನ ನೀಡಲಾಗುತ್ತಿದೆ.

2) ಮಾವು ಬೆಳೆಗಾರರ ಅನುಕೂಲಕೊಸ್ಕರ ರಫ್ತು ಗುಣ ಮಟ್ಟದ ಹಣ್ಣುಗಳನ್ನು ಉತ್ಪಾದಿಸಲು ಪ್ರಮುಖ ಮಾವು ಬೆಳೆಯುವ ಪ್ರದೇಶಗಳಲ್ಲಿ ತರಬೇತಿ/ ಕಾರ್ಯಗಾರಗಳನ್ನು ಏರ್ಪಡಿಸಲಾಗಿರುತ್ತದೆ.

3) ರಫ್ತು ಮಾಡುವ ಪ್ರಕ್ರಿಯೆ ಬಗ್ಗೆ ತಿಳಿವಳಿಕೆ ಮತ್ತು ಮಾರ್ಗದರ್ಶನ ನೀಡಲು Karnataka Agriculture Produce Processing and Export Coppretion, Agricultural and Pricessed Food Products Export Development Authority ಸಂಸ್ಥೆಗಳು ಮತ್ತು ಖಾಸಗಿ ರಫ್ತುದಾರರ ಸಹಯೋಗವನ್ನು ಕಲ್ಪಿಸಲಾಗಿದೆ.

4) ಮಾವು ಬೆಳೆಗಾರರ ಹಣ್ಣುಗಳನ್ನು ರಟ್ಟಿನ ಡಬ್ಬಗಳಲ್ಲಿ ಆಕರ್ಷಕವಾಗಿ ಪ್ಯಾಕ್ ಮಾಡಿ ಮಾರಾಟ ಮಾಡಲು ಸಬ್ಸಿಡಿ ನೀಡಲಾಗುತ್ತಿದೆ.

5) ರೈತರು ಮಾವಿನಹಣ್ಣುಗಳನ್ನು ಇಡಲು ಮತ್ತು ಸಾಗಾಣಿಕೆ ಮಾಡಲು ಅಗತ್ಯವಿರುವ ಪ್ಲಾಸ್ಟಿಕ್ ಕ್ರೇಟ್‌ಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ.

6) ಮಾವು ರಫ್ತು ಮಡಲು ಉದ್ದೇಶಿಸಿರುವ ರೈತರಿಗೆ ಪ್ಯಾಕ್‌ಹೌಸ್ ನಿರ್ಮಿಸಲು ಸಹಾಯಧನ ನೀಡಲಾಗುತ್ತಿದೆ.

7) ರಫ್ತು ಮಾಡಲು ರೈತರು ಪಡೆಯಬೇಕಾದ ಸಸ್ಯಶುಚಿತ್ವ ದೃಢೀಕರಣ ಪತ್ರ (ಪೈಟೋಸಾನಿಟರಿ ಸರ್ಟಿಫಿಕೇಟ್)ಗಳನ್ನು ವಿತರಿಸಲು ವಿಕೇಂದ್ರಿಕರಿಸಿ ಬೆಮಗಳೂರು, ಬೆಳಗಾವಿ, ಬಿಜಾಪುರ, ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ತೋಟಗಾರಿಕೆ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

8) ಕರ್ನಾಟಕ ರಾಜ್ಯದಲ್ಲಿ ಮಾವು ಕೃಷಿ-ರಫ್ತುವಲಯ ಯೋಜನೆ (Agri Export Zone) ಸ್ಥಾಪಿಸಿ ರೈತರಿಗೆ ರಫ್ತುಪ್ರಕ್ರಿಯೆ ಬಗ್ಗೆ ಸಂಪರ್ಕ/ಉತ್ತೇಜನ ನೀಡಲು ರೂ.41 ಕೋಟಿಗಳ ಒಂದು ಪ್ರಸ್ತಾವನೆಯನ್ನು ಭಾರತ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ.

9) ಕೋಲಾರ ಜಿಲ್ಲೆಯಲ್ಲಿ ರಫ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

10) ರಾಜ್ಯದಲ್ಲಿ 120ಕ್ಕೂ ಹೆಚ್ಚು ಮಾವಿನ ತಳಿಗಳನ್ನು ಬೆಳೆಸಲಾಗುತ್ತಿದ್ದು ಆದರೆ ಈಗ ಕೇವಲ 4 ತಳಿಗಳಾದ ರತ್ನಗಿರಿ ಆಲ್ಫಾನ್‌ಸೋ, ಬಂಗನಪಲ್ಲಿ, ಕೇಸರ್ ಮತ್ತು ಸ್ವಲ್ಪ ಪ್ರಮಾಣದಲ್ಲಿ ಮಲ್ಲಿಕಾ ಹಣ್ಣುಗಳು ರಫ್ತಾಗುತ್ತಿವೆ. ಇವುಗಳಲ್ಲಿ ರತ್ನಗಿರಿ ಆಲ್ಫಾನ್‌ಸೋ ಹೆಚ್ಚು ಪ್ರಸಿದ್ಧವಾಗಿವೆ. ಉತ್ತಮ ತಳಿಗಳನ್ನು ರಫ್ತು ಮಾಡಲು ಕ್ರಮ ಕೈಗೊಳ್ಳಲಾಗುವುದು.

109 (36) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ, ತರುವೇಕೆರೆ ತಾಲ್ಲೂಕಿಗೆ 2002-03. 2003-04, 2004-05ರ ಸಾಲುಗಳಲ್ಲಿ ಮೀನುಗಾರರಿಗೆ ಮೀನುಗಾರಿಕಾ ಇಲಾಖಾ ವತಿಯಿಂದ ಮಂಜೂರು ಮಾಡಲು ಉದ್ದೇಶಿಸಿದ್ದ ಮನೆಗಳ ಸಂಖ್ಯೆ ಎಷ್ಟು;
(ಕ್ಷೇತ್ರವಾರು ವಿವರ ಓದಗಿಸುವುದು);

ಆ) ಈ ಬಡ ಮೀನುಗಾರರಿಗೆ ಈಗಾಗಲೇ ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ ಎಷ್ಟು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿಗೆ 2002-03ರಲ್ಲಿ 20 ಮನೆಗಳು, 2003-04ರಲ್ಲಿ 10 ಮನೆಗಳು ಹೀಗೆ ಒಟ್ಟು ಮೀನುಗಾರಿಕೆ ಇಲಾಖಾ ವತಿಯಿಂದ ಮತ್ಸ್ಯಾಶ್ರಯ ಯೋಜನೆಯಡಿ 30 ಮನೆಗಳನ್ನು ಮಂಜೂರು ಮಾಡಲಾಗಿದೆ. 2004-05ರಲ್ಲಿ ಯಾವುದೇ ಮನೆ ಹಂಚಿಕೆ ಮಾಡಿರುವುದಿಲ್ಲ.

ಆ) ಮಂಜೂರಾದ 30 ಮನೆಗಳನ್ನು ಈಗಾಗಲೇ ಮೀನುಗಾರರಿಗೆ ಹಂಚಿಕೆ ಮಾಡಲಾಗಿದೆ.

110 (27) ಶ್ರೀ ಕುಮಾರ್ ಬಂಗಾರಪ್ಪ. ಎಸ್ (ಸೊರಬ) (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಇಲ್ಲಿಯವರೆಗೆ ನೀಡಲಾಗಿರುವ ಪಡಿತರ ಚೀಟಿ ಎಷ್ಟು;

ಆ. ಬಾಕಿ ನೀಡಬೇಕಾದ ಪಡಿತರ ಚೀಟಿ ಎಷ್ಟು ಹಾಗೂ ಯಾವಾಗ ನೀಡಲಾಗುವುದು;

ಇ. ಅಕ್ಕಿ, ಗೋದಿ, ರಾಗಿ ಮತ್ತು ಸಕ್ಕರೆಯನ್ನು ವಿವಿಧ ಪಡಿತರ ಚೀಟಿದಾರರಿಗೆ ಯಾವ ಯಾವ ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ?

ಶ್ರೀ ಗೋವಿಂದ. ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು):

ಅ. ರಾಜ್ಯದಲ್ಲಿ 2006ನೇ ಫೆಬ್ರವರಿ ಅಂತ್ಯಕ್ಕೆ ನೀಡಲಾಗಿರುವ ಪಡಿತರ ಚೀಟಿಗಳ ಸಂಖ್ಯೆ ಕೆಳಕಂಡಂತಿದೆ:–

ಎಎವೈ 9,50,000

ಬಿಪಿಎಲ್ 60,65,925

ಎಪಿಎಲ್ 42,67,363

ಒಟ್ಟು **1,12,83,288**

ಆ. 2005ನೇ ಸಾಲಿನಲ್ಲಿ ನಡೆಸಲಾದ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯದಲ್ಲಿ 36,644 ಅನ್ನಪೂರ್ಣ 11,99,700 ಅಂತ್ಯೋದಯ ಅನ್ನ ಯೋಜನೆ, 52,44,198 ಹಳದಿ ಮತ್ತು 55,35,911 ಎಪಿಎಲ್ ಹೀಗೆ ಒಟ್ಟು 1.20.16453 ಪಡಿತರ ಚೀಟಿದಾರರನ್ನು ಗುರುತಿಸಲಾಗಿರುತ್ತದೆ. ಎಲ್ಲಾ ವರ್ಗದ ಫಲಾನುಭವಿಗಳಿಗೆ ಗಣಕೃತ ತಾತ್ಕಾಲಿಕ ಪಡಿತರ ಕೂಪಾನ್ ವಿತರಿಸಲಾಗುತ್ತಿದ್ದು, ಗಂಕೃತ ಪಡಿತರ ಚೀಟಿ ಮುಂದಿನ ಆರು ತಿಂಗಳ ಅವದಿಯಲ್ಲಿ ವಿತರಿಸಲಾಗುವುದು.

ಇ. ಪ್ರತಿ ಪಡಿತರ ಚೀಟಿದಾರರಿಗೆ ತಿಂಗಳೊಂದಕ್ಕೆ ನೀಡುವ ಪಡಿತರ ಪ್ರಮಾಣ ಕೆಳಕಂಡಂತಿದೆ:–

ಪಡಿತರ ಚೀಟಿ	ಅಕ್ಕಿ (ಕೆಜಿ)	ಗೋದಿ (ಕೆಜಿ)	ಸಕ್ಕರೆ (ಕೆಜಿ)	ಸೀಮೆಎಣ್ಣೆ
ಎಎವೈ	28	5	700–	ಅಪ –
ಬಿಪಿಎಲ್	20	5	750 ಗ್ರಾಂ ಸಕ್ಕರೆ ಯನ್ನು ವಿತರಿಸ ಲಾಗು ತ್ತಿದೆ.	ಪ್ರದೇಶದಲ್ಲಿ 8 ಲೀ, ನಗರ ಪ್ರದೇಶದಲ್ಲಿ 6 ಲೀ, ಗ್ರಾಮಾಂತರ ಪ್ರದೇಶದಲ್ಲಿ 4 ಲೀ
ಎಪಿಎಲ್	28	7		

ಎಪಿಎಲ್ ಪಡಿತರ ಚೀಟಿದಾರರಿಂದ ಆಹಾರಧಾನ್ಯಗಳ ಬೇಡಿಕೆ ಇಲ್ಲದಿರುವುದರಿಂದ ಆಹಾರಧಾನ್ಯದ ಅಪಮಾರ್ಗ ತಪ್ಪಿಸಲು ಕೆಳದ ಒಂದು ವರ್ಷದಿಂದ ಹಂಚಿಕೆ ನೀಡಲಾಗಿರುವುದಿಲ್ಲ.

111 (26) ಶ್ರೀ ಪಾಟೀಲ್ ಎಸ್.ಎಸ್ (ಮುಂಡರಗಿ) (ಆಹಾರ ನಾಗರಿಕ ಸರಬರಾಜು, ಗ್ರಾಹಕರವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಗದಗ ತಾಲ್ಲೂಕು ಸೊರಟೂರು, ಕಡಕೋಳ, ಯಲಿಶಿರುಂಜ, ಜಿಲ್ಲಿಗೇರಿ, ಹೊಸಹಳ್ಳಿ, ನಾಗಾವಿ ಕಳಸಾಪುರ, ಕಳವಿ, ಹರ್ತಿ ಹಾಗೂ ಇತರೆ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಇರುವುದರಿಂದ ತುಂಗಭದ್ರಾ ನದಿಯಿಂದ ನೀರು ಸರಬರಾಜು ಮಾಡಲು ನಕಾಶೆ ಮತ್ತಿ ಅಂದಾಜು ಪಟ್ಟಿ ತಯಾರು ಮಾಡಿ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿದ್ದಿ ನಿಜವೇ;

ಆ. ಈ ಎಲ್ಲಾ ಗ್ರಾಮಗಳ್ಲಲಿ ಕುಡಿಯುವ ನೀರಿನ ತೊಂದರೆ ಇರುವುದಲ್ಲದೆ ಅಲ್ಲಿನ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇದ್ದು, ಜನರಿಗೆ ದುಷ್ಪರಿಣಾಮ ಉಂಟಾಗುತ್ತಿರುವುದರಿಂದ, ಸರ್ಕಾರಕ್ಕೆ ಕಳುಹಸಿರುವ ನಕಾಶೆ ಮತ್ತು ಅಂದಾಜು ಪಟ್ಟಿಯನ್ನು ಮಂಜೂರು ಮಾಡಿ ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ನಾಗರಿಕ ಸರಬರಾಜು, ಗ್ರಾಹಕರವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) :

ಅ. ನಿಜ.

ಆ. ಸೊರಟೂರು ಗ್ರಾಮದ ರೂ.47.72 ಲಕ್ಷ ಅಂದಾಜಿನ ಕುಡಿಯುವ ನೀರಿನ ಯೋಜನೆಗೆ ದಿ: 21.7.04ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ ಮತ್ತು ರೂ. 12.50 ಲಕ್ಷ ಬಿಡುಗಡೆಯಾಗಿದೆ, ಇತರೆ ಗ್ರಾಮಗಳ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಮತ್ತು ನಂತರದ ನಿರ್ವಹಣೆ ಸಂಬಂಧದ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವ ನೋಡಿ ಮಂಜೂರಾತಿ ನೀಡಲು ಪರಿಶೀಲಿಸಲಾಗುವುದು.

112 (253) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಖಾಲಿ ಇರುವಂತಹ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವಿರ ನೀಡುವುದು)

ಆ) ಖಾಲಿ ಇರುವ ಈ ಹುದ್ದೆಗಳನ್ನು ಆಡಳಿತದ ಹಿತದೃಷ್ಟಿಯಿಂದ ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಖಾಲಿ ಇರುವ ಈ ವಿವಿಧ ಹುದ್ದೆಗಳನ್ನು ಯಾವ ಕಾಲಮಿತಿಯೊಳಗಾಗಿ ಭರ್ತಿ **ಮಾಡಲಾಗುವುದು?**

ಶ್ರೀ ಬಂಡೆಪ್ಪಾ ಕಾಶಂಪೂರ್ ((ಕೃಷಿ ಸಚಿವರು):

ಅ. 2529.

ಆ. ಹುದ್ದೆವಾರು ವಿವರದ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ. ಗ್ರೂಪ್–ಎ ವೃಂದದ ಸಹಾಯಕ ಕೃಷಿ ನಿರ್ದೇಶಕರ 50 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ: 8–9–2004 ರಂದು ಪತ್ರ ಬರೆಯಲಾಗಿದೆ.

ಇ. ನೇರ ನೇಮಕಾತಿಯಿಂದ ತುಂಬಬೇಕಾದ ಗ್ರೂಪ್–ಬಿ ವೃಂದದ 285 ಕೃಷಿ ಅಧಿಕಾರಿಗಳ ಹುದ್ದೆಯನ್ನು ಭರ್ತಿಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಗ್ರೂಪ್ ಎ ಮತ್ತು ಬಿ ವೃಂದದ ಇತರೆ ಹುದ್ದೆಗಳನ್ನು ಬಡ್ತಿಯ ಮೂಲಕ ಕಾಲಕಾಲಕ್ಕೆ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗ್ರೂಪ್–ಸಿ ವೃಂದದ 40 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ 27 ಬೆರಳಚ್ಚುಗಾರರ ಹುದ್ದೆಗಳನ್ನು ಆಯ್ಕೆ ಸಮಿತಿಯ ಮೂಲಕ ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದಂತೆ, ಗ್ರೂಪ್ ಸಿ ಮತ್ತು ಡಿ ವೃಂದದ ಹುದ್ದೆಗಳನ್ನು ಕಾಲ ಕಾಲಕ್ಕೆ ಬಡ್ತಿ ಮೂಲಕ ಹಾಗೂ ಇಲಾಖಾ ಆಯ್ಕೆ ಸಮಿತಿ. ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ನೇರ ನೇಮಕಾತಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಬಂದ ಕೂಡಲೇ ಭರ್ತಿ ಮಾಡಲಾಗುವುದು. ಇತರೆ ಹುದ್ದೆಗಳನ್ನು ಇಲಾಖಾ ಆಯ್ಕೆ ಸಮಿತಿ ಹಾಗೂ ಬಡ್ತಿಯ ಮೂಲಕ ಶೀಘ್ರವಾಗಿ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

Vacancy position of the Department of Agriculture as on 1-3-2006

Sl. No.	Name of the Post	Sanctioned	Filled	Vacant
1	2	3	4	5
	Group -A			
1.	Commissioner	01	01	0
2.	Director of Agriculture	01	01	0
3.	Additional Director of Agriculture	08	08	0
4.	Joint Director of Agriculture	39	39	0
5.	Deputy Director of Agriculture	57	15	42
6.	Chief Accounts Officers	01	01	0
7.	Law Officer	01	0	01
8.	Executive Engineer	01	01	0
9.	Assistant Director of Agriculture	323	227	96
10.	Deputy Director of Statistics (FM)	01	01	0
11.	Assistant Director of Agriculture (FW)	13	11	02
12.	Administrative Officer	30	24	06
13.	Assistant Executive Engineer	02	01	01
14.	Senior Programmer (Computer)	01	0	01
	TOTAL -A	**479**	**330**	**149**

Group -B

15. Agriculture Officer	1616	532	1084
16. Agriculture Officer (FW)	151	136	15
17. Assistant Statistician	01	01	0
18. Chief Artist-cum-Audio Visual Specialist	01	0	01
19. Administrative Assistant	33	22	11
20. Assistant Agriculture Officer	979	678	301
21. Assistant Agriculture Officer (AgricultureEngineer & Water management)	58	0	58
22. Assistant Agrifulture Officer (FW)	39	3	36
23. Assistant Engineer (Civil)	2	1	1
TOTAL -B	**2880**	**1373**	**1507**

Group -C

1. Superintendent	282	245	37
2. Librarian	01	01	0
3. Assistant Statistical Officer	15	15	0
4. Mechanical Foreman	07	07	0
5. Statistical Inspector	02	01	1
6. First Division Assistant	464	299	165
7. LIbrary Assistant	01	0	01
8. Stenographer	41	32	9
9. Senior Computarist	06	03	03
10. Senior Typist	03	02	01
11. senior Driver	89	87	02
12. Tracer	07	07	0
13. Agriculture Assistant	2938	2560	378
14. Second Division Assistant	551	467	84
15. Typist	318	246	72
16. Lab Assistant	91	63	28

Agolished but continued

17.Driver	136	130	06
18. Reporter	02	02	0
19. Senior Assistant/Photographer	06	05	01
20. Senior Offset printer	01	01	0
21. Artist	01	01	0
22. Agriculture Implements Supervisor	32	32	0
23.Project Operator	06	06	0
24. Electrician	01	01	0
25. Tel. Operator	01	01	0
26. Compositor	09	09	0
27. Printer	06	07	0
28. Binder	07	07	0
TOTAL-C	**5024**	**4236**	**788**

Group-D

29. Attender	124	108	16
30. Cooks	46	40	06
31. Group-D	971	908	63
TOTAL -D	**1141**	**1056**	**85**

ABSTRACT

Sl.No.	Group	Sanctioned	Filled up	Vacant
1	A	479	330	149
2.	B	2880	1373	1507
3.	C	5024	4236	788
4.	D	1141	1056	85
	TOTAL-	**9524**	**6995**	**2529**

113 (254) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) ಮಾನ್ಯ ಕೃಷಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲ್ಲೂಕುಗಳಲ್ಲಿ ಕಳೆದ ಸಾಲಿನಲ್ಲಿ ವಿಪರೀತವಾಗಿ ಕೋರಿ ಹುಳುಗಳ ಬಾಧೆಯಿಂದಾಗಿ ಸೂರ್ಯಕಾಂತಿ ಬೆಳೆ ಹಾನಿಯಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ. ಹಾನಿಗೊಳಗಾಗಿರುವ ಬೆಳೆಯ ಪ್ರಮಾಣವೆಷ್ಟು

ಇ. ಹಾನಿಗೊಳಗಾಗಿರುವ ಬೆಳೆಯ ಸಂಖ್ಯೆ ಎಷ್ಟು

ಈ. ಹಾನಿಗೊಳಪಟ್ಟ ರೈತರಿಗೆ ಪರಿಹಾರ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಉ. ಸರ್ಕಾರ ಹಾನಿಗೆ ಪರಿಹಾರ ಕಲ್ಪಿಸುವುದರಲ್ಲಿ ಯಾವ ರೀತಿಯಲ್ಲಿ ಮತ್ತು ನಿರ್ದಿಷ್ಟಪಡಿಸಿದ ಕಾಲಮಿತಿಯಲ್ಲಿ ಪರಿಹಾರವನ್ನು ರೈತರಿಗೆ ನೀಡಲಾಗುವುದೆ

ಶ್ರೀ ಬಂಡೆಪ್ಪ ಕಾಶಂಪೂರ್ (ಮಾನ್ಯ ಕೃಷಿ ಸಚಿವರು):

ಹೌದು.

ತಾಲ್ಲೂಕು	ಹಾನಿಗೀಡಾದ ಕ್ಷೇತ್ರ (ಹೆ)	ಹಾನಿಗೊಳಗಾದ ರೈತರ ಸಂ.
ಬಸವನ ಬಾಗೇವಾಡಿ	20411	29186
ಮುದ್ದೇಬಿಹಾಳ	41162	26931
ಒಟ್ಟು	**61573**	**56117**

ಪ್ರಕೃತಿ ವಿಕೋಪ ನಿಧಿಯಡಿ ಹಾನಿಗೊಳಗಾದ ಪ್ರದೇಶದ ರೈತರಿಗೆ ನಿಯಮಾನುಸಾರ ಪರಿಹಾರ ನೀಡಲಾಗುವುದು

114 (255) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) ಮಾನ್ಯ ತೋಟಗಾರಿಕ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ ಕರ್ನಾಟಕದಲ್ಲಿ ಜಾರಿಗೊಳಿಸಲಾಗಿದೆಯೆ;

ಆ) ರಾಜ್ಯದ ಯಾವ ಜಿಲ್ಲೆಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯನ್ನು ಆರಂಭಿಸಲಾಗುವುದು;

ಇ) ಇದರಲ್ಲಿ ರೂಪಿಸಲಾಗಿರುವ ತೋಟಗಾರಿಕೆ ಅಭಿವೃದ್ಧಿ ಕೆಲಸಗಳೇನು?

ಶ್ರೀ ಬಂಡೆಪ್ಪ ಕಾಶಂಪೂರ್ (ತೋಟಗಾರಿಕ ಸಚಿವರು) :

ಅ. ಹೌದು Yes

ಆ. ರಾಜ್ಯದ 15 ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು (ಗ್ರಾ), ಕೋಲಾರ, ತುಮಕೂರು, ಚಿತ್ರದುರ್ಗ, ಮೈಸೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಬಿಜಾಪುರ, ಬಾಗಲಕೋಟೆ, ಬೆಳಗಾವಿ, ಗುಲ್ಬರ್ಗ, ಕೊಪ್ಪಳ, ಉಡುಪಿ, ಉತ್ತರ ಕನ್ನಡ ರಾಷ್ಟ್ರೀಯ ತೋಟಗಾರಿಕೆ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಆ. ಈ ಮಿಷನ್‌ನಡಿ ರೂಪಿಸಲಾಗಿರುವ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳೆಂದರೆ, ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಮಳೆ ನೀರು ಕೊಯ್ಲು, ಸಮುದಾಯ ಟ್ಯಾಂಕ್‌ಗಳ ನಿರ್ಮಾಣ, ಸಂರಕ್ಷಿತ ಬೇಸಾಯ, ಪಾತ್ಯಕ್ಷತೆ ತಾಕುಗಳ ನಿರ್ಮಾಣದ ಮೂಲಕ ತಾಂತ್ರಿಕತೆ ಪ್ರಸರಣ, ನರ್ಸರಿ ಅಭಿವೃದ್ಧಿ, ಹಳೆಯ ತೋಟಗಳ ಪುನಶ್ಚೇತನ, ಅಣಬೆ ಕೃಷಿ, ಕೊಯ್ಲೋತ್ತರ ನಿರ್ವಹಣೆ, ಮಾರುಕಟ್ಟೆ, ಮಾನವ ಸಂಪನ್ಮೂಲ ಅಭಿವೃದ್ಧಿ, ಸಾವಯವ ತೋಟಗಾರಿಕೆ ಮತ್ತು ಇಲಾಖೆಯ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ.

115 (264) ಶ್ರೀ ಶಿವರಾಮು ಬಿ. (ಗಂಡಸಿ) (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಹಾಸನ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕುಡಿಯುವ ನೀರಾವರಿ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ. ಬಾಕಿ ಅವ್ಯವಹಾರದ ಬಿಲ್ಲು ಪಾವತಿ ಮಾಡಿದೆಯೇ; ಇಲ್ಲದಿದ್ದರೆ, ಉಳಿದಿರುವ ಮೊತ್ತವೆಷ್ಟು;

ಇ. ಅವ್ಯವಹಾರದಲ್ಲಿ ಭಾಗಿಯಾಗಿದ್ದ ಅಧಿಕಾರಿ ಬಗ್ಗೆ ಸರ್ಕಾರದ ಕ್ರಮ ಏನು (ವಿವರ ನೀಡುವುದು)

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಸಚಿವರು)

ಅ. ಈ ಬಗ್ಗೆ ಸಂಬಂಧಪಟ್ಟ ಆಪಾದಿತ ಅಧಿಕಾರಿಯು ವಿರುದ್ಧ ಶಿಸ್ತು ಕ್ರಮ ಪಾರಂಭಿಸಲಾಗಿದೆ.

ಆ. ಈ ವಿಷಯದ ಬಗ್ಗೆ ಹಾಸನ ಜಿಲ್ಲಾ ನ್ಯಾಯಾಲಯದಲ್ಲಿ ARB ಸಂ. 2,3,4,5,6/ 03 ಪ್ರಕರಣ ಬಾಕಿ ಇದ್ದು ವಿಚಾರಣೆ ನಡೆಯುತ್ತಿದೆ. ನ್ಯಾಯಾಲಯದ ತೀರ್ಪು ಹೊರ ಬಿದ್ದ ನಂತರ ನಿಯಮಾನುರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ. ಗುತ್ತಿಗೆದಾರರು ಐದು ಸ್ಲೈಸ್‌ಗಳ ಕಾಮಗಾರಿಗಳ ಬಾಬ್ತು ಹಿಂದೆ ಸಲ್ಲಿಸಿದ್ದು ಬಿಲ್ಲಿನಲ್ಲಿ 7.38 ಲಕ್ಷ ರೂ.ಗಳ ವ್ಯತ್ಯಾಸ ಕಂಡುಬಂದಿದ್ದು, ಅಷ್ಟು ಮೊತ್ತವನ್ನು ಅವರ ಬಿಲ್ಲಿನಿಂದ ಹಿಡಿದು, ಉಳಿದ ಹಣವನ್ನು ಅವರಿಗೆ ಪಾವತಿಸಲಾಗಿದೆ. ಇನ್ನೂ ಬಾಕಿ ಉಳಿದಿರುವ 12 ಸ್ಲೈಸ್‌ಗಳ ಕಾಮಗಾರಿಗಳ ಚೆಕ್ ಮೆಸರ್‌ಮೆಂಟ್ ಮುಕ್ತಾಯವಾದಾಗ ನಿಖರವಾದ ಮೊತ್ತ ತಿಳಿದು ಬರುವುದು.

ಇ. ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ರ ಮೇಲೆ ಕರ್ನಾಟಕ ಸರ್ಕಾರಿ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ರ ನಿಯಮ 11ರ ರೀತ್ಯ ಇಲಾಖಾ ವಿಚಾರಣೆ ಹೂಡಲಾಗಿದೆ. ಆಪಾದಿತರ ಮೇಲಿನ ಆಪಾದನೆಗಳ ಬಗ್ಗೆ ವಿವರವಾದ ವಿಚಾರಣೆ ನಡೆಸಲು ಶ್ರೀ ಬಿ.ಎಲ್. ಶ್ರೀ ಕಂಠಯ್ಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾ ಅಧಿಕಾರಿಯನ್ನಾಗಿ ದಿ. 29–10–03ರಂದು ನೇಮಿಸಿದೆ. ವಿಚಾರಣಾ ವರದಿ ಬಂದ ನಂತರ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

116 (265) ಶ್ರೀ ಶಿವರಾಮು ಬಿ. (ಗಂಡಸಿ) (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಹಾಸನ ಜಿಲ್ಲೆಯಲ್ಲಿ ಬಿಪಿಎಲ್ ಪಟ್ಟಿಯ ಪರಿಷ್ಕರಣೆ ಯಾವ ಹಂತದಲ್ಲಿದೆ (ಪರಿಷ್ಕರಣೆಯ ಪಟ್ಟಿಯ ಶೇಕಡವಾರು ಮತ್ತು ಕ್ಷೇತ್ರವಾರು ಮಾಹಿತಿಯನ್ನು ಒದಗಿಸುವುದು);

ಆ. ಪಡಿತರ ಚೀಟಿಗಳನ್ನು ಒದಗಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಇ. ಬಿಪಿಎಲ್ ಪಟ್ಟಿಯಿಂದ ಅರ್ಹರನ್ನು ಕೈಬಿಟಿರುವುದರ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಗೋವಿಂದ ಎಂ. ಕಾರಜೋಳ ಹಾಗೂ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಸಚಿವರು.) :

ಅ. ಹಾಸನ ಜಿಲ್ಲೆಯಲ್ಲಿ ಬಿಪಿಎಲ್ ಪಟ್ಟಿಯ ಪರಿಷ್ಕರಣೆ ಕಾರ್ಯ ಮುಗಿದಿರುತ್ತದೆ, ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ. ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನಬವಿಗಳಿಗೆ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸಲು ಟೆಂಡರ್ ಅನುಮೋದನೆಯಾಗಿ ದಿ: 17–3–2006 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದ್ದು ತಾತ್ಕಾಲಿಕ ಕೂಪನ್ ನೀಡುವ ಕಾರ್ಯ ಪಾರಂಭಿಸಲಾಗಿರುತ್ತದೆ. ಪ್ರಥಮ ಹಂತದಲ್ಲಿ ಕೂಪನ್‌ಗಳನ್ನು ನೀಡಿ ಬರುವ 6 ತಿಂಗಳ ಅವಿಧಿಯೊಳಗೆ ಹಣಕೃತ ಪಡಿತರ ಚಿಟಿಯನ್ನು ನೀಡಲಾಗುವುದು.

ಇ. ಬಿಪಿಎಲ್ ಪಟ್ಟಿಯಿಂದ ಕೈಬಿಟ್ಟಿರುವವರನ್ನು ಗುರುತಿಸಲು ಮನೆ ಮನೆ ಸಮೀಕ್ಷೆ ಮಾಡಲಾಗಿದ್ದು ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದೆ, ಇಷ್ಟಾದರೂ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ಸಿಗದೇ ಇದ್ದ ಸನ್ನಿವೇಶದಲ್ಲಿ ಜಿಲ್ಲೆಯಲ್ಲಿರುವ ಆಹಾರ ಖಾತ್ರಿ ಸಮಿತಿಯನ್ನು ಸಂಪರ್ಕಿಸಿ ಕುಂದುಕೊರತೆಯನ್ನು ನಿವಾರಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.

ANNEXURE

Sl.No.	Name of the Taluk	Name of the MLA Constituency	No. of families identified for issue of ration card AAY	BPL	APL	Total	Percentage of BPL families identified against surve yed families Including AAY	Excluding AAY
1	Arsikere	Arsikere	2906	30753	17268	5092	65.97	60.27
2	Arkalgud	Arkalgud	2295	30186	15883	48364	67.15	62.41
	Sakleshpura							
3	Alur	Sakleshpura	3774	29638	20100	53512	62.43	55.38
4	Belur	Belur	2535	30383	12765	45683	72.05	66.5
5	Channarayapatna	Shravanabelagola	3005	38283	20706	61994	66.59	61.75
6	Hassan	Hassan	4129	42320	25501	71950	64.55	58.81
7	Arsikere							
	Hassan	Gandasi	2767	29697	14718	47182	68.80	62.94
	Holenarasipura							
8	Channarayapatna	Holenarasipura	3687	38855	12369	54911	77.47	70.75
		Total	**25098**	**270115**	**139310**	**434523**	**67.93**	**62.16**

117 (243) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) (ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣಾ ನೀರಿ ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಬೋರ್‌ವೆಲ್‌ಗಳ ವಿದ್ಯುಚ್ಛಕ್ತಿಗೆ ವಾಣಿಜ್ಯ ತರಿಗೆ ರೂಪದಲ್ಲಿ ವಿಧಿಸುತ್ತಿರುವುದರಿಂದ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ಶುಲ್ಕ ಕಡಿಮೆ ಮಾಡಿ ರೈತರ ಪಂಪ್ ಸೆಟ್ಟುಗಳಿಗೆ ವಿಧಿಸುವ ಅನುಪಾತದಲ್ಲಿ ವಿಧಿಸಲು ಸಾಧ್ಯವಿಲ್ಲವೇ;

ಇ. ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಮುಂದಿನ ಕ್ರಮವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) :

ಬಂದಿದೆ.

ವಿದ್ಯುತ್‌ದರ ನಿಗದಿ ಮಾಡುವ ಅಧಿಕಾರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಇರುತ್ತದೆ.

118 (248) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) (ಮಾನ್ಯ ಕೃಷಿ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೇ?

ಅ) ಸೋಯಾಅವರೆ, ಒಣಮೆಣಸಿನಕಾಯಿ ಹಾಗೂ ಗೋವಿನ ಜೋಳಕ್ಕೆ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಸೇರಿಸದಿರಲು ಕಾರಣಗಳೇನು;

ಆ) 2003–04ನೇ ಸಾಲಿನಲ್ಲಿ ಶೇಂಗಾ ಮತ್ತು ಹೆಸರು ಬೆಳೆಗಳಿಗೆ ಬೆಳೆ ವಿಮೆ ನೀಡುವಲ್ಲಿ ತಾರತಮ್ಯವಾಗಿರುವುದು ಮತ್ತು ಬೆಳೆ ವಿಮೆ (premium) ಭರಣಾ ಮಾಡಿದ ರೈತರಿಗೆ ಸರಿಯಾಗಿ ಬೆಳೆ ವಿಮೆ ಬಿಡುಗಡೆಯಾಗದೇ ಇರುವುದು, ಸರ್ಕಾರದ ಗಮನದಲ್ಲಿದೆಯೇ;

ಇ) 2003–04ನೇ ಸಾಲಿನಲ್ಲಿ ಬಂಕಾಪುರ ಹೋಬಳಿ ಅರೇ ಮಲೆನಾಡಿನಲ್ಲಿ ಬರತಕ್ಕ ಗ್ರಾಮಗಳಾದ ನಿಡಗುಂದಿ, ಹುಲಿಕಟ್ಟಿ ಹುಣಶಿಕಟ್ಟಿ, ಮಲ್ಲನಾಯಕನಕೊಪ್ಪ ಗ್ರಾಮಗಳು ಕಂದಾಯ ದಾಖಲೆಗಳಲ್ಲಿ ಭತ್ತ ಬೆಳೆಯುವ ಕ್ಷೇತ್ರವೆಂದು ದಾಖಲೆ ಇದ್ದರೂ ಸಹ, ಅನಿಯಮಿತ (Random) ಸರ್ವೆ ನಂಬರಗಳನ್ನು ಆಯ್ಕೆ ಮಾಡುವಾಗ ಗಣನೆಗೆ ತೆಗೆದುಕೊಳ್ಳದಿರಲು ಕಾರಣವೇನು;

ಈ) ಬಂಕಾಪುರ, ಕುಂದೂರ, ಬಿಸನಳ್ಳಿ ಗ್ರಾಮಗಳಲ್ಲಿ ಗಣನೀಯ ಪ್ರಮಾಣದಲ್ಲಿ ಶೇಂಗಾ ಬೆಳೆಯುವ ಕ್ಷೇತ್ರಾವಾಗಿದ್ದರೂ ಅದನ್ನು ಬಿಟ್ಟು ಅರೆಮಲೆನಾಡು ಪ್ರದೇಶಗಳಲ್ಲಿ ಬರುವ ಗ್ರಾಮಗಳಲ್ಲಿ ಶೇಂಗಾ ಬೆಳೆಯುವ ಆಣೇವಾರಿ (Crop yield) ತೆಗೆದು ಸಂಪೂರ್ಣ ಬಂಕಾಪೂರ ಹೋಬಳಿಯ ರೈತರಿಗೆ ಶೇಂಗಾ ಬೆಳೆವಿಮೆ ಬಿಡುಗಡೆ ಮಾಡದೇ ಇರುವುದರಿಂದ ರೈತರು ವಂಚಿತರಾಗಿರುವುದು ಸರಕಾರದ ಗಮನದಲಲಿದೆಯೇ

ಉ) ಈ ಶೇಂಗ ಬೆಳೆಯ ಆಣೇವಾರಿಯ ಸಂಬಂಧದಲ್ಲಿ, ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಹಾಗೂ ಜಿಲ್ಲಾ ಮಟ್ಟದಿಂದ ರಾಜ್ಯಮಟ್ಟಕ್ಕೆ ಮಾಡಿರುವ ಕೆಲವೊಂದು ಭೂಮಿಗಳ ಸರ್ವೆ ನಂಬರುಗಳು ಒಂದಕ್ಕೊಂದ ತಾಳೆ (Tally) ಇರದೇ ಇರುವುದು ಸರಕಾರದ ಗಮನದಲ್ಲಿದೆಯೇ;

ಊ) ಸದರಿ ವಿಷಯದ ಬಗ್ಗೆ ಅನೇಕಬಾರಿ ಸಂಬಂಧಪಟ್ಟವರ ಗಮನಕ್ಕೆ ತಂದರೂ ಸಹ ಯಾವುದೇ ಪ್ರಯೋಜನವಾಗದೆ ರೈತರಿಗೆ ಅನ್ಯಾಯ ಹಾಗೂ ತೊಂದರೆ ಯಾಗಿರುವುದರಿಂದ, ಸರ್ಕಾರ ಬೆಳೆವಿಮೆ ವಿತರಣೆಗೆ ಯೋಗ್ಯ ಸಮಿತಿಯನ್ನು ರಚನೆ ಮಾಡಿ ಕೊಡಲು ಕ್ರಮ ಕೈಗೊಳ್ಳುವುದೇ?

ಮಾನ್ಯ ಶ್ರೀ ಬಂಡೆಪ್ಪ ಕಾಶಂಪೂರ್ ((ಮಾನ್ಯ ಕೃಷಿ ಸಚಿವರು):

ಅ. ಈ ಬೆಳೆಗಳು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯ ಮಾರ್ಗಸೂಚಿಯ ಪರಿಮಿತಿಯೊಳಗೆ ಬಾರದಿರುವುದರಿಂದ ಇವುಗಳನ್ನು ರಾಷ್ಟ್ರೀಯ ಬೆಳೆವಿಮಾ ಯೋಜನೆಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ.

ಆ. ಬಂದಿದೆ.

ಇ. ಭತ್ತ (ಮಳೆಆಶ್ರಿತ) ಬೆಳೆಯನ್ನು 2003ರ ಮುಂಗಾರು ಹಂಗಾಮಿನಲ್ಲಿ ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗಿದ್ದು, ಬಂಕಾಪುರ ಹೋಬಳಿಯಲ್ಲಿ 12 ಬೆಳೆ ಕಟಾವು ಪ್ರಯೋಗಗಳನ್ನು ನಡೆಸಲಾಗಿದೆ. ಈ ಹೋಬಳಿಯಲ್ಲಿ 6 ಗ್ರಾಮಗಳಾದ ನಿಡಗುಂದಿ, ಹುಲಿಕಟ್ಟಿ ಹುಣಶಿಕಟ್ಟಿ, ಮಲ್ಲನಾಯಕನಕೊಪ್ಪ, ಹನಕನಹಳ್ಳಿ ಮತ್ತು ಶಿಡ್ಲಾಪುರ ಇವುಗಳಲ್ಲಿ ಅನಿಯತ ಮಾದರಿಯಲ್ಲಿ ಆಯ್ಕೆಮಾಡಿ ಪ್ರತಿ ಗ್ರಾಮದಲ್ಲಿ 2 ಪ್ರಯೋಗಗಳನ್ನು ನಡೆಸಲಾಗಿದೆ. ಈ ರೀತಿ ಆಯ್ಕೆ ಮಾಡುವಾಗ ಆ ಹೋಬಳಿಯಲ್ಲಿನ ಯಾವುದೇ ಗ್ರಾಮ ಆಯ್ಕೆಯಾಗುವ ಸಂಭವನೀಯತೆ ಇರುತ್ತದೆ. ಬೆಳೆ ಕಟಾವು ಪ್ರಯೋಗಗಳನ್ನು ವೈಜ್ಞಾನಿಕವಾಗಿ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ರೂಪಿಸಿರುವ ವಿಧಾನವನ್ನು ಅನುಸರಿಸಿ ನಡೆಸಲಾಗಿದೆ.

ಈ. ಅನಿಯತ ಮಾದರಿಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡುವಾಗ ಆಹೋಬಳಿಯಲ್ಲಿನ ಯಾವುದೇ ಗ್ರಾಮ ಆಯ್ಕೆಯಾಗುವ ಸಂಭವನೀಯತೆ ಇರುತ್ತದೆ. 2003ರ ಮುಂಗಾರು ಹಂಗಾಮಿನಲ್ಲಿ ಬಂಕಾಪುರ ಹೋಬಳಿಯಲ್ಲಿ ಶೇಂಗಾ ಬೆಳೆಯ ಮೇಲೆ ಕಟಾವು ಪ್ರಯೋಗಗಳನ್ನು ನಡೆಸಲು ಅನಿಯತ ಮಾದರಿಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡುವಾಗ ಬಿಸನಹಳ್ಳಿ ಮಲ್ಲನಾಯಕನಕೊಪ್ಪ, ಹುಣಶಿಕಟ್ಟಿ ನಿಡಗುಂದಿ, ಹನಕನಹಳ್ಳಿ ಮತ್ತು ಮುದ್ದಿನಕೊಪ್ಪ ಗ್ರಾಮಗಳು ಆಯ್ಕೆಯಾಗಿರುತ್ತದೆ.

ಉ. ಇಲ್ಲ.

ಕೇಂದ್ರ ಸರ್ಕಾರವ ರೂಪಿಸಿರುವ ಮಾರ್ಗಸೂಚಿಯನ್ನು ಅನುಸರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಬೆಳೆ ವಿಮಾ ನಷ್ಟ ಪರಿಹಾರವನ್ನು ಮಾರ್ಗಸೂಚಿಯ ಪ್ರಕಾರವೇ ಕಂಡುಹಿಡಿದು ರೈತರಿಗೆ ಇತ್ಯರ್ಥಪಡಿಸಲಾಗುತ್ತಿದೆ. ಆದ್ದರಿಂದ , ಈ ಬಗ್ಗೆ ಸಮಿತಿಯನ್ನು ರಚಿಸುವ ಅವಶ್ಯಕತೆ ಇರುವುದಿಲ್ಲ.

119 (249) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಗ್ಗಾಂವ್ ಹಾಗೂ ಸವಣೂರು ತಾಲ್ಲೂಕುಗಳ ಎಷ್ಟು ಕೆರೆಗಳಲ್ಲಿ ಮೀನು ಸಾಕಾಣಿಕೆ ನಡೆಸಲಾಗುತ್ತಿದೆ (ಗ್ರಾಮವಾರು ಮಾಹಿತಿ ಒದಗಿಸುವುದು):

ಆ) ಮೀನು ಸಾಕಾಣಿಕೆಗೆ ಕೇಂದ್ರ ಹಾಗೂ ಸರಕಾರಗಳ ಯಾವ ಯಾವ ಯೋಜನೆಗಳಿವೆ (ವಿವಿರ ಒದಗಿಸುವುದು);

ಇ) 2004–05, 2006ನೇ ಸಾಲಿನಲ್ಲಿ ಶಿಗ್ಗಾಂವ–ಸವಣೂರು ತಾಲ್ಲೂಕುಗಳಲ್ಲಿ ಮೀನು ಸಾಕಾಣಿಕೆಯಿಂದ ಬಂದಿರುವ ಆದಾಯ ಎಷ್ಟು (ವರ್ಷವಾರು ಆದಾಯದ ವಿವಿರ ಒದಗಿಸುವುದು);

ಈ) ಮೀನು ಸಕಾಣಿಕೆಯ ಕೆರೆಗಳನ್ನು ಯಾವ ರೀತಿಯಲ್ಲಿ ಹರಾಜು ಮಾಡಲಾಗುವುದು, 2003 ರಿಂದ 2006 ಸಾಲಿನವರೆಗೆ ಹರಾಜಿನಲ್ಲಿ ಭಾಗವಹಿಸಿ ಹರಾಜು ಪಡೆದವರ ಹೆಸರುಗಳು, ಹರಾಜಿನ ಹಣದ ವಿವರಗಳೇನು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ. ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕುಗಳ ಒಟ್ಟು 15 ಇಲಾಖಾ ಕೆರೆಗಳಲ್ಲಿ ಮೀನು ಸಾಕಾಣಿಕೆ ನಡೆಸಲಾಗುತ್ತಿದೆ. ಗ್ರಾಮವಾರು ಮಾಹಿತಿಯನ್ನು ಅನುಬಂಧ –1ರಲ್ಲಿ ಲಗತ್ತಿಸಿದೆ.

ಆ. ಮೀನು ಸಾಕಾಣಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಒಟ್ಟು ರೂ. 10.65 ಲಕ್ಷಗಳ ಅನುದಾನದ 7 ಯೋಜನೆಗಳ ವಿವರಗಳನ್ನು ಅನುಬಂಧ –2ರಲ್ಲಿ ಲಗತ್ತಿಸಿದೆ.

ಇ. 2004–05 ಮತ್ತು 2005–06ನೇ ಸಾಲಿನಲ್ಲಿ ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಮೀನು ಸಾಕಾಣಿಕೆಯಿಂದ ಅನುಕ್ರಮವಾಗಿ ರೂ.38.565/– ಮತ್ತು ರೂ 38.540/–ಗಳ ಆದಾಯ ಬಂದಿರುತ್ತದೆ. ವರ್ಷವಾರು ಆದಾಯದ ವಿವರಗಳನ್ನು ಅನುಬಂಧ –3ರಲ್ಲಿ ಲಗತ್ತಿಸಿದೆ.

ಈ. ಮೀನು ಸಾಕಾಣಿಕೆಗೆ ಯೋಗ್ಯವಾದ ಕೆರೆಗಳನ್ನು ಇಲಾಖೆಯ ಮೀನು ಪಾಶುವಾರು ಹಕ್ಕು ವಿಲೇ ನಿಯಮಗಳನ್ವಯ ಆದ್ಯತೆಯ ಮೇರೆಗೆ ಜಲ ಸಂವರ್ಧನೆ ಯೋಜನಾ ಸಂಘದಡಿಯಲ್ಲಿ ಸ್ಥಾಪಿಸಿದ ಸಂಘಗಳಿಗೆ, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ(ನಿ), ಮೈಸೂರು, ಇವರಿಗೆ ಮೀನುಗಾರರ ಸಹಕಾರ ಸಂಘಗಳಿಗೆ, ಗುತ್ತಿಗೆ ನೀಡಲಾಗುವುದು ಸಂಘ ಸಸ್ಥೆಗಳಿಂದ ಬೇಡಿಕೆಯಿಲಲ್ದೆ ಮೀನುಗಾರಿಕೆ ನಿರುದ್ಯೋಗಿ ಪದವೀಧರರಿಗೆ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಬೇಡಿಕೆಯಿಲ್ಲದ ಕೆರೆಗಳನ್ನು ಮಾತ್ರ ಟೆಂಡರ್ ಮತ್ತು ಹರಾಜು ಮೂಲಕ ವಿಲೇ ಮಾಡಲಾಗುವುದು. 2003 ರಿಂದ 2006ನೇ ಸಾಲಿನವರೆಗೆ ಹರಾಜಿನಲ್ಲಿ ಭಾಗವಹಿಸಿ ಹರಾಜು ಪಡೆದವರ ಹೆಸರುಗಳು, ಹರಾಜಿನ ಹಣದ ವಿವಿರಗಳನ್ನು ಅನುಬಂಧ –4ರಲ್ಲಿ ಲಗತ್ತಿಸಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಸಿಂಧೂರ ಜಿ. ರಾಜಶೇಕರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 249ರ ಅನುಬಂಧ-1

ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕಿನಲ್ಲಿ ಮೀನುಗಾರಿಕೆಗೆ ಒಳನಡಿಸಿರುವ ಕೆರೆಗಳ ವಿವಿರಗಳು

ತಾಲ್ಲೂಕು ಹೆಸರು	ಕ್ರ.ಸ.	ಗ್ರಾಮ	ಕೆರೆ ಹೆಸರು
ಶಿಗ್ಗಾಂವ	1	ಗಂಗೇಲೂರು	ಗಂಗೇಲೂರು ಕೆರೆ
	2	ಬೆಂಡಿಗೇರಿ	ಬೆಂಡಿಗೇರಿ ಕೆರೆ
	3	ಹೊನ್ನಪುರ	ಹೊನ್ನಪುರ ಕೆರೆ
	4	ಕೋಣನಕೆರೆ	ಕೋಣನಕೆರೆ
	5	ಹಲೇಬಂಕಾಪುರ	ಯರಗೇರಿ ಕೆರೆ
	1	2	3
	6	ಕಳಸಗೇರಿ	ಕಳಸಗೇರಿ ಕೆರೆ
	7	ಕಲ್ಯಾಣ	ಕಲ್ಯಾಣ ಬಕಾಸುರಕೆರೆ
	8	ಹುನಗುಂದ	ಹುನಗುಂದಕೆರೆ
	9	ಯತ್ರಿನಳ್ಳಿ	ಯಂತ್ರಿನಳ್ಳಿ ಬೆಳ್ಳಿಗಟ್ಟಿಕೆರೆ
	10	ಶಿಗ್ಗಾಂವ	ನಾಗನೂರು ಕೆರೆ
ಸವಣೂರು	1	ಸವಣೂರು	ಮೋತಿ ತಲಾಬ್
	2	ಯಲವಗಿ	ಯಲವಗಿಕೆರೆ
	3	ಮಾದಾಪುರ	ಕಾರಡಗಿಕೆರೆ
	4	ತೆವರಮಳ್ಳಳ್ಳಿ	ತೆವರಮಳ್ಳಳ್ಳಿಕೆರೆ
	5	ಹುರುಳೀಕುಪ್ಪೆ	ಹುರುಳೀಕುಪ್ಪೆ ಕೆರೆ

ವಿಧಾನ ಸಭಾ ಸದಸ್ಯರಾದ ಶ್ರೀ ಸಿಂಧೂರ ಜಿ. ರಾಜಶೇಖರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 249ರ ಅನುಬಂಧ-2

ಮೀನುಗಾರಿಕೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ವಿವಿರ

ಕ್ರ.ಸಂ.	ಯೋಜನೆಯ ವಿವರ	ಅನುದಾನ (ರೂ. ಲಕ್ಷಗಳಲ್ಲಿ
ರಾಜ್ಯ ಸರ್ಕಾರ		
1	ಮೀನು ಮರಿ ಉತ್ಪಾದನೆ, ಪಾಲನೆ ಮತ್ತು ಹಂಚಿಕೆ	1.64
2	ಮೀನುಗಾರಿಕೆ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ	0.82
3	ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	-
	(0) ಮೀನು ಕೊಳ ನಿರ್ಮಾಣಕ್ಕೆ ಸಹಾಯ	0.21
	(0) ಮೀನು ಹಿಡಿಯುವ ಸಲಕರಣೆಗಳಿಗೆ ಸಹಾಯ	
4	ಮತ್ಸ್ಯವಾಹಿನಿ ಮತ್ತು ಮೀನು ಮಾರಾಟಕ್ಕೆ ಸಹಾಯ	0.29

ಕೇಂದ್ರ ಸರ್ಕಾರ

5	ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಡಿಯಲ್ಲಿ ಒಳನಾಡು ಮೀನುಗಾರಿಕೆಗೆ ಸಹಾಯ	2.07
6	ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಡಿಯಲ್ಲಿ ಮೀನುಗಾರರ ಸಹಕಾರ ಸಂಘಗಳಿಗೆ ಹೂಡಿಗೆ ಧನದ ಸಹಾಯ	2.76
7	ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಡಿಯಲ್ಲಿ ಮೀನುಗಾರಿಕೆ ಸಹಕಾರ ಸಂಘಗಳಿಗೆ ಸಾಲ ಒದಗಿಸುವುದು	2.86
	ಒಟ್ಟು	**10.65**

ವಿಧಾನ ಸಭಾ ಸದಸ್ಯರಾದ ಶ್ರೀ ಸಿಂಧೂರ ಜಿ. ರಾಜಶೇಖರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 249ರ ಅನುಬಂಧ-3

ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ 2004-05 ಮತ್ತು 2005-06ನೇ ಸಾಲಿನಲ್ಲಿ ಮೀನು ಸಾಕಾಣಿಕೆಯಿಂದ ಬಂದಿರುವ ಆದಾಯದ ವಿವರ

(ಮೊತ್ತ ರೂಗಳಲ್ಲಿ)

ತಾಲ್ಲೂಕಿನ ಹೆಸರು	ವರ್ಷ	ಗುತ್ತಿಗೆಯಿಂದ ಆದಾಯ ಸಂಖ್ಯೆ	ಮೊತ್ತ	ಟೆಂಡರ್ ಮತ್ತು ಹರಾಜು ಸಂಖ್ಯೆ	ಆದಾಯ ಮೊತ್ತು	ಒಟ್ಟು ಆದಾಯ ಸಂಖ್ಯೆ	ಮೊತ್ತ
ಶಿಗ್ಗಾಂವ	2004-05 ·	614.620-00		2	3,400-00	8	18.020-00
	2005-06	4	8,865-00 5	11,68-00		920,545-00	
ಸವಣೂರು	2004-05	1) 4 2) 15 ಕಿ.ಮಿ ನದಿ ಭಾಗ	16,430-00	1	2,300-00	1) 2) 15 ಕಿ.ಮಿ. ನದಿ ಭಾಗ	18,730-00
	2005-06	1) 4 2) 15 ಕಿ.ಮಿ ನದಿ ಭಾಗ	17.910-00	1	1,900-00	1) 5 2) 15 ಕಿ.ಮಿ ನದಿ ಭಾಗ	19,810-00

ವಿಧಾನ ಸಭಾ ಸದಸ್ಯರಾದ ಶ್ರೀ ಸಿಂಧೂರ ಜಿ. ರಾಜಶೇಖರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 249ರ ಅನುಬಂಧ-4

2003 ರಿಂದ 2006ನೇ ಸಾಲಿನ ವರೆಗೆ ಹರಾಜಿನಲ್ಲಿ ಭಾಗವಹಿಸಿ ಹರಾಜು ಪಡೆದವರ ಹೆಸರುಗಳು ಹರಾಜಿನ ಹಣದ ವಿವರಗಳು

ಕ್ರ.ಸಂ.	ಕೆರೆಯ ಹೆಸರು	ವಿಲೇಯಿಂದ ಬಂದ ಆದಾಯ (ರೂಗಳಲ್ಲಿ	ಗುತ್ತಿಗೆದಾರರ ವಿವರ ಶ್ರೀ/ಶ್ರೀಮತಿ
1)	**ಶಿಗ್ಗಾಂವ ತಾಲ್ಲೂಕು**		
	2003-04		
1	ಹೊನ್ನಾಪುರ ಕೆರೆ	1650-00	ಗ್ರಾಮಪಂಚಾಯತಿ, ಕೂನೂರು
2	ಬೆಂಡಿಗೇರೆ	2150-00	ಗ್ರಾಮಪಂಚಾಯತಿ, ಕೂನೂರು
	2004-05		
1	ಕಳಸಗೇರಿ ಕೆರೆ	1400-00	ಖಾದರಲಿಂಗ ಮೀನುಗಾರರ ಸಹಕಾರ ಸಂಘ (ನಿ.) ಚಂದಾಪುರ
2	ಕಲ್ಯಾಣಬಕಾಸುರಕೆರೆ	2500-00	ಖಾದರಲಿಂಗ ಮೀನುಗಾರರ ಸಹಕಾರ ಸಂಘ (ನಿ.) ಚಂದಾಪುರ
3	ಹುನಗುಂದಕೆರೆ	2350-00	ಖಾದರಲಿಂಗ ಮೀನುಗಾರರ ಸಹಕಾರ ಸಂಘ (ನಿ.) ಚಂದಾಪುರ
4	ನಾಗನೂರು ಕೆರೆ	1850-00	ಅಬ್ದುಲ್‌ಸತ್ತಾರ್ ಅಬ್ದುಲ್ ಖಾದರ್ ಶಿಗ್ಗಾಂವ
5	ಯತ್ರಿನಳ್ಳಿಬೆಳ್ಳಿಗಟ್ಟ ಕೆರೆ	1600-00	ಲೋಕಪ್ಪ ಚಂದ್ರಪ್ಪ ಲಮಾಣಿ, ಯತ್ತಿನಹಳ್ಳಿ
6	ಹೊನ್ನಾಪುರ ಕೆರೆ	1810-00	ಗ್ರಾಮಪಂಚಾಯತಿ, ಕೂನೂರು
7	ಗಂಗೇಲೂರುಕೆರೆ	4760-00	ಬಾಪೂಜಿ ಯುವಕರಸಂಘ. ಶಿವಪುರ
8	ಕೋಣನಕೆರೆ	2300-00	ಗ್ರಾಮಪಂಚಾಯತಿ, ಕೋಣನಕೆರೆ

2005-06

1	ಗಂಗೇಲೂರು ಕೆರೆ	5300-00	ವೀರಪ್ಪ ರಾಮಪ್ಪ ಲಮಾಣಿ ಜಗ್ಗಿನಕಟ್ಟೆ
2	ಕಳಸಗೇರಿಕೆರೆ	1540-00	ಖಾದರಲಿಂಗ ಮೀನುಗಾರರ ಸಹಕಾರ ಸಂಘ (ನಿ) ಚೆಂದಪುರ
3	ಕಲ್ಯಾಣಬಕಾಸುರ ಕೆರೆ	2200-00	ಖಾದರಲಿಂಗ ಮೀನುಗಾರರ ಸಹಕಾರ ಸಂಘ (ನಿ) ಚಂದಾಪುರ
4	ಹುನಗುಂದ ಕೆರೆ	2585-00	ಖಾದರಲಿಂಗ ಮೀನುಗಾರರ ಸಹಕಾರ ಸಂಘ (ನಿ) ಚೆಂದಾಪುರ
5	ನಾಗನೂರು ಕೆರೆ	1980-00	ಅಬ್ದುಲ್ ಸತ್ತಾರ್, ಶಿಗ್ಗಾಂವ್
6	ಯತ್ರಿನಹಳ್ಳಿ ಬೆಳ್ಳಿಗಟ್ಟಿಕೆರೆ	1700-00	ಲೋಕಪ್ಪ ಭದ್ರಪ್ಪ ಲಮಣಿ, ಯತ್ತಿನಹಳ್ಳಿ
7	ಯರಗೋರಿಕೆರೆ	700-00	ಇಬ್ರಾಹಿಂ ಸಾಬ್, ಹೊಸಮನೆ ಯರಗೋಡಿ
8	ಹೊನ್ನಾಪುರ ಕೆರೆ	2000-00	ಮಹಮ್ಮದ್ ಇಸೂದ್ ಶಿಗ್ಗಾಂವ್
9	ಕೋಣನಕೆರೆ	2540-00	ಗ್ರಾಮಪಂಚಾಯತ್ ಕೋಣನಕೆರೆ.

ಕ್ರ.ಸಂ.	ಕೆರೆಯ ಹೆಸರು	ವಿಲೇಯಿಂದ ಬಂದ ಆದಾಯ (ರೂಗಳಲ್ಲಿ	ಗುತ್ತಿಗೆದಾರರ ವಿವರ ಶ್ರೀ/ಶ್ರೀಮತಿ
1)	ಸವಣೂರು ತಾಲ್ಲೂಕು		
	2003-04		
1	ಮೋತಿತಲಾಬ್‌ಕೆರೆ	2500-00	ಮಹಾಲಕ್ಷ್ಮಿ ಮೀನುಗಾರರ ಸಹಕಾರ ಸಂಘ
2	ತವರಮಳಳ್ಳಿಕೆರೆ	1200-00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
3	ವರದಾನದಿಭಾಗ (5.ಕಿ.ಮೀ)	1100-00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
	2004-05		
1	ಮೋತಿತಲಾಬ್‌ಕೆರೆ	2700-00	ಮಹಾಲಕ್ಷ್ಮಿ ಮೀನುಗಾರರ ಸಹಕಾರ ಸಂಘ
2	ಯಲವಗಿಕೆರೆ	3670-00	ಕೆಂಚಮ್ಮ ಮೀನುಗಾರರ ಸಹಕಾರ ಸಂಘ
3	ಮಾದಾಪುರ ಕಾರಡಗಿಕೆರೆ	2300-00	ಕರಿಯಪ್ಪ ಮರಿಯಪ್ಪ ಕಾರಡಗಿ

4	ತವರಮಳ್ಳಿಕೆರೆ	4800–00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
5	ಹುರುಳಿಕೊಪ್ಪಕೆರೆ	2700–00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
6	ವರದಾನದಿಭಾಗ (5 ಕಿ.ಮೀ.)	1270–00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
7	ವರದಾನದಿಭಾಗ (10.ಕಿ.ಮೀ)	1350–00	ಮಾರುತಿ ಮೀನುಗಾರರ ಸಹಕಾರ ಸಂಘ ಸವಣೂರು ತಾಲ್ಲೂಕು.
	2005–06		
1	ಮೋತಿತಲಾಬ್‌ಕೆರೆ	3025–00	ಮಹಾಲಕ್ಷ್ಮಿ ಮೀನುಗಾರರ ಸಹಕಾರ ಸಂಘ , ಸವಣೂರು
2	ಯಲವಗಿಕೆರೆ	4040–00	ಕೆಂಚಮ್ಮ ಮೀನುಗಾರರ ಸಹಕಾರ ಸಂಘ ಯಲವಾಗಿ
3	ಮಾದಾಪುರ ಕೆರೆ	1900–00	ಹುಸೇನ್ ಸಾಬ್ ಯಲ್ಲಾ ಶಿಗ್ಗಾಂವ
4.	ತವರಮಳ್ಳಿಕೆರೆ	5280–00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
5	ಹುರುಳಿಕೊಪ್ಪಕೆರೆ	2735–00	ಮಾಲತೇಶ್ ಮೀನುಗಾರರ ಸಹಕಾರ ಸಂಘ ಹಲಸೂರು
6	ವರದಾನದಿಭಾಗ (5 ಕಿ.ಮೀ.)	1330–00	ಮಾಲತೇಶ್ ಮೀನುಗಾರರ ಸಹಕಾರ ಸಂಘ, ಹಲಸೂರು
	ವರದಾನದಿಭಾಗ (10 ಕಿ.ಮೀ.)	1500–00	ಮಾರುತಿ ಮೀನುಗಾರರ ಸಹಕಾರ ಸಂಘ ಸವಣೂರು ತಾಲ್ಲೂಕು.

120 (250) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಡಿಗೆ ಅನಿಲ ಸಂಪರ್ಕ ಹೊಂದಿದವರಿಗೆ 'ಸಂಪೂರ್ಣವಾಗಿ ಸೀಮೆಎಣ್ಣೆಯನ್ನು ಕಡಿತಗೊಳಿಸಿದ್ದುದಲ್ಲದೆ ಮುಕ್ತ ಮಾರುಕಟ್ಟೆಯಲ್ಲಿ ಬಿಳಿ ಸೀಮೆಎಣ್ಣೆಯನ್ನು ವಿತರಣೆ ಮಾಡುವುದನ್ನೂ ಸಹ ಸಂಪೂರ್ಣವಾಗಿ ಬಂದ್ ಮಾಡಿರುವುದು ಸರಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಅಡಿಗೆ ಅನಿಲ ಹೊಂದಿದ ಸಾರ್ವಜನಿಕರಿಗೆ ಸೀಮೆಎಣ್ಣೆಯನ್ನು ಪೂರೈಸಲು ಸರಕಾರ ಕೈಗೊಂಡ ಕ್ರಮವೇನು;

ಇ) 2001ನೇ ಸಾಲಿನ ಜನಗಣತಿ ಆಧಾರದ ಮೇಲೆ ಪಡಿತರ ಚೀಟಿ ಸಮೀಕ್ಷೆ ಯೋಗ್ಯವಾಗಿದ್ದರೂ ಆರ್ಥಿಕ ಗಣತಿ ಆಧಾರ ಮೇಲೆ ಪುನ: ಸಮೀಕ್ಷೆ ನಡೆಸಿರುವುದು ಸರಿಯೆ;

ಈ) ಹಾಗಿದ್ದಲ್ಲಿ ಮೊದಲು ಜಾರಿಯಲ್ಲಿದ್ದ ಪಡಿತರ ಚೀಟಿಗಳ ಸಮೀಕ್ಷೆ ಪ್ರಕಾರ ಸರಕಾರ ಕ್ರಮ ಕೈಗೊಂಡು ಜುಲೈ 2005ರಲ್ಲಿ ಹಳದಿ ಪಡಿತರ.ಚೀಟಿ ಹೊಂದಿದವರಿಗೆ ಅಕ್ಕಿ ಮತ್ತು ಗೋಧಿಯನ್ನು ಬಿಡುಗಡೆಗೊಳಿಸದೇ ಇರಲು ಕಾರಣವೇನು;

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ/ಕೈಗೊಳ್ಳಲಿರುವ ಕ್ರಮಗಳೇನು

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು, ಮತ್ತು ಗ್ರಾಮೀಣ ಮತ್ತು ನೀರು ಸರಬರಾಜು ಸಚಿವರು) :

ಅ. ಇಲ್ಲ.

ಆ. ಸರ್ಕಾರದ ಪ್ರಚಲಿತ ನೀತಿಯಿಂದ ಅನುಸಾರ ಬಿಳಿ ಸೀಮೆಎಣ್ಣೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಇ. ಕೇಂದ್ರ ಸರ್ಕಾರದ 2001ರ ಜನಗಣತಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಿರುವುದಿಲ್ಲ. ಪಡಿತರ ವ್ಯವಸ್ಥೆಯಯಲ್ಲಿ ಅನೇಕ ಅರ್ಹರು ಪಡಿತರ ಚೀಟಿಯನ್ನು ಪಡೆಯದೇ ಹಾಗು ಅನರ್ಹರು ಬಿಪಿಎಲ್ ಪಡೆತರ ಚೀಟಿಯನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಮನೆ ಮನೆ ಸಮೀಕ್ಷೆಯನ್ನು ನಡೆಸಲಾಗಿರುತ್ತದೆ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

121 (251) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) (ಕೃಷಿ ಮಾರುಕಟ್ಟೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸವಣೂರೂ ತಾಲ್ಲೂಕು ಕಡಕೋಳ ಗ್ರಾಮದಲ್ಲಿ ಉಪ ಮಾರುಕಟ್ಟೆಯಲ್ಲಿ ಈವರೆಗೂ ಯಾವುದೇ ವ್ಯಾಪಾರ ವಹಿವಾಟು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಕಡಕೋಳ ಉಪ ಮಾರುಕಟ್ಟೆಯ ಜಮೀನು ಖರೀದಿಗೆ ಸವಣೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಲಕ್ಷಾಂತರ ರೂ.ಗಳನ್ನು ವಿನಿಯೋಗಿಸಿ ಖರೀದಿಸಿದ್ದುದರಿಂದ ಸವಣೂರು ಮಾರುಕಟ್ಟೆಗೆ ತುಂಬಾ ಹೊರೆ ಯಾಗಿರುವುದಿಲ್ಲವೆ;

ಇ. ವ್ಯಾಪಾರ ವಹಿವಾಟು ಇಲ್ಲದಿರುವ ಉಪ ಮಾರುಕಟ್ಟೆ ನಿವೇಶನಗನಳನ್ನು ಖಾಸಗಿಯವರಿಗೆ ಮರು ಮಾರಾಟಾ ಮಾಡಿ ಸವಣೂರ ಮಾರುಕಟ್ಟೆ ಮೇಲಿರುವ ಹೊರೆಯನ್ನು ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ. ಬಂದಿದೆ.

ಆ. ರೈತ ಬೆಳೆಗಾರರಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಉಪ ಮಾರುಕಟ್ಟೆಗೆ ಜಮೀನು ಖರೀದಿಸಿದೆ.

ಇ. ಇಲ್ಲ.

123 (268) ಶ್ರೀ ಸುರೇಶ್ ಎಸ್.ಮಾರಿಹಾಳ್ (ಕಿತ್ತೂರು) (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2005ನೇ ಸಾಲಿನ ಏಪ್ರಿಲ್, ಮೇ ತಿಂಗಳುಗಳಲ್ಲಿ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ನೀಡುವ ಬಗ್ಗೆ ಸಮೀಕ್ಷಾ ತಂಡದವರು ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಮಾಡಿದ್ದು ನಿಜವೇ;

ಆ) ಈ ಅವಧಿಯಲ್ಲಿ ಬಡ ಕುಟುಂಬಗಳು ಉದ್ಯೋಗಕ್ಕಾಗಿ ಗೋವಾ, ಮಹಾರಾಷ್ಟ್ರ ರಾಜ್ಯಗಳಿಗೆ ವಲಸೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಂತಹ ಕುಟುಂಬಗಳನ್ನು ಸಮೀಕ್ಷೆಯಲ್ಲಿ ಡೋರ್‌ಲಾಕ್ ಎಂದು ಪರಿಗಣಿಸಿ ಪಡಿತರ ಚೀಟಿ ವಿತರಿಸದೇ ಇರುವ ಕುಟುಂಬಗಳೆಷ್ಟು;

ಈ) ಈ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಗೋವಿಂದ. ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) :

ಅ. ಹೌದು.

ಆ. ಹೌದು ಇಂತಹ ಸನ್ನಿವೇಶಗಳಲ್ಲಿ ಗ್ರಾಮದಲ್ಲಿ ಮನೆಗಳಲ್ಲಿ ವಾಸಿಸದೆ ಇರುವ ಮನೆಗಳು ಬೀಗ ಹಾಕಿದ್ದರೆ ಅಂತಹ ಮನೆಗಳಿಗೆ ಸಂಖ್ಯೆಯನ್ನು ನೀಡಿ ಸಮೀಕ್ಷಾ ನಮೂನೆಯನ್ನು ಕಾದಿರಿಸಿ ಆ ಕುಟುಂಬವು ವಾಪಸ್ಸು ಮರಳಿದ ನಂತರ ಸೂಕ್ತ ಮಾಹಿತಿಯನ್ನು ಪಡೆದು ಸಲ್ಲಿಸಲು ರಾಜ್ಯದಾದ್ಯಂತ ಸಮೀಕ್ಷಾ ತಂಡಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

ಇ. ರಾಜ್ಯದಾದ್ಯಂತ ಎಲ್ಲಾ ಸಮೀಕ್ಷಾ ನಮೂನೆಗಳನ್ನು ಪರಿಶೀಲಿಸಲಾಗುತ್ತಿದ್ದು ನಿರ್ದಿಷ್ಟವಾಗಿ ಡೋರ್ ಲಾಕ್ ಎಂದು ಪರಿಗಣಿಸಿದ ಸಂಖ್ಯೆ ಸಧ್ಯಕ್ಕೆ ಲಭ್ಯವಿರುವುದಿಲ್ಲ.

ಈ. ಸಮೀಕ್ಷೆ ಸಮಯದಲ್ಲಿ ಪಡಿತರ ಚೀಟಿ ಪಡೆಯಲು ವಿಫಲರಾದ ನೈಜವಾಗಿ ವಾಸಿಸುವ ಕುಟುಂಬಗಳು ರಚಿಸಲಾಗಿರುವ ಆಹಾರ ಖಾತ್ರಿ ಸಮಿತಿಯ ಗಮನಕ್ಕೆ ತಂದಲ್ಲಿ ಇಂತಹ ಕುಮದು ಕೊರತೆಗಳನ್ನು ಪರಿಹರಿಸಲು ಜಿಲ್ಲಾ ಆಡಳಿತಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

124 (259) ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) (ತೋಟಗಾರಿಕೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು ಸಂರಕ್ಷಿಸಲು ಎಷ್ಟು ಶೀತಲಗಾರದ ವ್ಯವಸ್ಥೆಯನ್ನು ಸರ್ಕಾರವು ಮಾಡಿದೆ ಹಾಗೂ ಅದನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ?

ಆ) ಪ್ರಸ್ತುತವಿರುವ ಶೀತಲಗಾರಗಳ ಕೊರತೆಯಿರುವುದು ಸಕಾರದ ಗಮನಕ್ಕೆ ಬಂದಿದೆ?

ಇ) ಹಾಗಿದ್ದಲ್ಲಿ ಕೊರತೆಯಿರುವುದನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ತೋಟಗಾರಿಕೆ ಸಚಿವರು) :

ಅ. ತೋಟಗಾರಿಕೆ ಬೆಳೆಗಳನ್ನು ಸಂರಕ್ಷಿಸಲು ಸರ್ಕಾರವು ಸಹಕಾರ ಸಂಘಗಳು, ಖಾಸಗಿಯವರು ಮತ್ತು ಸಾರ್ವಜನಿಕ ಸಂಸ್ಥೆಗಳ ಮೂಲಕ 54 ಶೀತಲಗೃಹಗಳ ವ್ಯವಸ್ಥೆಯನ್ನು ಮಾಡಿದೆ. ಅವುಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಬೆಂಗಳೂರು(ನ) –17,	ತುಮಕೂರು–2,
ಬೆಂಗಳೂರು(ಗ್ರಾ–1,	ಬಿಜಾಪುರ–5
ಕೋಲಾರ–8,	ಬೆಳಗಾಂ–7,
ಹಾಸನ–3,	ಬಾಗಲಕೋಟೆ–1
ಧಾರವಾಡ–3,	ಬಳ್ಳಾರಿ–3
ಹಾವೇರಿ–4,	**ಒಟ್ಟು–54**

ಆ. ಹೌದು.

ಇ. ಶೀತಲಗೃಹಗಳನ್ನು ಸ್ಥಾಪಿಸಲು ಸಹಕಾರ ಸಂಘಗಳು, ಸಾರ್ವಾಜನಿಕ ಸಂಸ್ಥೆಗಳು ಮತ್ತು ಖಾಸಗಿಯವರಿಗೆ ಹಣಕಾಸಿನ ನೆರವು, ಶೀತಲಗೃಹಗಳು ಬಳಸುವ ವಿದ್ಯುತ್‌ದರದ ಮೇಲೆ ಸಹಾಯಧನ, ಶೀತಲಗೃಹ ನಿರ್ಮಾಣಕ್ಕೆ ಸ್ಥಳಾವಕಾಶ ಕಲ್ಪಿಸುವುದು, ಇತ್ಯಾದಿ ಪ್ರೋತ್ಸಾಹಗಳನ್ನು ನೀಡಿ ಕೊರತೆಯನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

125 (260) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಕೃಷಿ ಮಾರುಕಟ್ಟೆ ಸಚಿವರು)ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರತಿ ವರ್ಷ ಟೊಮೆಟೋ ಬೆಳೆಯ ಬೆಲೆಯು ಕುಸಿದು ರಸ್ತೆಗೆ ರೈತರು ಚೆಲ್ಲಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಸದರಿ ಬೆಳೆಯ ಬೆಲೆಯು ಕುಸಿದಾಗ ಅದಕ್ಕೆ ಬೆಂಬಲ ಬೆಲೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :

ಅ. ಹೌದು

ಆ. ಟೊಮೆಟೋ ಬೆಲೆಯು ಕುಸಿದಾಗ, ರಾಜ್ಯ ಸರ್ಕಾರವು ಟೊಮೆಟೋಗೆ ಬೆಂಬಲ ಬೆಲೆಯನ್ನು ನಿಗಧಿಪಡಿಸಿ ಕಳೆದ 2 ವರ್ಷಗಳಲ್ಲಿ ಆವರ್ತನಿಧಿಯಂದ ಹಣ ಬಿಡುಗಡೆ ಮಾಡಿ ಈ ಕೆಳಕಂಡಂತೆ ಖರೀದಿಸಿರುತ್ತದೆ.

ವರ್ಷ	ಆವರ್ತನಿಧಿಯಿಂದ ಟೊಮೆಟೋ ಖರೀದಿಗಾಗಿ ಬಿಡುಗಡೆ ಮಾಡಿದ ಹಣ (ರೂ, ಲಕ್ಷಗಳಲ್ಲಿ)	ಖರೀದಿಸಿದ ಪ್ರಮಾಣ ಪ್ರಮಾಣ ಕ್ವಿಂಟಾಲ್‌ಗಳಲ್ಲಿ	ಪ್ರಯೋಜನ ಪಡೆದ ಪಡೆದ ರೈತರ ಸಂಖ್ಯೆ
2004–05	10.00	54.34	652
2005–06	70.00		4312

ಸಧ್ಯ ಟೊಮೆಟೋ ಬೆಲೆ ಕುಸಿದಿದ್ದು, ರೈತರ ಹಿತರಕ್ಷಣೆಯನ್ನು ಕಾಪಾಡಲು, ಕೋಲಾರ ಜಿಲ್ಲೆಯಲ್ಲಿ ಟೊಮೆಟೋ ಖರೀದಿಸಲು ಈಗಾಗಲೇ ಆವರ್ತನಿಧಿಯಿಂದ ರೂ 25.50 ಲಕ್ಷಗಳನ್ನು ಹಾಪ್‌ಕಾಮ್ಸ್, ಬೆಂಗಳೂರು ಇವರಿಗೆ ಹಾಗೂ ರೂ 5.00 ಲಕ್ಷಗಳನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಟೊಮೆಟೋ ಖರೀದಿಸಲು ಹಾಗೂ ರೂ 2.00 ಲಕ್ಷಗಳನ್ನು ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಚಾಮರಾಜನಗರ ಜಿಲೆಯಲ್ಲಿ ಟೊಮೆಟೋ ಖರೀದಿಸಲು ಬಿಡುಗಡೆ ಮಾಡಿದ್ದು ಖರೀದಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಅವಶ್ಯಕತೆಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದು.

---

126 (261) ವಾಟಾಳ್ ನಾಗರಾಜ್ (ಚಾಮರಾಜನಗರ) ಮೀನುಗಾರಿಕೆ ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ತೆಂಗು ಬೆಳೆಗೆ ನುಸಿ ಪೀಡೆ ರೋಗವು ಎಷ್ಟು ವರ್ಷದಿಂದ ಹರಡಿದೆ;

ಆ. ಸದರಿ ರೋಗದಿಂದ ಇಲ್ಲಿಯವರೆಗೆ ನಾಶವಾಗಿರುವ ತೆಂಗಿನ ಮರಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಇ. ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ. ರಾಜ್ಯದಲ್ಲಿ ತೆಂಗು ಬೆಳೆಗೆ ನುಸಿ ಪೀಡೆಯು ನವೆಂಬರ್ 1998 ರಿಂದ ಕಾಣಿಸಿಕೊಂಡಿದ್ದು ಸುಮಾರು 8 ವರ್ಷಗಳಿಂದ ಹರಡಿದೆ.

ಆ. ನುಸಿ ಪೀಡೆಯಿಂದ ಇಳುವರಿ ಮಾತ್ರ ಕಡಿಮೆಯಾಗಿರುತ್ತದೆ. ಈ ಕೀಟದ ಗುಣವೇನೆಂದರೆ ತುಂಬ ಎಳೆಕಾಯಿಗಳನ್ನು ಬಾದಿಸುತ್ತದೆ. ಆದರೆ ತೆಂಗಿನ ಮರವನ್ನು ಬಾದಿಸುವುದಿಲ್ಲ. ನುಸಿ ಹತೋಟಿಗಾಗಿ ತೆಂಗಿನ ತೋಟಗಳ ಪೋಷಣೆ, ರೋಗ ನಿರೋಧಕ ಶಕ್ತಿ ವೃದ್ಧಿಸುವುದು ಹಾಗೂ ತೋಟಗಳ ಸ್ವಚ್ಛತೆ ಕಾಪಾಡಲು ಸಮಗ್ರ ಪರಿಸರ ಪೂರಕ ನಿರ್ವಹಣಾ ಕ್ರಮ ಹಾಗೂ ಪರಿಸರ ಪೂರಕ ಪೀಡೆ ನಾಶಕಳನ್ನು ಬಳಸಲು ರೈತರಿಗೆ ಸಲಹೆ ನಿಡಲಾಗುತ್ತಿದೆ. ಈ ಬಗ್ಗೆ ರೈತರಿಗೆ

ಅರಿವು ಮೂಡಿಸಲು ತೆಂಗು ಬೆಳೆಯುವ ಎಲ್ಲಾ ಜಿಲ್ಲೆಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಾತ್ಯಕ್ಷತೆ ಕಾರ್ಯಕ್ರಮಕ್ಕೆ ಬೇಕಾದ ಪೋಷಕಾಂಶಗಳು ಹಾಗೂ ಜೈವಿಕ ಕೀಟನಾಶಕಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗಿದೆ ತೆಂಗಿನ ನುಸಿ ಪೀಡೆ ಹತೋಟಿ ಬಗ್ಗೆ ಕರಪತ್ರಗಳ ಮೂಲಕ, ಜಾಗ್ರತಿ ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ, ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. ಈ ಕೀಟದ ಹತೋಟಿಗೆ ಜೈವಿಕ ನಿಯಂತ್ರಣ (ಶಿಲೀಂಧ್ರ) ಬಳಸುವ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಪ್ರಯೋಗಾಲಯಗಳಲ್ಲಿ ಉತ್ತಮ ಫಲಿತಾಂಶ ದೊರೆತಿದೆ. ಭಾರತ ಸರ್ಕಾರದ Project Directorate of biological Control ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರುಗಳಲ್ಲಿ ಕೈಗೊಂಡ ಸಂಶೋಧನೆ ಫಲಿತಾಂಶದನ್ವಯ ಕ್ಷೇತ್ರಮಟ್ಟದಲ್ಲಿ ಪ್ರಯೋಗಗಳನ್ನು ಕೈಗೊಳ್ಳಲಾಗುತ್ತಿದೆ.

127 (262) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) (ಮಾನ್ಯ ಕೃಷಿ ಸಚಿವರು)ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳೆಷ್ಟು;

ಆ. ಇವುಗಳು ಯಾವ ಸ್ಥಳೀಗಳಲ್ಲಿ ಸ್ಥಾಪನೆಯಾಗಿವೆ;

ಇ. ಸದರಿ ಕೇಂದ್ರಗಳ ಸ್ಥಾಪನೆಯ ಉದ್ದೇಶವೇನು?

ಶ್ರೀ ಬಂಡೆಪ್ಪಾ ಕಾಶಂಪೂರ್ (ಕೃಷಿ ಸಚಿವರು) :

ಅ. ರಾಜ್ಯದಲ್ಲಿ 745 ರೈತ ಸಂಪರ್ಕ ಕೇಂದ್ರಗಳಿವೆ.

ಆ. ಇವುಗಳನ್ನು ಹೋಬಳಿಗೊಂದರಂತೆ ಸ್ಥಾಪಿಸಲಾಗಿದೆ.

ಇ. ರೈತ ಸಂಪರ್ಕ ಕೇಂದ್ರಗಳನ್ನು ಈ ಮುಂದಿನ ಉದ್ದೇಶಗಳೊಂದಿಗೆ ಸ್ಥಾಪಿಸಲಾಗಿದೆ.

1. ಬೆಳೆ ಆಯ್ಕೆ, ಬೆಳೆ ಉತ್ಪಾದನೆ ಮತ್ತು ಮಾರುಕಟ್ಟೆ ಮುಂತಾದ ವಿಷಯಗಳ ಬಗ್ಗೆ ಆಧುನಿಕ ಮಾಹಿತಿ ಒದಗಿಸುವುದು.

2. ಪ್ರಮುಖ ಕೃಷಿ ಪರಿಕರಗಳಾದ ಬೀಜ, ಜೈವಿಕ ಗೊಬ್ಬರ ಮತ್ತು ಸೂಕ್ಷ್ಮ ಪೋಷಕಾಂಶ ಮುಂತಾದವುಗಳನ್ನು ಸ್ಥಳೀಯವಾಗಿ ಲಭ್ಯವಾಗಿಸುವಂತೆ ಸಂಯೋಜನೆ ಮಾಡುವುದು.

3. ಬೀಜ ಮತ್ತು ಮಣ್ಣು ಮಾದರಿ ಪರೀಕ್ಷೆ ಸೌಲಭ್ಯ ಒದಗಿಸುವುದು.

4. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ/ಪರಿಕರಗಳ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.

5. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ತಂತ್ರಜ್ಞಾನ/ಪರಿಕರಗಳ ಅಳವಡಿಕೆಗೆ ಒದಗಿಸುವುದು.

* * * *

(B) 025255

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು - 01.